REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೪ನೇ ಆಗಸ್ಟ್ ೧೯೪೧ [ಸಂಚಿಕೆ ೧೪

ಪ್ರಾಣರಕ್ಷಣೆಗಾಗಿ ಸರ್ವಾಧಿಕಾರಿಗಳ ಪ್ರತಿಮೂರ್ತಿಗಳು

ಕೆಲವು ವರ್ಷಗಳ ಪೂರ್ವದಲ್ಲಿ ವಿಯನ್ನಾದಲ್ಲಿರುವ ಜಗತ್ಪ್ರಸಿದ್ಧ ಅಪೇರಾ ಭವನದ ಹತ್ತಿರ ಒಂದು ದಿನ ಸಾಯಂಕಾಲ ಸುಂದರವಾದ ಕಾರೊಂದು ಬಂದು ನಿಂತಿತು ಬಹು ಬೆಲೆಬಾಳುವ ಆ ಕಾರಿನ ಹಿಂದ ಮುಂದೆ ಮೂರು ಮೂರು ಕಾರುಗಳಿದ್ದು, ಅವುಗಳಲ್ಲಿ ಕೆಂಪು ಮತ್ತು ನೀಲಿ ಮಕಮಲ್ಲಿನ ಉಡುಪನ್ನು ಧರಿಸಿ ಕೈಯಲ್ಲಿ ರಿವಾಲ್ವರನ್ನು ಹಿಡಿದಿದ್ದ ಅನೇಕ ಯುವಕರು ತುಂಬಿದ್ದರು ಅವರನ್ನು ನೋಡಿದರೆ ಯಾರೋ ಒಬ್ಬ ದೊಡ್ಡ ಚಕ್ರವರ್ತಿಯ ಅಂಗರಕ್ಷಕರಂತೆ ತೋರುತ್ತಿದ್ದರು ಆ ಮೋಟಾರಿನಲ್ಲಿ ಒಬ್ಬ ಪುರುಷನು ಲಕ್ಷಾಂತರ ಬೆಲೆ ಬಾಳುವ ವಸ್ತ್ರಾಭರಣಗಳಿಂದ ಅಲಂಕೃತನಾಗಿ ಕುಳಿತಿದ್ದನು ಕಾರು ನಿಂತ ಕೂಡಲೆ, ಅವನು ಮಂದಗಮನದಿಂದ ಅಪೇರಾ ಭವನದ ಕಡೆ ಹೊರಟನು ಅಕ್ಕಪಕ್ಕದಲ್ಲಿದ್ದ ಜನರು ಕುತೂಹಲದಿಂದ ಅವನನ್ನು ನೋಡಲಾರಂಭಿಸಿದರು ಯಾವನೋ ಒಬ್ಬನು ಇನ್ನೊಬ್ಬನೊಡನೆ ಕಿವಿಯಲ್ಲಿ ಇವನೇ ಅಲ್ಬೇನಿಯದ ರಾಜನಾದ ಜೋಗ್!” ಎಂದು ಮೆಲ್ಲನೆ ನುಡಿದನು. ಈ ಶಬ್ದವು, ಕ್ರಮೇಣ ಗುಂಪಿನಲ್ಲಿ ಹರಡಿಹೋಯಿತು. ಇದ್ದಕ್ಕಿದ್ದಂತೆ, ಆ ಗುಂಪಿನಿಂದ ಇಬ್ಬರು ಅಲ್ಬೇನಿಯದ ಯುವಕರು ಹೊರಬಿದ್ದರು ಅವರ ಕೈಗಳಲ್ಲಿ ಎರಡು ರಿವಾಲ್ವರ್‌ಗಳಿದ್ದುವು

“ಫಟ್, ಫಟ್” ಎಂದು ಎರಡು ಸಾರೆ ಗುಂಡಿನ ಶಬ್ದವಾಯಿತು ಸಾರ್ವಭೌಮನ ಮೃತ ದೇಹವು ನೆಲದ ಮೇಲುರುಳಿತು. ಜನರೆಲ್ಲರೂ ಚಕ್ರವರ್ತಿಯ ಶವವನ್ನು ನೋಡಲು ಓಡಾಡುತ್ತಿದ್ದರು ಕೆಲವು ಮಂದಿ, ಅಲ್ಬೇನಿಯದ ಈಸಾಯಿಗಳು ಸಂತೋಷದಿಂದ “ಸದ್ಯಃ ಈ ಕ್ರೂರಿ ಮುಸ್ಲಿಂ ಶಾಸಕನಿಂದ ನಮಗೆ ಮುಕ್ತಿ ದೊರೆಯಿತು!” ಎಂದರು ಆದರೆ ಅದೇ ಸಮಯದಲ್ಲಿಯೇ, ಅದೇ ಅಪೇರಾ ಭವನದ ಒಂದು ಕೋಣೆಯಲ್ಲಿಯೇ, ಚಕ್ರವರ್ತಿಯು ಯುವಕರ ಆಕ್ರಮಣದ ವರ್ಣನೆಯನ್ನು, ಒಬ್ಬ ದೂತನಿಂದ ಕೇಳುತ್ತ ಕುಳಿತಿದ್ದನು ನಿಜವಾಗಿ ಸತ್ತವನು ಜೋಗ್ ಚಕ್ರವರ್ತಿಯಾಗಿರಲಿಲ್ಲ, ಅವನ ಪ್ರತಿಮೂರ್ತಿ!

ಇದೇ ಸ್ಥಿತಿಯೇ ಪ್ರತಿಯೊಬ್ಬ ಸರ್ವಾಧಿಕಾರಿಯದೂ ಆಗಿದೆ ಅವರಿಗೆ ವಿರೋಧಿಗಳ ಭಯವು ಯಾವಾಗಲೂ ಇದ್ದೇ ಇರುವುದು ಇಂತಹ ಪ್ರಾಣಸಂಕಟದಿಂದ ಉಳಿಯಲು, ಇವರು ತಮ್ಮ ದೇಶದಲ್ಲಿ ತಮ್ಮಂತೆಯೇ ಆಕೃತಿ, ಸ್ವರ, ಮುಂತಾದ ಲಕ್ಷಣಗಳುಳ್ಳವರನ್ನು ತಮ್ಮ ಅಂಗರಕ್ಷಕರನ್ನಾಗಿಟ್ಟುಕೊಂಡಿರುವರು ಇವರನ್ನು ನೋಡಿ, ಸರ್ವಾಧಿಕಾರಿಗಳ ಸ್ನೇಹಿತರೂ ಸಹ ಭ್ರಮೆಗೊಳಗಾಗುವರು. ಸರ್ವಾಧಿಕಾರಿಗಳು ಈ ಪ್ರತಿಮೂರ್ತಿಗಳ ಪ್ರಾಣವನ್ನು ಬಲಿಕೊಟ್ಟು, ತಮ್ಮ ರಕ್ಷಣೆಯನ್ನು ಮಾಡಿಕೊಳ್ಳುತ್ತಿರುವರು ಇವರು ಸರ್ವಾಧಿಕಾರಿಗಳಿಗೆ ಕಾರ್ಯದರ್ಶಿಗಳಾಗಿ, ಅಂಗರಕ್ಷಕರಂತೆ ಅದಾ ಸಹಚರರಂತೆ ವರ್ತಿಸುತ್ತಿರುವರು ಯಾರಿಗೂ ಅವರ ಕುಲಗೋತ್ರಾದಿಗಳು ತಿಳಿದಿರುವುದಿಲ್ಲ

ಜರ್ಮನಿಯ ಸರ್ವಾಧಿಕಾರಿ ಹಿಟ್ಲರನ ಪ್ರತಿಮೂರ್ತಿಗಳು ಬಹು ಜನರು ಇರುವರು ಮೊಟ್ಟಮೊದಲು ಇವನ ಡ್ರೈವರನಾಗಿದ್ದ ಜುಲಿಯಸ್ ಶ್ರೇಕನು, ಇವನ ಪ್ರತಿಮೂರ್ತಿಯಾಗಿದ್ದನು ಒಂದು ದಿನ ಹಿಟ್ಲರನು ಬರ್ಲಿನ್ನಿನಿಂದ ಒಸ್ಸಾವಿಗೆ ಹೋಗಬೇಕಾಯಿತು ಶ್ರೇಕನು ಕರಿಟೋಪಿಯನ್ನು ಧರಿಸಿ, ಗಾಡಿಯನ್ನು ನಡೆಸುತ್ತಿದ್ದನು ಹಿಂದೆ ಹಿಟ್ಲರನು ಕಣ್ಣನ್ನು ಮುಚ್ಚಿ ಮಲಗಿದ್ದಂತೆ ತೋರುತ್ತಿದ್ದನು ಯಾರೋ ಒಬ್ಬ ನಾಜಿ ವಿರೋಧಿಯು, ಹಿಟ್ಲರನ ಮೇಲೆ ಗುಂಡನ್ನು ಹಾರಿಸಿದನು ಗುರಿಯು ಸರಿಯಾಗಿದ್ದುದರಿಂದ ಅವನು ಗಾಡಿಯಲ್ಲೇ ಸತ್ತು ಉರುಳಿದನು ಆದರೂ ಮೋಟಾರು ನಿಲ್ಲಲೇ ಇಲ್ಲ ಹೋಗಬೇಕಾಗಿದ್ದ ಸ್ಥಾನವನ್ನು ಮುಟ್ಟಿದನಂತರ, ಡ್ರೈವರನು ಕಾರನ್ನು ನಿಲ್ಲಿಸಿ, ಅದರಿಂದಿಳಿದು, ತನ್ನ ಟೋಪಿಯನ್ನು ಗಾಳಿಯಲ್ಲಿ ಸಂತೋಷದಿಂದ ಹಾರಿಸುತ್ತ, ಜೋರಾಗಿ ನಕ್ಕು, ಅನಂತರ ಸತ್ತ ವ್ಯಕ್ತಿಯನ್ನು ನೋಡಿ, ವ್ಯಸನವನ್ನು ಸೂಚಿಸಿ, ಮನೆಯೊಳಗೆ ಹೋದನು ಅವನೇ ಹಿಟ್ಲರ್!

ರಷ್ಯದ ಪ್ರಶಂಸೆಯನ್ನು ಎಲ್ಲರೂ ಮಾಡುತ್ತಾರೆ ಅಲ್ಲಿಯ ಪ್ರಜೆಗಳು ಬಹಳ ಪ್ರಸನ್ನರೂ, ಸುಖಿಗಳೂ ಎಂದು ಭಾವಿಸಲ್ಪಡುತ್ತಿದ್ದಾರೆ ಸ್ಟಾಲಿನ್ನನ್ನಂತೂ ಅವರು ಈಶ್ವರನಂತೆ ಪೂಜಿಸುತ್ತಾರೆ ಹೀಗಿದ್ದರೂ ಅವನಿಗೆ ತನ್ನ ರಾಜ್ಯದಲ್ಲಿ, ಧೈರ್ಯದಿಂದ ಹೊರಗೆ ಬರುವ ಧೈರ್ಯವಿಲ್ಲ ಸಾಮ್ಯವಾದೀ ವಿರೋಧಿಗಳು, ಆತನ ಪ್ರಾಣಹಾನಿಗಾಗಿ ಆತನನ್ನು ಹಿಂಬಾಲಿಸುತ್ತಲೇ ಇರುವರು ಆದರೂ ಚತುರನಾದ ಸ್ಟಾಲಿನ್ನನು, ಎಲ್ಲರ ಕಣ್ಣಿಗೂ ಮಣ್ಣು ಚೆಲ್ಲಿ ಪಾರಾಗುವನು ಒಂದು ಘಟನೆಯನ್ನು ಕೇಳಿರಿ —

ಅಮೆರಿಕದ ಸುಪ್ರಸಿದ್ಧ ಪತ್ರಿಕೋದ್ಯೋಗಿಯಾದ ಮಿ ಲಾರ್ಸ್‌ಕಾರ್ ಎಂಬವನು, ಒಂದುದಿನ ಮಾಸ್ಕೋವಿನ ರೆಡ್‌ಸ್ಕ್ವೈರ್‌ಮೈದಾನದಲ್ಲಿ ನಿಂತು, ರಷ್ಯದ ಸೈನಿಕರ ಪೆರೇಡನ್ನು ನೋಡುತ್ತಿದ್ದನು ಎದುರಿನಲ್ಲೇ ಲೆನಿನ್ನನ ಸಮಾಧಿಯನ್ನು ಅಸಂಖ್ಯಾತ ರಷ್ಯನ್ನರು ಸುತ್ತುಗಟ್ಟಿದ್ದರು ಸ್ಟಾಲಿನ್ನನು ಭಾಷಣ ಮಾಡುತ್ತಿದ್ದನು ಭಾಷಣ ಮುಗಿದ ಮೇಲೆ ಅವನು ಕಾರಿನಲ್ಲಿ ಕುಳಿತು ಹೊರಟನು ಅಕಸ್ಮಾತ್ ಎಲ್ಲಿಂದಲೋ ಗುಂಡು ಹಾರಿಸಿದ ಶಬ್ದವು ಕೇಳಬಂದಿತು ಸ್ಟಾಲಿನ್ನನ ಎಡಗೈ ಹಾರಿ, ನೇತಾಡುತ್ತಿತ್ತು ಅವನನ್ನು ಕಾರಿನಲ್ಲಿ ಮಲಗಿಸಿದನಂತರ, ಕಾರು ಹೊರಟಿತು ಅದೇ ಸಮಯದಲ್ಲಿ—ಮಿ ಕಾರ್ ಕಂಡದ್ದೇನೆಂದರೆ, ಲೆನಿನ್ನನ ಗೋರಿಯ ಹಿಂದುಗಡೆ ಎಂಟು ಜನ ದೃಢಕಾಯರಾದ ವ್ಯಕ್ತಿಗಳ ಮಧ್ಯೆ ಸ್ಟಾಲಿನ್ನನು ತನ್ನ ನಿವಾಸಸ್ಥಾನವಾದ ಕ್ರೆಮ್ಲಿನ್‌ನ ಕಡೆ ಹೋಗುತ್ತಿದ್ದನು ಮೋಟಾರಿನಲ್ಲಿ ಸತ್ತವನು ಅವನ ಪ್ರತಿಮೂರ್ತಿ

ಇಟಲಿಯ ಸರ್ವಾಧಿಕಾರಿಯು ಮಾತ್ರ ಈ ವಿಷಯದಲ್ಲಿ ನಿಶ್ಚಿಂತನಿದ್ದಾನೆ ಆದರೂ ಅವನಿಗೂ ಪ್ರತಿಮೂರ್ತಿ ಇಲ್ಲದೆ ಇಲ್ಲ ೧೯೩೩ರಲ್ಲಿ ಅವನು ಮೋಟಾರಿನಲ್ಲಿ ನೇಪಲ್ಸ್ ಬಳಿ ಹೋಗುತ್ತಿದ್ದನು ಅವನನ್ನು ಕೆಲವರು ಕೊಲ್ಲಬೇಕೆಂದಿದ್ದರು ಅವರು “ಡ್ಯೂಸ್”ನನ್ನು ಬಲವಾಗಿ ಹೊಡೆದು ಕೊಂದರು ಆದರೆ ಹಿಂದಿನಿಂದ ಪೋಲೀಸರು ಬರಲು ಅವರೆಲ್ಲ ಓಡಿದರು ಅನಂತರ ನೋಡಿದರೆ ಆ ರೀತಿ ಸತ್ತವನು ಮುಸಲೋನಿಯಾಗಿರದೆ, ಅವನ ಪ್ರತಿಮೂರ್ತಿಯಾಗಿದ್ದನು!

ಜಪಾನಿನ ಹಿಂದಿನ ಪ್ರಧಾನನಾಗಿದ್ದ ಅಡ್ಮಿರಲ್ ಒಕಾಡಾನ ಪ್ರತಿಮೂರ್ತಿಯ ಹೆಸರು ಡೆಕ್ಯೋ ಮತ್ಸೋ ಎಂದು ಒಂದು ದಿನ ಪತ್ರಿಕೆಗಳಲ್ಲಿ ಬಹಳ ದಪ್ಪ ಅಕ್ಷರಗಳಲ್ಲಿ ಅವನ ಮರಣದ ಸುದ್ದಿಯು ಪ್ರಕಟವಾಗಿತ್ತು ಆದರೆ ಸರಕಾರವು ಅದನ್ನು ಸುಳ್ಳೆಂದು ಪ್ರಕಟಿಸಿತು

ಈ ರೀತಿ ಜನರನ್ನು ಕ್ರೂರತೆಯಿಂದ ಕಾಣುತ್ತಿರುವ ಸರ್ವಾಧಿಕಾರಿಗಳು ಮೃತ್ಯುವಿನ ಭಯದಿಂದ ಹಗಲೂ ರಾತ್ರಿಯೂ ಚಿಂತಿಸುತ್ತ ತಮ್ಮ ಪ್ರಾಣರಕ್ಷಣೆಗಾಗಿ ತಮ್ಮಂತಿರುವ ಏನೂ ಅರಿಯದ ವ್ಯಕ್ತಿಗಳನ್ನು ಬಲಿಕೊಡುತ್ತಿರುವರು

(ಕಂಠೀರವ)

ದೋಣಿಮುಳುಗಿ ೪೧ ಜನರು ಸತ್ತರು

ಕಳೆದ ಸೋಮವಾರ ಜಬ್ಬಲಪುರ ಡಿವಿಜನ್ನಿನ ಓಂಕಾರೇಶ್ವರದ ಬಳಿ ನರ್ಮದಾ ನದಿಯಲ್ಲಿ 60 ಜನರು ದೋಣಿಯಲ್ಲಿ ಕುಳಿತು ಪ್ರಯಾಣಮಾಡುತ್ತಿದ್ದಾಗ ದೋಣಿಯು ಬಂಡೆಗೆ ತಗುಲಿ ಎರಡು ಹೋಳಾದುದರಿಂದ ಜನರೆಲ್ಲರೂ ನೀರಿನಪಾಲಾದರು ಅವರಲ್ಲಿ 19 ಜನರು ಬಹಳ ಕಷ್ಟದಿಂದ ಈಜಿಕೊಂಡು ಬಂದು ದಡವನ್ನು ಮುಟ್ಟಿದರು 41 ಜನರು ಮುಳುಗಿ ಸತ್ತರೆಂದು ಹೇಳಲಾಗಿದೆ

ಚಂಗ್‌ಕಿಂಗ್‌ನಗರದಮೇಲೆ ಮುತ್ತಿಗೆ

ಜಪಾನರು ಇದುವರೆಗೆ ನಡಸದೆ ಇದ್ದಂತಹ ಭಯಂಕರ ವಿಮಾನಮುತ್ತಿಗೆಯನ್ನು ಚಂಗ್‌ಕಿಂಗ್ ನಗರದ ಮೇಲೆ ನಡೆಸಿದರು ಅನೇಕ ಕಾರ್ಖಾನೆಗಳಿಗೆ ಏಟುಬಿತ್ತು ಈ ಮುತ್ತಿಗೆಯ ಕಾಲಕ್ಕೆ ಅಮೆರಿಕದ “ಯಟೆಲಾ’ ಎಂಬ ಗನ್‌ಬೋಟು ಸುರಕ್ಷಿತ ಕ್ಷೇತ್ರದಲ್ಲಿ ನಿಂತಿದ್ದರೂ ಜಪಾನ್ ವಿಮಾನಗಳು ಅದರ ಮೇಲೆ ಹಲವು ಬಾಂಬುಗಳನ್ನು ಹಾಕಿ ನಷ್ಟಪಡಿಸಿದವು. ಈ ಸಂಬಂಧವಾಗಿ ಅಮೆರಿಕಾ ಸರ್ಕಾರವು ಜಪಾನ್ ಸರ್ಕಾರಕ್ಕೆ ಉಗ್ರಪ್ರತಿಭಟನೆಯನ್ನು ಕಳುಹಿಸಿದ್ದರಿಂದ ಜಪಾನ್ ಸರ್ಕಾರದವರು ಅಮೇರಿಕಾ ಸರ್ಕಾರದ ಕ್ಷಮೆಯನ್ನು ಬೇಡಿದ್ದಾರಲ್ಲದೆ ಹಡಗದ ನಷ್ಟವನ್ನು ಕೊಡಲು ಒಪ್ಪಿಕೊಂಡಿದ್ದಾರೆ

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಸತ್ಯಾಚರಣೆಯು ಸದ್ಗತಿದಾಯಕವಾದುದು

ಲೇಖಕರು—ಶ್ರೀ ಪಟ್ಟಾಧ್ಯಕ್ಷ ಸಿದ್ಧರಾಮಶಿವಾಚಾರ್ಯ
ಸ್ವಾಮಿಗಳು ಗೌಡಕುಂದಿ, ಹಿರೇಮಠ.

ಪರಶಿವನಿಂದನಿರ್ಮಿತವಾದೀಪ್ರಪಂಚದಲ್ಲಿ ಮಾನವನು ಇಹಪರ ಸುಖಪ್ರಾಪ್ತಿಗಾಗಿ ಆಚರಿಸಬೇಕಾದ ಧರ್ಮಗಳಲ್ಲಿ ಸತ್ಯವೊಂದು ಮುಖ್ಯವಾಗಿರುವುದು. ಸತ್ಯವು ಯಾವಕಾಲದಲ್ಲಿಯೂ ಯಾವುದರಿಂದಲೂ ಅಬಾಧಿತವಾದುದೂ ಅಕ್ಷಯವೂ ಇತರಕ್ಕೆ ಪ್ರಿಯವೂ ಆಗಿರುವುದಲ್ಲದೆ ಸಕಲದೇಶಗಳಲ್ಲಿಯೂ, ಸರ್ವರಿಗೂ ಮಾನ್ಯವಾಗಿರುವುದು. ಚರಾಚರ ಪ್ರಪಂಚವೆಲ್ಲವೂ ಸಂಪೂರ್ಣವಾಗಿ ನಾಶವಾದರೂ ಸತ್ಯದ ಅಸ್ತಿತ್ವವಿದ್ದೇ ಇರುತ್ತದೆ. ಸತ್ಯವೊಂದು ಇಲ್ಲದಿದ್ದರೆ ಜಗತ್ತಿನಉತ್ಪತ್ತಿ ಸ್ಥಿತ್ಯಂತಾದಿಗಳು [illegible] ಜರುಗುತ್ತಿರಲಿಲ್ಲ. ಜಗತ್ತಿನ ಆಗುಹೋಗುಗಳಿಗೆ ಈ ಸತ್ಯವೇ ಮೂಲಕಾರಣವಾಗಿದೆ. ಇದರಿಂದಲೇ ಪ್ರಪಂಚದಲ್ಲಿ ಸರ್ವಕಾರ್ಯಗಳೂ ಮನುಷ್ಯಮಾತ್ರರ ವ್ಯವಹಾರಗಳೂ ಸುಲಲಿತವಾಗಿ ಜರುಗಿ ಸಂತೋಷದ [illegible] ಮೂಲಕವಾಗುವುದು. “ಸತ್ಯೇನೋತ್ತಭಿತಾ ಭೂಮಿಃ” ಸತ್ಯವು ಜಗತ್ತಿನ ಆಧಾರಸ್ತಂಭವಾಗಿರುವದು ಎಂದುಹೇಳುವ ವೇದದ ಮುಖ್ಯಾರ್ಥವೂ ಇದೇ ಆಗಿದೆ. ಇಂತಹ ಸತ್ಯವನ್ನು ನಮ್ಮ ಪೂರ್ವಜರು—

ಇಜ್ಯಾಧ್ಯಯನದಾನಾನಿ ತಪಃ ಸತ್ಯಂ ಧೃತಿ ಕ್ಷಮಾ ।
ಅಲೋಭ ಇತಿಮಾರ್ಗೋಽಯಂ ಧರ್ಮಸ್ಯಾಷ್ಟವಿಧಃಸ್ಮೃತಃ ॥

ಹೀಗೆ ಧರ್ಮದ ಅಷ್ಟಾಂಗಗಳಲ್ಲಿ ಒಂದು ಮುಖ್ಯಾಂಗವನ್ನಾಗಿ ಪರಿಗಣಿಸುವರು. ಈ ಅಷ್ಟಾಂಗಗಳನ್ನು ಆಚರಿಸುವುದರಿಂದಲೇ ಧರ್ಮದ ಪೂರ್ಣಾಂಗವಾಗ ಬಹುದು. ಇವುಗಳಲ್ಲಿ ಕೆಲವುಬಿಟ್ಟು ಕೆಲವನ್ನಾಚರಿಸಿದರೆ ಅವಯವಹೀನನಾದ ಮನುಷ್ಯನಿಂದ ಪ್ರಪಂಚದ ಕಾರ್ಯವು ಸಲಲಿತ ಸಾಗದಿರುವಂತೆ ಇಹಪರಸುಖಾನಂದವನ್ನು ಸಾಧಿಸಿಕೊಳ್ಳಲು ಸಾಧ್ಯವಾಗದಿಲ್ಲ. ಮೊದಲಿನ ನಾಲ್ಕು ಯಾಗ ಅಧ್ಯಯನ ದಾನ ತಪಸ್ಸುಗಳನ್ನು ಕೆಲವರು ಡಾಂಭಿಕತನಕ್ಕಾದರೂ ಆಚರಿಸಬಹುದು. ಆದರೆ ಇವುಗಳಿಗಿಂತಲೂ ಉಳಿದ ಸತ್ಯ ಧೈರ್ಯ ಕ್ಷಮಾ ಅಲೋಭಗಳುಮಾತ್ರ ಮಹತ್ಮರಲ್ಲಿ [illegible] ಗಿವೆ. ಉತ್ತಮರಲ್ಲದೆ ಸತ್ಪಾತ್ರರಲ್ಲಿ ಇರಲಿಕ್ಕೆ ಯೋಗ್ಯವಾದವುಗಳಲ್ಲಿ ಸತ್ಯವೇ ಪ್ರಥಮಶ್ರೇಣಿಯಲ್ಲಿ ಬರುವುದರಿಂದ ಅದರ ಮಹತ್ವವು ಹೆಗ್ಗಳವಾಗಿ ಕಂಡುಬರುವದು. ಸತ್ಯಧರ್ಮದ ಅತ್ಯಂತ ಗೂಢವಾದದ್ದಿರುವುದು "ಬಲ್ಲವನೇಬಲ್ಲ ಬೆಲ್ಲದಸವಿಯ" ಎಂಬಂತೆ ಸತ್ಯ ಧರ್ಮದ ಸ್ವಾನುಭವಿಯೇ ಆ ಸತ್ಯದ ಮಹಿಮೆಯನ್ನು ಬಲ್ಲನು. ಇತರರಿಗೆ ಅದರ ಮಹತ್ವವು ತಿಳಿಯಲಾರದು. ಸತ್ಯದ ಮಾರ್ಗವು ಅತ್ಯಂತ ದುರ್ಗಮವಾದುದೆಂದು ತಿಳಿದು ಅದರ ವಿಷಯದಲ್ಲಿ ಯಾರೂ ಅನಾದರಭಾವವನ್ನು ತೋರಿಸಬಾರದು. ಯಾವ ಕಾಲದಲ್ಲಿಯೂ ಸುಳ್ಳಾಡಬಾರದು. ಈ ಬಗ್ಗೆ ಮಹಾಭಾರತದಲ್ಲಿ— ಭಾರತದ ಧರ್ಮದೇವತೆಯಾದ ಯುಧಿಷ್ಠಿರನು ಚಿಕ್ಕಂದಿನಲ್ಲಿ ವಿದ್ಯಾಭ್ಯಾಸಮಾಡುತ್ತಿದ್ದಾಗ ಒಂದು ದಿವಸ ಪಾಠಶಾಲೆಯ ಮುಖ್ಯಾಧ್ಯಾಪಕರು ಧರ್ಮರಾಜನ ತರಗತಿಯವರ ಪರೀಕ್ಷೆಯನ್ನು ಮಾಡುವುದಕ್ಕಾಗಿ ಬಂದರು. ಎಲ್ಲ ವಿದ್ಯಾರ್ಥಿಗಳಿಗೂ ಪ್ರಶ್ನೆಮಾಡಿ ದಿನನಂತರ ಧರ್ಮನಿಗೂ ನೀನು ಏನುಕಲಿತಿರುವಿ? ಎಂದು ಪ್ರಶ್ನೆ ಮಾಡಿದರು. ಆಗ ಧರ್ಮರಾಜನು ನಾನು ಮೊದಲನೆಯ ಪುಸ್ತಕದ ಮೊದಲನೆಯ ವಾಕ್ಯವನ್ನು ಕಲಿತಿರುವೆನೆಂದು ಹೇಳಿದನು. ಅನಂತರ ಪರೀಕ್ಷಕರು ನೀನು ಮತ್ತೇನು ಕಲಿತಿರುವೆ? ಎಂದು ಕೇಳಲು ನಾನು ಎರಡನೆಯ ವಾಕ್ಯವನ್ನೂ ಕಲಿತಿದ್ದೇನೆಂದು ಹೇಳಿದನು. ಧರ್ಮನ ಈ ಉತ್ತರವನ್ನು ಕೇಳಿ ಆತನಿಗೆ ಕಲಿಸುತ್ತಿದ್ದ ಗುರುಗಳು ಅನಂತರ ಧರ್ಮನಿಗೆ ನೀನು ಎರಡನೆಯ ವಾಕ್ಯವನ್ನು ಚೆನ್ನಾಗಿಕಲಿಯದೆ ಕಲಿತಿರುವನೆಂದು ಹೇಳಿದೆಯಲ್ಲಾ? ಎಂದು ಕೋಪಗೊಂಡು ಆತನನ್ನು ಹೊಡೆಯಲಾರಂಭಿಸಿದರು, ಧರ್ಮರಾಜನನ್ನು ಎಷ್ಟುಹೊಡೆದರೂ ಆತನು ದಯನೀಯ ಶಾಂತನಾಗಿಯೇ ಇದ್ದನು. ಆತನ ಮುಖಕಾಂತಿಯು ಸ್ವಲ್ಪವೂ ವ್ಯತ್ಯಾಸವಾಗಲಿಲ್ಲ. ಆಗ ಗುರುಗಳಿಗೆ ಆಶ್ಚರ್ಯವಾಯಿತು. ನಾನು ಎಷ್ಟು ಹೊಡೆದರೂ ಧರ್ಮನು ಸ್ವಲ್ಪವಾದರೂ ಕೋಪಿಸದೆ ಶಾಂತನಾಗಿಯೇ ಪ್ರಸನ್ನ ಮುಖಮುದ್ರೆಯಿಂದ ಕೂಡಿರುವನಲ್ಲಾ ಎಂದು ಯೋಚಿಸುವಾಗ ಮೊದಲನೆಯ ಪುಸ್ತಕದ ಮೊದಲನೆಯ ವಾಕ್ಯದಕಡೆಗೆ ಅವರ ಲಕ್ಷ್ಯವು ಹೋಯಿತು. "ಯಾವಕಾಲದಲ್ಲಿಯೂ ಎಂತಹ ಸಂದರ್ಭಗಳಲ್ಲಿಯೂ ಕೋಪಗೊಳ್ಳಬೇಡ" ಎಂಬುದೇ ಆ ಪ್ರಥಮಪುಸ್ತಕದ ಪ್ರಥಮವಾಕ್ಯವಾಗಿದ್ದಿತು. ಇದನ್ನು ಕಂಡು ಧರ್ಮರಾಜನು ತಾನು ಮೊದಲನೆಯ ವಾಕ್ಯವನ್ನು ಕಲಿತಿರುವೆನೆಂದು ಹೇಳಿದ್ದು ಸತ್ಯ! ಅದುದರಿಂದ ತಾನು ಎಷ್ಟು ಹೊಡೆದರೂ ಆತನು ಕೋಪಗೊಳ್ಳದೆ ಶಾಂತನಾಗಿಯೇ ಇದ್ದನೆಂಬುದು ಆ ಗುರುಗಳಿಗೆ ಗೊತ್ತಾಯಿತು. ಧರ್ಮರಾಜನ ಈ ಅಸಾಧಾರಣವಾದ ಕ್ಷಮಾಗುಣವನ್ನು ಗುರುಗಳುನೋಡಿ ತಾವು ಆತನನ್ನು ಹೊಡೆದುದು ತಪ್ಪಾಯಿತೆಂದುತಿಳಿದು ಬಹಳ ವಿಷಾದಪಟ್ಟು ಧರ್ಮರಾಜನನ್ನು ಬಹಳವಾಗಿ ಕೊಂಡಾಡಿ ನೀನೇ ನನಗೆ ಅದಿವಸ ಮೊದಲನೆಪುಸ್ತಕದ ಮೊದಲನೆಯ ವಾಕ್ಯವನ್ನು ಕಲಿಸಿದೆ ಎಂದುಹೇಳಿದರು. ಆಗ ಧರ್ಮರಾಜನು ಪೂಜ್ಯರೇ? ನನ್ನನ್ನೇಕೆ ಈಪರಿ ಸ್ತುತಿಸುತ್ತಿರುವಿರಿ? ನಾನೇನು ಅಂತಹ ಮಹತ್ಕಾರ್ಯವನ್ನು ಮಾಡಿದ್ದೇನೆ. ನೀವು ನನಗೆ ಹೊಡೆದಾಗ ಬಾಹ್ಯದಲ್ಲಿ ನಾನು ಶಾಂತನಾಗಿ ತಿರುಗಿ ತೋರಿದರೂ ಮನಸ್ಸಿನಲ್ಲಿ ಸ್ವಲ್ಪ ಸಿಟ್ಟು ಬಂದಿದ್ದಿತೆಂದು ಹೇಳಿದನು. ಇದೇ ಆತನು ಕಲಿತ ಎರಡನೆಯ ವಾಕ್ಯವು. ಏಕೆಂದರೆ "ಯಾವಾಗಲೂ ಸತ್ಯವನ್ನೇ ಆಚರಿಸಬೇಕು" ಎಂಬುದೇ ಆ ಪುಸ್ತಕದ ಎರಡನೆಯ ವಾಕ್ಯವಾಗಿದ್ದಿತು. ಆದುದರಿಂದ ಮನಸ್ಸಿನಲ್ಲಿದ್ದ ಸಂಗತಿಯನ್ನು ಆ ಸತ್ಯಶೀಲನು ತನ್ನ ಗುರುಗಳಮುಂದೆ ಹೇಳಿದನು. ಇದರ ಮೇಲಿಂದ ತಿಳಿದುಬರುವದೇನೆಂದರೆ ಸದ್ಗುರು ಮತ್ತು ಶಾಸ್ತ್ರಾದಿಗಳಿಂದ ತಿಳಿದುಕೊಂಡ ತತ್ವಗಳನ್ನು ಆಚರಣೆಯಲ್ಲಿ ತರುವುದೇ ಸತ್ಯಮಾರ್ಗಾಚರಣೆಯು. ಮಹಾಮಹರ್ಷಿಗಳಾದರೂ "ಸತ್ಯಪೂತಾಂ ವದೇದ್ವಾಚಂ" ಅಂದರೆ ಸತ್ಯದಿಂದ ಶುಚಿಯಾದ ಮಾತನ್ನೇ ಮನುಷ್ಯನು ನುಡಿಯಬೇಕು ಎಂದು ಬೋಧಿಸಿದ್ದಾರೆ. ಇತರ ಧರ್ಮಗಳಿಗಿಂತ ಸತ್ಯಕ್ಕೇನೇ ಹೆಚ್ಚು ಪ್ರಾಶಸ್ತ್ಯವು ದೊರೆತಿದೆ. ಶರಮಂಚದಲ್ಲಿ ಮಲಗಿದ್ದ ಭೀಷ್ಮರು ಧರ್ಮರಾಜನಿಗೆ ಸಕಲಧರ್ಮಗಳ ಸಾರವನ್ನು ಉಪದೇಶಮಾಡುವ ಒಳಿತ ಪ್ರಶ್ನೋತ್ತರ [illegible] "ಸತ್ಯೇಷು ಯತಿತವ್ಯಂ ವಃ ಸತ್ಯಂಹಿ ಪರಮಂ ಬಲಂ" ಅಂದರೆ ಸತ್ಯವೇ ಸಮಸ್ತಧರ್ಮಗಳಿಗೆ ಸನಾತನವಾಗಿರುವುದರಿಂದ ಸತ್ಯವನ್ನೇ ಯಾವಾಗಲೂ ಆಚರಿಸಬೇಕೆಂದು ಸರ್ವರಿಗೂ ಬೋಧಿಸಿದ್ದಾರೆ (ಮ. ಭಾ. ಅನ. ೧೬೭ ೫೦) ಅಂದಮೇಲೆ ಜಗತ್ತಿನಲ್ಲಿರತಕ್ಕ ಮಾನವಪ್ರಪಂಚದ ಇಹಪರ ಸುಖವನ್ನು ಪಡೆಯಲು ಸತ್ಯವೇ ಮೂಲಕಾರಣವಾಗಿರುತ್ತೆಂಬುದು ಕನ್ನಡಿಯಂತೆ ಸ್ಪಷ್ಟವಾಗಿ ಕಂಡುಬರುತ್ತದೆ. ಈ ಸತ್ಯದ ಬಲದಿಂದಲೇ ಭೂಮಿಯು ಆಧಾರವಿಲ್ಲದೆ ಆಕಾಶದ ಮಧ್ಯಭಾಗದಲ್ಲಿದ್ದರೂ ಮುಳುಗದೆ ನಿಂತಿರುತ್ತದೆ. ಸತ್ಯಮಹಾವ್ರತನಾದ ಪುರುಷನನ್ನು ಸಮುದ್ರದಲ್ಲಿ ಮುಳುಗಿಸಿದರೂ ಎತ್ತರದಿಂದ ಕೆಡವಿದರೂ, ಬೆಂಕಿಯಲ್ಲಿ ಹಾಕಿದರೂ, ಆಕಾಶವೇ ತಲೆಯಮೇಲೆ ಬಿದ್ದರೂ [illegible] ಆ ಪುರುಷನಿಗೆ ಭಂಗಬರುವ ಸಂಭವವಿದೆಯೆ? ಸತ್ಯಧರ್ಮಾಚರಣೆಯುಳ್ಳ ಪ್ರಹ್ಲಾದ ಸುಧನ್ವರಿಗೆ ಅವರ ತಂದೆಯಿಂದ ಕೊಟ್ಟ ನಾನಾ ಕಷ್ಟಗಳು ಸುಖಕರವಾಗಿ ಪರಿಣಮಿಸಿಲ್ಲವೇ? ಸತ್ಯಧರ್ಮಪರನಾದ ಹರಿಶ್ಚಂದ್ರನು ಲೋಕವಿಖ್ಯಾತನಾಗಿರಲಿಕ್ಕೆ ಈ ಸತ್ಯವೇ ಮೂಲಕಾರಣವಲ್ಲವೇ? ಹಿಂದಿನ ಕಾಲದಲ್ಲಿ ಹಾಗೆಯೇ ಈ ಕಾಲದ ಸತ್ಯಾಗ್ರಹಿಗಳಿಗೆ ನಾನಾ ಬಗೆಯ ಕಂಟಕಗಳು ಬಂದರೂ ಏನನ್ನು ತಾನೇ ಮಾಡಿದವು? ವ್ಯಾಸಮಹರ್ಷಿಗಳುಕೂಡ "ಸತ್ಯಾನ್ನಾಸ್ತಿ ಪರೋಧರ್ಮಃ" ಎಂಬದಾಗಿ ಸಾರಿದ್ದಾರೆ. ಅಂದರೆ ಸತ್ಯಕ್ಕಿಂತ ಹೆಚ್ಚಿನದಾದ ಧರ್ಮವು ಇಲ್ಲವೆಂಬುದೇ ಈ ಮುನಿಗಳ ಅಭಿಪ್ರಾಯವು. ಇಷ್ಟೇ ಅಲ್ಲ ಮನುಷ್ಯಮಾತ್ರರ ವ್ಯವಹಾರವೆಲ್ಲ ವಾಚೆಯಿಂದ (ಸತ್ಯದಿಂದ)ಲೇ ನಡೆದಿದೆ, ಒಬ್ಬರ ವಿಚಾರಗಳನ್ನು ಮತ್ತೊಬ್ಬರಿಗೆ ತಿಳಿಸಲಿಕ್ಕೂ ಅವರು ಅವನ್ನು ನಂಬಲಿಕ್ಕೂ ಸತ್ಯವಾಣಿಯ ಹೊರತು ಬೇರೆ ಸಾಧನವೇ ಇರುವದಿಲ್ಲ. ಅಂದಮೇಲೆ ವ್ಯವಹಾರಕ್ಕೆಲ್ಲ ಉಗಮವಾಗಿರುವ ಸತ್ಯದಮೂಲವನ್ನು ಕಡಿದು ಯಾರು ಕಲಕುವರೋ ಅವರು ಮನುಷ್ಯರೊಳಗೆ ಅತಿಧಿಕ್ಕಾರ ಪಾತ್ರರು. ಈ ಸತ್ಯರೂಪ ದೇವತೆಯನ್ನು ಆಶ್ರಯಿಸಿದ ಧರ್ಮಪುತ್ರರನ್ನು ಆ ಧರ್ಮದೇವತೆಯೇ ರಕ್ಷಣೆಮಾಡುತ್ತದೆ ಎಂದು ಹೇಳುವದರಲ್ಲಿ ಸಂದೇಹವಿಲ್ಲ.

ಅಶ್ವಮೇಧಸಹಸ್ರಂ ಚ ಸತ್ಯಂ ಚ ತುಲಯಾಧೃತಂ ।
ಅಶ್ವಮೇಧಸಹಸ್ರಾದ್ಧಿ ಸತ್ಯಮೇವ ವಿಶಿಷ್ಯತೇ । (ಆದಿ ೨೧೦)

ಸಾವಿರ ಅಶ್ವಮೇಧಗಳಿಂದಾರ್ಜಿಸಿದ ಫಲವನ್ನೂ, ಸತ್ಯವನ್ನೂ ತಕ್ಕಡಿಯಲ್ಲಿಟ್ಟು ತೂಕಮಾಡಲು ಆ ಸತ್ಯದ ತೂಕವೇ ಹೆಚ್ಚು ಎಂಬುದಾಗಿ ಹೇಳಿದೆ. ಅಂದಮೇಲೆ ಸತ್ಯದ ಹಿರಿಮೆಯು ಇಷ್ಟೇ ಎಂದು ವರ್ಣಿಸಲು ಯಾರಿಗೂ ಶಕ್ಯವಿದೀತೆ? ಪ್ರಾಚೀನ ಅರ್ವಾಚೀನ ಕಾಲಗಳಲ್ಲಿ ಸತ್ಪಾತ್ರರೆಂಬುವರೆಲ್ಲರ ಆ ಮಹಿಮರ ಜೀವನದ ಕಟ್ಟಡದ ತಳಹದಿಯು ಸತ್ಯವೇ ಎಂಬುದನ್ನು ಅವರವರ ದಿವ್ಯಚರಿತ್ರೆಗಳಿಂದ ಸ್ಪಷ್ಟ ಮಾಡಬಹುದಿದ್ದೇವೆ. ಹೀಗೆ ಸರ್ವತೋಪ್ರಸಿದ್ಧವಾದ ಮತ್ತು ನಿತ್ಯವಾದ ಸತ್ಯತತ್ವ ಅಪವಾದಗಳಿಗೊಳಗಾಗಬಹುದೆಂದು ಯಾರಮನಸ್ಸಿನಲ್ಲಾದರೂ ಉದ್ಭವಿಸುವುದೇನು? ದುಷ್ಟಜನರಿಂದ ತುಂಬಿಕೊಂಡಿರುವ ಈ ಜಗತ್ತಿನಲ್ಲಿಯ ವ್ಯವಹಾರವು ಬಹು ಪ್ರಯಾಸವುಳ್ಳದ್ದಾಗಿದೆ. ಕೆಲವು ಮಾರ್ಗಸ್ಥರು ಸುಲಿಗೆಗಾರರ ಕೈಯಲ್ಲಿ ಸಿಗುವ ಹಾಗಿ ನಿಮ್ಮ ಕಣ್ಣಮುಂದೆಯೇ ಓಡಿಹೋಗಿ ನಿಬಿಡವಾದ ಅಡವಿಯಲ್ಲಿ ಅಡಗಿಕೊಂಡು ಕುಳಿತರೆಂದೂ ಅನಂತರದಲ್ಲಿ ಬರಿಯಿಂದ ಹಿಡಿದ ಕತ್ತಿಗಳನ್ನು ಹಿಡಿದುಕೊಂಡು ಆ ಸುಲಿಗೆಗಾರರು ಅವರನ್ನು ಬೆನ್ನಟ್ಟಿಬಂದು ಆ ಜನರು ಎತ್ತಕಡೆಗೆ ಹೋದರೆಂದು ನಿಮ್ಮನ್ನು ಕೇಳಿದರೆ ಆಗ ನೀವು ಏನೆಂದು ಉತ್ತರಕೊಡುವಿರಿ? ಸತ್ಯವನ್ನು ನುಡಿದು ಆ ನಿರಪರಾಧಿ ಜನರ ಜೀವಹಿಂಡುವಿರೋ? ಇಲ್ಲವೆ ಆ ಬಡಪಾಯಿಗಳ ಜೀವವನ್ನು ಉಳಿಸುವಿರೋ ಎಂಬ ಪ್ರಬಲವಾದ ಶಂಕೆಯು ಬಂದು ಕಾಡುವದು. ಈ ಬಗ್ಗೆ ಪ್ರಾಚೀನಮುನಿಗಳು

ನ ನರ್ಮಯುಕ್ತಂ ವಚನಂ ಹಿನಸ್ತಿ ನ ಸ್ತ್ರೀಷು ರಾಜನ್ನ
ವಿವಾಹಕಾಲೇ ।
ಪ್ರಾಣಾತ್ಯಯೇ ಸರ್ವಧನಾಪಹಾರೇ ಪಂಚಾನೃತಾನ್ಯಾಹುರ
ಪಾತಕಾನಿ ॥

ಅಂದರೆ ಹಾಸ್ಯಪ್ರಸಂಗದಲ್ಲಿ, ಸ್ತ್ರೀಯರಲ್ಲಿ ಮದುವೆಯ ಕಾಲದಲ್ಲಿ, ಪ್ರಾಣಾಂತ್ಯ ಸಮಯದಲ್ಲಿ, ಧನವನ್ನು ಉಳಿಸಿಕೊಳ್ಳುವ ಪ್ರಸಂಗದಲ್ಲಿ ಸುಳ್ಳನ್ನು ಆಡಿದರೂ ಪಾತಕವಿಲ್ಲವೆಂದು ಹೇಳಿರುವರು.

(ಮ.ಭಾ.ಆ ೮೨ ೧೬)

ಅಂದರೆ ಈ ಸತ್ಯದ ಬಗ್ಗೆ ಶ್ರೀಕೃಷ್ಣನು ಮತ್ತು ಭೀಷ್ಮಪಿತಾಮಹನು ಕೂಡಿ ಹೇಳುವದೇನೆಂದರೆ—ಮೇರುಪರ್ವತವು ಇದ್ದಲ್ಲಿಂದ ಕದಲಬಹುದು, ವಹ್ನಿಯು ತಣ್ಣಗಾಗಬಹುದು, ಅಮಾವಾಸ್ಯೆಯದಿನ ಚಂದ್ರನು ತನ್ನ ಪ್ರಕಾಶವನ್ನು ಪಸರಿಸಬಹುದು. ಆದರೆ ನಮ್ಮ ವಾಕ್ಯಗಳು ಮಾತ್ರ ಸಟೆಯಾಗ ಎಂಬ ಸತ್ಯಶಪಥವು ಯಾವ ಸತ್ಯಾಗ್ರಹಿಗಳ ಸತ್ಯ ವನ್ನು ಪೂರ್ಣವಾಡದೇ ಇದ್ದೀತು? ಪವಿತ್ರವಾದ ಶೈವಧರ್ಮದ ಭಕ್ತಮಾಹೇಶ್ವರನ್ನುಂದಕ್ಕಾವರಿಸಿದ ಅಜ ವಿರವು ನಾಶವಾಗಲಿಕ್ಕೂ ಜಗದ್ವಂದ್ಯರಾದ ಪಂಚಮಹಾ ಗಳ ಜಯಸಿನಾದವು ಸರ್ವತ್ರ ಹರಡಲಿಕ್ಕೂ ಶಿವಾದ್ವೈತಸಿದ್ಧ ದ ವಿಜಯಧ್ವಜವು ಜಗನ್ಮಧ್ಯದಲ್ಲಿ ಮೆರೆಯಲಿಕ್ಕೂ ಸಹಸ್ರ ಗ್ರಂಥರತ್ನಗಳು ಜಗನ್ಮಧ್ಯದಲ್ಲಿ ಪ್ರಕಟಿತವಾಗಿ ಗುರುಪ ಅತ್ಯಂತ ಭೂಷಣಾಸ್ಪದವಾಗಲಿಕ್ಕೂ, ಧರ್ಮಾವತಾ ವೇ|| ಪಂ|| ಶ್ರೀ|| ಕಾಶೀನಾಥಶಾಸ್ತ್ರಿಗಳಿಯವರ ಸತ್ಯೈಕಧರ್ಮ ನೆಯೂ ಗುರುಭಕ್ತಿಪೂರ ಧರ್ಮವೂ ಕಾರಣವಲ್ಲವೆ ಮ "ಜಗದ್ಧಾಕಲ್ಯಾಣಸಂತಾಂಬೇ ವಿಭೂತಿ" ದೇಶಕಪ್ಪ [illegible] ರೆ?" ಎಂಬುಕ್ತಿಯಂತೆ ಧರ್ಮೋದ್ಧಾರಕರಾದ ಪ ಅನಂತಾನಂತ ಸಂಕಟಗಳಿಂದ ಪಾರಾಗಿ ಧರ್ಮಧ್ವಜವನ್ನು ಜ ನಲ್ಲಿ ನೆಟ್ಟಯೆಂದರು ಸದ್ಯಃ ಮೆರೆಯಿಸುತ್ತಿರುವರು ವ ಹಾ ವಿಭೂತಿಯಾದ ಪರಾಪತಾಭಿಯಾದ ಪಂಡಿತರ ಪೂಜಪು ಅರ್ಗಿತಾನೇ ಸಂತೋಷವನ್ನೇ ಯುದೇಇದ್ದೀತ ವ ಪ ಕ್ತನಲ್ಲಿರತಕ್ಕ ಸತ್ಯ ಧೈರ್ಯ ದಯಾ, ಗುರುಭಕ್ತಿ, ಮೊದಲ ದವುಗಳು ಗುರುವಂಶೀಯರಾದ ಪ್ರತಿಯೊ ಬ್ಬರಿಗೂ, ಇದಿನೀತಾಮದು ಆತ್ಯವಶ್ಯ. ಅಂತೆಯೇ ತೈತ್ತಿ ಶ್ರುತಿಯ ೨ ಕೂಡ ‘ ಸತ್ಯಂವದ ಧರ್ಮಂಚರ ’ ಎ ಸ ರುತ್ತಿರುವದು. ಅಪ್ರತಿಮ ಪರಾಕ್ರಮ ಶಾಲಿಯಾದ ದ್ರೋ ಣಾಯರನು ಪಾಂಡವರ ಸೈನ್ಯವನ್ನು ಸದೆಬಡಿದು ಸವರುತ್ತ ನಿ ರಸ್ತ ರಕಾಶರನ್ನಾಗಿ ಮಾಡಿದ್ದನು. ತಮಗೆ ಸೋಲು ದೆಂದು ಧರ್ಮರಾಜನಿಗೆ ಮನವರಿಕೆಯಾಗಿದ್ದರೂ, ತನ್ನ ಒಂದಾದ ಅಸತ್ಯ ಭಾಷಣದಿಂದ ದ್ರೋಣನು ನಾಶವಾಗಿ ವನ್ನು ಪಡೆವ ಕೈಸೇರುತ್ತಿದ್ದರೂ ಸಾಕ್ಷಾತ್ ಶ್ರೀಕೃ ಹಾಗೆ ಮಾಡೆಂದು ಹೇಳುತ್ತಿದ್ದರೂ, ಅವೆಲ್ಲವನ್ನು ಮ ತನ್ನ ಸತ್ಯವ್ರತವನ್ನು ಸರ್ವತೋಮುಖವಾಗಿ ಕಾಪಾಡಿಕೊಂಡ ಇರ ಸತ್ಯಪ್ರತಿ ರಾಜನು ದೊರೆಯಬಹುದು? ಅಹಾ ಅಲ್ಲದೆ ಭಾರತ ಯ ಧೀಜನಾದ ಪುತ್ರನು! ಸತ್ಯೋಪಾ ನನು ಸತ್ಯವಾಗಿ ಉಳಿದನು! ಶ್ರೀಕೃಷ್ಣನು ದುಷ್ಟರ ದಾ ಮಾಡುವದೂ ಶಿಷ್ಟರರಕ್ಷಣೆ ಮಾಡುವದೂ ತನ್ನ ಅದ್ಯಕರ್ತ ವಾಗಿದ್ದುದರಿಂದ ಕಡೆಗೆ ಒಂದು ಉಪಾಯದಿಂದ ಧರ್ಮ ಸತ್ಯವ್ರತಕ್ಕೆ ಭಂಗ ಒದವಂತೆಯೂ ದ್ರೋಣನು ಅಂತ ಬೆಯೂ ಮಾಡಿ ಭಾರತಯುದ್ಧವನ್ನು ಇತ್ಯರ್ಥಗೊಳ ಅಸ್ತು! ಭೀಷ್ಮನೂ ಇಂಥವನೇ, ಆತನು ಸತ್ಯಕ್ಕೆ ಕಟ್ಟು ಭೀಷಣವಾದ ಬ್ರಹ್ಮಚರ್ಯ ವ್ರತವನ್ನು ಪರಿಪಾಲಿಸಿದ್ದರಿ ಭೀಷ್ಮನೆಂದು ಪ್ರಸಿದ್ಧನಾದನು. ಹರಿಶ್ಚಂದ್ರನಂತೂ ಸತ್ಯ ಮೂಲಚಕ್ರವರ್ತಿಯೂ ಸತ್ಯಾಗ್ರಹಿಗಳಿಗೆ ಮೂಲಗುರುವೂ ರುವನು. ಎಲ್ಲೆಲ್ಲಿಯೂ ವ್ಯಾಪಿಸಿರುವ ಬಿಳಿಯ ಬಣ್ಣವು ಕೀರ್ತಿಯದೇ ಎಂದು ನಾವು ಯಾಕೆ ಹೇಳಬಾರದು? ಇವು ಯುಗದವರ ಮಾತಾಯಿತು. ಕಲಿಯುಗದ ಮಹಾತ್ಮ ಸತ್ಯಾಚರಣೆಯನ್ನು ನೋಡುತ್ತಲೇ ಬಂದಿರುವರು. "ಸತ್ಯ ಸಾವಿಲ್ಲ" ನೆಂಬಂತೆ ಆದಿ ಜಗದ್ಗುರುಗಳಲ್ಲಿಯೂ ಕಲಿ ಕಾಲಗಳಲ್ಲಿಯೂ ಅವ್ಯಾಹತವಾಗಿ ನಡೆದುಬಂದಿರುವುದು ರೇಣುಕಾಚಾರ್ಯರೂ, ಇನ್ನು ಇದ ಮಹಾನುಭಾವರೂ ವಾಗಿ ನುಡಿದು ಅದನ್ನೇ ಎತ್ತಿ ನಡೆದುಹೋಗಿರುವರು. ನಿ ನೋಡಿದರೆ ಮಹಾಪುರುಷರೆಲ್ಲರೂ ಸತ್ಯವಂತರೂ ಸತ್ಯವ ರೆಲ್ಲರೂ ಮಹಾಪುರುಷರೂ ಆಗಿರುವರು.

ಈ ವಿಷಯದಲ್ಲಿ ಸಂಶಯವುಳ್ಳವರು ಸ್ವತಃ ಅನುಭವ ಇಂದಲ್ಲಿ ತಾವೇ ಜಗತ್ತಿಗೆ ಆದರ್ಶಪ್ರಿಯರಾಗುವರು. ಸ ನಿಜವಾದ ಧರ್ಮವೆಂದು ಹೇಳುವದಾದರೆ ಸತ್ಯವಂತರೆಲ್ಲರು ಪರಾಪತ್ತಿಗಳಿಂದ ಬಳಲುವದೇಕೆ? ಎಂದು ಕೆಲವರ "ಶ್ರೇಯಾಂಸಿ ಬಹುವಿಘ್ನಾನಿ" ಎಂಬ ಪ್ರಮಾಣದಂತೆ ಸ ಶ್ರೇಯಸ್ಕಾರ್ಯಗಳಿಗೆ ವಿಘ್ನಗಳು ಬರುವದೇನೋ ನಿಜ ಅವು ಚಿರಸ್ಥಾಯಿಗಳಲ್ಲ "ಶರದಭ್ರಚ್ಛಾಯಾ ಇವ" ಶರ ಛಾಯೆಗಳಂತೆ, ತಣಿಸಂಕುರಗಳಂತೆ ಮಾತ್ರ, ಇದನ್ನ ಎಲ್ಲರೂ ಸತ್ಯವಾದಿಗಳಾಗಬೇಕು, ಸತ್ಯವಾದ ಕಾರ್ಯ ಕೈಕೊಳ್ಳಬೇಕು, ಒಮ್ಮೆ ಒಬ್ಬ ಶಿಷ್ಯನು ತನ್ನ ಗುರುವಿಗೆ-ಸ ಕಾಲತ್ರಯದಲ್ಲಿಯೂ ಹೇಳಬಾರದೆಂದು ಹೇಳಿದ್ದಾ ಪ್ರಸಂಗ ವಶಾತ್ ಅದರಿಂದ ಹಿತವಾಗುತ್ತಿದ್ದರೆ? ಎಂದು ಮಾಡಿದನು. ಅದಕ್ಕೆ ಮಹಾಜ್ಞಾನಿಯಾದ ಆ ಗುರುವು ಆ ಪ್ರಸಂಗದಲ್ಲಿ ಗುರು ದೇವತಾ ಸತ್ಕಾರ್ಯಗಳಲ್ಲಿಯೂ ದೀನ ಪತಿತರ ಉದ್ಧಾರವಾಗುವ ಸಮಯದಲ್ಲಿಯೂ ಒಮ್ಮೆ ಸ ನಿವರೆ ಕ್ಷಮ್ಯವದೆಯೆಂತಲೂ ಆದರೆ ಅದು ಅನ್ಯರಿಗೆ ನೋವನ್ನೂ ಹಾನಿಯನ್ನೂ ಉಂಟುಮಾಡುವದಾಗಿರಬಾರ ಕಲೂ ಉತ್ತರಕೊಟ್ಟನು, ಇಂತಹ ಸಂದರ್ಭಗಳಲ್ಲಿ ಮಾಡಲು ಅಷ್ಟು ದೋಷವೆನಿಸಲಾರದೆಂದು ನನ್ನ ದಾದರೂ ವಿದೆ. ಆದರೂ ನಾವು ಪ್ರಯತ್ನ ವಿಶೇಷದಿಂದ ಪ್ರತಿಯೊ ಕಾರ್ಯವನ್ನು ಸತ್ಯವ್ರತದಿಂದಲೇ ಪೂರೈಗೊಳಿಸಬೇಕ "ಎಳೆಕೊಟ್ಟರೆ ಹಚ್ಚಡನುಂಗುವವನಂತೆ" ಅನಿವಾ ಪ್ರಸಂಗದಲ್ಲಿ ಒಮ್ಮೆ ಎಂದು ಹೇಳಿದರೆ ಪ್ರತಿಯೊಂದು ಕಾ ದಲ್ಲಿ ಹಾಗೆಯೇ ಮಾಡುವದು ಸತ್ಯಶೀಲರ ಲಕ್ಷಣವಲ್ಲ. "ಧ ಏವ ಹತೋಹಂತಿ ಧರ್ಮೋ ರಕ್ಷತಿ ರಕ್ಷಿತಃ" ಎಂಬುಕ್ತಿ ಸತ್ಯರೂಪವಾದ ಧರ್ಮವು ತನ್ನನ್ನು ರಕ್ಷಿಸುವವರನ್ನು ರಕ್ಷಿ ನಾಶಮಾಡುವವರನ್ನು ನಾಶಮಾಡುವದು ಆದ್ದರಿಂದ ಅಭ್ಯು ಕಾಂಕ್ಷಿಗಳು ಸತ್ಯವನ್ನು ನುಡಿದು ಆತ್ಮೋನ್ನತಿ ಮಾಡಿಕೊ

ಸತ್ಯವು ಅಜೇಯವೂ ಅಪ್ರಮೇಯವೂ ಸರ್ವಾಧಾರವೂ ವೂ ಆಗಿರುವದರಿಂದ ಅದನ್ನಾಶ್ರಯಿಸಿದವರು ಪರುಷ ದ ಕಬ್ಬಿಣವು ಸುವರ್ಣವಾಗುವಂತೆ ಸತ್ಪುರುಷರಾಗುವಲ್ಲಿ ಸಂದೇಹವೂ ಇರುವದಿಲ್ಲ. ಸತ್ಯವಾದ ಕಾರ್ಯಕ್ಕೆ ಎಷ್ಟು ು ಬಂದರೂ ಅವುಗಳ ಆಟವು ಸಾಗಲಾರದು. ಸೂರ್ಯನ ಮಂಜು ಹುಳದಂತೆಯೇ ಸರಿ' ಇದ್ದದ್ದನ್ನು ಇದ್ದ ಹಾಗೆ ವನು ಅಧರ್ಮ ಮಾರ್ಗದಲ್ಲಿ ಗಣ್ಯನು ಅವನು ಈ ದ ಅಪವಾದಕ್ಕೂ ಅಪಹಾಸ್ಯಕ್ಕೂ ನಿಂದೆಗೂ ಯಮ ದ ಘೋರ ಶಿಕ್ಷೆಕ್ಕೂ ಗುರಿಯಾಗುವನು. ಪುರಾಣಗಳ ಂದರಲ್ಲಿ ಸುಳ್ಳು ಹೇಳಿದ ಅಪರಾಧಕ್ಕಾಗಿ ಗೋಳಿಸುತ್ತ ಷ್ಟಗಳಿಗೆ ಯಾವ ಶಿಕ್ಷೆಯಾಯಿತೆಂಬುದನ್ನೂ ಪ್ರಾಣಿಗಳ ನ್ಯಾಯಿಯಾದ ಮಾನವನು ಸುಳ್ಳಾಡಿದರೆ ಅದೆಂತಹ ಶಿಕ್ಷೆಗೆ ಗಬೇಕಾಗುವದೆಂಬುವದನ್ನೂ ಜ್ಞಾನಿಗಳಾದ ವಾಚಕರೇ ಸರಿ

ಸತ್ಯದಿಂದಲೆ ಜಗದ ಸಂಸ್ಥಿತಿ |
ಸತ್ಯದಿಂದಲೆ ಜೀವ ಸಂಸ್ಥಿತಿ |
ಸತ್ಯದಿಂದಲೆ ಧರ್ಮ ಸಂಸ್ಥಿತಿ ಮೋಕ್ಷಸಂಸ್ಥಾ |

ಸತ್ಯವೇ ಸರ್ವ ಸುಖದಾಯಕವು. ತ್ರಿಭುವನವನ್ನು ತೂಕ್ಕ ವಿಟ್ಟರೂ ಸತ್ಯಕ್ಕೆ ಸಮವಾದುದು ಯಾವುದೂ ಇಲ್ಲವು ಕಾಲದಲ್ಲಿಯೇ ಆಗಲಿ ಸತ್ಯಕ್ಕೇ ಜಯವಾಗುವದು ಅಜೇಯವಾದದ್ದು. ಜಗದಾಚಾರ್ಯರು ಇಂತಹ ಸರ್ವೋ ವಾದ ಸತ್ಯಧರ್ಮವನ್ನು ಆಚರಿಸುವಂತೆ ಸರ್ವರಿಗೂ ದ್ಧಿಯನ್ನು ಕೊಡಲೆಂದು ಪ್ರಾರ್ಥಿಸುವೆನು

ಶ್ರೀ ಜಗದ್ಗುರು ದಾರುಕಾಚಾರ್ಯಾಯ ನಮಃ

ಏಕಾಂಗಿಯಾಗಿಯೇ ಇರಬಹುದೊ?

—ಮಲ್ಲಿಕಾರ್ಜುನಾರಾಧ್ಯ ರಾಜೆಪಿನ್ನೂರು ಹಿರೇಮಠ,
ಮುದೇನೂರು

ತಿಯೊಂದು ಪ್ರಾಣಿಯು ಸ್ವಭಾವನೇನೆಂಬುದನ್ನು ಸಾವಧಾ ನ ವಿಚಾರಮಾಡಿದರೆ ಇಂದ್ರಿಯಗಳಿಗೆ ತಕ್ಕ ಸುಖವನ್ನು ಅರಿ ವೇ ನ್ಯಾಯವಾದುದೆಂಬುವದನ್ನು ನಾವು ಕಂಡುಕೊಳ್ಳಿ ವ. ಇದು ಪ್ರಾಣಿಯಲ್ಲಿ ಅಗತ್ಯವಾಗಿ ಇರಬೇಕಾದ ವಿಷಯ ವೆ ಏಕೆಂದರೆ ನಾವು ಪಡೆದಿರುವ ಜನ್ಮಕ್ಕೆ ತಕ್ಕ ಸುಖಗ ಪಡೆಯದೇ ಇದ್ದರೆ ನಮ್ಮ ಜನ್ಮವು ಹೇಗೆ ವ್ಯರ್ಥವೆನಿಸು ೀ ಹಾಗೆಯೇ ಇತರಪ್ರಾಣಿಗಳ ಜನ್ಮಕ್ಕೂ ಸುಖಾಸುಖ ಪರಮಫಲವಾಗಿದೆ ಆದರೆ ಇತರಪ್ರಾಣಿಗಳಿಗೂ ಮನುಷ್ಯ ಇರುವ ವಿಲಕ್ಷಣವಾದ ವ್ಯಾಪಾರಗಳಲ್ಲಿ ದುರ್ಗತಿ ಗಲೀ ಸದ್ಗತಿಯನ್ನಾಗಲೀ ಪಡೆಯುವುದಕ್ಕೆ ತಕ್ಕ ಅನು ವು ಮನುಷ್ಯನಿಗೆ ಹೇರಳವಾಗಿರುವಂತೆ ಇತರ ಪ್ರಾಣಿಗಳಿಗಿಲ್ಲ ದವಲೇ ಇತರ ಪ್ರಾಣಿಗಳಿಗಿಂತಲೂ ಮನುಷ್ಯನು ಅತ್ಯುಚ್ಚ ದಲ್ಲಿ ನಿಂತು ತನ್ನ ಅಟ್ಟಹಾಸವನ್ನು ಬಗೆಬಗೆಯಾಗಿ ವಿಜೃಂಭ ು ಇಲ್ಲವೇ ಕ್ಷುದ್ರಜಂತುವಿಗಿಂತಲೂ ಹೇಯವಾದ ವರ್ತನೆ ದ ಅಧೋಗತಿಯಲ್ಲಿ ಗೋಳಿಡುತ್ತಿರುವನು. ನಾವು ನಮ್ಮ ಯಗಳಿಗೆ ತಕ್ಕಂತೆ ಸುಖವನ್ನು ಅನುಭವಿಸುವದು ನ್ಯಾಯ ವೆಂದು ಮೇಲೆ ಹೇಳಿರುವದಷ್ಟೆ? ಅದರಲ್ಲಿ ಯಾವಯಾವ ಯಕ್ಕೆ ಎಂತೆಂತಹ ಸುಖವನ್ನು ಹೇಗೆಹೇಗೆ ಒದಗಿಸಿಕೊಳ್ಳ ಬ ವಿಷಯದಲ್ಲಿ ವಿಚಾರಮಾಡದೇ ವರ್ತಿಸಿದರೆ ನಾವು ಪ್ರತಿಯಾಗಿ ದುಃಖವನ್ನು ಅಮಂತ್ರಿಸಬೇಕಾಗುವದ ವೆ ಇರುವಂತೆ ಇಂದ್ರಿಯಸುಖಗಳಿಗೂ ಮೇರೆಮೀರಿ ಮೇರೆಮೀರಿದರೆ ಅನರ್ಥಕಾರಿಯೆಂಬುದನ್ನು ವಿವೇಕಿಗಳು ಉದಾಹರಣೆಗಳಿಂದ ಮನಗಂಡಿರುವರು. ಹಸಿವು ಊಟಕ್ಕೆ ಸಿವರೂ ಮಿತಿಮೀರಿ ಕುಡಿದರೆ ಏನಾಗುವುದೆಂಬುವದನ್ನು ಸಬೇಕು. ದುಡಿಯುವುದು ಮೇಲೆನಿಸಿದರೂ ಹಗಲಿರುಳೂ ವನ್ನು ವಹಿಸಿದರೆ ಏನಾಗುವದೆಂಬುವದನ್ನು ಅರಿಯಬೇಕು. ೀ ನಮ್ಮ ಎಲ್ಲಾ ಇಂದ್ರಿಯಗಳ ಸುಖವನ್ನೂ ಮಿತ ಸುಖಕ್ಕೇ ಉಪಯೋಗಿಸಬೇಕು. ಹೀಗೆ ಉಪಯೋಗಿಸಿ ಮುಕ್ತವಾಗಿ ಇಂದ್ರಿಯನಿಗ್ರಹವನ್ನು ಸಾಧಿಸಬಹುದು ಒಕ್ಕೇ ಎಷ್ಟೋ ಇಂದ್ರಿಯನಿಗ್ರಹವನ್ನು ಮಾಡಿಕೊಳ್ಳಬೇ ಅವಶ್ಯಕತೆಯಿರುವಾಗ ಪರವಿಷಯಕ್ಕೆ ಸಂಪೂರ್ಣವಾದ ಯನಿಗ್ರಹವು ಅತ್ಯವಶ್ಯಕವು. ಇಂತಹ ಪರಸುಖಕ್ಕೆ ಸಹ ಾದ ಇಂದ್ರಿಯನಿಗ್ರಹದ ವಿಷಯವಾಗಿಯೇ ನಾವು ಈಗ ಪನಮಾಡಬೇಕಾಗಿದೆ. ಏಕೆಂದರೆ—ಪ್ರಪಂಚವಾದ ಇಹದಲ್ಲಿ ಎಷ್ಟು ಸುಖಗಳನ್ನು ಅನುಭವಿಸಿದರೂ ಪರಗತಿಯ ಸಾಧ ಉತ್ತಮಗೊಳ್ಳದಿದ್ದರೆ ನಮ್ಮ ಸುಖಗಳೆಲ್ಲವೂ ಅರಣ್ಯ ನದಂತೆ ವ್ಯರ್ಥವಾಗುವವು. ಇಂದ್ರಿಯಗಳಿಗೆ ಸುಖಾಪೇ ಸ್ವಭಾವವಿರುವುದರಿಂದಲೇ ಪರಗತಿಯ ಸುಖವನ್ನೂ ಯಗಳಿಂದಲೇ ಪಡೆಯಲು ನಾವು ಸಮರ್ಥರಾಗಿರುವೆವು. ಕಾರಣವೇ ಸದ್ಗತಿಗೆಳಸಿ ಇಂದ್ರಿಯಸುಖವನ್ನು ನಾವು ಹೆಚ್ಚಾಗಿ ಅನುಭವಿಸುವುದು ಮೇಲಾಗಿದೆ. ಸದ್ಗತಿಗೆ ಸಹಾ ಯಕ ಇಂದ್ರಿಯಗಳಲ್ಲಿ ಮನಸ್ಸೂ ಬುದ್ಧಿಯೂ ಅತಿ ಮುಖ್ಯವುಗಳಾಗಿವೆ. ಅವೆರಡನ್ನೂ ಸರಿಯಾದ ಸ್ಥಿತಿಯಲ್ಲಿ ಇಟ್ಟುಕೊಳ್ಳಬೇಕಾದುದು ಮನುಷ್ಯರಿಗೆ ಮುಖ್ಯವಾದ ಕರ್ತವ್ಯ. ಇವೆರಡರ ವಿಚಾರದ ಸುಖಕ್ಕಾಗಿಯೇ ವೇದಗಳೂ-ಶಾಸ್ತ್ರಗಳೂ-ಗುರೂಪದೇಶಗಳೂ ಯೋಗಗಳೂ ಪೂಜೆಗಳೂ-ಕರ್ಮಗಳೂ ಮುಂತಾದವುಗಳೆಲ್ಲಾ ಜಗತ್ತಿನಲ್ಲಿ ಪ್ರಚಾರಗೊಂಡಿವೆ. ಎಷ್ಟೋ ಜನರು ಇವುಗಳನ್ನೆಲ್ಲಾ ಸಾಧನಮಾಡಿದರೂ ತಕ್ಕಂತೆ ಕೃತಕೃತ್ಯರಾಗದಿರುವುದು ಅನುಭವಜನ್ಯವಾದ ವಿಷಯವಾಗಿದೆ. ಎಂತಹ ಪಂಡಿತನಾಗಿದ್ದರೂ ಎಂತಹ ಸನ್ಯಾಸಿಯಾಗಿದ್ದರೂ-ಎಂತಹ ಯೋಗಿಯಾಗಿದ್ದರೂ ಎಂತಹ ಕರ್ಮಠನಾಗಿದ್ದರೂ ಮನೋದಾರ್ಢ್ಯವಿಲ್ಲದವನು ಪರಸುಖಕ್ಕೆ ತೀರ್ಗದೆಯಾಗಲಾರನು. ಈಗಿನ ಅನೇಕ ಪಂಡಿತರೇ ಮೊದಲಾದವರಲ್ಲಿ ಇಂತಹ ಮನೋಬಲವಿಲ್ಲದಿರುವುದರಿಂದಲೇ ಅವರಲ್ಲಿ ವಿವೇಕಿಗಳಿಗೆ ಭಕ್ತಿಯು ಹುಟ್ಟಲಾರದು. ತಾನೇನೋ ಮಹಾಜ್ಞಾನಿಗಳೆಂದು ಅವರು ತಿಳಿದುಕೊಂಡಿರಬಹುದು. ಸುವಿಚಾರಿಗಳು ಅವರನ್ನು ಕ್ಷುದ್ರಕೀಟಕ್ಕೆ ಕಡೆಯಾಗಿ ಭಾವಿಸುವರು. ಪ್ರಿಯವಾಚಕರೇ, ಜಗತ್ತಿನಲ್ಲಿ ತಿರಸ್ಕಾರ ಪುರಸ್ಕಾರಗಳು ಅವನವನ ನಡೆವಳಿಯನ್ನನುಸರಿಸಿರುತ್ತವೆ. ಮನುಷ್ಯನ ಯೋಗ್ಯತೆಯನ್ನು ಸ್ವಭಾವದಿಂದಲೇ ಕಂಡುಹಿಡಿಯಬೇಕಲ್ಲದೆ, ಇತರ ಜಾತಿ, ವಿದ್ಯೆ, ಹಣ, ಗುಣಗಳಿಂದ ಫಲವಿಲ್ಲ. ಸ್ವಭಾವವು ಮಿಕ್ಕ ಗುಣಗಳನ್ನೆಲ್ಲ ಮೆಟ್ಟಿ ನೆತ್ತಿಯಮೇಲೆ ಏರುವುದು. ಒಂದು ಬಂಡೆಯನ್ನು ಬೆಟ್ಟದತುದಿಗೆ ಏರಿಸಬೇಕಾದರೆ ಸಾಹಸವುಬೇಕು. ಅದನ್ನೇ ಕೆಳಗೆ ಉರುಳಿಸುವುದು ಒಂದೇ ಒಂದು ಕ್ಷಣದ ಕೆಲಸ. ಪುರುಷನ ಗುಣದೋಷಗಳೂ ಹೀಗೆಯೇ. ಉದಾಹರಣೆಗಾಗಿ ಬಾವಿಯನ್ನು ಅಗೆಯುವವನೂ ಗೋಡೆಕಟ್ಟುವವನೂ ಇಟ್ಟುಕೊಳ್ಳೋಣ. ಬಾವಿಯನ್ನು ಅಗೆಯುತ್ತ ಅವನು ಕೆಳಕೆಳಗೆ ಹೋಗುವನು. ಗೋಡೆಯನ್ನು ಕಟ್ಟುತ್ತ ಅವನು ಮೇಲೆಮೇಲೆ ಹೋಗುವನು. ಅಂತೆಯೇ ಮನುಷ್ಯರೂ ತಮ್ಮ ಕಾರ್ಯಗಳಿಂದಲೇ ಕೀಳುಮೇಲಾಗುವರು.

ಪರಸುಖವನ್ನು ನಿಜವಾಗಿ ಬಯಸುವವನು ಒಂದೆರಡಂಟರಗಳಿಂದ ಬಹು ಎಚ್ಚರವಾಗಿರಬೇಕು. ಏಕಾಂತದಲ್ಲಿ ಅವನು ತನ್ನ ಮನೋಬಲವನ್ನು ಸಾಧಿಸಿಕೊಂಡಿರಬೇಕು. ಪ್ರಪಂಚದಲ್ಲಿ ಪರರ ಸ್ತುತಿನಿಂದೆಗಳೂ, ಮಾನವ ವ್ಯಾಪಾರಗಳೂ, ಸ್ನೇಹಕ್ಕೂ ಮನಸ್ಸು ಅಧೀನವಾಗಿ ಚಂಚಲವೃತ್ತಿ ಹರಿಸ್ಥವಾಗುವುದೇ ಸಹಜವಾಗಿದೆ. ಏಕಾಂತದಲ್ಲಿ ಇಂತಹ ಆತಂಕಗಳಿರುವುದಿಲ್ಲ. ಜನಸಂದಣಿಯಲ್ಲಿ ಮನಸ್ಸು ಚಲಿಸದಿರುವದು ಶಕ್ಯವಲ್ಲ. ಅದುದರಿಂದಲೇ ನಮ್ಮ ಪ್ರಾಚೀನ ಮಹರ್ಷಿಗಳು ಏಕಾಂತವನ್ನುದ್ದೇಶಿಸಿ ಕಾಡನ್ನೂ ಗುಹೆಯನ್ನೂ ಆಶ್ರಯಿಸುತ್ತಿದ್ದರು. ಸುಖವು ನಾವಿರುವ ಸ್ಥಿತಿಯನ್ನು ಮಾತ್ರ ತಿಳಿಸುವುದು. ಏಕಾಂತವು ನಾವು ಹೇಗಿರಬೇಕೆಂಬುದನ್ನು ಬಹು ಸ್ಪಷ್ಟವಾಗಿ ಬೋಧಿಸುವದು. ಆಂಗ್ಲಭಾಷಾತತ್ವಜ್ಞನಾದ ಬೇಕನ್ನನು ಹೇಳುವುದೇನೆಂದರೆ—"ಏಕಾಂಗಿಯಾದವನು ಮೃಗವಾಗಿರಬೇಕು ಇಲ್ಲವೆ, ದೇವತೆಯಾಗಿರಬೇಕು" ಇದನ್ನು ವಿಚಾರಮಾಡಿದರೆ ಇದರಲ್ಲಿ ಬಹು ಗೂಢವಾದ ವಿಶೇಷಾರ್ಥಗಳಿರುವಂತೆ ಕಾಣುವದು. ಮನುಷ್ಯನು ಜನಸಹವಾಸದಲ್ಲಿ ಬೆಳೆಯದೆ ಕಾಡುಕಾರ್ಮರದಂತೆ ಇದ್ದರೆ ಅವನು ಮೃಗದಂತೆ ಯಾವ ಕೆಲಸಕ್ಕೂ ಬಾರದವನಾಗುವನೆಂಬುದು ವ್ಯಕ್ತವಾಗುವದು. ಏಕೆಂದರೆ, ನಾವು ಸಂಘದಲ್ಲಿ ಸೇರದಿದ್ದರೆ ದುಃಖಗಳನ್ನು ಸಹಿಸಲು ಸಮರ್ಥರಾಗಲಾರೆವು. ನಮ್ಮನ್ನು ಪ್ರೀತಿಸುವ ಸ್ನೇಹಿತರು ದೊರೆಯಲಾರರು.—ಆಪತ್ತುಗಳು ದೂರವಾಗಲಾರವು. ತನ್ನ ದೇಶದ ವಿಷಯವೇ ತಿಳಿಯದ ಇತರರಿಗೆಲ್ಲಾ ತಾನು ಹೊಸಬನಂತೆ ಲಜ್ಜಾವಿಷ್ಟನಾಗಬೇಕಾಗುವದು. ಏಕಾಂಗಿಯನ್ನು ಯಾರೂ ನೋಡುವುದಿಲ್ಲವಾದುದರಿಂದ ತಾನಿದ್ದರೂ ಸತ್ತಂತೆಯೇ ಭಾವಿಸಬೇಕಾಗುವದು. ಇವೇ ಮೊದಲಾದುವನ್ನು ಯೋಚಿಸಿ, ಬೇಕನ್ನನು ಏಕಾಂಗಿಯನ್ನು ಕಾಡುಮೃಗಕ್ಕೆ ಹೋಲಿಸಿರುವನು. ಆದರೆ ನಾವು ಈಗ ಅಪೇಕ್ಷಿಸುವ ಏಕಾಂತವು ಅಂತಹುದಲ್ಲ. ಬೇಕನ್ನನು ಹೇಳುವ "ದೇವತೆಯಾಗಿರಬೇಕು" ಎಂಬ ಉದ್ದೇಶವನ್ನೇ ಸಾಧಿಸುವ ಏಕಾಂತವನ್ನು ವಿಚಾರಮಾಡುತ್ತಿರುವೆವು. ಏಕಾಂತವು ಸಂಘದಿಂದುಂಟು ಗಲಭೆಯಾದ ತಪ್ಪುಗಳಿಗೆಲ್ಲಾ ಹತ್ತವಾಗಿರುವದು. ಅನೇಕವಾದ ಪಾಪದ ಯೋಚನೆಗಳನ್ನೂ ಕೃತ್ಯಗಳನ್ನೂ ದೂರವಾಗಿರಿಸುವುದು. ಪರಮಾತ್ಮನ ಸ್ಮರಣೆಗೂ ಸ್ಥೈರ್ಯವನ್ನು ಕೊಡುವದು. ಶಿವಜೀವರ ತಾರತಮ್ಯವನ್ನು ಚೆನ್ನಾಗಿ ತಿಳಿಯುವಂತೆ ಮಾಡುವದು. ಆದರೆ ಒಂಟಿಯಾಗಿದ್ದರೂ ದೊಡ್ಡ ದೊಡ್ಡ ಕೇಡುಗಳನ್ನಾಚರಿಸಲು ಏಕಾಂತವು ಸಹಾಯಮಾಡಲಾರದಲ್ಲವೆ?—ಎಂಬ ಶಂಕೆ ಬರಬಹುದು. ಇಂತಹ ಅನುಮಾನಕ್ಕೆ ಕಾರಣವಿಲ್ಲ. ದುಷ್ಕೃತ್ಯದ ಏಕಾಂತವು ದುಷ್ಪರಿಣಾಮದ ಫಲವನ್ನು ಪೂರ್ಣವಾಗಿಯೇ ಕೊಡುವುದರಲ್ಲಿ ಸಂದೇಹವಿಲ್ಲ. ಏಕೆಂದರೆ—ಸತ್ಕಾರ್ಯದ ಏಕಾಂತವು ಸತ್ಫಲವನ್ನು ದೊರಕಿಸಿಕೊಟ್ಟೇ ತೀರಬೇಕಾಗಿದೆಯಲ್ಲವೆ? ಪ್ರಪಂಚದ ಸುಖಗಳನ್ನು ತಕ್ಕಮಟ್ಟಿಗೆ ಅನುಭವಿಸಿಯೇ ಏಕಾಂತವನ್ನು ಕೈಕೊಳ್ಳುವುದು ಮೇಲಾಗಿದೆ. ಜಗತ್ತಿನ ಕೇಡುಗಳನ್ನು ನೋಡಿ ನೋಡಿ ಬೇಸರಗೊಂಡಷ್ಟು ಏಕಾಂತವು ಬಲು ಸವಿಯನ್ನುಂಟುಮಾಡುವದು. ಈಗಲೂ ನಮ್ಮ ಮನಸ್ಸು ಬಹು ಬೇಜಾರುಗೊಂಡಾಗ ಏಕಾಂತವನ್ನು ಬಯಸಿ ಸ್ವಸ್ಥತೆಯನ್ನು ಹೊಂದುವದೇ ನಿದರ್ಶನವಾಗಿದೆ. ಅದಪ್ರಯುಕ್ತ ಏಕಾಂಗಿಯಾಗಿರುವದು ಮನಸ್ಸಿನ ಸ್ವಸ್ಥಭಾವವಿರುವದೆಂದು ಭಾವಿಸಬಾರದು. ಮನುಷ್ಯನ ಸಹವಾಸಕ್ಕೆ ಜನಗಳು ಸಹಕಾರಿಯೆಂದು ತಿಳಿಯುವಂತೆಯೇ ಪುಸ್ತಕಗಳೂ ಸಹಾಯಕಾರಿಗಳಾಗಿವೆ. ಸದ್ಗ್ರಂಥಗಳಿಂದ ನಿಜವಾದ ಏಕಾಂತವು ಪ್ರಪಂಚವನ್ನೇ ತಂದು ಮುಂದಿಡುವುದು. ಒಬ್ಬನು "ನಾನು ನಿನ್ನೊಡನೆ ಮತ್ತು ಪುಸ್ತಕಗಳೊಡನೆ ಮಾತ್ರವೇ ಮಾತನಾಡುತ್ತಿರುವೆನು" ಎಂದು ನಿರ್ಧರಿಸಿದ್ದರೆ ಅವನ ಜೀವನವು ಎಂತಹ ಪವಿತ್ರವಾದುದು! ಎಂತಹ ಸಾರ್ಥಕವಾದುದು! ಎಂಬುವದನ್ನು ನಾವು ಊಹಿಸದಿರಲಾಗುವುದೇ? ಮನಸ್ಸು ಏಕಾಂತವನ್ನು ಪ್ರೀತಿಸುವುದಕ್ಕೆ ಪ್ರಾರಂಭಿಸಿದರೆ ಅದು ಸನ್ಮಾರ್ಗಕ್ಕೆ ಅತಿಯುಕ್ತವೆಂದು ನಾವು ಧಾರಾಳವಾಗಿ ನಂಬಬಹುದು. ಅದು ಮೋಕ್ಷ ಮೂಲವಾದರೆ ಮಿಗಿಲಾದ ಫಲಸಿದ್ಧಿಯನ್ನೇ ಪಡೆದಿತೆಂದು ಹೇಳುವುದರಲ್ಲಿ ಸಂದೇಹವೇ ಇಲ್ಲ. ಸಾಯುವುದಕ್ಕೆ ಹೆದರುವವರಿಲ್ಲರೂ ಏಕಾಂತವನ್ನು ಅಭ್ಯಾಸ ಮಾಡಿನೋಡಲಿ. ಆಗ ಸಾವೆಂಬುದು ಎಷ್ಟು ಹರ್ಷಜನಕವಾಗುವುದೆಂಬುದು ಗೊತ್ತಾಗುವದು ಎಂದು ಅನ್ಯರು ನಿರೂಪಿಸಿರುವರು. ಏಕಾಂತವೆಂದರೆ ಸುಮ್ಮನೆ ಜನರನ್ನು ಬಿಟ್ಟು ಕಾಡಿಗೆ ಓಡಿಹೋಗುವದಲ್ಲ. ದೈವವಿಷಯವನ್ನು ನಿಷ್ಕಲ್ಮಷಭಾವದಿಂದ ಚಿಂತಿಸುವುದಕ್ಕೆ ತಕ್ಕಂತೆ ಜನಸಮೂಹವನ್ನು ತ್ಯಜಿಸುವದೇ ಆಗಿರುವದು. ಹಾಗಿಲ್ಲದೆ, ಸುಮ್ಮನೆ ಏಕಾಂತವೆಂದು ಕುಳಿತುಬಿಟ್ಟರೆ ಜಡಾಧಿಪತಿಯಾಗುವನು. ಏಕೆಂದರೆ ಏಕಾಂತವು ಮನಸ್ಸಿಗೆ ಎರಡು ಬಗೆಯಾದ ಸ್ಥಿತಿಯನ್ನು ಸ್ಥಾಪಿಸುವ ಸಾಮರ್ಥ್ಯವುಳ್ಳದಾಗಿದೆ. ಮನಶ್ಶಕ್ತಿಯನ್ನು ವೃದ್ಧಿಗೊಳಿಸಿ ಸದ್ವಿಚಾರದ ಮೂಲಕ ಸದ್ಗತಿಗೇರಿಸುವ ಸಾಮರ್ಥ್ಯವೂ, ದುರ್ವಿಷಯಗಳ ದುರಾಶೆಗಳ ದುಷ್ಕೃತ್ಯಗಳ ಮೂಲಕ ಅಧೋಗತಿಗೆ ತಳ್ಳುವ ಸಾಮರ್ಥ್ಯವೂ ಏಕಾಂತದ ಸ್ವಾಧೀನದಲ್ಲಿರುವ ಮುಖ್ಯ ಶಕ್ತಿಗಳು. ಸಂಘವನ್ನು ತ್ಯಜಿಸಲು ಇಷ್ಟವಿಲ್ಲದವನು ತನ್ನ ಮನಸ್ಸಿಗೆ ಒಂದು ಪ್ರಶ್ನೆಯನ್ನು ಹಾಕಿಕೊಳ್ಳಲಿ. ಸಂಘದಿಂದ ಕಾಲಾನುಕಾಲದಲ್ಲಿ ಯಾವರೂ ಕೆಟ್ಟ ಜನಗಳು ಸೇರಬಹುದೆಂದು ಆಗ ನಂಬಲೇಬೇಕಾಗುವದು. ಏಕಾಂತವನ್ನು ಕುರಿತು ಯೋಚಿಸಲಿ. ತನಗೆ ಕೇಡಿನ ಗಾಳಿಯೇ ಸೋಂಕುವಂತಿಲ್ಲವೆಂಬುದು ಸ್ಪಷ್ಟವಾಗುವದು. ಇದೇ ಅಭಿಪ್ರಾಯವನ್ನೇ ನೀತಿಜ್ಞರು ಸಂಗ್ರಹಿಸಿ ಹೇಳಿರುವುದೇನೆಂದರೆ—"ಸಂಘವನ್ನು ಸೇರುವುದಕ್ಕೆ ಮುಂಚೆ ಚೆನ್ನಾಗಿ ಪರೀಕ್ಷಿಸಿ ನೋಡಬೇಕು. ಎಂದೆಂದಿಗೂ ಕೇಡಿನ ಸೂಚನೆಯನ್ನು ತೋರಿಸದುದಾಗಿರಬೇಕು. ಇಂತಹ ಸಂಘವು ದೊರೆತರೆ ದೊರೆಯಲಿ ಇಲ್ಲದಿದ್ದರೆ, ಮೃಗದಂತೆ ಏಕಾಂಗಿಯಾಗಿಯೇ ಇರುವುದನ್ನು ದೇವರು ಅನುಗ್ರಹಿಸಲಿ" ಎಂಬುದೇ ಅವರ ಅಭಿಮತವು.

ವಿವೇಕಿಯಾದವನು ಒಂಟಿಯಾಗಿದ್ದರೂ ತಾನೊಬ್ಬನೇ ಸಂಘವನ್ನು ಕಲ್ಪಿಸಿಕೊಳ್ಳಬಹುದು. ಭಗವದ್ವಿಷಯಕವಾದ ವಿಚಾರಗಳನ್ನೂ ಅವನ ಅಪಾರ ಮಹಿಮೆಯನ್ನೂ-ಪ್ರಪಂಚದ ಸ್ಥಿತಿಗತಿಗಳನ್ನೂ ಮದಮತ್ಸರಾದಿಗಳಿಂದುಂಟಾಗುವ ದುಷ್ಪರಿಣಾಮಗಳನ್ನೂ ಶ್ರೇಯಸ್ಸಿಗೆ ಒದಗಬಹುದಾದ ವಿಘ್ನಗಳನ್ನೂ ಮಹಾತ್ಮರ ಲೋಕವು ಎಷ್ಟು ಪ್ರೋತ್ಸಾಹಗೊಳ್ಳುತ್ತಿರುವುದೆಂಬುದನ್ನೂ ಇವೇ ಮೊದಲಾದ ತನ್ನ ಜೀವ ಸಂಸ್ಕಾರ ವಿಷಯಗಳನ್ನು ಬುದ್ಧಿಯಲ್ಲಿ ವಿಮರ್ಶಿಸಿದರೆ ಮನಸ್ಸು ಅದರ ಪ್ರತಿಯೊಂದರ ಸೂಕ್ಷ್ಮಾಂಶವನ್ನೂ ಆಗಾಗಿಗೆ ಸ್ಪರ್ಶಿಸುತ್ತಾ ಇರಲಿ. ಆಗ ಏಕಾಂಗಿಗೆ ಎಂತಹ ಸಂತೋಷವು ದೊರೆಕೊಳ್ಳಲಾಗುವದೋ ಅದು ತಾನಾಗಿಯೇ ಮನವರಿಕೆಯಾಗುವದು. ನೂರಾರು ಸಂಘಗಳ ವಾದಂಬರಗಳಿಗಿಂತಲೂ ವಿವೇಕಿಯ ಸತ್ಸಂಕಲ್ಪ ತರಂಗಗಳು ಅಧಿಕವಾದ ಫಲಗಳನ್ನುಂಟುಮಾಡುವವು. ಅದಪ್ರಯುಕ್ತ ಏಕಾಕಿಯು ತಾನೇ ಒಂದು ಸಂಘವೆಂದು ನಂಬಿ ಏಕಾಂತದ ಉತ್ತಮ ಸಾಧನಗಳ ವಿಚಾರವನ್ನು ಕಳೆದುಕೊಳ್ಳದೇ ಇರಲೆಂದು ಜ್ಞಾನಿಗಳ ಅಭಿಮತ. ಏಕಾಕಿಯಾದವನಲ್ಲಿ ತೃಪ್ತಿಯು ತಾನೇ ತಾನಾಗಿರುವದು. ಇದರ ಜೊತೆಯಲ್ಲಿಯೇ ನಿಜಸಂತೋಷವೆಂಬುದು ವಾಸಮಾಡಿಕೊಂಡಿರುವದು. ತೃಪ್ತಿಯೂ ಸಂತೋಷವೂ ಉಳ್ಳ ಮನುಷ್ಯನು ಏಕಾಂಗಿಯಾಗಿರುವೆನೆಂದು ದುಃಖಿಸುವುದೇ ಇಲ್ಲ. ಏಕೆಂದರೆ, ಅವನು ನಿಜವಾಗಿಯೂ ತಾನು ಒಬ್ಬನೇ ಇರುವೆನೆಂದು ಭಾವಿಸುವದಿಲ್ಲ. ದೇವರು ತನ್ನ ಜತೆಯಲ್ಲಿಯೇ ಇರುವದರಿಂದ ಈ ಪ್ರಪಂಚದ ಸಂಘಗಳ ಆವಶ್ಯಕತೆಯು ಅವನಿಗೆ ಬೇಕಾಗಿರುವದಿಲ್ಲ. ಸರ್ವಲೋಕ ಸೃಷ್ಟಿಕರ್ತನಾದ ಭಗವಂತನೇ ಅಂಗರಕ್ಷಕನಾಗಿರುವಾಗ ಉಳಿದ ನಶ್ವರವಾದ ಈ ಗುಂಪುಗಳಿಂದ ವಿವೇಕಿಗೆ ಯಾವ ಫಲವು ತಾನೇ ಸಿದ್ಧಿಯಾಗುವದು? ಏಕಾಂತಿಯಾಗಿರುವವನ ಬಾಹ್ಯಚಕ್ಷುಸ್ಸಿಗೆ ಕತ್ತಲೆಗವಿದಂತೆ ಭಾವಿಸಿದರೂ ಪ್ರಪಂಚವನ್ನೆಲ್ಲಾ ಊಹಿಸಿ ಆನಂದಗೊಳಿಸುವ ಚಿತ್ತನೈರ್ಮಲ್ಯವು ವಿಸ್ಮಯಜ್ಯೋತಿಯಾಗಿರುವುದರಲ್ಲಿ ಸಂದೇಹವಿಲ್ಲ. ಗೋಡೆಯೊಂದರ ಹಿಂದೆ ಇರುವ ದೊಡ್ಡವಸ್ತುವನ್ನೂ ಹೊರಗೆ ನೋಡಲಾರದ ಕಣ್ಣು ಒಳಗಲ್ಲಿ ಕೆಲವು ಮೈಲಿ ಮಾತ್ರ ಬಾಹ್ಯವಸ್ತುಗಳನ್ನು ನೋಡಿ ತೃಪ್ತಿಗೊಳ್ಳಬಹುದಾಗಿದೆ. ಮನಸ್ಸು ನಿಮಿಷಮಾತ್ರದಲ್ಲಿ ಪ್ರಪಂಚವನ್ನೆಲ್ಲಾ ಊಹಿಸಿ ಕೋಟ್ಯಂತರ ಮೈಲಿಗಳ ವಸ್ತುಗಳನ್ನೂ ಆಶ್ಚರ್ಯಪದಗಳನ್ನೂ ತಂದು ಮುಂದಿರಿಸುವದು. ಇಂತಹ ಮನಶ್ಶಕ್ತಿಗೆ ಏಕಾಂತವು ಪೋಷಕವಾಗಿದೆ. ಇದರಲ್ಲಿ ಗಾಂಭೀರ್ಯವನ್ನು ಪಡೆಯಲೆಳಸುವವನು ಏಕಾಂತವನ್ನು ಅಭ್ಯಾಸಮಾಡಿಯೇ ತೀರಬೇಕೆಂದು ಖಂಡಿತವಾಗಿ ಹೇಳಬಹುದು. ಚಂಚಲಮನಸ್ಸಿಗೆ ಗಾಂಭೀರ್ಯವು ದೂರವಾಗಿ ಓಡಿಹೋಗುವದು. ಏಕಾಂತವು ಶಕ್ತಿಯ ಮನೆಯಾಗಿದೆ. ಮೌನವೆಂಬುದು ಅದರ ಪ್ರಾರ್ಥನೆಯಾಗಿದೆ. ಏಕಾಂತವು ಮುಂದೆಮುಂದೆ ಸುಖದಾಯಕವಲ್ಲದಿದ್ದರೆ ಯಾರೂ ಅದನ್ನು ಪ್ರೀತಿಸುತ್ತಿರಲಿಲ್ಲ. ಪ್ರಾಚೀನ ಮಹರ್ಷಿಗಳಿಗೆ ಏಕಾಂತದ ಹೊರತು ಉತ್ತಮ ಸ್ನೇಹಿತರಿರಲಿಲ್ಲವೆಂಬುದೂ, ಅವರು ಅದನ್ನು ಪ್ರೀತಿಸುತ್ತಿದ್ದರೆಂಬುದೂ ಲೋಕವಿಖ್ಯಾತವಾದ ವಿಷಯವಾಗಿದೆ. ಇವೆಲ್ಲವೂ ಹಾಗಿರಲಿ. ಈಗ ರಾಜಕೀಯ ಮಂತ್ರಾಲೋಚನ ಸಭೆಗಳೆಲ್ಲವೂ ತಕ್ಕಷ್ಟು ಏಕಾಂತದಲ್ಲಿಯೇ ಜರುಗುವದೂ ಅನೇಕ ವಿಷಯಗಳು ಗುಟ್ಟಾಗಿರುವದೂ-ಯುದ್ಧಸಂಚುಗಳು ಮುಂತಾದವುಗಳು ಬಹಿರಂಗವಾಗಿಲ್ಲದಿರುವದೂ-ಇವೇ ಮೊದಲಾದ ಎಲ್ಲಾ ವಿಷಯಗಳೂ ಏಕಾಂತದ ಪರಮಫಲವನ್ನು ಮುಂದುಮಾಡಿಯೇ ಸ್ಥಿರಗೊಳಿಸಲ್ಪಟ್ಟವುಗಳಾಗಿವೆ.

ಇಹವಿಷಯಗಳಿಗೆ ತಕ್ಕಷ್ಟು ಏಕಾಂತವು ಸಾಕೆನಿಸಿದರೂ ಪರವಿಷಯಗಳಿಗೆ ಹೆಚ್ಚಾದ ಏಕಾಂತವು ಬೇಕೆಂಬುದನ್ನು ಪ್ರತಿಯೊ

[೬ ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೧ನೆಯ ಆಗಸ್ಟ್ ತಾ|| ೪ನೆಯ ಸೋಮವಾರ

ಭಸ್ಮಧಾರಣಮಹಿಮೆ.

ತ್ರಿಕಾಲೇಷು ವಿಧಿವದ್ಭಸ್ಮಧಾರಣಮಪ್ರಮಾದೇನ ಕಾರ್ಯಂ। ಪ್ರಮಾದಾತ್ಪತಿತೋ ಭವತಿ । ಭಸ್ಮಧಾರಣಮಕೃತ್ವಾ ನಾಶ್ನೀಯಾದಾಪೋಽನ್ನಮಸ್ಮದ್ಯಾ ॥

(ಭಸ್ಮಜಾಬಾಲೋಪನಿಷತ್)

ಮೋಕ್ಷಸಾಧನಹೇತುಭೂತವಾದ ಭಸ್ಮವನ್ನು ಪ್ರಾತರ್ಮಧ್ಯಾಹ್ನಸಾಯಂಕಾಲಗಳಲ್ಲಿ ವಿಧಿಗನುಸಾರವಾಗಿ ಧರಿಸಬೇಕೆಂದೂ, ತಪ್ಪಿದರೆ ಮಾನವನು ಪಾಪಿಯಾಗುವನೆಂದೂ, ಭಸ್ಮಧಾರಣವನ್ನು ಮಾಡಿಕೊಳ್ಳದೆ ಅನ್ನವನ್ನಾಗಲಿ ಜಲವನ್ನಾಗಲಿ ಗ್ರಹಿಸಕೂಡದೆಂದೂ ಭಸ್ಮಜಾಬಾಲಶ್ರುತಿಯು ಶಾಸನಮಾಡಿರುವುದರಿಂದ, ಪ್ರತಿಯೊಬ್ಬರೂ ಇಹಪರಸುಖಸಾಧಕವಾದೀ ಪವಿತ್ರ ಭಸ್ಮವನ್ನು ಅಸಾಧಾರಣವಾದ ಶ್ರದ್ಧೆಯಿಂದ ತ್ರಿಕಾಲಗಳಲ್ಲಿಯೂ ಧರಿಸಿ ಧನ್ಯರಾಗಬೇಕಾಗಿದೆ. ವೇದಪ್ರತಿಪಾದ್ಯವಾದ ಭಸ್ಮಧಾರಣಮಹಿಮೆಯು ಅಸಾಧಾರಣವಾದುದರಿಂದ ಈ ಭಸ್ಮವನ್ನು ದೇವತೆಗಳೂ ಮಹರ್ಷಿಗಳೂ ಧರಿಸಿಕೊಳ್ಳುವರೆಂದು ಶಿವಾಗಮಗಳು ಮುಕ್ತಕಂಠದಿಂದ ಸಾರುತ್ತಿರುವುವು.

> ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ದೇವಾ ಶಕ್ರಪುರೋಗಮಾಃ ।
> ತ್ರಿಪುಂಡ್ರಂ ಧಾರಯಂತ್ಯೇವ ಭಸ್ಮನಾ ಸಕಲಂ ತಂ ॥
> ವಸಿಷ್ಠಾದ್ಯಾ ಮಹಾಭಾಗಾ ಮುನಯಃ ಶ್ರುತಿಕೋವಿದಾಃ ।
> ಧಾರಯಂತಿ ಸದಾಕಾಲಂ ತ್ರಿಪುಂಡ್ರಂ ಭಸ್ಮನಾ ಕೃತಂ ।

ಬ್ರಹ್ಮ ವಿಷ್ಣು ರುದ್ರ ಇಂದ್ರ ಇವರೇ ಮೊದಲಾದ ದೇವತೆಗಳೂ, ವೇದಪಾರೀಣರಾದ ವಸಿಷ್ಠಾದಿ ಮಹರ್ಷಿಗಳೂ ಎಲ್ಲಾ ಕಾಲಗಳಲ್ಲಿಯೂ ಭಸ್ಮತ್ರಿಪುಂಡ್ರವನ್ನು ಧರಿಸಿಕೊಳ್ಳುತ್ತಿರುವರೆಂಬ ಶಿವಾಗಮಾಭಿಪ್ರಾಯವನ್ನು ಸರ್ವಜ್ಞಮೂರ್ತಿಗಳಾದ ಶ್ರೀಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತಶಿಖಾಮಣಿಯಲ್ಲಿ ಅಪ್ಪಣೆಕೊಡಿಸಿರುವರು. ದೇವಾದಿದೇವತೆಗಳಿಗೂ ಸಹ ಮಾನ್ಯವಾದ ಭಸ್ಮಧಾರಣವು ಪಾಪಾಧಿಕವಾದೀ ಕಾಲದಲ್ಲಿ ಅವಮಾನಿತವಾಗಿ ಹೋಗಿದೆ. ಇಂಗ್ಲೀಷ್ ವಿದ್ಯೆಯ ಪ್ರಭಾವದಿಂದ ಎಲ್ಲಾ ಮತೀಯರ ಮತಧರ್ಮಗಳು ನಷ್ಟವಾಗುತ್ತಿರುವಂತೆ ಶೈವಮತದ ಭಸ್ಮಧಾರಣವೂ ಸಹ ನಷ್ಟವಾಗತೊಡಗಿದೆ. ಇಂಗ್ಲೀಷ್ ಭಾಷೆಯನ್ನು ಕಲಿತ ಕೆಲ ಜನ ನಾಸ್ತಿಕರು ಭಸ್ಮಧಾರಣಮಾಡಿಕೊಳ್ಳುವುದೇ ಒಂದು ವಿಧವಾದ ಅವಮಾನವೆಂದು ಭಾವಿಸಿ ಭಸ್ಮವನ್ನೇ ಧರಿಸಿಕೊಳ್ಳುವುದಿಲ್ಲ. ಇದು ಅವರ ಬಹುಜನ್ಮಕೃತ ಪಾಪದ ಫಲವನ್ನು ಸೂಚಿಸುವದಲ್ಲದೆ ಬೇರೆಯಲ್ಲ. ಭಸ್ಮಧಾರಣವು ಸಾಮಾನ್ಯವಾದುದಲ್ಲ. ಅದು ಇಹಪರಸುಖಗಳೆರಡನ್ನೂ ಕೊಡತಕ್ಕ ಮಹಾಪವಿತ್ರವಸ್ತುವಾಗಿದೆ. ಮನುಷ್ಯನು ಸದಾ ಶರೀರದ ಮೇಲೆ ಭಸ್ಮವನ್ನು ಧರಿಸುತ್ತಿದ್ದರೆ ಅವನಿಗೆ ಅಂಟುರೋಗಗಳಾವುವೂ ಅಂಟುವುದಿಲ್ಲ. ಭಸ್ಮದಲ್ಲಿ ರೋಗಸಂಹಾರಕವಾದ ಅತ್ಯದ್ಭುತ ಶಕ್ತಿಯುಂಟೆಂಬುದನ್ನು ವಿದೇಶೀಯ ವೈದ್ಯಶಾಸ್ತ್ರಪ್ರವೀಣರೇ ಒಪ್ಪಿದ್ದಾರೆ. ಚಳಿಗಾಲದಲ್ಲಿ ಉಷ್ಣತೆಯನ್ನುಂಟುಮಾಡತಕ್ಕ ಧರ್ಮವೂ, ಉಷ್ಣಕಾಲದಲ್ಲಿ ಶೈತ್ಯವನ್ನುಂಟುಮಾಡತಕ್ಕ ಧರ್ಮವೂ ಈ ಪವಿತ್ರವಸ್ತುವಿನಲ್ಲಿ ಸ್ವಭಾವಸಿದ್ಧವಾಗಿ ವಾಸಮಾಡಿಕೊಂಡಿರುತ್ತವೆ. ಈ ರೀತಿಯಾಗಿ ಈ ಭಸ್ಮವು ಇಹಸುಖಕಾರಣವಾಗಿರುವುದಲ್ಲದೆ, ಶಿವಪ್ರಕಾಶರೂಪವಾಗಿರುವುದರಿಂದ ಮೋಕ್ಷಸುಖಕ್ಕೂ ಕಾರಣೀಭೂತವಾಗಿರುವುದು. ಆದುದರಿಂದಲೇ ತ್ರಿಕಾಲಜ್ಞಾನಿಗಳಾದ ಪೂರ್ವಾಚಾರ್ಯರು ಈ ಪವಿತ್ರವಸ್ತುವನ್ನು ಪ್ರತಿಯೊಬ್ಬರೂ ಧರಿಸಿ ಮೋಕ್ಷಸಾಮ್ರಾಜ್ಯ ಸುಖಭಾಗಿಗಳಾಗಬೇಕೆಂದು ಬೋಧಿಸಿರುವರು. ಈ ತತ್ತ್ವವನ್ನೆಲ್ಲಾ ಈಗಿನ ಕಾಲದ ನವೀನ ನಾಸ್ತಿಕರು ಶುದ್ಧಹೃದಯದಿಂದ ಪರಾಮರ್ಶಿಸಿ ಭಸ್ಮಧಾರಣದ ಮಹತ್ತ್ವವನ್ನು ತಿಳಿದುಕೊಂಡು ಅದರಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ಧರಿಸಿ ಮಂಗಲಮಯಶರೀರಿಗಳಾಗಿ ಇಹಪರಸುಖಗಳನ್ನು ಪಡೆಯಬೇಕಲ್ಲದೆ, ತಮ್ಮ ಕುಲಧರ್ಮಾಚರಣೆಗಳಿಗೆ ತಿಲಾಂಜಲಿಯನ್ನಿತ್ತು ಅಮಂಗಲಮಯಶರೀರಿಗಳಾಗಿ ಇಹಪರಸುಖಗಳೆರಡನ್ನೂ ಕಳೆದುಕೊಳ್ಳಬಾರದೆಂದು ಕೋರುತ್ತೇವೆ. ವಿದೇಶೀಯರಲ್ಲಿ ಚಕ್ರವರ್ತಿ ಮೊದಲಾಗಿ ಪ್ರತಿಯೊಬ್ಬರೂ ತಮ್ಮ ತಮ್ಮ ಮತಧರ್ಮಗಳನ್ನು ಪಾಲಿಸುತ್ತಿರುವರಲ್ಲದೆ ತಮ್ಮ ಧರ್ಮಗಳಿಗೆ ಎಂದೂ ಲೋಪವನ್ನು ತಂದುಕೊಳ್ಳುವುದಿಲ್ಲ. ನಮ್ಮ ದೇಶೀಯರ ಹೃದಯದಲ್ಲಿ ನಾಲ್ಕು ಇಂಗ್ಲೀಷ ಅಕ್ಷರಗಳು ಪ್ರವೇಶವಾದಕೂಡಲೇ ಇವರು ತಮ್ಮ ಮತಧರ್ಮಗಳಿಗೆ ತಿಲಾಂಜಲಿಯನ್ನು ಕೊಡಹತ್ತುವರು. ಇದು ಇವರ ದುರ್ದೈವವೋ ನಮ್ಮ ಭರತಖಂಡದ ದುರ್ದೈವವೋ ತಿಳಿಯದಾಗಿದೆ. ಅಸ್ತು! ಜಗನ್ನಿಯಾಮಕನಾದ ಪರಶಿವನು ಸನಾತನಧರ್ಮದ ಮೇಲೆ ಕೃಪಾಕಟಾಕ್ಷವನ್ನಿತ್ತು ತನ್ನ ಮತಧರ್ಮಗಳು ಸರ್ವರಲ್ಲಿಯೂ ಬೇರೂರುವಂತೆ ಮಾಡಿ ನಾಸ್ತಿಕವರ್ಗಕ್ಕೆ ಸದ್ಬುದ್ಧಿಯನ್ನನುಗ್ರಹಿಸಿ ಪವಿತ್ರ ವೈದಿಕಧರ್ಮಗಳನ್ನು ಪೂರ್ವದಂತೆ ಪ್ರಕಾಶಗೊಳಿಸಬೇಕೆಂದು ಆ ಜಗನ್ನಿಯಾಮಕನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ.

ಯುದ್ಧವಾರ್ತೆ.

ಬರ್ಮಾ ರಸ್ತೆಯ ರಕ್ಷಣೆಗಾಗಿ ಅಮೆರಿಕಾ ವಿಮಾನಗಳು

ಬರ್ಮಾರಸ್ತೆಯ ರಕ್ಷಣೆಗಾಗಿ ಅಮೇರಿಕೆಯಿಂದ 100 ಫೈಟರ್ ವಿಮಾನಗಳು ರಂಗೂನಿಗೆ ಬರುವವೆಂದು ತಿಳಿಯುತ್ತದೆ.

೧೦೦೦೦ ಉಕ್ಕಿನ ಡ್ರಮ್‌ಗಳ ರಚನೆ

ರಷ್ಯಕ್ಕೆ ಪೆಟ್ರೋಲ್ ಮೊದಲಾದವುಗಳನ್ನು ಕಳುಹಿಸಲು 10000 ಉಕ್ಕಿನ ಡ್ರಮ್‌ಗಳನ್ನು ತಯಾರಿಸಬೇಕೆಂದು ಅಮೇರಿಕಾ ಸರ್ಕಾರದವರು ಆಜ್ಞೆಮಾಡಿದ್ದಾರೆ.

ಜಪಾನಿಗೆ ಡಚ್ ಈಸ್ಟ್ಇಂಡೀಸ್ ಸಾಮಾನು ಕಳುಹಿಸುವದಿಲ್ಲ

ಕಳೆದ ವರ್ಷ ಜಪಾನಿಗೂ ಡಚ್ ಈಸ್ಟ್ಇಂಡೀಸಿಗೂ ಆಗಿದ್ದ ಎಣ್ಣೆ ಒಪ್ಪಂದವನ್ನು ರದ್ದುಪಡಿಸಲಾಗಿದೆ. ಈ ವರ್ತನೆಯಿಂದ ಅತೃಪ್ತಿಗೊಂಡ ಜನರು ಡಚ್ ಈಸ್ಟ್ ಇಂಡೀಸಿನ ಮುಂದಿನ ಕಾರ್ಯಕ್ರಮವನ್ನು ಬಹಳ ಎಚ್ಚರದಿಂದ ಪರಿಶೀಲಿಸುತ್ತಿದ್ದಾರೆ.

ಡಚ್ ಈಸ್ಟ್ ಇಂಡೀಸ್ ಸಚಿವರ ಪ್ರಕಟನೆ

ಪರಿಸ್ಥಿತಿಯು ಅತ್ಯಂತ ಉಗ್ರರೂಪವನ್ನು ತಾಳುವದಾದರೆ ಈಸ್ಟ್ ಇಂಡೀಸಿನಲ್ಲಿರುವ ಎಣ್ಣೆ ಬಾವಿಗಳನ್ನೂ ಎಣ್ಣೆ ಶೋಧಿಸುವ ಯಂತ್ರಗಳನ್ನೂ ನಾಶಮಾಡುವುದಾಗಿ ಡಚ್ ಸಚಿವರು ನುಡಿದರು.

ರಷ್ಯನರ ಪ್ರಯತ್ನವು ವಿಫಲವಾಯಿತು

ಸ್ಮೋಲೆನ್‌ಸ್ಕ್ ಪೂರ್ವದಲ್ಲಿ ಸುತ್ತುವರಿಯಲ್ಪಟ್ಟಿರುವ ತಮ್ಮ ಸೈನಿಕರನ್ನು ಬಿಡಿಸಿಕೊಳ್ಳಲು ರಷ್ಯನರು ಮಾಡಿದ ಪ್ರಯತ್ನವೆಲ್ಲವೂ ನಿಷ್ಫಲವಾಯಿತೆಂದು, ಜರ್ಮನರು ಪ್ರಕಟಿಸಿರುತ್ತಾರೆ.

ಹಿಟ್ಲರನ ಹಿತಚಿಂತಕರೊಬ್ಬರ ಆತ್ಮಹತ್ಯೆ

ನಾಜಿಗಳಲ್ಲಿ ಬಹು ಬುದ್ಧಿಶಾಲಿಯೆನಿಸಿ 2000 ಕ್ಕಿಂತ ಹೆಚ್ಚು ಪುಸ್ತಕಗಳನ್ನು ಬರೆದಿದ್ದ ಹಿಟ್ಲರನಿಗೆ ಕೇವಲ ಆಪ್ತರಾಗಿದ್ದ ಪ್ರೊ|| ಹೌಸೋಫರ್‌ರವರನ್ನು ಹೆರ್ ಹೆಸ್‌ರವರು ಇಂಗ್ಲೆಂಡಿಗೆ ಓಡಿಹೋದೊಡನೆ ನಾಜಿಗಳು ಅವರನ್ನು ಸೆರೆಮನೆಗೆ ಸಾಗಿಸಿದ್ದರು. ಈಗ ಅವರು ಬೆರ್ಲಿನಿನ ಸೆರೆಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡರೆಂದು ಮಾಸ್ಕೋ ರೇಡಿಯೋ ತಿಳಿಸುತ್ತದೆ.

ಶತ್ರುವಿಮಾನಗಳ ನಾಶ

ಯುದ್ಧಾರಂಭವಾದಂದಿನಿಂದ ಕಳೆದ **ಜೂನ್ ತಿಂಗಳ** ಕೊನೆಯವರೆಗೆ ಲೆಕ್ಕಿಸಿದಂತೆ **ಶತ್ರುವಿಮಾನಗಳನ್ನು** ನಾಶಮಾಡಲಾಗಿದೆ. **ಬ್ರಿಟನ್ನಿನ ಮೇಲೆ 3566** ಯುರೋಪಿನಲ್ಲಿ **121, ನಾರ್ವೆಯಲ್ಲಿ 56, ನೌಕಾಬಲ**ದಿಂದ 27 ಮಧ್ಯಪೂರ್ವದಲ್ಲಿ **1920 ವಿಮಾನಗಳು** ನಾಶವಾಗಿವೆ.

ಪಶ್ಚಿಮ ನಾರ್ವೆಯಲ್ಲಿ ಜರ್ಮನ್ ಮಿಲಿಟರಿ ಸಿದ್ಧತೆ

ನಾರ್ವೆಯ ಪಶ್ಚಿಮ ಜಿಲ್ಲೆಗಳಲ್ಲಿ **ವಾಸವಾಗಿರುವ** ನಾರ್ವೆಪ್ರಜೆಗಳನ್ನೆಲ್ಲ ರಹಸ್ಯವಾಗಿ **ಬೇರೆಕಡೆಗೆ ಕಳುಹಿ**ಸುತ್ತಿರುವದನ್ನು ಕಂಡು ಅಲ್ಲಿಯವರಿಗೆ **ಭಯವಾಗಿದೆ.** [illegible] ದಿಂದ ಆ ಪ್ರದೇಶದಲ್ಲಿ **ನೆಲಸಿದ್ದವರು** ಈ ಮನೆ [illegible]ಗಳನ್ನು ಬಿಟ್ಟು ಬೇರೆ ಕಡೆ **ತೆರಳುತ್ತಿದ್ದಾರೆ.** ನಾರ್ವೆಯ ಪಶ್ಚಿಮ ಜಿಲ್ಲೆಗಳಲ್ಲಿ ವಿಮಾನ **ನಿಲ್ದಾಣ**ಗಳೇ ಮುಂತಾದ ಮಿಲಿಟರಿ ಕಾರ್ಯಕ್ರಮಗಳನ್ನು **ಕೈಕೊಳ್ಳಲು** ಜರ್ಮನರು ಈ ರೀತಿ **ಮಾಡುತ್ತಿದ್ದಾರೆಂದು** ಗೊತ್ತಾಗಿದೆ.

ಜರ್ಮನರಿಗೆ ರಷ್ಯಾಯುದ್ಧವು ಸಾಕಾಗಿದೆಯಂತೆ!

ಜರ್ಮನರು ರಷ್ಯಾಯುದ್ಧವನ್ನು ನಿಲ್ಲಿಸಿಬಿಡಬೇಕೆಂದು ತಮ್ಮ ರಷ್ಯಾಯುದ್ಧದ ಮಾತನಾಡಿಕೊಳ್ಳುತ್ತಿದ್ದಾರೆಂದು [illegible] ಪತ್ರಿಕೆಯಲ್ಲಿ ಪ್ರಕಟವಾಗಿದೆ. [illegible] ಜರ್ಮನ್ **ಪತ್ರಿಕೆಯು** ರಷ್ಯಾಯುದ್ಧದ [illegible] ಪರಿಸ್ಥಿತಿಯನ್ನು ಕಳೆದು [illegible] ರಷ್ಯದ ಮೇಲೆ **ಜಯವು ದೊರೆತ** ಮಾತ್ರಕ್ಕೆ [illegible] ಎಣಿಸಿದಂತೆ **ಫಲಿತಾಂಶವು** ಆಗಲಾರದು [illegible] ಬರೆದಿದೆ. **ಇದರಿಂದ** ಜರ್ಮನರಿಗೆ ರಷ್ಯಾಯುದ್ಧದ ಬಗ್ಗೆ ಜಯದ ನಂಬಿಕೆಯಿಲ್ಲವೆಂದು ಗೊತ್ತಾಗುತ್ತದೆ.

ಉಕ್ರೇನಿನಲ್ಲಿ ರಷ್ಯದ ನಷ್ಟ

ಉಕ್ರೇನಿನಲ್ಲಿ ರಷ್ಯನ್ ಹೋರಾಟವು **ನಡೆಯುತ್ತಿದೆ.** ಸ್ಟಾಲಿನ್ ಕೋಟೆ ಸಾಲನ್ನು **ಭೇದಿಸಿದಾಗ** ಸಿಕ್ಕಿಬಿದ್ದ ರಷ್ಯ ಸೇನೆಗಳ ನಾಶನಾದ್ಯಂತವು **ಕಳೆದ** [illegible] ಸ್ಮೋಲೆನ್‌ಸ್ಕ್ ಪೂರ್ವದಲ್ಲಿ ಆಗುತ್ತಿದೆ. ಈ ಯುದ್ಧದಲ್ಲಿ [illegible] ಶತ್ರುಗಳ **ಮತ್ತು** ಸೈನಿಕರ [illegible] ಅಪಾರ **ಸಂಗ್ರಾಮಸಾಧನಗಳ** [illegible] ಪ್ರಕಟಿಸಲ್ಪಡಲಿವೆ. ಜರ್ಮನ್ ವಿಮಾನಗಳು ರಷ್ಯದ ಸಂಗ್ರಾಮವಸ್ತು ಕಾರ್ಖಾನೆಗಳ ಮೇಲೆ [illegible] ಮತ್ತು ವಿದ್ಯುತ್ ಸರಬರಾಜು ಕೇಂದ್ರಗಳ ಮೇಲೆ ಬಾಂಬುಗಳನ್ನು **ಸುರಿಸು**ತ್ತಿರುವರಾಗಿ ಜರ್ಮನರು ಪ್ರಕಟಿಸಿದ್ದಾರೆ.

ಥೈಲೆಂಡ್‌ಮೇಲೆ ಆಪಾದನೆ

ಜಪಾನ್ ಪತ್ರಿಕೆಗಳು ಇಂಡೋಚೀಣಾದ ವಿಚಾರವಾಗಿ ನಡೆಸಿದ ಅಪಪ್ರಚಾರವನ್ನೇ ಜಪಾನ್ ರೇಡಿಯೋವು **ಈಗ** ಥೈಲೆಂಡ್ ವಿಚಾರದಲ್ಲಿ ಆರಂಭಿಸಿದೆ. ಅದರ **ಆಪಾದನೆ** ಏನೆಂದರೆ? ಬ್ರಿಟಿಷ್ ಸೈನ್ಯಗಳು **ಥೈಲೆಂಡ್‌ಗಡಿ**ಯಲ್ಲಿ ಒದಗುತ್ತಿವೆ. ಥೈಲೆಂಡ್ ತೀರದಾಚೆ **ಬ್ರಿಟಿಷ್‌ನೌಕೆ**ಗಳು ತಿರುಗುತ್ತಿವೆ. ಥೈಲೆಂಡಿನಲ್ಲಿರುವ **ಚೀಣೀಯರು** ಥೈಲೆಂಡ್ ಜನರಿಗೆ ವಿರುದ್ಧವಾಗಿ ವರ್ತಿಸುತ್ತಿದ್ದಾರೆ. ಥೈಲೆಂಡಿನಲ್ಲಿರುವ ಬ್ರಿಟಿಷರು ಸಿಂಗಪುರಕ್ಕೆ **ಹೋಗಲ** [illegible]ಸಿದ್ದಾರೆ. ಯಾವ ಗಳಿಗೆಯಲ್ಲಾದರೂ ಸಿರಿಯಕ್ಕಾದ ಗತಿಯೇ ಥೈಲೆಂಡಿಗೂ ಬರಬಹುದು. ಆದರೆ ಜಪಾನಿನ ಈ ಆಪಾದನೆಗಳು ನಿರಾಧಾರವಾದ**ವುಗಳೆಂದು** ಸಿಂಗಪುರದಲ್ಲಿ ತಿಳಿಸಲಾಗಿದೆ. **ಥೈಲೆಂಡಿನಲ್ಲಿ** ಇತರ ರಾಷ್ಟ್ರಗಳಿಗೆ ಇಲ್ಲದ ಹಕ್ಕುಬಾಧ್ಯತೆಗಳು **ಬ್ರಿಟನ್ನಿಗೆ** ಬೇಡ. ಬ್ರಿಟನ್ನಿಗೆ ಇಲ್ಲದ ಹಕ್ಕು**ಬಾಧ್ಯತೆಗಳನ್ನು** ಇತರ ರಾಷ್ಟ್ರಗಳಿಗೂ ಕೊಡಬಾರದು ಇದೇ **ಬ್ರಿಟನ್ನಿನ** ಅಭಿಪ್ರಾಯವೆಂದು ಪ್ರಕಟವಾಗಿದೆ.

ಶತ್ರುಹಡಗದ ನಾಶ

ಯುದ್ಧ ನೌಕೆಗಳ ರಕ್ಷಣೆಯಲ್ಲಿ ಬರುತ್ತಿದ್ದ ಶತ್ರು ಡಗುಗಳ ಮೇಲೆ ನಾಲ್ಕು ರಷ್ಯನ್ ಟಾರ್ಪೆಡೊ ೋಟುಗಳು ಮುತ್ತಿಗೆ ನಡೆಸಿ ಅವುಗಳನ್ನು ಚದುರಿಸಿ ಸ್ತ್ರ ಟ್ಯಾಂಕುಗಳಿಂದಲೂ ಕಾಲಾಳು ಸೈನಿಕರಿಂದಲೂ ಂಬಿದ್ದ ಹಡಗೊಂದು ಮುಳುಗಿಸಲ್ಪಟ್ಟಿತು. ರಷ್ಯದ ಡೆ ಒಂದು ನೌಕೆಗೆ ನಷ್ಟವಾಯಿತು.

ರಡು ತಿಂಗಳು ತಡೆದರೆ ಜರ್ಮನಿಯು ಸೋಲುವದು

ಸಪ್ಟೆಂಬರ್ ತಿಂಗಳವರೆಗೆ ರಷ್ಯನರು ಜರ್ಮನರನ್ನು ಡೆಯಲು ಶಕ್ತರಾದರೆ ಅಲ್ಲಿಂದ ನಾಜಿಗಳ ಸೋಲಿಗಾ ಭವಾಗುವದು ಖಂಡಿತವೆಂದು, ಶ್ರೀವೆಂಡಲ್‌ವಿಲ್ಕಿ ವರು ಲೆಕ್ಕಹಾಕಿದ್ದಾರೆ ಆಗ್ಗೆ ಜರ್ಮನಿಯ ಸೋಲು ಲ್ಲರೂ ನಿರೀಕ್ಷಿಸಿರುವುದಕ್ಕಿಂತ ಬಹುಬೇಗನೆ ಆಗಿ ೋಗುವದೆಂದು ಅವರು ನಂಬಿದ್ದಾರೆ

ಸ್ಮೊಲೆನ್‌ಸ್ಕ್ ರಣರಂಗದಲ್ಲಿ ನಷ್ಟ

ಸ್ಮೊಲೆನ್‌ಸ್ಕ್ ಕಡೆ ಯುದ್ಧಮಾಡುತ್ತಿರುವ ಜರ್ಮನ್ ಸೈನ್ಯಕ್ಕೆ ಭಾರಿ ನಷ್ಟವಾಗಿದೆ ಕೆಲವು ದಿನಗಳ ಹಿಂದೆ ಷ್ಯದ ಸೈನ್ಯಗಳು ಮೋಟಾರುಗಳಿಂದ ಕೂಡಿದ ಶತ್ರು ದಳವೊಂದನ್ನು ಮುತ್ತಿ ಧ್ವಂಸಮಾಡಿದವು ತ್ರುಗಳ ಕಡೆ ಸುಮಾರು 2000 ಜನ ಅಧಿಕಾರಿಗಳೂ ೋಧರೂ ಮಡಿದರು ಮತ್ತು ಗಾಯಗೊಂಡರು ರಾರು ಜನರು ಸೆರೆಸಿಕ್ಕಿದರು ಅಪಾರ ಸಂಗ್ರಾಮ ಸನಗಳು ರಷ್ಯನರ ಹಸ್ತಗತವಾದುವು ಹೀಗೆ ನಾಶ ಡಲ್ಪಟ್ಟ ನಾಜಿಪಡೆಗೆ "ಗ್ರೇಟ್ ಜರ್ಮನಿ" ಎಂದು ಸರು ಇದು ಹೆರ್ ಹಿಟ್ಲರರ ಮೆಚ್ಚಿಕೆಗೆ ಪಾತ್ರ ಗಿದ್ದ ಪಡೆಯೆಂದೂ, ಆರಿಸಿದ ಯೋಧರನ್ನು ತ್ರವೇ ಈ ಪಡೆಗೆ ಸೇರಿಸಲಾಗಿತ್ತೆಂದೂ ಹೇಳ ಗಿದೆ

ಬೀರಿಯಾದ ಮೇಲೆ ಜಪಾನಿನ ಕಣ್ಣು

ಪೂರ್ವ ಸೈಬೀರಿಯಾದಲ್ಲಿ ಅಸಂಖ್ಯ ರಷ್ಯನ್ ಸೈನ್ಯ ವ ಆ ಭಾಗದಲ್ಲಿರುವ ಜಪಾನ್ ಬಲವು ಅದಕ್ಕೆ ಮನಾಗುವಂತಿಲ್ಲ. ಆದುದರಿಂದ ಜಪಾನು ಇಂಡೋ ನಾದಿಂದ ದಕ್ಷಿಣಕ್ಕೆ ತನ್ನ ಸೈನ್ಯಗಳನ್ನು ಕಳುಹಿಸಲು ಕ್ತವಾಗಿದೆ ಜಪಾನಿನ ಭೂಬಲವಾಗಲಿ ವಿಮಾನ ಲವಾಗಲಿ ಬಹಳ ಹೆಚ್ಚಾಗಿಲ್ಲ ಆದ್ದರಿಂದ ಅದು ಯು ನಿರೀಕ್ಷಣೆಯ ನೀತಿಯನ್ನು ಅನುಸರಿಸಬೇಕಾ ದೆ ಪಶ್ಚಿಮದಲ್ಲಿ ಜರ್ಮನರನ್ನು ಎದುರಿಸಲು ರಷ್ಯವು ಪಾರ ಸೈನ್ಯವನ್ನು ಕಳುಹಿಸಿದ್ದರೂ ಪೂರ್ವ ಸೈಬೀರಿ ದಲ್ಲಿ ಇನ್ನೂ 40 ಡಿವಿಜನ್‌ಗಳಷ್ಟು ಸೈನ್ಯವಿದೆ. ಮಂ ರಿಯಾ ಮತ್ತು ಕೋರಿಯಗಳಲ್ಲಿರುವ ಜಪಾನ್ ಸೇನೆ ವಲ 14 ಡಿವಿಜನ್‌ಗಳು ಮಾತ್ರ ಜಪಾನಿನ ವಿಮಾನ ದಲ್ಲಿ 3000 ವಿಮಾನಗಳಿವೆ. ಅವೂ ಸಹ ಹಳೆಯ ದರಿಯವು. ರಷ್ಯದ ಪೂರ್ವಗಡಿಯಲ್ಲಿರುವ ವಿಮಾನ ಗಳ ಸಂಖ್ಯೆ 2000 ರಷ್ಯದ ವ್ಲಾಡಿವೋಸ್ಟಾಕ್‌ನಿಂದ ಪಾನಿಗೆ ಕೇವಲ 750 ಮೈಲಿ ದೂರವಿದೆ ಅಲ್ಲಿಂದ ಪಾನಿಗೆ ಹೋಗಿ ಬಾಂಬುಗಳನ್ನು ಸುರಿಸಿ ಬರಬಹು ದರೂ ಅದು ಕಷ್ಟಕರವೆಂದು ಭಾವಿಸಲಾಗಿದೆ ಪಾನು ಡಚ್ ಈಸ್ಟ್ ಇಂಡೀಸ್ ಮೇಲೆ ಬಿದ್ದ ರೆ ಬ್ರಿಟನ್ನು ಅವರ ಸಹಾಯಕ್ಕೆ ಒರುವದೆಂದು ಸಲಾಗಿದೆ

ಜಪಾನ್ ಮಹಾಪ್ರಧಾನರ ಭಾಷಣ

"ಯುರೋಪಿನಲ್ಲಿ ಆರಂಭವಾಗಿರುವ ಈ ಯುದ್ಧವು ರ್ವ ದೇಶಗಳಿಗೆ ಯಾವಾಗ ಹರಡುವುದೆಂಬುದನ್ನು ಳಲು ಸಾಧ್ಯವಿಲ್ಲ. ವಿಶ್ವದ ಪರಿಸ್ಥಿತಿಯು ಬಹಳ ಗ ವ್ಯತ್ಯಾಸಹೊಂದುತ್ತಿರುವುದರಿಂದ ಮುಂದೊದಗ ಹುದಾದುದನ್ನು ಎದುರಿಸಲು ಎಲ್ಲರೂ ಸಿದ್ಧರಾಗಿರ ಬೇಕಾಗಿದೆ.

ಪೂರ್ವ ದೇಶಗಳಲ್ಲಿ ಅಮೆರಿಕಾ ಬ್ರಿಟನ್‌ಗಳು ಒಂದಾಗಿರುವುದರಫಲವಾಗಿ ಉಂಟಾಗಿರುವ ಅಥವಾ ಉಂಟಾಗಬಹುದಾದ ಪರಿಸ್ಥಿತಿಯನ್ನು ಎದುರಿಸಲು ಜಪಾನು ಸಿದ್ಧವಾಗಿದೆ ಈಗ ಜಪಾನಿಗೆ ಹಾಕಿರುವ ಆರ್ಥಿಕ ನಿರ್ಬಂಧಗಳನ್ನು ಮೊದಲೇ ನಿರೀಕ್ಷಿಸಲಾಗಿತ್ತು ಈ ವರ್ಷದ ಕಡೇ ಭಾಗದಲ್ಲಿ ಜಪಾನು ಅಮೆರಿಕಾ ಮತ್ತು ಬ್ರಿಟನ್ನುಗಳ ಆಮದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆಯೇ ತನ್ನ ಆರ್ಥಿಕ ರಚನೆಯನ್ನು ಪುನರ್ವ್ಯವಸ್ಥೆ ಮಾಡಿಕೊಂಡಿದೆ. ಮಂಚುಕೋ ಮತ್ತು ಚೀನಾಗಳ ಸಹಕಾರದಿಂದ ಬೇಕಾದ ಪದಾರ್ಥಗಳನ್ನೆಲ್ಲ ಪಡೆಯಲಾಗುತ್ತಿದೆ ಅಲ್ಲದೆ ದಕ್ಷಿಣದಲ್ಲಿರುವ ಹಲವು ದೇಶಗಳಿಂದ ಸಹ ಸಾಮಾನುಗಳು ಒರುವ ನಿರೀಕ್ಷೆಯಿದೆ. ಈಗಿನ ಆರ್ಥಿಕ ನಿರ್ಬಂಧಗಳನ್ನು ಎದುರಿಸಲು ಜಪಾನು ಸಂಪೂರ್ಣವಾಗಿ ಸಿದ್ಧವಾಗಿದ್ದರೂ ಕೂಡ ಪರಿಸ್ಥಿತಿಯು ಬಹಳ ಉಗ್ರವಾಗಿರುವದು" ಎಂದು ಹೇಳಿದರು

ಮಾಸ್ಕೋವನ್ನು ಹಿಡಿಯಲಾಗಲಿಲ್ಲ

ಜರ್ಮನರು ರಷ್ಯದ ರಾಜಧಾನಿಯಾದ ಮಾಸ್ಕೋ ನಗರವನ್ನು ಕೈವಶಮಾಡಿಕೊಳ್ಳಲು ನುಗ್ಗುವ ಕಾರ್ಯಕ್ರಮವನ್ನು ಸದ್ಯ ಬಿಟ್ಟು ಈಗ ಅವರಲ್ಲಿ ಒದಗಿರುವ ಅವ್ಯವಸ್ಥೆಯನ್ನು ಸರಿಪಡಿಸಿಕೊಂಡು ಜಯಸಂಪಾದನೆಯ ಯೋಚನೆ ಮಾಡುತ್ತಿದ್ದಾರೆಂದೂ, ರಷ್ಯದೊಳಕ್ಕೆ ಬಹು ದೂರದ ವರೆಗೆ ನುಗ್ಗಿ ಹೋಗುವ ಯೋಜನೆಯನ್ನು ತ್ಯಜಿಸಿರುವರೆಂದೂ ಈಚಿನ ಜರ್ಮನ್ ಸುದ್ದಿಗಳಿಂದ ಊಹಿಸಲಾಗಿದೆ ಪ್ರಾರಂಭದಲ್ಲಿ ಜರ್ಮನರು ರಷ್ಯದ ಗಡಿ ನಗರಗಳನ್ನು ಸುಲಭವಾಗಿ ಹಿಡಿದರು ಆದರೆ ನೂರಾರು ಮೈಲಿ ರಷ್ಯದೊಳಕ್ಕೆ ನುಗ್ಗಿದ ಮೇಲೆ ಅವರು ಮಾರ್ಗ ಮತ್ತು ವರ್ತಮಾನ ಸೌಕರ್ಯಗಳನ್ನು ರಕ್ಷಿಸಿಕೊಳ್ಳಲು ಅಸಮರ್ಥರಾಗಿದ್ದಾರೆ ಜರ್ಮನ್ ಸೇನೆಯ ಹಿಂದೆ ರಷ್ಯನರು ಮಾರ್ಗಗಳನ್ನು ಹಾಳು ಮಾಡಿ ವರ್ತಮಾನಸೌಕರ್ಯಗಳನ್ನು ಕಡಿದುಹಾಕುತ್ತಿರುವದರಿಂದ ಜರ್ಮನರು ಮುಂದೆ ನುಗ್ಗಿರುವ ಸೇನೆಗಳಿಗೂ ಅವರ ಬಲಮೂಲಗಳಿಗೂ ಸಂಬಂಧವನ್ನಿಟ್ಟುಕೊಳ್ಳಲು ಅಶಕ್ತರಾಗಿದ್ದಾರೆ ಇದರಿಂದ ಮುನ್ನುಗ್ಗುವ ಅವರ ಕಾರ್ಯವು ತೀವ್ರಗತಿಯಿಂದ ಸಾಗಲು ಅಡಚಣೆಯಾಗಿದೆ ರಷ್ಯನ್ ವ್ಯೂಹವನ್ನು ಸಂಪೂರ್ಣವಾಗಿ ಭೇದಿಸಿಕೊಂಡು ಮಾಸ್ಕೋ ನಗರದ ಮೇಲೆ ದಾಳಿಯಿಡಲು ಜರ್ಮನರಿಗೆ ಅಸಾಧ್ಯವಾದುದರಿಂದ ಯುಕ್ರೇನಿನ ರಾಜಧಾನಿಯಾದ ಕೀವ್ ನಗರವನ್ನು ಮೊದಲು ವಶಪಡಿಸಿಕೊಳ್ಳಲು ಅವರೀಗ ಪ್ರಯತ್ನ ಮಾಡುತ್ತಿರುವರೆಂದು ಕಾಣುತ್ತದೆ ಜರ್ಮನರು ಕೀವ್ ನಗರದ ಪಶ್ಚಿಮಕ್ಕೆ ಸುಮಾರು 80 ಮೈಲು ದೂರದಲ್ಲಿದ್ದಾರೆ ಸದ್ಯಃ ಅವರು ಮಾಸ್ಕೋ ಕಡೆ ನುಗ್ಗುವ ಯೋಜನೆಯನ್ನು ತ್ಯಜಿಸಿದ್ದಾರೆ

ರಷ್ಯದಲ್ಲಿ ಜರ್ಮನ್ ಸೈನಿಕರ ಕಷ್ಟ

ರಷ್ಯದ ರಣರಂಗದಲ್ಲಿ ಜರ್ಮನರು ಶೀಘ್ರಗತಿಯಿಂದ ಮುಂದುವರಿಯಲು ಸಾಧ್ಯವಾಗದಿರುವುದಕ್ಕೆ ಕಾರಣಗಳನ್ನು ವಿವರಿಸುತ್ತ ಜರ್ಮನಿಯು ತನ್ನ ಸೈನಿಕರ ಕಷ್ಟಗಳನ್ನು ವಿವರಿಸಿದೆ ಫಿನ್‌ಲೆಂಡ್ ಕಡೆಯಿಂದ ಹೊರಲಾರದಷ್ಟು ಭಾರವನ್ನು ಹೊತ್ತ ಜರ್ಮನಿ ಸೈನಿಕರು ನಿಟ್ಟುಸಿರು ಬಿಡುತ್ತ ತಮ್ಮ ಅಧಿಕಾರಿಗಳನ್ನು ಶಪಿಸುತ್ತ ಮುಂದುವರಿಯುತ್ತಿದ್ದಾರೆ ಅವರ ಮುಂದೆ ಭಯಂಕರವಾದ ರಸ್ತೆಗಳಿಲ್ಲದ ಅರಣ್ಯಗಳಿವೆ ಸೈನಿಕರು ತಮ್ಮ ನಿಲುವಂಗಿ ಮತ್ತು ಕಂಬಳಿಗಳನ್ನು ಕೂಡ ಹಿಂದೆ ಬಿಟ್ಟು ಅತ್ಯವಶ್ಯಕವಾದ ವಸ್ತುಗಳನ್ನು ಮಾತ್ರ ಹೊತ್ತು ಮುಂದುವರಿಯಬೇಕಾಗಿದೆ. ಅಲ್ಲಿ ಹಗಲಿನಲ್ಲಿ ತಡೆಯಲಾರದ ಉಷ್ಣ, ರಾತ್ರಿಯಲ್ಲಿ ವರ್ಣಿಸಲಾರದಷ್ಟು ಚಳಿಯಿದೆ ರಾಕ್ಷಸರಂತಿರುವ ಸೊಳ್ಳೆಗಳ ಕಾಟವನ್ನಂತೂ ಹೇಳತೀರದು ಅನೇಕ ವೇಳೆ ಸೈನಿಕರು ಮೊಳಕಾಲುದ್ದದ ಕೆಸರಿನಲ್ಲಿ ಹಾದುಹೋಗಬೇಕಾಗಿದೆ ಇದರ ಜೊತೆಗೆ ಆ ಕಾಡಿನಲ್ಲಿ ರಷ್ಯನರು ಎಲ್ಲಿ ಅವಿತಿರಬಹುದೆಂಬುದು ತಿಳಿಯುವದಿಲ್ಲ ಜರ್ಮನ್ ಸೈನಿಕರು ಒಂದು ಕಾಡನ್ನು ಹೊಕ್ಕರೆಂದರೆ ಎಲ್ಲ ಮರಗಳ ಮೇಲಿನಿಂದಲೂ ರಷ್ಯನರು ಗುಂಡಿನ ಮಳೆಯನ್ನು ಸುರಿಸುವರು. ಇನ್ನೊಂದು ಮಹತ್ತರ ಅಪಾಯವೆಂದರೆ ರಷ್ಯದ ಕೋಟೆಗಳು. ಇವು ಇರುವ ಸ್ಥಳವೇ ತಿಳಿಯುವದಿಲ್ಲ ಭೂಮಿಯ ಹಳ್ಳದಿನ್ನೆಗಳಿಗೆ ಸೇರಿಕೊಂಡಂತೆ ಹೊರಗೆ ಕಾಣಿಸದ ರೀತಿಯಲ್ಲಿ ಕಟ್ಟಲ್ಪಟ್ಟಿರುವವು ಅದರ ಮುಂದಿರುವ ಪ್ರದೇಶದಲ್ಲೆಲ್ಲ ಸ್ಫೋಟಕ ವಸ್ತುಗಳು ಹಾಕಲ್ಪಟ್ಟಿರುವವು. ಈ ರೀತಿ ಅಡಚಣೆಗಳಿಂದ ಜರ್ಮನ್ ಸೈನ್ಯಗಳು ಬಹಳ ತೊಂದರೆಗೀಡಾಗಿರುವದಾಗಿ ತಿಳಿಯುತ್ತಿದೆ.

ರಷ್ಯಾ ಪೋಲೆಂಡ್ ಒಪ್ಪಂದ!

ಜುಲೈ ೩೦ ನೆಯ ತಾರೀಖಿನ ದಿವಸ ಲಂಡನ್ನಿನಲ್ಲಿ ರಷ್ಯಾ—ಪೋಲೆಂಡ್ ಒಪ್ಪಂದಕ್ಕೆ ಸಹಿ ಬಿತ್ತು. ಸಹಿ ಹಾಕುವ ಸಮಾರಂಭದಲ್ಲಿ ಬ್ರಿಟಿಷ್ ಮಹಾಪ್ರಧಾನರು ಅಧ್ಯಕ್ಷತೆ ವಹಿಸಿದ್ದರು

ಒಪ್ಪಂದದ ವಿವರಗಳು

ಪೋಲೆಂಡಿನ ವಿಭಾಗ ಕುರಿತು ೧೯೩೯ರಲ್ಲಿ ರಷ್ಯಕೂ ಜರ್ಮನಿಗೂ ಆಗಿದ್ದ ಒಪ್ಪಂದವು ತನ್ನ ಬೆಲೆಯನ್ನು ಕಳೆದುಕೊಂಡಿತೆಂದು ರಷ್ಯವು ಭಾವಿಸುತ್ತದೆ. ರಷ್ಯವನ್ನು ಎದುರಿಸುತ್ತಿರುವ ಮೂರನೇ ರಾಷ್ಟ್ರವೊಂದರೊಡನೆ ಪೋಲೆಂಡು ಮಾಡಿಕೊಂಡಿರುವ ಒಪ್ಪಂದವನ್ನು ಪೋಲೆಂಡ್ ದೇಶವು ತಳ್ಳಿಹಾಕುತ್ತದೆ

(೨) ಈ ಒಪ್ಪಂದಕ್ಕೆ ಸಹಿ ಬಿದ್ದೊಡನೆಯೇ ಇವೆರಡು ಸರಕಾರಗಳಿಗೂ ರಾಜಕೀಯ ಸಂಬಂಧವನ್ನು ಕಲ್ಪಿಸಲಾಗುತ್ತದೆ. ಎರಡೂ ಪರಸ್ಪರವಾಗಿ ರಾಯಭಾರಿಗಳನ್ನು ಕಳಿಸಿಕೊಡುವವು

(೩) ಈಗ ಜರ್ಮನಿಯ ಮೇಲೆ ನಡೆಸುತ್ತಿರುವ ಯುದ್ಧದಲ್ಲಿ ಈ ಎರಡು ಸರಕಾರಗಳು ಪರಸ್ಪರವಾಗಿ ಸಹಾಯಗಳನ್ನು ನೀಡುವುವು.

(೪) ರಷ್ಯಾ ದೇಶದಲ್ಲಿ ಪೋಲೆಂಡ್ ಸೇನೆಯೊಂದು ರೂಪುಗೊಳಿಸಲ್ಪಡುವುದಕ್ಕೆ ರಷ್ಯವು ಒಪ್ಪುತ್ತದೆ. ಈ ಸೇನೆಗೆ ರಷ್ಯದ ಒಪ್ಪಿಗೆ ಪಡೆದವರೊಬ್ಬರನ್ನು ಪೋಲೆಂಡ್ ಸರಕಾರದವರು ದಂಡನಾಯಕರನ್ನಾಗಿ ನೇಮಿಸಬಹುದು ಈ ಸೇನೆಯು ರಷ್ಯಾದಂಡನಾಯಕರಿಗೆ ಅಧೀನವಾಗಿರಬೇಕು.

(೫) ಈ ಒಪ್ಪಂದವು ತತ್‌ಕ್ಷಣ ಆಚರಣೆಗೆ ಬರಬೇಕು ಒಪ್ಪಂದಕ್ಕೆ ಸಹಿ ಬಿದ್ದೊಡನೆಯೇ ಬ್ರಿಟಿಷ್ ವಿದೇಶಾಂಗ ಸಚಿವರಾದ ಶ್ರೀ ಆಂಥೋನಿ ಈಡನ್ನರು ರಷ್ಯ ರಾಯಭಾರಿಗಳಿಗೆ ಪತ್ರ ಬರೆಯುತ್ತ "೧೯೩೯ ರಿಂದೀಚೆಗೆ ಪೋಲೆಂಡಿನಲ್ಲಾದ ವಿಭಾಗವನ್ನು ಬ್ರಿಟನ್ನು ಒಪ್ಪಿಕೊಳ್ಳುವುದಿಲ್ಲ" ಎಂದು ತಿಳಿಸಿದರು ಇದಕ್ಕಾಗಿ ರಷ್ಯಾರಾಯಭಾರಿಗಳು ಕೃತಜ್ಞತೆಯನ್ನು ಸೂಚಿಸಿದರು ರಷ್ಯದಲ್ಲಿ ಈಗ ಪೋಲೆಂಡಿನ ೫ ಲಕ್ಷ ಜನ ಸಿವಿಲಿಯನ್ನರೂ, ೧ ಲಕ್ಷ ಜನ ಸೈನಿಕರೂ ಬಂದಿಗಳಾಗಿದ್ದಾರೆ ಅವರನ್ನೆಲ್ಲ ಕೂಡಲೇ ಬಿಡುಗಡೆಮಾಡಲಾಗುವದು

ಸ್ವೀಕಾರ.

ತಿಪಟೂರಿನಲ್ಲಿರುವ ಪುರವಮರದ ವೇ|| ಪುಟ್ಟಯ್ಯನವರ ಮಕ್ಕಳು ರೇವಣಸಿದ್ಧಯ್ಯನವರ ಪುತ್ರಿ ಚಿ|| ಸೌ|| ಗುಬ್ಬಿಯಮ್ಮನನ್ನು ತುರುವೆಕೆರೆಯಲ್ಲಿರುವ ಮ|| ರಾ|| ಶಿವಪ್ಪನವರ ಪುತ್ರ ಚಿ|| ಸ|| ಎಸ್ ಮಲ್ಲಪ್ಪನಿಗೆ ಕೊಟ್ಟು ತುರುವೆಕೆರೆಯಲ್ಲಿ ನಡೆದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರಿಂದ ತೆಗೆಯಿಸಿದ 4 ರೂ ಗಳು ಮತ್ತು ತಿಪಟೂರು ತಾ|| ಗುರುಗದಹಳ್ಳಿ ಸೋಗಳಮನೆ ವೇ|| ಕರಿಸಿದ್ಧಯ್ಯನವರ ಪುತ್ರ ಚಿ|| ಸ|| ಗುರುವಾರಾಧ್ಯನಿಗೆ ಚನ್ನರಾಯಪಟ್ಟಣ ತಾ|| ಸಂತೆಶಿವರದಮರದ ವೇ|| ಗುರುದೇವರ ಪುತ್ರಿ ಚಿ|| ಸೌ|| ಗೌರಮ್ಮನನ್ನು ಕೊಟ್ಟು ಸಂತೆಶಿವರದಲ್ಲಿರುವ ಕನ್ಯಾ ಗೃಹದಲ್ಲಿ ನೆರವೇರಿಸಿದ ವಿವಾಹ ಸಮಯದಲ್ಲಿ ವಧೂವರರಿಂದ ತೆಗೆಯಿಸಿದ 4 ರೂ. ಗಳು ಒಟ್ಟು 8 ರೂ. ಗಳು ತಿಪಟೂರಿನಲ್ಲಿರುವ ಅದಲಗೆರೆ ಮಠದ ವೇ|| ಜಿ. ಗಂಗಾಧರಯ್ಯನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ

[೩ ನೆಯ ಪುಟದಿಂದ ಮುಂದುವರಿದುದು]

ಬ್ಬರೂ ಊಹಿಸಬಹುದಾಗಿದೆ. ಮಹಾಕಾರ್ಯಗಳೆಲ್ಲವೂ ಏಕಾಂತದಿಂದಲೇ ಸಾಧಿಸಲ್ಪಡುವದಕ್ಕೆ ಮುಖ್ಯಹೇತುವೇನೆಂದರೆ—ಆ ಕಾರ್ಯವನ್ನೇ ಚೆನ್ನಾಗಿ ಊಹಿಸಿ ದೀರ್ಘಾಲೋಚನೆಯ ಮೂಲಕ ಸ್ಥಾಪಿಸಬೇಕೆಂಬುವೇ ಹೊರತು ಇನ್ನೇನೂ ಇರುವದಿಲ್ಲ. ಏಕೆಂದರೆ ಸಂಘದಲ್ಲಿ ಮನಸ್ಸು ಸ್ಥಿರವಾಗಿರುವದಿಲ್ಲ. ಬುದ್ಧಿವಂತನು ಸಂಘದಲ್ಲಿದ್ದ ಮಾತ್ರದಿಂದಲೇ ಸಂಘಾಭಿಪ್ರಾಯವೇ ಆವನದೆಂದು ನಂಬಲಾಗದು. ಸಂಘದಲ್ಲಿದ್ದರೂ ಒಂಟಿಗನಾಗಿಯೇ ಇದ್ದಂತಿರುವ ವಿಮರ್ಶಕರೂ ಇದ್ದೇ ಇರುವರು. ಏಕಾಂತದ ಮುಖ್ಯವಾದ ಫಲವೇನೆಂಬುವದನ್ನು ಚಿಕ್ಕದಾಗಿ ಹೀಗೆ ಹೇಳಬೇಕೆಂದು ಪ್ರಯತ್ನಿಸಿದರೆ—“ಚಿಕ್ಕ ಚಿಕ್ಕದಾದ ಸದ್ಗುಣಗಳನ್ನು ಮಹಾಗುಣಗಳನ್ನಾಗಿ ಮಾರ್ಪಡಿಸುವದೇ” ಎಂಬುದು ಸಿದ್ಧಾಂತವಾಗುವದು.

ಈ ಲೇಖನವನ್ನು ನೋಡಿದಮಾತ್ರದಿಂದಲೇ ನಮ್ಮ ವಾಚಕರಲ್ಲಿ ಕೆಲವರು ಬಹು ಜಗುಪ್ಸಾಭರಿತರಾಗಬಹುದು. ಏಕೆಂದರೆ ಪ್ರತಿಯೊಬ್ಬನೂ ಏಕಾಂಗಿಯಾಗಿರಬೇಕೆಂಬ ವಿಷಯವು ಎಂತಹ ಹೇಯವಾದುದು! ಹೆಂಡರು ಮಕ್ಕಳನ್ನು ಬಿಡಿಸಿ ಏಕಾಂಗಿಯಾಗಿ ಬಿಡಹೋಗುವವನು ದುಷ್ಟನಾಗಿರಬೇಕು. ಇಲ್ಲವೆ ಹೇಗಿರಬೇಕು? ಬರೆದವನು ಹೀಗೆ ಮಾಡಿರುವನೇ? ಇಂತಹ ಹುಚ್ಚುಕೂಗು ಅಪಹಾಸ್ಯವಲ್ಲವೆ? ಎಂಬಿವೆ ಮೊದಲಾದವುಗಳೆ ಪ್ರತಿಕೂಲವಾದ ವಾಕ್ಯಾವಳಿಗಳು ಬೋಧಕರ ತಲೆಯಮೇಲೆ ಬೀಳಬಹುದು. ಬೋಧಕರ ಉದ್ದೇಶವು ಹಾಗಿರುವದಿಲ್ಲ. ಜಗತ್ತಿನ ಪ್ರತಿಯೊಬ್ಬರೂ ಬೇರೆಬೇರೆ ಏಕಾಂತದಿಂದಲೇ ವರ್ತಿಸಬೇಕೆಂಬುದರ ಗುರಿ—ಸಂಸಾರದಲ್ಲಿಯೂ ಸಂಘದಲ್ಲಿಯೂ ಸೇರಕೂಡದೆಂಬುವದಲ್ಲ—ಸ್ವತಂತ್ರ್ಯವೂ ಅಲ್ಲ. ಜಗತ್ತಿನಲ್ಲಿರುವವರೆಲ್ಲಾ ಕಾಡಿಗೆ ಹೋಗುವ ಸಂಭವವೂ ಇಲ್ಲ. ಒಂದು ವೇಳೆ ಹೋದರೂ ಅದು ಸಾಧ್ಯ ಎನಿಸುವದಿಲ್ಲ. ಏಕಾಂತದ ಪ್ರಯೋಜನವನ್ನು ಊಹಿಸಿ ತತ್ಪರ ಲೋಕ ಸುಖವನ್ನೂ ಆನಂದವನ್ನೂ ಪಡೆದ ಮೇಲೆ, ಸ್ಥಿರವಾದ ಏಕಾಂತದಿಂದ ಗುರುವಿನಲ್ಲಿ ಭಕ್ತಿಯು ಸ್ಥಿರವಾಗುವಂತೆ ಸಿದ್ಧರಾಗಬೇಕಾದರೆ, ಮೊದಲು ಸ್ವಲ್ಪ ಸ್ವಲ್ಪ ಕಾಲವಾಗಿ ಅಭ್ಯಾಸಮಾಡಲು ಏಕಾಂತವನ್ನು ಸಾಧಿಸಿಕೊಂಡಹೊರತು ಫಲವಿಲ್ಲವೆಂಬುವದನ್ನು ಸೂಚಿಸುವದೇ ಮುಖ್ಯ ಉದ್ದೇಶವು. ನಮ್ಮ ನಶ್ವರವಾದ ದೇಹ ಸುಖಕ್ಕಾಗಿಯೇ ಸಾಯುವವರೆಗೂ ಪ್ರಯತ್ನಿಸುತ್ತಿದ್ದರೆ ಆತ್ಮ ಸಂಸ್ಕಾರದ ಮೂಲಕ ಸದ್ಗತಿಗೇರುವದು ಎಂದಿಗೂ ಸಾಧ್ಯವಲ್ಲ. ವಿವೇಕಿಯು ಪುರೋವೃದ್ಧಿಯನ್ನು ಬಯಸಬೇಕೇ ವಿನಾ ಅಧೋಗತಿಯನ್ನಾಶಿಸುವದು ನ್ಯಾಯವೆನಿಸುವದಿಲ್ಲ. ಕೇವಲ ಲೌಕಿಕ ಒಡಂಬಡಿಕೆಗಳಿಂದ ಬೆಳೆದ ದೇಹಸುಖವೇ ಮುಂದೆ ನಮ್ಮನ್ನು ಅಧೋಗತಿಗೆ ನೂಕುವದಕ್ಕೆ ನಮ್ಮ ಹೆಕ್ಕತ್ತಿನ ಮೇಲೆ ಕೈಯಿಟ್ಟು ದೂಡುವದಕ್ಕೆ ಸೂಚನೆಯೆಂದು ಪ್ರತಿಯೊಬ್ಬರೂ ಭಾವಿಸಬೇಕು. ಇದರಲ್ಲಿ ಕಷ್ಟವಾದರೂ ಪರಗತಿಗೆ ಸಾಧಕವಾದ ವಿಷಯದಲ್ಲಿ ಸಹಾಯಮಾಡುವ ಏಕಾಂತವೆ ನಮ್ಮನ್ನು ಸದ್ಗತಿಗೇರಿಸುವ ಅಪಾಯವಿಲ್ಲದ ಸುಗಮ ಸೋಪಾನವಾಗಿದೆ.

ಪ್ರಭಾ ವಾಚಕರೇ, ಈ ಸಂಸಾರವೆಂಬುದು ಒಂದು ವಿಷದ ಬೀಜವಾದ ವೃಕ್ಷವು. ಆದರೂ ಇದರಲ್ಲಿ ಅಮೃತವನ್ನು ಹೋಲುವ ಎರಡು ಹಣ್ಣುಗಳಿರುವವು. ಸತ್ಸಂಗದಲ್ಲಿರುವ ಅಮೃತ ರಸವನ್ನು ಸವಿಯುವದೊಂದು, ಏಕಾಂತವಾಸ ಇನ್ನೊಂದು. ಜಗತ್ಸಂಬಂಧವಾದ ಹಣದ ವ್ಯಾಪಾರದಂತೆ ಚಂಚಲವಾದುದು. ಯೌವನವು ಬೆಟ್ಟದಿಂದ ಹರಿಯುವ ನದಿಯಂತೆ ಅಸ್ಥಿರವಾದುದು. ಮನುಷ್ಯನ ಜೀವಿತವು ನೀರಮೇಲಿನ ಗುಳ್ಳೆಯಂತೆ ನೋಡು ನೋಡುತ್ತಿರುವಾಗಲೇ ಅಳಿಸುವದು. ನರನ ಬಾಳು ಸಮುದ್ರದ ನೊರೆಯಂತೆ ಅಶಾಶ್ವತವಾದುದು. ಮನುಷ್ಯ ಜನ್ಮವಾದರೂ ದುರ್ಲಭವಾದುದು. ಆದಪ್ರಯುಕ್ತ ನಮ್ಮ ಯೌವನ ಬುದ್ಧಿಶಕ್ತಿ ಸಾಹಸಗಳನ್ನೆಲ್ಲ ವಿನಿಯೋಗಿಸಿ ಸತ್ಸಂಗ, ಸದ್ಗ್ರಂಥ, ಏಕಾಂತಗಳಮೂಲಕ ಪರಸುಖವನ್ನು ಸಾಧಿಸತಕ್ಕದು ಸೂಕ್ತವಾಗಿರುವದು.

ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರ ಚರಣಸರಸೀರುಹಂಗಳಲ್ಲಿ

॥ ಚಂ. ಮಾಲೆ ॥

ಪರಶಿವವೀರಶೈವಮತತತ್ತ್ವಮಹೋನ್ನತಿಯಂ ನೆಗಳ್ದು ತಾಂ ।
ವರಗುರುವರ್ಗಗುಚ್ಛಲಮದಿತ್ತವನೆಲ್ಲೆಡೆಯಲ್ಲಿ ತೋರಿ ಸಂ ॥
ಚರಿಸಿ ನವೀನಶೈಲಿಕರದಿನಲ್ ವಿಬುಧಪ್ರಸರಂ ಕುದರ್ಪದಿಂ ।
ಮೆರೆಯುವ ದುರ್ಜನಪ್ರತತಿಯಂ ತಡೆದಿಕ್ಕಿ ವಿಜೋರಿತಾಂತದಿಂ ॥

॥ ಕಂದ ॥

ಸದಮಲಶೀಲಾಭೂಷಂ ।
ಮುದವನಿತ್ತುಗಂ ವಿಶೇಷಭಕ್ತವ್ರಾತಂ ॥
ಸುದತಿಜನಗಣಸಿಂಹಂ ।
ಸಲೆದು ಶಿವಾನಂದನಾಮಭೂಗುರುವರ್ಯಂ ॥೨॥

ಬಾಲಬ್ರಹ್ಮಚರ್ಯಸ್ಥಿತನಮಿತಂ ।
ಕಾಲಹರಪ್ರೀತನಮಿತವಿದ್ಯಾಭ್ಯಾಸಂ ॥
ಲೀಲಾಜಾಲವಿಶಾಲಂ ।
ಪಾಲಿಸಲೆನ್ನಂ ವಿರಕ್ತಸಂತತಿಪಾಲಂ ॥೩

ಪರಳಿಯ ಘೋರರ್ಣವದೆ ಬಿಸಿಲ್ಗಳೆಯನ್ನದೆ ಧೈರ್ಯದಿಂದ ಭೂ ।
ಧರಪತಿಯಂತೆ ನಿಪ್ಪದಸಿಯಿಂ ಪ್ರತಿಸ್ಫೈದು ವಿರೋಧಿವಾದಮಂ ॥
ಸರಸಸದ ಶಿವಾಖ್ಯಬೋಧನಾಗಿ ಸುಕೀರ್ತಿಯ ಪೆತ್ತ ನೀರಜೈ
ಸದೃಶದಯಾಬ್ಜವಾಸನಿಗಮಾಗರಬರ್ಬರರೋ ಭೂಪಾಲಾಗ್ರದೊಳ್

ಸುರಪತಿಸಭೆಯೊಳ್ ಸುರಗುರು ।
ಪರಸಿಂಹಾಸನದೊಳಿರ್ಪ ವಾಚಸ್ಪತಿಯಂ ।
ಗುರುತರವಿದ್ಯಾಬಲದೊಳ್ ।
ಪರಮಶಿವಾನಂದನತ್ತಿ ಮೀರಿದ ಮಹಿಮಂ ॥೫॥

॥ ಉ. ಮಾಲೆ ॥

ನೋಡಿದ ನೇತ್ರಮೇ ಸುಕೃತಿ ನಿನ್ನಯ ಮೂರ್ತಿಯನೊಲ್ದು ಭವಗುರೋ ।
ಪಾಡಿದ ಜಿಹ್ವೆಯೇ ಸುಕೃತಿ ನಿನ್ನಯ ದಿವ್ಯತರಪ್ರಭಾವಮಂ ।
ಮಾಡಿದ ಕೈಯದೇ ಸುಕೃತಿ ನಿನ್ನಯ ಪೂಜೆಯ ಮೇರುಧೈರ್ಯಶೀಲ್ ।
ಬೇಡಿದಭೀಷ್ಟಮಂ ಕುಡುವ ಪಾದಪಯೋರುಹವೀಧರಾಗ್ರಜೆಸೊ ೬।

ಭೂಸುತನಂ ಮಹೀಶಮಣಿಪೂಜಿತನಂ ಮಧುರಸ್ವಭಾವನಂ
ಭಾನುಸಮಾನತೇಜಿಯುತನಂ ಒಸಂ ಬಹುಭಾಗ್ಯದಾತನಂ ॥
ಜ್ಞಾನಪಯೋಧಿಶೋಭಿಸುಜನಂ ಕವಿಕೀರ್ತಿತನಂ ಪುನೀತನಂ ।
ಜಾಣಜನಾವನಂ ಪರಿಲಸನ್ಮಹಿಮಾನ್ವಿತನಂ ಸುಶೀಲನಂ ॥೭।

ಆನೆ ಮಹಾತ್ಮನಿಂ ಜಗವೆ ಲಿಂಗಿಗಳೆಲ್ಲೆಯುಮ್ಮಡೋ ।
ಪಾವನವೀರಶೈವತಿಗೌರವಮೇಳ್ಗೆಯು ಕಂಡು ಬರ್ಪುದೋ ॥
ತೀವಿದ ಜ್ಞಾನವನಾಪನೊ ಎಲ್ಲೆಡೆಯೊಳ್ ವಿಲಸಿತ ।
ಕ ಪುಗೆ ಪಂಡಿತೋತ್ತಮರ ಸತ್ಸಭೆಯಂ ಪ್ರಭೆಯಿಂ ಯಶಸ್ಸಿಯಂ

। ಕಂದ

ಕುಗುಣಕುಜಾತಕ ಕುಠಾ
ಸುಗುಣಧನ
ಮಿಗೆ ಶಂ
ಸೊಗಯಿಸ

ಮಿಸುಪಾ ಶ್ರೀಶಿವ
ವಶಿವಾಚಾರ್ಯಸುಸಂ
ದಶಿವಾನಂದಜ
ತಿಕುನೆಸ್ಗುಳ್ ಬೀ

ಕ೩

ಶ್ರೀಮನ
ಮಹೋ

ತಾ|| 11 7 |
ಕೊಳ್ಕುಂಟೆ
ಮುಖಂಡರು, ಗ್ರಾ
ತೋರಣಗಳಿಂದ
ಶ್ರೀಮನ್ಮಹಾರಾ
ಬಹದ್ದೂರ್‌ರವರ
ಗಳಿಂದ ಅಲಂಕರಿಸಿ
ಇರುವ ದೇವಾಲ
ಕೊಟ್ಟರು ಇದಾ
ಪಂಚಾಯತಿ ಹಾಲಿ
ಮ|| ರಾ|| ಗಾರೀವ
ಯಲ್ಲಿ ಗ್ರಾಮಪಂಚಾ
ಗಳೂ, ಪಟೇಲರು

ಉಪಾಧ್ಯಾಯರೂ ಇತರ ದೊಡ್ಡಮನುಷ್ಯರೂ ಸೇರಿದರು. ಸಭೆಯಲ್ಲಿ ಸ್ಕೂಲ್ ಬಾಲಿಕೆಯ ದೇವತಾ ಪ್ರಾರ್ಥನೆಯಾದಮೇಲೆ ವಿಲೇಜ್ ಕಮಿಟಿ ಚೇರ್ಮನ್‌ರಾದ ಮ|| ರಾ|| ಜಿ ವೃಷಭೇಂದ್ರ ನವರು ಗ್ರಾಮಪಂಚಾಯಿತಿಯ ವಿಷಯದಲ್ಲಿ ಅದರ ಸ್ಥಾಪನೆಯ ಉದ್ದೇಶ ಅದನ್ನು ಹೇಗೆ ಉಪಯೋಗಿಸಿಕೊಳ್ಳಬೇಕು, ಈ ಊರಿನ ಪಂಚಾಯಿತಿಯು ಈವರೆಗೆ ನಡೆಸಿರುವ ಕಾರ್ಯಕಲಾಪಗಳನ್ನು ಕುರಿತು ರಸವತ್ತಾದ ಭಾಷಣಮಾಡಿದರು. ಅನಂತರ ಪರಶುರಾಮಪುರ ಪ್ರೈಮರಿ ಸ್ಕೂಲಿನ ರಿಟೈರ್ಡ್ ಹೆಡ್ಮಾಸ್ತರರಾದ ಮ|| ರಾ|| ಜಿ ತಿಪ್ಪೇರುದ್ರಯ್ಯನವರು ತಾಯಿತಂದೆಗಳು ಮಕ್ಕಳನ್ನು ಯಾವರೀತಿಯಲ್ಲಿ ಪೋಷಿಸಬೇಕು, ಅವರ ವಿದ್ಯಾಭ್ಯಾಸಕ್ಕಾಗಿ ಉಪಾಧ್ಯಾಯರು ಎಷ್ಟು ಮಟ್ಟಿಗೆ ಸಹಕರಿಗಳಾಗಿರಬೇಕು, ಮುಂದಿನ ಪ್ರಜೆಗಳಾಗುವ ಈ ಮಕ್ಕಳನ್ನು ತಮ್ಮ ಯಾವ ಸದ್ಗುಣಗಳಿಂದ ಅಭಿವೃದ್ಧಿಗೆ ತರಬೇಕು, ಬೋಧಕರು ಮಕ್ಕಳ ವಿಷಯದಲ್ಲಿಯೂ ತಾಯಿತಂದೆಗಳ ವಿಷಯದಲ್ಲಿಯೂ ಯಾವರೀತಿ ನಡೆದುಕೊಳ್ಳಬೇಕು, ಇತ್ಯಾದಿ ವಿಷಯಗಳನ್ನು ಕುರಿತು ಅಮೋಘವಾದ ಭಾಷಣಮಾಡಿದರು. ಇದಾದ ಮೇಲೆ ಪರಶುರಾಮಪುರದ ಗೌ|| ಮಿ|| ಸ್ಕೂಲ್ ರಿಟೈರ್ಡ್ ಕನ್ನಡಪಂಡಿತರಾದ ಶ್ರೀಯುತ ಜಿ ಯನಗೌಡರು ವಹಾಸ್ವಾಮಿಯವರ ಗನವನ್ನು ಪದ್ಯರೂಪದಲ್ಲಿ ಹಾಡಿ ಮಹಾರಾಜರವರ ಶ್ರೇಯಸ್ಸನ್ನು ಕೋರಿ ಸಭಿಕರನ್ನು ಆನಂದಪಡಿಸಿದರು. ಅನಂತರ ಸಭಾಧ್ಯಕ್ಷರು ಭಾಷಣಮಾಡಿ ಸ್ಕೂಲಿನ ಬಡವಿದ್ಯಾರ್ಥಿಗಳಿಗೆ ಸ್ಲೇಟು ಬಳಪಗಳನ್ನೂ ಸ್ವಹಸ್ತದಿಂದ ಪುಸ್ತಕಗಳನ್ನೂ ಹಂಚಿದರು. ಬಳಿಕ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯೊಡನೆ ಸಭೆಯು ಮುಕ್ತಾಯವಾಯಿತು.

ಓರ್ವ ಪ್ರತ್ಯಕ್ಷದರ್ಶಿ

ಶ್ರೀಜಗದ್ಗುರು ವಿಶ್ವಾರಾಧ್ಯ ಶ್ರೀಬೋರ್ಡಿಂಗಿನ ವಾರ್ಷಿಕೋತ್ಸವ ಕುಂದುಗೋಳ

೨೯-೭-೧೯೪೧ ನೇ ಮಂಗಳವಾರ ಸಾಯಂಕಾಲ ಪದ್ಧತಿ ಪ್ರಕಾರ ಕುಂದುಗೋಳದಲ್ಲಿಯ ರದಲ್ಲಿ ಶ್ರೀಜಗದ್ಗುರು ವಿಶ್ವಾರಾಧ್ಯ ಬೋರ್ಡಿಂಗಿನ ವಾರ್ಷಿಕೋತ್ಸವವು ನೆರವೇರಿತು. ಗುರುಸಿದ್ಧಯ್ಯನವರ ಅಧ್ಯಕ್ಷತೆಯಲ್ಲಿ ಸಭೆಯು ಕೂಡಿತು. ಮೊದಲು ಶ್ರೀ ರುದ್ರಪ್ಪ ಕರ್ತೃಕಾಟಿ ಇವರು ಮಂಗಲಮಾಡಿದರು. ನೇ ವರ್ಷದ ರಿಪೋರ್ಟು ಓದಲ್ಪಟ್ಟಿತು. ವೇ|| ಪಟ್ಟದಸ್ವಾಮಿ ಹಿರೇಮಠ ಶಾಸ್ತ್ರೀ ಮತ್ತು ಶ್ರೀ ಸಿದ್ಧನಗೌಡ ಹಿರೇಹರಕುಣಿ ಇವರು ಬೋರ್ಡಿಂಗಿನ ಹೃದಯಂಗಮವಾಗಿ ಭಾಷಣಮಾಡಿದರು. ವೇ|| ಪ್ರವಚನಪಟು ಸಿದ್ಧಲಿಂಗದೇವರು ಹಿರೇಹರಕುಣಿ ಇವರು ಇಂಗ್ಲೀಷ್ ವಿದ್ಯೆಯ ವಿದ್ಯೆಯನ್ನು ಕಲಿಸುವ ಆವಶ್ಯಕತೆ ಸ್ವಾರಸ್ಯವಾಗಿ ಬೋಧಿಸಿದರು. ಇದಕ್ಕೆ ತದಿಂದ ಅಭಿಪ್ರಾಯ ಕೊಟ್ಟರು. ವೈದಿಕ ಮತ್ತು ಜ್ಯೋತಿಷ ಪಾಠಶಾಲೆಯ ಪ್ಪನೆಯದು ಜಾಹೀರ ರೀತಿಯಿಂದ ಪ್ರಕ

ಶ್ರೀ|| ಬ್ರ|| ಪಶಿವಾಚಾರ್ಯರು ಹಿರೇಮಠ ಕುಂದಗೋಳ ಇವರ ಆಶ್ರಯ ಯಶಸ್ವಿಯಾಗಿ ಜರಗಿದ ಶ್ರೀಬೋ ಲ್ಲಿ ವೈದಿಕ ಮತ್ತು ಜ್ಯೋತಿಷ ಪಾ ಗುರುವರ್ಗದ ಉದ್ಧಾರಮಾಡಿ ಸಮಾಜವನ್ನೇ ಪುನೀತವನ್ನಾಗಿ ಕುಂದುಗೋಳ ಚರಪಟ್ಟಾಧ್ಯಕ್ಷ ಸರ್ವ ಗುರುವರ್ಗದ ಅಧಿಕಾರಿಗಳಾಗಿದೆ ಮತ್ತು ಶ್ರೀ|| ಷ|| ಬ್ರ|| ಕುಂದು ಪಟ್ಟಾಧ್ಯಕ್ಷರಿಗೆ ಬಲಗೈಯ್ಯಂತಿರುವ ವೇ|| ಹಿರೇಹರಕುಣಿ ಸಿದ್ಧಲಿಂಗದೇವರು ಪಟ್ಟ ದೇಶಮಧ್ಯದಲ್ಲಿ ಸಂಚರಿ

ಕೂಡಿಸಿ ಈ ಸಂಸ್ಥೆಗೆ ನೆರವಾದುದು ನಮ್ಮ
ವವೆಂದೇ ತಿಳಿಯುತ್ತೇವೆ

ುರುವರ್ಗೋದ್ಧಾರಕರಾದ ವೇ|| ಪಂಡಿತ ಶ್ರೀ
ನಾಥಶಾಸ್ತ್ರಿಗಳವರು ಈಸಂಸ್ಥೆಗೆ ದರ್ಶನ ಕೊಟ್ಟಾಗ್ಗೆ
ರ್ಕಶಿಕ್ಷಣದ ಬಗ್ಗೆ ಕೊಟ್ಟ ಸೂಚನೆಯನ್ನು
ಷ|| ಬ್ರ|| ಚರಮೂರ್ತಿಸ್ವಾಮಿಗಳು ಮತ್ತು
ಸಿದ್ಧಲಿಂಗದೇವರು ಅಂಗೀಕರಿಸಿ ವೈದಿಕ, ಜ್ಯೋತಿಷ
ಶಾಲೆಯನ್ನು ಬೋರ್ಡಿಂಗಿನ ಜತೆಯಲ್ಲಿ ನಡೆಸುವ
ೀಚನೆಯನ್ನು ಮಾಡಿದ್ದಕ್ಕಾಗಿ ಉಭಯ ಗುರು
ವ ಮೂರ್ತಿಗಳಿಗೆ ತುಂಬಾ ಕೃತಜ್ಞರಾಗಿದ್ದೇವೆ

ಭಕ್ತಮಂಡಳಿ ಕುಂದಗೋಳ

ಗುರುಮಹಿಮೆ ಪ್ರಕಾಶಪುರ

ನಿಜಾಮ ಇಲಾಖಾ ಗುಂಡೋಟಿ ಜಿಲ್ಹೆಗೆ ಸೇರಿರುವ
ಾಶಪುರದಲ್ಲಿ ಈಗ್ಗೆ ೨ ತಿಂಗಳಿಂದಲೂ ಮಳೆಯು ಆಗ
ದ್ದರಿಂದ ಎಲ್ಲ ಜನರೂ ಚಿಂತಾಕ್ರಾಂತರಾಗಿದ್ದರು
್ಮ ಗ್ರಾಮದಲ್ಲಿರುವ ಶ್ರೀ ಮಡಿವಾಳಪ್ಪ ಬಾಡಗೆ
ಬ ತ್ರಿಕರಣಶುದ್ಧಿಯುಳ್ಳ ಪುರ ಹರ ಮೇಲೆ ಜುಲೈ
ನೆಯ ತಾರೀಖಿನ ದಿವಸ ಗುರ ಧ್ಯಾನವನ್ನು
ಡುತ್ತಾ ಜಲವನ್ನು ಅಭಿಷೇಕಿಸಲು ೨ ಘಂಟೆಯೊ
ಶ್ರೀಜಗದ್ಗುರು ದಾರುಕಾಚಾರ್ಯರ ಅನುಗ್ರಹ
ದ ಸಂಪೂರ್ಣ ವೃಷ್ಟಿಯಾಯಿತು ಆಗ್ಗೆ ಸರ್ವರೂ
ತೋಷಭರಿತರಾಗಿ ಅಸಾಧಾರಣವಾದ ಗುರುಭಕ್ತಿ
ಂದ ಶ್ರೀಜಗದಾಚಾರ್ಯರ ಭಾವಚಿತ್ರವನ್ನು ಪುಷ್ಪ
ಾಲಿಕೆಯಿಂದ ಅಲಂಕರಿಸಿ ಪೂಜೆಯನ್ನು ಮಾಡಿ
ೆಯನ್ನು ನೆರವೇರಿಸಿದರು ಆಗ್ಗೆ ನಮ್ಮ ಗ್ರಾಮದ
ೀಮಠದ ವೇ|| ಮಡಿವಾಳಸ್ವಾಮಿಯವರು ಸರ್ವರಿಗೂ
ಯುವಂತೆ ಗುರುಮಹಿಮೆಯನ್ನೂ ಮಠದ ಸ್ವರೂಪ
ನ್ನೂ ಹೇಳಿದರು ಇದನ್ನು ಕೇಳಿ ಸರ್ವರೂ ಸಂತೋ
ಪಟ್ಟರು ಶ್ರೀಮಂತ ಸಂಗಪ್ಪ ರಗಟೆ ಇವರ ಪುತ್ರ
ನ ೧೩ ವರ್ಷದ ಶಿವಲಿಂಗಪ್ಪನೆಂಬ ಬಾಲಕನು
ರ ಲಿಂಗಜಂಗಮರ ವಿಷಯವನ್ನು ಹೇಳಿ ಸರ್ವರನ್ನೂ
ತೋಷ ಪಡಿಸಿದನು ಬಳಿಕ ಜಗದಾಚಾರ್ಯರ
ಯಘೋಷದೊಡನೆ ಸಭೆಯು ಮುಕ್ತಾಯವಾಯಿತು
ಕಾರ್ಯದಲ್ಲಿ ಮರಯ್ಯಸ್ವಾಮಿ ಮರೆಪತ್ರಿ, ಸಂಗಪ್ಪ
ಗಟೆ, ಮರಿಗಪ್ಪ ವಿಕಲೂರೆ, ಮಹಾರುದ್ರಪ್ಪ ಶೆಟೆ
ರ, ಹಣಮಂತಪ್ಪಪಾಟೀಲ, ಶಂಕರಪ್ಪ ಧನೆಗಾಂವ,
ಗಶೆಟ್ಟೆಪ್ಪ ವೆಟಗೆ, ಮಡಿವಾಳಪ್ಪ ಬಿರಾಜದಾರ,
ರುಪಾದಪ್ಪ ಶೀಲವಂತ, ಬಸವಣ್ಣಪ್ಪ ಶೀಲವಂತ,
ದ್ರಶೇಖರ ರಾಗಾ, ಇವರೇ ಮೊದಲಾದ ಗುರು
ಕ್ತರು ವಿಶೇಷ ಶ್ರದ್ಧೆ ವಹಿಸಿದ್ದರು ಇವರೆಲ್ಲರಿಗೂ
ೀಜಗದಾಚಾರ್ಯರು ಆಯುರಾರೋಗ್ಯಭಾಗ್ಯದಿಗ
ೀಯಲೆಂದು ಪ್ರಾರ್ಥಿಸುವ,

ಪ್ರತ್ಯಕ್ಷದರ್ಶಿ

ಲಿಂಗಧಾರಣವಿಧಿ

ಬಹುಜನರ ಪ್ರಾರ್ಥನೆಯಮೇರೆಗೆ ಲಿಂಗಧಾರಣ
ಧಿಯು ಹೊಸದಾಗಿ ಮುದ್ರಿಸಲ್ಪಟ್ಟಿದೆ ಗುರುವರ್ಗದ
ರಿಗೆ ಈವಿಧಿಯು ಮುಖ್ಯವಾಗಿರುವುದು ಈ ವಿಧಿಯಲ್ಲಿ
ುಕ್ತವಾಗಿರುವ ಸಮಸ್ತ ವೇದಮಂತ್ರಗಳಿಗೆ ವೈದಿಕ
ಸ್ವರಗಳು ಹಾಕಲ್ಪಟ್ಟಿರುತ್ತವೆ ಸರ್ವರಿಗೂ ಸುಲಭವಾಗಿ
ಳಿಯುವಂತೆ ಕನ್ನಡ ಟೀಕೆಯು ಬರೆಯಲ್ಪಟ್ಟಿದೆ
ಆದುದರಿಂದ ಪ್ರತಿಯೊಂದು ಗ್ರಾಮದ ಗುರುವರ್ಗದ
ಮಠಾಧಿಕಾರಿಗಳು ಈ ಗ್ರಂಥವನ್ನು ತರಿಸಿಕೊಂಡು,
ಇದರಲ್ಲಿ ಹೇಳಿದಂತೆ ಲಿಂಗಧಾರಣವನ್ನು ಮಾಡಿ
ರಮಾತ್ಮನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ

ಬೆಲೆ ೪ ಆಣೆ.

ಮ್ಯಾನೇಜರ್

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್.
ಮೈಸೂರು.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ! ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತನಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ** ವಿ ಪಿ ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರಕಾಶಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹ ಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯುಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿಂಗಿನಿಂದೊಡಗೂಡಿದೆ ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನ ಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ..	೦—೧—೬
ಪದ್ಮ. ಶ್ರೀ [illegible] ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ .	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ .	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ .	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ ..	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ .	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ ..	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ .	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇ **ಉಪಯೋಗಿಸಿ** ಸಾವಿರಾರುಗಳಾಗಿ, ಯೋಗ್ಯತಾ

ಗಳನ್ನು ಕೊಟ್ಟಿ ರು. ಪ್ರಸಿದ್ಧವಾ ನಶ್ಯದ ಪುಡಿ ಸ್ವಸ್ಥವಾಗುವ ಗಳು ಯಾವ ದೆ:—ಪೀನಸಿ, ತಲೆನೋವು, ತ ಲ್ಲಿಯ ರೋಗ ಕಣ್ಣುಗಳಲ್ಲಿ ಗತಕ್ಕ ಸರ್ವವ್ಯಾಧಿಗಳು, **ಜಲದೋಷ** ಮೊ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇ ಗಿ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒ ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮ ವುಮ ಇದನ್ನು ಅನೇಕಪ್ರಭುಗಳು ಉಪಯೋ ತ್ತಾರೆ ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆ ಡರ್ಜ ಒಂದಕ್ಕೆ ಕ್ರಯ ರೂ ೨-೮-೦. ವಿ.ಪಿ. ೮ ಆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್.

[12] ಪೋ. ಬಾ. ೫೧೦, ಮದರಾ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ) ..	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ) .	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವವರ್ಣನ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ

ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವವು)	೧ ರ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) ...	೧ ರ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರ
ವೀರಶೈವಸಿದ್ಧಾಂತಸುಧಾಕರ	೨ ರ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರ
A brief life-sketch of Pandit Sri Kashinatha Shastriji (*English*)	4 A
The Philosophical Aspect of Virasaivism (*English*) ...	8 A
Speeches by Pandit Shri Kashinatha Shastriji *English*)	12 A
लिंगधारणचंद्रिका (संस्कृत)	३
वीरशैवरत्न (मराठी)	१
महानारायणोपनिषत् (वीरशैवभाष्य-संस्कृत) ...	१
पुरुषसूक्तम् (वीरशैवप्राचीनभाष्योपेतम्)	४ आ
नंदिकेश्वरकारिका (संस्कृत)	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ವರಿಗೆ ೧ ರೂ. ೧೧ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೩ ರೂ. ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೧ನೇ ಆಗಸ್ಟ್ ೧೯೪೧ [ಸಂಚಿಕೆ ೧೫

ೀ ಜಗದ್ಗುರು ಪಂಡಿತಾರಾಧ್ಯೋ ವಿಜಯತೇ

ಧಾರ್ಮಿಕ ಶಿಕ್ಷಣದ ಆವಶ್ಯಕತೆ

್ರಿಯವಾಚಕರೇ ಕೃಪಾನಿಧಿಯಾದ ಜಗದೀಶನಿಂದ ತವಾದೀಜಗತ್ತಿನಲ್ಲಿ ಅನೇಕ ಮತಗಳು ಆಯಾ ಚಾರ್ಯರು ಹಾಕಿಕೊಟ್ಟ ಮಾರ್ಗಗಳಿಂದ ತಾವಸ್ಥೆಯನ್ನು ಹೊಂದಬೇಕೆಂಬ ಪ್ರಯತ್ನ ವುಗಳಾಗಿವೆ. ಆದರೆ ಮತಗಳಾಗಲಿ, ರಾಷ್ಟ್ರ ಗಲಿ ಸಂಸ್ಥೆಗಳಾಗಲಿ, ಮುಂದುವರಿಯ ಬೇಕಾ ಶಿಕ್ಷಣದಹೊರತು ಬೇರೆಮಾರ್ಗವಿಲ್ಲ ಈ ನಲ್ಲಿ ಆ ಪ್ರಕಾರವಾದ ಶಿಕ್ಷಣವು ದೊರೆಯುವ ಲಕ ಮತಗಳಾಗಲಿ ರಾಷ್ಟ್ರಗಳಾಗಲಿ ಸಂಸ್ಥೆಗ ಲಿ ಮೂಲೆಗೆ ಬೀಳಹತ್ತಿವೆ ಇದರಲ್ಲಿ ಶ್ರೀ ಜಗ ರೇಣುಕಾದ್ಯಾಚಾರ್ಯರಿಂದ ಸ್ಥಾಪಿತವಾದ ವೀರ ಮತವು ಎಷ್ಟು, ಅವನತಸ್ಥಿತಿಗೆ ಹೋಗಿದೆ ದನ್ನು ಹೇಳಲು ಅತ್ಯಂತ ವ್ಯಸನವೆನಿಸುತ್ತದೆ ಮಹನೀಯರೇ ಉತ್ಕೃಷ್ಟವಾದ ವೀರಶೈವ ವು ಇಷ್ಟು ಅವನತಿಗೆ ಹೋಗಲು ನಮ್ಮಲ್ಲಿರುವ ನದ ಪ್ರಭಾವವೇ ಕಾರಣವೆಂದು ಹೇಳಬೇಕಾಗಿದೆ ವ ಮತವು ಎಲ್ಲ ಮತಗಳಿಗಿಂತಲೂ ಶ್ರೇಷ್ಠವೆನಿಸಿರು ೀ, ಯಾವ ಮತದಲ್ಲಿ ಮಾನವನು ಒಂದೇ ಜನ್ಮದಲ್ಲಿ ಯನ್ನು ಪಡೆವನೋ, ಬ್ರಹ್ಮ ವಿಷ್ಣು ಮೊದಲಾದ ತೆಗಳು ಯಾವುದನ್ನು ಅವಲಂಬಿಸಿ ತಮ್ಮ ತಮ್ಮ ರ್ಥಗಳನ್ನು ಪಡೆದರೋ ‘ ನ ವೀರಶೈವ ಸದೃಶಂ ಮಸ್ತಿ ಜಗತ್ರಯೇ ’ ಎಂಬಂತೆ ಯಾವ ಮತವು ರು ಲೋಕಗಳಲ್ಲಿ ಪ್ರಸಿದ್ಧವೆನಿಸಿರುವದೋ ಅಂತಹ ಖ್ಯಾತವಾದ ವೀರಶೈವ ಮತವು ಅಶಿಕ್ಷಣವೆಂಬ ನಲ್ಲಿ ಮುಳುಗಿಹೋಗುತ್ತಿರುವದು ಆದರೂ ಶೈವ ಮುಖಂಡರು ಇದರ ಕಡೆಗೆ ಲಕ್ಷ್ಯಗೊಡದೆ ಪರಾಯಣರಾಗಿದ್ದಾರೆ ವೀರಶೈವ ಸಮಾಜ ಧವರೇ! ತಾಯಿತಂದೆಗಳನ್ನಗಲಿ ಬಾಯಾರಿ ಳಿದು ಯಾರೂ ದಿಕ್ಕಿಲ್ಲದೆ ಬಾಯಿಬಿಡುವ ಬಾಲ ನಮ್ಮ ವೀರಶೈವ ಮತವು ಪೋಷಣ ಕರ್ತೃಗ ಹೀನಾವಸ್ಥೆಗೆ ಹೋಗಹತ್ತಿದೆ. ನಮ್ಮ ಮತದಲ್ಲಿ ಕ ಶಿಕ್ಷಣವನ್ನು ಕೊಡದೆ ಇರುವದರಿಂದ ಜನರು ಮನಬಂದಂತೆ ವರ್ತಿಸಹತ್ತಿದ್ದಾರೆ. ರು ಕ್ರೈಸ್ತ ಸಮಾಜದಲ್ಲಿಯ ಅನೇಕ ಸೌಕರ್ಯ ಕಂಡು ಮೆಚ್ಚಿ ಸ್ವಧರ್ಮವನ್ನು ಬದಿಗೊತ್ತಿ ಮತದಲ್ಲಿ ಸೇರಹತ್ತಿದ್ದಾರೆ. ಇನ್ನು ಕೆಲವರು ಸ್ವಧ ದಲ್ಲಿದ್ದರೂ ಪಾಶ್ಚಾತ್ಯ ಶಿಕ್ಷಣದ ಸೆಳವಿಗೆ ಸಿಲುಕಿ ರ್ಮಾಚಾರಗಳನ್ನು ಮೂಲೆಗೊತ್ತಲು ಪ್ರಯತ್ನಿಸ ದ್ದಾರೆ ಮತ್ತು ಕೆಲವರು ವೀರಶೈವ ಮತದ ರಗಳು ಬಹು ಕಷ್ಟಕರಗಳಾಗಿವೆ. ಆರೀತಿ ನಡೆ ದು ಎಂದೂ ಸಾಧ್ಯವಿಲ್ಲೆಂಬವೇ ಮೊದಲಾದ ನೆಗಳನ್ನು ಹುಟ್ಟಿಸುತ್ತಾ ‘ ಸ್ವಧರ್ಮೇ ನಿಧನಂ ಃ ಪರಧರ್ಮೋ ಭಯಾವಹಃ ” ಎಂಬ ಭಗವ ಯ ವಾಕ್ಯವನ್ನು ಅಲ್ಲಗಳೆದು ನರಕಭಾಗಿಗಳಾಗಲಿಚ್ಛಿಸಹತ್ತಿದ್ದಾರೆ ಆದಕ್ಕಾಗಿಯೇ ಧಾರ್ಮಿಕ ಶಿಕ್ಷಣದ ಆವಶ್ಯಕತೆಯು ಬೇಕಾಗಿದೆ ಕ್ರೈಸ್ತ ಮೊದಲಾದ ಮತಗಳು ಈಗ ಎಷ್ಟು ಉನ್ನತ ಶಿಖರವನ್ನು ಹೊಂದಹತ್ತಿವೆ, ಇದಕ್ಕೆಲ್ಲ ಆ ಧರ್ಮದ ಶಿಕ್ಷಣವೇ ಕಾರಣವಲ್ಲವೆ? ಹಾಗೆಯೇ ನಮ್ಮ ವೀರಶೈವ ಮತದಲ್ಲಿ ಧಾರ್ಮಿಕ ಶಿಕ್ಷಣವು ಬೇಕೇ ಬೇಕು ಇಂಗ್ಲೀಷ ಅಭ್ಯಾಸಮಾಡಿದ ಕೆಲಜನ ವೀರಶೈವರು ವೀರಶೈವ ಮತವೆಂದರೇನು? ಆ ಮತದ ಆಚಾರಗಳೇನು? ಅವುಗಳನ್ನು ಯಾವರೀತಿಯಿಂದ ಆಚರಿಸಬೇಕು? ಎಂಬ ವಿಷಯಗಳನ್ನು ಅರಿತಿರುವದಿಲ್ಲ ನಾವು ಇಂಗ್ಲೀಷ ಅಭ್ಯಾಸವನ್ನು ಮಾಡಿದ್ದೇವೆ ನಮ್ಮ ಸಮಾನರಾರು? ಎಂದು ಅಹಂಕರಿಸುತ್ತಿರುವರು ಅವರಿಗೆ ಧರ್ಮವು ಬೇಡವೇ ಬೇಡವಾಗಿದೆ ಇಂಗ್ಲೀಷ ಅಭ್ಯಾಸಮಾಡಿದರೆ ಇಂಗ್ಲೀಷ ವಿದ್ಯೆಯು ಸ್ವಧರ್ಮವನ್ನು ಆಚರಿಸಕೂಡದೆಂದು ಅಡ್ಡ ಬರುವದೇನು? ಅಂದಮೇಲೆ ಸ್ವಧರ್ಮ ಶಿಕ್ಷಣವನ್ನು ಯಾಕೆ ಹೊಂದಬಾರದು? ಪರಮತೀಯರು ಇಂಗ್ಲೀಷ ಅಭ್ಯಾಸಮಾಡಿದರೂ ತಮ್ಮ ಜಾತಿಗುಚಿತವಾದ ಆಚಾರಗಳನ್ನು ಎಂದೂ ಬಿಡುವದಿಲ್ಲ. ನಾವು ಅವರನ್ನಾದರೂ ನೋಡಿ ನಾಚಿ ಸ್ವಧರ್ಮದಲ್ಲಿ ಪ್ರೇಮವುಳ್ಳವರಾಗಿ ಶಿವಪ್ರೀತಿಗೆ ಪಾತ್ರರಾಗಬೇಕೆಂಬುದೇ ನನ್ನ ಕೋರಿಕೆ.

ಶಿವರಾವ ಸಿದ್ಧರಾಮಪ್ಪ ಪಾಟೀಲ ಜಹಗೀರ ಬೇವರಗಿ

ರಷ್ಯದಲ್ಲಿ ಜರ್ಮನರಿಗುಂಟಾಗಿರುವ ಕಷ್ಟಪರಂಪರೆ

ಜರ್ಮನ ಗಡಿಯಲ್ಲಿರುವ ‘ ಟೈಂಸ್ ’ ಸುದ್ದಿಗಾರರು ತಮ್ಮ ಪತ್ರಿಕೆಗೆ ಸುದ್ದಿಯನ್ನು ಈರೀತಿ ಕಳುಹಿಸಿದ್ದಾರೆ-

“ ಜರ್ಮನಿಯು ರಷ್ಯದಲ್ಲಿ ನಡೆಸುತ್ತಿರುವ ಘೋರ ಯುದ್ಧದ ವಿಚಾರವಾಗಿ, ಜರ್ಮನಿಯ ಹೈಕಮ್ಯಾಂಡ್ ಪ್ರಕಟನೆಗಳು ಚಿಕ್ಕ ಚಿಕ್ಕವಾಗುತ್ತ ಬಂದಂತೆಲ್ಲ ಜರ್ಮನಿಯ ವೃತ್ತಪತ್ರಿಕೆಗಳಲ್ಲಿ ಯುದ್ಧನಿಪುಣರ ವಿವರಗಳು ಹೆಚ್ಚಾಗುತ್ತ ನಡೆದಿವೆ. ಆ ನಿಪುಣರು ಅಲ್ಲಿರುವ ತೊಂದರೆಗಳನ್ನು ಅಪಾರವಾಗಿ ವರ್ಣಿಸಲು ಆರಂಭಿಸಿದ್ದಾರೆ ಜರ್ಮನಿಯ ಉದ್ದೇಶಗಳು ಬೇಗನೆ ಈ ಘೋರ ಯುದ್ಧದಿಂದ ನೆರವೇರುವುದಿಲ್ಲನೆಂದು ಅವರು ಬರೆಯತೊಡಗಿದ್ದಾರೆ.

ರಣರಂಗದಲ್ಲಿರುವ ಜರ್ಮನಿ ಸೈನಿಕರು ಬರೆಯುವ ಪತ್ರಗಳು ಜರ್ಮನಿಯ ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಆ ಪತ್ರಿಕೆಗಳಿಂದ ಹೋರಾಟವು ಎಷ್ಟು ಭೀಕರವಾಗಿರುವುದೆಂಬುದೂ ಜರ್ಮನಿ ಸೈನ್ಯಪಡೆಗಳು ಎಷ್ಟು ತೊಂದರೆಗಳಿಗೆ ಗುರಿಯಾಗಿರುವುವೆಂಬುದೂ ವ್ಯಕ್ತಪಡುವುದು. ಹಿಮವು ಬೀಳುತ್ತಿರುವ ಉತ್ತರದ ರಣರಂಗದಲ್ಲಿಯೇ ಆಗಲಿ, ಕುಡಿಯುವುದಕ್ಕೆ ನೀರು ಕೂಡ ದೊರೆಯದಂತೆ ಮಾಡಿರುವ ಮಧ್ಯ ಮತ್ತು ದಕ್ಷಿಣ ರಣರಂಗಗಳಲ್ಲಿಯೇ ಆಗಲೀ ಜರ್ಮನಿ ಸೈನಿಕರು ಅಪಾರ ಕಷ್ಟ ನಷ್ಟಗಳನ್ನು ಅನುಭವಿಸಿ ಹೋರಾಟ ನಡೆಸಬೇಕಾಗಿದೆ ಕುಡಿಯುವುದಕ್ಕೆ ನೀರುಕೂಡ ಜರ್ಮನಿ ಸೈನಿಕರಿಗೆ ಸಿಗುವಂತಿಲ್ಲ. ಏಕೆಂದರೆ ನೀರು ವಿಷಪೂರಿತವಾಗಿರುವುದು ಇಲ್ಲವೆ ಕಾಲರಾ ಮುಂತಾದ ರೋಗಗಳ ಕ್ರಿಮಿಗಳಿಂದ ಕೂಡಿದ್ದಾಗಿರುವುದು

ಹೊಲಗದ್ದೆಗಳಲ್ಲಿರುವ ಮನೆಗಳ ಹತ್ತಿರ ಇರುವ ಭಾವಿಗಳಲ್ಲಿರುವ ನೀರು, ಸಾವಿರಾರು ಜನ ಜರ್ಮನಿ ಸೈನಿಕರಿಗೆ ಸಾಲುವುದಿಲ್ಲ. ಅಲ್ಲದೆ ಭಾವಿಯಿಂದ ನೀರನ್ನು ಎತ್ತುವುದಕ್ಕೆ ಯಾವ ಸಾಧನವೂ ಸಿಗದಂತೆ ರಷ್ಯ ಸೈನಿಕರು ಮಾಡಿರುವರು ಹಗ್ಗಗಳನ್ನೂ ಕೊಡಗಳನ್ನೂ ಬಕೆಟ್‌ಗಳನ್ನೂ ಸಹ ನಾಶಮಾಡಿರುವರು ಅನೇಕ ಕಡೆಗಳಲ್ಲಿ ನೀರನ್ನು ಕೂಡ ಕುಡಿಯುವುದಕ್ಕೆ ಬಾರದಂತೆ ಮಾಡಿರುವರು.

ಮೇಜರ್ ಲಿಹಮಾನ್‌ರವರು ಈ ಘೋರಯುದ್ಧದ ವಿಚಾರವಾಗಿ ಬರೆಯುತ್ತ ದ್ವೇಷದೃಷ್ಟಿಯಿಂದ ಕೂಡಿಯೋ ಇಲ್ಲವೆ ರಾಜಕೀಯ ಭಿನ್ನಾಭಿಪ್ರಾಯಗಳ ದೆಸೆಯಿಂದಲೋ ಅಥವಾ ಭೀತಿಯಿಂದಲೋ ರಷ್ಯಸೈನಿಕನು ತನ್ನ ಪರಿಸ್ಥಿತಿಯು ಭಯಂಕರವಾಗಿದ್ದರೂ ಕೂಡ, ಭಯಂಕರರೀತಿಯಲ್ಲಿ ಕಾದಾಡುತ್ತಿದ್ದಾನೆ ಅಂತಹ ರಷ್ಯ ಸೈನಿಕರನ್ನು ನಾವು ಎದುರಿಸಿ ಹೋರಾಡಬೇಕಾಗಿದೆ ರಷ್ಯ ಸೈನಿಕರಿಗೆ ಉಪಯೋಗವಾದ ತಮ್ಮ ಬಟ್ಟೆಬರೆಗಳನ್ನು ಕೂಡ ನಾಶಮಾಡಿ ಹೋರಾಡುವರು. ಜರ್ಮನಿ ಸೈನಿಕರು ಸೈನಿಕರಿಗೆ ಉಪಯುಕ್ತವಾದ ಯಾವ ಸಾಮಾನುಗಳೂ ಸಿಗಬಾರದೆಂಬುದೇ ಅವರ ಉದ್ದೇಶವಾಗಿದೆ. ಎಂಬುದಾಗಿ ಸೂಚಿಸಿದ್ದಾರೆ.

ಥೈಲೆಂಡಿನ ನಿಶ್ಚಯ

ಯಾವ ರಾಷ್ಟ್ರದಿಂದಲೂ ಯಾವ ವಿಧವಾದ ರಕ್ಷಣೆಯನ್ನೂ ಥೈಲೆಂಡು ಅಪೇಕ್ಷಿಸುವದಿಲ್ಲ. ಜಪಾನಿನ ಸೈನ್ಯಗಳು ಥೈಲೆಂಡಿನ ಸರಹದ್ದಿನಲ್ಲಿ ಶೇಖರವಾದರೂ, ಯಾವ ವಿಧವಾದ ದಾಳಿಯನ್ನಾಗಲಿ ಆಕ್ರಮ ಪ್ರವೇಶವನ್ನಾಗಲಿ ಎದುರಿಸಿ ತಮ್ಮ ಸರಹದ್ದುಗಳನ್ನು ರಕ್ಷಿಸಿಕೊಳ್ಳಲು ಕಾದಾಡುವರು ” ಎಂದು ಥೈಲೆಂಡ್ ರೇಡಿಯೋ ತಿಳಿಸಿದೆ

ಸ್ವೀಕಾರ.

ವಿಜಾಪುರ ಜಿ॥ ಸಿಂದಗಿ ತಾ॥ ಕನ್ನೊಳ್ಳಿಗ್ರಾಮದಲ್ಲಿರುವ ಮ॥ ರಾ॥ ವಿರುಪಕ್ಷಪ್ಪ ಭಾಗಪ್ಪ ಕುಂಬಾರ ಇವರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರ ಅನುಗ್ರಹದಿಂದ ಪುತ್ರನು ಜನಿಸಿದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ ೧ ರೂ. ಯು ಸೋಮೇಶ್ವರ ವಾಚನಾಲಯದ ಒಡೆಯರಾದ ವೇ॥ ವೀರಯ್ಯ ಸಾರಂಗಮಠ ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇನೆ.

॥ ಶ್ರೀ ಜಗದ್ಗುರು ದಾರುಕಾಚಾರ್ಯಾಯನಮಃ ॥

ಸಸೇಮಿರಾ

(ಲೇ— ಮಲ್ಲಿಕಾರ್ಜುನಾರಾಧ್ಯ, ರಾಣೇಬೆನ್ನೂರು ಮಳೇಮಠ, ಮುದೇನೂರು).

ನಿರ್ಮಲವಾದ ಮತ್ತು ಪ್ರಕಾಶವಾದ ಕಣ್ಣುಗಳೂ, ಆನಂದಮಯವಾದ ಮುಖಭಾವವೂ ಮಹನೀಯತೆಯ ಸೂಚನಾಪತ್ರಗಳೆಂದು ಹೇಳಬಹುದು. ಯಾರು ವಸ್ತುಗಳ ಅತ್ಯಂತ ರಹಸ್ಯವನ್ನು ಊಹಿಸುವರೋ ಅವರೇ ಮಹನೀಯರು. ಈ ಗುಣಗಳಿಂದಲೇ ಅವರು ಅಷ್ಟು ಹೆಸರುವಾಸಿಗೆ ಬಂದುದು. ನಿಜವಾಗಿಯೂ ಅವನು ಮಹನೀಯನು. ಅವನ ವಿಷಯದಲ್ಲಿ ಒಂದು ಕಥೆಯಿರುವುದು.—

ಧಾರಾನಗರದಲ್ಲಿ ಭೋಜರಾಜನು ರಾಜ್ಯಪರಿಪಾಲನೆ ಮಾಡುತ್ತಿದ್ದಾಗ ಚತುರ್ದಿಕ್ಕುಗಳಿಂದಲೂ ವಿದ್ವಾಂಸರು ಅವನ ಸಭೆಗೆ ನುಗ್ಗುತ್ತಿದ್ದರು. ಅವರಲ್ಲೊಬ್ಬ ಬಣ್ಣಗಾರನಿದ್ದನು. ಅವನಿಗೆ ಯಾರೂ ಎಣೆಯಿಲ್ಲ. ಒಂದು ಪ್ರಾಣಿಯ ಅವಯವದಲ್ಲಿ ಒಂದೆರಡು ಗುರುತುಗಳನ್ನು ಕೊಟ್ಟರೆ ಸಾಕು. ಬೆರಳನ್ನು ತೋರಿಸಿದರೆ ಹಸ್ತವನ್ನೇ ನುಂಗಿದನೆಂಬಂತೆ ಆ ಪ್ರಾಣಿಯ ಪೂರ್ಣರೂಪವನ್ನು ಯಥಾಪ್ರತಿಯಾಗಿ ಬರೆಯತಕ್ಕ ಯೋಗ್ಯತೆಯು ಅವನಿಗಿತ್ತು. ಪ್ರಕೃತ ಭೋಜರಾಜನು ಅವನಿಗೆ ಒಂದು ಹಿಡಿ ಕೂದಲನ್ನು ಕೊಟ್ಟು ಅವನ ಕಲಾಕೌಶಲ್ಯವನ್ನು ಪರೀಕ್ಷಿಸಿದನು. ಬಣ್ಣಗಾರನು ತನ್ನ ಯಾವತ್ತು ಬುದ್ಧಿಶಕ್ತಿ ಸಾಹಸವನ್ನೆಲ್ಲಾ ಅದಕ್ಕೆ ವಿನಿಯೋಗಿಸಿದನು. ಕ್ಷಿಪ್ರದಲ್ಲಿಯೇ ಒಂದು ಪ್ರತಿಬಿಂಬದ ರಚನೆಯಾಯಿತು. ಆ ಪ್ರತಿಬಿಂಬವು ಮಹಾರಾಣಿಯನ್ನು ಬಹು ಚೆನ್ನಾಗಿ ಹೋಲುತ್ತಿತ್ತು. ಸೌಂದರ್ಯವು ವರ್ಣನಾತೀತವಾಗಿತ್ತು. ಆದರೆ ಅವಳ ಬಡನಡುವಿನ ಕೆಳಗೆ ಒಂದು ಸಣ್ಣ ಚುಕ್ಕಿ ಮಾತ್ರ ಅಡಗಿಕೊಂಡಿತ್ತು. ಅದನ್ನು ತೆಗೆದುಬಿಡಬೇಕೆಂದು ಚಿತ್ರಗಾರನು ವಿಶ್ವಪ್ರಯತ್ನ ಮಾಡಿದನು. ಪುನಃ ಪುನಃ ಹೊಸದಾಗಿ ಪ್ರತಿಬಿಂಬಗಳನ್ನು ತಯಾರಿಸಿದನು. ಮತ್ತೆ ಮತ್ತೆ ಅದೇ ಸ್ಥಳದಲ್ಲಿಯೇ ಚುಕ್ಕಿ ಸೇರುತ್ತಬಂತು. ಅವನು ಏನೇ ಮಾಡಲಿ ಆ ಚುಕ್ಕಿ ಬೇರೆ ಅತ್ತಿತ್ತ ಅಲುಗದು. ಇದರಿಂದ ಅವನು ಕೇವಲ ಚಿಂತಾಕ್ರಾಂತನಾಗಿ ಏಕಾಂಗಿಯಾಗಿ ಕುಳಿತಿದ್ದನು. ಏತತ್ಸಮಯದಲ್ಲಿ ಕಾಳಿದಾಸನು ಆ ಮಾರ್ಗವಾಗಿ ಹೋಗುತ್ತ ಅವನ ಸ್ಥಿತಿಯನ್ನು ಕಂಡು "ಏನಯ್ಯಾ, ಏನು ಯೋಚನೆ ಮಾಡುತ್ತಿ? ಬಹು ಬೇಸರಪಟ್ಟಿರುವಂತೆ ಕಾಣುತ್ತೀಯಲ್ಲ; ನಿನ್ನ ಸಂಕಟವನ್ನು ನನಗೆ ಹೇಳು; ನನ್ನ ಕೈಲಾದರೆ ನಿನ್ನ ಯೋಚನೆಯ ಪರಿಹಾರವನ್ನು ಹೇಳುವೆನು" ಎಂದನು.

ಆಗ ಬಣ್ಣಗಾರನು ಅವನ ಕಡೆಗೆ ನೋಡಿ ಪ್ರತಿಬಿಂಬವನ್ನು ತೋರಿಸುತ್ತ "ಅಯ್ಯಾ, ಇದನ್ನು ನೋಡು. ಈ ಚುಕ್ಕಿಯನ್ನು ತೆಗೆದುಬಿಡಬೇಕೆಂದು ನಾನು ಅಸಾಧ್ಯ ಪ್ರಯತ್ನ ಮಾಡುತ್ತಿದ್ದೇನೆ. ಬಾರಿಬಾರಿಗೂ ಅದು ಅದೇ ಸ್ಥಳದಲ್ಲಿಯೇ ತಲೆದೋರುತ್ತಿದೆ. ಅದು ಹೀಗೇಕೆ ಆಗುತ್ತದೋ ಕಾಣೆನು! ಇದಕ್ಕೇನು ಮಾಡಲಿ" ಎಂದನು.

ಕಾಳಿದಾಸನು ಕ್ಷಣಕಾಲ ಅವನನ್ನು ನಿಟ್ಟಿಸಿ ನೋಡಿದನು. "ಮಹಾ ಶಾಂತಚಿತ್ತನೂ, ಸ್ಥಿರಪ್ರಯತ್ನಶಾಲಿಯೂ, ಜಾಣನೂ ಆದ ಆ ಸುಪ್ರಸಿದ್ಧ ಚಿತ್ರಗಾರನು ಹೇಗೆ ತಪ್ಪನ್ನು ಮಾಡಿರಬಹುದು? ಎಂದು ಯೋಚಿಸಿದನು. ಸದಾ ಅದೇ ಯೋಚನೆಯಲ್ಲಿರುವಾಗ "ಅದೊಂದು ಮಚ್ಚೆ ಇರಬಹುದೆ?" ಎಂದು ಮನಸ್ಸಿಗೆ ಹೊಳೆಯಿತು. ಉತ್ತರಕ್ಷಣದಲ್ಲಿಯೇ ಅದೇ ಸರಿಯೆಂದು ನಿಶ್ಚಯಿಸಿದನು. ಆಗ ಅವನು ಚಿತ್ರಗಾರನ ಕಡೆಗೆ ತಿರುಗಿ "ಅದು ಹಾಗೆಯೇ ಇರಲಿ. ಅದು ನಿನ್ನ ಕೈತಪ್ಪಲ್ಲ. ಮೂಲಬಿಂಬದಲ್ಲಿ ಅಲ್ಲೊಂದು ಮಚ್ಚೆ ಇರುತ್ತದೆಂದು ನಾನು ನಂಬುತ್ತೇನೆ" ಎಂದು ಹೇಳಿದನು. ಈ ಸಲಹೆಯು ಚಿತ್ರಗಾರನಿಗೂ ಒಪ್ಪಿತು.

ಕೇವಲ ಶಾಸ್ತ್ರಜ್ಞನಿಗೂ ಮಹನೀಯನಿಗೂ ಇದೇ ಭೇದ. ಶಾಸ್ತ್ರಜ್ಞನಿಗೆ ಶಾಸ್ತ್ರಸಂಕ್ತಿಯಮೇಲೆ ಹೆಚ್ಚು ಗಮನ. ಮಹನೀಯನಿಗೆ ಅದರ ತತ್ವಾರ್ಥವನ್ನು ಕಂಡುಹಿಡಿಯುವುದರ ಮೇಲೆ ಹೆಚ್ಚು ಗಮನ.

ಚಿತ್ರಲೇಖನವು ಪೂರ್ತಿಯಾಯಿತು. ಬಣ್ಣವು ಬಹು ಅಂದವಾಗಿ ಬಿತ್ತು. ಆಮೇಲೆ ಅದು ರಾಜನ ಬಳಿಗೆ ಹೋಯಿತು. ಅದನ್ನು ನೋಡಿ ರಾಜನು ತುಂಬಾ ಹರ್ಷಿತನಾದನು. ಅಷ್ಟು ಯಥಾರ್ಥವಾಗಿ ಚಿತ್ರಿಸಿದ ಚಿತ್ರಕಾರನ ಜಾಣ್ಮೆಯನ್ನು ಮೆಚ್ಚುವುದರಲ್ಲಿ ಅವನು ಕ್ಷಣಕಾಲ ತನ್ನನ್ನು ತಾನೇ ಮರೆತಿದ್ದನೆಂದು ಹೇಳಬಹುದು. ಹೀಗಿರುವಾಗ ಏಕಾಏಕಿ ಅವನ ದೃಷ್ಟಿಯು ಆ ಮಚ್ಚೆಯಮೇಲೆ ಬಿತ್ತು. ರಾಜನು ಬೆರಗಾದನು. ಒಡನೆಯೇ ಮಿತಿಮೀರಿದ ಕೋಪವು ಆವರಿಸಿಕೊಂಡಿತು.

ಆಗ ರಾಜನು "ಎಲೈ ಚಿತ್ರಗಾರನೇ, ನಿಜವನ್ನು ಹೇಳು. ಇಲ್ಲದಿದ್ದರೆ ನಿನ್ನ ಶಿರಚ್ಛೇದ ಮಾಡಿಸುವೆನು. ಈ ಮಚ್ಚೆಯ ವೃತ್ತಾಂತವೇನು? ನಿನಗೆ ಇದು ಹೇಗೆ ತಿಳಿಯಿತು?" ಎಂದು ಕೇಳಿದನು. ಆಗ ಚಿತ್ರಕಾರನು ಭಯಭಕ್ತಿಯಿಂದ ಗಡಗಡ ನಡುಗುತ್ತ ದಿಗ್ಭ್ರಾಂತನಾಗಿ "ಮಹಾಸ್ವಾಮಿ, ಹೇಳಿಕೊಟ್ಟದ್ದು ಹೇಳುವುದಲ್ಲದೆ ಗಿಣಿಗೆ ಅದರ ಅರ್ಥ ಹೇಗೆ ತಿಳಿಯುವದೋ ಹಾಗೆಯೇ ತಾವು ಕೊಟ್ಟ ಕೂದಲಿನ ಸೌಂದರ್ಯಬಲದಿಂದ ಬರೆದಿರುವ ಈ ಚಿತ್ರದಲ್ಲಿರುವ ವಿಶೇಷ ಸಂಗತಿಯ ಜ್ಞಾನವು ನನಗೆ ತಿಳಿಯದು. ಆದರೆ ಇದು ಮಚ್ಚೆಯೆಂಬ ವಿಷಯವನ್ನು ತಮ್ಮ ಆಸ್ಥಾನಕವಿಯಾದ ಕಾಳಿದಾಸನು ಹೇಳಿದನು" ಎಂದುತ್ತರಕೊಟ್ಟನು. ಕಾಳಿದಾಸನೂ ಅಲ್ಲಿಯೇ ಇದ್ದನು. ಆದರೆ ಒಂದು ಮಾತನ್ನೇನೂ ಹೇಳಲಿಲ್ಲ. ಈ ಮಾತನ್ನು ಕೇಳಿ ರಾಜನು ಭಿತ್ತಿಲಿಖಿತ ಪ್ರತಿಮೆಯಂತೆ ನಿಂತನು. ಅವನ ಯೋಚನೆಗೆ ಪಾರವೇ ಕಾಣಲಿಲ್ಲ. ಮಹಾರಾಜ್ಞಿಯ ವಿಷಯದಲ್ಲಿ ಅವನ ನಂಬಿಕೆಯು ಬೇರು ಸಡಿಲಿತು. ತನಗೆ ವಿಶ್ವಾಸಲಾಗಿದ್ದ ರಾಣಿಯ ಪಾತಿವ್ರತ್ಯವನ್ನು ಅಪಹಾರಮಾಡಿದ ಆ ಕವಿಯಮೇಲೆ ತನ್ನ ರೋಷವನ್ನು ತೀರಿಸಿಕೊಳ್ಳಬೇಕೆಂದು ನಿಶ್ಚಯಿಸಿದನು. ಅದರಂತೆ ಅಪ್ಪಣೆಯೂ ಆಯಿತು. ಕಾಳಿದಾಸನನ್ನು ವಧ್ಯಸ್ಥಾನಕ್ಕೆ ಕರೆದುಕೊಂಡುಹೋದುದೂ ಆಯಿತು. ಈ ವಿಷಮ ಸಂದರ್ಭದಲ್ಲಿ ಉದಾರ ಮನಸ್ಸಿನಾದ ಮಂತ್ರಿಯೊಬ್ಬನು ತನ್ನ ಮಂತ್ರಪ್ರಭಾವದಿಂದ ಆ ಕೊಲೆಗೆ ಅಡ್ಡಬಂದು ಕಾಳಿದಾಸನನ್ನು ಒಂದು ಕಡೆ ಅಡಗಿಸಿಬಿಟ್ಟನು. ರಾಜಾಜ್ಞೆಯು ನಡೆದುಹೋಯಿತೆಂದೇ ಕರ್ಣಾಕರ್ಣಿಕೆಯಾಗಿ ಎಲ್ಲಾ ಕಡೆಗೂ ವದಂತಿ ಹರಡಿತು. ಕಾಳಿದಾಸನನ್ನು ಗೋಪ್ಯವಾಗಿ ಇಟ್ಟಿರುವ ಸಂಗತಿ ಭೋಜನಿಗೆ ಗೊತ್ತೇ ಇಲ್ಲ.

ಕಾಲಕ್ರಮದಲ್ಲಿ ರಾಜನ ಮಗನು ಬೇಟೆಗಾಗಿ ಪರಿವಾರದೊಡನೆ ಕಾಡಿಗೆ ಹೋದನು. ಹೋಗುತ್ತ ಹೋಗುತ್ತ ಅವನ ಪರಿವಾರವೆಲ್ಲವೂ ಹಿಂದುಳಿಯಿತು. ಸೂರ್ಯನು ಮುಳುಗುತ್ತಬಂದನು. ಕತ್ತಲೆ ಕವಿಯುತ್ತಬಂತು. ದಟ್ಟಡವಿ ಏನೂ ತೋಚದು. "ಸೋರಲ್ಲೇ ಕೊಳೆ ಅದರ ಮೇಲೆ ಮಳೆ" ಎಂಬಂತೆ ಇವರ ಜೊತೆಗೆ ಅನತಿ ದೂರದಲ್ಲಿಯೇ ಒಂದು ಹೆಬ್ಬುಲಿಯು ಹೊಂಚು ಕಾಯುತ್ತಿತ್ತು. ಅವನ ಕುದುರೆಯೂ ಮುಂದೆ ನಡೆಯದು. ದಿನವೆಲ್ಲವೂ ಸುತ್ತಿಸುತ್ತಿ ಅವನು ಬೇಸತ್ತಿದ್ದನು. ಹುಲಿಯು ಇನ್ನೇನು ಅತಿ ಸಮೀಪಕ್ಕೆ ಬಂತೆಂಬ ಹೊತ್ತಿಗೆ ಹತ್ತಿರವಿದ್ದ ಒಂದು ಮರದ ಕೊಂಬೆಯನ್ನು ಹಿಡಿದುಕೊಂಡು ಮೇಲಕ್ಕೆ ಹತ್ತಿದನು. ಅಯ್ಯೋ ಹಣೆಬರಹವೇ! ಅಲ್ಲೊಂದು ಕರಡಿ ಕಾದಿರಬೇಕೆ! ಅವನ ಭಯವು ನೂರ್ಮಡಿಯಾಯಿತು. ಭೂಮಿಯಲ್ಲಾಗಲಿ ಆಕಾಶದಲ್ಲಾಗಲಿ ಎಲ್ಲಿಯೂ ತನಗೆ ಉಳಿಗಾಲವಿಲ್ಲವೆಂದು ಅವನಿಗೆ ತೋರಿತು. ಪಾಪ, ಆ ಹುಡುಗನು ಏನು ಮಾಡಬಲ್ಲನು? ಅವನು ಅಳುವುದಕ್ಕೆ ಆರಂಭಮಾಡಿದನು. ತನ್ನ ರಕ್ಷಣೆಯ ಭಾರವನ್ನು ಭಗವಂತನಿಗೆ ಒಪ್ಪಿಸಿಬಿಟ್ಟನು. ಆಗ ಕರಡಿಯು ಸಾಧುವಾಗಿ ಸಮೀಪಕ್ಕೆ ಬಂದು ಅವನಿಗೆ ಸಮಾಧಾನವನ್ನು ಹೇಳಿ ಅಭಯವನ್ನು ಕೊಟ್ಟು ಅವನನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡಿತು. ಕೆಳಗಿದ್ದ ಹುಲಿಯು ಮೇಲಿದ್ದ ಕರಡಿಯನ್ನು ಎತ್ತುಗಟ್ಟುವುದಕ್ಕೆ ಮೊದಲು ಮಾಡಿತು. ಮನುಷ್ಯನು ನಮ್ಮಿಬ್ಬರಿಗೂ ಶತ್ರುವಾದುದರಿಂದ ಅವನ ಮೇಲೆ ನೀನು ದಯೆಯನ್ನು ತೋರಿಸಬಾರದೆಂದು ಉಪದೇಶಮಾಡಿತು. ಸಾವಿರಾರು ಬಗೆಯಾಗಿ ಹೇಳಿದರೂ ಕರಡಿಯು ಹುಲಿಯ ಉಪದೇಶಕ್ಕೆ ಮನಗೊಡಲಿಲ್ಲ. ಹುಲಿಯ ಕೂಗೆಲ್ಲಾ ಅರಣ್ಯರೋದನವಾಯಿತು. ಇಷ್ಟರಲ್ಲಿ ಕರಡಿಗೆ ನಿದ್ರೆ ಬಂತು. ಹುಡುಗನು ಎಚ್ಚತ್ತುನೋಡಿದಾಗ ಆ ಕರಡಿ ಗೊರಕೆ ಹೊಡೆಯುತ್ತಿತ್ತು. ಹುಲಿಯಾದರೂ ಕ ಕಾದುಕೊಂಡೇ ಇತ್ತು. ಈಗ ಹುಲಿಯು ಹುಡುಗನ್ನು ಮರುಳುಮಾಡುವ ಉಪಾಯವನ್ನು ನಡೆಸಿತು. ವಿನ ಕಾಲದಲ್ಲಿ ಸರ್ವರೂ ಕ್ಷೀಣಬುದ್ಧಿಯುಳ್ಳವರಾ ವಂತೆ ಈ ಹುಡುಗನಿಗೆ ದುರ್ಬುದ್ಧಿ ಹುಟ್ಟಿತು. ಹುಡು ಗನು ಹುಲಿಯ ವಾಕ್ಶಲ್ಯಕ್ಕೆ ಮರುಳಾಗಿ ಯುಕ್ತಾಯುಕ್ತವಂ ವಿಚಾರಮಾಡದೆ ತನಗೆ ಪ್ರಾಣದಾನಮಾಡಿ ಕರಡಿಯ ಔದಾರ್ಯವನ್ನು ಮರೆತು ತಾನು ಹೇಗಾದ ತಪ್ಪಿಸಿಕೊಂಡು ಹೋಗಬೇಕೆಂಬ ಯೋಚನೆಯಿಂದ ಹ ಯು ಕರಡಿಯನ್ನೆತ್ತಿಕೊಂಡು ಮೂರಕ್ಕೆ ಹೋಗಲೆಂ ಅದನ್ನು ಕೆಳಕ್ಕೆ ಬೀಳಿಸಲು ಮನಸ್ಸು ಮಾಡಿದನ ಕೃತಘ್ನತನ! ಅವನು ಹಾಗೆ ಮಾಡುವುದರೊಳಗಾ ಕರಡಿಯು ಎಚ್ಚೆತ್ತು ರೋಷಾವೇಶದಿಂದ ಆ ಕೃತಘ್ನ ನಾಲಿಗೆಯನ್ನು ಹಿರಿದು "ಸಸೇಮಿರಾ" ಎಂಬ ನಾ ಅಕ್ಷರಗಳನ್ನು ಬರೆದು ಅದೃಶ್ಯವಾಯಿತು. ಒಡನೆಯೆ ಆ ರಾಜಕುಮಾರನು ಮೂಕನಾದನು. ಆಮೇಲೆ ಯಾ ಮಾತು ಕೇಳಿದರೂ "ಸಸೇಮಿರಾ" ಎಂಬುದೊಂದಲ್ಲ ಬೇರೆ ಯಾವ ಉತ್ತರವೂ ಅವನಿಂದ ಬರುತ್ತಿರಲಿ ಅನುಚಿತಪ್ರವೃತ್ತರಾದವರಿಗೆ ತಕ್ಕ ಪ್ರಾಯಶ್ಚಿತ್ತವಾ ವದು ಸೃಷ್ಟಿಯ ನಿಯಮವೇ ಆಗಿರುವದು.

ಎಲೈ ಹೀನಜಾತಿಯ ಹುಡುಗನೇ, ಸ್ವಹಿತ ಪರಹಿ ವಿಚಾರರಹಿತನಾಗಿ ಎಂತಹ ದುರಾಲೋಚನೆ ಮಾಡಿದ ಮಹಾತ್ಮರ ವಂಶದಲ್ಲಿ ಹುಟ್ಟಿರುವೆ. ಒಳ್ಳೆಯ ಪದ ಯನ್ನು ಹೊಂದಿರುವೆ. ಲಕ್ಷಾಂತರ ಪ್ರಜೆಗಳಿಗೆ ರಕ್ಷ ನಾದ ನೀನು ಆತ್ಮಾಭಿಮಾನವನ್ನು ತೊರೆದು ಎಷ್ಟ ಪ್ರಾಕೃತನಂತೆ ಇಂತಹ ಅನಿಷ್ಟ ಚಿಂತನೆಯನ್ನು ಮಾ ದೆಯಾ! ಭಗವಂತನಿಗೆ ನೀನು ರಾಜಕುಮಾರನೆಂ ಹೆಚ್ಚಿಲ್ಲ. ಈ ಕಾಡು ಮೃಗಗಳೆಂದು ಕಡಿಮೆಯಲ್ಲ ನಿನಗೆ ಪ್ರಾಣದಾನಮಾಡಿದ ಕರಡಿಯು ಕಾಡು ಕ ಇದೆಯೋ? ಜಗತ್ತಿನಲ್ಲಿ ಮಿತ್ರತ್ವವು ಸುವರ್ಣದೋಪಾ ಪಕ್ಷಿ ನಾನಾ ಭೇದವಾಗಿರುವದು. ಅದು ಇಷ್ಟೇ ಬಣ್ಣ ಪ್ಪದೇನು. ತಿಳಿಯುವುದಕ್ಕೆ ಪರೋಕ್ಷವೇಬ ಒಂದ ಜಗದಲ್ಲಿರುವದು 'ಯಾವತ್ಕರ್ಮ ತಾವತ್ಫಲಂ' ಎಂಬಂತೆ ಈಗ ನಿನ್ನ ದ್ರೋಹಬುದ್ಧಿಗೆ ತಕ್ಕ ಫಲವನ್ನು ಅನುಭವಿಸು.

ಮರುದಿನ ಬೆಳಗಾಯಿತು. ಅವನ ಪರಿವಾರದವ ಅವನನ್ನು ಹುಡುಕಿಕೊಂಡು ಬಂದರು. ಹಿಂದಿ ರಾತ್ರಿಯ ವೃತ್ತಾಂತವನ್ನು ಹೇಳುವುದಕ್ಕೆ ಅಲ್ಲಿ ಹುಲಿಯೂ ಇಲ್ಲ. ಕರಡಿಯೂ ಇಲ್ಲ. ರಾಜಕುಮಾ ನಿಗೆ ಮಾತೇ ಬರದು. ಅವರು ಎಷ್ಟೋ ಬ ಯಾಗಿ ಮಾತನಾಡಿಸಿದರು. "ಸಸೇಮಿರಾ" ಎಂಬ ದೊಂದೇ ಅವನ ಉತ್ತರವು. ಅತ್ಯಂತ ಭಯಾಶ್ಚ ಗಳಿಂದ ಅವರು ಅವನನ್ನು ರಾಜವಾಡೆಗೆ ಕರೆದೊಯ್ದರು. ಮಗನ ಈ ದುರವಸ್ಥೆಯನ್ನು ನೋಡಿ ತಂದೆಗೆ ದಿಕ್ಕು ತೋಚದಾಯಿತು. ಈ ಕೊರತೆಯಿಂದಲೇ ರಾಜನು ಕ್ಷೀಣವಾಗುತ್ತ ಬಂದನು. ಜ್ವರ ಬಂದವನಿಗೆ ದೋಷಸಾಂಕರ್ಯವೂ ಸನ್ನಿಪಾತವೂ ಅಪಥ್ಯ ಸೇವನೆಯೂ ಉಂಟಾದರೆ ಮಹೌಷಧಿಗಳಿಂದಾದರೂ ಆ ವ್ಯಾಧಿಯು ಅಸಾಧ್ಯವಾಗುವಂತೆ ಮಿತ್ರ ದ್ರೋಹ-ಕೃತಘ್ನತೆ ವಿಶ್ವಾಸಘಾತುಕತನ ಈ ತ್ರಿದೋಷಗಳಿಂದುಂಟಾದ ಆ ರೋಗದ ಚಿಕಿತ್ಸೆಯು ಅವನ ಲಕ್ಷಾಂತರ ಪ್ರಜೆಗಳಲ್ಲೊಬ್ಬರಿಗೂ ತಿಳಿಯದೆ ಅಸಾಧ್ಯವಾಯಿತು. ರಾಜನು ಬಹು ದುಃಖಕ್ಕೀಡಾದನು.

ಭೋಜನ ಪ್ರೇಮಪಾತ್ರನಾದ ಆ ಮಂತ್ರಿಯು ಕಾಳಿದಾಸನೇ ಇದಕ್ಕೆ ತಕ್ಕ ವೈದ್ಯನೆಂದು ನಿಶ್ಚಯಿಸಿದನು. ಆ ರೋಗವನ್ನು ಗುಣಪಡಿಸುವುದಕ್ಕೆ ಕಾಳಿದಾಸನು ಒಪ್ಪಿದನು. ಒಬ್ಬಾನೊಬ್ಬ ಸ್ತ್ರೀಯಳು ಬಂದಿರುವಳೆಂದೂ ಅವಳು ರಾಜಪುತ್ರನ ರೋಗವನ್ನು ಗುಣಪಡಿಸಬಲ್ಲ ಳೆಂದೂ ಗತಾನುಗತಿಕವಾಗಿ ನಗರದಲ್ಲೆಲ್ಲಾ ವದಂತಿ ಹರಡಿತು. ಈ ವದಂತಿಯು ರಾಜನಿಗೂ ತಿಳಿದು ಚಿಕಿತ್ಸೆಯನ್ನು ಮಾಡಿಸಲು ಒಪ್ಪಿದನು. ಚಿಕಿತ್ಸಾಲಯದಲ್ಲಿ ಒಂದು ಪರದೆಯು ಏರ್ಪಾಡಾಯಿತು. ಅದರ ಒಂದು ಪಾರ್ಶ್ವದಲ್ಲಿ ರಾಜ ಮತ್ತು ರಾಜಪುತ್ರ, ಇನ್ನೊಂದು ಪಾರ್ಶ್ವದಲ್ಲಿ ಸ್ತ್ರೀ. "ನಿನಗೆ ಈ ದುರವಸ್ಥೆಯು ಹೇ

ತ್ರವಾಯಿತು?" ಎಂದು ಸ್ತ್ರೀಯು ಕೇಳಿದಳು. ಕ್ಕೆ ಉತ್ತರವು ಎಂದಿನಂತೆ "ಸಸೇಮಿರಾ" ಸ್ವಲ್ಪ ದ ನಂತರ ಆಕೆಯು ಸಸೇಮಿರಾ ಎಂಬ ಶಬ್ದದ ದಲನೆಯ ಅಕ್ಷರವಾದ "ಸ" ಎಂಬುದು ಆದಿಯಲ್ಲಿ ಒಂದು ಶ್ಲೋಕವನ್ನು ಹೇಳಿದಳು.

ದ್ಭಾವಂ ಪ್ರತಿಪನ್ನಾನಾಂ ವಂಚನೇ ಕಿಂ ವಿದಗ್ಧತಾ ।
ಅಂಕಮಾರುಹ್ಯಸುಪ್ತಾನಾಂ ಹನನೇ ಕಿನ್ನುಪೌರುಷಂ ॥

ಲ್ಲಿ ಗೆಳೆತನದಿಂದಿರುವವರನ್ನು ಮೋಸಮಾಡು ವು ಯಾವ ಜಾಣತನ! ನಮ್ಮ ತೊಡೆಯ ಮೇಲೆ ಗಿ ನಿದ್ರಿಸುತ್ತಿರುವವರನ್ನು ಕೊಲ್ಲುವದೊಂದು ರುಷವೇ?

ಈ ಶ್ಲೋಕವು ರಾಜಪುತ್ರನ ಮೇಲೆ ಕಾರ್ಯಕಾರಿ ಯಾಯಿತು. ಇದರಿಂದ ಅವನು ಪಶ್ಚಾತ್ತಾಪ ಪಟ್ಟು ಳ್ಳುವುದಕ್ಕೆ ಅವಕಾಶವಾಯಿತು. ಹುಡುಗನು ಅ ತನ್ನೊಪ್ಪಿಕೊಂಡನು. ಇದರಿಂದ ಅವನ ತಪ್ಪಿತದಲ್ಲಿ ದು ಭಾಗ ಕಡಿಮೆಯಾಯಿತು. ಆಮೇಲೆ "ಸ" ಪ್ಪಿಹೋಯಿತು.

ತರುವಾಯ "ಸೇಮಿರಾ" ಎಂಬ ಶಬ್ದದ ಮೊದ ಕ್ಷರವಾದ "ಸೇ" ಎಂಬುದನ್ನಾದಿಯಲ್ಲುಳ್ಳ ಶ್ಲೋಕ ಂದು ಹೊರಟಿತು.

ಸೇತುಂದೃಷ್ಟ್ವಾ ಸಮುದ್ರಸ್ಯ ಗಂಗಾಸಾಗರಸಂಗಮಂ ।
ಬ್ರಹ್ಮಹತ್ಯಾತ್ಪ್ರಮುಚ್ಯೇತ ಮಿತ್ರದ್ರೋಹೀ ನಮುಚ್ಯತೇ ॥

ಸೇತುವನ್ನಾಗಲಿ ಗಂಗಾ ನದಿಯು ಸಾಗರಕ್ಕೆ ಸೇರುವ ವನ್ನಾಗಲಿ ದರ್ಶನಮಾಡಿದರೆ ಬ್ರಹ್ಮಹತ್ಯ ೋಷವೂ ಸಹ ಹೋಗುತ್ತದೆ. ಮಿತ್ರದ್ರೋಹ ಮಾತ್ರ ೋಗುವದಿಲ್ಲವು.

ಆಗ ಹುಡುಗನು "ಮಿರಾ" ಎಂದು ಕೂಗಿದನು. ಮಿ" ಎಂಬಕ್ಷರದಿಂದಾದಿಯಾದ ಮತ್ತೊಂದು ್ಲೋಕವು ಹೊರಟಿತು.

ಮಿತ್ರದ್ರೋಹೀ ಕೃತಘ್ನಶ್ಚ ಯಶ್ಚ ವಿಶ್ವಾಸಘಾತಕಃ ।
ತ್ರಯಸ್ತೇ ನರಕಂಯಾಂತಿ ಯಾವಚ್ಚಂದ್ರದಿವಾಕರೌ ॥

ಹಿತರಿಗೆ ದ್ರೋಹಮಾಡುವದು, ಉಪಕಾರವನ್ನು ರೆಯುವದು, ಉಂಡಮನೆಗೆರಡೆಣಿಸುವದು, ಈ ಗುಣ ಳುಳ್ಳವರು ಸೂರ್ಯಚಂದ್ರರಿರುವವರೆಗೆ ನರಕದಲ್ಲಿ ವಾಸ ಮಾಡುವರು. ಇನ್ನು "ರಾ" ಒಂದುಳಿಯಿತು. ಆದಕ್ಕ ನುಗುಣವಾದ ಶ್ಲೋಕವು ಹೊರಟಿತು.

ರಾಜನ್ ಭೋ ತವ ಪುತ್ರಸ್ಯ ಯದಿ ಕಲ್ಯಾಣಮಿಚ್ಛಸಿ ।
ದಾನಂ ದೇಹಿ ದ್ವಿಜಾತಿಭ್ಯೋ ವರ್ಣಾನಾಂ ಬ್ರಾಹ್ಮಣೋ ಗುರುಃ ॥

ೇ, ರಾಜೇಂದ್ರಾ! ನಿನ್ನ ಮಗನ ಶ್ರೇಯಶ್ಚಿಂತನ ಮಾಡುವದಾದರೆ ಈ ಪಾಪಕ್ಷಾಲನಕ್ಕಾಗಿ ಬ್ರಾಹ್ಮಣರಿಗೆ ದಾನಮಾಡು. ಏಕೆಂದರೆ, ಅವರು ಇತರರಿಗೆ ಉಪ ದೇಶಕರು.

ಇಲ್ಲಿಗೆ ಚಿಕಿತ್ಸೆಯು ಮುಗಿಯಿತು. ಸೂರ್ಯೋದಯ ವಾದೊಡನೆ ಅಂಧಕಾರವು ಅಡಗುವಂತೆ ರಾಜಕುಮಾರನ ಮೂಕತನವು ಅದೃಶ್ಯವಾಯಿತು. ಆಗ ರಾಜನು ತುಂಬಾ ಹರ್ಷಿತನಾಗಿ ತನ್ನ ಮಗನ ಮುಖದಿಂದ ಕಾಡಿ ನಲ್ಲಿ ನಡೆದ ವೃತ್ತಾಂತವನ್ನೆಲ್ಲಾ ತಿಳಿದನು. ಈ ರಹಸ್ಯ ವೆಲ್ಲಾ ಆಕೆಗೆ ಹೇಗೆ ತಿಳಿದಿರಬಹುದೆಂದು ಅರಸನು ಬಹು ಆಶ್ಚರ್ಯಾನ್ವಿತನಾಗಿ ಆಕೆಯನ್ನೇ ಕೇಳಿದನು. ಆಗ "ನಾನು ರಾಣಿಯ ಅಂಗದಲ್ಲಿದ್ದ ಮಚ್ಚೆಯನ್ನು ಹೇಗೆ ಕಂಡೆನೋ ಹಾಗೆಯೇ ಇದನ್ನೂ ಕಂಡೆನು" ಎಂದು ಉತ್ತರ ಬಂದಿತು. ಅಂತಹ ಉತ್ತರವನ್ನು ಕೊಟ್ಟವನು ಕಾಳಿ ದಾಸನೇ ಎಂದು ನಿಶ್ಚಯಿಸಿ ರಾಜನು ಅತ್ಯಂತ ಸಂತೋಷಭರಿತನಾದನು; ಮತ್ತು ತಾನು ಅವಿಚಾರಿ ಯಾಗಿ ಅವಿವೇಕವಾದ ಅನುಜ್ಞೆಯನ್ನು ಕೊಟ್ಟಿದ್ದಕ್ಕಾಗಿ ಬಹು ಪಶ್ಚಾತ್ತಾಪಪಟ್ಟು ತನ್ನಪ್ರಿಯ ಮಿತ್ರನೂ ಪಂಡಿತ ರತ್ನನೂ ಆದ ಕಾಳಿದಾಸನ ಊಹಾಶಕ್ತಿಯನ್ನು ಬಾರಿ ಬಾರಿಗೂ ಕೊಂಡಾಡುತ್ತ ಬ್ರಹ್ಮತತ್ವದಂತೆ ಪುರುಷ ಷ್ಟಗುಣಗಳನ್ನು ತಿಳಿಯುವದಶಕ್ಯವೆಂದು ಹೇಳಿದನು.

ಪ್ರಿಯ ವಾಚಕರೇ—ಮಿತ್ರದ್ರೋಹ, ವಿಶ್ವಾಸ ಘಾತಕತನ, ಕೃತಘ್ನತೆ, ಗುಣಗಳುಳ್ಳವರು ತಮ್ಮ ದುರ್ಗುಣಗಳನ್ನು ಬಿಟ್ಟು ಸರಳ ಹೃದಯವುಳ್ಳವರಾಗಿ ಸನ್ಮಾರ್ಗದಿಂದ ನಡೆದು ಇಹದಲ್ಲಿ ಕೀರ್ತಿಯನ್ನೂ ಪರದಲ್ಲಿ ಗತಿಯನ್ನೂ ಹೊಂದಲೆಂಬುದೇ ಈ ಲೇಖನದ ಮುಖ್ಯೋದ್ದೇಶವಾಗಿರುವದು.

ಸರ್ವೇ ಸನ್ಮಾರ್ಗಿಣೋ ಭವಂತು.

ಶ್ರೀ ಗುರುಭ್ಯೋನಮಃ

ದುರ್ಜನರ ಲಕ್ಷಣಗಳು, ಹಾಗೂ ಅವರಿಂದಾಗ ತಕ್ಕ ಕೆಡಕುಗಳು

ಲೇ—ಶ್ರೀ ಪಟ್ಟದ ಸ್ವಾಮಿಗಳು ಹಿರೇಮಠ, ಕೊಣ್ಣೂರು.

ನೀರಿನ ಸ್ವಭಾವವು ಯಾವಾಗಲೂ, ಹಳ್ಳವಿದ್ದ ಕಡೆಗೆ ಹರಿಯುವಂತೆ, ದುಷ್ಟರ ಸ್ವಭಾವವಾದರೂ ಯಾವಾಗಲೂ, ಕೆಟ್ಟಕಾರ್ಯದಕಡೆಗೆ ಹರಿಯುತ್ತದೆ. ಕಳ್ಳತನ ಮಾಡುವುದು, ಮನುಷ್ಯನನ್ನು ಕೊಲ್ಲುವುದು, ವಿಷಹಾಕುವುದು, ಪರಸ್ತ್ರೀಯರನ್ನು ಕೆಡಿಸುವುದು, ಮೋಸಮಾಡಿ ಎರಡನೆಯವರ ಹೊಲ-ಮನೆಗಳನ್ನು ಎತ್ತಿಹಾಕುವುದು, ಖೊಟ್ಟಿಕಾಗದ ಮಾಡುವುದು, ಸುಳ್ಳುಸಾಕ್ಷಿಹೇಳುವುದು, ಮನೆ-ಬಣವಿ ಮೊದಲಾದವುಗಳಿಗೆ ಬೆಂಕಿಯನ್ನು ಹಚ್ಚುವುದು, ಸುಮ್ಮಸುಮ್ಮನೆ ಜಗಳ ಮಾಡುವುದು, ಇವೇ ಮೊದಲಾದ ಕಾರ್ಯಗಳನ್ನು ಮಾಡುವುದೇ ಅವರ ಸ್ವಭಾವವಾಗಿದೆ. ದುಷ್ಟಮನುಷ್ಯನು ಕಾಗೆ, ಮಂಗ, ಹಂದಿ ಇವುಗಳನ್ನು ಹೋಲುತ್ತಾನೆ. ಯಾಕೆಂದರೆ ಇವುಗಳ ಗುಣವೂ, ದುಷ್ಟಮನುಷ್ಯನ ಗುಣವೂ, ಒಂದೇ ಆಗಿದೆ. ಹೇಗೆಂದರೆ—ಕಾಗೆಯನ್ನು ಒಂದು ತೋಟದೊಳಗೆ ಬಿಟ್ಟರೆ, ಆ ತೋಟದಲ್ಲಿ ಅಮೃತಕ್ಕೆ ಸಮಾನವಾದ ಬೇಕಾದಷ್ಟು ಬೇರೆ ಬೇರೆ ಜಾತಿಯ ಹಣ್ಣುಗಳಿದ್ದರೂ, ಅವುಗಳನ್ನು ಹುಡುಕದೆ ಬೇವಿನ ಹಣ್ಣನ್ನೇ ಹುಡುಕುತ್ತದೆ. ಅದರಂತೆ ದುಷ್ಟರಾದರೂ, ಸತ್ಪುರುಷರಲ್ಲಿ ಬೇಕಾದಷ್ಟು ಸದ್ಗುಣಗಳಿದ್ದರೂ, ಅವುಗಳನ್ನೊಂದನ್ನೂ ತೆಗೆದುಕೊಳ್ಳದೆ, ದುಷ್ಟಗುಣಗಳನ್ನೇ ಹುಡುಕುತ್ತಾರೆ. ಆದ್ದರಿಂದ ದುರ್ಜನರು ಕಾಗೆಯನ್ನು ಹೋಲುತ್ತಾರೆ. ಇನ್ನು ಮಂಗನನ್ನು ತೆಗೆದುಕೊಳ್ಳೋಣ! ಮಂಗನ ಕೊರಳಿಗೆ ಅಲಂಕಾರಕ್ಕಾಗಿ ಹೂವಿನ ಮಾಲೆಯನ್ನು ಹಾಕಿದರೆ ಅದು ಶೃಂಗಾರಕ್ಕಾಗಿ ಹಾಕಿರುವರೆಂದು ತಿಳಿಯುವದೇನು? ಇಲ್ಲ. ಕೂಡಲೆ ಅದನ್ನು ಕಾಲಿಗೆಹಾಕಿ ಹರಿದುಬಿಡುವುದು. ಹೂವು, ಸೂಜಿ, ದಾರ ಇವುಗಳನ್ನು ಆ ಮಂಗನ ಕೈಯಲ್ಲಿ ಕೊಟ್ಟರೆ, ಸರವನ್ನುಮಾಡಿ ಹಾಕಿಕೊಳ್ಳುವದುಂಟೆ? ಇಲ್ಲ. ಅದರಂತೆಯೇ ದುಷ್ಟರು ಸತ್ಪುರುಷರುಮಾಡುವ ಸತ್ಕಾರ್ಯಗಳನ್ನು ನಿಂದಿಸುವುದಕ್ಕಷ್ಟೇ ಬಲ್ಲರಲ್ಲದೆ, ಸತ್ಪುರುಷರು ಮಾಡಿದಂತೆ ಸತ್ಕಾರ್ಯಗಳನ್ನು ಮಾಡಿ, ಸ್ಥಿರವಾದ ಕೀರ್ತಿಯನ್ನು ಎಂದೂ ಪಡೆಯಲಾರರು. ಆದ್ದರಿಂದ ದುರ್ಜನರು ಮಂಗನನ್ನು ಹೋಲುತ್ತಾರೆ. ಇನ್ನು ಹಂದಿಯಬಗ್ಗೆ ವಿಚಾರಿಸುವಾ! ಹಂದಿಗೆ ಬೇಕಾದಷ್ಟು ಮೃಷ್ಟಾನ್ನವನ್ನು ಹಾಕಿದರೂ, ಅದನ್ನು ಇಚ್ಛಿಸದೆ ಅನ್ನದ ನಿಸ್ಸಾರವಾದ ಮಲವನ್ನು ಇಚ್ಛಿಸಿ ಹೇಗೆ ಭುಂಜಿಸುತ್ತದೆಯೋ, ಅದರಂತೆಯೇ ದುಷ್ಟರಿಗೆ ಸತ್ಪುರುಷರು ಶ್ರಮಪಟ್ಟು ಬೇಕಾದಷ್ಟು ಸದ್ಬೋಧೆಯನ್ನು ಮಾಡಿದರೂ, ಅವುಗಳನ್ನು ಬಿಟ್ಟು ದುಷ್ಟಗುಣಗಳನ್ನೇ ಹಿಡಿಯುತ್ತಾರೆ. ಆದ್ದರಿಂದ ದುಷ್ಟರು ಹಂದಿಯನ್ನು ಹೋಲುತ್ತಾರೆಂದು ಜ್ಞಾನಿಗಳು ಹೇಳುತ್ತಾರೆ.

ದುರ್ಜನನಿಗೆ ಕೆಲವು ಕೃತಿಗಳಿಂದ ಲಾಭವಾದರೂ, ಅದರಿಂದ ತುರ್ತ ಸುಖ ಸಿಗುವುದಲ್ಲದೆ ನಿರಂತರ ಸುಖವು ಮಾತ್ರ ಎಂದೂ ಸಿಗಲಾರದು. ಮುಂದೆ ತುರ್ತ ಸುಖದ ಹತ್ತುಪಟ್ಟು ಕಷ್ಟವನ್ನನುಭವಿಸಬೇಕಾಗುತ್ತದೆ ಇದರಿಂದ ಜನರು ಕುಪಿತರಾಗಿ ಇವನ ದುಷ್ಟಗುಣಗಳನ್ನು ನಾಶಮಾಡಲಿಕ್ಕೆ ಪ್ರಯತ್ನಮಾಡುವರಲ್ಲದೆ, ದೇವರಿಗೂ ಸಹ ಇವನನ್ನು ನಾಶಮಾಡಬೇಕೆಂದು ಬೇಡಿಕೊಳ್ಳುವರು. ದೇವರಾದರೂ ಅವರ ದುಷ್ಟಗುಣಕ್ಕೆ ಸಿಟ್ಟಾಗಿ, ತಕ್ಕ ಪ್ರಾಯಶ್ಚಿತ್ತವನ್ನು ಮಾಡೇತೀರುವನು. ಲೋಕದಲ್ಲಿ ರಾಜಾಜ್ಞೆಯನ್ನು ಮೀರುವವರು, ಶಿಕ್ಷೆಗೂ, ದಂಡಕ್ಕೂ ಪಾತ್ರರಾಗುವರು. ಇನ್ನುಕೆಲವು ಊರುಗಳಲ್ಲಿ ಅಲ್ಲಿಯ ಪ್ರಮುಖರು ದುಷ್ಟಜನರಿಗೆ ಸಹಾಯಮಾಡಿ, ಅವರನ್ನು ಬಿಡುಗಡೆಮಾಡಿಕೊಂಡು ಬರುತ್ತಾರೆ. ಹೀಗೆ ಮಾಡುವುದರಿಂದ ಮತ್ತಷ್ಟು ಅವರಿಗೆ ಉತ್ತೇಜನ ಕೊಟ್ಟಂತಾಗುವುದಲ್ಲದೆ, ಅವರು ಮತ್ತಷ್ಟು ದುಷ್ಕಾರ್ಯವನ್ನು ಹೆಚ್ಚುಮಾಡುತ್ತಾರೆ. ಒಂದೊಂದು ಊರಲ್ಲಿ ದರೋಡಿ ಖೂನಿ ಮಾಡಿದ ಜನರು ಬಿಡುಗಡೆಯಾಗಿ ಬರುವುದಕ್ಕೆ, ಅವರ ಹಿಂದಿನಪುಣ್ಯವೇ ಅವರಿಗೆ ಸಹಾಯಮಾಡಿದೆ ಎಂದು ತಿಳಿಯಬೇಕು. ಈ ಲೋಕದಲ್ಲಿ ಅವರು ಬಿಡುಗಡೆ ಹೊಂದಿದರೂ ಪರಲೋಕದಲ್ಲಿ ಪರಮಾತ್ಮನು ಅವರನ್ನು ನಿಶ್ಚಯವಾಗಿ ಶಿಕ್ಷಿಸುವನು.

ದುಷ್ಟಜನರಿಗೆ ಉಪಕಾರ ಮಾಡಬಾರದು. ಮಾಡಿದರೆ ಅವರಿಗೇ ಕೇಡು ಬಯಸುತ್ತಾರೆ. ಇದೇ ಅಭಿಪ್ರಾಯವನ್ನು ಒಬ್ಬ ನೀತಿಕಾರನು ಹೀಗೆ ಹೇಳಿರುತ್ತಾನೆ.

ಬಿಸಲೊಳಗೆ ಬಿದ್ದ ಮೊಸಳೆಯು ।
ನಸುವಳಿಯದ ಹಾಗೆ ತಂದು ನೀರೊಳ್ ಬಿಡಲು ॥
ಮೊಸಳೆ ಮರಳವನ ನುಂಗಿತು ।
ಪಿಸುಣಂಗುಪಕಾರ ಮಾಡೆ ತಪ್ಪದು ಕೇಡು ॥೧॥

ಸತ್ಪುರುಷರು ಸತ್ತರೆ ಜಗತ್ತೆಲ್ಲ ಮರುಗುವದು. 'ದುಷ್ಟ ಜನರು ಸತ್ತರೆ ಜಗತ್ತಿಗೆಲ್ಲಾ ಹಿತವಾಯಿತೆನ್ನುವರು. ಇದನ್ನೇ ಸರ್ವಜ್ಞ ಕವಿಯು ಸ್ಪಷ್ಟಪಡಿಸಿದ್ದಾನೆ.

ಸಜ್ಜನನು ಸತ್ತರೆ ದುರ್ಜನರು ಮರುಗುವರು ।
ದುರ್ಜನನು ಸತ್ತುಹೋದರೆ ತನ್ನ ಮೈ ।
ಲಜ್ಜೆ ಹೋದಂತೆ ಸರ್ವಜ್ಞ ॥

ಕೆಟ್ಟ ಜನರನ್ನು ಕಾಪಾಡಬಾರದು ಇದರ ಬಗ್ಗೆ ಒಂದು ಇತಿಹಾಸವುಂಟು. ಒಂದು ದಿನ ಒಬ್ಬ ಮನುಷ್ಯನು ಬೇರೂರಿಗೆ ಹೋಗಿ ತಿರುಗಿ ಮನೆಗೆ ಬರುವಾಗ, ಅಡವಿಯೊಳಗೆ ಒಂದು ಮರದ ಕೆಳಗೆ ಒಂದು ಹುಲಿ ಮರಿಯು ಮಲಗಿತ್ತು. ಅದನ್ನು ಅವನು ತನ್ನ ಮನೆಗೆ ತಂದು, ಅದಕ್ಕೆ ದಿನಾಲು ಹಾಲು ರೊಟ್ಟಿ ಹಾಕಿ ಸಾಕಿದನು. ಮುಂದೆ ಅದು ದೊಡ್ಡದಾದ ಮೇಲೆ ತನ್ನನ್ನು ಸಾಕಿದವನನ್ನೇ ತಿನ್ನಬೇಕೆಂದು ಹವಣಿಸ ಹತ್ತಿತು. ಆದ್ದರಿಂದ ಅವನು ಅದನ್ನು ಅಡವಿಗೆ ಒಯ್ದು ಬಿಟ್ಟುಬಿಡಬೇಕೆಂದು ನಿಶ್ಚಯಿಸಿ, ಅದರ ಸರಪಳಿಯನ್ನು ಬಿಚ್ಚಹೋದನು. ಆಗ ಆ ಹುಲಿಯು ಅವನ ಮೈಮೇಲೆ ಹಾರಿ ಉಗುರುಗಳಿಂದ ಅವನಿಗೆ ಗಾಯಮಾಡಿತು. ಈ ಮೇರೆಗೆ ಕೆಟ್ಟವರನ್ನು ಮನೆಯಲ್ಲಿ ಸೇರಗೊಟ್ಟರೆ, ತಪ್ಪದೆ ಕೇಡುಬರುವದು.

ದುಷ್ಟರು ವಿದ್ವಾಂಸರಾಗಿದ್ದರೂ ಮೇಲಕ್ಕೆ ಏರಲಾರರು. ಅವರಿಗೆ ಮನ್ನಣೆಯು ಸಿಗಲಾರದು. ಇದಕ್ಕೊಂದು ದೃಷ್ಟಾಂತವಿದೆ.

ದುಷ್ಟನಾದ ಒಬ್ಬ ವಿದ್ವಾಂಸನು ಒಬ್ಬ ಅರಸನ ಬಳಿಗೆ ಹೋಗಿ, ತನ್ನ ಪಾಂಡಿತ್ಯವನ್ನು ತೋರಿಸಿದನು. ಅರಸನು ಆತನ ವಿದ್ಯೆಗೂ ಬುದ್ಧಿಗೂ ಮೆಚ್ಚಿ, ಅವನಿಗೆ ಅರಮನೆಯ ಉದ್ಯೋಗವನ್ನು ಕೊಡಬೇಕೆಂದು ಮಾಡಿದನು. ಅದನ್ನು ತಿಳಿದು ಪ್ರಧಾನನು ಅರಸನ ಬಳಿಗೆ ಬಂದು—ಒಡೆಯರೇ, ಇವನು ವಿದ್ವಾಂಸನಾದಾಗ್ಯೂ ಬಹು ದುಷ್ಟನಿದ್ದಾನೆ. ಇಂಥವರಿಂದ ಬಹಳ ಕೇಡುಗಳು ಆಗುವವು. ಇವನನ್ನು ಅರಮನೆಯಲ್ಲಿ ಸೇರಿಸಬಾರದು. ಹಾವಿನ ಹೆಡೆಯಲ್ಲಿ ರತ್ನವಿದ್ದಾಗ್ಯೂ ಅದರ ಸಮೀಪಕ್ಕೆ ಯಾರೂ ಹೋಗಲಾರರಷ್ಟೆ! ಎಂದು ಹೇಳಿದನು.

ಹಾವಿನ ದಂತದಲ್ಲಿಯೂ, ಚೇಳಿನ ಕೊಂಡಿಯಲ್ಲಿಯೂ, ನೊಣದ ಶಿರದಲ್ಲಿಯೂ ಮಾತ್ರ ವಿಷವುಂಟು. ಆದರೆ ದುರ್ಜನನಿಗೆ ಸರ್ವಾಂಗವೆಲ್ಲ ವ್ಯಾಪಿಸಿರುವದು. ಆದ್ದರಿಂದ ಆ ವಿಷಪ್ರಾಣಿಗಳಿಗಿಂತಲೂ ದುರ್ಜನನು ಹೆಚ್ಚಿನ ವಿಷಪ್ರಾಣಿಯೆಂದು ಸ್ಪಷ್ಟವಾಗುವದು. ದುಷ್ಟ ಪ್ರಾಣಿಗಳ ಸಂಸರ್ಗದಿಂದ ದೂರರಾಗಿ, ಅದನ್ನು ಕೊಲ್ಲಲಿಕ್ಕೆ ಹೇಗೆ ಪ್ರಯತ್ನಮಾಡುವರೋ, ಅದರಂತೆಯೇ ಈ ದುಷ್ಟರ ಗೆಳೆತನದಿಂದ ದೂರರಾಗಿ, ಅವರನ್ನು ನಾಶಮಾಡಲಿಕ್ಕೆ ಪ್ರಯತ್ನಿಸಬೇಕು.

ಶ್ರೀ ಪರಮಾತ್ಮನು ದುರ್ಜನರ ಕೆಟ್ಟ ಗುಣಗಳನ್ನು ನಾಶಮಾಡಿ, ಅವರಿಗೆ ಸದ್ಬುದ್ಧಿಯನ್ನು ಕೊಟ್ಟು ಸತ್ಪುರುಷರ ಮಾಲಿಕೆಯಲ್ಲಿ ಸೇರಿಸುವಂತೆ ಅನುಗ್ರಹಿಸಲಿ.

ಪಂಚಾಚಾರ್ಯಪ್ರಭಾ.

೧೯೪೧ನೆಯ ಆಗಸ್ಟ ತಾ॥ ೧೧ನೆಯ ಸೋಮವಾರ

ಜಂಗಮ.

ವೀರಶೈವರಿಗೆ ಪರಮಪೂಜ್ಯವಾಗಿರುವ ಅಷ್ಟಾವರಣಗಳಲ್ಲಿ ಜಂಗಮನು ಸೇರ್ಪಡೆಯಾಗಿರುವದು ಸರಿಯಷ್ಟೆ! ಧರ್ಮಶಾಸ್ತ್ರವು ಅಷ್ಟಾವರಣಾಂತರ್ಗತನಾದೀ ಜಂಗಮನಿಗೆ ವಿಶೇಷ ಮಹತ್ತ್ವವನ್ನು ಕೊಡುತ್ತಿರುವುದು. ಇಂತಹ ಜಂಗಮರು ಯಾರು? ಎಂಬುವನ್ನು ತಿಳಿಯಲು ಅನೇಕರು ಅಪೇಕ್ಷಿಸುತ್ತಿರುವರು. ಆ ವಿಷಯವನ್ನೇ ಸದ್ಯಃ ವಿವರಿಸುವದಾಗುವದು. ವೀರಶೈವ ಮತದಲ್ಲಿ ನಾನಾಪ್ರಕಾರದ ಜಂಗಮರಿರುತ್ತಾರೆ.

ವ್ಯವಹಾರಪರಾ ಯೇಚ ಯೇ ಶಿವಾಚಾರಜಂಗಮಾಃ ।
ನಾಸ್ತಿ ತೇಷಾಂ ಮಹಾದೀಕ್ಷಾ ವೀರಮಾಹೇಶ್ವರಾಧಥಃ ॥

ಇತಿ ವೀರಶೈವಸದಾಚಾರಸಂಗ್ರಹೇ

ಜಂಗಮಂ ಪೂಜಯೇದ್ಯಸ್ತು ಸಾಕ್ಷಾನ್ಮತ್ಸ್ವರೂಪಿಪರಮೇಶ್ವರಂ ।
ಸ ಮಾಂ ಪೂಜಿತವಾನೇವ ಸೋಽಹಂ ದೇವಿ ನಸಂಶಯಃ ॥

ಇತಿ ಪಾರಮೇಶ್ವರಾಗಮೇ.

ಧರ್ಮಶಾಸ್ತ್ರ ಇತ್ಯಾದಿ ವಾಕ್ಯಗಳಿಂದ ಜಂಗಮರು ವ್ಯವಹಾರಪರ ಜಂಗಮರೆಂತಲೂ, ಶಿವಾಚಾರಜಂಗಮರೆಂತಲೂ, ಜಂಗಮರೆಂತಲೂ ಅನೇಕ ಪ್ರಕಾರವಾಗಿ ಕಂಡುಬರುತ್ತಾರೆ. ಇಷ್ಟುಪ್ರಕಾರದ ಜಂಗಮರಲ್ಲಿ ಅಷ್ಟಾವರಣಾಂತರ್ಗತ ಜಂಗಮರು ಯಾರು? ಎಂಬ ಪ್ರಶ್ನವು ಉಪಸ್ಥಿತವಾಗುತ್ತದೆ. ಅಷ್ಟಾವರಣಾಂತರ್ಗತ ಜಂಗಮರು ಮಹಾಪೂಜ್ಯರಾಗಿರುವದರಿಂದ ವ್ಯವಹಾರಪರಜಂಗಮರಲ್ಲಿಯೂ ಶಿವಾಚಾರಜಂಗಮರಲ್ಲಿಯೂ ಈ ಜಂಗಮತ್ವವು ಸಂಭವಿಸುವುದಿಲ್ಲ. ಏಕೆಂದರೆ—ಇವರಿಗೆ ವೀರಮಾಹೇಶ್ವರದೀಕ್ಷೆಯನ್ನು ಕೊಡಬಾರದೆಂದು ಧರ್ಮಶಾಸ್ತ್ರವು ವಿಧಿಸುವುದರಿಂದ ಇವರಿಗೆ ಪೂಜ್ಯತ್ವಾಧಿಕಾರವು ಸಂಭವಿಸುವಂತಿಲ್ಲ. ಇನ್ನು ನಾವೇ ಜಂಗಮಮೂರ್ತಿಗಳೆಂದು ಹೇಳಿಕೊಳ್ಳುವ ವಿರಕ್ತರಲ್ಲಿಯೂ ಶಾಸ್ತ್ರಸಿದ್ಧ ಜಂಗಮಮೂರ್ತಿಗಳೆಂದು ಪ್ರಸಿದ್ಧರಾಗಿರುವ ಗುರುಸ್ಥಲದ ಚರಮೂರ್ತಿಗಳಲ್ಲಿಯೂ ಜಂಗಮಪದವಾಚ್ಯರು ಯಾರು ಆಗುವರೆಂಬುದನ್ನು ವಿಮರ್ಶಿಸೋಣ! ಗುರು ಲಿಂಗ ಜಂಗಮ ಈ ಮೂರು ವಸ್ತುಗಳು ಒಂದೇ ಮೂರ್ತಿಯ ಭೇದವಾಗಿರುವದರಿಂದ ಸಮಾನಗಳಾಗಿರುತ್ತವೆಂದು ಶಿವಾಗಮಗಳು ಮುಕ್ತಕಂಠದಿಂದ ಸಾರುತ್ತವೆ.

ಏಕ ಏವ ಶಿವಃ ಸಾಕ್ಷಾತ್ಸರ್ವಾನುಗ್ರಹಕಾರಕಃ ।
ಗುರುಜಂಗಮಲಿಂಗಾತ್ಮಾ ವರ್ತತೇ ಭುಕ್ತಿಮುಕ್ತಿದಃ ॥

ಇತಿ ಸಿದ್ಧಾಂತಶಿಖಾಮಣೌ.

" ಏಕಮೂರ್ತಿಸ್ತ್ರಯೋ ಭಾಗಾ ಗುರುರ್ಲಿಂಗಂ ತು ಜಂಗಮಃ "

ಗುರು ಲಿಂಗ-ಜಂಗಮ ಈ ಮೂರು ವಸ್ತುಗಳನ್ನು ವಿಚಾರಿಸುತ್ತಿರಲಿಕ್ಕೆ ಒಂದೊಂದು ವಸ್ತುವಿನಿಂದ ಅಷ್ಟಾವರಣಗಳು ಸಿದ್ಧಿಸುತ್ತವೆ. ಗುರುವಿನಿಂದ ಗುರುವಾಗುತ್ತಾನೆ, ಲಿಂಗವಾಗುತ್ತದೆ, ಜಂಗಮನಾಗುತ್ತಾನೆ, ಹಾಗೂ ಪಾದೋದಕ ಪ್ರಸಾದಾದಿಗಳು ಸಂಭವಿಸುತ್ತವೆ. ಅರ್ಥಾತ್ ಗುರುವು ಇಷ್ಟಲಿಂಗವನ್ನೊಂದನ್ನು ಅನುಗ್ರಹಿಸಿದ್ದಾದರೆ ತನ್ಮೂಲಕ ಎಲ್ಲಾ ಆವರಣಗಳು ಪ್ರಾಪ್ತವಾಗುತ್ತವೆಂದು ಸಿದ್ಧಾಂತವು. ಗುರುವಿನಂತೆ ಲಿಂಗದಿಂದಾದರೂ ಅಷ್ಟಾವರಣಗಳು ಸಿದ್ಧಿಯಾಗುತ್ತವೆ. ಅರ್ಥಾತ್ ಲಿಂಗದಿಂದ ಗುರುವಾಗುತ್ತಾನೆ, ಜಂಗಮನಾಗುತ್ತಾನೆ, ಲಿಂಗದ ಸಂಬಂಧವಿರುವದರಿಂದಲೇ ಪಾದೋದಕ ಪ್ರಸಾದಾದಿಗಳು ಪ್ರಾಪ್ತವಾಗುತ್ತವೆ. ಲಿಂಗಸಂಬಂಧವಿಲ್ಲದ ಪಕ್ಷದಲ್ಲಿ ಗುರುವಾಗುವುದಿಲ್ಲ, ಜಂಗಮನಾಗುವುದಿಲ್ಲ, ಹಾಗೂ ಪಾದೋದಕ ಪ್ರಸಾದಾದಿಗಳು ಪ್ರಾಪ್ತವಾಗುವುದಿಲ್ಲ. ಈ ಗುರುಲಿಂಗಗಳಂತೆ ಅವುಗಳಿಗೆ ಸಮಾನಧರ್ಮಗಳುಳ್ಳ ಜಂಗಮನಿಂದಾದರೂ ಅಷ್ಟಾವರಣಗಳು ಅವಶ್ಯವಾಗಿ ಸಿದ್ಧಿಸಬೇಕಲ್ಲವೇ? ವಿರಕ್ತನೇ ಅಷ್ಟಾವರಣಾಂತರ್ಗತ ಜಂಗಮನೆಂದು ಹೇಳುವದಾದರೆ, ಗುರುಲಿಂಗಗಳಂತೆ ಅವನಿಂದ ಅಷ್ಟಾವರಣಗಳು ಸಿದ್ಧಿಸುವುದಿಲ್ಲ. ಏಕೆಂದರೆ- ವಿರಕ್ತನಿಗೆ ಶಾಸ್ತ್ರರೀತಿಯಾಗಿ ಮುಕ್ತಿಗೆ ಮೂಲಭೂತವಾದ ಲಿಂಗವನ್ನು ಕೊಟ್ಟು ಅನುಗ್ರಹಿಸತಕ್ಕ ಅಧಿಕಾರವು ಇರುವುದಿಲ್ಲ. ಯಾವಾಗ್ಗೆ ಮುಖ್ಯವಾದ ಲಿಂಗದಾನಲೋಪವೇ ಆದರೆ ಹಿಂದೆಯೇ ಕೈಮುತಿಕನ್ಯಾಯದಿಂದ ಪಾದೋದಕ ಪ್ರಸಾದ ಮಂತ್ರಾದಿಗಳಿಗೆ ಲೋಪವು ಅರ್ಥಾತ್ ಸಿದ್ಧವೇ ಆಗುತ್ತದೆ. ಗುರುತ್ವ ಜಂಗಮತ್ವಾಧಿಕಾರಗಳು ಇವನಿಂದ ಲಭಿಸುವುದಂತೂ ದೂರ ಉಳಿಯಿತು. ಹೀಗಾದಮೇಲೆ ಸಮಾನ ಧರ್ಮಗಳುಳ್ಳ ಗುರುಲಿಂಗ ಜಂಗಮರಲ್ಲಿ ಇವನು ಜಂಗಮಪದವಾಚ್ಯನು ಹೇಗೆ ಆಗುವನು? ಆಗುವನೆಂದು ದುರಭಿಮಾನದಿಂದ ನುಡಿದರೆ ಪೂರ್ವದಲ್ಲಿ ಸಮಾನಧರ್ಮವುಳ್ಳವುಗಳೆಂದು ಶಿವಾಗಮಾದಿಗಳಿಂದ ಪ್ರತಿಪಾದಿಸಲ್ಪಟ್ಟ ಗುರುಲಿಂಗಜಂಗಮರಲ್ಲಿ ಸಮಾನಧರ್ಮಚ್ಯುತಿಪ್ರಸಂಗವು ಒದಗುವುದು. ಆದಕಾರಣ ವಿರಕ್ತನು ಅಷ್ಟಾವರಣಾಂತರ್ಗತ ಜಂಗಮಪದವಾಚ್ಯನಾಗುವುದಿಲ್ಲವೆಂದೇ ಧರ್ಮಶಾಸ್ತ್ರದ ಶಾಸನವು. ಅಂದಮೇಲೆ ಜಂಗಮಪದವಾಚ್ಯರು ಯಾರು? ಎಂದು ವಿಮರ್ಶಿಸಿದರೆ ಗುರುಸ್ಥಲೀನ ಚರಮೂರ್ತಿಗಳೇ ಎಂದು ಶಾಸ್ತ್ರೀಯೋಕ್ತಿ ಸಿದ್ಧ ಮಾಡುತ್ತದೆ. ಹೇಗೆಂದರೆ—ಈ ಚರಮೂರ್ತಿಗಳು (ಜಂಗಮಮೂರ್ತಿಗಳು) ಶಾಸ್ತ್ರಾನುಸಾರವಾಗಿ ಲಿಂಗವನ್ನು ಕೊಡಲಿಕ್ಕೆ ಅರ್ಹರಿದ್ದಾರೆ. ಲಿಂಗದಾನದ್ವಾರಾ ಅಷ್ಟಾವರಣಗಳು ಗುರುವಿನಂತೆ ಇವರಲ್ಲಿಯಾದರೂ ಸಂಭವಿಸುತ್ತವೆ. ಆದಕಾರಣ ಜಂಗಮಪದವಾಚ್ಯರು ಯಥಾರ್ಥವಿಧಾನಪೂರ್ವಕ ಚರಮೂರ್ತಿಗಳಲ್ಲದೆ ವಿರಕ್ತರಾಗುವದಿಲ್ಲವೆಂದು ಶಾಸ್ತ್ರಸಿದ್ಧಾಂತವು. ಇದಲ್ಲದೆ ಸೂಕ್ಷ್ಮರೀತಿಯಾಗಿ ಗುರುಲಿಂಗಜಂಗಮರೊಳಗೆ ಒಂದೊಂದು ವಸ್ತುವಿನಲ್ಲಿ ವಸ್ತುತ್ರಯದ ಸಂಬಂಧವಿರುತ್ತದೆ. ಅಂದರೆ ಗುರುವಿನಲ್ಲಿ ಗುರುತ್ವ ಲಿಂಗತ್ವ ಜಂಗಮತ್ವಗಳುಂಟು. ಲಿಂಗದಲ್ಲಿ ಲಿಂಗತ್ವ ಗುರುತ್ವ ಜಂಗಮತ್ವಗಳುಂಟು, ಅದರಂತೆ ಜಂಗಮನಲ್ಲಿ ಜಂಗಮತ್ವ ಗುರುತ್ವ ಲಿಂಗತ್ವಗಳುಂಟು. ಹೀಗೆ ಶಾಸ್ತ್ರರೀತಿಯಿರುವದರಿಂದ ಗುರುಲಿಂಗಗಳಲ್ಲಿ ತದ್ಭಿನ್ನವಸ್ತುಧರ್ಮಸಮಾವೇಶವು ಉತ್ತಮವಾಗಿ ಆಗುತ್ತದೆ. ಆದರೆ ವಿರಕ್ತನೇ ಜಂಗಮನೆಂದು ಹೇಳಿದ ಪಕ್ಷದಲ್ಲಿ, ಅವನಲ್ಲಿ ಯಾವರೀತಿಯಿಂದಲೂ ಗುರುತ್ವವು ಸಿದ್ಧಿಸುವುದಿಲ್ಲ. ವೀರಶೈವ ಧರ್ಮಶಾಸ್ತ್ರದಲ್ಲಿ ಉಕ್ತವಾಗಿರುವ ಗುರುಲಕ್ಷಣವೇನೆಂದರೆ—

ಗುರೂಣಾಂ ಲಕ್ಷಣಂ ಚೈವ ಶಿಷ್ಯಲಕ್ಷಣಕಂ ತಥಾ |
ಆಧ್ಯಾನೇ ಚ ವಿಸರ್ಗೇ ಚ ಯಃ ಸ್ವತಂತ್ರಃ ಸ ವೈ ಗುರುಃ ।
ತತ್ಪಂಚವದನೋದ್ಭೂತಾಃ ಸರ್ವ ಏವ ಗುರೂತ್ತಮಾಃ |
ತತ್ಪ್ರಸ್ಥಾನಂಚ ಸರ್ವೇಷಾಂ ತತ್ತ್ವಾನುಷ್ಠಾನಂ ಕಥಂಚನೇತ್ |
ಉಪದೇಶೇ ವಿವಾಹೇ ಚ ದೀಕ್ಷಾಯಾಂ ರಕ್ಷಣೇಽಪಿ ಚ |
ತ ಏವ ಮುಖ್ಯಗುರವಃ ಪ್ರಧಾನಾಸ್ತೇ ಪ್ರಕೀರ್ತಿತಾಃ | ಇತಿ

ಅಂದರೆ ಯಾವನು ದೀಕ್ಷೆ ಮಾಡುವುದರಲ್ಲಿ ರಕ್ಷಣಮಾಡುವುದರಲ್ಲಿ ಆಹ್ವಾನದಲ್ಲಿ ವಿಸರ್ಜನದಲ್ಲಿ ವಿವಾಹದಲ್ಲಿ ಹಾಗೂ ಉಪದೇಶಮಾಡುವುದರಲ್ಲಿ ಸ್ವತಂತ್ರನೋ ಅವನೇ ಮುಖ್ಯ ಗುರುವೆನಿಸಿಕೊಳ್ಳುತ್ತಾನೆ. ಅಂಥ ಸರ್ವೋತ್ತಮ ಗುರುಗಳೇ ಶಿವನ ಪಂಚ ಮುಖಗಳಿಂದ ಅವತರಿಸಿದ ಪಂಚಾಚಾರ್ಯರು. ಅವರಿಂದ ಜನಿಸಿದ ಸಕಲವೀರಶೈವ ಶಿಷ್ಯರಿಗೆ ಅವರ ಸಾನ್ನಿಧ್ಯವು ಹೇಗೆ ಬಂದೀತೆಂದು ಸುಪ್ರಭೇದಾಗಮದಲ್ಲಿ ಸಾಕ್ಷಾತ್ಪರಮೇಶ್ವರನು ಪಾರ್ವತಿಯ ಮುಂದೆ ಅಪ್ಪಣೆ ಕೊಡಿಸಿರುತ್ತಾನೆ. ವಿರಕ್ತರಲ್ಲಿ ಈ ವಿಧವಾದ ಗುರುಲಕ್ಷಣಗಳು ಸಂಭವಿಸುವುದಿಲ್ಲ. ಏಕೆಂದರೆ—ವಿರಕ್ತರು ವೀರಶೈವ ಧರ್ಮಶಾಸ್ತ್ರಾನುಸಾರವಾಗಿ ದೀಕ್ಷಾ, ಶಿಕ್ಷಾ, ರಕ್ಷಾ, ವಿವಾಹ, ಉಪದೇಶ ಮೊದಲಾದ ಯಾವ ಕಾರ್ಯಗಳಿಗೂ ಬದ್ಧರಲ್ಲವಾದುದರಿಂದ ವಿರಕ್ತರು ಜಂಗಮಪದವಾಚ್ಯರಾಗುವುದಿಲ್ಲ. ಇದೇ ವಿಷಯವು ಮುಂದಿನವಾರ ಇನ್ನೂ ಹೆಚ್ಚಾಗಿ ವಿವರಿಸಲ್ಪಡುವುದು.

ಯುದ್ಧವಾರ್ತೆ.

ಅಮೇರಿಕದಲ್ಲಿ ನೌಕಾ ನಿರ್ಮಾಣಕಾರ್ಯ

ಕಳೆದ ತಿಂಗಳು ಅಮೇರಿಕವು ೩೬ ಸಂಗ್ರಾಮ ನೌಕೆಗಳ ನಿರ್ಮಾಣವನ್ನು ಮುಗಿಸಿ ಸಮುದ್ರಕ್ಕಿಳಿಸಿತು. ಮತ್ತೆ ೬೬ ಹೊಸ ನೌಕೆಗಳ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿತು. ಸಮುದ್ರಕ್ಕಿಳಿಸಲ್ಪಟ್ಟ ನೌಕೆಗಳಲ್ಲಿ ಒಂದು ಜಲಾಂತರ್ಗಾಮಿ ನೌಕೆ, ೮ ಪ್ರೈಸ್ ಧ್ವಂಸಕ ನೌಕೆಗಳು ಸೇರಿವೆ.

ಸಾಂಕುಶ ಪ್ರಭುತ್ವಗಳಿಗೆ ಎಚ್ಚರಿಕೆ

೬ ವಾರಗಳೊಳಗಾಗಿ ಜಪಾನು ಥೈಲೆಂಡ್ ಆಕ್ರಮಣವನ್ನು ಪ್ರಾರಂಭಿಸಬಹುದೆಂದೂ, ಆ ವೇಳೆ ಜಪಾನು ಇಂಡೋಚೀಣದ ಹೊಸ ಬಲಮೂಲಗಳನ್ನು ಉಪಯೋಗಿಸುವದೆಂದೂ, ಥೈಲೆಂಡನ್ನು ಉಳಿಸಬೇಕಾದರೆ ಸಾಂಕುಶ ಪ್ರಭುತ್ವ ರಾಷ್ಟ್ರಗಳು ಕೂಡಲೆ ತಕ್ಕ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದೂ ಪತ್ರಿಕೆಗಳು ಎಚ್ಚರಿಸಿವೆ.

ಬರ್ಲಿನ್ ಮೇಲೆ ರಷ್ಯದ ವಿಮಾನ ದಾಳಿ

ಕಳೆದ [illegible]ನೆಯ ತಾರೀಖಿನ ರಾತ್ರಿ ರಷ್ಯಾ ವಿಮಾನಗಳು ಮೊದಲನೆಯ ಸಾರಿ ಬರ್ಲಿನ್ ನಗರದ ಮೇಲೆ ದಾಳಿ ನಡೆಸಿದವು. ಜರ್ಮನಿಯ ಇತರ ಎಲ್ಲ ಜಿಲ್ಲೆಗಳ ಮೇಲೂ ವಿಮಾನ ದಾಳಿ ನಡೆಸಲಾಯಿತೆಂದು ಮಾಸ್ಕೋ ರೇಡಿಯೋ ತಿಳಿಸಿದೆ. ರಷ್ಯದ ವಿಮಾನ ದಾಳಿಯನ್ನು ಜರ್ಮನಿಯು ಒಪ್ಪಿಕೊಂಡಿದೆ. ಕೆಲವೇ ವಿಮಾನಗಳು ಮಾತ್ರ ಬರ್ಲಿನ್ನಿನ ಮೇಲೆ ಬರಲು ಶಕ್ಯವಾಯಿತೆಂದೂ ಕೆಲವು ಸ್ಫೋಟಕ ಬಾಂಬುಗಳನ್ನು ಹಾಕಿದ್ದರಿಂದ ಹಾನಿ ಆಗಿದೆ.

ಜರ್ಮನಿಯ ಬಲವು ಕುಗ್ಗುತ್ತಿದೆ

ರಷ್ಯನ್ ಸೇನೆಗಳಿಗಿಂತ ಮೂರರಷ್ಟು ಸೈನ್ಯವನ್ನು ಜರ್ಮನರು ರಣರಂಗಕ್ಕೆ ಕಳುಹಿಸಿರುವರೆಂದು ರಷ್ಯದ ಪ್ರವಾಹ ಪತ್ರಿಕೆಯು ತಿಳಿಸುತ್ತ, "ಈ ಯುದ್ಧದಲ್ಲಿ ೩ ಲಕ್ಷ ನಾಜಿ ಸೈನಿಕರೂ, 10000 ವಿಮಾನಗಳೂ 15000 ಟ್ಯಾಂಕುಗಳೂ ಭಾಗವಹಿಸಿವೆಯೆಂದೂ, ಆದರೆ ರಷ್ಯದ ಪ್ರತಿಭಟನೆಯಿಂದ ಜರ್ಮನಿಯ ಲೆಕ್ಕಾಚಾರಗಳು ತಪ್ಪಿಹೋಗುತ್ತಿವೆಯೆಂದೂ, ರಷ್ಯದ ವಿಮಾನ ಬಲವನ್ನು ಆರಂಭದಲ್ಲೇ ಧ್ವಂಸಮಾಡಿಬಿಡಬಹುದೆಂದು ನಾಜಿಗಳು ಯೋಚಿಸಿದ್ದು ಸಾಧ್ಯವಾಗಲಿಲ್ಲವೆಂದೂ, ಪ್ರತಿದಿನ ಜರ್ಮನಿಯ ಕಡೆ ಅಪಾರ ನಷ್ಟವಾಗುತ್ತಿರುವದರಿಂದ ಜರ್ಮನ್ ಸೈನಿಕರ ನೈತಿಕಭಾವನೆಯು ಕೆಟ್ಟು ಅಧೈರ್ಯದ ಹುಟ್ಟಿದೆ ಯೆಂದೂ ಎಂದು ಪ್ರಕಟಿಸಿದೆ.

ರೂಜ್‌ವೆಲ್ಟ್-ಚರ್ಚಿಲ್‌ರವರ ಪರಸ್ಪರ ಭೇಟಿಯೋ?

ಅಮೇರಿಕದ ಅಧ್ಯಕ್ಷರಾಗಿರುವ ಶ್ರೀ ರೂಜ್‌ವೆಲ್ಟರೂ ಬ್ರಿಟಿಷ್ ಮಹಾಪ್ರಧಾನರಾದ ಶ್ರೀ ಚರ್ಚಿಲ್ಲರೂ ಭೇಟಿಯಾದರೆಂದು ಬಲವಾದ ವದಂತಿ ಹಬ್ಬಿದೆ. ಚರ್ಚಿಲ್ಲರ ಮತ್ತು ರೂಜ್‌ವೆಲ್ಟರ ಪರಸ್ಪರ ಭೇಟಿಯು ಗೋಪ್ಯವಾಗಿಡಲ್ಪಟ್ಟಿರುವದರಿಂದ ಯಾರಿಗೂ ಗೊತ್ತಿಲ್ಲ. ರೂಜ್‌ವೆಲ್ಟರನ್ನು ಸಂಗ್ರಾಮ ನೌಕೆಯೊಂದರ ಮೂಲಕ 'ಕೆಂಪ್‌ಜಾಪಸ್' ಎಂಬಲ್ಲಿಗೆ ಕರಿಸಲಾಯಿತೆಂದೂ, ಚರ್ಚಿಲ್ಲರು ವಿಮಾನದಲ್ಲಿ ಅಲ್ಲಿಗೆ ಬಂದರೆಂದೂ ಊಹಿಸಲಾಗಿದೆ. ಕೆನಡಾ ಗಡಿಯಲ್ಲಿರುವ ತಮ್ಮ ಬೇಸಿಗೆಯ ನಿವಾಸವಾದ "ಕ್ಯಾಂಪೊಬೆಲ್ಲೊ' ಎಂಬಲ್ಲಿಗೆ ರೂಜ್‌ವೆಲ್ಟರು ತೆರಳಿದರೆಂದೂ ಅಲ್ಲಿಗೆ ಚರ್ಚಿಲ್ಲರು ವಿಮಾನದಲ್ಲಿ ಬಂದರೆಂದೂ ಅನೇಕರು ತಿಳಿದಿದ್ದಾರೆ. 'ಹಿಟ್ಲರಿಜಂ ನಾಶಮಾಡಲು ನಡೆಯುತ್ತಿರುವ ಪ್ರಯತ್ನಗಳಲ್ಲಿ ಈ ಮಹಾಶಯರಿಬ್ಬರೂ ಮುಖತಃ ಮಾತನಾಡುವದರಿಂದ ನೂತನ ಚೈತನ್ಯವುದ್ಭವಿಸುವದೆಂದು ಹೇಳಬಹುದಾಗಿದ

ಮುಸೋಲಿನಿಯ ಮಗನು ಅನಾಹುತಕ್ಕೊಳಗಾದನು

ಕಳೆದ ೭ನೆಯ ತಾರೀಖಿನ ಬೆಳಗ್ಗೆ ಮುಸೋಲಿನಿಯ ಯ ಮಗನಾದ ಬ್ರೂನೊ ಮುಸೋಲಿನಿಯು ಮೃತ ಪನು ಹೊಸವಿಮಾನವೊಂದನ್ನು ಪರೀಕ್ಷಿಸುತ್ತಿದ್ದಾಗ ಅಪಾಯ ಸಂಭವಿಸಿತು

ರಷ್ಯದಲ್ಲಿ ಜರ್ಮನ್ ಪಡೆಯ ನಾಶ

ರಷ್ಯದಲ್ಲಿ ಯುದ್ಧಮಾಡುತ್ತಿದ್ದ ಜರ್ಮನಿಯ 25ನೆ ಯ ಸೈನ್ಯಪಡೆಯು ಎಲ್ಲಿ ನಾಶವಾಯಿತೆಂಬುದೇ ಯವಾಗಿದೆ ಆದರೆ 'ವಿ' ಎಂಬ ನಗರದಬಳಿ ಲು ರಾತ್ರಿ 4 ದಿವಸ ಭಯಂಕರ ಹೊಡೆದಾಟ ಯಿತೆಂದೂ ರಣರಂಗದಲ್ಲಿ ಬಿದ್ದ 2500 ಜರ್ಮನರ ಗಳನ್ನು ಎಣಿಸಲಾಯಿತೆಂದೂ, ಅನೇಕ ಶತ್ರುಗಳು ಯಾದರೆಂದೂ ತಿಳಿದುಬರುತ್ತದೆ

ಬ್ರಿಟನ್ನು ಜರ್ಮನಿಯಮೇಲೆ ಬೀಳಬೇಕು

ಜರ್ಮನರಿಂದ ಆಕ್ರಮಿಸಲ್ಪಟ್ಟಿರುವ ಯೂರೋಪಿಗೆ ಟನ್ನು ಮುತ್ತಿಗೆ ಹಾಕುವುದು ಅಸಾಧ್ಯವಲ್ಲವೆಂದೂ, ತ್ತ ರಕ್ಷ ನುಗ್ಗಿ ರಷ್ಯದೊಡನೆ ಒಂದುಗೂಡುವ ಪ್ರಯತ್ನ ಾಡಬಹುದೆಂದೂ ಅಮೆರಿಕದಲ್ಲಿ ಯೋಚಿಸಲಾಗಿದೆ ತ್ತು ಈ ಕೆಲಸಕ್ಕೆ ಬೇಕಾದಬಲವು ಇಂಗ್ಲೆಂಡಿಗೆ ಇದೆ ಂದೂ ಇಂಗ್ಲೆಂಡು ಈ ಸಮಯದಲ್ಲಿ ಸುಮ್ಮನಿರು ವು ವಿಷಾದಕರವೆಂದೂ ಅದು ಕೂಡಲೆ ಮುತ್ತಿಗೆಯ ಯತ್ನ ನಡೆಸಬಹುದೆಂದೂ ಅಮೆರಿಕದ ಪತ್ರಿಕೆಗಳು ಚಿಸುತ್ತಿವೆ

ಜರ್ಮನಿಯ ಸೈನ್ಯಬಲ

ಹೆರ್ ಹಿಟ್ಲರನು 70 ಲಕ್ಷ ಜನರನ್ನು ಮಿಲಿಟರಿ ರ್ಯಗಳಿಗೆ ಉಪಯೋಗಿಸಿಕೊಳ್ಳಬಹುದೆಂದು ಅಂ ದಾಜುಮಾಡಲಾಗಿದೆ ಅವನಿಗಿರುವ ಮಿಲಿಟರಿ ಮಾನವ ಬಲವು ಅಷ್ಟೆ! ಅವರಲ್ಲಿ 50 ವಯಸ್ಸಿನವರೆಗೆ ಎಲ್ಲರೂ ದ್ದಾರೆ 18 ರಿಂದ 40 ರ ವರೆಗಿನವರು 40 ಲಕ್ಷ ಮಂದಿ ಹಿಟ್ಲರನು ಬೇಗ ಯುದ್ಧದಲ್ಲಿ ಜಯವನ್ನ ಯಸುತ್ತಿರುವದಕ್ಕೆ ಇದೇ ಕಾರಣ ರಷ್ಯದೊಡ್ಡನೆ ದೆದ ಯುದ್ಧದ ಮೊದಲನೆಯ ವಾರದಲ್ಲಿ ಜರ್ಮನರ ತ್ತಮ ಯೋಧರು ನಾಶವಾದರೆಂದು ತಿಳಿದು ರುತ್ತದೆ

ಜಪಾನಿಗೆ ಅಮೆರಿಕೆಯ ಎಚ್ಚರಿಕೆ

ಜಪಾನೇನಾದರೂ ಥೈಲೆಂಡಿಗೆ ಕಾಲಿಟ್ಟರೆ ಅಮೆರಿ ದ ಭದ್ರತೆಗೆ ಅಪಾಯಬಂದಂತೆಯೂ ಪೆಸಿಫಿಕ್ ಗರದಲ್ಲಿರುವ ಅಮೇರಿಕನ್ ದೇಶಗಳ ರಕ್ಷಣೆಗೆ ಸಂಚ ು ಬಂದಂತೆಯೂ ಪರಿಗಣಿಸಲಾಗುತ್ತದೆಯೆಂದೂ, ಪಾನು ಇಂಡೋ ಚೀನಾದಿಂದ ಮುಂದೆ ಹೆಜ್ಜೆ ಡುವದಾದರೆ ಅಮೆರಿಕೆಯು ಸುಮ್ಮನೆ ಕುಳಿತಿರ ಗುವದಿಲ್ಲವೆಂದೂ ಟೋಕಿಯೋದಲ್ಲಿರುವ ಅಮೆರಿ ನ್ ರಾಯಭಾರಿಗಳು ಜಪಾನನ್ನು ಎಚ್ಚರಿಸಿರುವರಂತೆ!

ಉಕ್ರೇನಿನಲ್ಲಿ ಜರ್ಮನರ ಮುಂದೋಟ

ರಷ್ಯದಲ್ಲಿ ಎಲ್ಲ ಕಡೆಯೂ ಜರ್ಮನರು ಮುಂದು ವರಿಯದಂತೆ ತಡೆಯಲ್ಪಟ್ಟಿದ್ದರೂ ಅವರ ಕೈಯೇ ಪ್ಪಿ ಮೇಲಾಗಿದೆ ಆದರೂ ಜರ್ಮನ್ ಸೈನ್ಯಗಳ ಚಲನವು ಇಷ್ಟು ನಿಧಾನವಾದುದನ್ನು ನೋಡಿ ನಾಜಿ ನಾಯಕರಿಗೆ ಆಶಾ ಭಂಗವಾಗಿದೆಯಂತೆ! ಈಚಿನ ಷ್ಟಿಯ ಪ್ರಕಾರ ರಣರಂಗದಲ್ಲಿ ಹೆಚ್ಚಿನ ಬದಲಾವಣೆ ನೂ ಇಲ್ಲ. ಉಕ್ರೇನಿನಲ್ಲಿ ಜರ್ಮನರು ಆಗ್ನೇ ಯದ ಕಡೆ ನುಗ್ಗುತ್ತಿದ್ದಾರೆ. ಅಲ್ಲಿ ಅವರಿಗೆ ಹೆಚ್ಚಿನ ಯಶವಾದರೆ ಅವರು ಕಾಕಸಸ್ ಪರ್ವತದ ಪ್ರದೇಶವನ್ನು ಪ್ರವೇಶಿಸಿ ಅಲ್ಲಿಂದ ಮಧ್ಯ ಪೂರ್ವದ ಬ್ರಿಟಿಷ್ ಸ್ಥಾನ ಗಳ ಮೇಲೆ ಬೀಳಬಹುದಾಗಿದೆ.

ಮೂರನೆಯ ದಾಳಿಗೆ ಸಿದ್ಧತೆಗಳು

ರಷ್ಯದ ಉಗ್ರ ಪ್ರತಿಭಟನಶಕ್ತಿಯನ್ನು ಮುರಿಯಲು ಮೂರನೆಯ ಸಾರೆ ನಾಜಿಗಳು ಅಸಾಧ್ಯ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆಂದೂ, ಈ ಪ್ರಯತ್ನವೇ ಈಗಿನ ಯುದ್ಧದ ಆಗುಹೋಗುಗಳನ್ನು ನಿರ್ಧರಿಸಬಹುದೆಂದೂ ಅಭಿಪ್ರಾಯಪಡಲಾಗಿದೆ. ಪರಿಸ್ಥಿತಿಯೇನೋ ರಷ್ಯಕ್ಕೆ ಅನುಕೂಲವಾಗಿದೆ ರಷ್ಯದಲ್ಲಿ ಇನ್ನು ಚಳಿಗಾಲವಾರಂಭವಾಗಲಿದೆ ನಾಜಿಗಳ ಈ ಮೂರನೆಯ ಪ್ರಯತ್ನವು ಹಾಳಾಯಿತೆಂದರೆ ಅಷ್ಟರವೇಳೆಗೆ ಚಳಿಗಾಲವೂ ಆರಂಭವಾಗುತ್ತದೆ ಅಲ್ಲಿಂದ ಮುಂದೆ ಜರ್ಮನರ ಅವಸ್ಥೆ ಹೇಳಲಸಾಧ್ಯವಾಗುತ್ತದೆ

ಜರ್ಮನಿ ರಾಜಧಾನಿಯ ಮೇಲೆ ಮುತ್ತಿಗೆ

ಬ್ರಿಟಿಶ್ ಬಾಂಬರುಗಳು ಬರ್ಲಿನ್ ನಗರದ ಮೇಲೆ ಉಗ್ರವಾದ ಮುತ್ತಿಗೆ ನಡೆಯಿಸಿದವು ಅತ್ಯಂತ ಭಾರಿ ಬಾಂಬುಗಳನ್ನು ನಗರಮಧ್ಯದಲ್ಲಿ ಹಾಕಲಾಯಿತು ಮೊದಲನೆಯ ಬಾಂಬು ಬಿದ್ದಕೂಡಲೆ ವಿಮಾನ ಧ್ವಂಸಕ ಫಿರಂಗಿಗಳು ಆರ್ಭಟಿಸಹತ್ತಿದವು. ಈಚೆಗೆ ಬರ್ಲಿನ್ನಿನಲ್ಲಿ ಸರ್ಚ್‌ಲೈಟ್ ವ್ಯವಸ್ಥೆಯು ಬಲವಾಗಿದೆ ನಗರದಿಂದ 30 ಮೈಲು ದೂರದಲ್ಲಿರುವಾಗಲೇ ಬ್ರಿಟಿಷ್ ವಿಮಾನಗಳು ಅವುಗಳನ್ನು ಕಂಡವು ವಿಮಾನಗಳು ರಾತ್ರಿ ಸುಮಾರು 12 ಗಂಟೆಯ ವೇಳೆಗೆ ಬರ್ಲಿನ್ನಿಗೆ ತಲುಪಿ ಮುತ್ತಿಗೆಯನ್ನಾರಂಭಿಸಿದವು ಭಯಂಕರ ಸ್ಫೋಟನಗಳಾಗಿ ನಗರದಲ್ಲಿ ಅನೇಕ ಕಡೆ ಬೆಂಕಿ ಹತ್ತಿಕೊಂಡಿತು ಇದರಿಂದ ಹೊರಟ ಉರಿಯು 80 ಮೈಲಿಗಳ ದೂರದವರೆಗೆ ಕಾಣಿಸುತ್ತಿತ್ತು

ಥೈಲೆಂಡಿಗೆ ಜಪಾನಿನ ಎಚ್ಚರಿಕೆ

ಜಪಾನು ಥೈಲೆಂಡಿನ ಮುಂದೆ ಅಧಿಕಾರಯುತವಾಗಿ ಯಾವ ಹೇಳಿಕೆಗಳನ್ನೂ ಇಟ್ಟಿಲ್ಲವಾದರೂ ನಾನ್ ಕಿಂಗ್ ಮತ್ತು ಮಾಂಚುಕೊ ಸರ್ಕಾರಗಳನ್ನು ಒಪ್ಪಿಕೊಳ್ಳಬೇಕೆಂದು ಸಂಧಾನನಡೆಸುತ್ತಿರುವದಲ್ಲದೆ, ಈಗಿನ ಪರಿಸ್ಥಿತಿಯಲ್ಲಿ ಅದು ಏಕಾಂಗಿಯಾಗಿ ನಿಂತಿರುವ ವಿಚಾರವನ್ನು ಗಮನಿಸಬೇಕೆಂದೂ, ಯೂರೋಪಿನಲ್ಲಿ ಆತ್ಮರಕ್ಷಣೆಯ ಹೋರಾಟದಲ್ಲಿ ತೊಡಗಿರುವ ಬ್ರಿಟನ್ನು ಥೈಲೆಂಡ್ ರಕ್ಷಣಭಾರವನ್ನು ಹೊತ್ತುಕೊಳ್ಳುವದೆಂದು ನಿರೀಕ್ಷಿಸುವುದು ಸರಿಯಲ್ಲವೆಂದೂ, ಒಂದುವೇಳೆ ಅಮೆರಿಕವು ಅದಕ್ಕೆ ರಕ್ಷಣಭರವಸೆಯನ್ನು ಕೊಡಬಹುದಾದರೂ ಅದು ಇದುವರೆಗೆ ಹಾಗೆಮಾಡಿಲ್ಲವೆಂದೂ, ಸಣ್ಣರಾಷ್ಟ್ರವಾದ ಥೈಲೆಂಡು ಈಗಿನ ತನ್ನ ಸ್ಥಿತಿಗತಿಗಳನ್ನು ಚೆನ್ನಾಗಿ ಪರ್ಯಾಲೋಚಿಸಿ ತನ್ನ ಗಡಿಯಲ್ಲೇ ಅಪಾರ ಸೈನ್ಯಸಿದ್ಧತೆಗಳಿಂದ ಕೂಡಿರುವ ನೆರೆಯ ರಾಷ್ಟ್ರವಾದ ಜಪಾನಿನೊಡನೆ ಸ್ನೇಹದಿಂದಿರಲು ಏನುಮಾಡಬೇಕೋ ಅದನ್ನೆಲ್ಲ ಮಾಡಬೇಕೆಂದೂ ಎಚ್ಚರಿಸಿದೆ

ರಷ್ಯ ಮತ್ತು ಥೈಲೆಂಡುಗಳಿಗೆ ತೊಂದರೆ

ಲಂಡನ್ನಿನ ಪತ್ರಿಕೆಗಳು ಪೂರ್ವದಲ್ಲಿ ಜಪಾನಿನ ಕಾರ್ಯಕ್ರಮಗಳನ್ನು ವಿಮರ್ಶಿಸುತ್ತ "ರಷ್ಯದ ವ್ಲಾಡಿವೋಸ್ಟಾಕ್ ನಗರಕ್ಕೂ ಥೈಲೆಂಡಿಗೂ ವಿಪತ್ತು ಉಂಟಾಗುವಂತಿದೆ ಜಪಾನು ಇವುಗಳಿಗೆ ತೊಂದರೆಯನ್ನು ತಂದೊಡ್ಡಿದೆ ಮಂಚುಕೊದಲ್ಲಿ ವ್ಲಾಡಿವೋಸ್ಟಾಕಿಗೆ 100 ಮೈಲು ದೂರದಲ್ಲಿ ಅಪಾರ ಜಪಾನ್ ಸೇನೆಗಳು ಬಂದು ಕೂಡುತ್ತಿವೆ ರಷ್ಯದ ಕಡೆಯಲ್ಲೂ 10 ಲಕ್ಷ ಸುಶಿಕ್ಷಿತ ಯೋಧರು ಸಿದ್ಧರಾಗಿದ್ದಾರೆ ಇದರಿಂದ ಯಾವಗಳಿಗೆಯಲ್ಲಾದರೂ ಅಪಾಯವು ಒದಗಬಹುದಾಗಿದೆ ಇಂಡೋಚೀನಾದಲ್ಲಿ "ಸೀಮರೀಪ್" ಎಂಬ ನಗರವನ್ನು ಜಪಾನರು ಆಕ್ರಮಿಸಿದ್ದಾರೆ. ಇದು ಥೈಲೆಂಡಿನ ರಾಜಧಾನಿಯಾದ ಬಾಂಕಾಕ್‌ಗೆ 250 ಮೈಲು ದೂರದಲ್ಲಿದೆ. ಜಪಾನು ಮಿಲಿಟರಿ ಕಾರ್ಯಕ್ರಮವನ್ನು ಕೈಗೊಂಡರೆ ಅದನ್ನೆದುರಿಸಲು ಥೈಲೆಂಡು ತನ್ನ ಕೈಲಾದ ಸಹಾಯವನ್ನೆಲ್ಲಾ ಮಾಡಲಿದೆ.

ಮೆಕ್ಸಿಕೋದಲ್ಲಿ ಜರ್ಮನಿಗೆ ಪುರಸ್ಕಾರ ಸಿಕ್ಕಲಿಲ್ಲ

ಮೆಕ್ಸಿಕೋ ದೇಶದಲ್ಲಿರುವ ಜರ್ಮನ್ ರಾಯಭಾರಿಯನ್ನು ಅಲ್ಲಿಂದ ಅಟ್ಟಬೇಕೆಂದು ಒತ್ತಾಯಪಡಿಸುತ್ತಿರಲಾಗಿದೆ ಮೆಕ್ಸಿಕೋದಲ್ಲಿ ಆಕ್ಸಿಸ್ ರಾಷ್ಟ್ರಗಳ ಪರವಾಗಿ ಕೆಲಸಮಾಡುತ್ತಿರುವ ಸಂಸ್ಥೆಗಳ ಪಟ್ಟಿಮಾಡಬೇಕೆಂದು ಅಮೆರಿಕವು ಸೂಚನೆಕೊಟ್ಟಿದೆ. ಆ ಸೂಚನೆಯನ್ನು ಪ್ರತಿಭಟಿಸಬೇಕೆಂದು ಜರ್ಮನಿಯು ಮಾಡಿಕೊಂಡ ಪ್ರಾರ್ಥನೆಯನ್ನು ಮೆಕ್ಸಿಕೊ ಸರ್ಕಾರವು ಪುರಸ್ಕರಿಸದೆ ತಳ್ಳಿಹಾಕಿತು

ಒಡೆಸ್ಸಾ ಬಂದರನ್ನು ಹಿಡಿಯುವ ಪ್ರಯತ್ನ

ಕೀವ್‌ನಗರವನ್ನು ಹಿಡಿಯುವ ಜರ್ಮನರ ಪ್ರಯತ್ನವು ಅವರ ಇಷ್ಟದಂತೆ ಕೈಗೂಡಲಿಲ್ಲ ಕೀವ್‌ನಗರಕ್ಕೆ ಬಹಳ ದೂರದಲ್ಲೇ ಜರ್ಮನ್ ಸೈನ್ಯಗಳು ತಡೆಯಲ್ಪಟ್ಟಿವೆ. ಈಗ ಕಪ್ಪುಕಡಲಿನಲ್ಲಿರುವ ರಷ್ಯದ ಬಂದರಾದ ಒಡೆಸ್ಸಾದ ಮೇಲೆ ಜರ್ಮನರ ದೃಷ್ಟಿ ಬಿದ್ದಂತಿದೆ. ನೇರವಾಗಿ ಒಡೆಸ್ಸಾವನ್ನು ಮುತ್ತಬೇಕೆಂದು ಜರ್ಮನಿ ಮತ್ತು ರುಮೇನಿಯಾ ಸೈನ್ಯಗಳಿಗೆ ಆಜ್ಞೆಮಾಡಲಾಯಿತೆಂದೂ, ಸೈನಿಕರು ಆಗಲೇ ಮುಂದೆ ನುಗ್ಗುತ್ತಿರುವರೆಂದೂ ಜರ್ಮನರು ಹೇಳುತ್ತಿದ್ದಾರೆ

ಜಪಾನಿಗೆ ಬ್ರಿಟನ್ನಿನ ಎಚ್ಚರಿಕೆ

ಥೈಲೆಂಡಿನ ಸ್ವಾತಂತ್ರ್ಯಕ್ಕೆ ಭಂಗತರುವ ಎಲ್ಲ ಕಾರ್ಯಕ್ರಮಗಳನ್ನು ಬ್ರಿಟನ್ನು ಉಗ್ರವಾದುದೆಂದು ಭಾವಿಸುವದಲ್ಲದೆ ಅದರಿಂದ ಸಿಂಗಪುರಕ್ಕೆ ವಿಪತ್ತುಂಟಾಗುವದೆಂದು ಪರಿಗಣಿಸುವದಾಗಿ ಶ್ರೀ ಅಂಥೊನಿ ಏಡನ್ನರವರು ಕಾಮನ್ಸ್‌ಸಭೆಯಲ್ಲಿ ತಿಳಿಸುತ್ತಾ ಆ ಕಾರ್ಯಕ್ಕೇನಾದರೂ ಜಪಾನು ಕೈಹಾಕುವದಾದರೆ ಬ್ರಿಟನ್ ಜಪಾನುಗಳ ಸಂಬಂಧವು ಉಗ್ರವಾಗುವದೆಂದು ಟೋಕಿಯೋದಲ್ಲಿರುವ ಬ್ರಿಟಿಷ್ ರಾಯಭಾರಿಗಳ ಮೂಲಕ ಜಪಾನ್ ಸರ್ಕಾರಕ್ಕೆ ಎಚ್ಚರಿಸಿರುವುದಾಗಿ ತಿಳಿಸಿದರು.

ಕವಿ ರವೀಂದ್ರ ಟಾಗೂರ್‌ರವರ ನಿಧನ

ಭಾರತದ ಸುಪ್ರಸಿದ್ಧ ಕವಿಗಳೂ ಕಲೋಪಾಸಕರೂ ಲೋಕವಿಖ್ಯಾತರೂ ಆದ ಡಾ॥ ರವೀಂದ್ರನಾಥಟಾಗೂರರು ಕಳೆದ 7 ನೆಯ ತಾರೀಖಿನ ದಿವಸ ಮಧ್ಯಾಹ್ನ 12 ಘಂಟೆಗೆ ತಮ್ಮ 80 ನೆಯ ವಯಸ್ಸಿನಲ್ಲಿ ಕಲಕತ್ತೆಯಲ್ಲಿ ಸ್ವರ್ಗಸ್ಥರಾದರು ಇವರು ಕೆಲವು ಕಾಲದಿಂದ ಅಸ್ವಸ್ಥರಾಗಿದ್ದರು ಇದಕ್ಕಾಗಿ ಕಳೆದ ತಿಂಗಳು ಕೊನೆಯಲ್ಲಿ ಇವರಿಗೆ ಶಸ್ತ್ರಚಿಕಿತ್ಸೆಯು ನಡೆದು ಸ್ವಲ್ಪ ಉತ್ತಮಗೊಂಡಂತೆ ಕಂಡಿತು ಆದರೂ ಕಳೆದ ಮಂಗಳವಾರ ಅವರಿಗೆ ಜ್ಞಾನತಪ್ಪಿ ಸ್ಥಿತಿಯು ಕಳವಳಕ್ಕೆ ಕಾರಣವಾಯಿತು ಅಲ್ಲಿಂದ ಮುಂದೆ ಅವರ ಸ್ಥಿತಿಯು ಕೆಡುತ್ತಾಹೋಗಿ ಗುರುವಾರ ದಿವಸ ಸ್ವರ್ಗವಾಸಿಗಳಾದರು ಇವರ ಅಗಲುವಿಕೆಯಿಂದ ನಮ್ಮ ಭಾರತಕ್ಕಲ್ಲದೆ ಇಡೀ ಸಾಹಿತ್ಯಪ್ರಪಂಚಕ್ಕೇ ಬಹಳ ನಷ್ಟವಾದಂತಾಯಿತು ಪರಮಾತ್ಮನು ಮೃತರ ಆತ್ಮಕ್ಕೆ ಚಿರಶಾಂತಿಯನ್ನೀಯಲೆಂದು ಹಾರೈಸುತ್ತೇವೆ

* * *

ಕೋಲಾರದಲ್ಲಿ ಸಂಗೀತವಿಷಯಕವಾದ ಉಪನ್ಯಾಸ

ಈ ತಿಂಗಳು ೯ ನೆಯ ತಾರೀಖಿನ ದಿವಸ ಕೋಲಾರದಲ್ಲಿರುವ ಶ್ರೀಕೃಷ್ಣರಾಜೇಂದ್ರ ಜೂಬಿಲಿ ಪುರಭವನದಲ್ಲಿ ಸೀನಿಯರ್ ಅ॥ ಕಮಿಷನರ್ ಮತ್ತು ಪೌರಸಭಾಧ್ಯಕ್ಷರಾದ ಶ್ರೀಮಾನ್ ಜೆ. ಬಿ ಮಲ್ಲಾರಾಧ್ಯರವರು ಎಂ ಎ ಇವರ ಅಧ್ಯಕ್ಷತೆಯಲ್ಲಿ ಆಸ್ಥಾನ ಸಂಗಿತ ವಿದ್ವಾನ್ ಸಂಗೀತಶಾಸ್ತ್ರರತ್ನ ಶ್ರೀ॥ ಕೆ. ವಾಸುದೇವಾಚಾರ್ಯರವರು "ಸಂಗೀತ ಮತ್ತು ಅದರ ಪ್ರಯೋಜನ" ಎಂಬ ವಿಷಯದ ಮೇಲೆ ಅಮೋಘವಾದ ಉಪನ್ಯಾಸವನ್ನು ಮಾಡಿದರೆಂದು ತಿಳಿದುಬರುತದೆ

ಸಾಬೂನುಗಳು

ಒರಿಸ್ಸಾಪ್ರಾಂತದಲ್ಲಿ ಕಟಕ್‌ನಗರದ ಕುಷ್ಠರೋಗಿಗಳ ಆಸ್ಪತ್ರೆಯ ಮುಖ್ಯಾಧಿಕಾರಿಗಳಾದ ಡಾ|| ಜ ಆರ್ ರಾವ್ ಡಿ ಟಿ ಎಮ್ ಇವರಿಂದ

ಆಮ್ಲಪದಾರ್ಥಗಳನ್ನು (Alkalies) ಕೊಬ್ಬು ವಿಶೇಷವಾಗಿರುವ ಎಣ್ಣೆಯೊಡನೆ ಸೇರಿಸಿ ಸೋಪುಗಳನ್ನು ತಯಾರುಮಾಡುವರು ಎಣ್ಣೆಗಳಲ್ಲಿರುವ ಕೊಬ್ಬಿನ ದ್ರಾವಕಗಳ ಕ್ಷಾರವೇ ಈ ಸಾಬೂನಗಳೆನಬಹುದು ಅದಕ್ಕೆ ನಾವು ಉಪಯೋಗಿಸುವ ಎಣ್ಣೆಯ ರೀತಿಗನುಸಾರವಾಗಿ ಸಾಬೂನುಗಳನ್ನು (1) ಪ್ರಾಣಿಸಂಬಂಧವಾದುವೆಂದೂ, (2) ಸಸ್ಯಸಂಬಂಧವಾದುವೆಂದೂ ಎರಡು ಮುಖ್ಯಭಾಗಗಳಾಗಿ ವಿಂಗಡಿಸಬಹುದು

(1) ಪ್ರಾಣಿಗಳ ಕೊಬ್ಬು ಸೇರಿರುವ ಸಾಬೂನುಗಳು ಪ್ರಾಣಿಗಳಿಂದ ತೆಗೆದ ಕೊಬ್ಬುಗಳಿಗೆ ಕಾಸ್ಟಿಕ್ ಸೋಡಾಪುಡಿಯನ್ನು ಸೇರಿಸಿ ಇವುಗಳನ್ನು ತಯಾರಿಸುವರು ಈ ಸೋಪುಗಳನ್ನು ತಯಾರಿಸುವ ಕ್ರಮವು, ಆಯಾ ದೇಶಗಳಲ್ಲಿ ವಿಶೇಷವಾಗಿ ಸಿಕ್ಕುವ ಪ್ರಾಣಿಜಾತಿಗಳನ್ನನುಸರಿಸಿದೆ ಕುರಿಗಳು, ಆಡುಗಳು, ಹಸುಗಳು, ಹೋರಿಗಳು, ಹಂದಿಗಳು, ದೊಡ್ಡ ದೊಡ್ಡ ಮೀನುಗಳು, ತಿಮಿಂಗಿಲಗಳು ಇವುಗಳ ಕೊಬ್ಬುಗಳನ್ನೆಲ್ಲಾ ಇದಕ್ಕೆ ಉಪಯೋಗಿಸುವುದುಂಟು

(2) ಸಸ್ಯಸಂಬಂಧವಾದ ಸೋಪುಗಳು – ಈಗ ವಿಶೇಷವಾಗಿ ಸ್ನಾನಾದಿಗಳಿಗೆ ಉಪಯೋಗಿಸುತ್ತಿರುವ ಸೋಪುಗಳೆಲ್ಲ ಈ ಜಾತಿಯ ಸೋಪುಗಳೇ ! ಇವುಗಳ ಬಣ್ಣ, ವಾಸನೆ ಮುಂತಾದ ಭಿನ್ನಸ್ವಭಾವಗಳೆಲ್ಲ ಇವುಗಳನ್ನು ತಯಾರಿಸಲು ಉಪಯೋಗಿಸುವ ಎಣ್ಣೆಗಳಿಗೆ ಅನುಸಾರವಾಗಿರುವುದು ಸೋಪುಗಳನ್ನು ತಯಾರಿಸುವುದಕ್ಕೆ ಈ ಕೆಳಗೆ ವಿವರಿಸಿರುವ ಎಣ್ಣೆಗಳನ್ನು ಉಪಯೋಗಿಸುವರು

(1) ತೆಂಗಿನೆಣ್ಣೆ (2) ಕಡಲೆಕಾಯಿ ಎಣ್ಣೆ (3) ಲೀನ್‌ಸೀಡ್ ಎಣ್ಣೆ (4) ಹೈಯೆಣ್ಣೆ (5) ಆಲಿವ್ ಎಣ್ಣೆ (6) ತಾಳೆಯೆಣ್ಣೆ, ಅಪೂರ್ವವಾಗಿ ಬಾದಾಮಿ ಯೆಣ್ಣೆ ಸೌತೇಬೀಜದೆಣ್ಣೆ ಇವುಗಳನ್ನೂ ಉಪಯೋಗಿಸುವುದುಂಟು ಮನುಷ್ಯರ ಮೈಯನ್ನು ತೊಳೆಯುವುದಕ್ಕೆ ಉಪಯೋಗಿಸುವ ಸೋಪಿನಲ್ಲಿ, ಒಳ್ಳೆಯ ಸುವಾಸನೆಯನ್ನು ಕೊಡಲು ಯಾವುದಾದರೂ ಕೆಲವು ವಾಸನಾ ದ್ರವ್ಯಗಳನ್ನು ಸೇರಿಸುವರು ಈ ಪದಾರ್ಥಗಳು ಸುಗಂಧ ಪುಷ್ಪಗಳಿಂದ ತಯಾರಿಸಿದುವುಗಳು

ಒಳ್ಳೆಯ ಸೋಪಿನಲ್ಲಿರಬೇಕಾದ ಗುಣಗಳು – ಒಳ್ಳೆಯ ಸೋಪಿನಲ್ಲಿ ಆಮ್ಲಪದಾರ್ಥಗಳಾಗಲಿ ಕೊಬ್ಬಿನ ದ್ರಾವಕಗಳಾಗಲಿ ವಿಶೇಷವಾಗಿರಕೂಡದು ಆಮ್ಲಪದಾರ್ಥವು ವಿಶೇಷವಾಗಿದ್ದಲ್ಲಿ ಚರ್ಮವು ಒರಟಾಗುವುದು ಕೊಬ್ಬಿನ ದ್ರಾವಕಗಳು ವಿಶೇಷವಾಗಿದ್ದಲ್ಲಿ ಚರ್ಮದಲ್ಲಿ ಉರಿಯು ಪ್ರಾರಂಭಿಸುವುದು ಕೊಬ್ಬಿನ ದ್ರಾವಕಗಳೂ, ಆಮ್ಲಪದಾರ್ಥಗಳೂ ತಕ್ಕ ಪ್ರಮಾಣದಲ್ಲಿ ಸೇರಿರಬೇಕು ಇವೆರಡೂ ತಕ್ಕ ಪ್ರಮಾಣದಲ್ಲಿ ಸೇರಿರುವುದೇ ಉತ್ತಮವಾದ ಸೋಪುಗಳ ಲಕ್ಷಣವು

ಅಲ್ಲದೆ ಒಳ್ಳೆಯ ಸೋಪು ಮೃದುವಾಗಿರಬೇಕು ಮತ್ತು ಅದರಲ್ಲಿ ಗಟ್ಟಿಯಾದ (gritty) ಚೂರುಗಳಿರಬಾರದು ಬಹಳ ಮಂದವಾಗಿಲ್ಲದ ಭಾವಿಯ ನೀರಿನಲ್ಲಿ ವಿಶೇಷವಾಗಿ ನೊರೆಯು ಕಾಣಿಸುವುದು ಒಳ್ಳೇಸೋಪಿನ ಲಕ್ಷಣವು

ಒಳ್ಳೆಯ ಸೋಪಿನಿಂದ ದೇಹವನ್ನುಜ್ಜಿ ಸ್ನಾನಮಾಡಿದರೆ, ದೇಹದಮೇಲಿರುವ ಜಿಡ್ಡುಪದಾರ್ಥಗಳನ್ನೂ, ದೇಹದಲ್ಲಿ ಉತ್ಪತ್ತಿಯಾಗಿ ಚರ್ಮದ ಮೇಲಿರುವ ಬೆವರನ್ನೂ, ಬೇರೆ ಧೂಳುಗಳನ್ನೂ ಚೆನ್ನಾಗಿ ಹೋಗಲಾಡಿಸುವುದು

ಸೋಪಿನಿಂದ ದೇಹವನ್ನು ಚೆನ್ನಾಗಿ ತೊಳೆದುಕೊಂಡಮೇಲೆ, ಚರ್ಮವು ಒರಟಾಗಿಯೂ, ಒಣಗಿದಂತೆಯೂ ಇರಕೂಡದು ಸೋಪನ್ನುಪಯೋಗಿಸಿದ ಕೂಡಲೇ, ಚರ್ಮವು ನುಣ್ಣಗೆ ಮೃದುವಾಗಿಯೂ ಆಗಕೂಡದು ಸೋಪನ್ನುಪಯೋಗಿಸುವುದರಿಂದ, ಚರ್ಮದಮೇಲೆ ಕುಳಿತಿರುವ ಧೂಳನ್ನೂ, ಜಿಡ್ಡಿನ ಪದಾರ್ಥಗಳನ್ನೂ ಹೋಗಲಾಡಿಸುವುದರ ಹೊರತು, ಚರ್ಮದಮೇಲೆ ಯಾವ ನ್ಯೂನತೆಯೂ ಕಾಣಕೂಡದು ನಾವು ಈಗ ಸ್ನಾನಕ್ಕೆ ಉಪಯೋಗಿಸುತ್ತಿರುವ ಸೋಪಿನಲ್ಲಿ, ಕೆಲವು ಕೊರತೆಗಳುಂಟು ಅವುವೆಂದರೆ, ಅದನ್ನು ಉಪಯೋಗಿಸಿದಕೂಡಲೇ ಚರ್ಮವು ಒರಟಾಗಿಯೂ, ಒಣಗಿದಂತೆಯೂ ಆಗುವುದು ನಾನು ಎಷ್ಟೋ ವಿದೇಶೀಯ ಸೋಪುಗಳನ್ನೂ, ಸ್ವದೇಶೀ ಸೋಪುಗಳನ್ನೂ ಪರೀಕ್ಷೆಮಾಡುತ್ತಿರುವೆನು ಈ ಮೇಲೆ ವಿವರಿಸಿದ ಕೊರತೆಗಳೇನೂ ಇಲ್ಲದಿರುವ ಸ್ವದೇಶೀಸಾಬೂನುಗಳ ಸಂಖ್ಯೆಯು ಬಹಳ ಕಡಿಮೆ ಈ ಮೇಲೆ ಹೇಳಿದ ದೋಷಗಳಿಲ್ಲದಿರುವ ವಿದೇಶೀಸೋಪುಗಳಲ್ಲಿ (1) ಪಿಯರ್ಸ್ ಗ್ಲಿಸರೈನ್‌ಸೋಪು (2) ರೈಟ್ಸ್‌ಕೋಲ್‌ಟಾರ್ ಸೋಪು (3) ಪಾಮ್ ಆಲಿವ್‌ಸೋಪು ಎಂಬಿವು ಮುಖ್ಯವಾದವು ನಮ್ಮ ದೇಶದಲ್ಲಿ ಸಾಬೂನನ್ನು ತಯಾರಿಸತಕ್ಕವರನೇಕರು, ಇವುಗಳಲ್ಲಿ ಎಲ್ಲಾ ಪದಾರ್ಥಗಳೂ ತಕ್ಕ ಪ್ರಮಾಣದಲ್ಲಿ ಸೇರುವಂತೆ ನೋಡಿಕೊಳ್ಳದಿರುವುದು ಬಹಳ ಶೋಚನೀಯವಾದ ವಿಷಯವು ನಮ್ಮ ದೇಶದಲ್ಲಿ ತಯಾರಾಗುತ್ತಿರುವ ಸೋಪುಗಳಲ್ಲಿ ವಿದೇಶೀ ಸೋಪುಗಳಂತೆ ಎಲ್ಲ ಪದಾರ್ಥಗಳೂ ತಕ್ಕ ಪ್ರಮಾಣಗಳಲ್ಲಿ ಸೇರಿರುವುದಿಲ್ಲ ಇದರಿಂದ ನಾನು ವಿದೇಶೀಸೋಪುಗಳ ಪ್ರಚಾರವನ್ನೇ ಪ್ರೋತ್ಸಾಹಿಸುತ್ತಿರುವೆನೆಂದು ಭಾವಿಸಕೂಡದು ಒಳ್ಳೆಯ ಗುಣವು ಎಲ್ಲಿದ್ದರೂ ಅದನ್ನು ಶ್ಲಾಘಿಸುವುದೇ ನ್ಯಾಯವು

ಸೋಪುಗಳನ್ನು ಉಪಯೋಗಿಸುವ ರೀತಿ—ಪ್ರಾಣಿಗಳ ಕೊಬ್ಬು ಸೇರಿರುವ ಸಾಬೂನುಗಳನ್ನು ಸ್ನಾನಕ್ಕೆ ಉಪಯೋಗಿಸುವವರು ಕಡಿಮೆ ಅಂತಹ ಕೆಲವು ಸೋಪುಗಳಲ್ಲಿ ಕೆಟ್ಟವಾಸನೆ ಇರುವುದು ಪ್ರಾಣಿಗಳ ಕೊಬ್ಬು ಬಹಳ ಜಾಗ್ರತೆಯಾಗಿ ಕೆಟ್ಟುಹೋಗುವುದು ಮತ್ತು ಅವುಗಳನ್ನು ಉಪಯೋಗಿಸುವ ಸೋಪುಗಳಲ್ಲಿಯೂ ಕೆಟ್ಟವಾಸನೆಯು ಬರುವುದು ಅಮೆರಿಕಾ ದೇಶದಲ್ಲಿ ಅವುಗಳನ್ನು ಗ್ರೀನ್‌ಸೋಪುಗಳೆಂದು ಕರೆಯುವರು ಮತ್ತು ಅವುಗಳನ್ನು ತಿಕ್ಕಿ ತೊಳೆಯುವ ಕೆಲಸಗಳಿಗೆ ಮಾತ್ರ ಉಪಯೋಗಿಸುವರು ವಿದೇಶೀಯರು ನಮ್ಮ ದೇಶಗಳಿಗೆ ತಂದು ಇಲ್ಲಿ ಮಾರುತ್ತಿರುವ ಸುಲಭಬೆಲೆಯ ಸಾಬೂನುಗಳೆಲ್ಲ ಈ ಗುಂಪಿಗೆ ಸೇರಿದವುಗಳೇ ! ಆದುದರಿಂದ ಈ ಸಾಬೂನುಗಳನ್ನು ನಾವು ಸ್ನಾನಕ್ಕೆ ಉಪಯೋಗಿಸಬಾರದು

ಸಸ್ಯಸಂಬಂಧವಾದ ಎಣ್ಣೆಗಳಿಂದಲೇ ತಯಾರಿಸಿದ ಸಾಬೂನ್ —ಸ್ನಾನಕ್ಕೆ ಪ್ರಾಯಶಃ ಈ ಸಾಬೂನುಗಳನ್ನೇ ಉಪಯೋಗಿಸುವರು ನಮ್ಮ ಚರ್ಮದ ಮೇಲಿರುವ ಜಿಡ್ಡಿನ ಪದಾರ್ಥಗಳನ್ನೂ ಇತರ ಕಶ್ಮಲಗಳನ್ನೂ ಹೋಗಲಾಡಿಸುವುದಕ್ಕಾಗಿ ನಾವು ಸೋಪುಗಳನ್ನು ಉಪಯೋಗಿಸಬೇಕೇ ಹೊರತು ಚರ್ಮದ ಬಣ್ಣವು ಬದಲಾಯಿಸುವ ಉದ್ದೇಶದಿಂದಲ್ಲ ಅನೇಕಮಂದಿ ಸ್ತ್ರೀಯರು ಸಾಬೂನುಗಳನ್ನು ತಪ್ಪದೆ ಉಪಯೋಗಿಸುವುದರಿಂದ ತಮ್ಮದೇಹದಲ್ಲಿ ಹೊಸಬಣ್ಣವೊಂದು ಬರುವುದೆಂದು ಭಾವಿಸಿರುವರು ಇದು ತಪ್ಪು ಒಳಭಾಗದ ಚರ್ಮದಲ್ಲಿ ಕೆಲವು ಗೂಡುಗಳಿರುವುವು ದೇಹದ ಬಣ್ಣವು ಅದರಲ್ಲಿರುವ ಪದಾರ್ಥಗಳನ್ನನುಸರಿಸುವುದು ನಮ್ಮ ದೇಹದಲ್ಲಿ ಮೇಲಿನ ಪರೆ ಮತ್ತು ಒಳಗಿನ ಚರ್ಮವೆಂದು 2 ಚರ್ಮಗಳಿರುವುವು ಮೇಲಿನ ಚರ್ಮದ ಕೆಳಭಾಗದಲ್ಲಿ, ದೇಹದ ಒಳಭಾಗಗಳೊಡನೆ ಸಂಬಂಧವನ್ನು ಹೊಂದಿದ ಒಳಚರ್ಮವುಂಟು ಇದೇ ವಾಸ್ತವವಾದ ಚರ್ಮವು ಮೇಲಿನ ಪರೆಯಲ್ಲಿ ರಕ್ತನಾಳಗಳಾಗಲಿ, ನರಗಳಾಗಲೀ ಇರುವುದಿಲ್ಲ ಇದರ ಬೆಳವಣಿಗೆಗೆ ಸಹಕಾರಿಯಾಗಿರುವುದು ರಕ್ತದಿಂದ ತಯಾರಾದ ಒಂದು ದ್ರಾವಕವು ಒಳಭಾಗದ ಚರ್ಮದಲ್ಲಿ ಅನೇಕ ರಕ್ತಕಣಗಳೂ ಮತ್ತು 'ಪಾಪಿಲೆ' ಎಂಬ ಚಾಚಿಕೊಂಡಿರುವ ಭಾಗಗಳೂ ಇವೆ ಈ ಗಂಟುಗಳಲ್ಲಿರುವ ಸಣ್ಣ ಸಣ್ಣ ರಕ್ತನಾಳಗಳು ಆ ಒಳಚರ್ಮಕ್ಕೆ ರಕ್ತವನ್ನೊದಗಿಸುವುವು ಈ ಗಂಟುಗಳ ಕೆಳಗೆ 'ಬೇಸಲ್ ಎಪಿತೀಲಿಯಮ್' ಎಂಬ ಪದರವಿರುವುದು ಈ ಪದರದಲ್ಲಿರುವ ರಕ್ತಕಣಗಳಲ್ಲಿ ಪಿಗ್‌ಮೆಂಟ್ ಎಂಬುದೂ, ಮೇಲಾನೋಬ್ಲಾಸ್ಟ್ಸ್ ಎಂಬ ಹೆಸರುಳ್ಳ ಕೆಲವು ರಕ್ತಕಣಗಳೂ ಇರುವುವು ಈ ಪಿಗ್‌ಮೆಂಟಿನಿಂದ ಪ್ರತಿಯೊಬ್ಬರ ದೇಹದ ಬಣ್ಣವೂ ಉಂಟಾಗುವುದು ಬೇಸಿಲ್ ಎಪಿತೀಲಿಯಮ್ ಎಂಬುದರ ಮೇಲು ಭಾಗಗಳಲ್ಲಿರುವ ಅನೇಕ ರಕ್ತಕಣಗಳ ಪದರಗಳೊಳಭಾಗಕ್ಕೆ ನೀರಿಳಿಯಲಾರದು ಆದುದರಿಂದ ಪಿಗ್‌ಮೆಂಟ್ ಕಣಗಳು ಬಹಳ ಒಳಭಾ ದಲ್ಲಿರುವುದರಿಂದಲೂ, ಮೇಲುಭಾಗದಲ್ಲಿ ನೀರಿಳಿಯ ಪದಾರ್ಥವಿರುವುದರಿಂದಲೂ ಅವು ಅಪಾಯಕ್ಕೀಡಾಗ ಸುರಕ್ಷಿತವಾಗಿರುವುವು ಇದರಿಂದ ಸೋಪುಗಳ ಯಾವರೀತಿಯಲ್ಲಿ ಉಪಯೋಗಿಸಿದರೂ ಚರ್ಮದ ಬ ವನ್ನು ಏನೂ ಮಾಡಲಾರವು ಮೇಲೆ ಹೇಳಿರುವ ಚರ್ಮದ ಮೇಲಿನ ಜಿಡ್ಡುಪದಾರ್ಥಗಳನ್ನೂ, ಕಶ್ಮ ಗಳನ್ನೂ ಹೋಗಲಾಡಿಸುವುದೇ ಅದರ ಪ್ರಯೋಜನ

ಚರ್ಮವನ್ನು ಶುದ್ಧಿಗೊಳಿಸುವುದಕ್ಕೆ, ನಮ್ಮ ಸೋಪನ್ನು ಸವರಿ ನೀರನ್ನು ಸುರಿದುಕೊಂಡರೆ ಸಾಲ ಬಹಳ ಗಟ್ಟಿಯಾಗಿಯಾಗಲಿ, ಮೃದುವಾಗಿಯಾ ಇಲ್ಲದಿರುವ ಯಾವುದಾದರೂ ನಾರಿನಿಂದ ಚರ್ಮವನ್ನು ಚೆನ್ನಾಗಿ ತಿಕ್ಕಬೇಕು ಮೈಯನ್ನುಜ್ಜುವ ಪಶ್ಚಿಮದೇಶಗಳಲ್ಲಿ ಸ್ಪಂಜುಗಳನ್ನು ಉಪಯೋಗಿಸುವ ನಮ್ಮ ದೇಶದಂತಿರುವ ಉಷ್ಣದೇಶಗಳಲ್ಲಿ ಸ್ಪಂಜುಗಳ ಪ್ರಯೋಜನವಿಲ್ಲ ಬಹಳ ಪ್ರಯೋಜನಕಾರಿಯ ಸುಲಭವಾಗಿ ದೊರೆಯುವ ಹೀರೇಕಾಯಿಯ ಒಣ ಸಿಪ್ಪೆಯು ಇದಕ್ಕೆ ಒಳ್ಳೆಯ ಸಾಧನವು ಕಾಲ ಕೊಟ್ಟರೆ ಇದು ಎಲ್ಲಾ ಗ್ರಂದಿಗೆಯ ಅಂಗಡಿಗಳಲ್ಲಿಯ ದೊರೆಯುವುದು ಇದು ಬಹಳ ಗಟ್ಟಿಯೂ ಅ ಮೃದುವೂ ಅಲ್ಲ ಇದೊಂದೇ ಮೃದುವಾದ ಚರ್ಮಗಳಿಗೆ ತಕ್ಕಂತಿರುವುದು ಮೈಗೆಲ್ಲಾ ಸೋಪನ್ನು ಹ ಮೇಲೆ ಬಲವಾಗಿ ತಿಕ್ಕಿದರೆ ಸೋಪಿನ ಚೂರು ನಮ್ಮ ಚರ್ಮದಲ್ಲಿರುವ ಸಾವಿರಾರು ರಂಧ್ರಗಳ ಮುಚ್ಚಿಕೊಂಡು ಚರ್ಮದಮೇಲೆ ಯಾವುದೋ ಸ ಪುಡಿಗಳನ್ನು ಒಳದಾಗಿ ಚರ್ಮದಿಂದ ಬೆವರು ಹೊ ಡುವುದಕ್ಕೆ ಅಡೆಯಾಗಿ ಅನೇಕ ಚರ್ಮವ್ಯಾಧಿಗ ಕಾರಣವಾಗುವುವು

ಔಷಧಿಪದಾರ್ಥಗಳನ್ನು ಸೇರಿಸಿದ ಸಾಬೂನುಗ ಈಗೀಗ ವಿದ್ಯಾವಂತರಾದ ಕೆಲವರು ತಮತಮ ಬೇಕಾದ ಔಷಧಿಪದಾರ್ಥಗಳು ಸೇರಿದ ಯಾವುದಾದರೊಂದು ಸಾಬೂನನ್ನು ಉಪಯೋಗಿಸುತ್ತಿರುವ ಔಷಧಪದಾರ್ಥಗಳು ಸೇರಿದ ಈ ಸೋಪುಗಳಿಂದ ವಿ ಶೇಷವಾಗಿ ಉಪಯೋಗವಾಗುವುದು ಇನ್ನೂ ನಿಶ್ಚ ವಾಗಿ ತಿಳಿದಿಲ್ಲ ಸೋಪುಗಳೊಡನೆ ಉಪಯೋಗಿ ತ್ತಿರುವ ಕೆಲವು ಪದಾರ್ಥಗಳು ಕೊಬ್ಬು ಹೆಚ್ಚಾಗಿರ ಎಣ್ಣೆಗಳೊಡನೆ ಸೇರಿದ ಅವುಗಳ ಗುಣಗಳು ಕಡ ಯಾಗುವುವು ಬೇರೆ ಕೆಲವು ಪದಾರ್ಥಗಳು ಸ ಸೋಪುಗಳನ್ನು ಬಳಿದ ಉಜ್ಜಿ ನೀರು ಸುರಿಮುಕೊ ವಷ್ಟು ಕ್ಷಿಪ್ರಕಾಲದಲ್ಲಿ ಯಾವ ಗುಣವನ್ನೂ ತೋ ಲಾರವು ಆರೋಗ್ಯಕರವಾದ ಚರ್ಮವಿರುವವರಿಗೆ ಔಷಧಪದಾರ್ಥಗಳು ಸೇರಿರುವ ಸಾಬೂನುಗಳಿಂದ ಇ ಸೋಪುಗಳಿಂದಾಗುವುದಕ್ಕಿಂತ ಅಧಿಕ ಪ್ರಯೋ ವೇನೂ ಕಾಣದು ಆದುದರಿಂದ ಅವುಗಳನ್ನು ನಿತ್ಯ ಉಪಯೋಗಿಸಬೇಕಾದದ್ದಿಲ್ಲ

ಚರ್ಮವು ಬಹಳ ಮೃದುವಾಗಿಯೂ, ಸೂಕ್ಷ್ಮ ಗಿಯೂ ಇರುವವರು ಔಷಧಪದಾರ್ಥಗಳು ವಿಶೇ ವಾಗಿ ಸೇರಿರುವ ಪದಾರ್ಥಗಳನ್ನುಪಯೋಗಿಸಿದರೆ, ಅ ಚರ್ಮದಲ್ಲಿ ಉರಿಯು ಪ್ರಾರಂಭಿಸಬಹುದು ಸೂ ಮಾನ ಚರ್ಮವಿರುವ ಕೆಲವರ ಮೈಮೇಲೆ ಟಿಂ ಆಫ್ ಆಯೋಡಿನ್ ಅಥವಾ ಬಿನ್ ಅಯೊಡೈ ಆಫ್ ಮರ್ಕ್ಯುರಿ ಮುಂತಾದ ದ್ರಾವಕಗಳನ್ನು ಒಂ ವರ್ತಿ ಸವರಿದರೂ ಚರ್ಮದಲ್ಲಿ ಉರಿಯು ಕಾಣಿಸಿ ಳ್ಳುವುದು ಮತ್ತು ಮೇಲಿನ ಚರ್ಮವು ಉರಿದುಹೋ ಗುವುದು ಅಂಥವರು ವೈದ್ಯರ ಸಲಹೆಯನ್ನು ಕೇ ಔಷಧಪದಾರ್ಥಗಳು ಸೇರಿರುವ ಸಾಬೂನುಗಳನ್ನು ದಿನವೂ ಉಪಯೋಗಿಸಬಾರದು ಸಾಬೂನುಗಳ ಸರಿಯಾದ ರೀತಿಯಲ್ಲಿ ಉಪಯೋಗಿಸದಿದ್ದರೆ, ಅ ಳಿಂದ ಕೆಡಕೇ ಹೆಚ್ಚು

ಗಾಯಗೊಂಡ ಜರ್ಮನ್ ಯೋಧ

ಯುದ್ಧದಲ್ಲಿ ಗಾಯಗೊಂಡ ಅಸಂಖ್ಯ ಸೈನಿಕ ಜರ್ಮನರು ತಾವು ಆಕ್ರಮಿಸಿರುವ ಬೇರೆ ಬೇರೆ ಗಳಿಗೆ ಕಳುಹಿಸುತ್ತಿರುವರೆಂದು ರಷ್ಯಾ ರೇಡಿಯೋ ಸಿದೆ ಪ್ರತಿನಿತ್ಯ ಗಾಯಗೊಂಡವರಿಂದ ತುಂ 18 20 ರೈಲುಗಳು ಜರ್ಮನಿಗೆ ಒಯ್ಯುತ್ತಿವೆಯಂತೆ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಕಾಲದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ರಾರು ಶಿಷ್ಯರ ಮನೆಗಳಿದ್ದು, ಆ ಮಠಾಧಿಕಾರಿಗಳು ವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಆದರೆ ರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯ ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಬರುವರು ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇದನ್ನು ತಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ ರವು ಚೆನ್ನಾಗಿ ತೋರಿಸಲ್ಪಟ್ಟಿದೆ ಆದುದರಿಂದ ಸದರಿ ಪುಸ್ತಕ ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಲ್ಲದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಪೂ ಕೆಲವಂಥ ಕಾಗದಗಳನ್ನು ಉಪಯೋಗಿಸಿರುವುದಲ್ಲದೆ ಸುಂದ ವ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲಿ	ಮೂಲ್ಯ
ಮಕರಧ್ವಜ	೧	೩೦—೦—೦
ಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
ಧೂರ	೧	೨—೦—೦
ಸಿಂದೂರ	೧	೪—೦—೦
ರಸಿಂದೂರ	೧	೪—೦—೦
ಸಿಂದೂರ	೧	೬—೦—೦
ವಂಗ	೧	೩—೮—೦
ಂಗ	೧	೧—೦—೦
ಭಸ್ಮಗಳು		
ಭಸ್ಮ	೧	೪೦—೦—೦
ತಭಸ್ಮ	೧	೪—೦—೦
ಪ್ರಭಸ್ಮ	೧	೦—೮—೦
ಹಭಸ್ಮ	೧	೦—೧೨—೦
ಗಭಸ್ಮ	೧	೦—೮—೦
ಗಭಸ್ಮ	೧	೦—೬—೦
ಕ_ಭಸ್ಮ	೧	೪೦—೦—೦
ಕಭಸ್ಮ	೧	೩—೦—೦
ಲಭಸ್ಮ	೧	೦—೮—೦
ಚಿನಭಸ್ಮ	೧	೦—೮—೦
ಭಸ್ಮ	೧	೦—೮—೦
ದೂರಭಸ್ಮ	೧	೦—೮—೦
ಮುಕ್ತಿಕಾಭಸ್ಮ	೧	೦—೧೨—೦
ತ್ರಭಸ್ಮ	೧	೪೦—೦—೦
ಭಸ್ಮ	೧	೦—೮—೦
ಚಿಪ್ಪಿನ ಭಸ್ಮ	೧	೦—೮—೦
ರಂಗದ ಕೋಡಿನ ಭಸ್ಮ	೧	೦—೮—೦
ನಂತಿಹರತಾಲಭಸ್ಮ	೧	೦—೮—೦
ಪ್ರಾಶ (೧ನೇ ನಂಬರ್)	೧	೨೦—೦—೦
ಜಿತ ಸೂರ್ಯಪುಟಿ	೧	೯—೦—೦
ಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ, ಗಢವಾಲ್ ಯು.ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ! ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ- ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರ ಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿ ನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ** ವಿ ಪಿ ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳಿದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟಿರಬಹುದೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ **ಬೆಲೆ ೮ ರೂಪಾಯಿ.** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವುದು ವಿ. ಪಿ. ಚಾರ್ಜು ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೨—೬
ಸದ್ಯಃ ಶಿಖಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೨—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೨—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೨—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಡಾಕ್ಟರ್ ಜಿ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾ ಗಳನ್ನು

ರು ಪ್ರಸಿದ್ಧ ನಶ್ಯದ ಪುಡಿ ಸ್ಪಷ್ಟವಾಗುವ ಗಳು ಯಾ ರೆ —ಸೀನು ತಲೆನೋವು ಳ್ಳಿಯ ರು ಕಣ್ಣುಗಳಲ್ಲಿ ಗತಕ್ಕ ಸರ್ವವ್ಯಾಧಿಗಳು, ಜಲದೋಷ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಕಟ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶ ಸಹ ಹೆಚ್ಚು ಮಾಡುತ್ತದೆ ಮೂಗುಬೆಟ್ಟಿನ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯನ್ನು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಷ ವುದು ಇವನ್ನು ಅನೇಕಪ್ರಭುಗಳು ಉಪಯೋ ತ್ತಾರೆ ಮಾದರಿ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ಡಜನ್ ಒಂದಕ್ಕೆ ಕ್ರಯ ರೂ ೨ ೮ ೦ ವಿ ಪಿ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿ

ಗುರುಬಸಪ್ಪ ಅಂಡ್ ಕಂಪೆನಿ ಲಿಮಿಟೆಡ

[13] ಪೋ ಬಾ ೫೧೦,

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ

ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)
ಶಿಖಾಸೂತ್ರಸಿದ್ಧಾಂತದರ್ಪಣ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)
ವೀರಶೈವರತ್ನ (೫ನೆಯ ಆವೃತ್ತಿ, ೩೦ಮಹತ್ತರ ಫೋಟೋಗಳಿರುವುವು)
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)
ಕೇನೋಪನಿಷತ್ (ಕನ್ನಡ ಟೀಕಾಸಹಿತ)
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)
ವೀರಶೈವಸಿದ್ಧಾಂತಸುಧಾಕರ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)
A brief life sketch of Pandit Sri Kashinatha Shastriji (*English*)
The Philosophical Aspect of Virasaivism (*English*)
Speeches by Pandit Shri Kashinatha Shastriji *English*)
लिंगधारणचंद्रिका (संस्कृत)
वीरशैवरत्न (मराठी)
महानारायणोपनिषत् (वीरशैवभाष्य-संस्कृत)
पुरुषसूक्तम् (वीरशैवप्राचीनभाष्योपेतम्)
नंदिकेश्वरकारिका (संस्कृत)

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

STERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೮ನೇ ಆಗಸ್ಟ್ ೧೯೪೧ [ಸಂಚಿಕೆ ೧೬

ರವೀಂದ್ರನಾಥ ಠಾಗೂರ್‌ರವರ ಸಂಕ್ಷಿಪ್ತ ಜೀವನಚರಿತ್ರೆ

ದ್ವಿಖ್ಯಾತರಾದ ಡಾ॥ ರವೀಂದ್ರನಾಥ ಠಾಗೂರ್ ದೇ ಆಗಸ್ಟ್ ತಾ॥ ೭ ನೇ ಗುರುವಾರ ದಿವಸ ನಗರದಲ್ಲಿ ತಮ್ಮ ೮೦ನೆಯ ವಯಸ್ಸಿನಲ್ಲಿ ಪರಂ ನ್ನೈದಿದರೆಂಬ ವಿಷಯವು ಕಳೆದವಾರದ ನಮ್ಮ ಯಲ್ಲಿ ಪ್ರಕಟವಾಗಿರುವದು ಸರಿಯಷ್ಟೆ ! ಈಗ ಂಕ್ಷಿಪ್ತ ಜೀವನಚರಿತ್ರವು ಪ್ರಕಟಿಸಲ್ಪಡುವುದು

ಂದ್ರನಾಥ ಠಾಗೂರ್‌ರವರು ೧೮[illegible]೧ ನೆಯ ೀ ತಾ॥ ೭ರಲ್ಲಿ ಕಲ್ಕತ್ತಾ ನಗರದಲ್ಲಿ ಜನಿಸಿದರು ಂದೆ ಮಹರ್ಷಿ ದೇವೇಂದ್ರನಾಥ್ ಠಾಗೂರ್ ಶ್ರೀಮತಿ ಶಾರದಾದೇವಿ ಠಾಗೂರ್‌ರವರ ವಂಶಿ ಶ್ವರ್ಯವಂತರೂ ವಿದ್ಯಾವಂತರೂ ಕಲಾಭಿ ೂ ಆಗಿದ್ದರು ಇವರ ವಂಶಿಕರಲ್ಲಿ ಬಹು ಗ್ರಂಥಕರ್ತರೂ ಕವಿಗಳೂ ಲಲಿತಕಲಾನಿಪು ಂಗೀತಶಾಸ್ತ್ರ ಪಂಡಿತರೂ ಆಗಿದ್ದಾರೆ ರವೀಂದ್ರ ಗೂರ್‌ರವರ ಪೂರ್ವಿಕರು ಹದಿನೇಳನೇ ಶತ ಬಂಗಾಳದ ಅರಸರಾಗಿದ್ದ ಮಹಮದೀಯರ ದಲ್ಲಿದ್ದಾಗ, "ಠಾಕೂರ್" ಎಂಬ ಬಿರುದು ದೂ ಅದು ಈಗ ಉಚ್ಚಾರಣೆಯ ದೋಷದಿಂದ ರ್" ಆಗಿ ಪರಿಣಮಿಸಿದೆಯೆಂದೂ ಹೇಳಲಾಗಿದೆ

ಂದ್ರನಾಥರ ಬಾಲ್ಯವಿದ್ಯಾಭ್ಯಾಸವು ಕಲ್ಕತ್ತಾ ೀ ನಡೆಯಿತು ಇವರ ತಾಯಿ ಶ್ರೀಮತಿ ೀವಿಯವರು ತಮ್ಮ ಮಗನಿಗೆ ಇನ್ನೂ ೧೪ ದ್ದಾಗಲೇ ತೀರಿಹೋದರು ರವೀಂದ್ರನಾಥರು ಸಾಹಿತ್ಯವನ್ನು ಅಭ್ಯಾಸಮಾಡಿ ತಮ್ಮ ೧೫ ಸ್ಸಿನಲ್ಲೇ ಪದ್ಯಗಳನ್ನು ರಚಿಸಲು ಉಪಕ್ರಮಿಸಿ ವರು ತಮಗೆ ಇನ್ನೂ ೧೮ ವರ್ಷ ತುಂಬುವು ಗಿ ಸುಮಾರು ೬,೦೦೦ ಸಾಲು ಪದ್ಯಗಳನ್ನು ಹೆಸರು ಪಡೆದರು. ೧೮೭೬ ನೇ ಇಸವಿಯಲ್ಲಿ ತಮ್ಮ ಹಿರಿಯ ಸಹೋದರರೊಬ್ಬರೊಡನೆ ಗೆ ಹೋಗಿ, ಬ್ರೈಟನ್ ಎಂಬಲ್ಲಿ ಸಾರ್ವ ಾಲೆಗೆ ಸೇರಿ ವಿದ್ಯಾಭ್ಯಾಸ ಮಾಡಲು ಉಪ ರು ನ್ಯಾಯಶಾಸ್ತ್ರವನ್ನು ಕಲಿಯಬೇಕೆಂಬುದು ದವರಿನ ಆಶೆಯಾಗಿದ್ದಿತು ಅನಂತರ ಇವರು ಪಟ್ಟಣಕ್ಕೆ ಹೋಗಿ ಅಲ್ಲಿಯ ಯೂನಿವರ್ಸಿಟಿ ಸೇರಿಕೊಂಡು ಅಲ್ಲಿ ಇಂಗ್ಲೀಷ್ ಸಾಹಿತ್ಯ ವನ್ನಾಗಿ ಅಭ್ಯಾಸಮಾಡಿದರು ಆದರೆ ಇವರು ನಿಲಯದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಪದವಿಯನ್ನು ಪಡೆಯದೆ ೧೮೮೦ರಲ್ಲಿ ಹಿಂದೂ ವಾಪಸು ಬಂದುಬಿಟ್ಟರು

ದ್ರನಾಥರವರು ತಮ್ಮ ೨೨ ನೇ ವಯಸ್ಸಿನಲ್ಲಿ ಮೃಣಾಲಿನಿದೇವಿಯವರನ್ನು ವಿವಾಹಮಾಡಿ ಸಂಸಾರ ಸುಖವನ್ನನುಭವಿಸುತ್ತಿದ್ದಾಗ ಮಧ್ಯಪ್ರಾಯದಲ್ಲಿ ಅಂದರೆ ೧೯೦೨ ನೇ ಇಸವಿಯಲ್ಲಿ ಇವರಿಗೆ ಪತ್ನೀವಿಯೋಗವು ಪ್ರಾಪ್ತವಾಯಿತು ಇವರ ಉದರದಲ್ಲಿ ಇಬ್ಬರು ಗಂಡು ಮತ್ತು ಇಬ್ಬರು ಹೆಣ್ಣುಮಕ್ಕಳು ಜನಿಸಿದರು ಈ ಪೈಕಿ ಒಬ್ಬ ಮಗಳು ೧೯೦೪ ರಲ್ಲೂ ಒಬ್ಬ ಮಗನು ೧೯೦೭ ರಲ್ಲೂ ದೈವಾಧೀನರಾದರು

ಬಾಲ್ಯವಯಸ್ಸಿನಲ್ಲೇ ರವೀಂದ್ರರು ಅನೇಕ ಪದ್ಯಗದ್ಯಗಳನ್ನಲ್ಲದೆ ಕೆಲವು ನಾಟಕಗಳನ್ನೂ ಸಹ ಬಂಗಾಳಿ ಭಾಷೆಯಲ್ಲಿ ಬರೆದರು ರವೀಂದ್ರರಿಗೆ ಸುಮಾರು ೫೦ ವರ್ಷ ತುಂಬುವವರೆಗೂ ಅವರು ಇಂಗ್ಲೀಷ್ ಭಾಷೆಯಲ್ಲಿ ಬರೆದುದೇ ಇಲ್ಲವೆಂದು ಹೇಳಲಾಗಿದೆ ಅವರಿಗೆ ಗದ್ಯಪದ್ಯಗಳನ್ನು ಬರೆಯಲು ಅವರ ಕೈ ಎಂದೆಂದೂ ನೋಯದೇ ಇಲ್ಲ ಅವರು ಬರೆಯದಿದ್ದಾಗ ಚಿತ್ರಲೇಖನದಲ್ಲಿ ಮಗ್ನರಾಗುತ್ತಿದ್ದರು ಇವರು ತಮ್ಮ ೧೫ ನೇ ವಯಸ್ಸಿನಿಂದ ಹಿಡಿದು ೮೦ ನೇ ವಯಸ್ಸಿನವರೆಗೆ ಪ್ರತಿವರ್ಷದಲ್ಲಿಯೂ ಹೊಸ ಪುಸ್ತಕಗಳನ್ನು ವಿರಚಿಸದೆ ಸುಮ್ಮನಿರಲಿಲ್ಲ

ಇವರು ೧೯೧೨ ನೇ ಇಸವಿಯಲ್ಲಿ ಬಹಳ ಕಾಯಿಲೆಯನ್ನನುಭವಿಸಿ ಎದ್ದಮೇಲೆ ಶಸ್ತ್ರಚಿಕಿತ್ಸೆಯನ್ನು ಪಡೆಯಬೇಕೆಂಬ ಉದ್ದೇಶದಿಂದ ಇಂಗ್ಲೆಂಡಿಗೆ ಹೋದರು ಅಲ್ಲಿ ಸರ್ ವಿಲಿಯಮ್ ರೋತೆನ್‌ಸ್ಟೈನ್‌ರವರು ಇವರ "ಗೀತಾಂಜಲಿ" ಎಂಬ ಪದ್ಯಮಾಲೆಯನ್ನೋದಿ ಮುಗ್ಧರಾಗಿದ್ದುದರಿಂದ ಇವರನ್ನು ಆ ದೇಶದ ಮಹಾಮಹಾ ಪಂಡಿತರಿಗೆ ಪರಿಚಯಮಾಡಿಕೊಟ್ಟರು. ಇವರ ಕವಿತಾ ಸಾಮರ್ಥ್ಯವನ್ನು ಎಲ್ಲರೂ ಮೆಚ್ಚಿ ಕೊಂಡಾಡಿದರು ಅನಂತರ "ಗೀತಾಂಜಲಿಯ" ಇಂಗ್ಲಿಷ್ ಭಾಷಾಂತರವು ಇಂಗ್ಲೆಂಡಿನಲ್ಲೇ ಪ್ರಕಟವಾಗಿ ಅನೇಕ ಸಾರೆ ಪುನರ್ಮುದ್ರಣವಾಯಿತು ೧೯೧೩ ನೇ ಇಸವಿಯಲ್ಲಿ ಇವರಿಗೆ ವಿಶ್ವಸಾಹಿತಿಗಳಿಗೆ ದೊರೆಯುವ ಮಹಾಗೌರವವಾದ "ನೋಬೆಲ್" ಪಾರಿತೋಷಕವು ದೊರೆಯಿತು

ಸನ್ ೧೯೦೧ ನೇ ಇಸವಿಯ ಕೊನೆಯಲ್ಲಿ ಠಾಗೂರ್‌ರವರು ಶಾಂತಿನಿಕೇತನದಲ್ಲಿ ನೆಲಸಿದರು ಈ ಪ್ರದೇಶದಲ್ಲಿ ಅವರ ತಂದೆಯವರು ಒಂದು ಆಶ್ರಮವನ್ನು ಸ್ಥಾಪಿಸಿ ಅದರ ಖರ್ಚುವೆಚ್ಚಗಳಿಗೆ ತಕ್ಕ ವ್ಯವಸ್ಥೆಯನ್ನು ಮುಂದಾಗಿಯೇ ಮಾಡಿದ್ದರು ಈ ಪ್ರದೇಶದಲ್ಲಿ ರವೀಂದ್ರನಾಥರು ಒಂದು ಪಾಠಶಾಲೆಯನ್ನು ಸ್ಥಾಪಿಸಿದರು. ಬಂಗಾಳದ ಹಲವು ಮಂದಿ ಪಂಡಿತರೂ ವಿದ್ಯಾನಿಪುಣರೂ ಇವರೊಡನೆ ಸೇರಿದರು. ಇಲ್ಲಿ ವಿದ್ಯಾರ್ಥಿಗಳೂ ಅಧ್ಯಾಪಕರೂ ಏಕತ್ರವಿದ್ದು ವಿದ್ಯಾರ್ಜನೆ ಮಾಡುವ ಏರ್ಪಾಡು ಮಾಡಿದರು ೧೯೧೮ ನೇ ಇಸವಿಯಲ್ಲಿ "ವಿಶ್ವಭಾರತಿ" ಎಂಬ ವಿಶ್ವಸಂಸ್ಕೃತಿಯ ಕೇಂದ್ರವನ್ನು ಸ್ಥಾಪಿಸಿದರು ಇಲ್ಲಿ ಪ್ರಪಂಚದ ನಾನಾಜನಾಂಗಗಳವರಿಗೆ ಸಮಸ್ತ ವಿದ್ಯೆಗಳನ್ನೂ ಸಂಸ್ಕೃತಿಯನ್ನೂ ಕಲಿಸಲು ಅವಕಾಶ ಮಾಡಿರುತ್ತಾರೆ ಈ ವಿಶ್ವಭಾರತಿ ವಿದ್ಯಾನಿಲಯವು ಪೂರ್ವ ಮತ್ತು ಪಾಶ್ಚಾತ್ಯದೇಶಗಳವರಿಗೆ ಸಜೀವ ಸಂಬಂಧವನ್ನು ಬೆಳೆಸಲು ಮುಖ್ಯಸಾಧನವಾಗಿದೆಯೆಂದು ಹೇಳಲಾಗಿದೆ

ಹಿಂದೂಸ್ಥಾನದ ವೈಸರಾಯ್‌ರವರಾಗಿದ್ದ ಲಾರ್ಡ್ ಕರ್ಜನ್‌ರವರು ೧೯೦೫ ನೇ ಇಸವಿಯಲ್ಲಿ, ಬಂಗಾಳ ಅಧಿಪತ್ಯದಲ್ಲಿ ಪೂರ್ವ ಬಂಗಾಳವನ್ನು ಅಸ್ಸಾಮಿನಿಂದ ಪ್ರತ್ಯೇಕಿಸಿದಾಗ ಹಿಂದೂಗಳಿಗೆ ಅತ್ಯಂತ ಅಸಮಾಧಾನವುಂಟಾಯಿತು ಆಗ ನಡೆದ ರಾಜಕೀಯ ಚಳವಳಿಗಳಲ್ಲಿ ರವೀಂದ್ರನಾಥ ಠಾಗೂರ್‌ರವರು ಮುಂದಾಳುಗಳಾಗಿದ್ದರು ರವೀಂದ್ರರು ಹಿಂದೂ ಮಹಮದೀಯರನ್ನು ಒಟ್ಟುಗೂಡಿಸಲು ಸತತವಾಗಿ ಪ್ರಯತ್ನಪಡುತ್ತಿದ್ದರು ಸಮಾಜೋದ್ಧಾರಕ ಕಾರ್ಯಗಳಲ್ಲಿ ಇವರಿಗೆ ತೀವ್ರವಾದ ಆಸಕ್ತಿ ಇದ್ದಿತು ರಾಷ್ಟ್ರೀಯ ಚಳವಳಿಯು ಹಿಂಸಾತ್ಮಕವಾದ ರೂಪವನ್ನು ತಾಳಿದಾಗ ಅದನ್ನು ಬಿಟ್ಟುಬಿಟ್ಟರು

ಯೂರೋಪಿನ ಘೋರ ಯುದ್ಧವು ೧೯೧೪-೧೮ನೇ ಸಾಲಿನಲ್ಲಿ ನಡೆದಾಗ ಬ್ರಿಟಿಷರು ಯಾವ ತತ್ವಸಾಧನೆಗಾಗಿ ಹೋರಾಡುತ್ತಿದ್ದರೋ ಅದನ್ನು ಪ್ರಶಂಸಿಸಿ ಅನೇಕ ಪದ್ಯಗಳನ್ನು ರಚಿಸಿದರು ೧೯೧೬ ನೇ ಇಸವಿಯಲ್ಲಿ ಇವರು ಜಪಾನ್, ಅಮೆರಿಕ ಮುಂತಾದ ದೇಶಗಳಲ್ಲಿ ಸಂಚರಿಸಿ ಅಲ್ಲಲ್ಲಿ ಹಿಂದೂಸ್ಥಾನದ ಸಂಸ್ಕೃತಿಯನ್ನು ಕುರಿತು ಅನೇಕ ಭಾಷಣಗಳನ್ನು ಮಾಡಿದರು

ಸನ್ ೧೯೧೯ನೇ ಇಸವಿಯಲ್ಲಿ ಪಂಜಾಬಿನ ಜಾಲಿಯನ್‌ವಾಲಾಬಾಗ್ ಎಂಬಲ್ಲಿ ನಡೆದ ದುರಂತವೊಂದು ಇವರ ಮನಸ್ಸನ್ನು ಕಲಕಿಬಿಟ್ಟಿತು ಆಗ ಬ್ರಿಟಿಷ್ ಸರ್ಕಾರದವರು ತಮಗೆ ದಯಪಾಲಿಸಿದ್ದ "ಸರ್ ಎಂಬ ಬಿರುದನ್ನು ಹಿರುಗಿ ತೆಗೆದುಕೊಳ್ಳಬೇಕೆಂದು ವೈಸ್ರಾಯರನ್ನು ಪ್ರಾರ್ಥಿಸಿದರು ಇವರ ಪ್ರಾರ್ಥನೆಗೆ ಅಂಗೀಕಾರ ದೊರೆಯದೆ ಹೋಯಿತು ಆದಾಗ್ಯೂ ಠಾಗೂರ್‌ರವರು ಅಂದಿನಿಂದಲೂ "ಸರ್ ಎಂಬ ಬಿರುದು ಬಳಸುವುದನ್ನೇ ಬಿಟ್ಟುಬಿಟ್ಟರು

ಸನ್ ೧೯೪೦ ನೇ ಆಗಸ್ಟ್ ತಾ॥ ೭ ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದವರು ಇವರಿಗೆ "ಡಾಕ್ಟರ್ ಆಫ್ ಲೆಟರ್ಸ್" ಎಂಬ ಗೌರವ ಪ್ರಶಸ್ತಿಯನ್ನು ಸರ್ ಮಾರಿಸ್ ಗ್ವೈಯರ್ ಮತ್ತು ಸರ್ ಎಸ್ ರಾಧಾಕೃಷ್ಣನ್‌ರವರ ಮೂಲಕ ದಯಪಾಲಿಸಿದರು ಇಂತಹ ಅಪೂರ್ವವ್ಯಕ್ತಿಯ ಜೀವನ ಯಾತ್ರೆಯು ಆಗಸ್ಟ್ ತಾ ೭ ನೇ ಗುರುವಾರ ಮಧ್ಯಾಹ್ನ ಮುಕ್ತಾಯಗೊಂಡಿತು

ಕಲ್ಕತ್ತಾ ಪಟ್ಟಣದ ಲಕ್ಷಾಂತರ ಪ್ರಜೆಗಳು ಅವರ ಕಳೇಬರದೊಡನೆ ಮೌನದಿಂದ ಸ್ಮಶಾನಕ್ಕೆ ಹೋಗಿ ತಮ್ಮ ಅಂತ್ಯಭಕ್ತಿಯನ್ನು ಸಲ್ಲಿಸಿದರು ದೇಶವಿದೇಶಗಳವರೆಲ್ಲರೂ ಡಾ॥ ಠಾಗೂರ್‌ರವರ ನಿಧನದ ಬಗ್ಗೆ ತಮ್ಮ ಸಂತಾಪವನ್ನು ಸೂಚಿಸಿ ಕಣ್ಣೀರು ಇಡುತ್ತಿದ್ದಾರೆ.

(ವ್ಯ ಪ)

ಮೈಸೂರು ಸರ್ಕಾರದವರು ರೈಲ್ವೆಗೆ ಸೇರಿದ ಯಾವ ಪ್ರದೇಶದೊಳಗಾಗಲಿ ರೈಲ್ವೆಬಂಡಿಗಳೊಳಗಾಗಲಿ ಯಾವ ಮನುಷ್ಯನೂ ಭಿಕ್ಷೆಬೇಡಕೂಡದೆಂದೂ, ಚಂದಾ ಅಥವಾ ಧರ್ಮವನ್ನು ಕೇಳಕೂಡದೆಂದೂ ಆಜ್ಞೆಯನ್ನು ಹೊರಡಿಸಿದ್ದಾರೆ

॥ ಶ್ರೀ ಜಗದ್ಗುರು ದಾರುಕಾಚಾರ್ಯಾಯನಮಃ ॥

ಸೌಹಾರ್ದ ಅಥವಾ ಸೋದರಭಾವ

ಲೇ—ಮಲ್ಲಿಕಾರ್ಜುನಾರಾಧ್ಯ ರಾಣೆಬೆನ್ನೂರು
ಮುಳೀಮಠ, ಮುದೇನೂರ.

ಸೋದರಭಾವವೆಂದರೆ ಸಮಸ್ತ ಜೀವರು ಸಮಭಾವವನ್ನು ಅನುಷ್ಠಾನಕ್ಕೆ ತರಬೇಕೆಂಬುದು ಅಂದರೆ ಎಲ್ಲರೂ ಪಂಕ್ತಿಭೇದವಿಲ್ಲದೆ ಸ್ನಾನ ಭೋಜನಾದಿಗಳನ್ನು ಮಾಡುವದೆಂತಲೂ, ಜಾತಿ ಕುಲ ಗೋತ್ರಗಳ ತಾರತಮ್ಯವಿಲ್ಲದೆ ವಿವಾಹಗಳನ್ನು ಮಾಡಬೇಕೆಂತಲೂ, ಪಂಡಿತಪಾಮರರನ್ನು ಒಂದೇರೀತಿಯಾಗಿ ಎಣಿಸಬೇಕೆಂತಲೂ, ಹಾಗೆ ಮಾಡದಪಕ್ಷದಲ್ಲಿ ಭ್ರಾತೃಭಾವವು ಸಿದ್ಧಿಸುವುದಿಲ್ಲವೆಂತಲೂ, ಆದ್ದರಿಂದ ಸರ್ವ ಸೋದರಭಾವವು ಅಸಂಗತವೆಂತಲೂ, ಸಂಘಗಳಲ್ಲಿರುವ ಕಟ್ಟುಪಾಡುಗಳನ್ನು ತೆಗೆದು ಹಾಕದೆ ಸೋದರಭಾವವನ್ನು ಕುರಿತು ಸಂಭಾಷಣೆಗಳನ್ನು ಮಾಡುವುದು ನಿಷ್ಪ್ರಯೋಜನವೆಂತಲೂ ಬಹುಜನರು ತಿಳಿದುಕೊಂಡಿರುತ್ತಾರೆ ಆದ್ದರಿಂದ ಈ ವಿಷಯವು ವಿಚಾರಣೀಯವಾಗಿರುವುದು

ಸೋದರರೆಂಬಮಾತ್ರಕ್ಕೆ ಎಲ್ಲರೂ ಸಮಾನರಾದಾರೆ? ಪ್ರಾಣಿಗಳನ್ನು ಸಮಾನದೃಷ್ಟಿಯಿಂದ ನೋಡಬೇಕೆಂದ ಮಾತ್ರಕ್ಕೆ ಜನ ದನ ನಾಯಿ ಪಕ್ಷಿಗಳನ್ನು ಒಂದೆಡೆಯಲ್ಲಿ ಸೇರಿಸಿ ಹುಲ್ಲನ್ನಾಗಲೀ, ಅನ್ನವನ್ನಾಗಲೀ ಹಾಕಲಿಕ್ಕಾದೀತೆ? 'ಸೋದರ ಎಂಬ ಪದದಲ್ಲಿಯೇ ದೊಡ್ಡವನು ಚಿಕ್ಕವನು ಎಂಬ ಅರ್ಥವು ರೂಢವಾಗಿದೆ ಅಣ್ಣನಲ್ಲಿ ತಮ್ಮನು ಗುರುತ್ವವನ್ನೂ ತಮ್ಮನಲ್ಲಿ ಅಣ್ಣನು ವಾತ್ಸಲ್ಯ, ಪ್ರೀತಿಗಳನ್ನೂ ತೋರಿಸತಕ್ಕದ್ದೇ ಹೊರತು ಅಣ್ಣತಮ್ಮಂದಿರುಗಳು ಸಮತ್ವವನ್ನು ಅವಲಂಬಿಸುವುದಿಲ್ಲವಷ್ಟೆ! ಇದೇ ರೀತಿಯಲ್ಲಿ ಈಶ್ವರನನ್ನು ಜಗದೇಕಪಿತೃವನ್ನಾಗಿ ಭಾವಿಸಿ ಸಮಸ್ತ ಭೂತಗಳನ್ನು ಏಕೋದರರಾಗಿ ಭಾವಿಸತಕ್ಕದ್ದೆಂದರೆ, ದೊಡ್ಡವರಲ್ಲಿ ಚಿಕ್ಕವರು ನಮ್ರಭಾವವನ್ನು ವಹಿಸಿ ಅವರ ಆಜ್ಞೆಗೆ ಒಳಪಟ್ಟು ನಡೆಯುವುದೂ, ಚಿಕ್ಕವರಲ್ಲಿ ಪ್ರೇಮ, ಪುತ್ರಭಾವವನ್ನು ಇಟ್ಟು ಅವರುಗಳ ಅಭಿವೃದ್ಧಿಗೋಸ್ಕರ ದೊಡ್ಡವರು ಪ್ರವರ್ತಿಸಿ, ಅವರನ್ನು ತಮ್ಮಂತೆ ಮಾಡುವುದೂ ಸಹಜಧರ್ಮವಾಗಿದೆ

ಸೋದರಭಾವವೆಂದರೆ ಸಮಸ್ತ ಜೀವಕೋಟಿಗಳು ಅಣ್ಣತಮ್ಮಂದಿರಂತೆ ನಡೆದುಕೊಳ್ಳಬೇಕೆಂಬುವುದೇ ಅಭಿಪ್ರಾಯವು ಅಂದರೆ ಒಡಹುಟ್ಟಿದವರಂತೆ ಅನ್ಯೋನ್ಯಾನುರಾಗವನ್ನು ಹೊಂದಿ ಇತರರ ಸುಖದುಃಖಗಳನ್ನು ತಮ್ಮ ಸುಖದುಃಖಗಳಂತೆ ಭಾವಿಸಿ ಅನ್ಯೋನ್ಯ ಸಹಕಾರಿಗಳಾಗಿರಬೇಕೆಂಬುದೇ ಮುಖ್ಯ ಭಾವ ಒಂದು ಗೃಹಕೃತ್ಯದಲ್ಲಿ ಪ್ರತಿಯೊಬ್ಬನೂ ತನ್ನ ಸುಖವನ್ನೇ ನೋಡಿಕೊಳ್ಳುತ್ತಾ ಇತರರ ಕಷ್ಟನಷ್ಟಗಳನ್ನು ಲೆಕ್ಕಿಸದೆ ಇದ್ದಲ್ಲಿ ಕುಟುಂಬದಲ್ಲಿ ಸುಖಶಾಂತಿಗಳಿರುವವೆ? ಇದೇ ರೀತಿಯಲ್ಲಿ ಭಗವತ್ಕುಟುಂಬವಾದ ಈ ಸರ್ವಭೂತಗಳಲ್ಲೂ ಆತ್ಮವತ್ಸರ್ವಭೂತಾನಿ ಎಂಬಂತೆ ತನ್ನಂತೆಯೇ ಇತರರನ್ನೂ ತಿಳಿಯುತ್ತಾ ಸರ್ವಭೂತಹಿತಕ್ಕೋಸ್ಕರ ಮನಃಪೂರ್ವಕವಾಗಿ ಪ್ರಯತ್ನಮಾಡುವುದೇ ಜಗತ್ಕುಟುಂಬಿಯಾದ ಜಗದೇಕಪಿತನಿಗೆ ಪ್ರೀತಿಕರವಾದದ್ದೆಂದು ತಿಳಿದು ನಡೆಯುವುದೇ ಸೋದರಭಾವವು "ತನ್ನಂತೆ ಪರರ ಬಗೆದಡೆ ಕೈಲಾಸ ಬಿನ್ನಣವಕ್ಕು' ಎಂಬ ಸರ್ವಜ್ಞಮೂರ್ತಿಯ ವಚನಾಭಿಪ್ರಾಯವು ಇದೇ ಇರುವುದು

ಒಂದೇ ಭಗವತ್ತತ್ವವನ್ನೇ ನಾನಾನಾಮಗಳಿಂದ ನಾನಾವಿಧವಾಗಿ ನಿರೂಪಿಸುವವರಾಗಿ, ಜಗತ್ತಿನಲ್ಲಿ ನಾನಾಮತಾವಲಂಬಿಗಳು ತಮ್ಮತಮ್ಮ ಮತಗಳನ್ನು ಚೆನ್ನಾಗಿ ಅರಿತು ಪರಮತಗಳನ್ನು ದ್ವೇಷಿಸದೆ ಸೋದರಭಾವವನ್ನನುಸರಿಸಿ ಪರಸ್ಪರ ಸಹಾಯಮಾಡುತ್ತಾ ಭಗವದ್ಭಕ್ತಿಯನ್ನು ವೃದ್ಧಿಮಾಡಿಕೊಂಡು ಪ್ರತಿಯೊಬ್ಬರೂ ಈಶ್ವರನ ಕುಟುಂಬಕ್ಷೇಮವನ್ನು ಬಯಸಿ "ಅದ್ವೇಷಃ ಸರ್ವಭೂತಾನಾಂ ಮೈತ್ರೀಕರುಣ ಏವ ಚ । ನಿರ್ಮಮೋ ನಿರಹಂಕಾರಃ" ॥ ಎಂಬಂತೆ ಸರ್ವಭೂತಗಳಲ್ಲಿಯೂ ದ್ವೇಷಾಸೂಯಾರಹಿತರಾದ್ದ ಮಾತ್ರಕ್ಕೆ ಸಾಲದಾದ್ದರಿಂದ ಮೈತ್ರಿಯನ್ನು ಬೆಳೆಯಿಸಬೇಕು ಅಂತಹ ಮೈತ್ರಿಯೂ ಸಹ ಕಾಲಾನುಕಾಲದಲ್ಲಿ ಸ್ವಪ್ರಯೋಜನದಲ್ಲಿ ಪರಿಣಮಿಸೀತೆಂಬ ಸದಭಿಪ್ರಾಯದಿಂದ ಕರುಣೆಯನ್ನು ಅಭ್ಯಾಸಮಾಡಬೇಕು ತದನಂತರ ನನ್ನದೆಂಬ ಸ್ವಾತ್ಮಾಭಿಮಾನವನ್ನು ತ್ಯಜಿಸಬೇಕು ಅಹಂಕಾರವನ್ನು ಜಯಿಸಿ ತಾನು ಈಶ್ವರನಿಗೋಸ್ಕರ ಹುಟ್ಟಿದವನು ನಾನು ಅವನ ಉಪಕರಣವು ಅವನ ಪ್ರಪಂಚದಲ್ಲಿ ಅವನ ಮಕ್ಕಳ ಸಂಗಡ ಜಗಳವಾಡದೆ ಅವರ ಸ್ವತ್ತನ್ನು ಅಪಹರಿಸದೆ ಅವರಿಗೆ ಮೋಸಮಾಡದ ತನ್ನಂತೆಯೇ ಇತರರನ್ನೂ ಭಾವಿಸುತ್ತಾ ತನಗಿರುವ ಹಕ್ಕು ಇತರರಿಗೂ ಇರುವದೆಂದು ತಿಳಿದು ವರ್ತಿಸುವುದೇ ನಿಜವಾದ ಸೋದರಭಾವವು,ನಿಜವಾದ ಸೌಹಾರ್ದವು, ಮತ್ತೆ ಬೇರೆವಿಧವಾದ ಕೃತಕ ಸೌಹಾರ್ದವಲ್ಲ 'ಜಾತಿ ಬೇರೆಯಾದರೂ ನೀತಿ ಒಂದೇ ಎಂಬ ಲೋಕೋಕ್ತಿಯೂ ಇದೇ ಅಭಿಪ್ರಾಯವನ್ನು ಸೂಚಿಸುತ್ತದೆ

ಜೀವರೆಲ್ಲರೂ ಈಶ್ವರಾಂಶಗಳೆಂತಲೂ, ಆದಿಯಲ್ಲಿ ಕಿಂಚಿಜ್ಜ್ಞತ್ವಾದಿಗುಣಗಳಿಗೊಳಗಾದವರಾಗಿ ಪರ್ಯವಸಾನದಲ್ಲಿ ಈಶ್ವರಸಾಯುಜ್ಯವನ್ನು ಹೊಂದತಕ್ಕವರೆಂತಲೂ ಕೇಳುತ್ತೇವಲ್ಲವೆ? ಹಾಗೆ ಈಶ್ವರಾಂಶಗಳಾಗಿದ್ದಲ್ಲಿ ಅಲ್ಲಿಯೇ ಸಮತ್ವವೂ ಸೋದರತ್ವವೂ ನೆಲೆಸುವುದು ಒಂದೇವಿಧವಾದ ಬೀಜಗಳಾಗಿದ್ದಾಗ್ಯೂ ಬೇರೆಬೇರೆ ಕಾಲಗಳಲ್ಲಿ ಬಿತ್ತಲ್ಪಡುವುದರಿಂದ ವೃದ್ಧಿಯಲ್ಲಿ ತಾರತಮ್ಯವುಂಟಾಗುವದು ಸಹಜ ಒಂದು ಫಲಭರಿತವಾದ ವೃಕ್ಷವೇ ಆಗಿರಬಹುದು ಮತ್ತೊಂದು ಈಗತಾನೆ ಅಂಕುರಿಸಿರಬಹುದು ಅವುಗಳಿಗೆ ಪರಸ್ಪರ ತಾರತಮ್ಯ ಉಂಟೇ ಉಂಟು ಇದೇ ರೀತಿಯಲ್ಲಿ [illegible] ಸಂಸಾರದಲ್ಲಿ ಸಮಕಾಲೀನರೂ ಕಾರಣಾಂತರಗಳಿಂದ ಕೆಲವರು ಬಾಲರಾಗಿ ಜ್ಞಾನವಿಕಾಸವಿಲ್ಲದೆ ಪಶುಪ್ರಾಯರಾಗಿರುವರು ಮತ್ತೆ ಕೆಲವರು ಅನೇಕಜನ್ಮ ಸಿದ್ಧಿಯಿಂದ ಜ್ಞಾನವಿಶಿಷ್ಟರಾಗಿರುವರು ಏತನ್ಮಧ್ಯೆ ಅನೇಕ ಕೋಟಿಗಳಲ್ಲಿ ತಾರತಮ್ಯವನ್ನು ಕಾಣಬಹುದಾಗಿದೆ ಹೀಗಿರುವಲ್ಲಿ ಯಾಂತ್ರಿಕ ಸಮತ್ವವನ್ನು ಹೇಳ್ಯಾರು? ಆದರೂ ತಾರತಮ್ಯವಿದ್ದಮಾತ್ರಕ್ಕೆ ಹೀನಸ್ಥಿತಿಯಲ್ಲಿರತಕ್ಕವರನ್ನೂ ತಿರಸ್ಕಾರಭಾವದಿಂದ ಹೇಯಪದಾರ್ಥಗಳನ್ನಾಗಿ ಎಣಿಸುವವರನ್ನೂ ದೈವದ್ರೋಹಿಗಳನ್ನಾಗಿ ಭಾವಿಸತಕ್ಕದ್ದು ಹೀನರ ಅಭಿವೃದ್ಧಿಗೋಸ್ಕರ ಯಾವ ಪ್ರಯತ್ನವನ್ನೂ ಮಾಡದಿರುವುದನ್ನು ತಪ್ಪೆಂದು ಘೋರ ದೋಷವಾಗಿ ಹೇಳಬಹುದು ಭ್ರಾತೃಭಾವವು ಯಾವರೀತಿಯಲ್ಲಿರಬೇಕು? ಹೇಗೆ ಅಭ್ಯಾಸಮಾಡಬೇಕು? ಎಂದರೆ, ಪ್ರತಿಯೊಬ್ಬರೂ ಇತರರಲ್ಲಿ ಪ್ರೇಮವನ್ನು ಹೊಂದಿ ಅಂತಹ ಪ್ರೇಮವನ್ನು ತಮಗಿಂತಲೂ ದೊಡ್ಡವರಲ್ಲಿ ಭಕ್ತಿಗೌರವರೂಪವಾಗಿಯೂ, ಸಮರಲ್ಲಿ ಅನುರಾಗರೂಪವಾಗಿಯೂ, ಚಿಕ್ಕವರಲ್ಲಿ ದಯಾರೂಪವಾಗಿಯೂ ತೋರಿಸುತ್ತಾ ಅವರ್ಯಾರಿಗೆ ಯಾವಯಾವ ಕಾಲದಲ್ಲಿ ಎಷ್ಟರಮಟ್ಟಿಗೆ ಯಾವಯಾವ ಸಹಾಯವಾಗಬೇಕೋ ಆ ಕಾಲದಲ್ಲಿ ಆ ಸಹಾಯವನ್ನು ಮಾಡುತ್ತಾ ಇತರರಿಗೆ ಉಪಕಾರವನ್ನು ಮಾಡುವುದಕ್ಕೆ ಯಾವಾಗ ಅವಕಾಶ ದೊರೆತೀತೆಂದಿರುವುದೇ ಸಮತ್ವಬುದ್ಧಿ ಇದೇ ಮೇಲಾದ ಸೌಹಾರ್ದವು

ದೊಡ್ಡವರಿಗೆ ಭಕ್ತಿಗೌರವಗಳನ್ನು ತೋರಿಸುವದೆಂದರೆ, "ವಿನಮಿತನಹುದರಿಂದುಪಚಾರಮುಂಟೆ" ಎಂಬಂತೆ ಅವರಿಗೆ ವಿನಮಿತರಾಗಿ ವಿನಯೋಕ್ತಿಗಳನ್ನು ಹೇಳುತ್ತಾ ಅವರ ಶರೀರ ಪೋಷಣೆಗೆ ಬೇಕಾದುದನ್ನು ಕೊಡದಪಕ್ಷದಲ್ಲಿ ಮಿಕ್ಕ ವಾಚೋಪಚಾರಗಳೆಲ್ಲವೂ ಭಕ್ತಿಗೌರವ ಸೂಚಕಗಳೆಂದು ಎಣಿಸಲ್ಪಡಲಾರವು ಅವರಿಗೆ ಬೇಕಾದ ಸಹಾಯಗಳನ್ನು ಯಥಾಶಕ್ತಿಯಾಗಿ ಮಾಡುತ್ತಿರುವುದೇ ನಿಜವಾದ ಭಕ್ತಿಗೌರವಗಳಾಗಿರುವಂತೆ, ಬಾಹ್ಯದಲ್ಲಿಮಟ್ಟಿಗೆ ಉಚ್ಚನೀಚ ತಾರತಮ್ಯವಿಲ್ಲದೆ ಲೌಕಿಕ ವ್ಯವಹಾರಗಳನ್ನೂ ಪ್ರಾಪಂಚಿಕ ವ್ಯವಹಾರಗಳನ್ನೂ ನಡೆಸುವುದುಮಾತ್ರ ಎಂದಿಗೂ ಸೌಹಾರ್ದವೂ ಸೋದರಭಾವವೂ ಆಗಲಾರದು ಹಸಿವೆಯಿಂದ ಪೀಡಿತನಾದವನನ್ನು ಆಲಿಂಗನಮಾಡಿಕೊಂಡರೆ ಆತನ ಹಸಿವು ತೀರೀತೇ? ಎಣ್ಣೆ ಮಾರುವವನು 'ಅಯ್ಯೋ' ಎಂದರೆ ಮಗುವಿನ ನೆತ್ತಿಯು ತಣ್ಣಗಾದೀತೇ? ಜ್ವರದಿಂದ ನರಳುತ್ತಿರುವವನನ್ನು ನೋಡಿ ಅಯ್ಯೋ ಪಾಪ ಎಂದರೆ ಅವನ ಜ್ವರಬಾಧೆಯು ತಪ್ಪೀತೇ? ತನ್ನ ಮಕ್ಕಳಲ್ಲಿ ಸಮಾನವಾದ ಪ್ರೀತಿಯನ್ನು ಹೊಂದಿರುವ ತಾಯಿಯಾದವಳು ಹಸುಗೂಸಿಗೆ ಸ್ತನ್ಯಮಟ್ಟಿಗೆ ಕೊಡುತ್ತಲೂ, ಯುಕ್ತವಯಸ್ಕರಿಗೆ ಪುಷ್ಟಿಕರವಾದ ಆಹಾರವನ್ನು ಕೊಡುತ್ತಲೂ, ರೋಗಪೀಡಿತರಾದವರಿಗೆ ಪಥ್ಯಾಹಾರಗಳನ್ನು ಕೊಡುತ್ತಿರುವಳೇ ಹೊರತು

ಎಲ್ಲರಲ್ಲಿಯೂ ಒಂದೇ ವಿಧವಾದ ಪ್ರೀತಿವಿಶ್ವಾ
ರುವುದರಿಂದ ಏಕರೂಪವಾದ ಆಹಾರವನ್ನು ಕ
ಳೇ? ಹಾಗೆಕೊಟ್ಟಲ್ಲಿ ಆದರಿಂದ ದುಷ್ಪರಿಣಾ
ಸಂಭವಿಸೀತೆಂಬ ಜ್ಞಾನ ಆಕೆಗೆ ಇಲ್ಲದೇ ಹೋ
ಲ್ಲವೇ? ಹಾಗೆಮಾಡುವುದು ನಿಜವಾದ ಪ್ರೇ
ದೀತೇ? ಈ ಪ್ರಕಾರ ಪ್ರಪಂಚದಲ್ಲಿನ ಸಮಸ್ತ ಭೂ
ಗಳಲ್ಲಿಯೂ ಪ್ರೇಮವನ್ನು ಏಕರೂಪವಾಗಿಟ್ಟು ತಾ
ಮ್ಯವನ್ನರಿತು ಕಾಲಾನುಗುಣವಾಗಿ ವರ್ತಿಸುವವೇ
ದವನ ಲಕ್ಷಣ 'ಬಳಸದಿರದ್ವೈತವನು ಬಾಹ್ಯ
ಎಂಬ ವಾಕ್ಯವಾದರೂ ಇದೇ ಅಭಿಪ್ರಾಯವನ್ನು ಸೂ
ಸುವದು ಆದುದರಿಂದ ಸೋದರಭಾವವೆಂದರೆ
ಎಲ್ಲರನ್ನೂ ಒಂದೇರೀತಿಯಾಗಿ ನೋ
ಕ್ಕದ್ದಲ್ಲ ತಾರತಮ್ಯಗಳನ್ನು ಗುರ್ತಿಟ್ಟು ಯಾ
ಹೇಗೆ ಹೇಗೆ ನೋಡಬೇಕೋ ಹಾಗೆ ನೋಡತಕ್ಕ
ನಿಜವಾದ ಪ್ರೀತಿಯು, ಮತ್ತು ಸೋದರಭಾ
ಹೃದಯದಲ್ಲಿ ದೇಶ, ಜಾತಿಗಳ ಭೇದವನ್ನೆಣಿಸದೆ
ಲ್ಲಿಯೂ ಏಕರೂಪವಾದ ಪ್ರೇಮವನ್ನೂ ಬಾಹ್ಯ
ಅವರವರ ಕ್ಷೇಮವನ್ನೂ ಉದ್ದೇಶಿಸಿ ಯ
ಸಾರವಾಗಿ ವರ್ತಿಸುವದೇ ನಿಜವಾದ ಭೂತದ
ಇಂತಹ ಭೂತದಯೆಯೇ ಸೋದರಭಾವ, ಸೌ
' ಹಿತವಂ ತೋರುವನಾತ್ಮಬಂಧು ಎಂಬ ನಿ
ತೆ ಯಾವದೇಶದವನೇ ಆಗಲಿ, ಯಾವಜಾತಿಯ
ಆಗಲಿ ನಮ್ಮ ಕ್ಷೇಮಚಿಂತನೆಯನ್ನು ಮಾಡತಕ್ಕ
ಲೌಕಿಕವಾಗಿ ಬಂಧುವಲ್ಲದಿದ್ದರೂ ಬಂಧುವೇ
ಇನು, ಲೌಕಿಕವಾಗಿ ಬಂಧುವಾಗಿದ್ದರೂ ನಮ್ಮ
ಯನ್ನು ಕೋರತಕ್ಕವನು ತ್ಯಾಜ್ಯನೇ ಸರಿ

॥ ಶ್ರೀಗುರುಭ್ಯೋನಮಃ ॥

ದಾಂಭಿಕತನವು ಯೋಗ್ಯವಲ್ಲ.

ಲೇ—ಪಟ್ಟದ ಸ್ವಾಮಿಗಳು ಹಿರೇಮಠ, ಕೊಣ್ಣೂರು

ಮನಸ್ಸಿನೊಳಗೆ ದುಷ್ಟ ಗುಣಗಳನ್ನಿಟ್ಟುಕೊ
ಜನರ ಮೆಚ್ಚಿಕೆಗಾಗಿ ಒಳ್ಳೆಯವನೆಂದು ತೋರಿಸು
ಕೃತಿಗೆ ದಾಂಭಿಕತನವೆನ್ನುವರು

ದಾಂಭಿಕತನದಿಂದ ಆಗತಕ್ಕ ಹಾನಿ—"ಸರ್ವವ್ಯಾ
ಭಗವಾನ್" ಅಂದರೆ ಪರಮಾತ್ಮನು ಎಲ್ಲಾಕಡೆ
ವ್ಯಾಪಿಸಿದ್ದಾನೆ ನಾವು ಪ್ರಾತಃಕಾಲದಿಂದ ಸಾ
ಕಾಲದವರೆಗೂ ಮಾಡುವ ಕೃತಿಗಳನ್ನು ಹೊರಗ
ಒಳಗೂ, ನೋಡುತ್ತಿರುತ್ತಾನೆ ಅವನಿಗೆ ಅರಿಯದ
ಯಾವ ಕಾರ್ಯವನ್ನು ಮಾಡಲಿಕ್ಕೂ ಯಾರಿಗೂ ಸಾ
ವಿಲ್ಲವು ಮನಸ್ಸಿನಲ್ಲಿ ಯಾವದನ್ನು ಮಾಡುತ್ತೇವೆಯೋ
ಅದನ್ನೇ ವಚನದಲ್ಲಿಯೂ, ವಾಕ್ಯದಲ್ಲಿ ಮಾತಾಡಿ
ಕಾರ್ಯದಲ್ಲಿಯೂ, ಮಾಡುತ್ತಿರಬೇಕು ಹೀಗೆ ತ್ರಿಕರ
ಪೂರ್ವಕವಾಗಿ ನಡೆಯುವವರಿಗೆ, ಮಹಾತ್ಮರೆಂ
ಹೆಸರು ಇದರ ವಿರುದ್ಧವಾಗಿ ವರ್ತಿಸುವ ಜನರಿ
ದುರಾತ್ಮರೆಂದೂ, ದಾಂಭಿಕರೆಂದೂ ಹೇಳಬಹುದು
ಮಾತ್ಮನ ಕೃಪೆಯು ಮಹಾತ್ಮರಿಗೆ ಆಗುವವಲ್ಲದೆ, ದು
ತ್ಮರಿಗೂ ದಾಂಭಿಕರಿಗೂ ಆಗಲಾರದು ದಾಂಭಿಕ
ಜನರು ಮೆಚ್ಚುತ್ತಾರೆ ಸಹಾಯ ಮಾಡುತ್ತಾರೆ ಬೇ
ದ್ದನ್ನು ಕೊಡುತ್ತಾರೆ ಇದಕ್ಕೆ ಅವರ ನಟನೆಯ
ಕಾರಣ ಒಳಗಿನ ದುಷ್ಟ ಗುಣಗಳನ್ನು ಮಾತ್ರ ಜನರ
ತೋರಗೊಡದಂತೆ, ಮುಚ್ಚಿಡುವರು ಮನದೊಳಗಿ
ಗುಣಗಳನ್ನು ಕಂಡುಹಿಡಿಯುವದು ಮನುಷ್ಯನಿ
ಎಂದೂ ಸಾಧ್ಯವಿಲ್ಲ ಒಳಗಿನ ದುಷ್ಟ ಗುಣ
ಕಾಣದ ವರೆಗೆ ಜನರು ಪ್ರೀತಿಸುವರು ಅಂತರಂಗ
ಗುಣಗಳು ಎಂದು ಹೊರಬೀಳುವವೋ, ಅಂದೇ
ನನ್ನು ಮೋಸಗಾರನೆಂದು ತಿಳಿದು, ಜನರು ಕೈ ಬಿ
ವರು ಇಂಥ ಸ್ಥಿತಿ ಆದ ಎಷ್ಟೋ ಜನರನ್ನು ಪ್ರತ್ಯಕ್ಷ
ನೋಡಿದ್ದೇವೆ ಇದು ತತ್‌ಕ್ಷಣ ಸುಖ ಕೊಡುವುದಲ್ಲ
ನಿರಂತರ ಸುಖವನ್ನು ಎಂದೂ ಕೊಡಲಾರದು.

ತ್ರಿಕರಣ ಪರಿಶುದ್ಧರಾಗಿ ಮಹಾತ್ಮರೆಂದು ಹೇ
ಕೊಳ್ಳುವವರಿಗೆ, ಭಗವಂತನ ಕೃಪೆಯು ಆಗುವದಲ್ಲ
ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿ ಇವು ಮನು
ನಿಗೆ ಕ್ರಮವಾಗಿ ಕಾಮಿಸಿದ್ದನ್ನೂ, ಕಲ್ಪಿಸಿದ್ದನ್ನೂ
ಚಿಂತಿಸಿದ್ದನ್ನೂ ಹೇಗೆ ಕೊಡುವವೋ ಹಾಗೆ

ು ಅವರಿಗೆ ಬೇಡಿದ್ದನ್ನು ಕೊಡುವವನಲ್ಲದೆ ಸತ್ಯದ ಕೈವಲ್ಯ ಪದವಿಯನ್ನೂ ಸಹ ಅನುಗ್ರಹಿಸು ಚತುರ್ದಶ ಭುವನಾಧಿಪತಿಯಾದ ಶಂಕರನೇ ಕನಾಗಿ ನಿಂತಿರುವಲ್ಲಿ, ಮನ ಸ್ಸಾರು ಮಾಡುವದು ಮಾತಿಲ್ಲ ಬೇಕಾದ್ದನ್ನು ಮಾಡುವದು

ಭಿಕತನಕ್ಕೆ ಪರಮಾತ್ಮನು ಮೆಚ್ಚುವದಿಲ್ಲ ಾದಕ್ಕೆ ಮನ್ನಣೆಯು ಸಿಗಲಾರದು ಇದೇ ವಿಷ ಕುರಿತು ಒಬ್ಬ ನೀತಿಕಾರನು ಹೀಗೆ ಹೇಳಿದ್ದಾನೆ

ದ್ಧಿಯಿಲ್ಲದೆ ವೇದವನೋದಿದರೇನು,
ಮಥಿಸಿದರೇನು, ವಚನರಾಶಿಯನ್ನು ಹರವಿದರೇನು,
ನಲ್ಲಿ ನೀರು ಹೊಯ್ದಂತೆ,
ಮಲಕ್ಕಂತರ್ಯದೊ
ಮುಚಿಕೆ ಹೊರಗೆ ತೊಳೆಯೆ ಶುದ್ಧತೆಯಹುದೆ?
ದೊಳು ಭಕ್ತಿಯುತನ್ನಂ ಮಿನುಗಲು ತಾಂ
ನಹುದು ನಿಜವಿದು ತನಯಾ ||೧||

ಟೊಳ್ ತುಂಬಿದ ಪಾಕ ಸೋರೆ ತೊಳೆಯಲು
ಶುದ್ಧನೇ? ಗೈದವಂ |
ಸ್ನಾನಗಳನಾಯಲಾತ ಶುಚಿಯೇ? ಕಾಕೋಳಗಳ್
ಮಾಯವೆ? ||
ಾನಂಗಳೊಳದ್ದೆ ಜೀವಿನ ಫಲಂ ಸ್ನಾವಪ್ಪುದೇ?
ಲೋಕದೊಳ್ |
ತಾಂ ನಿರ್ಮಲಚಿತ್ತನೈ ಪರ ಪರಾ ಶ್ರೀಚೆನ್ನ
ಸೋಮೇಶ್ವರಾ! ೨||

ತ್ತೊಬ್ಬ ಜ್ಞಾನಿಗಳು ಡಾಂಭಿಕತನವನ್ನು ಬಿಡದು ಒಂದು ಪದ್ಯವನ್ನು ಹೇಳಿದ್ದಾರೆ

ು ಬಾಹ್ಯದೊಳು ವಂಥವ, ಮಾನಸದೊಳಗೆ ಪಿಡಿದಿರು
ಸಾಧುವ ||
ಲೋಕ ವಂಚಿಸಿ, ತೋರಿ ಸೀ ಕೀರ್ತಿಯ
ದರೆ ಶಿವ ನಿನಗೊಲಿವನೆ? ಮರುಳೇ ||೫|

ಮೆಚ್ಚ ನಡೆಕೊಂಡರೇನುಂಟು ಲೋಕದಿ?
ನವೆ ನಡೆಕೊಂಬವನೆ ಚಂದವು ||
ಏನು ಬಲ್ಲರು ಒಳಗಣಗೋಕ್ಕತ್ವವ
ಅರಿಯದ ಕಳ್ಳತನವಿಲ್ಲವಲ್ಲಾ |೧||

ದು ಮೆಚ್ಚಲು ನಿನ್ನ ಕೈಲ ಸಕೊಯ್ವರೆ?
ಮೆಚ್ಚದಿರೆ ಶಿವ ದಿಡುತಿಹನೇ? ||
ಎಲ್ಲ ನಿನ್ನನ್ನು ದೊಡ್ಡತನವೆಂದರೆ,
ಮಯು ಶಿವನೇನರಿಯನೇ ಮರುಳೇ? ||೨||

ನವರೊಳು ದೇವರು ಮನೆ ಮಾಡಿಕೊಂಡಿಹ
ನಮೆಚ್ಚ ನಡೆದರೆ ಶಿವಮೆಚ್ಚುವ ||
ನಕಂಜಿ ನಡೆಯದೆ ಜನಕಂಜಿ ನಡೆದರೆ,
ನವಾಣಿ ಗುರುಸಿದ್ಧ ಮರೆಯಾಗೊನಲ್ಲಾ ||೩||

ಬರೆದ ನೀತಿಕಾರರು ಹಾಗೂ ಜ್ಞಾನಿಗಳು ುದ್ಧಿಯಿಟ್ಟುಕೊಂಡು ಹೊರಗೆ ಸತ್ಕರ್ಮ ಮಾಡಿದರೆ ಪರಮಾತ್ಮನು ಒಲಿಯುವನೆಂದೂ, ುದ್ಧಿಯಿಲ್ಲದೆ ಜನರ ಮೆಚ್ಚಿಕೆಗಾಗಿ ಮಾಡುವ ರ್ಮಗಳಿಗೆ ಶಿವನು ಪ್ರಸನ್ನನಾಗಲಾರನೆಂದೂ ಸ್ಪಷ್ಟ ದ್ದಾರೆ

ದಕ್ಕೆ ಒಂದು ಇತಿಹಾಸವುಂಟು ಅದನ್ನು ವಾಚ ವಗಾಹನೆಗಾಗಿ ಕೆಳಗೆ ಕೊಟ್ಟಿರುತ್ತೇವೆ

ಂದಾನೊಂದು ಕಾಲದಲ್ಲಿ, ಕಮಲಾಕ್ಷನಾದ ವು, ಹಿರಣ್ಯಗರ್ಭನಾದ ಬ್ರಹ್ಮನು, ತಮ್ಮ ತಮ್ಮೊ ಾನು ಹೆಚ್ಚು ತಾನು ಹೆಚ್ಚು ಎಂದು ಜಗಳಾಡ ವರು ಈ ಉಭಯರ ಕಲಹ ಶಮನಾರ್ಥವಾಗಿ, ನ್ಯಾ! ನಿಮ್ಮಿಬ್ಬರಿಗೂ ಹೆಚ್ಚಿನದಾದ, ಮ ದು ವಸ್ತುವು ನಿಮ್ಮಗಳ ಮಧ್ಯದಲ್ಲಿ ಉದ್ಭವಿ ು ಅದರ ಪಾದವನ್ನಾಗಲಿ, ಮಸ್ತಕವನ್ನಾಗಲಿ, ಬರುವವನೇ ಅಧಿಕನು" ಎಂದು ಆಕಾಶವಾಣಿ ಗಲು, ಇಬ್ಬರೂ ಯುದ್ಧವನ್ನು ನಿಲ್ಲಿಸಿ, ಉದ್ಭವಿಸಿದ ಾ ಲಿಂಗದ ಶಿರಸ್ಸನ್ನು ನೋಡಲಿಕ್ಕೆ ಬ್ರಹ್ಮನು ನಾಗಿಯೂ ಪಾದದರ್ಶನಕ್ಕೆ ವಿಷ್ಣುವು ವರಾಹವಾಗಿ ಹೋಗಿ ಬಹಳ ಪ್ರಯತ್ನವನ್ನು ಮಾಡಿದಾಗ್ಯೂ, ಮಸ್ತಕಗಳು ಕಾಣಲಿಲ್ಲವು ಯಾಕೆಂದರೆ ಅಂತ ಭಕ್ತಿಯಿಲ್ಲದೆ ಜನರ ಮೆಚ್ಚಿಕೆಗಾಗಿ ನಾವು ದೊಡ್ಡ ುಕೊಳ್ಳಬೇಕೆಂದು ಅಹಂಕಾರದಿಂದ ಹೋದದ್ದೇ ವು.

ಾರಾಂಶ—ಒಟ್ಟಿಗೆ ಹೇಳುವದೇನೆಂದರೆ ಮನು ಆತ್ಮಶುದ್ಧಿಯಿಲ್ಲದೆ ಬೇಕಾದಷ್ಟು ಶಾಸ್ತ್ರವನ್ನು ಓದಿದರೂ, ಬೇಕಾದಷ್ಟು ಕೇಳಿದರೂ ಲಿಂಗ ಪೂಜೆಯನ್ನು ಮಾಡಿದರೂ, ಜಪಿಸಿದರೂ ತಪಸ್ಸನ್ನಾಚರಿಸಿದರೂ, ನೀರಿನಲ್ಲಿ ಹುಣಿಸಿ ಹಣ್ಣನ್ನು ತೊಳೆದಂತೆ ವ್ಯರ್ಥವೇ ಸರಿ ಆದ್ದರಿಂದ ಜನರ ಮೆಚ್ಚಿಕೆಯನ್ನು ದೂರಮಾಡಿ, ಪರಮಾತ್ಮನ ಕೃಪೆಯಾಗುವಂತೆ ನಿರ್ಮಲ ಮನಸ್ಸಿನಿಂದ ಮೇಲೆ ಹೇಳಿದ ಸತ್ಕರ್ಮಗಳನ್ನು ಆಚರಿಸಿ, ಇಹದಲ್ಲಿ ಕೀರ್ತಿಯನ್ನೂ, ಪರದಲ್ಲಿ ಸದ್ಗತಿಯನ್ನೂ, ಹೊಂದಬೇಕೆಂದು ಇಚ್ಛಿಸುತ್ತೇವೆ

|| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಶ್ರೀ ಸಿದ್ಧಾಂತ ಶಿಖಾಮಣಿ ಪ್ರವಚನ

ಸೋಲಾಪುರ

ಶ್ರೀಕೃಷ್ಣಶ್ರವಣೇ ಪರೀಕ್ಷಿತಿರಭೂದ್ವೈಯಾಸಕಿಃ ಕೀರ್ತನೇ |
ಪ್ರಹ್ಲಾದಃ ಸ್ಮರಣೇ ತದಂಘ್ರಿಭಜನೇ ಲಕ್ಷ್ಮೀಃ ಪೃಥುಃ ಪೂಜನೇ |
ಅಕ್ರೂರಸ್ತ್ವಭಿವಂದನೇಕಪಿಪತಿರ್ದಾಸ್ಯೇಽಥ ಸಖ್ಯೇಽರ್ಜುನಃ |
ಸರ್ವಸ್ವಾತ್ಮನಿವೇದನೇ ಬಲಿರಭೂತ್ಕೈವಲ್ಯಮೇಷಾಂ ಸಮಂ ||

ಎಂಬ ಸ್ಮೃತಿವಾಕ್ಯದಂತೆ ಒಂಬತ್ತು ವಿಧವಾದ ಭಕ್ತಿಯನ್ನು ಆಚರಿಸಿ 'ಪರೀಕ್ಷಿತ, ಶುಕ, ಪ್ರಲ್ಹಾದ, ಲಕ್ಷ್ಮಿ, ಪೃಥು, ಅಕ್ರೂರ, ಮಾರುತಿ, ಅರ್ಜುನ ಮತ್ತು ಬಲಿ, ಇವರು ಪ್ರಸಿದ್ಧರಾಗಿರುವದು ಸರಿಯಷ್ಟೆ! ಆದರೆ ನಮಗೆ ಈಗ ಶ್ರವಣಭಕ್ತಿಯ ವಿಚಾರಬೇಕಾಗಿದೆ ಶ್ರವಣವೆಂದರೆ ಪರಮಾತ್ಮನ ಮಹಿಮಾವಿಶೇಷಗಳನ್ನು ಕೇಳುವದು ಈ ಮಹಿಮಾವಿಶೇಷಗಳು ಪುರಾಣಗಳಲ್ಲಿ ಪ್ರಸಿದ್ಧಿಯಾಗಿರುವವು ಇವುಗಳನ್ನು ಕೇಳುವ ಸುಯೋಗವು ಕೂಡ ಎಷ್ಟೋಜನರಿಗೆ ದುರ್ಲಭವಾಗಿರುವದು

ವೇದದ ಭಾಷೆಯು ಕಷ್ಟವಾಗಿದ್ದು ಅತ್ಯಲ್ಪ ಸಂಖ್ಯೆಯ ಜನರಿಗೆಮಾತ್ರ ತಿಳಿಯ ಬಹುದಾದ ಸ್ವಭಾವದಲ್ಲಿರುವದರಿಂದ ಅದನ್ನು ಸಾಕ್ಷಾತ್ತಾಗಿ ತಿಳಿಯುವದು ವೃಥಾ ಶ್ರಮವಾಗುವದು ಅದರ ಅರ್ಥವನ್ನೇ ವಿವರಿಸಿ ಪುರಾಣಗಳು ಅದನ್ನು ಹೆಚ್ಚು ರಸವತ್ತಾಗಿ ಮಾಡುವವು ಮೊದಲು ಮೊದಲು ಮಕ್ಕಳಿಗೆ ಅನ್ನವನ್ನು ತಿನ್ನಿಸುವಾಗ ಅವರಲ್ಲಿ ರುಚಿಯುಂಟಾಗುವಂತೆ ಸಕ್ಕರೆಯನ್ನು ಸೇರಿಸಿ ಅದನ್ನುಣಿಸುವದರಿಂದ ಮಕ್ಕಳನ್ನು ಪುಷ್ಟಿಗೊಳಿಸುವಂತೆ ಪೂರ್ವಿಕರು ವೇದದಲ್ಲಿರುವ ಕಷ್ಟವಾದ ವಿಷಯಗಳಿಗೆ ಉದಾಹರಣೆಗಳನ್ನು ಕೊಟ್ಟು ಒಳ್ಳೇ ಅಲಂಕಾರಿಕ ಭಾಷೆಯಿಂದ ಮನಸ್ಸಿನಲ್ಲಿ ಬಿಂಬಿಸುವಹಾಗೆ ವರ್ಣಿಸಿ, ವೇದದಿಂದ ಆಗಬೇಕಾದ ಪೂರ್ಣಪ್ರಯೋಜನವನ್ನು ಸರ್ವತ್ರ ಅನುಭವಕ್ಕೆ ಸಿದ್ಧಮಾಡಿಕೊಟ್ಟಿರುತ್ತಾರೆ ವ್ಯಾಸ ಮಹರ್ಷಿಗಳು ಶ್ರೀ ಕೃಷ್ಣಾರ್ಜುನರ ಸಂವಾದವನ್ನು ಸಂಗ್ರಹಿಸಿ ಅದಕ್ಕೆ "ಭಗವದ್ಗೀತಾ" ಎಂಬ ನಾಮವನ್ನಿಟ್ಟಂತೆ, ಶ್ರೀ ಶಿವಯೋಗಿಶಿವಾಚಾರ್ಯರು ಶ್ರೀ ರೇಣುಕಾಗಸ್ತ್ಯರ ಸಂವಾದವನ್ನು ಸಂಗ್ರಹಿಸಿ ಅದಕ್ಕೆ "ಸಿದ್ಧಾಂತ ಶಿಖಾಮಣಿ ಎಂಬ ನಾಮವನ್ನಿಟ್ಟರು ಈ ಗ್ರಂಥವು ಮುಮುಕ್ಷುಗಳ ಕಲ್ಯಾಣಕ್ಕಾಗಿ ಪಾರಮಾರ್ಥಿಕತತ್ವ ಪ್ರತಿಪಾದಕವಾದ ಮತಸಿದ್ಧಾಂತವನ್ನೇ ವಿಶೇಷವಾಗಿ ಬೋಧಿಸುವದು ಅನೇಕಜನ ಮತತತ್ವಾಭಿಮಾನಿಗಳು ಈ ಗ್ರಂಥದಲ್ಲಿಯ ಕೆಲವು ಲೋಪಗಳನ್ನು ಪರಿಹರಿಸಿ ಮುದ್ರಿಸಿ ಪ್ರಸಿದ್ಧಪಡಿಸುವ ಉತ್ಕಟಾಭಿಲಾಷೆಯನ್ನು ತೋರಿಸಿದುದರಿಂದ ಸನಾತನ ವೀರಶೈವ ಧರ್ಮೋದ್ಧಾರಕರಾದ ವಿದ್ವದ್ರತ್ನ ಪಂ|| ಶ್ರೀಕಾಶೀನಾಥ ಶಾಸ್ತ್ರಿಗಳವರು ವಿಶೇಷ ಶ್ರಮದಿಂದ ಸಂಶೋಧನಮಾಡಿ ವಿಶೇಷ ಶುದ್ಧರೀತಿಯಿಂದ, ಭಾವಪ್ರಕಾಶ ಎಂಬ ಟೀಕೆಯೊಡನೆ ಮುದ್ರಿಸಿ ಪ್ರಸಿದ್ಧಮಾಡಿ ವೀರಶೈವ ಪ್ರಪಂಚಕ್ಕೆ ಮಹೋಪಕಾರ ಮಾಡಿರುವುದು ಸರ್ವಶ್ರುತವಷ್ಟೆ ಆ ಭಾವಪ್ರಕಾಶಟೀಕಾತ್ಮಕ ಸಿದ್ಧಾಂತಶಿಖಾಮಣಿಯನ್ನು ಸೋಲಾಪುರದ ವೀರಶೈವ ಸದಾಚಾರ ಸ್ತ್ರೀ ಸಮಾಜದಲ್ಲಿ ಮಧ್ಯಾಹ್ನ ಮೂರುಘಂಟೆಯಿಂದ ಐದು ಘಂಟೆಯವರೆಗೆ ಸಮಾಜದ ಸೆಕ್ರೆಟರಿಗಳಾದ ಸೌ|| ಭಾಗೀರಥೀದೇವಿಯವರು ತಮ್ಮ ಅಸ್ಖಲಿತವಾಣಿಯಿಂದ ಬಹು ಹೃದಯಂಗಮವಾಗಿ ಆಬಾಲವೃದ್ಧರಿಗೂ ತಿಳಿಯುವಂತೆ ಶ್ರಾವಣ ಶುದ್ಧ ಪಂಚಮಿಯಿಂದ ಹೇಳಲು ಪ್ರಾರಂಭ ಮಾಡಿದ್ದಾರೆ. ಈ ಪವಿತ್ರ ಗ್ರಂಥದಲ್ಲಿರುವ ವಿವರಣೆಯನ್ನು ಕೇಳಿದಂಥ ಸ್ತ್ರೀಯರು ಕರ್ಣೋಪಕರ್ಣವಾಗಿ ಕೇಳಿ, ನಮಗೆ ಬೇಕಾದ ಶುಭ್ರಾಚಾರವೇ ಇದರಲ್ಲಿ ಇರುವದರಿಂದ ಇದನ್ನೇ ಕೇಳಿ ಧನ್ಯರಾಗಬೇಕೆಂದು ದಿನೇ ದಿನೇ ಹೆಚ್ಚು ಹೆಚ್ಚಾಗಿ ಬರುತ್ತಿರುವರು ಇದನ್ನು ನೋಡಲಾಗಿ ಪಂಡಿತರ ಕೃಪಾಪೋಷಿತ ಸಮಾಜವು ಜಗದಾಚಾರ್ಯರ ಕೃಪೆಯಿಂದ ತೀವ್ರನೇ ಊರ್ಜಿತಾವಸ್ಥೆಯನ್ನು ಹೊಂದವ ಶುಭ ಚಿಹ್ನೆಗಳು ತಲೆದೋರುತ್ತಿವೆ ಎಂದು ಆನಂದಪಡಬೇಕಾಗಿದೆ ಈ ಪುರಾಣವು ನಿರ್ವಿಘ್ನವಾಗಿ ಸಾಗಿ ತದ್ವಾರಾ ಹರ ಗುರು ಭಕ್ತಿಗಳು ಪ್ರಕಾಶಿಸಿ ನಮ್ಮ ಮತ ತತ್ವಗಳ ಸ್ವರೂಪವು ಸೋಲಾಪುರದಲ್ಲಿ ಪ್ರಜ್ವಲಿಸಲೆಂದು ಆ ಜಗನ್ನಿಯಾಮಕನಾದ ಪರಮಾತ್ಮನಲ್ಲಿಯೂ, ಜಗದ್ಗುರುಗಳಾದ ಪಂಚಾಚಾರ್ಯರಲ್ಲಿಯೂ ಅನನ್ಯಭಾವನೆಯಿಂದ ಬೇಡಿಕೊಳ್ಳುವೆನು

ಸೌ|| ದಾನಮ್ಮಬಾಯಿ ಹಿರೇಮಠ

|| ಶ್ರೀಜಗದ್ಗುರು ದಾರುಕಾಚಾರ್ಯಾಯನಮಃ ||

ಶ್ರೀಮದ್ವೀರೇಶ್ವರ ಭಜನಸಂಘ, ತಾಳೂರು.

ಬಳ್ಳಾರಿ ಡಿ|| ಹೊಸಪೇಟೆತಾಲೂಕು ತಾಳೂರು ಗ್ರಾಮದಲ್ಲಿ ಈಗ್ಗೆ ಸುಮಾರು ೩ ತಿಂಗಳಿಂದ ಮಳೆಯಾಗದಿದ್ದುದರಮೂಲಕ ಜನರು ಚಿಂತಾಕ್ರಾಂತರಾಗಿದ್ದರು ಈ ವಿಷಯವನ್ನು ತಿಳಿದು ನಮ್ಮ ಗ್ರಾಮದ ವೇ|| ಬೆಳ್ಳೂಡಿಮಠದ ಮರಿಸ್ವಾಮಯ್ಯನವರ ಸುಪುತ್ರರಾದ ವೀರಯ್ಯನವರು, ಭಜನ ಸಂಘದವರನ್ನು ಕರೆಯಿಸಿ ನೀವು ಗುರುಭಕ್ತಿಯಿಂದ ಶ್ರೀ ಜಗದಾಚಾರ್ಯರ ಭಾವಚಿತ್ರವನ್ನು ಪೂಜಿಸಿ ಗ್ರಾಮದಲ್ಲಿ ಭಜನ ಮಾಡಬೇಕೆಂದು ಬೋಧಿಸಿದರು ಭಜನ ಸಂಘದವರು ಭಕ್ತಿವಹಿಸಿ — ತಾ||೨೪ ೭ ೪೧ ರ ಪ್ರಾತಃಕಾಲ ಶುಭಮುಹೂರ್ತದಲ್ಲಿ ವೇ|| ಬೆಳ್ಳೂಡಿ ಮಠದ ಸಿದ್ಧರಾಮಯ್ಯನವರು ಮತ್ತು ವೇ|| ಸೊಂಡೂರು ಭಿಕ್ಷಾವತಿ ಮಠದ ಚನ್ನಬಸವಯ್ಯನವರು, ಇವರಪೌರೋಹಿತ್ಯದಿಂದ ಶ್ರೀ ಜಗದಾಚಾರ್ಯರ ಭಾವಚಿತ್ರವನ್ನು ಷೋಡಶೋಪಚಾರದಿಂದ ಪೂಜಿಸಿ, ಶ್ರೀ ಜಗದ್ಗುರು ದಾರುಕಾಚಾರ್ಯಾಷ್ಟೋತ್ತರ ಶತನಾಮಾವಳಿಯನ್ನು ವಿಧಾನೋಕ್ತವಾಗಿ ಪಠಿಸಿ, ಪುಷ್ಪಮಾಲಿಕೆಗಳಿಂದಲಂಕರಿಸಿ, ಭಾವಚಿತ್ರದೊಂದಿಗೆ ಗುರುಭಜನೆಯನ್ನು ಗ್ರಾಮದಲ್ಲಿ ಮಾಡಿದರು ಇದರಂತೆಯೇ ಪ್ರತಿದಿನವೂ ಮಾಡುತ್ತಿರಲಾಗಿ ತಾ|| ೩೧ ೭-೪೧ ನೆಯ ಗುರುವಾರ ಶ್ರೀ ಜಗದ್ಗುರು ದಾರುಕಾಚಾರ್ಯರ ಅನುಗ್ರಹದಿಂದ ಉತ್ತಮವೃಷ್ಟಿಯಾಯಿತು ಜನರು ಗುರು ಭಜನೆಯ ಮಹತ್ವವನ್ನು ಹೊಗಳಿ ಆನಂದದಿಂದ ತಮ್ಮ ಕಲಸವನ್ನು ಮಾಡುತ್ತಿರುವರು ಸದರಿ ಭಜನಸಂಘದವರು ಶ್ರಾವಣಮಾಸ ಪೂರ್ತಿಯಾಗಲಿ, ಇನ್ನೂ ಹೆಚ್ಚು ದಿನವಾಗಲಿ, ಗಣಾರಾಧನೆಯು ನಡೆಯುವವರೆಗೆ ಗ್ರಾಮದಲ್ಲಿ ಪ್ರತಿದಿನ ಭಜನೆಯನ್ನು ಮಾಡಬೇಕೆಂದು ಅಧ್ಯಕ್ಷರಾದ ವೇ|| ಬೆಳ್ಳೂಡಿ ಮಠದ ವೀರಯ್ಯನವರು ಹೇಳಿರುವದರಿಂದ, ಸರ್ವರೂ ಪರಮ ಗುರುಭಕ್ತಿಯಿಂದ ಭಜನೆಯನ್ನು ಮಾಡುತ್ತಿರುವರು ಗುರುಭಕ್ತರು ಕಾಯಿ, ಕರ್ಪೂರ, ನೈವೇದ್ಯಾದಿಗಳನ್ನು, ಸಮರ್ಪಿಸಿ ಮಂಗಳಾರತಿಯನ್ನು ಮಾಡಿಸಿ, ಗುರುಕೃಪೆಗೆ ಪಾತ್ರರಾಗುತ್ತಿರುವರು

ಈ ಭಜನಸಂಘದಲ್ಲಿ ಏಡೆಡ್, ಎಲಿಮೆಂಟರಿ, ಸ್ಕೂಲ್, ವಿದ್ಯಾರ್ಥಿಗಳೂ, ಜಂಗಮ ಕಣ್ಣೆಜಂಬಯ್ಯ, ನಾಗಲಿಂಗಯ್ಯ, ಅಯ್ಯಪ್ಪಯ್ಯ ಟಿ ನಂಜಪ್ಪನವರ ರುದ್ರಪ್ಪ, ಗಂಡಿ ಪಂಪಣ್ಣ, ಕೋರಿಅಯ್ಯಪ್ಪನವರಗಂಡಪ್ಪ, ಗಂಡಿ ಗಂಡಪ್ಪ, ಕೋರಿಮೂಕಪ್ಪ, ಕೋರಿದೊಡ್ಡಪ್ಪ, ಕುರುತಿನಿಹಂಪಣ್ಣ, ಬಳಗೋಡು ಚಿಕ್ಕೀರಪ್ಪ, ಜಂಬಪ್ಪ, ಸಣ್ಣಮೂಕಪ್ಪ, ಕಡ್ಲೆರುದ್ರಪ್ಪ, ಗಡ್ಡೆ ಜಂಬಪ್ಪ, ಪಲ್ಲೇದ ಗಂಡಪ್ಪ, ದೇ|| ಅಯ್ಯನಗೌಡ, ಟಿ ದೊಡ್ಡರುದ್ರಪ್ಪ, ಇವರೇ ಮೊದಲಾದ ಗುರುಭಕ್ತರು ವಿಶೇಷ ಶ್ರದ್ಧೆವಹಿಸಿ, ಭಜನೆ ಮಾಡುತ್ತಿರುವರು ಈ ಭಜನಸಂಘದವರಿಗೆ ಪ್ರೋತ್ಸಾಹವನ್ನೀಯುತ್ತಿರುವ ಮಠಪತ್ತಿ ದೊಡ್ಡಬಸವಯ್ಯನವರಿಗೂ, ಭಜನಸಂಘದವರಿಗೂ, ಸ್ಕೂಲ್‌ವಿದ್ಯಾರ್ಥಿಗಳಿಗೂ, ಶ್ರೀ ಜಗದಾಚಾರ್ಯರು ಆಯುರಾರೋಗ್ಯ ಭಾಗ್ಯಾದಿಗಳನ್ನೀಯಲೆಂದು ಪ್ರಾರ್ಥಿಸುವ,

ಗುರುಭಕ್ತರಕಿಂಕರ
ಹರೇಹಾಳು ಗಾದಿಲಿಂಗಪ್ಪ ತಾಳೂರು

ಪಂಚಾಚಾರ್ಯಪ್ರಭಾ.

೧೯೪೧ನೆಯ ಆಗಸ್ಟ್ ತಾ|| ೧೮ನೆಯ ಸೋಮವಾರ

ಪ್ರಾಚೀನಗ್ರಂಥಗಳಲ್ಲಿ ಪಂಚಾಚಾರ್ಯರ ಪವಿತ್ರನಾಮಗಳು

ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯರು ಚತುರ್ಯುಗಗಳಲ್ಲಿ ಶಿವಲಿಂಗಮುಖದಿಂದ ದಿವ್ಯದೇಹಧಾರಿಗಳಾಗಿ ಅವತರಿಸಿ ಭೂಮಂಡಲದಲ್ಲಿ ವೀರಶೈವಮತವನ್ನು ಸ್ಥಾಪಿಸಿದರೆಂದು ಶಿವಾಗಮಗಳು ಮುಕ್ತಕಂಠದಿಂದ ಸಾರುತ್ತಿರುವವಷ್ಟೆ! ಹೀಗಿದ್ದರೂ ಕೆಲಜನರು ಈ ವಿಷಯವನ್ನು ಕಣ್ತೆರೆದು ನೋಡದೆ ಪ್ರಾಚೀನಗ್ರಂಥಗಳಲ್ಲಿ ಆಚಾರ್ಯರ ಹೆಸರುಗಳೇ ಬರುವುದಿಲ್ಲವೆಂದು ವ್ಯರ್ಥವಾಗಿ ಪ್ರಲಪಿಸುತ್ತಾರೆ ಇದು ಅವರ ಅಜ್ಞಾನದ ಪ್ರಭಾವವಲ್ಲದೆ ಬೇರೆಯಲ್ಲ ಅವರು ಪ್ರಾಚೀನಗ್ರಂಥಗಳನ್ನು ಶ್ರಮಪಟ್ಟು ನೋಡಿದ್ದರೆ ಹೀಗೆಂದಿಗೂ ನುಡಿಯುತ್ತಿದ್ದಿಲ್ಲ ಈ ವಿಧವಾದ ಜನರು ನಾವು ಈ ಕೆಳಗೆ ಉದಾಹರಿಸಿರುವ ಗ್ರಂಥಾಧಾರಗಳನ್ನು ನೋಡಿ ಭ್ರಮೆಯಿಂದ ದೂರರಾಗುವರೆಂದು ನಂಬಿದ್ದೇವೆ

ಭಾರತೀಯರ ಪವಿತ್ರಧರ್ಮಗಳನ್ನೂ, ಅವರ ಪವಿತ್ರ ಚರಿತ್ರಗಳನ್ನೂ ಬರೆದು ಇಂದಿನವರೆಗೆ ಸಮಸ್ತಮತೀಯರಿಗೂ ಮಾನ್ಯರಾಗಿರುವ ಮಹಾತ್ಮರೆಂದರೆ ವ್ಯಾಸಮಹರ್ಷಿಗಳು ಈ ಮಹರ್ಷಿಗಳು ದ್ವಾಪರಯುಗದಲ್ಲಿದ್ದು ಹದಿನೆಂಟುಪುರಾಣಗಳನ್ನೂ ಮಹಾಭಾರತವನ್ನೂ ರಚಿಸಿ ಭಾರತೀಯರಿಗೆ ಮಹೋಪಕಾರವನ್ನು ಮಾಡಿದ್ದಾರೆ ಪ್ರತಿಯೊಂದು ಮತದವರಿಗೂ ಈ ಮಹರ್ಷಿಗಳ ವಾಕ್ಯಗಳೇ ಪ್ರಮಾಣಗಳು. ಈ ಮಹರ್ಷಿಗಳು ರಚಿಸಿರುವ ಪುರಾಣಾದಿಗಳಲ್ಲಿ ಅನೇಕ ಕಡೆಗೆ ವೀರಶೈವಮತಾಚಾರ್ಯರ ಪವಿತ್ರನಾಮಗಳು ಕಂಗೊಳಿಸುತ್ತಿರುವವು ವ್ಯಾಸಮಹರ್ಷಿಗಳು ಮೊದಲು ಪರಮವಿಷ್ಣುಭಕ್ತರಾಗಿ ಸರ್ವತ್ರ ವಿಷ್ಣುವಿನ ಆಧಿಕ್ಯವನ್ನೇ ಸಾರುತ್ತಿದ್ದರು ಹೀಗಿರುವಲ್ಲಿ ಒಂದಾನೊಂದು ದಿವಸ ಅವರು ಕಾಶೀಕ್ಷೇತ್ರದಲ್ಲಿರುವ ವಿಶ್ವನಾಥನ ದೇವಾಲಯಕ್ಕೆ ಹೋಗಿ ಅಲ್ಲಿಯೂ ಕೂಡ '**ನ ದೇವಃ ಕೇಶವಾತ್ಪರಃ**' ಎಂದು ವಿಷ್ಣುವಿನ ಆಧಿಕ್ಯವನ್ನು ಸಾರಲು, ಕೂಡಲೆ ನಂದೀಶ್ವರನಿಂದ ಹಸ್ತಸ್ತಂಭನವನ್ನು ಹೊಂದಿ ಮಹಾದುಃಖಕ್ಕೀಡಾದರು ಆಮೇಲೆ ಪಶ್ಚಾತ್ತಾಪಪಟ್ಟು ಶ್ರೀವಿಶ್ವನಾಥನನ್ನು ನಾನಾರೀತಿಯಿಂದ ಸ್ತುತಿಸಲು ಬಾಹುಬಂಧನದಿಂದ ಮುಕ್ತರಾದರು ಈ ವಿಷಯವು ಅವರಿಂದಲೇ ಬರೆಯಲ್ಪಟ್ಟಿರುವ ಕಾಶೀಖಂಡದ ೯೫ನೆಯ ಅಧ್ಯಾಯದಲ್ಲಿ ವಿಶೇಷವಾಗಿ ವರ್ಣಿಸಲ್ಪಟ್ಟಿರುವದು

ಪಾರಾಶರ್ಯಸ್ತದಾರಭ್ಯ ಶಂಭುಭಕ್ತಿಪರೋಽಭವತ್ ।
ಲಿಂಗಂ ವ್ಯಾಸೇಶ್ವರಂ ಸ್ಥಾಪ್ಯ **ಘಂಟಾಕರ್ಣಹ್ರದಾಗ್ರತಃ** ।
॥೬೮॥

ವಿಭೂತಿಭೂಷಣೋ ನಿತ್ಯಂ ನಿತ್ಯಂ ರುದ್ರಾಕ್ಷಭೂಷಣಃ ।
ರುದ್ರಸೂಕ್ತಪರೋ ನಿತ್ಯಂ ನಿತ್ಯಂ ಲಿಂಗಾರ್ಚಕೋಽಭವತ್ ।
॥೬೯॥

ವ್ಯಾಸಮಹರ್ಷಿಗಳು ಬಾಹುಬಂಧನದಿಂದ ಮುಕ್ತರಾದಮೇಲೆ ವಿಭೂತಿ, ರುದ್ರಾಕ್ಷಿ ಮೊದಲಾದ ಶಿವಚಿಹ್ನಗಳಿಂದ ಅಲಂಕೃತರಾಗಿ ನಿತ್ಯವೂ ಶ್ರೀರುದ್ರದಿಂದ ಶಿವಲಿಂಗಪೂಜೆಯನ್ನು ಮಾಡುತ್ತ "**ಘಂಟಾಕರ್ಣತೀರ್ಥ**"ದ ಮುಂಭಾಗದಲ್ಲಿ "ವ್ಯಾಸೇಶ್ವರ" ಎಂಬ ಹೆಸರಿನಿಂದ ಒಂದು ಶಿವಲಿಂಗವನ್ನು ಸ್ಥಾಪಿಸಿದರೆಂದು ಮೇಲಿನ ಶ್ಲೋಕಗಳ ಅಭಿಪ್ರಾಯವಾಗಿರುತ್ತದೆ.

ಶಿವಲಿಂಗವನ್ನು ಸ್ಥಾಪಿಸಿದಮೇಲೆ ವ್ಯಾಸಮಹರ್ಷಿಗಳು ವೀರಶೈವಮತಾಚಾರ್ಯರಾದ **ಶ್ರೀ ಘಂಟಾಕರ್ಣಶಿವಾಚಾರ್ಯರಿಂದ** ಬ್ರಹ್ಮಜ್ಞಾನವನ್ನು ಪಡೆದುಕೊಂಡರೆಂದು ಕೆಲವು ಗ್ರಂಥಗಳಿಂದ ತಿಳಿದುಬರುತ್ತದೆ ಇದು ಸತ್ಯವೆಂದೇ ಹೇಳಬೇಕಾಗಿದೆ ಏಕೆಂದರೆ-ವ್ಯಾಸಕಾಶಿಯಲ್ಲಿರುವ ವ್ಯಾಸೇಶ್ವರಲಿಂಗಮೂರ್ತಿಯ ಸಮ್ಮುಖದಲ್ಲಿ ಅನಾದಿಕಾಲದಿಂದ ಇಂದಿನವರೆಗೂ ಜಟಾ, ಭಸ್ಮ, ರುದ್ರಾಕ್ಷಿ, ಲಿಂಗಧಾರಣಾದಿವೀರಶೈವಾಚಾರ್ಯ ಚಿಹ್ನಗಳಿಂದ ಕೂಡಿರುವ "**ಘಂಟಾಕರ್ಣಶಿವಾಚಾರ್ಯರ**" ಶಿಲಾವಿಗ್ರಹವು ಅಚ್ಚಳಿಯದಂತೆ ಶೋಭಿಸುತ್ತಿರುವದು ಆ ದೇಶದ ಜನರು ಆ ಮೂರ್ತಿಗೆ ವೃದ್ಧಪರಂಪರೆಯಿಂದ "**ವ್ಯಾಸದೀಕ್ಷಾ ಗುರು** ಎಂದು ಕರೆಯುತ್ತಿರುವರು ವ್ಯಾಸೇಶ್ವರನ ಮುಂಭಾಗದಲ್ಲಿ ಮೇಲಿನ ಶ್ಲೋಕದಲ್ಲಿ ಹೇಳಿರುವಂತೆ ಘಂಟಾಕರ್ಣಶಿವಾಚಾರ್ಯರ ಪವಿತ್ರಾಭಿಧಾನದಿಂದ '**ಘಂಟಾಕರ್ಣತೀರ್ಥ** ಎಂಬ ಕೊಳವು ಶೋಭಿಸುತ್ತಿರುವದು ಈ ತೀರ್ಥಕ್ಕೆ ಅಲ್ಲಿಯ ಜನರು "**ಘಂಟಾಕರ್ಣತಲಾವ** ಎಂದು ಕರೆಯುತ್ತಿರುವರು ಈ ತೀರ್ಥದ ಮಹಿಮೆಯು ಕಾಶೀಖಂಡದ ಉತ್ತರಭಾಗದಲ್ಲಿ ವಿಶೇಷವಾಗಿ ವರ್ಣಿತವಾಗಿರುವದು ಮಹಾ ಪ್ರಖ್ಯಾತವಾದ ಈ ತೀರ್ಥವು ವೀರಶೈವ ಮತಾಚಾರ್ಯರ ಪವಿತ್ರನಾಮದಿಂದ ವಿರಾಜಿಸುತ್ತಿರುವುದನ್ನು ನೋಡಿದರೆ ಈ ಮಹಾಚಾರ್ಯರ ಪ್ರಭಾವವು ಎಷ್ಟು ಮಟ್ಟಿಗೆ ಇರುವದೆಂಬುವನ್ನು ಬೇರೆ ವರ್ಣಿಸಬೇಕಾಗಿಲ್ಲ

ಘಂಟಾಕರ್ಣಶಿವಾಚಾರ್ಯರು ದ್ವಾಪರಯುಗದಲ್ಲಿ ಶ್ರೀಹಿಮವತ್ಕೇದಾರಕ್ಷೇತ್ರದಲ್ಲಿ ವೀರಶೈವಧರ್ಮಪೀಠವನ್ನು ಸ್ಥಾಪಿಸಿದರು ಈ ಮಹಾಚಾರ್ಯರ ಆಶ್ರಮದಲ್ಲಿ ಜ್ಞಾನಸಂಪಾದನೆಗಾಗಿ ಅನೇಕಜನ ಮಹರ್ಷಿಗಳು ವಾಸವಾಗಿದ್ದರೆಂಬ ವಿಷಯವು ಸ್ಕಂದಪುರಾಣಾಂತರ್ಗತವಾದ ಕೇದಾರಖಂಡದಲ್ಲಿ—

ಘಂಟಾಕರ್ಣಮುನಿಸ್ತತ್ರ ನವ [illegible]
ನಾನಾಮುನಿಜನಾಕೀರ್ಣೇ ಹ್ಯಾಶ್ರಮೇ [illegible] ।

ಇತ್ಯಾದಿ ಶ್ಲೋಕಗಳಿಂದ ಪ್ರತಿಪಾದಿಸಲ್ಪಟ್ಟಿರುವದು

ವ್ಯಾಸಮಹರ್ಷಿಗಳು ದ್ವಾಪರಯುಗ[illegible] ದ್ವಾಪರಯುಗದಲ್ಲಿ ರೇಣುಕ [illegible] ಧೇನುಕರ್ಣ ವಿಶ್ವಕರ್ಣರೆಂಬ ಹೆಸರುಗಳಿಂದ ಅವತರಿಸಿದ್ದ ಶ್ರೀಮತ್ಪಂಚಾಚಾರ್ಯರ ಪವಿತ್ರನಾಮಗಳನ್ನು ಅವರು ತಮ್ಮ ಪುರಾಣಗಳಲ್ಲಿ ಉಲ್ಲೇಖಿಸಿರುವರು ಅಷ್ಟೇ ಕಾಶೀಖಂಡದಲ್ಲಿ ಘಂಟಾಕರ್ಣತೀರ್ಥದ ವಿಷಯವು ವರ್ಣಿಸಲ್ಪಟ್ಟಿರುವಂತೆಯೇ ಇನ್ನುಳಿದ ಆಚಾರ್ಯರ ಹೆಸರಿನ ಪವಿತ್ರ ತೀರ್ಥಗಳು ವ್ಯಾಸೋಕ್ತಪುರಾಣ[illegible] ವರ್ಣಿತವಾಗಿರುವವು ಕಾಶೀಖಂಡ[illegible] ಅಧ್ಯಾಯದಲ್ಲಿ —

ದಾರುಕೇಶ್ವರತೀರ್ಥೇ ತು ದಾರುಕೇಶಸಮೀಪತಃ
[illegible] ॥[illegible]
ಕಪಾಲಕರ್ತ್ರೀಹಸ್ತಾಂ ಚ ಬ್ರಹ್ಮಾಂಡಕವಲಪ್ರಿಯಾಂ
ಮಹೋದರೀಂ ಸ್ನಾಯುಬದ್ಧಾಂ ಚರ್ಮಮುಂಡೇತಿ
ವಿಶ್ರುತಾಂ ॥೬೧॥

ಕಾಶೀಕ್ಷೇತ್ರದಲ್ಲಿರುವ '**ದಾರುಕೇಶ್ವರ ತೀರ್ಥ**ದಲ್ಲಿ ಸ್ನಾನವನ್ನು ಮಾಡಿ **ದಾರುಕೇಶ್ವರ** ದೇವಾಲಯದ ಸಮೀಪದಲ್ಲಿರುವ ಚರ್ಮಮುಂಡಾದೇವಿಯ ದರ್ಶನವನ್ನು ಮಾಡಿಕೊಳ್ಳುವದು ಮಹಾಪುಣ್ಯಪ್ರದವೆಂದು ಮೇಲಿನ ಶ್ಲೋಕಗಳ ಅಭಿಪ್ರಾಯವಾಗಿರುತ್ತದೆ ಶ್ರೀಜಗದ್ಗುರು ದಾರುಕಾಚಾರ್ಯರ ಹೆಸರಿನ ಪವಿತ್ರ ತೀರ್ಥವೂ, ದೇವಾಲಯವೂ ಕಾಶೀಕ್ಷೇತ್ರದಲ್ಲಿ ವಿರಾಜಿಸುತ್ತಿರುವವು

ಇದೇ ರೀತಿಯಾಗಿ ಮಹಾಭಾರತದಲ್ಲಿಯೂ ಸಹ "**ರೇಣುಕತೀರ್ಥ**"ದ ವಿಷಯವು ಉಕ್ತವಾಗಿರುವುದು

ಶ್ರೀ ಶ ೧೦೫೦ ರಲ್ಲಿ ಭರತಭೂಮಿಯನ್ನಲಂಕರಿಸಿದ್ದ ಕ್ಷೇಮೇಂದ್ರನೆಂಬ ಮಹಾಕವಿಯು 'ಭಾರತಮಂಜರಿ" ಎಂಬ ಮಹಾಕಾವ್ಯವನ್ನು ರಚಿಸಿದ್ದಾನೆ ಈ ಮಹಾಕವಿಯು ಮಹಾಭಾರತದ ವಿಷಯವನ್ನೇ ತನ್ನ ಗ್ರಂಥದಲ್ಲಿ ವಿವರಿಸಿರುತ್ತಾನೆ ಈ ಮಹಾಕಾವ್ಯದ ಅರಣ್ಯಪರ್ವದಲ್ಲಿ ೬೦೫ ನೆಯ ಶ್ಲೋಕದಿಂದ ೬೬೭ ನೆಯ ಶ್ಲೋಕದ ವರೆಗೆ ತೀರ್ಥಯಾತ್ರೆಗಳ ವರ್ಣನೆಯಿದೆ. ಇದರಲ್ಲುಕ್ತವಾಗಿರುವ "ಅಗಸ್ತ್ಯತೀರ್ಥ, ರುದ್ರತೀರ್ಥ, ಸ್ಕಂದಕೋಟಿತೀರ್ಥ, ರುದ್ರಕೋಟಿತೀರ್ಥ" ಇತ್ಯಾದಿ ಶೈವತೀರ್ಥಗಳ ಮಧ್ಯದಲ್ಲಿ— "**ರೇಣುಕತೀರ್ಥ**"ದ ನಾಮವೂ ಉಲ್ಲೇಖಿಸಲ್ಪಟ್ಟಿರುವುದು

ಬ್ರಹ್ಮತುಂಗಂ ಸ ಕೌಮಾರಂ **ರೇಣುಕಂ** ಚ ಸರೋವರಂ
॥೬೧೯॥

ಈ ರೇಣುಕತೀರ್ಥವು ಕೇದಾರಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಉಷಾಮಠಕ್ಕೆ ೧೩ ಮೈಲುದೂರದಲ್ಲಿರುವದು ಅಲ್ಲಿಯಜನರು ಈ ತೀರ್ಥಕ್ಕೆ '**ರೇವಣತಲಾ**
ಎಂದು ಕರೆಯುತ್ತಿರುವರು

ಇವಲ್ಲದೆ ಶ್ರೀಶಂಕರನು ಕಿರಾತವೇಷವನ್ನು ತಾ
ಅರ್ಜುನನೊಡನೆ ಯುದ್ಧಮಾಡಿದ ಸಮಯದಲ್ಲಿ, ಶಂ
ರನ ಸಂಗಡವಿದ್ದ ಪ್ರಮಥಪರಿವಾರದಲ್ಲಿ ಶ್ರೀರೇಣುಕನ
ಇದ್ದನೆಂಬ ವಿಷಯವು ಮಹಾಭಾರತದಿಂದ ತಿಳಿ
ಬರುವದು ಮಹಾಭಾರತವನ್ನು ಕುಮಾರವ್ಯಾಸನೆಂ
ಲೋಕಪ್ರಸಿದ್ಧನಾದ ಕನ್ನಡ ಕವಿಯು ಕನ್ನಡಿಸಿರುವ
ಈ ಕವಿಯು ಹೆಸರನ್ನು ಕೇಳದ ಕನ್ನಡಿಗನೇ ಇರುವುದಿ
ಈ ಕವಿಯು ಪರಮಶೈವನು ಈತನು ತನ್ನಿಂದ
ಚಿತವಾಗಿರುವ ಮಹಾಭಾರತದ ಅರಣ್ಯಪರ್ವದ ೫ನೇ
ಸಂಧಿಯಲ್ಲಿ—

ದೇವನನುರೂಪದಲಿ [illegible]ವರು
ದೇವಿಯರು ಸುರಗಣಪತಿಗಳ
[illegible] ವಿನೋದದ ನಾಟಕ ಪರಿವಿಡಿಯೊಳಿದು ಶಾಬರನ ॥
ಆ ವಿನೋದ[illegible] ।
[illegible]ಕ ರೇಣುಕ ಮನೋಹರ ।
[illegible] ವೀರಭದ್ರಪ್ರಮುಖಬಲಭೂತಗಣ ॥೩

ಶಂಕರನು ಅರ್ಜುನನೊಡನೆ ಯುದ್ಧಮಾಡುವ ಸ
ಮಯದಲ್ಲಿ ಶಬರವೇಷವನ್ನು ಧರಿಸಿದಂತೆ, ಶಕ್ತಿ, ಷಣ್ಮು
ಗಣಪತಿ, ನಂದೀಶ್ವರ, ವೀರಕ, ದೇವಲಕ, **ರೇಣು**
[illegible] ವೀರಭದ್ರ ಮುತ್ತು ಸಮ
[illegible] ವಿನೋದದಿಂದ ಶಬ
ರವೇಷವನ್ನು ಧರಿಸಿದರೆಂದು ವರ್ಣಿಸಿದ್ದಾನೆ

[illegible] ಸ್ಥಾಪಿತವಾಗಿರುವ 'ಆನಂ
ದ [illegible] ಯಲ್ಲಿ ಪ್ರಕಟವಾದ ಸೌರಪುರಾಣ
[illegible] ಅಧ್ಯಾಯದಲ್ಲಿ

[illegible] ಚಕ್ರಕೋಟಿಗಣೈರ್ಯುತಃ ॥
[illegible] ಶಂಕುಕರ್ಣಶ್ಚ ಗೋಕರ್ಣಶ್ಚ ಮಹಾಬಲಃ
[illegible] ಮಹಾಕಾಲೋ ಡಿಂಡೀ ಮುಂಡೀ ಗಣೇಶ್ವರ
[illegible] ವೀರಭದ್ರೋ ಮಹಾಬಲಃ ।
[illegible] ತಥಾ ಪಂಚಶಿಖೋ ಮಹಾನ್ ॥

[illegible] ತ್ರಿಪುರಾಸುರರನ್ನು ಸಂಹಾರಮಾಡುವ
[illegible] ಶಂಕುಕರ್ಣ, ಗೋಕರ್ಣ, ಮಹಾಬ
[illegible] ಡಿಂಡಿ ಮುಂಡಿ, ಶತಜಿಹ್ವ, ಸಹಸ್ರಾ
ವೀರಭದ್ರ ಶಿವ ನಿಶಿಖ, ಪಂಚಶಿಖ ಮೊದಲಾ
ಅನೇಕ ಪ್ರಮಥರೊಡನೆ ಹೊರಟನೆಂದು ಈ ಶ್ಲೋ
ಗಳು ಅಭಿಪ್ರಾಯಪಡಿಸುತ್ತದೆ ಈ ಪ್ರಮಥಪುಂಗವ
ಶಂಕುಕರ್ಣ ಮತ್ತು **ಗೋಕರ್ಣ** ಈ ಉಭಯ
ದ್ವಾಪರಯುಗದಲ್ಲಿ ವೀರಶೈವ ಮತಸ್ಥಾಪಕರಾದ ಶ್ರಿ
ಪಂಚಾಚಾರ್ಯರಲ್ಲಿ ಪರಿಶೋಭಿಸುತ್ತಿರುವ ವಿಷಯ
ಆಗಮಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿರುವ
ಶಂಕುಕರ್ಣ-ಗೋಕರ್ಣಎಂಬೀನಾಮಗಳು **ಘಂಟಾ**
ಕರ್ಣ ಮತ್ತು **ಧೇನುಕರ್ಣ** ಶಿವಾಚಾರ್ಯರ ಪರ್ಯಾ
ನಾಮಗಳಾಗಿರುವವು

ಈ ವಿಷಯವು ಪಾಶುಪತತಂತ್ರದಲ್ಲಿ—

ದ್ವಾಪರೇ ರೇಣುಕಶ್ಚೇತಿ ದಾರುಕಶ್ಚ ದ್ವಿತೀಯಕಃ ।
ತೃತೀಯಃ ಶಂಕುಕರ್ಣಶ್ಚ ಚತುರ್ಥೋ ಧೇನುಕರ್ಣಕಃ ॥
ಪಂಚಮೋ ವಿಶ್ವಕರ್ಣಾಖ್ಯಃ ಪಂಚ ನಾಮಾನಿ ವೈ ಕೃತಃ ।

ಇತ್ಯಾದಿ ಶ್ಲೋಕಗಳಿಂದ ಸ್ಪಷ್ಟವಾಗಿ ಪ್ರತಿಪಾದಿ
ಲ್ಪಟ್ಟಿರುವುದು. ಇದೇರೀತಿಯಾಗಿ ಜಗತ್ಪೂಜ್ಯರಾ
ಶ್ರೀ ಜಗದ್ಗುರು ಪಂಚಾಚಾರ್ಯರ ಪವಿತ್ರನಾಮಗ
ವ್ಯಾಸೋಕ್ತ ಪುರಾಣಗಳಲ್ಲಿಯೂ, ಶಿವಾಗಮಗ
ಲ್ಲಿಯೂ, ಇತರ ಪ್ರಾಚೀನ ಗ್ರಂಥಗಳಲ್ಲಿಯೂ ಕಂಗೆ
ಳಿಸುತ್ತಿರುವವು ಈ ಗ್ರಂಥಗಳೆಲ್ಲವೂ ಪರಮತೀಯ
ರಿಂದಲೇ ಮುದ್ರಿಸಿ ಪ್ರಕಟಿಸಲ್ಪಟ್ಟಿರುವುವು. ವೀರಶೈ
ಮತಾಚಾರ್ಯರ ಪ್ರಭಾವವು ಈ ರೀತಿಯಾಗಿ ಪುರಾತ
ಗ್ರಂಥಗಳಲ್ಲಿ ಮೆರೆಯುತ್ತಿದ್ದರೂ, ಇದೊಂದನ್ನೂ ಕ
ರೆದು ನೋಡದೆ ಅಸೂಯಾಬುದ್ಧಿಯಿಂದ ಮನಸ್ಸಿ
ಬಂದಂತೆ ನುಡಿಯುತ್ತಿರುವುದು ಬಹುಜನ್ಮಕೃತಪಾಪ
ಪ್ರಭಾವವೆಂದೇ ಹೇಳಬೇಕಾಗಿದೆ. ವಕ್ರಮಾರ್ಗಿಗ
ಇನ್ನು ಮುಂದಾದರೂ ತಮ್ಮ ವಕ್ರಮಾರ್ಗವನ್ನು ಬಿ
ಆ ಪ್ರಮಥಪುಂಗವರಲ್ಲಿ ನಿರ್ಮಲವಾದ ಭಕ್ತಿಯನ್ನಿ
ಮುಕ್ತಿಫಲಭಾಗಿಗಳಾಗಬೇಕೆಂದಾಶಿಸುತ್ತೇವೆ.

ಯುದ್ಧವಾರ್ತೆ.

ರಷ್ಯಾ ವಿಮಾನಗಳ ನಷ್ಟ

ಇದುವರೆಗೆ ರಷ್ಯಾ ವಿಮಾನ ಬಲದಲ್ಲಿ 10000 ಮಾನಗಳು ನಾಶವಾಗಿವೆಯೆಂದು ಜರ್ಮನಿಯು ಪ್ರಕಟಿ

ಒಡೆಸ್ಸಾ ಆಕ್ರಮಣಭೀತಿ

ಉಕ್ರೇನಿನಲ್ಲಿ ಜರ್ಮನರು ಬಹಳ ಮುಂದುವರಿಯು ರುವದರಿಂದ ಒಡೆಸ್ಸಾಕ್ಕೆ ವಿಪತ್ತು ಸನ್ನಿಹಿತವಾಗು ಪಿ ರಷ್ಯನರ ವ್ಯೂಹವು ಭೇದಿಸಲ್ಪಟ್ಟ ಸುದ್ದಿ ಬಂದಿಲ್ಲ ದರೂ ಭೀಕರ ಕದನವೇನೋ ನಡೆಯುತ್ತಿದೆ

ರಷ್ಯನರು ಹಿಮ್ಮೆಟ್ಟುತ್ತಿದ್ದಾರೆ

ಉಕ್ರೇನಿನಲ್ಲಿ ಬಹಳ ವಿಸ್ತಾರವಾದ ಪ್ರದೇಶಗಳಿಂದ ್ಯನರು ಸಿಸ್ತಿನಿಂದ ಹಿಮ್ಮೆಟ್ಟುತ್ತಿದ್ದಾರೆಂದು ಬರ್ಲಿನ್ನಿ ರುವ ತಾಟಸ್ಥ್ಯರಾಷ್ಟ್ರಗಳ ಜನರು ನಂಬಿದ್ದಾರೆ ್ಯಸೈನ್ಯಗಳು ಸಿಸ್ತಿನಿಂದ ಹಿಂತೆರಳುತ್ತಿರುವುದು, ರ್ಮನರ ಮುಖ್ಯಉದ್ದೇಶಕ್ಕೆ ಭಂಗಬಂದಂತಾಗಿದೆ ಂದು ಎಣಿಸಲಾಗಿದೆ

ಯುದ್ಧವು ದೀರ್ಘಕಾಲ ನಡೆಯಬಹುದು

ಈಗಿನ ಯುದ್ಧವು ಎಷ್ಟುಕಾಲ ನಡೆಯಬಹುದೆಂಬ ಾರದಲ್ಲಿ ಭಿನ್ನಭಿನ್ನಾಭಿಪ್ರಾಯಗಳಿವೆ ಇಟಲಿಯ ಕ್ಷಣ ಸಚಿವರು 10 ವರ್ಷಕಾಲ ನಡೆಯಬಹುದೆಂದು ನ್ನು ಕಡೆಯವರಿಗೆ ಎಚ್ಚರಿಕೆಕೊಟ್ಟಿದ್ದಾರೆ ಅಂತೂ ರ್ಘಕಾಲ ನಡೆಯಬಹುದೆಂಬುದೇ ಅನೇಕರು ಅಭಿ ಪ್ರಾಯವಾಗಿದೆ.

ಗೊಯರಿಂಗರ ದುರವಸ್ಥೆ

ನಾಜಿ ಪ್ರಮುಖರೂ ಮಿಲಿಟರಿ ಅಧಿಕಾರಿಗಳೂ ಆದ ಾರ್ಷಲ್ ಗೊಯರಿಂಗ್ ಮತ್ತು ಡಾ|| ಮಿಲ್ಕ್ಮರವ ್ನು ಮಿಲಿಟರಿ ಅಧಿಕಾರದಿಂದ ತಪ್ಪಿಸಲಾಗಿದೆಯೆಂದೂ, ಯರಿಂಗರ ಗತಿಯೇನಾಯಿತೆಂಬುದು ಸರಿಯಾಗಿ ಯದಿದ್ದರೂ ಬರ್ಲಿನ್ನಬಳಿಯಿರುವ ಸೆರೆಮನೆ ಲ್ಲಿ ಇನ್ನೂ ಅವರನ್ನು ಬಂಧಿಸಿರುವುದಾಗಿಯೂ, ಜನ ಲ್ ಮಿಲ್ಕ್ಮರವರನ್ನು ನಾಜಿಗುಪ್ತಚಾರರು ದಸ್ತಗಿರಿ ಾಡಿ ಕೊಂದುಹಾಕಿದರೆಂದೂ ನಂಬಲಾಗಿದೆ

ಂಕಿಂಗ್ ಮೇಲೆ ವಿಮಾನ ಮುತ್ತಿಗೆ

ಕಳೆದ 11 ನೆಯ ತಾರೀಖಿನ ಮಧ್ಯಾಹ್ನ ಜಪಾನ್ ಮಾನಗಳು ಚೀಣಾದ ಮುಖ್ಯ ಪಟ್ಟಣವಾದ ಚುಂ ಂಗ್ ನಗರದ ಮೇಲೆ ಉಗ್ರ ವಿಮಾನ ಮುತ್ತಿಗೆಯನ್ನು ಡೆಸಿದವು. ಇಷ್ಟು ಉಗ್ರವಾದ ಮುತ್ತಿಗೆ ಇದುವರೆಗೆ ಡೆದಿರಲಿಲ್ಲ. ನಾಲ್ಕು ದಿನಗಳಿಂದ ಜಪಾನು ನಡೆಸುತ್ತಿ ವ ಮುತ್ತಿಗೆಯಲ್ಲಿ ಒಟ್ಟು 400| ವಿಮಾನಗಳನ್ನು ಪಯೋಗಿಸಿದರೆಂದೂ 3000 ಬಾಂಬುಗಳನ್ನು ಹಾಕಿದ ದೂ ಅಂದಾಜು ಮಾಡಲಾಗಿದೆ.

ರಷ್ಯನ್ನರು ಹಿಮ್ಮೆಟ್ಟುವ ನಿರೀಕ್ಷೆ

ಉಕ್ರೇನ್ ಪ್ರಾಂತ್ಯದಲ್ಲಿ ಜರ್ಮನರಿಗೆ ಜಯವಾಗು ರುವುದರಿಂದ ನೀಪರ್ ನದಿಯ ಕೆಳಭಾಗದ ಎಡಗಡೆ ದೇಶವನ್ನೂ ಒಡೆಸ್ಸಾ ಬಂದರು ಮತ್ತು ಕಪ್ಪುಸಮು ದ ತೀರಪ್ರದೇಶವನ್ನೂ ರಷ್ಯನರು ತ್ಯಜಿಸಿ ಹಿಮ್ಮೆಟ್ಟ ೀಕಾಗುವದೆಂದು ಜರ್ಮನರು ನಂಬಿದ್ದಾರೆ. ಒಡೆಸ್ಸಾ ತ್ತು ನಿಕೋಲಯೆವ್‌ಗಳನ್ನು ಹಿಡಿದು ಅಲ್ಲಿಂದ ಷ್ಯದ ಪ್ರಮುಖ ಸಂಗ್ರಾಮವಸ್ತು ಕಾರ್ಖಾನೆಗಳ ೀಲೆ ಮುತ್ತಿಗೆ ನಡೆಸಲು ಜರ್ಮನರು ತಮ್ಮ ಸಾಹಸ ್ನೆಲ್ಲ ಪ್ರಯೋಗಿಸುತ್ತಿದ್ದಾರೆ.

ಅಮೆರಿಕೆಯ ಕಾರ್ಖಾನೆಗಳಲ್ಲಿ ಮುಷ್ಕರ

ಯುದ್ಧ ಸಾಮಗ್ರಿಗಳನ್ನು ತಯಾರಿಸುತ್ತಿರುವ ಕಾರ್ಖಾನೆಗಳಲ್ಲಿ ಮುಷ್ಕರಗಳು ಹೆಚ್ಚಾಗುತ್ತಿರುವುದನ್ನು ಕಂಡು ಅಮೆರಿಕಾ ಸಂಗ್ರಾಮ ಶಾಖೆಯವರಿಗೆ ಕಳವಳ ವುಂಟಾಗಿದೆ. 30 ಸಾರೆ ಮುಷ್ಕರಗಳು ನಡೆದು 23,400 ಜನರು ಕೆಲಸಕ್ಕೆ ಹೋಗಿಲ್ಲ.

ರಷ್ಯಾ ಸೈನಿಕರ ಸಾಹಸ

ಜರ್ಮನ್ ವ್ಯೂಹದ ಹಿಂದೆ ಕೆಲಸಮಾಡುತ್ತಿರುವ ರಷ್ಯನ್ ಯೋಧರು ಜರ್ಮನ್ ಸೈನಿಕರಿಂದ ತುಂಬಿದ ರೈಲೊಂದನ್ನು ಅಪಾಯಕ್ಕೆ ಸಿಕ್ಕುವಂತೆಮಾಡಿ 16 ಗಾಡಿಗಳನ್ನು ಸಂಪೂರ್ಣವಾಗಿ ನಾಶಮಾಡಿದರು

ಅಮೆರಿಕೆಯಲ್ಲಿ ಎಚ್ಚರಿಕೆ

ನೌಕಾ ನಿರ್ಮಾಣ ಕ್ಷೇತ್ರಗಳಲ್ಲಿ ಪಿತೂರಿಗಳಾಗಲಿ, ಯಂತ್ರಸಾಧನಗಳನ್ನೂ ಇತರ ವಸ್ತುಗಳನ್ನೂ ನಾಶ ಮಾಡುವ ಒಳಸಂಚುಗಳಾಗಲಿ ನಡೆಯದಂತೆ ನೋಡಿ ಕೊಳ್ಳಲು ವಿಶೇಷ ಪಡೆಯೊಂದನ್ನು ರೂಪುಗೊಳಿಸುವ ಮಸೂದೆಗೆ ರೂಜ್‌ವೆಲ್ಟರು ಸಹಿ ಹಾಕಿದರು.

ಇರಾನಿಗೆ ಎಚ್ಚರಿಕೆ

ಇರಾನಿನಲ್ಲಿ ನಾಜಿ ಏಜೆಂಟರುಗಳ ಸಂಖ್ಯೆಯೂ ನಾಜಿ ಚಟುವಟಿಕೆಗಳೂ ಹೆಚ್ಚುತ್ತಿವೆಯೆಂದು ರಷ್ಯವು ಇರಾನ್ ಸರ್ಕಾರವನ್ನು ಎಚ್ಚರಿಸುತ್ತ, 1921 ರಲ್ಲಿ ಆಗಿರುವ ಒಪ್ಪಂದದ ಕಡೆಗೆ ಆ ಸರ್ಕಾರದ ಗಮನವನ್ನು ಎಳೆ ದಿದೆ. “ಮೂರನೆಯ ರಾಷ್ಟ್ರವಾವುದಾದರೂ ಇರಾನನ್ನು ಪ್ರವೇಶಿಸಿ ರಷ್ಯಾವಿರುದ್ಧವಾಗಿ ಮಿಲಿಟರಿ ಸಿದ್ಧತೆಗಳನ್ನು ಮಾಡಿಕೊಳ್ಳುವ ಪ್ರಯತ್ನ ನಡೆಸಿದರೆ ಆಗ ರಷ್ಯವು ಇರಾನನ್ನು ಪ್ರವೇಶಿಸಬಹುದು” ಎಂದು ಆ ಒಪ್ಪಂದವು ಸೂಚಿಸುವುದರಿಂದ ಇರಾನಿನಲ್ಲಿ ಜರ್ಮನರ ಸಂಖ್ಯೆ ಯನ್ನು ಕಡಿಮೆ ಮಾಡಬೇಕೆಂದು ತಿಳಿಸಿದೆ

ಜರ್ಮನರ ಮುಂದೋಟ

ಉಕ್ರೇನಿನಲ್ಲಿ ಪೂರ್ಣ ಜಯವು ಲಭ್ಯವಾಗದಿ ದ್ದರೂ ಜರ್ಮನರ ಪ್ರಕಟನೆಯ ಪ್ರಕಾರ, ಹಿಮ್ಮೆಟ್ಟು ತ್ತಿರುವ ರಷ್ಯನರನ್ನು ಅಟ್ಟಿಕೊಂಡು ಹೋಗುತ್ತಿರುವ ಕಾರ್ಯವು ಮುಂದುವರೆಯುತ್ತಿದೆಯೆಂದೂ, ಉಮನ್ ಎಂಬುದರ ಸುತ್ತ ಭಯಂಕರವಾದ ಹೊಡೆದಾಟ ನಡೆಯು ತ್ತಿರುವದಾಗಿಯೂ, ಜರ್ಮನ್ ಮುಂಗಾವಲು ಪಡೆ ಗಳು ಮಾತ್ರ ನಿಕೋಲಯೆವ್ ಎಂಬೂರನ್ನು ಮುಟ್ಟಿ ರಬಹುದೆಂದೂ, ಶಸ್ತ್ರಬಂಡಿಗಳ ಚಲನಕ್ಕೆ ತೊಂದರೆ ಯಾಗುವ ಮಳೆಗಾಲವು ಸೆಪ್ಟಂಬರ್ ಮಧ್ಯದವರೆಗೂ ಬರುವದಿಲ್ಲವೆಂದೂ, ಅಕ್ಟೋಬರ್ ಅಥವಾ ನವಂಬರ್ ವರೆಗೆ ಉಕ್ರೇನಿನಲ್ಲಿ ಹಿಮಬೀಳುವದಿಲ್ಲವೆಂದೂ, ಅಲ್ಲಿಯ ವರೆಗೆ ಜರ್ಮನ ಆಕ್ರಮಣ ಕಾರ್ಯಕ್ರಮಗಳು ಬಹಳ ತೀವ್ರಗತಿಯಿಂದ ಸಾಗುವವೆಂದೂ ತಿಳಿದುಬರುತ್ತದೆ.

ವಿಶ್ವಶಾಂತಿಗಾಗಿ ಇಂಗ್ಲೆಂಡ್-ಅಮೆರಿಕೆಯ ಮೇಲನ

ಶ್ರೀ ಅಟ್ಲಿಯವರು ರೇಡಿಯೋಮೂಲಕ ಮಾತ ನಾಡುತ್ತ “ಅಮೆರಿಕೆಯ ಅಧ್ಯಕ್ಷರಾದ ರೂಜ್‌ವೆಲ್ಟರೂ ಮತ್ತು ಬ್ರಿಟಿಷ್ ಮಹಾಪ್ರಧಾನರಾದ ಚರ್ಚಿಲ್ಲರೂ ಸಮುದ್ರದಮೇಲೆ ಕಲೆತು ಮಾತುಗಳನ್ನಾಡಿದರೆಂದೂ, ಮಿತ್ರರಾಷ್ಟ್ರಗಳು ಯಾವಗುರಿಗಾಗಿ ಸಂಗ್ರಾಮನಡೆಸು ತ್ತಿವೆಯೆಂಬುದನ್ನು ಪ್ರಕಟಗೊಳಿಸುವ ಘೋಷಣೆಯನ್ನು ಸಿದ್ಧಗೊಳಿಸಿರುವರೆಂದೂ, ಮುಂದೆ ವಿಶ್ವಶಾಂತಿಯನ್ನು ಸ್ಥಾಪಿಸುವಾಗ ಯಾವ ಮೂಲತತ್ವಗಳನ್ನು ಆಧಾರವಾ ಗಿಟ್ಟುಕೊಳ್ಳಬೇಕೆಂಬುದನ್ನು ಸಹ ಸಿದ್ಧಗೊಳಿಸಲಾಗಿದೆ ಯೆಂದೂ, ಬ್ರಿಟನ್ನಿಗೆ ಸಂಗ್ರಾಮ ವಸ್ತುಗಳನ್ನೂ ಆಹಾ ರಪದಾರ್ಥಗಳೇ ಮುಂತಾದವುಗಳನ್ನೂ ಒದಗಿಸುವ ವಿಚಾರವನ್ನು ಕೂಲಂಕಷವಾಗಿ ವಿಮರ್ಶಿಸಿದರೆಂದೂ, ಈ ಮಾತುಕತೆಗಳಲ್ಲಿ ಲಾರ್ಡ್ ಬೀವರ್ ಬ್ರೂಕ್‌ರವರು ಭಾಗವಹಿಸಿದ್ದರೆಂದೂ, ಆಯಾ ದೇಶಗಳ ಪ್ರಜೆಗಳ ಪೂರ್ಣ ಒಪ್ಪಿಗೆಯಿಲ್ಲದೆ ಮತ್ತು ಅವರ ಆಶಯಕ್ಕೆ ವಿರು ದ್ಧವಾಗಿ ಯಾವ ಭೂವ್ಯವಸ್ಥೆಯನ್ನೂ ಮಾಡಲಾಗದೆಂ ಬುದೇ ಬ್ರಿಟನ್ ಮತ್ತು ಅಮೆರಿಕೆಗಳ ಆಶಯವಾಗಿದೆ ಯೆಂದೂ, ನಾಜಿ ದುಷ್ಟಶಾಸನವನ್ನು ಸಂಪೂರ್ಣವಾಗಿ ಕೊನೆ ಗಾಣಿಸಿದಮೇಲೆ ಚಿರಸ್ಥಾಯಿಯಾದ ಶಾಂತಿಯು ಸ್ಥಾಪಿ ಸಲ್ಪಡುವುದೆಂದು ಇವೆರಡುದೇಶಗಳವರು ನಿರೀಕ್ಷಿಸಿದ್ದಾ ರೆಂದೂ, ಈ ಶಾಂತಿಯ ಫಲವಾಗಿ ಎಲ್ಲ ಜನಾಂಗಗಳೂ ತಮ್ಮ ಗಡಿನಾಡಿನೊಳಗೆ ಸಮಾಧಾನಚಿತ್ತದಿಂದ ಜೀವಿ ಸಿರುವಂತಾಗುವದೆಂದೂ, ರೂಜ್‌ವೆಲ್ಟ್ ಮತ್ತು ಚರ್ಚಿ ಲ್‌ರವರಿಬ್ಬರೂ ತಮ್ಮ ಸರಕಾರಗಳ ಪ್ರಮುಖ ಅಧಿ ಕಾರಿಗಳನ್ನೂ ಮಿಲಿಟರಿ ಮತ್ತು ನೌಕಾ ಪ್ರಮುಖರನ್ನೂ ಕರೆತಂದಿದ್ದರೆಂದೂ” ಹೇಳಿದರು

ಇಂಡೋಚೀನಾಕ್ಕೆ ೧,೮೦,೦೦೦ ಜನ ಜಪಾನ್ ಸೈನಿಕರ ಆಗಮನ

ಇಂಡೋ ಚೀನಾದಲ್ಲಿ ಜಪಾನು ಆಕ್ರಮಿಸಿರುವ ಮೂ ಲಗಳಿಂದ ಜಪಾನ್ ವಿಮಾನಗಳು ಚೀನಾ ಸ್ಥಾನಗಳ ಮೇಲೆ ಮುತ್ತಿಗೆ ನಡೆಸಿದವೆಂದೂ, ಇಂಡೋ-ಚೀ ನಾಕ್ಕೆ ೧,೮೦,೦೦೦ ಜಪಾನ್ ಸೈನಿಕರು ಬಂದಿದ್ದಾ ರೆಂದೂ ಫ್ರೆಂಚ್ ಇಂಡೊ-ಚೀನಾದಲ್ಲಿ ಫ್ರೀ ಫ್ರೆಂಚ್ ಕಾರರನ್ನು ಜಪಾನಿನ ಹೊಸ ಪ್ರತಿನಿಧಿಗಳನ್ನಾಗಿ ನೇಮಿಸಲಾಗುವುದೆಂದೂ ವರ್ತಮಾನವಿದೆ

ಪೆಟ್ರೋಲ್ ತುಂಬಿದ ಆಯುಧ

ಫಿನ್‌ಲೆಂಡಿನಲ್ಲಿ ರಷ್ಯನರು ಹೊಸಬಗೆಯ ಶಸ್ತ್ರವೊಂ ದನ್ನು ಉಪಯೋಗಿಸುತ್ತಿದ್ದಾರೆ ಇವರು ಪೆಟ್ರೋಲಿನಿಂದ ತುಂಬಿದ ಗುಂಡುಗಳನ್ನು ಫಿರಂಗಿಗಳಿಂದ ಹಾರಿಸುತ್ತಿ ದ್ದಾರೆ ಅವುಗಳು 200 ಅಡಿಗಳಷ್ಟು ಮೇಲೆ ಸಿಡಿದು ಕಾಡುಗಳಿಗೆ ಬೆಂಕಿ ಇಡುತ್ತವೆ ಇದಾದಮೇಲೆ ಶತ್ರುಗಳ ಮೇಲೆ ಗುಂಡಿನ ಮಳೆಗರೆಯಲು ಪ್ರಾರಂಭಿಸುತ್ತಾರೆ ಬೆಂ ಕಿಯನ್ನು ಆರಿಸುವುದು ಫಿನ್ನಿಷರಿಗೆ ಬಹಳ ಕಷ್ಟವಾಗಿದೆ.

ಒಳದೇಶದ ವೃತ್ತಾಂತಗಳು

ವೈಸರಾಯ್‌ಯವರ ಎಕ್ಸಿಕ್ಯೂಟಿವ್ ಕೌನ್ಸಿಲ್ ಸದ ಸ್ಯರಾದ ಸರ್ ಮಹಮದ್ ಜಫರುಲ್ಲಾಖಾನರು ಕಳೆದ 11 ನೆಯ ತಾರೀಖು ಸೋಮವಾರ ರಾಜಧಾನಿಗೆ ಆಗ ಮಿಸಿ, ರಾಜಅತಿಥಿಗಳಾಗಿ 13 ನೆಯ ತಾರೀಖಿನವರೆಗೂ ಇದ್ದು ಇಲ್ಲಿಯ ಪ್ರೇಕ್ಷಣೀಯವಾದ ಕೆಲವು ಸ್ಥಳಗಳನ್ನು ಸಂದರ್ಶಿಸಿ ಸಂತೋಷಿಸಿದರು ಶ್ರೀಮನ್ಮಹಾರಾಜರವ ರನ್ನು ಮಂಗಳವಾರ ಮಧ್ಯಾಹ್ನ ಭೇಟಿಮಾಡಿ ಕೆಲವು ಕಾಲ ಸಮಾಲೋಚನೆ ನಡೆಸಿದರು.

ಮೈಸೂರಿನ ಸೆಂಟ್ರಲ್ ರೈಲ್ವೆ ವರ್ಕ್‌ಷಾಪಿನ ಕೆಲಸಗಾರರಾದ ಸೈಯದ್ ಅಬ್ದುಲ್, ಕೆ ಕೆಂಚಪ್ಪ, ರಾಮರಾವ್, ಸುಲೇಮನ್, ಎಂ ಕೆಂಬುಸ್ವಾಮಿ, ಹನುಮಯ್ಯ, ಎ. ಎಸ್. ಚನ್ನರಾಜೆಅರಸ್ ಇವರು ಮೈಸೂರು ಜಿಲ್ಲೆಯೊಳಕ್ಕೆ ಪ್ರವೇಶಿಸಕೂಡದೆಂದು ಮಾಡಿದ್ದ ಆಜ್ಞೆಯನ್ನು ಈಗ ಸರ್ಕಾರದವರು ವಾಪಸು ತೆಗೆದುಕೊಂಡಿದ್ದಾರೆ. ಆದರೆ ಅವರು ಮೈಸೂರು ಪಬ್ಲಿಕ್‌ಸೆಕ್ಯೂರಿಟಿ ಆಕ್ಟಿನ 4 ನೆ ಸೆಕ್ಷನ್ ಪ್ರಕಾರ ಸೆಂಟ್ರಲ್ ರೈಲ್ವೆ ವರ್ಕ್‌ಷಾಪ್‌ಬಳಿ ಸುಳಿದಾಡಕೂಡ ದೆಂದು ನಿರ್ಬಂಧಿಸಿದ್ದಾರೆ.

ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಯನ್ನು ವಿಶೇಷವಾಗಿ ವಿಸ್ತರಿಸುವ ಯೋಜನೆಯೊಂ ದನ್ನು ಸಿದ್ಧಪಡಿಸಲಾಗಿದೆಯೆಂದೂ, ಇದಕ್ಕೆ ಸುಮಾರು 3|| ಲಕ್ಷ ಪೌಂಡುಗಳು ವೆಚ್ಚವಾಗುವವೆಂದೂ, ಈಗ ಬೇಕಾದ ಯಂತ್ರಗಳಿಗೆ ಲಂಡನ್ನಿನಲ್ಲಿರುವ ಮೈಸೂರು ಟ್ರೇಡ್ ಕಮೀಷನರವರು ‘ಆರ್ಡರ್’ ಕೊಡುವುದರ ಲ್ಲಿದ್ದಾರೆಂದೂ, ಎಲೆಕ್ಟ್ರಿಕ್ ‘ಫರ್ನೆಸ್’ಗಳು ಒಂದು ರೋಲಿಂಗ್ ಮಿಲ್ ಮುಂತಾದುವನ್ನು ಪಡೆಯಲಾಗುವ ದೆಂದೂ, ಇದರಿಂದ ಭದ್ರಾವತಿ ಕಾರ್ಖಾನೆಯಲ್ಲಿ ಅತ್ಯಂತ ಭಾರವಾದ ಮತ್ತು ಉಪಯುಕ್ತವಾದ ಸಾ ಮಾನುಗಳನ್ನು ತಯಾರಿಸಲು ಸಾಧ್ಯವಾಗುವುದೆಂದೂ ಗೊತ್ತಾಗುತ್ತದೆ.

ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ರೇಣುಕವಿಜಯಮಹಾಪುರಾಣಪ್ರಾರಂಭ

ಬೆಳಗಾಂವ

ಬೆಳಗಾಂವ ಹೆಡ್‌ಕ್ವಾರ್ಟರ್ಸನಲ್ಲಿರುವ ಶ್ರೀವೀರಭದ್ರಾಲಯದಲ್ಲಿ ಶ್ರೀ|| ಷ|| ಬ್ರ|| ಗುರುವರ್ಯ ಶಿವಾಚಾರ್ಯರು ಬೃಹನ್ಮಠ ಸುತ್ತಗಟ್ಟಿ ಇವರಿಂದ ಶ್ರೀಜಗದ್ಗುರು ರೇಣುಕವಿಜಯ ಮಹಾಪುರಾಣವು ಶ್ರಾವಣ ಶು|| ೪ ಸೋಮವಾರದಿಂದ ಪ್ರಾರಂಭಿಸಲ್ಪಟ್ಟಿರುವುದು ಪ್ರವಚನಕ್ಕೆ ಜನಸಂದಣಿಯು ವಿಶೇಷವಾಗಿದೆ ಮತ್ತು ಶ್ರೀಮಾನ್ ಲಿಂಗಪ್ಪನವರು ಅಂಕಲಗಿಯವರ ಮನೆಯಲ್ಲಿ ಸದರಿ ಸುತ್ತಗಟ್ಟಿಸ್ವಾಮಿಗಳ ಪಾದಪೂಜಾಸಮಾರಂಭವು ನಡೆದದೆ ಗುರುಭಕ್ತಿಧುರೀಣರಾದ ಲಿಂಗಪ್ಪನವರು ಸ್ವಾಮಿಗಳನ್ನು ಈ ವರ್ಷ ಮುದ್ದಾಂ ಸೊಲ್ಲಾಪುರದಿಂದ ಬರಮಾಡಿಕೊಂಡು ಜಗದಾಚಾರ್ಯರ ಜಯಧ್ವಜವು ಬೆಳಗಾವಿಯಲ್ಲಿ ಮೆರೆಯಲು ಪ್ರಯತ್ನಪಡುತ್ತಿರುವುದು ಸ್ತುತ್ಯವಾದ ಸಂಗತಿಯಾಗಿದೆ ಅಲ್ಲದೆ ಈ ಪ್ರವಚನದ ಕಾರ್ಯದಲ್ಲಿ, ಪಂಡಿತ ಶ್ರೀಶೈಲನಾಥಶಾಸ್ತ್ರಿಗಳು, ಶ್ರೀಮಾನ್ ಕಿತ್ತೂರ ವಕೀಲರು, ಮಡಿವಾಳಪ್ಪ ಉಪ್ಪಿನ, ಚಂದ್ರಯ್ಯ ಪೂಜಾರಿ ಚಂದ್ರಕಾಂತಶೆಟ್ಟಿ ದುಂಡಪ್ಪ ಗಾಡವಿ, ಮಲ್ಲಪ್ಪ ಮೋದಗಿ, ನಿಂಗಪ್ಪ ಬಾಳೆಕುಂದ್ರಿ, ದುಂಡಪ್ಪ ಪುರಾಣಿಕ, ಶಿವಪ್ಪ ಕತ್ತಿಶೆಟ್ಟಿ ಇವರೇ ಮೊದಲಾದ ವ್ಯಾಪಾರಸ್ಥರು ಭಾಗವಹಿಸಿ ಒಳ್ಳೇ ಭಕ್ತಿಯಿಂದ ಗುರುಸೇವೆಯನ್ನು ಮಾಡುತ್ತಿರುವರು ಈ ಸಜ್ಜನರಿಗೆ ಜಗದಾಚಾರ್ಯರ ಸನ್ಮಂಗಲವನ್ನು ಕೊಡಲೆಂದು ಬೇಡಿಕೊಳ್ಳುತ್ತೇನೆ

ಮಲ್ಲಿಕಾರ್ಜುನಾರಾಧ್ಯ ಹಡಗಲಿ

ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು

ಶ್ರಾವಣಮಾಸದ ವ್ರತಾರಂಭ

ಸೊಲ್ಲಾಪುರದಲ್ಲಿರುವ ಶ್ರೀ ಮನ್ಮಥಸ್ವಾಮಿ ಮಂದಿರದಲ್ಲಿ ಶಿವಲಿಂಗಸ್ಥಾಪನೆಗೋಸುಗ ಕಲ್ಯಾಣಾರ್ಥವಾಗಿ ಒಂದು ಕೋಟಿ ಜಪವನ್ನು ಮಾಡಲು ಶ್ರೀ|| ಷ||ಬ್ರ|| ಬಾಲತಪಸ್ವಿ ಚನ್ನವೀರಶಿವಾಚಾರ್ಯರು ಬೃಹನ್ಮಠ ಹೋಟಗಿ ಈ ಪೂಜ್ಯರು, ಮಾರ್ಗಶೀರ್ಷ ಶುದ್ಧ ಪೂರ್ಣಿಮೆಯಿಂದ ಹನ್ನೊಂದು ತಿಂಗಳು ಶಿವಲಿಂಗಾನುಷ್ಠಾನ ವ್ರತವನ್ನು ಕೈಗೊಂಡದ್ದು ಪತ್ರಿಕಗಳಲ್ಲಿ ಪ್ರಸಿದ್ಧವಾಗಿದೆಯಷ್ಟೆ! ಇದೂ ಅಲ್ಲದೆ ತಮ್ಮ ವಾರ್ಷಿಕ ಶ್ರಾವಣವ್ರತವನ್ನು ಶ್ರಾವಣ ಶುದ್ಧ ಪ್ರತಿಪದೆಯಿಂದ, ನಿರಾಹಾರಿಗಳಾಗಿ, ಮೌನವ್ರತಿಗಳಾಗಿ ಅವಿಚ್ಛಿನ್ನ ಹದಿನೈದು ತಾಸು ಪೂಜೆಯನ್ನು ಮಾಡಲು ಪ್ರಾರಂಭಮಾಡಿದ್ದಾರೆ ಸದ್ಭಕ್ತರು ವಿಶೇಷ ಕಳಮಳಿಸಿದರೂ ಅಕಡೆ ಲಕ್ಷ್ಯವನ್ನು ಕೊಡದೆ ತಮ್ಮ ಅನುಷ್ಠಾನಾನಂದದಲ್ಲಿಯೇ ಮಗ್ನರಾಗಿದ್ದಾರೆ ಧ್ಯಾನಿಗಳ ಲಕ್ಷಣವೇ ಹೀಗಿದೆ ಧ್ಯಾನವೆಂದರೆ "ತತ್ರ ಪ್ರತ್ಯಯೈಕತಾನತಾಧ್ಯಾನಂ" ಎಂಬ ಯೋಗಸೂತ್ರದಂತೆ ಧಾರಣೆಯನ್ನು ಪಡೆದ ವಸ್ತುವಿನಲ್ಲಿಯೇ ತಿಳಿವಳಿಕೆಯು ಬಿಡದೆ ಹರಿಯುತ್ತಿರುವದು ಈ ರೀತಿಯಲ್ಲಿ ನೋಡುವಾಗ ಶ್ವಾಸವು ಆ ದೇವತಾ ಸಂಬಂಧವಾದ ಮಂತ್ರದೊಡನೆ ನಡೆಯುತ್ತಿರುವದು, ಆಗ ನಿಜವಾದ ಜಪವಾಗುವದು. ಜಪವೆಂದರೆ "ತಜ್ಜಪಸ್ತದರ್ಥಭಾವನಂ" ಎಂಬ ಯೋಗಸೂತ್ರದಂತೆ ಮಂತ್ರದ ಅರ್ಥವನ್ನು ಭಾವಿಸುತ್ತಿರುವದು ಶ್ವಾಸವು ಯಾವ ಮಂತ್ರದ ಆಕಾರವನ್ನು ಪಡೆಯುವದೋ ಮನಸ್ಸು ಆ ಮಂತ್ರದ ಅರ್ಥವಾದ ಆಕಾರವನ್ನು ಪಡೆಯುವದೇ ನಿಜವಾದ ಜಪ

ಪ್ರಣವೋ ಧನುಃ ಶರೋ ಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯಮುಚ್ಯತೇ |
ಅಪ್ರಮತ್ತೇನ ವೇದ್ಧವ್ಯಂ ||

ಎಂಬ ಮುಂಡಕೋಪನಿಷತ್ತಿನ ವಾಕ್ಯದಂತೆ, ದೇವತಾಸ್ವರೂಪವನ್ನೇ ಒಳಗೆಮಾಡಿಕೊಂಡು ಆನಂದಪಡುವ ಯೋಗಿಗಳ ಮಾತೇಬೇರೆ! ಮುತ್ತಿನಚಿಪ್ಪಿನ ಮೀನು ತನ್ನ ಧ್ಯೇಯವಾದ ಸ್ವಾತಿಯಹನಿಯು ತನ್ನಲ್ಲಿ ಬೀಳುವವರೆಗೂ ಮೇಲೆ ಮೇಲೆ ತೇಲುತ್ತಿದ್ದು ಆ ಹನಿಯು ಬಿದ್ದೊಡನೆಯೇ ಮೀನು ಕೆಳಗೆ ಮುಳುಗಿ ಆ ಹನಿಯಿಂದ ಮುತ್ತನ್ನು ಹೇಗೆ ತಯಾರುಮಾಡುತ್ತದೆಯೋ ಹಾಗೆಯೇ ಸಾಧಕರು ಧಾರಣೆಯನ್ನು ಪಡೆದು ಮನಸ್ಸನ್ನು ಧ್ಯಾನದಲ್ಲಿಟ್ಟು ಸಾರ್ಥಕಗೊಳಿಸುತ್ತಾರೆ ನಮಗೆ ಕಷ್ಟವೆಂದು ಕಂಡರೂ ಮಹಾತ್ಮರಿಗೆ ಆನಂದಮಯವಾಗುತ್ತದೆ ಈ ಪೂಜ್ಯರ ಪವಿತ್ರಾಚರಣಗಳಲ್ಲಿಯೇ ನಿರತರಾದ ಶ್ರೀ|| ಷ|| ಬ್ರ|| ಬಾಲಶಿವಯೋಗಿ ಗುರುಶಾಂತ ಶಿವಾಚಾರ್ಯರು ಬೃಹನ್ಮಠ ಜೇವರಗಿ ಈ ಪೂಜ್ಯರು ಸದ್ಭಕ್ತರ ಪ್ರಾರ್ಥನೆಯಮೇರೆಗೆ, ಅದೇ ಮನ್ಮಥಸ್ವಾಮಿ ಮಂದಿರದಲ್ಲಿ ಶ್ರಾವಣ ಪ್ರತಿಪದೆಯಿಂದ ತಮ್ಮ ಶಿವಲಿಂಗಾನುಷ್ಠಾನವನ್ನು ಮಾಡಲು ಪ್ರಾರಂಭಿಸಿದ್ದಾರೆ ಸದ್ಗುಣಸಂಪನ್ನರೂ, ಶಾಂತಸ್ವಭಾವದವರೂ, ತಪಃಸಾಮ್ರಾಜ್ಯ ಶಿವಪೂಜಾನಂದರೂ, ಶ್ರೀ ಶಿವಲಿಂಗಾನುಷ್ಠಾನ ತತ್ಪರರೂ ಆದ, ಈ ಉಭಯ ಗುರುಗಳ ಪವಿತ್ರ ವ್ರತವು ನಿರ್ವಿಘ್ನವಾಗಿ ನಡೆಯಲೆಂದು ವಿಶ್ವರಕ್ಷಕನಾದ ಈಶ್ವರನಲ್ಲಿಯೂ, ವಿಶ್ವಗುರುಗಳಾದ ಪಂಚಾಚಾರ್ಯರಲ್ಲಿಯೂ ಅನನ್ಯಭಾವದಿಂದ ಬೇಡಿಕೊಳ್ಳುವೆನು ಇಂಥ ಧರ್ಮಮೂರ್ತಿಗಳನ್ನು ತಯಾರುಮಾಡಿದ ಧರ್ಮಜ್ಯೋತಿ ವೇ|| ಶ್ರೀ ಕಾಶೀನಾಥಶಾಸ್ತ್ರಿಗಳವರ ಉಪಕಾರವನ್ನು ಎಷ್ಟು ವರ್ಣಿಸಿದರೂ ತೀರದಾಗಿದೆ ಆ ಪಂಡಿತಾಗ್ರಗಣ್ಯರ ಕಷ್ಟಸಾಹಸಗಳಿಂದ ಇಂಥ ಅನಂತ ಧರ್ಮಮೂರ್ತಿಗಳು ಉತ್ಪನ್ನರಾಗಿ ನಮ್ಮ ವೀರಶೈವ ಮತವು ದಶದಿಕ್ಕುಗಳಲ್ಲಿ ಪ್ರಕಾಶಿಸಲೆಂದು ಹಾರೈಸುವೆನು

ಸೌ|| ಭಾಗೀರಥೀದೇವಿ ಕಟಾವ,
ಸೋಲಾಪುರ ಸಿಟಿ

ಆರೋಗ್ಯದಿಂದ ಬದುಕುವ ಕ್ರಮಗಳು

೧ ಶ್ವಾಸೋಚ್ಛ್ವಾಸಕ್ರಮ

ನೀವು ಸರಿಯಾಗಿ ಶ್ವಾಸಿಸುವಿರೋ? ಆರೋಗ್ಯದಿಂದ ಜೀವಿಸುವುದಕ್ಕೆ ಕ್ರಮವಾಗಿ ಶ್ವಾಸಿಸುವುದೇ ಮೂಲಾಧಾರವೆಂಬುದನ್ನು ತಿಳಿದು ಕೊಂಡಿರುವಿರೋ? ಮೂಗಿನಮೂಲಕವೇ ಶ್ವಾಸವನ್ನು ಎಳೆಯುವಾಗ, ಆ ಗಾಳಿಯು ಶ್ವಾಸನಾಳಕ್ಕೆ ಹೋಗಿಸೇರುವುದಕ್ಕೆ ಮೊದಲು, ಮೂಗಿನ ರಂಧ್ರಗಳು ಹೊರಗಿನ ಗಾಳಿಯಲ್ಲಿರುವ ಧೂಳು ಮುಂತಾದ ಕೆಟ್ಟ ವಸ್ತುಗಳನ್ನೆಲ್ಲಾ ತಡೆದಿಟ್ಟು, ಶುದ್ಧವಾದ ಗಾಳಿಯನ್ನುಮಾತ್ರ ಒಳಕ್ಕೆ ಬಿಡುವುದು ಹಾಗಿಲ್ಲದೆ ಬಾಯಿಂದ ಶ್ವಾಸವನ್ನೆಳೆಯುವುದಾದರೆ, ಅದಕ್ಕಾವ ಕಾಪವಿಲ್ಲದೆ ಅನೇಕ ಕಶ್ಮಲಗಳು ಶ್ವಾಸಕೋಶಗಳಿಗೆ ಹೋಗಿಸೇರಿ ಅಪಾಯಕ್ಕೆ ಕಾರಣವಾಗಬಹುದು. ಈ ಅಂಶವನ್ನು ನೀವು ಗಮನಿಸಿರುವಿರೋ? ಅನೇಕರು ಬಾಯಿಂದಲೇ ಉಸಿರಾಡುತ್ತಿದ್ದರೂ, ಆ ತಪ್ಪನ್ನು ತಿಳಿಯದೆ, ತಾವು ಯಾವಾಗಲೂ ಮೂಗಿನಿಂದಲೇ ಶ್ವಾಸಿಸುವುದಾಗಿ ಹೇಳುವರು ಅವರು ಹೇಳುವುದು ನಿಮಗೂ ನಿಜವೆಂದು ತೋರಬಹುದು ನೀವು ಸೂಕ್ಷ್ಮದೃಷ್ಟಿಯಿಂದ ಗಮನಿಸಿನೋಡಿದರೆ, ಅದರ ನಿಜಾಂಶವನ್ನು ತಿಳಿಯಬಹುದು ಇದರ ಪರೀಕ್ಷೆಗಾಗಿ ನಿಮ್ಮ ಬಾಯನ್ನು ಗಟ್ಟಿಯಾಗಿ ಮುಚ್ಚಿಕೊಂಡು, ಮೂಗಿನಿಂದ ಶ್ವಾಸಿಸುವುದಕ್ಕೆ ಪ್ರಯತ್ನಿಸಿರಿ ಸ್ವಲ್ಪಹೊತ್ತಿನಲ್ಲಿಯೇ ನಿಮಗೆ ಏನೋ ಕಷ್ಟವಾಗಿ ತೋರಬಹುದು ಆದುದರಿಂದ ಸಾಮಾನ್ಯವಾಗಿ ಅನೇಕರು ಬಾಯಿಂದ ಶ್ವಾಸಿಸುತ್ತಿರುವರೆಂದು ತಿಳಿಯಬಹುದು

ನೀವು ಮೂಗಿನಿಂದ ಉಸಿರಾಡುವುದನ್ನೇ ಅಭ್ಯಾಸಕ್ಕೆ ತಂದರೆಮಾತ್ರ, ಆಮೇಲೆ ಅದು ಸರ್ವಸಾಧಾರಣವಾಗಿ ಸುಲಭವಾಗುವುದು ಮೂಗಿನಿಂದ ಉಸಿರಾಡತಕ್ಕವರು ಮೂಗಿನ ರಂಧ್ರಗಳನ್ನು ಆಗಾಗ ಶುದ್ಧಮಾಡಿಕೊಳ್ಳಬೇಕು ಕೈಯನ್ನು ದೊನ್ನೆಯಹಾಗೆ ಮಾಡಿ ಅದರಲ್ಲಿ ನೀರು ತುಂಬಿಕೊಂಡು ಆ ನೀರನ್ನು ಮೂಗಿನ ರಂಧ್ರದ ಮೂಲಕವಾಗಿ ಮೇಲಕ್ಕೆ ಎಳೆದುಕೊಳ್ಳಬೇಕು ಒಂದು ರಂಧ್ರದಿಂದ ನೀರನ್ನೆಳೆಯುವಾಗ ಮತ್ತೊಂದು ರಂಧ್ರವನ್ನು ಬೆರಳಿನಿಂದ ಒತ್ತಿ ಹಿಡಿದುಕೊಳ್ಳಬೇಕು ಮೊದಮೊದಲು ಈ ಕಾರ್ಯವು ನಿಮಗೆ ಕಷ್ಟವಾಗಿ ತೋರಬಹುದು ಬಾಯಿಂದಲೇ ಉಸಿರಾಡಿ ಅಭ್ಯಾಸವುಳ್ಳವರಿಗೆ ಬಹಳಮಟ್ಟಿಗೆ ಇದು ಸಾಧ್ಯವಲ್ಲವೆಂದೂ ತೋರಬಹುದು ಇದಲ್ಲದೆ ಮೂಗಿನಿಂದ ನೀರನ್ನೆಳೆಯುವಾಗ ಸ್ವಲ್ಪ ಕಷ್ಟವೂ, ನೋವೂ ಆಗಬಹುದು. ಇ
ದನ್ನು ಲಕ್ಷ್ಯಮಾಡದೆ ಸ್ವಲ್ಪ ದಿನಗಳವರೆಗೆ ಸ
ಮಾಡಿದರೆ ಆಮೇಲೆ ಅದು ಸುಲಭವಾಗುವುದು
ಮೂಗಿನಿಂದಲೇ ಶ್ವಾಸಿಸುವುದನ್ನು ಬಳಕೆಗೆ ತಂದ
ಡವೇಳೆ, ದೀರ್ಘವಾಗಿ ಶ್ವಾಸವನ್ನೆಳೆದು ಬಿಡುವ
ಯನ್ನು ಕಲಿಯಬೇಕು ಕೆಲವರು ಸಹಜವಾಗಿಯೇ
ದೀರ್ಘವಾಗಿಯೇ ಎಳೆದು ಬಿಡುವರು ಹೊಟ್ಟೆಯ
ಭಾಗದಿಂದ ಶ್ವಾಸವನ್ನೆಳೆದು ಬಿಡುವುದೂ ಉ
ಶ್ವಾಸವನ್ನಾದರೂ ಎಳೆಯುವವರು ಅಪೂರ್ವವು
ರುವಾಗ ಸರಿಯಾಗಿ ಶ್ವಾಸವನ್ನೆಳೆದುಬಿಡುವವರಿಲ್ಲವೆ
ಹೇಳಬಹುದು

೨ ಜಲಪಾನಕ್ರಮ

ಗಾಳಿಯನ್ನು ಬಿಟ್ಟರೆ, ಎರಡನೆಯದು ತಣ್ಣ
ನೀರನ್ನು ಹೆಚ್ಚಾಗಿ ಕುಡಿದಷ್ಟೂ ಅದು ದೇಹವ
ತೊಳೆದು ಶುದ್ಧೀಕರಿಸುವುದು ಆದರೆ ಆ ನೀರಿಗೆ
ಹಣ್ಣಿನ ರಸವನ್ನು ಸೇರಿಸಿಡುವುದು ಉತ್ತಮವು
ವೊಂದಕ್ಕೆ ಎಷ್ಟು ನೀರನ್ನು ಕುಡಿಯಬೇಕೆಂಬ ಪ್ರ
ಣವು ಮಾತ್ರ ಆಯಾ ಮನುಷ್ಯನ ದೇಹಪ್ರಕೃತಿಯ
ಅನುಸರಿಸಿದೆ

೩. ಸ್ನಾನಕ್ರಮ

ದೇಹಾರೋಗ್ಯಕ್ಕೆ ಪ್ರತಿದಿನವೂ ಸ್ನಾನಮಾಡಬ
ದುದು ಮುಖ್ಯವು ತಣ್ಣೀರಿನಲ್ಲಿಯೇ ಸ್ನಾನ ಮಾ
ಕೆಂಬ ವಿಧಿಯಿಲ್ಲ ತಣ್ಣೀರಿನಲ್ಲಿಯೋ, ಅಥವಾ ಬಿಸಿ
ನಲ್ಲಿಯೋ, ಸ್ನಾನಮಾಡಬಹುದು ಆದರೆ, ನೀರಿನ
ತೋಷ್ಣಸ್ಥಿತಿಯು ಅವರವರ ದೇಹದಲ್ಲಿ ರಕ್ತದ ಉಷ
ತಕ್ಕೆ ಹೊಂದಿದಂತಿರಬೇಕಾದುದವಶ್ಯವು. ಇದನ್ನು
ರವರೇ ತಮ್ಮ ದೇಹಾನುಗುಣವಾಗಿ ಗಮನಿಸಿ ತಿ
ಕೊಳ್ಳಬೇಕು ಸ್ನಾನಮಾಡುವುದಕ್ಕೆ ಮೊದಲು ದ
ವನ್ನು ಗಟ್ಟಿಯಾಗಿ ಉಜ್ಜಿ, ರಕ್ತ ಸಂಚಾರಕ್ಕೆ ಉ
ಜನವುಂಟಾಗುವಂತೆ ಮಾಡಬೇಕು ಹೀಗೆ ಮೈಯ
ಜ್ಜುವುದರಲ್ಲಿ, ದೇಹದೊಳಗೆಲ್ಲಾ ರಕ್ತ ಸಂಚಾರದ
ಒಂದು ಹೊಸ ಕಾಂತಿಯು ಉಂಟಾಗುವಂತಿರಬೇ
ಕೊನೆಯಪಕ್ಷ ವಾರಕ್ಕೆರಡುಸಾರಿ ಮಲಗುವುದಕ್ಕೆ ಮ
ಬಿಸಿನೀರಿನ ಸ್ನಾನವನ್ನು ಮಾಡಬೇಕು ಚರ್ಮದ
ಗಳೊಳಗಿನ ಕೊಳೆಗಳೆಲ್ಲಾ ಹೊರಬೀಳುವುವು ನ
ಮೈಗೆ ಹೊಳಪು, ಅಂದವೂ ಬರಬೇಕಾದರೆ, ಚರ
ಶುದ್ಧವಾಗಿ ಮಲಕೋಶವು ಚೆನ್ನಾಗಿ ಕೆಲಸಮಾಡ
ವುಗಳಾಗಿಯೂ, ಜೀರ್ಣಾಂಗಗಳು ಒಳ್ಳೇ ಆರೋ
ಸ್ಥಿತಿಯಲ್ಲಿಯೂ ಇರಬೇಕು

ಪ್ರತಿಮನುಷ್ಯನಿಗೂ ತಾನು ಸುಖವಾಗಿಯೂ,
ರರ ಕಣ್ಣಿಗೆ ಅಂದವಾಗಿಯೂ ಇರಬೇಕೆಂಬ ಅಭಿಪ್ರಾ
ವೇನೋ ಇದ್ದೇಇರುವುದು ಆ ಇಷ್ಟವು ಕೈಗೂಡಬೇ
ದರೆ, ಮೇಲೆ ಹೇಳಿದ ಸ್ನಾನ, ಪಾನ, ಶುಚಿತ್ವ ಮೊ
ಲಾದ ನಿಯಮಗಳಲ್ಲಿ ತಪ್ಪದೆ ನಡೆಯುತ್ತಿರಬೇಕು
ಆರೋಗ್ಯಜೀವನಕ್ಕೆ ಅಂಗಸಾಧನೆಯನ್ನು ಮುಖ್ಯವೆ
ಭಾವಿಸಬೇಕು

೪ ಆಹಾರಕ್ರಮ

ಅನೇಕರು ಮಾಂಸಾಹಾರವು ಮೈಗೆ ಬಲಕಾರಿಯೆ
ಕೇಳಿ ಅದನ್ನೇ ನಂಬುವರು ಇದು ಸರಿಯಲ್ಲ. ಏ
ದರೆ, ಶಾಕಾಹಾರಿಗಳಿಗೂ ತಮ್ಮ ಪದ್ಧತಿಯೇ ಉತ್ತ
ವೆಂಬ ನಂಬಿಕೆಯುಂಟು. ಅವರು ಹಾಗೆಯೇ ನ
ಒಳ್ಳೇ ದೃಢಾಂಗರಾಗಿರುವುದುಂಟು. ಆದುದರಿಂದ ನಿ
ನಿಮ್ಮ ಮೈಗೆ ಅನುಕೂಲಿಸುವ ಆಹಾರವೆಂತಹದ
ದನ್ನು ನೀವೇ ನಿರ್ಧರಿಸಿಕೊಳ್ಳಬೇಕು (ಈ ಭಾಗ
ಹೋರೇಸ್ ಫೆಟ್ಚರ್ ಎಂಬವರ 'ಗ್ಲಟನ್' ಮುಂ
ಪುಸ್ತಕಗಳನ್ನೋದಿ ಅವರ ಸೂಚನೆಗಳನ್ನು ತ
ಕೊಂಡರೆ ಬಹಳ ಗುಣವುಂಟು) ಎಷ್ಟೇ ಪ್ರಿಯವ
ವಾಗಿದ್ದರೂ ಮಿತಿಮೀರಿ ಭುಂಜಿಸಬಾರದು ಅ
ಭೋಜನವೇ ಅಪಾಯಗಳಿಗೆಲ್ಲ ಮೂಲಕಾರಣವು

ಒಳ್ಳೇ ರುಚಿಕೊಡುವ ಆಹಾರವನ್ನು ಚೆನ್ನಾಗಿ
ದು ನುಂಗುವುದನ್ನು ಕಲಿತುಕೊಳ್ಳಬೇಕು. ಪ್ರತಿ
ಸ್ನಾನದಿಂದಲೂ, ವ್ಯಾಯಾಮದಿಂದಲೂ ಯಾವಾಗ
ಮೈಯನ್ನು ಶುದ್ಧವಾಗಿಡಬೇಕು ಎಂದಾದರೂ ನಿ
ಮನಸ್ಸಿಗೆ ಬೇಸರವೂ, ಮೈಗೆ ಶ್ರಮವೂ ಕಂಡುಬಂ

ಆಹಾರದೋಷವೇ ಕಾರಣವಾಗಿರಬೇಕು. ಆ ದಿನ ನೀವು ತಕ್ಕಷ್ಟು ನೀರನ್ನು ಕುಡಿಯದಿರ ಇವೆರಡರಲ್ಲಿ ಯಾವುದೋ ಒಂದು ಕಾರಣವಿರ ದು ತಿಳಿದು, ಒಂದು ದಿನದಮಟ್ಟಿಗೆ ಉಪವಾಸ ಅಧಿಕವಾಗಿ ನೀರನ್ನು ಕುಡಿದು, ಶುದ್ಧವಾದ ನ್ನು ಶ್ವಾಸಿಸಿರಿ! ನಾಲ್ಕೈದು ಸಲದ ಭೋಜನ ಬಿಟ್ಟುಬಿಟ್ಟರೂ ಅದರಿಂದ ಗುಣವೇ! ಆಗಲೂ ದೇಹಾಯಾಸವು ತೀರದಿದ್ದರೆ, ಒಳ್ಳೇ ರಕ್ತಸಂಚಾ ವ ಹಾಗೆ ಕೆಲಸಮಾಡಿರಿ. ಆರೋಗ್ಯವೆಂ ಸೋಂಕುರೋಗಗಳಂತೆ ಸಾಂಕ್ರಾಮಿಕವೇ! ಆದು ನಾವು ಆರೋಗ್ಯವನ್ನು ಸಂಪಾದಿಸಬೇಕಾದರೆ ಗ್ಯವಂತರೊಡನೆ ಕೂಡಾಡುತ್ತ ಆರೋಗ್ಯನಿಯ ನ್ನು ಗ್ರಹಿಸಬೇಕು.

ಗ್ರಾಮಪಂಚಾಯಿತಿಕೋರ್ಟುಗಳು

ನ್ನ ಶ್ರೀಮನ್ ಮಹಾರಾಜಾ ಸರಕಾರದವರು 191೩ ಸವಿಯಲ್ಲಿ ಗ್ರಾಮಕೋರ್ಟುಗಳ ಸ್ಥಾಪನೆಬಗ್ಗೆ ಮಾಡಿರುವುದು ಸರಿಯಷ್ಟೆ. ಆದರೆ ಸದರಿ ರ್ಟುಗಳ ಏಳಿಗೆಯಬಗ್ಗೆ ಈವರೆಗೆ ಸರಿಯಾದ ಣೆಗಳು ನಡೆದಿಲ್ಲ ಈ ಕೋರ್ಟುಗಳಿಂದ ದೂರದ ದವರಿಗೆ ದುಬಾರಿ ಖರ್ಚುಗಳಿಗೆ ಅವಕಾಶವಿಲ್ಲದೆ ತರಿಗೆ ತುಂಬಾ ಅನುಕೂಲತೆ ಉಂಟಾಗಿರುತ್ತದೆ ೋರ್ಟುಗಳನ್ನು ನಮ್ಮ ದೇಶದ ಪ್ರತಿಯೊಂದು ಳಿಯಲ್ಲಿಯೂ ಸ್ಥಾಪಿಸಿ ಅವುಗಳ ಏಳಿಗೆಬಗ್ಗೆಯೂ ಸದರಿ ಕೋರ್ಟಿನ ಖರ್ಚುವೆಚ್ಚದ ಬಗ್ಗೆಯೂ ರದವರ ಗಮನವನ್ನು ಎಳೆಯುವುದರಲ್ಲಿ ರೆಪ್ರೆಜೆಂ ಅಸೆಂಬ್ಲಿಯ ಮೆಂಬರುಗಳು ನಿಗಾಕೊಡುವ ನಿರೀಕ್ಷಿಸುತ್ತೇನೆ

ಒರ್ವ ಗ್ರಾಮಹಿತೈಷಿ

ಸ್ತ್ರೋಕ್ತ ದಿವ್ಯೌಷಧಗಳು.

ಜಗದ್ಗುರು ಕೇದಾರಸಂಸ್ಥಾನದ ರಸಾಯನ ಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಲಭಕ್ರಯದಲ್ಲಿ ದೊರೆಯುವವು

ಭಸ್ಮಗಳು

ರಿ ಹೆಸರು	ತೊಲಿ	ಮೂಲ್ಯ
ಭಸ್ಮ	೧	೪೦—೦—೦
ಭಸ್ಮ	೧	೪—೦—೦
ಭಸ್ಮ	೧	೦—೮—೦
ಕಭಸ್ಮ	೧	೦-೧೨—೦
ಸ್ಮ	೧	೦—೮—೦
ಸ್ಮ	೧	೦—೮—೦
ಭಸ್ಮ	೧	೪೦—೦—೦
ಕಭಸ್ಮ	೧	೩—೦—೦
ಕಭಸ್ಮ	೧	೦—೮—೦
ನಭಸ್ಮ	೧	೦—೮—೦
ಸ್ಮ	೧	೦—೮—೦
ೂರಭಸ್ಮ	೧	೦—೮—೦
ಮಕ್ಷಿಕಾಭಸ್ಮ	೧	೦-೧೨—೦
ಭಸ್ಮ	೧	೪೦—೦—೦
ಲಭಸ್ಮ	೧	೦—೮—೦
ಚಿಪ್ಪಿನ ಭಸ್ಮ	೧	೦—೮—೦
ಗದ ಕೋಡಿನ ಭಸ್ಮ	೧	೦—೮—೦
ಸಂತಿಹರಿತಾಲಭಸ್ಮ	೧	೦—೮—೦
ರ (೧ನೇ ನಂಬರ್)	೧	೫೦—೦—೦
ಜಿತ ಸೂರ್ಯಪುಟ	೧	೧—೦—೦
ಜಿತ ಅಗ್ನಿಪುಟ	೧	೦—೮—೦

ೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ , ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ೋಸ್ಟ್ ಓಖಿಮಠ, ಜಿಲ್ಲಾ, ಗಢವಾಲ್ ಯು.ಪಿ

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ! ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ** ವಿ ಪಿ ಚಾರ್ಜು ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇವರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆದಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳಿದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೮ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿಂಗಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಭತ್ತು ಅಪ್ಪುತಲೀಲೆಗಳಿಂದ ಕೂಡಿದ ಫೋಟೋ ಸೈಜು ೩೦ X ೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦ X ೧೪ ಬೆಲೆ	೦—೧—೬
ಸದ್ಯ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೭೪ X ೭೦ ಬೆಲೆ	೦—೭—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ X ೧೨ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೭೦ X ೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಬಹುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವದು

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ. ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಸರ್ವವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ. ನಾಮೆಲ್ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ೪ ಆಣೆ, ತರ್ಜೆ ಒಂದಕ್ಕೆ ಕ್ರಯ ರೂ ೨-೮-೦ ವಿ.ಪಿ. ೬ ಆಣೆ ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[14] ಪೋ ಬಾ ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಶಕ್ತ್ಯಾಸಾತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶಕ್ತ್ಯಾಸಾತ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು(ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ

ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ಪುಟಕ್ಕೂ ಹೆಚ್ಚು ಫೋಟೋಗಳಿರುವುದು)	೧| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಸಹಿತ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ
A brief life sketch of Pandit Sri Kashinatha Shastriji (*English*)	**4 As.**
The Philosophical Aspect of Virasaivism (*English*)	**8 As.**
Speeches by Pandit Shri Kashinatha Shastriji *English*)	**12 As**
लिंगधारणचंद्रिका (संस्कृत)	१ रु
वीरशैवरत्न (मराठी)	१ रु
महानारायणोपनिषत् (वीरशैवभाष्य–संस्कृत)	१ रु.
पुरुषसूक्तम् (वीरशैवप्राचीनभाष्योपेतम्)	४ आ
नंदिकेश्वरकारिका (संस्कृत)	२ आ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ. ಕಳುಹಿಸುವುದಿಲ್ಲ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾ.ಶಿ.ನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ. ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೫ನೇ ಆಗಸ್ಟ್ ೧೯೪೧ [ಸಂಚಿಕೆ ೧೭

ಶ್ರೀಮತಿ ಶಿವಗಂಗಮ್ಮನವರ ನಿಧನ, ಹೊಸಪೇಟೆ.

ಬಳ್ಳಾರಿ ಡಿ॥ ಹೊಸಪೇಟೆ ಗ್ರಾಮದಲ್ಲಿರುವ ವೇ॥ ಕಚಯ್ಯನವರು ಕನಕೇರಿಮಠ ಖುರ್ದ್ ವಸ್ತ್ರದ ಇವರ ಧರ್ಮಪತ್ನಿಯವರಾದ ಶಿವಗಂಗಮ್ಮನವರು ಇದೇ ಶ್ರಾವಣ ಬ॥ ೩ ಪ್ರಾತಃಕಾಲ ೬-೩೦ ಘಂಟೆಗೆ ಶಿವಸಾಯುಜ್ಯವನ್ನೈದಿದರೆಂಬ ವಿಷಯವನ್ನು ತಿಳಿಸಲು ಅತ್ಯಂತ ವ್ಯಸನವೆನಿಸುತ್ತದೆ ಇವರಿಗೆ ಅವಸಾನ ಕಾಲದಲ್ಲಿ ೬೦ ವರುಷಗಳಾಗಿದ್ದವು ಇವರು ಹೊಸಪೇಟೆಯ ಸ್ತ್ರೀ ಸಮಾಜಕ್ಕೆ ಆದರ್ಶಪ್ರಾಯರಾಗಿದ್ದರು ಇವರ ವಿಯೋಗದಿಂದ ಅಲ್ಲಿಯ ಸ್ತ್ರೀಸಮಾಜವು ಅಪಾರ ದುಃಖಾಕ್ರಾಂತವಾಗಿರುವುದು ಇವರ ಪರೋಪಕಾರ ಬುದ್ಧಿಯನ್ನು ವ್ಯಕ್ತಪಡಿಸುತ್ತದೆ. ಇವರ ವಿಯೋಗದಿಂದ ಇವರ ಅನುಬಂಧಿಗಳು ವಿಶೇಷವಾಗಿ ಪರಿತಪಿಸುತ್ತಿರುವರು. ಸದ್ಗುಣಶಾಲಿನಿಯರಾದ ಶ್ರೀಮತಿ ಶಿವಗಂಗಮ್ಮನವರು ಗದಗ ತಾ॥ ಬೆಟಗೇರಿಗ್ರಾಮದಲ್ಲಿರುವ ಕಲ್ಲುಮಠದ ಪತಿವ್ರತಾಶಿರೋಮಣಿ ರಾಚಮ್ಮನವರ ಉದರದಿಂದ ಜನಿಸಿದರು. ರಾಚಮ್ಮನವರು ಇವರನ್ನು ಹೊಸಪೇಟೆಗೆ ಕೊಟ್ಟು ಶರೀರಸಂಬಂಧವನ್ನು ಬೆಳೆಸಿದರು. ಪತಿವ್ರತಾಶಿರೋಮಣಿಯಾದ ಶಿವಗಂಗಮ್ಮನವರು ಆಚಾರ್ಯಕೃಪಾವಿಶೇಷದಿಂದ ಸಣ್ಣವೀರಯ್ಯ, ಜಂಬಯ್ಯ ಎಂಬ ಇಬ್ಬರು ಗಂಡುಮಕ್ಕಳನ್ನೂ ಜಂಬವ್ವ, ಶಾಂತವೀರಮ್ಮ, ಗಂಗಮ್ಮ, ಗೌರಮ್ಮ, ರಾಚಮ್ಮ ಎಂಬ ಐದುಜನ ಹೆಣ್ಣುಮಕ್ಕಳನ್ನೂ ಹೆತ್ತು ಕನ್ಯಾದಾನಮಾಡಿ ಕೀರ್ತಿಶಾಲಿಗಳಾದರು. ಶಿವಗಂಗಮ್ಮನವರು ಉದಾರ ಸ್ವಭಾವದವರೂ ಪರೋಪಕಾರ ಬುದ್ಧಿಯುಳ್ಳವರೂ ಆಚಾರನಿಷ್ಠರೂ ಆಗಿದ್ದು ತಮ್ಮ ಗ್ರಾಮದಲ್ಲಿರುವ ಸಮಸ್ತರ ಕಷ್ಟಸುಖಗಳಲ್ಲಿ ಭಾಗಿಗಳಾಗುತ್ತಿದ್ದರು ಇವರು ಈ ಮನೆತನಕ್ಕೆ ಬಂದಮೇಲೆ ಧನ, ಕನಕ, ವಸ್ತು, ವಾಹನ, ಭೂಮಿ ಮೊದಲಾದ ಐಶ್ವರ್ಯವೆಲ್ಲವೂ ಗುರುಕೃಪಾಕಟಾಕ್ಷದಿಂದ ವಿಶೇಷವಾಗಿ ಹೆಚ್ಚಿತೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಇಂತಹ ಸ್ತ್ರೀರತ್ನವು ನಮ್ಮೆಲ್ಲರನ್ನೂ ಬಿಟ್ಟು ಅಗಲಿ ಹೋದುದು ನಮ್ಮ ದೌರ್ಭಾಗ್ಯವೆಂದೇ ಭಾವಿಸಬೇಕಾಗುತ್ತದೆ ಶ್ರೀಮತಿ ಶಿವಗಂಗಮ್ಮನವರ ಅಂತ್ಯೇಷ್ಟಿಕ್ರಮವು ಶಾಸ್ತ್ರರೀತಿಯಾಗಿ ನೆರವೇರಿತು. ಆ ಕಾಲಕ್ಕೆ ಗೋದಾನ, ಹಿರಣ್ಯದಾನ, ವಸ್ತ್ರದಾನ ಮೊದಲಾದ ದಾನಗಳು ಅವರ ಪುತ್ರರಿಂದ ಮಾಡಲ್ಪಟ್ಟವು. ಶಿರಹಟ್ಟಿ ತಾಲ್ಲೂಕು ಬಟ್ಟೂರು ಗ್ರಾಮದ ಹಿರಿಯಮಠದ ಶ್ರೀ॥ ಷ॥ ಬ್ರ॥ ಪಟ್ಟದಸ್ವಾಮಿಗಳವರು ವೀರಶೈವಧರ್ಮೋದ್ಧಾರಕ್ಕಾಗಿ ಅವತರಿಸಿರುವ ಪಂಚಾಚಾರ್ಯಪ್ರಭಾಪೋಷಣಕ್ಕೋಸ್ಕರ ದ್ರವ್ಯವನ್ನು ಸಮರ್ಪಿಸಬೇಕೆಂದು ಆಜ್ಞಾಪಿಸಲು ಶ್ರೀ ಶಿವಗಂಗಮ್ಮನವರ ಪುತ್ರರಾದ ಸಣ್ಣವೀರಯ್ಯನವರು ವಸ್ತ್ರದ ಇವರು ೨ ರೂಪಾಯಿಗಳನ್ನೂ, ಶ್ರೀಮತಿ ಶಿವಗಂಗಮ್ಮನವರ ಪ್ರಥಮ ಸಹೋದರಿಯವರಾದ ಬೆಟಗೇರಿ ಕಲ್ಲುಮಠದ ಶಾಂತಮ್ಮನವರು ೨ ರೂಪಾಯಿಗಳನ್ನೂ, ದ್ವಿತೀಯ ಸಹೋದರಿಯರಾದ ಹುಬ್ಬಳ್ಳಿ ಕಲ್ಯಾಣಪುರದ ಗುರಮ್ಮನವರು ೧ ರೂಪಾಯಿಯನ್ನೂ, ಶಿವಗಂಗಮ್ಮನವರ ಜ್ಯೇಷ್ಠಪುತ್ರಿ ಜಂಬಮ್ಮನವರು ೧ ರೂಪಾಯಿಯನ್ನೂ, ದ್ವಿತೀಯಪುತ್ರಿ ಶಾಂತವೀರಮ್ಮನವರು ೧ ರೂಪಾಯಿಯನ್ನೂ ಅಳಿಯಂದಿರಾದ ಗುರುಶಾಂತಯ್ಯನವರು ಕಾತರಕಿಮಠ, ಮುದುಕಯ್ಯನವರು ಹಡಗಲಿಮಠ, ಫಕೀರಯ್ಯನವರು ಪಾಲಿಮಠ ಇವರು ಒಂದೊಂದು ರೂಪಾಯಿಯನ್ನೂ ಸಮರ್ಪಿಸಿದರು ಶ್ರೀಜಗದೀಶ್ವರನು ಶ್ರೀಶಿವಗಂಗಮ್ಮನವರ ಆತ್ಮಕ್ಕೆ ಶಾಂತಿಯನ್ನೂ ಅವರ ಬಂಧುಬಳಗದವರಿಗೆ ದುಃಖಶಮನವನ್ನೂ ಉಂಟುಮಾಡಲೆಂದು ಕೋರುವ,

ಓರ್ವ ದುಃಖಭಾಗಿ.

ವೈಸರಾಯರವರು ಏಪ್ರಿಲ್ ತಿಂಗಳಲ್ಲಿ ನಿವೃತ್ತರಾಗುವರಂತೆ!

ಭಾರತದ ವೈಸರಾಯರಾಗಿರುವ ಲಾರ್ಡ್ ಲಿನ್‌ಲಿತ್‌ಗೌರವರು ಮುಂದಿನ ವರುಷ ಏಪ್ರಿಲ್ ತಿಂಗಳಲ್ಲಿ ತಮ್ಮ ಕೆಲಸದಿಂದ ನಿವೃತ್ತರಾಗುವರೆಂದೂ, ಮುಂದಿನ ವೈಸರಾಯರ ಹೆಸರು ಬರುವ ತಿಂಗಳು ಪ್ರಕಟವಾಗಲಿದೆಯೆಂದೂ ಗೊತ್ತಾಗುತ್ತದೆ

ಭಾರತದಲ್ಲಿ ನರ್ಸ್‌ಗಳ ಸಿದ್ಧತೆ

ಅವಶ್ಯಬಿದ್ದಾಗ ವಿಮಾನ ದಾಳಿ ರಕ್ಷಣಕಾರ್ಯಕ್ಕೆ ನೆರವಾಗುವಂತೆಯೂ, ಸೈನಿಕರ ಸಹಾಯಕ್ಕೊದಗುವಂತೆಯೂ ಭರತಖಂಡದಲ್ಲಿ ಸ್ತ್ರೀಯರನ್ನು ಸ್ವಲ್ಪಮಟ್ಟಿಗಾದರೂ ತರಪೇತುಮಾಡಿ ಸಿದ್ಧವಾಗಿಟ್ಟಿರಬೇಕೆಂದು ವೈಸರಾಯರ ಪತ್ನಿಯವರ ಅಧ್ಯಕ್ಷತೆಯಲ್ಲಿ ನರ್ಸ್ ಶಿಕ್ಷಣದ ಏರ್ಪಾಡು ಮಾಡಲಾಗಿದೆ. ಇದರಲ್ಲಿ 18ರಿಂದ 45 ವರುಷ ವಯಸ್ಸಿನೊಳಗಿರುವವರು ಯಾರಾದರೂ ಸೇರಬಹುದು ಅವರುಗಳು ಇಂಡಿಯಾದೇಶದಲ್ಲಿ ಮಾತ್ರ ಸೇವಾಕಾರ್ಯ ಕೈಗೊಳ್ಳಬಹುದು ಅಥವಾ ತಾವಾಗಿ ಇಷ್ಟಪಟ್ಟರೆ ವಿದೇಶಗಳಿಗೆ ಹೋಗಿ ಸಹಾಯ ಮಾಡಬಹುದಾಗಿದೆ.

ಆಸ್ಟ್ರೇಲಿಯ ಮಹಾಪ್ರಧಾನರು ಲಂಡನ್ನಿಗೆ ಹೋಗಬಾರದು

ಆಸ್ಟ್ರೇಲಿಯದ ಮಹಾ ಪ್ರಧಾನರಾದ ಶ್ರೀ ಮೆನ್ಜಿಸ್‌ರವರು ಲಂಡನ್ನಿಗೆ ಹೋಗಲಾಗದೆಂದೂ, ಸಂಗ್ರಾಮ ಪರಿಸ್ಥಿತಿಯು ಬಹಳ ಕ್ರೂರವಾಗಿರುವುದರಿಂದ, ಸರ್ಕಾರಕ್ಕೆ ಸರಿಯಾದ ಸೂಚನೆ ಕೊಡಲು ಮಹಾ ಪ್ರಧಾನರು ಆಸ್ಟ್ರೇಲಿಯಾದಲ್ಲಿಯೇ ಇರಬೇಕಾದುದು ಅಗತ್ಯವೆಂದೂ, ಸಂಗ್ರಾಮ ನೀತಿ ಕುರಿತು ಆಸ್ಟ್ರೇಲಿಯಾದ ಅಭಿಪ್ರಾಯವು ಯಾವಾಗಲೂ ಬ್ರಿಟಿಷ್ ಸರ್ಕಾರದ ಮುಂದಿರುವಂತೆ ಮಾಡಲು ಅಲ್ಲಿ ಆಸ್ಟ್ರೇಲಿಯಾದ ಪ್ರಾತಿನಿಧ್ಯಕ್ಕೆ ತಕ್ಕ ಏರ್ಪಾಡು ಮಾಡಬೇಕೆಂದೂ ಕೂಲಿಕಾರ ಪಕ್ಷದವರು ನಿರ್ಧರಿಸಿದ್ದಾರೆ.

ಒಳದೇಶ ವೃತ್ತಾಂತಗಳು

ಕೋಲಾರ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟರಾದ ಶ್ರೀ ಎಂ. ವಿ. ವಿ. ನಾಯರ್‌ರವರಿಗೆ ೧೬-೮ ೪೧ ರಿಂದ ೩ ತಿಂಗಳು ರಜಕೊಡಲಾಗಿದೆ

ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿದ್ದು ಪೋಲೀಸ್ ಟ್ರೈನಿಂಗ್ ಶಾಲೆಯ ಸೂಪರಿಂಟೆಂಡೆಂಟರಾಗಿರುವ ಶ್ರೀ ಡಿ ವಿಶ್ವೇಶ್ವರಅಯ್ಯರವರನ್ನು ತಾತ್ಕಾಲಿಕವಾಗಿ ಕೋಲಾರ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟರಾಗಿ ನೇಮಿಸಲಾಗಿದೆ.

ಬೆಂಗಳೂರು ಮತ್ತು ಮೈಸೂರು ಸಿಟಿಗಳ ಇನ್‌ಕಂ ಟ್ಯಾಕ್ಸ್ ಅಸಿಸ್ಟೆಂಟ್ ಕಮಿಷನರ್ ಶ್ರೀ॥ ಜಿ. ಕೆ ರುದ್ರಾರಾಧ್ಯರವರು 1941 ನೇ ಸೆಪ್ಟೆಂಬರ್ ೫ ನೇ ತಾರೀಖಿನಿಂದ ಅಥವಾ ಉಪಯೋಗಿಸಿಕೊಳ್ಳುವ ತಾರೀಖಿನಿಂದ 10 ದಿನ ಪ್ರಿವಿಲೇಜ್ ರಜಾದಮೇಲೆ ಹೋಗುವದರಿಂದ ಸ್ಪೆಷಿಯಲ್ ಡೆಪ್ಯುಟಿಕಮಿಷನರು ತಮ್ಮ ಕೆಲಸದೊಂದಿಗೆ ಸದರಿ ಚಾರ್ಜಿನಲ್ಲಿರುವದಾಗಿ ಮಂಜೂರಾಗಿದೆ.

ಮೈಸೂರು ಗೌರ್ನಮೆಂಟು ಜೀವವಿಮಾ ಇಲಾಖೆಯ ಮಹಾಜನರ ಶಾಖೆಯಲ್ಲಿ ಸಾವಿರಾರು ರೂಪಾಯಿಗಳವರೆಗೆ ಮೋಸಮಾಡಿ ಹಣ ತೆಗೆದುಕೊಂಡರೆಂಬ ಆಪಾದನೆಯ ಮೇಲೆ ಎಲ್ ಸೂರ್ಯನಾರಾಯಣಶಾಸ್ತ್ರಿ ಎಂಬವರ ಮೇಲೆ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆಯು ದಾಖಲಾಗಿ ಆಪಾದಿತರು ಬಂಧಿಸಲ್ಪಟ್ಟಿದ್ದರು ಅವರು ಇದೇ ಮಾಹೆ 17 ನೆಯ ತಾರೀಖಿನ ಬೆಳಿಗ್ಗೆ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಆತ್ಮಹತ್ಯೆ ಮಾಡಿಕೊಂಡರೆಂದು ಪ್ರಕಟವಾಗಿದೆ.

ಸ್ವೀಕಾರ.

ಬಳ್ಳಾರಿ ಡಿ॥ ಹೊಸಪೇಟೆ ಟವನ್ನಿನಲ್ಲಿರುವ ಶ್ರೀಮತಿ ವಸ್ತ್ರದ ಶಿವಗಂಗಮ್ಮನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 10 ರೂಪಾಯಿಗಳು ಬಟ್ಟೂರು ಹಿರಿಯಮಠದ ಶ್ರೀ॥ ಷ॥ ಬ್ರ॥ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ॥ ಹರಲಾಪುರ ಗ್ರಾಮದಲ್ಲಿ ಸ್ಥಾಪಿತವಾಗಿರುವ ಶ್ರೀ ಮುಕ್ತಿಮಂದಿರ ಗುರುಕುಲದ ಪ್ರವೇಶೋತ್ಸವಸಮಯದಲ್ಲಿ ಮುಕ್ತಿಮಂದಿರ ಸೇವಾಮಂಡಲಿಯವರು ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ತೆಗೆಯಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶ್ರೀ।। ಷ।। ಬ್ರ।। ಗಂಗಾಧರಶಿವಾಚಾರ್ಯಸ್ವಾಮಿಗಳವರು

ಶ್ರೀ ಗಂಗಾಧರಶಿವಾಚಾರ್ಯರ ಸಂಚಾರ

ಶ್ರೀಗಳವರು ಹರಲಾಪುರದಲ್ಲಿಯ ಕಾರ್ಯವನ್ನು ಪೂರೈಸಿಕೊಂಡು, ಲಕ್ಷ್ಮೇಶ್ವರಕ್ಕೆ ದಯಮಾಡಿಸಿ ಕೆಲವು ದಿನಗಳವರೆಗೆ ಅಲ್ಲಿ ನಿತ್ಯಾನುಷ್ಠಾನ ಸದುಪದೇಶಗಳಿಂದ ಭಕ್ತರನ್ನುದ್ಧರಿಸಿ ಹುಬ್ಬಳ್ಳಿ ತಾಲೂಕು ನೂಲವಿಗ್ರಾಮದ ಸದ್ಭಕ್ತರ ಪ್ರಾರ್ಥನೆಯ ಮೇರೆಗೆ ತಾ।। ೩ ೬ ೧೯೪೧ ನೇ ಸೋಮವಾರ ಅಲ್ಲಿಗೆ ದಯಮಾಡಿಸಿದರು. ಸಕಲ ಮತೀಯರೂ ಗ್ರಾಮವನ್ನು ತೋರಣ ಪಲ್ಲವಗಳಿಂದಲಂಕರಿಸಿ ಫಲಪುಷ್ಪ ಪಾಣಿಗಳಾಗಿ ಸ್ವಾಗತಿಸಿ ಭಜನಾಸಂಘ, ಬ್ಯಾಂಡ, ಇತರ ದೇಶೀವಾದ್ಯಗಳೊಡನೆ ಉತ್ಸವಪೂರ್ವಕವಾಗಿ ಹಿರೇಮಠಕ್ಕೆ ಕರೆದೊಯ್ದರು. ಅಲ್ಲಿ ರಮ್ಯವಾಗಿ ರಚಿಸಿದ ಚಪ್ಪರದಲ್ಲಿ ನಿರ್ಮಿಸಿದ ಉಚ್ಚಾಸನವನ್ನು ಶ್ರೀಗಳು ಪ್ರಚಂಡ ಜಯಘೋಷದೊಡನೆ ಅಲಂಕರಿಸಿದರು. ನೂಲವಿ ನಿವಾಸಿಗಳಾದ ಹುಬ್ಬಳ್ಳಿ ಮುನಿಸಿಪಾಲಿಟಿ ಸ್ಕೂಲ್ ಮಾಸ್ತರರಾದ ಶ್ರೀ [illegible] ಮಹಾದೇವಪ್ಪನವರು ಶ್ರೀಗಳಿಂದಾದ ಧರ್ಮಜಾಗೃತಿ" ಯ ವಿಷಯವನ್ನು ವಿಶದವಾಗಿ ವಿವರಿಸಿದರು. ನೂಲವಿಸ್ಕೂಲ ಹೆಡ್‌ಮಾಸ್ತರರಾದ ಶ್ರೀಯುತ [illegible] ಇವರು ಮುಸಲ್ಮಾನರಾದರೂ ಶ್ರೀಗಳವರ ಶುಭಾಗಮನದ ಬಗ್ಗೆ ಆನಂದವನ್ನು ವ್ಯಕ್ತಗೊಳಿಸಿ ಧರ್ಮಜಾಗೃತಿಯ ದ್ವಾರಾ ಸರ್ವರೂ ಮುಂದುವರಿಯಬೇಕೆಂದು ಬೋಧಿಸಿದರು, ಆವೇಳೆ ಶ್ರೀಗಳು ಧರ್ಮವೇ ಸಕಲರ ಸದ್ಗತಿಯ ಸಾಧನವೆಂಬ ವಿಷಯದಲ್ಲಿ ಒಂದು ತಾಸಿನವರೆಗೆ ಬೋಧಿಸಿದರು. ಆಮೇಲೆ ಜಗದಾಚಾರ್ಯರ ಮಂಗಲ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಅಂದಿನ ಉತ್ಸವಕ್ಕೆ ಪರಸ್ಥಳದಿಂದ ಸಾವಿರಾರು ಜನರು ಆಗಮಿಸಿದ್ದರು. ಅನುಷ್ಠಾನ ಉಪನ್ಯಾಸಗಳು ನಡೆಯುತ್ತಿದ್ದವು. ಈ ಮಧ್ಯೆ ಪಾಲಿಕೊಪ್ಪದ ಸದ್ಭಕ್ತರ ಪ್ರಾರ್ಥನೆಯ ಮೇರೆಗೆ ತಾ।। ೧೧ ೭ ೧೯೪೧ ನೇ ಶುಕ್ರವಾರ ಸಾಯಂಕಾಲಕ್ಕೆ ಅಲ್ಲಿಗೆ ದಯಮಾಡಿಸಿದರು. ತಿರುಮಲಕೊಪ್ಪ, ನಾಗನೂರು, ಆಗಡಿ, ತಡಸ, ಅರಳೀಕಟ್ಟಿ, ಹೊಸಕಟ್ಟಿ, ಕೊಪ್ಪ, ವರೂರು, ಮೊದಲಾದ ಗ್ರಾಮನಿವಾಸಿಗಳು, ಸಿಕ್ಕವಲ್ಲಿಯೂ, [illegible] ವನ್ನು ಕೇಳುವುದಕ್ಕಾಗಿ ಬಂದು ಸೇರಿದ್ದರು. ತಾ।। ೧೪ ೭ ೧೯೪೧ ನೇ ಸೋಮವಾರ ದಿವಸ, ಸಕಲ ಗ್ರಾಮಸ್ಥರು ಸದ್ಭಕ್ತರು ಸಮ್ಮಿಲಿತರಾಗಿ ವಿಶೇಷ ಕಾರ್ಯಕ್ರಮವನ್ನು ನೆರವೇರಿಸಿದರು. ಅಂದು ಪ್ರಾತಃಕಾಲ ಶ್ರೀ [illegible] ಗದ್ದಿಗೆ ಶ್ರೀ ರುದ್ರಾಭಿಷೇಕ ಪಂಚಾಮೃತ [illegible] ಸಲ್ಪಟ್ಟವು. ೧೦ ಘಂಟೆಗೆ ಶ್ರೀಗಳವರ ಪಾದಪೂಜೆಯಾಯಿತು. ರಾತ್ರಿ ಹನ್ನೆರಡು ಘಂಟೆಯವರೆಗೂ [illegible] ಭೋಜನವು ಎಡೆಬಿಡದೆ ನಡೆದಿತ್ತು. ಮಧ್ಯಾಹ್ನ ಮೂರು ಘಂಟೆಗೆ ಸಕಲ ಭಕ್ತರ ಆಗ್ರಹದ ಮೇರೆಗೆ ಶ್ರೀಗಳವರ ಪಲ್ಲಕ್ಕಿ ಮಹೋತ್ಸವವು [illegible] ವೈಭವದಿಂದ ನೆರವೇರಿತು. ನೂಲವಿ ಹೊಸಕಟ್ಟಿ ತಿರುಮಲಕೊಪ್ಪ ಗಂಜೀಗಟ್ಟಿ [illegible] ಭಜನಾಸಂಘದವರು ಬಂದಿದ್ದರು. [illegible] ಗಳು ಮೊಳಗುತ್ತಿದ್ದವು. [illegible] ಘೋಷಗಳಿಗೆ ಎಣೆಯೇ ಇರಲಿಲ್ಲ. ಉತ್ಸವವು [illegible] ಗೆ ಬೃಹನ್ಮಠಕ್ಕೆ ಬಂದು ತಲುಪಿತು. ಶ್ರೀಗಳು [illegible] ವರೆಗೆ "ಗುರು ಮತ್ತು ಶಿಷ್ಯರ ಪರಸ್ಪರ ಸಂಬಂಧ" ಎಂಬ ವಿಷಯದಲ್ಲಿ ಉಪದೇಶಿಸುತ್ತಿದ್ದರು. ಆಮೇಲೆ ಸರ್ವರೂ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷಗಳನ್ನು ಮಾಡುತ್ತಾ ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು. ಶಿಗ್ಗಾವಿತಾಲೂಕು ಹೊಸಕಟ್ಟಿ [illegible] ಭಕ್ತರ ಬಿನ್ನಹವನ್ನು ಕೈಗೊಂಡು, ೧೬ ೭ ೧೯೪೧ ನೇ ಬುಧವಾರ ಅಲ್ಲಿಗೆ ದಯಮಾಡಿಸಿದರು. ಸಕಲರೂ ಶ್ರೀಗಳವರನ್ನು ಸ್ವಾಗತಿಸಿ ಉತ್ಸವದೊಡನೆ ಶ್ರೀ [illegible] ಸಾಹುಕಾರರ ಮನೆಗೆ ಕರೆದೊಯ್ದರು. ಶ್ರೀಗಳು ತಮ್ಮ ಬಂಧುಮಿತ್ರರೊಡನೆ ಸಂಕ್ಷಿಪ್ತವಾಗಿ ಪಾದಪೂಜೆಯನ್ನು ಮಾಡಿ ಫಲಪುಷ್ಪಮಾಲಿಕೆಗಳನ್ನರ್ಪಿಸಿದರು. ಮಹಾಮಂಗಳಾರತಿಯಾದಮೇಲೆ ಶ್ರೀಗಳು "[illegible] ಕರ್ತವ್ಯ" ವೆಂಬ ವಿಷಯದಲ್ಲಿ ಉಪದೇಶವನ್ನಿತ್ತರು. ಆಗ್ಗೆ ಮುಳಲಿ, ಜಿಗಳೂರು, ರಾಮನಕೊಪ್ಪ, ಮೊದಲಾದ ಗ್ರಾಮದ ಅನೇಕ ಸದ್ಭಕ್ತ ಮಹಾಶಯರು ಆಗಮಿಸಿದ್ದರು. ಬಂದ ಎಲ್ಲ ಅತಿಥಿಗಳನ್ನು ಶ್ರೀಮಂತರು ಮಿಷ್ಟಾನ್ನಾದಿಗಳಿಂದ ಉಪಚರಿಸಿದರು. ಅಲ್ಲಿಂದ ೧೧ ಘಂಟೆಗೆ ನೂಲವಿಗೆ ತಲಪಿದರು. ಈ ಗ್ರಾಮಸ್ಥರ ಭಕ್ತಿಯು ಅಗಾಧವಾದುದು. ಹಿರೇಮಠದ ವೇ।। ಚನ್ನವೀರಯ್ಯನವರ ಗುರುಭಕ್ತಿ ಸೇವೆಗಳು [illegible] ತಾ।। ೧೮ ೭ ೧೯೪೧ ನೇ ಶುಕ್ರವಾರ ದಿವಸ ನೂಲವಿ ಸ್ತ್ರೀ ಸಮಾಜದವರು ವಿಶೇಷವಾಗಿ ಅನ್ನದಾನವನ್ನು ಮಾಡಿದರು. ಅಂದು ಪಾದಪೂಜಾದಿ ವಿಶೇಷ ಕಾರ್ಯಗಳು ಜರುಗಿದವು. ಸಕಲ ಸ್ತ್ರೀಯರಿಗಾಗಿಯೇ ಉಪದೇಶವು ನಡೆಯಿತು. ಇಲ್ಲಿಯ ಸ್ತ್ರೀವರ್ಗವು ಧಾರ್ಮಿಕವಿಷಯದಲ್ಲಿ ಮುಂದುವರಿಯುತ್ತಿರುವದು ಸಂತೋಷದ ಸಂಗತಿಯಾಗಿದೆ. ತಾ।। ೧೯ ನೇ ಶನಿವಾರ ಸಾಯಂಕಾಲ ೮ ಘಂಟೆಯಿಂದ [illegible] ಸಮ್ಮುಖದಲ್ಲಿಯೇ ನೂಲವಿ ಸ್ಕೂಲ್ ಮಾಸ್ತರ ವೇ।। [illegible] ರಚಿಸಿದ "[illegible]" ಎಂಬ ನಾಟಕವು ಶ್ರೀಗಳವರ [illegible] ಅಭಿನಯಿಸಲ್ಪಟ್ಟಿತು. ನಾಟಕದಲ್ಲಿ [illegible] ಓತಪ್ರೋತವಾಗಿವೆ. ಈ ನಾಟಕದಲ್ಲಿ [illegible] ದೇವಿ ಮಹಾರಾಣಿ [illegible] ನಾಯಕರಾಗಿದ್ದ ರಾಚಯ್ಯನವರ [illegible] ಜನಮನೋರಂಜಕವಾಗಿರುವದು. [illegible] ಪಾತ್ರಗಳನ್ನು ವಹಿಸಿದ್ದ [illegible] ಕಲಿಸಿದ ಶ್ರೀ ಮಾಸ್ತರರಿಗೂ, ನಟ [illegible] ಆಶೀರ್ವಾದಗಳನ್ನಿತ್ತು " [illegible] ಈ ವಿಷಯಗಳ ಮೇಲೆ ಭಾಷಣಮಾಡಿ [illegible] ಮುಕ್ತಾಯಗೊಳಿಸಿದರು. ಸಕಲ [illegible] ಶಿವಪೂಜಾ ಕಾಲದಲ್ಲಿ ಜರಗುವ ಪಾದಪೂಜೆ [illegible] ಅವಕಾಶವಿಲ್ಲದುದರಿಂದ ಬಹಿರಂಗವಾಗಿ ಅಲಂಕಾರ ಪಾದಪೂಜೆಯು ನಡೆಯಬೇಕೆಂದು ಅನೇಕರು ಬೇಡಿಕೊಂಡುದರಿಂದ ತಾ।। ೨೦ [illegible] ಸಾಯಂಕಾಲ ಅಲಂಕಾರ ಪಾದಪೂಜೆಯು ಬಹಳ ವೈಭವದೊಡನೆ ನೆರವೇರಿತು. ಇದಕ್ಕಾಗಿ ಸುಂದರವಾದ ಮಂಟಪವು ರಚಿಸಲ್ಪಟ್ಟಿದ್ದಿತು. ಸುತ್ತಲು [illegible] ರ ಚಿತ್ರಗಳೂ, ಶಿವಲೀಲಾಪಟಗಳೂ ರಾರಾಜಿಸುತ್ತಿದ್ದವು. ಬೃಹನ್ಮಠವೆಲ್ಲವೂ, ದಶಾಂಗ ಧೂಪದಿಗಳಿಂದ ಸುಗಂಧಿತವಾಗಿತ್ತು. ಭಕ್ತಿವಿನೀತವಾದ ಜನಸಮುದಾಯವು ಅಪಾರವಾಗಿದ್ದಿತು. ಜಯಘಂಟೆ ಮಂಗಲಧ್ವನಿಯಾಗುತ್ತಿರಲು, ಪಾದಪೂಜೆಯು ಪ್ರಾರಂಭವಾಯಿತು. ವೇ।। ಗುರುಪಾದಯ್ಯ ಮಾಸ್ತರರು ಪಾದಪೂಜೆಗೆ ಕೂತರು. ಬೃಹನ್ಮಠದ ವೇ।। ಚನ್ನವೀರಯ್ಯನವರೂ ಪಾಲೀಕೊಪ್ಪದ [illegible] ಸಿದ್ಧಯ್ಯನವರ ಅವಳಿ ಜವಳಿ [illegible] ಶೇಖರ ಚಂದ್ರಶೇಖರ ಎಂಬ ಬಾಲಕರು [illegible] ವಹಿಸಿದ್ದರು. ವೇ।। ಚನ್ನವೀರಯ್ಯ [illegible] ತಮ್ಮ [illegible] ಗಳಾದ ಶ್ರೀಜಗದ್ಗುರುದ [illegible] ಅಷ್ಟೋತ್ತರ ಶತನಾಮಗಳನ್ನು [illegible] ಒಂದೊಂದಾಗಿ ನುಡಿಯುತ್ತಿರಲು ಹಿಂದಿನಿಂದ [illegible] 'ಶ್ರೀ ಗುರವೇನಮಃ" ಎಂದು [illegible] ಉಚ್ಚರಿಸುತ್ತಿದ್ದರು. ಆಗಿನ ಜನಮನೋ [illegible] ಅಂತರಂಗವನ್ನು ಅನುಭವಿಗಳಲ್ಲದೆ ಅನ್ಯರು [illegible] ಪಂಚಾಚಾರ್ಯರ ಜಯಘೋಷಗಳಿಗೆ [illegible] ಇರಲಿಲ್ಲ. ಭಜನ ಮಂಡಳಿಯವರು ಜಗದ್ಗುರು [illegible] ಸ್ತೋತ್ರಗಳನ್ನು ಹಾರ್ಮೋನಿಯಂ [illegible] ವಾದ್ಯಗಳೊಡನೆ ಇಂಪಾಗಿ ಹಾಡಿದರು. [illegible] ಪುಷ್ಪಾಂಜಲಿಯಾದೊಡನೆ ಸಕಲರೂ ಶ್ರೀಗಳವರ [illegible] ಪುಷ್ಪವೃಷ್ಟಿಗರೆದರು. ಇಷ್ಟಕ್ಕೆ [illegible] ಪೂರ್ತಿಯಾಯಿತು. ಜನರಲ್ಲಿ ನಿದ್ರಾಲಸ್ಯ [illegible] ಇರಲಿಲ್ಲ. ಇದಲ್ಲವೇ-ನಿಜವಾದ ಗುರು [illegible] ತರುವಾಯ ಶ್ರೀ ನಾರಾಯಣಭಟ್ಟರು ತಮ್ಮ [illegible] ವ್ಯಕ್ತಗೊಳಿಸಿದರು. ಶ್ರೀಮಾನ್ ಕಂಬ [illegible] ಶಾಸ್ತ್ರಿಗಳೂ ಗುರುಪೂಜೆ ಗುರುಸ [illegible] ಉತ್ತಮವಾದ ಭಾಷಣ [illegible] ತರುವಾಯ ಶ್ರೀಗಳು "ಆಸ್ತಿಕ್ಯ [illegible] ದಲ್ಲಿ ಉಪದೇಶವನ್ನಿತ್ತರು. ತಾ।। ೨೨ ೭ ೧೯೪೧ ನೇ ದಿವಸ ಶ್ರೀಗಳು ಹರಲಾಪುರ [illegible] ದಯಮಾಡಿಸಿದರು.

ಓರ್ವ ಗುರುಭ

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

"ಶ್ರೀ ಮುಕ್ತಿಮಂದಿರ" ಗುರುಕುಲದಲ್ಲಿ ಶ್ರೀ ಗಂಗಾಧರ ಶಿವಾಚಾರ್ಯರ ತಪೋನುಷ್ಠಾನ

ಶ್ರೀಗಳವರು ತಾ|| ೨೧ ೭ ೧೯೪೧ ನೇ ಸೋಮ ಸಾಯಂಕಾಲ ೬ ಘಂಟೆಗೆ ಹರಲಾಪುರಕ್ಕೆ ದಯ ಮಾಡಿಸಿದರು ಎಂದಿನಂತೆ ಶ್ರೀಮಾನ್ ಸಾಹುಕಾರ ಪ್ಪನವರ ಮನೆಯಲ್ಲಿಯೇ ವಾಸಮಾಡಿದರು ಶ್ರಾವ ಮಾಸವ್ರತಕ್ಕಾಗಿ ಶ್ರೀಗಳವರು ತಮ್ಮ "ಶ್ರೀ ಮುಕ್ತಿ ದಿರಕ್ಕೆ" ದಯಮಾಡಿಸಬೇಕಾಗಿದ್ದಿತು ಮಳೆಯ ಗದಿಂದ ಅಲ್ಲಿಯ ಗೃಹರಚನೆಕಾರ್ಯಕ್ಕೆ ಸ್ವಲ್ಪ ವಾದುದರಿಂದ ಶ್ರೀಮಾನ್ ಕಲ್ಲಪ್ಪನವರ ಮನೆ ಯೇ ತಾ|| ೨೪ ೭ ೧೯೪೧ ನೇ ಗುರುವಾರ ಕ್ಷಮುಹೂರ್ತದಲ್ಲಿ ತಮ್ಮ ತಪೋನುಷ್ಠಾನ ವ್ರತ ಶ್ರೀಜಗದಾಚಾರ್ಯರ ಸಾಮಸ್ಮರಣಪೂರ್ವಕವಾಗಿ ಭಿಸಿದರು ಇದರಿಂದ ಗ್ರಾಮನಿವಾಸಿಗಳಿಗೆ ಅಪಾರ ದವಾಯಿತು ಸೋಮವಾರ ಮಧ್ಯಾಹ್ನದವರೆಗೂ ವು ಇಲ್ಲಿಯೇ ನೆರವೇರಿತು ಈ ಸುಯೋಗವು ಶ್ರೀಮದ್ಧ ಕಲ್ಲಪ್ಪನವರ ವಂಶದ ಭಾಗ್ಯವಿಶೇಷವೆಂದೇ ಬೇಕಾಗುತ್ತದೆ ಇತ್ತರಲ್ಲಿ "ಮುಕ್ತಿಮಂದಿರ" ಯಲ್ಲಿ ಗೃಹನಿರ್ಮಾಣಕಾರ್ಯವು ಮುಗಿದು ಹ, ಗೋಪ್ರವೇಶ, ಅನ್ನಸಂತರ್ಪಣಾದಿಕಾರ್ಯ ಸಾಂಗವಾಗಿ ಸಾಗಿದ್ದವು ಮಧ್ಯಾಹ್ನ ೧ ಘಂಟೆ ದ ಪಲ್ಲಕ್ಕಿಮಹೋತ್ಸವದೊಡನೆ ಶ್ರೀಗಳು ಮುಕ್ತಿ ದಿರವನ್ನು ಪ್ರವೇಶಿಸಿದರು ಜನರು ಹೆಚ್ಚಾಗಿ ಸೇರಿ ತಳಿರು ಮೊದಲಾದುವುಗಳಿಂದ ಗ್ರಾಮವು ಶೃಂಗ ಪ್ಪಟ್ಟಿತ್ತು ಸ್ಥಳೀಯ, ಮತ್ತು ಸುಲ್ತಾನಪುರ ಗದ ಹಿರೇಗುಂಜಳ ಮೊದಲಾದ ಗ್ರಾಮಗಳ ಜನಾ ಡೊಳ್ಳು ಬ್ಯಾಂಡು, ದೇಶೀವಾದ್ಯಗಳು ವೊಳಗು ವು ಪಚವರ್ಣದ ಪತಾಕೆಗಳು ಹಾರಾಡುತ್ತಿ ಫಲಪುಷ್ಪಗಳನ್ನರ್ಪಿಸಿ ಜನರು ಆಶೀರ್ವಾದ ಪಡೆಯುತ್ತಿದ್ದರು ಸುವಾಸಿನಿಯರ ತಂಡವು ಆರ ನ್ನು ಹಿಡಿದು ಪಲ್ಲಕ್ಕಿಯ ಹಿಂದೆ ಮಂಜುಳಕಂಠ ಮಂಗಳಪದ್ಯಗಳನ್ನು ಹಾಡುತ್ತ ಮಂದವಾಗಿ ತ್ತು ಉತ್ಸವವು ಎರಡು ಮೈಲು ದೂರದಲ್ಲಿರುವ ಮುಕ್ತಿಮಂದಿರ"ಕ್ಕೆ ಮೂರು ಘಂಟೆಗೆ ತಲು ಆಶ್ರಮವು ಲತಾಪಲ್ಲವಪತಾಕೆಗಳಿಂದ ಅಲಂಕೃ ತು ಪ್ರಚಂಡ ಕರತಾಡನ ಜಯಘೋಷದೊ ಶ್ರೀಗಳು ಪಲ್ಲಕ್ಕಿಯ ಇಳಿದು ಪೀಠವನ್ನಲಂಕರಿಸಿ ಹರಲಾಪುರದ ಶ್ರೀಮಾನ್ ಕೊರಡೂರು ಕಲ್ಲಪ್ಪ "ಶ್ರೀ ಮುಕ್ತಿಮಂದಿರ" ಗುರುಕುಲ ಅವಶ್ಯಕತೆಯ ವನ್ನು ಹೃದಯಂಗಮವಾಗಿ ಹೇಳಿ ಲೋಕೋದ್ಧಾ ವಾದ ಶ್ರೀಗಳ ತಪೋನುಷ್ಠಾನವು ನಿರ್ವಿಘ್ನವಾಗಿ ನೇರಲೆಂದು ಹಿರಿಗುರುಗಳನ್ನು ಪ್ರಾರ್ಥಿಸಿ ಉತ್ಸವಕ್ಕೆ ಸಕಲರಿಗೂ ಸ್ವಾಗತವನ್ನು ಬಯಸಿದರು ತರುವಾ ಕ್ಷೇತ್ರದ ಹಾಲೇವಾಡಿಮಠದ ವೇ|| ಗದಿಗಯ್ಯ (ಮುನಿಸಿಪಲ್ ಚೇರಮನ್) "ಗುರುಕುಲ ಧರ್ಮೋದ್ಧಾರ" ದ ಬಗ್ಗೆ ಸಂಭಾಷಿಸಿದರು ತರ ಶ್ರೀಗಳು "ಗುರುವೊಂದು ದಾರಿಯು ಒಂದು" ಎಂದು ಆರಂಭಿಸಿ ಕೋಳಟೆ ನೀರಿನಲ್ಲಿ ಕು ದೊರೆಯದೆ ಸಮುದ್ರದಲ್ಲಿ ದೊರೆಯುವಂತೆ ಸುಖವು ಸನಾತನವಾದ ಸದ್ಧರ್ಮದಲ್ಲಿಯೇ ದೊರೆ ವದೆಂದು ಹೇಳಿ ಸರ್ವರೂ ನೀತಿಮಯವಾದ ಮೋಕ್ಷ ಧರ್ಮಮೋಕ್ಷಹೇತುವಾದ ಸ್ವಧರ್ಮ ರಕ್ಷಣೆ ಸರ್ವಸ್ವವನ್ನು ಸೂರೆಮಾಡಲು ಸಿದ್ಧರಾಗಬೇ ಬೋಧಿಸಿದರು ಮಂಗಳಾರತಿಯಾಗಿ ಸಕ ಶುಭಾಶೀರ್ವಾದವನ್ನು ಪಡೆದು ತೆರಳಿದರು ಕ್ಷೇತ್ರ, ಹರಲಾಪೂರ, ಸುಲ್ತಾನಪೂರ, ಕೊಸ ವಲಾದ ಗ್ರಾಮನಿವಾಸಿಗಳು ಶ್ರೀಗಳನ್ನು ಭಕ್ತಿಪೂ ವಾಗಿ ಸೇವಿಸುತ್ತಿರುವರು ತಾ|| ೧೫ ೮ ೪೧ ನೇ ವಾರ ಶ್ರೀ ಮುಕ್ತಿಮಂದಿರದಲ್ಲಿ ಶ್ರೀ ಸಿದ್ಧ ಯ್ಯನವರು ಕೆಂ ಇವರು ವಿಶೇಷ ಅನ್ನದಾನಮಾಡಿ ಇವರು ಬಹಳ ಶಾಂತಸ್ವಭಾವದವರೂ ಸದಾಚಾರಿ ನಿಧ ಶರೂ ಆಗಿರುವರು ಇವರು ಹರಲಾಪುರದಿಂದ ಒಂದುವರೆ ಮೈಲು ದೂರದಲ್ಲಿರುವ ತಮ್ಮ ಹೊಲದಲ್ಲಿ ಒಂದು ಕೆರೆಯನ್ನು ತೋಡಿಸಿ ವಸತಿಗೆ ಅನುಕೂಲವನ್ನು ಕಲ್ಪಿಸಿಕೊಂಡು ಶಿವಪೂಜೆಗೆ ಬೇಕಾದ ಪುಷ್ಪವೃಕ್ಷಲತಾದಿಗಳನ್ನು ಸ್ವಹಸ್ತದಿಂದ ಪೋಷಿಸುತ್ತ ಶಿವಪೂಜಾಲೋಲರಾಗಿ ಅತಿಥಿಗಳಿಗೆ ಅನ್ನೋದಕಗಳನ್ನೀಯುತ್ತ ಆನಂದಮಯ ಜೀವನವನ್ನು ಸಾಗಿಸುತ್ತಿರುವರು ಇವರಲ್ಲಿ ಗುರುಭಕ್ತಿಯು ಅಚಲವಾಗಿರುವದು ತಾ|| ೧೧ ೮ ೪೧ ನೇ ಸೋಮವಾರ ದಿವಸ ಪಶುಪತಿಹಾಳ ನಿವಾಸಿಗಳಾದ ಶ್ರೀಮಾನ್ ಬಸಪ್ಪ ಎಂಬ ಸದ್ಭಕ್ತರು ಅನ್ನಸಂತರ್ಪಣೆಯನ್ನು ನಡೆಯಿಸಿದರು ಇವರು ಮುಗ್ಧಭಕ್ತರು ತಮ್ಮ ವ್ಯವಸಾಯವನ್ನು ಸಾಗಿಸುತ್ತಿದ್ದರೂ ಜನ್ಮಸಾಫಲ್ಯಸಾಧನೆಗಳಾದ ಗುರು, ಲಿಂಗ, ಜಂಗಮಸೇವಾ ಪರೋಪಕಾರಾದಿ ಸತ್ಕರ್ಮಗಳಲ್ಲಿ ಕಾಲವನ್ನು ಕಳೆಯುತ್ತಿರುವರು ಜನರ ಆಗ್ರಹದ ಮೇರೆಗೆ ಶ್ರೀಗಳ ಸೋಮವಾರ ಕೊನ್ನಮ್ಮ ಮಾತ್ರ ಪೂಜಾದಿಗಳಿಗೆ ಬರಲು ಅವಕಾಶವಿತ್ತಿರುವದರಿಂದ ಜನರು ತಂಡೋಪತಂಡವಾಗಿ ಬರುತ್ತಿರುವರು ಹರ, ಗುರುಭಜನ ಉಪದೇಶಾದಿಗಳಿಂದ ಜನರು ತಣಿಯುತ್ತಿರುವರು ನಿರ್ಜನ ಪ್ರದೇಶದಲ್ಲಿ ವಿರಾಜಿಸುತ್ತಿದ್ದು ಶುದ್ಧ ಸಾತ್ವಿಕವಾತಾವರಣಯುಕ್ತವಾಗಿರುವ ಪವಿತ್ರಾಶ್ರಮದಲ್ಲಿ ಸತ್ಕಾರ್ಯಗಳು ನಡೆಯುತ್ತಿರುವದು ಗೋಕ್ಷೀರದಲ್ಲಿ ಶುದ್ಧ ಸಕ್ಕರೆಯು ಬೆರೆತಂತಾಗಿ ಜನರ ಆನಂದಕ್ಕೆ ಪಾರವಿಲ್ಲವಾಗಿದೆ ಸೇವೆಯನ್ನು ಸಲ್ಲಿಸುವ ಜನರ ಕುತೂಹಲವು ಮುಂದುವರೆಯುತ್ತಲಿದೆ "ಶ್ರೀಮುಕ್ತಿಮಂದಿರ" ಗುರುಕುಲವು ಮುಂದುವರಿದು ಸಮಾಜಹಿತಕಾರಿಯಾಗಲೆಂದು ಶ್ರೀ ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ

ಒಬ್ಬ ಗುರುಭಕ್ತ

ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯಾಯ ನಮಃ

ಗುರುಭಕ್ತಿಯೇ ಸಾರಭೂತವಾದುದು

ನಮ್ಮೀ ಭರತಭೂಮಿಯಲ್ಲಿ ಅನೇಕ ಮತಗಳಿದ್ದರೂ ಪ್ರತಿಯೊಂದು ಮತದಲ್ಲಿಯೂ ಧರ್ಮಗುರುಗಳು ಇದ್ದೇ ಇರುವರು ಆದರೆ ನಾವು ಯಾವಧರ್ಮದಲ್ಲಿ ಜನನವಾಗಿರುತ್ತೇವೆಯೋ ಯಾವ ಗುರುವಿನ ಅಮೃತಹಸ್ತದಿಂದ ಮೋಕ್ಷದಾಯಕವಾದ ಶಿವಲಿಂಗವನ್ನು ಪಡೆದಿರುತ್ತೇವೆಯೋ, ಅಂಥ ಪರಮಗುರುವಿನಲ್ಲಿ ಭಕ್ತಿಯನ್ನಿಡದೆ ಸ್ವೇಚ್ಛೆಯಿಂದ ನಡೆದರೆ ನಮಗೆ ಮೋಕ್ಷವು ದೊರೆಯದೆ ಯಮಲೋಕದ ಯಾತನೆಯನ್ನನುಭವಿಸಬೇಕಾಗುವುದು ಆದಕ್ಕಾಗಿಯೇ ಭಕ್ತಿಯುತರಾಗಿ ನಡೆಯುವದು ಮೇಲು ಮಾತೃಭಕ್ತಿ, ಪಿತೃಭಕ್ತಿ, ಪತಿಭಕ್ತಿ ಮೊದಲದವುಗಳಿಗಿಂತ ಗುರುಭಕ್ತಿಯು ಹೆಚ್ಚಿನದು ಗುರುಭಕ್ತಿಯು ಇಹಲೋಕಸೌಖ್ಯಕ್ಕೂ ಪರಲೋಕಸೌಖ್ಯಕ್ಕೂ ಕಾರಣೀಭೂತವಾಗಿರುವುದು ಈ ವಿಷಯವನ್ನು ಸರ್ವಜ್ಞಮೂರ್ತಿಗಳು ಹೀಗೆ ವರ್ಣಿಸಿದ್ದಾರೆ

> ಗುರುಪಾದಕೆರಗಿದರೆ ಶಿರವು ತಾ ಮಣಿಯಕ್ಕು |
> ಪರಿಣಾಮವಕ್ಕು ಪದವಕ್ಕು ಕೈಲಾಸ
> ನೆರೆಮನೆಯಕ್ಕು ಸರ್ವಜ್ಞ |
>
> ಗುರುವಿಂದ ಬಂಧುಗಳು | ಗುರುವಿಂದ ದೈವಗಳ |
> ಗುರುವಿಂದಲಿಹುದು ಪುಣ್ಯ ಜಗಕೆಲ್ಲ ಗುರುವಿಂದ
> ಮುಕ್ತಿ ಸರ್ವಜ್ಞ ||

ಗುರುವೇ ಬಂಧು, ಗುರುವೇ ದೇವರು ಗುರುವನು ಬಿಟ್ಟು ಮತ್ತೊಂದಿಲ್ಲವು ಆದಕಾರಣ ಗುರು ಪೂಜಾದಿಗಳನ್ನು ಸ್ವಲ್ಪಸ್ವಲ್ಪವಾಗಿ ಮಾಡಿದರೂ ಶಿವನು ಅನಂತ ಫಲವನ್ನು ಕೊಡುವನು ಪತ್ರ ಪುಷ್ಪ ಫಲೋದಕಗಳನ್ನು ನಿರ್ಮಲಮನಸ್ಸಿನಿಂದ ಗುರುವಿಗೆ ಅರ್ಪಿಸಿದ್ದಾದರೆ ಒಂದಕ್ಕೆ ಕೋಟಿ ಗುಣಿತವಾಗುವುದು ಪುತ್ರ ಮಿತ್ರ ಕಳತ್ರಾದಿಗಳಲ್ಲಿರುವ ಪ್ರೀತಿಯನ್ನು ಗುರುವಿನ ಪಾದಕಮಲಗಳಲ್ಲಿಟ್ಟಿದ್ದಾದರೆ ಪರಮೇಶ್ವರನು ಪ್ರಸನ್ನನಾಗುವದೇನಾಶ್ಚರ್ಯ? ಯಾವನು ಸಂಸಾರದ ಸುಖದುಃಖಗಳನ್ನು ಶ್ರೀಗುರುವಿನ ಪಾದಾರವಿಂದದಲ್ಲಿ ಸಮರ್ಪಿಸುತ್ತಾನೆಯೋ ಅವನು ಸದ್ಗತಿಯನ್ನು ಹೊಂದುವನು ಸ್ತ್ರೀಯರಾದರೂ ಪುರುಷರಾದರೂ ಗುರುಭಕ್ತಿಯುಳ್ಳವರಾದರೆ ಅವರು ಶಿವಲೋಕವನ್ನು ಹೊಂದುವರು ಆದರೆ ಈಗೀಗ ತಾನ್ನೊಂದು ನೂತನವಾದ ಭಕ್ತಿಯು ತಲೆದೋರುತ್ತಿರುವುದು ಪ್ರಥಮದಲ್ಲಿ ಗುರುಭಕ್ತಿಯುತರಾಗಿ ಗುರುವಿನ ಕಡೆಯಿಂದ ದೀಕ್ಷಾಸಂಸ್ಕಾರವನ್ನು ಹೊಂದಿ ಬಳಿಕ ಅದನ್ನು ತಿರಸ್ಕರಿಸಿ ದುರುಳವೇದಾಂತಿಗಳ ದುರುಪದೇಶದ ಬಲೆಗೆಸಿಕ್ಕಿ ತನಗೆ ಉಪದೇಶಮಾಡಿದ ಮಹಾಮಂತ್ರವನ್ನು ಕಂಠಕಂಡೆಡೆಯಲ್ಲಿ ಕೂಗುತ್ತ ಮತ್ತು ಕಾಷಾಯವಸ್ತ್ರಗಳನ್ನು ಧರಿಸಿಕೊಂಡು ಕೈಯಲ್ಲಿ ಕಮಂಡಲವನ್ನೂ ದಂಡವನ್ನೂ ಹಿಡಿದುಕೊಂಡು ಬೀದಿಬೀದಿಗಳಲ್ಲಿ ಮಹಾಮಂತ್ರವನ್ನು ಕೂಗುತ್ತ ಸರ್ವರ ಕಡೆಯಿಂದಲೂ ಪಾದಪೂಜೆಯನ್ನು ಮಾಡಿಸಿಕೊಳ್ಳುತ್ತಿರುವರು ಇದು ನಿಮಗೆ ಯೋಗ್ಯವೇ ಎಂದು ಯಾರಾದರೂ ಕೇಳಿದರೆ ನಮ್ಮನ್ನು ಯಾರು ಕೈಹಿಡಿದ ಕೇಳುತ್ತಾರೆಯೋ ಅವರಿಗೆ ಸಮರ್ಪಕಉತ್ತರವನ್ನು ಕೊಡುವೆವೆಂದ ಅಹಂಕಾರದ ಮಾತುಗಳನ್ನು ಆಡುತ್ತಿರುವರು ಶಿವಶಿವಾ! ಏನು ಅನ್ಯಾಯವಿದು? ಕಾವಿಯನ್ನು ಹೊದ್ದಾಕ್ಷಣವೇ ಇವರು ಪೂಜ್ಯರಾಗುವರೆ? 'ಪತಿರ್ಲಿಂಗಂ ಸತೀಚಾಹಂ" ಎಂಬ ಆಗಮೋಕ್ತಿಯನ್ನು ಮರೆತಂತಾಯಿತು ಯೌವನವತಿಯಾದ ತರುಣಿಯು ಪಾಣಿಗ್ರಹಣವಾದಬಳಿಕ ಪತಿಭಕ್ತಿಪರಾಯಣೆಯಾಗದೆ ಅಹಂಕರಿಸಿದರೆ ಅವಳು ನಿಜವಾದ ಸತಿಯಾಗುವಳೇ? ನಾನು ನಾನೆಂಬ ಅಹಂಕಾರದಿಂದ ಮಹಾಮಹಾ ವಿರಾಧಿವೀರರ ಗತಿಯು ಏನಾಗಿರುವದೆಂಬ ವಿಷಯವನ್ನು ಈ ಕೆಳಗಿನ ಪದ್ಯದಿಂದ ತಿಳಿಯಬಹುದು

> ನಾನು ನಾನೆಂದು ಗರ್ವದಲಿ ಮೆರೆಯದೆ |
> ನೀನು ನೀನೆಂದು ಶಿರ ಬಾಗೋ ಗುರುವರನಿಗೆ ||
> ನಾನೆಂದ ಕೌರವನ ಮನೆಗೆ ಪೋದನೆ ಕೃಷ್ಣ |
> ನೀನೆಂದ ವಿದುರನ ಪಾಲುಂಡ |
> ನಾನೆಂದ ರಾಕ್ಷಸರಾಗಾಯ್ತು ಪಡೆಹಾಳು |
> ನೀನೆಂದ ದೈವಗಳಾಗಾಯ್ತು ಸ್ಥಿರಬಾಳು ||
> ನಾನೆಂದ ಶಿಶುಪಾಲ ಶಿರವಿತ್ತ ಚಕ್ರಕ್ಕೆ |
> ನೀನೆಂದ ಧ್ರುವನು ಮಾನವ ಕಾಯ್ದನು ಹರಿಯು |
> ನಾನೆಂದ ರಾವಣನು ಮಡಿದಾ ||
> ಅವನನುಜ ನೀನೆಂದು ಲಂಕೆಯೊಳು ಸ್ಥಿರಪಟ್ಟವಾದ ||
> ನಾನೆಂದು ತಲೆಯೆತ್ತಿ ಬೆಳೆದ |
> ಸಜ್ಜೆಯು ನಮ್ಮ ನವಧಾನ್ಯಕೊಟ್ಟರಾಯ್ತು ||
> ನೀನೆಂದು ತಲೆಬಗ್ಗಿ ಬೆಳೆದ
> ಬತ್ತವು ನಮ್ಮ ಶಿವಪೂಜೆಗನುಕೂಲ
> ವಾದುದನರಿಯ |
> ನಾನು ನಾನೆಂದು ಗರ್ವದಲಿ ಮೆರೆಯದೇ
> ನೀನು ನೀನೆಂದು ಶಿರ ಬಾಗೊ ಗುರುವರಗೇ ||

ಈ ಪ್ರಕಾರ ಆರ್ಯೋಕ್ತಿಗಳಿರುವವು ಇದನ್ನಾದರೂ ಅಹಂಕಾರಿಗಳು ಗಮನಕ್ಕೆ ತಂದು ಸದಾಚಾರಸಂಪನ್ನರಾಗಿ ನಡೆಯಬೇಕು ದಣವೀರ ಧರ್ಮವೀರಾದಿ ಬಿರುದಾಂಕಿತರಾದ ಶ್ರೀ ಶರಣಪ್ಪಣ್ಣ ಪತ್ತೇಪುರ ಇವರ ಅತುಲವಾದ ಗುರುಭಕ್ತಿಯನ್ನೂ, ಸ್ತ್ರೀಸಮಾಜದಲ್ಲಿ ಶಿರೋರತ್ನದಂತೆ ವಿರಾಜಿಸುತ್ತಿರುವ ಸೌ|| ಭಾಗೀರಥೀಬಾಯಿ ಕಟಾಪ ಇವರ ನೈಜವಾದ ಗುರುಭಕ್ತಿಯನ್ನೂ ಗುರುಸೇವಾಂಕಿತರ ಹುವಿನಹಡಗಲಿ ಇವರ ಗುರುಭಕ್ತಿಯನ್ನೂ ನೋಡಿದರೆ ಯಾರಿಗೆತಾನೆ ಸಂತೋಷವಾಗಲಿಕ್ಕಿಲ್ಲ? ಕೋಟಿಸೂರ್ಯರಂತೆ ವಿರಾಜಮಾನನೂ, ವೀರಶೈವಧರ್ಮೋದ್ಧಾರಕನೂ ಆದ ಶ್ರೀ ಕಾಶೀನಾಥಗುರುಮೂರ್ತಿಯ ಅಮೃತಹಸ್ತದಿಂದ ಪ್ರಕಟವಾಗುತ್ತಿರುವ ಪಂಚಾಚಾರ್ಯಪ್ರಭಾ ಪತ್ರಿಕೆಯ ನಾಲ್ಕನೇ ಪುಟದಲ್ಲಿ ಪ್ರಕಟವಾಗುತ್ತಿರುವ ಗುರುವಿನ ಅವಶ್ಯಕತೆಯನ್ನು ಓದಿ ಸರ್ವರೂ ಧನ್ಯರಾಗಬೇಕೆಂದು ಕೋರಿಕೆ ಸದಾಚಾರಸಂಪನ್ನರೂ ವಿದ್ಯಾವಿಶಾರದರೂ ಜ್ಞಾನವೃದ್ಧರೂ ಭಕ್ತಪ್ರೇಮಿಗಳೂ ಆದ ವೇ|| ವಿರೂಪಾಕ್ಷಶಾಸ್ತ್ರಿಗಳವರ ಕರಕಂಜಸಂಜಾತನಾದ ಬಾಲಕನು ವೀರಶೈವರಲ್ಲಿ ಈ ವಿಷಯವನ್ನು ವಿಜ್ಞಾಪಿಸಿಕೊಳ್ಳುತ್ತೇನೆ

ಗುರುಪದಾಬ್ಜಭೃಮರ
ಬಸಪ್ಪ ಶಿವದೀಕ್ಷಿತ, ಡೋಣಿ.

ಪಂಚಾಚಾರ್ಯಪ್ರಭಾ

೧೯೪೧ನೆಯ ಆಗಸ್ಟ್ ತಾ॥ ೨೫ನೆಯ ಸೋಮವಾರ

ಜಂಗಮ

ಈ ತಿಂಗಳು ೧೧ನೆಯ ತಾರೀಖಿನ ಪತ್ರಿಕೆಯಲ್ಲಿ ಅಷ್ಟಾವರಣಾಂತರ್ಗತಜಂಗಮಪದವಾಚ್ಯರು ವಿರಕ್ತರು ಆಗುವದಿಲ್ಲವೆಂದೂ, ಗುರುವರ್ಗದ ಚರಮೂರ್ತಿಗಳೇ ಜಂಗಮಪದವಾಚ್ಯರಾಗುವರೆಂದೂ ಕೆಲವು ಕಾರಣಗಳನ್ನು ಕೊಟ್ಟು ಪ್ರತಿಪಾದಿಸಿರುವುದು ಸರಿಯಷ್ಟೆ! ಅದೇ ವಿಷಯವು ಸದ್ಯ ಮುಂದುವರಿಸಲ್ಪಡುವುದು

ತನುಂ ಸಮರ್ಪ್ಯ ಗುರವೇ ಜಂಗಮಾಯ ಧನಂ ತಥಾ ।
ಮನಃ ಸಮರ್ಪ್ಯ ಲಿಂಗಾಯ ವರ್ತಂತೇ ಹಿ ಮಹೇಶ್ವರಾಃ ॥

ಎಂಬ ಆಗಮವಾಕ್ಯದಂತೆ ವೀರಶೈವರು ಗುರುವಿಗೆ ತನುವನ್ನೂ, ಲಿಂಗಕ್ಕೆ ಮನವನ್ನೂ, ಜಂಗಮನಿಗೆ ಧನವನ್ನೂ ಅರ್ಪಿಸುವುದು ಸ್ವಭಾವಸಿದ್ಧವಾದ ಧರ್ಮವಾಗಿರುತ್ತದೆ ಗುರುವಿಗೆ ತನುವನ್ನು ಸಮರ್ಪಿಸಬೇಕೆಂದರೆ, ಗುರುವಿನ ಸೇವೆಯಲ್ಲಿ ತನ್ನ ದೇಹವನ್ನು ಚೆನ್ನಾಗಿ ದಣಿಸಬೇಕು ಇದೇ ಗುರುವಿಗೆ ತನುಸಮರ್ಪಣವೆನಿಸುತ್ತದೆ ಲಿಂಗಕ್ಕೆ ಮನವನ್ನು ಅರ್ಪಿಸಬೇಕೆಂದರೆ, ಗುರುವಿನಿಂದ ಕೊಡಲ್ಪಟ್ಟ ಇಷ್ಟಲಿಂಗದಲ್ಲಿ ದೃಷ್ಟಿಯನ್ನು ಇಟ್ಟು ಏಕಾಗ್ರಮನಸ್ಸುಳ್ಳವನಾಗಬೇಕು, ಇದೇ ಲಿಂಗಕ್ಕೆ ಮನಸ್ಸಮರ್ಪಣವೆನಿಸುತ್ತದೆ ಜಂಗಮನಿಗೆ ಧನವನ್ನು ಅರ್ಪಿಸಬೇಕೆಂದರೆ, ತನ್ನ ಶಕ್ತ್ಯನುಸಾರವಾಗಿ ಕಾಣಿಕೆಯನ್ನು ಕೊಡಬೇಕು ಇದೇ ಜಂಗಮನಿಗೆ ಧನಸಮರ್ಪಣವೆನಿಸುತ್ತದೆ ಮೇಲಿನ ಎರಡು ವಸ್ತು (ಗುರುಲಿಂಗ)ಗಳಿಗಂತೂ ಉಕ್ತಯೋಜನೆಯು ಸರಿಯಾಗಿ ಆಗುತ್ತದೆ ಆದರೆ ಮೂರನೆಯ ವಸ್ತುವಿನ ಬಗ್ಗೆ ವಿವಾದವು ಬರುವ ಕಾರಣ ವಿಚಾರಿಸಬೇಕಾಗುತ್ತದೆ ಏಕೆಂದರೆ—ವಿರಕ್ತರೇ ಜಂಗಮಪದವಾಚ್ಯರಾದಲ್ಲಿ ಧರ್ಮಶಾಸ್ತ್ರವಾಕ್ಯಗಳಿಗೆ ಪರಸ್ಪರ ವಿರೋಧವು ಬರುತ್ತದೆ

ಸುವರ್ಣರಕ್ತಪ್ರಮುಖವಸ್ತುದ್ರವ್ಯಪ್ರತಿಗ್ರಹಣಾತ್ ।
ಅತಿವರ್ಣೀ ಯದಿ ಚರೇತ್ಸೋಽಯಂ ಪಾತಕಿನಾಂ ವರಃ ।

ಸೂಕ್ಷ್ಮಾಗಮೇ

ಯದ್ದತ್ತಂ ಯತಿ ಲಬ್ಧ್ವೈವ ಪ್ರಸಾದಸ್ವಾದನೇ ರತಃ ।
ಆದತ್ತೇನ ಮಹಾಪಾಪಾ ತ್ಯಕ್ತಭಾವಿತ್ತನಸ್ಯಕಃ ॥

ಪಾಂಕುಶತಂತ್ರೇ.

ಬ್ರಹ್ಮಚಾರಿಣೇ ತಾಂಬೂಲಂ ವಾನಪ್ರಸ್ಥಾಯ ಗೋರಸಃ ।
ಯತಯೇ ಕಾಂಚನಂ ದತ್ವಾ ದಾತಾ ಚ ನರಕಂ ವ್ರಜೇತ್ ॥

ಸುಪ್ರಭೇದಾಗಮೇ.

ಇತ್ಯಾದ್ಯಾಗಮವಾಕ್ಯಗಳಿಂದ ವಿರಕ್ತನು ಸುವರ್ಣವೊದಲಾದ ದ್ರವ್ಯವನ್ನು ಗ್ರಹಿಸಕೂಡದೆಂದೂ, ಗ್ರಹಿಸಿದ್ದರೆ ಮಹಾಪಾಪಿಯಾಗುವನೆಂದೂ ವಿರಕ್ತನಿಗೆ ಧನವನ್ನು ಕೊಟ್ಟಿದ್ದಾದರೆ ಕೊಟ್ಟವನು ನರಕಕ್ಕೆ ಹೋಗುವನೆಂದೂ ಮೇಲಿನ ಶ್ಲೋಕಗಳ ಅಭಿಪ್ರಾಯವಾಗಿರುತ್ತದೆ. ಆದರೆ ವಿರಕ್ತನೇ ಜಂಗಮಪದವಾಚ್ಯನಾದಲ್ಲಿ ಧನವನ್ನು ಅರ್ಪಿಸುವ ಬಗೆ ಹೇಗೆ? ವಿರಕ್ತನಿಗೆ ಜಂಗಮನೆಂದರೆ ಇಷ್ಟು ಕಠಿನ ದೋಷವು ಪ್ರಾಪ್ತವಾಗುತ್ತದೆ, ಆದಕಾರಣ ವಿರಕ್ತನು ಅಷ್ಟಾವರಣಾಂತರ್ಗತ ಜಂಗಮಪದವಾಚ್ಯನು ಎಂದೂ ಆಗಲರಿಯನು ಆದರೆ ಯಥಾರ್ಥ ಜಂಗಮಪದವಾಚ್ಯರೆಂದು ಶಾಸ್ತ್ರರೂಢಿಗಳಿಂದ ಪ್ರಸಿದ್ಧರಿರುವ ಗುರುಸ್ಥಲದ ಚರಮೂರ್ತಿಗಳ ಬಗ್ಗೆ ಇದು ಸರಿಯಾಗಿ ಅನ್ವಯಿಸುತ್ತದೆ ಇವರು ಸಕಲಶಿಷ್ಯಮಂಡಲಿಯ ಕಡೆಯಿಂದ ಕಾಣಿಕೆಯನ್ನು ತೆಗೆದುಕೊಳ್ಳಲು ಅರ್ಹರಿರುವರು ಆದುದರಿಂದಲೇ ಈ ಯಥಾರ್ಥಜಂಗಮರಿಗೆ ಧನವನ್ನು ಅರ್ಪಿಸತಕ್ಕದ್ದೆಂದು ಆಗಮಗಳು ಸಾರುವುದು ಅಕ್ಷರಶಃ ನಿಜವಿರುತ್ತದೆ ಈ ಪಕ್ಷದಿಂದಲೂ ವಿಚಾರಿಸುತ್ತಿರಲಿಕ್ಕೆ ವಿರಕ್ತರಲ್ಲಿ ಜಂಗಮತ್ವವು ಸಿದ್ಧಿಸುವುದಿಲ್ಲವೆಂದು ಸ್ಪಷ್ಟವಾಗುತ್ತದೆ ಈ ವಿಷಯದಲ್ಲಿ ಕೆಲವರು ಧನವೆಂದರೆ ದ್ರವ್ಯವಲ್ಲ ಅಂತರಂಗಿಕವಸ್ತುವಿರುತ್ತದೆ, ಆದ್ದರಿಂದ ಇದು ವಿರಕ್ತರಿಗೇ ಸಂಬಂಧಿಸುತ್ತದೆಂದು ಆಡುತ್ತಾರೆ ಇದು ಅತ್ಯಂತ ತಪ್ಪು! ಸ್ಥೂಲರೀತಿಯಿಂದಲೂ ಸೂಕ್ಷ್ಮರೀತಿಯಿಂದಲೂ ಇದು ಜಂಗಮಪದವಾಚ್ಯರಾದ ಗುರುವರ್ಗದ ಚರಮೂರ್ತಿಗಳಲ್ಲಿಯೇ ಸಂಭವಿಸುತ್ತದೆಯೇ ಹೊರತು ವಿರಕ್ತರಲ್ಲಿ ಎಂದೂ ಸಂಭವಿಸುವುದಿಲ್ಲವೆಂಬುದೇ ಶಾಸ್ತ್ರಸಿದ್ಧಾಂತವು

ಇನ್ನು ಮತ್ತೊಂದು ರೀತಿಯಿಂದ ವಿಮರ್ಶಿಸೋಣ!

ವೀರಶೈವರಿಗೆ ಪ್ರತಿದಿವಸ ಗುರು ಲಿಂಗ ಜಂಗಮರ ಪಾದೋದಕ ಪ್ರಸಾದಾದಿಗಳು ಬೇಕೇಬೇಕಾಗುವವಷ್ಟೆ! ಈ ತ್ರಿವಿಧ ಪಾದೋದಕಗಳಿಲ್ಲದೆ ವೀರಶೈವರು ಏನನ್ನೂ ಗ್ರಹಿಸಕೂಡದೆಂದು ಧರ್ಮಶಾಸ್ತ್ರದ ಕಟ್ಟಳೆಯಿರುತ್ತದೆ ಗುರುಗಳಂತೂ ಊರಲ್ಲಿಯೇ ಇರುವರು, ಲಿಂಗವಂತೂ ಸದಾ ದೇಹದಲ್ಲಿಯೇ ಇರುತ್ತದೆ ಈ ಎರಡುವಸ್ತುಗಳ ಪಾದೋದಕ ಪ್ರಸಾದಗಳು ಅನಾಯಾಸವಾಗಿ ದೊರಕುತ್ತವೆ ಇದರಂತೆ ಜಂಗಮರ ಪಾದೋದಕಪ್ರಸಾದಗಳು ದೊರೆಯಬೇಕಲ್ಲವೆ? ವಿರಕ್ತರೇ ಜಂಗಮರಾದ ಪಕ್ಷದಲ್ಲಿ—

ತ್ರಿಕಾಲ್ಯಂ ಗೃಹಮಾವೀಕ್ಷ ಮನ ಇತ್ಯಾದಿಲಕ್ಷಣ ಚ ।
ನಿರಾಸಕ್ತೇನ ಕರ್ತವ್ಯೋ ವನೇ ಗಿರಿಗುಹಾದಿಷು ।
ನ ವಿಶೇನ್ನಗರಂ ಗ್ರಾಮಂ ಗೃಹಂ ವಾ ಸ್ವಪನೇ ಧಿಯಾ ॥

ಪಾಶುಪತತಂತ್ರೇ —

ಇತ್ಯಾದ್ಯಾಗಮವಾಕ್ಯಗಳು ವಿರಕ್ತನಾದವನು ನಗರ ಪುರ ಹಾಗೂ ಮನುಷ್ಯರಿದ್ದ ಸ್ಥಾನವನ್ನು ಬಿಟ್ಟು ಹೋಗಬೇಕೆಂದೂ ಅರಣ್ಯಗಿರಿ ಗಹ್ವರಗಳಲ್ಲಿ ವಾಸ ಮಾಡಬೇಕೆಂದೂ ಹಾಗೂ ಪಟ್ಟಣವನ್ನೂ ಹಳ್ಳಿಯನ್ನೂ ಕೂಡ ಪ್ರವೇಶಮಾಡಬಾರದೆಂದೂ ಬೋಧಿಸುತ್ತವೆ ಅಂದಮೇಲೆ ಜಂಗಮರ ಪಾದೋದಕ ಪ್ರಸಾದಗಳನ್ನು ಹೇಗೆ ಸೇವಿಸಬೇಕು? ಏಕೆಂದರೆ ಪಾದೋದಕ ಪ್ರಸಾದಗಳು ನಿಂತನಿಂತಲ್ಲಿಯೇ ಸಿಗುವದಿಲ್ಲ ಗೃಹಸ್ಥರು ತಮ್ಮ ಮನೆಗೆ ಜಂಗಮರನ್ನು ಕರೆದುಕೊಂಡು ಹೋಗಿ ಭಕ್ತಿಪೂರ್ವಕವಾಗಿ ಷೋಡಶೋಪಚಾರಗಳಿಂದ ಪೂಜೆಯಂ ಗೈದು ಪಾದೋದಕ ಪ್ರಸಾದಗಳನ್ನು ಗ್ರಹಿಸುವರು ವಿರಕ್ತನಿಗೆ ಗೃಹಪ್ರವೇಶವೇ ನಿಷೇಧಿಸಲ್ಪಟ್ಟಲ್ಲಿ ಈರೀತಿ ಉಪಚಾರಪೂರ್ವಕವಾಗಿ ಪಾದೋದಕ ಪ್ರಸಾದ ಗ್ರಹಣವು ಹೇಗೆ ಸಂಭವಿಸುವುದು? ಆದುದರಿಂದ ವಿರಕ್ತರಲ್ಲಿ ಜಂಗಮತ್ವವು ಸಿದ್ಧಿಸುವುದಿಲ್ಲ ಯಥಾರ್ಥಶಾಸ್ತ್ರೀಯಜಂಗಮತ್ವದಿಂದ ಕೂಡಿದ ಗುರುಸ್ಥಲದ ಚರಮೂರ್ತಿಗಳೇ ಜಂಗಮರಾಗುತ್ತಾರೆ ಏಕೆಂದರೆ ಇವರಿಗೆ ವಿರಕ್ತರಂತೆ ನಗರ ಗ್ರಾಮ ಗೃಹಸ್ಥರ ಗೃಹಪ್ರವೇಶವು ನಿಷೇಧಿಸಲ್ಪಟ್ಟಿಲ್ಲ ಇವರು ಸ್ವಸಿದ್ಧಾಂತವನ್ನು ಸ್ಥಾಪನ ಮಾಡುವುದಕ್ಕಾಗಿ ಸರ್ವತ್ರ ಸಂಚರಿಸಬೇಕಾಗುತ್ತದೆ ಇಂಥ ಪೂಜ್ಯಜಂಗಮಮೂರ್ತಿಗಳನ್ನೇ ಪೂಜಿಸಬೇಕೆಂದೂ ಇವರ ಪಾದೋದಕ ಪ್ರಸಾದಗಳನ್ನೇ ಸರ್ವರೂ ಗ್ರಹಿಸಬೇಕೆಂಬುದೇ ಧರ್ಮಶಾಸ್ತ್ರದ ಆಶಯ

ಬೆರಿಲಿಯಂ ಲೋಹ

ಪ್ರಪಂಚದಲ್ಲಿರುವ ಲೋಹಗಳೆಲ್ಲೆಲ್ಲ ಬೆರಿಲಿಯಂ ಎಂಬುದು ಅತ್ಯಂತ ಹಗುರವಾದದ್ದು ಇದು ತೂಕದಲ್ಲಿ ಅಲ್ಯೂಮಿನಿಯಂಗಿಂತಲೂ ಮೂರನೇಎರಡರಷ್ಟು ಹಗುರವಾಗಿದ್ದರೂ ಕಬ್ಬಿಣದಷ್ಟು ಬಲವಾಗಿದೆ ಆದುದರಿಂದ ಪ್ರಕೃತಯುದ್ಧದಲ್ಲಿ ಈ ಲೋಹವು ಮುಖ್ಯಪಾತ್ರವನ್ನು ವಹಿಸಿದೆ ವಿಮಾನಗಳ ನಾನಾಭಾಗಗಳನ್ನು ತಯಾರಿಸುವದಕ್ಕೆ ಈ ಲೋಹದಿಂದ ಆಗುತ್ತಿರುವ ಸಹಾಯವು ವರ್ಣನಾತೀತವಾಗಿದೆ ಇದನ್ನು ಮೊದಲು ಕಂಡು ಹಿಡಿದವನು ಒಬ್ಬ ಫ್ರಾನ್ಸಿನವನು ಈ ಬೆರಿಲಿಯಂ ಲೋಹದ ಅದುರು ಪೂರ್ವರಷ್ಯದಲ್ಲಿರುವ ಯೂರಲ್ ಪರ್ವತದಲ್ಲಿ ವಿಶೇಷವಾಗಿ ಸಿಕ್ಕುತ್ತದೆ ಆ ಪ್ರದೇಶದಿಂದ ಜರ್ಮನರು ತಮಗೆ ಬೇಕಾದಷ್ಟು ಈ ಲೋಹವನ್ನು ತರಿಸಿಕೊಂಡುಬಿಟ್ಟಿದ್ದಾರೆ ಅಮೆರಿಕಾ ದೇಶದಲ್ಲಿಯೂ ಈ ಲೋಹವು ಸಿಕ್ಕುತ್ತದೆ.

ಯುದ್ಧವಾರ್ತೆ.

ಡಚ್ ಸಬ್‌ಮೇರಿನ್ನಿನ ಸಾಹಸ

ಒಂದು ಡಚ್ ಜಲಾಂತರ್ಗಾಮಿ ನೌಕೆಯು ಮೆ ಟರೇನಿಯನ್ ಸಮುದ್ರದಲ್ಲಿ ಶತ್ರುಗಳಿಗೆ ಸೇರಿದ 500 ಟನ್ ತೂಕದ ಸರಬರಾಜು ನೌಕೆಯನ್ನೂ 1000 ಟನ ತೂಕದ ಇನ್ನೊಂದು ಹಡಗನ್ನೂ ಮುಳುಗಿಸಿತು .

೧೫ ಲಕ್ಷ ಜರ್ಮನ್ ಸೈನಿಕರು ಸತ್ತರು

ರಷ್ಯಾ ಜರ್ಮನಿ ಸಂಗ್ರಾಮವಾರಂಭವಾದ ಮೇ ಜರ್ಮನಿಯು ೧೫ ಲಕ್ಷ ಮಂದಿ ಯೋಧರನ್ನೂ ೮೦೦೦ ಫಿರಂಗಿಗಳನ್ನೂ, ೬೦೦೦ ವಿಮಾನಗಳನ್ನೂ, ಕಳೆದ ಕೊಂಡಿತೆಂದು ಬೆಲ್ಜಿಯಂ ಸಂಗ್ರಾಮ ಸಚಿವರಾದ ಶ್ರೀ ಗಟ್‌ರವರು ರೇಡಿಯೋ ಮೂಲಕ ತಿಳಿಸಿದರು.

ಇರಾನ್ ತರುಣರು ತ್ಯಾಗಕ್ಕೆ ಸಿದ್ಧರಾಗಬೇಕು

ಇರಾನಿನ ಷಾರವರು ಭಾಷಣ **ಮಾಡುತ್ತ** “ ಪ ವರ್ಷ ಎಂದಿನಂತೆ ರಜ ಕೊಡುವುದಿಲ್ಲವೆಂದೂ, ಈಗಿ ಪರಿಸ್ಥಿತಿಯಲ್ಲಿ ಸೈನಿಕರೂ ಮತ್ತು ಅಧಿಕಾರಿಗಳೂ ಬಹು ಎಚ್ಚರಿಕೆ ವಹಿಸಬೇಕೆಂದೂ, ಪ್ರಸಂಗಬಂದರೆ ಎ ತ್ಯಾಗಕ್ಕೂ ಸಿದ್ಧರಾಗಿರಬೇಕೆಂದೂ ” **ಹೇಳಿದರು.**

೭೫೦೦೦ ರಷ್ಯನರ ಸೆರೆ

ಗೋಮೆಲ್ ಉತ್ತರದಲ್ಲಿ ಭಯಂಕರ ಕದನ ನಡೆದ ರಷ್ಯನರಿಗೆ ಸೋಲಾಯಿತೆಂದು ಜರ್ಮನ್ ಪ್ರಕಟನೆಯು ತಿಳಿಸುತ್ತದೆ ೭೫೦೦೦ ಜನರು ಸೆರೆ ಸಿಕ್ಕಿದ್ದಲ್ಲ ೧೪೪ ಟ್ಯಾಂಕುಗಳೂ, ೭೦೦ ಬಂದೂಕುಗಳೂ, ಎರಡ ಶಸ್ತ್ರಸಜ್ಜಿತ ರೈಲುಗಳೂ ಜರ್ಮನರ ಹಸ್ತಗತವಾದವು ದಕ್ಷಿಣ ಯುಕ್ರೇನಿನಲ್ಲಿ ನೀಪರ್ ನದಿಗೆ ಕಟ್ಟಿರುವ ಸೇತುವೆಗಳು ಇನ್ನೂ ರಷ್ಯನರ ವಶದಲ್ಲಿವೆ ಅವುಗಳ ಮೇ ಫಲಪ್ರದವಾಗಿ ಮುತ್ತಿಗೆ ನಡೆಯಿಸಿದ್ದರಿಂದ ೬೫ ರಷ್ಯಾ ಟ್ಯಾಂಕುಗಳು ನಾಶವಾದವು

ನೀಪರ್ ಅಣೆಕಟ್ಟಿನ ನಾಶವೇ ?

ನೀಪರ್‌ನದಿಗೆ ಅಡ್ಡವಾಗಿದ್ದ ಸುಪ್ರಸಿದ್ಧ ಅಣೆಕಟ್ಟನು ರಷ್ಯನರು ಒಡೆದುಹಾಕಿ, ಕೆಳಪ್ರದೇಶಗಳನ್ನೆಲ್ಲ ಮುಳು ಸುವಂತೆ ಮಾಡಿದ್ದಾರೆಂದು ಬರ್ಲಿನ್‌ನಗರದಿಂದ ಸುದ್ದಿ ಬಂದಿದೆ ಜರ್ಮನರು ನೀಪರ್ ನದಿಯ ಕೆಳಪ್ರದೇ ದಲ್ಲಿ ಎಲ್ಲಿಲ್ಲಿಯೂ ಇದುವರೆಗೆ ನದಿಯನ್ನು ದಾಟಿಲ್ಲವೆಂದು ಗೊತ್ತಾಗುತ್ತದೆ ಒಡೆಸ್ಸಾ ಬಂದರನ್ನು ರಷ್ಯಾ ಸೈನಿಕರು ಉಗ್ರವಾಗಿ ಸಂರಕ್ಷಿಸಿಕೊಳ್ಳುತ್ತಿದ್ದಾರೆಂದೂ ರಷ್ಯಾಸೇನೆಗೆ ಸಮುದ್ರಮೂಲಕ ವಸ್ತುಗಳನ್ನು ಒದಗಿಸುತ್ತಿರಲಾಗಿದೆಯೆಂದೂ ತಿಳಿಸಲಾಗಿದೆ.

ಯುದ್ಧಸಾಮಗ್ರಿಗಳ ಯೋಜನೆ

ಅಮೇರಿಕಾದ ರಾಜ್ಯಾಧ್ಯಕ್ಷ ಶ್ರೀ ರೂಜ್‌ವೆಲ್ಟರ ಪತ್ರಿಕಾಸುದ್ದಿಗಾರರನ್ನುದ್ದೇಶಿಸಿ, ಅವಶ್ಯಕವಿದ್ದರೆ ಈಗಿ ಯುದ್ಧವು 1943 ನೇ ವರ್ಷದಲ್ಲೂ ನಡೆಯಬಹು ದೆಂದೂ ಆ ವರ್ಷದ ಅವಶ್ಯಕತೆ ಮತ್ತು ಸಂಗ್ರಾಮ ಸಾಹಿತ್ಯ ನಿರ್ಮಾಣವನ್ನು ಕುರಿತು ಬ್ರಿಟನ್ ಮತ್ತು ಅಮೇರಿಕೆಗಳು ಸರ್ವೆ ನಡೆಸುವವೆಂದೂ, ಮತ್ತು ತಾ ಲಾರ್ಡ್ ಬೀವರ್‌ಬ್ರೂಕ್‌ರವರೊಡನೆ ಸರಬರಾಜಿ ವಿಷಯವಾಗಿ ಚರ್ಚೆನಡೆಸಿದುದಾಗಿಯೂ, 1943 ನೆ ವರುಷದಲ್ಲಿ ಅಮೇರಿಕಸೇನೆಗಳ ಅವಶ್ಯಕತೆಗಳೇನು ಎಷ್ಟು ಪದಾರ್ಥಗಳನ್ನು ಹೊರಕ್ಕೆ ಕಳುಹಿಸಲು ಸಾಧ್ಯ ಎಂಬ ವಿಚಾರದಲ್ಲಿ ಸರ್ವೆ ನಡೆಸಲು ಸೂಚಿಸಿರುವದಾಗಿಯೂ ಹೇಳಿದರು

ಥೈಲೆಂಡಿಗೆ ೨೦ ಸಂಗ್ರಾಮ ವಿಮಾನಗಳು ಬಂದವು

ಬ್ಯಾಂಕಾಕ್ ನಗರಕ್ಕೆ ಅಮೇರಿಕೆಯಿಂದ ೨೦ ಸಂಗ್ರಾಮವಿಮಾನಗಳು ಬಂದವೆಂದು ರೋಂ ರೇಡಿಯೋ ತಿಳಿಸುತ್ತದೆ. ಕಳೆದ ವರ್ಷ ಈ ವಿಮಾನಗಳಿಗಾಗಿ ಥೈಲೆಂಡ್ ಸರ್ಕಾರವು ಆರ್ಡರು ಕೊಟ್ಟಿತ್ತು.

ಮೊರಾಕೋದಲ್ಲಿ ಜರ್ಮನರ ಸಂಖ್ಯೆ ಹೆಚ್ಚುತ್ತಿದೆ

ಸೆನೆಗಾಲ್‌ನಲ್ಲಿರುವ ಜರ್ಮನ್ ಮಿಷನ್ನಿನ ನಾಯಕರಾದ ಡಾ॥ ಕ್ಲಾನ್‌ಬಿಯವರು ಫ್ರಾನ್ಸ್-ಡಾಕಾರ್‌ಗಳ ಮಧ್ಯೆ ತಮ್ಮ ಖಾಸಗಿ ವಿಮಾನದಲ್ಲಿ ಓಡಾಡುತ್ತಿದ್ದಾರೆಂದೂ, ಈ ಮಿಷನ್ನಿಗೆ ನೂರಾರುಮಂದಿ ಸದಸ್ಯರಿದ್ದಾರೆಂದೂ, ಆದರ ಚಟುವಟಿಕೆಯು ಕೇವಲ ಡಾಕಾರಿಗೆ ಮಾತ್ರ ಅನ್ವಯಿಸಿಲ್ಲವೆಂದೂ, ಒಳನಾಡಿಗೆಲ್ಲ ಹರಡಿ ಪ್ರತಿಯೊಬ್ಬ ಫ್ರೆಂಚ್ ಅಧಿಕಾರಿಯ ಸ್ಥಾನದಲ್ಲೂ ಒಬ್ಬ ಜರ್ಮನ್ ಅಧಿಕಾರಿಯು ಸಿದ್ಧವಾಗಿದ್ದಾನೆಂದೂ, ಬೇಗನೆ ನಾಜಿ ಅಧಿಕಾರಿಗಳೇ ಆಡಳಿತ ಸೂತ್ರಗಳನ್ನು ಹಿಡಿಯಬಹುದೆಂದೂ ಹೇಳಲಾಗಿದೆ

ಅಮೆರಿಕೆಯು ರಷ್ಯಕ್ಕೆ ಸಾಲಕೊಡಲು ಸಿದ್ಧವಾಗಿದೆ

ಸಾಲಕೊಡುವ ಶಾಖೆಯ ಮುಖ್ಯಾಧಿಕಾರಿಗಳಾದ ಜೆಸ್ಸಿಜೋನ್ಸ್‌ರವರು ಮಾತನಾಡುತ್ತ "ಅಮೆರಿಕೆಯಲ್ಲಿ ಸಂಗ್ರಾಮವಸ್ತುಗಳನ್ನು ರಷ್ಯಕ್ಕೆ ಸಾಲರೂಪದಿಂದ ಕೊಡಲು ಸಿದ್ಧರಾಗಿರುವೆವೆಂದೂ ರಷ್ಯಕ್ಕೆ ಸಹಾಯಮಾಡುವುದೇ ಅಮೆರಿಕಾ ಸರಕಾರದ ನೀತಿಯೆಂದೂ ಅಮೆರಿಕನ್ನರ ವಸ್ತುಗಳಿಗೆ ನಗದು ಹಣಕೊಡಲು ಸಾಧ್ಯವಿಲ್ಲದೆ ಹೋದರೆ ಏನಾದರೊಂದು ಮಾರ್ಗ ಕಂಡುಹಿಡಿಯಲು ಸಾಧ್ಯವಾಗದೆ ಇರುವುದಿಲ್ಲವೆಂದೂ, ಸಾಲಕ್ಕಾಗಿ ರಷ್ಯವು ಅಧಿಕಾರಯುತವಾಗಿ ಪ್ರಾರ್ಥನೆಯನ್ನೇನೂ ಮಾಡಿಲ್ಲವೆಂದೂ, ಅಪ್ರತ್ಯಕ್ಷವಾಗಿ ಅಂತಹ ಸೂಚನೆ ಕೊಡಲಾಗಿದೆಯೆಂದೂ" ಹೇಳಿದರು.

ರಷ್ಯದನಷ್ಟವನ್ನು ಕುರಿತು ಪತ್ರಿಕೆಗಳ ಅಭಿಪ್ರಾಯ

ಡೇಲಿ ಟೆಲಿಗ್ರಾಫ್ ಪತ್ರಿಕೆಯು ಉಕ್ರೇನಿನಲ್ಲಿ ರಷ್ಯಕ್ಕಾಗಿರುವ ನಷ್ಟವನ್ನು ವರ್ಣಿಸುತ್ತ "ಪಶ್ಚಿಮ ಉಕ್ರೇನಿನಲ್ಲಿ ಜರ್ಮನರು ಮುಂದುವರೆದು ನಿಕೋಲೇವ್ ಬಂದರನ್ನು ಹಿಡಿದಿದ್ದರಿಂದ ರಷ್ಯಕ್ಕೆ ಭಾರಿ ನಷ್ಟವಾಗಿದೆಯೆಂಬುದು ನಿಶ್ಚಯ! ನೀಪರ್ ನದಿಯನ್ನು ಜರ್ಮನರು ದಾಟದಂತೆ ತಡೆಯಲು ರಷ್ಯನರು ಅಶಕ್ತರಾಗಿ ಪೂರ್ವದ ಕಡೆ ಇರುವ ಭಾಗಗಳನ್ನು ನಾಜಿಗಳು ಹಿಡಿದರೆ ಆಗ ರಷ್ಯಕ್ಕೆ ಭಾರಿಪೆಟ್ಟುಬಿದ್ದಂತಾಗುತ್ತದೆ ಕ್ರಿಮಿಯಾ ಮತ್ತು ರಷ್ಯದ ಮುಖ್ಯ ನೌಕಾಮೂಲವಾದ ಸಬಾಸ್ತಪೂಲ್ ಸಹ ರಷ್ಯದ ಕೈ ತಪ್ಪಿಹೋಗಬಹುದು. ಆದರೆ ಇದರಿಂದ ಜರ್ಮನಿಗೇನೂ ಲಾಭವಾಗುವಂತಿಲ್ಲ. ರಷ್ಯನರು ಎಲ್ಲವನ್ನೂ ನಾಶಮಾಡಿ ಹೋಗುವದರಿಂದ ಸ್ಮಶಾನ ಸದೃಶವಾಗುವ ಆ ಪ್ರದೇಶದಲ್ಲಿ ಜರ್ಮನರಿಗೆ ಆಹಾರವಾಗಲಿ, ಗಣಿಗಳಲ್ಲಿ ಸಂಗ್ರಾಮಯಂತ್ರಕ್ಕೆ ಆಹಾರವಾಗಲಿ ಸಿಗುವಂತಿಲ್ಲ" ಎಂದು ಅಭಿಪ್ರಾಯಪಟ್ಟಿರುತ್ತದೆ.

ಮೇಲೆಬಿದ್ದಲ್ಲದೆ ರಷ್ಯಕ್ಕೆ ಜಯ ದುರ್ಲಭ

ಜರ್ಮನಿಯು ರಷ್ಯದಮೇಲೆ ನಡೆಸಿದ ೩ ನೆಯ ಮುತ್ತಿಗೆಯು ಬಹಳ ಪರಿಣಾಮಕಾರಿಯಾಗಿದೆ. ಉತ್ತರದಲ್ಲಿ ನಾಜಿಗಳು ಲೆನಿನ್‌ಗ್ರಾಡಿಗೆ ಕೇವಲ 75 ಮೈಲಿ ದೂರದಲ್ಲಿದ್ದಾರೆ. ದಕ್ಷಿಣದಲ್ಲಿ ಮಾರ್ಷಲ್ ಬಡೆನ್ನಿಯವರು ಪಶ್ಚಿಮ ಉಕ್ರೇನ್ ಪ್ರದೇಶವೆಲ್ಲವನ್ನೂ ನಾಜಿಗಳಿಗೆ ಬಿಟ್ಟುಕೊಟ್ಟು ನೀಪರ್ ನದಿಯ ಪೂರ್ವಕ್ಕೆ ತಮ್ಮ ಸೈನ್ಯಗಳನ್ನೆಲ್ಲಾ ಸಾಗಿಸಿದ್ದಾರೆ. ಜರ್ಮನ್ ಸೈನ್ಯಗಳಿಗೆ ಎದುರೇ ಇಲ್ಲವೆಂದು ತೋರಲಾರಂಭಿಸಿದೆ. ಆದರೆ ರಷ್ಯನರು ಕೇವಲ ಆತ್ಮರಕ್ಷಣ ಪ್ರಯತ್ನದಲ್ಲಿಮಾತ್ರ ತೊಡಗಿರುವರೆಂದು ಹೇಳುವದು ಸರಿಯಲ್ಲ. ಚಳಿಗಾಲ ಪ್ರಾರಂಭವಾಗುವವರೆಗೆ ತಡೆಯುವದರಿಂದ ತಾವು ಉಳಿದುಕೊಳ್ಳುವದಾಗಿ ರಷ್ಯನರು ಯೋಚಿಸುವದೂ ಸರಿಯಲ್ಲ ಚಳಿಯನ್ನೆದುರಿಸಲು ನಾಜಿಗಳು ಆಗಲೇ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆ. ನಾಜಿಗಳು ಆಕ್ರಮಿಸುವ ಪ್ರದೇಶಗಳಲ್ಲಿ ಜರ್ಮನ್ ಇಂಜನಿಯರುಗಳು ರಸ್ತೆಗಳನ್ನೂ ರೈಲು ಮಾರ್ಗಗಳನ್ನೂ ನಿರ್ಮಿಸುತ್ತಿದ್ದಾರೆ ಆಗಲೆ ಬರ್ಲಿನ್ನಿನಿಂದ ಸ್ಮೊಲೆನ್‌ಸ್ಕ್‌ನಗರಕ್ಕೆ ನೇರವಾಗಿ ರೈಲುಗಳು ಓಡುತ್ತಿವೆ ರಷ್ಯದ ಸೈನ್ಯಗಳು ಅಲ್ಲಲ್ಲಿ ಸ್ವಲ್ಪ ಅಡ್ಡಿಪಡಿಸಲು ಶಕ್ತವಾದರೂ ರೈಲುಗಳ ಓಡಾಟವನ್ನು ತಪ್ಪಿಸಲು ಶಕ್ತವಾಗಿಲ್ಲ ಈ ವಾರ ಜರ್ಮನಿಯು ಮೇಲೆಬಿದ್ದುದರಿಂದ ರಷ್ಯಕ್ಕೆ ಏಟುಬಿತ್ತು ಆದರೆ ರಷ್ಯವು ಜರ್ಮನಿಯಷ್ಟೇ ಉಗ್ರರೀತಿಯಲ್ಲಿ ಶತ್ರುಗಳಮೇಲೆ ತಿರುಗಿಬೀಳಬೇಕು. ಇಲ್ಲವಾದರೆ ಅದಕ್ಕೆ ಜಯವು ದುರ್ಲಭವೇ ಸರಿ

ಶ್ರೀ ಮೆನ್ಜೀಸ್‌ರವರ ಭಾಷಣ

ಆಸ್ಟ್ರೇಲಿಯಾ ಮಹಾ ಪ್ರಧಾನರಾದ ಶ್ರೀ ಮೆನ್ಜೀಸ್‌ರವರು ರೆಪ್ರೆಜೆಂಟೇಟೀವ್ಸ್ ಸಭೆಯಲ್ಲಿ ಭಾಷಣ ಮಾಡುತ್ತ "ಮಲಯಾ ಮತ್ತು ಸಿಂಗಪುರಗಳು ಆಸ್ಟ್ರೇಲಿಯದ ಮುಖ್ಯವಾದ ರಕ್ಷಣಸ್ಥಾನಗಳಾಗಿವೆಯೆಂದೂ, ಆಸ್ಟ್ರೇಲಿಯನ್ನರು ಶಾಂತಿಯನ್ನ ಬಯಸಿದರೂ ಸಹ, ತಮ್ಮ ಉಳಿವಿಗೆ ಅಗತ್ಯವೆನಿಸಿದ ತ್ಯಾಗಕ್ಕೆ ಸಿದ್ಧವಾಗಿದ್ದಾರೆಂದೂ, ಪೂರ್ವದಲ್ಲಿ ಜಪಾನು ಉಗ್ರ ಪರಿಸ್ಥಿತಿಯನ್ನು ಉಂಟುಮಾಡಿರುವುದರಿಂದ ಲಂಡನ್ನಿನಲ್ಲಿ ಆಸ್ಟ್ರೇಲಿಯದ ಪ್ರತಿನಿಧಿಗಳಿರುವುದು ಅಗತ್ಯವಾಗಿದೆಯೆಂದೂ, ಮಹಾಪ್ರಧಾನರಲ್ಲದೆ ಬೇರೆ ಸಚಿವರು ಲಂಡನ್ನಿಗೆ ತೆರಳಿದರೆ ಅವರು ಸಂಗ್ರಾಮಮಂತ್ರಿಮಂಡಲದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸಾಧ್ಯವಾಗುವುದೆಂಬ ಸಲಹೆಗೆ ಬುಡವಿಲ್ಲವೆಂದೂ, ಬ್ರಿಟಿಷ್ ಸರ್ಕಾರದವರು ಡೋಮಿನಿಯನ್‌ಗಳ ಅತಿ ದೊಡ್ಡ ಅಧಿಕಾರಿಯೊಂದಿಗೆ ಮಾತನಾಡಿ ಒಂದು ತೀರ್ಮಾನಕ್ಕೆ ಬರುವುದೇ ಒಳ್ಳೆಯದೆಂದೂ, ಪೆಸಿಫಿಕ್‌ಸಮುದ್ರದಲ್ಲಿ ಅಶಾಂತಿಯನ್ನುಂಟುಮಾಡುವಂತಹ ಯಾವ ಮಾತನ್ನೂ ನಾನು ಆಡುವುದಿಲ್ಲವೆಂದೂ, ಆದರ ಬ್ರಿಟನ್, ಚೀನಾ, ಅಮೆರಿಕಾ ಮತ್ತು ಡಚ್ ಇಂಡೀಸ್‌ಗಳು ಜಪಾನನ್ನು ಸುತ್ತುವರಿಯುತ್ತಿವೆಯೆಂಬುದಾಗಿ ಜಪಾನು ಮಾಡುತ್ತಿರುವ ಆಕ್ಷೇಪಣೆಗೆ ಆಧಾರವಿಲ್ಲವೆಂದೂ, ಈಗಿನ ಬಿಕ್ಕಟ್ಟಿಗೆ ಜಪಾನಿನ ವರ್ತನವೇ ಕಾರಣವೆಂದೂ, ಈ ಬಿಕ್ಕಟ್ಟನ್ನು ಸುಲಭಗೊಳಿಸುವುದು ಜಪಾನಿನ ಕೈಯಲ್ಲಿಯೇ ಇದೆಯೆಂದೂ. ಆಸ್ಟ್ರೇಲಿಯಾದೇಶವು ದೀರ್ಘಕಾಲದಿಂದ ಜಪಾನಿನ ಮಿತ್ರರಾಷ್ಟ್ರವೆಯೆಂದೂ, ಆದರೆ ಖಂಡಿತವಾಗಿ ಮಾತನಾಡುವುದು ಮಿತ್ರರಿಗೆ ಕೂಡ ಕ್ಷೇಮವೆಂದೂ, ಜಪಾನು ಇಂಡೋ ಚೀನಾ ಹಿಡಿದಿರುವುದರಿಂದ ಬ್ರಿಟಿಷ್ ಮತ್ತು ಅಮೇರಿಕನ್ ಹಿತಗಳಿಗೆ ನೇರವಾಗಿ ಚ್ಯುತಿ ಬಂದಿದೆಯೆಂದು ಆವೆರಡು ದೇಶಗಳೂ ಪರಿಗಣಿಸಿವೆಯೆಂದೂ" ಹೇಳಿದರು

ಲೆನಿನ್‌ಗ್ರಾಡ್ ನಗರವನ್ನು ಜರ್ಮನರ ವಶಪಡಿಸುವುದಿಲ್ಲ

ರಷ್ಯದ ಉತ್ತರ ಸೇನೆಯ ದಂಡನಾಯಕರಾದ ಮಾರ್ಷಲ್ ವರೋಶಿಲೋವ್‌ರವರು ಲೆನಿನ್‌ಗ್ರಾಡ್ ಜಿಲ್ಲೆಯ ಪ್ರಜೆಗಳಲ್ಲಿ ಕೆಳಗೆ ಕಂಡಂತೆ ಪ್ರಾರ್ಥನೆಮಾಡಿದ್ದಾರೆ.

"ಶತ್ರುಗಳು ಲೆನಿನ್‌ಗ್ರಾಡ್ ಪ್ರವೇಶಮಾಡಲು ಪ್ರಯತ್ನಮಾಡಿದ್ದಾರೆ ನಮ್ಮ ಮನೆಗಳನ್ನೂ, ಕಾರ್ಖಾನೆಗಳನ್ನೂ, ಧ್ವಂಸಮಾಡಿ. ನಮ್ಮ ಜನರನ್ನು ಕೊಳ್ಳೆಹೊಡೆದು ಜನರ ರಕ್ತವನ್ನು ಚೆಲ್ಲಾಡಿ, ಶಾಂತಚಿತ್ತರಾದ ಪ್ರಜಾಕೋಟಿಯನ್ನು ಕೊಲೆಮಾಡಿ ನಮ್ಮ ಸ್ವಾತಂತ್ರ್ಯಾಪಹಾರಮಾಡಬೇಕೆಂಬುದು ಶತ್ರುಗಳ ಗುರಿಯಾಗಿದೆ. ಇದಕ್ಕೆ ಖಂಡಿತ ಅವಕಾಶಕೊಡಲಾಗದು. ಈ ಮಹಾನಗರವು ರಷ್ಯದ ಕೈಗಾರಿಕೆಯ ಕೇಂದ್ರವಾಗಿದೆ. ನಮ್ಮ ಈ ಸುಂದರ ನಗರಕ್ಕೆ ಶತ್ರುಗಳು ಕಾಲಿಡಬಾರದು. ನಮ್ಮ ಕೈಯಿಂದಲೇ ನಾವು ಬಲಯುತವಾದ ಕಾರ್ಖಾನೆಗಳನ್ನೂ ಅತದ್ಭುತವಾದ ಭವನಗಳನ್ನೂ ರಚಿಸಿದ್ದೇವೆ. ನಯನಮನೋಹರವಾದ ಉದ್ಯಾನವನಗಳನ್ನುರೂಪುಗೊಳಿಸಿದ್ದೇವೆ ಅವುಗಳೆಲ್ಲ ನಾಜಿ ದರೋಡೆಖೋರರ ಕೈಗೆ ಬೀಳದಂತೆ ಮಾಡಬೇಕು. ಲೆನಿನ್‌ಗ್ರಾಡಿನ ಜನರು ಮುಂದೆ ನುಗ್ಗುತ್ತಿರುವ ಶತ್ರುಗಳನ್ನು ಹಿಮ್ಮೆಟ್ಟಿಸುತ್ತಿರುವುದು ಇದೇ ಪ್ರಥಮವಲ್ಲ. ಕೆಂಪುಸೇನೆಯು ಈ ನಗರದ ಮಹಾದ್ವಾರಗಳನ್ನೆಲ್ಲ ರಕ್ಷಿಸುತ್ತಿದೆ. ಸೋವಿಯೆಟ್ ನೌಕಾದಳವೂ ವಿಮಾನಬಲವೂ ಶತ್ರುಗಳಿಗೆ ಬಲವಾದ ಏಟು ಹಾಕುತ್ತಿವೆ ಆದರೆ ಇನ್ನೂ ಶತ್ರುಗಳ ಬಲ ಮುರಿದಿಲ್ಲ ಲೆನಿನ್‌ಗ್ರಾಡನ್ನು ಹಿಡಿಯಬೇಕೆಂಬ ಹೀನಬುದ್ಧಿಯನ್ನು ಅವರೀಗಲೇ ಬಿಡುವುದಿಲ್ಲ ಆದ್ದರಿಂದ ನಾವು ಎಚ್ಚೆತ್ತಿರಬೇಕು ಲೆನಿನ್‌ಗ್ರಾಡಿನ ರಕ್ಷಣೆಗಾಗಿ ಹೊಸ ಸೇನೆಯನ್ನು ರೂಪುಗೊಳಿಸಲಾಗುತ್ತಿದೆ ಅವರೆಲ್ಲ ಬಹಳ ಧೀರರಾದ ಜನರು ನಮ್ಮಜೀವಹೋದರೂಕೂಡ ನಾವು ಶತ್ರುಗಳನ್ನು ಎದುರಿಸಿ, ಅವರನ್ನು ತುಳಿಯಲೇಬೇಕು".

ಜರ್ಮನಿಯು ಫ್ರೆಂಚ್ ಸಾಮ್ರಾಜ್ಯದ ಸರ್ವಸ್ವವನ್ನೇ ಹೀರಹತ್ತಿದೆ

ವಿಚಿ ಸರ್ಕಾರಕ್ಕೂ ಜರ್ಮನಿಗೂ ಹೊಸ ಒಪ್ಪಂದವೊಂದು ಆಗುವದಿದೆ. ಆ ಬಗ್ಗೆ ಈಗ ಸಂಧಾನ ನಡೆಯುತ್ತಿದೆ ಫ್ರಾನ್ಸ್ ಮತ್ತು ಆಫ್ರಿಕದಲ್ಲಿರುವ ಮಿಲಿಟರಿ ಸ್ಥಾನಗಳನ್ನೆಲ್ಲ ಜರ್ಮನಿಗೆ ಬಿಟ್ಟು ಕೊಡಲಾಗುವುದೆಂದು ಸ್ವತಂತ್ರ ಫ್ರೆಂಚ್ ವರ್ತಮಾನ ಸಂಸ್ಥೆಯು ತಿಳಿಸುತ್ತದೆ ಆದಷ್ಟು ಬೇಗ ಈ ಒಪ್ಪಂದವನ್ನು ಮಾಡಿಕೊಳ್ಳಬೇಕೆಂದು ಜರ್ಮನರು ಕಾತುರರಾಗಿದ್ದಾರೆ. ಈ ಮಿಲಿಟರಿ ಮೂಲಗಳನ್ನು ಬಿಟ್ಟುಕೊಟ್ಟುದಕ್ಕೆ ಪ್ರತಿಯಾಗಿ ಫ್ರಾನ್ಸಿನಲ್ಲಿರುವ ಜರ್ಮನಿ ಬಲದಲ್ಲಿ ಒಂದು ಭಾಗವನ್ನು ಹಿಂದಕ್ಕೆ ಕರೆಯಿಸಲಾಗುವದು ಉಳಿದ ಭಾಗವು ಫ್ರಾನ್ಸಿನಲ್ಲಿರುವದು ಆದರೆ, ಇಟಲಿಯನ್ನು ಮಿತ್ರದೇಶದಂತೆ ಪರಿಗಣಿಸಿ ಅಲ್ಲಿ ಜರ್ಮನ್ ಸೇನೆಯನ್ನು ಹೇಗೆ ಇಡಲಾಗಿದೆಯೋ ಅದೇ ರೀತಿ ಫ್ರಾನ್ಸನ್ನು ಕೂಡ ಇನ್ನುಮುಂದೆ ಮಿತ್ರ ದೇಶದಂತೆ ಪರಿಗಣಿಸಲಾಗುವುದು

ಯುದ್ಧ ಮುಗಿದ ಮೇಲೆ ಆಫ್ರಿಕಾದಲ್ಲಿರುವ ಬ್ರಿಟಿಷ್ ಕ್ಷೇತ್ರಗಳನ್ನೆಲ್ಲ ಮುಖ್ಯವಾಗಿ ನಿಗೇರಿಯಾ, ಸೀರಾಲೋನ್ ಮತ್ತು ಗೋಲ್ಡ್‌ಕೋಸ್ಟ್ ಪ್ರದೇಶಗಳನ್ನು ಫ್ರೆಂಚ್ ಸಾಮ್ರಾಜ್ಯಕ್ಕೆ ಸೇರಿಸಲಾಗುವುದು. ಆ ಕ್ಷೇತ್ರಗಳಿಂದ ಜರ್ಮನಿ ಮತ್ತು ಫ್ರಾನ್ಸುಗಳು ಜಂಟಿಯಾಗಿ ಉಪಯೋಗ ಪಡೆಯುವುವು

ಆಲ್ಸಾಕ್ ಲೋರೇನುಗಳನ್ನು ವಿಚಿಯು ಜರ್ಮನಿಗೆ ಬಿಟ್ಟುಕೊಡುವುದು. ಇದಕ್ಕೆ ಪ್ರತಿಯಾಗಿ ಯುದ್ಧ ಮುಗಿದ ಮೇಲೆ ಬೆಲ್ಜಿಯಮ್ಮಿನ ದಕ್ಷಿಣ ಭಾಗಗಳನ್ನು ಫ್ರಾನ್ಸಿಗೆ ಬಿಟ್ಟುಕೊಡಲಾಗುವುದು ಫ್ರಾನ್ಸು ಟ್ಯೂನೀಸಿಯಾವನ್ನು ಇಟಲಿಗೆ ಬಿಟ್ಟುಕೊಡಬೇಕಾಗಿಲ್ಲ. ಸಂಗ್ರಾಮ ಮುಗಿದ ಮೇಲೆ ಈಜಿಪ್ಟನ್ನು ಇಟಲಿಗೆ ಕೊಡಲಾಗುವುದು ಈ ಕರಾರುಗಳಿಂದ ಫ್ರೆಂಚ್ ಸಾಮ್ರಾಜ್ಯದ ಮೇಲಿನ ಪೂರ್ಣ ಅಧಿಕಾರವು ನಾಜಿಗಳ ಕೈಗೆ ಬೀಳುವುದೆಂದು ವ್ಯಕ್ತವಾಗುತ್ತದೆ

ಜಪಾನಿನಲ್ಲಿ ಆಹಾರಕ್ಕೆ ಅಭಾವ

ಟೋಕಿಯೋದಲ್ಲಿ ಥೈಲ್ಯಾಂಡ್ ರಾಯಭಾರಕಚೇರಿಯಲ್ಲಿದ್ದು ಈಗ ಬ್ಯಾಂಕಾಕ್‌ಗೆ ಬಂದಿರುವ ಮಿಲಿಟರಿ ಅಟಾಚ್‌ರವರು ಜಪಾನಿನವರು ಅನುಭವಿಸುತ್ತಿರುವ ಆಹಾರದ ಕಷ್ಟವನ್ನು ವಿವರಿಸುತ್ತ ಜಪಾನಿನಲ್ಲಿ ಹಾಲು ಸಕ್ಕರೆ ಮತ್ತು ಸಾಮಾನ್ಯ ತರಕಾರಿ ಮುಂತಾದ ಆಹಾರ ವಸ್ತುಗಳಿಗೂ ಅಭಾವವಾಗಿದೆ ಆಹಾರಪದಾರ್ಥಗಳಿಗಾಗಿ ಜಗಳಗಳೂ ಆಗುತ್ತಿವೆ ಎಂದು ಹೇಳಿದ್ದಾರೆ.

|| ಶ್ರೀ ಜಗದ್ಗುರು ದಾರುಕಾಚಾರ್ಯಾಯನಮಃ ||

ಸ್ವದೇಶಾಭಿಮಾನ

ಲೇ—ಮಲ್ಲಿಕಾರ್ಜುನಸ್ವಾಮಿ, ರಾಣಿಬೆನ್ನೂರು
ಮಳೀಮಠ, ಮುದೇನೂರು.

ಸ್ವದೇಶಾಭಿಮಾನವೆಂಬುದು ದೇಶ, ಜನ, ಜಾತಿ, ಸಮಯಾಚಾರಗಳು ಮೊದಲಾದ ಎಲ್ಲ ವಿಷಯಗಳಲ್ಲಿಯೂ, ದೃಢವಾಗಿರುವ ಅಪೇಕ್ಷೆಯಾಗಿದೆ ಇದು ಸರ್ವರಿಗೂ ಅವಶ್ಯವಾಗಿರತಕ್ಕ ಧರ್ಮವಾಗಿಯೂ, ವಿದ್ಯಾವೈಲಕ್ಷಣ್ಯಗಳುಳ್ಳವರಿಗೆ ಭೂಷಣವಾಗಿಯೂ, ಮತ್ತು ಪ್ರಯೋಜನಕರವಾಗಿಯೂ ಇದೆ ಇಂತಹ ಉತ್ತಮ ಗುಣದಿಂದಲೇ ಅನೇಕ ಅನ್ಯದೇಶಸ್ಥರ ಗೌರವ್ಯರಾಗಿ ವಿಶೇಷ ಐಹಿಕ ಪ್ರಯೋಜನಗಳನ್ನು ಪಡೆದಿರುತ್ತಾರೆ ಈ ಸ್ವದೇಶಾಭಿಮಾನವೆಂಬುದು ವಿವೇಕದಿಂದ ಸ್ವತಃ ಉಂಟಾಗತಕ್ಕ ಗುಣವಾದಾಗ್ಯೂ ಮನುಷ್ಯರಲ್ಲಿ ಪರಸ್ಪರ ಸಾಹಚರ್ಯಾದಿಗಳಿಂದಲೂ, ಪ್ರತಿ ಮನುಜನೂ ತನ್ನ ಶಕ್ತಿಗೆ ತಕ್ಕಂಥ ಪರದುಃಖನಿವೃತ್ತ್ಯುಪಯುಕ್ತಗಳಾದ ಕಾರ್ಯಗಳಲ್ಲಿ ಪ್ರವರ್ತಿಸುತ್ತಿರುವ ಅಭ್ಯಾಸದಿಂದಲೂ ಅದು ಸ್ಥಿರಪಡಬೇಕಾಗುತ್ತದೆ ಹೀಗೆ ಸಾಮಾನ್ಯ ವಿಶೇಷ ನ್ಯಾಯವುಳ್ಳ ಅಂತಹ ಅಭಿಮಾನವು ಚಾಲಿನೀನ್ಯಾಯದಿಂದ ಸಕಲರಿಗೂ ಸಂಗ್ರಾಹ್ಯವಾದರೆ ಆಗ ದೇಶವೆಲ್ಲವೂ ಸುಖಮಯವಾದ ಸ್ಥಿತಿಯಲ್ಲಿ ನೆಲೆಗೊಳ್ಳುವುದಕ್ಕೇನೂ ಸಂದೇಹವಿಲ್ಲ ಇವರಲ್ಲಿ ಉತ್ತಮ ಪಕ್ಷವನ್ನು ಕುರಿತು ವಿಚಾರಮಾಡಿದರೆ ಸ್ವದೇಶ, ಜನ ಮುಂತಾದ ವಿಷಯಗಳನ್ನು ಕಾಪಾಡುವುದಕ್ಕೋಸ್ಕರ ಆ ದೇಶದ ಶೂರನ ಪರಾಕ್ರಮವೂ, ಬುದ್ಧಿವಂತನ ಬುದ್ಧಿಶಕ್ತಿಯೂ, ಅರಸನ ಪ್ರಭಾವ ವೈಭವಗಳೂ, ಧನಿಕನ ಧನವೂ, ವಿದ್ವಾಂಸನ ವಿದ್ಯೆಯೂ, ಶಿಲ್ಪಿಯ ಶಿಲ್ಪನೈಪುಣ್ಯವೂ, ವರ್ತಕನ ವ್ಯಾಪಾರವೂ, ಇನ್ನೂ ಆಯಾ ವಿಷಯಗಳಲ್ಲಿ ಔತ್ಕೃಷ್ಟ್ಯವನ್ನು ಪಡೆದವರ ತತ್ವವಿಷಯಗಳೂ ವಿನಿಯೋಗಿಸಲ್ಪಡಬೇಕು ಇದೇ ಪ್ರಥಮ ಕರ್ತವ್ಯವು ಆದರೆ ಇವುಗಳನ್ನು ಪಡೆದವರು ತಂತಮ್ಮ ಪ್ರಯೋಜನಕ್ಕೆಮಾತ್ರ ಉಪಯೋಗಿಸಿಕೊಂಡು ಸಮಾನರಲ್ಲಿ ಉತ್ತಮರಾಗಬೇಕೆಂಬ ಅಪೇಕ್ಷೆಯುಳ್ಳವರನೇಕರುಂಟು ಅಂತಹವರ ಉತ್ತಮತ್ವವನ್ನು ಎಲ್ಲಿಯಾದರೂ ಕೆಲವರು ಪ್ರಶಂಸಿಸಿದಾಗ್ಯೂ ನಿರೂಪಕರಾದ ಅಭಿಜ್ಞರು ಅವರನ್ನು ಸ್ವಾರ್ಥಜೀವಿಗಳೆನ್ನದಿರಲಾರರು ಒಂದು ಕುಟುಂಬಕ್ಕೆ ಸೇರಿದವರಲ್ಲಿ ಐಕಮತ್ಯವೂ, ಪರಸ್ಪರ ಪ್ರೀತಿವಿಶ್ವಾಸಗಳೂ, ಸುಖದುಃಖಗಳಲ್ಲಿ ಭಾಗಭಾಕ್ತ್ವವೂ ಹೇಗೆ ಭೂಷಣಗಳಾಗಿರುತ್ತವೋ ಹಾಗೆಯೇ ದೇಶಜನರಿಗೂ ಪರಸ್ಪರ ಅನುರಾಗಾದಿಗಳು ಶ್ಲಾಘ್ಯಗುಣಗಳಾಗಿರುವವು ಆದುದರಿಂದ ಸ್ವದೇಶವಾಸಿಗಳಿಗೆ ಸಾಕ್ಷಾತ್ತಾಗಿಯೂ, ಪರಂಪರೆಯಿಂದಲೂ ಸುಖವುಂಟಾಗುವುದಕ್ಕೆ ಸಾಧಕಗಳಾದ ಅಂಶಗಳಲ್ಲಿ ಯಥಾಶಕ್ತಿ ಪ್ರವರ್ತಿಸುತ್ತಿರಬೇಕಲ್ಲದೆ ಔದಾಸೀನ್ಯವು ಎಷ್ಟುಮಾತ್ರವೂ ಯೋಗ್ಯವಲ್ಲವು ಈ ಗುಣವು ಸರ್ವದೇಶೀಯರಿಗೂ ಅವಶ್ಯಕವಾಗಿರುವಲ್ಲಿ ಒಂದು ದೇಶದ ಒಂದೇ ಜಾತಿಯವರಾದ ಜನಗಳಲ್ಲಿ ಕೇಳಬೇಕಾದುದೇನು ? ಇದಕ್ಕೊಂದು ದೃಷ್ಟಾಂತವಿರುವದು ಏನೆಂದರೆ—

ಪೂರ್ವಕಾಲದಲ್ಲಿ ಆಂಗ್ಲೇಯ ಸೇನಾಪತಿಯಾಗಿದ್ದ ಮೂರ್ ಎಂಬೊಬ್ಬ ಶೂರನು ಫ್ರೆಂಚ್ ಚಕ್ರವರ್ತಿಯಾಗಿದ್ದ ನೆಪೋಲಿಯನ್ ಬೋನಾಪಾರ್ಟಿನಿಂದ ಬೆನ್ನಟ್ಟಲ್ಪಟ್ಟು ತನ್ನ ಸೈನ್ಯದೊಡನೆ ಬಹುದೂರ ತಿರುಗಿ, ಕಡೆಗೆ ಬಹಳ ಇಕ್ಕಟ್ಟಾದ ಒಂದು ಸಮುದ್ರತೀರದಲ್ಲಿ ಮುಂದೆಹೋಗುವುದಕ್ಕಿಲ್ಲದೆ ನಿರೋಧವುಂಟಾದುದರಿಂದ ತನ್ನ ಆಜ್ಞೆಯಲ್ಲಿದ್ದ ಪರಿಮಿತವಾದ ಸೈನ್ಯವನ್ನು ತೆಗೆದುಕೊಂಡು ಪ್ರಬಲವಾದ ಫ್ರೆಂಚ್ ದಳದೊಡನೆ ಹೋರಾಡಿ ಅತಿ ಧೈರ್ಯದಿಂದ ಯುದ್ಧಮಾಡಿದನು ಶುದ್ಧವಾಗಿ ಪ್ರಾಣದಾಸೆಯನ್ನುಬಿಟ್ಟ ಆ ಇಂಗ್ಲೀಷ್ ಸೇನಾಪತಿಯ ಪರಾಕ್ರಮಸಾಹಸಗಳಿಂದ ಫ್ರೆಂಚ್‌ಸೈನ್ಯವು ಮುರಿದೋಡಿತು ಆ ಸಮಯದಲ್ಲಿ ಶತ್ರುಪಕ್ಷದಿಂದ ಒಂದು ಅಗ್ನ್ಯಸ್ತ್ರದ ಗುಂಡುಬಂದು ಆಂಗ್ಲಸೇನಾಪತಿಗೆ ತಗಲಿದ್ದರಿಂದ ಆತನು ನೆಲಕ್ಕುರುಳಿ ಮೂರ್ಛಿತನಾಗಿ ಅನಂತರ ಪ್ರಜ್ಞೆ ತಂದುಕೊಂಡು, ಆ ಕಾಲದಲ್ಲತಿದುಸ್ಸಹವಾದ ಮರಣವೇದನೆಯನ್ನು ಸಹ ಲಕ್ಷೀಕರಿಸದೆ, ತನ್ನನ್ನು ಒಂದು ಶಿಬಿಕೆಯಲ್ಲಿ ಮಲಗಿಸಿ ಹತ್ತಿರವಿದ್ದ ಒಂದು ದಿನ್ನೆಯ ಮೇಲಕ್ಕೆ ಒಯ್ಯಲ್ಪಟ್ಟು, ಅಲ್ಲಿಂದಲೇ ಯುದ್ಧವನ್ನು ನೋಡುತ್ತಾ ಕೆಲವು ಆಜ್ಞೆಗಳನ್ನು ಕೊಡುತ್ತ ಫ್ರೆಂಚ್ ಸೈನ್ಯವು ಮುರಿದೋಡುವ ಬಗೆಯನ್ನು ಕಂಡು ಸಂತಸಪಟ್ಟು ತನ್ನ ಪ್ರಾಣೋತ್ಕ್ರಮಣಕ್ಕೆ ಕ್ಷಣಮುಂಚಿತವಾಗಿ ತಾನು ಸ್ವದೇಶವಾದ ಇಂಗ್ಲೆಂಡಿಗಾಗಿಯೇ ಪ್ರಾಣಬಿಟ್ಟೆನೆಂದು ತನ್ನ ತಾಯಿಗೆ ತಿಳಿಸುವಂತೆ ಒಬ್ಬ ಸೈನಿಕನಿಗೆ ತಿಳಿಸಿ ಮೃತಪಟ್ಟನೆಂದು ಪ್ರಸಿದ್ಧವಾಗಿದೆ ಹೀಗೆಯೇ ಸ್ವದೇಶಾಭಿಮಾನವುಳ್ಳವರಾಗಿದ್ದವರ ಚರಿತ್ರೆಗಳು ಲೋಕಕ್ಕೆಲ್ಲಾ ಶ್ರೇಷ್ಠತಮಗಳಾದ ಉದಾಹರಣೆಗಳಾಗಿವೆ ಈಗಲೂ ತಮ್ಮ ವಿದ್ಯೆ ಧನ ಮುಂತಾದವುಗಳನ್ನು ಸ್ವದೇಶಕ್ಕೋಸುಗವೇ ವಿನಿಯೋಗಿಸುವ ಉತ್ತಮ ಗುಣಗಳುಳ್ಳವರನೇಕರಿರುವರು ಈ ಭರತಖಂಡದಲ್ಲಿಯೂ ಪೂರ್ವಕಾಲದಲ್ಲಿ ಲೋಕೋಪಕಾರಾರ್ಥವಾಗಿ ತಮ್ಮ ಯಾವಚ್ಛಕ್ತಿಯನ್ನೂ ವಿನಿಯೋಗಿಸಿದ ಘನಮಹಿಮರನೇಕರಿದ್ದರು ಈಗ ಅಂತಹ ಪುಣ್ಯಜೀವಿಗಳು ದೇಶಾಂತರಗಳಲ್ಲಿ ಕಾಣಬಂದರೂ ಈ ದೇಶದಲ್ಲಾದರೋ ಸ್ವಜನಾಭಿಮಾನವೆಂಬುದು ಬಹುದುರ್ಲಭವಾಗಿರುವದು ಪ್ರಾಯಶಃ ಸಮಸ್ತರೂ ಸ್ವಪ್ರಯೋಜನಪರರಾಗಿರುತ್ತಾರಲ್ಲದೆ ಸ್ವದೇಶದವರ ಕ್ಷೇಮಕ್ಕೋಸ್ಕರ ಶ್ರಮಪಡತಕ್ಕವರೊಬ್ಬರೂ ದೃಗ್ಗೋಚರವಾಗುವುದಿಲ್ಲ

ಈ ವಿಷಯದಲ್ಲಿ ಸದ್ದೃಷ್ಟಿಯುಳ್ಳ ವಿದ್ವಾಂಸರ ವಾದವೇನೆಂದರೆ —ಪುಣ್ಯವಶದಿಂದ ಮನುಷ್ಯನಿಗೆ ಲಭಿಸುವ ಐಶ್ವರ್ಯವು ಆತನ ಸೌಖ್ಯಕ್ಕೋಸ್ಕರವೇ ಎನ್ನಬಹುದಾದಾಗ್ಯೂ ಅದರ ಸೂಕ್ಷ್ಮಾಂಶವನ್ನು ವಿಚಾರಮಾಡಿದರೆ ಆ ಮನುಷ್ಯನೆಂತಹನೋ ಯಾವವಿಧವಾದ ಯೋಗ್ಯತೆಯುಳ್ಳವನೋ ಅವನ ಸೌಖ್ಯವೂ ಭೋಗವೂ ಯಾವ ವಿಧಗಳುಳ್ಳವಾಗಿಯೂ, ಯಾವ ಪ್ರಮಾಣಗಳುಳ್ಳವಾಗಿಯೂ ಇರುತ್ತವೋ ಅಷ್ಟುಮಾತ್ರಕ್ಕೆ ಸಾಧನವಾಗಿರುವಷ್ಟಕ್ಕೆ ಅದು ಅವನಿಗೋಸ್ಕರವೇ ಎಂದೆನಿಸಬಹುದು ಹಾಗಿಲ್ಲದೆ ಅದಕ್ಕಿಂತ ಅಧಿಕವಾಗಿರುವಪಕ್ಷದಲ್ಲಿ ಅಂತಹ ಸಂಪತ್ತನ್ನು ಪರೋಪಕಾರಾರ್ಥವಾಗಿ ಉಪಯೋಗಿಸುವದೇ ಅದಕ್ಕೆ ಪ್ರಯೋಜನವಾಗಿರುತ್ತದೆ ನಮ್ಮ ದೇಶೀಯರು ಪ್ರಾಯಶಃ ಸ್ವಕೀಯ ಜನಗಳ ಸಾಧನಲೋಪಗಳನ್ನು ತಿಳಿದು ಅವರ ಅಭಿವೃದ್ಧಿಗೋಸುಗ ತಮಗಿರುವ ನಾನಾವಿಧ ಉತ್ಪತ್ತಿಗಳನ್ನು ಉಚಿತವಾಗಿ ವಿನಿಯೋಗಿಸದೆ ಉದಾಸೀನರಾಗಿರುವುದರಿಂದ ಸಾಮಾನ್ಯವಾಗಿ ನಮ್ಮವರಲ್ಲಿ ಬಡಸ್ಥಿತಿಯೇ ನೆಲೆಗೊಂಡಿದೆಯೆಂದು ಹೇಳಬೇಕು ತತ್ರಾಪಿ ನಮ್ಮ ದೇಶವನ್ನಾಳುವ ಅನ್ಯದೇಶೀಯರು ಸ್ವಜನಗಳಲ್ಲಿಯೂ ಸ್ವಜನಪ್ರಾಯರಾದ ಜನಗಳಲ್ಲಿಯೂ ಉಂಟಾಗಿರುವ ಅಭಿಮಾನವೇ ಅವರ ಉನ್ನತಿಗೆ ಕಾರಣವಾಗಿರುವ ಬಗೆಯನ್ನು ನಮ್ಮವರು ಅನವರತವೂ ನೋಡುತ್ತಿದ್ದಾಗ್ಯೂ ಅವರಂತೆ ಸ್ವದೇಶಾಭಿಮಾನವನ್ನು ಪಡೆಯದಿರುವುದು ಮಹಾದೌರ್ಭಾಗ್ಯಫಲವೇ ಎಂದು ಹೇಳಬೇಕು ಇನ್ನು ಮೇಲಾದರೂ ಸ್ವಜನರ ಕರುಳಲ್ಲಿ ಕತ್ತರಿಯನ್ನಾಡಿಸದೆ ತಮ್ಮ ವಕ್ರವೂ ಸಂಕುಚಿತವೂ ಆದ ದುರ್ಗುಣಗಳನ್ನು ತಿದ್ದಿಕೊಂಡು ಯುಕ್ತವಾಗಿ ವರ್ತಿಸದೆ ಮೃಗಪಕ್ಷಿ ಸಾಧಾರಣವಾದ ವೃತ್ತಿಯಲ್ಲಿರುತ್ತಿದ್ದರೆ ಕ್ರಮೇಣ ಈ ದೇಶವು ಅತ್ಯಂತ ದುಃಸ್ಥಿತಿಗೆ ಬರುವದೆಂಬುದಕ್ಕೆ ಸಂದೇಹವೇನೂ ಇಲ್ಲ

ಆದಪ್ರಯುಕ್ತ ಪ್ರಬಲ ದುರ್ಬಲರೆಂಬ ಎರಡು ಬಗೆಯಾಗಿರುವ ಪ್ರಜೆಗಳಲ್ಲಿ ಪ್ರಬಲರಾದವರು ದುರ್ಬಲರಿಗೆ ಸಾಧ್ಯಗಳಾದ ಸರ್ವಾಂಗಗಳಿಂದಲೂ ಬಲವನ್ನು ಕಲ್ಪಿಸಿ ಯೋಗ್ಯವಾಗಿಯೂ ಸ್ವತಂತ್ರವಾಗಿಯೂ ಜೀವಿಸುವುದಕ್ಕೆ ಮಾರ್ಗವನ್ನುಂಟುಮಾಡಬೇಕು ಇದಕ್ಕೆ ಪ್ರಥಮ ಕರ್ತವ್ಯವೇನೆಂದರೆ, ಶಿಲ್ಪ, ಕೃಷಿ ವಾಣಿಜ್ಯಗಳೆಂಬ ಮೂರು ಪ್ರಧಾನ ವೃತ್ತಿಗಳು ಕಾಲದೇಶೋಚಿತಗಳಾದ ವೈಲಕ್ಷಣ್ಯವೂ, ಅಭಿವೃದ್ಧಿಯೂ ಇಲ್ಲದೆ ಕೇವಲ ಸಾಮಾನ್ಯಸ್ಥಿತಿಯಲ್ಲಿರುವುದರಿಂದ ಅವು ಒಬ್ಬನಿಗೆ ಅನ್ನ ವಸ್ತ್ರವನ್ನು ಹುಟ್ಟಿಸುವುದಕ್ಕೆ ಸಹ ಅಸಮರ್ಥಗಳಾಗಿರುತ್ತವೆ ಆದದರಿಂದ ಈ ದೇಶದಲ್ಲಿ ಪ್ರಸಿದ್ಧಗಳಾದ ಸ್ಥಳಗಳಲ್ಲಿ ಧನವಂತರೂ, ಇತರ ಸಾಧನ ಶಕ್ತಿಯುಳ್ಳವರೂ ಜನಗಳಿಗೆ ನಾನಾ ವಿಧ ವೃತ್ತಿಗಳನ್ನು ಕಲ್ಪಿಸುವುದಕ್ಕಾಗಿ ಒಂದೊಂದು ಕೈಗಾರಿಕೆ ಶಾಲೆಯನ್ನು ಕಲ್ಪಿಸಿ, ಆ ಕೆಲಸಗಳನ್ನು ಚೆನ್ನಾಗಿಯೂ, ಶ್ಲಾಘ್ಯವಾಗಿಯೂ ಕಲಿತುಕೊಳ್ಳುವಂತೆ ಜನರನ್ನು ಪ್ರೇರಿಸಿ, ಮತ್ತು ಆ ವಿಷ ದಲ್ಲಿ ಅವರಿಗೆ ಸಂಪೂರ್ಣವಾದ ಅಭಿರುಚಿ ಹುಟ್ಟುವ ವರೆಗೆ ತಕ್ಕ ಸೌಲಭ್ಯವನ್ನು ಕಲ್ಪಿಸಬೇಕು ಹೀ ಕೃಷಿ, ಶಿಲ್ಪತಂತ್ರಗಳಿಗೆ ಸಂಬಂಧಿಸಿದ ವಿವಿಧವಾದ ಕ ಸಗಳನ್ನು ಸಾಂಗವಾಗಿ ಕಲಿತುಕೊಂಡು ನಡೆಸುತ್ತ ಒಂ ಈ ದೇಶಕ್ಕೆ ನಿರತಿಶಯವಾದ ಸೌಭಾಗ್ಯವುಂಟಾಗುವದ ಉದಾಹರಣ ಈ ಲೇಖನದ ಅಭಿಪ್ರಾಯವು ಶಕ್ತರಾದವ ಮನಸ್ಸಿನಲ್ಲಿ ಮುದ್ರಿತವಾಗುವಂತೆ ಮಾಡಬೇಕೆಂ ಪರಶಿವನನ್ನು ಪ್ರಾರ್ಥಿಸುವೆನು

ಹನುಮಸಾಗರ

ಇಲ್ಲಿಯ ಶ್ರೀ ಕರಿಸಿದ್ದೇಶ್ವರ ಜನರಲ್ ಲೈಬ್ರರಿಯ ನ ೨ನೇ ವರ್ಷಿಕೋತ್ಸವವು ತಾ|| ೧೩-೮-೪೧ ರ ವೇ|| ಸಿ ರಾಚೋಟಯ್ಯನವರು ಸಂಪಾದಕರು "ದೇ ನ್‌ಪ್ರಭಾತ ರಾಯಚೂರ ಇವರ ಅಧ್ಯಕ್ಷತೆಯ ವಿಜೃಂಭಣೆಯಿಂದ ನೆರವೇರಿತು ತಾ|| ೧೪-೮-೪೧ ರ ನಿಜಾಮ ಪ್ರಾಂತಿಕ ವೀರಶೈವ ಪರಿಷತ್ ಗ್ರಾಮಸಮಿ ರನ್ನು ಸ್ಥಾಪಿಸಲಾಯಿತು ಈ ಮಹಾಸಭೆಯ ಇಲ್ಲಿಯ ಕಸ್ಟಮ್ ಅಬಕಾರಿ, ಪೋಲಿಸ್, ಶ ವ ಮೊದಲಾದ ಸರಕಾರಿ ಅಧಿಕಾರಿಗಳೂ ಸ್ವಮತ ಪರಮ ತರ ಪ್ರಮುಖರೂ ಆಜು ಬಾಜು ಗ್ರಾಮದ ಪ್ರಮು ಪಟ್ಟಣವರೂ ಭಾಗವಹಿಸಿದ್ದರು ಈ ವಾಚನಾ ಯದ ಕಾರ್ಯಕಾರಿ ಮಂಡಳಿಯವರಲ್ಲಿ ಇದಕ್ಕಿಂತಲ ಹೆಚ್ಚಿನ ಪ್ರೋತ್ಸಾಹವನ್ನು ಶ್ರೀಮಜ್ಜಗದ್ಗುರು ಪಂಚಾ ಚಾರ್ಯರು ಅನುಗ್ರಹಿಸಲೆಂದು ಅನನ್ಯ ಭಾವದಿಂ ಪ್ರಾರ್ಥಿಸುತ್ತೇನೆ

ಗುರುಕಿಂಕರ

ಶ್ರೀ ರಂಭಾಪುರೀ ಜಗದ್ಗುರುಗಳವರ ಆಗಮನ
ಸಿರಾ

ಶ್ರೀರಂಭಾಪುರೀ ಜಗದ್ಗುರುಗಳವರು ತಾ| ೨೦ ೪೧ ನೆಯ ದಿವಸ ತುಮಕೂರು ಡಿ|| ಸಿರಾ ಟವನ್ನಿಗೆ ಬಿಜಯಂಗೈದರು ತಾಲ್ಲೂಕು ಅಮಲ್ದಾರರ ಪೋಲೀಸ್ ಇನ್‌ಸ್ಪೆಕ್ಟರವರು ಶಿಬ್ಬಂದಿ ಸಮೇ ರಾಗಿ ಆಗಮಿಸಿ ಉತ್ಸವವನ್ನು ನೆರವೇರಿಸಿದರು ಉತ್ಸವವು ತಾಲೂಕು ಕಚೇರಿ ಮುಂಭಾಗದಿಂದ ಹೊರಟು ಜುಮ್ಮಾಮಸಿದಿ ರೋಡು ಮಾರ್ಗವಾಗಿ ಮೇಗಳಪೇಟೆಯಲ್ಲಿರುವ ಕೋಡಿಗುಣೆ ಮಠದ ಸಂಘ ಅಂ ಎಸ್ ಕೆ ಚನ್ನಬಸವಯ್ಯನವರ ಗೃಹಕ್ಕೆ ಬಂದು ತಲ್ಪಿತು ಶ್ರೀ ಜಗದ್ಗುರುಗಳವರು ಇಲ್ಲಿ ೧೦ ದಿವಸಗಳವರೆಗೆ ಇದ್ದ ಭಕ್ತಾದಿಗಳಿಂದ ಕಾಣಿಕೆಯನ್ನು ಸ್ವೀಕರಿಸಿ ಬುಕ್ಕಾಪಟ್ಟಣಕ್ಕೆ ದಯಮಾಡಿಸಿದರು ಅಲ್ಲಿ ೬ ದಿವಸಗಳವರೆಗೆ ಇದ್ದು ಭಕ್ತಾದಿಗಳಿಂದ ಕಾಣಿಕಾದಿ ಸೇವೆಯನ್ನು ಸ್ವೀಕರಿಸಿ ಮುಂದೆ ಅರಸೀಕೆರೆ ತಾ|| ಜಯಚಾಮರಾಜಪುರಕ್ಕೆ ದಯಮಾಡಿಸಿದರು ಶ್ರೀಜಗದ್ಗುರು ಮಹಾಪೀಠದ ಕಟ್ಟಡಕ್ಕಾಗಿ ಮುಖ್ಯ ಮುಖ್ಯ ನಗರಗಳಿಗೆ ಪ್ರೈವೇಟಾಗಿ ಸಂಚಾರವನ್ನಿಟ್ಟುಕೊಂಡಿರುವರು ಸರ್ವರೂ ಜಗದಾಚಾರ್ಯರಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ಸೇವೆಮಾಡುತ್ತಿರುವದು ಸಂತೋಷಕರವಾಗಿದೆ

ಎಸ್ ಕೆ ಚನ್ನಬಸವಯ್ಯ ಸರಾಫ್ ಸಿರಾ

ಜರ್ಮನರ ಹಸ್ತಗತವಾದ ರಷ್ಯದ ಯುದ್ಧ ಸಾಮಾನುಗಳು

ಒಡೆಸ್ಸಾ ಬಂದರಿನ ಮುತ್ತಿಗೆಯಲ್ಲಿ ಜರ್ಮನರು 10 ಸಾವಿರ ರಷ್ಯನರು ಸೆರೆ ಸಿಕ್ಕಿದ್ದಲ್ಲದೆ 84 ಟ್ಯಾಂಕುಗಳು ೩೫೦ ಬಂದೂಕುಗಳು ದೊರೆತವೆಂದೂ, ನಿಕೊಲಾಯೆವ್ ಎಂಬಲ್ಲಿ 35000 ಟನ್ ತೂಕದ ಒಂದು ಸಂಗ್ರಾಮ ನೌಕೆ 1000 ಟನ್ ತೂಕದ ಒಂದು ಕ್ರೂಯಿಜರ್ ೪ ಡಿಸ್ಟ್ರಾಯರುಗಳು ಮತ್ತು ಎರಡು ಸಬ್‌ಮೆರೀನ್‌ಗಳು ದೊರೆತವೆಂದೂ ಜರ್ಮನರು ಪ್ರಕಟಿಸಿದ್ದಾರೆ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ …ವಾದ ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು …ವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯ…ದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಅವರಿ…ರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯ…ನ್ನ ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು …ಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ …ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇವನ್ನು …ರವಾಗುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ…ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯತಕ್ಕ ವಿಷಯಗಳ…ಗವಾಗಿ ತೋರಿಸಲ್ಪಟ್ಟಿದೆ ಆದುದರಿಂದ ಸಮಸ್ತ ಪುಸ್ತಕ…ಶಿಷ್ಯರನ್ನು ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು …ದ್ದಂತೆ ವಿವರವನ್ನೆಲ್ಲಾ ಬರೆದು [illegible]ವಾಗಿ …ದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ …ನೂ ಕಠಿಣಂಥ ಕಾಗದಗಳನ್ನು ಉಪಯೋಗಿಸಿರುವುದಲ್ಲದೆ ಸುಂದರ…ದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

…ಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ …ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು …ಸುಲಭಕ್ರಯದಲ್ಲಿ ದೊರೆಯುವವು

ಔಷಧ ಹೆಸರು	ತೊಲೆ	ಮೂಲ್ಯ
…ರ್ಣಮಕರಧ್ವಜ	೧	೩೦—೦—೦
…ರ್ಣಚಂದ್ರೋದಯ	೧	೧೦—೦—೦
,, ೨ನೇ ನಂಬರ್	೧	೮—೦—೦
…ಂಧೂರ	೧	೨—೦—೦
…ಸಿಂಧೂರ	೧	೪—೦—೦
…ಸಿಂಧೂರ	೧	೪—೦—೦
…ಸಿಂಧೂರ	೧	೪—೦—೦
…ವಂಗ	೧	೩—೦—೦
…ಂಗ	೧	೧—೦—೦
ಭಸ್ಮಗಳು		
…ರ್ಣಭಸ್ಮ	೧	೪೦—೦—೦
…ಕಭಸ್ಮ	೧	೪—೦—೦
…ತ್ರಭಸ್ಮ	೧	೦—೮—೦
…ೋಹಭಸ್ಮ	೧	೦—೧೨—೦
…ಗಭಸ್ಮ	೧	೦—೮—೦
…ತಭಸ್ಮ	೧	೦—೮—೦
…ಕ್ತಿಭಸ್ಮ	೧	೪೦—೦—೦
…ಕಭಸ್ಮ	೧	೩—೦—೦
…ಟಿಕಭಸ್ಮ	೧	೦—೮—೦
…ನಭಸ್ಮ	೧	೦—೮—೦
…ಭಸ್ಮ	೧	೦—೮—೦
…ಗೂರಭಸ್ಮ	೧	೦—೮—೦
…ರ್ಣಮಾಕ್ಷಿಕಭಸ್ಮ	೧	೦—೧೨—೦
…ತ್ತಿಭಸ್ಮ	೧	೪೦—೦—೦
…ಲಿಭಸ್ಮ	೧	೦—೮—೦
…ಚಿಪ್ಪಿನ ಭಸ್ಮ	೧	೦—೮—೦
…ಂಗದ ಕೋಡಿನ ಭಸ್ಮ	೧	೦—೮—೦
…ದಂತಿಹರತಾಲಭಸ್ಮ	೧	೦—೮—೦
…ರಿ (೧ನೇ ನಂಬರ್)	೧	೫೦—೦—೦
…ಜಿತ ಸೂರ್ಯಪುಟಿ	೧	೧—೦—೦
…ಜಿತ ಅಗ್ನಿಪುಟಿ	೧	೦—೮—೦

…ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ …, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ …ಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
…ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು.ಪಿ

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಸುಂದರವಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿ ನಾಮಾವಳಿ ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ** ವಿ ಪಿ ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವದಲ್ಲದೆ. ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನ ಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ **ಬೆಲೆ ೮ ರೂಪಾಯಿ.** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮೀಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ದಧೀಚಿ ವ್ಯಾಸ ಸಾನಂದ ದುರ್ವಾಸ ಮುನಿಋಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೨—೬
ಸದ್ಯ। ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೨ ಬೆಲೆ	೦—೨—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೨೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿದ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦— —೯
ಶ್ರೀಮದ್ರಂಭಾಪುರೀ ಪೀಠಾಧೀಶ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೭—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦— —೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	— —೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ ಮೈಸೂರು**

ಡಾಕ್ಟರ್ ಜಿ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ ಕಂಡ ಹಿಡಿಯಲ್ಪಟ್ಟ ಸಾವಿರಾರುಮಂದಿಗಳು ಇದನ್ನ ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರ ಗಳನ್ನು ಕೊಟ್ಟಿದ್ದಾ ರು ಪ್ರಸಿದ್ಧವಾದ ನಶ್ಯದ ಪುಡಿಯ ಸ್ಪಷ್ಟವಾಗುವ ಗಳು ಯಾವವ ರೆ —ಪೀನಸಿ, ತಲೆನೋವು, ತಲ ಲ್ಲಿಯ ರೋಗಗ ಕಣ್ಣುಗಳಲ್ಲಿ ಉಂಟಾ ಗತಕ ಸವ ವ್ಯಾಧಿಗಳು ಜಲದೋಷ ಮುಂತಾ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಗಳ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಸಹ ಹೆಚ್ಚು ಮಾಡುತ್ತದೆ ಮೂರುಬೆಳ್ಳಿನ ಸಾಧಾ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂ ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾ ವುದ ಇವನ್ನು ಅನೇಕಪ್ರಭುಗಳು ಉಪಯೋಗಿ ತ್ತಾರೆ ಮಾದರಿ ಪೀಸ ಫ್ರೀ ಡಬ್ಬಿ ಒಂದಕ್ಕೆ ೪ ಆಣೆ [illegible] ೩ ೮ ೦ ವಿ.ಪಿ [illegible]

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[1] ಪೋ. ಬಾ. ೫೧೦, ಮದರಾ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆ
ಶ್ರೀಕರಭಾಷ್ಯಂ (ಚತುಸ್ಸೂತ್ರಿ)	೧
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧
ವೀರಶೈವರತ್ನ (೫ನೆಯ ಆವೃತ್ತಿ [illegible])	೧।
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾನುವಾದ)	೧
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨
ವೀರಶೈವಸಿದ್ಧಾಂತಸುಧಾಕರ	೨
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೩೩ ಪುಟ)	೮
A brief life-sketch of Pandit Sri Kashinatha Shastriji (*English*)	4 A
The Philosophical Aspect of Virasaivism (*English*)	8 A
Speeches by Pandit Shri Kashinatha Shastriji (*English*)	12 A
लिंगधारणचन्द्रिका (संस्कृत)	३
वीरशैवरत्न (मराठी)	१
महानारायणोपनिषत् (वीरशैवभाष्य-संस्कृत)	१
पुरुषसूक्तम् (वीरशैवप्राचीनभाष्योपेतम्)	४ आ
नन्दिकेश्वरकारिका (संस्कृत)	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿ ೫ ರೂ ಗಳಿಗೆ ಮೇಲ್ಪಟ್ಟ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿತ [illegible]

GISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಶಿವಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧ನೇ ಸೆಪ್ಟೆಂಬರ್ ೧೯೪೧ [ಸಂಚಿಕೆ ೧೮

ಅಮೆರಿಕೆಯ ಮಹಿಳೆಯರಿಗೆ ಬ್ರಿಟಿಷ್ ಮಹಾರಾಜ್ಞಿಯವರ ಸಂದೇಶ

ಕಳೆದವಾರ ಚಕ್ರವರ್ತಿನಿಯವರು ಆಕಾಶವಾಣಿಯ ಮೂಲಕ ಮಾತನಾಡುತ್ತ ಅಮೆರಿಕೆಯ ಮಹಿಳೆಯರು ಈವರೆಗೆ ಇಂಗ್ಲೆಂಡಿನಲ್ಲಿ ಕಷ್ಟಕ್ಕೆ ಸಿಕ್ಕಿರುವ ಪ್ರಜೆಗಳಿಗೆ ಮಾಡುತ್ತ ಬಂದಿರುವ ಮಹೋಪಕಾರಗಳಿಗಾಗಿ ಅವರನ್ನು ವಂದಿಸಿ, ಬಳಿಕ ತಮ್ಮ ದೇಶದಲ್ಲಿ ಶತ್ರುಗಳ ದಾಳಿಯಿಂದ ನಷ್ಟವಾಗಿರುವ ವಿಷಯವನ್ನು ಈ ಕೆಳಗಿನಂತೆ ವಿವರಿಸಿದರು

ಕೆಲವು ತಿಂಗಳುಗಳಿಂದ ನಮ್ಮ ಪ್ರಜೆಗಳು ಅಪಾರವಾದ ಕಷ್ಟಗಳನ್ನು ಸಹಿಸಿಕೊಳ್ಳುತ್ತಾ ಬಂದಿರುತ್ತಾರೆ ನಾವು ಅವರ ಬಳಿಗೆ ಹೋದಾಗಲೆಲ್ಲಾ ಅವರಲ್ಲಿ ಕಾಣುವ ಅಚಲವಾದ ಸ್ಥೈರ್ಯವನ್ನು ನೋಡಿ ಆಶ್ಚರ್ಯಪಡುವವರಾಗಿದ್ದೇವೆ ಅನೇಕ ಪಟ್ಟಣಗಳಲ್ಲಿ ಅವರ ಮನೆಮಠಗಳು ಮುರಿದುಬಿದ್ದಿವೆ ಎಷ್ಟೋ ಜನ ಸ್ತ್ರೀಯರೂ ಮಕ್ಕಳೂ ಹತರಾದರು, ಆಸ್ಪತ್ರೆಗಳಲ್ಲಿ ಗಾಯಪಟ್ಟು ಬಿದ್ದಿದ್ದವರಿಗೂ ಕೂಡ ಶತ್ರುಗಳ ಕಾಟ ತಪ್ಪಲಿಲ್ಲ ಆದರೆ ಈ ಕಷ್ಟದೆಸೆಯು ನಮ್ಮ ಹೃದಯಾತ್ಮಗಳನ್ನು ಇನ್ನೂ ಸ್ಥಿರಗೊಳಿಸಿರುತ್ತದೆಯೇ ಹೊರತು ಮತ್ತೆ ಬೇರೆಯಲ್ಲ ನಾವು ಹೋದ ಕಡೆಗಳಲ್ಲೆಲ್ಲಾ ಜನರು ಹಸನ್ಮುಖಿಗಳಾಗಿರುವುದನ್ನು ಕಾಣುತ್ತಿದ್ದೇವೆ ಮಾರ್ಗವು ಕಠಿನವೂ ಶ್ರಮಭರಿತವೂ ಆಗಿದ್ದರೂ ಕೂಡ ನಾವು ಧರ್ಮವನ್ನೂ ನಿಜಸಮಾಧಾನವನ್ನೂ ಸಂಸ್ಥಾಪನೆ ಮಾಡುವುದಕ್ಕಾಗಿ ಹೋರಾಡುತ್ತಿದ್ದೇವೆಂದು ಅವರು ತಿಳಿದುಕೊಂಡಿದ್ದಾರೆ ಈ ಕಾಲದಲ್ಲಿ ಅಮೆರಿಕದವರ ಉದಾರಚಿತ್ತದಿಂದ ಹೊರಸೂಸುತ್ತಿರುವ ಸಹಾನುಭೂತಿಯೂ ಆದರಾತಿಶಯವೂ ಈ ನಮ್ಮ ದ್ವೀಪಗಳಲ್ಲಿ ಇದ್ದುಕೊಂಡು ಹೋರಾಡುತ್ತಿರುವವರೆಲ್ಲರ ಹೃದಯಾತ್ಮಗಳನ್ನು ಕೃತಜ್ಞತಾಭಾವದಿಂದ ತುಂಬಿ ತುಳುಕಿಸುತ್ತಿವೆ. ನಾವು ಅಪಾರವಾದ ತೊಂದರೆಯಲ್ಲಿ ಬಿದ್ದಿದ್ದಾಗ ಮನೆಮಠಗಳಿಲ್ಲದವರಿಗೆ ನೀವು ಬಟ್ಟೆಯನ್ನು ಒದಗಿಸಿಕೊಟ್ಟಿರಿ, ಹಸಿದವರಿಗೆ ಆಹಾರಕೊಟ್ಟಿರಿ, ಬಹಳವಾಗಿ ಮನನೊಂದು ಕುಗ್ಗಿಹೋದವರನ್ನು ಸಂತೈಸಿದಿರಿ ಆಹಾರವನ್ನೂ ರೋಗಿಗಳನ್ನೂ ಸಾಗಿಸುವ ಮೋಟಾರ್ ಗಾಡಿಗಳನೇಕವು ಅಪಾರವಾದ ವೈದ್ಯೋಪಕರಣಗಳ ಸಹಿತವಾಗಿ ಸಂಯುಕ್ತಸಂಸ್ಥಾನಗಳಿಂದ ನಮಗೆ ಎಡೆಬಿಡದೆ ಸಾಗಿಬಂದಿವೆ ಹೀಗೆಲ್ಲಾ ತಾವು ಮಾಡುತ್ತಾ ಬಂದಿರುವ ಉಪಕಾರಗಳನ್ನು ಯಾವ ಕಾಲಕ್ಕೂ ಮರೆಯುವುದಸಾಧ್ಯವು

ನಮ್ಮ ಕೃತಜ್ಞತೆಯು ವಾಚಾತೀತವಾದುದು, ಆದರೂ ಅದು ಅಗಾಧವೂ ಯಥಾರ್ಥವೂ ಆಗಿದೆಯೆಂಬುದನ್ನು ತಾವು ನಂಬಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇವೆ. ಇಲ್ಲಿ ನಾವು ಕಾಣುತ್ತಿರುವವುಗಳನ್ನು ತಾವೂ ಪ್ರತ್ಯಕ್ಷವಾಗಿ ಕಂಡ ಹೊರತು ಬ್ರಿಟನ್ನಿನ ಸ್ತ್ರೀಪುರುಷರೆಲ್ಲರಿಗೆ ತಾವು ತೋರುತ್ತಿರುವ ಆದರಾತಿಶಯದ ಹಿರಿಮೆಯೇನೆಂಬುದು ತಮಗೆ ತಿಳಿಯಲಾರದು”

ಅನಂತರ ಚಕ್ರವರ್ತಿನಿಯವರು ಅಮೆರಿಕದವರಿಗೆ ಇಂಗ್ಲೆಂಡ್ ದೇಶದ ಮಹಿಳೆಯರು ಈ ಯುದ್ಧಕಾಲದಲ್ಲಿ ತಮ್ಮ ದೇಶದ ಮೇಲೆ ಬಿದ್ದಿರುವ ಮಹಾಭಾರವನ್ನು ವಹಿಸಲು ಎಷ್ಟರಮಟ್ಟಿಗೆ ಗುಂಪುಗುಂಪಾಗಿ ಬಂದು ನೆರವಾಗುತ್ತಿದ್ದರೆಂಬುದನ್ನು ವರ್ಣಿಸುತ್ತಾ ಹೀಗೆ ಹೇಳಿದರು —

“ಅವರು ನಾನಾ ಕಾರ್ಯಗಳಲ್ಲಿ ಮಗ್ನರಾಗಿರುವುದನ್ನು ನಾವು ಕಂಡಿದ್ದೇವೆ ಅದರಲ್ಲಿ ಸಾವಿರಾರು ಜನರು ನೌಕಾಬಲ ಪದಾತಿದಳ, ವಿಮಾನದಳಗಳವರೊಂದಿಗೆ ಸೇರಿ ಬಗೆಬಗೆಯ ಸೇವೆ ಮಾಡುವುದರಲ್ಲಿಯೂ, ಬಹಳ ಭಾರವಾದ ಮೋಟಾರ್ ಗಾಡಿಗಳನ್ನು ನಡೆಸುವುದರಲ್ಲಿಯೂ, ಅಡಿಗೆಮಾಡುವುದರಲ್ಲಿಯೂ, ಕಚೇರಿಗಳಲ್ಲಿ ಕೆಲಸಮಾಡುವುದರಲ್ಲಿಯೂ ನಿರತರಾಗಿರುತ್ತಾರೆ ಅವರು ಎಲ್ಲಾ ಸ್ಥಿತಿಗತಿಗಳಲ್ಲಿ ಧೈರ್ಯೋತ್ಸಾಹಗಳಿಂದ ಕೆಲಸ ಮಾಡುತ್ತಿದ್ದಾರೆ ಅನೇಕರು ಹೊಲಗಳಲ್ಲಿ ಕೆಲಸಮಾಡುತ್ತಿದ್ದಾರೆ ಪುರುಷರು ಮಾಡುವ ಇನ್ನೂ ಅನೇಕ ಕಾರ್ಯಗಳನ್ನು ಮಹಿಳೆಯರೇ ಮಾಡುತ್ತಿದ್ದಾರೆ ಬೇರೆ ಕೆಲವರು ಆಕಾಶಾಕ್ರಮಣದ ರಕ್ಷಣೆಯ ಪಾಲಕರು, ಇಲ್ಲವೆ ಚಿಕಿತ್ಸೆಯ ಮೋಟಾರು ಗಾಡಿಗಳನ್ನು ನಡೆಸುವವರು ಆಗಿದ್ದಾರೆ ಬೇರೆ ಸಾವಿರಾರು ಮಂದಿ ವೀರರಮಣಿಯರು ರಾತ್ರಿಯ ದಾಳಿಯಲ್ಲಿ ಸಂಭವಿಸುವ ಭಯಂಕರವಾದ ಹಾವಳಿಯನ್ನು ತಾಳ್ಮೆಯಿಂದಲೂ ಸಹನದಿಂದಲೂ ಇದಿರುಗೊಂಡು ತಮ್ಮ ಪಾಲನೆ ರಕ್ಷಣಗಳಲ್ಲಿ ಇರುವ ಜನರಿಗೆ ಧೈರ್ಯಸ್ಥೈರ್ಯಗಳನ್ನು ಕೊಡುವರು ಅವರ ಧೈರ್ಯವು ಅದ್ಭುತವಾದುದು, ಅವರ ತಾಳ್ಮೆಯು ಆಶ್ಚರ್ಯಕರವಾದುದು”

ನರ್ಸುಗಳನ್ನು ನಾವು ವಿಶೇಷವಾದ ರೀತಿಯಲ್ಲಿ ಕೊಂಡಾಡಬೇಕಾಗಿದೆ ಅವರು ಅದ್ಭುತ ಮಹಿಳೆಯರು ಅವರ ಸೇವೆಯೂ ಧೀರಕೃತ್ಯಗಳೂ ಚಿರಸ್ಮರಣೀಯವಾದುವು ಸಿಡಿಗುಂಡುಗಳು ಬಿದ್ದು ಆಸ್ಪತ್ರೆಯು ಹತ್ತಿಕೊಂಡು ಭಯಂಕರವಾಗಿ ಉರಿಯುವಾಗಲೂ ಅವರು ದಿಗಿಲು ಬೀಳದೆ, ಅನೇಕ ವೇಳೆ ತಮಗೆ ಗಾಯಗಳಾಗಿದ್ದರೂ ತಮ್ಮ ವಶದಲ್ಲಿರುವ ರೋಗಿಗಳ ಕ್ಷೇಮವನ್ನು ನೋಡುವರೇ ಹೊರತು ತಮಗಾಗಿ ಎಂದಿಗೂ ಚಿಂತಿಸುವುದಿಲ್ಲ

“ಬ್ರಿಟನ್ನಿನಲ್ಲಿರುವ ನಮ್ಮ ಮಹಿಳೆಯರು ಈಗ ಸಲ್ಲಿಸುತ್ತಿರುವ ವಿವಿಧವಾದ ಸೇವೆಯನ್ನು ಎಷ್ಟು ವರ್ಣಿಸಿದರೂ ತೀರದಾಗಿದೆ ಅವರು ಹಗಲಲ್ಲಿ ಇಲ್ಲವೆ ರಾತ್ರಿಯಲ್ಲಿ ಮಾಡುವ ಸೇವಾಕಾರ್ಯಗಳು ಯಾವ ಬಗೆಯಲ್ಲಿದ್ದರೂ ನೀವು ಅವರ ವಿಷಯದಲ್ಲಿ ಹಿತಚಿಂತನೆಮಾಡುತ್ತಿದ್ದೀರೆಂಬುದು ವಾಸ್ತವವಾಗಿ ಅವರ ಕಣ್ಣುಮುಂದೆ ತೋರಿಬರುತ್ತಿರುವುದರಿಂದ ಅವರು ಉತ್ಸಾಹಭರಿತರಾಗಿದ್ದಾರೆ ಎಂದು ತಿಳಿಸಲು ಅಪೇಕ್ಷಿಸುತ್ತೇನೆ”

“ನಿಮ್ಮ ಸ್ವಾರ್ಥತ್ಯಾಗ ಬುದ್ಧಿಯನ್ನು ನಾವು ಎಂದೆಂದಿಗೂ ಮರೆಯುವುದಿಲ್ಲ ಬಲೋದ್ವೃಂಥವನ್ನೂ ಹಿಂಸಾಕೃತ್ಯವನ್ನೂ ನಾವು ಎಷ್ಟರಮಟ್ಟಿಗೆ ದ್ವೇಷಿಸುತ್ತೇವೋ ತಾವೂ ಅಷ್ಟರ ಮಟ್ಟಿಗೆ ದ್ವೇಷಿಸುವವರಾಗಿರುತ್ತೀರಿ ಹೋರಾಟವು ಎಷ್ಟೇ ಕಾಲ ಎಷ್ಟೇ ಭೀಕರವಾಗಿ ನಡೆದರೂ ಧರ್ಮವೂ ಸ್ವಾತಂತ್ರ್ಯವೂ ಮಾನವನ ಗೌರವವೂ ದಯಾಪರ ಹೃದಯವೂ ಭೂತಲದಿಂದ ಅಳಿದುಹೋಗಲಾರವೆಂದು ತಾವು ನಿಶ್ಚಯಿಸಿಕೊಂಡಿದ್ದೀರೆಂಬುದನ್ನು ನಾವು ಬಲ್ಲೆವು

ನೀವೂ ನಾವೂ ಒಟ್ಟುಗೂಡಿ ಈಗಿನ ಪ್ರಪಂಚಕ್ಕಿಂತಲೂ ಉತ್ತಮವೂ ದಯಾಮಯವೂ ಆನಂದಭರಿತವೂ ಆದ ಲೋಕವನ್ನು ನಮ್ಮ ಮಕ್ಕಳಿಗಾಗಿ ರಚಿಸುವ ಕಾಲವನ್ನು ಎದುರುನೋಡುತ್ತಿದ್ದೇವೆ ಭಗವಂತನು ತಮ್ಮನ್ನೆಲ್ಲಾ ಕಾಪಾಡಲಿ!”

ಅಮೆರಿಕೆಗೆ ನ್ಯೂಜಿಲೆಂಡಿನ ಮಹಾಪ್ರಧಾನರು ಬಂದಿದ್ದಾರೆ

ನ್ಯೂಜಿಲೆಂಡಿನ ಮಹಾಪ್ರಧಾನರಾದ ಶ್ರೀ ಪೀಟರ್ ಫ್ರೇಜರ್‌ರವರು ವಿಮಾನದ ಮೂಲಕ ಅಮೇರಿಕಾಕ್ಕೆ ಬಂದಿಳಿದಿದ್ದಾರೆ ಅವರು ವಾಷಿಂಗ್‌ಟನ್ ನಗರಕ್ಕೆ ಪ್ರಯಾಣಮಾಡಿ ಶ್ವೇತಭವನದಲ್ಲಿ ಶ್ರೀ ರೂಜ್‌ವೆಲ್ಟರವರನ್ನು ಸಂದರ್ಶಿಸಲಿದ್ದಾರೆ

ಫ್ರೆಂಚ್ ಬಂದರುಗಳನ್ನು ಅಮೇರಿಕಾಕ್ಕೆ ಬಿಟ್ಟುಕೊಡುವರೇ ?

ಪಶ್ಚಿಮ ಆಫ್ರಿಕಾದಲ್ಲಿರುವ ಸ್ವತಂತ್ರ ಫ್ರೆಂಚ್ ಬಂದರುಗಳನ್ನು ಅಮೇರಿಕಾಕ್ಕೆಬಿಟ್ಟುಕೊಡಲು ಡೀಗಾಲ್‌ರವರು ಒಪ್ಪಿದ್ದಾರೆಂಬ ವರ್ತಮಾನವಿದೆ ಡಾಕಾರ್‌ನಲ್ಲಿ ಜರ್ಮನರ ಪ್ರಭಾವವನ್ನು ಕಡಿಮೆ ಮಾಡುವುದೇ ಇದರ ಉದ್ದೇಶವಾಗಿರಬಹುದು

ಬೆರಿಸ್ಲಾವ್ ನಗರದ ಆಕ್ರಮಣ

ನೀಪರ್ ನದಿಯ ಪಶ್ಚಿಮ ದಡದಲ್ಲಿರುವ ಬೆರಿಸ್ಲಾವ್ ಎಂಬ ನಗರವನ್ನು ಜರ್ಮನರು ಆಕ್ರಮಿಸಿದುದಾಗಿ ಜರ್ಮನರು ಹೇಳುತ್ತಿದ್ದಾರೆ ಈ ನಗರವು ಒಡೆಸ್ಸಾ ಪೂರ್ವಕ್ಕೆ 125 ಮೈಲಿ ದೂರದಲ್ಲಿದೆ

ಸ್ವೀಕಾರ.

ರಾಯಚೂರು ಡಿ॥ ಮಟಮರಿ ಗ್ರಾಮದಲ್ಲಿ ನೆರವೇರಿದ ದೀಕ್ಷಾಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂಪಾಯಿಗಳು ಬಿಚ್ಚಾಲೆ ಸಾವಿರದೇವರ ಮಠದ ಶ್ರೀ॥ ಷ॥ ಬ್ರ॥ ಚನ್ನವೀರ ಶಿವಾಚಾರ್ಯ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

॥ ಶ್ರೀಗುರುಭ್ಯೋನಮಃ ॥

ಮನುಷ್ಯನಿಗೆ ಸದ್ಗುಣಗಳೇ ಭೂಷಣವಲ್ಲದೆ ವಸ್ತ್ರ ಒಡವೆಗಳು ಭೂಷಣವಲ್ಲ

ಲೇ—ಪಟ್ಟದ ಸ್ವಾಮಿಗಳು ಹಿರೇಮಠ, ಕೊಣ್ಣೂರು

ಲೋಕದಲ್ಲಿ ಪ್ರತಿಯೊಬ್ಬ ಸ್ತ್ರೀ ಪುರುಷರಿಗೂ ಅಲಂಕಾರಕ್ಕಾಗಿ, ಉಡತೊಡಲಿಕ್ಕೆ ರೇಶ್ಮೆ ಜರತಾರಿವಸ್ತ್ರಗಳೂ, ಬಂಗಾರ ಬೆಳ್ಳಿ ಮುತ್ತು-ರತ್ನಾದಿಗಳಿಂದ ಕೂಡಿದ ವಸ್ತ್ರ ಒಡವೆಗಳೂ ಬೇಕೇಬೇಕು. ನಿಸ್ಸಂಗ್ಯಮೂರ್ತಿಗಳು ಮಾತ್ರ ಇವುಗಳನ್ನು ತ್ಯಾಗಮಾಡುವರಲ್ಲದೆ, ಭೋಗಿಗಳಿಗೆ ಬೇಕು. ದೇವರು ಶ್ರೀಮಂತಿಕೆಯನ್ನು ಕೊಟ್ಟ ಕಾಲಕ್ಕೆ ತಮ್ಮ ತಮ್ಮ ಶಕ್ತ್ಯನುಸಾರ ಉಡಲಿಕ್ಕೂ ತೊಡಲಿಕ್ಕೂ ದಾಗೀನುಗಳನ್ನು ಇಡಲಿಕ್ಕೂ ಅಡ್ಡಿಯಿಲ್ಲ. ಇದ್ದೂ ಇಡದೆ ತೊಡದೆ ಇದ್ದರೆ, ಲೋಕದಲ್ಲಿ ಜನರು ಹಾಸ್ಯಮಾಡುವರಲ್ಲದೆ, ಕೃಪಣನೆಂಬ ಬಿರುದನ್ನೂ ಪಡೆಯಬೇಕಾಗುತ್ತದೆ. ಕಿಮ್ಮತ್ತಿನ ವಸ್ತ್ರಗಳನ್ನು ಉಡಲಿಕ್ಕೂ ಬೆಲೆಯುಳ್ಳ ಒಡವೆಗಳನ್ನು ಇಡಲಿಕ್ಕೂ ಬಡವರಿಗೆ ಸಾಧ್ಯವಿಲ್ಲವು. "ಹಾಸಿಗೆಯಿದ್ದಷ್ಟು ಕಾಲು ಚಾಚಬೇಕು." ಎಂಬ ನಾಣ್ಣುಡಿಯಂತೆ ತಮ್ಮ ತಮ್ಮ ಶಕ್ತ್ಯನುಸಾರವಾಗಿ ವಸ್ತ್ರ ಒಡವೆಗಳನ್ನು ಉಪಯೋಗಿಸಬೇಕಲ್ಲದೆ, ತಮ್ಮ ಶಕ್ತಿ ಮೀರಿ ಎಂದೂ ಉಪಯೋಗಿಸಬಾರದು. ಈ ವಸ್ತ್ರ ಒಡವೆಗಳಮೇಲಿನ ಪ್ರೇಮವು ಪುರುಷರಿಗಿಂತಲೂ ಸ್ತ್ರೀಯರಿಗೆ ಹೆಚ್ಚು ಇರುತ್ತದೆ ಮತ್ತು ಅವರು ಇಡತಕ್ಕ ವಸ್ತುಗಳಾದರೂ ಬಹಳ. ಲಗ್ನ ಇಲ್ಲವೆ ಯಾವದಾದರೊಂದು ಕಾರ್ಯಕ್ಕೆ ಬೇರೂರಿಗೆ ಹೋಗಬೇಕಾದರೆ, ಚಲೋವಸ್ತ್ರ ಒಡವೆಗಳು ಅವಶ್ಯ ಬೇಕು. ಆಗ್ಗೆ ತಮ್ಮ ಹತ್ತರ ಇದ್ದಷ್ಟು ತೆಗೆದುಕೊಂಡು ಹೋಗಬೇಕು. ಅಂಥಲ್ಲಿ ಕಳವು ಆಗಿಹೋಗುವದು ವಿಶೇಷ. ಹೋದರೂ ನಮ್ಮದೇ ಹೋಗುತ್ತದೆ. ಕೆಲವರು ಎರಡನೆಯವರ ವಸ್ತ್ರ ಒಡವೆಗಳನ್ನು ತೆಗೆದುಕೊಂಡುಹೋಗುವ ರೂಢಿಯನ್ನು ಇಟ್ಟುಕೊಂಡಿರುತ್ತಾರೆ. ಇದು ಬಹಳ ತಪ್ಪು. ಕಳೆದುಹೋದರೆ ಮತ್ತೆ ಅವರಿಗೆ ಕೈಯಿಂದ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಇದೊಂದು ದೊಡ್ಡ ಹಾನಿಯು. ತಮ್ಮ ಹತ್ತರವಿದ್ದ ವಸ್ತ್ರ ನೂಲಿನವೇ ಆಗಲಿ ಸ್ವಚ್ಛವಾಗಿ ಇಟ್ಟುಕೊಂಡಿರಬೇಕು. ಮಲಿನವಾಗಿ ಮಾತ್ರ ಇರಬಾರದು. ಇದ್ದವರು ವಸ್ತ್ರ ಒಡೆವೆಗಳನ್ನು ಇಟ್ಟದ್ದು ನೋಡಿ ಇಲ್ಲದವರು, (ಬಡವರು) ಅಸೂಯೆಪಡಬಾರದು. ಮತ್ತು ಅವರಂತೆ ಕೊಂಡುಕೊಳ್ಳಬೇಕೆಂದು ಮನೆಯಲ್ಲಿ ಹಿರಿಯರಿಗೆ ತ್ರಾಸ ಕೊಡಬಾರದು. ನಮ್ಮ ಉತ್ಪನ್ನವೆಷ್ಟು? ದಿನಾಲು ನಮ್ಮ ಖರ್ಚು ಎಷ್ಟು? ಸಂಸಾರವು ಹೇಗೆ ಸಾಗುತ್ತದೆ? ಇದನ್ನು ಪ್ರತಿಯೊಬ್ಬ ಸ್ತ್ರೀಪುರುಷರೂ ವಿಚಾರಿಸಬೇಕು. ಕೆಲವು ಅಜ್ಞರು ವಿಚಾರಮಾಡದೆ ಹಿರಿಯರಿಗೆ ತ್ರಾಸುಕೊಡುತ್ತಾರೆ. ಇವರ ತ್ರಾಸಿಗೆ ಬೇಸತ್ತು ಹಿರಿಯರು ಸಾಲವನ್ನು ಮಾಡಿ, ವಸ್ತ್ರ ಒಡವೆಗಳನ್ನು ಮಾಡಿಸುತ್ತಾರೆ. ಸಾವುಕಾರರಿಗೆ ಪ್ರತಿವರ್ಷ ಬಡ್ಡಿಯನ್ನು ಕೊಡಬೇಕಾಗುತ್ತದೆ. ಹೀಗೆ ಮಾಡುವವರ ಪರಿಣಾಮ ಏನಾಗುತ್ತದೆಂಬುದನ್ನು ದೃಷ್ಟಾಂತಪೂರ್ವಕ ತಿಳಿಸುತ್ತೇನೆ. ಒಬ್ಬ ಸ್ತ್ರೀಯಳು ತಮ್ಮ ಹಿರಿಯರಿಗೆ ಕಿವಿಯೊಳಗಿನ ಒಲೆಯನ್ನು ಮಾಡಿಕೊಡಿರೆಂದು ಉಪದ್ರವಕೊಟ್ಟಳು. ಮಾಡಿಸಲಿಕ್ಕೆ ಶಕ್ತಿಯಿದ್ದಿಲ್ಲ. ಉಪದ್ರವವನ್ನು ತಡೆಯಲಾರದೆ ಸಾಲಮಾಡಿ ರೂಪಾಯಿ ತಂದು ಓಲೆಯನ್ನು ಮಾಡಿಸಿಕೊಟ್ಟನು. ಪ್ರತಿವರ್ಷ ಸಾವುಕಾರರಿಗೆ ಬಡ್ಡಿಯನ್ನು ಕೊಡುವದು ನಡೆಯಿತು. ಒಂದೆರಡುವರ್ಷ ತಮ್ಮ ಪ್ರಪಂಚದ ಆದಾಯದಲ್ಲಿಯೇ ಬಡ್ಡಿ ಕೊಟ್ಟರು. ಮುಂದೆ ೩ನೆಯವರ್ಷ ಬಡ್ಡಿ ಕೊಡುವದು ಆಗಲಿಲ್ಲ. ಆಗ ಸಾಹುಕಾರರ ತ್ರಾಸು ಬಹಳವಾಗಿ, ಆ ಓಲೆಯನ್ನು ಮಾರಿ ಬಡ್ಡಿ ಕೊಟ್ಟನಂತೆ. ಇಂಥ ಸ್ಥಿತಿಯನ್ನು ಎಂದೂ ತಂದುಕೊಳ್ಳಬಾರದು. ಸ್ತ್ರೀಯರಿಗೆ ಪಾದದಿಂದ ಶಿರದವರೆಗೂ, ವಸ್ತ್ರ ಒಡವೆಗಳನ್ನಿಟ್ಟರೂ ಸಾಕಾಗುವದಿಲ್ಲ. ದಾಗೀನಗಳನ್ನಿಡುವದರಿಂದ ದಾರಿಯಲ್ಲಿ ಕಳ್ಳರ ಭಯ, ಒಮ್ಮೊಮ್ಮೆ ಪ್ರಾಣವನ್ನಾದರೂ ಕಳೆದುಕೊಳ್ಳಬೇಕಾಗುವದು. ಇವುಗಳ ಜೋಪಾನಕ್ಕಾಗಿ ರಾತ್ರಿ ನಿದ್ರೆಯೂ ಸಹ ಪೂರ್ಣ ಆಗಲಾರದು. ಇವಿಲ್ಲದಿದ್ದರೆ ಕಳ್ಳರ ಭಯವಿಲ್ಲ, ಜೀವದ ಅಂಜಿಕೆಯಿಲ್ಲ, ನಿದ್ರೆಗೆ ಆತಂಕವಿಲ್ಲ. ಈ ವಸ್ತ್ರ ಒಡವೆಗಳು ಮರಣದ ಪರ್ಯಂತ ಇರುತ್ತವೆ. ಜೀವಹೋದಬಳಿಕ ಎಲ್ಲವನ್ನೂ ಕಸಿದುಕೊಳ್ಳುತ್ತಾರೆ. ಮಣಿಹೇಮಾದಿಗಳ ಅಲಂಕಾರದಿಂದ ಮನುಷ್ಯರು ಮೋಹಿಸುತ್ತಾರಲ್ಲದೆ, ದೇವರಾಗಲಿ ಸತ್ಪುರುಷರಾಗಲಿ ಪ್ರೀತಿಸುವದಿಲ್ಲ. ಆತ್ಮನ ಮಾತ್ರ ತೃಪ್ತಿಹೊಂದುವನಲ್ಲದೆ. ಇದರಿಂದ ಮುಕ್ತಿಯಾಗಲಿ, ಸುಖವಾಗಲಿ, ದೊರೆಯಲಾರದು. ಈ ವಸ್ತ್ರಾಭರಣಗಳೊಂದಿಗೆ ಯಾವ ಇಂದ್ರಿಯಗಳಿಗೆ ಯಾವ ಯಾವ ಸದ್ಗುಣಗಳಿರಬೇಕೋ, ಆ ಸದ್ಗುಣಗಳಿದ್ದರೆ ಆ ಸ್ತ್ರೀಪುರುಷರು ಲೋಕದಲ್ಲಿ ಮಾನ್ಯರಾಗಿ, ಶಿವಪ್ರೀತಿಗೆ ಪಾತ್ರರಾಗುವರು. ಅಂಥ ಸದ್ಗುಣಗಳಿರದ ಕೇವಲ ಅಲಂಕಾರಗಳಿಂದ ಕೂಡಿದ್ದವರು ಇಹಲೋಕದಲ್ಲಿ ನಿಂದ್ಯರಾಗಿ, ಪರಶಿವನ ಕೃಪೆಗೆ ದೂರರಾಗುವರು. ಇದೇ ವಿಷಯವನ್ನು ಕುರಿತು ಜ್ಞಾನಿಗಳು ಕೆಲವು ಪದ್ಯಗಳನ್ನು ಹೇಳಿದ್ದಾರೆ. ವಾಚಕರ ಅವಗಾಹನೆಗಾಗಿ ಕೆಳಗೆ ಕೊಡುತ್ತೇವೆ.

ಗುಣಗಳೆ ಭೂಷಣವಲ್ಲದೆ ಸರ್ವರ್ಗೆ |
ಮಣಿ ಹೇಮಾದಿಗಳು ಭೂಷಣವಲ್ಲವ
ಮಣಿ ಹೇಮ ಭೂಷಣವೆಂದೆಂಬ ಶಿವಲಿಂಗಿ |
ಗುಣಭೂಷಣಾಚಾರ್ಯರ್ಕವಾಗಿಹೆ । ೧ ।

ಚರಣಗಳಿಗೆ ತೀರ್ಥಯಾತ್ರೆಯೆ ಭೂಷಣ |
ಕರಕೆ ಸತ್ಪಾತ್ರದಾನವೆ ಭೂಷಣ ।
ಗುರುಪಾದ ಪ್ರಣತಿಯೆ ಶಿರಸಿಗೆ ಭೂಷಣ |
ಹರದರುಶನವೆ ನೇತ್ರಕೆ ಭೂಷಣ । ೨ ।

ಅನುಪಮ ಸತ್ಯವೆ ರಸನೆಗೆ ಭೂಷಣ |
ಘನವುಳ್ಳ ಕಥೆಯೆ ಕರ್ಣಕೆ ಭೂಷಣ
ತನುವಿಗೆ ಪರರ ಹಿತಂಗಳೆ ಭೂಷಣ |
ಮನಸಿಗೆ ಶಾಂತಗುಣವೆ ಭೂಷಣ

ಪರಿಪೂರ್ಣವಿದ್ಯೆಯೆ ಗುರುವಿಗೆ ಭೂಷಣ |
ಸಿರಿಗೆ ದೀನರ ಪೋಷಣೆಯೆ ಭೂಷಣ ।
ನರಜನ್ಮಕೆ ಉಪಕಾರವೆ ತಾ ಭೂಷಣ |
ದುರಿತಭೀತಿಯೆ ಸೌಜನ್ಯಕೆ ಭೂಷಣ ೪ ॥

ಧರೆಯೊಳಗಿಂಪಿನ ಕೆರೆಗಳೆ ಭೂಷಣ |
ಪರತರತಪಕೆ ಶಾಂತಿಯೆ ಭೂಷಣ ॥
ವರದೀಕ್ಷವ್ರತಕೆಲ್ಲ ವಿರತಿಯೆ ಭೂಷಣ |
ವಿರತಿಗೆ ಜ್ಞಾನವಿದ್ಯೆಯೆ ಭೂಷಣ । ೫

ಈ ಪ್ರಕಾರವಾಗಿ ಆಭರಣಗಳಿಗಿಂತಲೂ ಗುಣವೇ ಭೂಷಣವೆಂದು ಹೇಳಿದ್ದಾರೆ. ಆಭರಣಗಳಿಡಬಾರದೆಂಬ ಬಗ

ಬೇಡಮ್ಮ ನಮಗಿಂಥ ಒಡವೆ ವೈಯ್ಯಾರ |
ಪೊಡವಿಪತಿಯಿತ್ತ ಸಾಕು ಶೃಂಗಾರ । ೬ ॥

ಮುತ್ತು ಮಾಣಿಕ ಮೂಗು ಕಿವಿಗಳ ತೂತು |
ನೆತ್ತಿಮೇಲಣ ಕೇಶ ಹೇರಿದಾವುಕಿತ್ತು ॥
ಪತ್ತಾರ ಕೆಡಿಸುವನು ಬಂಗಾರ ವಸ್ತು |
ವಸ್ತುಗಳೆಲ್ಲ ನಾಶೋದೆ ಬೇಸತ್ತು । ೭

ಒಡವೆಯು ಹುಡುಗರ ಜೀವಕ್ಕೆ ಮುಳುವು |
ಪಡಗರದಿಂದಷ್ಟೊ ರಗಳೆಯಾಗುವದು ಕಳವು ॥
ಅಡವಿಯೊಳು ಸಿಕ್ಕರೆ ಹುಡುಗರ ಭಯವು |
ತೊಡವುಗಳಿಟ್ಟರೆ ನಷ್ಟ ಜೀವ ಕೆಳವ ॥ ೮ ॥

ಗುಣಗಳೆ ಭೂಷಣ ಎಲ್ಲಕ್ಕೂ ಹೆಚ್ಚಮ್ಮಾ |
ಮಣಿಹೇಮದೊಡವೆಗಳೆನಗೆ ತುಚ್ಛಮ್ಮಾ ।
ಪ್ರಾಣಪತಿಯಸೇವೆ ಮಾಡಬೇಕಮ್ಮಾ |
ಕ್ಷೋಣಿಯೊಳ್ ಜಂಗಕ್ಕೆ ಪರಿಧ್ಯವನಮ್ಮಾ । ೯ ।

ಆದ್ದರಿಂದ ಪ್ರತಿಯೊಬ್ಬ ಸ್ತ್ರೀಪುರುಷರು ಕ್ಷಣಿಕವಾದ ಮಣಿಹೇಮಾದಿಗಳ ಅಲಂಕಾರಕ್ಕಾಗಿ ಮೋಹಿಸದೆ, ನಿತ್ಯಸುಖವನ್ನು ಕೊಡತಕ್ಕ ಸದ್ಗುಣಗಳಿಂದ ಭೂಷಿತರಾಗಬೇಕೆಂದು ಇಚ್ಛಿಸುತ್ತೇವೆ.

॥ ಶ್ರೀ ಜಗದ್ಗುರು ದಾರುಕಾಚಾರ್ಯಾಯನಮಃ ॥

ಪುನರ್ಜನ್ಮ ವಿಚಾರ

—ಮಲ್ಲಿಕಾರ್ಜುನಾರಾಧ್ಯ [illegible] ಶಾಸ್ತ್ರಿಗಳು
ಪುಳಿಮಠ, ಮುದೇನೂರು

ಪುನರ್ಜನ್ಮದ ವಿಷಯವಲ್ಲಿ ಯಾವ ಸಂಶಯವೂ ಇರುವದಿಲ್ಲ. ಹುಟ್ಟಿದ ಪ್ರತಿ ಪ್ರಾಣಿಗೂ ಹೇಗೆ ಮೃತ್ಯುವು ನಿಶ್ಚಿತವಾಗಿದೆಯೋ ಹಾಗೆಯೇ ಮರಣಾನಂತರ ಪುನರ್ಜನ್ಮವೂ ಸಿದ್ಧವಾಗಿರುವದು. ಈ ಜನನ ಮರಣಗಳು ಅಪವರ್ಗದಲ್ಲಿ ಅಂತ್ಯವಾಗುವವು. ಮೋಕ್ಷಲಾಭವಾಗುವವರೆಗೂ ಜನನ ಮರಣಗಳು ತಪ್ಪಲಾರವು.

ಕಾರಣವು ಕಾರ್ಯದ ಅವ್ಯಕ್ತಾವಸ್ಥೆ—ಕಾರ್ಯವು ಕಾರಣದ ವ್ಯಕ್ತಾವಸ್ಥೆಯು. ಕಾರಣವಿಲ್ಲದೆ ಯಾವ ಕಾರ್ಯವೂ ಸಂಭವಿಸಲಾರದು. ಜೀವರ ಜನನ ಮರಣರೂಪವಾದ ಕಾರ್ಯಗಳಿಗೂ ಒಂದು ಕಾರಣ ಇದ್ದೇ ಇರುವದು. ಅದೇ ಕರ್ಮಸಂಸ್ಕಾರವು. ಈ ಕಾರಣವು ನಾಶವಾಗುವ ಪರ್ಯಂತ ಜನನ ಮರಣಗಳು ನಾಶವಾಗವು. ಎಲ್ಲಿ ಪ್ರಾಣವು ಇರುವದೋ, ಅಲ್ಲಿ ಮನಸ್ಸಿರುವದು—ಎಲ್ಲಿ ಮನಸ್ಸಿರುವದೋ ಅಲ್ಲಿ ಕರ್ಮವಿರುವದು—ಎಲ್ಲಿ ಕರ್ಮವಿರುವದೋ ಅಲ್ಲಿ ಭೋಗವಿರುವದು. ಜೀವ ಮತ್ತು ಕರ್ಮಗಳು ಬೀಜವೃಕ್ಷನ್ಯಾಯದಂತೆ ಅನಾದಿಯಾದ ಅವಿದ್ಯೆಯಿಂದ ದೇಹಾತ್ಮಜ್ಞಾನೋದಯವಾಗುವದು. ಈ ದೇಹಾತ್ಮಜ್ಞಾನದಿಂದ ರಾಗದ್ವೇಷಾದಿಗಳಾವಿರ್ಭವಿಸುವವು. ಈ ರಾಗದ್ವೇಷಾದಿಗಳಿಂದ ಜೀವನಿಗೆ ಕರ್ಮದಲ್ಲಿ ಪ್ರವೃತ್ತಿಯುಂಟಾಗುವದು. ಆದುದರಿಂದ ಜೀವನು ಸ್ವರೂಪತಃ ಅಕರ್ತೃವಾಗಿದ್ದರೂ ತಾನೇ ಕರ್ತನೆಂಬ ಬುದ್ಧಿಯಿಂದ ಕರ್ಮದಲ್ಲಿ ಪ್ರವೃತ್ತನಾಗುವನು. ಆ ಕರ್ಮಬಲದಿಂದ ಜನನ ಮರಣರೂಪವಾದ ವಿವಿಧ ದುಃಖಗಳನ್ನನುಭವಿಸುವನು. ಕರ್ಮ=ಪಾಪ+ಪುಣ್ಯ. ಪಾಪಪುಣ್ಯವೇ ಕರ್ಮ ಶರೀರ—ಎಂದರೆ, ಪಾಪ ಪುಣ್ಯಗಳೇ [illegible] ಕರ್ಮವು—ಕರ್ಮಕ್ಕೆ ಕಾರಣ ಅಜ್ಞಾನ. ಈ ಅಜ್ಞಾನವು ಅಂತರ್ಹಿತವಾದ ಕೂಡಲೆ ಜೀವನು ಸ್ವಸ್ವರೂಪದಲ್ಲಿ ಅವಸ್ಥಿತನಾಗುವನು—ಇದೇ ಮೋಕ್ಷ.

ಜೀವನ ಈ ಪಾಪ ಪುಣ್ಯರೂಪವಾದ ಸಂಸ್ಕಾರವು ಕ್ರಿಯಾ ಯೋಗಾದಿಗಳ ಮೂಲಕ ನಾಶವಾಗುವದು. ಈ ಸಂಸ್ಕಾರ ನಾಶವಾಗದಿದ್ದರೆ ಜೀವಿಯು ಅದರ ಫಲಭೋಗದವನಾಗಿ ಪದೇ ಪದೇ ಜನ್ಮ—ಪದೇ ಪದೇ ಮರಣ—ಪದೇ ಪದೇ ಸುರ, ನರ, ತಿರ್ಯಗ್ಯೋನಿಗಳಲ್ಲಿ ಪತನ ಉತ್ಪತ್ತಿ ಅಥವಾ ಬಹುಕಾಲ ಜೀವನ ಧಾರಣ ಮತ್ತು ಸುಖ ದುಃಖ ಅನುಭವ ಇವುಗಳನ್ನು ಹೊಂದಲೇಬೇಕಾಗುವದು.

ಪಾಪ ಪುಣ್ಯಗಳು ಕಾಯಿಕ, ವಾಚಿಕ, ಮತ್ತು ಮಾನಸಿಕಗಳೆಂದು ತ್ರಿವಿಧ. ಪ್ರಾಣಿಹಿಂಸೆ, ಚೌರ್ಯ ಮತ್ತು ಪರದಾರಗಮನಾದಿಗಳು ಕಾಯಿಕ ಪಾಪಗಳು. ಅಸತ್ಯಲಾಪ, ಪಾರುಷ್ಯ, ಮಿಥ್ಯಕಥನಾದಿಗಳು ವಾಚಿಕ ಪಾಪಗಳು. ಪರಧನ ಚಿಂತೆ, ಭೂತ ದಯಾಶೂನ್ಯತೆ ಮೊದಲಾದವುಗಳು ಮಾನಸಿಕ ಪಾಪಗಳು. ಈ ಪಾಪತ್ರಯಕ್ಕೆ ವಿರುದ್ಧವಾದ ಕಾರ್ಯಗಳು ಪುಣ್ಯ ಕರ್ಮವೆಂದು ಕರೆಯಲ್ಪಡುವವು. ಜೀವಿಯು ಕಾಯಿಕ ಪಾಪದ್ವಾರಾ ಸ್ಥಾವರ ಯೋನಿಯಲ್ಲಿಯೂ, ವಾಚಿಕ ಪಾಪದ್ವಾರಾ ತಿರ್ಯಗ್ಯೋನಿಯಲ್ಲಿಯೂ, ಮಾನಸಿಕ ಪಾಪದ್ವಾರಾ ಅಂತ್ಯ ಜಾತಿಯಲ್ಲಿಯೂ ಹುಟ್ಟುವನೆಂದು ಮನುಸಂಹಿತೆಯಲ್ಲಿ ಹೇಳಿರುವದು. ಇದಲ್ಲದೆ, ಯಾವನು ಪೂರ್ವಜನ್ಮದಲ್ಲಿ ಪ್ರಭುವಾಗಿದ್ದನೋ ಅವನು ಈಗಿನ ಜನ್ಮದಲ್ಲಿ ಭೃತ್ಯನಾಗಿರುವನು, ಯಾರು ಪೂರ್ವ ಜನ್ಮದಲ್ಲಿ ಅಣ್ಣತಂಗಿಯರಾಗಿದ್ದರೋ ಅವರು ವರ್ತಮಾನ ಜನ್ಮದಲ್ಲಿ ಪತಿ ಪತ್ನಿಗಳಾಗಿರುವರು. ಮತ್ತು ಸಕಲ ಜೀವರಾಶಿಗಳಿಗೂ ನಮಗೂ ಆವುದಾದರೊಂದು ಕಾಲದಲ್ಲಿ ಆವುದಾದರೊಂದು ವಿಧವಾದ ಸಂಬಂಧವಿದ್ದೇ ಇತ್ತೆಂದು ಪುನರ್ಜನ್ಮತತ್ತ್ವವು ಪ್ರತಿಪಾದಿಸುವದು. ಆದಕಾರಣ ಪಾಪತ್ರಯದಿಂದ ಪತಿತನಾಗದೆ, ಭೂತದಯಾಪರನಾಗಿ ಜೀವಲೀಲೆಯ ಚರಮಾವಸ್ಥೆಯನ್ನು ಹೊಂದಿದವನು ಜೀವನ್ಮುಕ್ತನೆಂದು ಭಾವಿಸಲ್ಪಡುವನು. ಈ ಚರಮಾವಸ್ಥೆ ಅಥವಾ ಮೋಕ್ಷವನ್ನು ಹೊಂದುವ ಪರ್ಯಂತವೂ ಲಿಂಗ ದೇಹಾವಚ್ಛಿನ್ನನಾದ ಜೀವಿಯು ಪರಲೋಕ

ಗಳಲ್ಲಾವುದಾವರೊಂದರಲ್ಲಿ ಜನ್ಮಿಸಲೇ ಬೇಕಾಗವದು ಪ್ರೇತತ್ವಾಗರೂಪವಾದ ಮೃತ್ಯು ದ್ವಾರಾ ಜನನ ಮರಣಗಳು ತಪ್ಪುವದಿಲ್ಲ ಕಾರಣವೇನೆಂದರೆ–"ಯಥಾ ಮುಕ್ತಿಂ ...ಡವಾ ತೇನ ಸಾ ಮುಕ್ತಿಃ ಶುನಿಸೂಕರಿ" ಅದರೆ ಇದೇ ರೂಪವಾಗಲೂ ಸಂಭವವೆಂದು ಭಾವಿಸಲಾಗದು ಚಿತ್ತ ನಿವೃತ್ತಿರೇವಮೋಕ್ಷಃ" ಜೀವರಿಗೆ ಚಿತ್ತನಿವೃತ್ತಿಯಾದರೆ ವಾಸನಾಕ್ಷಯವಾಗಿ ಮೋಕ್ಷವಾಗುವದು "ಬ್ರಹ್ಮಬ ವಸ್ತುಮೋಕ್ಷಃ" ಬ್ರಹ್ಮಭಾವಪ್ರಾಪ್ತಿಯು ಹೆಸರೇ ಮೋಕ್ಷವು ಅಪರಿತೃಪ್ತವಾದ ವಾಸನೆಗಳ ಆಕರ್ಷಣೆಯ ದೆಸೆಯಿಂದ ಅಥವಾ ಅಭುಕ್ತವಾದ ಸಂಸ್ಕಾರ ರಾಶಿಯ ಆವೇಗದ ದೆಸೆಯಿಂದ ದೇಹಾಂತದಲ್ಲಿ ಜೀವರಿಗೆ ಮೋಕ್ಷಲಭವಾಗದೆ ಪುನಃ ದೇಹ ಧಾರಣೆಯು ಅವಶ್ಯಕವಾಗಿಯೂ ಘಟಿಸುವದು

ಮರಣಾನಂತರ ಪುನರ್ಜನ್ಮವು ಅತಿ ಶೀಘ್ರವಾಗಿಯೇ ಸಂಘಟಿಸುವದು ಶ್ರುತಿಯು ಈ ವಿಷಯದಲ್ಲಿ ತೃಣಜಲೌಕಗಳ ದೃಷ್ಟಾಂತವನ್ನು ತೋರಿಸುವದು ಅತಿವಾಹಿಕ ಎಂದರೆ, ಸೂಕ್ಷ್ಮ ದೇಹದಲ್ಲಿ ಜೀವಿಯು ಸ್ವಲ್ಪಕಾಲವೂ ನಿಲ್ಲಲಾರನು ಆದಕಾರಣ ಮರಣ ನಂತರ ಕೃತಕರ್ಮಫಲ ಭೋಗಾರ್ಥವಾಗಿ ಜೀವನಿಗೆ ಯೋಗ್ಯವಾದ ಸ್ಥೂಲದೇಹವು ಅನತಿ ವಿಲಂಬವಾಗಿಯೇ ಸಂಘಟಿಸುವದು ಸ್ಥೂಲದೇಹದಲ್ಲಿ ವಿನಾ ಅನ್ಯತ್ರ ಭೋಗವು ಅಸಂಭವವು ಆದಕಾರಣ ಜೀವಿಯು ಕೃತ ಕರ್ಮಾದಿಗಳ ಫಲಸ್ವರೂಪವಾದ ನರಕ ಅಥವಾ ಸುಖ ದುಃಖಾದಿ ಭೋಗಕ್ಕೆ ಪುನಃ ದೇಹವನ್ನು ಧರಿಸಲೇಬೇಕು

ಮುಕ್ತಜೀವಿಗಳು ಸ್ಥಿರಸಂಕಲ್ಪರಾದುದರಿಂದ ಅವರಿಗ ಬಹಿರಾಕರ್ಷಣವಿರುವದಿಲ್ಲ ಆದಕಾರಣ ದೇಹಾಂತ ಸಮಯದಲ್ಲಿ ಅವರ ಪ್ರಾಣಾದೀಂದ್ರಿಯಗಳು ಛಿದ್ರಪದ ಮೂಲಕ ಉತ್ಕ್ರಮಿಸುವದಿಲ್ಲ ಅದರೆ ಬದ್ಧಜೀವಿಗಳು ಅತೃಪ್ತವಾದ ವಾಸನೆಗಳ ಅಧಿಕ್ಯದಿಂದಲೂ ಬಹಿರಾಕರ್ಷಣದಿಂದಲೂ ಆಕೃಷ್ಟರಾಗಿರುವಕಾರಣ ದೇಹಾಂತಕಾಲದಲ್ಲಿ ಅವರಲಿಂಗ ದೇಹವು ಅವುದಾದರೊಂದು ಇಂದ್ರಿಯಮೂಲಕ ನಿಷ್ಕ್ರಾಂತವಾಗಿ, ಯಮಾಲಯಕ್ಕೆ ತರಳಿ, ಅಲ್ಲಿ ಈಶ್ವರಾಧೀನವ ಸಂಸ್ಕಾರಾನುಸಾರವಾಗಿ ಅಧಿರೋಹಣ ಅಥವಾ ಅವರೋಹಣಮಾಡಿ ತ್ರಿಲೋಕದಲ್ಲಿ ವಿವಿಧಪ್ರಕಾರವಾದ ಭಾವಾನುರೂಪವಾದ ದೇಹಧಾರಣೆಮಾಡುವದು

ಅದಪ್ರಯುಕ್ತ ಎಲ್ಲಿಯವರೆಗೆ ಲಿಂಗದೇಹದ ವಾಸನಾ ಅಥವಾ ಸಂಸ್ಕಾರರೂಪವಾದ ಅಂತರಾಯವು ಯೋಗಾನುಷ್ಠಾನಾದಿಗಳ ಮೂಲಕ ದೂರೀಕೃತವಾಗಿರುವದಿಲ್ಲವೋ ಅಲ್ಲಿಯವರೆಗೆ ಸೂಕ್ಷ್ಮದೇಹವು ಸ್ವಕಾರಣದಲ್ಲಿ ಲೀನವಾಗಲಾರದು ಎಂದರೆ, ಜೀವಿಯು ಎಷ್ಟು ಕಾಲಪರ್ಯಂತ ಮುಕ್ತಿಯನ್ನು ಹೊಂದುವದಿಲ್ಲವೋ ಅಷ್ಟುಕಾಲಪರ್ಯಂತ ಅವನು ಜನ್ಮಗ್ರಹಣಮಾಡಲೇ ಬೇಕಾಗುವದು. ಪುನರ್ಜನ್ಮವನ್ನು ಅಂಗೀಕರಿಸದಿದ್ದರೆ ಬೇರೆ ಗತ್ಯಂತರವೇ ಇಲ್ಲ ಹಾಗಾದರೆ ಈ ಪುನರ್ಜನ್ಮರೂಪವಾದ ಅತೀಂದ್ರಿಯ ಅಥವಾ ಅಪ್ರತ್ಯಕ್ಷೀಭೂತವಾದ ವಿಷಯಕ್ಕೆ ಪ್ರಮಾಣವೇನು ? ಆಪ್ತೋಪದೇಶವೇ ಯಾರು ಅವ್ಯಾಹತವಾದ ಜ್ಞಾನತಪೋನುಷ್ಠಾನ ಬಲಗಳಿಂದ ರಾಜಸ ಮತ್ತು ತಾಮಸ ಗುಣಗಳನ್ನತಿಕ್ರಮಿಸಿ, ತ್ರಿಕಾಲಜ್ಞರಾಗಿರುವರೋ ಅವರೇ ಆಪ್ತರು ಶಿಷ್ಟರು-ವಿಬುಧರು ಸಂಶಯಶೂನ್ಯರು-ಸತ್ಯವಾದಿಗಳು ಅಂತಹ ಮಹಾಪುರುಷರ ಉಪದೇಶವೇ ಆಪ್ತೋಪದೇಶ ಸಕಲ ದೇಶಗಳಲ್ಲಿಯೂ ಆಪ್ತೋಪದೇಶವೇ ಸಕಲ ಶಿಕ್ಷೆಯ ನಿದಾನ ಜೀವಿಗಳ ಕಲ್ಯಾಣಾರ್ಥವಾಗಿ ಸಕಲ ದೇಶಗಳಲ್ಲಿಯೂ ಸಕಲ ಸಮಯಗಳಲ್ಲಿಯೂ ಈ ವಿಧವಾದ ಅಲೌಕಿಕ ಗುಣಸಂಪನ್ನರಾದ ಮಹಾಪುರುಷರ ಆವಿರ್ಭಾವವು ಆಗುತ್ತಲೇ ಇರುವದು

ಜನನ ಮರಣ ತತ್ವಗಳು ಅವರೀತಿಯಾಗಿ ಪರ್ಯಾಲೋಚಿಸಲ್ಪಟ್ಟಿರುವವೆಂಬುದನ್ನು ಈ ಕೆಳಗೆ ಸೂಚಿಸಿರುವಂತೆ ಆಪ್ತೋಪದೇಶದಿಂದ ನಿರ್ಣಯಿಸಬಹುದು

ಮೃತಶ್ಚಾಹಂ ಪುನರ್ಜಾತೋ ಜಾತಶ್ಚಾಹಂ ಪುನರ್ಮೃತಃ |
ನಾನಾಯೋನಿಸಹಸ್ರಾಣಿ ಮಯೋಷಿತಾನಿಯಾನಿವೈ ||
ಪುನರಪಿಜನನಂ ಪುನರಪಿಮರಣಂ ಪುನರಪಿ ಜನನೀಜಠರೇ
ಶಯನಂ |

ಕ್ಷೀಣೇಪುಣ್ಯೇ ಮರ್ತ್ಯಲೋಕಂ ವಿಶಂತಿ |
ಜೀವನೆ ತನ್ನ ಕರ್ಮ್ಯಾಪಣೆಯ ಫಲಪನುಜರು |
ನಿಕ್ಷಭೂತ ಭ್ರಾಂತಿ ಕಪ್ರಸರಂಗಳಜರಿಸಿ ಕಾಣಿಪ್ರಮಣಗಳು ॥

ಇವೇ ಮೊದಲಾದ ಆಪ್ತೋಪದೇಶಗಳನ್ನು ಆಧುನಿಕರಲ್ಲನೇಕರು ಅಪಲಾಪಿಸುತ್ತಿರವರು ಆದಕಾರಣ ಸರ್ವಸಮ್ಮತವಲ್ಲದ ತತ್ವವನ್ನು ಎಲ್ಲರೂ ಒಪ್ಪುವದು ಹೇಗೆ? ಎಂಬ ಶಂಕೆಯು ಒರಬಹದು ಹಾಗಾದರೆ, ಪ್ರಹ್ಲಾದ, ಧ್ರುವ, ಶಂಕರ ಮೊದಲಾದ ಬಾಲಕರು ಕೇವಲ ಬಾಲ್ಯದಲ್ಲಿಯೇ ತಮ್ಮ ೫ ನೆಯ ವರ್ಷದಲ್ಲಿಯೇ ಅತ್ಯದ್ಭುತವಾದ ಭಗವದ್ಭಕ್ತಿಯನ್ನೂ ಯೋಗಶಕ್ತಿಯನ್ನೂ ತೋರಿಸಿದುದಕ್ಕೆ ಕಾರಣವೇನು ? ಇದಲ್ಲದೆ ವಿದೇಶೀಯರಲ್ಲಿ ಪ್ಯಾಸ್ಕಲ್ಲನು ೧೨ ನೆಯ ವಯಸ್ಸಿನಲ್ಲಿ ರೇಖಾಗಣಿತದ ಬಹ್ವಂಶವನ್ನು ಕಂಡುಹಿಡಿದನು ಜರಾಕಾಲ್ಬರ್ನ್ ಎಂಬವನು ೮ ನೆಯ ವಯಸ್ಸಿನಲ್ಲಿ ಸಂದಿಗ್ಧವಾದ ಗಣಿತಪ್ರಶ್ನೆಗಳಿಗೆ ಸ್ವಲ್ಪವೂ ಯೋಚಿಸದೆ ಸರಿಯಾದುತ್ತರಗಳನ್ನು ಕೊಡುತ್ತಿದ್ದನು ಮೋಜಾರ್ಟ ಎಂಬ ಗಾಯಕನೊಬ್ಬನು ೮ ನೆಯ ವಯಸ್ಸಿನಲ್ಲಿ ನಾಟಕವನ್ನು ರಚಿಸಿದನು ಆದಕಾರಣ ಅಪರಿಣತವಯಸ್ಸಿನಲ್ಲಿ ಇಂತಹ ಪರಿಪಕ್ವವಾದ ಬುದ್ಧಿ ಹುಟ್ಟಿದುದಕ್ಕೆ ಕಾರಣವೇನ ? ಪೂರ್ವಸಂಚಿತಸಂಸ್ಕಾರವೇ ಇದಕ್ಕೆ ಮೂಲಕಾರಣವಲ್ಲವೆ?

ಈ ಪುನರ್ಜನ್ಮತತ್ವವನ್ನು ಭಾರತೀಯರು ಮಾತ್ರ ಅಂಗೀಕರಿಸುವರೆಂದು, ಹೇಳಲಾಗದು ಪಾಶ್ಚಾತ್ಯರಾಷ್ಟ್ರಗಳಲ್ಲಿಯೂ ಈ ತತ್ವವನ್ನು ನಂಬುವವರೆಷ್ಟೋ ಜನರಿರುವರು ವಿಲ್ಸನ್, ಟೆನಿಸನ್, ವರ್ಡ್ಸ್‌ವರ್ತ್, ಡ್ರೈಡನ್, ಮೊದಲಾದ ಕವಿಶ್ರೇಷ್ಠರೂ ಏಸೂಕ್ರಿಸ್ತನ ಸಮಕಾಲೀನನಾದ ಫೈಲೋ ಎಂಬ ತತ್ವಜ್ಞನೂ ಒಪ್ಪಿರುವರೆಂಬುದಕ್ಕೆ ಅವರವರು ಬರೆದಿರುವ ಸಿದ್ಧಾಂತ ವಚನಗಳೇ ನಿದರ್ಶನಗಳಾಗಿವೆ ಅವುಗಳಲ್ಲಿ ಕೆಲವನ್ನು ಉದಾಹರಿಸಲಾಗಿದೆ

> Death has no Power the immortal soul to slay
> That when its present body turns to clay
> Seeks a fresh home and with unlessened might,
> Inspires another frame with life and light
>
> Dryden

> "As to you life I reckon you are the leavings of many deaths, No doubt I have died myself ten-thousand times before
>
> Walt Whitman

ಈ ಕಾರಣಗಳಿಂದ ಪುನರ್ಜನ್ಮತತ್ವವು ಸರ್ವಸಮ್ಮತವಾದುದೆಂದು ಹೇಳಲು ಯಾವ ಅಭ್ಯಂತರವೂ ಇಲ್ಲ ಆದಕಾರಣ ಇದರಲ್ಲಿ ದೃಢನಂಬುಗೆಯನ್ನಿಟ್ಟು ಸಾತ್ವಿಕ ಮಾರ್ಗದಲ್ಲಿ ಸಂಚರಿಸುವವರಿಗೆ ಪರಮಪದವಿಯು ಪ್ರಾಪ್ತವಾಗದಿರದು

ಪ್ರಕಟನೆ

ಕುಂದಗೋಳ ಶ್ರೀ||ಷ|| ಬ್ರ|| ಗುರುಪಾದಶಿವಾಚಾರ್ಯರು ಪಂಚಗೃಹ ಹಿರೇಮಠ ಇವರು ಸ್ಥಾಪಿಸಿದ ಶ್ರೀ ಜಗದ್ಗುರು ವಿಶ್ವಾರಾಧ್ಯ ಫ್ರೀಬೋರ್ಡಿಂಗಿನ ಜೊತೆಯಲ್ಲಿ ಜ್ಯೋತಿಷ ಮತ್ತು ವೈದಿಕ ಪಾಠಶಾಲೆಯು ಕಳೆದ ಜುಲೈ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿರುವದು

ಈ ಶಾಲೆಗೆ ಸರಿಯಾದ ಅನುಭವವುಳ್ಳ ಅಧ್ಯಾಪಕರು ಸಹ ಬಂದಿದ್ದಾರೆ ಆದುದರಿಂದ ವೀರಶೈವ ಗುರುವರ್ಗದ ವಟುಗಳು ತ್ವರೆಮಾಡಿ ಬಂದು ಧರ್ಮವಿದ್ಯೆಯನ್ನು ಕಲಿತುಕೊಳ್ಳಬೇಕು ಗುರುವರ್ಗದ ವಟುಗಳ ವಿದ್ಯಾಭ್ಯಾಸಕ್ಕೂ ಮತ್ತು ವಸತಿಗೂ ಉಚಿತವಾಗಿ ವ್ಯವಸ್ಥೆಯನ್ನು ಮಾಡಲಾಗುವದು ಗುರುವರ್ಗದ ವಟುಗಳು ಧರ್ಮವಿದ್ಯೆಯನ್ನು ಸಂಪಾದಿಸಿ ಧರ್ಮೋದ್ಧಾರಪರಾಯಣರಾಗಬೇಕು

ಕುಂದಗೋಳ
ತಾ|| ೨೩-೮ ೪೧.

ವ್ಯವಸ್ಥಾಪಕಮಂಡಳಿ

ಮಹಾಭಾರತದಲ್ಲಿ ಆರೋಗ್ಯಸಾಧಕಗಳು

ಅನುಶಾಸನಿಕಪರ್ವದಿಂದ

ಯುಧಿಷ್ಠಿರನು ಭೀಷ್ಮನನ್ನು ಕುರಿತು 'ಆಚಾರ್ಯನೇ! ಮನುಷ್ಯನಿಗೆ ಬ್ರಹ್ಮನಿಂದ 'ಶತಾಯುಃ ಪುರುಷಃ, ಎಂಬಂತೆ ೧೦೦ ವರುಷಗಳ ಆಯುಸ್ಸು ವಿಧಿಸಲ್ಪಟ್ಟಿರುವುದು ಅವನು ತಕ್ಕಷ್ಟು ವೀರ್ಯಶಕ್ತಿಗಳಿಂದ ಅಷ್ಟುಕಾಲ ಬದುಕಿರುವನೆಂದು ಹೇಳುವರಲ್ಲವೇ ? ಆಚಾರ್ಯಾ! ಹೀಗಿರುವಾಗ ಮನುಷ್ಯರು ಒಹಳ ಬಾಲ್ಯವಯಸ್ಸಿನಲ್ಲಿರುವಾಗಲೇ ಸಾಯುವುದುಂಟಲ್ಲವೆ? ಇದರ ಕಾರಣವೇನ ? ಕೆಲವರು ಪೂರ್ಣಾಯುಸ್ಸಿನಿಂದ ಬದುಕುವುದಕ್ಕೂ, ಬೇರೆ ಕೆಲವರು ಅಲ್ಪಾಯುಸ್ಸಿನಲ್ಲಿಯೇ ಮೃತಹೊಂದುವುದಕ್ಕೂ ಕಾರಣವೇನು ? ಹೇಗೆಮಾಡಿದರೆ ಪೂರ್ಣಾಯುಷ್ಯವನ್ನು ಅನುಭವಿಸಬಹುದು ಮನುಷ್ಯನು ಮಹಾಕಾರ್ಯಗಳಿಂದ ಕೀರ್ತಿಯನ್ನು ಸಂಪಾದಿಸುವುದು ಹೇಗೆ? ಮನುಷ್ಯನು ಸಂಪತ್ತನ್ನೂ ಅಭ್ಯುದಯವನ್ನೂ ಹೊಂದುವುದು ಹೇಗೆ? ಇವೆಲ್ಲವೂ ಲಭಿಸುವುದು ತಪಸ್ಸಿನಿಂದಲೋ? ಬ್ರಹ್ಮಚರ್ಯೆಯಿಂದಲೋ? ಮಂತ್ರಜಪಗಳಿಂದಲೋ? ಮೂಲಿಕೆಗಳಿಂದಲೋ? ಈ ಮೇಲೆ ಹೇಳಿದವುಗಳನ್ನು ಮನುಷ್ಯನು ತನ್ನ ಮನೋವಾಕ್ಕಾಯಗಳ ಪ್ರವರ್ತನೆಯಿಂದಲೇ ಪಡೆಯುವನೋ? ಈ ವಿಷಯವನ್ನು ನನಗೆ ವಿವರಿಸಿ ತಿಳಿಸಬೇಕು'

ಅದಕ್ಕೆ ಭೀಷ್ಮನು 'ಧರ್ಮರಾಜಾ! ಮನುಷ್ಯರು ಅವರವರ ನಡತೆಯಿಂದಲೇ ದೀರ್ಘಾಯುಷ್ಯವನ್ನು ಪಡೆಯುವರು ಐಶ್ವರ್ಯವೂ, ಅಭ್ಯುದಯಗಳೂ ಬರುವುವು ಯಾವನ ನಡತೆಯು ಅಸಂಬದ್ಧವಾಗಿಯೂ, ವಕ್ರವಾಗಿಯೂ ಇರುವುದೋ, ಅವನು ಎಂದಿಗೂ ದೀರ್ಘಕಾಲ ಜೀವಿಸಲಾರನು ಅವನನ್ನು ಕಂಡರೆ ಸಮಸ್ತ ಪ್ರಾಣಿಗಳೂ ಭಯಪಡುವುವು ಎಲ್ಲವೂ ಅವನನ್ನು ದ್ವೇಷಿಸುವುವು ಆದದರಿಂದ ತನ್ನ ಅಭ್ಯುದಯವನ್ನೂ, ಕ್ಷೇಮವನ್ನೂ ಕೋರತಕ್ಕ ಪ್ರತಿಯೊಬ್ಬ ಮನುಷ್ಯನೂ ಈ ಲೋಕದಲ್ಲಿ ಉತ್ತಮವಾದ ಮತ್ತು ಯೋಗ್ಯವಾದ ನಡತೆಯನ್ನು ಅವಲಂಬಿಸಬೇಕು ಯಾರು ಅನುಚಿತವಾದ ಮಾರ್ಗದಲ್ಲಿ ಹೋಗುವರೋ, ಯಾರು ಕಾಮವಶರಾಗುವರೋ ಅಂಥವರೆಲ್ಲರೂ ಅಲ್ಪಾಯುಷ್ಯವುಳ್ಳವರಾಗುವರು ಯಾವನು ಕಾಮಕ್ರೋಧಗಳಿಗೆ ವಶನಾಗದೆ ಸತ್ಯವನ್ನೇ ದೃಢವಾಗಿ ಹಿಡಿದು ಪ್ರಪಂಚದಲ್ಲಿ ಯಾವ ಪ್ರಾಣಿಗಳಿಗೂ ಯಾವ ಹಿಂಸೆಯನ್ನೂ ಮಾಡದೆ ವಿಷಯಾಸಕ್ತಿ, ವಕ್ರಮಾರ್ಗ, ಅಪ್ರಮಾಣಿಕತೆ ಇವನ್ನೆಲ್ಲಾ ದೂರಮಾಡುವನೋ, ಅವನು ತನ್ನ ಪೂರ್ಣಾಯುಸ್ಸಿನವರೆಗೆ ಜೀವಿಸುವನು ಮನುಷ್ಯನು ಬ್ರಾಹ್ಮ ಮುಹೂರ್ತವೆಂದು ಕರೆಯಲ್ಪಡುವ ಬೆಳಗಿನ ಜಾವದಲ್ಲಿಯೇ ನಿದ್ರೆಯಿಂದ ಎಚ್ಚರಗೊಳ್ಳಬೇಕು ಕಾರಣವನ್ನೂ, ಲಾಭವನ್ನೂ ಮನಸ್ಸಿನಲ್ಲಿ ಚಿಂತಿಸಬಾರದು ಹಾಸಿಗೆಯನ್ನು ಬಿಟ್ಟು ಎದ್ದೊಡನೆ ಬಾಯನ್ನೂ, ಮುಖವನ್ನೂ ಚೆನ್ನಾಗಿ ತೊಳೆಯಬೇಕು ಮನುಷ್ಯನು ಉದಯಿಸುತ್ತಿರುವ ಅಥವಾ ಅಸ್ತಮಿಸುತ್ತಿರುವ ಸೂರ್ಯನನ್ನು ದೃಷ್ಟಿಸಿ ನೋಡಬಾರದು ಗ್ರಹಣ ಹಿಡಿದಾಗಲೂ ನೋಡಬಾರದು ಮಧ್ಯಾಹ್ನದಲ್ಲಿ ಉಚ್ಚಸ್ಥಾನದಲ್ಲಿರುವಾಗಲೂ ಸೂರ್ಯನನ್ನು ನೋಡಬಾರದು ಯಾವ ಮನುಷ್ಯನೂ ಪರಸ್ತ್ರೀಯರಲ್ಲಿ ಮೋಹವನ್ನಿಡಬಾರದು ಅವರೊಡನೆ ಸಂಬಂಧಮಾಡಬಾರದು ಪರದಾರಗಮನಕ್ಕಿಂತಲೂ ಆಯುಷ್ಯವನ್ನು ತಗ್ಗಿಸುವುದು ಬೇರೆಯಾವುದೂ ಇಲ್ಲ. ಯಾವ ಮನುಷ್ಯನೂ ಮಲಮೂತ್ರಗಳನ್ನು ದೃಷ್ಟಿಸಿ ನೋಡಬಾರದು ಕಾಲಿನಿಂದ ತುಳಿಯಲೂಬಾರದು ಸ್ಪರ್ಶಿಸಲೂಬಾರದು ಇತರರು ಉಪಯೋಗಿಸಿದ ಬಟ್ಟೆಗಳನ್ನಾಗಲಿ, ಪಾದರಕ್ಷೆಗಳನ್ನಾಗಲಿ ಇನ್ನೊಬ್ಬನು ಉಪಯೋಗಿಸಬಾರದು ಮಲಮೂತ್ರಗಳನ್ನು ವಿಸರ್ಜಿಸಿ ಬಂದರೆ ಅಥವಾ ಬೀದಿಯಲ್ಲಿ ಸಂಚಾರಮಾಡಿಬಂದರೆ, ಕಾಲುಗಳನ್ನು ತೊಳೆಯದೆ ನೆಟ್ಟಗೆ ಒಳಕ್ಕೆ ಪ್ರವೇಶಿಸಬಾರದು. ವೇದಾಧ್ಯಯನವನ್ನು ಮಾಡುವುದಕ್ಕೆ ಮತ್ತು ಭೋಜನ ಮಾಡುವುದಕ್ಕೆ ಮೊದಲು ಕೈಕಾಲುಗಳನ್ನು ತೊಳೆದುಕೊಂಡು ಒಳಿತುಕೊಳ್ಳಬೇಕು ಹಲ್ಲುಜ್ಜುವ ಕಡ್ಡಿಗಳಿಂದಲೇ ಹಲ್ಲುಗಳನ್ನು ತಿಕ್ಕಿ ತೊಳೆದು ಶುದ್ಧ ಮಾಡ

[೬ ನೆಯ ಪುಟವನ್ನು ನೋಡಿ]



ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವಶಿಲಾಮೂರ್ತಿ.

ಬಳ್ಳಾರಿ ಡಿ|| ಕೊಟ್ಟೂರು ಟವನ್ನಿನಲ್ಲಿರುವ ರೇ|| ಸಾ|| ಮು|| ಜಾಗಟಗೇರಿ ಸಣ್ಣವೀರಪ್ಪಯ್ಯನವರು ಮತ್ತು ಚನ್ನವೀರಪ್ಪಯ್ಯನವರು ತಮ್ಮ ಗ್ರಾಮದಲ್ಲಿ ವಿಶೇಷ ಧನವ್ಯಯದಿಂದ ನೂತನ ಶಿಲಾಮಂದಿರವನ್ನು ಕಟ್ಟಿಸಿರುವರು. ಅವರು ತಾವು ಕಟ್ಟಿಸಿರುವ ಭವ್ಯಮಂದಿರದಲ್ಲಿ ತಮ್ಮ ಮತಾಚಾರ್ಯರಾದ ಶ್ರೀಜಗದ್ಗುರು ರೇಣುಕಾಚಾರ್ಯರ ಶಿಲಾವಿಗ್ರಹವನ್ನು ಸ್ಥಾಪಿಸಬೇಕೆಂಬ ಸಂಕಲ್ಪವನ್ನು ಮಾಡಿ ಅದರಂತೆಯೇ ಶ್ರೀಜಗದಾಚಾರ್ಯರ ಶಿಲಾವಿಗ್ರಹವನ್ನು ಮೈಸೂರು ರಾಜಧಾನಿಯಲ್ಲಿ ಮಾಡಿಸಿರುವರು. ಈ ಸಾಲಿ ಮನೋಹರವಾಗಿ ವಿರಾಜಿಸುತ್ತಿರುವ ಭಾವಚಿತ್ರವೇ ಆ ಶಿಲಾಮೂರ್ತಿಯದು. ಇದನ್ನು ರಚಿಸಿದ ಶಿಲ್ಪಿಗಳು ಈ ಶಿಲಾಮೂರ್ತಿಯಲ್ಲಿ ಕೈಯಿಂದ ಬರೆದುದಕ್ಕಿಂತಲೂ ಹೆಚ್ಚಾದ ಸೌಂದರ್ಯವನ್ನು ತಂದಿರುವದನ್ನು ನೋಡಿದರೆ ಅವರ ಬುದ್ಧಿಕುಶಲತೆಗೆ ಬೆಲೆಯೇ ಇಲ್ಲವೆಂದು ಹೇಳಬೇಕಾಗುತ್ತದೆ. ಈ ಮೂರ್ತಿಯನ್ನು ಮೈಸೂರು ರಾಜಧಾನಿಯಲ್ಲಿರುವ ಶಿಲ್ಪಸಿದ್ಧಾಂತವಿಶಾರದರಾದ ಶ್ರೀ ಸಿದ್ಧಲಿಂಗಸ್ವಾಮಿಗಳೆಂಬವರು ಕೆತ್ತಿರುವರು. ಇವರು ಪ್ರಾಚೀನ ಶಿಲ್ಪಶಾಸ್ತ್ರವನ್ನು ಬಹು ಚೆನ್ನಾಗಿ ತಿಳಿದುಕೊಂಡು ಆ ಶಿಲ್ಪಕಲೆಯನ್ನು ಅಭಿವೃದ್ಧಿಗೆ ತರಬೇಕೆಂದು ಹಗಲಿರುಳೂ ಅದರಲ್ಲಿಯೇ ನಿರತರಾಗಿರುವರು. ಪ್ರಾಚೀನ ಶಿಲ್ಪಕಲೆಯಲ್ಲಿ ಇವರನ್ನು ಮೀರಿಸಿದವರು ಭರತಖಂಡದಲ್ಲಿ ಮತ್ತಾರೂ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇವರಲ್ಲಿ ನೈಸರ್ಗಿಕವಾಗಿ ಪ್ರಾಪ್ತವಾಗಿರುವ ಅನೇಕ ವಿಧವಾದ ಕಲಾಪ್ರತಿಭೆಯನ್ನು ಕಂಡು ಮೈಸೂರು ಶ್ರೀಮನ್ಮಹಾರಾಜರವರು ವಿಶೇಷ ಪ್ರೀತಿವಿಶ್ವಾಸಗಳನ್ನಿಟ್ಟಿರುವರು. ಒಟ್ಟಿಗೆ ಇವರಲ್ಲಿರುವ ಶಿಲ್ಪಕಲಾಪಾಂಡಿತ್ಯವು ಅನ್ಯಾದೃಶವಾದುದೆಂದು ಉದ್ಘೋಷಿಸಬಹುದಾಗಿದೆ. ಈ ಶಿಲ್ಪಶಾಸ್ತ್ರವಿಶಾರದರಿಂದಲೇ ಜಗದಾಚಾರ್ಯರ ಸಮಸ್ತಲೀಲೆಗಳನ್ನು ಶಿಲೆಯಲ್ಲಿ ನಿರ್ಮಿಸಬೇಕೆಂಬ ಆಶೆಯು ನಮ್ಮಲ್ಲಿ ಬಹುದಿನಗಳಿಂದಲೂ ಬೇರೂರಿರುವದು. ನಮ್ಮ ಮನೋರಥವು ಆ ಭಗವತ್ಪಾದರ ಅನುಗ್ರಹದಿಂದಲೇ ನೆರವೇರಬೇಕಾಗಿದೆ. ಅಸ್ತು!

ಶ್ರೀ|| ಚನ್ನವೀರಪ್ಪಯ್ಯನವರು ಅಸಾಧಾರಣ ಗುರುಭಕ್ತಿಯಿಂದೊಡಗೂಡಿ ಜಗದಾಚಾರ್ಯರ ಶಿಲಾವಿಗ್ರಹವನ್ನು ಮಾಡಿಸಿ ಅದನ್ನು ಸ್ಥಾಪಿಸುವದನ್ನು ನೋಡಿದರೆ ಇದು ಆ ಮನೆತನದ ಪುಣ್ಯವಿಶೇಷವೆಂದೇ ಹೇಳಬೇಕಾಗುತ್ತದೆ. ಇವರು ಜಗದಾಚಾರ್ಯರ ಮೂರ್ತಿಯನ್ನು ಸ್ಥಾಪಿಸಿ ಗುರುಭಕ್ತಿವೃದ್ಧಿಗೆ ನೂತನ ಮಾರ್ಗದರ್ಶಕರಾಗಿರುವರೆಂದು ಪರಮಾನಂದಪಡಬೇಕಾಗಿದೆ. ಇದರಂತೆಯೇ ಭರತಖಂಡದಲ್ಲಿರುವ ಗುರುಭಕ್ತರು ಜಗದಾಚಾರ್ಯರ ಶಿಲಾವಿಗ್ರಹಗಳನ್ನು ಮಾಡಿಸಿ ತಮ್ಮ ತಮ್ಮ ಗ್ರಾಮಗಳಲ್ಲಿ ಸ್ಥಾಪಿಸಿದರೆ ಲೋಕೋದ್ಧಾರವಾಗುವದರಲ್ಲಿ ಸಂದೇಹವಿಲ್ಲ. ಅನಿತರಸಾಧಾರಣವಾದ ಗುರುಭಕ್ತಿಯಿಂದ ಆಚಾರ್ಯಮೂರ್ತಿಯನ್ನು ಮಾಡಿಸಿದ ಶ್ರೀ|| ಚನ್ನವೀರಪ್ಪಯ್ಯನವರಿಗೂ, ಭಕ್ತ್ಯುತ್ಸಾಹದಿಂದ ಶಾಸ್ತ್ರಾನುಸಾರವಾಗಿ ಆಚಾರ್ಯಮೂರ್ತಿಯನ್ನು ರಚಿಸಿದ ಶಿಲ್ಪಸಿದ್ಧಾಂತವಿಶಾರದ ಶ್ರೀ ಸಿದ್ಧಲಿಂಗಸ್ವಾಮಿಗಳಿಗೂ ಶ್ರೀಜಗದಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳನ್ನಿತ್ತು ರಕ್ಷಿಸುವದರ ಮೂಲಕ ಇತೋಪ್ಯತಿಶಯವಾದ ದಿವ್ಯಪ್ರತಿಭೆಯನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಯುದ್ಧವಾರ್ತೆ

ರಷ್ಯನರು ಟಾಬ್ರಿಜ್ ದಾಟಿದ್ದಾ

ರಷ್ಯಾ ಸೇನೆಗಳು 50 ಮೈಲಿ ದೂರ
ಹೋಗಿ ನುಗ್ಗಿವೆಯೆಂದೂ, ಟಾಬ್ರಿಜ್ ಆಗ್ನೇಯ
ಮೈಲಿ ದೂರದಲ್ಲಿರುವ ಟರ್ಕ್ ಮಂಚೈ ಎಂಬ
ತಲುಪಿವೆಯೆಂದೂ, ಅಲ್ಲಿಂದ ಮುಂದಕ್ಕೆ
ಚಲಿಸುತ್ತಿವೆಯೆಂದೂ, ಎಲ್ಲ ಕಡೆಗಳಿಂದಲೂ
ಗಳು ಬಹಳ ವೇಗವಾಗಿ ಮುಂದೆ ಹೋ
ಯೆಂದೂ ರಷ್ಯಾಪ್ರಕಟನೆಯು ತಿಳಿಸುತ್ತದೆ

ಇರಾನಿನಿಂದ ಜರ್ಮನಿ ಹೆಂಗಸ ಮಕ್ಕಳ ರವಾನೆ

ಇರಾನಿನಲ್ಲಿರುವ ಜರ್ಮನ್ ಹೆಂಗಸರನ್ನೂ
ಳನ್ನೂ ಟರ್ಕಿಯ ಮೂಲಕ ಸಾಗಿಸಲು
ಕೊಡಬೇಕೆಂದು ಜರ್ಮನಿ ಸರ್ಕಾರವು ಟರ್ಕಿ
ವನ್ನು ಕೇಳಿದೆ. ಅದಕ್ಕೆ ತುರ್ಕಿ ಸರ್ಕಾರವು ಒಂ
ಒಪ್ಪಿದರೂ ಮಾರ್ಗದಲ್ಲಿರುವ ಟಾಬ್ರಿಜ್ ನಾ
ನಗರಗಳನ್ನು ರಷ್ಯನರು ಆಕ್ರಮಿಸಿರುವದರಿಂದ
ಸದ್ಯ ಸಾಧ್ಯವಿಲ್ಲವೆಂದು ಹೇಳಲಾಗಿದೆ

ವಾನ್‌ಪೇಪನ್ನರು ಉಕ್ರೇನಿಗೆ ಹೋಗುವರಂತೆ!

ವಾನ್‌ಪೇಪನ್ನರು ಇರಾನಿನಲ್ಲಿರುವ ಜನ
ಸ್ತ್ರೀಯರನ್ನೂ ಮಕ್ಕಳನ್ನೂ ಟರ್ಕಿಗೆ ಸಾಗಿ
ಸುವ ವಿಚಾರವನ್ನೂ ಇರಾನ್ ವಿಚಾರದಲ್ಲಿ
ಬೇಕೆಂದು ಜರ್ಮನಿ ಸರಕಾರವು ಮಾಡಿರುವ
ರವನ್ನೂ ಟರ್ಕಿಸರಕಾರಕ್ಕೆ ತಿಳಿಸಿದರೆಂದೂ
ದುಪೇಸ್ಟಿಯಾಸ್ತ ಹೋಗಿ ಅಲ್ಲಿಂದ ಉಕ್ರೇನ್
ರ್ ಹಿಟ್ಲರರನ್ನು ಕಾಣುವರೆಂದೂ ಗೊತ್ತಾ

ಇರಾನ್ ಸರಕಾರದ ರಾಜೀನಾಮೆ

ಇರಾನ್ ಸರಕಾರವು ರಾಜೀನಾಮೆ ಕೊಟ್ಟಿ
ಅಂಕಾರಾದಲ್ಲಿರುವ ಇರಾನ್ ರಾಯಭಾರ
ವರು ತಿಳಿಸಿದ್ದಾರೆ. ಜರ್ಮನರಿಗೆ ಸಹಾಯ
ಮಹಾಪ್ರಧಾನರು ಮನೆಗೆ ಹೋದರು. ಈಗ
ರಷ್ಯನರ ವಿಚಾರದಲ್ಲಿ, ಸಹಾನುಭೂತಿಯುಳ್ಳ
ಮಹಾಪ್ರಧಾನರನ್ನಾಗಿ ನೇಮಿಸಿಕೊಳ್ಳಲಾ
ತಿಳಿದುಬಂದಿದೆ. ಅಂಕಾರಾದಲ್ಲಿ ರಾಜಕೀಯ
ಪಟಿಕೆಯು ವಿಶೇಷವಾಗಿ ಕಂಡುಬರುತ್ತಿದೆ
ರಾಯಭಾರಿಗಳು ವಿದೇಶ ಶಾಖಾಸಚಿವರನ್ನು
ಮೇತಿ ಕೌನ್ಸಿಲ್ ಅಧ್ಯಕ್ಷರೊಡನೆ ಮಾತನಾ
ಅವರು ವಿದೇಶ ಕಚೇರಿಯಿಂದ ಹೊರ
ಜರ್ಮನ್, ಆಫ್ಘನ್, ಇರಾನಿಯನ್, ಸೋ
ಮತ್ತು ಅಮೇರಿಕನ್ ರಾಯಭಾರಿಗಳು ಹೋ
ರನ್ನು ಕಂಡರು. ಶಾಂತಿ ಸಂಧಾನಕ್ಕೆ ಬರ
ಇರಾನ್ ಸರ್ಕಾರವು ಮಾಡಿರುವ ನಿರ್ಧಾ
ಟರ್ಕಿ ವಿದೇಶಾಂಗ ಕಚೇರಿಗೆ ತಿಳಿಸಲ
ಹೇಳಲಾಗಿದೆ

ತುರ್ಕಿಗೆ ಜರ್ಮನರ ಒತ್ತಾಯ

**ಇರಾನಿಗೆ ನೇರವಾಗಿ ಸಹಾಯ ನೀಡಲು
ನಿಯು ಅಶಕ್ತವಾಗಿರುವುದರಿಂದ ಸಹಾಯಕ್ಕಾಗಿ
ಯನ್ನು ಬಲವಂತಪಡಿಸುತ್ತಿರುವುದಾಗಿ ಸುದ್ದಿ
ಟರ್ಕಿ, ಇರಾನ್, ಇರಾಕ್ ಮತ್ತು ಅಫ್ಘಾನಿ
ಗಳು 1932 ರಲ್ಲಿ ಸಂಗ್ರಾಮ ವಿರೋಧ
ಮಾಡಿಕೊಂಡಿದ್ದವು. ಆದಕ್ಕೆ ಟರ್ಕಿಯು ಈಗ
ಬಿಟ್ಟು ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳ
ಜರ್ಮನಿಯು ಟರ್ಕಿಯನ್ನು ಬಲವಂತಪಡಿ
ವದಂತೆ!**

ಟನ್ನಿಗೆ ೫೦೦ ಟ್ಯಾಂಕುಗಳು

ಕೆಯ ಮಿಚಿಗನ್ ಕಾರಖಾನೆಯವರು ಬ್ರಿಟ ರಿಗೆ ೫೦೦ ಟ್ಯಾಂಕುಗಳನ್ನು ಕಳುಹಿಸಿರುವ ಕಟವಾಗಿದೆ

ಟಿಷ್ ವಿಮಾನಗಳ ಕಾರ್ಯ

ಪೂರ್ವದಲ್ಲಿ ಬ್ರಿಟಿಷ್ ಬಾಂಬರುಗಳು ತಮ್ಮ ನ್ನು ಮುಂದುವರಿಸಿ ಟ್ರಿಪೋಲಿ ಬಂದರಿನ ವಮಾಡು 20 ಟನಗಳಷ್ಟು ಬಾಂಬುಗಳನ್ನು ಅನೇಕ ಮಿಲಿಟರಿ ಸ್ಥಾನಗಳ ಮೇಲೆ ನೇರ ಂಬುಗಳು ಬಿದ್ದು 40 ಕಡೆ ಬೆಂಕಿ ಹತ್ತಿಕೊಂ ಣಬಂದಿತು. ಎರಡು ಶತ್ರು ನೌಕೆಗಳು ಮುಳು ವು.

ನರು ತಮ್ಮ ಅಧಿಕಾರಿಯನ್ನೇ ಕೊಂದರು

ದಕ್ಷಿಣ ರಂಗದಲ್ಲಿ ಜರ್ಮನಿಯ ದಂಡನಾ ದ್ದ ಜ॥ ವಾನ್‌ರನ್‌ಸ್ಟೆಡ್‌ರವರನ್ನು ಜರ್ಮ ಳೇ ಕೊಂದುಹಾಕಿರುವರೆಂದೂ ಈ ಸಂಬಂಧ ಕ ದಸ್ತಗಿರಿಗೊಳಗಾಗಿರುವರೆಂದೂ ಮಾಸ್ಕೋ ತಿಳಿಸಿತು. ಆದರೆ ಈ ಸುದ್ದಿಯು ನಿಜವಲ್ಲ ರ್ಮನರು ಹೇಳುತ್ತಿದ್ದಾರೆ

ಟ್ರೇಲಿಯದ ಮಂತ್ರಿಗಳು ಲಂಡನ್ನಿಗೆ ಹೋಗುವರು

ಪ್ರಧಾನರನ್ನು ಬಿಟ್ಟು ಬೇರೆ ಸಚಿವರೊಬ್ಬ ಲಿಯದ ಪರವಾಗಿ ಲಂಡನ್ನಿಗೆ ಕಳುಹಿಸು ಬ್ರಿಟಿಷ್ ಸರಕಾರದವರು ಒಪ್ಪಿದ್ದಾರೆಂದು ಟಿನಲ್ಲಿ ಮಹಾಪ್ರಧಾನರಾದ ಶ್ರೀ ಮೆನ್ಜೀಸ್ ದರು ಶ್ರೀ ಮೆನ್ಜೀಸ್ ಸರಕಾರದ ಮೇಲೆ ಯ ನಿರ್ಣಯವನ್ನು ತರಲಾಗದೆಂದು ಕಾಲಿ ದವರು ನಿರ್ಧರಿಸಿದ್ದಾರೆ. ಪಾರ್ಲಿಮೆಂಟ್ ಪ್ಟೆಂಬರ್ 17ನೇ ತಾರೀಖಿನ ದಿವಸ ಸೇರು ಮಧ್ಯೆ ಅಸಾಧ್ಯ ರಾಜಕೀಯ ಚಟುವಟಿಕೆ ುವ ಸಂಭವವಿದೆ

ಪಾನಿಗೆ ರಷ್ಯದ ಎಚ್ಚರಿಕೆ !

ಪೂರ್ವತೀರದ ಬಂದರುಗಳ ಮೂಲಕ ಅಮೆ ಗೆ ವ್ಯಾಪಾರ ನಡೆಸುವದಕ್ಕೆ ಜಪಾನೇನಾ ಪಡಿಸುವದಾದರೆ ಅದು ರಷ್ಯದ ಹಿತಕ್ಕೆ ವಿರು ಾರ್ಯವೆಂದು ಭಾವಿಸಲಾಗುವದೆಂದು ರಷ್ಯಾ ಜಪಾನ್‌ಸರ್ಕಾರವನ್ನು ಎಚ್ಚರಿಸಿದೆ. ಈ ವಿಷ ಹಾರಾಯಭಾರಿಗಳು ರಷ್ಯದ ವಿದೇಶಾಂಗ ಕೆಂದು ಅಮೆರಿಕೆಯಲ್ಲಿ ರಷ್ಯವು ಕೊಳ್ಳುವ ೋಲ್ ಮುಂತಾದ ವಸ್ತುಗಳು ವ್ಲಾಡಿವೋ ಮೂಲಕ ರಷ್ಯಕ್ಕೆ ಬರುವದರಿಂದ ಜಪಾನಿಗೆ ವದೆಂದೂ ಈ ಹಡಗುಗಳು ಜಪಾನ್‌ಭೂಮಿಗೆ ಸದಲ್ಲಿ ಬರಬೇಕಾಗುವದೇ ಇದಕ್ಕೆ ಕಾರಣ ವಿಚಾರದಲ್ಲಿ ವಿವರಣೆಕೊಡಬೇಕೆಂದೂ ಅದಕ್ಕೆ ಉತ್ತರವಾಗಿ ರಷ್ಯಾಸಚಿವರು, ಾರಕ್ಕೆ ತಕ್ಕ ವಿವರಣೆಕೊಡುವಂತೆ ಟೋಕಿ ವ ರಷ್ಯಾರಾಯಭಾರಿಗೆ ತಿಳಿಸಿರುವದಾ ವು ವ್ಲಾಡಿವೋಸ್ಟಾಕ್‌ಮೂಲಕ ಸಾಮಾ ರಿಸಿಕೊಳ್ಳುವ ವಿಚಾರದಲ್ಲಿ ಜಪಾನು ಕಳ ಾರಣವಿಲ್ಲವೆಂದೂ, ಇದೇರೀತಿ ಜಪಾನು ಗಳಿಂದ ಸಾಮಾನುತರಿಸಿಕೊಳ್ಳುವ ವಿಚಾ ಭಯಪಡುವದಿಲ್ಲವೆಂದೂ, ಪೂರ್ವಬಂ ಲಕ ನಡೆಯುತ್ತಿರುವ ರಷ್ಯಾ-ಅಮೆರಿಕಾ ಜಪಾನು ಅಡ್ಡಿಮಾಡುವದಾದರೆ ಅದು ವಿರುದ್ಧಕಾರ್ಯವೆಂದು ಭಾವಿಸದೆ ವಿಧಿಯು ರಷ್ಯವು ಅಮೆರಿಕೆಯಿಂದ ಸಾಮಾನುಗಳನ್ನು ದು ಪಶ್ಚಿಮದಲ್ಲಿ ನಡೆಯುತ್ತಿರುವ ಯು ಕೆಗಾಗಿರುವದೆಂದೂ, ಹೇಳಿದರು.

ರಷ್ಯನರು ತಿರುಗಿಬಿದ್ದರು.

ನೀಪರ್ ನದಿಯ ಕೆಳಭಾಗದಲ್ಲಿ ರಷ್ಯನರು ಅಪಾರ ಬಲದೊಂದಿಗೆ ಜರ್ಮನರಮೇಲೆ ತಿರುಗಿಬಿದ್ದರೆಂದೂ ಆದರೆ ಅವರನ್ನು ಹಿಂದಕ್ಕೆ ಅಟ್ಟಲಾಯಿತೆಂದೂ ರುಮೇನಿಯನ್ ಪ್ರಕಟನೆಯು ತಿಳಿಸುತ್ತದೆ. ನೀಪರ್ ನದಿಯ ಅಣೆಕಟ್ಟನ್ನು ಸ್ಫೋಟಕವಸ್ತುಗಳಿಂದ ನಾಶಮಾಡಲಾಗಿದೆಯೆಂದು ಪ್ರಕಟವಾಗಿದೆ

ರೈಲ್ವೆ ಜಂಕ್ಷನ್ ಹಿಡಿದರೆ ?

ಪಕೋಫ್ ಕ್ಷೇತ್ರದಲ್ಲಿರುವ ವೆಲ್ಲಿಕಿಯ ಲೂಕಿ ಎಂಬ ರೈಲ್ವೆ ಜಂಕ್ಷನ್ನನ್ನು ಆಕ್ರಮಿಸಿರುವುದಾಗಿ ಜರ್ಮನರು ತಿಳಿಸುತ್ತಿದ್ದಾರೆ. ಈ ಸ್ಥಾನವು ಬಹಳ ಮುಖ್ಯವಾದುದು. ರಷ್ಯದ ಉತ್ತರ ಮತ್ತು ಕೇಂದ್ರ ಭಾಗದ ಸೇನೆಗಳು ಸಂಧಿಸುವ ಸ್ಥಾನವಿದು. ಈ ಕದನದಲ್ಲಿ 3000 ರಷ್ಯನರು ಸೆರೆಸಿಕ್ಕರೆಂದು ಜರ್ಮನರು ಪ್ರಕಟಿಸಿದ್ದಾರೆ

ಲೆನಿನ್‌ಗ್ರಾಡ್ ರೇಲ್ವೆ ಮಾರ್ಗವು ನಾಶವಾಗಿದೆಯಂತೆ !

ಲೆನಿನ್‌ಗ್ರಾಡ್ ಮಾಸ್ಕೋ ರೈಲ್ವೆ ಮಾರ್ಗವನ್ನು ಕತ್ತರಿಸಿಹಾಕಿರುವುದಾಗಿ ಜರ್ಮನರು ಹೇಳುತ್ತಿದ್ದಾರೆ. ಉಕ್ರೇನಿನಲ್ಲಿ ರಷ್ಯನರು ಬಹಳ ಉಗ್ರವಾಗಿ ಶತ್ರುಗಳೊಂದಿಗೆ ಹೋರಾಡುತ್ತಿದ್ದರೆಂಬ ವರ್ತಮಾನವಿದೆ. ಒಂದೇ ಒಂದು ಕದನದಲ್ಲಿ ರಷ್ಯನರು 6000 ನಾಜಿಗಳನ್ನು ಕೊಂದರೆಂದೂ, ಜರ್ಮನ್ ವ್ಯೂಹದ ಹಿಂದೆ ರಷ್ಯನರು 8 ಸಂಗ್ರಾಮ ವಸ್ತುಗಳ ಸ್ಥಾನಗಳನ್ನೂ ಮತ್ತು 1 ಪೆಟ್ರೋಲ್ ಟ್ಯಾಂಕುಗಳನ್ನೂ ನಾಶಮಾಡಿದರೆಂದೂ ಪ್ರಕಟವಾಗಿದೆ

ಜರ್ಮನರು ನೀಪರ್ ನದಿಯನ್ನು ದಾಟಿದರು

ಜರ್ಮನ್ ಸೈನ್ಯಗಳು ಭಯಂಕರ ಯುದ್ಧಮಾಡಿ ನೀಪರ್ ನದಿಗೆ ನೀಪ್ರೋಪೆಟ್ರೋವಿಸ್ಕ್ ಬಳಿ ಕಟ್ಟಿದ್ದ ಸೇತುವೆಯನ್ನೂ ಮತ್ತು ಪೆಟ್ರೋವಿಸ್ಕ್ ನಗರವನ್ನೂ ವಶಪಡಿಸಿಕೊಂಡವು. ಕೀವ್ ನಗರದಿಂದ ಕೆಳಕ್ಕೆ ನದಿಯ ಪಶ್ಚಿಮ ದಡದಲ್ಲಿರುವ ಮುಖ್ಯ ನಗರವೊಂದು ರಷ್ಯನರ ಕೈ ತಪ್ಪಿದಂತಾಯಿತು. ನೀಪರ್ ನದಿ ಬಳಿ ನಡೆದ ಯುದ್ಧದಲ್ಲಿ ಇಲ್ಲಿಯವರೆಗೆ ಒಟ್ಟು ೯೫೧೬ ರಷ್ಯನರು ಸೆರೆ ಸಿಕ್ಕಿದ್ದಾರೆಂದು ಜರ್ಮನರು ಪ್ರಕಟಿಸಿದ್ದಾರೆ

ಬಲ್ಗೇರಿಯದಲ್ಲಿ ಜರ್ಮನರ ಅಸಾಧ್ಯ ಸಿದ್ಧತೆ

ಜರ್ಮನರು ಬಲ್ಗೇರಿಯದಲ್ಲಿ ವಿಶೇಷ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆಂದೂ, 10 ಸಾವಿರ ಸೈನಿಕರನ್ನು ಸಾಲೋನಿಕ್ ಪ್ರದೇಶದಲ್ಲಿ ಕೂಡಿಸಿದ್ದಾರೆಂದೂ, ಇವರಲ್ಲಿ ಹೆಚ್ಚು ಜನರು ಪ್ಯಾರಾಚೂಟ್ ಸೈನಿಕರೆಂದೂ, ಜರ್ಮನ್ ವಿಮಾನಗಳು ಬಹುಸಂಖ್ಯೆಯಲ್ಲಿ ಅಲ್ಲಿಗೆ ಬರುತ್ತಿವೆಯೆಂದೂ, ಸೈನಿಕರನ್ನೂ ಸಂಗ್ರಾಮ ಸಲಕರಣೆಗಳನ್ನೂ ಸಾಗಿಸುವ ಭಾರಿ ಹಡಗುಗಳ ಮೇಲ್ವಿಚಾರಣೆ ವಹಿಸಲು ಜರ್ಮನ್ ನೌಕಾಧಿಕಾರಿಗಳೊಬ್ಬರು ಬಂದಿರುವರೆಂದೂ, ಗ್ರೀಸ್ ದ್ವೀಪವಾದ ಸಾಮೋಸ್‌ನಲ್ಲಿ ಸೈನಿಕರನ್ನು ಸಾಗಿಸುವ ಅಸಂಖ್ಯ ಹಡಗುಗಳು ಸಿದ್ಧವಾಗಿವೆಯೆಂದೂ, 10 ಸಾವಿರ ಇಟಲಿ ಯೋಧರು ಅಲ್ಲಿಗೆ ಬಂದಿರುವರೆಂದೂ, ಇಸ್ತಂಬೂಲಿನ ಸುದ್ದಿಯು ತಿಳಿಸುತ್ತದೆ.

ಲವಾಲ್‌ರವರ ಕೊಲೆಯ ಪ್ರಯತ್ನ !

೨೧ ವರ್ಷದ ಪಾಲ್‌ಕೋಲೆಟ್ ಎಂಬವನು ಎಂ. ಪೀರೆ ಲವಾಲ್ ಮತ್ತು ಎಂ. ಮಾರ್ಸೆಲ್ ಡೀಟ್-ಇವರಿಬ್ಬರನ್ನೂ ಕೊಲೆಮಾಡುವ ಪ್ರಯತ್ನಮಾಡಿದನು. ಪೀರೆ ಲವಾಲ್‌ರವರು ಫ್ರಾನ್ಸಿನ ಮೊದಲಿನ ಮಂತ್ರಿಗಳು. ಇವರು ಫ್ರಾನ್ಸ್-ಜರ್ಮನಿಗಳು ಒಂದಾಗಬೇಕೆಂದು ಉಗ್ರವಾಗಿ ಚಳುವಳಿಮಾಡುತ್ತಿರುವರು. ಶ್ರೀ ಡೀಟ್‌ರವರು ನಿಯೋಸೋಷಿಯಲಿಸ್ಟ್ ಪಕ್ಷದ ನಾಯಕರು. ಅಪರಾಧಿಯು ನ್ಯಾಯಾಧೀಶರಮುಂದೆ ಹೇಳಿಕೆಕೊಡುತ್ತ "ಈದಿನ ಮಧ್ಯಾಹ್ನ ನಾನು ವರ್ಸೇಲ್ಸಿಗೆ ಬಂದೆನು. ಸೈನ್ಯಕ್ಕೆ ಸೇರಿ ಯಾರನ್ನಾದರೂ ಕೊಲೆಮಾಡಬೇಕೆಂಬ ಉದ್ದೇಶ ನನಗಿತ್ತು. ಇಂದಿನ ಕೂಟದಲ್ಲಿ ಲವಾಲರೊಬ್ಬರೇ ನನಗೆ ಗೊತ್ತಿದ್ದುದರಿಂದ ಅವರಮೇಲೆ ಗುಂಡು ಹಾರಿಸಿದೆನು" ಎಂದು ಹೇಳಿದನು. ಲವಾಲರು ಆಸ್ಪತ್ರೆಗೆ ಸೇರಿಸಲ್ಪಟ್ಟಾಗ ಅವರಿಗೆ ತೀವ್ರವಾದ ಗಾಯಗಳು ಆಗಿವೆಯೆಂದು ಗೊತ್ತಾಯಿತು. ಕೆಲವು ಗುಂಡುಗಳನ್ನು ತೆಗೆದಿರುವರು. ಹೃದಯದ ಕೆಳಗೆ ಮತ್ತು ಲಿವರ್‌ನಲ್ಲಿರುವ ಎರಡು ಗುಂಡುಗಳನ್ನು ಇನ್ನೂ ತೆಗೆದಿಲ್ಲ. ಜರ್ಮನ್ ಮಿಲಿಟರಿ ಆಸ್ಪತ್ರೆಯಿಂದ ನಿಪುಣರಿಬ್ಬರನ್ನು ಕಳುಹಿಸಲಾಗಿದೆ

ರುಮೇನಿಯಾದಲ್ಲಿ ಪೆಟ್ರೋಲ್ ಎಣ್ಣೆಗೆ ಬರ !

ರಷ್ಯಾ ವೈಮಾನಿಕರು ರುಮೇನಿಯಾದಲ್ಲಿರುವ ಪೆಟ್ರೋಲ್ ಎಣ್ಣೆಬಾವಿಗಳ ಮೇಲೆ ಭಯಂಕರ ರೀತಿಯಿಂದ ಬಾಂಬುಗಳನ್ನು ಸುರಿಸಿದುದರಿಂದ ಎಣ್ಣೆ ಬಾವಿಗಳೆಲ್ಲವೂ ನಾಶವಾಗಿ ಹೋಗಿವೆ. ಇದರಿಂದ ಆ ದೇಶದಲ್ಲಿ ಪೆಟ್ರೋಲ್ ಎಣ್ಣೆಗೆ ಬಹಳ ಅಭಾವವಾಗಿದೆ. ಸೈನಿಕರು ಜರ್ಮನ್ ಅಧಿಕಾರಿಗಳು ಮಾತ್ರ ಪೆಟ್ರೋಲ್ ಬಳಸಬೇಕೆಂದೂ, ಇತರರು ಬಳಸ ಕೂಡದೆಂದೂ ಸರಕಾರದವರು ಆಜ್ಞೆಮಾಡಿದ್ದಾರೆ. ಯಾರಾದರೂ ಈ ಆಜ್ಞೆಗೆ ವಿರೋಧಿಸಿದರೆ ಅವರಿಗೆ ಮರಣ ಶಿಕ್ಷೆಯನ್ನು ವಿಧಿಸಬಹುದಾಗಿದೆ. ರುಮೇನಿಯಾದ ಆಹಾರ ವಸ್ತುಗಳೆಲ್ಲವೂ ಜರ್ಮನಿಗೆ ಹೋಗುತ್ತಿರುವುದರಿಂದ ಅಲ್ಲಿಯ ಜನರು ಅರೆಹೊಟ್ಟೆಯಿಂದ ಕಾಲ ಕಳೆಯಬೇಕಾಗಿದೆ. ಇದರಿಂದ ಜನರಲ್ಲಿ ದಿನೇ ದಿನೇ ಅಸಮಾಧಾನವು ಹೆಚ್ಚುತ್ತ ನಡೆದಿದೆ. ಮೊದಲಿನ ಅನೇಕ ಜನ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಮರಣ ಶಿಕ್ಷೆಯನ್ನು ವಿಧಿಸಲಾಗಿದೆ

ಲೆನಿನ್‌ಗ್ರಾಡ್ ರಕ್ಷಣೆ

ನೌಗರಾಡ್ ನಗರದಿಂದ ರಷ್ಯಸೈನ್ಯಗಳು ಹಿಮ್ಮೆಟ್ಟಿರುವದಾಗಿ ರಷ್ಯಾಸರ್ಕಾರದ ಪ್ರಕಟನೆಯಲ್ಲಿ ತಿಳಿಸಿರುವದರಿಂದ ಇನ್ನು ಆ ನಗರದ ಬಳಿ ಹೋರಾಟ ನಡೆಯುವಂತಿಲ್ಲ. ನೌಗರಾಡಿಗೂ ಮತ್ತು ಅದರ ಪೂರ್ವಕ್ಕೆ 10 ಮೈಲು ದೂರದಲ್ಲಿ ಲೆನಿನ್‌ಗ್ರಾಡಿನಿಂದ ಮಾಸ್ಕೋವಿಗೆ ಹೋಗುವ ರೈಲು ಮಾರ್ಗಕ್ಕೂ ನಡುವೆ ರಷ್ಯನರು ಉಗ್ರವಾಗಿ ಪ್ರತಿಭಟಿಸುವರೆಂದು ಹೇಳಲಾಗಿದೆ. ಈ ಪ್ರದೇಶವು ದಟ್ಟವಾದ ಅರಣ್ಯದಿಂದಲೂ ನದಿಗಳಿಂದಲೂ ಕೂಡಿದೆ. ಲೆನಿನ್‌ಗ್ರಾಡ್ ಕಡೆ ನಾಗರಿಕ ಪ್ರಜೆಗಳು ಆಗಲೇ ರಣರಂಗವನ್ನು ಪ್ರವೇಶಿಸಿದ್ದಾರೆ. ಪಟ್ಟಣವನ್ನು ರಕ್ಷಿಸಿಕೊಳ್ಳಲು ಪ್ರಾಣಪ್ರಯತ್ನ ನಡೆದಿದೆ. ಲೆನಿನ್‌ಗ್ರಾಡಿನಿಂದ ಬಂದವರು ಆ ನಗರದ ರಕ್ಷಣೆ ವ್ಯವಸ್ಥೆಯನ್ನು ಕುರಿತು ಈ ರೀತಿ ಹೇಳಿದ್ದಾರೆ. ಅಲ್ಲಿಯ ಪ್ರತಿಯೊಂದು ಗೃಹವೂ ಒಂದು ಕೋಟೆಯಂತಿದೆ. ಅಗ್ನಿನಿವಾರಕಪಡೆಯವರು ಸದಾ ಕಾದಿದ್ದಾರೆ. ಅಲ್ಲಿಯ ಕಾರ್ಖಾನೆಗಳು ಮೊದಲಿಗಿಂತ ಚುರುಕಿನಿಂದ ಸಂಗ್ರಾಮ ವಸ್ತುಗಳನ್ನು ನಿರ್ಮಿಸುತ್ತಿವೆ. "ಎಲ್ಲರೂ ಯುದ್ಧಕ್ಕೆ ಸಿದ್ಧರಾಗಬೇಕು" ಎಂಬ ಮನೋಭಾವನೆಯಿಂದ ಜನರು ಕೆಲಸಮಾಡುತ್ತಿದ್ದಾರೆ.

ಇದೇ ಸೆಪ್ಟೆಂಬರ್ ೩ನೆಯ ತಾರೀಖು ಬುಧವಾರ ದಿವಸ ಮೈಸೂರು ಅರಮನೆಯಲ್ಲಿ ಹೊಸ ಪಟ್ಟದ ಕುದುರೆಯ ಅಶ್ವಪಟ್ಟಾಭಿಷೇಕ ಮಹೋತ್ಸವವು ನೆರವೇರುವದೆಂದು ತಿಳಿದುಬರುತ್ತದೆ.

ಈಗ್ಗೆ ಕೆಲವು ದಿವಸಗಳಿಂದ ಈ ಪ್ರಾಂತದಲ್ಲಿ ಮಳೆಯಾಗದಿದ್ದುದರಿಂದ ಪ್ರಜೆಗಳು ವ್ಯಸನಾಕ್ರಾಂತರಾಗಿದ್ದರು. ಈಗ್ಗೆ ೪-೫ ದಿವಸಗಳಿಂದ ಉತ್ತಮವಾದ ಮಳೆಯಾಗುತ್ತಿರುವುದರಿಂದ ಸರ್ವರಿಗೂ ಸಂತೋಷವುಂಟಾಗಿದೆ.

[೩ನೆಯ ಪುಟದಿಂದ ಮುಂದುವರಿದುದು]

ಬೇಕು. ಸೂರ್ಯೋದಯಕಾಲದಲ್ಲಿ ಯಾವನೂ ಹಾಸಿಗೆಯಲ್ಲಿ ಮಲಗಿರಬಾರದು. ಒಂದು ಸಲ ಉಜ್ಜಿದ ಹಲ್ಲುಕಡ್ಡಿಯನ್ನು ಬಿಸಾಡಿ ಪ್ರತಿದಿನವೂ ಹೊಸಕಡ್ಡಿಗಳನ್ನು ಉಪಯೋಗಿಸಬೇಕು. ಶಾಸ್ತ್ರನಿಷಿದ್ಧವಲ್ಲದ ಆಹಾರಗಳನ್ನೇ ತೆಗೆದುಕೊಳ್ಳಬೇಕು. ಪೌರ್ಣಮಿ ಮತ್ತು ಅಮಾವಾಸ್ಯೆಯ ದಿನಗಳಲ್ಲಿ ಯಾವ ಆಹಾರವನ್ನೂ ತೆಗೆದುಕೊಳ್ಳಬಾರದು. ಮಲಜಲ ವಿಸರ್ಜನೆಗಳನ್ನು ಮಾಡುವಾಗ ಉತ್ತರಾಭಿಮುಖವಾಗಿ ಕುಳಿತುಕೊಳ್ಳಬೇಕು. ಅಪರಿಚಿತರಾದ ಸ್ತ್ರೀಯರೊಡನೆಯಾಗಲಿ, ಗರ್ಭಿಣಿಯರು ಅಥವಾ ಬಾಣಂತಿಯರೊಡನೆಯಾಗಲಿ ಸಂಭೋಗವನ್ನು ಮಾಡಬಾರದು. ಉತ್ತರ ಮತ್ತು ಪಶ್ಚಿಮದ ಕಡೆಗೆ ತಲೆಯನ್ನಿಟ್ಟು ನಿದ್ರೆಮಾಡಬಾರದು. ರಾತ್ರಿಯಲ್ಲಿಯಾಗಲಿ ಮೈಮೇಲೆ ಯಾವ ಬಟ್ಟೆಯೂ ಇಲ್ಲದೆಯಾಗಲಿ ಸ್ನಾನಮಾಡಬಾರದು. ಯಾವನೂ ಪ್ರತಿದಿನವೂ ಒದ್ದೆಬಟ್ಟೆಯನ್ನು ಉಟ್ಟುಕೊಳ್ಳಬಾರದು. ಧಾನ್ಯಗಳು ಬೆಳೆಯುವ ಹೊಲಗದ್ದೆಗಳಲ್ಲಿ ಮಲಮೂತ್ರಗಳನ್ನು ಬಿಡಬಾರದು. ಮತ್ತು ಗ್ರಾಮಕ್ಕೆ ಬಹಳ ಸಮೀಪದ ಗ್ರಾಮಗಳಲ್ಲಿಯೂ ಮಲಮೂತ್ರಗಳನ್ನು ವಿಸರ್ಜಿಸಬಾರದು. ಜಲಾಶಯಗಳಲ್ಲಿಯೂ ಮಲಮೂತ್ರಗಳನ್ನು ಬಿಡಬಾರದು. ಯಾವ ಆಹಾರವನ್ನು ಭುಜಿಸುವುದಕ್ಕೂ ಮೊದಲು [illegible] ಕಡಿಮೆಯಿಲ್ಲದೆ ಬಾಯಿ ಮುಕ್ಕಳಿಸಿ ಶುದ್ಧವಾಗಬೇಕು. ಆಹಾರವನ್ನು ಭುಜಿಸಿದಮೇಲೆ ಐದಾವರ್ತಿ ಬಾಯನ್ನು ಮುಕ್ಕಳಿಸಬೇಕು. ಆಹಾರವನ್ನು ಭುಜಿಸುವಾಗ ಮೌನದಿಂದ ಭುಜಿಸಬೇಕು. ತಿಂದ ಆಹಾರವನ್ನು ನಿಂದಿಸಬಾರದು. ಧಾನ್ಯದ ಹೊಟ್ಟುಗಳ ಮೇಲೆಯೂ ಕೂದಲು ಬೂದಿ, ಎಲುಬು ಇವುಗಳ ಮೇಲೆಯೂ ಕುಳ್ಳಿರಬಾರದು. ಒಬ್ಬನು ಸ್ನಾನಮಾಡಿದ ಪಾತ್ರೆಯ ನೀರಿನಲ್ಲಿ ಮತ್ತೊಬ್ಬನು ಸ್ನಾನಮಾಡಬಾರದು. ಯಾವುದನ್ನು ತಿನ್ನಬೇಕಾದರೂ ಕುಳಿತಹಾಗೆಯೇ ತಿನ್ನಬೇಕು. ನಡೆಯುವಾಗಲೂ ನಿಂತಿರುವಾಗಲೂ ತಿನ್ನಬಾರದು. ಬೂದಿಯ ಮೇಲೆ ಮಲಮೂತ್ರಗಳನ್ನು ವಿಸರ್ಜಿಸಬಾರದು. ಭೋಜನಕ್ಕೆ ಕುಳಿತಿರುವಾಗ ಕಾಲನ್ನು ತೊಳೆದೇ ಕುಳಿತಿರಬೇಕು. ಒದ್ದೆಯ ಕಾಲಿನೊಡನೆ ಮಲಗಬಾರದು. ಮೈಯನ್ನು ಬೆತ್ತಲೆ ಬಿಟ್ಟುಕೊಂಡು ಮಲಗಬಾರದು. ಮತ್ತೊಬ್ಬರು ಮಿಗಿಸಿದ ಆಹಾರಪದಾರ್ಥಗಳನ್ನು ಕೈಯಿಂದ ಮುಟ್ಟಲೂಬಾರದು. ಒಬ್ಬನ ಮತ್ತೊಬ್ಬನ ತಲೆಯಮೇಲೆ ಹೊಡೆಯಬಾರದು. ಅವನ ತಲೆಕೂದಲನ್ನು ಹಿಡಿದು ಎಳೆಯಬಾರದು. ಸ್ನಾನಮಾಡುವಾಗ ನೀರಿನಲ್ಲಿ ಬಾರಿಬಾರಿಗೂ ತಲೆಯನ್ನು ಮುಳುಗಿಸಬಾರದು. ಇದರಿಂದ ಆಯುಸ್ಸು ಕ್ಷೀಣಿಸುವುದು. ನೀರಿನಲ್ಲಿ ತಲೆಯನ್ನು ಮುಳುಗಿಸಿ ಸ್ನಾನಮಾಡಿ ಬಂದಮೇಲೆ ದೇಹದ ಯಾವ ಅವಯವಕ್ಕೂ ಎಣ್ಣೆಯನ್ನು ಲೇಪಿಸಬಾರದು. ಸ್ವಲ್ಪ ಎಳ್ಳನ್ನು ತಿನ್ನದೆ ಆಹಾರವನ್ನು ಮುಗಿಸಬಾರದು. ತಾನು ತಿಂದು ಮಿಗಿಸಿದ ಎಂಜಲನ್ನೂ, ಎಲೆಗಳನ್ನೂ ಜನಗಳು ವಾಸಮಾಡದ ದೂರಪ್ರದೇಶಕ್ಕೆ ಬಿಸಾಡಬೇಕು. ಕೆಂಪುಬಣ್ಣದ ಹೂಗಳನ್ನು ಮುಡಿಯಬಾರದು. ಸ್ನಾನಮಾಡಿದೊಡನೆ ಮೈಗೆ ಸುಗಂಧವನ್ನು ಲೇಪಿಸಬೇಕು. ಒಬ್ಬನು ಕೆಳಗೆ ಉಡುವ ಬಟ್ಟೆಯನ್ನು ಮೇಲೆ ಹೊದಿಯುವುದಕ್ಕೂ ಹೊದೆಯುವ ಬಟ್ಟೆಯನ್ನು ಉಡುವುದಕ್ಕೂ ಉಪಯೋಗಿಸಬಾರದು. ಹಾಸಿಗೆಯಲ್ಲಿ ಮಲಗುವುದಕ್ಕೆ ಹೋಗುವಾಗ ಅದಕ್ಕಾಗಿಯೇ ಬೇರೆ ಉಡುಪನ್ನು ಉಪಯೋಗಿಸಬೇಕು. ಬೀದಿಯಲ್ಲಿ ಸಂಚಾರಮಾಡುವುದಕ್ಕೂ ಪ್ರತ್ಯೇಕವಾದ ಉಡುಪನ್ನು ಇಟ್ಟಿರಬೇಕು. ಅಮಾವಾಸ್ಯೆ, ಪೌರ್ಣಮಿ, ಮುಂತಾದ ಪರ್ವದಿನಗಳಲ್ಲಿ ಸ್ತ್ರೀಸಂಗವನ್ನು ಮಾಡಬಾರದು. ಆಡು, ಹಸು, ನವಿಲು, ಇವುಗಳ ಮಾಂಸವನ್ನು ತಿನ್ನಬಾರದು. ಒಣಗಿದ ಅಥವಾ ಹಳೆಯ ಮಾಂಸವನ್ನು ತಿನ್ನಬಾರದು. ಬೆಳಗ್ಗೆ ಒಂದುಸಲ ರಾತ್ರಿಯಲ್ಲಿ ಒಂದು ಸಲಮಾತ್ರವೇ ಆಹಾರವನ್ನು ತೆಗೆದುಕೊಳ್ಳಬೇಕು. ಈ ಎರಡು ವೇಳೆಗಳಲ್ಲಿ ಹೊರತು ಬೇರೆ ಯಾವ ವೇಳೆಯಲ್ಲಿಯೂ ಭುಜಿಸಬಾರದು. ಆಹಾರವಸ್ತುಗಳಲ್ಲಿ ಕೂದಲು ಸಿಕ್ಕಿದರೆ ಅಂತಹ ಆಹಾರವನ್ನು ಭುಜಿಸಬಾರದು. ಕ್ಷೇಮಾರೋಗ್ಯವನ್ನು ಬಯಸುವವನು ಆಹಾರಾಂತ್ಯದಲ್ಲಿ ಮೊಸರನ್ನು ಕುಡಿಯಬಾರದು. ಭೋಜನವಾದ ಮೇಲೆ, ಕಣ್ಣು, ಕಿವಿ, ಮೂಗು, ಎರಡುಕೈಗಳು ಇವನ್ನೆಲ್ಲ ಚೆನ್ನಾಗಿ ತೊಳೆಯಬೇಕು. ಹಗಲು ಹೊತ್ತಿನಲ್ಲಿ ಸ್ತ್ರೀಸಂಭೋಗವನ್ನು ಮಾಡಬಾರದು. ಮನೆಯ ಚಾಕರರು ಬಂ[illegible] ಇವರಲ್ಲಿಯೂ [illegible]ಸಬಾರದು. ರಾತ್ರಿಯಲ್ಲಿ ಅತಿಥಿಗಳನ್ನು ಕಂಡ[illegible] ಭೋಜನಮಾಡಿಸುವಾಗ ಅವರನ್ನು ಅಧಿಕವಾಗಿ ಭುಜಿಸುವುದಕ್ಕೆ ಬಾಧಿಸಬಾರದು. ಔತಣಕ್ಕೆ ಹೋದವನೂ ದಾಕ್ಷಿಣ್ಯಕ್ಕಾಗಿ ಮಿತಿಮೀರಿ ತಿನ್ನಬಾರದು.

ವಿವಾಹ ವಿಷಯದಲ್ಲಿ ಯಾವುದೊಂದು ಅಂಗಹೀನವಾಗಿದ್ದರೂ ಅಂತಹ ಕನ್ಯೆಯನ್ನು ಮದುವೆ ಮಾಡಿಕೊಳ್ಳಬಾರದು. ಸಮಾನ ಗೋತ್ರದಲ್ಲಿ ಮತ್ತು ಒಂದೇ ಪ್ರವರದ ಕುಟುಂಬದಲ್ಲಿ ಹುಟ್ಟಿದ ಕನ್ಯೆಯನ್ನು ಮದುವೆಯಾಗಬಾರದು. ವಯಸ್ಸಿನಲ್ಲಿ ತನಗಿಂತಲೂ ದೊಡ್ಡವಳಾದ ಹೆಂಗಸಿನೊಡನೆಯೂ ಕುಷ್ಠರೋಗಗಳುಳ್ಳ ಹೆಂಗಸಿನೊಡನೆಯೂ ಸಂಗಮಿಸಬಾರದು. ಅಪಸ್ಮಾರ ಅಥವಾ ಕುಷ್ಠರೋಗವಿದ್ದವರಾದರೂ ಹಿಂದೆ ಆ ಕುಟುಂಬದಲ್ಲಿದ್ದರೆ ಆ ಕುಟುಂಬದಲ್ಲಿ ಹುಟ್ಟಿದ ಕನ್ಯೆಯನ್ನು ಮದುವೆಯಾಗಬಾರದು. ಹಗಲ ಹೊತ್ತು ನಿದ್ರೆಮಾಡುವುದು ಆಯುಃಕ್ಷಯಕ್ಕೆ ಕಾರಣವು. ಸೂರ್ಯೋದಯವಾದಮೇಲೆ ನಿದ್ರಿಸುವುದರಿಂದಲೂ ಆಯುಸ್ಸು ಕ್ಷೀಣಿಸುವುದು.

ಎಲೈ ಯುಧಿಷ್ಠಿರನೇ! ದೀರ್ಘಾಯುಷ್ಯಾಪೇಕ್ಷೆಯುಳ್ಳವರು ಅನುಸರಿಸಬೇಕಾದ ಮಾರ್ಗಗಳನ್ನೆಲ್ಲಾ ಆದಷ್ಟು ಸಂಗ್ರಹವಾಗಿ ತಿಳಿಸಿದೆನು. ಇನ್ನೂ ಹೆಚ್ಚು ಕೇಳಿ ತಿಳಿಯಬೇಕೆಂಬ ಅಪೇಕ್ಷೆಯು ನಿನಗಿದ್ದರೆ ವೇದತ್ರಯವನ್ನು ಬಲ್ಲ ಪಂಡಿತರಿಂದ ಕೇಳಿ ತಿಳಿ. ಬಹಳ ಮುಖ್ಯವಾಗಿ ಮನುಷ್ಯನ ನಡತೆಯೇ ಅವನ ಅಭ್ಯುದಯಕ್ಕೆ ಕಾರಣವು. ನಡತೆಯಿಂದಲೇ ಕೀರ್ತಿ, ನಡತೆಯಿಂದಲೇ ಮನುಷ್ಯನಿಗೆ ಆಯುರ್ವೃದ್ಧಿಯೆಂದು ತಿಳಿ.

ಶಿವದೀಕ್ಷಾ ಮಹೋತ್ಸವ ಮಟಮಾರಿ

ರಾಯಚೂರು ಡಿ|| ಮಟಮಾರಿ ಗ್ರಾಮದಲ್ಲಿ ಬಿಜ[illegible] ಸಾವಿರದೇವರು ಶ್ರೀ ಷ|| ಬ್ರ| ಚನ್ನವೀರಶಿವಾಚಾರ್ಯರ ಮಠದಲ್ಲಿ ಶ್ರಾವಣಪೂಜಾ ಸಮಾರಂಭವೂ ಮತ್ತು ಪ್ರವಚನವೂ ಚೆನ್ನಾಗಿ ನೆರವೇರಿತು. ಈ ಗ್ರಾಮದಲ್ಲಿ ಪುರಾತನವಾಗಿದ್ದ ಶ್ರೀಗ[illegible]ರ ಮಠವು ಅತಿ ಜೀರ್ಣಾವಸ್ಥೆಯಲ್ಲಿದ್ದುದನ್ನರಿತು ಈ ಗ್ರಾಮದ ಶ್ರೀಮತಿ ಪ್ರೋ| ಪಾ|| ವೀರಮ್ಮನವರು ಅನೇಕ ದಿನಗಳ ಯತ್ನವನ್ನು ಮಾಡಿ ನೂತನವಾದ ಶಿಲಾ ಮಠವನ್ನು ಕಟ್ಟಿಸಿ ತಮ್ಮ ಅಸಾಧಾರಣ ಭಕ್ತಿಯನ್ನೂ ಔದಾರ್ಯವನ್ನೂ ಪ್ರಕಟಿಸಿರುವುದು ತುಂಬಾ ಸ್ತುತ್ಯವಾಗಿದೆ. ಇದಲ್ಲದೆ ಶ್ರಾವಣ ಸಮಾರಂಭವೂ ಸಹ ಮಾತೃಶ್ರೀಯವರ ಉದಾರ ಸಹಾಯದಿಂದಲೇ ಜರುಗಿತೆಂದು ತಿಳಿಸಲು ಅತ್ಯಾನಂದವೆನಿಸುತ್ತದೆ. ಮಾ|| ಪ|| ಚನ್ನಬಸವಪ್ಪಗೌಡರು ಮೊದಲಾದ ಗುರುಭಕ್ತಿಪರಾಯಣರು ತ್ರಿಕರಣಪೂರ್ವಕವಾದ ಸೇವೆಯನ್ನು ಗುರುಗಳಿಗೆ ಸಲ್ಲಿಸಿ ಧನ್ಯರಾದರು.

ಶ್ರಾವಣ ಬ|| ೧೧ ಸೋಮವಾರ ಉದಯ ೮ ಘಂಟೆಗೆ ಶ್ರೀಯುತರಾದ ದೂದಿಬಸಪ್ಪನವರು, ಕುರುಡಿ ವಿರೂಪಾಕ್ಷಪ್ಪಗೌಡರು, ಬಜಾರ ಬಸಪ್ಪನವರು, ಶಿವರೆಡ್ಡಿ ರಾಜಪ್ಪನವರು, ಶ್ರೀಮತಿ ವೀರಮ್ಮನವರೇ ಮೊದಲಾದ ಕೆಲವು ಮಹಿಳೆಯರು ಮೇಲ್ಕಂಡ ಶ್ರೀಗಳವರಿಂದ ಶಿವದೀಕ್ಷೆಯನ್ನು ಪಡೆದು ಪುನೀತರಾದರು. ದೀಕ್ಷಾಕಾರ್ಯವು ವೇ|| ಮಿರ್ಜಾಪುರ ಬಸವರಾಜಶಾಸ್ತ್ರಿಗಳ ಮತ್ತು ಸಿರವಾರದ ಸುತ್ತೂರುಮಠದ ವೇ|| ಶಾಂತಮೂರ್ತೆಪ್ಪನವರ ವೈದಿಕತ್ವದಲ್ಲಿ ವಿಧ್ಯುಕ್ತವಾಗಿ ಜರುಗಿತು. ಅದೇ ದಿನ ಮಧ್ಯಾಹ್ನ ೧೨ ಘಂಟೆಗೆ ಮಿಷ್ಟಾನ್ನದಿಂದ ಗಣಾರಾಧನೆಯು ನೆರವೇರಿತು. ಸಾಯಂಕಾಲ ೬ ಘಂಟೆಯಿಂದ ೮ ರವರೆಗೆ ಸಂಗೀತವಿದ್ವಾನ್ ಶಾಂತಮೂರ್ತಪ್ಪನವರು ತಮ್ಮ ಮಂಜುಳ ಸ್ವರದಿಂದ ಶ್ರೀ ಜಗದ್ಗುರು ರೇಣುಕ ಭಗವತ್ಪಾದರ ಕೀರ್ತನವನ್ನು ಹೇಳಿ ಗುರುಭಕ್ತರಿಗೆ ಪರಮಾನಂದವನ್ನುಂಟುಮಾಡಿದರು. ದೀಕ್ಷಾ ಸಮಾರಂಭವು ಮಾಕ್ತಲ್ ಬೃಹನ್ಮಠದ ಚರಪಟ್ಟಾಧ್ಯಕ್ಷ ಶ್ರೀ ಸಿದ್ಧಲಿಂಗಶಿವಾಚಾರ್ಯ ಸ್ವಾಮಿಗಳವರ ನೇತೃತ್ವದಲ್ಲಿ ನೆರವೇರಿದುದಕ್ಕಾಗಿ ಸಭೆಯಲ್ಲಿ ಅವರಿಗೆ ಆಭಾರವು ಮನ್ನಿಸಲ್ಪಟ್ಟಿತು. ಬಳಿಕ ಶ್ರೀ ಚನ್ನವೀರಶಿವಾಚಾರ್ಯರ ಉಪದೇಶವು ಜರುಗಿ ಆಚಾರ್ಯರ ಜಯಘೋಷದೊಡನೆ ಸಭೆಯು ಸಮಾಪ್ತಿಗೊಂಡಿತು. ಈ[illegible]ರ ಭಕ್ತಿಸಂಪನ್ನರಾದ ಮಟಮಾರಿ ಸದ್ಭಕ್ತರಿಗೂ ಶ್ರೀಮತಿ ವೀರಮ್ಮನವರಿಗೂ ಜಗದಾಚಾರ್ಯರು ಇಷ್ಟಾರ್ಥವನ್ನು ಅನುಗ್ರಹಿಸಲೆಂದು ಹಾರೈಸುವ

ಓರ್ವ ಗುರುಭಕ್ತ, ಮಟಮಾರಿ

ಶಿವಕಥಾಕಾಲಕ್ಷೇಪ ಮೈಸೂರು

ಶಿವರಾಂಪೇಟೆಯಲ್ಲಿರುವ ಧರ್ಮಪರಾಯಣರಾದ [illegible] ತಿಪ್ಪಣ್ಣನವರು ತಮ್ಮ ಧರ್ಮಛತ್ರದಲ್ಲಿ [illegible] ಪ್ರಯುಕ್ತ [illegible] ಕೀರ್ತನಕಾರರಾದ [illegible] ಶ್ರೀ ಜ| ನಂಜುಂಡಾರಾಧ್ಯರವರಿಂದ ಶಿವಭಕ್ತನ [illegible]ಯು ಅಥವಾ ಪತ್ನೀದಾನ ಎಂಬ ಕಥನವನ್ನು ಮಾಡಿಸಿದರು. ಆ ಕಾಲಕ್ಕೆ ಮಾನ್ಯ ಪಂಡಿತರೂ ಉಪಾಧ್ಯಾಯರೂ ಹಿರಿಯರೂ ವಿದ್ಯಾರ್ಥಿಗಳೂ ಸೇರಿದ್ದರು. ಕಾಲಕ್ಕನುಗುಣವಾಗಿ ಅರ್ಥರಸ ಶಿವಕಥೆಯನ್ನು ಮನೋರಂಜಕವಾಗಿ ಮಾಡಿದರು. ಇವರು ಅನೇಕಕಡೆ ಶಿವಕಥಾ ಕಾಲಕ್ಷೇಪದಿಂದ ಜನರನ್ನು ರಂಜಿಸುತ್ತಿದ್ದಾರೆ. ಇವರ ಕಥಾ ಪ್ರವಚನವನ್ನು ಎಲ್ಲರೂ ಕೇಳಬೇಕೆಂಬುವುದೇ ನಮ್ಮ ಪ್ರಾರ್ಥನೆ. ಕಥಾ ಉಪಸಂಹಾರ ಸಮಯಕ್ಕೆ ಧರ್ಮವ್ಯವಸ್ಥಾಪಕರಾದ ರಾ|| ರಾ|| ಎಂ| ಎಲ್|| ನರಸಿಂಹಯ್ಯನವರ ಸೂಚನೆಯಂತೆ ದಿವಂಗತ ಟಾಗೂರರ ಗುಣನಿರೂಪಣಮಾಡುತ್ತಾ, ಆ ಮಹಾನುಭಾವರ ಕೀರ್ತಿಯು ವಿಶ್ವದಲ್ಲೆಲ್ಲಾ ವ್ಯಾಪಿಸಿದೆ. ಸದ್ಯಃ ಅವರು ನಮ್ಮಗಳಿಗೆ ಕಣ್ಮರೆಯಾಗಿದ್ದರೂ “ತ್ಯಜಿಸಿದೊಡೆ ನಿಜತನುವ ಸಜ್ಜನರ್ ಸತ್ಕೀರ್ತಿಕಾಯರಾಗಿರ್ಪುದರಿಂ ಎಂಬ ನಾಣ್ಣುಡಿಯಂತೆ ಕೀರ್ತಿಕಾಯರೂ ಲೋಕಮಾನ್ಯರೂ ಆದ ಇವರ ಆತ್ಮಕ್ಕೆ ಪರಮಾತ್ಮನು ಶಾಂತಿಯೀಯಲೆಂದು ಸರ್ವರೊಡನೆ ಪ್ರಾರ್ಥಿಸಿದರು. ಅನಂತರ ಮಂಗಳಾಚರಣೆಯಿಂದ ಕಥಾಪರಿಸಮಾಪ್ತಿಮಾಡಲ್ಪಟ್ಟಿತು.

ನರಸಿಂಹಯ್ಯ

ಇರಾನ್ ಆಕ್ರಮಣ

ಜರ್ಮನರು ಇತರ ಯೂರೋಪಿಯನ್ ರಾಷ್ಟ್ರಗಳ [illegible] ನಡೆಸಿದಂತೆ [illegible]ರಿಯಿಂದಲೇ ಇರಾನ್ ಪ್ರಾಂತವನ್ನು ಆಕ್ರಮಿಸುವುದನ್ನು ತಪ್ಪಿಸಲು ರಷ್ಯಾ ಮತ್ತು ಬ್ರಿಟನ್ನುಗಳು ಮುಂದಾಗಿ ತಾವೇ ಇರಾನನ್ನು ಆ[illegible] ಚಪ್ರಪಡಿಸುವ ಕಾರ್ಯಕ್ರಮವನ್ನು ಕೈಗೊಂಡಿ ಕಳೆದ ಮಂಗಳವಾರ ರಷ್ಯಾ ಸೈನಿಕರು ಉತ್ತರ ಇರಾನಿನಲ್ಲಿರುವ ಟಾಬ್ರಿಜ್ ಎಂಬ ಮುಖ್ಯನಗರವನ್ನು ಹಿಡಿದಿರುವುದು ಪ್ರಕಟವಾಗಿದೆ. ಇದು ಬಹು ಮುಖ್ಯವ್ಯಾಪಾರಸ್ಥಳವಾಗಿದ್ದು ರೈಲ್ವೆ ಮಾರ್ಗದಲ್ಲಿದೆ. ಈ ನಗರದ ಪೂರ್ವ ಪಶ್ಚಿಮಗಳಲ್ಲಿರುವ ಅರ್ಡೆಬಿಲ್ ಮತ್ತು ಡಿಲ್‌ಮನ್ ಎಂಬ ಎರಡು ನಗರಗಳು ರಷ್ಯನರ ವಶವಾಗಿವೆ. ಪಶ್ಚಿಮ ಮತ್ತು ನೈಋತ್ಯ ಇರಾನಿನ ಬ್ರಿಟಿಷ್ ಮತ್ತು ಭಾರತದ ಪಡೆಗಳು ಸುವ್ಯವಸ್ಥೆಯಿಂದ ಮುಂದುವರಿಯುತ್ತಿವೆ. ಭಾರತೀಯ ಸೈನ್ಯಗಳು ಆ[illegible] ಕ್ಷೇತ್ರದಿಂದ ಎಲ್ಲ ಇರಾನೀ ಪಡೆಗಳನ್ನೂ ಓಡಿಸಿ ಎಣ್ಣೆಕಾರಖಾನೆಗಳ ಹತ್ತಿರ ಇರಾನಿ ಯೋಧನೊಬ್ಬನಿಲ್ಲ. ಎರಡು ಫಿರಂಗಿಗಳೂ ಮೂರು ಶಸ್ತ್ರಬಂಡಿಗಳೂ ಹಸ್ತಗತವಾಗಿರುವುದಲ್ಲದೆ ೩೦೦ ಇರಾನಿಯೋಧರು ಹಿಡಿಯಲ್ಪಟ್ಟಿದ್ದಾರೆ. ಮೇಂಡ್ ಎಂಬ ನಗರವು ವಶವಾಗಿದೆ. ಬಂದರ್ ಷಾಪುರ್ ಎಂಬಲ್ಲಿ ಪರಿಸ್ಥಿತಿ ಶಾಂತವಾಗಿದೆ. ಖಾನಾಕಿನ್ ಪ್ರಾಂತ್ಯದಲ್ಲಿ ಬ್ರಿಟಿಷ್-ಭಾರತೀಯ ಸೈನಿಕರು ಸ್ವಲ್ಪ ಹೊಡೆದಾಡಿ ಗಿಲಾ ಎಂಬ ಊರನ್ನು ಹಿಡಿದರು. ಇನ್ನೊಂದು ಪಡ ಪೆಟಾಕ್ ಎಂಬ ಕಣಿವೆಯ ಕಡೆ ಮುಂದುವರೆಯುತ್ತ ಬ್ರಿಟಿಷ್ ವಿಮಾನಗಳು ಭೂಸೈನ್ಯಕ್ಕೆ ಸಹಾಯನೀ ವವಲ್ಲದೆ, ಬೇರೆ ಬೇರೆ ನಗರಗಳ ಮೇಲೆ ಪ್ರಚಾರಕ್ಕಾಗಿ ಹಸ್ತಪತ್ರಿಕೆಗಳನ್ನು ಚೆಲ್ಲುತ್ತಿರುವುವು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಈ ತರುಣತನದಲ್ಲಿರುವ ಪತ್ರಿಯೊಂದು ಗುರುವರ್ಗಕ್ಕೆ ಮುಖ್ಯ ...ಿ ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ...ರ ಕ್ಕೊಮ್ಮೆ ಪತ್ತುವರ್ಷಕ್ಕೊಮ್ಮೆ ಒಂದುಸಾರಿ ಹೋಗಿ ಶಿಷ್ಯ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಆದರೆ ... ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯ ... ಬಾರುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಬಿಡುವರು ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ... ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿದೆ. ಇದನ್ನು ...ಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ಮಾದ್ರಿಯಾಗಿ ಸಿದ್ಧಪಡಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ ವಿವರ ಕೋರಿಸಲ್ಪಟ್ಟಿದೆ ಆದುದರಿಂದ ಸದರಿ ಪುಸ್ತಕ ...ವನ್ನುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ...ದರಂತೆ ವಿವರವನ್ನೆಲ್ಲಾ ಬರೆದು ನಂಬಿಕಾರ್ಹವಾಗಿ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು ಇದಕ್ಕಾಗಿ ಕೆಲವಂಶ ಕಾಗದವನ್ನು ಉಪಯೋಗಿಸಿರುವದಲ್ಲದೆ ಸುಂದರ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ

ಶ್ರೀ **ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,**
ಮೈಸೂರು

...ಸ್ತ್ರೋಕ್ತ ದಿವ್ಯೌಷಧಗಳು.

...ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ...ಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ...ಲ್ಪಕ್ರಯದಲ್ಲಿ ದೊರೆಯುವುವು

...ಧಿ ಹೆಸರು	ತೊಲೆ	ಮೂಲ್ಯ
...ಮಕರಧ್ವಜ	೧	೩೦—೦—೦
ಚಂದ್ರೋದಯ	೧	೧೦—೦—೦
೨ನೇ ನಂಬರ್	೧	೮—೦—೦
...ದೂರ	೧	೨—೦—೦
...ಧೂರ	೧	೪—೦—೦
...ದೂರ	೧	೪—೦—೦
...ದೂರ	೧	೬—೦—೦
...ಪಗ	೧	೩—೦—೦
...	೧	೧—೦—೦
ಭಸ್ಮಗಳು		
...ಭಸ್ಮ	೧	೪೦—೦—೦
...ಭಸ್ಮ	೧	೪—೦—೦
...ಭಸ್ಮ	೧	೦—೭—೦
...ಭಸ್ಮ	೧	೦ ೧೨—೦
...	೧	೦—೮—೦
...	೧	೦—೬—೦
...ಭಸ್ಮ	೧	೪೦—೦—೦
...	೧	೩—೦—೦
...ಭಸ್ಮ	೧	೦—೮—೦
...ಭಸ್ಮ	೧	೦—೮—೦
...	೧	೦—೮—೦
...ತಾಂಭಸ್ಮ	೧	೦—೮—೦
...ಮಾಕ್ಷಿಕ ಭಸ್ಮ	೧	೦ ೧೨—೦
...ಭಸ್ಮ	೧	೪೦—೦—೦
...ಭಸ್ಮ	೧	೦—೮—೦
...ಚಿಪ್ಪಿನ ಭಸ್ಮ	೧	೦—೮—೦
...ಂಗದ ಕೋಡಿನ ಭಸ್ಮ	೧	೦—೮—೦
...ಚಂತಿಹರತಾಲಭಸ್ಮ	೧	೦—೮—೦
...ರಿ (೧ನೇ ನಂಬರ್)	೧	೫೦—೦—೦
...ಜಿತ ಸೂರ್ಯಪುಟ	೧	೧—೦—೦
...ಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ...ಶ ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ...ಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು.ಪಿ

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತನಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿ ನಾಮಾವಳಿ ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ** ವಿ. ಪಿ. ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಬೇಕೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮ ಪ್ರಾಂತದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬಿಳಿಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಕ್ಲಾಂಥಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಷ್ಪ್ರಾಪ್ಯವಾಗುವ ಮುನ್ನ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ **ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ ಗೆ ದೊರೆಯುವುದು ವಿ. ಪಿ. ಚಾರ್ಜು ೧ ರೂ ೫ ಆಣೆ ಪ್ರತ್ಯೇಕ.**

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ಒಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೧—೬
ಪೈ ಶ್ರೀಕಾಶೀಜಗದ್ಗುರುಗಳಾದಿ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೭—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ಒಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ಒಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ ..	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ಒಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೭—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ಒಕ್ಕೆ	೦—೬—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಒಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ ಪದ್ಧತಿಯಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲ್ಪಡುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುತ್ತಾರೆ. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂದು ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಎಲ್ಲಾ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಸಹ ಹೆಚ್ಚು ಮಾಡುತ್ತದೆ. ಸೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ. ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ. ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್.

[16] ಪೋ. ಬಾ. ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಶಾಸ್ತ್ರವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ) ...	೨ ಆಣೆ
ಪಂಚಾಚಾರ್ಯಪ್ರಭಾಕರ ...	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಶಾಸ್ತ್ರವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ) -	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ

ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ) ...	೧೨ ಆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮುಖ್ಯವಾದ ಫೋಟೋಗಳಿರುವುವು)	೧| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨ ಪುಟ)	೮ ರೂ
A brief life sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*) ..	**8 As**
Speeches by Pandit Shri Kashinatha Shastriji *English*)	**12 As**
लिंगधारणचंद्रिका (संस्कृत)	३ रु
वीरशैवमत (मराठी)	१ रु
महानारायणोपनिषत् (वीरशैवभाष्य–संस्कृत)	१ रु.
पुरुषसूक्तम् (वीरशैवप्राचीनभाष्योपेतम्)	४ आ
नंदिकेश्वरकारिका (संस्कृत)	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೮ನೇ ಸೆಪ್ಟೆಂಬರ್ ೧೯೪೧ [ಸಂಚಿಕೆ ೧೯

ಯುದ್ಧವಿಷಯದಲ್ಲಿ
ಶ್ರೀಮನ್ಮಹಾರಾಜರವರ ಸಂದೇಶ.

ಶ್ರೀಮನ್ಮಹಾರಾಜರು ೩ ನೇ ತಾರೀಖಿನ ಸಾಯಂಕಾಲ ಮೈಸೂರು ಅರಮನೆ ಬ್ರಾಡ್‌ಕಾಸ್ಟಿಂಗ್ ಸ್ಟೇಷನ್ನಿಂದಿವ ಈ ಕೆಳಗೆಕಂಡಂತೆ ಭಾಷಣಮಾಡಿದರು —

ಗಂಭೀರತೆಯಿಂದ ಕೂಡಿದ ಇಂದಿನ ಈ ಸಮಯದಲ್ಲಿ, ನಾವು ನಮ್ಮ ಕನ್ನಡಿಗರೆಲ್ಲರಿಗೂ ನಮ್ಮ ತಾಯಿನುಡಿಯಾದ ಕನ್ನಡದಲ್ಲಿ ಒಂದು ಸಂದೇಶವನ್ನು ಕಳುಹಿಸಬೇಕೆಂದು ಅರಿಕೆಯು ಬಂದಿದೆ. ಆದಕಾರಣ, ಮೈಸೂರು ಸಂಸ್ಥಾನದಲ್ಲಿ ಮಾತ್ರವೇ ಅಲ್ಲದೆ, ಮದರಾಸು, ಮುಂಬಾಯಿ, ಕೊಲ್ಹಾಪುರ, ಹೈದರಾಬಾದು ಮುಂತಾದ ಅನೇಕಕಡೆಗಳಲ್ಲಿಯೂ ಇರುವ ಒಟ್ಟು ಒಂದುಕೋಟಿ ಮೂವತ್ತುಲಕ್ಷ ಮಂದಿ ಕನ್ನಡಿಗರ ಪ್ರತಿನಿಧಿಗಳಿಗೂ ಈ ಸಂದೇಶಭಾಷಣ ಮಾಡುತ್ತಿರುವೆವು. ಈಗಿನ ಘೋರ ಯುದ್ಧದ ಮೂರನೆಯ ವರ್ಷವು ಇಂದು ಪ್ರಾರಂಭವಾಗಿದೆ. ಆ ಸಂಬಂಧವಾಗಿ, ನಾವುಗಳು ನಮ್ಮ ನಮ್ಮ ಸ್ಥಳಗಳಲ್ಲಿ ಸಭೆಗಳನ್ನು ನಡೆಯಿಸುತ್ತಿದ್ದೇವೆ. ಪ್ರಪಂಚದಲ್ಲಿ ಇದುವರೆಗೆ ನಡೆದಿರುವ ಯುದ್ಧಗಳಲ್ಲಿ ಇದೇ ಅತ್ಯಂತ ದೊಡ್ಡಯುದ್ಧ: ಇದೇ ಅತಿ ವಿಷಾದಘಟನೆಗಳಿಂದ ಕೂಡಿರುವ ಅತ್ಯಂತ ಘೋರವಾದ ಯುದ್ಧ. [illegible] ಅನೇಕ ಲಕ್ಷಜನಗಳನ್ನು ಕಳೆದ ಎರಡು ವರ್ಷಗಳಲ್ಲಿ ಈ ಘೋರಯುದ್ಧವು ನುಂಗಿತು. ಆ ವಿಪತ್ತಿನಿಂದ ನಮ್ಮನ್ನು ಪಾರುಮಾಡಿದ ಭಗವಂತನ ಕೃಪೆಯನ್ನು ಸ್ಮರಿಸಿ ಪ್ರಾರ್ಥನೆಯನ್ನು ಸಲ್ಲಿಸಲು ಈ ದಿನ ನಾನಾ ಸ್ಥಳಗಳಲ್ಲಿಯೂ ಸಭೆಗಳು ನಡೆಯುತ್ತಿವೆ. ನಮಗೆ ಬಲವನ್ನೂ, ಸ್ಥಿರನಿಶ್ಚಯವನ್ನೂ, ಲೋಕಕಲ್ಯಾಣಕ್ಕೆ ಸಾಧಕವಾದ ದೈವೀ ಸಂಪತ್ತಿನ ಶಕ್ತಿಗಳೊಡನೆ ಸಹಕರಿಸಿ ವರ್ತಿಸುವ ಮನೋಧರ್ಮವನ್ನೂ ದಯಪಾಲಿಸುವಂತೆ ಭಗವಂತನನ್ನು ಪ್ರಾರ್ಥಿಸುವುದಕ್ಕಾಗಿಯೂ, ಇಂದಿನ ಸಭೆಗಳು ನಡೆಯುತ್ತಿವೆ. ಸಾವಿಗಿಂತಲೂ ಕೀಳೆನಿಸುವ ದಾರುಣ ಪರಿಣಾಮದಿಂದ, ದೈವೀಸಂಪತ್ತಿನ ಶಕ್ತಿಗಳು ಮಾತ್ರವೇ ನಮ್ಮನ್ನು ಪಾರುಮಾಡಿ ಉದ್ಧರಿಸಬೇಕು

ಕಳೆದ ಎರಡುವರ್ಷಗಳಲ್ಲಿ ನಡೆದಿರುವ ಭೀಕರವಾದ ಘಟನೆಗಳನ್ನು ಇತಿಹಾಸದೃಷ್ಟಿಯಿಂದ ಪರಿಶೀಲಿಸಿ ನೋಡಿದರೆ ನಮಗೆ ತೋರುವುದೇನು? ಅಸುರೀ ಶಕ್ತಿಗಳು ಹಿಂದೆ ಎಂದೂ ಇಲ್ಲದಷ್ಟು ಉಗ್ರವಾಗಿ ಈಗ ವಿಜೃಂಭಿಸುತ್ತಿವೆ. ಇವು ಇಷ್ಟುಮಟ್ಟಿಗಿರಬಹುದೆಂದು ನಂಬುವುದೇ ಈ ಯುದ್ಧಕ್ಕೆ ಮುಂಚಿನ ದಿವಸಗಳಲ್ಲಿ ಸಾಧ್ಯವಿರಲಿಲ್ಲ. ಪ್ರಪಂಚದಲ್ಲಿ ಅವರ ಕೇಡಿಗತನದ ಕೆಟ್ಟಪರಿಣಾಮವುಂಟಾಗುವುದನ್ನು, ನಾವುಗಳು ಮುಂಚಿನಿಂದಲೂ ಚೆನ್ನಾಗಿ ಅರಿತಿದ್ದೆವು. ಅಲ್ಲದೆ, ಅವರ ಹಾವಳಿಗೀಡಾಗದಂತೆ ಇತರ ಜನರೂ ಇತರ ಜನಾಂಗಗಳೂ ಎಚ್ಚರಿಕೆಯಿಂದಿರುವುದು ಅವಶ್ಯಕವೆಂಬುದನ್ನೂ ನಾವುಗಳು ಚೆನ್ನಾಗಿ ಬಲ್ಲವರಾಗಿದ್ದೆವು. ಆದಾಗ್ಯೂ ಮನುಷ್ಯ ಸ್ವಭಾವದಲ್ಲಿ ಸಹಜವಾಗಿ ನೆಲಸಿರುವ ಒಳ್ಳೆಯ ಪ್ರವೃತ್ತಿಗಳುಂಟೆಂದೂ, ನಾವುಗಳು ನಂಬಿದ್ದೆವು. ಅಲ್ಲದೆ ಒಬ್ಬ ಮನುಷ್ಯನು ಎಷ್ಟೇ ಕೆಟ್ಟವನಾಗಿದ್ದರೂ, ಅವನಲ್ಲಿ ಕೂಡ, ಸ್ವಲ್ಪಮಟ್ಟಿಗೆ ದೈವೀಸಂಪತ್ತು ನೆಲಸಿರುವುದೆಂದೂ ನಾವುಗಳು ನಂಬಿದ್ದೆವು. ಆದಪರಿಂದ ಅತ್ಯಂತ ದುಷ್ಟರಾದವರ ಕೇಡಿಗತನಕ್ಕೂ ಸಹ, ಪರಿಣಾಮದಲ್ಲಿ ಪರಿಮಿತಿಗಳುಂಟೆಂಬುದು ನಮಗಿದ್ದ ಭರವಸೆ. ಮತ್ತು ಆ ಬಗೆಯ ಪರಿಮಿತಿಗಳನ್ನು ಮೀರಿದ ದುಷ್ಟತನವನ್ನು ತೋರಿಸಲು ಅವರು ಹಿಂತೆಗೆಯುವರೆಂಬುದು ನಮಗಿದ್ದ ಭರವಸೆ. ಈ ಭರವಸೆಯು ಗಾಢವಾಗಿದ್ದ. ಶ್ರೇಷ್ಠಲೇಖಕನೊಬ್ಬನು ಒಂದುಸಲ ಹೇಳಿದುದನ್ನು ಕೇಳಿ "ಯಾರು ಎಷ್ಟೇ ಕೆಟ್ಟಿದ್ದರೂ ಪರಿಣಾಮದಲ್ಲೇನೊ ಸಭ್ಯತೆಯ ಪ್ರವೃತ್ತಿಗೇ ಜಯವೆಂಬುದು ನನ್ನ ನಂಬಿಕೆ. ನಾನು ನರಕಕ್ಕೇ ಹೋದರೂ ನನಗೆ ಇದೇ ನಂಬಿಕೆಯೇ ಸ್ಥಿರ" ಎಂದು ಆತನು ಹೇಳಿದ್ದಾನೆ. ಆತನು ಯೂರೋಪುಖಂಡದ ಈಗಿನ ಸ್ಥಿತಿಯನ್ನು ನೋಡಿದ್ದರೂ ಅದೇ ನಂಬಿಕೆಯು ಆತನಿಗಿರುತ್ತಿದ್ದಿತೇ—ಎಂದು ನಮ್ಮ ಮನಸ್ಸಿನ ಸಂದೇಹ. ಕ್ರಾಂತಿಯನ್ನೂ ಕೊಲೆಯನ್ನೂ ತಮ್ಮ ಕ್ರೂರಕಲೆಯಾಗಿ ಪರಿಣಾಮಗೊಳಿಸುವ ಜನರೂ ಈ ಪ್ರಪಂಚದಲ್ಲಿದ್ದಾರೆಂಬುದು, ಈ ಯುದ್ಧವು ಒದಗಿದುದರ ದೆಸೆಯಿಂದ ನಮಗೆ ಮನವರಿಕೆಯಾಯಿತು. ಸುಳ್ಳುಗಳೂ, ದ್ರೋಹವೂ. ಆ ದುಷ್ಟರು ಸಂತತವಾಗಿ ಪ್ರಯೋಗಿಸುವ ಆಯುಧಗಳು; ಸಭ್ಯತೆಯ ಭಾವನೆಯಾಗಲಿ ಅಥವಾ ಮನಸ್ಸಾಕ್ಷಿಯ ಅಳುಕಾಗಲಿ ಲೇಶವೂ ಇಲ್ಲದೆ, ಅವರು ಆ ಆಯುಧಗಳನ್ನು ಪ್ರಯೋಗಿಸುವರು. ಆಪ್ತರಾದ ತಮ್ಮ ಜೊತೆಯವರನ್ನೇ ಕೊಲೆಮಾಡಲು ಅವರು ಸಿದ್ಧ. ತಮ್ಮ ರಾಜ್ಯದಾಹವು ತೃಪ್ತಿಹೊಂದುವಂತಿದ್ದರೆ ಸಾಕು: ಆ ದುಷ್ಟರು ಅನೇಕ ಲಕ್ಷಗಟ್ಟಲೆಯಾಗಿ ತಮ್ಮ ಬುಡಕಟ್ಟಿಗೆ ಸೇರಿದ ಬಾಂಧವರನ್ನೇ ಬಲಿಕೊಡಲು ಸಿದ್ಧ. ಅವರು ಗೆದ್ದು ಸ್ವಾಧೀನಪಡಿಸಿಕೊಂಡ ದೇಶಗಳ ಪ್ರಜೆಗಳು ಆ ದುಷ್ಟರಿಗೆ ಯಾವಬಗೆಯ ಬಾಧೆಯನ್ನೂ ಉಂಟುಮಾಡಿಲ್ಲದ ನಿರಪರಾಧಿಗಳು. ಆದರೂ, ಅವರನ್ನು ಹಸಿವಿನಿಂದ ಸೊರಗಿಸಿ, ಹಿಂಸೆಪಡಿಸಿ ನಾಶಮಾಡುವುದರಲ್ಲಿ ಆ ದುಷ್ಟರಿಗೆ ದೊಡ್ಡದೊಂದು ಆನಂದ. ಕೇಡಿಗತನದ ಈ ಬಗೆಯ ಪೆಡಂಭೂತಗಳ ಹಾವಳಿಗೆ ಅವಕಾಶವಾಗಿರುವುದರ ಕಾರಣವಾದರೂ ಏನು? ಅಂತರಾತ್ಮಸಾಕ್ಷಿಯೆಂಬುವರ ಗೊಡವೆಯನ್ನೇ ಅವರು ಬಿಟ್ಟಿರಬೇಕು; ಭಗವಂತನಿರುವನೆಂಬ ನಂಬಿಕೆಯೇ ಅವರಿಗೆ ತಪ್ಪಿಹೋಗಿರಬೇಕು. ಒಟ್ಟು ಒಂದು ತಲೆಮಾರಿನ ಜನರೆಲ್ಲರ ಮನಸ್ಸಿಗೂ ಈ ದುಷ್ಟರು ತಮ್ಮ ನಾಸ್ತಿಕಭಾವವನ್ನೇ ಎರೆದಿರಬೇಕು; ಮತ್ತು ಅವರೆಲ್ಲರಿಗೂ ನಾಸ್ತಿಕಭಾವದಲ್ಲಿ ಆದರವಿಲ್ಲದೆ ನಿರ್ವಾಹವಿಲ್ಲದ ಅಧೋಗತಿಯನ್ನು ಉಂಟುಮಾಡಿರಬೇಕು. ಕೇಡಿಗತನದ ಪೆಡಂಭೂತಗಳಿರುವಂತೆ ಆಗಿರುವುದಕ್ಕೆ, ಹೀಗಾದುದೇ ಕಾರಣವೆಂದು ನಮಗೆ ತೋರುತ್ತದೆ. ಶ್ರೀಮಾನ್ ಚರ್ಚಿಲ್‌ರವರ ಮಾರ್ಮಿಕವಾದ ನುಡಿಗಳಲ್ಲಿ ಸೂಚಿಸುವುದಾದರೆ "ಹಿಟ್ಲರ್, ಆತ್ಮಘಾತುಕವಾದ ದ್ವೇಷದ ನೆಲೆ; ಆತ್ಮಘಾತುಕವಾದ ದ್ವೇಷದ ಮೂರ್ತಿ ಸ್ವರೂಪ" ಆದಕಾರಣ ಈ ಯುದ್ಧವು ನ್ಯಾಯಕ್ಕಾಗಿ ಹೋರಾಡಿ ಅನ್ಯಾಯವನ್ನು ಅಡಗಿಸಲು ನಡೆಯುತ್ತಿರುವ ಯುದ್ಧ, ಒಳ್ಳೆಯತನದ ಸಲುವಾಗಿ ಹೋರಾಡಿ ಕೇಡಿಗತನವನ್ನು ಅಡಗಿಸಲು ನಡೆಯುತ್ತಿರುವ ಯುದ್ಧ: ದೈವೀಶಕ್ತಿಯ ಸಲುವಾಗಿ ಹೋರಾಡಿ ಅಸುರೀ ಶಕ್ತಿಯನ್ನು ನಿಗ್ರಹಿಸಲು ನಡೆಯುತ್ತಿರುವ ಯುದ್ಧ

ಇವಿಷ್ಟೂ ಒತ್ತಟ್ಟಿನ ಪರಿಶೀಲನದಿಂದ ಗೊತ್ತಾಗುವ ಅಂಶಗಳು. ಈಗ ಅದೇಪರಿಸ್ಥಿತಿಯನ್ನೇ ಮತ್ತೊಂದು ಕಡೆಯಿಂದ ಪರಿಶೀಲಿಸಿ ನೋಡೋಣ. ಕೇಡಿಗತನದ ಈ ಪೆಡಂಭೂತಗಳು ಈಗ ಸಾಧಿಸಿರುವಷ್ಟು ಮಟ್ಟಿನ ಜಯವು ಲಭಿಸಲು ಏತರಿಂದ ಅವಕಾಶವುಂಟಾಯಿತು? ಈ ಪ್ರಶ್ನೆಯ ಉತ್ತರವೂ ಸ್ಪಷ್ಟವಾಗಿಯೇ ಇದೆ. ಐಕಮತ್ಯದ ಅಭಾವ ಎಂಬ ಎರಡೇ ಮಾತುಗಳಲ್ಲಿ ಅದಕ್ಕೆ ಉತ್ತರ ಹೇಳಬಹುದು. ಐಕಮತ್ಯದ ಅಭಾವವೆಂದಮೇಲೆ, ಸೋದರಭಾವನೆಯ ಅಭಾವವೆಂದು ಅರ್ಥ, ನೆರೆಯವರ ಹಿತಸಾಧನೆಗೆ ಲಕ್ಷ್ಯಕೊಡುವ ಗುಣದ ಅಭಾವವೆಂದು ಅರ್ಥ; ತಾವು ತಪ್ಪಿಸಿಕೊಳ್ಳುವುದು ಹೇಗೆ ಸಾಧ್ಯವೆಂಬುದೇ ಮುಖ್ಯವೆಂದು ಯೋಚಿಸಿ, ಅಷ್ಟಕ್ಕೆ ಮಾತ್ರವೇ ಗಮನಕೊಡುವ ಮನೋವೃತ್ತಿಯೆಂದು ಅರ್ಥ. ನಿಮ್ಮಲ್ಲಿ ಕಾಡುಮೃಗಗಳ ಜೀವನವನ್ನು ಬಲ್ಲವರಿಗೆ ಚೆನ್ನಾಗಿ ಗೊತ್ತಿರುವ ಕೆಲವು ಸಂಗತಿಗಳನ್ನು ಸೂಚಿಸಲಿಚ್ಛಿಸುವೆವು. ಕಾಡೆಮ್ಮೆಗಳ ಒಂದು ಮಂದೆಯು ಪೊದೆಯಮೇಲೆ ನುಗ್ಗಿದರೆ ಸಾಕು, ಅವುಗಳು ಅದರಲ್ಲಿ ಹುದುಗಿಕೊಂಡಿರುವ ಹುಲಿಯನ್ನು ಕೂಡ ಹೊರಗೆ ಹೊರಡಿಸಿ, ಹೆದರಿಸಿ, ಅಟ್ಟಿಕೊಂಡು ಹೋಗಬಲ್ಲವು. ಕೆಂದನಾಯಿಗಳ ಒಂದು ಗುಂಪು ಹುಲಿಯನ್ನು ಬೆನ್ನಟ್ಟಿದರೆ ಸಾಕು, ಅವು ಅದನ್ನು ಒಂದೇ ಸಮವಾಗಿ ಓಡಿಸಿಕೊಂಡು, ವಿಶ್ರಮಿಸಿಕೊಳ್ಳುವುದಕ್ಕೆ ಬಿಡದೆ, ಅದನ್ನು ಕೋಟಲೆಪಡಿಸಬಲ್ಲವು, ಪರಿಣಾಮದಲ್ಲಿ ಅದು ತೀರ ಸೋತುಹೋಗುವಂತೆ ದಣಿಸಿ ಕೊನೆಗೆ ಅದರ ಮೇಲೆ ಬಿದ್ದು, ಅದನ್ನು ಕಚ್ಚಿ ಕೊಲ್ಲಬಲ್ಲವು. ಆದರೆ ಕಾಡೆಮ್ಮೆಯೇ ಆಗಲಿ, ಕೆಂದನಾಯಿಯೇ ಆಗಲಿ ಒಂಟಿಯಾಗಿದ್ದು ಹುಲಿಗೆ ಸಿಕ್ಕಿದರೆ ಅದರ ಕಥೆಯು ಅಲ್ಲಿಗೆ ಮುಗಿಯಿತು; ಹುಲಿಯು ಅದನ್ನು ತೀರಿಸಿಬಿಡುತ್ತದೆ. ಈಗಿನ ಯುದ್ಧದ ಸಂಬಂಧವಾಗಿ ನಾವು ಗ್ರಹಿಸಬಹುದಾದ ನೀತಿಯೂ ಇದೇ ಬಗೆಯದಾಗಿದೆ. ಯೂರೋಪುಖಂಡದ ಸಣ್ಣಪುಟ್ಟ ಜನಾಂಗಗಳು ಐಕಮತ್ಯದಿಂದ ಒಟ್ಟುಗೂಡಿ ಯುದ್ಧಕ್ಕೆ ನಿಲ್ಲಬೇಕೆಂದು ಪ್ರಾರಂಭದಲ್ಲಿ ಸಲಹೆಯಾಯಿತು. ಅವು ಹಾಗೆ ಐಕಮತ್ಯದಿಂದ ಒಟ್ಟುಗೂಡಿ ಪರಸ್ಪರವಾಗಿ ಸಹಾಯಮಾಡಿದ್ದರೆ, ಅವುಗಳು ಇನ್ನೂ ದೀರ್ಘಕಾಲ ಯುದ್ಧಮಾಡುತ್ತಿದ್ದುವು. ಆ ಜನಾಂಗಗಳಲ್ಲಿ ಕೆಲವಕ್ಕೆ ಆಗ್ಗೆ ಕೂಡ ಘೋರವಾದ ಕಷ್ಟನಷ್ಟಗಳುಂಟಾಗುವುದು ತಪ್ಪುತ್ತಿರಲಿಲ್ಲ. ಅದೇನೋ ನಿಜವೇ. ಆದರೂ, ಜನಾಂಗಗಳಲ್ಲಿ ಒಂದೊಂದನ್ನೇ ಶತ್ರುವು

[೩ನೆಯ ಪುಟವನ್ನು ನೋಡಿ]

ಶ್ರೀ ರಂಭಾಪುರೀ ಜಗದ್ಗುರುಗಳ ಆಂದೋಲಿಕೋತ್ಸವ

ಅರಸೀಕೆರೆ ತಾ|| ಕಣಕಟ್ಟೆ ಹೋಬಳಿ ರಾಮಪುರದ ಸದ್ಭಕ್ತರ ಪ್ರಾರ್ಥನೆಯ ಮೇರೆಗೆ ಶ್ರೀ ಮಹಾಸನ್ನಿಧಿಯವರು ತಾ। ೩೧-೮-೪೧ ನೇ ಭಾನುವಾರ ಬೆಳಗ್ಗೆ ೧೧ ಘಂಟೆಗೆ ಬಿಜಯಂಗೈಸಿದರು

ಗ್ರಾಮಾಧಿಕಾರಿಗಳಾದ, ರೆವಿನ್ಯೂ ಪಟೇಲ್, ಹಾಗೂ ಛೇರ್ಮನ್‌ರವರಾದ ರಾಮಚ್ಚೇಗೌಡರವರು, ಪೋ|| ಪ|| ಸಿದ್ಧರಾಮೇಗೌಡರು ಮತ್ತು ಶ್ರೀಮಂತ ಚೊಕ್ಕಲಿಂಗಜ್ಜನವರ ಮರುಳೇಗೌಡರು, ಹರಿಯಜ್ಜ ಹೊನ್ನೇಗೌಡರ, ಮರುಳಪ್ಪನವರು, ಛ|| ಸಂಣರಾಮೇಗೌಡರು, ವೇ|| ಮಹಾದೇವಶಾಸ್ತ್ರಿಗಳು, ವೇ|| ಜ. ಗ ಸಿದ್ಧಲಿಂಗಾರಾಧ್ಯರು, ಶಂಭುಲಿಂಗಯ್ಯನವರು, ಸಿದ್ದ|| ಮರುಳಯ್ಯನವರು, ಮ|| ರಾ|| ಛ್ರಿ|| ಲಿಂಗಪ್ಪನವರು, ಚೌಕಿ|| ಮರುಳಪ್ಪನವರು, ಹರಳಪ್ಪನವರು, ಇವರ ತಮ್ಮ ಚೌಕಿ|| ಬಸಪ್ಪನವರು, ತಿಮ್ಮಯ್ಯನವರು ಇವರ ತಮ್ಮ ಹಿರಿಯಪ್ಪನವರ ಇವರ ಮುಖಂಡತ್ವದಲ್ಲಿ ಗ್ರಾಮಸ್ಥರು ಶ್ರೀಮತ್ಪಂಚಾಚಾರ್ಯ ಭಜನಾ ಸಂಘದವರ ಸುಶ್ರಾವ್ಯವಾದ ಸ್ತೋತ್ರಗಳಿಂದಲೂ, ವೇದಘೋಷಗಳಿಂದಲೂ, ಸುಮಂಗಲೆಯರ ಆರತಿಗಳಿಂದಲೂ ಎದುರ್ಗೊಂಡು ಗ್ರಾಮದ ಪ್ರಮುಖ ಬೀದಿಗಳಲ್ಲಿ ಅತ್ಯಂತ ವೈಭವದೊಡನೆ ಶ್ರೀಜಗದ್ಗುರುವರೇಣ್ಯರನ್ನು ಬಿಜಯಂಗೈಸಿಕೊಂಡರು ಸದ್ಭಕ್ತರು ತಮ್ಮ ತಮ್ಮ ಮನೆಗಳ ಮುಂದೆ ಸಾರಣೆಕಾರಣೆಗಳಿಂದ ಅಲಂಕಾರ ಮಾಡಿಕೊಂಡು ಆರತಿ ಬೆಳಗಿ ಕಾಣಿಕೆಗಳನ್ನೊಪ್ಪಿಸಿ ಆಶೀರ್ವಾದ ಪಡೆದರು ಅನಂತರ ಶ್ರೀಮಂತ ಚೊ|| ಮರುಳೇಗೌಡರ ಗೃಹದಲ್ಲಿ ಪೂಜಾನುಷ್ಠಾನವು ನೆರವೇರಿತು ಈ ಉತ್ಸವಕ್ಕೆ ಜಯಚಾಮರಾಜಪುರದ ಶ್ರೀಯುತ ಪರಮೇಶ್ವರಪ್ಪಶೆಟ್ಟರು, ಹುಳಿಯಾರ ಮರುಳೇಗೌಡರು ಮತ್ತು ಹೊಳಲ್ಕೆರೆ ಪ|| ರಾಮಚ್ಚೇಗೌಡರು, ಈ ಗ್ರಾಮದ ಹೆಡ್‌ಮಾಸ್ಟರಾದ ಎ ವಿ ವೆಂಕಟಪತಯ್ಯನವರು ಮತ್ತು ಹೋಬಳಿ ರೆ|| ಇನ್ಸ್‌ಪೆಕ್ಟರು ದಯಮಾಡಿ ಈ ಉತ್ಸವಕ್ಕೆ ಭಾಗಿಗಳಾಗಿದ್ದುದರಿಂದ ಹೆಚ್ಚು ಶೋಭೆಯುಂಟಾಗಿತ್ತು ಜಗದಾಚಾರ್ಯರು ಈ ಗ್ರಾಮದವರಿಗೆ ಸಕಲೈಶ್ವರ್ಯಗಳನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸುವ,

ಪ್ರತ್ಯಕ್ಷದರ್ಶಿ

|| ಶ್ರೀ ಜಗದ್ಗುರು ದಾರುಕಾಚಾರ್ಯಾಯನಮಃ ||

ಮುಕ್ತನ ಲಕ್ಷಣ

ಲೇ—ಮಲ್ಲಿಕಾರ್ಜುನಾಂಧ್ರ ರ ಗವಿಸ್ವಾಮಿರು
ಸುಳೇಮರ ಮುದೇನೂರ

ಯಾರಿಗೆ ವಾರ್ತಾ ಕೀರ್ತಿ ಸಿರಿ ಸಂಪತ್ತು ಗೃಹಕ್ಷೇತ್ರ ಹೆಂಡತಿ ಮಕ್ಕಳು ಇತ್ಯಾದಿಗಳೆಲ್ಲವೂ ವಮನದಂತೆ ಹೇಯವಾಗಿ ಕಾಣುತ್ತವೋ, ಯಾರ ಹೃದಯವು ಅಖಂಡವಾಗಿ ಸರ್ವೋತ್ತಮನಾದ ಪರಮಾತ್ಮನ ಧ್ಯಾನದಲ್ಲಿ ಮಗ್ನವಾಗಿರುವುದೋ, ಯಾರಿಗೆ ನಿತ್ಯದಲ್ಲಿಯೂ ಕ್ಷಣಕ್ಷಣಕ್ಕೆ ಭಗವಂತನಲ್ಲಿಯೇ ಪ್ರೀತಿಯು ಹುಟ್ಟುತ್ತಿರುವುದೋ, ಯಾರಿಗೆ ಭಗವದ್ಭಜನದಲ್ಲಿಯೇ ಪ್ರೇಮವಿದ್ದು, ಅದು ನಿತ್ಯವಲ್ಲಿಯೂ ಹುತ್ತದಂತೆ ಬೆಳೆಯುತ್ತ ಹೋಗುವುದೋ, ಯಾವ ಪುರುಷನು ಒಂದು ಕ್ಷಣವಾದರೂ ಭಗವದ್ಭಜನವಿಲ್ಲದೆ ಕಾಲವನ್ನು ಕಳೆಯುವದಿಲ್ಲವೋ, ಯಾವನ ಅಂತಃಕರಣವು ಸರ್ವಕಾಲದಲ್ಲಿಯೂ ಹರಭಕ್ತಿಯಲ್ಲಿ ಆಸಕ್ತವಾಗಿರುವದೋ, ಯಾರ ಹೃದಯದಲ್ಲಿ ಭಗವಂತನು ಅಚಲವಾಗಿ ವಾಸಮಾಡಿ ಅನಿವಾಂತಸ್ಥಾನದಲ್ಲಿ ವಿಶ್ರಮಿಸಿಕೊಂಡಿರುವನೋ ಇಂಥ ಮಹಾನುಭಾವನು ಸ್ವಾಭಾವಿಕವಾಗಿ ಮಾತನಾಡುವ ವಾಣಿಗಳೆಲ್ಲ ಬ್ರಹ್ಮನಿರೂಪಣವೆಂದು ತಿಳಿಯಬೇಕು ಇಂಥ ಮಹಾತ್ಮನ ಹೃದಯದಲ್ಲಿ ಪರಶಿವನು ವಾಸಮಾಡಿಕೊಂಡು ಕುಳಿತಿರುವುದರಿಂದ, ಅವನಿಗೆ ಪರಮಾತ್ಮನ ಭಕ್ತಿಯು ಹುಚ್ಚು ಹತ್ತಿರುವದು ಅವನು ಭಕ್ತಿಯ ಹೊರತು ಅನ್ಯವಿಷಯದ ಅನುವಾದವನ್ನು ಮಾಡುವದಿಲ್ಲ. ಅಂತರಂಗದಲ್ಲಿ ಅವನಿಗೆ ಪರಮಾತ್ಮನಲ್ಲಿಯೇ ಪ್ರೀತಿಯು ಹತ್ತಿರುವುದರಿಂದ, ಅದರಂತೆಯೇ ಅವನ (ವೈಖರೀ) ವಾಣಿಯು ಅವನ ಮುಖದಿಂದ ಹೊರಬೀಳುವುದು ಅವನು ಪ್ರೇಮದಿಂದ ಕುಣಿಯುತ್ತ, ಭಾವಯುಕ್ತವಾಗಿ ಪರಮಾತ್ಮನ ಕರುಣೆಯನ್ನು ಬೇಡುತ್ತ ನಾಮಸಂಕೀರ್ತನವನ್ನೇ ಮಾಡುವನು ಅವನ ಮನಸ್ಸು ಪರಶಿವನಲ್ಲಿ ಲೀನವಾಗಿರುವುದರಿಂದ, ಅವನಿಗೆ ದೇಹಭಾವದ ಸ್ಮೃತಿಯೇ ಇರುವದಿಲ್ಲ ಭಕ್ತಿಯ ಭರದಲ್ಲಿ ಅವನ ಮೈಮೇಲೆ ಎಚ್ಚರಿಕೆಯು ಇಲ್ಲದಂತಾಗಿ, ಅವನು ಲೋಕದವರ ನಾಚಿಕೆಯನ್ನು ಸಹ ಬಿಟ್ಟುಬಿಡುವನು ಅವನ ಮನಸ್ಸಿನೊಳಗಣ ಸಂಶಯ ವಿಕಲ್ಪಗಳೆಲ್ಲವೂ ದೂರ ಓಡಿಹೋಗಿರುವವು ಇಂತಹ ಸತ್ಪುರುಷನು ಭಗವಂತನ ಪ್ರೇಮದ ಲಹರಿಯಲ್ಲಿ ಮಗ್ನನಾಗಿರುವನು, ಅವನು ಅಹಂಭಾವವನ್ನು ತನ್ನ ಕಾಲಕೆಳಗೆ ಹಾಕಿ ಅದನ್ನು ತುಳಿದು ಬಿಟ್ಟುಬಿಟ್ಟಿರುವನು ಅವನು ಭಗವಂತನ ದಿವ್ಯ ನಾಮಗಾನವನ್ನು ಭಾವನೆಯಿಂದ ಮಾಡುತ್ತ, ನಿಶ್ಶಂಕನಾಗಿ ಕುಣಿಯುವನು, ಇಂತಹ ಭಕ್ತಿಯ ಉದ್ರೇಕದಲ್ಲಿ ಅವನ ದೃಷ್ಟಿಗೆ ಭಗವಂತನು ಕಾಣುವನೇ ಹೊರತು, ಜನರು ಕಾಣುವದಿಲ್ಲ ಅವನ ದೃಷ್ಟಿಯು ಮುಂದೆ ತ್ರೈಲೋಕ್ಯನಾಯಕನಾದ ಪರಮಾತ್ಮನೇ ಸದೋದಿತವಾಗಿ ನಿಂತಿರುವನು ಈ ಪ್ರಕಾರ ಯಾವನ ಹೃದಯವು ಭಗವಂತನಲ್ಲಿ ಅನುರಕ್ತವಾಗಿರುವದೋ ಆ ಮಹಾಪುರುಷನಿಗೆ ಎರಡನೆಯದು ಯಾವದೂ ಬೇಕಾಗಿರುವದಿಲ್ಲ ಅವನು ಸ್ವೇಚ್ಛೆಯಿಂದ ಪರಮಾತ್ಮನ ಧ್ಯಾನ ಕೀರ್ತಿ ಪ್ರತಾಪಗಳನ್ನು ವರ್ಣಿಸುತ್ತಲೇ ಇರುವನು ಅವನು ಪರಮಾತ್ಮನ ನಾನಾ ಪ್ರಕಾರದ ಮೂರ್ತಿಗಳನ್ನು ಧ್ಯಾನಮಾಡುತ್ತಾ ಅವನ ಮಹಿಮಾತಿಶಯಗಳನ್ನು ವರ್ಣಿಸುವನು ಈ ತರದ ಪರಮಾತ್ಮನ ಗಾನದ ಮುಂದೆ ಸರಸ್ವತಿಯು ಅವನಿಗೆ ತೃಣಸಮಾನವಾಗಿ ಕಾಣುವದು ಇರಲಿ, ಹೀಗೆ ಯಾವ ಭಗವದ್ಭಕ್ತನು ವೈರಾಗ್ಯಶೀಲನಾಗಿ ಸಂಸಾರದಲ್ಲಿದ್ದೂ ಸಂಸಾರದ ಮೋಹಕ್ಕೆ ಒಳಗಾಗುವುದಿಲ್ಲವೋ ಅಂಥವನಿಗೆ ಸಾಧು ಸಂತರು ಮುಕ್ತನೆಂದು ಕರೆಯುವರು ಪರಮಾತ್ಮನ ಭಕ್ತಿಯ ಕೌತುಕದ ಭರದಲ್ಲಿ ಅವನ ಮುಖದಿಂದ ಹೊರಟ ವಾಣಿಯೇ ಪ್ರಾಸಾದಿಕ ಕವಿತ್ವ ಅಥವಾ ನಿರೂಪಣವೆನ್ನಬೇಕು ಅವನು ಸಹಜವಾಗಿ ಮಾತನಾಡಿದರೂ, ಅವನ ಪ್ರಾಸಾದಿಕವಾದ ವಾಣಿಯಿಂದ ಜನರಲ್ಲಿ ವಿವೇಕವು ಹುಟ್ಟುವದು ರಾಮಕೃಷ್ಣಪರಮಹಂಸ, ಗೋರಾಕುಂಬಾರ, ಕನಕದಾಸ, ಪುರಂದರದಾಸ, ತುಳಸೀದಾಸ, ನಾಗಮಹಾಶಯ ಇತ್ಯಾದಿಗಳೆಲ್ಲರೂ ಮಹಾಪುರುಷರ ವರ್ಗಕ್ಕೆ ಸೇರಿದವರು ಮನುಷ್ಯನಿಗೆ ಇಂತಹ ಯೋಗ್ಯತೆಯು ಬರಬೇಕಾದರೆ ಬಹು ಜನ್ಮ ಸುಕೃತದ ಸಂಸ್ಕಾರವಿರಬೇಕಾಗುವದು

ವಾಚಕ ಮಹಾಶಯರೆ! ಕೆಂಡವನ್ನು ಇರುವೆಗಳು ಸೋಂಕದಂತೆ ಇಂತಹ ಮಹಾಪುರುಷನನ್ನು ಪಾಪವು ಹೊಂದಲಾರದ ಅವನು ಪಾಪವನ್ನು ಅತಿಕ್ರಮಿಸಿರುತ್ತಾನೆ ಪಾಪವು ಆತನನ್ನು ದಹಿಸಲಾರದು ಪಾಪವನ್ನು ಆತನು ದಹಿಸುವನು ಆತನು ನಿಷ್ಪಾಪನಾಗಿಯೂ, ನಿರ್ಮಲಚಿತ್ತನಾಗಿಯೂ, ಅಂಗೈಯೊಳಗಣ ಆಮಲಕದಂತೆ ಪರಬ್ರಹ್ಮದ ಅಸ್ತಿತ್ವದಲ್ಲಿ ನಿಶ್ಚಲಬುದ್ಧಿಯುಳ್ಳವನಾಗಿ ಬ್ರಹ್ಮೋಪಾಸಕನಾಗುವನು ಯತ್ನವಿಲ್ಲದೆ ಯಾವನು ಸದ್ಧರ್ಮವನ್ನಾಶ್ರಯಿಸಿ ಪರಿಶುದ್ಧಚಿತ್ತನಾಗುತ್ತಿದ್ದಾನೋ ಅವನಿಗೆ ಧರ್ಮವು ಪರಮಬಂಧುವಾಗಿ ಅವನನ್ನು ಬ್ರಹ್ಮರೂಪವಾದಂಥ ನಿಕೇತನ (ಮಂದಿರ)ಕ್ಕೆ ಕರೆದುಕೊಂಡು ಹೋಗುವದು ಅವನು ಅಲ್ಲಿಂದ ಮರಳಿ ಅಧೋಗತಿಯನ್ನು ಹೊಂದುವದಿಲ್ಲವು ಅಂತ್ಯವಿಲ್ಲದ ಪದವಿಯನ್ನು ಹೊಂದುವನು ಆದಪ್ರಯುಕ್ತ—ಯಥಾಕಾರೀ ಯಥಾಚಾರೀ ತಥಾಭವತಿ। ಸಾಧುಕಾರೀ ಸಾಧುರ್ಭವತಿ। ಪಾಪಕಾರೀ ಪಾಪೋ ಭವತಿ। ಪುಣ್ಯಃ ಪುಣ್ಯೇನ ಕರ್ಮಣಾ ಭವತಿ। ಪಾಪಃ ಪಾಪೇನ। (ಮನುಷ್ಯನು ಹೇಗೆ ಮಾಡುವನೋ, ಹೇಗೆ ನಡೆಯುವನೊ, ಅವನು ಹಾಗೆಯೇ ಆಗುತ್ತಾನೆ ಸತ್ಕಾರ್ಯನಿರತನಾದವನು ಸಾಧುವಾಗುತ್ತಾನೆ ದುಷ್ಕಾರ್ಯನಿರತನಾದವನು ಪಾಪಾತ್ಮನಾಗುತ್ತಾನೆ ಪುಣ್ಯಕಾರ್ಯದಿಂದ ಆತ್ಮವು ಪವಿತ್ರವಾಗುತ್ತದೆ ಪಾಪಕಾರ್ಯದಿಂದ ಆತ್ಮವು ಪಾಪಮಯವಾಗುತ್ತದೆ) ಎಂಬ ಪ್ರಮಾಣಾನುಸಾರವಾಗಿ ಮನುಷ್ಯನು ಸಾತ್ವಿಕ ಮಾರ್ಗದಲ್ಲಿದ್ದು ಆತ್ಮನನ್ನೂ ಪವಿತ್ರಮಾಡಿ, ಈಶ್ವರ ಸಹವಾಸವನ್ನೂ ಲಭ್ಯಮಾಡಿಕೊಳ್ಳುವುದು ವಿಹಿತವು.

ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ರೇಣುಕವಿಜಯ ಮಹಾಪುರಾಣಸಮಾಪ್ತಿ ಬೆಳಗಾಂವ

ಬೆಳಗಾವಿಯಲ್ಲಿರುವ ಶ್ರೀ ವೀರಭದ್ರಾಶ್ರಮದಲ್ಲಿ ಶ್ರೀ ರೇಣುಕವಿಜಯ ಮಹಾಪುರಾಣವು ಶ್ರೀ|| ಷ|| ಬ್ರ ಗುರುವರ್ಯಶಿವಾಚಾರ್ಯಸ್ವಾಮಿಗಳಿಂದ ಪ್ರಾರಂಭಿಸಲ್ಪಟ್ಟಿತು ಪುರಾಣಶ್ರವಣಕ್ಕಾಗಿ ಜನರು ವಿಶೇಷವಾಗಿ ಬರುತ್ತಿದ್ದರು. ಪುರಾಣಾದಿಗಳು ಧಾರ್ಮಿಕಭಾವನೆಯನ್ನು ಹೆಚ್ಚಿಸಲಿಕ್ಕೆ ಮೂಲಕಾರಣಗಳೆಂದು ಹೇಳಲು ಏನೂ ಅಭ್ಯಂತರವಿಲ್ಲ ಅಂತೆಯೇ ಈ ಪವಿತ್ರ ಪದ್ಧತಿಯು ಪೂರ್ವದಿಂದಲೂ ರೂಢಿಯಲ್ಲಿ ಬಂದಿರುವುದು ಇತ್ತೀಚೆಗೆ ಶ್ರೀ ಸುತ್ತಗಟ್ಟಿಸ್ವಾಮಿಗಳು ಬೆಳಗಾವಿಯಲ್ಲಿ ಬಂದು, ಜನತೆಯಲ್ಲಿ ಲೋಪವಾಗಿದ್ದ ಧಾರ್ಮಿಕಭಾವನೆಯ ಏಳ್ಗೆಯನ್ನು ಪ್ರವಚನದಿಂದ ಮಾಡುತ್ತಿರುವುದು ಸ್ತುತ್ಯವಾದ ಸಂಗತಿಯಾಗಿದೆ ಈ ಮಹನೀಯರು ಸಮಾಜಸೇವೆಯನ್ನು ಕೈಕೊಂಡಿರುವುದನ್ನು ನೋಡಿ ಪರಮಾನಂದವಾಗುತ್ತಿದೆ ಇವರಂತೆ ವೀರಶೈವಧರ್ಮದೇಳ್ಗೆಯ ಸಲುವಾಗಿ ಪ್ರಯತ್ನಪಡುವ ಅನೇಕ ತಪಸ್ವಿಗಳನ್ನು ದಯಪಾಲಿಸಲೆಂದು ಜಗದಾಚಾರ್ಯರಲ್ಲಿ ಅನನ್ಯಭಾವನೆಯಿಂದ ಬೇಡಿಕೊಳ್ಳುತ್ತೇನೆ

ಶ್ರಾವಣವದ್ಯ ೧೪ ಗುರುವಾರ ದಿವಸ ಗ್ರಾಮದೇವರಾದ ವೀರಭದ್ರಸ್ವಾಮಿಗೆ ಏಕಾದಶ ರುದ್ರಾಭಿಷೇಕವು ಮಾಡಲ್ಪಟ್ಟಿತು ಅಭಿಷೇಕಸಮಾರಂಭಕ್ಕೆ ಶ್ರೀ ಮಾನ್ ಕಿತ್ತೂರ ವಕೀಲರು, ಶ್ರೀ ನೀಲಕಂಠಪ್ಪಶೆಟ್ಟರು, ಶ್ರೀ ಸಿದ್ಧಲಿಂಗಪ್ಪ ಸಿದ್ಧಣ್ಣನವರ ಇವರೇ ಮೊದಲಾದ ಪ್ರಮುಖಜನರಲ್ಲದೆ ವಿಶೇಷವಾಗಿ ಭಕ್ತಮಂಡಳಿಯವರು ಬಂದಿದ್ದರು. ಅಭಿಷೇಕಸಮಾರಂಭವು ಒಳ್ಳೇ ವಿಜೃಂಭಣೆಯಿಂದ ಜರುಗಿತು ಈ ಸಮಯದಲ್ಲಿ ವಿಘ್ನಸಂತೋಷಿಗಳು ವಿಘ್ನಪರಂಪರೆಯನ್ನುಂಟುಮಾಡಿದರು ಆದರೆ ಗುರುಸಾರ್ವಭೌಮನಾದ ರೇಣುಕನ ಮತ್ತು ಶ್ರೀ ವೀರಭದ್ರಸ್ವಾಮಿಯ ಪ್ರಭಾವದ ಮುಂದೆ ಏನೂ ಸಾಗಲಾರದಾಗಿ ಬೆಂಕಿರಾಶಿಯು ಕೂಡ ಹುಲ್ಲಿನ ಬಣಿವೆಯು ಹೋರಾಡಿದಂತಾಯಿತು ಈ ರೀತಿಯಾಗಿ ವಿಘ್ನವು ದೂರಾದುದು ಸರ್ವರ ಅನುಭವಕ್ಕೆ ಬಂದು ಶ್ರೀ ರೇಣುಕನನ್ನು ಅನನ್ಯಭಾವನೆಯಿಂದ ಕೊಂಡಾಡಿದರು ಅಭಿಷೇಕವು ಮಧ್ಯಾಹ್ನ ೨ ಘಂಟೆಗೆ ಮುಗಿಯಿತು

ಆಮೇಲೆ ಪುರಾಣವು ಪ್ರಾರಂಭವಾಯಿತು ಸೂಟಿಯ ದಿವಸವಿದ್ದುದರಿಂದ ಜನದಟ್ಟಣೆಯು ವಿಶೇಷವಾಗಿತ್ತು ಆ ಸಮಯದಲ್ಲಿ ಕುಮಾರಿ ಕಾಶಮ್ಮ ಉಪ್ಪಿನ ಇವರು, "ಹನ್ನೆರಡುಸಾವಿರ ಕನ್ಯೆಯರ ಪ್ರಾಣದಾನ" ಈ ವಿಷಯವಾಗಿ ಸಂವಾದರೂಪವಾದ ಕಥೆಯನ್ನು ರಚಿಸಿದ್ದರು ಇವರು ವಯಸ್ಸಿನಲ್ಲಿ ಬಹಳ ಚಿಕ್ಕವರಿದ್ದರೂ ವಿಶೇಷ ವಿವೇಕಶಾಲಿನಿಯರಾಗಿದ್ದಾರೆ ದೇವರು ಇವರಿಗೆ ಇನ್ನೂ ಹೆಚ್ಚಿನ ಪ್ರತಿಭೆಯನ್ನು ಅನುಗ್ರಹಿಸಲೆಂದು ಪ್ರಾರ್ಥನೆ ಕು|| ಕಾಶಮ್ಮನವರು ತಮ್ಮ ವಯಸ್ಸಿನ ಬಾಲಿಕೆಯರನ್ನು ಕರೆದುಕೊಂಡು ಆ ವ್ಯಾಖ್ಯಾನವನ್ನು ಸಂವಾದರೂಪವಾಗಿ ಮಾಡಿತೋರಿಸಿದರು

ಕು|| ಶಾಂತಾದೇವಿ ಉಪ್ಪಿನ, ಕು|| ಅಕ್ಕುಬಾಯಿ ಅಂಕಲಗಿ, ಕು|| ಕಾಶಮ್ಮಾ ಉಪ್ಪಿನ, ಕು|| ಬಸಲಿಂಗವ್ವ ತಿಸಿಗೋಳ, ಸ|| ಬಸಲಿಂಗಪ್ಪ ಬಾಗೇವಾಡಿ, ಕು|| ಸಾವಿತ್ರೀದೇವಿ ಮಣ್ಣೂವರ, ಕು|| ನೀಲವ್ವ ಕಬ್ಬೂರು ಇವರೆಲ್ಲರೂ ಸಂವಾದವನ್ನು ಸರಿಯಾಗಿ ಮಾಡಿದರು ಪ್ರೇಕ್ಷಕರ ತೃಪ್ತಿಯಾಗದ ಜನರ ಆಗ್ರಹದ ಮೇರೆಗೆ ಮತ್ತೆ ಸಂವಾದವು ಮಾಡಲ್ಪಟ್ಟಿತು ಮತ್ತು ನೀಲವ್ವ ಕಬ್ಬೂರ ಇವರ ಈಕೆಯು 'ಗುರು' ಈ ವಿಷಯದಮೇಲೆ ಭಾಷಣವನ್ನು ಮಾಡಿದಳು ಈ ರೀತಿಯಾಗಿ ವೀರಶೈವ ಸ್ತ್ರೀ ಸಮಾಜವು ಧಾರ್ಮಿಕವಾತಾವರಣದಲ್ಲಿ ಮುಂದುವರಿಯುತ್ತ ಉನ್ನತಶಿಖರವನ್ನು ಹೊಂದಲೆಂದು ಈಶನಲ್ಲಿ ಪ್ರಾರ್ಥನ

ಆಮೇಲೆ ಮಂಗಲವಾಗಿ ಸರ್ವಭಕ್ತರೂ ಶ್ರೀಗಳವರ ಆಶೀರ್ವಾದವನ್ನು ತೆಗೆದುಕೊಂಡು ಮನೆಗಳಿಗೆ ತೆರಳಿದರು ಮರುದಿವಸ ಮುಂಜಾನೆ ಶ್ರೀಗಳವರ ಪಾದಪೂಜಾಸಮಾರಂಭವು ನಡೆಯಿತು ಆಮೇಲೆ ಗಣಾರಾಧನೆಯಾಯಿತು ಅನ್ನಸಂತರ್ಪಣೆಯು ಮುಂಜಾನೆ ೧೦ ಘಂಟೆಗೆ ಪ್ರಾರಂಭವಾಗಿ ರಾತ್ರಿ ೧೨ ಘಂಟೆಯವರೆಗೂ

ಅವಿಚ್ಛಿನ್ನವಾಗಿ ನಡೆಯಿತು ಈ ಕಾರ್ಯದಲ್ಲಿ ಪೇಟೆಯೊಳಗಿನ ಶ್ರೀಮಂತರೆಲ್ಲರೂ ಭಾಗವಹಿಸಿ ಭಕ್ತಿಯಿಂದ ಸೇವೆಮಾಡಿದುದು ಸ್ತೋತ್ರಾರ್ಹವಾಗಿದೆ ಶ್ರೀಮಂತ ಮಂಡಪ್ಪ ಗಾತವಿ, ವೀರಪ್ಪನವರು ಉಪ್ಪಿನ, ಇಟಗಿ ವಕೀಲರು, ನಾಗಪ್ಪ ಬಾಳಕುಂದ್ರಿ, ಲಿಂಗಪ್ಪ ಪಟ್ಟಣಶೆಟ್ಟಿ, ಜೀವಾಜಿ ವಾಮನಕಲಘಟಗಿ ಇವರೇ ಮೊದಲಾದ ಪ್ರಮುಖರೆಲ್ಲರೂ ಪುರಾಣಸಮಾಪ್ತಿಯ ಸಂಭ್ರಮದಲ್ಲಿ ಭಾಗವಹಿಸಿ ಬಂದ ಅತಿಥಿಗಳಿಗೆ ಅನ್ನೋದಕಗಳನ್ನು ಕೊಟ್ಟು ಪುನೀತರಾದರು ಆ ದಿವಸದ ಕಾರ್ಯಕ್ರಮವು ದರ್ಶನೀಯವಾಗಿತ್ತು ಈ ರೀತಿಯಾಗಿ ಉತ್ಸವವು ನಡೆದದ್ದು ಇದೇ ಮೊದಲನೆಯದೆಂದು ಹೇಳಲು ಅಭ್ಯಂತರವಿಲ್ಲ ಇದರಂತೆ ಉತ್ತರೋತ್ತರ ಬೆಳಗಾವಿಯಲ್ಲಿ ಜಗದಾಚಾರ್ಯರ ವಿಜಯಧ್ವಜವು ಮೆರೆಯಲೆಂದು ಹಾರೈಸುತ್ತೇನೆ ಬೆಳಗಾವಿಯಲ್ಲಿ ಜಗದಾಚಾರ್ಯರ ವಿಜಯಧ್ವಜವು ಮೆರೆಯಲಿಕ್ಕೆ ಗುರುಭಕ್ತಿಪರಾಯಣರಾದ ಶ್ರೀಮಾನ್ ಲಿಂಗಪ್ಪನವರು ಅಂಕಲಗಿ ಮತ್ತು ಚನ್ನಪ್ಪನವರು ಕರಂಡಿ ಇವರೀರ್ವರ ಪ್ರಯತ್ನವಿಶೇಷವೇ ಮೂಲಕಾರಣವೆಂದು ಸಾರಿಸಾರಿ ಹೇಳಬೇಕಾಗಿದೆ ಈ ಭಕ್ತದ್ವಯದ ಮನೋರಥಗಳನ್ನು ಜಗದ್ರಕ್ಷಕನಾದ ರೇವಣಸಿದ್ಧನು ಶೀಘ್ರದಲ್ಲಿ ನಯಪಾಲಿಸಲೆಂದು ಬೇಡಿಕೊಳ್ಳುತ್ತೇನೆ ಜಗದಾಚಾರ್ಯರು ಮೇಲ್ಕಂಡ ಮಹಾಶಯರಿಗೆಲ್ಲಾ ಆಯುರಾರೋಗ್ಯ ಅಷ್ಟೈಶ್ವರ್ಯಗಳನ್ನು ಕೊಡಲೆಂದು ಪ್ರಾರ್ಥಿಸುವೆನು ಬೋಲೋ ಶ್ರೀ ಜಗದ್ಗುರು ಪಂಚಾಚಾರ್ಯಮಹಾರಾಜಕೀ ಜೈ!

ಓರ್ವ ಉತ್ಸವಭಾಗಿ

ವೀರಶೈವರತ್ನ ಪ್ರವಚನ ಹುಮನಾಬಾದ

ಇದೇ ಶ್ರಾವಣ ಶು|| ೧ ದಿವಸದಿಂದ ಇಲ್ಲಿಯ ವೀರಶೈವ ಸಮಾಜದಲ್ಲಿ ವೇ|| ಶ್ರೀ ಸಿದ್ಧರಾಮಯ್ಯನವರು ಬಂಗಿ ಇವರು ವೀರಶೈವರತ್ನವನ್ನು ಪುರಾಣ ರೀತಿಯಿಂದ ೧ ತಿಂಗಳವರೆಗೆ ಬೋಧಿಸಿದರು ಜಗದಾಚಾರ್ಯರ ಜಯಂತಿಯು ನೆರವೇರುತ್ತಿತ್ತು ಭಾದ್ರಪದ ಶು|| ೨ ಗುರುವಾರ ದಿವಸ ಶಾಸ್ತ್ರಪದ್ಧತಿ ಪ್ರಕಾರ ಆಚಾರ್ಯರ ಭಾವಪಟಕ್ಕೆ ರುದ್ರಾಭಿಷೇಕ ಗಣಾರಾಧನೆಯಾಗಿ ಸಮಾಪ್ತಿಗೊಳಿಸಲ್ಪಟ್ಟಿತು ಜನಮಾನ್ಯರಾದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಜೀವನಚರಿತ್ರವೂ ಅವರು ಮಾಡಿದ ಸದರಿ ಗ್ರಂಥದ ಮಹಿಮೆಯೂ ವರ್ಣನಾತೀತವೆಂದು ಶ್ರೀ ಸಿದ್ಧರಾಮಯ್ಯನವರು ತ್ರಿನೇತ್ರಪ್ರಕಾಶವೆಂಬ ಲೇಖವನ್ನು ಬರೆದಿದ್ದಾರೆ ಅದರಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರ ಮತ್ತು ಶ್ರೀ ಷ|| ಬ್ರ|| ಹೋಟಗೀ ಶಿವಯೋಗಿಗಳವರ ಮತ್ತು ಶ್ರೀ ಪಂ|| ವೀರಭದ್ರಶರ್ಮರವರ ವರ್ಣನವು ಮಾಡಲ್ಪಟ್ಟಿದೆ ಶ್ರೀಮಂತ ಚನ್ನವೀರಪ್ಪ ಭುಶೆಟ್ಟೆ ವೀರಪ್ಪ ಹಾರಕೂಡ ಮೊದಲಾದವರು ಪಂಡಿತರ ಅವತಾರ ವಿಷಯವನ್ನು ಬಹು ಆನಂದದಿಂದ ಕೊಂಡಾಡಿದರು ಇದು ಕಲ್ಯಾಣ ನಾಡು, ಇಲ್ಲಿ ಪಂಡಿತರ ನಾಮವು ವಜ್ರಪ್ರಾಯವಾಗಿದೆ ಶೂನ್ಯಮತಿಗಳಿಗೂ ಅರಣ್ಯ ಪಂಡಿತರಿಗೂ ಸರಿಹೋಗುವಂತಿಲ್ಲ ಇದಕ್ಕೆ ಅವರ ವಿಕಟಬುದ್ಧಿಯ ಪ್ರಭಾವವೆ ಕಾರಣ ಪ್ರತಿವರ್ಷವೂ ಪ್ರತಿ ಹಳ್ಳಿಯಲ್ಲಿಯೂ ಪಟ್ಟಣಗಳಲ್ಲಿಯೂ ಧರ್ಮಗ್ರಂಥಗಳನ್ನೇ ಪುರಾಣರೂಪದಿಂದ ಹೇಳಿ ತಮ್ಮ ಮತಧರ್ಮದ ತತ್ವವನ್ನು ಬೋಧಿಸಲು ಪ್ರಯತ್ನಶಾಲಿಗಳಾಗಬೇಕೆಂದು ಕೋರುತ್ತೇನೆ

ಸಿದ್ಧಪ್ಪ ಬ್ರಹ್ಮಣ್ಣಾ ಹುಮನಾಬಾದ

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀ ಜಗದ್ಗುರು ರೇಣುಕವಿಜಯ ಪುರಾಣ ಸಮಾಪ್ತಿ, ಸೊಲ್ಲಾಪುರ.

ಸೊಲ್ಲಾಪುರಗ್ರಾಮದಲ್ಲಿರುವ ಮ|| ರಾ|| ಅಣ್ಣಾರಾವ ಶಿವಾಳಪ್ಪ ಸೊಣ್ಣಾ ಅವರು ಸೊಲ್ಲಾಪುರದಲ್ಲಿ ಪ್ರಸಿದ್ಧವಾದ ಶ್ರೀರೇವಣಸಿದ್ಧೇಶ್ವರ ದೇವಸ್ಥಾನದಲ್ಲಿ ಶ್ರಾವಣ ಶು|| ೫ ತಾ||೨೮-೭-೧೯೪೧ ಮಂಗಳವಾರ ೪ ಘಂಟೆಗೆ ಲೋಕಕಲ್ಯಾಣಕ್ಕಾಗಿ ಪುರಾಣಪ್ರಾರಂಭಮಾಡಿದರು ಈ ಪುರಾಣವನ್ನು ಶ್ರೀಮದ್ವೀರಶೈವ ವಾರದಸಂಸ್ಕೃತ ಪಾಠಶಾಲಾ ಪ್ರಧಾನಾಧ್ಯಾಪಕರಾದ ವೇ|| ಪಂ|| ಜಗದೀಶಶಾಸ್ತ್ರೀಜೀ ನಾಲವಾರ ಇವರ ಶಿಷ್ಯರಾದ ವೇ|| ಗುರುಪಾದಶರ್ಮಾ ಬೃಹನ್ಮಠ ಸೂಸಕೋಡ ಇವರು ಚಿಕ್ಕವಯಸ್ಸಿನವರಾದರೂ ಅತ್ಯಂತ ಸುಗಮವಾಗಿ ಬೋಧಿಸಿ ಜನಗಳಲ್ಲಿ ಆಸ್ತಿಕ್ಯಬುದ್ಧಿಯನ್ನುಂಟುಮಾಡಿ ಸರ್ವರನ್ನೂ ಆಹ್ಲಾದಪಡಿಸಿದರು ಈ ಮಹಾಪುರಾಣಕ್ಕೆ ನಾನಾವಿಧ ವಿಘ್ನಗಳು ಬಂದವು ಅಣ್ಣಾರಾವ ಇವರು ವಯಸ್ಸಿನಲ್ಲಿ ಚಿಕ್ಕವರಾದಾಗ್ಯೂ ಅಧಿಕ ಧೈರ್ಯದಿಂದ ಆ ವಿಘ್ನಗಳನ್ನು ದೂರಮಾಡಿದರು ಭಾದ್ರಪದ ಶು|| ೧೦ ತಾ|| ೩೧-೮-೪೧ ನೇ ದಿನ ಪ್ರಾತಃಕಾಲ ೯ ಘಂಟೆಯಿಂದ ವೇ||ಸಿದ್ಧಲಿಂಗಶರ್ಮಾ ಮಸುಡಾಪುರ ಇವರ ವೈದಿಕತ್ವದಿಂದ ೧೧|| ಘಂಟೆಗೆ ಮಹಾರುದ್ರಾಭಿಷೇಕವು ಸಾಂಗವಾಗಿನೆರವೇರಿಸಲ್ಪಟ್ಟಿತು. ೧೨ ಘಂಟೆಯಿಂದ ೪ ಘಂಟೆಯವರೆಗೆ ಗಣಾರಾಧನೆಯು ಅತಿವಿಜೃಂಭಣೆಯಿಂದ ನಡೆಯಿತು ಬಳಿಕ ಪುರಾಣವು ಸಮಾಪ್ತಿಗೊಳಿಸಲ್ಪಟ್ಟಿತು ಆ ಸಮಯದಲ್ಲಿ ಶ್ರೀ|| ಷ|| ಬ್ರ|| ಷಡಕ್ಷರಶಿವಾಚಾರ್ಯ ಮಂಗಳೂರು ಮತ್ತು ಶ್ರೀ|| ಷ|| ಬ್ರ|| ಗುರುಪಾದಶಿವಾಚಾರ್ಯ ಮುಳ್ಳೂರು ಇವರೀರ್ವರೂ ಶ್ರೀ ಜಗದ್ಗುರು ರೇಣುಕಾಚಾರ್ಯರ ವಿಷಯದಲ್ಲಿ ಒಳ್ಳೇ ಪರಿಣಾಮವಾಗುವಂತೆ ಭಾಷಣಮಾಡಿದರು ಆಮೇಲೆ ಶ್ರೀ ಜಗದ್ಗುರುಗಳ ಜಯಜಯಕಾರದೊಡನೆ ಪುರಾಣವು ಸಮಾಪ್ತಿಗೊಳಿಸಲ್ಪಟ್ಟಿತು ಶ್ರೀ ರೇಣುಕಾಚಾರ್ಯರು ಅಣ್ಣಾರಾವ ಸೊಣ್ಣಾ ಇವರಿಗೆ ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇನೆ

ಮಹದೇವಶರ್ಮಾ, ಜೈನಾಪುರ

ಶ್ರೀ ಗಜಾನನ ಮಹೋತ್ಸವ ಸಮಾರಂಭ, ಹೂವಿನಹಡಗಲಿ

ಬಳ್ಳಾರಿ ಡಿ|| ಹೂವಿನಹಡಗಲಿ "ವಿದ್ಯಾರ್ಥಿ ನಿಲಯ" ದಲ್ಲಿ ಪ್ರತಿ ವರ್ಷದ ಪದ್ಧತಿ| ಮೇರೆಗೆ ಭಾದ್ರಪದ ಶು|| ೪ ಮಂಗಳವಾರ ಶ್ರೀ ಗಣೇಶ ಚತುರ್ಥೀ ದಿವಸ ಗಣಪತಿ ಪೂಜೆಯು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು

ತಾ|| ೨೬ ನೇ ಮಂಗಳವಾರ ಸಾಯಂಕಾಲ ೫ ಘಂಟೆಗೆ ಸರಿಯಾಗಿ ಸನ್ಮಾನ್ಯರಾದ ಮೆ|| ಶ್ರೀ ಸಿ ನಾಗೋಜಿರಾವ್, ಡೆಪ್ಯುಟಿ ತಹಶೀಲ್ದಾರರವರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು ಸಭೆಗೆ ವರಿಷ್ಠ ಅಧಿಕಾರಿಗಳೂ, ಪುರಪ್ರಮುಖರೂ ಪುರಜನರೂ ಆಗಮಿಸಿದ್ದರು ಸಭೆಯು ಪ್ರೇಕ್ಷಕರಿಂದ ತುಂಬಿದ್ದಿತು ವಿಘ್ನೇಶ್ವರನ ಮಂಟಪವು ಕನ್ನಡಿಗಳಿಂದಲೂ, ಚಿತ್ರವಿಚಿತ್ರವಾದ ಮೇಲ್ಕಟ್ಟುಗಳಿಂದಲೂ, ರಂಭಾಸ್ತಂಭಾದಿಗಳಿಂದಲೂ ಮನೋಹರವಾಗಿ ಕಂಗೊಳಿಸುತ್ತಿತ್ತು

ಪ್ರಾರಂಭದಲ್ಲಿ ವಿಘ್ನರಾಜ ಸ್ತುತಿಯು ನಿಲಯದ ಉಪಾಧ್ಯಕ್ಷರಿಂದ ಸಶ್ರಾವ್ಯವಾಗಿ ಹಾಡಲ್ಪಟ್ಟಿತು. ಬಳಿಕ ಇಲ್ಲಿಯ ಮಾಧ್ಯಮಿಕ ಶಾಲೆಯ ಕನ್ನಡ ಪಂಡಿತರಾದ ವಿದ್ವಾನ್ ವೇ|| ಬಿ ಹೆಚ್ ಯಂ ಅಮರನಾಥ ಶಾಸ್ತ್ರಿಗಳು ತಾವು ರಚಿಸಿದ ವಿಘ್ನೇಶ್ವರ ಪಂಚಕವನ್ನು ಹಾಡಿದರು ಆ ಪಂಚಕವು ಈ ಪತ್ರಿಕೆಯ ಬೇರೊಂದು ಕಡೆಯಲ್ಲಿ ಮುದ್ರಿತವಾಗಿದೆ ತರುವಾಯ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಕೆ ಶಾಮಯ್ಯನವರು, ಬಿ ಎ , ಬಿ ಟಿ ಇ ಡಿ , ಇವರು ತಮ್ಮ ಅಸ್ಖಲಿತ ವಾಣಿಯಿಂದ ವಿಘ್ನೇಶ್ವರನ ವಿಷಯವಾಗಿ ವಿಷಯವಾಗಿ ಇಂಗ್ಲೀಷಿನಲ್ಲಿ ಭಾಷಣವನ್ನಿತ್ತರು ಆಮೇಲೆ ಕನ್ನಡ ಪಂಡಿತರು ತಮ್ಮ ವಿದ್ವದ್ವಾಣಿಯಿಂದ "ವಿಘ್ನೇಶ್ವರನ ಮಹಿಮೆ"ಯನ್ನು ಕುರಿತು ಒಂದು ತಾಸಿನ ವರೆಗೆ ಅಮೋಘವಾದ ಭಾಷಣವನ್ನು ಮಾಡಿದರು ಅನಂತರ ಅಧ್ಯಕ್ಷರು ತಮ್ಮ ಅಮೃತವಾಣಿಯಿಂದ ಎಲ್ಲರ ಭಾಷಣಗಳನ್ನೂ ಕ್ರೋಡೀಕರಿಸಿ ಸಮಾರೋಪ ಭಾಷಣವನ್ನಿತ್ತರು. ಬಳಿಕ ನಿಲಯದ ಸೂಪರಿಂಟೆಂಡೆಂಟರಾದ ಶ್ರೀಯುತ ಸೊಪ್ಪಿನ ಗುರುಲಿಂಗಪ್ಪನವರಿಂದ, ಆಭಾರ ಮನ್ನಣೆಯಾಗಿ, ಮಂಗಲದೊಡನೆ ಸಭೆಯು ರಾತ್ರಿ ೮ ಘಂಟೆಗೆ ಮುಕ್ತಾಯವಾಯಿತು ತಾ|| ೨೮ ನೆಯ ಗುರುವಾರ ರಾತ್ರಿ ೮ ಘಂಟೆಗೆ ವಿಘ್ನೇಶ್ವರನ ಮೆರವಣಿಗೆಯು ವಿದ್ಯಾರ್ಥಿ ನಿಲಯದಿಂದ ಆನೆಯ ಮೇಲೆ ಹೊರಟಿತು ಈ ಉತ್ಸವದ ಶೋಭೆಯು ವರ್ಣಿಸಲಸದಳವಾಗಿತ್ತು ಆನೆಯ ಮುಂದೆ ಸರಕಾರಿ ಅಧಿಕಾರಿವರ್ಗವೂ ನಿಲಯದ ಅಧಿಕಾರಿವರ್ಗವೂ ಸಂತೋಷಮುಖಮುದ್ರೆಯಿಂದ ಮಂದಗಮನದೊಡನೆ ಸಾಗಿತ್ತು ಮುಂಭಾಗದಲ್ಲಿ ನಿಲಯದ ೬೦ ವಿದ್ಯಾರ್ಥಿಗಳು ಒಂದೇವಿಧವಾದ ಉಡುಪಿನಿಂದ ಸುಶೋಭಿತರಾಗಿ ವಿಘ್ನರಾಜಸ್ತುತಿಪಠನವನ್ನು ಮಾಡುತ್ತ ಸಾಲು ಸಾಲಾಗಿ ಸಾಗಿದ್ದರು ಎತ್ತನೋಡಿದಡತ್ತ ಜನಸಮೂಹವೇ ಜನಸಮೂಹವಾಗಿತ್ತು ಉತ್ಸವದ ಮುಂದೆ ದೇಶಿ ವಿದೇಶಿ ವಾದ್ಯಗಳು ಭೋರ್ಗರೆಯುತ್ತಿದ್ದವು ಮಹೋತ್ಸವವು ಊರಹೊರಗಿರುವ ಆಂಜನೇಯಸ್ವಾಮಿಯ ದೊಡ್ಡಭಾವಿಗೆ ಹೋಗಿ ಅಲ್ಲಿ ವಿಘ್ನೇಶ್ವರನಿಗೆ ಪೂಜೆಯಾಯಿತು ಶ್ರೀ ವಿಘ್ನೇಶ್ವರನು ಮಳೆ ಬೆಳೆಯನ್ನು ಅನುಗ್ರಹಿಸುವಂತೆ ಸರ್ವರೂ ಪ್ರಾರ್ಥಿಸಿದರು ಬಳಿಕ ಉತ್ಸವವು ಹಿಂದಿರುಗಿ ೧೧ ಘಂಟೆಗೆ ಸ್ವಸ್ಥಾನವನ್ನು ತಲುಪಿತು ಬಾಲಕರ ಪ್ರಾರ್ಥನೆಯಂತೆ ಮರುದಿನವು ಮಳೆಯೂ ಚನ್ನಾಗಿ ಆಗಿ ಸರ್ವರೂ ಸಂತೋಷಿಸಿದರು

ಓರ್ವ ಪ್ರತ್ಯಕ್ಷದರ್ಶಿ

|| ಶ್ರೀ ಗಣೇಶಾಯ ನಮಃ ||

ಹೂವಿನಹಡಗಲಿ ವಿದ್ಯಾರ್ಥಿನಿಲಯದಲ್ಲಿ ಗಣೇಶಚತುರ್ಥಿಯ ನಿಮಿತ್ತವಾಗಿ ನಡೆದ ಸಭೆಯಲ್ಲಿ ಅರ್ಪಿಸಿದ

" ಗಣೇಶ ಪಾರಿಜಾತವೆಂಬ " ಪಂಚಕುಸುಮಗಳು

(ವಿದ್ವಾನ್ ಬಿ ಹೆಚ್ ಯಂ ಅಮರನಾಥಶಾಸ್ತ್ರೀ, ಕನ್ನಡ ಪಂಡಿತ ಬೋರ್ಡ್ ಮಿಡ್ಲ್ ಸ್ಕೂಲ್, ಹೂವಿನಹಡಗಲಿ)

ಶ್ರೀ ಗಿರಿಜೆಯಾತ್ಮ ಸುಪುತ್ರನೆ |
ಭೋಗಿಭೂಷ ಪಯೋಬ್ಧಿ ಪಾತ್ರನೆ |
ಆಗಮಾವಳಿನುತಚರಿತ್ರ ನಿಜೈಕದಂತವಕ್ತ್ರ ||
ಯೋಗಿ ವಿಘ್ನಾಧಿಪ ಸುಗಾತ್ರನೆ |
ಭೋಗಸಿದ್ಧಿ ಸುಬುದ್ಧಿ ಸೂತ್ರನೆ |
ಆಗಲುಂ ವಿದ್ಯಾರ್ಥಿನಿಲಯದ ಬೆಳಗು ಗಣನಾಥ ||೧||

ಶ್ರೀ ಗಜಾನನ ಶುಭವಿಧಾಯಕ |
ಭೋಗಿವರ ಸುತವಿಬುಧನಾಯಕ |
ಯೋಗಿ ಹರಿವಿಬುಧಾದಿನಾಯಕ ಮೋಕ್ಷದಾಯಕನೇ ||
ನಾಗವದನ ಸುಧೀಸಹಾಯಕ |
ತ್ಯಾಗಿ ಲಂಬೋದರ ವಿನಾಯಕ |
ಆಗಲುಂ ವಿದ್ಯಾರ್ಥಿನಿಲಯದ ಬೆಳಗು ಗಣನಾಥ ||೨||

ಶ್ರೀ ಗಿರಿಜೆಗಾನಂದಕರ ತನ್ಮಯ |
ರಾಗಮುದ್ರೇಕದೊಳು ತನ್ನಯ |
ರಾಗಿ ಇಕ್ಕಡೆ ಗಲ್ಲವನು ಮುತ್ತಿಡೆ ಒದವೆ ಸಮಯ |
ಬೇಗದಿಂ ಹಿಂದೆಗೆದು ತನ್ನಯ |
ನಾಗಮುಖವನು ನಗುವ ಚಿನ್ಮಯ |
ಆಗಲುಂ ವಿದ್ಯಾರ್ಥಿನಿಲಯದ ಬೆಳಗು ಗಣನಾಥ ||೩||

ನಾಗಭೂಷನು ತ್ರಿಪುರಹರಣದಿ |
ನಾಗಶಯನನು ಬಲಿನಿಬರಣದಿ |
ನಾಗರಿಪುಗಳು ಸೃಷ್ಟಿಕರಣದಿ ದೇವಿ ಶಾಂ ರಣದಿ ||
ನಾಗರಾಜ ಧೂಮಿಧರಣದಿ |
ನಾಗಸಿದ್ಧರು ಭಜಿಪರಮಣದಿ |
ಆಗಲುಂ ವಿದ್ಯಾರ್ಥಿನಿಲಯದ ಬೆಳಗುಗಣನಾಥ ||೪||

ಸಾಗಿಸ್ವೆ ಮಾಧ್ಯಮಿಕ ಶಾಲೆಯು |
ಸಾಗಿಸ್ವೆ ಪ್ರೈಸ್ಕೂಲು ಶಾಲೆಯು |
ಹೀಗಿಸ್ವೆ ಬರೆದಿರುವ ವಿಘ್ನಪ ಸಿದ್ಧಿ ಗುಣನಿಲಯ ||
ರಾಗಿಸ್ವೆ ಹಡಗಲಿ ಸುಶಾಲೆಯು |
ಬೇಗ ಸೈತಿಡು ಭಕ್ತಿ ಶಾಲೆಯ
ಆಗಲುಂ ವಿದ್ಯಾರ್ಥಿನಿಲಯದ ಬೆಳಗು ಗಣನಾಥ — ||೫||

ಪಂಚಾಚಾರ್ಯಪ್ರಭಾ.

೧೯೪೧ನೆಯ ಸೆಪ್ಟೆಂಬರ್ ತಾ॥ ೮ನೆಯ ಸೋಮವಾರ

ಜಂಗಮ

ಈ ಮೊದಲು ನಮ್ಮ ಪತ್ರಿಕೆಯಲ್ಲಿ ವಿರಕ್ತರು ಅಷ್ಟಾವರಣಾಂತರ್ಗತ ಜಂಗಮರಾಗುವುದಿಲ್ಲವೆಂಬ ವಿಷಯದಲ್ಲಿ ಅನೇಕಕಾರಣಗಳನ್ನು ಕೊಟ್ಟು ಪ್ರತಿಪಾದಿಸಿರುವುದು ಸರಿಯಷ್ಟೆ! ಆ ವಿಷಯದಲ್ಲಿ ಇನ್ನೂ ಕೆಲವು ಕಾರಣಗಳನ್ನು ಕೊಡುವದಾಗುವದು

ಗುರುಭಕ್ತರು ಅಷ್ಟಾವರಣಾಂತರ್ಗತ ಜಂಗಮ ಮೂರ್ತಿಗಳನ್ನು ಪಲ್ಲಕ್ಕಿ ಮೊದಲಾದ ಸಕಲಬಿರುದಾವಳಿಗಳೊಡನೆ ತಮ್ಮ ಮನೆಗಳಿಗೆ ವೈಭವದಿಂದ ಕರೆದುಕೊಂಡುಹೋಗಿ ಮಹಾಭಕ್ತಿಯಿಂದ ಪೂಜಿಸಿ ಅವರಿಗಾಗಿ ಉತ್ತಮೋತ್ತಮ ಪಕ್ವಾನ್ನಗಳನ್ನು ಸಿದ್ಧಮಾಡಿ ಅವರಿಂದ ಪ್ರಸಾದವನ್ನು ಗ್ರಹಿಸಬೇಕೆಂದು ಶಾಸ್ತ್ರಮತವಿದೆ ವಿರಕ್ತರೇ ಜಂಗಮರಾದ ಪಕ್ಷದಲ್ಲಿ—

ನಾಂದೋಲಿಕಾಂ ಸಮಾರೋಹೇದಶ್ವಾರೋಹಣವರ್ಜಿತಃ ।
ಪಾದಚಾರೀಚ ಸಂಭೂಯ ವರ್ತೇಮ್ಮೌ ಮಲಯೇ ಸದಾ ॥

ಇತಿ ಪಾರಮೇಶತಂತ್ರೇ

ಸಂಧಿಕ್ಷಿ ವಿಗ್ರಹೋ ಯಾನಂ ಮಂಚಕಂ ಶುಕ್ಲವಸ್ತ್ರಕಂ ।
ತ್ಯಕ್ತಂ ಸನ್ಯಾಸಯೋಗೇನ ಸ್ವರದಮೂರ್ಧಿಕಾ ವ್ರತಂ ॥

ಇತಿ ಸನ್ಯಾಸೋಪನಿಷದಿ

ಯಾನಾರೋಹಣಯುತಾಂ ದೃಷ್ಟ್ವಾ ಸಚೇಲಂ ಸ್ನಾನಮಾಚರೇತ್ ॥

ಇತ್ಯಾದಿ ಧರ್ಮಶಾಸ್ತ್ರ ವಾಕ್ಯಗಳು ವಿರಕ್ತನು ಪಲ್ಲಕ್ಕಿ ಮೊದಲಾದ ವಾಹನಗಳನ್ನು ಹತ್ತಬಾರದೆಂದೂ, ಒಂದು ವೇಳೆ ಹತ್ತಿದ ವಿರಕ್ತನನ್ನು ನೋಡಿದರೆ ನೋಡಿದವನು ಸಚೇಲ (ವಸ್ತ್ರಸಹಿತ) ಸ್ನಾನವನ್ನು ಮಾಡಬೇಕೆಂದೂ ಡಂಗುರದಂತೆ ಸಾರುತ್ತಿರಲು ಇವರನ್ನು ಪಲ್ಲಕ್ಕಿ ಮೊದಲಾದ ವೈಭವಗಳಿಂದ ಕರೆದುಕೊಂಡು ಹೋಗುವ ಬಗೆ ಹೇಗೆ? ಇದಲ್ಲದೆ ವಿರಕ್ತರು ವೀರಶೈವರ ಮನೆಯೊಳಗ ಹೋಗಿ ಪ್ರಸಾದವನ್ನು ಗ್ರಹಿಸುವದು ನಿಷಿದ್ಧವಾಗಿರುವುದು ಏಕೆಂದರೆ ಇವರಿಗೆ ಧರ್ಮಶಾಸ್ತ್ರದಲ್ಲಿ ಭಿಕ್ಷಾನ್ನವೇ ವಿಧಿಸಲ್ಪಟ್ಟಿರುವುದಷ್ಟೆ!

ಗೃಹಕ್ರಿಯೇಷ್ವನ್ನಪಾನಂ ಯಾಚಮಾನೋ ಭವೇನ್ನ ಸಃ ।
ದತ್ತಂ ಚೇದಪಿ ಭುಂಜೀತ ನೋಚೇತ್ಕ್ಲೇಶಂ ನಕಾರಯೇತ್ ॥

ಇತಿ ಪಾರಮೇಶತಂತ್ರೇ.

ನಿರ್ಗಚ್ಛೇದಟಿತುಂ ಭೈಕ್ಷ್ಯಂ ಪ್ರಣಮ್ಯ ಗುರುಪಾದಿತಃ ।
ಯದಿ ಭಿಕ್ಷಾಟನೇಚ್ಛಾಸ್ತಿ ತದಾ ಭಿಕ್ಷಾಟನಂ ಚರೇತ್ ।
ಪರ್ಯಟೇಲ್ಲಿಂಗಿನಾಮೇವ ಭಿಕ್ಷಾರ್ಥಂ ಶಿವಯೋಗಿನಾಂ ।
ಯಾವದಿಚ್ಛನ್ ಗೃಹದ್ವಾರಂ ಪಕ್ವಂವಾ ಪಕ್ವಮೇವವಾ ।
ನಿಬದ್ಧಪಾದಘಂಟೋವಾ ಘಂಟಿಕೋ ಜಯಘಂಟಿಕಃ ।
ಶಂಖಶ್ಚ ಶೃಂಗಿನಾದೋವಾ ದಂಡಘಂಟೋಪಿ ಪರ್ಯಟೇನ್ ॥
ರುದ್ರಾಕ್ಷಮಾಲಾಂಚ ಮಾಲೆಷು ಕಂಪಾಕಂಚಿಲಭೂಷಿತಃ ।
ವಿಜ್ಞಾಪಯಿತ್ವಾ ಗೃಹಿಣಃ ಕರನಾಟಕ್ಷ್ಯ ಸಂಜ್ಞಯಾ ।
ಭಿಕ್ಷೇತ್ಯಾಜ್ಞಾಪಯೇಲ್ಲಿಂಗೀ ಗುರುಧರ್ಮಮನುಸ್ಮರನ್ ॥

ಇತಿ ಪಾರಮೇಶ್ವರಾಗಮಾಷ್ಟಮಪಟಲೇ.

ಭಿಕ್ಷಾಚರ್ಯಾಂ ಚರೇತ್ । ಪಾಣಿಪಾತ್ರೇಣಾಶನಂ ಕುರ್ಯಾತ್ ।
ಔಷಧವದಶನಮಾಚರೇತ್ । ಔಷಧವದಶನಂ ಕುರ್ಯಾತ್ ॥

ಇತಿ ಸನ್ಯಾಸೋಪನಿಷತ್ಪ್ರಥಮಾಧ್ಯಾಯೇ.

ಅಂದರೆ ವಿರಕ್ತನು ಮೂರೇ ಮನೆಗಳಲ್ಲಿ ಭಿಕ್ಷೆಯನ್ನು ಬೇಡಬೇಕು, ಕೊಟ್ಟರೆ ಉಣ್ಣಬೇಕು; ಕೊಡದಿದ್ದರೆ ದುಃಖವನ್ನು ಮಾಡಿಕೊಳ್ಳಬಾರದೆಂದು ಪಾಶುಪತ ತಂತ್ರವು ವಿಧಿಸುತ್ತದೆ ವಿರಕ್ತನು ಭಿಕ್ಷಾಟನಕ್ಕೆ ಹೋಗಬೇಕಾದರೆ ಆದಿಯಲ್ಲಿ ತನ್ನ ಗುರುವನ್ನು (ಶಾಸ್ತ್ರಸಿದ್ಧವಾಗಿ ಜ್ಞಾನೋಪದೇಶಕ್ಕೆ ಅರ್ಹನಾದ ದೀಕ್ಷಾಗುರುವನ್ನು) ನಮಸ್ಕರಿಸಿ ಹೋಗಬೇಕು ಕೇವಲ ಶಿವಭಕ್ತರ ಮನೆಗಳಿಗೆ ಮಾತ್ರ ಹೋಗಬೇಕು. ಭಿಕ್ಷೆಗೆ ಹೋಗಬೇಕಾದರೆ ಕಾಲುಗಳಿಗೆ ಘಂಟೆಯನ್ನು ಕಟ್ಟಿಕೊಂಡೇ ಆಗಲಿ, ಕೈಯಲ್ಲಿ ಘಂಟೆಯನ್ನು ಹಿಡಿದುಕೊಂಡೇ ಆಗಲಿ, ಶಂಖವನ್ನು ತಗೆದುಕೊಂಡು ಊದುತ್ತಾಗಲಿ ಅಥವಾ ದಂಡಕ್ಕೆ ಘಂಟೆಯನ್ನು ಕಟ್ಟಿಕೊಂಡೇ ಆಗಲಿ ಈ ಪ್ರಕಾರದ ಯಾವುದಾದರೊಂದು ಸಂಜ್ಞೆಯಿಂದ ಕೂಡಿ ಗೃಹಸ್ಥರನ್ನು ಎಚ್ಚರಿಸಿ, "ಭವತಿ ಭಿಕ್ಷಾಂ ದೇಹಿ" ಎಂದು ಪೂರ್ವದಲ್ಲಿ (ದೀಕ್ಷಾಕಾಲದಲ್ಲಿ) ತನ್ನ ಗುರುಗಳಾದ ದೀಕ್ಷಾಗುರುಗಳಿಂದ ಹೇಳಲ್ಪಟ್ಟ ವಾಕ್ಯವನ್ನು ಸ್ಮರಣೆಗೆ ತಂದು ಉಚ್ಚರಿಸುತ್ತ ಭಿಕ್ಷೆಗೋಸ್ಕರ ಸಂಚರಿಸಬೇಕೆಂದು ಪಾರಮೇಶ್ವರಾಗಮವು ಬೋಧಿಸುತ್ತದೆ ವಿರಕ್ತನು ಹಸ್ತವೆಂಬ ಪಾತ್ರೆಯಲ್ಲಿ ಭಿಕ್ಷೆಯನ್ನು ಬೇಡಬೇಕೆಂದೂ, ಬುದ್ಧಿಯು ಜಿಳಿಯದಹಾಗೆ ಔಷಧದಂತೆ ಸೂಕ್ಷ್ಮವಾಗಿ ಅನ್ನವನ್ನು ಗ್ರಹಿಸಬೇಕೆಂದೂ ಸನ್ಯಾಸೋಪನಿಷತ್ತು ವಿಧಿಸುತ್ತದೆ

ಚರೇನ್ಮಾಧುಕರೀಂ ಭಿಕ್ಷಾಮೇಕಾನ್ನಂ ಪರಿವರ್ಜಯೇತ್ ।

ವಿರಕ್ತನು ಕೇವಲ ಮಾಧುಕರೀಭಿಕ್ಷೆಯನ್ನೇ ಬೇಡಿ ಉಪಜೀವಿಸಬೇಕೆಂದೂ ಒಂದೇ ಮನೆಯ ಅನ್ನವನ್ನು ಗ್ರಹಿಸಕೂಡದೆಂದೂ, ಸ್ಮೃತ್ಯಂತ್ಯಾಕರವು ವಿಧಿಸುತ್ತದೆ ವಿರಕ್ತರೇ ಜಂಗಮರೆಂದು ಹೇಳುವವರ ಶಿಷ್ಯರು ತಮ್ಮ ತಮ್ಮ ಮನೆಗಳಲ್ಲಿ ಕರೆದುಕೊಂಡು ಹೋಗಿ ಪಕ್ವಾನ್ನಗಳನ್ನು ನೀಡುವ ಬಗೆ ಹೇಗೆ? ಆದುದರಿಂದ ವಿರಕ್ತರು ಅಷ್ಟಾವರಣಾಂತರ್ಗತಜಂಗಮರಾಗುವುದಿಲ್ಲ, ಆದರೆ ಶಾಸ್ತ್ರಸಿದ್ಧ ಗುರುಸ್ಥಲದ ಚರಮೂರ್ತಿಗಳೇ ಜಂಗಮ ಪದವಾಚ್ಯರಾಗುತ್ತಾರೆ

ಕೌ[illegible]ತ್ಕಮರಬೇರ್ಯಾದೀನ್ ಭಕ್ತಾಂ ಚಾದ್ರಶವ ಕ್ರಥ ।
ಶಿಬಿಕಾಂ ವೈಜಯಂತೀಂ ಚ [illegible] ಪವಿತ್ರಕಂ ।
ಪಟ್ಟಂ ಭಿಕ್ಷಾಮಯುಕ್ತ್ವಾಯ ಪತಿರಾಯ ಸಮರ್ಪಯೇತ್ ।

ಇತ್ಯಾದಿ ಪ್ರಮಾಣಬಲದಿಂದ ಇವರಿಗೆ ವಿರಕ್ತರಂತೆ ಆಂದೋಲಿಕಾರೋಹಣ ಮೊದಲಾದವುಗಳು ನಿಷೇಧಿಸಲ್ಪಟ್ಟಿಲ್ಲ ಆದ್ದರಿಂದ ಈ ಪೂಜ್ಯಪಾದರೇ ಜಂಗಮರೆಂದು ಸಿದ್ಧವಾಗುವದು

ಯುದ್ಧವಾರ್ತೆ.

ಮೈಸೂರಿನಲ್ಲಿ ಜೋಡಿಸಿದ ಪ್ರಥಮ ವಿಮಾನ

ಬೆಂಗಳೂರಿನಲ್ಲಿರುವ ಹಿಂದೂಸ್ಥಾನ್ ವಿಮಾನ ಕಂಪೆನಿಯವರು ಜೋಡಿಸಿದ 'ಹಾರ್ಲೋ' ಎಂಬ ಹೆಸರಿನ ಪ್ರಥಮವಿಮಾನವನ್ನು ಇಂಡಿಯಾ ಸರ್ಕಾರಕ್ಕೆ ಒಪ್ಪಿಸಲಾಯಿತು ಅದನ್ನು ವೈಮಾನಿಕರಿಗೆ ಶಿಕ್ಷಣಕೊಡಲು ಉಪಯೋಗಿಸುವರಂತೆ!

ಚೀಣಾಕ್ಕೆ ಅಮೇರಿಕಾ ವೈಮಾನಿಕರು

ಅಮೇರಿಕದಿಂದ ಸುಮಾರು 500 ಜನ ವೈಮಾನಿಕರು ಬಟಾನಿಯಾ ಬಂದರಿನ ಮೂಲಕ ಚಂಗ್‌ಕಿಂಗ್ ನಗರಕ್ಕೆ ತೆರಳಿದರೆಂದೂ ಅವರೆಲ್ಲರೂ ಚೀಣಾವಿಮಾನ ಬಲಕ್ಕೆ ಸೇರುವರೆಂದೂ ಹೇಳಲಾಗಿದೆ

ರಷ್ಯಕ್ಕೆ ಅಮೆರಿಕೆಯ ವಿಮಾನಗಳು

ರಷ್ಯ ಅಧಿಕಾರಿಗಳು ಕ್ಯಾಲಿಫೋರ್ನಿಯಾಕ್ಕೆ ಬಂದು ಅಲ್ಲಿಯ ಕಂಪೆನಿಯಿಂದ ಭಾರಿ ಬಾಂಬರು ವಿಮಾನಗಳನ್ನು ಕೊಳ್ಳಲು ಮಾತುಕತೆ ನಡೆಸುತ್ತಿದ್ದಾರೆ. ಈಗ 47 ಮಂದಿ ರಷ್ಯನರು ಅಮೆರಿಕಾಕ್ಕೆ ಹೊರಟಿರುವುದಾಗಿಯೂ ಅವರೆಲ್ಲರೂ ವೈಮಾನಿಕರೆಂದೂ ಅಮೆರಿಕದಿಂದ ವಿಮಾನಗಳನ್ನು ನಡೆಸಿಕೊಂಡುಬರಲೋಸುಗ ಹೊರಟಿರುವರೆಂದೂ ಹೇಳಲಾಗಿದೆ.

ವಿಷವಾಯು ಪ್ರಯೋಗಿಸಲ್ಪಡುವ ಭೀತಿ

ಜರ್ಮನರು ರಷ್ಯಾ ಯುದ್ಧದಲ್ಲಿ ವಿಷವಾಯುವನ್ನು ಪ್ರಯೋಗಿಸಬಹುದೆಂಬ ಭೀತಿಯುಂಟಾಗಿದೆ ಜರ್ಮನರು ವಿಷವಾಯು ತುಂಬಿದ ಟ್ಯಾಂಕುಗಳನ್ನು ಹೆಚ್ಚು ಸಂಖ್ಯೆಯಲ್ಲಿ ರಷ್ಯಾರಣರಂಗಕ್ಕೆ ಕಳುಹಿಸುತ್ತಿರುವರಂತೆ!

ರಷ್ಯದ ಯುದ್ಧದಲ್ಲಿ ಜರ್ಮನಿಯ ನಷ್ಟ.

ಇದುವರೆಗೆ 25 ಲಕ್ಷ ನಾಜಿಗಳು ರಷ್ಯದ ರಣರಂಗದಲ್ಲಿ ಸತ್ತಿದ್ದಾರೆ ಮತ್ತು ಗಾಯಗೊಂಡಿದ್ದಾರೆಂದೂ 10 ಲಕ್ಷ ಜನರು ಮಡಿದಿರುವದು ಖಚಿತವಾಗಿ ಗೊತ್ತಾಗಿದೆಯೆಂದೂ ಮಾಸ್ಕೋ ರೇಡಿಯೋ ತಿಳಿಸುತ್ತದೆ

ರಷ್ಯನ್ ಸೈನ್ಯ ಸಂಗ್ರಹ

ಸ್ಮೊಲೆನ್‌ಸ್ಕ ಮತ್ತು ಕೀವ್ ಈ ಪ್ರದೇಶಗಳಲ್ಲಿ ರಷ್ಯನರು ಅಪಾರವಾಗಿ ಸೈನ್ಯವನ್ನು ಕೂಡಿಸಿರುವರೆಂದು ಹೇಳಲಾಗಿದೆ ಲೆನಿನ್‌ಗ್ರಾಡ್ ಕಡೆ ಇನ್ನು ಕೆಲವು ದಿನಗಳವರೆಗೆ ನಿರ್ಧಾರವಾದ ಜಯದೊರೆಯುವಂತಹ ಯುದ್ಧ ನಡೆಯುವಂತೆ ತೋರುವದಿಲ್ಲ. ಜರ್ಮನ್ ಸೇನೆಗಳ ಪುನರ್ವ್ಯವಸ್ಥೆಯು ಚುರುಕಿನಿಂದ ಸಾಗಿದೆ ನೋಲಿನ ಪ್ರದೇಶಗಳಲ್ಲೆಲ್ಲಾ ರಷ್ಯನರನ್ನು ಸುತ್ತುವರಿಯಲು ಪ್ರಯತ್ನಗಳು ನಡೆಯುತ್ತಿವೆ

ತುರ್ಕಿಗೆ ರಷ್ಯದ ಎಚ್ಚರಿಕೆ

ಗ್ರೀಸ್ ತುರ್ಕಿಗಡಿಯಲ್ಲೂ, ಬಲ್ಗೇರಿಯಾ ತುರ್ಕಿ ಗಡಿಯಲ್ಲೂ ಜರ್ಮನ್ ಸೇನೆಗಳು ಅಸಾಧ್ಯವಾಗಿ ಒಂದು ಕೂಡುತ್ತಿವೆಯೆಂದೂ, ಇದು ಮೋಸದಿಂದ ತುರ್ಕಿಯನ್ನು ನುಂಗಲು ಹಿಟ್ಲರನು ಮಾಡಿಕೊಳ್ಳುತ್ತಿರುವ ಸಿದ್ಧತೆಯೆಂದೂ ಆಗಲೇ 4 ಡಿವಿಜನ್ ಜರ್ಮನ್ ಸೇನೆಗಳು ಅಲ್ಲಿ ಶೇಖರಣಾಗಿವೆಯೆಂದೂ ಮಾಸ್ಕೋದಿಂದ ತುರ್ಕಿಗೆ ಎಚ್ಚರಿಕೆಬಂದಿದೆ

ರೂಜ್‌ವೆಲ್ಟ್ ಕೊನೋಯಿ ಭೇಟಿ ಸುಳ್ಳು

ಅಮೆರಿಕದ ವೈರವನ್ನು ಕಟ್ಟಿಕೊಳ್ಳಲು ಹಿಂಜರಿದ ಜಪಾನ ರಾಷ್ಟ್ರವು ರಾಜಕುಮಾರ ಕೊನೋಯಿಯವರ ಮೂಲಕ ಅಮೆರಿಕದ ರಾಜ್ಯಾಧ್ಯಕ್ಷ ರೂಜ್‌ವೆಲ್ಟರಿಗೆ ಪೆಸಿಫಿಕ್ ಸಾಗರದಲ್ಲಿ ಪರಸ್ಪರ ಭೇಟಿಮಾಡಿ ಬಿಕ್ಕಟ್ಟುಗಳನ್ನು ಪರಿಹರಿಸಿಕೊಳ್ಳಲು ಅವಕಾಶಕೊಡಬೇಕೆಂದು ಕೇಳಿಕೊಂಡಿದ್ದರೆಂಬ ಸುದ್ದಿಯು ಸುಳ್ಳೆಂದೂ ರೂಜ್‌ವೆಲ್ಟರು ವಾಷಿಂಗ್‌ಟನ್ ನಗರಕ್ಕೆ ಹಡಗಿನಲ್ಲಿ ಪ್ರಯಾಣಮಾಡುವರಲ್ಲದೆ ಬೇರೆಲ್ಲಿಗೂ ಹೋಗುವದಿಲ್ಲವೆಂದೂ ರೂಜ್‌ವೆಲ್ಟರ ಕಾರ್ಯದರ್ಶಿಗಳು ತಿಳಿಸಿರುತ್ತಾರೆ

ಇರಾನಿ ವೈಮಾನಿಕರ ವಿರೋಧ

ಇರಾನ್ ಸರ್ಕಾರವು ಇಂಗ್ಲೆಂಡ್ ಮತ್ತು ರಷ್ಯಾಗಳೊಂದಿಗೆ ಶಾಂತಿಮಾಡಿಕೊಂಡ ವಿಚಾರದಲ್ಲಿ ತಮ್ಮ ವಿರೋಧವನ್ನು ಪ್ರದರ್ಶಿಸಲು ಹಲವು ತರುಣ ಇರಾನಿ ವೈಮಾನಿಕರು ಟೆಹರಾನ್ ನಗರದ ಮೇಲೆ ಬಾಂಬುಗಳನ್ನು ಹಾಕಿದರು ಇವರುಗಳು ಜರ್ಮನಿಯ ಚಿತಾವಣೆಯಿಂದ ಈ ರೀತಿ ವರ್ತಿಸಿದರೆಂಬುದಕ್ಕೆ ರುಜುವಾತುಗಳು ದೊರೆತಿವೆ ಈ ವೈಮಾನಿಕರೆಲ್ಲ ತಮ್ಮ ವಿಮಾನಗಳೊಂದಿಗೆ ಎಲ್ಲಿಗೋ ಹೊರಟುಹೋಗಿದ್ದಾರೆ ಇವರನ್ನು ಹಿಡಿದು ಶಿಕ್ಷಿಸಲು ಇರಾನ್ ಸರ್ಕಾರವು ಏನಾದರೂ ಕಾರ್ಯಕ್ರಮವನ್ನು ಕೈಗೊಂಡಿದೆಯೋ ಇಲ್ಲವೋ ಎಂಬ ವಿಚಾರವು ತಿಳಿದಿಲ್ಲ

ಆಕ್ರಮಿಸಲ್ಪಟ್ಟ ದೇಶಗಳಲ್ಲಿರುವವರಿಗೆ ಅನ್ನ ನೀಡುವ ಭಾರ ಜರ್ಮನಿಯದಲ್ಲ

ಜರ್ಮನಿಯು ಆಕ್ರಮಿಸಿರುವ ರಾಷ್ಟ್ರಗಳಲ್ಲಿರುವ ಜನರಿಗೆ ಅನ್ನೋದಕಗಳನ್ನೊದಗಿಸುವ ಜವಾಬ್ದಾರಿಯು ಜರ್ಮನಿಯದಲ್ಲವೆಂದೂ ಅಂತರರಾಷ್ಟ್ರೀಯ ವಿಧಿಯೆ ಇದಕ್ಕೆ ಮಾರ್ಗದರ್ಶಕವಾಗಿದೆಯೆಂದೂ ಅದರ ಪ್ರಕಾರ ದೇಶವನ್ನು ಆಕ್ರಮಿಸಿರುವವರು ದೇಶದಲ್ಲಿ ಶಿಸ್ತು ನೆಲೆಗೊಳ್ಳುವಂತೆ ನೋಡಿಕೊಳ್ಳಬೇಕಾಗಿರುವುದರಿಂದ ಆ ಕಾರ್ಯವನ್ನು ಹೊತ್ತ ಜರ್ಮನಿ ಸೇನೆಗೆ ಆಯಾ ದೇಶದಲ್ಲಿ ದೊರೆಯುವ ಆಹಾರವನ್ನೇ ಒದಗಿಸುವುದು ನ್ಯಾಯವಾಗಿದೆಯೆಂದೂ ಒಂದು ವೇಳೆ ಯಾವ ಪ್ರದೇಶಕ್ಕಾದರೂ ಆಹಾರವನ್ನು ಒದಗಿಸಿದ್ದರೆ ಕೇವಲ ಪ್ರಾಣದಯೆಯಿಂದ ಆ ರೀತಿ ಮಾಡಲಾಗಿದೆಯೆಂದೂ ತಿಳಿಸಲಾಗಿದೆ

ನಾಜಿ ಪ್ರಕಟನೆ ನಿಜವಲ್ಲ

ಲೆನಿನ್‌ಗ್ರಾಡ್‌ನಿಂದ 15 ಮೈಲು ದೂರದೊಳಗೆ ಜರ್ಮನಿ ಸೈನ್ಯಗಳು ನುಗ್ಗಿ ಬಂದಿರುವುದಾಗಿ ನಾಜಿ ಸರ್ಕಾರವು ಹೊರಡಿಸಿರುವ ಸುದ್ದಿಯು ನಿರಾಧಾರವಾದುದೆಂದು ಮಾಸ್ಕೋ ಸುದ್ದಿ ತಿಳಿಸುತ್ತದೆ.

ಶತ್ರುಗಳಿಗಾಗಿರುವ ವಿಮಾನಗಳ ನಷ್ಟ

ಇದುವರೆಗೆ ರಷ್ಯಾ ರಣರಂಗದಲ್ಲಿ ಆಕ್ಸಿಸ್ ರಾಷ್ಟ್ರಗಳು 4000 ಸಾವಿರ ವಿಮಾನಗಳನ್ನು ಕಳೆದುಕೊಂಡಿವೆಯೆಂದು ಅಂದಾಜುಮಾಡಲಾಗಿದೆ ಇದಲ್ಲದೆ ಈಗ ಎರಡು ವರ್ಷಗಳಿಂದ ನಡೆದ ಯುದ್ಧದಲ್ಲಿ ಆಕ್ಸಿಸ್ ರಾಷ್ಟ್ರಗಳು ಅವರಲ್ಲಿ ಮುಖ್ಯವಾಗಿ ಜರ್ಮನಿಯು ಒಟ್ಟು 1020 ವಿಮಾನಗಳನ್ನು ಕಳೆದುಕೊಂಡಿರುವುದಂತೆ !

ಜರ್ಮನರ ಕ್ರೂರಕೃತ್ಯ

ಈಚೆಗೆ ಜರ್ಮನರು ಆಕ್ರಮಿಸಿದ್ದ ಒಂದು ಹಳ್ಳಿಯನ್ನು ಅವರಿಂದ ರಷ್ಯನರು ಮತ್ತೆ ಕಿತ್ತುಕೊಂಡಾಗ ಜರ್ಮನರು ಅಲ್ಲಿ ನಡೆಸಿದ ರಾಕ್ಷಸಕೃತ್ಯವೊಂದು ಹೊರಬಿದ್ದಿದೆ ಗಾಯಗೊಂಡ 5 ಜನ ರಷ್ಯ ಸೈನಿಕರನ್ನು ನಾಜಿಗಳು ಆ ಹಳ್ಳಿಗೆ ಕರೆತಂದು ಹಳ್ಳಿಯ ಜನರನ್ನೆಲ್ಲ ಊರು ಮುಂದೆ ಸೇರಿಸಿ ಅವರೆದುರಿಗೆ ಗಾಯಗೊಂಡ ಸೈನಿಕರ ಕಿವಿ ಮೂಗು ಕೈಗಳನ್ನು ಕೊಯ್ದು ಅನಂತರ ಅವರುಗಳನ್ನು ಕೊಂದರೆಂದು ಹೇಳಲಾಗಿದೆ

ಬೆಲ್ಜಿಯಂ ಆಸ್ಪತ್ರೆಗಳನ್ನು ಜರ್ಮನರಿಗೆ ಬಿಟ್ಟುಕೊಡಬೇಕು

ಬೆಲ್ಜಿಯನ್ ಆಸ್ಪತ್ರೆಗಳನ್ನೆಲ್ಲಾ ಗಾಯಗೊಂಡ ಜರ್ಮನರನ್ನು ಉಪಚರಿಸಲು ಬಿಟ್ಟುಕೊಡಬೇಕೆಂದು ನಾಜಿಸರ್ಕಾರದವರು ಆಜ್ಞೆಮಾಡಿರುತ್ತಾರೆ ಇದಕ್ಕಾಗಿ ಆಂಟವರ್ಪ ಮೊದಲಾದ ನಗರಗಳ ಆಸ್ಪತ್ರೆಗಳಲ್ಲಿರುವ ಸಾವಿರಾರು ರೋಗಿಗಳನ್ನು ಹೊರಕ್ಕೆಸಾಗಿಸುತ್ತಿರಲಾಗಿದೆ ಗಾಯಗೊಂಡ ಸುಮಾರು 40000 ಜರ್ಮನರು ಬೆಲ್ಜಿಯಮ್ಮಿಗೆ ಬರಬಹುದೆಂದು ಊಹಿಸಲಾಗಿದೆ

ಈಗಿನ ಬ್ರಿಟನ್ನಿನ ಶಕ್ತಿ

ಈಗ ಎರಡುವರ್ಷಗಳ ಹಿಂದೆ ಹಿಟ್ಲರನು ಪೋಲೆಂಡಿನಮೇಲೆ ಬಿದ್ದಾಗ ಬ್ರಿಟನ್ನು ಬಹಳ ದುರ್ಬಲವಾಗಿತ್ತು ಅಲ್ಲಿಂದೀಚೆಗೆ ಅವರ ಸೈನ್ಯಬಲವು ವೃದ್ಧಿಯಾಗುತ್ತ ನಡೆದಿದೆ. ಇಂದು ಕನಿಷ್ಠಪಕ್ಷ 30 ಲಕ್ಷ ಯೋಧರು ಸುಸಜ್ಜಿತರಾಗಿ ನಿಂತಿದ್ದಾರೆ ಫ್ರಾನ್ಸಿನಲ್ಲೂ ಇತರ ಕಡೆಗಳಲ್ಲೂ ಬ್ರಿಟನ್ನಿಗಾದ ನಷ್ಟವನ್ನು ಈಗ ಸಂಪಾದಿಸಿಕೊಳ್ಳಲಾಗಿದೆ. ಬ್ರಿಟನ್ನಿಗೆ ಪೂರ್ಣಜಯ ಲಭಿಸಲು ಅದು ಶತ್ರುಗಳಮೇಲೆ ಬಿದ್ದು ಹೊಡೆದಾಡಲೇಬೇಕಾಗಿದೆ ಇದುವರೆಗೆ ಬ್ರಿಟಿಷ್ ಸೈನ್ಯಗಳು ಲಿಬ್ಯಾ, ಅಬ್ಸೀನಿಯಾ ಮತ್ತು ಸಿರಿಯಾ ಈ ಕಡೆಗಳಲ್ಲೆಲ್ಲಾ ವಿಜಯಿಗಳಾಗಿವೆ ಈ ಸೇನೆಗಳಿಗೆ ಟ್ಯಾಂಕುಗಳನ್ನೂ ಶಸ್ತ್ರಬಂಡಿಗಳನ್ನೂ ಅಪಾರವಾಗಿ ಒದಗಿಸುತ್ತಿರಲಾಗಿದೆ

ತುರ್ಕಿಸೇನೆಗೆ ಅಧ್ಯಕ್ಷ ಇನೇನುರವರ ಸಂದೇಶ

19 ವರ್ಷಗಳ ಹಿಂದೆ ಗ್ರೀಕರನ್ನು ಗೆದ್ದ ಜ್ಞಾಪಕಾರ್ಥವಾಗಿ ತುರ್ಕಿಯಲ್ಲಿ ನಡೆದ ವಿಜಯೋತ್ಸವ ಸಮಾರಂಭಕಾಲದಲ್ಲಿ ತುರ್ಕಿಯ ಅಧ್ಯಕ್ಷ ಇನೇನುರವರು ತುರ್ಕಿಯ ಸೈನಿಕರನ್ನುದ್ದೇಶಿಸಿ "ಈ ವಿಜಯೋತ್ಸವದ ದಿನ ನಾನು ನಿಮ್ಮೆಲ್ಲರನ್ನೂ ಅಭಿನಂದಿಸುತ್ತೇನೆ ನಮ್ಮ ಮಿಲಿಟರಿ ಇತಿಹಾಸವನ್ನು ಪರಿಶೀಲಿಸಿದಲ್ಲಿ ಸ್ವಾತಂತ್ರ್ಯ ರಕ್ಷಣೆಗಾಗಿ ಮಾಡಿರುವ ತ್ಯಾಗದ ಉದಾಹರಣೆಗಳು ಅನೇಕವಿವೆ. ಇದೇ ತುರ್ಕಿಗೆ ರಕ್ಷಾಕವಚ ಪ್ರಜಾಪ್ರಭುತ್ವದ ಪ್ರಯತ್ನಗಳೆಲ್ಲ ನಿಷ್ಫಲವಾಗಿ ಬಲಪ್ರಯೋಗವೇ ಮಾಡಬೇಕಾಗಿ ಬಂದಲ್ಲಿ ತುರ್ಕಿಸೇನೆಯು ತನ್ನ ಕರ್ತವ್ಯವನ್ನು ಕೀರ್ತಿಯುತವಾಗಿ ನೆರವೇರಿಸುವದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ" ಎಂದು ಹೇಳಿದರು. ಅದಕ್ಕೆ ಸೈನ್ಯಾಧಿಕಾರಿಗಳಾದ ಮಾರ್ಷಲ್ ಚಾಕ್ ಮಾರ್ಕ್‌ರವರು ಉತ್ತರವೀಯುತ್ತ "ವಿಜಯೋತ್ಸವದ ದಿನ ಅಧ್ಯಕ್ಷ ಇನೋನುರವರಿತ್ತಿರುವ ಸಂದೇಶವು ಬಹಳ ಅಮೂಲ್ಯವಾದುದು. ತುರ್ಕಿಯ ಸೇನೆಗೆ ಆಧುನಿಕ ಶಸ್ತ್ರಾಸ್ತ್ರಗಳನ್ನೊದಗಿಸಲಾಗಿದೆ. ತುರ್ಕಿಯ ಭದ್ರತೆಗಾಗಿ ಸೈನಿಕರು ತಮ್ಮ ದೇಹದಲ್ಲಿ ಒಂದು ತೊಟ್ಟು ರಕ್ತವಿರುವವರೆಗೂ ಹೊಡೆದಾಡುವರು" ಎಂದು ಹೇಳಿದರು

ಮುಸೋಲಿನಿಗೆ ಹಿಟ್ಲರನ ಪ್ರಾರ್ಥನೆ

ರಷ್ಯಾ ರಣರಂಗದಲ್ಲಿ ಜರ್ಮನಿಗಾಗಿರುವ ಅಪಾರ ನಷ್ಟವನ್ನು ಇಟಲಿಯು ತುಂಬಿಕೊಡಬೇಕೆಂದು ಕೇಳಲೋಸುಗ ಹಿಟ್ಲರನು ಮುಸೋಲಿನಿಯನ್ನು ಕರೆಸಿದ್ದನೆಂದೂ, ಹಿಟ್ಲರನ ವಿನಾಸಲು ವಳನೆಲ್ಲ ನಷ್ಟ ಹೊಂದಿದುವದರಿಂದ ಈಗ ಅವನು ಬಹಳ ಯೋಚನಾಮಗ್ನನಾಗಿರುವನೆಂದೂ ಇವರಿಂದ ಲಿಬ್ಯಾ, ಯುಗೊಸ್ಲೋವಿಯ ಮತ್ತು ಗ್ರೀಸ್‌ಗಳಿಗೆ ಹೆಚ್ಚು ಸೈನ್ಯಗಳನ್ನು ಕಳುಹಿಸಿಕೊಡಬೇಕೆಂದು ಹಿಟ್ಲರನು ಮುಸೋಲಿನಿಯನ್ನು ಕೇಳಿದನೆಂದೂ ಹೇಳಲಾಗಿದೆ

ಸ್ವೀಕಾರ.

ಬಳ್ಳಾರಿ ಡಿ|| ಹುವಿನಹಡಗಲಿ ತಾ|| ಹೊಳಗುಂದಿ ಗ್ರಾಮದಲ್ಲಿರುವ ಮ|| ರಾ|| ಬೆಡ್ಡಿ ಲಿಂಗನಗೌಡರು ಪಾಟೀಲ ಅಧಿಕಾರವನ್ನು ವಹಿಸಿಕೊಂಡ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ **2-8-0** ಇವರ ತಮ್ಮಂದಿರಾದ ಮ|| ರಾ|| ಬಸವನಗೌಡರಿಗೆ ಪುತ್ರರತ್ನವು ಜನಿಸಿದ ಸಂತೋಷಕ್ಕಾಗಿ ಸಮರ್ಪಿಸಿದ **2-8-0** ಒಟ್ಟು **5** ರೂಪಾಯಿಗಳು ಮ|| ರಾ|| ಹೊಳಗುಂದಿ ಶಾನಭೋಗರ ಭದ್ರಪ್ಪನವರ ಸಿದ್ಧಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ

ಬೆಳಗಾಂವ ಶಹರದಲ್ಲಿರುವ ಶ್ರೀ ವೀರಭದ್ರಸ್ವಾಮಿ ದೇವಾಲಯದಲ್ಲಿ ಶ್ರೀ ರೇಣುಕವಿಜಯ ಮಹಾಪುರಾಣವು ಸಮಾಪ್ತಿಗೊಂಡ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಸುತ್ತಗಟ್ಟಿ ಗುರುಸಿದ್ಧಶಿವಾಚಾರ್ಯಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ

ಸೊಲ್ಲಾಪುರದಲ್ಲಿರುವ ಶ್ರೀರೇವಣಸಿದ್ಧೇಶ್ವರ ದೇವಾಲಯದಲ್ಲಿ ಮ|| ರಾ|| ಅಣ್ಣಾರಾವ್ ಸೊನ್ನ ಇವರು ಶ್ರೀರೇಣುಕವಿಜಯ ಮಹಾಪುರಾಣವನ್ನು ಪ್ರಾರಂಭಿಸಿ ಸಮಾಪ್ತಿಗೊಳಿಸಿದ ಸಮಯದಲ್ಲಿ ಪುರಾಣಿಕರ ಸೂಚನೆಯಂತೆ ಪ್ರಭಾ ಪೋಷಣಕ್ಕೋಸ್ಕರ ತೆಗೆಯಿಸಿದ 1 ರೂಪಾಯಿಯು ಸಿದ್ಧಲಿಂಗಶರ್ಮರ ದ್ವಾರಾ ತಲ್ಪಿರುತ್ತದೆ

ನಿಜಾಂ ಇಲಾಖಾ ಶೇಕುಗಿ ಗ್ರಾಮದಲ್ಲಿ ಶ್ರೀಸಿದ್ಧರಾಮಶಿವಯೋಗಿಗಳವರು ಶಿವಾಧೀನರಾದ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ತೆಗೆಯಿಸಿದ 1 ರೂಪಾಯಿಯು ವೇ|| ಸಿದ್ಧರಾಮಯ್ಯ ಬಂಗಿ ಹುಮನಾಬಾದ ಇವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು 'ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

[೧ನೆಯ ಪುಟದಿಂದ ಮುಂದುವರಿದುದು]

ಯುದ್ಧದಲ್ಲಿ ಸೋಲಿಸಲು ಅವಕಾಶವಾದುದರಿಂದ, ಅವುಗಳೆಲ್ಲಾ ಈಗ ಅನುಭವಿಸಬೇಕಾಗಿ ಬಂದಿರುವ ನಷ್ಟಿನ ದುರವಸ್ಥೆಗೆ, ಅವುಗಳಲ್ಲಿ ಯಾವ ಜನಾಂಗವೂ ಆಗ್ಗೆ ಗುರಿಯಾಗುತ್ತಿರಲಿಲ್ಲ. ಅಷ್ಟೇ ಅಲ್ಲ. ಆ ಜನಾಂಗಗಳು, ತಮ್ಮನ್ನು ಅಡಗಿಸಲು ಬಂದ ಘಾತುಕ ಮೃಗವು ಚೇತರಿಸಿಕೊಳ್ಳಲು ಸ್ವಲ್ಪವೂ ಅವಕಾಶಕೊಡದೆ ಯುದ್ಧಮಾಡುವುದು ಆಗ್ಗೆ ಸಾಧ್ಯವಿದ್ದಿತು. ಆ ಘಾತುಕ ಮೃಗವು ಹೋರಾಡಿ ದಣಿದು ಕೊನೆಗೆ ಸೋತೇಹೋಗುವಂತೆ, ಆ ಜನಾಂಗಗಳು ಯುದ್ಧಮಾಡುವುದು ಆಗ್ಗೆ ಸಾಧ್ಯವಿದ್ದಿತು ಯುದ್ಧದಲ್ಲಿ ಸೋಲದೆ, ಆ ಘಾತುಕ ಮೃಗದೊಡನೆ ಹೋರಾಡುತ್ತಿರುವ ಜನಾಂಗಗಳ ವಿಚಾರ. ದೊಡ್ಡ ನೌಕಾಧಿಕಾರಿಯೊಬ್ಬರು ಆ ಜನಾಂಗಗಳ ಸ್ಥಿತಿಯನ್ನು ಕುರಿತು ಒಂದೇ ವಾಕ್ಯದಲ್ಲಿ ಸಂಕ್ಷೇಪವಾಗಿ ಸೂಚಿಸಿದ್ದಾರೆ. "ಕಳೆದ ವರ್ಷದ ಅನುಭವದಿಂದ ಅತ್ಯಂತ ಚೆನ್ನಾಗಿ ನೆನಪಿನಲ್ಲಿ ನಿಂತಿರುವ ಸಂಗತಿಯೆಂದರೆ, ಸಹಕಾರದ ಪರಮ ಪ್ರಯೋಜನದ ನೀತಿಯೊಂದೇ" ಎಂಬುದು ಆ ವಾಕ್ಯ.

ಮಿತ್ರರೇ, ಈ ದಿನದಿಂದ ಪ್ರಾರಂಭವಾಗುವ ಮೂರನೆಯ ವರ್ಷದಲ್ಲಿ, ಏಕಮತ್ಯದ ಮತ್ತು ಸಹಕಾರದ ಇವೆರಡು ನೀತಿಯನ್ನು ನೆನಪಿನಲ್ಲಿಟ್ಟುಕೊಂಡು ವರ್ತಿಸೋಣ. ನಾವುಗಳು ಯಾವ ಯಾವ ನಾಮರೂಪಗಳಿಂದ ಭಗವಂತನನ್ನು ಆರಾಧಿಸುತ್ತಿದ್ದರೆ ಆ ನಾಮರೂಪಗಳಲ್ಲೇ ಆತನನ್ನು ಅವರವರು ಭಾವಿಸಿಕೊಂಡು ಇಷ್ಟಾರ್ಥಸಿದ್ಧಿಗಾಗಿ ಸಮಸ್ತರೂ ಆತನಿಗೆ ಮೊರೆಯಿಡೋಣ. ನಮ್ಮ ನಮ್ಮ ಕಾರ್ಯಗಳನ್ನೂ ಮತ್ತು ಉದ್ದೇಶಗಳನ್ನೂ ನಮ್ಮ ನಮ್ಮ ಮತಧರ್ಮಗಳ ನೀತಿಬೋಧೆಯ ಒರೆಗಲ್ಲಿನಲ್ಲೇ ಪರೀಕ್ಷಿಸಿಕೊಳ್ಳೋಣ. ಹಾಗೆ ಪರೀಕ್ಷೆಮಾಡಿದಮೇಲೆ ಅವು ಸಾಧುವಾಗಿ ಕಂಡುಬಂದರೆ, ನಾವು ನ್ಯಾಯಪಕ್ಷವನ್ನು ವಹಿಸಿ ವರ್ತಿಸುತ್ತಿರುವುದು ಆಗ್ಗೆ ನಮ್ಮ ಮನಸ್ಸಿಗೆ ನಿಶ್ಚಯವಾಗುವುದು. ಏಕೆಂದರೆ, ಸತ್ವಪೂರ್ಣ ಸಮಸ್ತ ಮತಗಳೂ, ದೈವೀಸಂಪತ್ತಿನ ಅನಂತಧಾಮದ ಅಮೃತಸಾಗರವನ್ನು ಸೇರುವ ಮಹಾನದಿಗಳಂತಿವೆ. ನಮ್ಮ ಸಹೋದರರ ಸ್ಥಿತಿಗತಿಗಳನ್ನೂ, ನಮ್ಮ ಸ್ಥಿತಿಗತಿಗಳಂತೆಯೇ ಸಮಾಲೋಚಿಸಿ ನೋಡೋಣ. ಉದಾಹರಣೆಗಾಗಿ ಇರಾನ್ ಮತ್ತು ಇರಾಕ್ ದೇಶಗಳು ಈಜಿಪ್ಟ್ ಮತ್ತು ಸಿರಿಯಾದೇಶಗಳು, ಮಲಯಾ ಮತ್ತು ಬರ್ಮಾ ದೇಶಗಳು ಇವುಗಳ ಸ್ಥಿತಿಗಳನ್ನು ತಿಳಿದುಕೊಂಡು ಪರ್ಯಾಲೋಚಿಸಿ ತೂಗಿನೋಡೋಣ ಅವುಗಳ ಕಷ್ಟಸುಖಗಳನ್ನೂ, ಕುಂದುಕೊರತೆಗಳನ್ನೂ ಪರಿಗಣಿಸಿ, ವಾಸ್ತವ ಸನ್ನಿವೇಶವೇನೆಂಬುದನ್ನು ಯೋಚಿಸಿ ನೋಡೋಣ ಅವಕ್ಕೆ ಸಹಾಯಮಾಡುವ ಮೂಲಕ, ನಮಗೇ ಅನುಕೂಲ ಕಲ್ಪಿಸಿಕೊಳ್ಳೋಣ ಪ್ರಪಂಚದ ಇತರ ದೇಶಗಳು ಯುದ್ಧವಿಚಾರಕ್ಕೆ ಪೂರ್ಣವಾಗಿ ಗಮನಕೊಡುತ್ತ, ಅದರಲ್ಲಿ ಮಗ್ನವಾಗಿವೆ ಹೀಗಿರುವಲ್ಲಿ, ಭರತಖಂಡವು ಮಾತ್ರ ಈ ದೊಡ್ಡ ವಿಚಾರಕ್ಕೆ ಹೋಲಿಸಿದರೆ ತೀರ ಅಲ್ಪವೆನಿಸುವ ವಿಚಾರಗಳ ಸಂಬಂಧವಾಗಿ, ಕೊನೆ ಮೊದಲೇ ಇಲ್ಲದ ವಾದಗಳಲ್ಲಿ ಮಗ್ನವಾಗಿರುವುದು ಉಚಿತವಲ್ಲ. ಹಾಗೆ ಮಗ್ನವಾಗಿರುವುದೆಂಬ ಆಕ್ಷೇಪಕ್ಕೆ ನಾವು ಅವಕಾಶ ಕೊಡಕೂಡದು ಯುದ್ಧದಲ್ಲಿ ಜಯವಾಗುವವರೆಗೂ ನಮ್ಮ ನಮ್ಮ ಭೇದಭಾವಗಳನ್ನೆಲ್ಲ, ಅವು ತಲೆ ಎತ್ತದಂತೆ ಮಾಡಿ," ಒಂದು ಕಡೆ ತಳ್ಳಿರೋಣ. ಮೊದಲು ಯುದ್ಧದಲ್ಲಿ ಜಯವು ಲಭಿಸಲಿ; ಬಳಿಕ ಉಳಿದ ಮಾತು. ನಮ್ಮ ಕನ್ನಡನಾಡಿನ ಏಳಿಗೆಗೆ, ನಮ್ಮ ಮಾತೃಭೂಮಿಯಾದ ಒಟ್ಟು ಭರತಖಂಡದ ಏಳಿಗೆಗೆ, ಮತ್ತು ನಮ್ಮ ಜನಾಂಗವೂ ಒಂದು ಅಂಗವಾಗಿ ಸೇರಿರುವ ನಾನಾ ಜನಾಂಗ ಸಮುದಾಯದ ಶ್ರೇಷ್ಠ ವ್ಯವಸ್ಥೆಯ ಏಳಿಗೆಗೆ, ಸಾಧಕವಾಗುವ ಸಮಸ್ತ ವಿಚಾರಗಳಿಗೂ ಗಮನ ಕೊಡಬೇಕಾದುದು ಆವಶ್ಯಕ ಆದರೆ, ಮೊದಲು ಯುದ್ಧದ ವಿಚಾರಕ್ಕೆ ಗಮನ ಕೊಡೋಣ. ಯುದ್ಧದಲ್ಲಿ ಜಯವನ್ನು ಪಡೆದ ಬಳಿಕ ಅವುಗಳಿಗೆಲ್ಲ ಏಕಾಗ್ರತೆಯಿಂದ ನಾವು ಗಮನಕೊಟ್ಟು ಕಾರ್ಯಸಾಧನೆ ಮಾಡುವುದನ್ನು ಅಗತ್ಯವಾಗಿ ನಮ್ಮ ಉದ್ದೇಶವಾಗಿಟ್ಟುಕೊಳ್ಳೋಣ

ಭಗವಂತನಲ್ಲಿ ಭಯಭಕ್ತಿಗಳಿಂದಿರುವುದೊಂದು ಒಟ್ಟು ಮನುಷ್ಯ ವರ್ಗದಲ್ಲಿ ಸಹೋದರ ಭಾವವು ನೆಲೆಗೊಳ್ಳುವಂತೆ ಮಾಡುವುದೊಂದು ಇವೆರಡನ್ನೂ ಸಾಧಿಸಲು ಕನ್ನಡಿಗರು ತಮ್ಮ ಸರ್ವ ಸಾಮರ್ಥ್ಯವನ್ನೂ ವಿನಿಯೋಗಿಸಿ ಪ್ರಯತ್ನಿಸಬೇಕೆಂಬುದೇ, ಈದಿನ ಕನ್ನಡನಾಡಿಗೆ ನಮ್ಮ ಸಂದೇಶ ಇಷ್ಟಾರ್ಥಗಳು ನೆರವೇರುವಂತೆ ಅನುಗ್ರಹಿಸಬೇಕೆಂದು, ನಾವೆಲ್ಲರೂ ಅತ್ಯಂತ ಶ್ರದ್ಧೆಯಿಂದ ಭಗವಂತನನ್ನು ಪ್ರಾರ್ಥಿಸೋಣ!"

ಪುತ್ರರತ್ನೋದಯ ಮತ್ತು ಪಾಟೀಲಾಧಿಕಾರ ಸ್ವೀಕಾರ ಸಮಾರಂಭ, ಹೊಳಗುಂದಿ

ಬಳ್ಳಾರಿ ಡಿ|| ಹೂವಿನಹಡಗಲಿ ತಾಲ್ಲೂಕು ಹೊಳಗುಂದಿ ಗ್ರಾಮದ ಪಾಟೀಲ್ ಶ್ರೀ ವಿರೂಪಾಕ್ಷಗೌಡರ ಜೇಷ್ಠ ಪುತ್ರರಾದ ಕೈ|| ಮರಿಸಿದ್ಧನಗೌಡರ ಜೇಷ್ಠಪುತ್ರ ಲಿಂಗನಗೌಡರು ಮತ್ತು ಸದರಿ ವಿರೂಪಾಕ್ಷಗೌಡರ ದ್ವಿತೀಯ ಪುತ್ರರಾದ ಮ|| ರಾ|| ಗುರುಬಸವನಗೌಡರು ಮೊದಲಾದವರಲ್ಲಿ ಕಾರಣಾಂತರದಿಂದ ಮನಸ್ತಾಪವುಂಟಾಗಿತ್ತು. ಇದನ್ನು ದೂರಮಾಡುವದಕ್ಕೋಸ್ಕರ ಹೊಳಗುಂದಿಗ್ರಾಮದ ಉ|| ಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಪಟ್ಟದಸ್ವಾಮಿಗಳವರ ಪೀಠದಿಂದ ವೇ|| ದೊಡ್ಡಚರಂತಪ್ಪನವರ ಅಧ್ಯಕ್ಷತೆಯಲ್ಲಿ ೩-೮-೪೧ ನೆಯ ದಿವಸ ಸಭೆಗೂಡಿತು. ಸಭೆಗೆ ಹೊಳಗುಂದಿ ಮತ್ತು ಬಾವಿಹಳ್ಳಿಗ್ರಾಮದ ಅನೇಕ ಜನ ಮಹಾಶಯರು ಆಗಮಿಸಿದ್ದರು. ಆರಂಭದಲ್ಲಿ ಜಗದಾಚಾರ್ಯರ ಪ್ರಾರ್ಥನೆಯಾಯಿತು. ಬಳಿಕ ಅಧ್ಯಕ್ಷರು ಗುರುಮಹತ್ವ ವಿಷಯದ ಬಗ್ಗೆ ಸಪ್ರಮಾಣವಾಗಿ ಬೋಧಿಸಿ ಸರ್ವ ಶಿಷ್ಯಮಂಡಲಿಯನ್ನು ಸಂತೋಷಪಡಿಸುವದರ ಮೂಲಕ ಐಕ್ಯಮತ್ಯವನ್ನು ಮೂರಮಾಡಿದರು. ಬಳಿಕ ಪಾಟೀಲ ಶ್ರೀ ವಿರೂಪಾಕ್ಷಗೌಡರು ತಮ್ಮ ಜ್ಯೇಷ್ಠ ಪುತ್ರರಾದ ಮರಿಸಿದ್ಧನಗೌಡರ ಹಿರಿಯ ಮಕ್ಕಳು ಮಿಸಲ್ ರಡ್ಡಿ ಲಿಂಗನಗೌಡರಿಗೆ ರೆಡ್ಡಿ ಕೆಲಸದ ಛಾರ್ಜ ಕೊಡುವದಾಗಿ ಸೂಚಿಸಿದರು. ಅದಕ್ಕೆ ಮ|| ರಾ|| ಶಾನಭೋಗರ ಗವಿಸಿದ್ಧಪ್ಪನವರು ಜ್ಞಾನವೃದ್ಧರಿಂದ ವಿರೂಪಾಕ್ಷಗೌಡರಿಗೆ ವಯಸ್ಸು ಬಹಳವಾಗಿರುವದರಿಂದ ಅವರಿಗೆ ಈಗ ವಿಶ್ರಾಂತಿಯು ಬೇಕಾಗಿರುವದೆಂದೂ ಮ|| ರಾ|| ಲಿಂಗನಗೌಡರು ಅಧಿಕಾರ ವಹಿಸಿಕೊಳ್ಳುವದು ಸೂಕ್ತವೆಂದೂ ನುಡಿದರು. ಇದಕ್ಕೆ ಗ್ರಾಮಸ್ಥರೆಲ್ಲರೂ ಒಪ್ಪಿ ಕರತಾಡನ ಮೂಲಕ ತಮ್ಮ ಸಂತೋಷವನ್ನು ಪ್ರದರ್ಶಿಸಿದರು. ಅನಂತರ ವಿಧ್ಯುಕ್ತವಾಗಿ ಪೂಜಾದಿಗಳು ನಡೆದು, ಮ|| ರಾ|| ಲಿಂಗನಗೌಡರಿಗೆ ಅಧಿಕಾರವು ವಹಿಸಲ್ಪಟ್ಟಿತು. ಬಳಿಕ ವೇ|| ದೊಡ್ಡಚರಂತಪ್ಪನವರು ಶಾನುಭೋಗರ ಯಜಮಾನ ಗುಡ್ಡದ ಸಿದ್ಧಪ್ಪನವರು ಸಾಹುಕಾರ ಎಚ್ ಸಣ್ಣ ಹಾಲನಗೌಡರು ಶಾನಭೋಗರ ಕರಿವೀರಪ್ಪನವರು, ಗ್ರಾಮದಲ್ಲಿ ರೈತರಿಗೆ ಅನ್ಯಾಯವಾಗದಂತೆ ವರ್ತಿಸಿ ಪ್ರಜಾನುರಾಗವನ್ನು ಸಂಪಾದಿಸಬೇಕೆಂದು ಬೋಧಿಸಿದರು. ಇದೇ ಸಮಯದಲ್ಲಿ ಸದರಿ ಲಿಂಗನಗೌಡರ ತಮ್ಮಂದಿರಾದ ಬಸವನಗೌಡರಿಗೆ ಪುತ್ರರತ್ನ ಉದಯವಾದ ಸಂತೋಷಕ್ಕಾಗಿ ಸಕ್ಕರೆಯನ್ನು ಹಂಚುವ ಕಾರ್ಯವು ಸಭೆಯಲ್ಲಿ ನೆರವೇರಿತು. ಈ ಸಮಾರಂಭಗಳ ಸಂತೋಷಕ್ಕಾಗಿ ವೀರಶೈವ ಮತೋದ್ಧಾರಕರೂ ಪಂಡಿತಮಂಡಲಿ ಮಂಡನಾಯಮಾನರೂ, ಗುರು ವಿರೋಧಿ ತಿಮಿರಭಾಸ್ಕರರೂ ಆದ ವೇ|| ಪಂ|| ಶ್ರೀ ಕಾಶೀನಾಥ ಶಾಸ್ತ್ರಿಗಳವರ ಅವಿಶ್ರಾಂತ ಶ್ರಮದಿಂದ ಅವ್ಯಾಹತವಾಗಿ ಪ್ರಕಟವಾಗುತ್ತಿರುವ ಪಂಚಾಚಾರ್ಯ ಪ್ರಭಾ ಪತ್ರಿಕೆಯ ಪೋಷಣಕ್ಕೋಸ್ಕರ ದ್ರವ್ಯ ಸಹಾಯವನ್ನೀಯಬೇಕೆಂದು ವೇ|| ದೊಡ್ಡಚರಂತಪ್ಪನವರು ಬೋಧಿಸಿದ ಮೇರೆಗೆ ಪಾಟೀಲ ಮರಿಸಿದ್ಧನಗೌಡರ ಧರ್ಮಪತ್ನಿಯವರಾದ ಶ್ರೀಮತಿ ಬಸವ್ವನವರು ಪಾಟೀಲಾಧಿಕಾರ ಸ್ವೀಕಾರದ ಬಗ್ಗೆ ೨|| ರೂಗಳನ್ನೂ, ತಮ್ಮ ದ್ವಿತೀಯಪುತ್ರ ಚಿ|| ಬಸವನಗೌಡರಿಗೆ ಪುತ್ರರತ್ನವು ಜನಿಸಿದ ಸಂತೋಷಕ್ಕಾಗಿ ೨|| ರೂಗಳನ್ನೂ ಮ|| ರಾ|| ಶಾನುಭೋಗರ ಸಿದ್ಧಲಿಂಗಪ್ಪನವರ ಸೂಚನೆಯ ಮೇರೆಗೆ ಪ್ರಭಾ ಪತ್ರಿಕೆಯ ಚಂದಾದಾರರಾಗಲು ೨|| ರೂಗಳನ್ನೂ ಸದರಿ ಸಿದ್ಧಲಿಂಗಪ್ಪನವರ ವಶಕ್ಕೆ ಕೊಟ್ಟರು. ಅನಂತರ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ತುರುಕಾಣಿ ನಾಗಪ್ಪ ಬಣಕಾರ
ಸಾ|| ಹೊಳಗುಂದಿ ಮಜರೆ ಭಾವಿಹಳ್ಳಿ.

ಖಡಕಲಾಟ

(ಸಂಸ್ಥಾನ ಕಾಪಸಿ)

ಇಲ್ಲಿ ಕೆಲವು ದಿವಸಗಳ ಹಿಂದೆ ಮರಗವ್ವನ ಬೇನೆಯು ಪ್ರಾದುರ್ಭವಿಸಿತು. ಅದರ ನಿವಾರಣೆಗಾಗಿ ಜನರೆಲ್ಲರೂ ೧ ತಿಂಗಳು ಪೂರ್ಣ ದೇವಿಯ ನಿಯಮಗಳನ್ನು ಧಾರ್ಮಿಕ ರೀತಿಯಿಂದ ಆಚರಿಸಿದ್ದರಿಂದ ಕಡಿಮೆಯಾಯಿತು. ಜನರು ಈಊರ ಲಕ್ಷ್ಮೀದೇವಿಯ ಯಾತ್ರೆಯನ್ನು ಒಳ್ಳೆವಿಜೃಂಭಣೆಯಿಂದ ಸಾಗಿಸಿದರು. ಈ ದೇವಿಯ ಯಾತ್ರೆಯು ೧೦ ವರ್ಷಗಳ ಹಿಂದೆ ಆಗಿತ್ತು. ಪುನಃ ಈಗ ಮಾಡುವದರಲ್ಲಿ ಬಂದಿತು.

ಇಲ್ಲಿಯ ಹಿರಿಯ ಮಠಾಧ್ಯಕ್ಷರಾದ ಶ್ರೀಸ್ವಾಮಿ ಗುರುಮೂರ್ತಿಶಿವಾಚಾರ್ಯರು ಕೆಲ ದಿವಸಗಳಿಂದ ಆಯುರ್ವೇದ ಶಿಕ್ಷಣಕ್ಕಾಗಿ ಕ ಆ ವಿ ಪೀ ಬೆಳಗಾವ ಖಾಸ ಭಾಗಕ್ಕೆ ಹೋಗಿದ್ದು ಈಗ ಆಯುರ್ವೇದ ಭಿಷಕ್ ಪರೀಕ್ಷೆಯಲ್ಲಿ ಪಾಸಾಗಿದ್ದಾರೆ. ಅವರು ಕಡೆಯ ಶ್ರಾವಣ ಸೋಮವಾರ ದಿವಸ ಇಲ್ಲಿಗೆ ಬಂದು ಶ್ರೀ ಮಹಾದೇವರ ದೇವಾಲಯದಲ್ಲಿ ಶ್ರೀ ರುದ್ರಾಭಿಷೇಕವನ್ನು ಮಾಡಿದರು. ಭಾದ್ರಪದ ಶುದ್ಧ ೨ ದಿವಸ ರಾತ್ರಿ ಹಿಟ್ಟಣಗಿ (ಸಂಸ್ಥಾನ, ಕರವೀರ) ಯಲ್ಲಿ ಶ್ರೀ ಬಸವಣ್ಣದೇವರ ಗುಡಿಯಲ್ಲಿ ವರ್ಷಪದ್ಧತಿಯ ದಿವಸ ಪುರಾಣವು ಮುಗಿದ ಬಳಿಕ ಶ್ರೀ ಸ್ವಾಮಿಯವರು "ಸದ್ಧರ್ಮ" ವಿಷಯವನ್ನು ಕುರಿತು ಮಾತನಾಡಿದರು. ಅನಂತರ ಆಚಾರ್ಯರ ಬಗ್ಗೆ ಬೋಧಿಸಿದರು. ಹಿಟ್ಟಣಗಿಯಲ್ಲಿ ಶ್ರೀ ಪಟ್ಟದಸ್ವಾಮಿಗಳೊಡನೆ ಆಚಾರ್ಯರ ಬಗ್ಗೆ ಸದ್ಯಃ ಪಂಚಾಚಾರ್ಯರುಣಕ್ಕನುಸರಿಸಿ ಆಚಾರ್ಯರ ಉತ್ಸವಗಳನ್ನು ಹೆಚ್ಚಿಗೆ ಪ್ರಚಲಿಸಬೇಕೆಂದು ಹೇಳಿ ಪ್ರಯಾಣ ಮಾಡಿದರು.

ಶಂಕರಪ್ಪ ಕೂಟಿ

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ನಿಧನವಾರ್ತೆ ರೇಕುಳಿಗೆ

ನಿಜಾಂ ಪ್ರಾಂತದ ರೇಕುಳಗಿ ಗ್ರಾಮದ ಬೃಹನ್ಮಠದ ಸಿದ್ಧರಾಮಶಿವಯೋಗಿವರ್ಯರು ತಾ|| ೮-೮-೪೧ ದಿವಸ ಶಿವಸಾಯುಜ್ಯವನ್ನು ಹೊಂದಿದರು. ಆ ಸಮಯಕ್ಕೆ ೫ ಸಾವಿರಜನರು ನೆರೆದಿದ್ದರು. ಕ್ರಿಯಾಸಮಾಧಿಯು ಮರಕುಂದಿ ಗ್ರಾಮದ ಶ್ರೀಕರಿಬಸವಸ್ವಾಮಿಗಳವರ ಮತ್ತು ದಾರುಕಶಾಖಾಮಠದ ರಂಜೇರಿ ಶ್ರೀ ಸಿದ್ಧಲಿಂಗ ಸ್ವಾಮಿಗಳ ನೇತೃತ್ವದಲ್ಲಿ ವೈಭವದಿಂದ ನೆರವೇರಿತು. ಸದ್ಭಕ್ತಶಿರೋಮಣಿಗಳಾದ ವ ಡಿವಾಳಪ್ಪ ಪೇಟೆ ರಂಜೇರಿ ಇವರು ಸದರಿ ಶ್ರೀಗಳ ಶಿಷ್ಯರು. ಇವರು ತಮ್ಮ ಪರಿವಾರದೊಡನೆ ಆಗಮಿಸಿ ಮೊದಲನೆಯ ಪುಷ್ಪಾಂಜಲಿಯನ್ನು ಅರ್ಪಿಸಿದರು. ಸುತ್ತ ಮುತ್ತ ಗ್ರಾಮಗಳ ಭಜನ ಸಂಘದವರು ಬಂದಿದ್ದರು. ಜಗದಾಚಾರ್ಯರ ಜಯಘೋಷಮಯವಾಗಿತ್ತು. ಸೊಲ್ಲಾಪುರದ ಕೈ|| ನಾರದ ಅಪ್ಪಾಸಾಹೇಬರ ಮನೆಯವರು ಸದರಿ ಶ್ರೀಗಳ ಶಿಷ್ಯರು. ಜನ್ಮಾದಕೂಡಲೆ ಶಿಷ್ಯರಾದ ಬಾಬಾಸಾಹೇಬ ನಾರದ ಇವರು ಗುರುಗಳನ್ನು ತಮ್ಮ ಮನೆಗೆ ಕರೆಯಿಸಿಕೊಂಡು ಉತ್ತಮ ಡಾಕ್ಟರರಿಂದ ಔಷಧೋಪಚಾರ ನಡೆಸಿದರು. ಮನೆಯ ಜನರೆಲ್ಲರೂ ಅಸಾಧ್ಯಸೇವೆಯನ್ನು ಸಲ್ಲಿಸಿದರು. ಡಾಕ್ಟರು ರಕ್ತಬೇಕೆಂದು ಕೇಳಿದರಂತೆ! ಅದಕ್ಕಾಗಿ ಜನರು ಸುಮ್ಮನಿರಲು ಉಜ್ಜಯಿನೀ ಜಗದ್ಗುರುಗಳ ಆಶೀರ್ವಾದಬಲದಿಂದ ಉತ್ಪನ್ನನಾದ ಬಾಬಾಸಾಹೇಬರ ೬ ವರ್ಷದ ಹುಡುಗನು ನನ್ನ ಗುರುಗಳಿಗಾಗಿ ನನ್ನ ರಕ್ತವನ್ನು ತೆಗೆದುಕೊಳ್ಳಿರೆಂದು ಹೇಳಿದನಂತೆ! ಇದನ್ನು ಕಂಡು ಎಲ್ಲರೂ ಆ ಮಗುವನ್ನು ಕೊಂಡಾಡಿದರಂತೆ! ಇದು ಶುದ್ಧ ವಂಶದ ಪ್ರಭಾವ! ಜಗದೀಶ್ವರನು ಶ್ರೀಗಳ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುವ,

ಓರ್ವ ದುಃಖಭಾಗಿ

ಇಂಗ್ಲೀಷ್ ಕಲಿಯುತಕ್ಕ ವಿದ್ಯಾರ್ಥಿಗಳಿಗೆ ಸುಸಂಧಿ

ಶ್ರೀ ಜಗದ್ಗುರು ಪಂಚಾಚಾರ್ಯ ಪಾಠಶಾಲಾ ಬಣ್ಣದಮಠ, ಹಾವೇರಿ ಈ ಸಂಸ್ಥೆಯ ವತಿಯಿಂದ ಪ್ರಸಿದ್ಧಪಡಿಸುವದೇನೆಂದರೆ—

ತಾ|| ೫ ೧೦-೧೯೪೧ ನೇ ಇಸ್ವಿ ಅಂದರೆ ಅಶ್ವಯುಜ ಶು|| ೧೫ ರಿಂದ ಇಂಗ್ಲೀಷು ಕಲಿಯತಕ್ಕ ಹತ್ತು ಜನ ಬಡವಿದ್ಯಾರ್ಥಿಗಳನ್ನು ನಮ್ಮ ಫ್ರೀ ಬೋರ್ಡಿಂಗಿನಲ್ಲಿ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡಿರುತ್ತದೆ. ಆದಪ್ರಯುಕ್ತ ಸೇರಲಿಚ್ಛಿಸುವ ವಿದ್ಯಾರ್ಥಿಗಳು ತಾ|| ೧-೧೦ ೪೧ರ ಒಳಗಾಗಿ ನಮ್ಮ ಸಂಸ್ಥೆಯ ಅಧ್ಯಕ್ಷರ ಹೆಸರಿಗೆ ಅರ್ಜಿಮಾಡಿಕೊಳ್ಳತಕ್ಕದ್ದು. ಟಾಯಮ್ ಮೀರಿ ಬಂದ ಅರ್ಜಿಗಳಿಗೆ ಅವಕಾಶ ಸಿಗಲಾರದು.

ಪ್ರಿಂಟೆಡ್ ಅರ್ಜಿಫಾರ್ಮುಗಳನ್ನು ನಮ್ಮ ಸಂಸ್ಥೆಯಿಂದ ತರಿಸಿಕೊಳ್ಳತಕ್ಕದ್ದು.

ವಿದ್ಯಾರ್ಥಿಗಳು ಬಡವರೆಂಬ ಬಗ್ಗೆ ಗ್ರಾಮಸ್ಥರ ಸರ್ಟಿಫಿಕೇಟ್ ತರತಕ್ಕದ್ದು.

ಸೆಕ್ರೆಟರಿ,
ಶ್ರೀಜಗದ್ಗುರು ಪಂಚಾಚಾರ್ಯ ಪಾಠಶಾಲಾ,
ಬಣ್ಣದಮಠ, ಹಾವೇರಿ.

ಜ್ಯೋತಿಷ ವೈದಿಕ ವಿದ್ಯಾಭ್ಯಾಸ ಮಾಡತಕ್ಕ ವಿದ್ಯಾರ್ಥಿಗಳಿಗೆ ಸೂಚನೆ

ಕುಂದಗೋಳ

ಕುಂದಗೋಳದಲ್ಲಿ ಶ್ರೀ|| ಷ|| ಬ್ರ|| ಗುರುಪಾದ ಶಿವಾಚಾರ್ಯಸ್ವಾಮಿಗಳು ಪಂಚಗ್ರಹ ಹಿರೇಮಠ ಇವರ ಶುಭಾಶೀರ್ವಾದದಿಂದ ಸ್ಥಾಪಿತವಾಗಿರುವ ಶ್ರೀಜಗದ್ಗುರು ವಿಶ್ವಾರಾಧ್ಯ ಧರ್ಮಾರ್ಥ ಜ್ಯೋತಿಷ್ಯ ವೈದಿಕ ಪಾಠಶಾಲೆಗೆ ಹೂಲಿಪಂಚವಣ್ಣಿಗಿ ಬೃಹನ್ಮಠದ ಪಾಠಶಾಲೆಯಲ್ಲಿ ಅಧ್ಯಯನಮಾಡಿ ಅಲ್ಲಿ ಪ್ರತಿವರ್ಷ ಹೊರಡುವ ಸಿದ್ಧಾಂತ ಪಂಚಾಂಗ ಗಣಿತ ತಯಾರಿಸುವದಕ್ಕೆ ಸಹಾಯಕರಾದ ವೇ|| ಬ್ರ|| ಶ್ರೀ ಸಿದ್ಧಾಂತಿ ವಿರುಪಾಕ್ಷ ಶಾಸ್ತ್ರಿಗಳು ಸಂಸ್ಥಾನ ಶಿರಸಂಗಿಬೃಹನ್ಮಠ ಇವರನ್ನು ಅಧ್ಯಾಪಕರನ್ನಾಗಿ ನೇಮಿಸಲಾಗಿದೆ. ವಿದ್ಯಾರ್ಥಿಗಳ ಅಧ್ಯಯನವು ಪ್ರಾರಂಭವಾಗಿರುವದು. ಇಲ್ಲಿಗೆ ಅಭ್ಯಾಸ ಮಾಡಲಿಕ್ಕೆ ಬರತಕ್ಕ ಗುರುಸ್ಥಲದ ವಿದ್ಯಾರ್ಥಿಗಳು ಇದೇ ತಿಂಗಳು ೨೫ ತಾರೀಖಿನೊಳಗಾಗಿ ೬-೭ ಇಯತ್ತೆಯಲ್ಲಿ ತೇರ್ಗಡೆ ಹೊಂದಿದ ಸರ್ಟಿಫಿಕೇಟ್ ಮತ್ತು ಸದ್ಗೃಹಸ್ಥರ ಅನುಮೋದನ ಪತ್ರಿಕೆಯೊಡನೆ ಅರ್ಜಿಯನ್ನು ಇಲ್ಲಿಯ ಶ್ರೀ ಜಗದ್ಗುರು ವಿಶ್ವಾರಾಧ್ಯ ಫ್ರೀ ಬೋರ್ಡಿಂಗ್ ಅಧ್ಯಕ್ಷರವರ ಕಡೆಗೆ ಕಳುಹಿಸಬೇಕು.

ವ್ಯವಸ್ಥಾಪಕ
ಜ ವಿ ಫ್ರೀಬೋರ್ಡಿಂಗ್
ಪೋ|| ಕುಂದಗೋಳ ಡಿ|| ಧಾರವಾಡ

ಸಬ್‌ಮೆರೀನಲ್ಲಿ ವಿಚಿತ್ರ ಜೀವನ

ಮನುಷ್ಯನು ಸ್ವಭಾವತಃ ಭೂಮಿಯ ಮೇಲಿದ್ದುಕೊಂಡು ಗಾಳಿಯಲ್ಲಿ ಜೀವಿಸಿದರೆ, ಯಂತ್ರಗಳ ಸಹಾಯದಿಂದ ನೀರಿನಲ್ಲಿ ಮೀನುಗಳಂತೆಯೂ ಗಾಳಿಯಲ್ಲಿ ಹಕ್ಕಿಗಳಂತೆಯೂ ಚಲಿಸುವ ಶಕ್ತಿಯನ್ನು ಮನುಷ್ಯನು ಗಳಿಸಿದ್ದಾನೆ. ಆದ್ದರಿಂದ ಈ ಅಸ್ವಭಾವಿಕವಾದ ಅವಸ್ಥೆಗಳಲ್ಲಿ ಮನುಷ್ಯನು ಅಸ್ವಭಾವಿಕವಾದ ರೀತಿಯಲ್ಲಿ ಇರುತ್ತಾನೆ.

ಸಬ್‌ಮೆರೀನಲ್ಲಿ ವಾಸಿಸುವವರ ಕಥೆ ನೋಡಿ. ಅವರು ನೀರೊಳಗೆ ಮುಳುಗಿರಬೇಕು. ತಮ್ಮ ಸಬ್‌ಮೆರೀನಲ್ಲಿರುವ ಗಾಳಿಯಲ್ಲಿಯೇ ಕಾಲ ಕಳೆಯಬೇಕು. ತಕ್ಕ ಏರ್ಪಾಡುಗಳನ್ನು ಮಾಡಿಕೊಂಡು ಆ ಗಾಳಿಯನ್ನು ಸೇವಿಸಬೇಕು.

ಹಗಲ ಹೊತ್ತು ಸಬ್‌ಮೆರೀಗಳು ಬಹುಮಟ್ಟಿಗೆ ನೀರಿನಲ್ಲಿ ಮುಳುಗಿರುತ್ತವೆ. ಏಕೆಂದರೆ ಹಗಲು ಹೊತ್ತು ನೀರಿನಲ್ಲಿ ಓಡಾಡುತ್ತಿದ್ದರೆ, ಶತ್ರು ನಾವಿಕರ ಮತ್ತು ವೈಮಾನಿಕರ ಕಣ್ಣಿಗೆಬಿದ್ದು ಅಪಾಯಕ್ಕೆ ಗುರಿಯಾಗಬಹುದು. ಆದ್ದರಿಂದ ಸಬ್‌ಮೆರೀನ್ ಸಾಧಾರಣವಾಗಿ ಹಗಲುಹೊತ್ತು ನೀರಿನಲ್ಲಿ ಮುಳುಗಿಕೊಂಡಿದ್ದೇ ಕಾಲ ತಳ್ಳುತ್ತದೆ. ನೀರಿನೊಳಗಿದ್ದರೆ ಅವರಿಗೆ ಚಳಿ ಜಾಸ್ತಿಯೆಂದು ಸಾಧಾರಣವಾಗಿ ಅನಿಸುತ್ತದೆ. ಅದು ಹಾಗಲ್ಲ. ನೀರಿನಲ್ಲಿದ್ದರೆ ಅವರಿಗೆ ಸೆಕೆ ಜಾಸ್ತಿ. ಏಕೆಂದರೆ ಹೊರಗಣಗಾಳಿಯು ಒಳಕ್ಕೆ ಬರುವಂತಿಲ್ಲ.

ಸಬ್‌ಮೆರೀ ಮೇಲಕ್ಕೆ ಬಂದೊಡನೆಯೇ ಹೊಸ ಗಾಳಿಯನ್ನು ಒಳಕ್ಕೆ ಬಿಡುತ್ತಾರೆ. ಆಗ ವಿಪರೀತ ಚಳಿಯಾಗುತ್ತದೆ. ಉಷ್ಣವಲಯದ ಸಮುದ್ರಗಳಲ್ಲಿ ನಡುಹಗಲಿ

ನಲ್ಲೂ ಕೆಲಸಗಾರರು ವೈಕುಂಟ ಬಟ್ಟೆಗಳನ್ನು ಹಾಕಿಕೊಂಡು ಕೆಲಸಮಾಡಬೇಕಾಗುತ್ತದಂತೆ. ಅಷ್ಟು ಚಳಿಯಾಗುತ್ತದೆ.

ಸಬ್‌ಮೆರೀನ್ ಒಳಗಿನ ಜೀವನದಲ್ಲಿ ಮತ್ತೊಂದು ವಿಚಿತ್ರವಾದ ಸಮಾಚಾರವಿದೆ. ಅವರಿಗೆ ರಾತ್ರಿ ಹೊತ್ತೇ ಅಡಿಗೆ, ರಾತ್ರಿಯೇ ಪರಿಷ್ಕಾರವಾದ ಭೋಜನ. ಇದಕ್ಕೆ ಕಾರಣವಿಷ್ಟೆ. ಹಗಲು ಹೊತ್ತೆಲ್ಲ ಸಬ್‌ಮೆರಿನ್ ನೀರಿನಲ್ಲಿ ಮುಳುಗಿಕೊಂಡಿರುವುದರಿಂದ ಒಳಗಿನ ಯಂತ್ರಗಳು ವಿಚ್ಛಿತ್ತಿಯಿಲ್ಲದೆ ಕೆಲಸ ಮಾಡುತ್ತಿದ್ದು ಬಿಸಿಯಾಗಿರುತ್ತವೆ ಇರುವ ಗಾಳಿಯು ಈ ಯಂತ್ರಗಳ ಕೆಲಸಕ್ಕೆ ಸಾಕಾಗುವುದಿಲ್ಲ. ಅಡಿಗೆಗೂ ಬಳಸಿದರೆ, ಒಳಗೆ ಯಾರೂ ಇರಲು ಸಾಧ್ಯವೇ ಆಗುವುದಿಲ್ಲ ಆದ್ದರಿಂದ ದಿನವೆಲ್ಲ ಕೆಲಸ ಮಾಡಿ ಬಿಸಿಗೊಂಡು ಇರುವ ಗಾಳಿಯನ್ನು ಹೊರಗಟ್ಟಿ ಹೊಸ ಗಾಳಿಯನ್ನು ಬಿಟ್ಟಾಗ ಅಡಿಗೆ ಕೆಲಸವನ್ನು ಪ್ರಾರಂಭಿಸಿ ಮುಗಿಸುತ್ತಾರೆ ಅಡಿಗೆ ಭೋಜನ ಮುಗಿಸಿಕೊಂಡು ಮತ್ತೆ ನೀರಿಗೆ ಇಳಿದುಬಿಡುತ್ತಾರೆ ರಾತ್ರಿ ಮಾಡಿದ ಅಡಿಗೆಯನ್ನೇ ಮತ್ತೆ ಮಾರನೆಯ ದಿನವೆಲ್ಲ ಉಪಯೋಗಿಸುತ್ತಾರೆ

ಸಬ್‌ಮೆರಿನ್‌ನಲ್ಲಿರುವ ನಾವಿಕರಿಗೆಲ್ಲ ಇಷ್ಟಿಷ್ಟೇ ಆಹಾರವೆಂದು ವಿಧಾಯಕವಾಗಿಹೋಗಿರುತ್ತದೆ ಇಂತಿಂತಹುದೇ ಆಹಾರವೆಂಬುದೂ ಗೊತ್ತಾಗಿರುತ್ತದೆ. ಸಬ್‌ಮೆರಿನ್ ತನ್ನ ಕಾರ್ಯದ ಮೇಲೆ ಹೊರಡುವಾಗ ಎಷ್ಟು ದಿನಗಳ ಕಾಲ ನೀರಿನಲ್ಲಿರಬೇಕು? ಎಷ್ಟು ಜನಕ್ಕೆ ಆಹಾರ ಬೇಕು? ಪ್ರತಿಯೊಬ್ಬರಿಗೂ ಎಷ್ಟೆಷ್ಟು ಆಹಾರ ಬೇಕು? ಪ್ರತಿನಿತ್ಯಕ್ಕೂ ಯಾವ ಯಾವ ಆಹಾರ ಬೇಕು? ಇವನ್ನೆಲ್ಲ ಗೊತ್ತುಪಡಿಸಿರಲಾಗುತ್ತದೆ ಆಯಾದಿನದ ಆಹಾರಗಳನ್ನೂ ಕಟ್ಟಿಡಲಾಗಿರುತ್ತದೆ. ಆಯಾದಿನ ಬಂದಂತೆಲ್ಲ ಆಯಾ ಆಹಾರವನ್ನು ತೆಗೆದುಕೊಳ್ಳುವುದು, ಅಷ್ಟು ಎಚ್ಚರಿಕೆಯ ವ್ಯವಸ್ಥೆಯನ್ನು ಮಾಡಿರುತ್ತಾರೆ

ಲಿಂಗಧಾರಣವಿಧಿ

ಬಹುಜನರ ಪ್ರಾರ್ಥನೆಯಮೇರೆಗೆ ಲಿಂಗಧಾರಣ ವಿಧಿಯು ಹೊಸದಾಗಿ ಮುದ್ರಿಸಲ್ಪಟ್ಟಿದೆ ಗುರುವರ್ಗದವರಿಗೆ ಈವಿಧಿಯು ಮುಖ್ಯವಾಗಿರುವುದು ಈ ವಿಧಿಯಲ್ಲಿ ಉಕ್ತವಾಗಿರುವ ಸಮಸ್ತ ವೇದಮಂತ್ರಗಳಿಗೆ ವೈದಿಕ ಸ್ವರಗಳು ಹಾಕಲ್ಪಟ್ಟಿರುತ್ತವೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟೀಕೆಯು ಬರೆಯಲ್ಪಟ್ಟಿದೆ ಆದುದರಿಂದ ಪ್ರತಿಯೊಂದು ಗ್ರಾಮದ ಗುರುವರ್ಗದ ಮಠಾಧಿಕಾರಿಗಳು ಈ ಗ್ರಂಥವನ್ನು ತರಿಸಿಕೊಂಡು, ಇದರಲ್ಲಿ ಹೇಳಿದಂತೆ ಲಿಂಗಧಾರಣವನ್ನು ಮಾಡಿ ಪರಮಾತ್ಮನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ

ಬೆಲೆ ೪ ಆಣೆ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸೇರಿದ ಶಿಷ್ಯರ ಮನೆಗಳಿರುತ್ತವೆ ಆ ಮಠಾಧಿಕಾರಿಗಳು ಎರಡು ವರ್ಷಕ್ಕೊಂ ಹತ್ತು ವರ್ಷಕ್ಕೊಂ ಒಂದುಸಾರಿ ಹೋಗಿ ಶಿಷ್ಯರ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಅವರಿಗೆ ಆಗ ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯವನ್ನು ಬರೆದುಕೊಳ್ಳುವ ಕಾಗದವನ್ನು ಮಾತ್ರ ತೆಗೆದುಕೊಂಡು ಹೋಗಿ ಬಿಡುವರು ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇದನ್ನು ಪರಿಹರಿಸುವುದಕ್ಕೋಸ್ಕರ ರಿಜಿಸ್ಟರ್ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಬಹಳ ಕೆಡದಂಥ ಕಾಗದವನ್ನು ಉಪಯೋಗಿಸುವುದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ- ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿ ನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತನಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ** ವಿ. ಪಿ. ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೮ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ **ಬೆಲೆ ೮ ರೂಪಾಯಿ.** ಒಂದುರೂಪಾಯಿಗೆ ನಾಲ್ಕಾಣೆಯಂತೆ **ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.**

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅನ್ಯ ತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೪ ...	೨—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ವಶಿಷ್ಠ ವ್ಯಾಸ ... ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧ × ೬ ...	೨—೧—೬
ಷಡ್ಯ ೩ ... ಮನೋಹರವಾದ ... ಐವರು ... ಒಂದರಲ್ಲಿಯೇ ಇರುವ ಫೋಟೋ ಸೈಜು ೬ × ೧ ...	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ... ರಂಗ	೨—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗ ವತಾರದ ಫೋಟೋ ಸೈಜು ೧೦ × ೮ ... ರಂಗ	೨—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೨—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೨—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ... ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ರಂಗು	೦—೨—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೨—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	— —೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೨—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತಿರುವ ಫೋಟೋ	—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಏಳಿ ರಂಗು	— —೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ವಹಾದ್ವಾರದ ಅತ್ಯಂತ ಸುಂದರವಾದ ಫೋಟೋ	೨— —೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪದ ಮಹಾದ್ವಾರದ ಫೋಟೋ	೨—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	— —೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ... ಜಗದ್ಗುರುಗಳ ಅಡ್ಡಪಲ್ಲಕ್ಕಿ ... ಫೋಟೋ	—೨—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸಲ್ಪಡುವುದಿಲ್ಲ. ... ಮೇಲೆ ತರಿಸಿಕೊಳ್ಳುವವರು ... ರೂಪಾಯಿಗೆ ೪ ಆಣೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ ಮೈಸೂರು

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒ... ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ... ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಸಹ ಹೆಚ್ಚುಮಾಡುತ್ತದೆ. ಮೂರುಬೆಕ್ಕಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ. ಮಾದರಿ ಸೀಸ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ. ಡಜನ್ ಒಂದರ ಕ್ರಯ ರೂ ೨—೮—೦ ವಿ. ಪಿ. ೬ ಆಣೆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗ ರುಬಸವ ಅಂಡ್ ಕಂಪೆನಿ ಲಿಮಿಟೆಡ್

[1] ಪೋ. ಬಾ. ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾ ವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೩ ಆಣೆ
ಶ್ರೀಗುರುತತ್ವಪ್ರದಗಳು	೩ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜ)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು(ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ತರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೩ ಆಣೆ
ಶಿವಾದ್ವೈತಮಂಜರಿ (೨ನೆಯ ಆವೃತ್ತಿ)	೧೩ ಆ
ಶಿವಸೂತ್ರಸಿದ್ಧಾಂತದರ್ಪಣ	೧೩ ಆ
ಶ್ರೀಕರಭಾಷ್ಯ (ಪಂಚಸೂತ್ರಿ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವಚರಿತ್ರ (ಅನೇಕ ವ್ಯಕ್ತಿಗಳ ...)	೧ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ವ್ಯಾಖ್ಯಾನಸಹಿತ)	೧ ರೂ
ಜಾಬಾಲೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ...)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೦೩ ಪುಟ)	೮ ರೂ
A brief life sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचन्द्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य संस्कृत)	१ रु
पुरुषसूक्तम् (वीरशैवप्राचीनभाष्योपेतम्)	४ आ
नन्दिकेश्वरकारिका (संस्कृत)	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಕಾಲಿಪ್ಪುದೀಲೋಕಮಂ ॥

ಳದವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೫ನೇ ಸೆಪ್ಟೆಂಬರ್ ೧೯೪೧ [ಸಂಚಿಕೆ ೨೦

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀ ರೇಣುಕವಿಜಯ ಪ್ರವಚನ ಸಮಾಪ್ತಿ

ಜಹಗೀರ, ಬಳೂರಗಿ

ಗುಲಬುರ್ಗಾ ತಾ॥ ಪೈಕಿ ಬಳೂರಗಿ ಗ್ರಾಮದಲ್ಲಿರುವ ವೇ॥ ವೀರಯ್ಯಸ್ವಾಮಿಯವರ ಮಠದಲ್ಲಿ ಶ್ರೀ ...ದ್ಗುರು ರೇಣುಕವಿಜಯ ಮಹಾಪ್ರವಚನವು ...ಣ ಶು॥ ೧ ಶುಕ್ರವಾರದಿಂದ ಪ್ರಾರಂಭವಾಗಿ ...ಪದ ಶ॥೧೧ ಸೋಮವಾರ ರಾತ್ರಿ ೧೦ ಘಂಟೆಗೆ ಮುಗಿಯಿತು, ಪಂಚಾಚಾರ್ಯರ ಸಭಾ ಮಂಟಪ ...ರಂಭಾಸ್ತಂಭಗಳಿಂದಲೂ ತಳಿರುತೋರಣಗಳಿಂದಲೂ ...ವಿಧ ಫಲಪುಷ್ಪಗಳಿಂದಲೂ ಬಹಳ ರಮ್ಯವಾಗಿ ಅಲಂಕರಿಸಲ್ಪಟ್ಟು ಅದರ ಮಧ್ಯಭಾಗದಲ್ಲಿ ಪಂಚಾಚಾರ್ಯರ ...ಮೂರ್ತಿಗಳನ್ನೂ ಮತ್ತು ಅವರ ಕೆಳಭಾಗದಲ್ಲಿ ...ಡಿತ ಶ್ರೀ ಕಾಶಿನಾಥಶಾಸ್ತ್ರಿಜೀಯವರ ಭಾವಚಿತ್ರ ...ಸ್ಥಾಪಿಸಿ, ಶಿಲ್ಲಿಯ ಬೃಹನ್ಮಠಾಧ್ಯಕ್ಷರಾದ ...ಣಯ್ಯ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಪೂಜಾ ...ಗಳು ನೆರವೇರಿದವು ವೀರಮಾಹೇಶ್ವರಾದಿಗಳಿಗೆ ...ಪಕ್ವಾನ್ನ ಸಂತರ್ಪಣೆಯು ನಡೆದು ದಕ್ಷಿಣ ...ಬೂಲಾದಿಗಳಿಂದ ತೃಪ್ತಿಪಡಿಸಿದ ಬಳಿಕ ಜಗದಾ...ರ್ಯರ ಜಯಘೋಷವು ದಶದಿಕ್ಕುಗಳನ್ನು ವ್ಯಾಪಿ...ರಲು, ಜನಾಂಗದ ಪ್ರಾರ್ಥನೆಯಂತೆ, ವೇ॥ ...ಣಯ್ಯ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಭೆಯು ಕೂಡಿತು ಅಧ್ಯಕ್ಷರ ಸೂಚನೆಯಂತೆ ವೇ। ವೀರಯ್ಯ ...ಮಿಗಳು, ವೇ॥ ಚನ್ನಬಸವಯ್ಯ ಸ್ವಾಮಿ ಮತ್ತು ...ಸವಣ್ಣಪ್ಪಾ ಹ್ಯಾಕೊಂಬಿ, ಧರ್ಮಣಪ್ಪ ವಳಸಂಗಕರ್ ...ಮಹನೀಯರು ವೀರಶೈವ ಧರ್ಮದ ಬಗ್ಗೆ ವ್ಯಾಖ್ಯಾನಗಳನ್ನು ಮಾಡಿದರು. ಪದ್ಧತಿ ಪ್ರಕಾರ ಗುರುಶಂಕರ ...ಮಂಡಲಿಂಗಪ್ಪ ಮಾಸ್ತರರು ಬಹಳ ಹರ್ಷಭರಿತರಾಗಿ ಪಂಚಾಚಾರ್ಯರ ಲಿಂಗಾವತಾರ ವಿಷಯವನ್ನು ಹಾಗೂ ...ತ್ಪಮಾರ್ಗದರ್ಶಕರಾದ ಪಂ॥ ಶ್ರೀ॥ ಕಾಶಿನಾಥಶಾಸ್ತ್ರೀಜಿಯವರು ಪ್ರತ್ಯಕ್ಷ ಶಿವಾವತಾರಿಗಳೇ ಹೊರತು ಬೇರೆ ...ಲ್ಲವೆಂದೂ ಸಾರಿ ಸಾರಿ ಹೇಳಿದರು ಇದನ್ನು ಕೇಳಿದ ಸಭಿಕರ ಆನಂದಕ್ಕೆ ಪಾರವೇ ಇರಲಿಲ್ಲ ತರುವಾಯ ಸಭಿಕರ ಪ್ರಾರ್ಥನೆಯಂತೆ ಅಧ್ಯಕ್ಷರು — "ಮಾನವ ಜನ್ಮಕ್ಕೆ ಗುರುವಿನ ಆವಶ್ಯಕತೆ" ಎಂಬ ವಿಷಯವನ್ನು ತಮ್ಮ ಮಂಜುಳ ವಾಣಿಯಿಂದ ಎಲ್ಲ ಜನ...ಮನಕ್ಕೆ ತಿಳಿಯುವಂತೆ ಸಿದ್ಧಾಂತಗೊಳಿಸಿ ಸರ್ವರನ್ನೂ ಆನಂದಗೊಳಿಸಿದರು ಮೇಲಿನ ಉಪದೇಶಾಮೃತ...ವನ್ನು ಕೇಳಿದ ಪ್ರತಿಯೊಬ್ಬ ಗುರುಭಕ್ತರೂ ಧನ್ಯ ಧನ್ಯ ಪಂಚಾಚಾರ್ಯರ ಮಂಗಲ ನಾಮೋಚ್ಚಾರವೇ ಧನ್ಯ, ...ವನ್ನು ನುಡಿದವನು ಪರಮ ಧನ್ಯ, ಎಂದು ತಮ್ಮ ...ಗಳಿಗೆ ನುಡಿಯಲಾರಂಭಿಸಿದರು ಬಳಿಕ ಮಹಾ...ಮಂಗಳಾರತಿ ಪುಷ್ಪಾಂಜಲಿಗಳನ್ನರ್ಪಿಸಿದ ಮೇಲೆ ಶ್ರೀ ...ಚಾಚಾರ್ಯರ ಮಂಗಲ ಜಯಜಯಕಾರದೊಡನೆ ಸಭೆಯು ಮುಕ್ತಾಯವಾಯಿತು ಈ ಪವಿತ್ರ ಕಾರ್ಯದಲ್ಲಿ ವೇ॥ ನಾಗಯ್ಯಸ್ವಾಮಿ ವರಕತ್ತಿ, ವೈಷ್ಣವ ಬ್ರಾಹ್ಮಣ ಜಯರಾಮ ಅನಂತಾಚಾರ್ಯ ಮಹಾರಾಜ, ಶಿವಬಸಪ್ಪ ಪಾಟೀಲ ಈಶ್ವರಪ್ಪಾ ಪಾಟೀಲ, ಸಂಗಪ್ಪ ಚಿಟ್ಟಂಪಿ ಸಿದ್ದಪ್ಪ ಕಲಬಟ್ಟಿ ಕಲಿಯುಗ ಭೀಮಸೇನರೆನ್ನಿಸುತ್ತಿರುವ ಭೀಮಸೇನ ಳಕುಂದಿ ದಾವಲಸಾಹೆಬ ಜಮಾದರ ಮೊದಲಾದವರು ಭಾಗವಹಿಸಿ ಒಳ್ಳೆ ಶ್ರದ್ಧೆಯಿಂದ ಗುರು ಸೇವೆಯನ್ನು ಮಾಡಿದರು ಈ ಮಹಾಶಯರಿಗೆ ದೀರ್ಘಾಯುರಾರೋಗ್ಯ ಭಾಗ್ಯಾದಿಗಳನ್ನು ಕೊಟ್ಟು ಸಲಹಬೇಕೆಂದು ಶ್ರೀಜಗದ್ಗುರು ಪಂಚಾಚಾರ್ಯರನ್ನು ಪ್ರಾರ್ಥಿಸುತ್ತೇನೆ

ಸಿದ್ದಪ್ಪ ಬಸಪ್ಪಾ ನಿಂಬರಗೀಕರ್

॥ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ॥

ಪ್ರವಚನ ಸಮಾಪ್ತಿ, ಸೊಲ್ಲಾಪುರ ಸಿಟಿ

ತಾ॥ ೧-೯-೪೧ ನೆಯ ಸೋಮವಾರ ಸೊಲ್ಲಾಪುರ ವೀರಶೈವ ಸದಾಚಾರ ಸ್ತ್ರೀ ಸಮಾಜದಲ್ಲಿ ಸೌ॥ ಭಾಗೀರಥೀಬಾಯಿ ಕಟಾಪ ಇವರಿಂದ ಹೇಳಲ್ಪಡುತ್ತಿದ್ದ ಸಿದ್ಧಾಂತ ಶಿಖಾಮಣಿಯ ಪ್ರವಚನದ ಸಮಾಪ್ತಿಯು ಒಳ್ಳೆಯ ವೈಭವದಿಂದ ಮಾಡಲ್ಪಟ್ಟಿತು ಬೆಳಗ್ಗೆ ಶ್ರೀ॥ ಷ॥ ಬ್ರ॥ ಬಾಲಶಿವಯೋಗಿ ಗುರುಶಾಂತಶಿವಾಚಾರ್ಯರು ಬೃಹನ್ಮಠ ಜೇವರಗಿ ಈ ಪೂಜ್ಯರ ಪಾದಪೂಜಾ ಮಹೋತ್ಸವವು ನೆರವೇರಿತು ವಾರದ ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿಗಳು ಶ್ರೀ ವೇ॥ ಪಂ॥ ಜಗದೀಶ ಶಾಸ್ತ್ರಿಗಳವರು, ಶ್ರೀ ವೇ॥ ಪಂ॥ ವೃಷಭಲಿಂಗಶಾಸ್ತ್ರಿಗಳವರು ಸುಣ್ಣಕಲ್ ಬಿದರಿ ಆರಾಧ್ಯ ಮಠ ಇವರೇ ಮೊದಲಾದ ಮಾಹೇಶ್ವರರ ತೃಪ್ತಿಯಾದ ವೇಳೆ ಮಧ್ಯಾನ್ಹ ನಾಲ್ಕು ಘಂಟೆಗೆ ಆ ದಿವಸದ ಪುರಾಣವು ಪ್ರಾರಂಭವಾಯಿತು ಆದಿವಸ ಶ್ರೀ ಜಗದ್ಗುರು ರೇಣುಕಾಚಾರ್ಯರು ಲಿಂಗದಲ್ಲಿ ಐಕ್ಯವಾಗುವ ವಿಷಯವಿದ್ದುದರಿಂದ ಪುರಾಣಕ್ಕೆ ವಿಶೇಷ ಶೋಭೆಯುಂಟಾಗಿತ್ತು ಸೌ॥ ಭಾಗೀರಥೀಬಾಯಿಯವರು ಆದಿವಸ ಲಿಂಗಾಂಗ ಸಾಮರಸ್ಯ, ಗುರುಸೇವಾ, ಲಿಂಗಪೂಜೆ ಈ ವಿಷಯವಾಗಿ ಎಲ್ಲರ ಮನಸ್ಸಿಗೂ ನಾಟುವಂತೆ ಒಳ್ಳೆಯ ಮನೋಹರವಾಗಿ ಹೇಳಿದರು ನೆರೆದಂಥ ಹೆಣ್ಣು ಮಕ್ಕಳ ಸದರಿ ವಿಷಯಗಳನ್ನು ಕೇಳಿ ಆನಂದಭರಿತರಾದರಲ್ಲದೆ ಸದರಿ ಬಾಯಿಯವರ ಗುಣವರ್ಣನೆಮಾಡಿ ಗೌರವಿಸಿದರು ಈ ಮಂಗಳೋತ್ಸವಕ್ಕೆ ಶ್ರೀ ಷ॥ ಬ್ರ॥ ಜೈನಾಪುರ ಶ್ರೀಗಳು ಆಗಮಿಸಿ ಅತ್ಯಂತ ಕಳಕಳಿಯಿಂದ ಶುಭಾಶೀರ್ವಾದವನ್ನಿತ್ತರು ಈ ಪುರಾಣಕ್ಕೆ ಸಹಕಾರಿಗಳಾದ ಶ್ರೀ॥ ಕಾಶೀಬಾಯಿ ನಂದೀಮಠ, ಸೌ॥ ರುದ್ರವ್ವ ವಾಲೀ, ಸೌ॥ ಮಲ್ಲಮ್ಮ ದುರ್ಗ, ಶ್ರೀ ಗಂಗಾಬಾಯಿ ಕಳಸೆ, ಶ್ರೀ॥ ಲಕ್ಷ್ಮೀಬಾಯಿ ಗಾಬನೆ, ಶ್ರೀ॥ ಪಾರ್ವತೀಬಾಯಿ ಫತಾಟೆ, ಇವರೇ ಮೊದಲಾದವರು ತನು ಮನ ಧನಗಳಿಂದ ಸೇವೆಮಾಡಿದ್ದಲ್ಲದೆ ಪುರಾಣಪ್ರವಚನದ ಮಧ್ಯದಲ್ಲಿ ಪ್ರತಿ ಗುರುವಾರ ಸೌ॥ ಸುಗ್ಗಲಾದೇವಿ ಗಂದಗೆ, ಸೌ॥ ದೊಂಡೂಬಾಯಿ ಇಟಗಿ, ಶ್ರೀ॥ ಕು॥ ಶಾಂತಾಬಾಯಿ ಮಾಳಿಗೆ, ಶ್ರೀ॥ ಕು॥ ಗೌರೀದೇವಿ ಕಟಾಪ ಇವರುಗಳು ಶಿವಕೀರ್ತನೆಗಳನ್ನು ಮಾಡಿ ತಮ್ಮ ಬಾಲಸೇವೆಯನ್ನು ಅರ್ಪಿಸಿದ್ದು ಅತ್ಯಂತ ಆನಂದದಾಯಕವಾಗಿದೆ ಸಮಾಜದ ಸೂತ್ರವೈಜರರಾದ ಶ್ರೀ॥ ಮುಕ್ತಾಬಾಯಿ ಪೇಟೆಯವರ ಪರಿಶ್ರಮವಂತೂ ಅಗಾಧವಾದದ್ದು ಈ ಮಾತೃವರ್ಗಕ್ಕೆಲ್ಲಾ ಇದಕ್ಕೂ ಹೆಚ್ಚಿನ ಸದ್ಬುದ್ಧಿಯನ್ನು ದಯಪಾಲಿಸಬೇಕೆಂದು ಶ್ರೀ ಜಗದ್ಗುರು ಪಂಚಾಚಾರ್ಯರಲ್ಲೂ ಶ್ರೀ ಜಗದ್ರಕ್ಷಕ ಪರಮಾತ್ಮನಲ್ಲಿಯೂ ಬೇಡಿಕೊಳ್ಳುವೆನು

ಸೌ॥ ಬಸವ್ವ ನಂದೀಮಠ,
ಸೊಲ್ಲಾಪುರ ಸಿಟಿ

ದುಃಖವಾರ್ತೆ

ಧಾರವಾಡ ಡಿ॥ ಹುಬ್ಬಳ್ಳಿಯಲ್ಲಿರುವ ದೇವನೂರು ಹಿರೇಮಠದ ಹೇಡಾಮಾಸ್ತರರವರ ಪುತ್ರಿಯವರೂ ಕರ್ನಾಟಕ ಕಾಲೇಜ್ ಪ್ರೊಫೆಸರ್ ಸಂಗಯ್ಯನವರು ಭೂಸನೂರಮಠ ಎಂ ಎ ಇವರ ಧರ್ಮಪತ್ನಿಯವರೂ ಆದ ಸೌ॥ ಪಾರ್ವತವ್ವನವರು ತಾ॥ 6 9-41 ದಿವಸ ಹುಬ್ಬಳ್ಳಿಯಲ್ಲಿರುವ ತಮ್ಮ ಪಿತೃಗೃಹದಲ್ಲಿ ಶಿವಾಧೀನರಾದರೆಂದು ತಿಳಿಸಲು ವಿಷಾದವೆನಿಸುತ್ತದೆ ಇವರು ಪತಿಸೇವಾಪರಾಯಣೆಯರಾಗಿಯೂ ಗುರು ಹಿರಿಯರಲ್ಲಿ ಭಕ್ತಿಯುಳ್ಳವರಾಗಿಯೂ ಇದ್ದು ಗಂಡು ಹೆಣ್ಣುಮಕ್ಕಳೊಂದಿಗೆ ಕೂಡಿ ಸುಖದಿಂದ ಸಂಸಾರಮಾಡುತ್ತಿದ್ದರು ಪರಂಧಾಮವನ್ನೈದುವ ಕಾಲಕ್ಕೆ ಇವರಿಗೆ ಕೇವಲ 27 ವರುಷ ವಯಸ್ಸಾಗಿತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಚಿಕಿತ್ಸೆನಡೆಸಿದರೂ ಪ್ರಯೋಜನವಾಗದೆ ಕೊನೆಗೂ ಈಶ್ವರೇಚ್ಛೆಯಂತೆ ಕೈಲಾಸವಾಸಿಗಳಾದರು ಇವರ ವಿಯೋಗದಿಂದ ದುಃಖಿತರಾದ ಇವರ ಪತಿಪಿತೃವರ್ಗದವರಿಗೆ ದುಃಖವನ್ನು ಸಹಿಸಲು ಶಕ್ತಿಯನ್ನೂ ಮೃತರ ಆತ್ಮಕ್ಕೆ ಶಾಂತಿಯನ್ನೂ ಕೊಡಲೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ ಇವರ ಅಂತ್ಯಕರ್ಮ ಸಮಯದಲ್ಲಿ ಪ್ರಭಾ ಪೋಷಣಕ್ಕಾಗಿ ಒಂದು ರೂಪಾಯಿಯು ವೇ॥ ವಿರುಪಾಕ್ಷಯ್ಯನವರು ನಂದಿಕೇಶ್ವರಮಠ ಇವರ ಸೂಚನೆಯಂತೆ ಸಮರ್ಪಿಸಲ್ಪಟ್ಟಿತ

ಓರ್ವ ದುಃಖಭಾಗಿ

ಫ್ರಾನ್ಸಿನಲ್ಲಿರುವ ರಷ್ಯನರ ಬಂಧನ

ಜರ್ಮನಿಯ ಸೂಚನೆಯ ಪ್ರಕಾರ ಫ್ರಾನ್ಸಿನಲ್ಲಿರುವ ರಷ್ಯನರನ್ನೆಲ್ಲ ದಸ್ತಗಿರಿಮಾಡುತ್ತಿರಲಾಗಿದೆಯೆಂದೂ ಫ್ರಾನ್ಸಿನಲ್ಲಿ ಜರ್ಮನಿಯು ಆಕ್ರಮಿಸಿರುವ ಕ್ಷೇತ್ರಗಳಲ್ಲಿರುವ ಜರ್ಮನರು ಹೆಚ್ಚುಹೆಚ್ಚಾಗಿ ಪೂರ್ವರಂಗಕ್ಕೆ ತೆರಳುತ್ತಿದ್ದಾರೆಂದೂ ತಿಳಿದುಬರುತ್ತದೆ

ಶ್ರೀ ಜಗದ್ಗುರು ಪಂಚಾಚಾರ್ಯರ್ ಪ್ರಸೀದಂತು

ದುರುಳರಿಗೆ ಹಿತಬೋಧೆ

ಧರ್ಮವು ಜಗತ್ತಿಗೆ ಆಧಾರಭೂತವಾಗಿರುವುದು ಧರ್ಮದ ಪ್ರಭಾವವೇ ಮಹತ್ವವೆನಿಸಿಕೊಂಡಿರುತ್ತದೆ. ಧರ್ಮದ ಶಕ್ತಿಯಿಂದಲೇ ಯೋಗಿಗಳೂ ಭೋಗಿಗಳೂ ಎನಿಸಿದ ಆಚಾರ್ಯರೂ ರಾಜರೂ ಪ್ರಜೆಗಳೂ ಉನ್ನತ ಕಾರ್ಯಗಳನ್ನು ಮಾಡಿ ಚರಿತ್ರಾರ್ಹರಾಗಿರುತ್ತಾರೆ. ಧರ್ಮೋದ್ಧಾರಕ್ಕೆ ವೇದಾಗಮಗಳು ಕಾರಣಗಳೆನಿಸಿ ಧರ್ಮವನ್ನೇ ಪ್ರತಿಪಾದಿಸುತ್ತಿರುವವು. ಸಂಸಾರ ವ್ಯಸ್ತಚಿತ್ತನಾದವನು ಯಾರೇ ಆಗಲಿ ವಿಶ್ರಾಂತಿ ಸುಖವನ್ನು ಅನುಭವಿಸಬೇಕೆಂದು ಬಯಸಿದರೆ ಆತನು ವೇದಾಗಮಗಳನ್ನೇ ಪರಿಶೀಲಿಸಲಿ. ಬಿಸಿಲಿನ ಬಯಲಿನಿಂದ ಸಂತಪ್ತನಾದವನು ನೆರಳನ್ನು ಸೇರಬೇಕಾಗಿರುವ ವೇದಾಗಮಗಳನ್ನು ಬಿಟ್ಟು ಸಂಸಾರಸಂತಪ್ತನಿಗೆ ವಿಶ್ರಾಂತಿ ಸುಖವನ್ನು ಹೊಂದಲು ಬೇರೆ ಮಾರ್ಗವಿಲ್ಲ. ಜಗತ್ಪ್ರಸಿದ್ಧರಾದ ಆಚಾರ್ಯರೂ ಅವರ ಕಟ್ಟಳೆಯನ್ನು ಪ್ರಜಾರಕ್ಷಕ ರಾಜ ಮಹಾತ್ಮರೂ ಧರ್ಮಮಾರ್ಗವನ್ನೇ ಅವಲಂಬಿಸಿ ವಿಸ್ತಾರಗೊಳಿಸಿದ ಲೌಕಿಕಾಲೌಕಿಕ ಮಾರ್ಗಗಳನ್ನು ಯುಕ್ತಿಪ್ರಯುಕ್ತಿಗಳಿಂದ ಸುಖಮಯವಾಗುವಂತೆ ವಿಸ್ತಾರಗೊಳಿಸಿರುವರು. ಅವರ ಮಾರ್ಗವನ್ನು ಅವಲಂಬಿಸಿಯೇ ಜಗತ್ತು ಉದ್ಧಾರವಾಗುತ್ತಿದೆ. ಅವರ ಗ್ರಂಥಗಳೇ ನಮ್ಮ ಒಡ್ಡರನ್ನು ಸುಧಾರಿಗೊಳಿಸಿ ಧರ್ಮಪರಿಕರನ್ನಾಗಿ ಮಾಡಲು ಸಿದ್ಧವಾಗಿರುವವು. ಇಂತಹ ಐಹಿಕಾಮುಷ್ಮಿಕ ಸನ್ಮಾರ್ಗದರ್ಶಕಗಳಾಗಿರುವ ಧರ್ಮಗ್ರಂಥಗಳ ಸತ್ಯಾಂಶವನ್ನರಿಯದೇ ದಾಂಭಿಕ ಲೌಕಿಕ ಮಹಾಜನಗಳು ಪರಸ್ಪರ ಪ್ರೇಮದಿಂದ ಮತವನ್ನು ಊರ್ಜಿತಸ್ಥಿತಿಗೆ ತಂದಿದ್ದರೂ ಪ್ರಕೃತ ಗೂಬೆಗಳಂತಿರುವ ಈಗಿನ ಅಸಂಸ್ಕಾರಿ ನವೀನ ವಸ್ತುವಾದಿಕರು ಅವಿಚಾರಭೂತಾವಿಷ್ಟರಾಗಿ ವಿಜ್ಞಾನ ಹೆಸರಿನ ಬೆಳಕಿನಲ್ಲಿ ಸ್ವರ್ಗದ ದಾರಿಯನ್ನು ತೋರಿಸುವೆವೆಂದು ಹೊರಟಂತೆ ಮೈದುಂಬಿ ಹಸ್ತದ ದೀಪಗಳನ್ನು ತಿರುಗಾಡಿ ಚೇಷ್ಟೆಯನ್ನು ಮಾಡತೊಡಗಿರುವುದು ಆಶ್ಚರ್ಯಕರವಾಗಿದೆ. ಸತ್ಯವಾದಿಗಳು ಈ ಭೂತಗಳ ಕುಣಿತವನ್ನು ಒಂದು ಕ್ಷಣ ನೋಡುವವರೆಂದು ಸುಮ್ಮನೆ ಕುಳಿತಿದ್ದರೆ ಈ ಅಬದ್ಧ ಪ್ರಲಾಪಿಗಳು ಮತ್ತಷ್ಟು ಎಚ್ಚರಪಟ್ಟಿರುವುದು ದುಃಖಸೂಚಕವಲ್ಲದೆ ತಮಗೆ ಸುಖವಲ್ಲ. ಧರ್ಮರಾಜನು ಬಹಳ ದಿವಸದಿಂದ ಒರೆಯಲ್ಲಿಟ್ಟಿದ್ದ ಕತ್ತಿಯನ್ನು ಈ ಹುಚ್ಚು ಕುಣಿತದ ಕುರಿಗಳನ್ನು ಬಲಿತೆಗೆದುಕೊಳ್ಳಲು ಮಸೆಯಲಿಕ್ಕೆ ಹತ್ತಿದ್ದಾನೆಂಬುವದನ್ನು ಮರೆಯಬಾರದು. ಈ ಲಂಘನ ಸಮಾರಾಧನದವರ ಜೊಳ್ಳು ಸಾಮರ್ಥ್ಯವು ಎಷ್ಟೋ ಅರ್ಬುದ ಗಜಗಳ ಸಾಮರ್ಥ್ಯವನ್ನು ಪಡೆದಿದ್ದಂತೆ ತೋರುತ್ತಿದ್ದರೂ ಕುಂಬಾರಗೆ ಒಂದು ವರ್ಷ ದೊಣ್ಣೆ ಪ್ರಭುವಿಗೆ ಒಂದೇ ನಿಮಿಷವೆಂಬಂತೆ ಸಮಾಪ್ತಿಯಾಗಲು ಎಷ್ಟು ಹೊತ್ತು ಬೇಕು ‘ ಕಲೌ ಸಂಘೇ ಶಕ್ತಿಃ ’ ಎಂಬ ವಾಕ್ಯವಿದೆಯಷ್ಟೆ ಇದರ ಅರ್ಥವೇನು? ಬಹುಜನ ಹುಟ್ಟುಗುರುಡರು ಒಂದು ಆನೆಯನ್ನು ಆನೆಯೆಂದು ನಿರ್ಧರಿಸಲು ಅಸಮರ್ಥರಾದಂತೆ ಗುಂಪಾಗಿದ್ದೇವೆಂದು ತಿಳಿದ ಮಾತ್ರಕ್ಕೆ ಕಾರ್ಯವಾದಂತಾಯಿತೆ? ಓಡಿದರೆ ದುಡ್ಡು ಸಿಗುವುದೆಂದರೆ ನಾಯಿಯೂ ಓಡುತ್ತದೆ. ಆದಕಾರಣ ದುಡ್ಡು ಸಿಗಬಹುದಾದೀತು. ಇದು ಭ್ರಾಂತಿಯು. ಕಾರ್ಯವು ಸಿದ್ಧಿಯಾಗಬೇಕಾದರೆ ಧಾರ್ಮಿಕ ಲೌಕಿಕ ಮಾರ್ಗ ವಿಚಾರಸಮರ್ಥರ ಕೂಟವು ಅವಶ್ಯಕವು. ಈ ಶಕ್ತಿಯೆಂಬುದರಲ್ಲಿ ಅರ್ಥವಿದ್ದಂತೆ ಸ್ವಪ್ನದ ಕಡುಬು ಕಜ್ಜಾಯಗಳನ್ನು ಹಂಚಿಕೊಳ್ಳಲು ಕಲಗುಟ್ಟುವ ಅಣ್ಣಗಳ ಕೂಟವು ಎಷ್ಟು ಸೇರಿದರೇನು? ನಿಸ್ಸಾರ ಕಟ್ಟಿಗೆಗಳು ಒಂದಕ್ಕೊಂದು ತಿಕ್ಕಾಡಿದರೆ ಅತಿ ಘರ್ಷಣದಿಂದ ತಾವೇ ಬೆಂಕಿಗೆ ಬಿದ್ದು ಅದರಿಂದ ಸುಟ್ಟು ಬೂದಿಯಾಗುವುವಲ್ಲದೆ ಅನ್ಯರ ಸಾಹಸವಾದರೂ ಏತಕ್ಕೆ. ಈ ನವೀನ ಹೋರಾಟದ ಕಲಿಗಳ ಸ್ಥಿತಿಯಾದರೂ ಇಂದಿಲ್ಲ ನಾಳೆ ಗೆದ್ದಲು ತಿಂದ ಕಟ್ಟಿಗೆಗಳಂತೆ ತಿಪ್ಪೆಗೆ ಹೋಗುವುದೇ ಸರಿ. ಪಾಪಪುಣ್ಯಗಳ ವಿಚಾರವೂ ಅವುಗಳ ಗತಿಗಳೆನಿಸಿದ ಸ್ವರ್ಗನರಕಗಳ ವಿಚಾರವೂ ಕನಸು ಮನಸ್ಸಿನಲ್ಲಿಯೂ ಬರದಿರಬೇಕಾದರೆ ಹಿಂದಿನ ಹಿರಿಯರ ಸಂತತಿಗೆ ಈ ಅಂಗಗಳು ಹೊಂದದೆ ಇರಬಹುದೇ? ಎಂತಹ ತಗ್ಗಿನ ಮನುಷ್ಯನಾದರೂ ತನ್ನ ಸಂಪ್ರದಾಯಕ್ಕೇ ಹೋರಾಡುತ್ತಿರಬೇಕಾದರೆ ಈ ನವೀನಕೂಟದ ಗುಲ್ಲಾಟದ ಹುಚ್ಚು ಎಷ್ಟಿರಬಹುದು. ಇದು ತಲೆಗೇರಿಯೇ ಕುಣಿತವು ಸುರುವಾಗಿರುವುದು. ಇಂತಹ ಸಮಯದಲ್ಲಿ ಜನಗಳು ಸೇರಿದ್ದರೆಂದರೆ ಹುಚ್ಚರನ್ನು ನೋಡಲು ಸೇರದಿರುವ ಊರುಗಳಾವವು? ಈ ಹುಚ್ಚು ಮೋಜನ್ನು ನೋಡಲು ಸೇರಿದ್ದ ಮಾತ್ರಕ್ಕೆ ನಮ್ಮ ಕುಣಿತಕ್ಕೆ ಮೆಚ್ಚಿಯೇ ಜನರು ಕೂಡಿದ್ದಾರೆಂದು ಭಾವಿಸಿ ಮತ್ತಷ್ಟು ಹುಚ್ಚು ಕುಣಿತವನ್ನು ಕುಣಿಯಹತ್ತಿರುವುದನ್ನು ವಿಚಾರಿಸಿದರೆ ಅವರ ಸಲುವು ತಮ್ಮ ದಡ್ಡತನವನ್ನು ಬೈಲಿಗೆ ತಂದಷ್ಟೇ ಅಲ್ಲದೆ ಬೇರೆಯಿಲ್ಲ. ಸುಳ್ಳು ಸತ್ಯವನ್ನು ನಾಶಗೊಳಿಸಿದಂತೆಯೂ ಕತ್ತಲೆಯು ಬೆಳಕನ್ನು ಗೌರವಿಸಿದಂತೆಯೂ ಈ ಭ್ರಾಂತರ ಹುಡುಗು ಹೋರಾಟವು ಧರ್ಮರಾಜನ ಸಿಂಹಪೀಠವನ್ನು ಹೊರಗೆತರಲು ಕಾರಣವಾದದ್ದಾಗಿ ಸಂತೋಷಿಸಬೇಕಾಗಿದೆ. ಈ ಹುಚ್ಚು ಕುಣಿತವನ್ನು ನೋಡಿಯೂ ಕೇಳಿಯೂ ಇದರಿಂದೇನು ಆದೀತೆಂದು ಅಲಕ್ಷ್ಯತನ ಮಾಡದೆ ಧರ್ಮಶಿಕ್ಷಣೆಯನ್ನು ಹೊಂದದಿರುವ ಶ್ರೀಮಂತರೂ ಅವರ ಜೊತೆಗೆ ತಾಳ ಹಾಕಲು ಆರಂಭಿಸಿದ್ದಾರೆ. ಕೆಲವು ಜವಾಬ್ದಾರಿ [illegible] ಕೈಕೊಂಡಿರುವುದಾಗಿ ಕಣ್ಣಾರು [illegible] ಇವರ ಸಹಾಯದಲ್ಲಿ ಈ ಹುಚ್ಚು ಕುಣಿತಕ್ಕೆ [illegible] ನಿವಾರಿಸಲು ಕಷ್ಟವೆನಿಸದೆ [illegible] ಇವರ ನಿವಾರಣೆಗಾಗಿ ಧರ್ಮ ಪ್ರಭುಗಳ ಜಾಗರೂಕತೆಯ ಉಪದೇಶವು ಬೇಕಾಗಿದೆ. ಕಲಿಕಾಲದಲ್ಲಿ ಧರ್ಮವನ್ನು ನಾಶಪಡಿಸುವ ಈ ಊರ್ಜಿತಸ್ಥಿತಿಗೆ ಒಂದೇ ಕಾರಣವು ನ್ಯಾಯವಾಗಿರುವುದರಿಂದ ಈಗ ಇವರು ಗದ್ದಲಿಸಿ ಹೊರಡಿದಂತಾಯಿತು. ಈ ಹೋರಾಟದಲ್ಲಿ ಪೂಜ್ಯರು ಅಪೂಜ್ಯರಾದರು ಅಪೂಜ್ಯರು ಪೂಜ್ಯರಾದರು. ಹೆಂಗಸರು ಅಪ್ರಸನ್ನರು ಉತ್ಸವಾದಿಗಳಲ್ಲಿ ತನ್ನ ಗಂಡನ ಹೆಸರನ್ನು ಹೇಳುತ್ತ ಗಂಡನು ಕಟ್ಟಿದ ಮಂಗಲಸೂತ್ರವನ್ನು ಬಹು ಬಗೆಯಿಂದ ಕಾಯುತ್ತಿದ್ದರೂ ಪರಪುರುಷನ ನೋಟವನ್ನು ಬಿಡದಿರ್ಪಂತ ಕೆಲವು ಮಂದಮತಿಗಳು ತಮ್ಮ ಕುಲಧರ್ಮದ ಜ್ಞಾನವಿಲ್ಲದೆ ಗುರುಗಳಲ್ಲಿ ಅನಾದರವಿಡುವ ಮತ್ತು ತಮ್ಮ ವ್ರತಕ್ಕೆ ಭಂಗತಂದುಕೊಳ್ಳುತ್ತಿರುವುದು ಮೂರ್ಖತನವೆನಿಸಿದ್ದರೂ ಅವರ ಜೊತೆಗೆ ಯಾರನ್ನು ಎತ್ತಿಯಿಡಿಯಲು ಪ್ರಯತ್ನಪಡುವವರಾಗಿರುವರೋ ಆ ಮಾನವರೂ ತಮ್ಮ ಧರ್ಮಭ್ರಷ್ಟತ್ವಕ್ಕೆ ನಾಚದಿರುವುದು ಕಲಿಕಾಲದ ಗುಟ್ಟೇ ಇದೆಂದು ನಿಶ್ಚಯಿಸಿದಂತಾಯಿತು. ಇಂತಹ ಅಡ್ಡನಡೆ ನಾಸ್ತಿಕರನ್ನು ಸನ್ಮಾರ್ಗಕ್ಕೆ ತರುವುದು ಧರ್ಮಾಧಿಕಾರಿಗಳ ಕಾರ್ಯವಾಗಿದೆಯಷ್ಟೇ. ಈವಾಗ ಧರ್ಮಗುರುಗಳು ತಮ್ಮ ಸಾಮ್ರಾಜ್ಯದ ದುಸ್ಥಿತಿಯನ್ನು ನೋಡಿ ಸುಮ್ಮನಿರುವುದು ಸಮಂಜಸವಲ್ಲ. ಕಲಿಯ ಧರ್ಮದ ರಹಸ್ಯವು ತಿಳಿದಮೇಲೆ ತಮ್ಮ ವೇದಾಗಮಸಮ್ಮತವಾದ ಸಾಹಸವನ್ನು ಪ್ರಕಾಶಗೊಳಿಸುವುದು ಮುಖ್ಯವಾಗಿರುವುದು. ನಾಸ್ತಿಕ ಖಂಡನೆಗೆ ತಮ್ಮ ಧರ್ಮವೆನಿಸಿದ ತಪೋನುಷ್ಠಾನವು ಅಗಣಿತಬಾಂಬುಗಳ ಶಕ್ತಿಯೆಂದು ಹೇಳಲು ಅಭ್ಯಂತರವಿಲ್ಲ. ಮಹಾ ಮಹಾ ತಪಸ್ವಿಗಳು ತಮ್ಮ ತಮ್ಮ ತಪಃಪ್ರಭಾವದಿಂದ ಗಿರಿಗುಹಾಂತರಗಳಲ್ಲಿ ಒಂಟಿಗರಾಗಿದ್ದರೂ ಮಹಾ ಮಹಾ ಮಾಯಾವಿಗಳೆನಿಸಿದ ರಾಕ್ಷಸರನ್ನೂ ರಾಕ್ಷಸರಂಥ ಮನುಷ್ಯರನ್ನೂ ಗರ್ವಭಂಗರನ್ನು ಮಾಡಿ ಭಕ್ತರನ್ನು ಮಾಡಿಕೊಂಡಬಗ್ಗೆ ಅನೇಕ ಪ್ರಮಾಣಗಳುಂಟು. ವಿಶ್ವಾಮಿತ್ರನು ತನ್ನ ಚತುರಂಗಬಲ ಸಾಮ್ರಾಜ್ಯವನ್ನು ಬಿಟ್ಟು ಒಂಟಿಗನಾಗಿದ್ದು ಪ್ರತಿಸ್ವರ್ಗವನ್ನು ಸೃಷ್ಟಿಮಾಡುವ ಸಾಮರ್ಥ್ಯವನ್ನು ಪಡೆದಿದ್ದುದು ತಪೋನುಷ್ಠಾನ ಬಲದಿಂದಲ್ಲವೇ? ಈ ಶಕ್ತಿಯನ್ನು ಕೊಡುವ ಬೇರೆ ಸಾಧನವು ಜಗತ್ತಿನಲ್ಲಿ ಯಾವುದೂ ಇಲ್ಲ. ಆದುದರಿಂದಲೇ “ ಕ್ರಿಯಾಸಿದ್ಧಿಸ್ಸತ್ವೇ ವಸತಿ ಮಹತಾಂ ನೋಪಕರಣೇ ” ಎಂಬ ಉಕ್ತಿಯು ಪ್ರಜ್ವಲಿತವಾಗಿರುವುದು. ಇಂತಹ ಪ್ರಬಲ ಸಾಧನವು ಗುರುವರ್ಗದಲ್ಲಿರಬೇಕಾದರೆ ಅದನ್ನು ಆಚರಣೆಯಿಂದ ಹೊರಪಡಿಸದಿರುವುದು ದುಃಖದಾಯಕವಾಗಿದೆ. ಇವರ ಗುರುತ್ವದಿಂದ ಸುಶಿಕ್ಷಿತರಾಗಿದ್ದ ಚತುರಾಶ್ರಮಿಗಳೂ ಹಿಂದೆ ಎಷ್ಟೋ ಮಹತ್ಕಾರ್ಯಗಳನ್ನು ಕೈಗೊಂಡು ಗೌರವಿಸಲ್ಪಟ್ಟಿರುವರು. ಅಂದಮೇಲೆ ಇವರ ಗುರುತ್ವದ ಗೌರವವು ಎಷ್ಟು ತೇಜೋವಿಶಿಷ್ಟವಾಗಿರಬಹುದು. ಅದನ್ನು ಪ್ರಕಾಶಪಡಿಸಿದಂತೆ ಹುಟಗಿ ಬೃಹನ್ಮಠಾಧ್ಯಕ್ಷ ಶ್ರೀ ಶಿವಯೋಗಿ ಬಾಲತಪಸ್ವಿ ಚನ್ನವೀರ ಶಿವಾಚಾರ್ಯರು ಜಗತ್ತಿನ ಕಲ್ಯಾಣಕ್ಕಾಗಿ ತಪೋನುಷ್ಠಾನವಂ ಕೈಕೊಂಡಿರುವುದು ಜಗದ್ಗುರು ಪಂಚಾರ್ಯ ಸಾಮ್ರಾಜ್ಯಕ್ಕೆ ಅತ್ಯಾನಂದವನ್ನುಂಟುಮಾಡು ತ್ತದೆ. ಈ ಪೂಜ್ಯರು ಯಾವಾಗಲೂ ಕಠಿನಸ್ಥಾನಗ ಲ್ಲಿ ತಪಸ್ಸನ್ನು ಮಾಡಿ ಅದರ ಫಲವನ್ನು ಭಕ್ತ ಮಂಡಲಿಗೆ ಧಾರೆಯನ್ನೆರೆದಿರುವುದು ಸರ್ವಶ್ರುತವಾ ಹುದು. ಇಂತಹ ಅನುಷ್ಠಾನವನ್ನು ತಮ್ಮ ನಿತ್ಯಕ್ರಿ ಯನ್ನಾಗಿಯೇ ಭಾವಿಸಿರುವುದು ಅವರ ಸತ್ವಾಂಶ ನೈಜವಾದದ್ದಾಗಿದೆ. ಶಿವಾರ್ಚನಾನಂದಕಂದಲಿತ ಚಿತ್ತ ರೂ ಪರೋಪಕಾರಿಗಳೂ ಕರುಣಾನಿಧಿಗಳೂ ಶಿವಧರ್ಮೋ ದ್ಧಾರಕರೂ ಕೋಮಲಾಂತಃಕರಣರೂ ಆದ ಶ್ರೀಸ್ವಾ ಗಳವರು ಈಗಲೂ ಶ್ರೀ ಜಗದ್ಗುರು ರೇವಣಸಿದ್ಧ ರಾಜಧಾನಿ ಎನಿಸಿದ ಸೊಲ್ಲಾಪುರದ ಮನ್ಮಥಸ್ವಾಮಿ ವ ದಲ್ಲಿ ಹತ್ತು ತಿಂಗಳಿಂದಲೂ ಕೆಲವುದಿವಸ ಹಣ್ಣುಹಂಪ ಗಳಿಂದಲೂ ಕೆಲವುದಿವಸ ಕ್ಷೀರದಿಂದಲೂ ಕೆಲವುದಿವ ಜಲದಿಂದಲೂ ತೃಪ್ತರಾಗಿ ಆಹಾರವನ್ನು ಮಾ ಕೊಂಡು ಕೆಲವುದಿವಸ ನಿರಾಹಾರದಿಂದಲೂ ತ ಸ್ಸನ್ನು ಆಚರಿಸುತ್ತಿರುವುದನ್ನು ನೋಡಿದರೆ ಇ ಪ್ರಾಚೀನ ಮಹಾಋಷಿಗಳೆನಿಸಿದ ತಪಸ್ವಿನ ಮಾದ ಯಾಗಿ ಬರಬರುತ್ತ ಕಲಿಕಲ್ಮಷಭೂತೋಚ್ಚಾಟನ ಆಧಾರವಾಗದಿರದೆಂದು ಧರ್ಮಲೋಕವು ಬಲಬುಜಸ್ಸ ರಣವನ್ನು ಕಾಣುತ್ತಿರುವುದು ದಿನೇ ದಿನೇ ತಪಸ್ಸು ಒ ಯುತ್ತ ಸಾತ್ವಿಕತೇಜಃಪುಂಜವು ಪ್ರಕಟವಾಗಿ ಆಶ್ರ ಸೇವಕ ಸೇವಿಕೆಯರೆಲ್ಲರನ್ನೂ ಶಿವಧರ್ಮರತಿಯುಳ್ಳ ರನ್ನಾಗಿ ಮಾಡುತ್ತಿರುವುದನ್ನು ನೋಡಿ ಆನಂದಪ ದವನು ಪಾಪಿಯೇ ಸರಿ. ಒಬ್ಬ ಮಂತ್ರವಾದಿಯು ತ ಎಷ್ಟೋ ದೆವ್ವಗಳು ಸ್ಥಾನಭ್ರಷ್ಟತ್ವವನ್ನು ಹೊಂದ ಪ್ರಸಂಗವನ್ನು ತಂದುಕೊಳ್ಳಹತ್ತಿರಬೇಕಾದರೆ ಸ ಮಂತ್ರವಾದಿಗಳು ತಮ್ಮ ಕರ್ತವ್ಯವನ್ನು ಕೈಕೊ ಡ ಎಲ್ಲ ದೆವ್ವಗಳು ಈ ಲೋಕವನ್ನೇ ಬಿಡಲು ಅಡ್ಡಿಯೆ ನಮ್ಮ ಪೂಜ್ಯರಾದ ಹುಟಗಿ ಶ್ರೀ ಶಿವಯೋಗೀಶ ಮಂತ್ರಕ್ಕೆ ನೆಲೆಮನೆ ಎನಿಸಿದ ಶ್ರೀ ಗುರುವರ್ಗದವ ತಮ್ಮ ಕರ್ತವ್ಯಕರ್ಮವನ್ನು ನೆನೆದು ಅಲ್ಲಲ್ಲೇ ಸಕ್ರಮ ತಪೋನುಷ್ಠಾನವನ್ನು ಕೈಗೊಂಡಲ್ಲಿ ನಾಸ್ತಿಕ್ಯವೂ ಅಪೂ ಜ್ಯರನ್ನು ಪೂಜ್ಯರನ್ನಾಗಿಯೂ, ಪೂಜ್ಯರನ್ನು ಅಪೂಜ್ಯ ನ್ನಾಗಿಯೂ ತಿಳಿದು ಮಾರ್ಗದಪ್ಪಿದ ಧರ್ಮವನ್ನ ವವರ ಮೂರ್ಖತನವೂ ಸಮೂಲವಿನಾಶವಾಗಿ ಮ ಯರೆಲ್ಲರ ಹಿರಿಯರು ನಡೆದು ಮುಕ್ತರಾದ ಮಾರ್ಗ ಪ್ರಕಾಶವಾಗಿ ಮತದ ಪ್ರತಿಷ್ಠಾ ತೇಜೋಗೌರವ ಜಗತ್ತಿಗೆ ಗೋಚರವಾಗುವುದು. ತಪೋನುಷ್ಠಾನದಿಂದ ನಾಸ್ತಿಕ್ಯವನ್ನೋಡಿಸಬೇಕಲ್ಲದೆ ಮುಷ್ಟಿಯೊಂದರಿಂದಾ ಲಾರದು. ಸುಲಭರೀತಿಯಿಂದ ಜಗತ್ತನ್ನು ಸವಿ ಗೊಳಿಸಿ ವಶಮಾಡಿಕೊಳ್ಳುವ ಇಂತಹ ನೈಜವಾದ ಶ ಯನ್ನೇ ಮುಚ್ಚಿಕೊಂಡು ಸ್ವಸಮಾಜವನ್ನು ಕುಲಹೀ ಕುಟಿಲರ ಕುಣಿತಕ್ಕೆ ರಂಗಭೂಮಿಯನ್ನಾಗಿ ಮಾಡಿಕೊ ರುವುದು ತಮಗೆ ಕಳಂಕವಾಗಿದೆ ಎಂಬುದನ್ನು ನೆನಪಿ ತರದಿರುವ ಗುರುವರ್ಗಕ್ಕೆ ಎಷ್ಟು ಶೋಭಿಸಿದರೂ ದಾಗಿದೆ. ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರ ಸ ಹಸವೆಂಬ ಆದಿತ್ಯನು ತನ್ನ ಸದ್ಬೋಧವೆಂಬ ಕಿ ಗಳನ್ನು ಹಲವು ರೂಪದಿಂದ ವೇಗವಾಗಿ ಪಸರಿಸು ನಡೆದಿರುವ ಸುಸಮಯದಲ್ಲಿಯೂ ನಮ್ಮ ಗುರುವರ ಭಕ್ತರಕ್ಷಣೆಯೆಂಬ ತಮ್ಮ ನಿತ್ಯಾಚರಣವನ್ನು ಕೈ ಳ್ಳದೆ ಆಲಸ್ಯವೆಂಬ ಹಾಸಿಗೆಯನ್ನು ಬಿಟ್ಟೇಳದಿರುವು ಸರಿಯಾದುದಲ್ಲ. ಇನ್ನಾದರೂ ಜಾಗೃತರಾಗಿ ಸ್ವಕ ವ್ಯವನ್ನು ಕೈಕೊಳ್ಳಬೇಕೆಂದು ಬೇಡುವೆನು.

ಜ. ಜಿ. ಪಾಟೀಲ ಘೋ

॥ ಶ್ರೀಗುರುಭ್ಯೋನಮಃ ॥

ಜಾತ್ರೆ

ಲೇ— ಪಟ್ಟದ ಸ್ವಾಮಿಗಳು ಹಿರೇಮಠ, ಕೊಣ್ಣೂರು

ಗುರು ಅಥವಾ ಯಾವದಾದರೊಂದು ದೇವರ ಸಂ ಧದ, ಇಲ್ಲವೆ ಸಾಧು-ಸತ್ಪುರುಷರ ಸಂಬಂಧ ಉತ್ಸವಕ್ಕೆ ಜಾತ್ರೆಯೆನ್ನುವರು.

ಜಾತ್ರೆಯಲ್ಲಿ ಎಲ್ಲ ಮತದ ಜನರು ಭಕ್ತಿಯಿ ಒಕ್ಕಟ್ಟಾಗಿ ಕೂಡುತ್ತಾರೆ. ಜಾತ್ರೆಗೆ ಅನೇಕ ಪಂಡಿತ

ತ್ರಿಕಾಲ ಜ್ಞಾನಿಗಳೂ, ಮಹಿಮಾಶಾಲಿಗಳೂ, ಕೀರ್ತನಕಾರರೂ, ವ್ಯಾಖ್ಯಾನಕಾರರೂ, ಪುರಾಣಿಕರೂ, ದೂರದೂರ ದೇಶದಿಂದ ಬಂದಿರುತ್ತಾರೆ ಅಂಥವರ ಭೆಟ್ಟಿಯು ಸಹಜವಾಗಿ ಆಗುವದು. ಇದಲ್ಲದೆ ಅನೇಕ ಶಾಸ್ತ್ರೀಯ ತತ್ವಗಳು ನಮಗೆ ಗೊತ್ತಾಗುವವು ಅವರ ನಮ್ಮ ಪರಿಚಯವಾಗಿ ಪ್ರೇಮ ಬೆಳೆಯುವದು ಮತ್ತು ಆಯಾ ಸೃಷ್ಟಿ ಸೌಂದರ್ಯ, ನಡೆ ನುಡಿ ಉಡಿಗೆ-ತೊಡಿಗೆ ಭಾಷೆ ಇವೆಲ್ಲಾ ಗೊತ್ತಾಗಿ ನೇತ್ರವೆಂಬ ಶಿವಲಿಂಗವು ತೃಪ್ತಿಯನ್ನು ಹೊಂದುವದು ಇಷ್ಟೆಲ್ಲ ಲಾಭಗಳಾಗುತ್ತವೆ ಜಾತ್ರೆಯನ್ನು ಮಾಡದಿದ್ದರೆ, ಅಥವಾ ಜಾತ್ರೆಗೆ ಹೋಗದಿದ್ದರ ಮೇಲೆ ಬರೆದ ಲಾಭಗಳು ನಮಗೆ ದೊರೆಯಲರವು ಮತ್ತು ಮಹಿಮಾಶಾಲಿಗಳನ್ನು ದರ್ಶನ ಮಾಡಿಕೊಳ್ಳಬೇಕೆಂದು ಒಂದೊಂದು ಊರಿಗೆ ಹೋಗಬೇಕೆಂದರೆ, ಅದು ಸಾಧ್ಯವಾಗಲಾರದು. ಜಾತ್ರೆಯು ಪ್ರೇಮವನ್ನು ಹುಟ್ಟಿಸುತ್ತವೆ ಹ್ಯಾಗೆಂದರೆ ಜಾತ್ರೆಯು ಸಮೀಪಕ್ಕೆ ಬಂದಂತೆ, ತಮ್ಮ ಆಪ್ತರನ್ನೂ ಬಂಧು ಬಳಗದವರನ್ನೂ ಕರೆಯುತ್ತಾರೆ ಜಾತ್ರೆಗೆ ಹೋಗಬೇಕಂದರೆ ಒಬ್ಬರೇ ಹೋಗುವದಿಲ್ಲ ಅನೇಕ ಮಂದಿ ಕೂಡಿಕೊಂಡು ಹೋಗುತ್ತಾರೆ ಹೀಗೆ ಒಬ್ಬರಿಗೊಬ್ಬರ ಪ್ರೇಮವು ಬೆಳೆಯುತ್ತ ಹೋಗುವದು ಜಾತ್ರೆಗೆ ಹೋದ ಮೇಲೆ ಮೊದಲು ಆ ಉತ್ಸವ ಮೂರ್ತಿಯ ದರ್ಶನವನ್ನು ತೆಗೆದುಕೊಂಡು ಅನಂತರ ತಮ್ಮ [illegible] ಹೋಗುತ್ತಾರೆ ಅನಂತರ ಎಲ್ಲರೂ ಸ್ನಾನವನ್ನು ಮಾಡಿ ಮಡಿಯಿಂದ ತಮ್ಮ ನಿತ್ಯಕರ್ಮವನ್ನು ತೀರಿಸಿಕೊಂಡು ತಾವು ಮಾಡಿದ ಪೃಷ್ಪಾನ್ನವನ್ನೂ ಕಾಯಿ ಕರ್ಪೂರವನ್ನೂ ಆ ಉತ್ಸವ ಮೂರ್ತಿಗೆ ಅರ್ಪಿಸುತ್ತಾರೆ ಕೆಲವರು ಅಲ್ಲಿ ಅಭಿಷೇಕ ಮಾಡಿಸುತ್ತಾರೆ ಕೆಲವರು ಗಣಾರಾಧನೆಯನ್ನೂ ಕೆಲವರು ತಮ್ಮ ಶಕ್ತ್ಯನುಸಾರವಾಗಿ ಷೋಡಶ ದಾನಗಳಲ್ಲಿಯ ಕೆಲವು ದಾನಗಳನ್ನೂ ಮಾಡುತ್ತಾರೆ ಇಷ್ಟಾದನಂತರ ಆ ಉತ್ಸವ ಮೂರ್ತಿಗೆ ನಮಸ್ಕಾರಮಾಡಿ, ತಮ್ಮ ಇಚ್ಛಿತ ಫಲವನ್ನು ಬೇಡಿಕೊಳ್ಳುತ್ತಾರೆ ಇನ್ನು ತೇರು ಎಳೆಯುವಾಗ್ಗೆ ತೇರಿನ ಕಡೆಗೆ ಹೋಗುತ್ತಾರೆ ತೇರು ಬೇಕಾದಷ್ಟು ದೊಡ್ಡದಿದ್ದರೂ ಎಲ್ಲರೂ ಕೂಡಿ ಸಹಜವಾಗಿ ಎಳೆಯುತ್ತಾರೆ ಇದರಿಂದ ಗೊತ್ತಾಗುವದೇನೆಂದರೆ ಒಕ್ಕಟ್ಟಿನಿಂದ ಬೇಕಾದ್ದನ್ನು ಮಾಡಲಿಕ್ಕೆ ಬರುತ್ತದೆಂಬುವದು ತಿಳಿಯುವದು ಮತ್ತು ಒಕ್ಕಟ್ಟು ಬೆಳೆಯುತ್ತದೆ ಮೊದಲಿಗೆ ರೇಲ್ವೆ ವಗೈರೆ ಇದ್ದಿಲ್ಲ ಕಾಶಿ ಕೇದಾರ ರಾಮೇಶ್ವರ ಇಂಥ ದೂರದ ಯಾತ್ರೆಯನ್ನು ಮಾಡಬೇಕಾದರೆ ಕಾಲು ನಡಿಗೆಯಿಂದ ೩-೪ ತಿಂಗಳವರೆಗೆ ಮಾಡಬೇಕಾಗಿತ್ತು ಈಗ ಅಲ್ಲಲ್ಲಿಗೆ ರೇಲ್ವೆ ಮೋಟಾರ್‌ಗಳಾಗಿರುವದರಿಂದ ೧ ತಿಂಗಳಲ್ಲಿಯೇ ಬೇಕಾದಷ್ಟು, ಯಾತ್ರೆಯನ್ನು ಮಾಡಿಕೊಂಡು ಬರಬಹುದು ದುಡ್ಡಿನ ಸಂಗ್ರಹವು ಮಾತ್ರ ವಿಶೇಷ ಬೇಕಾಗುತ್ತದೆ ಕೆಲವರು ಭಕ್ತಿಯಿಂದ ಕಾಲುನಡಿಗೆಯಿಂದಲೇ ಜಾತ್ರೆಗೆ ಹೋಗುವವರು ಈಗಲೂ ಸಹ ಇದ್ದಾರೆ ಜಗದೀಶ್ವರನು ಅಂತರಾತ್ಮನ ಭಕ್ತಿಗೆ ಮೆಚ್ಚುವನಲ್ಲದೆ, ಡಾಂಭಿಕ ಭಕ್ತಿಗೆ ಎಂದೂ ಮೆಚ್ಚಲಾರನು ಡಾಂಭಿಕ ಭಕ್ತಿಯಿಂದ ಬೇಕಾದಷ್ಟು ಅನ್ನಸಂತರ್ಪಣೆ ಮಾಡಿದರೂ, ದುಡ್ಡು ಕೊಟ್ಟರೂ ಅದರಿಂದ ಫಲವು ಸಿಗುವದಿಲ್ಲ ಅಂತರಾತ್ಮನ ಭಕ್ತಿಯಿಂದ ಸ್ವಲ್ಪ ಕಾಯಿ ಒಡೆದರೂ ದುಡ್ಡು ಕೊಟ್ಟರೂ ಅನ್ನ ಕೊಟ್ಟರೂ, ಅದರ ಫಲವು ಸಿಗುವದು

ಇನ್ನು ವೀರಶೈವರು ಯಾತ್ರೆಯನ್ನು ಮಾಡಬಾರದೆಂದು ಕೆಲವರು ಅನ್ನುತ್ತಾರೆ ಇದು ತಪ್ಪು ಶ್ರೀ ಜಗದ್ಗುರು ರೇಣುಕಾಚಾರ್ಯರು ಅಗಸ್ತ್ಯ ಮುನಿಗೆ ಈ ಪ್ರಕಾರವಾಗಿ ಬೋಧಿಸಿದ್ದಾರೆ

ಶಿವಕ್ಷೇತ್ರಾಣಿ ತೀರ್ಥಾನಿ ವಿಶಿಷ್ಟಾನಿ ಶಿವಾರ್ಚಕಃ |
ಶಿವಯಾತ್ರೋತ್ಸವಂ ನಿತ್ಯಂ ಸೇವೇತ ಪರಯಾಮುದಾ||೪೬||

ಶಿವಕ್ಷೇತ್ರೋತ್ಸವ ಮಹಾಯಾತ್ರಾ ದರ್ಶನಕಾಂಕ್ಷಿಣಾಂ |
ಮಾರ್ಗೇಽನ್ನ ಪಾನದಾನಂ ಚ ಕುರ್ಯಾನ್ಮಾಹೇಶ್ವರೋ
ಜನಃ ||೪೭||

ಅಂದರೆ-ಶಿವಪೂಜಕನು ಶಿವಯಾತ್ರೋತ್ಸವಸಮಯದಲ್ಲಿ ಶ್ರೇಷ್ಠವಾದ ಶಿವಕ್ಷೇತ್ರಗಳನ್ನೂ, ಶಿವತೀರ್ಥಗಳನ್ನೂ, ವಿಶೇಷವಾದ ಸಂತೋಷದಿಂದ ಸೇವಿಸಬೇಕು ಶಿವಭಕ್ತರು ಶಿವಕ್ಷೇತ್ರ ಶಿವೋತ್ಸವಾದಿದರ್ಶನಾಪೇಕ್ಷಿಗಳಿಗೂ, ಶಿವಯಾತ್ರಿಕರಿಗೂ, ಮಾರ್ಗದಲ್ಲಿ ಅನ್ನದಾನವನ್ನೂ, ಜಲದ ದಾನವನ್ನೂ ಮಾಡಬೇಕು, ಎಂದು ಬೋಧಿಸಿರುವರು (ಸಿ ಶಿ ಪ ೯) ಈ ತತ್ವವನ್ನು ತಿಳಿದೇ ಪೂರ್ವಕಾಲದಲ್ಲಿ ಆಚಾರ್ಯರೂ, ಜ್ಞಾನಿಗಳೂ ಅನೇಕ ತೀರ್ಥಕ್ಷೇತ್ರಗಳ ಯಾತ್ರೆಯನ್ನು ಮಾಡಿದ್ದಾರೆ ಈಗಲೂ ಮಾಡುತ್ತಿರುವರು ಇನ್ನೂ ಕೆಲವರು 'ಸರ್ವವ್ಯಾಪೀಚಭಗವಾನ್' ಅಂದರೆ ಪರಮಾತ್ಮನು ಎಲ್ಲಕಡೆಗೂ ವ್ಯಾಪಿಸಿದ್ದಾನೆ ಅಲ್ಲಿದ್ದ ಶಿವನ ಇಲ್ಲಿ ಇಲ್ಲವೇ? ಅಂದಬಳಿಕ ರೂಪಾಯಿಗಳನ್ನು ಖಚ ಮಾಡಿಕೊಂಡು ಶ್ರಮಪಟ್ಟು, ಅಲ್ಲಿಗೆ ಯಾಕೆ ಹೋಗಬೇಕು ಅನ್ನುವರು ಅವರು ಅನ್ನುವ ಮಾತು ನಿಜ ಆದರೆ ಎಲ್ಲಕಟ್ಟಿಗೆಯಲ್ಲಿ ಬೆಂಕಿಯಿರುತ್ತಿದ್ದರೂ, ಬನ್ನಿಯಕಟ್ಟಿಗೆಯಲ್ಲಿ ವಿಶೇಷವಾಗಿರುವಂತೆ, ಪರಮಾತ್ಮನು ಎಲ್ಲಕಡೆ ವ್ಯಾಪಿಸಿದ್ದರೂ ಶಿವಕ್ಷೇತ್ರಗಳಲ್ಲಿ ವಿಶೇಷಾಕಾರದಿಂದಯಿರುತ್ತಾನೆಂಬುದೇ ಶಾಸ್ತ್ರ ಸಿದ್ಧಾಂತವು ಇನ್ನು ಕೆಲವರು ಯಾತ್ರೆಯ ನೆಪ ಮಾಡಿಕೊಂಡು ಹೋಗಿ ಅಲ್ಲಿ ಕಳುವನ್ನೂ ಜಾರತನವನ್ನೂ ಮಾಡುವರಲ್ಲದೆ ನಾಟಕ ಸಿನೇಮಾ ಮೊದಲಾದವುಗಳಿಗೆ ದುಡ್ಡನ್ನು ಖರ್ಚುಮಾಡಿಕೊಂಡು, ಊರಿಗೆ ಬರುವರು ಇದರಿಂದ ಯಾತ್ರೆಯ ಫಲವು ಸಿಗುವದಿಲ್ಲ ಯಾತ್ರೆಗೆ ಹೋದವರು ತಮ್ಮಲ್ಲಿದ್ದ ದುರ್ಗುಣಗಳನ್ನು ಬಿಟ್ಟು ನಿರ್ಮಲರಾಗಿ ಬರಬೇಕು ಸದ್ಗುಣಗಳಿಂದ ಕೂಡಿದವನು ಯಾತ್ರೆಯನ್ನು ಮಾಡದಿದ್ದರೂ ಅಷ್ಟೇ! ಹೋದರೂ ಅಷ್ಟೆ ಇದರ ಬಗ್ಗೆ ಒಬ್ಬ ಜ್ಞಾನಿಗಳು ಒಂದು ಪದ್ಯವನ್ನು ಹೇಳಿದ್ದಾರೆ ಅದನ್ನು ಕೆಳಗೆ ಕೊಡುತ್ತೇವೆ

ಯಾಕೆ ಯಾತ್ರೆಯು ಮಾಡುತಿರ್ಪರತ್ತೀಮನುಜರು |
ಸಾಕು ಒಮ ತನ್ನೊಳಿಗುಣಗಳಿರುತಿರಲು |೧|

ಪರನಿಂದೆ ಪರವನಿತಾಸಕ್ತಿ ಕುಟಿಲ ಕುಯುಕ್ತಿ |
ಪರಹಿಂಸೆ ಕಪಟ ಗರ್ವಯು ಕಠಿಣ ವಚನ ||
ಗುರುನಿರಾಕರಣೆ ಮದ ಮೋಹ ರಾಗ ದ್ವೇಷ |
ದುರಿತಾದಿ ದುರ್ಗುಣಂಗಳು ತನ್ನೊಳಿರಲು ||

ಸತ್ಯ ಸನ್ಮಾರ್ಗ ಶಮೆ ದಮೆ ಶಾಂತಿ ಗುರುಭಕ್ತಿ |
ತತ್ವವಿವರಣೆ ವಿದ್ಯೆ ವಿನಯ ದಯೆ ಧರ್ಮ |
ನಿತ್ಯಕರ್ಮ ವಿವೇಕ ವಿರತಿ ಜಪ ತಪ ಯೋಗ |
ಇತ್ಯಾದಿಸದ್ಗುಣಂಗಳು ತನ್ನೊಳಿರಲು |೨

ತಿಳಿಯಲೀ ಗುಣಗಳೊಳಗೊಂದೊಂದೇ ಶತಯಾತ್ರೆ |
ಗಳ ಪುಣ್ಯಫಲವ ತವಿಸುವ ಜೀವವೆನಲು ||
ಕಳೆದಿದುಕ್ತಾದಿಗುಣಗಳ ಸತ್ಯಗುಣವಿಡಿದೊ |
ಡೊಲವನೀ ಗುರುಸಿದ್ಧ ನೆಂಬುವನು ನುಡಿದು |೩|

ಎಂದು ಮೇಲಿನ ವಿಷಯವನ್ನೇ ಸ್ಪಷ್ಟಪಡಿಸಿದ್ದಾರೆ ಆದ್ದರಿಂದ ಯಾವದಾದರೊಂದು ಉತ್ಸವಕ್ಕೆ ನಮ್ರತೆಯಿಂದಲೂ ಭಕ್ತಿಯಿಂದಲೂ ಹೋಗಿ ಪರಮಾತ್ಮನ ಕೃಪೆಗೆ ಪಾತ್ರರಾಗಬೇಕೆಂದು ಸೂಚಿಸುತ್ತೇನೆ

| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಆದರ್ಶ ಗುರುಭಕ್ತರು

ನಿರೂಪಾಕ್ಷರಮಾರ್ಗ ದಾಸಗರೆ, ನಾರದಸಾಸ್ಕೃತಪಾಠಕಾರ

ವ್ಯಾಘ್ರೀವತಿಷ್ಠತಿ ಜರಾ ಪರಿಭರ್ತ್ಸಯಂತೀ |
ರೋಗಾಶ್ಚ ಶತ್ರವ ಇವ ಪ್ರಹರಂತಿ ದೇಹಂ |
ಆಯುಃ ಪರಿಸ್ರವತಿ ಭಿನ್ನಘಟಾದಿವಾಂಭೋ |
ಲೋಕಸ್ತಥಾಪ್ಯಹಿತ ಮಾಚರತೀತಿಚಿತ್ರಂ ||

ಅಂದರೆ ವೃದ್ಧಾಪ್ಯವು ಹೆಣ್ಣುಹುಲಿಯಹಾಗೆ ಬೆದರಿಸುತ್ತಾ ಇದೆ ರೋಗಗಳು ಶತ್ರುಗಳಹಾಗೆ ಶರೀರವನ್ನು ನಾಶಮಾಡುತ್ತವೆ ರಂಧ್ರವುಳ್ಳ ಗಡಿಗೆಯಲ್ಲಿಯ ನೀರು ಯಾವ ಪ್ರಕಾರವಾಗಿ ಸಣ್ಣಾಗಿ ಸೋರುತ್ತದೆಯೋ ಅದರಂತೆಯೇ ಮನುಷ್ಯನ ಆಯುಷ್ಯವಾದರೂ ಪ್ರತಿದಿನಕ್ಕೂ ಕ್ಷೀಣವಾಗುತ್ತ ಹೋಗುತ್ತದೆ ಹೀಗಾದಾಗ್ಯೂ ಕೂಡ ಲೋಕವು ಅಹಿತವನ್ನೇ ಆಚರಿಸುತ್ತದೆ ಎಂತಹ ವಿಚಿತ್ರವಾದುದು ಈ ಪ್ರಕಾರವಾದ ನೀತಿಯ ವಾಕ್ಯದಂತೆ ಮನುಷ್ಯನು ಕ್ಷಣವಾದರೂ ಸುಖವಿಲ್ಲದೇ ಇರುವ ಸಂಸಾರ ಮಾಯಾಜಾಲದಲ್ಲಿ ಸಿಲುಕಿ, ಬಾಲ್ಯ, ಕೌಮಾರ, ಯೌವನಗಳನ್ನು ಬಹು ಸಂತೋಷದಿಂದ ಕಳೆದು ವಾರ್ಧಕ್ಯದಲ್ಲಿ ದುಃಖಿಸಿದರೆ ಪ್ರಯೋಜನವಿಲ್ಲ ಶಕ್ತಿ ಇದ್ದಾಗ್ಗೆ, ಈಶ್ವರಾರಾಧನೆ, ಗುರುಸೇವಾದಿಗಳನ್ನು ಮಾಡಿದ್ದಾದರೆ ಮುಂದಿನ ಮೋಕ್ಷಫಲಕ್ಕೆ ಮಾರ್ಗವಾದಂತಾಗುತ್ತದೆ ಜನವು ಈ ಸಂಸಾರವು ನಿಸ್ಸಾರವೆಂದು ತಿಳಿದೂ ಸಹ ಆ ಕ್ಷಣಿಕ ಸುಖದಲ್ಲಿಯೇ ಲೀನವಾಗುವದನ್ನು ನೋಡಿದರೆ ವಿಚಿತ್ರವೆನಿಸುತ್ತದೆ ಈ ಅನಿತ್ಯಸುಖದಲ್ಲಿಯೇ ಲೀನನಾದವನು ಮೋಕ್ಷವನ್ನು ಹೊಂದುವುದು ಶಕ್ಯವೇ ಇಲ್ಲ ಈ ಸಂಸಾರದಲ್ಲಿದ್ದು ಮೋಕ್ಷವನ್ನು ಹೊಂದಬೇಕೆಂದು ಇಚ್ಛೆಯುಳ್ಳ ಮನುಷ್ಯನು ಯಾವ ಪ್ರಕಾರವಾಗಿ ಕಂಬಾರಹುಳವು ಕೆಸರಿನಲ್ಲಿಯೇ ಮನೆಮಾಡಿಕೊಂಡಿದ್ದರೂ ಆ ಕೆಸರನ್ನು ಸ್ವಲ್ಪವೂ ತನ್ನ ಮೈಯಿಗೆ ಅಂಟಿಸಿಕೊಳ್ಳದಂತೆ ಜೀವನಮಾಡುತ್ತದೆಯೋ ಅದರಂತೆಯೇ ಮನುಷ್ಯನು ಸಂಸಾರವೆಂಬತಕ್ಕ ಕೆಸರಿನಲ್ಲಿದ್ದು ಆ ಕೆಸರು ತನ್ನನ್ನು ಲೇಪಿಸದಂತೆ ತನ್ನ ಜೀವಮಾನವನ್ನು ಸಾಫಲ್ಯಗೊಳಿಸಬೇಕು ಶಿಶುವು ತನ್ನ ತಾಯಿಯ ಸ್ತನ್ಯಪಾನ ಮಾಡುವಾಗ್ಗೆ ಮತ್ತೊಂದು ಸ್ತನಕ್ಕೆ ಕೈಹಾಕಿ ಕಾದುಕೊಂಡಿರುವಂತೆ ವಿವೇಕಿಯಾದ ಮನುಷ್ಯನು ಇಹಲೋಕದ ಸುಖವನ್ನನುಭವಿಸುತ್ತ ಪರಲೋಕಕ್ಕೆ ಸಾಧನಗಳಾದ ಧಾರ್ಮಿಕ ಕಾರ್ಯಗಳನ್ನುಮಾಡಿ ಮುಂದಿನ ಮೋಕ್ಷಮಾರ್ಗವನ್ನು ಕಾದುಕೊಂಡಿರಬೇಕು ಮೊದಲು ಮುಕ್ತಿಯನ್ನಪೇಕ್ಷಿಸುವನು ಸದ್ಗುರುವನ್ನಾಶ್ರಯಿಸಬೇಕು ಗುರುವಿಲ್ಲದೆ ಮೋಕ್ಷಪ್ರಾಪ್ತಿಯು ಶಕ್ಯವೇ ಇಲ್ಲ ಅದುದರಿಂದ "ಮುಕ್ತಿ ಮೂಲಂ ಗುರೋಃ ಕೃಪಾ" ಎಂದು ಶಾಸ್ತ್ರಗಳು ಸಾರುತ್ತವೆ ಸಮುದ್ರವನ್ನು ದಾಟಬೇಕಾದರೆ ನಾವಿಕನಿಲ್ಲದೆ ದಾಟಲು ಹೇಗೆ ಶಕ್ಯವಿಲ್ಲವೋ ಅದರಂತೆ ಈ ಅಪಾರವಾದ ಸಂಸಾರಸಾಗರವನ್ನು ದಾಟಲಿಕ್ಕೆ ಗುರುವೆಂಬ ನಾವಿಕನು ಅವಶ್ಯವಾಗಿ ಬೇಕೇ ಬೇಕಾಗುವನು ನಾವು ಶಾಸ್ತ್ರಪುರಾಣೇತಿಹಾಸಗಳನ್ನು ನೋಡಿದರೂ ಸಹ ಗುರುವಿನ ಆವಶ್ಯಕತೆಯು ಮಿತಿಮೀರಿ ಪ್ರತಿಪಾದಿಸಲ್ಪಟ್ಟಿದೆ ದಿಲೀಪನು ಪುತ್ರನನ್ನು ಪಡೆಯಬೇಕಾದರೆ ಗುರುಸೇವೆಯನ್ನು ಮಾಡಿದನು. ಏಕಲವ್ಯನು ಶಸ್ತ್ರಾಸ್ತ್ರಪಾರಂಗತನಾಗಬೇಕಾದರೆ ಗುರುಸೇವೆಯನ್ನು ಮಾಡಿದನು ಉದಂಕನು ಜ್ಞಾನಿಯಾಗಬೇಕಾದರೆ ಗುರುಸೇವೆಮಾಡಿದನು ಇದೇಪ್ರಕಾರವಾಗಿ ಸಾಮ್ರಾಜ್ಯಾಧಿಪತಿಗಳೂ, ಯೋಗಿಶ್ರೇಷ್ಠರೂ, ಭಕ್ತೋತ್ತಮರೂ ಇವರೇ ಮೊದಲಾದ ವಿಶಿಷ್ಟವ್ಯಕ್ತಿಗಳೆಲ್ಲರೂ ಗುರುಸೇವೆಯಿಂದಲೇ ಧನ್ಯರಾಗಿರುವರು ಆದರೆ ಈಗಲಾದರೂ ಇಂತಹ ಗುರುಭಕ್ತಾಗ್ರೇಸರರು ಇಲ್ಲವೆಂದೇನಲ್ಲ ಇದ್ದೇ ಇರುವರು ಆದರೆ ವಿರಳ ಈಗ ಜಿತೇಂದ್ರಿಯರೂ ಬಾಲತಪಸ್ವಿಗಳೂ ಆದ ಶ್ರೀ|| ಷ|| ಬ್ರ|| ಚನ್ನವೀರಶಿವಾಚಾರ್ಯ ಹೋಟಗೀ ಈ ಯೋಗೀಶ್ವರರ ಸೇವೆಯಲ್ಲಿ ಸೌ| ಭಾಗೀರಥೀದೇವಿ ಕಟಾಪ ಮತ್ತು ಶ್ರೀಮತಿ ರತ್ನಾದೇವಿ ಹಿರೇಹಬ್ಬು ಈ ಮಾತೃದ್ವಯದ ನಿರತಿಶಯವಾದ ಗುರುಸೇವೆಯನ್ನು ವರ್ಣನಮಾಡಲಶಕ್ಯವಾಗಿದೆ ಒಂದು ಸಮಯದಲ್ಲಿ ಶ್ರೀ ಬಾಲತಪಸ್ವಿಗಳು ಶಿಷ್ಯಸಮೇತರಾಗಿ ಕೇದಾರನಾಥನ ಯಾತ್ರೆಗೆ ಹೊರಟರು ಈ ಯಾತ್ರೆಯು ಬಹು ಕಠಿಣವಾದುದು ಕೇದಾರನಾಥನು ಹಿಮಾಲಯ ತಪ್ಪಲಿನಲ್ಲಿ ವಾಸಮಾಡುತ್ತಿರುವುದರಿಂದ ಹಿಮವು ಯಾವಾಗಲೂ ಸುರಿಯುತ್ತಿರುವುದು ಅಲ್ಲಿಯ ಭೂಮಿಯು ಮಂಜಿನಗಡ್ಡೆಗಳಿಂದ ಕೂಡಿರುವುದು ಆ ಮಂಜಿನಗಡ್ಡೆಗಳಮೇಲೆಯೇ ನಡೆದುಹೋಗಬೇಕಾಗುತ್ತದೆ ಎಂತಹ ದರಿದ್ರನಾದರೂ ಸಹ ಉಣ್ಣೆಯಬಟ್ಟೆ, ಬೂಟ್ಸು ಇತ್ಯಾದಿ ಶರೀರಪೋಷಣೆಗೆ ಸಾಕಾಗುವಷ್ಟು ಉಷ್ಣವಾಗುವ ಸಾಮಾನುಗಳನ್ನು ಹಾಕಿಕೊಂಡು ಹೋಗಬೇಕಾಗುತ್ತದೆ ಬಡವರ ಶರೀರಪೋಷಣೆಯೇ ಇಷ್ಟು ಸಲಕರಣೆಯಿಂದ ಕೂಡಿರಬೇಕಾದರೆ ಧನಿಕರ ವಿಷಯದಲ್ಲಿ ಹೇಳಬೇಕಾಗಿಲ್ಲ ಆದರೆ ಶ್ರೀಗಳು ಮಾತ್ರ ಮೈಯಲ್ಲಿ ಒಂದು ಕಾವಿಯ ಕಾಟಿಯನ್ನು ಧರಿಸಿ ಹಸ್ತದಲ್ಲಿ ಒಂದು ದಂಡವನ್ನು ಪರಿಗ್ರಹಿಸಿ ಪಾದಗಳಲ್ಲಿ ಏನೂ ಹಾಕಿಕೊಳ್ಳದೇ ಮಂಜಿನಗಡ್ಡೆಯಮೇಲೆ ನಡೆಯುತ್ತಾ ಹೋದರು ಇನ್ನುಳಿದ ಶಿಷ್ಯಸಮೂಹವು ತಮಗೆ ಯೋಗ್ಯಗಳಾದ ಸಾಮಾನುಗಳನ್ನು ಗ್ರಹಿಸಿ ಗುರುವನ್ನು ಹಿಂಬಾಲಿಸಿದರು ಆದರೆ ಗುರುಗಳ ಸುಖವೇ ನಮ್ಮಸುಖ, ಗುರುಗಳ ಕಷ್ಟವೇ ನಮ್ಮ ಕಷ್ಟ, ನಮ್ಮನ್ನುದ್ಧರಿಸುವವನು ಗುರುವು ಎಂದರಿತ ಈ ಮಾತೃದ್ವಯವು ಅತ್ಯಂತ ಶೀತವಾದ ಈ ಮಂಜಿನಗಡ್ಡೆಯಮೇಲೆ ಗಮಿಸುತ್ತಿರುವ ಗುರುನಾಥನ ಚರಣಗಳ ಸ್ಥಿತಿಯೇನು, ಅವರ ಶರೀರದ ಅವಸ್ಥೆಯೇನು, ಗುರುನಾಥನ ಕಷ್ಟಕ್ಕಿಂತಲೂ ನಮ್ಮ ಕಷ್ಟವು ಅಷ್ಟು

[೬ ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ

೧೯೪೧ನೆಯ ಸೆಪ್ಟೆಂಬರ್ ತಾ|| ೧೫ನೆಯ ಸೋಮವಾರ

ಜಂಗಮ

"ಜಂಗಮವ್ಯಂತ ಇತಿ ಜಂಗಮಾಃ" ಎಂಬ ವ್ಯುತ್ಪತ್ತಿಗನುಸರಿಸಿ ಜಂಗಮರೆಂದರೆ ಸಂಚರಿಸುವವರೆಂದು ಅರ್ಥವಾಗುತ್ತದೆ. ಆದರೆ ಇವರು ಸಕಾರಣವಾಗಿ ಸಂಚರಿಸುವವರೋ? ಅಥವಾ ನಿಷ್ಕಾರಣವಾಗಿ ಸಂಚರಿಸುವವರೋ? ಎಂಬ ಪ್ರಶ್ನವು ಉಪಸ್ಥಿತವಾಗುತ್ತದೆ. ನಿಷ್ಕಾರಣವಾಗಿ ಸಂಚರಿಸುವವರು ಎಂದೂ ಪೂಜ್ಯರಾಗುವದಿಲ್ಲ. ಸಕಾರಣವಾಗಿ ಸಂಚರಿಸುವವರೇ ಪೂಜ್ಯಜಂಗಮ ಪದವಾಚ್ಯರಾಗುತ್ತಾರೆ. ಆ ಕಾರಣಗಳು ಯಾವುವೆಂದರೆ—ಪರಮತ ಖಂಡನಪೂರ್ವಕ ಸ್ವಸಿದ್ಧಾಂತ ಸ್ಥಾಪನ, ದೀಕ್ಷಾ ಶಿಕ್ಷಾ ರಕ್ಷಣ ಉಪದೇಶಾನುಗ್ರಹ ಇವೇ ಮೊದಲಾದವುಗಳೆನ್ನುತ್ತವೆ. ಈ ಎಲ್ಲ ಕಾರಣಗಳು ವೀರಶೈವ ಧರ್ಮಶಾಸ್ತ್ರಾನುಸಾರವಾಗಿ ವಿರಕ್ತನಿಗೆ ನಿಷೇಧಿಸಲ್ಪಟ್ಟಿರುತ್ತವೆ.

ಪರಾಙ್ಮುಖೋ ವಿರಕ್ತಃ ಸ್ಯಾತ್ ಸರ್ವಸಂಗವಿವರ್ಜಿತಃ।
ವಾದಖಂಡನಕರ್ತೃತ್ವಂ ಸ್ವಸ್ಯ ನಾಸ್ತಿ ಕದಾಚನ ॥
[illegible] ದೀಕ್ಷಾ [illegible] ರಕ್ಷಣೇ ತಥಾ।
ಆಚಾರಪ್ರಾಯಶ್ಚಿತ್ತಾದಿ [illegible] ಶಿವೇ।
[illegible]।
[illegible]

ಇತಿ ಪಾರಮೇಶಾಗಮೇ

ಅಂದರೆ ವಿರಕ್ತನು ಸರ್ವಸಂಗಪರಿತ್ಯಾಗ ಮಾಡಿರುವದರಿಂದ ಅವನಿಗೆ [illegible] ಖಂಡನ ಕರ್ತೃತ್ವವು ಎಂದೂ ಇರುವುದಿಲ್ಲ. ವಿರಕ್ತನು ಶಿಕ್ಷಣ ರಕ್ಷಣಾಚಾರ ಪ್ರಾಯಶ್ಚಿತ್ತ [illegible] ಮೊದಲಾದವುಗಳನ್ನು ಮಾಡಬಾರದು. ಒಂದುವೇಳೆ ಬಲಾತ್ಕಾರದಿಂದ ಮಾಡಿದ್ದಾದರೆ ಅವನು ಚಂಡಾಲನಾಗುವನೆಂದು ಪಾರಮೇಶಾಗಮವು ವಿಧಿಸುತ್ತದೆ.

ಅನುಗ್ರಹಂ ಪರಿಪ್ರಶ್ನಂ [illegible]।
ಏಕತ್ವಂ [illegible] ವಿಭೂಷಣಂ ॥
ತಾಂಬೂಲಾಭ್ಯಂಜನಕ್ರೀಡಾ [illegible]।
ಶಿಷ್ಯಸಂ[illegible] ॥
ತ್ಯಕ್ತ್ವಾ ಸನ್ಯಾಸಯೋಗೇನ [illegible] ವ್ರತಂ ॥

ಇತಿ ಸನ್ಯಾಸೋಪನಿಷದಿ

ಅಂದರೆ ವಿರಕ್ತನು ಅನುಗ್ರಹ ಆಶೀರ್ವಾದ ಮೊದಲಾದವುಗಳನ್ನು ಮಾಡುವುದನ್ನು ಬಿಡತಕ್ಕದೆಂದು ಸನ್ಯಾಸೋಪನಿಷತ್ತು ವಿಧಿಸುತ್ತದೆ. ಈ ಎಲ್ಲ ಆಧಾರಗಳಿಂದ ವಿರಕ್ತನು ನಿಷ್ಕಾರಣವಾಗಿ ಸಂಚರಿಸುವವನೆಂದು ಸಿದ್ಧವಾಗುವುದೇ ಹೊರತು ಸಕಾರಣವಾಗಿ ಸಂಚರಿಸುತ್ತಾನೆಂದು ಸಿದ್ಧವಾಗುವುದಿಲ್ಲ. ಅಂದಮೇಲೆ ಪರಮತಖಂಡನಪೂರ್ವಕ ಸ್ವಮತಸಿದ್ಧಾಂತವನ್ನು ಸ್ಥಾಪನ ಮಾಡಬೇಕೆಂಬ ತತ್ತ್ವವುಳ್ಳ ಅಷ್ಟಾವರಣಾಂತರ್ಗತ ಜಂಗಮಪದವಾಚ್ಯನು ವಿರಕ್ತನು ಎಂದೂ ಆಗುವುದಿಲ್ಲ. ಆದರೆ ಶಾಸ್ತ್ರಸಿದ್ಧರಾದ ಗುರುಸ್ಥಲದ ಚರಮೂರ್ತಿಗಳೇ ಜಂಗಮಪದವಾಚ್ಯರಾಗುತ್ತಾರೆ. ಏಕೆಂದರೆ — ಅವರು ತಮ್ಮ ಯಾವತ್ತು ಶಿಷ್ಯಕೋಟಿಯಲ್ಲಿ ಸ್ವಸಿದ್ಧಾಂತವನ್ನು ಸ್ಥಾಪನೆಮಾಡುವುದಕ್ಕಾಗಿಯೂ, ದೀಕ್ಷಾ ಶಿಕ್ಷಣ ರಕ್ಷಣ ದಂಡನಖಂಡನಾಚಾರಪ್ರಾಯಶ್ಚಿತ್ತ ಜ್ಞಾನೋಪದೇಶ ಮೊದಲಾದವುಗಳನ್ನು ಮಾಡುವುದಕ್ಕಾಗಿಯೂ ಸಂಚರಿಸುತ್ತಿರುವುದರಿಂದ. ಇವರ ವಿಷಯದಲ್ಲಿ ಧರ್ಮಶಾಸ್ತ್ರವು ಮುಕ್ತಕಂಠದಿಂದ ಕೂಗುತ್ತದೆ. ಇದು ಜಗತ್ತಿನಲ್ಲಿ ಯೋಗರೂಢಿಗಳಿಂದ ಪ್ರಸಿದ್ಧವೇ ಆದೆ. ಇದೇ ತತ್ತ್ವವನ್ನು ಕುರಿತು ವೀರಶೈವಸದಾಚಾರ ಸಂಗ್ರಹದಲ್ಲಿ ಹೇಳುವುದೇನೆಂದರೆ—

ಏವೋತ್ಕೃಷ್ಟಂ ವೀರಶೈವಮತಂ ಸ್ವಾಚಾರಮುಕ್ತಿದಂ ।
ಸ್ಥಾಪಯ ತ್ವಂ ಯಥಾಶಾಸ್ತ್ರಂ ಚರಮೂರ್ತೀನ್ ಪ್ರತೋಷಯ ॥
ಸಂಚಾರಂ ಕುರು ಸರ್ವತ್ರೇತ್ಯಾದಿಶ್ಯ ಗುರು[illegible] ॥

ಗುರುವು ಜಂಗಮಾಧಿಕಾರವನ್ನು ಕೊಡುವ ಕಾಲಕ್ಕೆ ಎಲೈ, ಚರಮೂರ್ತಿಯೇ! ನೀನು ಸರ್ವತ್ರ ಸಂಚಾರ ಮಾಡಿ ವೀರಶೈವಮತವನ್ನೂ ಆಚಾರಾದಿಗಳನ್ನೂ ಯಥಾಶಾಸ್ತ್ರವಾಗಿ ಸ್ಥಾಪಿಸು, ಹಾಗೂ ಚರಮೂರ್ತಿಗಳನ್ನು ಸಂತೋಷಗೊಳಿಸು ಎಂದು ಉಪದೇಶಿಸಿ ಅಧಿಕಾರವನ್ನು ಕೊಡುತ್ತಾನೆಂದು ಪ್ರತಿಪಾದಿಸಲ್ಪಟ್ಟಿರುತ್ತದೆ. ಅಂದಮೇಲೆ ಚರಮೂರ್ತಿಗಳೇ ಜಂಗಮರಲ್ಲದೆ ವಿರಕ್ತರು ಆಗುವುದಿಲ್ಲವೆಂದು ಸಿದ್ಧಾಂತವು. ಇದೇ ತತ್ತ್ವವನ್ನನುಸರಿಸಿ ಪರಮೇಶ್ವರನ ಆಜ್ಞೆಯಿಂದ ಭೂಲೋಕದಲ್ಲಿ ವೀರಶೈವ ಸಿದ್ಧಾಂತವನ್ನು ಸ್ಥಾಪನೆ ಮಾಡುವುದಕ್ಕೋಸ್ಕರ ಅವತಾರವನ್ನೆತ್ತಿ ಕೊಂಡುಬಂದ ಶ್ರೀಜಗದ್ಗುರು ರೇಣುಕಾದಿಪಂಚಾಚಾರ್ಯರು ಎಲ್ಲಾ ಲೋಕಗಳಲ್ಲಿ ಸಂಚರಿಸಿ, ಸ್ವಮತಸಿದ್ಧಾಂತವನ್ನು ಸ್ಥಿರಗೊಳಿಸಿದರು. ಶ್ರೀರೇಣುಕಾಚಾರ್ಯರು ಭೂತಲದಲ್ಲಿ [illegible] ವರ್ಷಗಳವರೆಗೆ ಸಂಚರಿಸಿ, ವೀರಶೈವ ಸಿದ್ಧಾಂತವನ್ನು ನೆಲೆಗೊಳಿಸಿ ಕುಲ್ಯಪಾಕ ಸೋಮೇಶ್ವರಲಿಂಗದಲ್ಲಿ ಅಡಗುವ ಕಾಲಕ್ಕೆ ಸೋಮೇಶ್ವರನ ಮುಂದೆ ನಿಂದು

[illegible] ಪಾರ್ವತೀಪತೇ ।
[illegible] ಮಹೇಶ್ವರೇ ॥
[illegible] ಭವಮುಕ್ತ್ಯೈ ಮಾನವಾನಾಂ ಪ್ರಸಿದ್ಧಯೇ ।
[illegible] ಶಂಕರ ॥

ಇತಿ ಸಿದ್ಧಾಂತಶಿಖಾಮಣೌ

ಎಂದು ಸ್ತುತಿಸಿರುತ್ತಾರೆ. ಈ ಕಾರಣದಿಂದಲೇ ವೀರಮಾಹೇಶ್ವರತಂತ್ರವು "ಭೂರುದ್ರಾ ಜಂಗಮಾ ಲೋಕೇ ರೇಜಿರೇ ರೇಣುಕಾದಯಃ" ಎಂದು ಮುಕ್ತಕಂಠದಿಂದ ಸಾರುತ್ತದೆ. ಈ ಪ್ರಕಾರವಾಗಿ ಶ್ರೀಜಗದ್ಗುರು ರೇಣುಕಾದಿಪಂಚಾಚಾರ್ಯರು ಸರ್ವತ್ರ ಸಂಚರಿಸಿ ಸ್ವಮತ ಸಿದ್ಧಾಂತವನ್ನು ಸ್ಥಾಪಿಸಿ ಗುರುರೂಪಿಗಳೆಂದೂ, ಲಿಂಗರೂಪಿಗಳೆಂದೂ, ಜಂಗಮರೂಪಿಗಳೆಂದೂ ಜಗತ್ತಿನಲ್ಲಿ ವಿಖ್ಯಾತಿಯನ್ನು ಹೊಂದಿದರು. ಈ ಸರ್ವತತ್ತ್ವಗಳಿಂದ ಗುರುಸ್ಥಲದ ಚರಮೂರ್ತಿಗಳೇ ಅಷ್ಟಾವರಣಾಂತರ್ಗತ ಜಂಗಮರೆಂಬುದು [illegible]ವಾದ ಸಿದ್ಧಾಂತವು.

ಕಲವು ಗ್ರಂಥಕಾರರು ಜಂಗಮಶ್ಲೋಕಗಳನ್ನು ವಿರಕ್ತರ ವಿಷಯದಲ್ಲಿ ಸೇರಿಸಿದ್ದಾರೆ. ಪೂರ್ವಾಪರವಾಗಿ ವಿಚಾರಮಾಡಿ ನೋಡಿದರೆ ಇದು ಅತ್ಯಂತ ದೋಷಯುಕ್ತವಾದುದು. ರಾ|| ಬ|| ನಾರದ ಮಲ್ಲಪ್ಪನವರಿಂದ ಕನ್ನಡ ಅಕ್ಷರಗಳಿಂದ ಮುದ್ರಿತವಾಗಿರುವ ವಿರಕ್ತೋತ್ಪತ್ತಿ ಕ್ರಿಯಾಲಕ್ಷಣವೆಂಬ ಗ್ರಂಥದ ಪ್ರಸ್ತಾವನೆಯಲ್ಲಿ "ವಿರಕ್ತಲಕ್ಷಣಗಳು ವಿಶೇಷವಾಗಿ ನಮಗೆ ದೊರೆಯದೆ ಇದ್ದುದರಿಂದ ಜಂಗಮಲಕ್ಷಣಗಳನ್ನೇ ಇವರಿಗೆ ಸಂಬಂಧಿಸಿರುತ್ತೇವೆ' ಎಂಬ ಅಭಿಪ್ರಾಯವು ತೋರಿಸಲ್ಪಟ್ಟಿರುತ್ತದೆ. ಆದುದರಿಂದ ಗುರುಸ್ಥಲದ ಚರಮೂರ್ತಿಸ್ವಾಮಿಗಳೇ ಜಂಗಮಪದವಾಚ್ಯರೆಂದು ತಿಳಿದು ಅವರಲ್ಲಿ ನಿಜವಾದ ಭಕ್ತಿಯನ್ನಿಟ್ಟು ಮುಕ್ತಿಭಾಗಿಗಳಾಗಬೇಕು

ಯುದ್ಧವಾರ್ತೆ.

ಅಮೆರಿಕದ ಹಡಗು ಮುಳುಗಿತು

'ಸ್ಟೀಲ್ ಸೀಫೇರರ್' ಎಂಬ ಅಮೆರಿಕನ್ ಹಡಗು ಕೆಂಪು ಸಮುದ್ರದಲ್ಲಿ ಮುಳುಗಿತು. ಯಾವುದೋ ವಿಮಾನವು ಬಾಂಬನ್ನು ಹಾಕಿತು. ನಾವಿಕರನ್ನೆಲ್ಲ ರಕ್ಷಿಸಲಾಯಿತು

ಮಧ್ಯಪೂರ್ವಕ್ಕೆ ಹೊಸಮಾರ್ಗ ಹುಡುಕಲಿದ್ದಾರೆ

ಅಮೆರಿಕ ಪಶ್ಚಿಮ ಆಫ್ರಿಕಗಳಿಗೆ ವಿಮಾನಸೌಕರ್ಯವನ್ನೇರ್ಪಡಿಸುವ ಆಲೋಚನೆಯನ್ನು ನಡೆಸುತ್ತಲಾಗಿದೆ. ಈ ವಿಚಾರದಲ್ಲಿ ಇನ್ನೂ ನಿರ್ಧಾರಕ್ಕೆ ಬರಲಾಗಿಲ್ಲ. ಮಧ್ಯಪೂರ್ವದಲ್ಲಿರುವ ಬ್ರಿಟಿಷ್ ಸೇನೆಗಳಿಗೆ ಈ ಹೊಸಮಾರ್ಗದ ಮೂಲಕ ಅಮೆರಿಕದಿಂದ ವಿಮಾನಗಳನ್ನು ಕಳುಹಿಸುವ ಯೋಚನೆಮಾಡಲಾಗಿದೆ

ಜರ್ಮನ್ ಅಧಿಕಾರಿಯ ಸಾವು

ಶತ್ರು ವ್ಯೂಹದ ಹಿಂದುಗಡೆ ಕೆಲಸಮಾಡುತ್ತಿದ್ದ ರಷ್ಯ ಸೈನ್ಯಗಳು ಜರ್ಮನರ ಮೇಲೆ ಬಿದ್ದು ಜರ್ಮ ಅಧಿಕಾರಿಯೊಬ್ಬನನ್ನೂ ೧೨೦೦ ಮಂದಿ ಯೋಧರನ್ನೂ ಕೊಂದುಹಾಕಿದರೆಂದು ತಿಳಿದುಬರುತ್ತದೆ.

೧೫೦೦೦ ನಾಜಿಗಳ ಸಾವು

೪ ನೇ ತಾ|| ದಿನ ರಣರಂಗದುದ್ದಕ್ಕೂ ನಡೆದ ಕದನದಲ್ಲಿ ೧೫೦೦೦ ನಾಜಿ ಅಧಿಕಾರಿಗಳೂ ಮತ್ತು ಸೈನಿಕರೂ ಹತರಾದರೆಂದು ರಷ್ಯಾ ಪ್ರಕಟನೆಯು ತಿಳಿಸುತ್ತದೆ.

ನೀಪರ್ ನದಿ ದಾಟುವ ಪ್ರಯತ್ನ

ಕಳೆದ ೩ ದಿನಗಳಲ್ಲಿ ಜರ್ಮನರು ನಾಲ್ಕು ಸಾ ನೀಪರ್ ನದಿ ದಾಟಲು ಯತ್ನಿಸಿದರೆಂದೂ, ಆದ ಅದನ್ನು ನಿಷ್ಫಲಗೊಳಿಸಲಾಯಿತೆಂದೂ ತಿಳಿಸಲಾಗಿ

ಇಟಾಲಿಯನ್ ಎಣ್ಣೆ ಹಡಗು ಮುಳುಗಿತು

ಒಂದು ಡಿಸ್ಟ್ರಾಯರ್ ಮತ್ತು ಅನೇಕ ವಿಮಾನಗಳ ಕಾವಲಿನಲ್ಲಿ ತೆರಳುತ್ತಿದ್ದ ಇಟಲಿ ಎಣ್ಣೆಹಡಗನ್ನು ಏಜಿಯನ್ ಸಮುದ್ರದಲ್ಲಿ ಬ್ರಿಟಿಷ್ ಸಬ್‌ಮೆರೀನು ಮುಳುಗಿಸಿತು

ಜರ್ಮನರು ಕೊಂಚ ಹಿಮ್ಮೆಟ್ಟುವರೇ?

ರಷ್ಯಾ ರಣರಂಗದಲ್ಲಿ ಜರ್ಮನರು ಕೊಂಚ ದೂರ ಹಿಮ್ಮೆಟ್ಟುವರೆಂದೂ, ಚಳಿಗಾಲದ ಕದನಕ್ಕಾಗಿ ವ್ಯೂಹಗಳನ್ನು ಭದ್ರಪಡಿಸಿಕೊಳ್ಳುವದೇ ಇದರ ಗುರಿಯೆಂದೂ ಅಮೆರಿಕನ್ ಮಿಲಿಟರಿ ಅಧಿಕಾರಿಗಳು ತಿಳಿಸುತ್ತಾರೆ"

ಒಡೆಸ್ಸಾ ಪತನವಾಗಿಲ್ಲ

ಒಡೆಸ್ಸಾ ರಕ್ಷಣೆ ವ್ಯೂಹವನ್ನು ಒಡೆಯಲು ಶತ್ರುಗಳ ಮಾಡುತ್ತಿರುವ ಪ್ರಯತ್ನವೆಲ್ಲ ನಿಷ್ಫಲವಾಗಿದೆ. ಜರ್ಮನರೂ ರುಮೇನಿಯನರೂ ಈ ಬಂದರಿನ ಆಕ್ರಮಣಕ್ಕಾಗಿ ಕಳೆದ 1 ತಿಂಗಳಿಂದ ಹೊಡೆದಾಡುತ್ತಿದ್ದಾರೆ. ಶತ್ರುಗಳ ಅರಿಸಿದ ಸೇನೆಗಳು ದುರ್ಭೇದ್ಯವಾದ ಒಡೆಸ್ಸಾಕ್ಕೆ ಬಲಿಯಾಗುತ್ತಿವೆ

ಒಡೆಸ್ಸಾದಲ್ಲಿ ಅಪಾರ ಹಾನಿ

ಒಡೆಸ್ಸಾ ಸುತ್ತಮುತ್ತ ನಡೆದ ಕದನದಲ್ಲಿ ಗಾಯಗೊಂಡಿರುವ ಜರ್ಮನರ ಮತ್ತು ರುಮೇನಿಯನರ ಸಂಖ್ಯೆ ಅಪಾರವಾಗಿದೆ. ಅವರನ್ನು ಆಸ್ಪತ್ರೆಗಳಿಗೆ ಕೂಡ ಸಾಗಿಸಲು ಅಶಕ್ಯವಾಗಿದೆ. ಗಾಯಗೊಂಡವರಲ್ಲಿ ಅನೇಕರು ಪ್ರಥಮ ಚಿಕಿತ್ಸೆ ಸೌಕರ್ಯವು ಇಲ್ಲದೆ ಸಾಯುತ್ತಿದ್ದಾರೆ

ಭಾರತವನ್ನು ಅಭಿವೃದ್ಧಿಗೊಳಿಸಿಲ್ಲ

ಈಗಿನ ಯುದ್ಧದಲ್ಲಿ ಜಯಗಳಿಸಲು ಅನುಸರಿಸುತ್ತಿರುವ ಮಾರ್ಗಗಳನ್ನು ಕುರಿತು ಪಾರ್ಲಿಮೆಂಟ್ ಸದಸ್ಯರಾದ ಶ್ರೀ|| ವೆಡ್ಜ್‌ವುಡ್‌ರವರು ಪತ್ರಿಕೆಯೊಂದಕ್ಕೆ ಕೊಟ್ಟ ಲೇಖನದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಜನ ಮತ್ತು ಸಾಂಪತ್ತಿಕ ಬಲವನ್ನು ಅಭಿವೃದ್ಧಿ ಪಡಿಸಲು ಪ್ರಯತ್ನಿಸದಿರುವದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸುತ್ತ "ಭರತಖಂಡದಲ್ಲಿ ಕೋಟ್ಯಂತರ ಬುದ್ಧಿವಂತರಾದ ಯಂತ್ರ ಕರ್ಮಿಗಳಿದ್ದರೂ. ಅಲ್ಲಿ ಈಗ ಯಾವ ಯಂತ್ರಗಳೂ ತಯಾರಾಗುತ್ತಿಲ್ಲ. ಅವುಗಳನ್ನು ತಯಾರಿಸುವ ಯೋಚನೆಯೂ ಇಲ್ಲ. ಯೂರೋಪೆಲ್ಲವೂ ಹಿಟ್ಲರನಿಗೆ ವಸ್ತುಗಳನ್ನು ನಿರ್ಮಿಸಿಕೊಡುತ್ತಿದೆ. ಅದಕ್ಕಿಂತ ಅಧಿಕ ಸಂಖ್ಯೆಯುಳ್ಳ ದೇಶವು ಬ್ರಿಟನ್ನಿಗಾಗಿ ಕೆಲಸ ಮಾಡಲು ನಾವು ಅವಕಾಶಕೊಟ್ಟಿಲ್ಲ. ಬಹುಶಃ ಯುದ್ಧ ಮುಗಿದಮೇಲೆ ಸಂಭವಿಸಬಹುದಾದ ಪರಿಸ್ಥಿತಿಯ ಹೆದರಿಕೆಯೇ ಇದಕ್ಕೆ ಕಾರಣವಿರಬಹುದೆಂದು ನಂಬಿದ್ದೇನೆ" ಎಂದು ತಿಳಿಸಿದ್ದಾರೆ.

ಲೆನಿನ್‌ಗ್ರಾಡ್‌ನಲ್ಲಿ ಸಿದ್ಧತೆ

ಲೆನಿನ್‌ಗ್ರಾಡ್ ಕ್ಷೇತ್ರದಲ್ಲಿ ಭಯಂಕರವಾದ ಹೊಡೆದಾಟ ನಡೆಯುತ್ತಿದೆ. ಆದರೂ ಜರ್ಮನರು ನಗರವನ್ನು ಸುತ್ತುವರಿದಿಲ್ಲ. ನೈಋತ್ಯದಲ್ಲಿ ಮಾತ್ರ ಅವರು ನಗರದ ಹತ್ತಿರಕ್ಕೆ ಬಂದಿದ್ದಾರೆ ಆದರೆ ಊರಿನ ಮೇಲೆ ಷೆಲ್‌ಗಳನ್ನು ಹಾರಿಸುವಷ್ಟು ಹತ್ತಿರಕ್ಕೆ ಬಂದಿಲ್ಲ ಕೈಗಾರಿಕೆ ಮತ್ತು ನೌಕಾ ಸೌಕರ್ಯದ ಕಾರಣಗಳಿಗಾಗಿ ಲೆನಿನ್‌ಗ್ರಾಡನ್ನು ರಕ್ಷಿಸಿಕೊಳ್ಳುವುದು ಅಗತ್ಯವಾಗಿದೆ. ಸಂಗ್ರಾಮವನ್ನು ಫಲಪ್ರದವಾಗಿ ಮುಂದುವರಿಸಲು ಸಹಕಾರಿಯಾಗುವುದಾದರೆ ಮಾತ್ರ ರಷ್ಯನರು ಅಲ್ಲಿಂದ ಹಿಮ್ಮೆಟ್ಟುವರು ಲೆನಿನ್‌ಗ್ರಾಡು ದೀರ್ಘಕಾಲ ಹೊಡೆದಾಡಲು ಸರ್ವಸಿದ್ಧತೆಗಳನ್ನೂ ಮಾಡಿಕೊಳ್ಳುತ್ತಿದೆ.

ಇರಾನಿನಲ್ಲಿ ಜರ್ಮನರ ಕಳವಳ

ಈಗ ಇರಾನಿನಲ್ಲಿರುವ ಜರ್ಮನರಿಗೆ ತಮ್ಮ ಗತಿ ಏನಾಗುವುದೋ ಎಂದು ಕಳವಳವುಂಟಾಗಿದೆ ಅನೇಕ ನಾಜಿಗಳನ್ನು ಜರ್ಮನ್ ಸಚಿವರು ಈಗ ಹೊರಗೆ ಬಿಟ್ಟಿದ್ದಾರೆ ಟೆಹರಾನಿನ ಹೊರಗಡೆ ಕೆಲವು ಮೈಲಿ ದೂರದಲ್ಲಿರುವ ಜರ್ಮನರ ಬೇಸಿಗೆ ವಿಹಾರಸ್ಥಾನದಲ್ಲಿ 300 ಮಂದಿ ನಾಜಿಗಳಿದ್ದಾರೆ. ಅವರು ಶಸ್ತ್ರಗಳನ್ನಿಟ್ಟುಕೊಂಡಿರುವರೆಂದೂ ಕಂದಕಗಳನ್ನು ಅಗೆದು, ಹೊಡೆದಾಟಕ್ಕೆ ಸಿದ್ಧರಾಗಿದ್ದಾರೆಂದೂ ತಿಳಿಸಲಾಗಿದೆ

ನಾರ್ವೆಯಲ್ಲಿ ಜರ್ಮನರ ಕ್ರೂರಕೃತ್ಯ

ನಾರ್ವೆಯಲ್ಲಿ ಟ್ರೇಡ್ ಯೂನಿಯನ್ ಸಂಸ್ಥೆಗಳ ವಕೀಲರಾದ ವಿಗ್ಗೋಹಾನ್‌ಸ್ಟೀನ್‌ರವರು "ಕೋರ್ಟ್ ಮಾರ್ಷಲ್" ವಿಚಾರಣೆಗೆ ಗುರಿಪಡಿಸಲ್ಪಟ್ಟಿದ್ದರು ಅವರೂ ಮತ್ತು ಇತರ 6 ಮಂದಿ ಮುಖಂಡರೂ ನಾರ್ವೆಯಲ್ಲಿ ಮುಷ್ಕರವನ್ನು ಏರ್ಪಡಿಸುವದಕ್ಕೆ ಪ್ರಯತ್ನಿಸುತ್ತಿದ್ದರೆಂದು ಆಪಾದನೆ ಹೊರಿಸಿ ಮರಣದಂಡನೆಯನ್ನು ವಿಧಿಸಿ ಗುಂಡಿನಿಂದ ಹೊಡೆದು ಕೊಂದುಹಾಕಿದರು. ಇನ್ನೊಬ್ಬ ಕೂಲಿಗಾರ ಮುಖಂಡರಾದ ಶ್ರೀವೀಡ್‌ಸ್ಟ್ರಂ ಎಂಬವರನ್ನು ಗಲ್ಲಿಗೇರಿಸಿದರೆಂದೂ ಇನ್ನೊಬ್ಬರಿಗೆ ಆಜೀವ ಶಿಕ್ಷೆ ವಿಧಿಸಿರುವರೆಂದೂ ತಿಳಿದುಬರುತ್ತದೆ.

ರಷ್ಯ ರಣರಂಗ

ರಷ್ಯದ ಯುದ್ಧರಂಗದ ಎಲ್ಲ ಕಡೆಯೂ ಉಗ್ರ ಕದನಗಳಾಗುತ್ತಿವೆ. ಮಧ್ಯರಣರಂಗದಲ್ಲಿ ಮಾರ್ಷಲ್ ಟಿಮೋಷಿಂಕೋರವರ ಸೈನ್ಯಗಳು ಮೂರು ಕಡೆ ಉಗ್ರವಾಗಿ ಪ್ರತಿಭಟಿಸಿ ಮುಂದೆ ನುಗ್ಗಿರುವುದಾಗಿಯೂ, ಸ್ಮೊಲೆನ್‌ಸ್ಕ ನಗರದ ಈಶಾನ್ಯ ದಿಕ್ಕಿನಲ್ಲಿ 40 ಮೈಲಿಗಳಾಚೆ ಇರುವ 200 ಮೈಲು ದೂರದಲ್ಲಿ 4 ಕಡೆ ಉಗ್ರ ಪ್ರತಿಭಟನೆಗಳು ನಡೆಯುತ್ತಿರುವದಾಗಿಯೂ, ರಷ್ಯನರು ಎಲ್ನಿಯ ಎಂಬ ಊರನ್ನು ಹಿಡಿದಿರುವರೆಂದೂ ಅಲ್ಲಿರುವ ನದಿಯಿಂದ ಆಚೆಗೆ ಜರ್ಮನರು ಹಿಮ್ಮೆಟ್ಟುವಲ್ಲಿ 4000 ಜರ್ಮನರು ನೀರಿನಲ್ಲಿ ಮುಳುಗಿ ಪ್ರಾಣಬಿಟ್ಟರೆಂದೂ, 15 ಟ್ಯಾಂಕುಗಳೂ 50 ವಿಮಾನಗಳೂ ನಾಶವಾದುವೆಂದೂ ಹೇಳಲಾಗಿದೆ.

ಹಗಲಲ್ಲೇ ಜರ್ಮನಿ ಮೇಲೆ ಮುತ್ತಿಗೆ ಹಾಕಬಹುದು

ಅಮೇರಿಕೆಯಲ್ಲಿ ತಯಾರಾದ ಹಾರಾಡುವ ಕೋಟೆಯೆಂದು ಕರೆಯಲ್ಪಡುವ ರಾಕ್ಷಸ ವಿಮಾನಗಳು 00 ಬ್ರಿಟನ್ನಿಗೆ ಬರುವುವಾಗಿವೆ. ಕೆಲವು ತಿಂಗಳಿಂದ ಬಾಂಭರ್ ವಿಮಾನಗಳು ಏಕಪ್ರಕಾರವಾಗಿ ಅಟ್ಲಾಂಟಿಕ್ ಸಾಗರವನ್ನು ದಾಟಿ ಬ್ರಿಟನ್ನಿಗೆ ಬರುತ್ತಿವೆ ಈ ಬಗೆಯ "ಹಾರಾಡುವ ಕೋಟೆ"ಗಳು ತೃಪ್ತಿಕರರೀತಿಯಲ್ಲಿ ಕೆಲಸ ಮಾಡುವುವೆಂದು ವರದಿಯಾಗಿರುವುದರಿಂದ ಅಮೇರಿಕವು ಅವುಗಳನ್ನು ನಿರ್ಮಿಸುವುದರಲ್ಲಿ ಕೊಂಚವೂ ಕಾಲವಿಳಂಬ ಮಾಡುವುದಿಲ್ಲ ಈ ಬಗೆಯ ವಿಮಾನಗಳನ್ನು ಒಟ್ಟೊಟ್ಟಿಗೆ ತಯಾರಿಸುವ ಉದ್ದೇಶದಲ್ಲಿ ಅಮೇರಿಕದ ನಾಲ್ಕು ಪ್ರಮುಖ ವಿಮಾನ ಕಾರ್ಖಾನೆಗಳವರು ಸಹಕರಿಸಲಿದ್ದಾರೆ. ಈ ಬಲಯುತ ವಿಮಾನಗಳು ಅಧಿಕ ಸಂಖ್ಯೆಯಲ್ಲಿ ಬ್ರಿಟನ್ನಿಗೆ ಬಂದರೆ ಜರ್ಮನಿಯ ಮೇಲೆ ಹಗಲಲ್ಲೇ ಬಾಂಬು ಮುತ್ತಿಗೆ ನಡೆಸಲು ಸಾಧ್ಯವಾಗುತ್ತದೆ

ಬರ್ಲಿನ್‌ನಗರಕ್ಕೆ ಅಪಾರನಷ್ಟ

ಕಳೆದ 7ನೆಯ ತಾರೀಖು ರಾತ್ರಿ ಬ್ರಿಟಿಷ್ ಬಾಂಬರುಗಳ ಬಲಯುತ ಪಡೆಯು ಬರ್ಲಿನ್ ಮೇಲೆ ಉಗ್ರವಾದ ಮುತ್ತಿಗೆ ನಡೆಸಿತು ಬೆಳದಿಂಗಳು ಚೆನ್ನಾಗಿತ್ತು ಉಗ್ರವಾಗಿ ಸಿಡಿಯುವ ಮತ್ತು ಬೆಂಕಿ ಹತ್ತಿಸುವ ಅನೇಕ ಬಾಂಬುಗಳನ್ನು ಹಾಕಲಾಯಿತು ನೂರಾರು ವಿಮಾನಗಳು ಇದರಲ್ಲಿ ಭಾಗವಹಿಸಿದ್ದವು ಬ್ರಿಟನ್ನಿನ ಅತ್ಯಂತ ಬಲಯುತವಾದ ಬಾಂಬರುಗಳು ಇದುವರೆಗೆ ಬರ್ಲಿನ್ನಿನ ಮೇಲೆ ಹಾಕದೆ ಇದ್ದಷ್ಟು ಭಾರವಾದ ಬಾಂಬುಗಳನ್ನು ಸುರಿಸಿದವು ಅರ್ಧರಾತ್ರಿಯಿಂದ ಹಿಡಿದು ಬೆಳಗಿನಜಾವದವರೆಗೆ ಮುತ್ತಿಗೆ ನಡೆಯಿತು. ನಗರದಲ್ಲಿ ಅನೇಕಕಡೆ ಬೆಂಕಿ ಹತ್ತಿಕೊಂಡಿತು ನಗರದ ಮಧ್ಯೆ ಒಂದುಕಡೆ ಭಯಂಕರವಾಗಿ ಬೆಂಕಿ ಹತ್ತಿಕೊಂಡುದರಿಂದ ಬ್ರಿಟಿಷ್ ಬಾಂಬರುಗಳಿಗೆ ಬಹಳ ಅನುಕೂಲವಾಯಿತು ಪ್ರಮುಖ ರೈಲ್ವೆಸ್ಟೇಷನ್ ಸುತ್ತಮುತ್ತ ಅನೇಕ ಬಾಂಬುಗಳು ಸಿಡಿದವು ಹಿಂತಿರುಗುವಾಗ ಬಹಳ ದೂರದವರೆಗೆ ಬೆಂಕಿಯು ಕಾಣಬರುತ್ತಿತ್ತು

ಇರಾನ್ ಸ್ಥಿತಿ

ಭಾರತೀಯ ಸೈನಿಕರು ಸುಲ್ತಾನಾಬಾದ್ ಪ್ರವೇಶಿಸಿದ್ದರಿಂದ ಅತ್ಯಂತ ಮುಖ್ಯವಾದ ಎಣ್ಣೆಗಣಿಗಳು ಬ್ರಿಟನರ ಹತೋಟಿಗೆ ಬಂದಂತಾಯಿತು ಸುಲ್ತಾನಾಬಾದ್ ಎಂಬುದು ಟ್ರಾನ್ಸ್ ಪರ್ಶಿಯನ್ ರೈಲ್ವೆ ಮಾರ್ಗದಲ್ಲಿದೆ. ಕ್ಯಾಸ್ಪಿಯನ್ ಸಮುದ್ರದಿಂದ ಪರ್ಶಿಯನ್ ಜಲಸಂಧಿಗೆ ಹೋಗುವ ಮಾರ್ಗವನ್ನು ಹತೋಟಿಯಲ್ಲಿಡಲು ಇದರಿಂದ ಬಹಳ ಅನುಕೂಲವಾಗಿದೆ

ಬ್ರಿಟಿಷ್ ಮತ್ತು ಸೋವಿಯೆಟ್ ಷರತ್ತುಗಳನ್ನು ಪ್ರಕಟಿಸುವ ಕಾರ್ಯವನ್ನು ತಡಮಾಡುತ್ತಿರುವುದರಿಂದ ಇರಾನಿನಲ್ಲಿ ಕೊಂಚ ಕಳವಳವುಂಟಾಗಿದೆ ಬ್ರಿಟಿಷರು ಇರಾನಿಗೆ ಕಾಲಿಟ್ಟಾಗ ಅಲ್ಲಿಯ ಜನರಲ್ಲಿ ಬಹಳಮಂದಿ ಅಭೂತಪೂರ್ವವಾದ ಸ್ವಾಗತ ನೀಡಿದರು ಆಡಳಿತದಲ್ಲಿ ಹೆಚ್ಚಿನ ಸುಧಾರಣೆಗಳಾದಾವೆಂಬ ನಿರೀಕ್ಷೆಯೇ ಇದಕ್ಕೆ ಕಾರಣ ಸುಧಾರಣೆಗಳನ್ನು ಆಚರಣೆಗೆ ತರುವ ಭಾರ ಇರಾನಿಗರ ಮೇಲೆಯೇ ಬಿದ್ದಿದೆ ಆದರೆ, ಈಗಿನ ಕಷ್ಟ ಪರಿಸ್ಥಿತಿಯಲ್ಲಿ ಇರಾನಿಗರು ಆ ಕಾರ್ಯ ನಡೆಸುವುದು ಕಷ್ಟ ಬ್ರಿಟಿಷ್ ಮತ್ತು ರಷ್ಯಾ ಷರತ್ತುಗಳ ಫಲವಾಗಿ ಸುಧಾರಣೆಗಳಿಗೆ ಅವಕಾಶವಾಗುವುದೆಂದು ನಂಬಲಾಗಿದೆ ಷರತ್ತುಗಳನ್ನು ಪ್ರಕಟಿಸುವುದು ಸಾವಕಾಶವಾದದರಿಂದ ಜರ್ಮನರು ಕೊಂಚ ಧೈರ್ಯದಿಂದ ಬೀದಿಗೆ ಬರುವಂತಾಗಿದೆ

ದಸರಾ ಮಹೋತ್ಸವ

ಈ ತಿಂಗಳು ತಾ|| 22 ನೇ ಸೋಮವಾರದಿಂದ ನವರಾತ್ರಮಹೋತ್ಸವವು ರಾಜಧಾನಿಯಲ್ಲಿ ವೈಭವದಿಂದ ನಡೆಯುವುದಾಗಿದೆ ಅದಕ್ಕಾಗಿ ನಗರಶೃಂಗಾರಾದಿ ಸಮಸ್ತ ಕಾರ್ಯಗಳೂ ಜರುಗುತ್ತಲಿವೆ ಈ ಉತ್ಸವದ ದಿನಗಳಲ್ಲಿ ಅರಮನೆಯಲ್ಲಿ ನಡೆಯುವ ಕಾರ್ಯಕ್ರಮವು ಈ ಮುಂದೆ ಹೇಳಿದಂತಿರುವುದು

ಸೆಪ್ಟೆಂಬರ್ ತಾ|| 22 ನೇ ಸೋಮವಾರ ಪ್ರಾತಃಕಾಲ 9 10 ಘಂಟೆಗೆ ಶ್ರೀಮನ್ಮಹಾರಾಜರವರು ದರ್ಬಾರ್ ಹಾಲಿಗೆ ದಯಮಾಡಿಸಿ 9 30 ಗಂಟೆಗೆ ಸಿಂಹಾಸನಾರೋಹಣವನ್ನು ಮಾಡುತ್ತಾರೆ ರಾಜಕುಮಾರರಿಂದಲೂ, ದಿವಾನರಿಂದಲೂ, ಸರ್ದಾರ್ ಎಂ ಲಕ್ಷ್ಮೀಕಾಂತ ರಾಜೆಅರಸಿನವರಿಂದಲೂ, ಹುಜೂರ್ ಸಕ್ರಿಟರಿಯವರಿಂದಲೂ, ಮಂತ್ರಿಗಳಿಂದಲೂ ಮತ್ತು ಕೆಲವು ಅರಸುಗಳಿಂದಲೂ ನಜರ್ ನಡೆಯುತ್ತದೆ ಸಾಯಂಕಾಲ 6 ಘಂಟೆಗೆ ಪಟ್ಟದ ಆನೆಯೂ ಪಟ್ಟದ ಕುದುರೆಯೂ ಸೋಮೇಶ್ವರ ದೇವಸ್ಥಾನಕ್ಕೆ ಬಿಜಮಾಡುವುವು. 7 ಘಂಟೆಗೆ ದರ್ಬಾರ್ ಸಿವಿಲ್ ಆಫೀಸರುಗಳಿಂದಲೂ ಅರಸುಗಳಿಂದಲೂ ನಜರ್ ನಡೆಯುವುದು.

ಸೆಪ್ಟೆಂಬರ್ ತಾ|| 23 ನೇ ಮಂಗಳವಾರದಿಂದ ತಾ|| 28 ನೇ ಭಾನುವಾರದವರೆಗೆ ಪ್ರಾತಃಕಾಲ 8 ಘಂಟೆಗೆ ಪಟ್ಟದ ಆನೆಯೂ ಪಟ್ಟದ ಕುದುರೆಯೂ ಸೋಮೇಶ್ವರ ದೇವಸ್ಥಾನಕ್ಕೆ ಬಿಜಮಾಡುವುವು ಸಾಯಂಕಾಲ 6 ಘಂಟೆಗೆ ಪಟ್ಟದ ಆನೆಯೂ ಪಟ್ಟದ ಕುದುರೆಯೂ ಸೋಮೇಶ್ವರ ದೇವಸ್ಥಾನಕ್ಕೆ ಬಿಜಮಾಡುವುವು. 7 ಘಂಟೆಗೆ ದರ್ಬಾರ್

ಸೆಪ್ಟೆಂಬರ್ ತಾ|| 29 ನೇ ಸೋಮವಾರ ಪ್ರಾತಃಕಾಲ 5 10 ಘಂಟೆಗೆ ಪಟ್ಟದ ಆನೆ, ಪಟ್ಟದ ಕುದುರೆ ಮತ್ತು ಆಯುಧದ ಮೆರವಣಿಗೆ ಸೋಮೇಶ್ವರದೇವಸ್ಥಾನಕ್ಕೆ ಹೋಗಿ ಅರಮನೆಗೆ 6-10 ಘಂಟೆಗೆ ಹಿಂದಕ್ಕೆ ಬಿಜಮಾಡುವುವು ಅನಂತರ ಆಯುಧ ಗಜಾಶ್ವಾದಿಗಳ ಪೂಜೆ ಬೆಳೆಯುವುದು ಸಾಯಂಕಾಲ 7 ಘಂಟೆಗೆ ಐರೋಪ್ಯ ಅತಿಥಿಗಳಿಗಾಗಿ ದರ್ಬಾರ್ ನಡೆಯುವುದು

ಸೆಪ್ಟೆಂಬರ್ ತಾ|| 30ನೇ ಮಂಗಳವಾರ ಪ್ರಾತಃಕಾಲ ಪೂಜೆ ಬೆಳೆದನಂತರ 9 25 ಘಂಟೆಗೆ ಆಯುಧ, ಗಜಾಶ್ವಾದಿಗಳು ಬನ್ನೀಮಂಟಪಕ್ಕೆ ಬಿಜಮಾಡುವುವು. ಅನಂತರ ಅರಮನೆಯ ಮುಂದೆ ಜಟ್ಟೀ ಕಾಳಗ ನಡೆಯುವುದು ಸಾಯಂಕಾಲ ನಾಲ್ಕುಘಂಟೆಗೆ ಜಂಬೂ ಸವಾರಿ

ಅಕ್ಟೋಬರ್ ತಾ|| 1 ನೇ ಬುಧವಾರ ಮತ್ತು ತಾ|| 2 ನೇ ಗುರುವಾರ ಸಾಯಂಕಾಲ 7 30 ಗಂಟೆಗೆ ಅರಮನೆ ಕಲ್ಯಾಣ ಮಂಟಪದಲ್ಲಿ ದರ್ಬಾರ್ ನಡೆಯುವುದು. ಉಭಯ ದಿನಗಳಲ್ಲೂ ಪ್ರಜಾಪ್ರತಿನಿಧಿ ಸಭೆಯ ಸದಸ್ಯರು ಶ್ರೀಮನ್ಮಹಾರಾಜರವರಿಗೆ ನಜರ್ ಒಪ್ಪಿಸುವರು.

ದಸರಾ ವಸ್ತುಪ್ರದರ್ಶನ

ಮೈಸೂರು ನಗರದಲ್ಲಿ ನವರಾತ್ರಿಯ ಮಹೋತ್ಸವದ ಸಮಯದಲ್ಲಿ ಪ್ರತಿವರ್ಷವೂ ನಡೆಯುತ್ತಲಿರುವ ವಸ್ತುಪ್ರದರ್ಶನವು ಈ ವರ್ಷ ಇದೇ ಮಾಹೆ ತಾ|| 22 ನೇ ಸೋಮವಾರದಿಂದ ಪ್ರಾರಂಭವಾಗಿ ಎರಡು ವಾರಗಳವರೆಗೆ ನಡೆಯುವಂತೆ ಏರ್ಪಾಡಾಗಿದೆ ಈ ಪ್ರದರ್ಶನಕ್ಕಾಗಿ ಸರ್ವಸಿದ್ಧತೆಗಳಾಗುತ್ತಿವೆ. ಈ ವರ್ಷದ ವಸ್ತುಪ್ರದರ್ಶನದಲ್ಲಿ ಮೈಸೂರು ಸಂಸ್ಥಾನದಲ್ಲಿ ಉತ್ಪನ್ನವಾದ ಪದಾರ್ಥಗಳ ಪ್ರದರ್ಶನವೇ ಪ್ರಧಾನವಾಗಿರುವುದೆಂದು ಹೇಳಲಾಗಿದೆ.

ವ್ಯವಸಾಯದ ಇಲಾಖೆಯವರು ರೈತರಿಗೆ ಅತ್ಯುಪಯುಕ್ತವೂ ಬೋಧನೀಯವೂ ಆದ ಪ್ರದರ್ಶನವನ್ನು ಸಿದ್ಧಪಡಿಸುತ್ತಲಿದ್ದಾರೆ

ಮೈಸೂರು ಸರ್ಕಾರದ ಕೈಗಾರಿಕೆ ಶಾಖೆಗಳವರು ನಮ್ಮ ಸಂಸ್ಥಾನದಲ್ಲಿ ನಡೆಯುತ್ತಿರುವ ಸಮಸ್ತ ಕೈಗಾರಿಕೆಗಳ ಪರಿಚಯವು ಆಮೂಲಾಗ್ರವಾಗಿ ಪ್ರಜೆಗಳಿಗೆ ಆಗುವಂತೆ ತಮ್ಮ ವಸ್ತುಗಳನ್ನು ಪ್ರದರ್ಶಿಸುವರು.

ಯುದ್ಧೋಪಯುಕ್ತವಾದ ಸರಕುಗಳು ಮೈಸೂರಿನಲ್ಲಿ ಏನೇನು ತಯಾರಾಗುತ್ತಿವೆ, ಅವು ಯಾವ ರೂಪದಲ್ಲಿವೆ ಎಂಬುದನ್ನು ಪ್ರದರ್ಶಿಸುವ ಏರ್ಪಾಡಾಗಿದೆ. ಈ ಪ್ರದರ್ಶನಕ್ಕೆ ಹಿಂದೂಸ್ತಾನದಲ್ಲಿ ತಯಾರಾಗುತ್ತಿರುವ ಯುದ್ಧೋಪಯುಕ್ತವಾದ ಹಲವು ಸರಕುಗಳ ಮಾದರಿಗಳನ್ನು ಇಂಡಿಯಾ ಸರ್ಕಾರದವರು ಕಳುಹಿಸಿಕೊಡುವವರಾಗಿದ್ದಾರೆ

ಅರಣ್ಯಶಾಖೆಯವರು ಔಷಧಕ್ಕೆ ಬೇಕಾದ ಮೂಲಿಕೆಗಳೆಲ್ಲವನ್ನೂ ಪ್ರದರ್ಶಿಸುವರು ಅಲ್ಲದೆ ಅವುಗಳನ್ನು ಯಾವ ರೋಗಗಳ ನಿವಾರಣೆಗೆ ಸೇವಿಸಬೇಕೆಂಬುದನ್ನೂ ತಿಳಿಸುವ ಏರ್ಪಾಡು ಮಾಡಿದ್ದಾರೆ

ಸ್ವೀಕಾರ.

ಹುಬ್ಬಳ್ಳಿಯಲ್ಲಿರುವ ದೇವನೂರು ಹಿರೇಮಠದ ಹೆಡ್‌ಮಾಸ್ತರರ ಪುತ್ರಿಯವರಾದ ಸೌ|| ಪಾರ್ವತವ್ವನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ ಯು ಹುಬ್ಬಳ್ಳಿ ಹಿರಿಯ ಮಠದ ವೇ|| ಸೋಮನಾಥಯ್ಯನವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ.

[೩ ನೆಯ ಪುಟದಿಂದ ಮುಂದುವರಿದುದು]

ಹೆಚ್ಚಿನದಲ್ಲವೆಂದು ತಿಳಿದು ತಮ್ಮ ಶರೀರದ ಕಡೆಗೆ ಲಕ್ಷ್ಯಕೊಡದೆ 'ಗುರುಪ್ರೇಮಾಂತಃಕರುಣಿಯರಾದ ಈ ಮಾತೃಗಳೂ ಪಾದವಲ್ಲಿ ಏನೂ ಹಾಕಿಕೊಳ್ಳದೆ ಗುರುವನ್ನು ಹಿಂಬಾಲಿಸಿ ಗುರುಯಾತ್ರೆಯನ್ನು ನಿರ್ವಿಘ್ನವಾಗಿ ಮಾಡಿಕೊಂಡು ಬಂದರು ಪ್ರತಿವರ್ಷವೂ ಶ್ರಾವಣ ಮಾಸದ ಶ್ರೀಗಳ ಅನುಷ್ಠಾನ ಕಾಲದಲ್ಲಿ ಈ ಜನನಿಯರು ಗುರುಪಾದಕ್ಕೆ ಯಾವ ಪದಾರ್ಥಗಳನ್ನು ಅರ್ಪಿಸುವರೋ ಅದೇ ಪದಾರ್ಥಗಳನ್ನೇ ವರ್ಷಪರ್ಯಂತರವೂ ಸೇವಿಸುವರು ಬಾಲತಪಸ್ವಿಗಳಿಗೆ ಕಿಂಚಿತ್ ಕಷ್ಟವಾದರೆ ಈ ಜನನಿಯರ ನೇತ್ರಗಳಲ್ಲಿ ಗಂಗಾ ಯಮುನ ನದಿಗಳೇ ಹರಿಯತೊಡಗುತ್ತವೆ ಒಂದು ದಿನ ಶ್ರೀಗಳು ಪ್ರಸಾದವನ್ನು ಸ್ವೀಕರಿಸುತ್ತಿರುವಾಗ್ಗೆ ರತ್ನಾದೇವಿಯವರು ಅತ್ಯಂತ ಪ್ರೇಮದಿಂದ ಪ್ರಸಾದವನ್ನು ಪುನ ಒಲುಮೆಯಿಂದ ನೀಡಲು 'ಅತಿಸರ್ವತ್ರವರ್ಜಯೇತ್" ಎನ್ನುವ ಮಾತಿನಂತೆ ಶ್ರೀಗಳು ಪ್ರಸಾದವನ್ನು ಬಿಡಲು ಅತ್ಯಂತ ದುಃಖದಿಂದ ಈ ಪಾಪಿಯು ಕೈಯಲ್ಲಿನೇ ಪ್ರಸಾದವನ್ನು ಹೆಚ್ಚು ಮಾಡಿ ಸದ್ಗುರುವನ್ನು ಊಟಮಾಡದೇ ಬಿಡಿಸಿದ್ದು ಎಂದು ಕಲ್ಲಿನಮೇಲೆ ಕೈಯನ್ನಿಟ್ಟು ಮತ್ತೊಂದು ಕಲ್ಲಿನಿಂದ ಹೊಡೆದುಕೊಂಡು ಈ ಮಾತೆಯ ಭಕ್ತಿಯು ಮಲ್ಲಮ್ಮನ ಭಕ್ತಿಯನ್ನು ಮೀರಿಸಿದ್ದಾಗಿದೆ "ಅಹಹಾ ಎಂತಹ ಗುರುಭಕ್ತಿ? ಇವರ ಹೃದಯದಲ್ಲಿರುವ ಗುರುಸೇವೆಯು ಎಷ್ಟು ಆಳವಾದುದು ಈ ಮಾತೃದ್ವಯದ ಈ ಗುರುಭಕ್ತಿಯನ್ನು ನೋಡಿದರೆ ಇವರಿಂದ ಸೇವಿಸಿಕೊಳ್ಳುವ ಗುರುವು ಧನ್ಯನೋ ಇಲ್ಲವೇ ತಪಸ್ವಿಯನ್ನು ಸೇವಿಸುತ್ತಿರುವ ಮಾತೆಯರು ಧನ್ಯರೋ ತಿಳಿಯದಾಗಿದೆ ಸೌ॥ ಭಾಗೀರಥೀದೇವಿಯವರು ನಮ್ಮ ವೀರಶೈವ ಸಮಾಜಾಭಿವೃದ್ಧಿಗಾಗಿ ಎಷ್ಟು ಕಷ್ಟಪಡುತ್ತಿರುವರೆಂಬುದ ಸರ್ವರಿಗೂ ತಿಳಿದ ವಿಷಯವಾಗಿದೆ ಇವರ ವಿದ್ವತ್ತು, ಸರಳವಾದ ಕವಿತಾ ಶೈಲಿ ನಿರ್ಮಲವಾದ ಆಚಾರ್ಯರ ಸೇವೆ, ನೈಜವಾದ ಗುರುಭಕ್ತಿ ಸಹನ ಶೀಲತಾ ಶಾಂತ ಸ್ವಭಾವ ಧರ್ಮಾಭಿಮಾನ, ಸುಲಭವಾದ ಭಾಷಣಶೈಲಿ ಇವೇ ಮೊದಲಾದ ಈ ಮಹಿಳಾಮಣಿಯಳ ಶುಭ್ರಕೀರ್ತಿಯು ಲೋಕಪ್ರಸಿದ್ಧವೇ ಇದೆ ಈ ತಾಯಿಯು ನಿಸ್ವಾರ್ಥಿಯಾಗಿ ಸಮಾಜಸೇವೆ, ಗುರುಸೇವೆ ಮಾಡಿರುವುದನ್ನು ನೋಡಿದರೆ ಪುರುಷರೂ ಸಹ ಮಾಗಿಲ್ಲವೆಂದು ಹೇಳಿದರ ಅತಿಶಯೋಕ್ತಿಯಾಗಲಾರದು ಈ ಮಾತೃಸೇವೆಯು 'ನಭೂತೋ ನಭವಿಷ್ಯತಿ ಎನ್ನುವಂತೆ ಇರುತ್ತದೆ ಗುರುವಿನ ಕಷ್ಟ ಸುಖಗಳಲ್ಲಿ ಭಾಗಿಗಳಾದ ಮಾತೃದ್ವಯದ ನಿಶ್ಚಲವಾದ ಭಕ್ತಿ, ಅತುಲವಾದ ಗುರುಸೇವೆ, ಅಗಾಧವಾದ ಗುರುಪ್ರೇಮ, ಇವೆಲ್ಲವನ್ನು ಇಷ್ಟೇ ಎಂದು ಗಣಿಸಲಿಕ್ಕಾಗುವುದಿಲ್ಲ ಮಾತೆಯರೇ, ನೀವು ಯಾವಾಗಲೂ ಈ ಪ್ರಕಾರವಾಗಿ ಗುರುವಿನ ಕಷ್ಟ ಸುಖಗಳಲ್ಲಿ ಭಾಗಿಯಾಗಿರುವಿರೆಂದಮೇಲೆ ನಿಮ್ಮ ಕಷ್ಟ ಸುಖಗಳಲ್ಲಿ ಪರಮಾತ್ಮನು ಭಾಗಿಯಾಗಿಯೇ ಇರುವನು ನೀವು ಈ ಜನ್ಮವನ್ನು ತಾಳಿ ಗುರುಸೇವೆಯಿಂದ ಧನ್ಯರಾಗಿರುವಿರಿ ಅಹಹಾ ಗುರುವಿನ ಸುಖವನ್ನು ಯಾವಾಗಲೂ ಅಪೇಕ್ಷಿಸುವ ಈ ಪ್ರಕಾರದ ಮಾತೆಯರು ಜಗತ್ತಿನಲ್ಲಿ ದುರ್ಲಭವೆಂದೇ ಹೇಳಬೇಕಾಗಿದೆ ಇವರ ಕಾರ್ಯವನ್ನು ನೋಡಿದರೆ ಧರ್ಮಮಾತೆಯೇನಾದರೂ ಶರೀರದ್ವಯವನ್ನು ಧರಿಸಿ ಗುರುನಿಂದಕರಿಗೆ ಗುರುಸೇವೆಯ ಮಹತ್ವವನ್ನು ಪ್ರಕಟಿಸಲು ಅವತಾರವನ್ನೆತ್ತಿರುವಳೋ ಏನೋ ಎನ್ನುವಂತೆ ತೋರುತ್ತದೆ ಈಗ ಶ್ರೀ ಬಾಲತಪಸ್ವಿಗಳು ಇಲ್ಲಿಯ ಮನ್ಮಹಸ್ವಾಮಿಯ ಮಂದಿರದಲ್ಲಿ ನಿರಶನವ್ರತಿಗಳಾಗಿ ಒಂದು ವರ್ಷಪರ್ಯಂತ ಅನುಷ್ಠಾನಕ್ಕೆ ಕುಳಿತಿರುವ ವಿಷಯವು ಸರ್ವರಿಗೂ ವಿದಿತವಿದೆ ಇಂತಹ ಸಮಯದಲ್ಲಿ ಈ ಉಭಯಮಾತೃಗಳೂ ಸಹ ನಿರಶನವ್ರತಿಗಳಾಗಿ ಅಲ್ಪ ಕ್ಷೀರಾಹಾರವನ್ನು ಸೇವಿಸುತ್ತಿರುವರು. ಇವರು ಸರ್ವ ಗೃಹಕೃತ್ಯಗಳನ್ನು ಪೂರೈಸಿಕೊಂಡು ಅಲ್ಪ ಕ್ಷೀರಹಾರಿಗಳಾಗಿ ಪ್ರತಿನಿತ್ಯದಲ್ಲೂ ಗುರುಸೇವೆಯನ್ನು ಬೇಸರವಿಲ್ಲದೆ ಮಾಡಿದರೂ ಸಹ ಇವರ ಶರೀರವು ತೇಜೋಯುಕ್ತವಾಗಿದೆ ನಿಜವಾಗಿಯೂ ಇದು ಗುರುಸೇವೆಯ ಪ್ರಭಾವವಲ್ಲದೆ ಬೇರೆಯಲ್ಲ ಈ ಮಾತೆಯರು ಗುರು ಸೇವೆಯಲ್ಲಿ ಆದರ್ಶರಾಗಿರುವರು ಇವರಂತೆ ಲಕ್ಷ್ಮೀಬಾಯಿ ಗಾಬಣೆ ಮತ್ತು ಸೌ॥ ಗಂಗಾಬಾಯಿ ಪಾಟೀಲ ಇವರೂ ಸಹ ಅಲ್ಪ ಕ್ಷೀರಾಹಾರಿಗಳಾಗಿ ಗುರು ಸೇವೆಯನ್ನು ಸಲ್ಲಿಸುತ್ತಿರುವರಾಗಿ ಅನೇಕ ಮಾತೃಗಳೂ ಕೂಡ ಕೇವಲ ಕ್ಷೀರಾಹಾರಿಗಳಾಗಿರುವದನ್ನು ನೋಡಿದರೆ ಇದೊಂದು ಗುರುಭಕ್ತಿಯನ್ನು ಪ್ರಚಾರ ಮಾಡುವ ಸಂಘವೋ ಏನೋ ಎಂಬುವಹಾಗೆ ತೋರುತ್ತದೆ ಅಸ್ತು ಶ್ರೀ ಜಗದಾಚಾರ್ಯರು ಈ ಎಲ್ಲ ಮಾತೃಗಳಿಗ ಇತೋಪ್ಯತಿಶಯ ಗುರುಭಕ್ತಿಯನ್ನು ದಯಪಾಲಿಸಿ ಕಾಪಾಡಲೆಂದು ಪ್ರಾರ್ಥಿಸುವೆನು

ಗಂಗಾತೀರ್ಥದ ದಿವ್ಯಶಕ್ತಿ ಮತ್ತು ಸ್ವಚ್ಛತೆ.

ಗಂಗಾನದಿಯು ಹಿಮವತ್ಪರ್ವತದಲ್ಲಿ ಗಿರಿಪ್ರಭಾತವೆಂಬ ಸ್ಥಳದಲ್ಲಿ ಉತ್ಪನ್ನವಾಗುವುದು ಆ ಗಿರಿಪ್ರಭಾತವೆಂಬ ಸ್ಥಳವು ಸಮುದ್ರ ಮಟ್ಟಕ್ಕಿಂತ ೧೩೮೦೦ ಅಡಿಗಳ ಎತ್ತರದಲ್ಲಿರುವುದು ಗಂಗಾನದಿಯು ಗೋಮುಖವೆಂಬ ಗವಿಯಿಂದ ಹೊರಗೆ ಬರುವುದು ಈ ಗೋಮುಖವು ಸಮುದ್ರ ಮಟ್ಟಕ್ಕ ಮೇಲೆ ೧೩೫೭೦ ಅಡಿಗಳ ಎತ್ತರದಲ್ಲಿರುವುದು ಇದುವರೆಗೆ ಆ ಗುಹೆಯೊಳಗೆ ಯಾರೂ ಹೋಗಿ ನೋಡಿದುದಿಲ್ಲ ಆದುದರಿಂದ ಗಂಗೆಯ ಉತ್ಪತ್ತಿ ಸ್ಥಾನವನ್ನು ಕುರಿತು ನಿಶ್ಚಯವಾಗಿ ಹೇಳುವುದು ಅಸಾಧ್ಯವೇ! ಇತರ ನದಿಗಳೆಲ್ಲವೂ ಊಟೆಗಳಿಂದ ಉತ್ಪತ್ತಿಯಾಗುವುವು ಗಂಗಾನದಿಯು ಹಾಗಲ್ಲ ಇದು ಪರ್ವತಗಳ ಮಾರ್ಗವಾಗಿ ಬರುವುದು ಇದರ ಅಗಲವು ಅಲ್ಲಲ್ಲಿ ವ್ಯತ್ಯಾಸವಾಗಿರುವುದು ಹರದ್ವಾರದಲ್ಲಿ ಇದರ ಅಗಲವು ಒಂದು ಮೈಲು ಮಾತ್ರವಿರುವುದು ಇದರ ಉತ್ಪತ್ತಿಸ್ಥಾನದಿಂದ ಹರದ್ವಾರಕ್ಕೆ ೧೮೯ ಮೈಲುಗಳಿರುವುವು ಇವೆರಡರ ಮಧ್ಯ ಇರುವ ಪುಣ್ಯಸ್ಥಲಕ್ಕೆ 'ತಪೋವನ'ವೆಂದು ಹೆಸರು ಇಲ್ಲಿಯೇ ಶ್ರೀರಾಮ ಲಕ್ಷ್ಮಣರಿಬ್ಬರೂ ಭಗವಂತನನ್ನು ಪೂಜಿಸಿದರೆಂದು ಹೇಳುವರು ಕಪಿಲಾಚಾರ್ಯರು ಇಲ್ಲಿಯೇ ವಾಸಮಾಡಿದರು ಇಲ್ಲಿಯೇ ಶ್ರೀ ಶಂಕರಾಚಾರ್ಯರು ತಪಸ್ಸನ್ನು ಮಾಡಿ, ಭಗವದನುಗ್ರಹಕ್ಕೆ ಪಾತ್ರರಾದರು ಅಲ್ಲಿಯೇ ಕೆಲವು ಕಾಲಕ್ಕೆ ಹಿಂದೆಯೇ ಶ್ರೀರಾಮತೀರ್ಥರೆಂಬುವರು ಈ ವನದಲ್ಲಿ ಸಂಚರಿಸುತ್ತ, ಭಗವಂತನೊಡನೆ ಸಂಭಾಷಿಸಿದರೆಂದು ಹೇಳುವರು ಹೀಗೆ ಈ ತಪೋವನದ ವಿಷಯವಾಗಿ ಅನೇಕ ವಿಶೇಷಗಳುಂಟು ಆದರೆ ಅವುಗಳನ್ನೆಲ್ಲಾ ಇಲ್ಲಿ ಹೇಳುವುದು ಪ್ರಕೃತೋಚಿತವಲ್ಲ

ಗಂಗಾನದಿಯ ಜನನವನ್ನು ಕುರಿತು ಒಂದು ಪುರಾಣದ ಕಥೆಯುಂಟು ೬೦ ೦೦೦ ಮಂದಿ ಸಗರಪುತ್ರರು ಕಪಿಲಋಷಿಯ ಶಾಪದಿಂದ ಭಸ್ಮವಾದರೆಂದೂ, ಅವರ ವಂಶದಲ್ಲಿ ಹುಟ್ಟಿದ ಭಗೀರಥನೆಂಬ ರಾಜನು ಮಹಾತಪಸ್ಸನ್ನು ಮಾಡಿ ಗಂಗೆಯನ್ನು ಸ್ವರ್ಗದಿಂದ ಭೂಲೋಕಕ್ಕೆ ತಂದನೆಂದೂ, ಶಿವನು ಗಂಗೆಯ ವೇಗವನ್ನು ತಗ್ಗಿಸುವುದಕ್ಕಾಗಿ ಅವಳನ್ನು ತನ್ನ ಜಡೆಯಲ್ಲಿ ಧರಿಸಿಕೊಂಡನೆಂದೂ, ಪುರಾಣದಲ್ಲಿ ಹೇಳಿದೆ

ಇದು ಕೇಳುವವರಿಗೆ ಒಂದು ಕಟ್ಟುಕಥೆಯಂತೆ ತೋರಬಹುದಾದರೂ, ಅನೆಲ್ಲ ವಾಸ್ತವವೆಂದೇ ನಂಬಿಕೆಯಿದೆ ಇದನ್ನು ಕಾಲಕ್ಕೆ ತಕ್ಕಂತೆ ಮಾರ್ಪಡಿಸಿ ಒರೆಯುವರೇ ಹೊರತು ಬೇರೆಯಲ್ಲ

ಗಂಗಾನದಿಯಲ್ಲಿ, ನಮ್ಮ ದೇಶಕ್ಕೆ ಸುಲಭವಾಗಿ ತಿಳಿಯಬರಲಾರದ ಕೆಲವು ಗುಣಗಳುಂಟು ಗಂಗಾನದಿಗೆ ವಿಷಹಾರಕ ಶಕ್ತಿಯುಂಟೆಂದೂ ಹೇಳುವರು ಆ ಗುಣವು ಎಂಥಹದೆಂಬುದು ಮಾತ್ರ ಯಾರಿಗೂ ತಿಳಿಯದು ಆ ಶಕ್ತಿಗ ಯಾರೂ ಯಾವ ಹೆಸರನ್ನೂ ಕೊಟ್ಟಿಲ್ಲ ಈ ಗುಣವೇ ನಮ್ಮ ದೇಹದಲ್ಲಿ ಕಲೆತುಕೊಳ್ಳುವುದು ಇದು ಪರಶಿವನ ಜಡೆ ಮತ್ತು ಫಾಲನೇತ್ರಕ್ಕೆ ಸಂಬಂಧಪಟ್ಟ ಶಕ್ತಿಯೆಂದೂ ಹೇಳಬಹುದು ಇದು ಏನೆಂಬುದನ್ನು ಕುರಿತು ಸರಕಾರದವರೂ, ಪರಿಶೋಧನೆಗಳನ್ನು ಮಾಡುವವರೂ ನಿಜಾಂಶವನ್ನು ಕಂಡುಹಿಡಿಯಬೇಕಾದುದವಶ್ಯಕವು

ಸ್ಪೈಯಿನ್, ಇಟಲಿ ಮುಂತಾದ ವಿದೇಶಗಳಲ್ಲಿ ನ್ಯಾಷನಲ್ ಬೋರ್ಡೆಂಬ ಸಂಘಗಳನ್ನು ಸ್ಥಾಪಿಸಿರುವರು ಈ ಸಂಘವು ಅಲ್ಲಲ್ಲಿ ವಿಮರ್ಶೆಗಳನ್ನೂ, ಪರಿಶೋಧನೆಗಳನ್ನೂ ಮಾಡಿ ಆರೋಗ್ಯಕರವಾದ ತೀರ್ಥಗಳಾವುವೆಂಬುದನ್ನು ಪ್ರಕಟಿಸಿರುವರು ಈಗ ಸ್ಪೈಯಿನ್ ದೇಶವನ್ನು ಕುರಿತು ವಿಚಾರಿಸುವೆವು

ಜೀರ್ಣಾಂಗ ಸಂಬಂಧವಾದ **ರೋಗಗಳಿಗೆ**— ಅಜೀರ್ಣ ದೋಷಗಳಿಗೂ, **ಮತ್ತು ಒಳ್ಳೆಯ ಪೋಷಣೆ**ಯಿಲ್ಲದಿರುವುದರಿಂದುಂಟಾಗುವ **ಕೊರತೆಗಳಿಗೂ** ತಕ್ಕ ತೀರ್ಥಗಳು—ಗೈಪಸ್ಕೋವಾಕ್ಕೆ **ಸೇರಿದ ಸೆಸ್ಟೋನಾ** ಅಲಾವಾ, ವಿನಲ್ಲಿ, ಸೋಬ್ರೋ **ಎಂಬ ನದಿ, ಸಾಂಟಾಂಡರ**ಲ್ಲಿರುವ ಸೊಲಾರೆಸ್ **ಹೊಜ್ನಾಯಾ, ಕಾಟಲೋನಿಯಾ**ದಲ್ಲಿರುವ **ಮೋಡಾರಿಜ್, ಗೈಟಿರಿಜ್, ವೆರಿ,** ಸ್ಪಾ ರೋವಾ, ಗಾಲ್ಡಾಸ್**ಡಿಮಾಲಬೆಲ್ಲಾ,** ವಾಲ್ಸ್ ಗೋನಾ ಮತ್ತು ಸಾ **ಹಿಲಾರಿಯೋ ಮುಂತಾದವು** ವಾಲೆನ್ಸಿಯಾದಲ್ಲಿರುವ **ಹರ್ವಿಡೋರ್‌ಡಿ, ಕಸ್ಟ್ರ** ಟಿಸ್ ಮತ್ತ ಅಂಟೆಸಿಯೆಂಟೆ, **ಜೇಯನ್ನಿನಲ್ಲಿರುವ** ಮರಮೋಲೀಜೋ ಕಾರ್ಡೋಬಾದಲ್ಲಿರುವ **ಲಾಸ್ ವಿ** ವಿಲಾಹರ್ಟ್ ಗ್ರಾನಡಾವಿನಲ್ಲಿರುವ **ಲಾಂಜರ** ಮುಂತಾದ ಪ್ರದೇಶಗಳು

ಮೂತ್ರಕೋಶ ಮತ್ತು ಮೂತ್ರಪಿಂಡ **ಇವು**ಗಳಿಗೆ ಸಂಬಂಧಪಟ್ಟ ವ್ಯಾಧಿಗಳಿಗೆ— ಬರ್ಗೋಸಿನಲ್ಲಿರುವ ಕರ್ಕಾಂಟೆ ಗೈಪಸ್‌ಕೋವಾದಲ್ಲಿರುವ **ಅಲ್ಜೋಲಾ** ನವರೇಯಲ್ಲಿರುವ ಬೆಸಾಯಿ ಮುಂತಾದ **ತೀರ್ಥ**ಗಳು ಉತ್ತಮವಾದುವು

ಶ್ವಾಸಕೋಶದ ವ್ಯಾಧಿಗಳಿಗೆ—**ಹ್ಯೂಯೆಸ್ಕಾ**ವಿನಲ್ಲಿರುವ **ಪಾಂಟಿಕೋಸಾ ಗೈಪಸ್‌ಕೋನಾದಲ್ಲಿರುವ ಅಜೋ**ರಾಗ ಸಾಂಟಾಂಡರಲ್ಲಿರುವ **ಅಂಟಿನೀಡಾ ಮತ್ತು** ಲಿಯೆರ್ಗಾನಿಸ್, ಅಲಾವಾದಲ್ಲಿರುವ **ಜುವಾಜೋ** ಗಲಿಕದಲ್ಲಿರುವ ಕಾಲಡೀಟಸ್ **ಡಿಟಾಯಿ,** ನವರೇಯಲ್ಲಿರುವ **ಬೆಟೆಲು** ಆವಿಲಾದಲ್ಲಿರುವ **ಸ್ಯಾನ್‌ಟೆರೀಸ** ವ ಮರ್ಸಿಯಾದಲ್ಲಿರುವ **ಫಾರ್ಟ್ಯೂನಾ** ಮುಂತ ತೀರ್ಥಗಳಂತೆ ಉಷ್ಣವಾದ **ಮತ್ತು ಗಂಧಕದಿಂ** ಕೂಡಿದ ತೀರ್ಥಗಳುಂಟು **ಅವುಗಳಿಂದ ಆವಿಯನ್ನು** ದೇಹದೊಳಕ್ಕೆ ತೆಗೆದುಕೊಳ್ಳು**ವುದೂ ಉಂಟು**

ಪಾರ್ಶ್ವವಾಯು **ಮತ್ತು ಆರ್ತ್ರೈಟಿಸ್** ವ್ಯಾಧಿಗಳಿಗೆ—ಇವುಗಳಿಗೆ ಅನೇಕವಾದ **ಉಷ್ಣತೀರ್ಥಗಳನ್ನು** ಉಪಯೋಗಿಸುವರು ಎಂದರೆ **ವಿಜ್‌ಕೇಯಾದಲ್ಲಿರುವ ಮಾಲಿನರ್‌ಡಿ** ಕಾರ್ರಾಂಜಾ, **ಸಾಂಟಾಂಡರಿನಲ್ಲಿರುವ** ಕಾಲ್ಡಾಸ್‌ಡಿ, ಬೆಸಾಯಾ, **ಪ್ಯೂಎಂಟೇವೀಸ್**‌ಗೊ ಮತ್ತು ಲಾಹರ್ಮೀಡಾ **ಗಾಲೀಷಿಯಾದಲ್ಲಿರು ಕಲ್ಡಾಸ್‌ಡಿ** ಕಂಟಿಸ್, **ಲ್ಯೂಗೋ ಮತ್ತು ಮಾಲ್ಗಾಸ್** ರಿಯೋಜಾದಲ್ಲಿರುವ ಆರ್ನ**ಡಿಲ್ಲೋ ನವಾರೇಯಲ್ಲಿರು** ಟಿಯರ್ಮಾಸ್, ಫ್ಯಟೆರೋನ್ಯೂವೋ **ಮತ್ತು** ಪ್ಯ ತೋವೈಜೋ ಕಾಟಲೋನಿಯಾದಲ್ಲಿರುವ **ಕಾಲ್ಡಾಸ್** ಡಿಮಾಂಟ್‌ಬ್ಯೈ, ಕಲ್ಡಾಸ್‌ಡಿ ಎಸ್ಟ್ರಾಕ್ **ಟೈಟಸ್** ವ [illegible] ಜರಾಗೋಜಾದಲ್ಲಿರುವ ಅಲ್ಹಾಮಾಡಿ ಅರಗೋನ್ ಜರಾಬ ಕಾಸರಿಸ್‌ನಲ್ಲಿರುವ **ಮಾಂಟಿಮ**ಯರ್, ಸಲಮಾಂಕಾದಲ್ಲಿರುವ **ಲಿಡೀಸ್ಮಾ,** ಪತು ರಿಟೋರ್ಟಿಲ್ಲ ಸಿಡ್ಯೂಡಾಡ್‌ರಿಯ**ಲಿನಲ್ಲಿರುವ ಪ್ಯೂಎ** ಟಿಕಾಲಿಯೆಂಟೆ, ಕ ಸ್ಟೆಲ್ಲಾನಿನಲ್ಲಿರುವ **ವಿಲ್ಲವಾಡಿನೋ**ಲಿಸ್ ವಾಲೆನ್ಸಿಯಾದಲ್ಲಿರುವ **ಬೆಲ್ಲಸ್, ಮರ್ಸಿಯಾ**ದಲ್ಲಿರುವ ಆರ್ಚೀನಾ ಮತ್ತು **ಅಲ್ಹಾಮಾ** ಮತ್ತು ಗ್ರಾನಡಾದಲ್ಲಿರುವ **ಅಲ್ಹಾಮಾಡಿಗ್ರಾನಡಾ** ಮತ್ತು ಜೂಜಾರ್ ಮುಂತಾದವು

ಗ್ರಹಣೀ ರೋಗಕ್ಕೆ ಮತ್ತು **ಗಂಡಮಾಲೆಗ**— ಗಾಲಿಷಿಯಾದಲ್ಲಿರುವ ಲಾಟೋಜಾ **ಮತ್ತು ಆರ್ಟೀಜೋ** ವಿಜ್ಕೇಯಾದಲ್ಲಿರುವ ಎಲ್ಗೋರಿಯೋಜ್, **ವಾಲಡಾಲಿಡ್**ನಲ್ಲಿರುವ ಮಡಿನಾ ಡೆಲ್ ಕಾಂಪೋ, ಆರಗಾನಿನಲ್ಲಿರುವ ಪಾರಕ್ಯೂಲಾಸ್, ಗಾಡಲಾಜರದಲ್ಲಿರುವ **ಟ್ರಿಲ್ಲೋ** ಇಕ್ಕ ಕಾಂಟೆಯಲ್ಲಿರುವ ಚಿಕ್ಲಾನಾ **ಕಾಟಲೋನಿಯಾ**ದಲ್ಲಿರುವ ಟೋನಾ, ನವಪ್ರತೀರದಲ್ಲಿರುವ ಮತ್ತು **ಆರೋ** ಕರವಾದ ಓಲಸೋಟಿಡೇಸಿಯಾ **ಮುಂತಾದುವು**

ಚರ್ಮ ವ್ಯಾಧಿಗಳಿಗೆ—ಬಾಸ್ಕ **ಪ್ರದೇಶದಲ್ಲಿರ** ಅರ್ಮೆಂಚ್‌ಟೆಗುಯಿ **ಅರೀಟಿವಾಲೆಟಾ,** ಜಾಲ್ಡಿವಾರ್ ಮತ್ತು ವಿಟ್ಲ್ಲರೋ, **ಕಾಟಲೋನಿಯಾ**ದಲ್ಲಿರುವ ಲಾಪ್ಯೂಡಾ, ಗಾಲಿಕಾದಲ್ಲಿರುವ **ಕಾರ್ಬಲ್ಲೋ** ಕಾರ್ಬಲ್ಲಿನೋ, **ಕೋರ್ಟೆಗಾಡಾ,** ರಿಯೋಜಾದಲ್ಲಿರುವ ಗ್ರಾವೆಲಾಸ್, ಲಿಯಾನಿನಲ್ಲಿರುವ **ಬೋಸಾರ್** ಸಂಟಾಂಡರಿನಲ್ಲಿರುವ ಆಲ್ಸೀಡಾ, **ವಾಲೆನ್ಸಿಯಾ**ದಲ್ಲಿರುವ **ಪ್ಯೂಯೆಂಟೆಪಾಡ್ರಿಡಾ,** ಒಗಾರ್ಸಿನಲ್ಲಿರುವ **ಕ್ಯೂಚೋ** ಮುಂತಾದ ತೀರ್ಥಗಳು **ಉತ್ತಮವು**

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತವೆ, ಆ ಮಠಾಧಿಕಾರಿಗಳು ವರುಷಕ್ಕೊಮ್ಮೆ ಹತ್ತು ವರ್ಷಕ್ಕೊಮ್ಮೆ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಅದರೆ ಅವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇದನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿವೆ ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ವ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ [illegible] ಕಾಗದಗಳನ್ನು ಉಪಯೋಗಿಸಿರುವುದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦ ೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೬—೦
ಮುಕ್ತಿಭಸ್ಮ	೧	೪೦—೦—೦
ಅಭ್ರಕಭಸ್ಮ	೧	೩—೦—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೪—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್. ಓಖಿಮಠ. ಜಿಲ್ಲಾ ಗಢವಾಲ್ ಯು.ಪಿ

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ- ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿ ನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿದ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇವರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ** ವಿ ಪಿ ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯ ವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ **ಬೆಲೆ ೮ ರೂಪಾಯಿ.** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ ಪಿ. ಚಾರ್ಜು ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ದಧೀಚಿ ವ್ಯಾಸ ... ಮುಂತಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪	೦—೨—೬
ಶ್ರೀ ಶಿವಾಪೋಹಣಮಾಡಿತತ್ತ್ವ ಐವರು ಆಚಾರ್ಯರು ಒಂದೆಡೆಯಲ್ಲಿಯೇ ಇರುವ ಫೋಟೋ ಸೈಜು ೪×	—೨—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ... ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ	—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	— —೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕಾಣಿಕೆ ... ಫೋಟೋ	— —೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	—೦—೯
ಶ್ರೀ ಜಗದ್ಗುರು ಉಜ್ಜಯಿನೀ ಸಿಂಹಾಸನ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ	— —೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ	—೦—೯
ಶ್ರೀ ಜಗದ್ಗುರು ಕೇದಾರ ಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	— —೯
ಶ್ರೀ ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಫೋಟೋ	೦—೦—೪

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ ... ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ ಮೈಸೂರು

ಡಾಕ್ಟರ್ ಜಿ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯು ... ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಶಿ ಒಂಟಿತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಷ್ಣಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಎಲ್ಲಾ ವ್ಯಾಧಿಗಳನ್ನು ಸ್ವಸ್ಥಕಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ ೨ ೮ ೦ ವಿ ಪಿ ೬ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[18] ಪೋ ಬಾ ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಷಟ್ಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಶನ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಷಟ್ಶಾಸ್ತ್ರಮವಿಮರ್ಶತತ್ತ್ವಸ್ಫುಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೬ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸಪ್ರ್ರೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯ (ಚತುಸ್ಸೂತ್ರಿ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೨೦ ಸುಂದರ ಫೋಟೋ ಸಹಿತ)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕಾಸಹಿತ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೬೩೩ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji *English*)	12 As
लिंगधारणचन्द्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य संस्कृत)	१ रु
पुरुषसूक्तम् (वीरशैवप्राचीनभाष्योपेतम्)	४ आ
नन्दिकेश्वरकारिका (संस्कृत)	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪ ಬ್ರ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಕಾಲಿಪ್ಪುದೀಲೋಕಮಂ ।

ಊರವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೪ ಆಣೆ ವಿ ಪಿ ಚಾರ್ಜು ಪ್ರತ್ಯೇಕ

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೨ನೇ ಸೆಪ್ಟೆಂಬರ್ ೧೯೪೧ [ಸಂಚಿಕೆ ೨೧

ಂಸ್ಕೃತ ಪರಿಷತ್ತಿನ ಪ್ರಾರಂಭೋತ್ಸವ

ಸರ್ ಎಸ್ ವರದಾಚಾರ್ಯರವರ ಭಾಷಣ

೧೫ ನೆಯ ತಾರೀಖಿನ ದಿವಸ ಬೆಂಗಳೂರು ನಗರ ... ಮೈಸೂರು ಸಂಸ್ಕೃತ ಪರಿಷತ್ ಎಂಬ ಸಂಸ್ಥೆಯ ಪ್ರಾರಂಭೋತ್ಸವವನ್ನು ದಿವಾನರಾದ ರಾಜಮಂತ್ರಪ್ರವೀಣ ಶ್ರೀ ಎನ್ ಮಾಧವರಾಯರು ನೆರವೇರಿಸಿದರು ಫೆಡರಲ್ ಕೋರ್ಟಿನ ನ್ಯಾಯಾಧೀಶರಾದ ಸರ್ ಎಸ್ ವರದಾಚಾರ್ಯರವರು, ಪ್ರಾರಂಭ ಭಾಷಣ ಮಾಡಿ ಸಂಸ್ಕೃತದ ಏಳಿಗೆಗೆ ಹಲವು ಸಲಹೆಗಳನ್ನಿತ್ತರು

ರ್ ಸೆಟ್ಟರ ನಗರಭವನವು ಪ್ರಮುಖರಿಂದಲೂ ಸಹೃದಯರಿಂದಲೂ ತುಂಬಿಹೋಗಿತ್ತು ಮೊದಲು ಪರಿಷತ್ತಿನ ಅಧ್ಯಕ್ಷರಾದ ರಾಜಸೇವಾಪ್ರಸಕ್ತ ಶ್ರೀ ಎ ವಿ ರಾಮನಾಥನ್‌ರವರು ಭಾಷಣಮಾಡುತ್ತ ಪರಿಷತ್ತಿನ ಪ್ರಾರಂಭೋತ್ಸವವನ್ನು ನೆರವೇರಿಸಲು ದಯಮಾಡಿರುವ ರಾಜಮಂತ್ರಪ್ರವೀಣ ಶ್ರೀ ಎನ್ ಮಾಧವರಾಯರನ್ನೂ, ...ರ ಭಾಷಣವನ್ನು ಮಾಡಲು ಒಪ್ಪಿ ಬಂದಿದ್ದ ಸರ್ ಎಸ್ ವರದಾಚಾರ್ಯರವರನ್ನೂ ಪ್ರಶಂಸಿಸಿ, ಪರಿಷತ್ತಿನ ಉದ್ದೇಶಗಳನ್ನು ವಿವರಿಸಿದರು ಸಂಸ್ಕೃತಭಾಷೆಯು ಎಷ್ಟು ಪ್ರಾಚೀನವಾದುದೆಂಬುದನ್ನೂ ಎಷ್ಟು ಮನೋಹರವಾದುದೆಂಬುದನ್ನೂ ಮನಗಂಡ, ಭಾರತದ ಗವರ್ನರ್ ಜನರಲ್‌ರವರಾಗಿದ್ದ ವಾರನ್ ಹೇಸ್ಟಿಂಗ್ಸ್‌ರವರು ಈಸ್ಟ್ ಇಂಡಿಯಾಕಂಪೆನಿಯ ಡೈರೆಕ್ಟರುಗಳ ಅಧ್ಯಕ್ಷರಿಗೆ ಪತ್ರ ಬರೆದು ಆ ಭಾಷೆಗೆ ಪ್ರೋತ್ಸಾಹ ಕೊಡಬೇಕೆಂದು ಸೂಚಿಸಿದ್ದ ಅಂಶವನ್ನು ಸಭೆಯ ಗಮನಕ್ಕೆ ತಂದರು ಸಂಸ್ಕೃತ ಭಾಷೆಯು ಜೀವಿಸಿರುವುದಕ್ಕೆ ತಕ್ಕ ಪ್ರಯತ್ನಗಳನ್ನು ಕೈಗೊಳ್ಳಬೇಕಾಗಿದೆಯೆಂದು ಸೂಚಿಸಿ ಸ್ವಾಮಿ ವಿವೇಕಾನಂದರು ಸಂಸ್ಕೃತದ ವಿಷಯದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಉಲ್ಲೇಖಿಸಿದರು

ಮೈಸೂರು ಸಂಸ್ಥಾನವು ಪೂರ್ವದಿಂದಲೂ ಭಾರತೀಯ ಧರ್ಮಕ್ಕೂ ಸಂಸ್ಕೃತಿಗೂ ಹೇಗೆ ಆಶ್ರಯಸ್ಥಾನವಾಗಿರುವುದೆಂಬುದನ್ನು ಉದಾಹರಣೆಗಳ ಮೂಲಕ ತೋರಿಸಿಕೊಟ್ಟರು. ಪ್ರಾಚೀನ ಕಾಲದಿಂದಲೂ ಮೈಸೂರಿನಲ್ಲಿ ನೆಲಸಿರುವ ಆ ಸಂಸ್ಕೃತಿಯನ್ನು ಕಾಪಾಡಿಕೊಂಡು ಬರುವುದಕ್ಕಾಗಿಯೇ ಈ ಪರಿಷತ್ತನ್ನು ಇಂದು ಸ್ಥಾಪಿಸಲಾಗಿದೆಯೆಂದೂ ಪರಿಷತ್ತು ಜ್ಞಾನಾರ್ಜನೆಗೂ ಸಂಶೋಧನೆಗೂ ಸಂಸ್ಕೃತಿಯ ಪ್ರಸಾರಕ್ಕೂ ಕೇಂದ್ರವಾಗಿರುವುದೆಂದೂ ನುಡಿದರು

ಆಗ್ಗೆ ಒಪ್ಪಿಸಿದ ವರದಿಯ ಸಾರ

ಸಂಸ್ಕೃತವು ಭರತಖಂಡದ ಎಲ್ಲ ನಾಡ ಭಾಷೆಗಳಿಗೂ ಬೇಕಾದ ಶಬ್ದಸಂಪತ್ತನ್ನು ಒದಗಿಸುವ ಭಾಂಡಾರವಾಗಿರುವದಲ್ಲದೆ, ಭಾಷಾಶಾಸ್ತ್ರಪ್ರಪಂಚದಲ್ಲಿ ಒಂದು ವಿಶಿಷ್ಟಸ್ಥಾನವನ್ನು ಪಡೆದಿರುವುದೆಂಬುದು ನಿರ್ವಿವಾದ ಸಹ ಪೌರಸ್ತ್ಯಪಾಶ್ಚಾತ್ಯ ದೇಶಗಳಲ್ಲಿಯ ವಿಶ್ವವಿದ್ಯಾನಿಲಯಗಳಲ್ಲಿ ಯಾವುದು ಈ ಸಂಸ್ಕೃತ ಭಾಷೆಗೆ ಗಣ್ಯಸ್ಥಾನವನ್ನು ಕಲ್ಪಿಸುವುದಿಲ್ಲವೋ ಆ ವಿಶ್ವವಿದ್ಯಾನಿಲಯವು ಈಗಿನ ಕಾಲಕ್ಕೆ ಅನ್ವಯಿಸುವಂತಹ ವಿಶ್ವವಿದ್ಯಾನಿಲಯವಾಗಿ ಎಣಿಸಲ್ಪಡುವುದಿಲ್ಲವೆಂಬುದು ಅಭಿಜ್ಞರ ಅಭಿಪ್ರಾಯವಾಗಿದೆ

ಹೀಗಿರುವಲ್ಲಿ ಭಾರತೀಯರಾದ ನಾವು ನಮ್ಮ ಹಿರಿಯರ ಪರಂಪರೆಯಿಂದ ಬಂದ ಈ ಭಾಷೆಯ ವಿಷಯದಲ್ಲಿ ಇನ್ನೂ ಉದಾಸೀನವಾಗಿರುವುದು ಶೋಚನೀಯ ಈ ಸ್ಥಿತಿಗೆ ಕಾರಣಗಳು ಏನೇ ಇರಲಿ, ನಾವೆಲ್ಲರೂ ಈಗಲಾದರೂ ಎಚ್ಚತ್ತು ಈ ಸಂಸ್ಕೃತ ಭಾಷಾಭಿವೃದ್ಧಿ ಕಾರ್ಯವನ್ನು ಕೈಗೊಳ್ಳುವುದು ಆವಶ್ಯಕ ನಮ್ಮನ್ನಾಳಿದ ಚಿರಸ್ಮರಣೀಯರಾದ ಶ್ರೀಮನ್ನಾಲ್ವಡಿ ಕೃಷ್ಣರಾಜ ಒಡೆಯರವರು ಈ ಸಂಸ್ಕೃತ ವಿದ್ಯೆಯನ್ನು ರಕ್ಷಿಸಿಕೊಂಡು ಬಂದಿರುವುದಕ್ಕೂ ಈಗ ನಮ್ಮನ್ನಾಳುತ್ತಿರುವ ಶ್ರೀ ಜಯಚಾಮರಾಜ ಒಡೆಯರವರು ಅದನ್ನು ಪರಿಪೋಷಿಸುತ್ತಿರುವುದಕ್ಕೂ ನಾವು ಅತ್ಯಂತ ಕೃತಜ್ಞರಾಗಿರುವುದು ಮಾತ್ರ ಸಾಲದೆಂದರಿತು, ಈ ವಿಷಯದಲ್ಲಿ ನಮ್ಮ ಭಾಗದ ಕರ್ತವ್ಯವನ್ನು ಕೈಕೊಳ್ಳುವುದ ಆವಶ್ಯಕವೆಂದು ಭಾವಿಸಿ, ಈ ಸಂಸ್ಕೃತ ಪರಿಷತ್ತನ್ನು ಸ್ಥಾಪಿಸಲು ನಿರ್ಧರಿಸಿದ್ದೇವೆ

ಈ ಪರಿಷತ್ತಿನ ಮುಖ್ಯೋದ್ದೇಶಗಳೇನೆಂದರೆ —

೧ ಪ್ರಾಚೀನ ಮತ್ತು ನವೀನ ಸಂಸ್ಕೃತ ಗ್ರಂಥಗಳ ಪ್ರಕಟನೆ

೨ ಪ್ರಾಚೀನ ಗ್ರಂಥ ಸಂಗ್ರಹ

೩ ಅರ್ಹವಾದ ಸಂಸ್ಕೃತ ಗ್ರಂಥಗಳನ್ನು ಇಂಗ್ಲೀಷ್ ಮತ್ತು ಕನ್ನಡ ಭಾಷೆಗಳಿಗೆ ಪರಿವರ್ತಿಸುವುದು

೪ ಸಂಸ್ಕೃತ ಕನ್ನಡ ಇಂಗ್ಲೀಷ್ ನಿಘಂಟಿನ ರಚನೆ

೫ ಸಂಸ್ಕೃತ ವಿದ್ಯಾ ಪ್ರಚಾರಕ್ಕಾಗಿ ನಮ್ಮ ದೇಶದ ನಾನಾ ಭಾಗಗಳಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸುವುದು

೬ ಆಗಿಂದಾಗ್ಗೆ ಸಮ್ಮೇಳನ, ಚರ್ಚಾಗೋಷ್ಠಿ, ಸ್ಪರ್ಧೆ ಮತ್ತು ಸಭೆ ಇವುಗಳನ್ನು ನಡೆಸುವುದು

೭ ಪರಿಶೋಧನಕಾರ್ಯ

೮ ಪ್ರಾಚೀನ ಶಿಕ್ಷಣ ಸಂಪ್ರದಾಯ ರಕ್ಷಣೆ

೯ ವಿಜ್ಞಾನಾದಿ ಶಾಸ್ತ್ರಗಳಿಗೆ ಬೇಕಾದ ಪಾರಿಭಾಷಿಕ ಶಬ್ದರಚನೆ

೧೦ ಸಂಸ್ಕೃತ ಪತ್ರಿಕಾ ಪ್ರಕಟನೆ

ಇವೇ ಮುಂತಾದ ಕಾರ್ಯಗಳು ಈ ಸಂಸ್ಕೃತ ಪರಿಷತ್ತಿನ ಉದ್ದೇಶಗಳಾಗಿವೆ

೧೯೩೭ ನೆಯ ಇಸವಿ ಏಪ್ರಿಲ್ ತಿಂಗಳಲ್ಲಿ ದಿವಂಗತ ಸರ್ ಕೆ ಪಿ ಪುಟ್ಟಣ್ಣಸೆಟ್ಟರ ನೇತೃತ್ವದಲ್ಲಿ, ಸಂಸ್ಕೃತ ವಿದ್ಯಾಭಿಮಾನಿಗಳಾದ ಕೆಲವರು ಮಹನೀಯರು ನಮ್ಮ ಹಿಂದಿನ ದಿವಾನರಾದ ಶ್ರೀಯುತ ಸರ್ ಮಿರ್ಜಾ ಎಂ ಇಸ್ಮಾಯಿಲ್ ಸಾಹೇಬರವರನ್ನು ಕಂಡು ಈ ಉದ್ದೇಶಗಳನ್ನು ತಿಳಿಸಲು, ಅವರು ತಮ್ಮ ಸಂಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸಿ, ನಮ್ಮ ಘನ ಸರ್ಕಾರದವರಿಂದ ಆದಷ್ಟುಮಟ್ಟಿನ ಸಹಾಯವನ್ನು ಮಾಡುವುದಾಗಿ ವಾಗ್ದಾನಮಾಡಿದರು ತದನುಗುಣವಾಗಿ ಈ ಪರಿಷತ್ತನ್ನು ರಿಜಿಸ್ಟರ್ ಮಾಡಿಸಲಾಯಿತು ಈ ಕಾರ್ಯವನ್ನು ನೆರವೇರಲು ದ್ರವ್ಯಸಂಗ್ರಹಮಾಡುವುದಕ್ಕಾಗಿ ಒಂದು ಸಮಿತಿಯನ್ನೇರ್ಪಡಿಸಿ ಮಹಾಜನರನ್ನು ಪ್ರಾರ್ಥಿಸಲಾಯಿತು ಸುಮಾರು ಹನ್ನೊಂದು ಸಾವಿರ ರೂಗಳನ್ನು ಮೊತ್ತವು ವಾಗ್ದತ್ತವಾಗಿದೆ ಅದರಲ್ಲಿ ಸಲ್ಪಭಾಗವನ್ನು ಸಂಗ್ರಹಿಸಿ ಮೈಸೂರು ಬ್ಯಾಂಕಿನಲ್ಲಿ ಠೇವಣಿಯಿಟ್ಟಿದೆ

ಈ ಸಂಸ್ಥೆಗೆ ಆಸ್ಥಾನ ಮಹಾ ವಿದ್ವಾನ್ ಪಂಡಿತರತ್ನಂ ವೇ॥ ಬ್ರ॥ ಶ್ರೀ ಕಾಶೀಸುಬ್ರಹ್ಮಣ್ಯಶಾಸ್ತ್ರಿಗಳು ತಮ್ಮಲ್ಲಿರುವ ಅಮೋಘವಾದ ಪುಸ್ತಕ ಭಂಡಾರವನ್ನು ಉಚಿತವಾಗಿ ಕೊಡಲು ಒಪ್ಪಿರುತ್ತಾರೆ ಅಲ್ಲದೆ, ಶ್ರೀಮಾನ್ ಗೀತಾಚಕ್ರವರ್ತಿಯವರು ತಮ್ಮ ತಂದೆಯವರಾದ ಆಸ್ಥಾನ ಮಹಾ ವಿದ್ವಾನ್ ಸರಳಕವಿಸೂಂ ರಾಜಗೋಪಾಲ ಚಕ್ರವರ್ತಿಯವರ ಜ್ಞಾಪಕಾರ್ಥಕವಾಗಿ ಅವರ ಭಾಂಡಾಗಾರವನ್ನು ದಾನಮಾಡಲು ಒಪ್ಪಿರುತ್ತಾರೆ ಈ ಅಂಶವನ್ನು ಈ ಸಂದರ್ಭದಲ್ಲಿ ತಿಳಿಸಲು ಸಂತೋಷಿಸುತ್ತೇವೆ

ಈ ಪರಿಷತ್ತಿಗೆ ಒಂದು ವಸತಿಯನ್ನು ಕಲ್ಪಿಸುವುದು ಆವಶ್ಯಕವಾಗಿ ಕಂಡುಬಂದು ಕಳೆದ ವರ್ಷ, ಹಿಂದಣ ದಿವಾನರಲ್ಲಿ ಪ್ರಸ್ತಾಪಿಸಲು, ಅವರು ಈ ಉದ್ದೇಶವನ್ನು ಅನುಮೋದಿಸಿ, ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾ ಪಾಠಶಾಲೆಗೆ ದಕ್ಷಿಣದಲ್ಲಿರುವ ಸರ್ಕಾರದ ನಿವೇಶನವನ್ನು ಉಚಿತವಾಗಿ ಕೊಡಲ ಅನುಕೂಲ ಮಾಡುವುದಾಗಿ ತಿಳಿಸಿದರು

ಅನಂತರ ರಾಜಮಂತ್ರ ಪ್ರವೀಣ ಶ್ರೀ ಎನ್ ಮಾಧವರಾಯರು ಭಾಷಣಮಾಡಿ ಪರಿಷತ್ತಿನ ಪ್ರಾರಂಭೋತ್ಸವವನ್ನು ನೆರವೇರಿಸಿದರು ದಿವಾನರು ತಮ್ಮ ಭಾಷಣದಲ್ಲಿ ಸಂಸ್ಕೃತ ಭಾಷೆಯು ಬಹಳ ಪ್ರಾಚೀನವಾದುದೆಂದೂ ಭಾರತದ ಸಂಸ್ಕೃತಿಯ ಸಾರವೆಲ್ಲವೂ ಆ ಭಾಷೆಯಲ್ಲಿರುವುದೆಂದೂ ಪ್ರಶಂಸಿಸಿ, ಹಳೆಯ ಮತ್ತು ಹೊಸ ಭಾವನೆಗಳನ್ನು ಸಮ್ಮೇಳನಗೊಳಿಸಿ ಹೊಂದಿಕೊಂಡು ಹೋಗುವಂತೆ ಮಾಡುವುದೇ ಪರಿಷತ್ತಿನ ಮುಖ್ಯ ಉದ್ದೇಶವಾಗಿರಬೇಕೆಂದೂ ಸಂಸ್ಕೃತಕ್ಕೂ ಕನ್ನಡಕ್ಕೂ ಪರಸ್ಪರ ಬಾಂಧವ್ಯವನ್ನುಂಟುಮಾಡಿಕೊಟ್ಟು ಎರಡಕ್ಕೂ ಉಪಯೋಗವಾಗುವಂತೆ ವರ್ತಿಸುವುದೇ ಪರಿಷತ್ತಿನ ಉದ್ದೇಶವಾಗಿದೆಯೆಂಬುದನ್ನು ಕೇಳಿ ತಮಗೆ ಸಂತೋಷವಾಗಿರುವುದೆಂದೂ ನುಡಿದರು

ಸರ್. ಎಸ್ ವರದಾಚಾರ್ಯರವರ ಭಾಷಣ

ಅನಂತರ ಸರ್ ಎಸ್ ವರದಾಚಾರ್ಯರವರು "ಸಂಸ್ಕೃತಭಾಷೆಯನ್ನು ಕಾಪಾಡಿಕೊಂಡು ಬರುವುದೆಂದರೆ, ಮ್ಯೂಸಿಯಂ ಒಂದರಲ್ಲಿ ಒಂದು ವಸ್ತುವನ್ನು ಕಾಪಾಡಿಕೊಂಡು ಬರುವಂತಲ್ಲವೆಂದೂ, ಆ ಭಾಷೆಯನ್ನು ಕಾಪಾಡಿಕೊಂಡು ಬರುವುದಲ್ಲದೆ ಅದರಿಂದ ಪ್ರಯೋಜನ

ಪಡೆಯಬೇಕೆಂದೂ, ಮಾನವಕೋಟಿಯ ನಿತ್ಯಜೀವನದಲ್ಲಿ ಅದರ ಪ್ರಭಾವವು ಬಿದ್ದು ಅದರಿಂದ ಪ್ರಯೋಜನವಾಗುವಂತೆ ಆ ಭಾಷೆಯನ್ನು ಪೋಷಿಸಿಕೊಂಡು ಬರಬೇಕೆಂದೂ, 'ತರುಣ ಭಾರತವು ಸಂಸ್ಕೃತಭಾಷೆಯ ಪೋಷಣೆಯ ವಿಚಾರದಲ್ಲಿ ನಿಜವಾಗಿಯೂ ಆಸಕ್ತಿ ವಹಿಸಿದೆಯೇ ? ಎಂಬ ಅನುಮಾನವು ತಮ್ಮಲ್ಲಿ ಕೆಲವು ವರ್ಷಗಳಿಂದ ಮೂಡಿರುವುದೆಂದೂ, ಸಂಸ್ಕೃತ ಭಾಷೆಯ ಉಪಯೋಗದ ವಿಚಾರದಲ್ಲಿ ೧೯ನೆಯ ಶತಮಾನದ ಪ್ರಾರಂಭದಿಂದಲೂ ಭಿನ್ನಾಭಿಪ್ರಾಯಗಳಿರುವುವೆಂದೂ, ಭಾರತದಲ್ಲಿ ಇಂಗ್ಲೀಷ್ ಭಾಷೆಯ ಮುಖಾಂತರ ಶಿಕ್ಷಣ ಕೊಡಬೇಕೆಂದು ಮೆಕಾಲೆಯವರು ನಿರ್ಧರಿಸಿದಂದಿನಿಂದ, ಸಂಸ್ಕೃತವು ಖಿಲವಾಗುತ್ತ ಬಂದಿತೆಂದೂ, ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕದಿಂದ ಭಾರತೀಯರಿಗೆ ಹಲವು ಅನುಕೂಲಗಳುಂಟಾದರೂ, ಭಾರತೀಯ ಸಂಸ್ಕೃತಿಯ ಮೇಲೂ ಅವರ ನೈತಿಕ ಮತ್ತು ಸಾಮಾಜಿಕ ದೃಷ್ಟಿಕೋಣಗಳ ಮೇಲೂ ಉಗ್ರವಾದ ಪರಿಣಾಮಗಳುಂಟಾದವೆಂದೂ, ಪಾಶ್ಚಾತ್ಯ ಸಂಸ್ಕೃತಿ ದರ್ಶನವಿಜ್ಞಾನ ಇವುಗಳಿಗೆ ಭಾರತೀಯ ಸುಶಿಕ್ಷಿತ ವರ್ಗವು ಮನಸೋತಿತೆಂದೂ, ಇದರಿಂದ ಕೆಲವು ಸತ್ಪರಿಣಾಮಗಳುಂಟಾದರೂ ಭಾರತದ ಪ್ರಾಚೀನ ಸಂಸ್ಕೃತಿಯ ವಿಚಾರದಲ್ಲಿ ಅಗೌರವ ಭಾವನೆಯು ಭಾರತೀಯರಲ್ಲಿ ತಲೆದೋರಲು ಕಾರಣವಾಯಿತೆಂದೂ ಸ್ವಾಮಿ ವಿವೇಕಾನಂದ ಶ್ರೀಮತಿ ಅನಿಬೆಸೆಂಟ್, ಶ್ರೀ ಮ್ಯಾಕ್ಸ್ ಮುಲ್ಲರ್ ಮೊದಲಾದ ಸಂಸ್ಕೃತಾಭಿಮಾನಿಗಳ ಪ್ರಯತ್ನಗಳ ಫಲವಾಗಿ ಸಂಸ್ಕೃತದ ವಿಷಯದಲ್ಲಿ ಭಾರತೀಯರಿಗೆ ಇತ್ತೀಚೆಗೆ ಪೂಜ್ಯ ಬುದ್ಧಿಯುಂಟಾಯಿತೆಂದೂ, ಆದರೆ ಇತ್ತೀಚೆಗೆ ರಾಷ್ಟ್ರೀಯ ಚಳವಳಿಯುಂಟಾಗಿರುವ ದೆಸೆಯಿಂದಲೂ ಆ ಚಳುವಳಿಯು ಪಾಮರಗಣವನ್ನು ಮುಟ್ಟಿರುವುದರಿಂದಲೂ ಸಂಸ್ಕೃತ ಭಾಷಾಭಿವೃದ್ಧಿಗೆ ಅನುಕೂಲವಾಗಿಲ್ಲವೆಂದೂ, ಒಂದು ಭಾಷೆಯು ಪೋಷಿಸಲ್ಪಡಬೇಕಾದರೆ ಎರಡು ಮುಖ್ಯ ಅಂಶಗಳಿರಬೇಕೆಂದೂ, ಮೊದಲನೆಯದಾಗಿ ಆ ಭಾಷೆಯಲ್ಲಿ 'ಜೀವಿಸುವ ಶಕ್ತಿ' ಇರಬೇಕೆಂದೂ, ಎರಡನೆಯದಾಗಿ, ಆ ಭಾಷೆಯ ಮಹತ್ವದಲ್ಲಿ ನಂಬಿಕೆಯುಳ್ಳವರು ಹೆಚ್ಚಾಗಿರಬೇಕೆಂದೂ, ಸಂಸ್ಕೃತ ಭಾಷೆಯು ಪ್ರಾಚೀನಕಾಲದಿಂದಲೂ ಬದುಕಿ ಬಾಳಿರುವ ಭಾಷೆಯೆಂದೂ, ಅನೇಕ ವಿಪತ್ಪರಂಪರೆಗಳಿಗೆ ಗುರಿಯಾಗಿದ್ದರೂ ಕೂಡ ಅದರಲ್ಲಿ 'ಜೀವಿಸುವ ಶಕ್ತಿ' ಯು ಇದ್ದೇ ಇರುವುದೆಂದೂ, ಹೇಳಿದರು

ತಮ್ಮ ಭಾಷಣವನ್ನು ಮುಂದುವರಿಸುತ್ತ—ಪಂಡಿತವರ್ಗದವರಿಗೆ ನ್ಯಾಯವಾಗಿ ಸಲ್ಲಬೇಕಾದ ಗೌರವವನ್ನು ಕೊಡಬೇಕೆಂದೂ ಇಂದು ಸಂಸ್ಕೃತ ಭಾಷೆಯನ್ನೇ ಪ್ರಧಾನವಾಗಿ ತೆಗೆದುಕೊಂಡು ಅದರಿಂದ ಪ್ರಯೋಜನ ಪಡೆಯಬೇಕೆಂದು ಅಪೇಕ್ಷೆಪಟ್ಟುಕೊಂಡಿರುವವರ ಸಂಖ್ಯೆ ಕಡಿಮೆಯೆಂದೂ, ಇದರಿಂದ ಸಂಸ್ಕೃತವನ್ನು ಸ್ವಲ್ಪಮಟ್ಟಿಗಾದರೂ ಅಭ್ಯಾಸಮಾಡಿ ಅದರಲ್ಲಿ ಮಮತೆಯನ್ನು ಇಟ್ಟುಕೊಂಡಿರುವವರ ಸಂಖ್ಯೆಯನ್ನು ಹೆಚ್ಚಿಸಬೇಕೆಂದೂ, ಸಂಸ್ಕೃತ ಭಾಷೆಯ ಅಭ್ಯಾಸಮಾಡಿ ಅದರಲ್ಲಿ ಮಹಾಪಂಡಿತರೆನಿಸಿದವರ ಗುಂಪೊಂದು, ಇಂಗ್ಲೀಷ್ ಭಾಷಾಭ್ಯಾಸ ಮಾಡಿದರೂ ಕೂಡ ಸಂಸ್ಕೃತದಲ್ಲಿ ಅಭಿಮಾನವನ್ನಿಟ್ಟುಕೊಂಡು ಆ ಭಾಷೆಗೆ ಸಲ್ಲಬೇಕಾದ ಗೌರವವನ್ನು ನೀಡುವ ತರುಣವರ್ಗದವರ ಗುಂಪೊಂದು ಈ ರೀತಿ ವಿಭಜನೆಮಾಡಿ ಸಂಸ್ಕೃತವನ್ನು ಪೋಷಿಸಿಕೊಂಡು ಬರಬೇಕೆಂದೂ ಸಲಹೆ ಮಾಡಿದರು

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಅನುಷ್ಠಾನ ಮತ್ತು ಪುರಾಣ ಸಮಾಪ್ತಿ

ನಿಜಾಮು ಸ್ಟೇಟ ಕೊಪ್ಪಳ ಜಿಲ್ಲಾ ಯಲಬುರ್ಗಿಯಲ್ಲಿ ಪ್ರಾಚೀನವಾದ ಧರಮುರಡಿ ಹಿರೇಮಠವು ಇರುತ್ತದೆ ಈ ಮಠವು ಶ್ರೀಮದುಜ್ಜಯಿನೀ ಜಗದ್ಗುರು ಸದ್ಧರ್ಮ ಪೀಠಕ್ಕೆ ಸೇರಿದ ಶಾಖಾಮಠವಾಗಿರುತ್ತದೆ ಈ ಮಠದ ಕೆಳಗೆ ಇದೇ ಗ್ರಾಮದಲ್ಲಿ ಮಣ್ಣಮಠವೆಂತಲೂ, ಗಜೇಂದ್ರಗಡದಲ್ಲಿ ಶ್ರೀಗಡ್ಡದಸ್ವಾಮಿ ಮಠವೆಂತಲೂ ಮತ್ತು ಕೌಜಗೇರಿ, ಮುಸಲವಾಡ, ಸೊನ್ನ, ಇತ್ಯಾದಿ ಗ್ರಾಮಗಳಲ್ಲಿ ಕೆಲವು ಮಠಗಳೂ ಈ ಮಠಕ್ಕೆ ಶಾಖಾಮಠಗಳಿರುತ್ತವೆ ನಿಜಾಮಸ್ಟೇಟಿನ ಕೆಲವು ಭಾಗಗಳಲ್ಲಿಯೂ ಬ್ರಿಟಿಷ್ ಕೆಲವು ಭಾಗಗಳಲ್ಲಿಯೂ ಸಾವಿರಾರು ಶಿಷ್ಯರ ಮನೆಗಳಿರುವವು ಈ ಮಠಕ್ಕೆ ಪೂರ್ವಕಾಲದಿಂದಲೂ ಸತ್ಕುಲೋತ್ಪನ್ನರೂ, ಸದಾಚಾರಿಗಳೂ, ವಿದ್ಯಾವಂತರೂ ಆದ ಮೂರ್ತಿಗಳೇ ಪಟ್ಟಾಧಿಕಾರಿಗಳಾಗಿ ಪರಂಪರೆಯಿಂದ ಬಂದವರಾಗಿರುತ್ತಾರೆ ತಮ್ಮ ತಪೋನಿಷ್ಠೆಯ ಪ್ರಭಾವದಿಂದ ಕ್ರಿಯಾಸಿದ್ಧಿಯುಳ್ಳವರಾಗಿ ಅನಂತಾನಂತ ಮಹತ್ವಗಳನ್ನು ಮಾಡಿ ಹೆಸರುವಾಸಿಗಳಾಗಿರುತ್ತಾರೆ ಮಠದಲ್ಲಿ ನಿತ್ಯದಲ್ಲಿಯೂ ಬಂದ ಅಭ್ಯಾಗತರಿಗೆ ಅನ್ನದಾಸೋಹವು ತಪ್ಪದೆ ನಡೆಯುತ್ತಿರುವುದು ಶ್ರೀಮಠದ ಅಧಿಕಾರಿಗಳು ಸಮಸ್ತ ದೇಶದಿಂದ ವಿದ್ಯಾರ್ಜನ ಮಾಡುತ್ತ ಸರ್ವರಿಗೂ ಉಪಕಾರಿಗಳಾಗಿ ಸರ್ವರಲ್ಲಿಯೂ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡಿರುವರು ಈ ಮಠಕ್ಕೆ ಮೊದಲನೆಯವರಾದ ಶ್ರೀ ಶಾಂತಲಿಂಗಸ್ವಾಮಿಗಳೆನ್ನುವರು ದೇಶಮಧ್ಯದಲ್ಲಿ ಸಂಚಾರಮಾಡಿ ಅನಂತ ಪವಾಡಗಳನ್ನು ಮಾಡಿ ರಾಜಮನ್ನಣೆಯನ್ನು ಪಡೆದಿದ್ದಾರೆ ಶ್ರೀ ಶಾಲಿವಾಹನ ಶಕೆ ೧೫೩೦ ನೆಯ ಭಾವನಾಮ ಸಂವತ್ಸರದಲ್ಲಿ ಕಲ್ಯಾಣದ ಸಮೀಪದಲ್ಲಿರುವ ಧರಮುರಡಿ ಕಲ್ಲಗಾವಿಯಲ್ಲಿ ಮಠ ಸ್ಥಾಪನಮಾಡಿ ಅಲ್ಲಿ ಕೆಲವು ದಿವಸವಿದ್ದು ಅಲ್ಲಿಂದ ತಾಳೀಕೋಟೆಯ [illegible] ಸಮೀಪದಲ್ಲಿರುವ ಗುಡಿಯಾಪುರದ ಗ್ರಾಮಕ್ಕೆ ದಯಮಾಡಿಸಿದರು ಗ್ರಾಮದ ಭಕ್ತರ ಶ್ರೀಸ್ವಾಮಿಗಳ ಅದ್ಭುತ ಲೀಲೆಗಳನ್ನೂ ಇವರ ವೈರಾಗ್ಯವನ್ನು ನೋಡಿ ಒಂದು ಮಠವನ್ನು ಕಟ್ಟಿಸಿಕೊಟ್ಟರು ಶ್ರೀಸ್ವಾಮಿಗಳ ಪ್ರಭಾವವು ಎಲ್ಲ ಕಡೆಗೂ ಹಬ್ಬಲು, ಆಗ ಚಾವುಂಡಭೂಪಾಳನೆಂಬ ರಾಜನು ಈ ವಾರ್ತೆಯನ್ನು ಕೇಳಿ ಶ್ರೀಗಳವರ ದರ್ಶನಮಾಡಿಕೊಂಡು ಶ್ರೀಮಠಕ್ಕೆ ದೀಪಾರಾಧನೆ ಕಾಣಿಕೆಗಾಗಿ ಶ್ರೀಸ್ವಾಮಿಗಳ ಹೆಸರಿಗೆ ೨೫ ಮಾರು ಜಮೀನನ್ನು ದಾನವಾಗಿ ಕೊಟ್ಟನು ಮುಂದೆ ಕೆಲವು ದಿವಸಗಳ ಮೇಲೆ ಲಕ್ಷ್ಮೇಶ್ವರಕ್ಕೆ ದಯಮಾಡಿಸಿದರು ಅಲ್ಲಿಯೂ ಶ್ರೀಸ್ವಾಮಿಗಳ ಪ್ರಭಾವವು ಹೆಚ್ಚಲು ಅಲ್ಲಿಯ ವಿಯರಾಂ ಬಾದಶಹನು ಶ್ರೀಸ್ವಾಮಿಗಳ ಮಹತ್ವವನ್ನು ಕೇಳಿ ಅವರ ದರ್ಶನಕ್ಕೆ ಹೋಗಿ ತನಗೆ ಸಂತಾನವಿಲ್ಲದ್ದರಿಂದ ಪುತ್ರ ಭಿಕ್ಷೆಯನ್ನು ಕೇಳಿದನು ಆಗ ಶ್ರೀಗಳು ಆ ಬಾದಶಹನಿಗೆ ಫಲಾಶೀರ್ವಾದವನ್ನು ದಯಪಾಲಿಸಿದರು ಮುಂದೆ ವರ್ಷ ತುಂಬುವದರೊಳಗೆ ಬಾದಶಹನಿಗೆ ಪುತ್ರಸಂತಾನವಾಯಿತು ರಾಜನು ಸಂತೋಷಪಟ್ಟು ಸ್ವಾಮಿಗಳಿಗೆ ಒಂದು ಮಠವನ್ನು ಕಟ್ಟಿಸಿಕೊಟ್ಟು ಅದರ ವಿನಿಯೋಗಕ್ಕಾಗಿ ೩೦ ಮಾರು ಜಮೀನು ದಾನವಾಗಿ ಕೊಟ್ಟನು. ಹೀಗೆ ಕೆಲವು ದಿವಸಗಳಿದ್ದು ತಮ್ಮ ಉತ್ತರಾಧಿಕಾರವನ್ನು ಓಂಕಾರ ಮರಿದೇವರಿಗೆ ಕೊಟ್ಟು ಶಿವಾಧೀನರಾದರು ಮುಂದೆ ಓಂಕಾರಸ್ವಾಮಿಗಳು ಕೂಡ ಮಹಿಮಾತಿಶಯದಿಂದ ಲಕ್ಷ್ಮೇಶ್ವರದಲ್ಲಿಯೇ ಇದ್ದರು ಹೀಗಿರುವಾಗ ಕೌಜಗೇರಿ ಹನುಮಂತ ಗೌಡನಿಗೆ ಗಿಣ್ಣೆ ರೋಗವಾಗಲು ಆತನು ಅಪಾರ ದ್ರವ್ಯ ಖರ್ಚಮಾಡಿ ಔಷಧ ತೆಗೆದು ಸಾಧ್ಯವಾಗದೆ ಕೊನೆಗೆ ಶ್ರೀ ಓಂಕಾರಸ್ವಾಮಿಗಳಲ್ಲಿಗೆ ಬಂದು ನಿವೇದನ ಮಾಡಿಕೊಂಡನು ಶ್ರೀಹನುಮಂತಗೌಡನ ಮನೆಗೆ ದಯಮಾಡಿಸಿ ಪೂಜಾನುಷ್ಠಾನವನ್ನು ಮಾಡಿ ಭಸ್ಮವನ್ನು ಧರಿಸಿ ಅವನ ಗಿಣ್ಣೆ ರೋಗವನ್ನು ಕಳೆದರು ಗೌಡನು ಅವರಿಗೆ ತನ್ನೂರಲ್ಲಿ ಮಠ ಕಟ್ಟಿಸಿ ೫ ಮಾರು ಜಮೀನನ್ನು ಶ್ರೀ ಸ್ವಾಮಿಗಳ ಹೆಸರಿಗೆ ಮಾಡಿದನು ಮುಂದೆ ಚನ್ನವೀರ ಮರಿದೇವರಿಗೆ ಪಟ್ಟಾಭಿಷೇಕ ಮಾಡಿ ಓಂಕಾರ ಸ್ವಾಮಿಗಳು ಶಿವಾಧೀನರಾದರು ತರುವಾಯ ಪಟ್ಟಾಧ್ಯಕ್ಷರಾದ ಶ್ರೀ ಚನ್ನವೀರಸ್ವಾಮಿಗಳು ಅಲ್ಲಿ ಕೆಲವು ದಿವಸವಿದ್ದು ದೇಶಸಂಚಾರ ಮಾಡುತ್ತ ಇದೇ ಯಲಬುರಗಿ ಗ್ರಾಮಕ್ಕೆ ಬಂದರು ಶ್ರೀಸ್ವಾಮಿಗಳ ಪ್ರಭಾವವು ಎಲ್ಲ ಕಡೆಗೂ ಹಬ್ಬಲು ಇದನ್ನು ಕೇಳಿ ಚಂದ್ರಲಾಲ ಬಾದಶಹನೆಂಬ ರಾಜನು ಶ್ರೀಗಳ ದರ್ಶನಕ್ಕೆ ಬಂದು ಫಲಾಶೀರ್ವಾದವನ್ನು ಪಡೆದು ಭಕ್ತಿಯಿಂದ ಅವರ ಸೇವೆಗೆ ಬೇಕಾಗುವ ಸಾಮಾನುಗಳನ್ನು ಕೊಡುತ್ತ ಅವರ ಪ್ರೀತಿಗೆ ಪಾತ್ರನಾಗಿರುವಾಗ ತನ್ನ ಮೇಲೆ ಪರರಾಜರ ಮುತ್ತಿಗೆಯಾದದ್ದನ್ನು ಶ್ರೀಗಳಿಗೆ ತಿಳಿಸಲಾಗಿ ರಾಜನಿಗೆ ಅಭಯ ವಚನವನ್ನಿತ್ತು ಫಲವನ್ನು ಕಳುಹಿಸಿಕೊಟ್ಟರು ಶ್ರೀಗಳ ಫಲಾಶೀರ್ವಾದದಿಂದ ಪರರಾಜರನ್ನು ಓಡಿಸಿ ಜಯಪ್ರದನಾದನು. ಆಗ ರಾಜನು ಮೆಚ್ಚಿ, ಅವರಿಗೆ ಒಂದು ಶಿಲಾಮಠವನ್ನು ಕಟ್ಟಿಸಿಕೊಟ್ಟನು ಸ್ವಾಮಿಗಳು ರಾಜನ ಇ
ಯಂತೆ ಇಲ್ಲಿಯೇ ವಾಸಮಾಡಿದರು. ತರುವಾಯ ಚ
ವೀರಸ್ವಾಮಿಗಳು ಶಿವಾಧೀನರಾಗುವಾಗ ಶಾಂತಲಿ
ಮರಿದೇವರಿಗೆ ಪಟ್ಟಾಭಿಷೇಕ ಮಾಡಿದರು ಪಟ್ಟಾ
ಷಿಕ್ತರಾದ ಶಾಂತಲಿಂಗಸ್ವಾಮಿಗಳೂ ಸಹ ಕೆಲವು ದಿವ
ಯಲಬುರಗಿಯಲ್ಲಿಯೇ ಇದ್ದು ದೇಶಸಂಚಾರಕ್ಕಾ
ಹರಪನಹಳ್ಳಿ ಪ್ರಾಂತಕ್ಕೆ ದಯಮಾಡಿಸಿದರು
ಶ್ರೀಗಳ ಪ್ರಭಾವವು ಬೆಳೆಯಲು, ಭಕ್ತರ ಇಚ್ಛೆಯ
ಹುವ್ವಿನಹಡಗಲಿಯಲ್ಲಿ ಮಠಕಟ್ಟಿಸಿಕೊಂಡು ಅನುಷ್ಠಾ
ಮಾಡುತ್ತ ಭಕ್ತರಿಗೆ ಸದುಪದೇಶವನ್ನು ಮಾಡ
ಇದ್ದರು ಈ ವಾರ್ತೆಯನ್ನು ಹರಪನಹಳ್ಳಿ ಚಂದ್ರ
ಖರ ದೊರೆಯು ಕೇಳಿ ಸ್ವಾಮಿಗಳಲ್ಲಿಗೆ ಬಂದು ದ
ನಾಶೀರ್ವಾದವನ್ನು ಹೊಂದಿ ಶ್ರೀ ಸ್ವಾಮಿಗಳವ
ಭೂದಾನವನ್ನು ಮಾಡಿದನು ಮುಂದೆ ಸ್ವಾಮಿಗ
ಕೆಲವು ದಿವಸ ಅಲ್ಲಿದ್ದು ಸೇವಕ ಜನರನ್ನು ಮಠದಲ್ಲಿ
ಪುನಃ ಯಲಬುರ್ಗಿಗೆ ದಯಮಾಡಿಸಿದರು. ಹೀಗಿ
ವಾಗ ಶಾಂತಲಿಂಗಸ್ವಾಮಿಗಳು ತಮ್ಮ ಅವಸಾನ ಕ
ದಲ್ಲಿ ಚನ್ನಮಲ್ಲಮರಿದೇವರಿಗೆ ಪಟ್ಟಾಭಿಷೇಕಮಾ
ಶಿವಾಧೀನರಾದರು ಹೀಗೆ ಗುರುಪರಂಪರೆಯಿಂದ
ಮಠದ ಸ್ವಾಮಿಗಳು ಅನಂತಾನಂತ ಮಹತ್ವಗಳ
ಮಾಡಿ ರಾಜಮನ್ನಣೆಯನ್ನು ಹೊಂದಿ ಮಠಮಾನ್ಯ
ಗಳನ್ನು ಪಡೆದುಕೊಂಡು ಕೀರ್ತಿಶಾಲಿಗಳಾಗಿರುವರು

ಗುರುಪರಂಪರೆಯಿಂದ ಹಿಂದೆ ಆಗಿಹೋದ ಶ್ರೀಪಟ್ಟಾ
ಧಿಕಾರಿಗಳಲ್ಲಿ ಶ್ರೀಬಸವಲಿಂಗಸ್ವಾಮಿಗಳೆನ್ನುವವರು ಒ
ಪ್ರತಿಭಾಶಾಲಿಗಳಾಗಿದ್ದರೆಂದು ಅವರನ್ನು ನೋಡಿ
ಈಗಿರುವ ಕೆಲವು ವೃದ್ಧರಿಂದ ಗೊತ್ತಾಗುತ್ತದೆ 'ವ
ಮುಖ ದರ್ಶನದಿಂದ ಎಷ್ಟೋ ಜನ ರೋಗಿಗ
ಕೂಡ ರೋಗಮುಕ್ತರಾಗಿದ್ದಾರೆ ಸಂತಾನವಿಲ್ಲದವ
ಮಕ್ಕಳನ್ನು ಪಡೆದುಕೊಂಡಿರುತ್ತಾರೆ ಪಿಶಾಚಗ್ರಸ್ತರಾ
ವರೂ ಕೂಡ ಪಿಶಾಚ ಮುಕ್ತರಾಗಿರುವರು ಅವ
ಶಿವಾಧೀನರಾದ ನಂತರ ಅವರ ಸಮಾಧಿಗೆ ನಡಕೊ
ಜನರು ಅನಂತ ಇಷ್ಟಾರ್ಥಗಳನ್ನು ಪಡೆದುಕೊಂಡಿ
ವರು ಈಗಲೂ ಪಡೆದುಕೊಳ್ಳುತ್ತಿರುವರು.

ನಾಶಮಯವಾದ ಈ ಕಾಲದಲ್ಲಿ ಇಷ್ಟರಮಟ್ಟಿ
ನಡೆಯಬೇಕಾದರೆ, ಶ್ರೀಗುರುವರ್ಯರ ಅನುಷ್ಠಾ
ತನ್ಮೂಲಕ ಕ್ರಿಯಾಸಿದ್ಧಿಯೇ ಮೂಲಕಾರಣವಲ್ಲ
ಬೇರೊಂದಿಲ್ಲ ಈಗಿರುವ ಶ್ರೀಮಠದ ಅಧಿಕಾರಿಗಳ
ಶ್ರೀ॥ ಷ॥ ಬ್ರ॥ ಪಟ್ಟಾಧ್ಯಕ್ಷರಾದ ವೃಷಭಲಿಂಗ ಶಿ
ಚಾರ್ಯಸ್ವಾಮಿಗಳವರು ಚಿಕ್ಕ ವಯಸ್ಸಿನಲ್ಲಿಯೆ
ಸಂಸ್ಕೃತ ವಿದ್ಯೆಯಲ್ಲಿ ಉತ್ತೀರ್ಣರಾಗಿರುವರು ಗು
ವಿಗೆ ಇರಬೇಕಾದ ಲಕ್ಷಣಗಳಂತೆ ಶಾಂತರೂ ಸ
ಲರೂ, ಸದಾಚಾರಿಗಳೂ, ಲಿಂಗ ಪೂಜಾಪ್ರಿಯರೂ
ಜಿತೇಂದ್ರಿಯರೂ, ಕ್ರಿಯಾಸಿದ್ಧಿಯುಳ್ಳವರೂ ಆ
ವರ ಪ್ರಾಚೀನ ಪದ್ಧತಿಯಂತೆ ನಿತ್ಯ ಮಠದ
ದಾಸೋಹವನ್ನಿಟ್ಟು ಬಂದ ಅತಿಥಿಗಳಿಗೆ ಅನ್ನದಾ
ಮಾಡುವರು ವಿದ್ಯಾಪಕ್ಷಪಾತಿಗಳಾದ ಶ್ರೀಗಳು ವಿದ
ವಂತರಿಗೆ ಸಹಾಯ ಮಾಡುವರು ಶ್ರೀಗಳು ತಮ
ಕ್ರಿಯಾಸಿದ್ಧಿಯಿಂದ ವಾಕ್ಸಿದ್ಧಿಯನ್ನು ಪಡೆದು ಅನೇ
ಮಹಿಮೆಗಳನ್ನು ಮಾಡಿರುವರು ಗ್ರಹ ಹಿಡಿದವ
ಕೂಡ ಶ್ರೀಗಳ ದರ್ಶನಮಾತ್ರದಿಂದ ಮುಕ್ತರಾಗಿ ಸು
ಗಳಾಗಿರುವರು ಇದರಂತೆ ಗುರುಪರಂಪರೆಯಿಂದ ನ
ಡಬಂದ ಪದ್ಧತಿಯಾಗಿದೆ ಈಗಿರುವ ಶ್ರೀಗಳವರ
ಭಸ್ಮದಿಂದಲೇ ಎಷ್ಟೋ ರೋಗಿಗಳ ರೋಗವ
ಕಳೆದಿರುವರು ೩೦-೫-೪೧ ರಲ್ಲಿ ಸರ್ ಸಾಲರ್ ಜ
ಬಹದ್ದೂರ್ ಜಾಹಗೀರ್‌ದಾರರು ಶ್ರೀ ಮುರಡಿಮಠ
ಬಂದು ಶ್ರೀಗಳ ದರ್ಶನ ಮಾಡಿಕೊಂಡು ಫಲಾಶೀ
ದವನ್ನು ಪಡೆದರು ಆಗ ಶ್ರೀಗಳಲ್ಲಿ ತೋರಿಸಿದ ಭ
ವಿಶ್ವಾಸವು ಬಹು ವರ್ಣನೀಯವಾಗಿತ್ತು

ಉದಾರಿಗಳೂ, ತಪೋನಿಧಿಗಳೂ ಆದ ಶ್ರೀಗಳವ
ಜಗದುದ್ಧಾರಕ್ಕಾಗಿ ತಮ್ಮ ಮಠದಲ್ಲಿ ಪ್ರತಿ ವ
ಪದ್ಧತಿಯಂತೆ ಶ್ರಾವಣ ಶು॥ ೧ ರಿಂದ ಅನುಷ್ಠಾನವ
ಪ್ರಾರಂಭಮಾಡಿ ಭಾದ್ರಪದ ಮಾಸದಲ್ಲಿ ಸಮಾಪ್
ಗೊಳಿಸಿದರು ಶ್ರೀಗಳು ಪ್ರತಿ ದಿನ ಬೆಳಿಗ್ಗೆ ಎ
ತಮ್ಮ ನಿತ್ಯಕರ್ಮಗಳನ್ನು ತೀರಿಸಿಕೊಂಡು ಲೋಕ
ಕಲ್ಯಾಣಕ್ಕಾಗಿ ಮಾಡುವ ಅನುಷ್ಠಾನ ಸಮಯಕ್ಕೆ ಸ್ಥ
ಪರಸ್ಥಳದ ಭಕ್ತಮಂಡಳಿಯವರು ಬಂದು ಕಣ್ಣಾರೆ ನ
ಯುವಂತೆ ನೋಡಿ ಆನಂದಪಡುತ್ತಿದ್ದರು ಮತ್ತ

ಮಧ್ಯಾಹ್ನ ಪಾದಪೂಜೆಯನ್ನು ಮಾಡಿ ತೀರ್ಥ ಪ್ರಸಾದವನ್ನು ಸೇವಿಸಿ ಧನ್ಯರಾಗುತ್ತಿದ್ದರು. ಇದೇ ಸಮಯದಲ್ಲಿ ಶ್ರೀಗಳವರು ತಮ್ಮ ಮಠದಲ್ಲಿ ವೀರಶೈವ ಮತೋದ್ಧಾರಕ್ಕಾಗಿ ಜನ್ಮವೆತ್ತಿ ಸನಾತನ ಧರ್ಮಜ್ಯೋತಿಯನ್ನು ಸರ್ವತ್ರ ಪ್ರಕಾಶಪಡಿಸಿ ಲೋಕಮಾನ್ಯರಾಗಿರುವ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಕರ್ನಾಟಕ ಭಾಷೆಯಲ್ಲಿ ಬರೆಯಲ್ಪಟ್ಟ ಶ್ರೀರೇಣುಕವಿಜಯ ಮಹಾಪುರಾಣವನ್ನು ಪ್ರಾರಂಭಮಾಡಿಸಿದರು

ಈ ಮಹಾ ಪುರಾಣವನ್ನು ಪಂಚ ಪೀಠಗಳೇ ಪಂಚಪ್ರಾಣಗಳೆಂದು ತಿಳಿದು ತನುಮನೋಧನಗಳಿಂದ ಮಹಾಪೀಠಗಳ ಸೇವೆಯನ್ನು ಮಾಡುತ್ತಲಿರುವ ಪದಾಧಿಕಾರಿಗಳೂ ವಿದ್ಯಾವಂತರೂ ಆದ ಸುಣ್ಣಕಲ್ಲು ಬಿದರಿ ಆರಾಧ್ಯಮಠದ ವೇ॥ ಪಂ॥ ಹರೀಶ್ವರಶಾಸ್ತ್ರಿಗಳವರು ಪುರಾಣವನ್ನು ಜನಗಳ ಮನಸ್ಸಿನ ಮೇಲೆ ಒಳ್ಳೆ ಪರಿಣಾಮವಾಗುವಂತೆ ಮಧ್ಯಮಧ್ಯದಲ್ಲಿ ವಿನೋದಪ್ರದಗಳಾದ ಕಥೆಗಳಿಂದ ಒಳ್ಳೆ ರಸಭರಿತವಾಗಿ ಮಂಜುಳ ಗಾನದೊಡನೆ ಹೇಳುತ್ತಿದ್ದರು. ಗುರುವರ್ಗದ ವಂಶದಲ್ಲಿ ಹುಟ್ಟಿ ಆ ವಂಶದ ಉದ್ಧಾರಕ್ಕಾಗಿ ಕಂಕಣಬದ್ಧರಾದ ಪಂಡಿತರು ಅತ್ಯಂತ ಗುರುಭಕ್ತಿಯಿಂದ ಗುರುಲೀಲೆಯನ್ನು ಬೋಧಿಸುವಾಗ ಜನಗಳಿಗೆ ಒಳ್ಳೆ ಸ್ಫೂರ್ತಿಯುಂಟಾಗುತ್ತಿತ್ತು. ಇಲ್ಲಿಯವರೆಗೆ ಈ ಭಾಗದಲ್ಲಿ ಶ್ರೀಜಗದಾಚಾರ್ಯರ ಪುರಾಣವನ್ನು ಯಾರೂ ಹೇಳಿರಲಿಲ್ಲ ಇದೇ ನೂತನವಾಗಿದ್ದುದರಿಂದ ಸಕಲರೂ ಭಕ್ತಿಯಿಂದ ಕೇಳುತ್ತಿದ್ದರು. ಪುರಾಣದಲ್ಲಿ ಸಂದರ್ಭಾನುಸಾರವಾಗಿ ಪುರಾಣಿಕರು ಪ್ರಾಚೀನ ಪದ್ಧತಿಗೆ ವಿರುದ್ಧವಾಗಿ ಆಚರಿಸುವ ಈಗಿನ ವಾಮಮಾರ್ಗಿಗಳ ಆಚಾರವನ್ನು ಖಂಡಿಸಿ ಸ್ತ್ರೀಪುರುಷರ ರೀತಿನೀತಿಯನ್ನೂ ಅವರ ಆಹಾರ ವ್ಯವಹಾರಗಳನ್ನೂ ಉಡಪು ತೊಡಪುಗಳನ್ನೂ ಅವರು ಮಾಡಬೇಕಾದ ನಿತ್ಯನೈಮಿತ್ತಿಕಾದಿ ಧಾರ್ಮಿಕ ಕರ್ಮಗಳನ್ನೂ ಹಾಗೂ ವರ್ಣಾಶ್ರಮದ ತಾರತಮ್ಯವನ್ನೂ ಪಾತಿವ್ರತ್ಯ, ಬ್ರಹ್ಮಚರ್ಯ ಮೊದಲಾದವುಗಳನ್ನೂ ಶಾಸ್ತ್ರಪ್ರಮಾಣಗಳಿಂದ ಸರ್ವರೂ ತಿಳಿದಾಗುವಂತೆ ಬೋಧಿಸುತ್ತಿದ್ದರು ಇಲ್ಲಿಯ ೧೮ ಪಲ್ಲಯ್ಯನಮಠದ ವೇ॥ ಕೊಟ್ರಯ್ಯನವರ ಸಂಗೀತವಾದ ಓದುವಿಕೆಯಿಂದಲೂ ಮತ್ತು ಹಳೇಮನಿ ಪ್ರಿಯ ತ ವೀರಭದ್ರಪ್ಪನವರ ಪಿಯಾನೆ ವಾದ್ಯದಿಂದಲೂ ಮತ್ತು ಕೂಲ್ಲೂರ ಗ್ರಾಮದ ಕರೀಮಸಾಹೇಬರ ತಬಲಾ ವಾದ್ಯದಿಂದಲೂ ಪುರಾಣಕ್ಕೆ ಒಳ್ಳೆ ಶೋಭೆಯುಂಟಾಗಿದ್ದಿತು ಒಟ್ಟಿನ ಮೇಲೆ ಸರ್ವಾಂಗಸುಂದರವಾದ ಪುರಾಣವನ್ನು ಸರ್ವಸಮರ್ಥರಾದ ಪಂಡಿತರು ಪ್ರಾಸಂಗಿಕವಾಗಿ ಬೋಧಿಸಿ ಸರ್ವಮತೀಯರಿಗೂ ಆನಂದವನ್ನುಂಟುಮಾಡಿದರು. ಈ ರೀತಿಯಾಗಿ ಪುರಾಣವು ಬಹು ರಮ್ಯವಾಗಿ ನಡೆದು ಇದೇ ಭಾದ್ರಪದ ಬ॥ ತಿಗೆ ಸಮಾಪ್ತಿಯಾಯಿತು. ಅನುಷ್ಠಾನವ ಮತ್ತು ಪುರಾಣದ ಸಮಾಪ್ತಿಸೂಚಕವಾದ ಆರಾಧನೆಯು ಬಹು ವೈಭವದಿಂದ ನೆರವೇರಿಸಲ್ಪಟ್ಟಿತು. ೩-೪ ಸಾವಿರ ಜನ ಭಕ್ತ ಮಾಹೇಶ್ವರ ಅನ್ನಸಂತರ್ಪಣೆಯಾಯಿತು

ಮಧ್ಯದಲ್ಲಿ ಮಳೆಯಿಲ್ಲದೆ ಜನಗಳು ಚಿಂತಾಕ್ರಾಂತರಾಗಿದ್ದರು ರೇಣುಕಾಚಾರ್ಯರ ಲೀಲೆಯು ವಿಚಿತ್ರವಾದುದು ಆ ಮಹಿಮಾಶಾಲಿಯ ಪುರಾಣವು ಎಲ್ಲಿ ನಡೆಯುತ್ತಿದೆಯೋ ಅಲ್ಲಿ ಯಾವ ತೊಂದರೆಯೂ ಉಂಟಾಗುವದಿಲ್ಲ ಇದನ್ನು ತಿಳಿದೇ ಸದರಿ ಮಠದ ಶ್ರೀಗಳು ಭಕ್ತಮಂಡಳಿಗೆ ಅಭಯ ವಚನವನ್ನು ಕೊಟ್ಟಿದ್ದರು ಶ್ರೀಗಳ ಅಪ್ಪಣೆಯಂತೆ ಶ್ರೀ ರುದ್ರಮುನಿಶಿವಾಚಾರ್ಯರ ಅವತಾರವಾಗುವದಿವಸ (ತಾ॥ ೩೦-೮-೪೧) ಸರ್ವರಿಗೂ ಆನಂದವಾಗುವಂತೆ ಮಳೆಯು ಆಯಿತು ಜನಗಳಿಗೆ ಹರ್ಷವೂ, ಭಕ್ತಿಯೂ ಇಮ್ಮಡಿಯಾಗಿ ಅದೇ ದಿವಸವೇ ಶಿಷ್ಯನಾಗಿರುವ ರುದ್ರಮುನಿಸ್ವಾಮಿಗೆ ನಾಮಕರಣ ಮಹೋತ್ಸವವನ್ನು ಬಹು ವೈಭವದಿಂದನೆರವೇರಿಸಿದರು

ಆಸ್ತಿಕರಾದ ವೀರಶೈವರು ಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಪುರಾಣವನ್ನು ತಮ್ಮ ತಮ್ಮ ಗ್ರಾಮದಲ್ಲಿಪ್ರಾರಂಭಮಾಡಿ ಆ ಮಹಾತ್ಮನ ಚರಿತ್ರೆಯನ್ನು ಕೇಳಿ ತಮ್ಮ ಸಂತತಿ ಸಂಪತ್ತನ್ನು ಅಭಿವೃದ್ಧಿಪಡಿಸಿ ಕೊಂಡುಜಗದಾಚಾರ್ಯರ ಕೃಪಾಶೀರ್ವಾದಕ್ಕೆ ಪಾತ್ರರಾಗಬೇಕೆಂದು ಹಾರೈಸುತ್ತೇನೆ.

ಓರ್ವ ಗುರುಭಕ್ತ

ಶ್ರಾವಣಮಾಸ ಭಜನ ಸಮಾಪ್ತಿ, ಚಿಂಚೋಳಿ

ಬಿದರ ಜಿಲ್ಲಾ ಚಿಂಚೋಳಿಯಲ್ಲಿ ವೀರಶೈವ ತರುಣ ಸಂಘದಲ್ಲಿ ಶ್ರಾವಣಮಾಸದಲ್ಲಿ ಪ್ರತಿದಿವಸ ಶ್ರೀಜಗದಾಚಾರ್ಯರ ಭಜನವು ನಡೆದು ಕಳೆದ ತಿಂಗಳು ೬ ನೆಯ ತಾರೀಖಿನ ದಿವಸ ಸಮಾಪ್ತಿಗೊಂಡಿತು ಆ ದಿವಸ ನೂರಾರು ಜನ ಗಣತೃಪ್ತಿಯಾಯಿತು ಸಮಾಪ್ತಿ ದಿವಸ ರಾತ್ರಿ ೮ ರಿಂದ ೧೨ರ ವರೆಗೆ ಭಜನೆಯು ನಡೆಯಿತು ಎತ್ತನೋಡಿದಡತ್ತ ಜಗದಾಚಾರ್ಯರ ಮತ್ತು ಪಂಡಿತಜಿಯವರ ಜಯಘೋಷವೇ ಆಗಿಹೋಗಿತ್ತು ಕೊನೆಗೆ ಮಂಗಲಾರತಿಯಾಗಿ ಕಾರ್ಯವು ಸಮಾಪ್ತವಾಯಿತು

ಓರ್ವ ಪ್ರತ್ಯಕ್ಷದರ್ಶಿ.

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ರಥೋತ್ಸವ

ಕೊಪ್ಪಳ ಜಿಲ್ಲಾ ಪೈಕಿ ಎರೆಹಂಚಿನಾಳು ಗ್ರಾಮದ ಪಶ್ಚಿಮಕ್ಕೆ ಸುಮಾರು ನಾಲ್ಕು ಫರ್ಲಾಂಗು ಅಂತರದಲ್ಲಿ ೪ ಎಕರೆ ಭೂಮಿಯಲ್ಲಿ ಬಿಲ್ವವೃಕ್ಷಗಳಿಂದ ಶೋಭಿಸುವ ವನವಿದೆ ಈ ಬಿಲ್ವವನದ ಮಧ್ಯದಲ್ಲಿ ಒಂದು ಚೌಕಿ ಒಂದು ಉದ್ಯಾನವೂ ಮತ್ತು ಒಂದು ಸೇದುವ ಭಾವಿಯೂ ಇವೆ ಇವುಗಳಲ್ಲಿ ಭಾವಿಯನ್ನು ಸದರಿ ಗ್ರಾಮದ ಕೈ॥ ಗಂಡಪ್ಪ ವೈಶ್ಯರ ಇವರೂ ಮತ್ತು ಚೌಕಿಯನ್ನು ಕೈ॥ ಭರಮಪ್ಪಪೋಟಿ ಇವರೂ ಕಟ್ಟಿಸಿ ಅನುಕೂಲವನ್ನೊದಗಿಸಿಕೊಟ್ಟಿರುತ್ತಾರೆ ಇಲ್ಲಿ ಪ್ರತಿವರ್ಷವೂ ಗಣಾರಾಧನೆಯು ಜರುಗುತ್ತಿದ್ದು, ಕಾಲಕ್ರಮದಿಂದ ನಿಂತುಹೋಗಿತ್ತು ಈ ದುಸ್ಥಿತಿಯನ್ನು ತರುಣಸಂಘದ ಶ್ರೀಕೆಂಚಪ್ಪ ಮಾಸ್ತರ ಕಮತದ ಇವರು ಕಂಡು ಪುನಃ ನಡೆಯಿಸಬೇಕೆಂದು ಸಂಕಲ್ಪಿಸಿ ಲಿಂಗಪ್ಪ ಮುದಿಯಪ್ಪ ಬಡಿಗೇರ ಇವರಿಂದ ೧೫ ದಿವಸಗಳೊಳಗೆ ಪುಷ್ಪ ರಥವನ್ನು ತಯಾರುಮಾಡಿಸಿದರು ರಥೋತ್ಸವವು ಶ್ರಾವಣ ಬ॥ ೧೧ ಸೋಮವಾರ ಯಡೆಯಾಪುರ, ಕಲ್ಲೂರು, ಬಳಿಗೇರಿ, ಪುರವರ್ಗಮಠದ ಪಂ॥ ಹಿರೇಮಠದಿಂದ ರಥದ ಕಲಶವೂ ಶ್ರೀ ಜಗದ್ಗುರು ಪಂಚಾಚಾರ್ಯರ ಭಾವಚಿತ್ರಯುಕ್ತವಾದ ಪಲ್ಲಕ್ಕಿಯೂ, ವಾದ್ಯವೈಭವದೊಡನೆ ಹೊರಟು ಬಿಲ್ವವನವನ್ನು ಸೇರಿದವು ಬಳಿಕ ಗ್ರಾಮದ ಆರ್ ಸಿ ಹಿರೇಮಠ ಇವರ ಹಸ್ತ ಮುಟ್ಟಿದಕೂಡಲೇ ಶ್ರೀ ಮುದಿಯಪ್ಪನವರು ರಥದಮೇಲೆ ಕಲಶವನ್ನು ಸ್ಥಾಪಿಸಿದರು ತರುವಾಯ ಗಣಾರಾಧನೆ ಜರುಗಿ, ರಥೋತ್ಸವವು ಸಾಯಂಕಾಲ ೪ ಘಂಟೆಗೆ ಪ್ರಾರಂಭವಾಯಿತು ರಥದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾವಳಿಯ ಭಾವಚಿತ್ರವನ್ನು ಮೂರ್ತಗೊಳಿಸಿದರು ರಥವು ಪದ್ಧತಿಯಮೇರೆಗ ಸಾಗಿ ಸ್ವಸ್ಥಾನಕ್ಕೆ ಬಂದಕೂಡಲೇ ಮಂಗಲವಾಯಿತು ರಥದ ಕಲಶವನ್ನು ಕೈ॥ ಸೋಮಪ್ಪ ಸಜ್ಜನರ ಮತ್ತು ಕೈ॥ ದೇವೇಂದ್ರಪ್ಪ ಹೊನ್ನಪ್ಪ ಕಮತದ ಇವರು ಮಾಡಿಸಿಕೊಟ್ಟಿರುವರು

ಮರುದಿನ ಮಂಗಳವಾರ ಪಲ್ಲಕ್ಕಿಯಲ್ಲಿ ಶ್ರೀ ಜಗದಾಚಾರ್ಯರ ಭಾವಚಿತ್ರಸಮೇತ ಮಹೋತ್ಸವವು ಸಾಯಂಕಾಲ ೫ ಘಂಟೆಗೆ ವನದಿಂದ ನಾನಾವಿಧವಾದ್ಯವೈಭವದೊಡನೆ ಹೊರಟಿತು ಉತ್ಸವದಲ್ಲಿ ಸ್ಥಳ, ಪರಸ್ಥಳದ ಜನರು ಭಾಗಿಗಳಾಗಿದ್ದರು. ಪುರದ ಬೀದಿಗಳು ತಳಿರು ತೋರಣಗಳಿಂದಲಂಕೃತವಾಗಿದ್ದವು ಅಂದಿನ ಆ ಶೋಭೆಯು ಭೂ ಕೈಲಾಸವಂದೆ ಒಪ್ಪುತ್ತಿತ್ತೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಉತ್ಸವವು ಶ್ರೀ ಸಿದ್ಧಪ್ಪ ಪೋಟಿ ಇವರ ಮನೆಗೆ ತಲ್ಪಿತು ಉತ್ಸವದಲ್ಲಿ ಭಾಗಿಗಳಾಗಿದ್ದ ಸರ್ವರಿಗೂ ಭಜನಾಸಂಘದ ಅಧ್ಯಕ್ಷರಿಗೂ ಶ್ರೀಪತ್ರೀಶ್ವರ ಭಜನಾಸಂಘದ ಪರವಾಗಿ ಶ್ರೀ ಶಿವಬಸಪ್ಪಕುರಿ ಇವರಿಗೂ ಕರಡಿ ಮೇಳದಪರವಾಗಿ ಶ್ರೀ ಲಕ್ಷ್ಮಪ್ಪಕೋಳೂರು ಇವರಿಗೂ ಮತ್ತು ಶ್ರೀ ಮುದಿಯಪ್ಪ ಬಡಿಗೇರ ಇವರಿಗೂ ಫಲಾಶೀರ್ವಾದವಾದನಂತರ ಜಗದಾಚಾರ್ಯರ ಜಯಘೋಷದೊಡನೆ ಉತ್ಸವಕಾರ್ಯವು ಸಮಾಪ್ತಿಗೊಂಡಿತು.

ಗುರುಸೇವಾಕಿಂಕರ, ಹೂವಿನಹಡಗಲಿ.

ನಾಮಕರಣ ಮಹೋತ್ಸವ, ಚಿಂಚೋಳಿ

ನಿಜಾಮ ಇಲಾಖಾ ಬಿದರಜಿಲ್ಲಾ ಚಿಂಚೋಳಿ ಗ್ರಾಮದಲ್ಲಿ ವೀರಶೈವ ತರುಣ ಸಂಘಾಧ್ಯಕ್ಷರಾದ ವೇ॥ ಕೊಟ್ರಪ್ಪಯ್ಯನವರ ಗೃಹದಲ್ಲಿ ಶ್ರಾವಣ ಶು॥ ೧೦ ರವಿವಾರ ದಿವಸ ನಾಮಕರಣ ಮಹೋತ್ಸವವು ನೆರವೇರಿತು ಪ್ರಾತಃಕಾಲ ೯ ರಿಂದ ೧೨ರ ವರೆಗೆ ಶ್ರೀ ಜಗದ್ಗುರು ರೇಣುಕರ ಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕವಾಗಿ ಸಹಸ್ರ ಬಿಲ್ವಾರ್ಚನೆಯು ನೆರವೇರಿತು ಅನಂತರ ೧೨ ರಿಂದ ಸಾಯಂಕಾಲ ೪ರ ವರೆಗೆ ಅನ್ನಸಂತರ್ಪಣೆಯು ನೆರವೇರಿತು ಶ್ರೀ॥ ಷ॥ ಬ್ರ॥ ಚನ್ನವೀರಶಿವಾಚಾರ್ಯ ಪಟ್ಟಾಧಿಕಾರಿಗಳು ಮತ್ತು ಶ್ರೀ॥ ಷ॥ ಬ್ರ॥ ಮಹಾಲಿಂಗಸ್ವಾಮಿ ದೇಶಿಕೇಂದ್ರ ಈ ಉಭಯ ಸ್ವಾಮಿಗಳ ಹಸ್ತದಿಂದ ಶ್ರೀ ಜಗದ್ಗುರು ರೇಣುಕರ ಲಿಂಗೋದ್ಭವ ಮೂರ್ತಿಯು ಸ್ಥಾಪಿಸಲ್ಪಟ್ಟಿತು. ಸಾಯಂಕಾಲ ೫ ರಿಂದ ೮ರ ವರೆಗೆ ಶ್ರೀ ಮಹಾಲಿಂಗಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆಗೂಡಿತು ಆದಿಯಲ್ಲಿ ತರುಣ ಸಂಘದ ಭಜನಾಮಂಡಲಿಯವರು ಶ್ರೀ ಜಗದ್ಗುರು ಪಂಚಾಚಾರ್ಯರ ಭಜನವನ್ನು ಸುಸ್ವರದಿಂದ ಹಾಡಿ ಸರ್ವರ ಮನಸ್ಸನ್ನೂ ಆನಂದಸಾಗರದಲ್ಲಿ ಮುಳುಗಿಸಿದರು ಅನಂತರ ಗುರುಬಸವಯ್ಯ ಎಂಬವರು ದುಷ್ಟರ ಲಕ್ಷಣ ಮತ್ತು ಅವರ ನಡತೆಯ ಬಗ್ಗೆ ಭಾಷಣಮಾಡಿದರು ಬಳಿಕ ಮಹಾರುದ್ರಯ್ಯ ಮತ್ತು ವಿರೂಪಾಕ್ಷಶಾಸ್ತ್ರಿಗಳು ಅಷ್ಟಾವರಣದ ಮಹತ್ವವನ್ನು ಕುರಿತು ಭಾಷಣಮಾಡಿದರು ಆಮೇಲೆ ಶ್ರೀ ಸಿದ್ಧಲಿಂಗಯ್ಯನವರು ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವನ್ನು ಕುರಿತು ಭಾಷಣಮಾಡಿ ಸರ್ವ ಸಭಿಕರ ಮನಸ್ಸನ್ನಾನಂದಗೊಳಿಸಿದರು ಇವರ ಭಾಷಣದಲ್ಲಿ ಅಡಿಗಡಿಗೆ ಕರತಾಡನಗಳಾಗುತ್ತಿದ್ದವು ತರುವಾಯ ಅಧ್ಯಕ್ಷ ಮಹೋದಯರು ಸರ್ವರ ಭಾಷಣದ ಸಾರವನ್ನು ತೆಗೆದುಕೊಂಡು ಭಾಷಣಮಾಡಿದರು ಆಮೇಲೆ ಸರ್ವ ಭಕ್ತ ಮಹೇಶ್ವರರೂ ಕೂಡಿ ಸಂಘಾಧ್ಯಕ್ಷರ ಮಗುವಿಗೆ "ರೇವಣಸಿದ್ಧ" ಎಂಬ ಪವಿತ್ರ ನಾಮವನ್ನಿಟ್ಟರು ಜೋಗುಳ ಮತ್ತು ಮಂಗಲಾರತಿಯಾದ ಮೇಲೆ ಕಾರ್ಯವು ಶ್ರೀ ಜಗದಾಚಾರ್ಯರ ಜಯಘೋಷದೊಡನೆ ಮುಕ್ತಾಯಗೊಂಡಿತು ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ! ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾರಾಜಕೀ ಜೈ! ವಿದ್ವದ್ರತ್ನ ಸನಾತನ ವೀರಶೈವ ಧರ್ಮೋದ್ಧಾರಕ ಶಿವಾವತಾರಿ ಪಂಡಿತ ಶ್ರೀ ಕಾಶೀನಾಥಶಾಸ್ತ್ರೀಜೀ ಕೀ ಜೈ!!

ಓರ್ವ ಗುರುಭಕ್ತ

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಶಿವಕಥಾ ಕಾಲಕ್ಷೇಪ

ಯಾರು ಐಹಿಕಸುಖವನ್ನಾಗಲಿ ಅಥವಾ ಆಮುಷ್ಮಿಕ ಸುಖವನ್ನಾಗಲಿ ಅಪೇಕ್ಷಿಸುವರೋ ಅಂಥವರು ಆ ಸುಖಗಳಿಗೆ ಕಾರಣವಾದ ಪರಮಾತ್ಮ ಸಂಬಂಧವಾದ ಧರ್ಮಸ್ವರೂಪ ಪುರಾಣ ಪುಣ್ಯಕಥಾಶ್ರವಣವನ್ನು ಮಾಡಿಯೇ ತೀರಬೇಕು ಇಲ್ಲದಿದ್ದರೆ ತಾವು ಬೇಡುವ ಸುಖವು ವಿಮುಖವಾಗಿ ಎಂದೆಂದಿಗೂ ಲಭಿಸದೆಂದು ಆರ್ಯೋಕ್ತಿಯಿರುವುದು ಧರ್ಮವು ಯಾವಕಾಲದಲ್ಲಿಯೂ ನಿರ್ಬಾಧಿತವಾಗಿರುವುದು ಅದು ಧಾರ್ಮಿಕ ಸ್ತ್ರೀಪುರುಷರಿಂದ ಸದಾ ಬೆಳಗುತ್ತಲೂ ಇರುವುದು

ಇಂತಹ ಸರ್ವೋತ್ಕೃಷ್ಟವಾದ ಧರ್ಮವನ್ನು ವಿರೋಧಿಸುವುದು ದುಷ್ಕರ್ಮ ಪರಿಪಾಕವೇ ಸರಿ ಅಲ್ಲಲ್ಲಿ ಅಲ್ಪಸ್ವಲ್ಪ ಅಜ್ಞರು ತಿರಸ್ಕರಿಸಿದ ಮಾತ್ರಕ್ಕೆ ಪುರಸ್ಕರಿಸುವ ಎಷ್ಟೋ ಜನ ಸುಜ್ಞರು ಭಗವತ್ಪ್ರೇರಣೆಯಿಂದ ಲೋಕದಲ್ಲಿ ಉದಯಿಸಿಯೇ ಇರುವರು ಅಸ್ತು

ಪರಮ ಪವಿತ್ರವಾದ ಕಳೆದ ಶ್ರಾವಣ ಮಾಸದಲ್ಲಿ ಕೀರ್ತನಕೇಸರಿ ಕವಿಭೂಷಣೇತ್ಯಾದಿ ಬಿರುದಾಂಕಿತರೂ ಶ್ರೀಜಗದ್ಗುರು ರಂಭಾಪುರೀ ಮಹಾಸಂಸ್ಥಾನದ ಧರ್ಮೋಪದೇಶಕರೂ ಆದ ವೇ॥ ಬ್ರ॥ ಶ್ರೀ ಗುಬ್ಬಿ ಶಿವರುದ್ರಶಾಸ್ತ್ರಿಗಳು ತುಮಕೂರು ಗಂಟೀದೇವರಮಠ ಇವರು ಕುಂಸಿ ಸಬ್‌ತಾಲ್ಲೂಕು ಹಾರನಹಳ್ಳಿ ಶ್ರೀ ನಂದೀಶ್ವರ

[೬ ನೆಯ ಪುಟವನ್ನು ನೋಡಿ]

ಚಂದಾದಾರರಲ್ಲಿ ವಿಜ್ಞಾಪನೆ.

ಪ್ರತಿ ವರ್ಷ ಪದ್ಧತಿಯಂತೆ ನವರಾತ್ರ ಮಹೋತ್ಸವ ನಿಮಿತ್ತವಾಗಿ ಮುಂದಿನ ವಾರದ (ತಾ॥೨೯-೯-೪೧) ಪತ್ರಿಕೆಯು ಹೊರಡುವದಿಲ್ಲ.

ಮ್ಯಾ.

ಪಂಚಾಚಾರ್ಯಪ್ರಭಾ

೧೯೪೧ನೆಯ ಸಪ್ಟೆಂಬರ್ ತಾ॥ ೨೨ನೆಯ ಸೋಮವಾರ

ಗುರುಸೇವಾಪದ್ಧತಿ.

ಭೂತಿರುದ್ರಾಕ್ಷಭೂಷಾಢ್ಯಃ ಪಂಚಾಕ್ಷರಜಪಂ ಜಪನ್ ।
ತ್ವರಯಾ ಗುರುಸಾನ್ನಿಧ್ಯಂ ಗತ್ವಾ ತತ್ಪಾದಪಂಕಜೇ ॥
ನಮಸ್ಕೃತ್ಯ ನಮೇದ್ಭಕ್ತ್ಯಾ ಸ್ವಗೃಹಂ ಪ್ರತಿ ತಂ ಗುರುಂ ।
ಆನಯೇ ಶಿಬಿಕಾಯಾಮಾರೋಪ್ಯ ಗಜೇ ವಾ ತುರಂಗಕೇ ॥
ಅನುಗಚ್ಛೇತ್ಸ್ವಯಂ ಭಕ್ತ್ಯಾ ವಾದ್ಯಘೋಷಸಮನ್ವಿತಃ ।
ಗೃಹಂ ನೀತ್ವಾ ಗುರುಂ ಪಶ್ಚಾತ್ ಸ್ವೀಯಾಂ ಪತ್ನೀಂ ವಿಧಾಯ
ತೇನೋದಕೇನ ಶಿರಸಿ ಸಂಪ್ರೋಕ್ಷ್ಯ ಸ್ವಜನೈಸ್ಸಹ ।
ದತ್ವಾ ಹಸ್ತಾವಲಂಬಂ ಚ ತತೋ ನೀತ್ವಾ ಗೃಹಾಂತರಂ ॥
ಪ್ರಕಲ್ಪ್ಯ ಚಾಸನಂ ಶ್ರೇಷ್ಠಂ ನಿವೇಶ್ಯ ಪ್ರೀತಿಪೂರ್ವಕಂ ।
ಯಥಾವಿಧ್ಯರ್ಥ ನೇನ ಪೂಜಯೇದ್ಗುರುಮುತ್ತಮಂ ॥

(ಜಾಪ್ರಜ್ಞಾಸಾಗರ ಪಟಲ ೨)

ಶಿಷ್ಯನು ವಿಭೂತಿ, ರುದ್ರಾಕ್ಷಗಳಿಂದಲಂಕೃತನಾಗಿ ಪಂಚಾಕ್ಷರಮಹಾಮಂತ್ರವನ್ನು ಜಪಿಸುತ್ತ ಶೀಘ್ರವಾಗಿ ಗುರುಸನ್ನಿಧಿಗೆ ಹೋಗಿ ಭಕ್ತಿಯಿಂದ ಆ ಗುರುವಿನ ಪಾದಕಮಲಗಳಿಗೆ ಸಾಷ್ಟಾಂಗಪ್ರಣಾಮ ಮಾಡಿ ಗುರುಮೂರ್ತಿಯನ್ನು ತನ್ನ ಮನೆಗೆ ಕರೆದುಕೊಂಡು ಹೋಗಬೇಕು. ಶಿಷ್ಯನು ತನ್ನ ಶಕ್ತ್ಯನುಸಾರವಾಗಿ ಗುರುಮೂರ್ತಿಯನ್ನು ಪಲ್ಲಕ್ಕಿಯಲ್ಲಾಗಲಿ, ಆನೆಯಮೇಲಾಗಲಿ, ಕುದುರೆಯಮೇಲಾಗಲಿ ಕುಳ್ಳಿರಿಸಿ, ವಾದ್ಯವೈಭವದೊಡನೆ ಭಕ್ತಿಯಿಂದ ಹಿಂಬಾಲಿಸಿ ಹೋಗಬೇಕು. ಗುರುಮೂರ್ತಿಯ ಉತ್ಸವವು ತನ್ನ ಮನೆಯ ತಲ್ಪಿದ ಮೇಲೆ ಬಾಗಿಲದಲ್ಲಿ ಗುರುವಿನ ಪಾದಪ್ರಕ್ಷಾಲನವನ್ನು ಮಾಡಿ ಆ ಉದಕದಿಂದ ತಾನೂ ತನ್ನ ಪತ್ನೀಪುತ್ರಬಂಧುಬಳಗದವರೆಲ್ಲರೂ ಮಸ್ತಕದ ಮೇಲೆ ಸಂಪ್ರೋಕ್ಷಣೆಯನ್ನು ಮಾಡಿಕೊಳ್ಳಬೇಕು. ಆ ಮೇಲೆ ಹಸ್ತಾವಲಂಬನವನ್ನು ಕೊಟ್ಟು ಗುರುವನ್ನು ಮನೆಯೊಳಗೆ ಕರೆದೊಯ್ದು ಮೊದಲೇ ಸಿದ್ಧಗೊಳಿಸಿದ ಶ್ರೇಷ್ಠಾಸನದ ಮೇಲೆ ಪ್ರೇಮದಿಂದ ಮೂರ್ತಮಾಡಿಸಿ ಗುರುಮೂರ್ತಿಯನ್ನು ಶಾಸ್ತ್ರೋಕ್ತವಾಗಿ ಪೂಜಿಸಬೇಕು. ಗುರುಪೂಜಾವಿಧಾನವು ಕ್ರಿಯಾಸಾರದಲ್ಲಿ ಶ್ರೀಮನ್ನೀಲಕಂಠಶಿವಾಚಾರ್ಯರಿಂದ ಈ ರೀತಿಯಾಗಿ ಹೇಳಲ್ಪಟ್ಟಿರುವದು —

ಇಷ್ಟಲಿಂಗಸ್ಯ ಪೂಜಾ ತು ಸಮ್ಯಗೇವೋದಿತಾ ಮಯಾ ।
ಗುರುಪೂಜನಮೇತಸ್ಮಾದಧಿಕಂ ಚ ತಥಾಪಿ ತತ್ ॥
ಅಂಗಂ ಶೇಷಿಣಿ ಪೂಜಾಯಾಂ ತಸ್ಮಾಚ್ಚ ಜಂಗಮಪೂಜನಂ ।
ಗುರುಜಂಗಮಪೂಜಾಯಾ ಏಕರೂಪ್ಯಂ ತಥೋಚ್ಯತೇ ॥
ಸಿದ್ಧ್ಯರ್ಥಕರ್ತೇ ತು ಮಂತ್ರರತ್ನಮುಖೋ ಗುರುಃ ।
ತಸ್ಯ ಪೂಜಾ ಚ ಕರ್ತವ್ಯಾ ಪಾದಯೋರಸ್ಯ ಚಾಭಿಷೇಚನಂ ॥
ಯದ್ಯದುಕ್ತಂ ಪೂರ್ವಮೇತದ್ಗುರೌ ತತ್ರಾಪಿ ಪೂಜನಂ ।
ವಿಶೇಷಸ್ತತ್ರ ಪಾದಯೋರಭಿಷೇಚನಮೀರಿತಂ ॥

(ಕ್ರಿಯಾಸಾರ-ಉ.೧೩)

ಇಷ್ಟಲಿಂಗಪೂಜಾವಿಧಾನವು ಚತುರ್ಥಸೋಪದೇಶದಲ್ಲಿ ಚೆನ್ನಾಗಿ ಪ್ರತಿಪಾದಿಸಲ್ಪಟ್ಟಿರುವುದು. ಈ ಇಷ್ಟಲಿಂಗಾರ್ಚನವಿಧಾನಕ್ಕಿಂತಲೂ ಗುರುಪೂಜಾವಿಧಾನವು ಅಧಿಕವಾಗಿರುವುದು. ಆದರೂ ಗುರುಪೂಜೆಯು ಅಂಗಿಯಾದ ಇಷ್ಟಲಿಂಗಪೂಜೆಯಲ್ಲಿ ಅಂಗವಾಗಿರುವದು. ಇದರಿಂದಲೇ ಜಂಗಮಪೂಜೆಯೂ ಕೂಡ ಅಂಗವಾಗಿರುವದು. ಏಕೆಂದರೆ ಗುರುಜಂಗಮರ ಪೂಜೆಯು ಏಕರೂಪವಾಗಿರುವದೆಂದು ಶಾಸ್ತ್ರದಲ್ಲಿ ಹೇಳಲ್ಪಡುತ್ತದೆ. ಗುರುಮೂರ್ತಿಯು ಶಿಷ್ಯನ ಕಿವಿಯಲ್ಲಿ ಪಂಚಾಕ್ಷರ ಮಹಾಮಂತ್ರವನ್ನು ಉಪದೇಶಿಸಿರುವದರಿಂದ ಆ ಗುರುಮೂರ್ತಿಯನ್ನು ಪೂಜಿಸಬೇಕು. ಪೂರ್ವೋಪದೇಶದಲ್ಲಿ ಲಿಂಗಪೂಜಾವಿಧಾನವು ಯಾವ ರೀತಿ ಹೇಳಲ್ಪಟ್ಟಿರುವುದೋ ಗುರುವಿನಲ್ಲಿಯೂ ಅದೇ ರೀತಿ ಎಲ್ಲ ವಿಧಾನವನ್ನೂ ಮಾಡಬೇಕು. ಆದರೆ ಇಲ್ಲಿ ಗುರುವಿನ ಪಾದಗಳಿಗೆ ಅಭಿಷೇಕ ಮಾಡುವುದೇ ಒಂದು ವಿಶೇಷವಾಗಿ ಹೇಳಲ್ಪಟ್ಟಿರುವದು.

ಗುರೋಃ ಸಮರ್ಚನಸಮಯೇ ದೀಪಾ ಅಷ್ಟೋತ್ತರಂ ಶತಂ ।
ಷಟ್‌ತ್ರಿಂಶದ್ವಾ ಯಥಾಶಕ್ತಿ ಜ್ವಾಲಯೇದ್ದಶಹಂ ಬುಧಃ

ಗುರುಪೂಜಾಕಾಲದಲ್ಲಿ ಅಷ್ಟೋತ್ತರಶತ (೧೦೮) ದೀಪಗಳನ್ನಾಗಲಿ ಷಟ್‌ತ್ರಿಂಶತ್ (೩೬) ದೀಪಗಳನ್ನಾಗಲಿ ಅಥವಾ ಯಥಾಶಕ್ತಿ ದೀಪಗಳನ್ನಾಗಲಿ ಪ್ರಜ್ವಲಿಸಬೇಕು.

ಶರೀರಾದ್ಯರ್ಪಣಂ ಸರ್ವಂ ಗುರವೇ ದತ್ತ್ವಾ ಸ ಶಿಷ್ಯಕಃ ।
ಅಪ್ರಸಾದಂ ವಿನಾ ದ್ರವ್ಯಂ ಭುಂಜೀಯಾದ್ಗುರ್ವನುಜ್ಞಯಾ ।

ಶಿಷ್ಯನು ತನ್ನ ತನುಮನಧನಗಳೆಲ್ಲವನ್ನೂ ಗುರುವಿಗೆ ಅರ್ಪಿಸಿ ಆ ಗುರುವಿನ ಪ್ರಸಾದವನ್ನು ಕೊಡಲು ಗುರುವಿಗೆ ವಿನಂತಿಸಿ ಗುರುವಿನ ಅಪ್ಪಣೆಯನ್ನು ಪಡೆದು ತಾನು ಸ್ವೀಕರಿಸಬೇಕು.

ನಿಮಜ್ಜಂತಂ ತು ಪುತ್ರಂ ವೈ ಸಂಸಾರೇ ಜನಕಃ ।
ಸ ತಾರಯತಿ ಸ ಸ ತಾದೃಗ್ವರ್ಣ್ಯಃ ಸ ಭವೇತ್ ಪಿತಾ ॥
ಉಭಯೋರ ತಯೋ ಜ್ಞಾತ್ವಾ ಇತರಂ ಸಂಪ್ರಪೂಜಯೇತ್ ।

(ಕ್ರಿಯಾ ಉ ೧೩)

ಹಡೆದ ತಂದೆಯು ಪುತ್ರನನ್ನು ಸಂಸಾರ ಸಮುದ್ರದಲ್ಲಿ ಮುಳುಗಿಸಿಬಿಡುತ್ತಾನೆ. ಮುಕ್ತಿಸಾಧಕನಾದ ಗುರುವೆಂಬ ತಂದೆಯು ಸಂಸಾರಸಮುದ್ರದಿಂದ ದಾಟಿಸುವನು. ಆದುದರಿಂದ ಈ ಇಬ್ಬರು ತಂದೆಗಳಿಗಿರುವ ಭೇದವನ್ನು ತಿಳಿದು ಮುಮುಕ್ಷುವಾದ ಶಿಷ್ಯನು ಗುರುವೆಂಬ ತಂದೆಯನ್ನೇ ಪೂಜಿಸಬೇಕು.

ಗುರೋಃ ಪೂಜೈವ ಪೂಜಾ ಸ್ಯಾಚ್ಛಿವಸ್ಯ ಪರಮಾತ್ಮನಃ ।
ಗುರೋಸ್ಸಂತೋಷಮಾತ್ರೇಣ ತತ್ವ ಪರಾತ್ಪರ ಸಿದ್ಧಿಕರೋ ಭವೇತ್ ॥
ಶಿಷ್ಯಸ್ಯಾಂತರ್ಗತಂ ಧ್ವಾಂತಂ ಜ್ಞಾನ ದೀಪೇನ ವಿದೀಪಕಃ ।
ಜ್ಞಾತ್ವಾ ಕರ್ತವ್ಯಮಖಿಲಂ ಶಿವಮೋಕ್ಷೈಕಲಬ್ಧಯೇ ।
ಗುರುಪ್ರಸಾದಮಾತ್ರ ಏವ ಸ್ವಾಪಿ ಮೋಕ್ಷಾಯ ಕಲ್ಪತೇ ।
ನ ಮುಕ್ತಿರ್ಮಾಲಮನ್ಯದ್ಧಿ ವಿನಾ ಗುರುಕೃಪಾಂ ।

(ಜಾಪ್ರಜ್ಞಾಸ ಪ ೨)

ಗುರುಪೂಜೆಯೇ ಶಿವಪೂಜೆಯೆನಿಸುವದು. ಗುರುವಿನ ದೇಹವು ಆತ್ಮಶುದ್ಧಿಗೆ ಕಾರಣವಾಗಿರುವುದು. ಆದುದರಿಂದ ಶಿಷ್ಯನು ಗುರುಮುಖದಿಂದ ಶಿವಜ್ಞಾನದ ಸ್ವರೂಪವನ್ನು ತಿಳಿದುಕೊಂಡು ಭೋಗಮೋಕ್ಷಗಳನ್ನು ಪಡೆಯಬೇಕು. ಗುರುವಿನ ಅನುಗ್ರಹವನ್ನು ಪಡೆದ ಶಿಷ್ಯನೇ ಮೋಕ್ಷವನ್ನು ಪಡೆಯಲು ಸಮರ್ಥನಾಗುವ. ಸಲ್ಲದ ಮತ್ತೊಬ್ಬನು ಸಮರ್ಥನಾಗುವದಿಲ್ಲ. ಗುರುಕೃಪೆಯೇ ಮುಕ್ತಿಮೂಲವಾಗಿರುವದು. ಗುರುಕೃಪೆಯನ್ನು ಬಿಟ್ಟು ಮತ್ತೊಂದು ಮುಕ್ತಿಗೆ ಕಾರಣವಾಗಿರುವುದಿಲ್ಲ. ಆದುದರಿಂದ ಸರ್ವರೂ ಗುರುಕೃಪೆಗೆ ಪಾತ್ರರಾಗಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಆಕ್ಸಿಸ್ ನೌಕೆಗಳ ವಿಷಯವಾಗಿ ಅಮೆರಿಕದ ಆಜ್ಞೆ

ಇನ್ನು ಮುಂದೆ 'ಲೀಸ್ ಅಂಡ್ ಲ್ಯಾಂಡ್' ಶಾಸನದ ಪ್ರಕಾರ ಸಹಾಯಕ ವಸ್ತುಗಳನ್ನು ಬ್ರಿಟನ್ನಿಗೆ ಸಾಗಿಸತಕ್ಕ ಹಡಗುಗಳಿಗೆ ಅಮೆರಿಕದ ನೌಕಾಬಲವು ರಕ್ಷಣೆ ಕೊಡುವದೆಂದು ಅಮೆರಿಕದ ನೌಕಾದಳದ ಕಾರ್ಯದರ್ಶಿಗಳಾದ ಶ್ರೀ॥ ನಾಕ್ಸರವರು ಪ್ರಕಟಿಸುತ್ತ "ಇನ್ನು ಮುಂದೆ ಸಮುದ್ರದ ಮೇಲಾಗಲಿ ಒಳಗಾಗಲಿ ಕಣ್ಣಿಗೆ ಬೀಳುವ ಪ್ರತಿಯೊಂದು ಆಕ್ಸಿಸ್ ರಾಷ್ಟ್ರಗಳ ನೌಕೆಯನ್ನೂ ವಶಪಡಿಸಿಕೊಳ್ಳಿರಿ ಅಥವಾ ನಾಶಮಾಡಿರಿ' ಎಂಬದಾಗಿ ಅಮೆರಿಕದ ನೌಕಾಪಡೆಗೆ ಆಜ್ಞೆಯಿತ್ತಿರುವರು.

ಯುದ್ಧವಾರ್ತೆ.

೧೫ ದಿನಗಳಲ್ಲಿ ಒಂದು ಲಕ್ಷ ಟನ್ ಹಡಗುಗಳ ನಾಶ !

ಮೆಡಿಟರೇನಿಯನ್ ಸಮುದ್ರದಲ್ಲಿ ಬ್ರಿಟಿಷ ಸ ಮೆರೀನುಗಳೂ ಮತ್ತು ವಿಮಾನಗಳೂ ಈ ತಿಂಗ 15 ದಿನಗಳ ಕಾಲದಲ್ಲಿ ಸುಮಾರು ಒಂದು ಲಕ್ಷ ಟ ತೂಕದ ಶತ್ರುನೌಕೆಗಳನ್ನು ಮುಳುಗಿಸಿರುವ ಹೇಳಲಾಗಿದೆ. ಕಳೆದ ತಿಂಗಳು ಒಟ್ಟು1680 ಟನ್‌ಗಳಿಗಿಂತ ಹೆಚ್ಚು ಶತ್ರುನೌಕೆಗಳು ಮುಳುಗಿಸ ಟ್ಟಿದ್ದವು.

ಅಮೆರಿಕೆಯು ಅನಿವಾರ್ಯವಾಗಿ ಯುದ್ಧಕ್ಕೆ ಇಳಿಯಬಹುದು

ಕಳೆದ ಕಲವು ದಿನಗಳ ಘಟನಾವಳಿಗಳನ್ನು ನೋ ದರೆ ಅಮೆರಿಕೆಯು ನಿರ್ಬಂಧವಾಗಿ ಯುದ್ಧಕ್ಕೆ ಇಳ ಬೇಕಾಗುವುದೆಂದೂ, ಜರ್ಮನಿಯ ಸಬ್‌ಮೆರೀನುಗ ಅಮೆರಿಕೆಯ ತೀರಕ್ಕೆ ಬಹಳ ಹತ್ತಿರದಲ್ಲೇ ಯುಂದೂ, ಅಮೆರಿಕೆಯ ನೌಕಾಬಲವು ಬ್ರಿಟನಿ ಸಾಮಾನುಗಳನ್ನು ಸಾಗಿಸುವ ಕರ್ತವ್ಯ ನಿರ್ವಹ ಸಿದ್ಧವಾಗಿರುವದೆಂದೂ ಅಮೆರಿಕಾ ನೌಕಾ ಕಾರ್ಯದರ್ಶಿಗಳು ನುಡಿದರು.

ಜರ್ಮನರ ಬಲವು ಕುಗ್ಗುತ್ತಿದೆ

ರಷ್ಯದಲ್ಲಿ ನಡೆಯುತ್ತಿರುವ ಯುದ್ಧವು ಬಹು ಘೋ ಕರವಾದುದು. ಅಸಂಖ್ಯ ಜನಗಳನ್ನೂ ಸಂಗ್ರಾ ಸಾಧನಗಳನ್ನೂ ನುಂಗುತ್ತಿದೆ. ಆದರಿಂದ ಹಿಟ್ಲ ಸೈನ್ಯಬಲವೂ, ಸಂಗ್ರಾಮ ವಸ್ತುಗಳ ಬಲವೂ ದಿನಕ್ಕೆ ಕುಗ್ಗುತ್ತ ನಡೆದಿದೆ. ರಷ್ಯದ ಬಲವು ದಿನ ದಿ ಉತ್ತಮಗೊಳ್ಳುತ್ತಿದೆ. ಪ್ರತಿ ದಿನ ರಷ್ಯದಲ್ಲಿ ಹೊಸ ಸೈನ್ಯಪಡಗಳು ಸಿದ್ಧವಾಗುತ್ತಿವೆ, ಎಂಬುದ ರಷ್ಯದ "ಪ್ರವಾಡಾ" ಎಂಬ ಪತ್ರಿಕೆಯು ತಿಳಿಸುತ್ತ

ಫಿನ್‌ಲೆಂಡು ಯುದ್ಧವನ್ನು ನಿಲ್ಲಿಸಿತ

ಕರೇಲಿಯನ್ ಇಸ್ತ್ಮಸ್‌ನಲ್ಲಿ ಫಿನ್‌ಲೆಂಡ್ ಸೈ ವನ್ನು ಹಿಂದಕ್ಕೆ ಕರೆಸಲಾಯಿತೆಂದು ಹೆಲ್‌ಸಿಂಕಿಯ ವರ್ತಮಾನ ಹರಡಿದೆ. ಆ ಪ್ರದೇಶದಲ್ಲಿ ಮಳೆ ಮ ಬಿರುಗಾಳಿಯ ದೆಸೆಯಿಂದ ಯುದ್ಧವನ್ನು ಮುಂದುವ ಸಲು ಕಷ್ಟವಾದುದರಿಂದ ತಾತ್ಕಾಲಿಕವಾಗಿ ಫಿನ್ನಿಷ ಹಿಂದೆ ಸರಿದಿರುವದಾಗಿ ಹೇಳಬಹುದು. ರಷ್ಯದೊ ಪ್ರತ್ಯೇಕ ಶಾಂತಿಯನ್ನು ಮಾಡಿಕೊಳ್ಳಲು ಫಿನ್ನಿಷ ಸಿದ್ಧರಿಲ್ಲದಿದ್ದರೂ ರಷ್ಯದೊಳಕ್ಕೆ ಬಹಳ ದೂರ ನು ಹೋಗುವ ಕಾರ್ಯಭಾರವನ್ನು ಹೊತ್ತುಕೊಳ್ಳಲು ಅವ ಸಿದ್ಧರಾಗಿಲ್ಲವೆಂದು ತಿಳಿಸಲಾಗಿದೆ. ಈಗಾಗಲೇ ಫಿ ನರು ಜಯಿಸಿರುವ ಪ್ರದೇಶಗಳನ್ನು ಭದ್ರಪಡಿಸಿಕೊ ವದೊಂದೇ ಅವರ ಗುರಿಯಾಗಿದೆ. ಇದಕ್ಕಾ ಅವರು ತಮ್ಮ ಸೈನ್ಯಗಳನ್ನು ಸಿದ್ಧವಾಗಿಟ್ಟಿದ್ದ ಹೊಡೆದಾಟದಲ್ಲಿ ಭಾಗವಹಿಸದಿರಬಹುದು. ಮಾಡುವದರಿಂದ ಜರ್ಮನರು ಸಹ ತಮ್ಮ ಮೇ ಬೀಳದಂತೆ ಮಾಡಕೊಳ್ಳಬಹುದೆಂದು ಯೋಚಿಸಿದ್ದಾ

ಫಿನ್‌ಲೆಂಡ್ ಸಚಿವರ ಭಾಷಣ

ಫಿನ್‌ಲೆಂಡ್ ಸೈನಿಕರು ಲೆನಿನ್‌ಗ್ರಾಡ್ ಮುತ್ತಿಗೆ ನ್ನು ಬಿಟ್ಟು ಹಿಂದೆ ಸರಿದರೆಂದು ವಿಚಿಯಿಂದ ವರ್ತಮ ಬಂದ ಕೆಲವು ಗಂಟೆಗಳೊಳಗೆ ಫಿನ್ನಿಷ್ ವಾಣಿ ಸಚಿವರಾದ ಶ್ರೀ ಟ್ಯಾನರ್‌ರವರು ಹೆಲ್‌ಸಿಂಕಿಯಿಂ ಮಾತನಾಡುತ್ತ—"ಮಹಾಮಹಾರಾಷ್ಟ್ರಗಳ ಬಲಪ ಕ್ಕೆನಾಗಿ ನಡೆಯುತ್ತಿರುವ ಈಗಿನ ಯುದ್ಧದಲ್ಲಿ ಭಾ ವಹಿಸಲು ಫಿನ್‌ಲೆಂಡಿಗೆ ಅಪೇಕ್ಷೆಯಿಲ್ಲ. ಫಿನ್‌ಲೆಂ ಹಿತದೃಷ್ಟಿಯಿಂದ ಅವಶ್ಯವಿರುವದಕ್ಕಿಂತ ಹೆಚ್ಚು ಯುದ್ಧ ಮಾಡಲು ಅದು ಸಿದ್ಧವಾಗಿಲ್ಲ. ಆಕಸ್ಮಿಕ

ಜಗಳಿಂದ ನಾವು ಜರ್ಮನರೊಡನೆ ಶಸ್ತ್ರ ಹಿಡಿದು ನಿಲ್ಲಬೇಕಾಯಿತು ರಷ್ಯದೊಡನೆ ಪ್ರತ್ಯೇಕ ಶಾಂತಿಮಾಡಿಕೊಳ್ಳಲು ಫಿನ್‌ಲೆಂಡು ಪ್ರಯತ್ನಿಸುತ್ತಿಲ್ಲ ಕ್ರೆಮ್ಲಿನ್ನಿನ ಈಗಿನ ಆಡಳಿತಗಾರರಲ್ಲಿ ನಮಗೆ ನಂಬಿಕೆಯಿಲ್ಲ ಫಿನ್ನಿಷ್ ಜನಾಂಗವು ಶಾಂತಿಯನ್ನು ಬಯಸುತ್ತದೆ ಆದರೂ ನಮ್ಮನ್ನು ಬಲವಂತವಾಗಿ ಸಂಗ್ರಾಮಕ್ಕೆ ಎಳೆಯಲಾಯಿತು ಇದುವರೆಗೆ ನಮ್ಮ ಉದ್ದೇಶವು ಮಿಲಿಟರಿಯದಾಗಿತ್ತು ಈಗ ಅದು ರಾಜಕೀಯವಾದುದು ಎಂದು ನುಡಿದರು

ತುರ್ಕಿಯು ಧೈರ್ಯದಿಂದಿದೆ

ಬಲ್ಗೇರಿಯದಲ್ಲಿ ನಾಜಿ ಚಟುವಟಿಕೆಯು ಅಸಾಧ್ಯವಾಗಿ ನಡೆಯುತ್ತಿದ್ದರೂ ಅದು ತುರ್ಕಿಗೆ ವಿಪತ್ಕಾರಕವಾಗುವಷ್ಟು ಪ್ರಬಲವಾಗಿಲ್ಲವೆಂದು ತುರ್ಕಿಯವರು ಹೇಳುತ್ತಿದ್ದಾರೆ ಜರ್ಮನಿಯ ಆರ್ಥಿಕ ನಿಪುಣರಾದ ಡಾ|| ಕ್ನಾಡಿಯಾಸ್‌ರವರು ತುರ್ಕಿಗೆ ಭೇಟಿಯಿತ್ತಾಗ ರಾಜಕೀಯ ಸಂಬಂಧವಾದ ಪ್ರಶ್ನೆಯನ್ನೇ ಅವರು ಎತ್ತಲಿಲ್ಲ ಇಸ್ತಾಂಬೂಲ್ ಸ್ಟೈಲಿಂಗ್ರಾಡ್ ಮಾರ್ಗದಲ್ಲಿ ನಷ್ಟಹೊಂದಿರುವ ಸೇತುವೆಗಳನ್ನು ಸರಿಪಡಿಸಬೇಕೆಂದೂ ಗ್ರೀಸ್, ಬಲ್ಗೇರಿಯಾ ಮತ್ತು ಯುಗೋಸ್ಲೇವಿಯಾಗಳಲ್ಲಿ ಜರ್ಮನಿಯು ಪಡೆದಿರುವ ವಸ್ತುಗಳನ್ನು ತುರ್ಕಿಯು ಕೊಳ್ಳಬೇಕೆಂದೂ ಅವರು ಒತ್ತಾಯ ಪಡಿಸಿದರು ಅಮೆರಿಕ ಮತ್ತು ಇತರ ದೇಶಗಳಿಗೆ ಆ ಪದಾರ್ಥಗಳು ಬೇಕಾಗಿರುವದರಿಂದ ಅವುಗಳನ್ನು ತುರ್ಕಿಯಿಂದ ಆ ದೇಶಗಳು ಕೊಂಡರೆ, ಜರ್ಮನಿಗೆ ವಿದೇಶೀ ಚಲಾವಣೆ ಸೌಕರ್ಯವು ದೊರೆಯುವದೆಂದು ನಾಜಿಗಳು ಲೆಕ್ಕಹಾಕುತ್ತಿರುವಂತಿದೆ

ಅಮೆರಿಕದ ಸಹಾಯ ಕುರಿತು ಶ್ರೀ ರೂಜ್‌ವೆಲ್ಟರ ವರದಿ

ಆಕ್ಸಿಸ್ ರಾಷ್ಟ್ರಗಳನ್ನು ಎದುರಿಸಿ ಯುದ್ಧಮಾಡುತ್ತಿರುವ ದೇಶಗಳಿಗೆ ಅಮೆರಿಕದ ಸಹಾಯ ಶಾಸನದ ಪ್ರಕಾರ ಆಗಸ್ಟ 31 ನೆಯ ತಾರೀಖಿನವರೆಗೆ 1101 47 670 ಡಾಲರುಗಳಷ್ಟು ವಸ್ತುಗಳನ್ನು ಕಳುಹಿಸಲಾಗಿದೆ ವಿಮಾನಗಳು, ಟ್ಯಾಂಕುಗಳು, ಬಂದೂಕುಗಳು ಮತ್ತು ಹಡಗುಗಳು ನಮ್ಮ ಕಾರ್ಖಾನೆಗಳಿಂದ ಹೋಗುತ್ತಿವೆ ದಿನದಿನಕ್ಕೆ ಅದರ ಪ್ರಮಾಣ ಹೆಚ್ಚಿದೆ ವಿಶ್ವವನ್ನೇ ಬೆದರಿಸುತ್ತಿರುವ ನಾಜಿಗಳ ದುಷ್ಟತನವನ್ನು ಧ್ವಂಸಮಾಡಲಿವೆ ಸಹಾಯ ಶಾಸನದ ಪ್ರಕಾರ ಬ್ರಿಟನ್ನಿಗೆ ಹೆಚ್ಚು ಸಹಾಯ ದೊರೆತಿದ್ದರೂ, ಇತರ 12 ಜನಾಂಗಗಳಿಗೂ ಸಹಾಯವಾಗಿದೆ ಈಗ ಯೂರೋಪನ್ನು ನಡುಗಿಸುತ್ತಿರುವ ನಾಜಿ ಯಂತ್ರವನ್ನು ಧ್ವಂಸಮಾಡಬೇಕಾಗಿದ್ದರೆ ಸ್ವತಂತ್ರ ಜನರೆಲ್ಲ ಒಂದಾಗಿ ಪ್ರಯತ್ನಮಾಡುವುದರಿಂದ ಮಾತ್ರ ಸಾಧ್ಯವೆಂದು ನಾವು ನಂಬಿರುವದರಿಂದ ಸಹಾಯಮಾಡುತ್ತಿದ್ದೇವೆ ಎಂಬುದಾಗಿ ಶ್ರೀ ರೂಜ್‌ವೆಲ್ಟರು ಕಾಂಗ್ರೆಸ್ ಸಭೆಗೆ ಕಳುಹಿಸಿದ ವರದಿಯಲ್ಲಿ ತಿಳಿಸಿದ್ದಾರೆ

ಜರ್ಮನರು ಕ್ರೆಮೆಂಚಗ್ ನಗರವನ್ನು ಹಿಡಿದರು.

ನೀಪರ್ ನದಿಯ ಎಡದಡಕ್ಕಿರುವ ಕ್ರೆಮೆಂಚಗ್ ನಗರವನ್ನು ನಾಜಿ ಸೈನಿಕರು ಹಿಡಿದರೆಂಬ ಸುದ್ದಿಯನ್ನು ನೋಡಿದರೆ ಅವರು ನೀಪರ್ ನದಿಯನ್ನು ಒಂದು ಕಡೆಯಲ್ಲಾದರೂ ದಾಟಿರುವರೆಂದು ವ್ಯಕ್ತವಾಗುತ್ತಿದೆ ಆದರೆ ಈ ನಗರದ ಆಕ್ರಮಣಕ್ಕಾಗಿ ನಾಜಿಗಳು ಅಪಾರ ನಷ್ಟವನ್ನು ಅನುಭವಿಸಬೇಕಾಯಿತು ಜರ್ಮನರು ನೀಪರ್ ನದಿಯನ್ನು ಮುಟ್ಟಿ ಮೂರುವಾರಗಳ ಮೇಲಾಯಿತು ಅಂದಿನಿಂದ ನದಿಯನ್ನು ದಾಟಲು ಅವರು ಮಾಡಿದ ಪ್ರಯತ್ನಗಳಲ್ಲಿ ಅನೇಕ ಉಗ್ರ ಹೊಡೆದಾಟಗಳಾಗಿವೆ. ಜರ್ಮನ ಫಿರಂಗಿಗಳೂ ಡೈವ್ ಬಾಂಬರ್ ವಿಮಾನಗಳೂ ರಷ್ಯಾ ಫಿರಂಗಿಗಳ ಆರ್ಭಟವನ್ನು ನಿಲ್ಲಿಸಲು ಮಾಡಿದ ಪ್ರಯತ್ನಗಳೆಲ್ಲ ವ್ಯರ್ಥವಾದವು ಕ್ರೆಮೆಂಚಗ್ ನಗರವು ಮುಖ್ಯ ಕೈಗಾರಿಕಾ ಕೇಂದ್ರವಾಗಿದೆ ಈ ನಗರದ ಆಕ್ರಮಣಕ್ಕಾಗಿ ಜರ್ಮನರು ಬಹಳಕಾಲ ಹೊಡೆದಾಡಬೇಕಾಯಿತು ಜರ್ಮನರಿಗೆ ಉಪಯುಕ್ತವಾದ ವಸ್ತುಗಳಾವುವೂ ಅವರ ಕೈಗೆಬೀಳದಂತೆ ನಾಶಪಡಿಸಲು ರಷ್ಯನರಿಗೆ ಬೇಕಾದಷ್ಟು ಅವಕಾಶವಿತ್ತು ಆದ್ದರಿಂದ ನಗರದ ಆಕ್ರಮಣದಿಂದ ಜರ್ಮನರಿಗೆ ಲಾಭವೇನೂ ಆದಂತಿಲ್ಲ ಅಲ್ಲಿಂದ ಮುಂದೆ ಜರ್ಮನರು ಖಾರ್ಕೋವ್ ಕಡೆಗೆ ನುಗ್ಗದಂತೆ ತಡೆಯಲು ರಷ್ಯನರು ಉಗ್ರವಾಗಿ ಹೊಡೆದಾಡುತ್ತಿದ್ದಾರೆ

ಜರ್ಮನಿ ಇಟಲಿಗಳಿಗೆ ಶ್ರೀ ರೂಜ್‌ವೆಲ್ಟರ ಎಚ್ಚರಿಕೆ

ಕಳೆದ 11 ನೆಯ ತಾರೀಖಿನ ದಿವಸ ಶ್ರೀ ರೂಜ್‌ವೆಲ್ಟರು ಆಕಾಶವಾಣಿಯ ಮೂಲಕ ಮಾತನಾಡುತ್ತ "ಅಟ್ಲಾಂಟಿಕ್‌ಸಾಗರದಲ್ಲಿ ಅಮೆರಿಕದ ಹಡಗುಗಳನ್ನು ಮುಳುಗಿಸಲು ಅಲ್ಲಲ್ಲಿ ಹೊಂಚುಹಾಕುತ್ತ ಕಾದಿರುವ ಜರ್ಮನ್ ಸಬ್‌ಮೆರಿನ್ನುಗಳೂ ಮತ್ತು ಯುದ್ಧನೌಕೆಗಳೂ ಸಮುದ್ರದ ಹಾವುಗಳಂತಿವೆ ಹಾವು ಹೆಡೆ ಎತ್ತಿದಾಗ ನಮ್ಮನ್ನು ಕಚ್ಚುವವರೆಗೂ ಅದನ್ನು ಹೊಡೆದು ಹಾಕದ ಸುಮ್ಮನಿರಲಾಗುವದಿಲ್ಲವಷ್ಟೆ ! ಅದರಂತೆ ಈಗ ಒದಗಿರುವ ವಿಪತ್ತಿನಿಂದ ಉತ್ತರ ಮತ್ತು ದಕ್ಷಿಣ ಅಮೆರಿಕೆಗಳನ್ನು ರಕ್ಷಿಸಬೇಕಾದ ಕಾಲಬಂದಿದೆಯೆಂಬುದು ಅಮೆರಿಕದವರೆಲ್ಲರಿಗೂ ತಿಳಿದಿದೆ ಸಮುದ್ರದ ನೀರಿನಲ್ಲಡಗಿರುವ ಜರ್ಮನಿ ಸಬ್‌ಮೆರೀನುಗಳು ಮತ್ತು ಸಮುದ್ರದ ಮೇಲೆ ಹಾರಾಡುವ ಜರ್ಮನಿ ವಿಮಾನಗಳೂ ವಿನಾಶಕಾರಕ ಆಕೃತ್ಯಗಳನ್ನು ನಡೆಸುವವರೆಗೂ ಅಮೆರಿಕೆಯ ನೌಕೆಗಳೂ ವಿಮಾನಗಳೂ ಇನ್ನುಮುಂದೆ ಸುಮ್ಮನೆ ಕಾಯ್ದು ಕುಳಿತಿರುವದಿಲ್ಲ ಸಮುದ್ರದಮೇಲೆ ಕಾವಲು ತಿರುಗುವ ನಮ್ಮ ಹಡಗುಗಳೂ ಮತ್ತು ವಿಮಾನಗಳೂ ನಮ್ಮ ರಕ್ಷಣೆಗೆ ಒಳಪಟ್ಟಿರುವ ಸಮುದ್ರ ಪ್ರದೇಶಗಳಲ್ಲಿ ವ್ಯಾಪಾರೋದ್ಯಮಗಳಲ್ಲಿ ನಿರತವಾಗಿರುವ ಅಮೆರಿಕನ್ ಹಡಗುಗಳನ್ನಲ್ಲದೆ ಇತರ ರಾಷ್ಟ್ರಗಳ ಎಲ್ಲ ವ್ಯಾಪಾರಹಡಗುಗಳನ್ನೂ ಸಹ ರಕ್ಷಿಸುವವು ಇನ್ನು ಮುಂದೆ ಅಮೆರಿಕದ ಸಂರಕ್ಷಣೆಗೆ ಯಾವ ಸಮುದ್ರವನ್ನು ಕಾಯುವದು ಅಗತ್ಯವೋ ಆ ಸಮುದ್ರಭಾಗದೊಳಕ್ಕೆ ಜರ್ಮನಿಯ ಅಥವಾ ಇಟಲಿಯ ಹಡಗುಗಳು ಪ್ರವೇಶಿಸಲಾಗದು ಹಾಗೆ ಪ್ರವೇಶಿಸಿದರೆ ಅವುಗಳಿಗೊದಗುವ ವಿಪತ್ತಿಗೆ ಆ ಎರಡು ದೇಶಗಳವರೇ ಹೊಣೆ ಎಂಬುದಾಗಿ ಆ ಎರಡು ದೇಶಗಳಿಗೂ ಎಚ್ಚರಿಕೆ ಇತ್ತಿದ್ದಾರೆ ಈ ರೀತಿಯಾದ ಎಚ್ಚರಿಕೆಯನ್ನು ಕೊಟ್ಟಿದ್ದು ಬ್ರಿಟನ್ನಿನಲ್ಲೂ ಅಮೆರಿಕದಲ್ಲೂ ಮತ್ತು ಎಲ್ಲಾ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲೂ ಸಂತೋಷ ಸಮಾಧಾನಗಳನ್ನುಂಟುಮಾಡಿದೆ

ಅಮೆರಿಕೆಯ ಕಾರ್ಯಕ್ರಮ

ಅಮೆರಿಕಾ ರಕ್ಷಣ ಸಮಿತಿಯವರು ತಮ್ಮ ನೀತಿಯನ್ನು ಕುರಿತು ೧೦ ಅಂಶಗಳನ್ನೊಳಗೊಂಡ ಒಂದು ಹೇಳಿಕೆಯನ್ನು ಪ್ರಕಟಿಸಿದ್ದಾರೆ—೧ ಜರ್ಮನಿಯೊಂದಿಗೆ ಕೂಡಲೆ ರಾಜಕೀಯ ಬಾಂಧವ್ಯವನ್ನು ಕೊನೆಗಾಣಿಸಬೇಕು ೨ ಅಟ್ಲಾಂಟಿಕ್ ಸಮುದ್ರದಲ್ಲಿ ಬ್ರಿಟಿಷ್ ನೌಕಾಬಲದೊಂದಿಗೆಸಹಕರಿಸಿ, ಬ್ರಿಟನ್ನಿಗೆ ವಸ್ತುಗಳನ್ನು ಒದಗಿಸಬೇಕು ೩ ಅಟ್ಲಾಂಟಿಕ್ ಮೂಲಗಳನ್ನಾಗಲಿ, ಆಫ್ರಿಕಾಮೂಲಗಳನ್ನಾಗಲಿ ಜರ್ಮನರು ಹಿಡಿಯದಂತೆ ಮಾಡಬೇಕು ೪ ಅಮೆರಿಕೆಯ ರಕ್ಷಣೆಗೆ ಅವಶ್ಯಕಬಿದ್ದಾಗ ಸುತ್ತಮುತ್ತಲಿನ ಬಲ ಮೂಲಗಳಿಗೆ ಅಮೆರಿಕಾ ಸೈನ್ಯಗಳನ್ನು ಕಳುಹಿಸಬೇಕು ೫ ಸ್ವತಂತ್ರ ಫ್ರೆಂಚ್ ಸರಕಾರವನ್ನು ಅಂಗೀಕರಿಸಿ ಸಹಾಯಕ ಮಸೂದೆಯ ಪ್ರಕಾರ ಅವರಿಗೂ ವಸ್ತುಗಳನ್ನು ಒದಗಿಸಬೇಕು ೬. ಚೀನಾ ವಿಚಾರದಲ್ಲಿ ಅಮೆರಿಕೆಯು ಇದುವರೆಗೆ ಅನುಸರಿಸುತ್ತಿರುವ ನೀತಿಗೆ ಭಂಗಬರುವ ಯಾವ ಒಪ್ಪಂದವನ್ನೂ ಜಪಾನಿನೊಂದಿಗೆ ಮಾಡಿಕೊಳ್ಳಕೂಡದು ೭ ಸಿಂಗಪುರ, ಡಚ್ ಪೂರ್ವ ಇಂಡೀಸ್, ಥೈಲೆಂಡ್ ಮತ್ತು ಸೈಬೀರಿಯಾಗಳನ್ನು ಜಪಾನು ಗೆಲ್ಲದಂತೆ ತಡೆಯುವುದಾಗಿ ಸ್ಪಷ್ಟಪಡಿಸಬೇಕು ೮. ರಕ್ಷಣಾ ವಸ್ತುಗಳ ನಿರ್ಮಾಣ ಕಾರ್ಯವೆಲ್ಲವೂ ವ್ಯಕ್ತಿಯ ಹತೋಟಿಯಲ್ಲಿ ಇರಬೇಕು ೯ ರೂಜ್‌ವೆಲ್ಟ್ ಚರ್ಚಿಲ್ ಘೋಷಣೆಯನ್ನು ಆಧಾರವಾಗಿಟ್ಟುಕೊಂಡು ಶಾಂತಿಯ ವಿಚಾರವಾಗಿ ವಿಮರ್ಶೆಮಾಡುವುದು. ೧೦ ಜಯವಾದ ಮೇಲೆ ಅಂತರ್ರಾಷ್ಟ್ರೀಯ ಶಿಸ್ತನ್ನೂ ನ್ಯಾಯವನ್ನೂ ನೆಲೆಗೊಳಿಸಲು ಅಮೆರಿಕೆಯು ಸಹಕರಿಸುವುದು.

ಸ್ವೀಕಾರ.

ಕೊಪ್ಪಳ ಡಿ|| ಯಲಬುರ್ಗಿ ಧರಮುರಡಿ ಹಿರೇಮಠದಲ್ಲಿ ಶ್ರೀ ರೇಣುಕವಿಜಯ ಮಹಾಪುರಾಣವು ಸಮಾಪ್ತಿಗೊಂಡ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ ಗಳು ವೇ| ಪಂ|| ಹರೀಶ್ವರ ಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ

ಬಿದರ ಡಿ|| ಚಂಚೋಳಿ ಗ್ರಾಮದಲ್ಲಿರುವ ಪರ್ವತಪುರದ ವೇ|| ಕೊಟ್ರಪ್ಪಯ್ಯನವರು ತಮ್ಮ ಪುತ್ರನಿಗೆ ನಾಮಕರಣವನ್ನು ಮಾಡಿದ ಸಮಯದಲ್ಲಿ, ಪ್ರಭಾಪೋಷಣಕ್ಕೋಸ್ಕರ 1 ರೂ ಯನ್ನು ತೆಗೆಯಿಸಿ ಕಳುಹಿಸಿದ್ದಾರೆ

ಶಿವಮೊಗ್ಗಾ ಡಿ|| ಹಾರನಹಳ್ಳಿಯಲ್ಲಿರುವ ಮ|| ರಾ|| ನೇಮತಿ ಸೊಂಡೂರು ರಾಚಪ್ಪನವರ ಪುತ್ರ ಭಾಲಾಕ್ಷಪ್ಪ ಎಂಬ ಬಾಲಕನಿಗೆ ಸಂಭವಿಸಿದ್ದ ಗ್ರಹಪೀಡೆಯು ಶ್ರೀ ಜಗದ್ಗುರು ರೇಣುಕಾಚಾರ್ಯರ ಕೃಪಾಬಲದಿಂದ ಪರಿಹಾರವಾದುದಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ ಯು ವೇ|| ಗುಬ್ಬಿ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ

ಕಾಶೀಕ್ಷೇತ್ರದಲ್ಲಿರುವ ಶ್ರೀಜಗದ್ಗುರು ವಿಶ್ವಾರಾಧ್ಯ ಗುರುಕುಲದಲ್ಲಿ ಅಭ್ಯಾಸಮಾಡುತ್ತಿರುವ ಹಾವುಲಡಕಿ ಬೃಹನ್ಮಠದ ವೇ|| ಸದಾಶಿವಶಾಸ್ತ್ರಿಗಳು ಕಾಶೀಗವರ್ನಮೆಂಟ್ ಸಂಸ್ಕೃತ ಕಾಲೇಜಿನಲ್ಲಿ ನವ್ಯನ್ಯಾಯಶಾಸ್ತ್ರ ಪರೀಕ್ಷೆಯ ಪ್ರಥಮಖಂಡದಲ್ಲಿ ಉತ್ತೀರ್ಣರಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ 1 ರೂ ಯನ್ನು ಕಳುಹಿಸಿದ್ದಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಶ್ರೀ ರಂಭಾಪುರೀ ಜಗದ್ಗುರುಗಳವರ ದಸರಾ ಮಹೋತ್ಸವ.

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಈ ವರ್ಷದ ದಸರಾ ಮಹೋತ್ಸವವು ಮಂಡ್ಯ ಡಿ|| ಬಸರಾಳ ಗ್ರಾಮದಲ್ಲಿ ನೆರವೇರುವುದು ಬಸರಾಳ ಗ್ರಾಮವು ಮಂಡ್ಯ ಸ್ಟೇಷನ್ನಿಗೆ ೧೨ ಮೈಲು ದೂರದಲ್ಲಿರುವುದು ದರ್ಶನಾಪೇಕ್ಷಿಗಳಾಗಿ ಬರತಕ್ಕ ಭಕ್ತಾದಿಗಳು ಬಸರಾಳ ಗ್ರಾಮಕ್ಕೆ ಹೋಗಿ ದರ್ಶನಾಶೀರ್ವಾದಗಳನ್ನು ಪಡೆದು ಧನ್ಯರಾಗಬೇಕು

ಸಂಸ್ಕೃತ ನವೀನ ಸರಣೀ

ಬೆಂಗಳೂರಲ್ಲಿರುವ ಶ್ರೀಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ಅಧ್ಯಾಪಕರಾಗಿರುವ ಸಾಹಿತ್ಯ ವಿದ್ವಾನ್ ಪಂಡಿತವರ್ಯ ಶ್ರೀ|| ಸಿ ಶ್ರೀನಿವಾಸಗೋಪಾಲಾಚಾರ್ಯರವರು ಸಂಸ್ಕೃತಭಾಷಾಭ್ಯಾಸಿಗಳ ಸೌಕರ್ಯಕ್ಕಾಗಿ ಬಹು ಶ್ರಮ ವಹಿಸಿ ಮೇಲ್ಕಂಡ ಗ್ರಂಥವನ್ನು ರಚಿಸಿರುವರು ಈ ಪುಸ್ತಕವು ನವೀನ ಕ್ರಮವನ್ನನುಸರಿಸಿ ಬರೆಯಲ್ಪಟ್ಟಿರುವದು ಮೈಸೂರು ದೇಶದ ಸಂಸ್ಕೃತ ಪರೀಕ್ಷಾ ಬೋರ್ಡಿನವರು ಈ ದೇಶದಲ್ಲಿರುವ ಸಮಸ್ತ ಸಂಸ್ಕೃತ ಪಾಠಶಾಲೆಗಳಿಗೂ ಇದನ್ನು ಪಠ್ಯಪುಸ್ತಕವನ್ನಾಗಿ ಏರ್ಪಡಿಸಿರುವರು. ಸಂಸ್ಕೃತ ಭಾಷಾ ಶಿಕ್ಷಣಾಭಿಲಾಷಿಗಳೂ ವಿದ್ಯಾರ್ಥಿಗಳೂ ಅತ್ಯುತ್ತಮ ರೀತಿಯಿಂದ ಬರೆಯಲ್ಪಟ್ಟಿರುವ ಸದರಿ ಗ್ರಂಥವನ್ನು ತರಿಸಿಕೊಂಡು ಅದರಂತೆ ಅಭ್ಯಾಸ ಮಾಡಿದಲ್ಲಿ ಮಹಾ ಪ್ರಯೋಜನವುಂಟೆಂದು ಹೇಳಬಹುದಾಗಿದೆ ಬೆಲೆ 7 ಆಣೆ. ಪುಸ್ತಕಾಪೇಕ್ಷಿಗಳು ಮೇಲ್ಕಂಡ ಪಂಡಿತರಿಗೆ ಬರೆದು ತರಿಸಿಕೊಳ್ಳಬೇಕು

[೩ ನೆಯ ಪುಟದಿಂದ ಮುಂದುವರಿದುದು]

ದೇವಾಲಯದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಸಂಘದಾಶ್ರಯದಲ್ಲಿಯೂ ಕೆಲವು ಗಣ್ಯ ಪುರಜನರ ಗೃಹಗಳಲ್ಲಿಯೂ ನವರಸಭರಿತವಾದ ಶಿವಸಂಕೀರ್ತನೆಗಳನ್ನು ಅನುವಾದಿಮಾಡಿ ಆಬಾಲವೃದ್ಧರಾದಿಯಾಗಿ ಸಮಸ್ತ ಜನರನ್ನೂ ಸಂತೋಷಗೊಳಿಸಿದರು ತರುವಾಯ ಬೆನವಳ್ಳಿ ಬಾಳೇಕೊಪ್ಪ ಮುಂತಾದಕಡೆಯ ಆಹ್ವಾನವನ್ನು ಸ್ವೀಕರಿಸಿ ಆಯಾಯ ಸ್ಥಳಗಳಿಗೆ ಆಗಮಿಸಿ ಅಲ್ಲಲ್ಲಿ ಸೇರಿದ ಅಗಣಿತ ಜನಸ್ತೋಮದಿಂದ ಕೂಡಿದ ಸಭೆಗಳಲ್ಲಿ ನೈತಿಕ ಧಾರ್ಮಿಕ ಸಾಮಾಜಿಕ ಸಂಬಂಧವಾದ ಶಿವಸಂಕೀರ್ತನೆಗಳನ್ನು ನಡೆಯಿಸಿ ಸರ್ವರನ್ನೂ ಆಹ್ಲಾದಗೊಳಿಸಿದರು ಶಾಸ್ತ್ರಿಗಳವರ ವಿಷಯ ಪ್ರತಿಪಾದನಶಕ್ತಿಯೂ ಅದ್ಭುತ ಕಂಠಧ್ವನಿಯೂ ವಾಗ್ಝರಿಯೂ ಸಮಯೋಚಿತ ವಿಚಾರ ಸರಣಿಯೂ ಉಪಕಥೆಗಳ ಜೋಡಣೆಯೂ ಸಹ ಪಂಡಿತ ಪಾಮರರ ಚಿತ್ತವನ್ನು ಸೆಳೆದು ಎಷ್ಟು ಹೊತ್ತಾದರೂ ಶ್ರವಣದಿಂದ ಚಲಿಸದ ಭಕ್ತಿಪರವಶರಾಗಿ ಜೋಂಪಗಳೆಂತಿರುವ ಪರಿಸ್ಥಿತಿಯನ್ನುಂಟುಮಾಡುವದೆಂದರೆ ಅತಿಶಯೋಕ್ತಿಯೆನಿಸದು ಶ್ರೀ ಜಗದ್ಗುರು ಪಂಚಾಚಾರ್ಯರು ಶಾಸ್ತ್ರಿಗಳಿಗೂ ಕಾರ್ಯದರ್ಶಿಗಳಿಗೂ ಸತ್ಕಥಾಶ್ರವಣ ಭಾಗಿಗಳಿಗೂ ಸನ್ಮಂಗಳವನ್ನೀಯಲೆಂದ ಅನನ್ಯ ಭಕ್ತಿಭಾವದಿಂದ ಪ್ರಾರ್ಥಿಸುವ,

ಓರ್ವ ಶಿವಕಥ ಶ್ರವಣಾಭಿಲಾಷಿ

ಗುರುತತ್ವ ಪ್ರಭಾಕರ

ಲೇಖಿಕೆ—ಭಾಗೀರಥೀದೇವಿ ಕಪಿಲ ಸೊಲ್ಲಾಪುರ

ಜಗತ್ಕರ್ತನಾದ ದೇವರು ಧರ್ಮಪ್ರಿಯನು ಆದುದರಿಂದ ನಾವು ದೇವರಿಗೆ ಪರಮಪ್ರಿಯವಾದ ಧರ್ಮವನ್ನು ಅವಶ್ಯವಾಗಿ ಆಚರಿಸಬೇಕು ಧರ್ಮವನ್ನು ನಾವು ಪೂರ್ಣವಾಗಿ ನಡೆಸಿದರೆ ಅದರಿಂದ ತೃಪ್ತನಾದ ದೇವನು ನಮ್ಮನ್ನು ಹುಡುಕಿಕೊಂಡು ಬಂದು ನಮಗೆ ತನ್ನ ನಿಜಸ್ವರೂಪವನ್ನು ತೋರಿಸಿ ನಮ್ಮನ್ನು ಆನಂದಸಾಗರದಲ್ಲಿ ಮುಳುಗಿಸುವನು ಧರ್ಮವನ್ನು ನಾವು ಕಡೆಗಣಿಸಿದಾಗಲೂ ಅವನು ನಮ್ಮನ್ನು ಹುಡುಕಿಕೊಂಡು ನಮ್ಮೆಡೆಗೆ ಬರುವನು ದೇವರು ಯಾವರೀತಿಯಿಂದ ಬರುವನೆಂದರೆ ಶ್ರೀ ಜಗದ್ಗುರು ರೇಣುಕಾಚಾರ್ಯರು ವರವರ್ಮನ ಶಿರಃಕಂಪನವನ್ನು ನಿಲ್ಲಿಸುವುದಕ್ಕಾಗಿ ಹುಚ್ಚರಂತೆ ವೇಷವನ್ನು ಧರಿಸಿಬಂದಂತೆ ಬರುವನು ಹೀಗೆ ಬರುವ ಉದ್ದೇಶವೇನು? ಧರ್ಮಘಾತುಕರಾದ ನಮ್ಮನ್ನು ಶಿಕ್ಷಿಸುವದಕ್ಕೆ ಈ ರೀತಿಯಲ್ಲಿ ನಾವು ಅವನನ್ನು ಧರ್ಮದಬಲದಿಂದಲೂ ಬರಮಾಡಿಕೊಳ್ಳಬಹುದು ಅಧರ್ಮದಬಲದಿಂದಲೂ ಬರಮಾಡಿಕೊಳ್ಳಬಹುದು ಧರ್ಮದಿಂದ ಬರಮಾಡಿಕೊಂಡವರು ಅವನ ಅನುಗ್ರಹಕ್ಕೆ ಪಾತ್ರರಾಗುವರು ಅಧರ್ಮದಿಂದಬರಮಾಡಿಕೊಂಡವರು ನಿಗ್ರಹಕ್ಕೆ ಪಾತ್ರರಾಗುವರು ಇವೆರಡರಲ್ಲಿ ಯಾವದು ಉತ್ತಮ? ಪರಮ ಪೂಜ್ಯನಾದ ತಂದೆಯನ್ನು ವಿವೇಕಿಯಾದ ಯಾವನು ತಾನು ಸಿಟ್ಟಿಗೆಬ್ಬಿಸಲಿಚ್ಛಿಸುವನು? ನಾವು ಕುಲೀನರೆನಿಸಿಕೊಳ್ಳಬೇಕಾದರೆ ತಂದೆಯಲ್ಲಿ ಕೋಪಾವೇಶದ ಭರವನ್ನು ಹುಟ್ಟಿಸದೆ ಪ್ರೇಮಾವೇಶದ ಭರವನ್ನು ಹುಟ್ಟಿಸಿ ಬರಮಾಡಿಕೊಳ್ಳಬೇಕು ತಂದೆಗೆ ನಮ್ಮನ್ನು ಹೊಡೆಯುವುದಕ್ಕೆಂದು ಕೈ ಎತ್ತಿಕೊಂಡು ಬರುವಸಂಭವವನ್ನು ತಂದುಕೊಡದೆ ಆಲಿಂಗಿಸುವದಕ್ಕೆಂದು ಕೈಗಳನ್ನಗಲಿಸಿಕೊಂಡುಬರುವ ಪರಿಸ್ಥಿತಿಯನ್ನೊದಗಿಸಬೇಕು ಇದೇಸತ್ಪುತ್ರನ ಲಕ್ಷಣ. ಅದ್ದರಿಂದ ನಾವು ಧರ್ಮಸ್ವರೂಪಗಳನ್ನು ಚನ್ನಾಗಿ ವಿಚಾರಮಾಡಿ ಅವುಗಳ ಅನುಷ್ಠಾನದಿಂದ ದೇವರನ್ನು ಮೆಚ್ಚಿಸಬೇಕು ಧರ್ಮಗಳೆಂಬುವೆಲ್ಲ ನಮ್ಮನ್ನು ದೇವರಬಳಿಗೆ ಸೇರಿಸುವಂಥ ಹಾದಿಗಳು ಆ ಹಾದಿಗಳ ವಿಚಾರವನ್ನುಮಾಡುವದಕ್ಕೆ ಮೊದಲು ದೇವರ ಜ್ಞಾನದ ಮಹತ್ವವು ಮನಸ್ಸಿನಲ್ಲಿ ಬೇರೂರಬೇಕು ಹಾಗಿದ್ದರೆ ಮಾತ್ರ ಅವನು ದೇವರನ್ನು ಬಯಸುವನು ಲೋಕದಲ್ಲಿ ಎಷ್ಟೋ ಜನರಲ್ಲಿ ದೇವರ ಬಯಕೆಯು ಎದ್ದುಕಾಣುವದು ಆದರೆ ಅವರು ದೇವರ ಜ್ಞಾನದ ಮಹತ್ವವನ್ನು ಮನಗಂಡಿರುವಂತೆ ಕಾಣುವದಿಲ್ಲ ಹೇಗೆಂದರೆ ಅವರಿಗೆ ಪ್ರಾಪಂಚಿಕ ವಸ್ತುಗಳ ಬಯಕೆಯು ಇರುವದು ಇಷ್ಟೇ ಅಲ್ಲ ಆ ಬಯಕೆಯನ್ನು ತೀರಿಸಿಕೊಳ್ಳುವದಕ್ಕೆ ಅವರು ಹಗಲಿರುಳು ಹೆಣಗುತ್ತಿರುವರು ಇದರಿಂದ ಅವರು ಪ್ರಾಪಂಚಿಕ ವಸ್ತುಗಳಿಗೆ ಮಹತ್ವವನ್ನು ಕೊಟ್ಟುಕೊಂಡಿರುವದು ವ್ಯಕ್ತವಾಗುತ್ತದೆ ಅದು ಎಂಥ ಮಹತ್ವ, ದೇವರಿಗಿಂತ ಹೆಚ್ಚಿನ ಮಹತ್ವ ಅದ್ದರಿಂದ ಅವರು ದೇವರಿಗಿಂತ ಪ್ರಾಪಂಚಿಕವಸ್ತುಗಳಿಗೆ ಮಹತ್ವವನ್ನೀ ಕೂಡಬಾರದೆಂದು ನನ್ನ ಅಭಿಪ್ರಾಯವಲ್ಲ ವ್ಯವಹಾರಕ್ಕೆ ಅವು ಬೇಕೇ ಬೇಕು ಅವುಗಳಿಂದ ನಮ್ಮ ಜೀವನ ನಡೆವದಲ್ಲದೆ ನಾವು ಧರ್ಮವನ್ನಾಚರಿಸಿ ದೇವರ ಅನುಗ್ರಹವನ್ನು ಪಡೆಯುವೆವು ಆದ್ದರಿಂದ ಅವುಗಳಿಗೆ ಅವುಗಳ ಉಪಯೋಗಕ್ಕೆ ತಕ್ಕಷ್ಟೇ ಮಹತ್ವವನ್ನು ಕೊಡಬೇಕು ಸಾಮಾನ್ಯ ಜನರ ತಿಳುವಳಿಕೆಯು ಹಾಗಿರುವದಿಲ್ಲ ಅವರಿಗೆ ಪ್ರಾಪಂಚಿಕ ವಿಷಯಗಳೇ ಹೆಚ್ಚಿನ ಮಹತ್ವವೆನಿಸುತ್ತವೆ ಅವುಗಳ ಜೊತೆಗೆ ದೇವರೂ ಬೇಕೆನಿಸುತ್ತದೆ ಇದು ದೇವರ ಜ್ಞಾನದ ಮಹತ್ವವನ್ನು ತಿಳಿದ ಗುರುತಲ್ಲ ಇಂಥವರನ್ನು ನೋಡಿ ಸರ್ವಪೂರ್ವ ಮಹಾಯೋಗಿಗಳು ಬೋಧಿಸಿರುವದೇನೆಂದರೆ—

[illegible]

[illegible] |
[illegible] ॥೧॥

[illegible]
[illegible]
[illegible] |
[illegible] ॥೨॥

[illegible]
[illegible]
[illegible] |
[illegible] ॥೩॥

[illegible] |
[illegible] |
[illegible] |
[illegible] ॥೪॥

[illegible] |
[illegible] |
[illegible] |
[illegible] ॥೫॥

[illegible] ದಾಸನಿಗೊಲಿಯೆ ಮಾಡು |
ಒಂದು ಸಂಸ್ಕಾರವಿರದ ಗುರುಸಿದ್ಧನ |
ಪೊಂದಿ ಲೌಕಿಕವನುಳಿದಧ್ಯಾತ್ಮದಸುಖವನು |
ಹೊಂದಿಸಿದುದೆರಡಾನಂದದೊಳಗಿರಿಸೆ ॥೬॥

ದೇವರ ಜ್ಞಾನದ ನಿಜವಾದ ಮಹತ್ವವನ್ನರಿತವನ ಬಯಕೆಗೆ ಶ್ರೀರಾಮ ಕೃಷ್ಣಪರಮಹಂಸರ ಒಂದು ಸೂಕ್ತಿಯನ್ನು ಹೇಳಬಹುದು ಒಬ್ಬ ಶಿಷ್ಯನು ಅವರಬಳಿಗೆ ಒಂದು ತನಗೆ ದೇವರನ್ನು ತೋರಿಸಬೇಕೆಂದು ಕೇಳಿದನಂತೆ! ಆಗ ಅವರು ಅವನನ್ನು ನದಿಗೆ ಕರದುಕೊಂಡು ಹೋಗಿ ನೀರಿನಲ್ಲಿ ಮುಳುಗಿಸಿ ಮೇಲಕ್ಕೇಳದಂತೆ ಗಟ್ಟಿಯಾಗಿ ಹಿಡಿದರಂತೆ! ಆ ಶಿಷ್ಯನು ಉಸಿರುಕಟ್ಟಿರಲಾರದೆ ಬಲವಾಗಿ ತಳಮಳಿಸಿದನಂತೆ! ಆಮೇಲೆ ಪರಮಹಂಸರು ಕೈಬಿಟ್ಟು ಅವನನ್ನು ಕುರಿತು ನೀರಿನಲ್ಲಿ ಮುಳುಗಿದ್ದಾಗ ನಿನಗೇನುಬೇಕಾಗಿತ್ತೆಂದು ಕೇಳಿದರಂತೆ! ಉಸಿರಾಡುವುದು ಬೇಕಾಗಿತ್ತೆಂದು ಅವನು ಹೇಳಲು ದೇವರ ಬಯಕೆಯು ಆ ಉಸುರಿನ ಮೇಲಿನ ಬಯಕೆಯಷ್ಟು ಬಲವಾದಾಗ ದೇವರು ಸಿಕ್ಕುವನೆಂದು ಹೇಳಿದರಂತೆ! ಇರಲಿ ಇದು ಬಯಕೆಯ ಪರಮಾವಧಿಯ ಮಾತು ಈ ಬಯಕೆಯನ್ನು ಪಡೆಯುವುದು ನಮ್ಮ ಧ್ಯೇಯವಾಗಿರಬೇಕು ಪ್ರಾರಂಭದಲ್ಲಿ ಈ ಸ್ಥಿತಿಯು ಬರದೇಇದ್ದರೂ ಪ್ರಾಪಂಚಿಕವಸ್ತುಗಳಿಗಿಂತ ದೇವರ ಮಹತ್ವವು ಹೆಚ್ಚಿನದೆಂಬ ಜ್ಞಾನವು ಮಾತ್ರ ಬೇಕೇಬೇಕು

ಒಮ್ಮೆ ಯಮನು ನಚಿಕೇತನೆಂಬ ಅತಿಥಿಗೆ ಮೂರು ವರಗಳನ್ನು ಕೊಟ್ಟಿದ್ದನು ಮೂರನೆಯ ವರವನ್ನು ಕೇಳೆಂದು ಯಮನು ಹೇಳಿದಾಗ ಮನುಷ್ಯನು ಸತ್ತಮೇಲೆಯೂ ಇರುವನೆಂದು ಕೆಲವರೂ, ಹೋದನೆಂದು ಕೆಲವರೂ ಹೇಳುವದರಿಂದ ಇದರ ನಿಜಸ್ಥಿತಿಯೇನೆಂದು ನಚಿಕೇತನು ಮೂರನೆಯ ವರಕ್ಕೆ ವಿಷಯವನ್ನಿಟ್ಟನು ಇದು ರೂಪಾಂತರದಿಂದ ಆತ್ಮಸ್ವರೂಪದ ವಿಚಾರವನ್ನು ಕೇಳಿದಂತಾಯಿತು. ಹಿಂದಿನ ಎರಡು ವರಗಳಿಗೆ ಹೇಗೋ ಹಾಗೆ ಈ ವರಕ್ಕೂ ಯಮನು ಒಡನೆ ಉತ್ತರವನ್ನು ಹೇಳಬಹುದಾಗಿತ್ತು ಆದರೆ ಆತ್ಮವಿಚಾರವು ಅಂದರೆ ದೇವರ ವಿಚಾರವು ಅಷ್ಟು ಅಗ್ಗವಾದುದಲ್ಲ. ಒಳ್ಳೇ ಫಲಕಾರಿಯಾದ ಬೀಜವನ್ನು ಮರುಭೂಮಿಯಲ್ಲಿ ಬಿತ್ತುವದುಂಟೆ? ಇದು ಯೋಗ್ಯತೆಯನ್ನು ನೋಡಿ ಹೇಳಬೇಕಾದ ಮಾತು. ದೇವರ ವಿಚಾರಕ್ಕೆ ಬೇಕಾದ ಯೋಗ್ಯತೆಯೇನು? ಪ್ರಾಪಂಚಿಕ ವಿಷಯಗಳು ದೇವರ ವಿಚಾರಕ್ಕಿಂತ ತುಚ್ಛವೆಂಬ ತಿಳುವಳಿಕೆ ಅದು ಇವನಲ್ಲಿ ಎಷ್ಟರಮಟ್ಟಿಗೆ ಬೇರುಬಿಟ್ಟುಕೊಂಡಿರುವದೆಂಬುವದನ್ನು ನೋಡಬೇಕೆಂದು ಯಮನಿಗೆ ಮನಸ್ಸಾಯಿತು ಆಗ ಯಮನು ನಚಿಕೇತಾ, ಹಿಂದೆ ಈ ವಿಚಾರದ ಸಂಶಯವು ದೇವತೆಗಳಿಗೆ ಕೂಡ ಬಂದಿತ್ತು. ಇದು ಎಷ್ಟು ಹೇಳಿದರೂ ತಿಳಿಯದಿರುವಷ್ಟು ಸೂಕ್ಷ್ಮವಾದದ್ದು ಆದ್ದರಿಂದ ಇನ್ನೇನಾದರೂ ಕೇಳು, ಈ ವಿಷಯಕ್ಕೆ ನನ್ನನ್ನು ನಿರ್ಬಂಧ ಮಾಡಬೇಡ ನಿನಗೆ ನೂರಾರು ವರ್ಷಗಳ ಆಯುಸ್ಸು ಬೇಕೆ? ಮಕ್ಕಳು ಮೊಮ್ಮಕ್ಕಳು ಬೇಕೆ? ದನಕರುಗಳು ಬೇಕೆ? ಆನೆಕುದುರೆಗಳೂ ಹಣಕಾಸುಗಳೂ ಬೇಕೆ? ವಿಸ್ತಾರವಾದವಾದ ರಾಜ್ಯ ಬೇಕೆ? ಕೊನೆಗೆ ಚಿರಜೀವಿತ್ವವು ಬೇಕೆ? ಎಂದು ನುಡಿಯಲು ನಚಿಕೇತನು "ದೇವಾ, ನೀನು ಕೊಡುವ ಈ ಸುಖಸೌಕರ್ಯಗಳೆಲ್ಲಾ ಇಂದಿಲ್ಲದಿದ್ದರೆ ನಾಳೆಯಾದರೂ ಹೋಗತಕ್ಕವುಗಳು ನೀನು ಚಿರಜೀವಿತ್ವವನ್ನು ಕೊಟ್ಟರೂ ನನ್ನ ಪ್ರಶ್ನೆಯ ವಿಷಯದೊಡನೆ ಹೋಲಿಸಿದರೆ ಅದು ಅಲ್ಪವೆ ನಿನ್ನ ಹಣಕಾಸುಗಳೂ ಆನೆಕುದುರೆಗಳೂ ನಿನಗೆ ಇರಲಿ ಇವುಗಳನ್ನೆಲ್ಲಾ ನೀನು ಕೊಡುವದೇನು? ನಿನ್ನ ದರ್ಶನದಿಂದ ಇವೆಲ್ಲಾ ತಾವಾಗಿಯೇ ನನ್ನ ಮನೆಯ ಬಾಗಿಲಲ್ಲಿ ಉರುಳಾಡುವವು ನೀನು ಯಮಾಧಿಪತ್ಯದಲ್ಲಿರುವವರೆಗೂ ನನಗೆ ಚಿರಜೀವಿತ್ವವೇ ಇದನ್ನು ನೀನು ಹೊಸದಾಗಿ ಕೊಡುವದೇನು? ನನಗೆ ಆ ವಿಚಾರವೇ ಬೇಕು" ಎಂದು ಅದನ್ನು ಗಟ್ಟಿಯಾಗಿ ಹಿಡಿದನು ಇದರಿಂದ ಸಂತುಷ್ಟನಾದ ಯಮನು ನಚಿಕೇತನನ್ನು ಉತ್ತಮಾಧಿಕಾರಿಯನ್ನಾಗಿ ತಿಳಿದು ಅವನಿಗೆ ಭಗವತ್ತತ್ವವನ್ನು ಮನಗಾಣಿಸಿದನು ಈ ರೀತಿಯಲ್ಲಿ ವಿಚಾರಪರನಾದವನು ದೇವರಜ್ಞಾನವನ್ನೂ ಪ್ರಾಪಂಚಿಕ ವಿಷಯಗಳನ್ನೂ ತನ್ನ ಮನಸ್ಸೆಂಬ ತಕ್ಕಡಿಯಲ್ಲಿ ತೂಗಿ ದೇವರ ಜ್ಞಾನದ ಮಹತ್ವವನ್ನು ಅರಿಯಬೇಕು ಆಮೇಲೆ ಅವನಿಗೆ ಅದರ ಮೇಲೆ ಬಲವಾದ ಬಯಕೆ ಹುಟ್ಟುವದು

(ಸಶೇಷ)

॥ ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋನಮಃ ॥

ಶ್ರೀ ಗಣೇಶಮಹೋತ್ಸವ, ಶ್ರೀಕ್ಷೇತ್ರ ಕಾಶಿ

ಶ್ರೀ ಕಾಶೀಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಶ್ರೀಜಗದ್ಗುರು ವಿಶ್ವಾರಾಧ್ಯಮಹಾಸಂಸ್ಥಾನ ಜಂಗಮವಾಡೀಮಠದಲ್ಲಿ ಪ್ರತಿವರ್ಷ ಪದ್ಧತಿಯಂತೆ ಈವರ್ಷ ಭಾದ್ರಪದ ಶುಕ್ಲಪಕ್ಷ ೪ ಮಂಗಳವಾರದಿಂದ ಭಾದ್ರಪದ ಶುಕ್ಲ ೧೩ ಬುಧವಾರದವರೆಗೆ ಶ್ರೀ ಗಣೇಶಮಹೋತ್ಸವವು ವೈಭವದಿಂದ ನೆರವೇರಿತು

ಭಾದ್ರಪದ ಶುಕ್ಲ ೪ ಮಂಗಳವಾರ ಪ್ರಾತಃಕಾಲ ವಿದ್ಯುದ್ದೀಪಗಳಿಂದಲೂ, ರಂಭಾಸ್ತಂಭಗಳಿಂದಲೂ ತಳಿರುತೋರಣಪುಷ್ಪಮಾಲೆಗಳಿಂದಲೂ ಅಲಂಕೃತವಾದ ಶ್ರೀಜಗದ್ಗುರು ಮಹಾಸಂಸ್ಥಾನದ ದರ್ಬಾರ್ ಹಾಲಿನಲ್ಲಿರುವ ಶ್ರೀ ಗಣೇಶಮಂದಿರದಲ್ಲಿ ಪ್ರಾತಃಕಾಲ ಶ್ರೀ ಗಣೇಶಮೂರ್ತಿಗೆ ಮಹಾಸಂಸ್ಥಾನದ ವೈದಿಕರಿಂದಲೂ ಗುರುಕುಲದ ವಿದ್ಯಾರ್ಥಿಗಳಿಂದಲೂ ಮಹಾಸಂಕಲ್ಪಗಣಪತಿ ಪುರುಷಸೂಕ್ತ ಗಣೇಶಾಷ್ಟೋತ್ತರ ಶತನಾಮಾವಳಿ ವೇದಮಂತ್ರಗಳೊಡನೆ ಪೂಜಾದಿಗಳು ನೆರವೇರಿದವು ತರುವಾಯ ಮಹಾಮಂಗಳವಾಗಿ ಸರ್ವರಿಗೂ ಪ್ರಸಾದ ವಿನಿಯೋಗವಾಯಿತು

ಇದೇರೀತಿಯಾಗಿ ಪ್ರತಿದಿನ ಸಾಯಂಪ್ರಾತಃಕಾಲಗಳಲ್ಲಿ ಶ್ರೀ ಗಣೇಶಪೂಜೆಯು ನಡೆಯುತ್ತಿತ್ತು.

ಭಾದ್ರಪದ ಶುಕ್ಲ ೧೨ ಮಂಗಳವಾರ ಸಾಯಂಕಾಲ ೩ ಘಂಟೆಯಸಮಯದಲ್ಲಿ ಕಾಶೀ ಸುಪ್ರಸಿದ್ಧ ವೇದಪಾಠಿಗಳಾದ ಪಂ|| ರಾಮನಾಥಶಾಸ್ತ್ರಿ ಮೊದಲಾದ ಒಂಭತ್ತು ಜನರು ಶ್ರೀ ಗಣೇಶನ ಸನ್ನಿಧಿಯಲ್ಲಿ ವೇದಪಾಠವನ್ನು ಮಾಡಿದರು ಗುರುಕುಲವಿದ್ಯಾರ್ಥಿಗಳು ಭಜನೆ ಮಂಗಳಗಳನ್ನು ಮಾಡಿದಮೇಲೆ ಸರ್ವರಿಗೂ ಪ್ರಸಾದವಿನಿಯೋಗವಾಯಿತು.

ತರುವಾಯ ಭಾದ್ರಪದ ಶುಕ್ಲ ೧೩ ಬುಧವಾರ ಸಾಯಂಕಾಲ ಮೂರುಘಂಟೆಗೆ ಗಣೇಶನ ಪೂಜಾಮಂಗಳಗಳಾದ ತರುವಾಯ ಗಣೇಶನನ್ನು ಪಲ್ಲಕ್ಕಿಯಲ್ಲಿರಿಸಿ ಉತ್ಸವದೊಡನೆ ಗಂಗಾತೀರಕ್ಕೆ ತೆಗೆದುಕೊಂಡುಹೋಗಿ ಪೂಜಾಮಂಗಲಗಳನ್ನು ಮಾಡಿ ಸಂಸ್ಥಾನದ ಸರ್ವಕಾರ್ಯಗಳಿಗೆ ಶ್ರೇಯಸ್ಸನ್ನುಂಟುಮಾಡಲೆಂದು ಶ್ರೀ ಗಣೇಶನನ್ನು ಪ್ರಾರ್ಥಿಸಿ ಗಂಗೆಯಲ್ಲಿ ಶ್ರೀ ಗಣೇಶನ ವಿಸರ್ಜನೆಯು ಮಾಡಲ್ಪಟ್ಟಿತು.

ಓರ್ವ ಗುರುಕುಲ ವಿದ್ಯಾರ್ಥಿ

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲಿ	ಮೂಲ್ಯ
ರ್ಣಮಕರಧ್ವಜ	೧	೩೦—೦—೦
ರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ಸಸಿಂಧೂರ	೧	೨—೦—೦
ಲ್ಲಸಿಂಧೂರ	೧	೬—೦—೦
ಲಸಿಂಧೂರ	೧	೬—೦—೦
ಬಾಸಿಂಧೂರ	೧	೪—೦—೦
ರ್ಣವಂಗ	೧	೩—೦—೦
ವಂಗ	೧	೧—೦—೦
ಭಸ್ಮಗಳು		
ರ್ಣಭಸ್ಮ	೧	೪೦—೦—೦
ಜತಭಸ್ಮ	೧	೪—೦—೦
ಾಮ್ರಭಸ್ಮ	೧	೦—೮—೦
ೋಹಭಸ್ಮ	೧	೨-೧೨—೦
ಂಗಭಸ್ಮ	೧	೦—೮—೦
ಾಗಭಸ್ಮ	೧	೦—೬—೦
ುಕ್ತಾಭಸ್ಮ	೧	೪೦—೦—೦
ಭ್ರಕಭಸ್ಮ	೧	೩—೦—೦
ತ್ರಾಳಭಸ್ಮ	೧	೦—೮—೦
ಂಚಿನಭಸ್ಮ	೧	೦—೮—೦
ಸ್ತ್ರಭಸ್ಮ	೧	೦—೮—೦
ಂಡೂರಭಸ್ಮ	೧	೦—೮—೦
ರ್ಣಮಕ್ಷಿಕಾಭಸ್ಮ	೧	೦-೧೨—೦
ುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಪ್ಪೆಚಿಪ್ಪಿನ ಭಸ್ಮ	೧	೦—೮—೦
ಾರಂಗದ ಕೋಡಿನ ಭಸ್ಮ	೧	೦—೮—೦
ೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಲಾಜಿತ ಸೂರ್ಯಪುಟ	೧	೧—೦—೦
ಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್, ಓಖಿಮಠ, ಜಿಲ್ಲಾ ಗಢವಾಲ್ ಯು.ಪಿ.

ವೈದಿಕ ಶಿವಪೂಜಾವಿಧಿ

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಶುದ್ಧವಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ- ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ** ವಿ. ಪಿ. ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿರೋರತ್ನವೆಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸಮುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ ಬೆಲೆ **೮ ರೂಪಾಯಿ.** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವುದು ವಿ ಪಿ ಚಾರ್ಜು ೧ ರೂ ೫ ಆಣೆ ಪ್ರತ್ಯೇಕ

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್- ಮೈಸೂರು.

ಜರ್ಮನರನ್ನು ಸೋಲಿಸಲಿಕ್ಕೆ ರಷ್ಯಾ ರಣರಂಗವೇ ಮುಖ್ಯವಾದುದು

ಲಾರ್ಡ್ ಹ್ಯಾಲಿಫಾಕ್ಸ್‌ರವರು—" ರಷ್ಯಕ್ಕೆ ತೆರಳಲಿರುವ ಅಮೆರಿಕನ್ ಮತ್ತು ಬ್ರಿಟಿಷ್ ಗೋಷ್ಠಿಗಳಲ್ಲಿರುವವರನ್ನು ನೋಡಿದರೆ, ರಷ್ಯವನ್ನು ಮಿತ್ರದೇಶದಂತೆ ಪರಿಗಣಿಸುತ್ತಿರಲಾಗಿದೆಯೆಂದೂ, ಬ್ರಿಟನ್ನಿಗೆ ಸಾಕಾಗಿ ಉಳಿಯಬಹುದಾದ ಮತ್ತು ಕೆಲಸಕ್ಕೆ ಬಾರದೆ ಇರುವ ವಸ್ತುಗಳನ್ನು ರಷ್ಯಕ್ಕೆ ಕೊಡಲಾಗುವುದೆಂದು ಯಾರೂ ತಿಳಿಯಬಾರದೆಂದೂ, ಬ್ರಿಟಿಷ್ ಮತ್ತು ಅಮೆರಿಕಾ ಕಾರ್ಖಾನೆಗಳು ರಷ್ಯಕ್ಕೆ ಬೇಕಾದ ವಸ್ತುಗಳನ್ನೆಲ್ಲ ಒದಗಿಸಿಕೊಡಬೇಕೆಂದೂ, ಜರ್ಮನಿಯನ್ನು ಭೂಮಿಯ ಮೇಲೆ ಮುಖ್ಯವಾಗಿ ಎದುರಿಸಿರುವ ರಂಗವೆಂದರೆ ರಷ್ಯಾ ರಣರಂಗವೆಂದೂ, ಅದರಲ್ಲಿ ಜರ್ಮನರ ಕೈ ಮೇಲಾಗದಂತೆ ನೋಡಿಕೊಳ್ಳುವುದು ಅತ್ಯಗತ್ಯವೆಂದೂ, ಇರಾನ್ ಮೂಲಕ ಮತ್ತು ಮರ್‌ಮಾನ್‌ಸ್ಕ್ ಮೂಲಕ ರಷ್ಯಕ್ಕೆ ಬರುವ ಸರಬರಾಜು ಮೂಲಗಳು ಬಹಳ ಮುಖ್ಯವಾದುವೆಂದೂ, ಅವುಗಳನ್ನು ಕತ್ತರಿಸಿಹಾಕಲು ಜರ್ಮನರು ಪ್ರಯತ್ನಮಾಡುವುದು ನಿಶ್ಚಯವೆಂದೂ, ಈಗಾಗಲೇ ನಾರ್ವೆ ಉತ್ತರದಲ್ಲಿ ಬ್ರಿಟಿಷ್ ನೌಕೆಗಳಿಗೂ ಜರ್ಮನ್ ನೌಕೆಗಳಿಗೂ ಹೊಡೆದಾಟಗಳಾಗುತ್ತಿವೆಯೆಂದೂ ಹೇಳಿದರು.

ರಷ್ಯದ ಮಾಜಿ ವಿದೇಶಾಂಗ ಸಚಿವರಾದ ಶ್ರೀ ಲಿಟ್ವಿನೋವ್‌ರವರು "ಈಗ ೩ ತಿಂಗಳಿಂದ ರಷ್ಯವು ಏಕಾಂಗಿಯಾಗಿ ನಿಂತು ಹೊಡೆದಾಡುತ್ತಿದ್ದ ಈ ಯುದ್ಧವು ಯೂರೋಪಿನ ಭವಿಷ್ಯವನ್ನು ಮಾತ್ರವಲ್ಲ, ಇತರ ಖಂಡಗಳ ಭವಿಷ್ಯವನ್ನೂ ನಿರ್ಧರಿಸಲಿದೆ. ಜರ್ಮನಿಯ ಸುತ್ತ ಅಷ್ಟದಿಗ್ಬಂಧನ ರಚಿಸುವುದು, ಜರ್ಮನಿಯ ನಗರಗಳ ಮೇಲೆ ಬಾಂಬುಗಳನ್ನು ಹಾಕುವುದು ಉಪಯುಕ್ತವಾದರೂ ಜರ್ಮನಿಯನ್ನು ಸೋಲಿಸಲು ಅವುಗಳಿಂದಲೇ ಸಾಧ್ಯವಿಲ್ಲ. ನಾಜಿಗಳನ್ನು ಧ್ವಂಸ ಮಾಡಬೇಕಾಗಿದ್ದರೆ ಭೂಮಿಯಮೇಲೆಯೇ. ಬ್ರಿಟನ್ನಿನ ಮೇಲೆ ಉಗ್ರಬಾಂಬಿನ ಮಳೆಗರೆದು ಅದು ಶರಣಾಗತವಾಗುವಂತೆ ಮಾಡುವುದಾಗಿ ಹರ್ ಹಿಟ್ಲರನು ಭಾವಿಸಿ, ಹೇಗೆ ಮೋಸಹೋದನೋ ಅದೇರೀತಿಯಲ್ಲೀಗ ಬ್ರಿಟಿಷರು ಮೋಸಹೋಗಬಾರದು. ಜರ್ಮನಿಯ ನಗರಗಳ ಮೇಲೆ ಬಾಂಬುಗಳನ್ನು ಹಾಕುವುದರಿಂದ ಮಾತ್ರವೇ ನಾಜಿಗಳನ್ನು ಸೋಲಿಸಲು ಸಾಧ್ಯವಿಲ್ಲ. ಹರ್ ಹಿಟ್ಲರನ ಸೇನೆಯನ್ನು ವಿಭಾಗಿಸಿ, ಅವನನ್ನು ಸದೆಬಡಿಯಬೇಕಾದರೆ ಎರಡು ಮೂರು ಕಡೆ ಹೊಡೆದಾಟವನ್ನಾರಂಭಿಸುವುದೇ ಅತ್ಯುತ್ತಮ ಮಾರ್ಗ. ಈ ಕಾರ್ಯವು ಈಗಲೇ ಸಾಧ್ಯವಿಲ್ಲವಾದರೆ ಮಿತ್ರರಾಷ್ಟ್ರಗಳು ತಮ್ಮ ಗಮನವನ್ನೆಲ್ಲ ರಷ್ಯಾ ರಣರಂಗದ ಮೇಲೆ ಕೇಂದ್ರೀಕರಿಸಬೇಕಾಗಿದೆ" ಎಂಬುದಾಗಿ ಹೇಳಿದ್ದಾರೆ.

ಇರಾನಿಗೆ ನೂತನ ಪ್ರಭುಗಳು

ಇರಾನಿನ ಪ್ರಭುಗಳಾಗಿದ್ದ ರಿಜಾಷಲಿಯವರು ತಮ್ಮ ಅಧಿಕಾರವನ್ನು ತ್ಯಜಿಸಿ ರಾಜಧಾನಿಯನ್ನು ಬಿಟ್ಟು ಇಸ್ಪಹಾನಿಗೆ ಪ್ರಯಾಣಮಾಡಿದರು. ಅವರಿಂದ ರಾಜ್ಯಭಾರವನ್ನು ವಹಿಸಿಕೊಂಡ ಅವರ ಹಿರಿಯ ಮಕ್ಕಳಾದ ಷಾ ಮಹಮದ್ ರಿಜಾರವರಿಗೆ ಈಗ 22 ವರುಷ ವಯಸ್ಸು ನಡೆಯುತ್ತಿದೆ. ಅವರು ಟೆಹರಾನಿನಲ್ಲಿ ಹುಟ್ಟಿದರು. ಈಜಿಪ್ಟ್ ದೊರೆಗಳ ಹಿರಿಯ ಸಹೋದರಿಯಾದ ಫಾಜೀಯರವರನ್ನು 1939 ರಲ್ಲಿ ವಿವಾಹವಾದರು. ಈಗ ಸೇರಿದ ಇರಾನ್‌ಪಾರ್ಲಿಮೆಂಟಿನ ವಿಶೇಷ ಸಭೆಯಲ್ಲಿ, ಇಲ್ಲಿಯವರೆಗೆ ಸರಕಾರವು ಅನುಸರಿಸಿದ ನೀತಿಗೆ ಮಾಜಿ ಷಾರವರ ನಿರಂಕುಶ ಆಡಳಿತವೇ ಕಾರಣವೆಂದೂ ಮುಂದಿನ ಸರ್ಕಾರವನ್ನು ಶಾಸನಬದ್ಧವಾದ ರೀತಿಯಲ್ಲಿ ಸ್ಥಾಪಿಸಲಾಗುವದೆಂದೂ ತಿಳಿಸಲಾಯಿತು. ಹೊಸ ಷಾರವರು ಕಳೆದ ಬುಧವಾರ ಅಧಿಕಾರವನ್ನು ಸ್ವೀಕರಿಸಿದರು

ಡಾಕ್ಟರ್ ಜಿ. ಬಿ. ಯವರ
ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ.—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಆ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ. ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ ೨-೮-೦. ವಿ.ಪಿ. ೮ ಆಣೆ
ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್.
[19] ಪೋ. ಬಾ ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ದ್ಬೋಧರತ್ನಾವಳಿ	೮ ಆಣೆ
ೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ತ್ವದ ಫೋಟೋಗಳುಳ್ಳದ್ದು)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೩ ಪುಟ)	೪ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji *English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	१ रु.
पुरुषसूक्तम् (वीरशैवप्राचीनभाष्योपेतम्)	४ आ
नंदिकेश्वरकारिका (संस्कृत)	२ आ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 226

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ. ೧೧ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೩ ರೂ. ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೬ನೇ ಅಕ್ಟೋಬರ್ ೧೯೪೧ [ಸಂಚಿಕೆ ೨೩

ಮೈಸೂರು ಸಂಸ್ಥಾನದ ದಿವಾನರವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಅಪ್ಪಣೆಕೊಡಿಸಿದ ಭಾಷಣ

(ದಸರಾ ಅಧಿವೇಶನ)

1941 ನೆಯ ಇಸವಿ ಅಕ್ಟೋಬರ್ 1 ನೆಯ ತಾರೀಖು

ಪ್ರಜಾಪ್ರತಿನಿಧಿಸಭೆಯ ಸದಸ್ಯರುಗಳೇ—

ಆಳುವ ಮಹಾಸ್ವಾಮಿಯವರಾದ ಶ್ರೀ ಮನ್ಮಹಾರಾಜರವರ ಇಚ್ಛೆಯಿಂದ ನಮ್ಮೆಲ್ಲರನ್ನೂ, ರಾಜಕೀಯ ಸುಧಾರಣೆಗಳ ಜೊತೆಗೆ ಹೊಸದಾಗಿ ಏರ್ಪಟ್ಟಿರುವ ಸಭೆಯ ಈ ಎರಡನೆಯ ಅಧಿವೇಶನಕ್ಕೆ ಸ್ವಾಗತಿಸುವ ಗೌರವವು ನನಗೆ ಲಭಿಸಿದೆ; ಅಲ್ಲದೆ, ಹಿಂದಿನಿಂದ ನಡೆದುಬಂದಿರುವ ವಾಡಿಕೆಗನುಸಾರವಾಗಿ ಕಳೆದ ವರ್ಷದ ಆಡಳಿತದ ಮುಖ್ಯ ಮುಖ್ಯವಾದ ಸಂಗತಿಗಳನ್ನೂ, ಹಾಲಿ ಮತ್ತು ಮುಂದಿನ ವರ್ಷಗಳಲ್ಲಿ ಶ್ರೀಮನ್ಮಹಾರಾಜರವರ ಸರ್ಕಾರದವರು ಬಹುಶಃ ಗಮನ ಕೊಡಬೇಕಾಗುವ ಮುಖ್ಯ ಮುಖ್ಯವಾದ ವಿಚಾರಗಳನ್ನೂ ತಮಗೆ ಶ್ರುತಪಡಿಸುವ ಗೌರವವೂ ಸಹ ನನಗೆ ಲಭಿಸಿದೆ.

ಯೂರೋಪಿನ ಯುದ್ಧ

ಯೂರೋಪಿನಲ್ಲಿ ನಡೆಯುತ್ತಿರುವ ಘೋರಯುದ್ಧವು ಪ್ರಾರಂಭವಾಗಿ ಎರಡು ವರ್ಷಗಳು ಕಳೆದು ಮೂರನೆಯ ವರ್ಷವು ನಡೆಯುತ್ತಿದೆ. ಯುದ್ಧವು ನಾವು ಎಂದೂ ಊಹಿಸಿಲ್ಲದಿದ್ದ ಮಟ್ಟಿಗೆ ಭರತಖಂಡದ ಬಾಗಿಲಿನ ಒಳಗೇ ಬಂದಿದೆ. ಬ್ರಿಟಿಷರಿಗೂ ಅವರ ಮಿತ್ರರಿಗೂ ಜಯವಾಗುವುದು ನಮ್ಮಲ್ಲಿ ಪ್ರತಿಯೊಬ್ಬರಿಗೂ ಬಹಳ ಮುಖ್ಯ. ಯುದ್ಧವು ಎಂದಿಗೆ ಪೂರೈಸಬಹುದೆಂಬುದನ್ನೇನೋ ಇನ್ನೂ ಯಾರೂ ಊಹಿಸುವಂತಿಲ್ಲ. ಇವರೆ ಒಂದು ಸುಯೋಗ. ಈ ಯುದ್ಧದ ಕೊನೆಯ ಫಲಿತಾಂಶ ಏನೆಂಬುದಕ್ಕೇನೋ ಪ್ರತಿಯೊಂದು ಸೂಚನೆಯೂ ಆಗಲೇ ಕಂಡು ಬಂದಿದೆ. ಶತ್ರುಗಳು ಪೂರ್ತಿಯಾಗಿ ಸೋಲುವುದು ಖಂಡಿತ; ಅವರು ಇನ್ನು ತಲೆಯೆತ್ತದಂತೆ ಅವರನ್ನು ಪರಾಭವಗೊಳಿಸುವುದು ಖಂಡಿತ; ಶತ್ರುಗಳು ಬೆಳೆಯಿಸಿರುವ ಆಸುರೀ ಶಕ್ತಿಗಳು ಅಡಗಿಹೋಗುವುದು ಖಂಡಿತ. ಬ್ರಿಟಿಷರ ಮತ್ತು ಮಿತ್ರಪಕ್ಷದವರ ಕಡೆ ನ್ಯಾಯವಿದೆಯೆಂಬುದು ಮೊದಲಿನಿಂದಲೂ ನಮಗಿರುವ ನಂಬಿಕೆ. ಪ್ರಾರಂಭದಲ್ಲಿ ನಮ್ಮನ್ನು ಹುರಿದುಂಬಿಸುತ್ತಿದ್ದುದೂ ಅದೇ ನಂಬಿಕೆ. ಯುದ್ಧದಲ್ಲಿ ಅವರು ಒಂದೊಂದು ಸಲ ಕೆಲಕೆಲವು ಕಾಲಗಳಲ್ಲಿ ಕಷ್ಟಕ್ಕೆ ಸಿಕ್ಕಿದಾಗಲೂ ನಮ್ಮ ನಂಬಿಕೆಯೇನೂ ಕದಲಲಿಲ್ಲ. ಈಚೆಗಂತೂ, ಅವರಿಗೇ ಜಯವಾಗುವುದೆಂಬುದಕ್ಕೆ ಹೊಸ ಭರವಸೆಯುಂಟಾಗಿದೆ. ನಮ್ಮ ಭರವಸೆಗೆ ಬಲವಾದ ಕಾರಣವುಂಟು. ಅವರ ಸೈನ್ಯ ಬಲವೂ ಯುದ್ಧ ಸಾಧನಗಳೂ ಬಹಳವಾಗಿ ಹೆಚ್ಚುತ್ತಿರುವುದೇ ನಮ್ಮ ಭರವಸೆಗೆ ಕಾರಣ

ಯುದ್ಧ ಸಂಬಂಧವಾಗಿ ಸಹಾಯವಾಗುವಂತೆ ಅನೇಕ ಕಾರ್ಯಕಲಾಪಗಳು ನೆರವೇರಬೇಕಾಗಿವೆ. ಅವುಗಳನ್ನೆಲ್ಲ ವಿಚಾರಮಾಡಿ ಹೆಚ್ಚಿಸಿಕೊಂಡು ಬರುವ ಕೆಲಸದಲ್ಲಿ ನಾವು ಪೂರ್ಣ ಮನಸ್ಸಿನಿಂದ ಪೂರ್ತಿಯಾಗಿ ಸಹಕರಿಸುವುದು ನಮ್ಮ ಅವಶ್ಯ ಕರ್ತವ್ಯ. ಆ ಕರ್ತವ್ಯದಲ್ಲಿ ಸ್ವಲ್ಪ ಮಾತ್ರ ಲೋಪಮಾಡುವುದೂ ಯುಕ್ತವಲ್ಲ. ಯುದ್ಧಕ್ಕೆ ಸಹಾಯವಾಗುವಂತೆ ಮಾಡುವ ಕಾರ್ಯಕಲಾಪಗಳು ಸಾಧ್ಯವಾದಷ್ಟೂ ಹೆಚ್ಚಾಗಿರುವಂತೆ ನೆರವೇರಬೇಕಾಗಿರುವ ನಮ್ಮ ಕರ್ತವ್ಯವನ್ನು ನಾವು ಬ್ರಿಟಿಷರಿಗೋಸ್ಕರ ನೆರವೇರಿಸುವುದಕ್ಕಿಂತ ಹೆಚ್ಚಾಗಿ ನಮ್ಮ ಯೋಗಕ್ಷೇಮಕ್ಕೋಸ್ಕರವೇ ನೆರವೇರಿಸಬೇಕಾಗಿದೆ. ಯುದ್ಧದಲ್ಲಿ ಭಾಗವಹಿಸಿ ಶತ್ರುಗಳೊಡನೆ ಕಾದಾಡುತ್ತಿರುವವರಿಂದ ಮಾತ್ರವೇ ಯುದ್ಧ ಸಹಾಯದ ಈ ಪ್ರಯತ್ನ ನಡೆಯುತ್ತಿಲ್ಲ. ಧರ್ಮರಕ್ಷಣೆಗಾಗಿ ಯುದ್ಧಮಾಡುವ ಯತ್ನದ ದೊಡ್ಡ ಭಾಗವನ್ನೇನೋ ಅವರಿಗೇ ಸಲ್ಲಬೇಕು. ಆದಾಗ್ಯೂ, ಅವರ ಸೇವೆಯಷ್ಟು ಮಟ್ಟಿಗೆ ಜನರ ಕಣ್ಣಿಗೆ ಬೀಳದಿದ್ದರೂ, ಯುದ್ಧವನ್ನು ಬಿಟ್ಟು ಯುದ್ಧರಂಗಕ್ಕೆ ದೂರದಲ್ಲಿ ಇತರ ಕರ್ತವ್ಯಗಳನ್ನೂ, ಕೈಗಾರಿಕೆಯ ಉದ್ಯಮಗಳನ್ನೂ ನೆರವೇರಿಸುತ್ತಿರುವವರು ಕೂಡ, ಯುದ್ಧಕ್ಕೆ ಅವರಂತೆಯೇ ಅಷ್ಟೇ ಅಗತ್ಯವಾದ ಮತ್ತು ಅಷ್ಟೇ ಮುಖ್ಯವಾದ ಸೇವೆಯನ್ನು ಸಮರ್ಪಿಸಿದಂತೆಯೇ ಸರಿ. ಈ ವಿಷಯದಲ್ಲಿ ಈಚೆಗೆ ವೈಸ್ರಾಯಿಯವರು ತಮ್ಮ ಭಾಷಣದಲ್ಲಿ ಸೂಚಿಸಿದ ಅಂಶವನ್ನೂ ಈ ಸಂದರ್ಭದಲ್ಲಿ ತಿಳಿಸಬಹುದಾಗಿದೆ "ಕಾರ್ಖಾನೆಗಳಲ್ಲಿ ಕೆಲಸ ಮಾಡುವವರು ಮತ್ತು ಯುದ್ಧರಂಗದಲ್ಲಿ ಮಡಿಯುವವರು, 'ಸಿವಿಲ್ ಸರ್ವಿಸ್' ಅಧಿಕಾರಿವರ್ಗದವರು ಮತ್ತು ಪೋಲೀಸಿನವರು, 'ಸಿವಿಕ್ ಗಾರ್ಡ್ಸ್' ಸಿಬ್ಬಂದಿಗೆ ಸೇರಿದವರು ಮತ್ತು ವಿಮಾನದಾಳಿಗಳ ಸಂಬಂಧದ ಮುಂಜಾಗರೂಕತೆ ಏರ್ಪಾಡುಗಳನ್ನು ನೋಡಿಕೊಳ್ಳಲು ನೇಮಕವಾಗಿರತಕ್ಕವರು, ರಾಷ್ಟ್ರ ಸೇವೆಯ ಸಲುವಾಗಿ ಒಬ್ಬೊಬ್ಬರೇ ಮೂರು ನಾಲ್ಕು ಮಂದಿಗಳ ಕೆಲಸಗಳನ್ನು ನಿರ್ವಹಿಸಲು ಸಂತೋಷದಿಂದ ಸಮ್ಮತಿಸಿರುವ ಉದ್ಯೋಗಸ್ಥರು, ಯುದ್ಧ ಸಹಾಯಕ್ಕಾಗಿ ಶ್ರಮಿಸುತ್ತಿರುವ ಮಹಿಳೆಯರು, ಮತ್ತು ಹಣವನ್ನೋ ಅಥವಾ ಸೇವೆಯನ್ನೋ ಯುದ್ಧಕ್ಕೆ ಕಾಣಿಕೆಯಾಗಿ ಒಪ್ಪಿಸಲು ತಮ್ಮಿಂದ ಸಾಧ್ಯವಿರುವಷ್ಟು ಹೆಚ್ಚಿನದೆಲ್ಲವನ್ನೂ ಮಾಡುತ್ತಿರುವ ಇತರರು"—ಬಗೆಬಗೆಯ ಈ ಪ್ರಜಾವರ್ಗದವರೆಲ್ಲರೂ ಸಹ, ಯುದ್ಧಪ್ರಶಸ್ತಿಗೆ ನೇರವಾಗಿ ತಕ್ಕವರೇ, ಅವರೂ ಸಹ, ದೇಶದ ಯುದ್ಧ ಪ್ರಯತ್ನವು ಭಾರಿ ಪ್ರಮಾಣದಲ್ಲಿ ಜರುಗುವುದಕ್ಕೆ ಸಾಫಲ್ಯವಾಗುವಹಾಗೆ ಕೆಲಸಗಳನ್ನು ಮಾಡುತ್ತಿರುವವರೇ

ಯುದ್ಧ ಸಂಬಂಧವಾಗಿ ನಡೆಯುತ್ತಿರುವ ಅಗಾಧ ಪ್ರಮಾಣದ ಕಾರ್ಯಕಲಾಪಗಳನ್ನು ನೋಡಿದರೆ, ನಮ್ಮಿಂದ ಆಗುವ ಯುದ್ಧ ಸಹಾಯವೇನೂ ಅಲ್ಪ. ಆದಾಗ್ಗೂ ನಮ್ಮ ಸಾಧನ ಸಂಪತ್ತುಗಳಿಂದ ಸಾಧ್ಯವಿರುವಷ್ಟನ್ನೂ ಸ್ವಲ್ಪವೂ ಹಿಡಿತಮಾಡದೆ ಧಾರಾಳ ಮನಸ್ಸಿನಿಂದ ಕೊಟ್ಟೂ ಇದ್ದೇವೆ, ಕೊಡುತ್ತಲೂ ಇರುತ್ತೇವೆ

ಮೈಸೂರು ಸಂಸ್ಥಾನದವರ ಯುದ್ಧ ಸಹಾಯ

ಮೈಸೂರು ಸಂಸ್ಥಾನದ ಪದಾತಿಸೈನ್ಯದ ಮೊದಲನೆಯ ಪಟಾಲಂ (ಎಂದರೆ, "ಬೆಟಾಲಿಯನ್"), ಈಗ ಚಕ್ರವರ್ತಿ ಸಾರ್ವಭೌಮರ ಸೈನ್ಯಗಳೊಡನೆ ಸೇರಿ ವಿದೇಶಗಳಲ್ಲಿ ಶತ್ರುಗಳ ಮೇಲೆ ಯುದ್ಧ ಮಾಡುತ್ತಿದೆ. ಭಾರತೀಯ ಸಂಸ್ಥಾನಗಳ ಸೈನ್ಯಗಳ ಪಟಾಲಮಿನಲ್ಲಿ ಇರಬೇಕಾದಷ್ಟು ಪೂರ್ಣ ಸಂಖ್ಯೆಯ ಪದಾತಿಗಳನ್ನು ಆ ಪಟಾಲಮಿಗೆ ಈಗ ಭರ್ತಿಮಾಡಿ ಸೇರಿಸಲಾಗಿದೆ. ಆ ಯೂನಿಟ್ಟಿಗೆ ಬೇಕಾದ ಸಾಮಾನು ಸರಂಜಾಮುಗಳನ್ನು ಒದಗಿಸುವ ಕೆಲಸವನ್ನು ಸರ್ಕಾರದವರು ವಹಿಸಿದ್ದಾರೆ. ಅದರಿಂದ ಒಟ್ಟಿನಲ್ಲಿ 1½ ಲಕ್ಷ ರೂಪಾಯಿಗಳ ಖರ್ಚಿಗೆ ಮೊಬಲಗು ವೆಚ್ಚವಾಗುವುದಾಗಿ ಅಂದಾಜಾಗಿದೆ. ಈಗ ವಿದೇಶಗಳಲ್ಲಿ ಯುದ್ಧ ಮಾಡುತ್ತಿರುವ ಆ ಪಟಾಲಂ ಸೈನ್ಯದ ಅಧಿಕಾರಿಗಳಿಗೂ ಸೈನಿಕರಿಗೂ ಮತ್ತೆ ಕೆಲವು ಅನುಕೂಲಗಳನ್ನು ಮಾಡಿಕೊಡುವುದಕ್ಕೂ ಸರ್ಕಾರದವರು ಸಮ್ಮತಿಸಿದ್ದಾರೆ. ಎಂದರೆ, ಅವರಲ್ಲಿ ಯಾರಾದರೂ ಅಂಗಹೀನರಾದರೆ ಅವರ ಪೋಷಣೆಗಾಗಿ ಪೆನ್ಷನುಗಳನ್ನೂ ಅವರ ಕುಟುಂಬದವರಿಗೆ ಪೆನ್ಷನುಗಳನ್ನೂ ಸಹ ಇಂಡಿಯಾ ಸೈನ್ಯದ ದರದಲ್ಲಿ ಕೊಡುವುದು; ಅವರುಗಳು ಕುಟುಂಬದವರನ್ನು ಬಿಟ್ಟು ಹೊರಟು ಹೋಗಿರುವುದಕ್ಕಾಗಿ "ಸೆಪರೇಷನ್ ಅಲೋಯೆನ್ಸು" ಗಳು, ಮತ್ತು "ಎಮರ್ಜೆನ್ಸಿ ಅಲೋಯೆನ್ಸು" ಗಳನ್ನೆ ಕೊಡುವುದು—ಇವೆಲ್ಲಕ್ಕೂ ಸಮ್ಮತಿಸಿದ್ದಾರೆ. ಸೈನ್ಯದ ಸಾಮಾನುಗಳನ್ನು ಸಾಗಿಸುವುದಕ್ಕಾಗಿ ಸರ್ಕಾರದವರು ಮೋಟಾರು ವಾಹನ "ಯೂನಿಟ್" ಪಡೆಯೊಂದನ್ನು ಸೈನ್ಯದ ಇಲಾಖೆಯಲ್ಲಿ ಏರ್ಪಡಿಸಿದ್ದಾರೆ. ಅದರಲ್ಲಿ ಸೇರಿ ಕೆಲಸ ಮಾಡುತ್ತಿರುವವರಲ್ಲಿ ಮೈಸೂರು ಸಂಸ್ಥಾನದವರೇ ಹೆಚ್ಚು ಮಂದಿ. ಈ ಮೋಟಾರುವಾಹನಗಳ ಪಡೆಯವರು ವಾಸವಾಗಿರಲು ಬೆಂಗಳೂರಿನಲ್ಲಿರುವ "ಇನ್‌ಫೆಂಟ್ರಿ ಲೈನ್ಸ್" ಪ್ರದೇಶದಲ್ಲಿ ಸ್ಥಳವನ್ನು ಕೊಡಲಾಗಿದೆ ಈ ಮೋಟಾರು ವಾಹನಗಳ ಪಡೆಯನ್ನು ಇಂಡಿಯಾ ಸರ್ಕಾರದ ದೇಶರಕ್ಷಣೆಯ ಶಾಖೆಯವರಿಗೆ ಒಪ್ಪಿಸಲಾಗಿದೆ. ಸೈನ್ಯ ಶಿಬಿರಗಳಿಗೂ, ಯುದ್ಧದ ಬಂಧಿಗಳ ಶಿಬಿರಗಳಿಗೂ ಬೆಂಗಳೂರಿನ ಸಮೀಪದಲ್ಲಿ ಭಾರಿ ಪ್ರದೇಶಗಳನ್ನು ಸರ್ಕಾರದವರು ಬಿಟ್ಟುಕೊಟ್ಟಿದ್ದಾರೆ. ಭಾರತೀಯ ಸಂಸ್ಥಾನಗಳ ಸೈನ್ಯಗಳ ಸಂಬಂಧವಾಗಿ "ಎಮರ್ಜೆನ್ಸಿ ಕಮಿಷನ್" ಹುದ್ದೆಗಳಿಗೆ ತಕ್ಕ ಜನರನ್ನು ಆರಿಸಿ ನೇಮಕಮಾಡಿಕೊಳ್ಳುವ ಕೆಲಸದಲ್ಲಿ ಮೈಸೂರು ಸರ್ಕಾರದವರು ಇಂಡಿಯಾ ಸರ್ಕಾರದ ದೇಶ ರಕ್ಷಣಾ ಶಾಖೆಯೊಡನೆ ಪ್ರಬಲವಾಗಿ ಸಹಕರಿಸಿ ನಡೆಯುತ್ತಿದ್ದಾರೆ.

ಶ್ರೀಮನ್ಮಹಾರಾಜರವರು ಸರ್ಕಾರದ ಹಣದಿಂದಲೂ ಅರಮನೆಯ ಹಣದಿಂದಲೂ ಒಟ್ಟು 17 ಲಕ್ಷ ರೂಪಾಯಿಗಳನ್ನು ಯುದ್ಧಸಂಬಂಧವಾದ ಕೆಲಸಗಳಿಗಾಗಿ ದಯಪಾಲಿಸಿ ಸಹಾಯ ಮಾಡಿದ್ದಾರೆ. ಸಂಸ್ಥಾನದ ಯುದ್ಧನಿಧಿಗೆ ಇದುವರೆಗೆ ಜನರಿಂದ ಬಂದಿರುವ ಮೊಬಲಗು 5½ ಲಕ್ಷ ರೂಪಾಯಿಗಳು. ಇಂಗ್ಲೆಂಡಿನಲ್ಲಿ ಏರ್ಪಟ್ಟಿರುವ "ರಾಯಲ್ ಏರ್ ಫೋರ್ಸ್" ವಿಮಾನ ಪಡೆಯ ಒಂದು ಸ್ಕ್ವಾಡ್ರನ್ನಿಗೆ ಬ್ರಿಟಿಷ್ ಸರ್ಕಾರದವರು ಮೈಸೂರು ಸಂಸ್ಥಾನದ ನಾಮಾಂಕಿತವನ್ನಿಟ್ಟಿದ್ದಾರೆ ಯುದ್ಧಕ್ಕಾಗಿ ನಮ್ಮ ಸಂಸ್ಥಾನದಿಂದ ಹಣವನ್ನು ಕೊಟ್ಟು ಸಹಾಯಮಾಡಿರುವುದರ ಮೆಚ್ಚಿಕೆಯ ಗುರುತಾಗಿ ಅವರು ಹಾಗೆ ಮಾಡಿದ್ದಾರೆ ಈ ಸ್ಕ್ವಾಡ್ರನ್ನಿಗೆ ಸೇರಿದ ವಿಮಾನಗಳಲ್ಲಿ ಯುದ್ಧಸಂಬಂಧದ ಕಾರ್ಯಗಳಿಗೆ ಧೈರ್ಯದಿಂದ ನುಗ್ಗುವ ಸಾಹಸಿಗಳೆಲ್ಲರೂ ಗಂಡಭೇರುಂಡ ಲಾಂಛನದೊಡನೆ ಆಕಾಶದಲ್ಲಿ ಸಂಚರಿಸುತ್ತಾರೆಂದು ತಿಳಿದು ಬಂದಿರುವುದು ಹೃದಯಂಗಮವಾಗಿದೆ.

ಈಗಿನ ಯುದ್ಧದಲ್ಲಿ ಗಾಯಹೊಂದಿ ಮೃತಪಡತಕ್ಕ ಸರ್ಕಾರಿ ನೌಕರರ ಸ್ವತ್ತುಗಳ ಸಂಬಂಧದಲ್ಲಿ ಕೊಡಬೇಕಾದ ಕೋರ್ಟು ಫೀಜುಗಳಲ್ಲಿ ಕೆಲವು ಮಾಫಿಗಳನ್ನು ಮಂಜೂರುಮಾಡಿ ಸರ್ಕಾರದವರು ಈ ವರ್ಷದ ಆರಂಭದಲ್ಲಿ ಒಂದು ಇಸ್ತಿಹಾರ್‌ನಾಮೆಯನ್ನು ಜಾರಿಮಾಡಿದರು. ಮೈಸೂರು ಸಂಸ್ಥಾನದ ಸೈನ್ಯಗಳಿಗೂ ಇಂಡಿಯಾ ಸೈನ್ಯಕ್ಕೂ ಸೇರತಕ್ಕವರಿಗೆ ಸಾಧ್ಯವಿರುವ ಸಮಸ್ತ ಸೌಕರ್ಯಗಳನ್ನೂ ಕೊಡಬೇಕೆಂದು ಸರ್ಕಾರದವರಿಗೆ ತೋರಿತು. ಅದಕಾರಣ, ಯುದ್ಧಸೇವೆಗಾಗಿ ತಾವಾಗಿಯೇ ಮುಂದೆ ಬಂದು ಸೇರತಕ್ಕವರಿಗೆ "ಸಿವಿಲ್" ನೌಕರಿಗಳನ್ನು ಕೊಡುವ ವಿಚಾರವಾಗಿ ಕೆಲವು ರಿಯಾಯಿತಿಗಳನ್ನು ಕೊಡುವುದನ್ನು ಸರ್ಕಾರದವರು ಸ್ವಲ್ಪಕಾಲದಿಂದಲೂ ಪರ್ಯಾಲೋಚಿಸುತ್ತಿದ್ದಾರೆ ಯುದ್ಧಕ್ಕೆ ಹೋಗಿ ಸೇವೆಮಾಡಿ, ಯುದ್ಧರಂಗದಿಂದ ಹಿಂದಕ್ಕೆ ಬಂದವರಿಗೆ ಕೊಡುವುದಕ್ಕಾಗಿ ಇಂಡಿಯಾ ಸರ್ಕಾರದವರೂ ಮತ್ತು ಬ್ರಿಟಿಷ್ ಇಂಡಿಯಾದ ಕೆಲವು ಪ್ರಾಂತಗಳ ಸರ್ಕಾರಗಳವರೂ ತಮ್ಮ ಹತೋಟಿಗೊಳಪಟ್ಟಿರುವ ನೌಕರಿಗಳ ಖಾಲಿ ಸ್ಥಾನಗಳಲ್ಲಿ ಒಂದು ಭಾಗದವುಗಳನ್ನು ಮುಂದೆ ಯುದ್ಧರಂಗದಿಂದ ಹಿಂತಿರುಗಿದವರಿಗೆ ಕೊಡುವುದಕ್ಕೋಸ್ಕರವೇ ಸದ್ಯದಲ್ಲಿ ಮೀಸಲಾಗಿಡಬೇಕೆಂದಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಕೂಡ ಅದೇ ರೀತಿ ಏಕೆ ಮಾಡಕೂಡದೆಂಬುದನ್ನು ಸರ್ಕಾರದವರು ಯೋಚನೆಮಾಡುತ್ತಿದ್ದಾರೆ

ವಿಮಾನದಾಳಿಯಿಂದ ತೊಂದರೆಯಾಗದಂತೆ ಮುಂಜಾಗರೂಕತೆಯ ಏರ್ಪಾಡು ಮತ್ತು ಸಿವಿಕ್ ಗಾರ್ಡುಗಳು

ಈ ವರ್ಷದ ಜೂನ್ ಅಧಿವೇಶನದಲ್ಲಿ "ಸಿವಿಕ್ ಗಾರ್ಡ್ಸ್" ಮಸೂದಾ ಕಾನೂನಿನ ನಿಯಮಗಳನ್ನು ಸರ್ಕಾರದವರು ಈ ಸಭೆಯವರ ಪರ್ಯಾಲೋಚನೆಗೆ ಒಪ್ಪಿಸಿದ್ದರು. ಆ ಮಸೂದಾ

ನೂತನ ನ್ಯಾಯವಿಧಾಯಕಸಭೆಯವರಿಂದ ಅಂಗೀಕಾರವಾಗಿ ಶ್ರೀಮನ್ಮಹಾರಾಜರವರ ಅನುಮೋದನೆಯನ್ನು ಪಡೆಯಿತು. ಈ ಏರ್ಪಾಡು ಇಷ್ಟು ಸ್ವಲ್ಪ ಅವಧಿಯಲ್ಲೇ ತಕ್ಕಮಟ್ಟಿಗೆ ಚೆನ್ನಾಗಿ ವೃದ್ಧಿ ಹೊಂದಿದೆ. ಇದು ಸಂತೋಷಕರವಾದ ವಿಷಯ. 1941ನೆಯ ಇಸವಿ ಆಗಸ್ಟು ಕೊನೆಯವರೆಗೆ 899 ಮಂದಿ ಸಿವಿಕ್ ಗಾರ್ಡುಗಳು ನೇಮಕವಾಗಿದ್ದರು. ಅವರಲ್ಲಿ [illegible] "ಗ್ರೂಪ್ ಕಮಾಂಡರ್ಸ್" ಎಂಬ ಅಧಿಕಾರಿಗಳಿದ್ದಾರೆ. ಸಿವಿಕ್ ಗಾರ್ಡುಗಳ ದಳಗಳಲ್ಲಿರುವವರಿಗೆಲ್ಲ ಯೂನಿಫಾರಂ ಉಡುಪುಗಳನ್ನು ಕೊಟ್ಟು, ಅವರು ಸಿವಿಕ್ ಗಾರ್ಡುಗಳೆಂಬುದನ್ನು ತೋರಿಸುವ ಬ್ಯಾಡ್ಜ್ ಪಟ್ಟಿಗಳನ್ನು ಕೊಡಲಾಗಿದೆ. ಅವರು ನೆರವೇರಿಸಬೇಕಾಗುವ ಮುಖ್ಯವಾದ ಕರ್ತವ್ಯಗಳನ್ನು ನೆರವೇರಿಸುವುದಕ್ಕೆ ಬೇಕಾದ ಶಿಕ್ಷಣವೂ ಅವರಿಗೆ ದೊರೆಯುತ್ತಿದೆ.

ವಿಮಾನದಾಳಿಗಳು ನಡೆದ ಪಕ್ಷದಲ್ಲಿ ಮುಂಜಾಗ್ರತೆಗಾಗಿ ಏರ್ಪಾಡುಗಳನ್ನು ತೆಗೆದುಕೊಳ್ಳಬೇಕಾಗುತ್ತದಷ್ಟೆ. ಅದಕ್ಕಾಗಿ ಬೆಂಗಳೂರು ನಗರಕ್ಕೆ ಸರಳವಾದೊಂದು ಏರ್ಪಾಡನ್ನು ಸಿದ್ಧಪಡಿಸಲಾಗಿದೆ. ಇತರ ಕೆಲವು ಸ್ಥಳಗಳಲ್ಲಿ ಸಹ ಅದೇ ರೀತಿಯ ಮುಂಜಾಗರೂಕತೆಯ ಏರ್ಪಾಡುಗಳನ್ನು ಮಾಡುವ ವಿಚಾರವು ಪರ್ಯಾಲೋಚನೆಯಲ್ಲಿದೆ. ಈಚೆಗೆ ಈ ಏರ್ಪಾಡಿಗೆ ಸಂಬಂಧಪಟ್ಟ ಒಂದು ಆಕ್ಟನ್ನೇ ವಿಧಾಯಕವಾಗಿಸಿದ್ದೇವೆ. ಈ ವ್ಯವಸ್ಥೆಗೆ ಅವರಿಂದ ತಕ್ಕಂತೆ [illegible] ನಲ್ಲಿ ಸಹಕಾರಕ್ಕೆ ಹೆಚ್ಚು ಪ್ರೋತ್ಸಾಹವನ್ನು ಕೊಡತಕ್ಕ [illegible] ಉದ್ದೇಶವಿಲ್ಲ. ಆದರೆ ಸಂಬಂಧಪಟ್ಟ [illegible] ಇದರೊಡನೆಯೂ "ಸಿವಿಕ್ ಗಾರ್ಡ್ಸ್" ದಳದೊಡನೆಯೂ ಸಹಕರಿಸಿ ಕೆಲಸಮಾಡುವ ಸ್ವಯಂಸೇವಕರಿಗೆ ಶಿಕ್ಷಣ ಕೊಡುವ ಕೆಲಸವನ್ನು ಪ್ರಾರಂಭಿಸಬೇಕೆಂದಿದ್ದೇವೆ. ಈ ಸಂಬಂಧದಲ್ಲಿಯೂ "ಸಿವಿಕ್ ಗಾರ್ಡ್" ದಳಗಳ ಸಂಬಂಧದಲ್ಲಿಯೂ ಪ್ರಜೆಗಳು ಸರ್ಕಾರದವರಿಗೆ ಸಹಾನುಭೂತಿಪೂರ್ವಕವಾದ ಪೂರ್ಣ ಸಹಕಾರವನ್ನು ಕೊಡುವರೆಂದು ನಾನು ನಂಬಿದ್ದೇನೆ.

ಶ್ರೀಮನ್ಮಹಾರಾಜರವರ ಸಂಚಾರ

ಸರ್ಕಾರದ ಕಾರ್ಯ ಇಲಾಖೆಗಳ ಕಾರ್ಯಕಲಾಪಗಳ ಕುರಿತು ನಾನು ವಿವರಗಳನ್ನು ತಿಳಿಸುವ ಪ್ರವಕ್ತೆ [illegible] ಶ್ರೀಮನ್ಮಹಾರಾಜರವರ ಸಂಚಾರದ ವಿಷಯವಾಗಿ ಕೆಲವು ಅಂಶಗಳನ್ನು ಸೂಚಿಸುವೆನು. ಈ ವರ್ಷ ಫೆಬ್ರವರಿ ತಿಂಗಳಲ್ಲಿ ಶ್ರೀಮನ್ಮಹಾರಾಜರವರು ಶಿವಮೊಗ್ಗ, ಕಡೂರು ಮತ್ತು ಹಾಸನ ಡಿಸ್ಟ್ರಿಕ್ಟುಗಳಲ್ಲಿ ಸಂಚಾರಾರ್ಥವಾಗಿ ದಯಮಾಡಿಸಿದ್ದರು. ಮೈಸೂರು ಸಂಸ್ಥಾನದ ಪ್ರಜೆಗಳಿಗೆ ಆದಿಯಿಂದಲೂ ಪ್ರಭುಭಕ್ತಿಯೂ ರಾಜಕುಟುಂಬದವರಲ್ಲಿಯೂ ಗಾಢವಾದ ಭಕ್ತಿ ವಿಶ್ವಾಸಗಳಿವೆ. ಪ್ರಭುಗಳವರು ಸಂಚಾರಾರ್ಥವಾಗಿ ದಯಮಾಡಿಸಿದ ಕಡೆಗಳಲ್ಲಿ ಹೊಸ ಹುರುಪಿನಿಂದ ಪ್ರಜೆಗಳು ತಮ್ಮ [illegible] ವಿಶ್ವಾಸಗಳನ್ನು ಪ್ರದರ್ಶಿಸಲು ಅವಕಾಶ ದೊರೆಯಿತು. ಅಲ್ಲದೆ ಮಹಾಸ್ವಾಮಿಯವರು ಮಲೆನಾಡಿನ ಸ್ಥಿತಿಯನ್ನು ಸ್ವತಃ ನೋಡಿ, ಮಲೆನಾಡಿನ ಮುಂದಾಳುಗಳಲ್ಲಿ ಕೆಲವರ ಪರಿಚಯವನ್ನು ಪಡೆಯಲು ಅನುಕೂಲವಾಯಿತು. ಆ ಸಂಚಾರ ಕಾಲದಲ್ಲಿ ಮಹಾಸ್ವಾಮಿಯವರು ಅನೇಕ ಸಾರ್ವಜನಿಕ ಮಹೋತ್ಸವಗಳಲ್ಲಿ ಭಾಗವಹಿಸಿ ಕೃಪೆಮಾಡಿದರು. ಮಲೆನಾಡಿನ ವಿಶೇಷ ರೀತಿಯ ಕೊರತೆಗಳನ್ನು ಮಹಾಸ್ವಾಮಿಯವರು ತಮ್ಮ ಚಿತ್ತಕ್ಕೆ ತಂದುಕೊಂಡು, ಮಲೆನಾಡಿನ ಪ್ರಜೆಗಳ ಯೋಗಕ್ಷೇಮ ವಿಷಯದಲ್ಲಿ ತಮಗಿರುವ ಅಂತರಂಗದ ಸಹಾನುಭೂತಿಯ ನಿದರ್ಶನವಾಗಿ 2 ಲಕ್ಷ ರೂಪಾಯಿಗಳನ್ನು ದಯಪಾಲಿಸಿದರು. ಆ ಹಣವನ್ನು ಪ್ರಯೋಜನಕರಗಳಾದ ವಿಶೇಷರೀತಿಯ ಏರ್ಪಾಡುಗಳ ಕೆಲಸಕ್ಕೆ ಆ ಡಿಸ್ಟ್ರಿಕ್ಟುಗಳಲ್ಲಿ ಹಂಚಿ ಒದಗಿಸುವುದಕ್ಕಾಗಿ ಆ ಮೊತ್ತವನ್ನು ಉಪಯೋಗಿಸಬೇಕೆಂದು ಆಜ್ಞೆಯಾಯಿತು. ಮಹಾಸ್ವಾಮಿಯವರು ತಮ್ಮ ಸಂಸ್ಥಾನದಲ್ಲಿ ಆಗಾಗ್ಗೆ ಸಂಚಾರಾರ್ಥವಾಗಿ ದಯಮಾಡಿಸಿ ಚಿತ್ತೈಸಬೇಕು, ಕೃಪಾಮಯರಾದ ತಮ್ಮ ಪ್ರಭುತ್ವದಲ್ಲಿ ಅದರ ಪ್ರಗತಿ ಸಾಧನೆಯೂ, ಅಭ್ಯುದಯ ಸಾಧನೆಯೂ ಏಕಪ್ರಕಾರವಾಗಿ ಮುಂದುವರಿಯುತ್ತಿರುವುದನ್ನು ಪ್ರತ್ಯಕ್ಷವಾಗಿ ಕಂಡು ಹರ್ಷಿಸಬೇಕು—ಎಂಬುದೇ ಮಹಾಸ್ವಾಮಿಯವರ ಪ್ರಜೆಗಳೆಲ್ಲರ ಮನಃಪೂರ್ವಕವಾದ ಆಶೆ ಮತ್ತು ಹಾರೈಕೆ.

ಘನಹೊಂದಿದ ಲೆಫ್ಟಿನೆಂಟ್ ಕರ್ನಲ್ ಜೆ ಎಚ್ ಗಾರ್ಡನ್‌ರವರು

ಮಹಿಳೆಯರೇ ಮತ್ತು ಮಹಾಶಯರೇ, ಮೈಸೂರು ಸಂಸ್ಥಾನದಲ್ಲಿ ರೆಸಿಡೆಂಟರಾಗಿರುವ ಘನಹೊಂದಿದ ಲೆಫ್ಟಿನೆಂಟ್ ಕರ್ನಲ್ ಜೆ ಎಚ್ ಗಾರ್ಡನ್‌ರವರ ಅಧಿಕಾರದ ಅವಧಿಯು ಮುಗಿದು ಅವರು ತಮ್ಮ ಹುದ್ದೆಯಿಂದ ವಿಶ್ರಾಂತರಾಗುವ ಕಾಲವು ಸಮೀಪಿಸುತ್ತಿರುವುದಕ್ಕಾಗಿ ನಮಗೆಲ್ಲರಿಗೂ ವಿಷಾದವುಂಟಾಗಿದೆ. ಅದನ್ನು ನಾನು ಸೂಚಿಸಬೇಕೆಂದು ತಾವುಗಳು ನಿರೀಕ್ಷಿಸಿರುವಿರೆಂಬುದನ್ನು ನಾನು ಬಲ್ಲೆ. ರೆಸಿಡೆಂಟ್ ಹುದ್ದೆಯಲ್ಲಿ ಅವರು ಪ್ರಜಾಪ್ರತಿನಿಧಿಸಭೆಗೆ ದಯಮಾಡಿರುವುದು ಇದೇ ಕಡೆಯ ಸಲ. ಅವರು ರೆಸಿಡೆಂಟ್ ಪದವಿಯನ್ನಲಂಕರಿಸಿದಾಗಿನಿಂದಲೂ ಸಂಸ್ಥಾನದಲ್ಲಿ ನಡೆದ ಎಲ್ಲ ಯೋಜನೆಗಳಲ್ಲಿಯೂ, ಸಾರ್ವಜನಿಕ ಹಿತಸಾಧನೆಯ ಮುಖ್ಯಮುಖ್ಯವಾದ ಎಲ್ಲ ಏರ್ಪಾಡುಗಳಲ್ಲಿಯೂ ಮನಃಪೂರ್ವಕವಾದ ಆಸಕ್ತಿಯನ್ನು ವಹಿಸುತ್ತ ಬಂದಿದ್ದಾರೆ. ಅಲ್ಲದೆ, ತಮ್ಮಿಂದ ಸಾಧ್ಯವಿದ್ದ ಸಮಸ್ತರೀತಿಗಳಲ್ಲಿಯೂ ನಮ್ಮೊಡನೆ ಸಹಕರಿಸಿರುತ್ತಾರೆ. ಸಂಸ್ಥಾನದ ಸನ್ಮಿತ್ರರೆಂದೂ, ಹಿತಚಿಂತಕರೆಂದೂ, ವಿವೇಕ ಸಹಾನುಭೂತಿಗಳ ಬಲವೂ ಮತ್ತು ರಾಜನೀತಿಕೌಶಲ್ಯ[illegible] ಜಕೀಯ ಅಧಿಕಾರಿಯವರೆಂದೂ ನಮ್ಮ ಸಂಸ್ಥಾನ[illegible] ಅವರನ್ನು ಚಿರಕಾಲ ನೆನಪಿನಲ್ಲಿಟ್ಟುಕೊಂಡಿರುತ್ತೇವೆ. [illegible] ಶ್ರೀಮನ್ಮಹಾರಾಜರವರ [illegible] ಗಳಿಗೆ ಪಾತ್ರರಾ[illegible] ಅವರು ಆರೋಗ್ಯದಿಂದಲೂ, ಸಂತೋಷದಿಂದಲೂ [illegible] ಸುಖವಾಗಿ ಬಹುಕಾಲ [illegible] ಎಂದು ನಾವೆಲ್ಲರೂ ಹಾರೈಸುತ್ತೇವೆ.

ಆಯವ್ಯಯಗಳ ವಿಚಾರ

1940-41ನೆಯ ಸಾಲಿನ ಬಜೆಟ್ಟಿನ ಅಂದಾಜಿನಮೇರೆಗೆ ಸಂಸ್ಥಾನದ [illegible] ವರಮಾನವು 465 66 ಲಕ್ಷ ರೂಪಾಯಿಗಳೆಂದೂ [illegible] ವೆಚ್ಚವು 464 59 ಲಕ್ಷ ರೂಪಾಯಿಗಳೆಂದೂ [illegible] ನಿವ್ವಳ ಕಳೆದು 1 07 ಲಕ್ಷ ರೂಪಾಯಿಗಳ [illegible] ಉಳಿತಾಯವಾಗುವುದೆಂದೂ [illegible] 1940-41ನೆಯ ಸಾಲಿನ ಲೆಕ್ಕಗಳು ಸಿದ್ಧವಾಗಿವೆ. ಹುಟ್ಟುವಳಿಯ ಬಾಬಿನಲ್ಲಿ ಸುಮಾರು 9 ಲಕ್ಷ ರೂಪಾಯಿಗಳ [illegible] ವೆಚ್ಚದ ಬಾಬಿನಲ್ಲಿ ಸುಮಾರು 7 ಲಕ್ಷ ರೂಪಾಯಿಗಳ [illegible] ಯಾಗಿರುವುದೂ, ನಿವ್ವಳ ಕಳೆದು 16 ಲಕ್ಷ ರೂಪಾಯಿಗಳ ಉಳಿತಾಯವಾಗಿರುವುದೂ ಆ ಲೆಕ್ಕಗಳಿಂದ ಕಂಡುಬರುತ್ತದೆ. ಹುಟ್ಟುವಳಿ ಬಾಬಿನಲ್ಲಿ "ಜಮೀನು ಕಂದಾಯ" "ಫಾರೆಸ್ಟ್" (ಗಂಧದ [illegible] ಸೇರಿ), "ಎಕ್ಸೈಜ್" [illegible] "ರೈಲು [illegible]" [illegible] ಮುಂತಾದ [illegible] ವಿದ್ಯುಚ್ಛಕ್ತಿ [illegible] ಬಜೆಟ್ಟಿನಲ್ಲಿ [illegible] "[illegible]" ಮತ್ತು "ವಿದ್ಯಾಭ್ಯಾಸ" ಈ ಬಾಬುಗಳಲ್ಲಿ.

ವಸ್ತ್ರನಿಧಿಯ [illegible] 1940-41ನೆಯ ಸಾಲಿನ [illegible] ಬಜೆಟ್ಟಿನಲ್ಲಿಯೂ ಮತ್ತು ವಿದ್ಯುಚ್ಛಕ್ತಿ ಬಜೆಟ್ ಅಂದಾಜಿನಲ್ಲಿಯೂ ಆ ನಿಧಿಗೆ [illegible] ಯಾಗಿ 5 ಲಕ್ಷ ರೂಪಾಯಿಗಳನ್ನು ಮುಂಗಡವಾಗಿ ಕೊಡಲಾಯಿತು. 1940-41ನೆಯ ಸಾಲಿನ ಅಕೌಂಟಿನಲ್ಲಿ ರಕ್ಷಣಾ ನಿಧಿಯ ಬಾಬಿನಲ್ಲಿ ವಾಸ್ತವಿಕವಾಗಿ ಸರ್ಕಾರದವರು 6 ಲಕ್ಷ ರೂಪಾಯಿಗಳ [illegible] ಬರುವಂತಿದೆ. ಈ ಕೊರತೆಗೆ ಭರ್ತಿಮಾಡುವುದಕ್ಕಾಗಿ 6 ಲಕ್ಷ ರೂಪಾಯಿಗಳ ವಿಶೇಷರೀತಿಯ ಗ್ರಾಂಟನ್ನು (ಈ ಹಿಂದೆ ಮಂಜೂರು ಮಾಡಲಾಗಿದ್ದ 13 70 ಲಕ್ಷ ರೂಪಾಯಿಗಳ ಜೊತೆಗೆ) ಹುಟ್ಟುವಳಿ ಲೆಕ್ಕದಿಂದ ಒದಗಿಸಿ 1940-41ನೆಯ ಸಾಲಿನ ಲೆಕ್ಕಗಳಲ್ಲಿ ಕಾಣಿಸಲಾಗಿದೆ. [illegible] ಸಾಲಿನಲ್ಲಾಗಲೀ ಅಥವಾ ಮುಂದಿನ ಸಾಲಿನಲ್ಲಾಗಲೀ ಭಾರಿ ಮೊಬಲಗುಗಳನ್ನು ಒದಗಿಸಬೇಕಾಗುವ [illegible] ವೆಚ್ಚಗಳು ಒದಗಬಹುದು. ಆಗ್ಗೆ ಅವಕ್ಕೆ ಹಣವನ್ನು ಒದಗಿಸುವುದಕ್ಕಾಗಿ ಅಸಾಧಾರಣ ವೆಚ್ಚಗಳಿಗಾಗಿ ವಿಶೇಷರೀತಿಯ ನಿಧಿ [illegible] 8 ಲಕ್ಷ ರೂಪಾಯಿಗಳ ಮೊಬಲಗನ್ನೂ ಸಹ ಜಮಾ ಕಟ್ಟಿ [illegible].

ಈ ವಿಶೇಷರೀತಿಯ ಲೆಕ್ಕ ಸವರಣೆಗಳು ನಡೆದಮೇಲೆ 1940-41ನೆಯ ಸಾಲಿನಲ್ಲಿ ಹುಟ್ಟುವಳಿಯ ಬಾಬಿನಲ್ಲಿ ನಿವ್ವಳ ಕಳೆದು ಸುಮಾರು 2 ಲಕ್ಷ ರೂಪಾಯಿಗಳ ಉಳಿತಾಯವಾಗಬಹುದೆಂದು ನಿರೀಕ್ಷಿಸಲಾಗಿದೆ.

ಮಳೆಬೆಳೆಗಳು

1940-41ನೆಯ ಸಾಲಿನಲ್ಲಿ ಸರಾಸರಿ 4 53 ಅಂಗುಲಗಳಷ್ಟು ಮಳೆಯಾಯಿತು. ಅದರ ಹಿಂದಿನ (93° 40) ಸಾಲಿನಲ್ಲಿ ಸರಾಸರಿ 44 11 ಅಂಗುಲಗಳಷ್ಟು ಮಳೆಯಾಗಿದ್ದಿತು. ಮಳೆಗಳು ಸಕಾಲದಲ್ಲಿ ಬಿದ್ದುವು. ಅಲ್ಲದೆ ಕೋಲಾರ, ತುಮಕೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳ ಕೆಲವು ಭಾಗಗಳಲ್ಲಿ ಹೊರತು ಉಳಿದ ಕಡೆಗಳಲ್ಲಿ ಎಲ್ಲ ಪ್ರದೇಶಗಳಲ್ಲಿಯೂ ಮಳೆಯಾಯಿತು. ಆದರೂ, ಸಂಸ್ಥಾನದಲ್ಲಿರತಕ್ಕ ಕೆಲವು ಕೆರೆಗಳಿಗೆ ಮಾತ್ರ ಸಾಕಾದಷ್ಟು ನೀರು ಬರಲಿಲ್ಲ. ಆದಕಾರಣ, ಕೆಲವು ಪ್ರದೇಶಗಳಲ್ಲಿ ತರೀ ಬೆಳೆಯು ಆಗಲಿಲ್ಲ. ಹೀಗೆ ಬೆಳೆ ಹೋದುದರಿಂದ ಒಟ್ಟು [illegible]8,000 ರೂಪಾಯಿಗಳ ಕಂದಾಯ ಮಾಫಿಗಳನ್ನು ಕೊಡಲಾಯಿತು.

ಜಮೀನು ಕಂದಾಯ

1940-41ನೆಯ ಸಾಲಿನಲ್ಲಿ ಹಿಂದಿನ ಸಾಲುಗಳ ಬಾಕಿಗಳೂ ಸೇರಿ ವಸೂಲಾಗಬೇಕಾಗಿದ್ದ ಒಟ್ಟು ಕಂದಾಯದ ಮೊಬಲಗು 1,50,85,150 ರೂಪಾಯಿಗಳು. 1940-41ನೆಯ ಸಾಲಿನಲ್ಲಿ ವಸೂಲಾದ ಮೊಬಲಗೂ ಮತ್ತು ಮಾಫೀ [illegible] ಮೊಬಲಗೂ ಸೇರಿ ಒಟ್ಟು 1,31,59,657 ರೂಪಾಯಿಗಳು. 1939-40ನೆಯ ಸಾಲಿನಲ್ಲಿ ವಸೂಲಾಗಿದ್ದ ಜಮೀನು ಕಂದಾಯದ ಮೊಬಲಗು 1,31,43,301 ರೂಪಾಯಿಗಳು. 1940-41ನೆಯ ಸಾಲಿನಲ್ಲಿ ವಸೂಲಾಗಬೇಕಾಗಿದ್ದ ಕಂದಾಯದ ಹಣದಲ್ಲಿ ವಸೂಲಾದ ಹಣದ ಸೇಕಡಾವಾರು 87 2, ಅದರ ಹಿಂದಿನ ಸಾಲಿನಲ್ಲಿ (ಎಂದರೆ 1939-40ನೆಯ ಸಾಲಿನಲ್ಲಿ) ಈ ಸೇಕಡಾವಾರು 86 1 ಆಗಿದ್ದಿತು.

ರೈತರ ಪರವಾಗಿ ಸರ್ಕಾರದವರು ಬಹಳ ಕೋರಿಕೆಗಳನ್ನು ನೆರವೇರಿಸಿ ಕೊಡುವುದಕ್ಕಾಗಿ ಅನೇಕ ಪರಿಹಾರರೂಪವಾದ ಏರ್ಪಾಡುಗಳನ್ನು ಮಂಜೂರುಮಾಡಲಾಯಿತು. ಆ ಪೈಕಿ, ಈ ಕೆಳಕಂಡ ಏರ್ಪಾಡುಗಳನ್ನು ಇಲ್ಲಿ ಸೂಚಿಸಬಹುದು, ಅವುಗಳು ಯಾವುವೆಂದರೆ

1 ವ್ಯವಸಾಯದ ಜಮೀನುಗಳಲ್ಲಿ ವಾಸದ ಮನೆಗಳನ್ನು ಸಿದ್ದ ಸಂದರ್ಭಗಳಲ್ಲಿ ವಿಧಿಸಿದ್ದ ವಿಶೇಷ ಕಂದಾಯಗಳನ್ನು ಲುಮಾಡದೆ ಬಿಟ್ಟುಬಿಡಲಾಯಿತು.

2. ರೆವಿನ್ಯೂ ಇಲಾಖೆಯವರು ಇದುವರೆಗೂ ವಸೂಲು ಡುತ್ತಿದ್ದ ಹುಲ್ಲುಬನ್ನಿ ತೆರಿಗೆಯನ್ನು ತೆಗೆದುಹಾಕಲಾಯಿತು

3 ಗಂಧದ ಮರಗಳಿರುವ ಜಮೀನುಗಳನ್ನು ವ್ಯವ ಕ್ಕಾಗಿ ಮಂಜೂರುಮಾಡುವ ಸಂದರ್ಭಗಳಲ್ಲಿ, ಕಿಮ್ಮತ್ತಿನ ಜೊ ಗಂಧದಮರದ ಬೋನಸ್ಸು ಮೂಲ್ಯರೂಪವಾದ ಮೊತ್ತವ ವಸೂಲ್ಮಾಡುತ್ತಿದ್ದುದನ್ನು ನಿಲ್ಲಿಸಿಬಿಡಲಾಯಿತು

1940-41ನೆಯ ಸಾಲಿನಲ್ಲಿ ಜಮೀನು ಹಕ್ಕುಗಳ ದಾ ತಿಯ ಶಿಸ್ತನ್ನು 4 ತಾಲ್ಲೂಕುಗಳಲ್ಲಿ ಜಾರಿಯಲ್ಲಿ ತರಲಾಗಿದೆ. ಸೇರಿ ಈಗ ಆ ಶಿಸ್ತು ಜಾರಿಯಲ್ಲಿರುವ ತಾಲ್ಲೂಕುಗಳ ಮತ್ತು ತಾಲ್ಲೂಕುಗಳ ಒಟ್ಟು ಸಂಖ್ಯೆ 76

1941ನೆಯ ಇಸವಿಯ ಏಪ್ರಿಲ್ ತಿಂಗಳಿನಿಂದ ಪಟ್ಟಣ, ಆಲೂರು ಮತ್ತು ಹರಿಹರ—ಈ ಸಬ್‌ತಾಲ್ಲೂಕುಗಳ ಪಕ್ಕಾ ತಾಲ್ಲೂಕುಗಳಾಗಿ ಮಾರ್ಪಡಿಸಲಾಗಿದೆ

ನಿಮ್ನ ತರಗತಿಗಳ ಸಂಬಂಧದಲ್ಲಿ ಏರ್ಪಟ್ಟಿರುವ "ಡಿಪ್ರೆಸ್ಡ್ ಕ್ಲಾಸ್ ಕಮಿಟಿ" ಎಂಬ ಸಮಿತಿಯವರು 940- ನೆಯ ಸಾಲಿನಲ್ಲಿ ಎರಡು ಸಲ ಸಭೆ ಸೇರಿದ್ದರು, ಮತ್ತು ಆ ಗತಿಗಳ ಸಂಬಂಧದ ಮುಖ್ಯ ಮುಖ್ಯವಾದ ಅನೇಕ ವಿಚಾರಗಳ ಆ ಸಮಿತಿಯವರು ಚರ್ಚಿಸಿದರು. ಸರಿ ಸುಮಾರು ಎಲ್ಲ ತಾಲ್ಲೂ ಗಳಲ್ಲಿಯೂ ನಿಮ್ನ ತರಗತಿಗಳ ಯೋಗಕ್ಷೇಮವನ್ನು ನೋಡಿ ಳ್ಳುವ ಕಾರ್ಯಕಲಾಪಗಳ ಸಂಬಂಧದ ಸಮಿತಿಗಳು ನೇಮಕ ಗಿವೆ

ಪರಸ್ಪರ ರಾಜಿ ಒಪ್ಪಂದದಮೂಲಕ ಸಾಲತೀರ್ವೆಯ ಏರ್ಪಾಡಿಗೆ ಸಂಬಂಧಪಟ್ಟ ಬೋರ್ಡುಗಳು

(ಡೆಟ್ ಕನ್ಸಲಿಯೇಷನ್ ಬೋರ್ಡುಗಳು)

ಪರಸ್ಪರ ರಾಜಿ ಒಪ್ಪಂದದಮೂಲಕ ಸಾಲತೀರ್ವೆಯ ಏ ಡಿಗೆ ಸಂಬಂಧಪಟ್ಟ ಎಂಟು ಬೋರ್ಡುಗಳು ಈಗ ಸಂಸ್ಥಾನ ಕೆಲಸಮಾಡುತ್ತಿವೆ. ಅವುಗಳ ಅಧಿಕಾರ ವ್ಯಾಪ್ತಿಗೆ 9 ತಾಲ್ಲೂ ಗಳು ಒಳಪಟ್ಟಿವೆ. ಈ ಬೋರ್ಡುಗಳು ಹೇಗೆ ಕೆಲಸ ಮಾ ವೆಯೆಂಬುದನ್ನು ವಿವರವಾಗಿ ಪರಿಶೀಲಿಸುವುದಕ್ಕಾಗಿ ಒಬ್ಬ ಸ್ಪೆಷಲ್ ಆಫೀಸರನ್ನು ನೇಮಿಸಲಾಯಿತು. ಅವರು ಸರ್ಕಾರ ರಿಗೆ ತಮ್ಮ ವರದಿಯನ್ನೊಪ್ಪಿಸಿದರು. ಅವರ ಸಲಹೆಗಳ ಸರ್ಕಾರದವರು ಕಳೆದ ಏಪ್ರಿಲ್ ತಿಂಗಳಿನಲ್ಲಿ ಹುಕುಂ ಮಾ ಮಾಡಿದರು. ಜಮೀನು ಅಡಮಾನದ ಬ್ಯಾಂಕುಗಳು ಇರ ಸ್ಥಳಗಳಲ್ಲಿ ಮಾತ್ರವೇ ಪರಸ್ಪರ ರಾಜಿ ಒಪ್ಪಂದದ ("ಡೆಟ್ ಸಿಲಿಯೇಷನ್ ಬೋರ್ಡುಗಳನ್ನು") ಏರ್ಪಡಿಸಬೇಕು, ಮಾಡುವುದರಿಂದ ಈ ಎರಡು ತರಗತಿಯ ಸಂಸ್ಥೆಗಳ ಕೆಲಸಗ ಹೊಂದಿಕೆಯಿಂದ ನಡೆದು ಜನರಿಗೆ ಅನುಕೂಲವಾಗುತ್ತದೆ ಎಂಬ ಅಭಿಪ್ರಾಯವನ್ನು ಸರ್ಕಾರದವರು ಅನುಮೋದಿಸಿರುತ್ತಾ ಈಗಾಗಲೇ ಜಮೀನು ಅಡಮಾನದ ಬ್ಯಾಂಕುಗಳು ಕೆಲಸ ನಡೆ ಸುತ್ತಿರುವ ಅಥವಾ ಆ ಬ್ಯಾಂಕುಗಳು ಏರ್ಪಡಬಹುದಾದ ಸಂಭ ವಿರುವ ಸ್ಥಳಗಳಲ್ಲಿ ಮಾತ್ರವೇ ಮುಂದೆ "ಡೆಟ್ ಕನ್ಸಲಿಯೇಷ ಬೋರ್ಡುಗಳನ್ನು" ಸ್ಥಾಪಿಸಲಾಗುತ್ತದೆ. ಈ ವ್ಯವಸ್ಥೆಯ ಉತ್ತಮಗೊಳಿಸುವ ಇತರ ಏರ್ಪಾಡುಗಳನ್ನು ಮಾಡಬೇಕೆ ಉದ್ದೇಶಿಸಿದೆ. ಪರಸ್ಪರ ರಾಜಿ ಒಪ್ಪಂದಗಳ ಮೂಲಕ ಸಾ ಮಾಡುವ "ಡೆಟ್ ಕನ್ಸಲಿಯೇಷನ್" ಆಕ್ಟನ್ನು ಅದಕ್ಕ ತಿದ್ದುಪಾಟು ಮಾಡುವುದಕ್ಕೋಸ್ಕರ ಒಂದು ಮಸೂದೆಯನ್ನು ಪ್ರಜಾಪ್ರತಿನಿಧಿಸಭೆಯ ಸಮಕ್ಷಮಕ್ಕೆ ಒಪ್ಪಿಸಲಾಗುವುದು.

ಎಕ್ಸೈಜು ಇಲಾಖೆ

ಎಕ್ಸೈಜು ಹುಟ್ಟುವಳಿಯು 1939-40ನೆಯ ಸಾಲಿ 53,16,[illegible]35 ರೂಪಾಯಿಗಳು. ಅದು 1940-41ನೆಯ ಸಾಲಿ 56,80,510 ರೂಪಾಯಿಗಳು. ಎಕ್ಸೈಜು ಕಾನೂನಿಗೂ ಮ ಅಫೀಮು ಕಾನೂನಿಗೂ ವಿರುದ್ಧವಾಗಿ ನಡೆದ ಅಪರಾಧಗಳ ಒಟ್ಟು ಸಂಖ್ಯೆಯು 4,878. ಈ ಪೈಕಿ, ಲೈಸೆನ್ಸಿನ ಷರತ್ತುಗಳನ್ನು ಉಲ್ಲಂ ಘಿಸಿದ ಕಾರಣ ನಡೆದ ಅಪರಾಧಗಳ ಸಂಖ್ಯೆ 4,173. ಕಳ್ಳಭಟ್ಟಿ ಅಪರಾಧದ ಮೊಕದ್ದಮೆಗಳ ಸಂಖ್ಯೆಯು 317 ರಿಂದ 366 ಏರಿತು. 1940-41ನೆಯ ಸಾಲಿನಲ್ಲಿ ಒಂದು ಗಾಂಜಾ ಅ ಯನ್ನೂ 2 ಸಾರಾಯಿ ಅಂಗಡಿಗಳನ್ನೂ ಮತ್ತು 32 ಹೆಂ ಅಂಗಡಿಗಳನ್ನೂ ಮುಚ್ಚಲಾಯಿತು, ಮತ್ತು ಹೊಸದಾಗಿ ಯಾ ಅಂಗಡಿಗಳನ್ನೂ ಏರ್ಪಡಿಸಲಿಲ್ಲ. ಕ್ಲೋಸ್‌ಪೇಟೆಯ ಕೇಂದ್ರದ ಮದ್ಯಪಾನ ನಿರೋಧದ ಏರ್ಪಾಡು ಜಾರಿಯಲ್ಲಿರುವುದಷ್ಟೆ. ಅದ ಸಂಬಂಧದಲ್ಲಿ ಜನಾರೋಗ್ಯ ರಕ್ಷಣಕೇಂದ್ರದ ಅಧಿಕಾರ ಸರಹ ನಲ್ಲಿ ಇನ್ನೂ ಏಳು ಅಂಗಡಿಗಳನ್ನು ಮುಚ್ಚಲಾಯಿತು. ಚನ್ನಪಟ್ಟ ಟೌನೂ ಸೇರಿ, ಆ ಕೇಂದ್ರದ ಒಟ್ಟು ಪ್ರದೇಶದಲ್ಲಿ ಎಲ್ಲಿಯೂ ಮಾದಕ ಪದಾರ್ಥಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರಕೂಡದೆಂ 1941ನೆಯ ಇಸವಿ ಜುಲೈ 1ನೆಯ ತಾರೀಖಿನಿಂದ ನಿಷೇಧಿಸ ಗಿದೆ. ಈಚಲು ಮರಗಳಿಂದ ಹೆಂಡವನ್ನಿಳಿಸುವ ಅವಧಿಯ ಆರು ತಿಂಗಳಿಂದ ನಾಲ್ಕು ತಿಂಗಳುಗಳಿಗೆ ಕಡಿಮೆಮಾಡಲಾಗಿದೆ

ಫಾರೆಸ್ಟು ಇಲಾಖೆ

1940-41ನೆಯ ಸಾಲಿನಲ್ಲಿ ಫಾರೆಸ್ಟು ಇಲಾಖೆಯ ಹುಟ್ಟು ಳಿಯು ಹೆಚ್ಚಿತು. ಇದು ಫಾರೆಸ್ಟು ಇಲಾಖೆಯ ಅದಕ್ಕೆ

ಉಬರತಕ್ಕ ಒಂದು ಗಮನಾರ್ಹವಾದ ಸಂಗತಿ ಯುದ್ಧಕ್ಕೆ ಾದ ಸಾಮಾನುಗಳನ್ನು ಸರಬರಾಯಿ ಮಾಡಬೇಕೆಂದು ಇಂಡಿಯಾ ಸರ್ಕಾರದವರು ಸಾಮಾನುಗಳನ್ನು ತರಿಸಿಕೊಂಡುದೂ, ಹೆಚ್ಚಿನ ಹುಟ್ಟುವಳಿಗೆ ಸ್ವಲ್ಪಮಟ್ಟಿಗೆ ಕಾರಣವಾಗಿದೆ. ಬಾಬೀ ಎಂದಿನಂತೆ ಹೆಚ್ಚಿನ ಗಿರಾಕಿಗಳಿದ್ದವು. ಫಾರೆಸ್ಟ್ ಇಲಾಖೆಯ ಟ್ಟುವಳಿ ಬಾಬತು ವಸೂಲಾಗಬೇಕಾಗಿದ್ದ ಒಟ್ಟು ಮೊಬಲಗು 42,224 ರೂಪಾಯಿಗಳು. ಅದರಲ್ಲಿ ವಸೂಲಾದ ಮೊಬಲಗು 65,180 ರೂಪಾಯಿಗಳು ಬಜೆಟ್ಟಿನ ಮೇರೆಗೆ 21,67,400 ಪಾಯಿಗಳ ಮೊಬಲಗು ಮಾತ್ರವೇ ವಸೂಲಾಗಬಹುದೆಂದು ಸಿದ್ಧವು. ಇಂಡಿಯಾ ಸರ್ಕಾರದವರಿಗೆ ಒದಗಿಸಿದ ಬಾಬೀನ ತ್ತು ಬಿದಿರು ಬೊಂಬುಗಳ ಕಿಮ್ಮತ್ತು 2 ಲಕ್ಷ ರೂಪಾಯಿಗಳಿಗಿಂ ಹೆಚ್ಚು. ಸರ್ಕಾರದ ಗಂಧದ ಎಣ್ಣೆಯ ಕಾರ್ಖಾನೆ 70 ಟನ್ನುಗಳಿಗಿಂತ ಹೆಚ್ಚಾಗಿ ಗಂಧದ ಮರವನ್ನು ಖರೀದಿ ಲಾಯಿತು. 370 ಟನ್ನುಗಳ ತೂಕದ ಗಂಧದ ಮರವನ್ನು ಯಾಗಿ ಮಾರಾಟಮಾಡಲಾಯಿತು. ಇದರಿಂದ 2 ಲಕ್ಷ ರೂ ಗಳಿಗಿಂತ ಹೆಚ್ಚು ಮೊತ್ತವು ಹುಟ್ಟುವಳಿಯಾಯಿತು.

ಚಾಮರಾಜನಗರದಲ್ಲಿ ಬೇಟೆಯ ಮೃಗಗಳನ್ನು ವನ್ಯವಾಗಿ ಲ್ಲಿನಂತೆ ರಕ್ಷಣೆಗಾಗಿ ಏರ್ಪಡಿಸಿದ್ದ ಕ್ಷೇತ್ರವನ್ನು ವಜಾಮಾಡ ಯಿತು, ಮತ್ತು ಅದಕ್ಕೆ ಬದಲಾಗಿ ಗುಂಡ್ಲುಪೇಟೆಯಲ್ಲಿ ಆಶ್ರ ಮ ಕ್ಷೇತ್ರವನ್ನು ಏರ್ಪಡಿಸಲಾಯಿತು. ಕಡೂರು ಡಿಸ್ಟ್ರಿಕ್ಟಿನಲ್ಲಿ ಗೇ ಮುಂತಾದ ಕಾಡುಮೃಗಗಳನ್ನು ಮನಸ್ವಿಯಾಗಿ ನಾಶ ಸದಂತೆ ಅವುಗಳ ರಕ್ಷಣೆಗಾಗಿ ಏರ್ಪಾಡು ನಡೆಯಿತು. ಫಾರೆಸ್ಟು ರಿಸರ್ಚ್ ಲ್ಯಾಬೊರೆಟರಿ" ಎಂಬ ಸಂಶೋಧನ ಶಾಲೆಯಲ್ಲಿ, ಮರದ ಗುಣಸ್ವಭಾವ ಪರೀಕ್ಷೆ, ನ ಗುಣಸ್ವಭಾವ ಪರೀಕ್ಷೆ, "ಬಯೋಕೆಮಿಕಲ್" ಪರಿ ನೆಗಳು ಮತ್ತು ಗಿಡಗಳಿಗೆ ಹತ್ತತಕ್ಕ ರೋಗಗಳ ಪರೀಕ್ಷೆ —ಇವುಗಳಿಗೆ ಸಂಬಂಧಪಟ್ಟ ಕೆಲಸಗಳನ್ನೂ ಮತ್ತು ಇನ್ನೂ ಕ ಪರಿಶೀಲನ ಕಾರ್ಯಗಳನ್ನೂ ನಡೆಯಿಸಲಾಯಿತು. ಧನ ಶಾಲೆಯ ಅಕ್ಕಪಕ್ಕದಲ್ಲಿ ಹೊಸದಾಗಿ "ಆರ್ಬೊ ರ್" ಸರ್ಕಾರಕ್ಕೆ ಸೇರಿಸಿಕೊಂಡಿರುವ ನಿವೇಶನದಲ್ಲಿ ಹೊಸ ಜಾತಿಗಳ 20,000 ಗಿಡಗಳನ್ನು ಹಾಕಲಾಗಿದೆ. ಅವ ಮ್ಮ ಸಂಸ್ಥಾನದ ಕಾಡುಗಳಲ್ಲಿ ಇದುವರೆಗೂ ಬೆಳೆಯುತ್ತಿ ಲ್ಲ. ಇನ್ನು ಮುಂದೆ ಅವುಗಳನ್ನು ಹೊಸದಾಗಿ ನಮ್ಮ ಸ ದ ಕಾಡುಗಳಲ್ಲಿ ಬೆಳೆಯಬೇಕೆಂದು ಉದ್ದೇಶಿಸಿರುವ ಕಾರಣ, ವುಗಳ ಗುಣಸ್ವಭಾವಗಳನ್ನು ಪರಿಶೀಲಿಸುವುದಕ್ಕೆ ಅವಕಾಶವಾಯಿತು.

ಸ್ಟ್ಯಾಂಪುಗಳ ಇಲಾಖೆ

ಸ್ಟ್ಯಾಂಪುಗಳ ಮಾರಾಟದಿಂದ ಬಂದ ಹುಟ್ಟುವಳಿಯು 93,000 ರೂಪಾಯಿಗಳು ಎಂದರೆ, ಬಜೆಟ್ಟಿನಲ್ಲಿ ನಿರೀಕ್ಷಿಸಿದ್ದಕ್ಕಿಂತಲೂ 77,000 ರೂಪಾಯಿಗಳು ಹೆಚ್ಚಾಗಿ ಬಂದಹಾಗಾಯಿತು. ಸ್ಟ್ಯಾಂಪುಬಾಬಿಗಾಗಿ 2,02,600 ರೂಪಾಯಿಗಳು ವೆಚ್ಚವು.

ವರಮಾನ ತೆರಿಗೆ

1939—40 ನೆಯ ಸಾಲಿನಲ್ಲಿ ವರಮಾನತೆರಿಗೆಯ ಬಾಬಿ ದ ಒಟ್ಟು 20,53,683 ರೂಪಾಯಿಗಳೂ ಮತ್ತು "ಸೂಪರ್ ಟ್ಯಾಕ್ಸ್" ತೆರಿಗೆಯ ಬಾಬಿನಿಂದ 9,59,789 ರೂಪಾಯಿಗಳೂ ಟ್ಟುವಳಿಯಾಗಿದ್ದುವು. 1940—41 ನೆಯ ಸಾಲಿನಲ್ಲಿ ವರಮಾನ ತೆರಿಗೆ ಬಾಬಿನಿಂದ ಒಟ್ಟು 32,61,670 ರೂಪಾಯಿಗಳೂ ಮತ್ತು "ಸೂಪರ್‌ಟ್ಯಾಕ್ಸ್" ಬಾಬಿನಿಂದ 12,50,794 ರೂಪಾಯಿಗಳೂ ಹುಟ್ಟುವಳಿಯಾದುವು. ವರ್ಷಕ್ಕೆ 75,000 ರೂಪಾಯಿ ಗಳು ಮತ್ತು ಅದಕ್ಕೆ ಮೇಲ್ಪಟ್ಟೂ ವರಮಾನವಿರತಕ್ಕ ಜನಗಳ ವಿಷಯದಲ್ಲಿಯೂ, ಮತ್ತು ವರ್ಷಕ್ಕೆ 4,800 ರೂಪಾಯಿಗಳು ಮತ್ತು ಅದಕ್ಕೆ ಮೇಲ್ಪಟ್ಟೂ ವರಮಾನವಿರತಕ್ಕ ಕಂಪೆನಿಗಳ ವಿಷಯದಲ್ಲಿಯೂ ವರಮಾನತೆರಿಗೆಯನ್ನು ರೂಪಾಯಿಗೆ ಒಂದೂ ಆಣೆಗಳಂತಿದ್ದುದಕ್ಕೆ ಬದಲಾಗಿ ಎರಡಾಣೆಗಳಿಗೆ ಹೆಚ್ಚಿಸಲಾಯಿತು. ಇದನ್ನು 1940 ನೆಯ ಇಸವಿ ಜುಲೈ 1 ನೆಯ ತಾರೀಖಿನಿಂದ ಜಾರಿಗೆ ತರಲಾಯಿತು.

ನಮ್ಮ ಸಂಸ್ಥಾನದ ವರಮಾನ ತೆರಿಗೆಯ ಆಕ್ಟನ್ನು ಇಂಡಿಯಾ ಸರ್ಕಾರದ ವರಮಾನ ತೆರಿಗೆ ಆಕ್ಟಿನ ಮಾದರಿಯಲ್ಲಿ ತಿದ್ದುಪಾಟು ಮಾಡುವುದಕ್ಕೆ ಸಂಬಂಧಪಟ್ಟ ಸಲಹೆಗಳು ಪರಿಶೀಲನೆಯಲ್ಲಿವೆ.

ವೈದ್ಯ ಸಹಾಯ

1940—41 ನೆಯ ಸಾಲಿನಲ್ಲಿ, ಸಂಸ್ಥಾನದ ವೈದ್ಯಸಂಸ್ಥೆಗಳು 37 ರಿಂದ 358ಕ್ಕೆ ಹೆಚ್ಚಿದುವು. 1939—40 ನೆಯ ಸಾಲಿನಲ್ಲಿ ಸರಾಸರಿ 87 ಚದರಮೈಲಿಗಳ ವಿಸ್ತೀರ್ಣಕ್ಕೆ ಒಂದೊಂದು ವೈದ್ಯ ಸಂಸ್ಥೆಯಿದ್ದಿತು. ಆದರೆ 1940—41 ನೆಯ ಸಾಲಿನಲ್ಲಿ ಸರಾಸರಿ ಚದರ ಮೈಲಿಗಳ ವಿಸ್ತೀರ್ಣಕ್ಕೆ ಒಂದೊಂದು ವೈದ್ಯ ಸಂಸ್ಥೆ ಯಿರುವಂತಾಯಿತು. ಇತ್ತೀಚಿನ ಖಾನೇಷುಮಾರಿ ಲೆಕ್ಕದಿಂದ ದಗಿಸಲ್ಪಟ್ಟ ಅಂಕಿಗಳನ್ನು ಪರಿಗಣಿಸಿದರೆ, ಪ್ರತಿ 20,345 ಮಂದಿಗಳಿಗೂ ಒಂದೊಂದು ವೈದ್ಯಸಂಸ್ಥೆಯಿದೆಯೆಂದು ತಿಳಿದುಬರುತ್ತದೆ. 1939—40 ನೆಯ ಸಾಲಿನಲ್ಲಿ ಒಟ್ಟು 73,81,359 ಮಂದಿಗಳಿಗೆ ವೈದ್ಯಚಿಕಿತ್ಸೆ ನಡೆಯಿತು. 1940—41 ನೆಯ ಸಾಲಿನಲ್ಲಿ 79,58,186 ಮಂದಿಗಳಿಗೆ ವೈದ್ಯಚಿಕಿತ್ಸೆ ನಡೆಯಿತು. 1940-41 ನೆಯ ಸಾಲಿನಲ್ಲಿ ಆಸ್ಪತ್ರೆಗಳಲ್ಲಿಯೇ ಇದ್ದುಕೊಂಡು ಚಿಕಿತ್ಸೆ ಹೊಂದಿದವರ ಒಟ್ಟು ಸಂಖ್ಯೆ 71,313, ಮತ್ತು ಹೊರಗಿನಿಂದ ಆಸ್ಪತ್ರೆಗಳಿಗೆ ಬಂದು ವೈದ್ಯಚಿಕಿತ್ಸೆ ಪಡೆದುಕೊಂಡು ಹೋಗುತ್ತಿದ್ದವರ ಸಂಖ್ಯೆ 78,86,873

ದಾವಣಗೆರೆಯ ಲೋಕಲ್ ಫಂಡ್ ಆಸ್ಪತ್ರೆ, ರಾಜಕುಮಾರಿ ಕೃಷ್ಣಾಜಮ್ಮಣ್ಣಿಯವರ ಸ್ಮಾರಕಾರ್ಥದ ಕ್ಷಯರೋಗದ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ, ಕೃಷ್ಣರಾಜೇಂದ್ರ ಆಸ್ಪತ್ರೆ ಮತ್ತು ವಾಣೀವಿಲಾಸ ಆಸ್ಪತ್ರೆ, ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟ್ ಆಸ್ಪತ್ರೆಗಳು—ಇವುಗಳನ್ನು ಬದಲಾವಣೆಗೊಳಿಸಲಾಯಿತು. ಅಲ್ಲದೆ ಅವಕ್ಕೆ ಮೇಲ್ಪಾಟುಗಳೂ ನಡೆದುವು.

ಸರ್ಕಾರದಿಂದ ಸಹಾಯವನ್ನು ಪಡೆಯುತ್ತಿರುವ ಗ್ರಾಮಾಂತರ ಪ್ರದೇಶಗಳ ಮೆಡಿಕಲ್ ಪ್ರಾಕ್ಟೀಷನರುಗಳ ಸಂಖ್ಯೆ ಸಾಲಾಖೈರಿನಲ್ಲಿ 17 ರಿಂದ 22ಕ್ಕೆ ಏರಿತು

ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯಸಹಾಯವನ್ನು ಒದಗಿಸುವುದಕ್ಕಾಗಿ ಸಾಧನಗಳನ್ನು ಹೆಚ್ಚಿಸಬೇಕಾದುದು ಬಹಳ ಅವಶ್ಯವಾಗಿದೆ. ಜನರ ಅವಶ್ಯಗಳು ಬೇಕೆಂದು ಕೇಳುತ್ತಿದ್ದಾರೆ. ಆದರೆ ಡಿಸ್ಪೆನ್ಸರಿಗಳನ್ನು ಸ್ಥಾಪಿಸಿಕೊಡಬೇಕಾದರೆ, ಅದಕ್ಕೆ ಬಹಳ ಹೆಚ್ಚಾಗಿ ವೆಚ್ಚ ಬೀಳುತ್ತದೆ. ಆದಕಾರಣ ಸಾಕಾದಷ್ಟು ಸಂಖ್ಯೆಯ ಆಸ್ಪತ್ರೆಗಳನ್ನು ಏರ್ಪಡಿಸಿಕೊಡುವುದು ಸಾಧ್ಯವಿಲ್ಲ. ಆಯುರ್ವೇದ ಮತ್ತು ಯುನಾನಿ ವೈದ್ಯಶಾಸ್ತ್ರಗಳಲ್ಲಿ ಅಂಗೀಕೃತವಾದ ರೀತಿಯಲ್ಲಿ ಶಿಕ್ಷಣಪಡೆದಿರತಕ್ಕ ಪಂಡಿತರುಗಳೂ ಮತ್ತು ಹಕೀಮರುಗಳಿಗೂ ಉತ್ತೇಜನ ಕೊಡುವ ವಿಚಾರವು ಪರಿಶೀಲನೆಯಲ್ಲಿದೆ. ಅವರುಗಳು ಉಪಯೋಗಿಸುವ ಮೂಲಿಕೆಗಳೂ ಔಷಧವಸ್ತುಗಳೂ ಸ್ಥಳದಲ್ಲೇ ಸಿಕ್ಕುತ್ತವೆ. ವೈದ್ಯರಿಗೂ ಹಕೀಮರುಗಳಿಗೂ ಉತ್ತೇಜನ ಕೊಡುವುದು ಈಗಿನ ಸಮಯದಲ್ಲಿ ಪ್ರಾಮುಖ್ಯವಾಗಿ ಪರಿಣಮಿಸಿರುವುದಕ್ಕೆ ಇದೂ ಒಂದು ಬಲವಾದ ಕಾರಣ

ಜನಾರೋಗ್ಯ ರಕ್ಷಣೆ (ಪಬ್ಲಿಕ್ ಹೆಲ್ತ್)

ಜನಾರೋಗ್ಯ ರಕ್ಷಣೆ ಮತ್ತು ಸ್ಥಳ ನೈರ್ಮಲ್ಯರಕ್ಷಣೆ ಇಲಾಖೆಗಾಗಿ 1940—41 ನೆಯ ಸಾಲಿನಲ್ಲಿ ವೆಚ್ಚವಾದ ಮೊಬಲಗು 30,93 ಲಕ್ಷ ರೂಪಾಯಿಗಳು. 1939—40 ನೆಯ ಸಾಲಿನಲ್ಲಿ ಈ ಮೊಬಲಗು 3, 61 ಲಕ್ಷ ರೂಪಾಯಿಗಳಾಗಿದ್ದಿತು

ಜನಾರೋಗ್ಯ ರಕ್ಷಣೆಯ ಇಲಾಖೆಯು ಒಂದು ಅನಾವಶ್ಯಕ ಇಲಾಖೆಯೆಂದು ಪರಿಗಣಿಸಲ್ಪಡುತ್ತಿದ್ದ ಕಾಲವು ಎಂದೋ ಆಗಿಹೋಯಿತು. ಮೈಸೂರು ಸಂಸ್ಥಾನದಲ್ಲಿ ಪ್ಲೇಗು ರೋಗದಿಂದ ಎಷ್ಟು ಹೆಚ್ಚು ಜನ ಪ್ರತಿ ವರ್ಷವೂ ಸಾಯುತ್ತಾರೆಂಬ ಲೆಕ್ಕವನ್ನು ನೋಡಿದರೇ ಸಾಕು, ಮಲೇರಿಯಾ ರೋಗದಿಂದ ಎಷ್ಟು ಭಾರಿ ಸಂಖ್ಯೆಯಲ್ಲಿ ಜನರು ನರಳುತ್ತಿರುವರೆಂಬ ಲೆಕ್ಕವನ್ನು ನೋಡಿದರೆ ಸಾಕು ಈ ಇಲಾಖೆಯ ಕಾರ್ಯಕಲಾಪಗಳು ಇನ್ನೂ ಹೆಚ್ಚಾಗಿ ನಡೆದು ಆ ರೋಗಗಳೂ ಇತರ ರೋಗಗಳೂ ಬರದಂತೆ ತಪ್ಪಿಸುವ ಏರ್ಪಾಡುಗಳು ಆಗಬೇಕಾದುದು ಎಷ್ಟು ಆವಶ್ಯಕವೆಂಬುದು ಗೊತ್ತಾಗುತ್ತದೆ

ಮದರಾಸು ಮುಂಬಯಿ ಹೈದರಾಬಾದು ಮೈಸೂರು ಮತ್ತು ಕೊಡಗು—ಈ ಪ್ರಾಂತಗಳ ಜನಾರೋಗ್ಯ ರಕ್ಷಣೆಯ ಇಲಾಖೆಗಳ ಡೈರೆಕ್ಟರುಗಳು ಒಟ್ಟುಗೂಡಿ ನಡೆಯಿಸಿದ ಸಮ್ಮೇಳನದ ಫಲವಾಗಿ ಪ್ಲೇಗು ರೋಗವನ್ನು ತಡೆಗಟ್ಟುವ ಇನಾಕ್ಯುಲೇಷನುಗಳನ್ನೂ ಮತ್ತು ಇತರ ಪ್ರಯೋಗಗಳನ್ನೂ ಮೊದಲಿಗಿಂತ ಹೆಚ್ಚಾಗಿ ಪ್ರಾರಂಭಿಸಲಾಯಿತು. ಪ್ಲೇಗು ರೋಗದ ಸೋಂಕು ತಗುಲಿ ಹರಡುವಂತಿರುವ ಪ್ರದೇಶಗಳಲ್ಲಿ ಇಲಿಗಳನ್ನು ನಾಶಮಾಡತಕ್ಕ ಕಾರ್ಯಕ್ರಮವನ್ನು ಭಾರಿ ಪ್ರಮಾಣದಲ್ಲಿ ಏರ್ಪಡಿಸಲಾಗಿದೆ. "ಸೈನೊಗ್ಯಾಸ್" ಅನಿಲದಿಂದ ಇಲಿಗಳನ್ನು ಕೊಲ್ಲುವ ವಿಧಾನವು ಅನೇಕ ಮುನಿಸಿಪಲ್ ಪ್ರದೇಶಗಳಲ್ಲಿಯೂ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿಯೂ ಆಚರಣೆಗೆ ಬಂದಿದೆ. ಪಬ್ಲಿಕ್ ಹೆಲ್ತ್ ಇನ್ಸ್ಟಿಟ್ಯೂಟಿನಲ್ಲಿ ನಡೆಯುತ್ತಿರುವ ಕಾರ್ಯಕಲಾಪಗಳಲ್ಲಿ ಬಹು ಮುಖ್ಯವಾಗಿ ಸೂಚಿಸಬೇಕಾದುವು ಎರಡು: ಮೊದಲನೆಯದು, ಅನೇಕ ರೋಗಗಳನ್ನು ತಪ್ಪಿಸುವುದಕ್ಕಾಗಿ ಸಿಡುಬು ಚುಚ್ಚುವ ಬಗೆಬಗೆಯ "ವ್ಯಾಕ್ಸೀನ್" ದ್ರವಗಳನ್ನು ತಯಾರಿಸಿ ಒದಗಿಸುತ್ತಿರುವುದು. ಎರಡನೆಯದು, ಆಹಾರವಸ್ತುಗಳಲ್ಲಿ ಪೋಷಕ ಸತ್ವಗಳು ಯಾವುದರಲ್ಲಿ ಎಷ್ಟು ಮಟ್ಟಿಗಿವೆಯೆಂಬುದನ್ನು ಪ್ರಾಣಿಸಂಬಂಧದ ಪ್ರಯೋಗ ಪರೀಕ್ಷೆ ವಿಧಾನಗಳ ಮೂಲಕ ಕಂಡು ಹಿಡಿಯುತ್ತಿರುವುದು

ಮಲೇರಿಯಾರೋಗವು ವ್ಯಾಪಿಸಿರತಕ್ಕ ಪ್ರದೇಶಗಳಲ್ಲಿ ಮಲೇರಿಯಾ ರೋಗವು ಬಾರದಂತೆ ತಪ್ಪಿಸುವ ಕಾರ್ಯಕ್ರಮಗಳನ್ನು ಮುಂದುವರಿಸಲಾಯಿತು. ಅರ್ವಿನ್ ನಾಲಾ ಪ್ರದೇಶಗಳಲ್ಲಿ "ಕ್ವಿನೈನ್" ಔಷಧವನ್ನು ಜನರಿಗೆ ಹಂಚುವುದಕ್ಕಾಗಿ 50, 000 ರೂಪಾಯಿಗಳ ಗ್ರಾಂಟನ್ನು ಸರ್ಕಾರದವರು ಮಂಜೂರು ಮಾಡಿರುತ್ತಾರೆ. ಅಲ್ಲದೆ ಗುತ್ತಲು ಮತ್ತು ಕಲ್ಲಹಳ್ಳಿ ಪ್ರದೇಶಗಳಲ್ಲಿ ನೆಲದೊಳಗೆ ನೀರು ಇಳಿದು ಕಟ್ಟಿಕೊಂಡಿರುವುದನ್ನು ಹೊರಡಿಸುವುದಕ್ಕಾಗಿ ಜಗಲುಗಳನ್ನು ತೋಡಿಸುವುದೇ ಮುಂತಾದ ಕಾಮಗಾರಿಗಳಿಗಾಗಿ 30, 900 ರೂಪಾಯಿಗಳ ಮತ್ತೊಂದು ಗ್ರಾಂಟನ್ನೂ ಸಹ ಸರ್ಕಾರದವರು ಮಂಜೂರು ಮಾಡಿರುತ್ತಾರೆ. ಮಲೇರಿಯಾ ರೋಗ ಬರದಂತೆ ತಪ್ಪಿಸುವ ಕಾರ್ಯಕಲಾಪಗಳಿಗಾಗಿ 1940 ನೆಯ ಇಸವಿಯಲ್ಲಿ 2.55 ಲಕ್ಷ ರೂಪಾಯಿಗಳು ವೆಚ್ಚವಾದುವು

ಅರ್ವಿನ್ ನಾಲಾ ಪ್ರದೇಶದಲ್ಲಿ ಜನಾರೋಗ್ಯ

ಅರ್ವಿನ್ ನಾಲಾ ಪ್ರದೇಶದಲ್ಲಿ ಮಲೇರಿಯಾ ರೋಗದ ಹಾವಳಿ ಬಹಳ ಹೆಚ್ಚಾಗಿದೆ. ಅಲ್ಲಿಯ ಜನಾರೋಗ್ಯ ವಿಚಾರವಾಗಿ ಸರ್ಕಾರದವರು ಬಹಳ ಕಾಲದಿಂದಲೂ ಆತಂಕಪಟ್ಟುಕೊಂಡು ಮಲೇರಿಯಾ ರೋಗದ ಹಾವಳಿಯನ್ನು ನೀಗಿಸುವುದಕ್ಕೆ ಗಮನಕೊಡುತ್ತಿದ್ದಾರೆ. ಈ ಅರ್ವಿನ್ ನಾಲಾ ಪ್ರದೇಶವು ಶ್ರೀರಂಗಪಟ್ಟಣ, ಮಂಡ್ಯ, ಮದ್ದೂರು, ಮಳವಳ್ಳಿ ಮತ್ತು ತಿರುಮಕೂಡಲು ನರಸೀಪುರ ತಾಲ್ಲೂಕುಗಳ ಕೆಲವು ಭಾಗಗಳನ್ನು ಒಳಗೊಂಡಿರುತ್ತದೆ. ಈ ಪ್ರದೇಶದಲ್ಲಿ ವರ್ಷಕ್ಕೆ ಸರಾಸರಿ 25 ಅಂಗುಲಗಳಷ್ಟು ಮಳೆಯಾಗುತ್ತದೆ. ಅಲ್ಲಿ ಅರ್ವಿನ್ ನಾಲೆಯು ಏರ್ಪಡುವುದಕ್ಕೆ ಮುಂಚೆ ಅದು ಆರೋಗ್ಯಕರವಾದ ಖುಷ್ಕಿ ಪ್ರದೇಶವಾಗಿ ಅಲ್ಲಿ ಮಲೇರಿಯಾ ರೋಗದ ಸುಳಿವೇ ಇರಲಿಲ್ಲ. ಆದರೆ ಈಗ್ಗೆ ಹತ್ತು ವರ್ಷಗಳ ಹಿಂದೆ ಅರ್ವಿನ್ ನಾಲೆಯು ಏರ್ಪಟ್ಟು ಆ ಪ್ರದೇಶದಲ್ಲಿ ನೀರಾವರಿ ವ್ಯವಸಾಯವು ವೃದ್ಧಿಗೊಂಡಮೇಲೆ ಆ ಪ್ರದೇಶದ ಸನ್ನಿವೇಶಗಳೇ ಬದಲಾಯಿಸಿ ಹೋಗಿವೆ. ಮಂಡ್ಯ ತಾಲ್ಲೂಕಿನಲ್ಲಿ ಸ್ವಲ್ಪ ಹೆಚ್ಚು ಕಡಮೆ ಸಂಪೂರ್ಣ ಪ್ರದೇಶದಲ್ಲಿಯೂ ಮತ್ತು ಮದ್ದೂರು ತಾಲ್ಲೂಕಿನ ಹೆಚ್ಚಿನ ಭಾಗದಲ್ಲಿಯೂ ಕಳೆದ ಐದು ವರ್ಷಗಳಿಗೆ ಮೇಲ್ಪಟ್ಟ ಕಾಲದಿಂದಲೂ ಅರ್ವಿನ್ ನಾಲೆಯ ಸಹಾಯದಿಂದ ನೀರಾವರಿ ವ್ಯವಸಾಯವು ನಡೆಯುತ್ತಿದೆ. ಕಳೆದ ಐದು ವರ್ಷಗಳ ಅವಧಿಯ ಒಳಗೆ ಮದ್ದೂರು, ಮಳವಳ್ಳಿ ಮತ್ತು ಮಂಡ್ಯ ತಾಲ್ಲೂಕುಗಳಲ್ಲಿ ಹೊಸ ಪ್ರದೇಶಗಳು ನೀರಾವರಿ ಸಾಗುವಳಿಗೆ ಬಂದಿವೆ. ನೀರಾವರಿ ಸಾಗುವಳಿಗೆ ಇನ್ನೂ ತರಬೇಕಾದ ಗ್ರಾಮಗಳು ಮಳವಳ್ಳಿ ತಾಲ್ಲೂಕಿನಲ್ಲಿಯೂ ಮತ್ತು ತಿರುಮಕೂಡಲು ನರಸೀಪುರದ ಬನ್ನೂರು ಹೋಬಳಿಯಲ್ಲಿಯೂ ಇನ್ನೂ ಅನೇಕವಾಗಿವೆ. ಯಾವ ಪ್ರದೇಶದಲ್ಲಿ ನೀರಾವರಿ ಸಾಗುವಳಿಯು ಬಹುಕಾಲದಿಂದ ನಡೆಯುತ್ತಿದೆಯೋ ಆ ಪ್ರದೇಶದಲ್ಲಿ ಮಲೇರಿಯಾ ರೋಗದ ಹಾವಳಿ ಬಹಳ ಹೆಚ್ಚಿನ ಪ್ರಮಾಣದಲ್ಲಿರುತ್ತದೆಯೆಂದು ಈ ಮೂರು ಗುಂಪುಗಳ ಗ್ರಾಮಗಳಲ್ಲಿಯೂ ನಡೆಯಿಸಿದ ಪರಿಶೀಲನೆಗಳಿಂದ ಕಂಡುಬಂದಿದೆ. ಉದಾಹರಣೆಗಾಗಿ ಮಂಡ್ಯ ತಾಲ್ಲೂಕಿನಲ್ಲಿ ಅದು ಬಹಳವಾಗಿ ಹೆಚ್ಚಾಗಿದೆ. ನೀರಾವರಿ ಸಾಗುವಳಿಯನ್ನು ಇತ್ತೀಚೆಗೆ ಎಂದರೆ ಕಳೆದ ಐದು ವರ್ಷಗಳ ಅವಧಿಯ ಒಳಗೆ ಏರ್ಪಡಿಸಿದ ಎರಡನೆಯ ಗುಂಪಿನ ಗ್ರಾಮಗಳಲ್ಲಿ ಮಲೇರಿಯಾ ರೋಗದ ಸೋಂಕು ಕ್ರಮ ಕ್ರಮವಾಗಿ ಹೆಚ್ಚುತ್ತಿದೆ. ನೀರಾವರಿ ಸಾಗುವಳಿಯನ್ನು ಪ್ರಾರಂಭಿಸಬೇಕೆಂದಿರುವ ಪ್ರದೇಶಗಳಲ್ಲಿ ಅರ್ವಿನ್ ನಾಲೆಯನ್ನೇರ್ಪಡಿಸುವುದಕ್ಕೆ ಮುಂಚೆ ಯಾವ ಪರಿಸ್ಥಿತಿ ಇದ್ದಿತೋ ಅದೇ ಪರಿಸ್ಥಿತಿ ಈಗಲೂ ಇದೆ. ಈ ರೀತಿಯಲ್ಲಿ ತರಿ ಸಾಗುವಳಿಯನ್ನು ಹೆಚ್ಚಿಸಿ ಅಭಿವೃದ್ಧಿ ಪಡಿಸಿದುದರಿಂದ ಅರ್ವಿನ್ ನಾಲಾ ಪ್ರದೇಶದಲ್ಲಿ ಮಲೇರಿಯಾ ರೋಗದ ಸೋಂಕು ಹೆಚ್ಚು ಹೆಚ್ಚಾಗಿ ಉಲ್ಬಣವಾಗುತ್ತಿದೆ. ಮಲೇರಿಯಾ ರೋಗವು ಈಗಿನ ಪ್ರಮಾಣದಲ್ಲಿ ಹೆಚ್ಚಿರುವುದಕ್ಕೆ ಗ್ರಾಮಗಳಲ್ಲಿ ನೀರು ಹರಿದುಹೋಗುವುದಕ್ಕೆ ತಕ್ಕ ಚರಂಡಿಗಳು ಇಲ್ಲವೇ ಇರುವುದೂ ಮತ್ತು ಅನೇಕ ಕೆರೆಗಳಲ್ಲಿ ವಿಪರೀತವಾಗಿ ಜೊಂಡು ಬೆಳೆದುಕೊಂಡಿರುವುದೂ ಸೊಳ್ಳೆಯ ಮರಿಗಳು ವೃದ್ಧಿಯಾಗಿ ಮಲೇರಿಯಾ ರೋಗವು ಹೆಚ್ಚಲು ಕಾರಣಗಳಾಗಿವೆ. ತಗ್ಗುಪ್ರದೇಶಗಳ ನೀರು ಹರಿದುಹೋಗುವುದಕ್ಕಾಗಿ ಬಗುಳುಗಳನ್ನು ತೋಡಿಸುವುದಕ್ಕಾಗಿಯೂ ಜನರು ವಾಸಮಾಡತಕ್ಕ ಸ್ಥಳಗಳಿಗೆ ಸಮೀಪವಾಗಿ ತರಿ ಸಾಗುವಳಿಯು ನಡೆಯಕೂಡದೆಂದು ತಡೆಯುವುದಕ್ಕಾಗಿಯೂ ಮತ್ತು ಕೆಲವು ಕೆರೆಗಳಿಂದ ನೀರನ್ನು ಹೊರಡಿಸುವುದಕ್ಕಾಗಿಯೂ ತಕ್ಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಳನೈರ್ಮಲ್ಯಕ್ಕೆ ಸಂಬಂಧಪಟ್ಟ ಸ್ಯಾನಿಟರಿ ಇಂಜಿನಿಯರಿಂಗ್ ಏರ್ಪಾಡುಗಳು ಜಾರಿಗೆ ಬರುವುದನ್ನು ಏರ್ಪಡಿಸುವುದಕ್ಕಾಗಿ ರೆವಿನ್ಯೂ ಇಲಾಖೆ, ಜನಾರೋಗ್ಯ ರಕ್ಷಣೆ ಇಲಾಖೆ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಗಳಿಗೆ ಸೇರಿದ ಅಧಿಕಾರಿಗಳ ಒಂದು ಸಮಿತಿಯವರು ಗ್ರಾಮಗಳ ಸರ್ವೆ ಕೆಲಸವನ್ನು ಶಿಸ್ತಿನಮೇರೆಗೆ ನಡೆಸುತ್ತಿದ್ದಾರೆ. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವೈದ್ಯರೇ ಔಷಧಗಳೊಡನೆ ಹೋಗಿ ಜನರಿಗೆ ಚಿಕಿತ್ಸೆಮಾಡುವ ("ಪೆರಿಪಟೆಟಿಕ್ ಡಿಸ್ಪೆನ್ಸರಿ") ಏರ್ಪಾಡನ್ನು ನಾಲ್ಕು ಸ್ಥಳಗಳಲ್ಲಿ ಮಾಡಲಾಗಿದೆ, ಮತ್ತು ಹೆಚ್ಚು ಹೆಚ್ಚು ಪರಿಮಾಣದ ಕ್ವಿನೈನ್ ಔಷಧವನ್ನು ಜನಗಳಿಗೆ ಹಂಚಿಸುತ್ತಿದ್ದೇವೆ. ಮಲೇರಿಯಾ ರೋಗವು ಹರಡದಂತೆ ಮಾಡಲು ಏಕಪ್ರಕಾರವಾಗಿ ಗಮನವನ್ನು ಕೊಡುವುದಕ್ಕಾಗಿಯೂ ಮತ್ತು ಸಾಧಾರಣವಾಗಿ ಸ್ಥಳನೈರ್ಮಲ್ಯವನ್ನು ಉತ್ತಮಪಡಿಸುವುದಕ್ಕಾಗಿಯೂ ಆ ಪ್ರದೇಶದಲ್ಲಿ ಕ್ರಮವಾದ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಬೇಕೆಂಬುದಾಗಿ ಉದ್ದೇಶಿಸಲಾಗಿದೆ.

ಜ್ಯುಡಿಷಿಯಲ್ ಇಲಾಖೆ

ಜ್ಯುಡಿಷಿಯಲ್ ಇಲಾಖೆಯಲ್ಲಿ ಮೊಕದ್ದಮೆಗಳನ್ನು ಬೇಗ ಬೇಗ ತೀರ್ಮಾನಿಸುವ ಕಾರ್ಯಗಳು ಎಂದಿನಂತೆ ಶೀಘ್ರವಾಗಿ ನಡೆದುವು. ಒಂದು ವರ್ಷಕ್ಕಿಂತ ಹೆಚ್ಚಿಗೆ ಕಾಲದಿಂದಲೂ ತೀರ್ಮಾನವಾಗದೆ ಉಳಿದಿದ್ದ ಸಾಧಾರಣ ಮೊಕದ್ದಮೆಗಳ ಸಂಖ್ಯೆಯು ಇದರ ಪರಿಣಾಮವಾಗಿ [illegible] ರಿಂದ 216 ಕ್ಕೆ ಕಡಮೆಯಾಯಿತು. ಈ ಸಂಖ್ಯೆಯು ಇಷ್ಟರಮಟ್ಟಿಗೆ ಹಿಂದೆ ಯಾವಾಗಲೂ ಕಡಮೆಯಾಗಿರಲಿಲ್ಲ.

[೬ ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೧ನೆಯ ಅಕ್ಟೋಬರ್ ತಾ|| ೬ನೆಯ ಸೋಮವಾರ

ರಾಜಧಾನಿಯಲ್ಲಿ ನವರಾತ್ರಮಹೋತ್ಸವ.

ಭರತಖಂಡದಲ್ಲಿರುವ ಸನಾತನಮತಾನುಯಾಯಿಗಳೆಲ್ಲರೂ ನವರಾತ್ರಮಹೋತ್ಸವವನ್ನು ಅಸಾಧಾರಣ ವೈಭವದಿಂದ ನೆರವೇರಿಸುತ್ತಿರುವ ವಿಷಯವು ಸುಪ್ರಸಿದ್ಧವೇ ಆದೆ. ಈ ನಾಡಹಬ್ಬವು ಸರ್ವತ್ರ ಆಚರಿಸಲ್ಪಡುತ್ತಿದ್ದರೂ, ಇದಕ್ಕೆ ಮೈಸೂರು ರಾಜಧಾನಿಯು ಮಾತ್ರ ಸ್ಥಾನವಾಗಿ ಮೆರೆಯುತ್ತಿರುವುದು. ಕರ್ಣಾಟಕರತ್ನ ಸಿಂಹಾಸನಾಧೀಶರಾದ ಮೈಸೂರು ಮಹಾಪ್ರಭುಗಳು ಈ ಹಬ್ಬವನ್ನು ಬಹು ಪುರಾತನ ಕಾಲದಿಂದಲೂ ಬಹು ಭಕ್ತಿಯಿಂದಲೂ, ಅಸಾಧಾರಣ ವೈಭವದಿಂದಲೂ ನೆರವೇರಿಸುತ್ತಿರುವುದೇ ಇದಕ್ಕೆ ಮೂಲಕಾರಣವಾಗಿದೆ. ಇಂತಹ ವೈಭವವು ಭರತಖಂಡದ ಯಾವ ಭಾಗದಲ್ಲಿಯೂ ನಡೆಯುವುದಿಲ್ಲವೆಂದು ಒರೆದರೆ ಅತಿಶಯೋಕ್ತಿಯೆನಿಸದು. ಆದುದರಿಂದಲೇ ಪ್ರತಿ ವರ್ಷವೂ ಭರತಖಂಡದ ದೂರ ದೂರಗಳಿಂದ ಲಕ್ಷಾಂತರ ಜನರು ಈ ಹಬ್ಬದ ವೈಭವವನ್ನು ನೋಡುವುದಕ್ಕಾಗಿ ಮೈಸೂರು ರಾಜಧಾನಿಗೆ ಆಗಮಿಸಿ, ಇಲ್ಲಿ ನಡೆಯುತ್ತಿರುವ ಅನ್ಯಾದೃಶ ವೈಭವಗಳನ್ನು ನೋಡಿ ತಮ್ಮ ನೇತ್ರಗಳನ್ನು ಸಫಲ ಮಾಡಿಕೊಳ್ಳುತ್ತಿರುವರು.

ಈ ಹಬ್ಬವು ಮುಖ್ಯವಾಗಿ ದೇವಿಯ ಹಬ್ಬವಾಗಿರುವುದು. ಮೈಸೂರು ಅರಸುಗಳಿಗೆ ಶ್ರೀಚಾಮುಂಡೇಶ್ವರೀ ದೇವಿಯು ಮುಖ್ಯಕುಲದೇವತೆಯಾಗಿರುವುದರಿಂದ ಮೈಸೂರಿನ ಪ್ರಭುಗಳು ಬಹುಕಾಲದಿಂದ ಈ ಹಬ್ಬವನ್ನು ಮಹಾವೈಭವದಿಂದ ನೆರವೇರಿಸುತ್ತ ಬಂದಿರುವರು. ಕಳೆದವರ್ಷ ಪರಂಧಾಮವನ್ನೈದಿದ ಶ್ರೀಕೃಷ್ಣರಾಜೇಂದ್ರ ಪ್ರಭುಗಳ ಕಾಲದಲ್ಲಿ ಈ ಹಬ್ಬದ ವೈಭವವು ದಿಗಂತವನ್ನು ವ್ಯಾಪಿಸಿತು. ಆ ದಸರೋತ್ಸವ ಕಾಲದಲ್ಲಿ ಇವರ ವೈಭವವು ಪೂರ್ಣಾವಧಿಯಾಯಿತು. ಪ್ರತಿವರ್ಷದಂತೆ ಈ ವರ್ಷವೂ ಸಹ ಈ ಮಹೋತ್ಸವವು ವಿಶೇಷ ವೈಭವದಿಂದ ನೆರವೇರಿತು. ಈ ಮಹೋತ್ಸವವನ್ನು ನೋಡುವುದರಮೂಲಕ ನೂತನಮಹಾಪ್ರಭುಗಳಾದ ಶ್ರೀಜಯಚಾಮರಾಜ ಒಡೆಯರ್ ಬಹದ್ದೂರ್‌ರವರ ದರ್ಶನವನ್ನು ಪಡೆಯುವುದಕ್ಕಾಗಿ ದೂರದೂರದೇಶಗಳಿಂದ ಲಕ್ಷಾಂತರ ಜನರು ಆಗಮಿಸಿದ್ದರು.

ಪ್ರತಿ ವರ್ಷ ಪದ್ಧತಿಯಂತೆ ಆಶ್ವಯುಜ ಶುದ್ಧ ಪ್ರತಿಪದೆಯಿಂದ ನವಮಿಯ ವರೆಗೆ ಅರಮನೆಯಲ್ಲಿ ದರ್ಬಾರು ನಡೆಯುತ್ತಿತ್ತು. ಶ್ರೀಮನ್ಮಹಾರಾಜರವರು ರತ್ನಸಿಂಹಾಸನವನ್ನಾರೋಹಣಮಾಡುತ್ತಿದ್ದರು. ಆಯಾ ದಿನದ ಕಾರ್ಯಕ್ರಮದಂತೆ ಅರಸುಮನೆತನದವರೂ, ಸರಕಾರಿ ಅಧಿಕಾರಿಗಳೂ, ಪ್ರಜಾಪ್ರಮುಖರೂ ಮಹಾಪ್ರಭುಗಳವರಿಗೆ ನಜರನ್ನೊಪ್ಪಿಸುತ್ತಿದ್ದರು. ಅರಮನೆಯು ಪ್ರತಿ ದಿನವೂ ಲಕ್ಷಗಟ್ಟಲೆ ವಿದ್ಯುದ್ದೀಪಗಳಿಂದ ಬೆಳಗುತ್ತಿತ್ತು. ನವಮಿಯದಿವಸ ಯೂರೋಪಿಯನ್ ದರ್ಬಾರು ನಡೆಯಿತು. ಆ ದಿವಸ ಪದ್ಧತಿ ಪ್ರಕಾರ ಬ್ರಿಟಿಷ್ ರೆಸಿಡೆಂಟರು ಆಗಮಿಸಿದ್ದರು. ಅಂದಿನ ಶೋಭೆಯು ವರ್ಣನಾತೀತವಾದುದು. ಅಸ್ತು!

ವಿಜಯದಶಮಿ ಮಂಗಳವಾರದಿವಸ ಮಧ್ಯಾಹ್ನ ೧ ಘಂಟೆಗೆ ಜಂಬೂಸವಾರಿಯು ಹೊರಟಿತು. ಆ ಸಮಯದಲ್ಲಿ ಗೌರವಾರ್ಥವಾಗಿ ೨೧ ತೋಪುಗಳು ಹಾರಿಸಲ್ಪಟ್ಟವು. ಮಹಾಪ್ರಭುಗಳವರು ದಿವ್ಯವಸ್ತ್ರಾಭರಣಗಳನ್ನು ಧರಿಸಿಕೊಂಡು, ಆನೆಯ ಮೇಲೆ ಸುಸಜ್ಜಿತವಾಗಿದ್ದ ಸುವರ್ಣದ ಅಂಬಾರಿಯಲ್ಲಿ ಮೂರ್ತಿಮಾಡಿದರು. ದಾರಿಯುದ್ದಕ್ಕೂ ಲಕ್ಷಾಂತರ ಪ್ರಜೆಗಳು ಸೇರಿ ಈ ಮಂಗಲಮಹೋತ್ಸವವನ್ನು ನೋಡಿ ಪರಮಾನಂದಭರಿತರಾದರು. ಉತ್ಸವವು ಅರಮನೆಯ ಉತ್ತರದ್ವಾರದಿಂದ ಚತುರಂಗಬಲದೊಡನೆಯೂ, ಸಮಸ್ತ ರಾಜಬಿರುದಾವಳಿಗಳೊಡನೆಯೂ, ಸಮಸ್ತ ಸೈನ್ಯದೊಡನೆಯೂ ಹೊರಟು ಸಯ್ಯಾಜಿರಾವ್ ರೋಡ್, ಇರ್ವಿನ್‌ರೋಡ್, ದೊಡ್ಡ ಪೇಟೆ ಚೌಕ ಮೂಲಕವಾಗಿ ಬನ್ನಿಮಂಟಪಕ್ಕೆ ಬಂದು ತಲ್ಪಿತು. ಮಹಾಪ್ರಭುಗಳವರು ಅಲ್ಲಿ ಯಥಾವಿಧಿಯಾಗಿ ಶಮೀಪೂಜೆಯನ್ನು ನೆರವೇರಿಸಿ, ದಿವಾನರೇ ಮೊದಲಾದ ಮುಖ್ಯ ಮುಖ್ಯ ಅಧಿಕಾರಿಗಳಿಗೆ ಶಮಿಯನ್ನು ಅನುಗ್ರಹಿಸಿದರು.

ಮೆರವಣಿಗೆಯು ರಾತ್ರಿ ಪುನಃ ಬನ್ನಿಮಂಟಪದಿಂದ ಹೊರಟಿತು. ರಾಜಮಾರ್ಗವು ವಿದ್ಯುದ್ದೀಪಮಾಲೆಗಳಿಂದ ಅಲಂಕೃತವಾಗಿತ್ತು. ನೆರೆದಿದ್ದ ಪ್ರಜಾಸಮುದಾಯವೆಲ್ಲವೂ ರಾತ್ರಿಯುತ್ಸವದ ಮಹಾವೈಭವವನ್ನು ನೋಡಿ ಆನಂದಸಾಗರದಲ್ಲಿ ಮುಳುಗಿತು. ನೂತನ ಮಹಾಪ್ರಭುಗಳವರ ಗಾಂಭೀರ್ಯವೂ, ಶಾಂತಮುಖಮುದ್ರೆಯೂ ಸರ್ವರನ್ನೂ ಮುಗ್ಧರನ್ನಾಗಿ ಮಾಡಿದವು. ಸಕಲ ಸದ್ಗುಣಗಣಮಂಡಿತರಾದ ನಮ್ಮ ಮಹಾಪ್ರಭುಗಳವರ ಕಾಲದಲ್ಲಿ ಮೈಸೂರು ದೇಶವು ಮೊದಲಿಗಿಂತಲೂ ಅಧಿಕವಾದ ಕೀರ್ತಿಯನ್ನು ಪಡೆದು ಮೆರೆಯುವಂತಾಗಲೆಂದೂ, ಶ್ರೀಜಗದೀಶ್ವರನ ಅನುಗ್ರಹದಿಂದ ಇವರ ಧವಲಕೀರ್ತಿಯು ಸರ್ವತ್ರ ಬೆಳಗಲೆಂದೂ, ಆ ಜಗನ್ನಿಯಾಮಕನನ್ನು ಅನನ್ಯಸಾಧಾರಣ ಭಕ್ತಿಭಾವದಿಂದ ಭಜಿಸುತ್ತೇವೆ.

ಯುದ್ಧವಾರ್ತೆ.

ಜಕ್ ಮಾಜಿ ಮಹಾಪ್ರಧಾನರಿಗೆ ಮರಣದಂಡನೆ

ಜಕ್ಕರ ಮಾಜಿ ಮಹಾಪ್ರಧಾನರಾದ ಜ|| ಅಲಾಯಿಸ್ ಎಲಿಯಾಸ್‌ರವರಿಗೆ ನಾಜಿ ಕೋರ್ಟಿನವರು ಮರಣದಂಡನೆ ವಿಧಿಸಿದ್ದಾರೆ. ಶತ್ರುಗಳಿಗೆ ಅನುಕೂಲವಾಗುವ ರೀತಿಯಲ್ಲಿ ಅವರು ವರ್ತಿಸಿದರೆಂಬ ಆಪಾದನೆಯೇ ಇದಕ್ಕೆ ಕಾರಣ.

ರಷ್ಯನರಿಗಾದ ನಷ್ಟವು ಉತ್ಪ್ರೇಕ್ಷಿಸಲ್ಪಟ್ಟಿದೆ

ಕೀವ್ ಕದನದಲ್ಲಿ ರಷ್ಯದಕಡೆ ೨೫೦೦೦ ಯೋಧರು ಸತ್ತರು ಮತ್ತು ಗಾಯಗೊಂಡರೆಂದು ಜರ್ಮನಿಯು ತಿಳಿಸಿರುವುದು ಬಹಳ ಸುಳ್ಳು ಮತ್ತು ಉತ್ಪ್ರೇಕ್ಷೆಯೆಂದು ರಷ್ಯ ಅಧಿಕಾರಿಗಳೊಬ್ಬರು ತಿಳಿಸಿದ್ದಾರೆ. ಅಲ್ಲದೆ ಜರ್ಮನರು ಹೇಳುವಂತೆ ಅವರು ರಷ್ಯನರನ್ನೇನೂ ಸುತ್ತುಗಟ್ಟಿಲ್ಲ. ಈಗ ಭಯಂಕರ ಯುದ್ಧವಾಗುತ್ತಿದ್ದು ನಷ್ಟವಾಗುತ್ತಿರುವದೇನೋ ನಿಜ. ಆದರೆ ಕೀವ್ ಪತನದೊಂದಿಗೆ ರಷ್ಯನರ ಶಕ್ತಿಯು ಕುಂದುವದೆಂದು ಎಣಿಸಿದ್ದ ಜರ್ಮನರ ನಿರೀಕ್ಷೆ ಸಫಲವಾಗಲಿಲ್ಲವೆಂದು ತಿಳಿಸಿದ್ದಾರೆ.

ಕ್ರಿಮಿಯಾದ ಮೇಲೆ ದಾಳಿ

ಉಕ್ರೇನಿನ ಮುಖ್ಯ ನಗರವಾದ ಕೀವ್‌ಪಟ್ಟಣವು ಜರ್ಮನರ ಹಸ್ತಗತವಾದಮೇಲೆ ನಾಜಿಗಳು ರಷ್ಯದ ಮುಖ್ಯ ಕೈಗಾರಿಕೆ ಕೇಂದ್ರವಾದ ಕ್ರಿಮಿಯಾಪರ್ಯಾಯದ್ವೀಪದ ಕಡೆಗೆ ನುಗ್ಗಿದ್ದಾರೆ, ಮತ್ತು ಕ್ರಿಮಿಯವನ್ನು ರಷ್ಯದಿಂದ ಬೇರ್ಪಡಿಸಿರುವುದಾಗಿ ಹೇಳುತ್ತಿದ್ದಾರೆ. ಆದರೆ ಕ್ರಿಮಿಯಾಭೂಮಿಯಮೇಲೆ ಇದುವರೆಗೆ ಒಬ್ಬ ಜರ್ಮನನೂ ಕಾಲಿಟ್ಟಿಲ್ಲವೆಂದೂ ಆದರೆ ಅಲ್ಲಿಗೆ ಬರುವ ಮಾರ್ಗಗಳಲ್ಲಿ ಹಗಲು ರಾತ್ರಿ ಭಯಂಕರ ಹೊಡೆದಾಟ ನಡೆಯುತ್ತಿದೆಯೆಂದೂ ಮಾಸ್ಕೋನಗರದ ಪ್ರಕಟನೆಯು ತಿಳಿಸುತ್ತದೆ.

ಬಲ್ಗೇರಿಯಾದ ಸ್ಥಿತಿ

ಬಲ್ಗೇರಿಯವು ಜರ್ಮನಿಯಕಡೆ ಸೇರಿ ರಷ್ಯದಮೇಲೆ ಯುದ್ಧ ಹೂಡಲಿದೆಯೆಂದು ಅಮೇರಿಕವು ಹರಡಿರುವ ಸುದ್ದಿ ನಿಜವಲ್ಲವೆಂದೂ, ಬಲ್ಗೇರಿಯಾಕ್ಕೆ ಯಾವ ದೇಶದ ವಿಚಾರದಲ್ಲೂ ದುಷ್ಟಭಾವನೆಯಿಲ್ಲವೆಂದೂ ಅಲ್ಲಿನ ಒಳನಾಡಿನ ಸಚಿವರು ಪ್ರಕಟಿಸಿದ್ದಾರೆ. ಆದರೆ ಅಲ್ಲಿಯ ವಿಮಾನ ನಿಲ್ದಾಣಗಳಲ್ಲಿ ಮಿಲಿಟರಿ ಸಿದ್ಧತೆಗಳು ನಡೆದಿವೆಯೆಂದೂ ಸುತ್ತಮುತ್ತಲಿರುವ ಮನೆಗಳನ್ನು ಖಾಲಿಮಾಡಿಸಿ ಬಾಂಬುಗಳನ್ನು ಸಂಗ್ರಹಿಸಲಾ ಯೆಂದೂ ಸುದ್ದಿ ಹಬ್ಬಿದೆ. ಬಲ್ಗೇರಿಯವು ತನ್ನ ಸೈನ್ಯ ನ್ನು ರಷ್ಯದಮೇಲೆ ಯುದ್ಧಮಾಡಲು ಕಳುಹಿಸಲು ಸಾ ವಿಲ್ಲವೆಂದು ಹೇಳುತ್ತಿದೆಯಾದರೂ, ಬಲ್ಗೇರಿಯವು ಹೆ ವರ್ತಿಸಬೇಕೆಂಬುದನ್ನು ನಿರ್ಧರಿಸುವುದು ಬಲ್ಗೇರಿಯ ಕೈಯಲ್ಲಿಲ್ಲವೆಂದೂ, ಅದು ಜರ್ಮನಿಯು ಹೇಳಿದ ನಡೆಯಬೇಕಾದ ಸ್ಥಿತಿಯಲ್ಲಿದೆಯೆಂದೂ ಅಭಿಪ್ರಾ ಪಡಲಾಗಿದೆ.

ಅಮೇರಿಕದಲ್ಲಿ ಸಂಗ್ರಾಮವಸ್ತು ನಿರ್ಮಾಣ ಶಕ್ತಿ

ರಷ್ಯಾ-ಜರ್ಮನಿಗಳ ಯುದ್ಧದಲ್ಲಿ ಈಗಿನ ಪರಿ ಯನ್ನು ಗಮನಿಸಿ ಅಮೇರಿಕವು ಯುದ್ಧದ ಟ್ಯಾಂಕು ನಿರ್ಮಾಣಕಾರ್ಯವನ್ನು ಬಲಪಡಿಸಿದೆ. ತಿಂಗಳೊ ಕ್ಕೆ 3000 ಟ್ಯಾಂಕುಗಳನ್ನು ನಿರ್ಮಿಸಬೇಕೆಂದು ರಕ್ಷ ಧಿಕಾರಿಗಳು ಯೋಚಿಸಿದ್ದಾರೆ. ಈ ನಿರ್ಮಾಣ ಶ ಯನ್ನು 1942 ನೆಯ ವರ್ಷದ ಮಧ್ಯಭಾಗದ ವೇ ಮುಟ್ಟಬಹುದು. ಮೊದಲು ತಿಂಗಳಿಗೆ 500 ಬಾಂ ಗಳನ್ನು ಮಾತ್ರ ಒದಗಿಸಬಹುದೆಂದಿದ್ದು ಈಗ ತಿಂಗ 750 ಬಾಂಬರು ವಿಮಾನಗಳನ್ನು ಒದಗಿಸುವ ವ್ಯವ ಯಾಗಿದೆ. ಅಮೇರಿಕದಲ್ಲಿ ಸಂಗ್ರಾಮ ಸಲಕರಣೆಗ ಹೆಚ್ಚು ಹೆಚ್ಚಾಗಿ ನಿರ್ಮಿಸಲು ಉಕ್ಕು ಅಗತ್ಯ ರುವದರಿಂದ ಉಕ್ಕಿನ ನಿರ್ಮಾಣವನ್ನು ಹೆಚ್ಚಿ 125 ಮಿಲಿಯನ್ ಡಾಲರುಗಳನ್ನು ವೆಚ್ಚಮಾಡ ಮಂಜೂರಾಗಿದೆ.

ಒಡೆಸ್ಸಾ ಸೈನಿಕರ ಸಾಹಸ

ರುಮೇನಿಯದ ಡಿಕ್ಟೇಟರರಾದ ಜ|| ಆಂಟೊನೆ ರವರು ಒಡೆಸ್ಸಾನಗರವನ್ನು ಜಯಿಸಿ ವಿಜಯೋತ್ಸಾ ದಿಂದ ನಗರ ಪ್ರವೇಶಮಾಡಬೇಕೆಂಬ ಆಶೆಯಿಂದ ಎ ಸಾರೆ ರಣರಂಗಪ್ರವೇಶಮಾಡಿದರೂ ರುಮೇನಿಯ ಸೇನೆಯು ಒಂದು ಹೆಜ್ಜೆಯೂ ಮುಂದುವರಿಯ ಸಾಧ್ಯವಾಗಲಿಲ್ಲ. ಈ ಒಡೆಸ್ಸಾತೀರ ಪಟ್ಟಣದ ಮು ಗೆಯಾರಂಭವಾದಂದಿನಿಂದ ಅದರ ಹೊರವಲಯದ 160000 ಮಂದಿ ಜರ್ಮನರೂ ರುಮೇನಿಯನ ತಮ್ಮ ಜೀವವನ್ನು ತೆತ್ತಿದ್ದಾರೆ. ಈ ನಗರದ ಮುಕ್ಕಾ ಭಾಗ ನಾಗರಿಕರನ್ನು ಬೇರೆ ಕಡೆಗೆ ಸಾಗಿಸಿದ್ದರೂ ನಗರದ ಚಟುವಟಿಕೆ ಉತ್ಸಾಹಗಳು ಕೊಂಚವೂ ತಗ್ಗಿರುವದಿಲ್ಲ. ಸೈನಿಕರು ಈಗ 50 ದಿನಗಳಿಂದ ಸರಿಯಾಗಿ ನಿದ್ರಾಹಾರಗಳಿಲ್ಲದೆ ಬೈಲಿನಲ್ಲಿರುತ್ತಿದ್ದರೂ ಅವರ ಉತ್ಸಾಹ ಭಂಗವಾಗಿಲ್ಲವೆಂದು ಮಾಸ್ಕೋ ಸುದ್ದಿಯು ತಿಳಿಸುತ್ತದೆ.

ಒಡೆಸ್ಸಾ ಅಭೇದ್ಯವಾಗಿದೆ

ಒಡೆಸ್ಸಾ ನಗರವನ್ನು ಸರ್ವಪ್ರಯತ್ನದಿಂದಲೂ ಆಕ್ರಮಿಸುವ ಕಾರ್ಯವು ಜರ್ಮನರಿಂದ ನಡೆಸಲ್ಪಟ್ಟರೂ ಅದು ಅಭೇದ್ಯವಾದ ದುರ್ಗವಾಗಿದೆ. ನಾಜಿಗಳು ಲೆಕ್ಕವಿಲ್ಲದಷ್ಟು ಸೈನ್ಯಗಳನ್ನು ರಣಕ್ಷೇತ್ರಕ್ಕೆ ತಂದು ಪ್ರಾ ವನ್ನು ತೃಣಕ್ಕಿಂತಲೂ ಕಡೆಯಾಗಿ ಭಾವಿಸಿ 1500 ಯೋಧರನ್ನು ಬಲಿಕೊಟ್ಟು ಪ್ರಥಮ ರಕ್ಷಣಾ ವ್ಯೂಹವನ್ನು ಭೇದಿಸಲು ಸಮರ್ಥರಾದರೂ ರಷ್ಯನರು ಕೂಡಲೆ ಹೆಚ್ಚಿನ ಸೇನೆಯನ್ನು ಆಕಡೆ ಕಳುಹಿಸಿ ಜರ್ಮನರನ್ನು ಹಿಂದಕ್ಕಟ್ಟಿದರು. ಕಪ್ಪುಕಡಲಿನಲ್ಲಿರುವ ಬಹು ಮುಖ್ಯ ಬಂದರಾದ ಒಡೆಸ್ಸಾವನ್ನು ರಷ್ಯನರು ಕಳೆದುಕೊಂಡರೆ ಅವರ ನೌಕಾಬಲಕ್ಕೆ ಅಗಾಧ ನಷ್ಟವಾಗುವದರಿಂದ ರಷ್ಯನರು ತಮ್ಮ ಜೀವದಹಂಗು ತೊರೆದು ಅದನ್ನು ರಕ್ಷಿಸುತ್ತಿದ್ದಾರೆ.

ತ್ರಿರಾಷ್ಟ್ರಸಮ್ಮೇಲನವು ಮುಗಿಯಿತು

ಜರ್ಮನಿಯನ್ನು ಪ್ರತಿಭಟಿಸಿ ಯುದ್ಧಮಾಡುತ್ತಿರುವ ರಷ್ಯಕ್ಕೆ ಹೆಚ್ಚಿನ ಸಹಾಯನೀಡುವ ಬಗ್ಗೆ ಸೇರಿದ್ದ ಬ್ರಿಟಿಷ್, ಅಮೇರಿಕಾ, ರಷ್ಯಾರಾಷ್ಟ್ರಗಳ ಸಮ್ಮೇಲನವು ೧ನೇ ತಾರೀಖಿನದಿವಸ ಮುಗಿಯಿತು.

ರೂಜ್‌ವೆಲ್ಟರೂ, ಚರ್ಚಿಲ್ಲರೂ ಎಂ. ಸ್ಟ್ಯಾಲಿನ್ನಿಗೆ ಕಳಿಸಿದ ಸಂಯುಕ್ತ ಸಂದೇಶದ ಆಧಾರದ ಮೇಲೆ ಕೆ

ಸಮ್ಮೇಳನವು ಸೇರಿತ್ತು. ಫಾಸಿಸ್ಟರ ಕ್ರೌರ್ಯವನ್ನು ಅದ್ಭುತ ರೀತಿಯಲ್ಲಿ ಎದುರಿಸಿ ಯುದ್ಧಮಾಡುತ್ತಿರುವ ರಷ್ಯಕ್ಕೆ ಸಹಾಯಮಾಡುವ ಅತ್ಯುತ್ತಮಮಾರ್ಗವಾವುದು? ಈ ಮೂರು ರಾಷ್ಟ್ರಗಳವರ ಸಾಧನ ಸಂಪತ್ತುಗಳನ್ನು ಸರಿಯಾಗಿ ಹಂಚುವ ಬಗೆ ಹೇಗೆ? ಸಂಗ್ರಾಮ ಪ್ರಯತ್ನಕ್ಕೆ ಅತ್ಯಂತ ಹೆಚ್ಚಿನ ಸಹಾಯವಾಗಬೇಕಾದರೆ ಈ ಸಾಧನ ಸಂಪತ್ತುಗಳನ್ನು ಹೇಗೆ ಉಪಯೋಗಿಸಿಕೊಳ್ಳಬೇಕು? ಇತ್ಯಾದಿ ಪ್ರಶ್ನೆಗಳನ್ನು ಅಲ್ಲಿ ವಿಮರ್ಶಿಸಲಾಯಿತು

ಈ ಮೂರು ರಾಷ್ಟ್ರಗಳ ಪ್ರತಿನಿಧಿಗಳು ಲಾರ್ಡ್ ಬೀವರ್‌ಬ್ರೂಕ್, ಶ್ರೀ ಹ್ಯಾರಿಮನ್ ಮತ್ತು ಎಂ. ಮೊಲೊಟೋವ್—ಇವರ ನಾಯಕತ್ವದಲ್ಲಿ ಪೂರ್ಣ ಮೈತ್ರಿಯಿಂದ ಕೆಲಸಮಾಡಿದರು ಈಗ ಹಿಟ್ಲರನ ಜರ್ಮನಿಯನ್ನು ರಷ್ಯನರು ಎದುರಿಸಿದ್ದಾರಷ್ಟೆ! ಈ ಸಂಗ್ರಾಮದ ಪರಿಣಾಮದಮೇಲೆ, ನಾಜಿ ತುಳಿತಕ್ಕೆ ಸಿಕ್ಕಿ ನರಳುತ್ತಿರುವ ದೇಶಗಳ ಭವಿಷ್ಯವು ನಿಂತಿದೆ ರಷ್ಯಕ್ಕೆ ಸಹಾಯ ನೀಡುವುದು ಎಷ್ಟು ಮುಖ್ಯವಾದುದೆಂಬುದನ್ನು ಪ್ರತಿನಿಧಿಗಳು ಗಮನದಲ್ಲಿಟ್ಟು ಕೆಲಸಮಾಡಿದರು ಇತರ ರಾಷ್ಟ್ರಗಳಿಗೆ ನಾಜಿಗಳಿಂದ ಭಯವಿರದಂತೆ ಮಾಡುವ ಪವಿತ್ರಕಾರ್ಯವು ಪ್ರತಿನಿಧಿಗಳಿಗೆ ಸ್ಫೂರ್ತಿ ಕೊಡುತ್ತಿತ್ತು

ಎಂ. ಸ್ಟಾಲಿನ್ನರು ಸಮ್ಮೇಳನದಲ್ಲಿ ಬಹಳ ಆಸಕ್ತಿ ವಹಿಸಿದ್ದರು ಅದು ಬಹಳ ಯಶಸ್ವಿಯಾಗಿ ತನ್ನ ಕಾರ್ಯ ಸಾಧನೆಮಾಡಿತು. ಸ್ವಾತಂತ್ರ್ಯವನ್ನು ಪ್ರೀತಿಸುವಂತಹ ರಾಷ್ಟ್ರಗಳಿಗೆಲ್ಲ ಕುಠಾರ ಪ್ರಾಯವಾಗಿರುವ ಶತ್ರುಗಳನ್ನು ಧ್ವಂಸಮಾಡುವ ವಿಚಾರದಲ್ಲಿ ಮೂರು ರಾಷ್ಟ್ರಗಳವರೂ ಸಂಪೂರ್ಣ ಐಕಮತ್ಯವನ್ನು ತೋರಿಸಿದರು.

ಅಪೂರ್ಣವಸ್ತುಗಳನ್ನೂ ಯಂತ್ರಸಲಕರಣೆಗಳನ್ನೂ ಮತ್ತು ಸಂಗ್ರಾಮ ವಸ್ತುಗಳನ್ನೂ ಅಪಾರವಾಗಿ ಕಳುಹಿಸುತ್ತಿರುವುದಕ್ಕಾಗಿ ರಷ್ಯದ ಕೃತಜ್ಞತೆಯನ್ನು ಅಮೆರಿಕಕ್ಕೂ ಮತ್ತು ಬ್ರಿಟನ್ನಿಗೂ ತಿಳಿಸಬೇಕೆಂದು ಎಂ ಸ್ಟಾಲಿನ್ನರು ಹೇಳಿದ್ದಾರೆ.

ರಷ್ಯದಿಂದ ಅಪೂರ್ಣ ಪದಾರ್ಥಗಳು ಬಂದುದಕ್ಕಾಗಿ ಶ್ರೀ ಹ್ಯಾರಿಮನ್ನರೂ, ಲಾರ್ಡ್ ಬೀವರ್ ಬ್ರೂಕರೂ ರಷ್ಯಾ ಸರ್ಕಾರಕ್ಕೆ ಕೃತಜ್ಞತೆಯನ್ನರ್ಪಿಸಿ, ಸಂಗ್ರಾಮ ವಸ್ತುಗಳ ನಿರ್ಮಾಣಕ್ಕೆ ಇದರಿಂದ ಬಹಳ ಸಹಾಯವಾಗಿದೆಯೆಂದು ಹೇಳಿದರು.

ನಾಜಿ ದುಷ್ಕೃತನವನ್ನು ಸಂಪೂರ್ಣವಾಗಿ ನಾಶಗೊ ಶಾಂತಿಸ್ಥಾಪನೆ ಮಾಡಿದಮೇಲೆ ಎಲ್ಲ ದೇಶಗಳೂ ನ್ಯಾಯವಾಗಿ ಕ್ಷೇಮದಿಂದ ಜೀವಿಸುವಂತೆ ಮಾಡ ಗುವುದೆಂಬುದಾಗಿ ಮೂರು ಸರಕಾರಗಳೂ ತೀರ್ಮಾನ ಮಾಡಿದವು.

ರಷ್ಯದ ದೃಢಸಂಕಲ್ಪ

ತ್ರಿರಾಷ್ಟ್ರ ಸಮ್ಮೇಳನದ ಅಂತ್ಯದಲ್ಲಿ ರಷ್ಯದ ವಿದೇಶಾಂಗ ಸಚಿವರಾದ ಎಂ. ಮೊಲೊಟೋವ್‌ರವರು ಭಾಷಣ ಮಾಡುತ್ತ—"ಸ್ವಾತಂತ್ರ್ಯವನ್ನು ಬಯಸುವ ಎಲ್ಲ ದೇಶಗಳ ಆಶೋತ್ತರವು ಒಂದೇ ಆಗಿದೆ ಚಿಕ್ಕ ಚಿಕ್ಕ ರಾಷ್ಟ್ರಗಳನ್ನು ತುಳಿದು ಆ ಭೂಭಾಗಗಳನ್ನು ತನ್ನ ದೇಶ ಸೇರಿಸಿಕೊಳ್ಳುವುದರ ಮೂಲಕ ಜೀವನ ನಡೆಸುತ್ತಿ ವ ಹಿಟ್ಲರ್ ಜರ್ಮನಿಯ ಮೇಲೆ ಈಗ ಆರಂಭಿಸಿ ವ ಇತಿಹಾಸ ಪ್ರಸಿದ್ಧವಾದ ಕದನದಲ್ಲಿ ನಮ್ಮ ಹಕಾರವು ಎಷ್ಟು ನಿಕಟವಾಗಿದೆಯೆಂಬುದನ್ನು ಕಾಣ ಕ್ಕಂತಹ ಸುಯೋಗವು ನಮಗೆ ಉಂಟಾಗಿದೆ

ಶ್ರೀ ಚರ್ಚಿಲ್ಲರೂ ಮತ್ತು ರೂಜ್‌ವೆಲ್ಟರೂ ನಮ್ಮ ಳದ ಪ್ರಮುಖ ರಾಜಕಾರಣಪಟುಗಳಾಗಿರುವರು ಜರ್ಮನಿಯನ್ನು ಸೋಲಿಸಬೇಕಾದುದು ಅತ್ಯಗತ್ಯ ದು ಯುದ್ಧದಲ್ಲಿ ಭಾಗವಹಿಸಿರುವ ಬ್ರಿಟನ್ ಮಾತ್ರ ಲ್ಲದೆ, ತಟಸ್ಥವಾಗಿರುವ ಅಮೆರಿಕವೂ ಘೋಷಿಸಿರುವುದು ಮಹತ್ವದ ವಿಚಾರವಾಗಿದೆ. ಈಗಿನ ಯುದ್ಧದಲ್ಲಿ ಕಟ್ಟಕಡೆಯದಾಗಿ ಜಯಲಭಿಸುವುದೆಂಬುದನ್ನು ಮಹಾ ರಾಷ್ಟ್ರಗಳಾದ ಬ್ರಿಟನ್, ಅಮೆರಿಕಾ ಮತ್ತು ರಷ್ಯಾಗಳ ಸಹಕಾರವೇ ಸೂಚಿಸುತ್ತದೆ. ಟ್ಯಾಂಕುಗಳೇ ಮೊದಲಾದ ಸಂಗ್ರಾಮವಸ್ತುಗಳನ್ನು ರಷ್ಯಕ್ಕೆ ಇನ್ನುಮುಂದೆ ಹೆಚ್ಚು ಹೆಚ್ಚಾಗಿ ಕಳಿಸಲಾಗುತ್ತದೆ. ಹಿಟ್ಲರನು ಈ ಮೂರು ಮಹಾರಾಷ್ಟ್ರಗಳು ಜರ್ಮನಿಗೆ ವಿರುದ್ಧವಾಗಿ ಒಂದಾಗಲು ಸಹಾಯ ಮಾಡಿದ್ದಾನೆ.

ಹಿಟ್ಲರನು ಎಷ್ಟೇ ದೇಶಗಳನ್ನು ತುಳಿದರೂ ಸಂಗ್ರಾಮವನ್ನು ಮುಂದುವರಿಸುವಷ್ಟು ಶಕ್ತಿಯು ಅವನಿಗೆ ಲಭಿಸುವುದಿಲ್ಲ. ಹಿಟ್ಲರನ ಪತನಕ್ಕೆ ನಮ್ಮ ಈ ಸಮ್ಮೇಳನವು ಕಾರಣವಾಗಿ ಇತಿಹಾಸದಲ್ಲಿ ಪ್ರಮುಖಸ್ಥಾನ ಪಡೆಯುವುದೆಂಬುದರಲ್ಲಿ ಸಂದೇಹವಿಲ್ಲ. ಈ ಗೋರಿಂಗರುಗಳನ್ನೂ ಹಿಟ್ಲರ್‌ಗಳನ್ನೂ ರಿಬ್ಬನ್‌ಟ್ರಾಪ್‌ಗಳನ್ನೂ ದ್ವೇಷಿಸಿದರೆ ಮಾತ್ರ ಸಾಲದು. ಜರ್ಮನ್ ನಾಜಿಗಳೆಲ್ಲರನ್ನೂ ಸಂಪೂರ್ಣವಾಗಿ ಧ್ವಂಸಮಾಡಿಬಿಡಬೇಕು ಇಷ್ಟು ಬಲಯುತವಾದ ರಾಷ್ಟ್ರಗಳ ಐಕಮತ್ಯವನ್ನು ಹರ್ ಹಿಟ್ಲರನು ಹಿಂದೆಂದೂ ಎದುರಿಸಬೇಕಾಗಿರಲಿಲ್ಲ. ಅವನಿಗಿನ್ನೂ ನಮ್ಮ ಹೊಸ ಯೋಜನೆಯ ಬಿಸಿತಾಕಿಲ್ಲ ಹಿಟ್ಲರನಿಗೆ ವಿರುದ್ಧವಾದ ಚಳುವಳಿಯು ಬಲಗೊಳ್ಳುತ್ತ ಹೋಗುವುದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ ನಾವೀಗ ಬಹಳ ಉಗ್ರವಾದ ಪ್ರಹಾರಕ್ಕೆ ತಲೆ ಕೊಟ್ಟಿದ್ದೇವೆ ವಿಶ್ವದ ಎಲ್ಲ ದೇಶಗಳೂ ಇದನ್ನು ಮನಗಂಡಿವೆ ನಮ್ಮ ಸಂಕಲ್ಪವು ನಮಗೆ ಏಟು ಬಿದ್ದಷ್ಟೂ ಬಲವಾಗುತ್ತಿದೆ ನಮ್ಮ ಸೇನೆ ಈಗಲೂ ವಿಶೇಷ ಶಕ್ತಿಯಿಂದ ಕೂಡಿದೆ ಜಯಸಂಪಾದಿಸುವ ಯೋಗ್ಯತೆ ಅದಕ್ಕಿದೆ. ಯುದ್ಧವನ್ನು ನಡೆಸುವ ವಿಚಾರದಲ್ಲಿ ನಮ್ಮ ಸಂಕಲ್ಪವು ದೃಢವಾಗಿದೆ ಕಟ್ಟಕಡೆಗೆ ಜಯವಾಗುವುದೆಂಬ ವಿಚಾರದಲ್ಲಿ ನಮ್ಮ ನಂಬಿಗೆಯು ಅಚಲವಾಗಿದೆ. ನಾನು ಸೋವಿಯಟ್ ಪ್ರಜೆಗಳ ಹೆಸರಿನಲ್ಲಿ ಬ್ರಿಟನ್ ಮತ್ತು ಅಮೆರಿಕಾ ಪ್ರತಿನಿಧಿಗಳಿಗೆ ಭರವಸೆ ಕೊಡುತ್ತೇನೆ' ಎಂದು ನುಡಿದರು

ರಂಭಾಪುರೀ ಜಗದ್ಗುರುಗಳವರ ಆಗಮನ, ಮಂಡ್ಯ

ಶ್ರೀಮದ್ರಂಭಾಪುರೀ ಜಗದ್ಗುರುಗಳವರು ನಿನ್ನೆಯ ದಿವಸ ಡಿಸ್ಟ್ರಿಕ್ಟಿನ ಮುಖ್ಯಸ್ಥಳವಾದ ಮಂಡ್ಯಟವನ್ನಿಗೆ ದಯಮಾಡಿಸಿದರು ಉತ್ಸವವು ಸಕಲ ಬಿರುದಾವಳಿಗಳೊಡನೆ ವಿಶೇಷವೈಭವದಿಂದ ನೆರವೇರಿತು. ಜಗದ್ಗುರುಗಳವರು ಇಲ್ಲಿ ೩ ದಿವಸಗಳವರೆಗಿದ್ದು ಅಲ್ಲಿಯ ಭಕ್ತಾದಿಗಳಿಂದ ಕಾಣಿಕೆಯನ್ನು ಸ್ವೀಕರಿಸಿ ಮುಂದೆ ನಾಗಮಂಗಲಕ್ಕೆ ದಯಮಾಡಿಸುವರೆಂದು ತಿಳಿದುಬರುತ್ತದೆ.

* * *

ದಾನಶೂರ ಶರಣಪ್ಪದೊರೆಗಳ ಉದಾರ ದಾನ

ನಿಜಾಂಸ್ಟೇಟ್ ಪಾಯಿಗಾ ಇಲಾಖಾ ದುಬಲಗುಂಡಿ ಗ್ರಾಮದಲ್ಲಿರುವ ಶ್ರೀ ಶರಣಪ್ಪಣ್ಣ ಪತ್ತೆಪುರ ದೊರೆಗಳು ಕಳೆದ ವರ್ಷ ತಮ್ಮ ರಾಜಭವನದಲ್ಲಿ ನೆರವೇರಿಸಿದ ದಸರಾಮಹೋತ್ಸವದ ಸಮಯದಲ್ಲಿ ಹೋಟಗಿ ಶ್ರೀಗಳವರು ಕೈಕೊಂಡಿರುವ ವೀರಶೈವಮತಗ್ರಂಥಗಳ ಮುದ್ರಣಕ್ಕಾಗಿ ೨೦ ಸಾವಿರರೂಪಾಯಿಗಳನ್ನು ದಾನಮಾಡಿರುವ ವಿಷಯವು ಸುಪ್ರಸಿದ್ಧವಿರುವುದಷ್ಟೆ! ದೊರೆಗಳವರು ತಮ್ಮ ವಾಗ್ದಾನದಂತೆ ೨೦ ಸಾವಿರ ರೂಪಾಯಿಗಳಾಗುವ ೧೨೦೦ (ಹಾಲಿ) ರೂಪಾಯಿಗಳನ್ನು ಹೋಟಗಿ ಶ್ರೀಗಳವರಿಗೆ ತಂದು ಒಪ್ಪಿಸಿದರೆಂಬ ವಿಷಯವನ್ನು ತಿಳಿದು ಪರಮಾನಂದವೆನಿಸುತ್ತದೆ ನಾಸ್ತಿಕರ ಉಪಟಳದಿಂದ ಜರ್ಝರಿತವಾಗುತ್ತಿರುವ ಈ ವಿಷಮಸಮಯದಲ್ಲಿ ಸನಾತನ ಧರ್ಮದ ಉದ್ಧಾರಕ್ಕಾಗಿ ಸ್ವಾರ್ಜಿತಸಂಪತ್ತನ್ನು ಸದ್ವ್ಯಯಮಾಡುತ್ತಿರುವ ಶ್ರೀ ಶರಣಪ್ಪ ದೊರೆಗಳವರಿಗೆ ಸಮಸ್ತ ವೀರಶೈವ ಪ್ರಪಂಚವೇ ಚಿರಋಣಿಯಾಗಿದೆಯೆಂದು ಸಾರಿ ಸಾರಿ ಹೇಳಬಹುದಾಗಿದೆ ಅಸಾಧಾರಣವಾದ ಧರ್ಮಾಭಿಮಾನದಿಂದ ಕೂಡಿ ಧರ್ಮೋದ್ಧಾರಕ್ಕಾಗಿ ಬದ್ಧಕಂಕಣರಾಗಿರುವ ಸವಿಪ್ರಾ ಧರ್ಮಾತ್ಮ ದಾನಶೂರರಿಗೆ ಶ್ರೀ ಜಗದಾಚಾರ್ಯರು ಇತ್ಯೋಽಪ್ಯತಿಶಯವಾದ ಸಂಪತ್ತನ್ನೂ ಧರ್ಮಬುದ್ಧಿಯನ್ನೂ ಅನುಗ್ರಹಿಸಿ, ಅವರ ಸತ್ಕೀರ್ತಿಲತೆಯು ಈ ಜಗತೀತಲದಲ್ಲಿ ಹಬ್ಬುವಂತಾಗಲೆಂದು ಆ ಗುರುಸಾರ್ವಭೌಮರನ್ನು ಪ್ರಾರ್ಥಿಸುತ್ತೇವೆ.

ಶ್ರೀಮದ್ರಂಭಾಪುರೀ ಜಗದ್ಗುರುಗಳವರ
ದಸರಾ ಮಹೋತ್ಸವ
ಮಂಡ್ಯ ತಾ|| ಬಸರಾಳು

ಪದ್ಧತಿಪ್ರಕಾರ ಇದೇ ವೃಷನಾಮ ಸಂ|| ಆಶ್ವಯುಜ ಶು|| ೧ ಸೋಮವಾರದಿಂದ ಶು|| ೯ ಸೋಮವಾರದವರೆಗೆ ಈ ಗ್ರಾಮದಲ್ಲಿ ಪ್ರತಿ ದಿವಸವೂ ಪ್ರಾತಃಕಾಲ ಗಜಾಶ್ವಾದಿಗಳ ಪೂಜೆಯೂ ಅಗ್ರೋದಕಾನಯನವೂ ಸಾಯಂಕಾಲ ೭ ಘಂಟೆಗೆ ಸರಿಯಾಗಿ ದರ್ಬಾರ್ ಮಂಟಪದಲ್ಲಿ ಶ್ರೀಜಗದ್ಗುರುಗಳವರ ಸಿಂಹಾಸನಾರೋಹಣವೂ, ವೈದಿಕರ ವೇದ ಪಠನವೂ ಕೀರ್ತನಕಾರರ ಕೀರ್ತನೆಗಳೂ, ನಡೆದು ನಜರು ಮುಜುರೆಗಳಾಗಿ ಜಯಘೋಷದೊಡನೆ ಸಭೆಯು ವಿರಮಿಸಲ್ಪಡುತ್ತಿದ್ದಿತು. ಪಟ್ಟಚರಾಧಿಕಾರಿಗಳಿಂದಲೂ, ಪಂಡಿತರಿಂದಲೂ, ಕವಿಗಳಿಂದಲೂ, ಪ್ರಸಿದ್ಧ ಕೀರ್ತನಕಾರರಿಂದಲೂ, ಲೌಕಿಕ ಪದವೀ ಪ್ರತಿಷ್ಠಿತರಿಂದಲೂ ಆಸ್ಥಾನವು ಶೋಭಿಸುತ್ತಿದ್ದಿತು. ಸ್ಥಳ ಪರಸ್ಥಳದ ಸ್ವಮತ ಪರಮತದ ಸ್ತ್ರೀ ಪುರುಷರಾದಿಯಾಗಿ ಸಾವಿರಾರು ಜನರು ಸಭೆಗೆ ಬಂದು ಶ್ರವಣಾನಂದತುಂದಿಲರಾಗಿ ಮಹಾಗುರು ಸಂದರ್ಶನವನ್ನು ಹೊಂದಿ ಧನ್ಯರಾಗುತ್ತಿದ್ದರು ಕೀರ್ತನ ಕೇಸರಿ ವೇ|| ಗುಬ್ಬಿ ಶಿವರುದ್ರಶಾಸ್ತ್ರಿಗಳವರ ಮತ್ತು ಕೀರ್ತನ ಕಂಠೀರವ ವೇ|| ದೊಡ್ಡಬಳ್ಳಾಪುರದ ಶಿವವೇದಶಾಸ್ತ್ರಿಗಳವರ ಸುಶ್ರಾವ್ಯ ಸಂಕೀರ್ತನೆಗಳೂ ವೇ|| ಬಳ್ಳಾರಿ ವೀರಭದ್ರಶಾಸ್ತ್ರಿಗಳವರ ಮನೋಹರವಾದ ಕಾವ್ಯಪ್ರವಚನವೂ ಸಹ ಸಮಸ್ತಜನರ ಚಿತ್ತಾಕರ್ಷಣೀಯಗಳಾಗಿದ್ದವು.

ತಾ|| ೩೦-೯-೧೯೪೧ ನೇ ಮಂಗಳವಾರ ಸಾಯಂಕಾಲ ೫ ಘಂಟೆಗೆ ಸರಿಯಾಗಿ ಶ್ರೀಜಗದ್ಗುರುಗಳವರ ರತ್ನಖಚಿತ ಕಿರೀಟಧಾರಣಪೂರ್ವಕ ಸುವರ್ಣರಜತಾಂದೋಲಿಕಾ ಮಹೋತ್ಸವವು ಸಕಲ ಬಿರುದಾವಳಿಗಳೊಡನೆ ತಳಿರುತೋರಣಗಳಿಂದಲಂಕೃತವಾಗಿದ್ದ ಪುರ ವೀಥಿಗಳಲ್ಲಿ ಹೊರಟು ಬನ್ನಿಯ ಮಂಟಪಕ್ಕೆ ಚಿತ್ತೈಸಿ ವಿಧ್ಯುಕ್ತವಾಗಿ ಪೂಜಾಕಾರ್ಯಗಳು ನಡೆದವು ತರುವಾಯ ಜಗದ್ಗುರುಗಳು ದರ್ಬಾರ್‌ಮಂಟಪಕ್ಕೆ ಬಿಜಯಮಾಡಿಸಿ ಸಿಂಹಾಸನಾರೋಹಣಮಾಡಿ ತಮ್ಮ ಪ್ರಸಾದವಾಣಿಯಿಂದ ಧರ್ಮತತ್ವ ಸದ್ಬೋಧಾಮೃತವನ್ನು ಸರ್ವರಿಗೂ ಪಾನಮಾಡಿಸಿ ಸರ್ವರನ್ನೂ ಧನ್ಯರನ್ನಾಗಿ ಮಾಡಿದರು. ಈ ಮಹೋತ್ಸವಕ್ಕಾಗಿ ತಾಲ್ಲೂಕು ಅಮಲ್ದಾರರವರು ಡೆಪ್ಯುಟಿ ಅಮಲ್ದಾರರವರು, ಪೋಲೀಸ್ ಸಬ್ ಇನ್ಸ್‌ಪೆಕ್ಟರವರು, ರೆವಿನ್ಯೂ ಇನ್ಸ್‌ಪೆಕ್ಟರವರು, ದಫೇದಾರರವರು ಇನ್ನೂ ಮುಂತಾದವರು ಆಗಮಿಸಿದ್ದರು ಮತ್ತು ದೂರ ದೂರ ದೇಶಗಳಿಂದ ಸುಮಾರು ೧೦ ೧೫ ಸಾವಿರದವರೆಗೆ ಜನರು ಸೇರಿ ಜಗದಾಚಾರ್ಯರ ದರ್ಶನವನ್ನು ಮಾಡಿ ಧನ್ಯರಾದರು.

ತಾ|| ೧-೧೦ ೧೯೪೧ನೇ ಬುಧವಾರ ಬೆಳಗಿನ ೯ ಘಂಟೆಗೆ ಸರಿಯಾಗಿ ದರ್ಬಾರ್ ಮಂಟಪದಲ್ಲಿ ಪುನಃ ಸಭೆಯು ಸೇರಿತು ವೇ|| ಗುಬ್ಬಿ ಶಿವರುದ್ರಶಾಸ್ತ್ರಿಗಳವರು ತಮ್ಮಿಂದ ರಚಿಸಲ್ಪಟ್ಟ ಶ್ರೀ ಜಗದ್ಗುರು ಅಭಿನವ ರೇಣುಕಸ್ತೋತ್ರನವರತ್ನಮಾಲಿಕೆಯನ್ನು ಓದಿ ಹೇಳಿ ಮಹಾ ಸನ್ನಿಧಿಯ ಚರಣಾರವಿಂದಕ್ಕೆ ಸಮರ್ಪಿಸಿದರು. ಬಳಿಕ ದೊಡ್ಡಬಳ್ಳಾಪುರದ ವೇ|| ಶಿವವೇದಶಾಸ್ತ್ರಿಗಳವರು ಗುರುಸರ್ವೋತ್ಕರ್ಷತೆಯ ವಿಷಯಕವಾಗಿ ಭಾಷಣ ಮಾಡಿದರು ಬಳಿಕ ಗುಬ್ಬಿ ಕರ್ನಾಟಕ ವೈದ್ಯಶಾಲಾ ಪಂಡಿತ ಬಿ. ಎಂ ರೇವಣಾರಾಧ್ಯರಿಗೂ ಅರಸಿಕೆರೆ ತಾಲೂಕು ರಾಮಪುರದ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾ ಸಂಘಕ್ಕೂ ಪದಕಗಳನ್ನು ಫಲಮಂತ್ರಾಕ್ಷತ ಪೂರ್ವಕ ದಯಪಾಲಿಸಿ, ಕೀರ್ತನಕಾರರಿಗೂ ಕಾವ್ಯವಾಚಕರಿಗೂ ದ್ರವ್ಯ ರೂಪ ಸಂಭಾವನೆಗಳು ದಯಪಾಲಿಸಲ್ಪಟ್ಟವು. ಈ ಗ್ರಾಮದ ಪ್ರಮುಖ ಜನರು ಆದ್ಯಂತದವರೆಗೆ ಮಾಡಿದ ಗುರುಸೇವಾ ರೂಪವಾದ ಕಾರ್ಯಕಲಾಪಗಳು ಶ್ಲಾಘನೀಯವಾಗಿದ್ದವು. ಬಸರಾಳ ಗ್ರಾಮದ ಚಕ್ರಮಂಡಳಿಗೆಲ್ಲಾ ಶ್ರೀಜಗದಾಚಾರ್ಯರು ಸಮಸ್ತ ಮಂಗಲಗಳನ್ನೀಯಲೆಂದು ಪ್ರಾರ್ಥಿಸುವ,

ಓರ್ವ ಗುರುಭಕ್ತ.

[೩ನೆಯ ಪುಟದಿಂದ ಮುಂದುವರಿದುದು]

ಸಿವಿಲ್ ಮೊಕದ್ದಮೆಗಳ ಸಂಖ್ಯೆಯಲ್ಲಿ 1939 40 ನೆಯ ಸಾಲಿನಲ್ಲಿದ್ದುದಕ್ಕಿಂತಲೂ 1940-41 ನೆಯ ಸಾಲಿನಲ್ಲಿ 828 ಮೊಕದ್ದಮೆಗಳು ಕಡಮೆಯಾಗಿದ್ದುವು, ಎಂದರೆ, ಸೇಕಡ 3. 1 ರಷ್ಟು ಕಡಮೆಯಾದುವು ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆಯಲ್ಲಿ ಕೂಡ 3,259 ಮೊಕದ್ದಮೆಗಳು ಕಡಮೆಯಾದುವು ಅಥವಾ ಸೇಕಡ 10ರಷ್ಟು ಕಡಮೆಯಾದುವು ಅಲ್ಲದೆ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಭಾಗವಹಿಸಿದ ಜನಗಳ ಸಂಖ್ಯೆಯಲ್ಲಿ 6,181 ಮಂದಿ ಕಡಮೆಯಾದರು. ಅಥವಾ ಸೇಕಡ 12 8ರಷ್ಟು ಕಡಮೆಯಾದರು ಇದೂ ಅಲ್ಲದೆ ತಪ್ಪು ಸಾಬೀತಾದವರ ಸಂಖ್ಯೆಯು 1939 ನೆಯ ಸಾಲಿನಲ್ಲಿ 27,716 ಇದ್ದುದು 1940-41 ನೆಯ ಸಾಲಿನಲ್ಲಿ 24,198 ಕ್ಕೆ ತಗ್ಗಿತು ಎಂದರೆ ಸೇಕಡ 12 6 ರಷ್ಟು ಕಡಮೆಯಾಯಿತು

ಪೋಲೀಸ್ ಇಲಾಖೆ

ಪೋಲೀಸ್ ಇಲಾಖೆಯಲ್ಲಿ 1940.41 ನೆಯ ಸಾಲಿನಲ್ಲಿ 24,210 ಮೊಕದ್ದಮೆಗಳು ವರದಿಯಾಗಿದ್ದುವು 1939 40ನೆಯ ಸಾಲಿನಲ್ಲಿ 25,487 ಮೊಕದ್ದಮೆಗಳು ವರದಿಯಾಗಿದ್ದುವು. ಜನಗಳ ಮತ್ತು ಅವರ ಸ್ವತ್ತುಗಳ ವಿಷಯದಲ್ಲಿ ನಡೆದಿರುವ ಭಾರಿ ಅಪರಾಧಗಳ ಸಂಖ್ಯೆಯೂ ಕಡಮೆಯಾಗಿದೆ ಮತ್ತು ಸಾಧಾರಣ ಅಪರಾಧಗಳ ಸಂಖ್ಯೆಯೂ ಕಡಮೆಯಾಗಿದೆ ಇದಕ್ಕೆ ಪೋಲೀಸು ಇಲಾಖೆಯವರು, ತಕ್ಸೀರು ಮಾಡುವುದನ್ನೇ ವೃತ್ತಿಯನ್ನಾಗಿಟ್ಟುಕೊಂಡಿರುವ ಜನಗಳ ಮೇಲೆ ಮತ್ತು ತಕ್ಸೀರು ಪಂಗಡಗಳ ಮೇಲೆ ಸರಿಯಾದ ಉಸ್ತುವಾರಿಯನ್ನೂ ಬಂದೋಬಸ್ತನ್ನೂ ಇಟ್ಟುಕೊಂಡಿರುವುದೇ ಕಾರಣ ವಿಶೇಷ ರೀತಿಯ ಮತ್ತು ಸ್ಥಳೀಯ ಕಾನೂನುಗಳಿಗೆ ಸಂಬಂಧಪಟ್ಟ ತಕ್ಸೀರುಗಳ ಸಂಖ್ಯೆಯು ಕಡಮೆಯಾಗಿದೆ ಜನಗಳು ರಸ್ತೆಯ ಸಂಚಾರಕ್ಕೆ ಸಂಬಂಧಪಟ್ಟ ಮತ್ತು ಇತರ ಕಾನೂನುಗಳನ್ನು ಉತ್ತಮ ರೀತಿಯಲ್ಲಿ ತಿಳಿದುಕೊಂಡಿರುವುದೇ ಅದಕ್ಕೆ ಕಾರಣವೆಂದು ಹೇಳಬಹುದು ಖಾಯಂ ಪೋಲೀಸು ದಳದಲ್ಲಿರುವವರ ಮಂಜೂರಾದ ಸಂಖ್ಯೆಯು 1,089 ಜನ ಆಫೀಸರುಗಳು ಮತ್ತು 5,776 ಜನ ಇತರರು ಮತ್ತು ಪೋಲೀಸು ಇಲಾಖೆಗಾಗಿ ಆದ ಎಲ್ಲಾ ಬಾಬುಗಳ ಒಟ್ಟು ವೆಚ್ಚವು 22,33,800 ರೂಪಾಯಿಗಳು ಬೆಂಗಳೂರಿನಲ್ಲಿರುವ ಪೋಲೀಸ್ ಟ್ರೈನಿಂಗ್ ಸ್ಕೂಲಿನಲ್ಲಿ ಕನ್ನಡ ಶೀಘ್ರಲಿಪಿಯ (ಕನ್ನಡ ಷಾರ್ಟ್ ಹ್ಯಾಂಡ್) ಶಿಕ್ಷಣವನ್ನು ಏರ್ಪಡಿಸಲಾಗಿದ್ದಿತು. ಯುದ್ಧಕ್ಕೆ ಸಂಬಂಧಪಟ್ಟ ಕೆಲಸಗಳಿಗೆ ಸಹಾಯವಾಗುವ ಹಾಗೆ ವಿಮಾನಘಾತಿಯಾದರೆ ರಕ್ಷಣೆಗೆ ಬೇಕಾದ ಉಪಾಯಗಳನ್ನು ಕಲ್ಪಿಸತಕ್ಕ ದಳವನ್ನೂ ಮತ್ತು ಇತರ ದಳಗಳನ್ನೂ ಏರ್ಪಡಿಸುವುದಕ್ಕೆ ಅವಶ್ಯಕವಾದ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ ಒಬ್ಬ ವಿಶೇಷರೀತಿಯ ಆಫೀಸರನ್ನು ಈಚೆಗೆ ನೇಮಕಮಾಡಲಾಗಿದೆ

ಮಿಲಿಟರಿ

ಪದಾತಿಗಳ ಆಫೀಸರುಗಳ ಮತ್ತು ಇತರ ಅಧಿಕಾರಿಗಳ ಸಂಬಳಗಳ ಮತ್ತು ಭತ್ಯಗಳ ಸ್ಕೇಲುಗಳನ್ನು ಸ್ವಲ್ಪ ಹೆಚ್ಚು ಕಡಮೆ ಇಂಡಿಯಾ ಸರ್ಕಾರದ ಸೈನ್ಯದಳದಲ್ಲಿರುವ ಮಟ್ಟಕ್ಕೆ ತರಬೇಕೆಂಬ ಉದ್ದೇಶದಿಂದ ಅವುಗಳನ್ನು ಹೆಚ್ಚಿಸಲಾಯಿತು 1940 41 ನೆಯ ಸಾಲಿನಲ್ಲಿ ಮೈಸೂರು ಸಂಸ್ಥಾನದ ಸೈನ್ಯದಳದಲ್ಲಿದ್ದ ಯೋಧರ ಸಂಖ್ಯೆ 2,052 ಆಗಿದ್ದಿತು

ಬಂದೀಖಾನೆಗಳು

ಬಂದೀಖಾನೆಗಳ ಇಲಾಖೆಯ ವೆಚ್ಚವು 1940 41 ನೆಯ ಸಾಲಿನಲ್ಲಿ ಸುಮಾರು 2,76,000 ರೂಪಾಯಿಗಳು 1939 40 ನೆಯ ಸಾಲಿನಲ್ಲಿ ಅದೇ ವೆಚ್ಚವು 1 55,000 ರೂಪಾಯಿಗಳು

ಸಂಸ್ಥಾನದಲ್ಲಿ ಬಂದೀಖಾನೆಗಳ ಆಡಳಿತವು ಹೇಗೆ ನಡೆಯುತ್ತಿದೆಯೆಂಬುದನ್ನೂ ಈಗಿರತಕ್ಕ ಏರ್ಪಾಡು ಎಷ್ಟರಮಟ್ಟಿಗೆ ಫಲಕಾರಿಯಾಗಿದೆಯೆಂಬುದನ್ನೂ ಕೂಲಂಕಷವಾಗಿ ವಿಚಾರ ಮಾಡುವುದೊಂದು ಮತ್ತು ಅಪರಾಧಿಗಳ ದಂಡನೆಗಿಂತ ಹೆಚ್ಚಾಗಿ ಅವರು ತಮ್ಮ ನಡತೆಯನ್ನು ತಿದ್ದಿಕೊಳ್ಳುವಂತೆಯೂ ಅವಕಾಶವಿರುವುದೇ ಮುಂತಾದ ಪ್ರತಿಭಾವನೆಗಳಿಗೆ ಹೆಚ್ಚು ಹೆಚ್ಚಾಗಿ ಹೊಂದಿಕೆಯುಂದಿರುವಂತೆ ಬಂದೀಖಾನೆಯ ಆಡಳಿತ ಸಾಧನಗಳನ್ನೂ, ರೀತಿನೀತಿಗಳನ್ನೂ ಮಾರ್ಪಡಿಸಿ ಸುಧಾರಣೆ ಮಾಡುವುದಕ್ಕೆ ಸಂಬಂಧಪಟ್ಟ ಪರಿಹಾರಮಾರ್ಗಗಳನ್ನೂ ಮೇಲ್ಪಾಟುಗಳನ್ನೂ ಸಲಹೆಮಾಡುವುದೊಂದು-ಇವಕ್ಕಾಗಿ ಒಂದು ಸಮಿತಿಯು 1940 ನೆಯ ಇಸವಿ ಮಾರ್ಚಿ ತಿಂಗಳಿನಲ್ಲಿ ನೇಮಕವಾಗಿದ್ದಿತು ರಾಜಧರ್ಮಪ್ರವೀಣ ದಿವಾನ್ ಬಹದ್ದೂರ್ ಕೆ. ಎಸ್ ಚಂದ್ರಶೇಖರಯ್ಯರವರು ಅದರ ಅಧ್ಯಕ್ಷರಾಗಿದ್ದರು. ಈ ಅಂಶಗಳು ನಮಗೆ ತಿಳಿದೇ ಇವೆ ಈ ವಿಷಯಕ್ಕೆ ಸಂಬಂಧಪಟ್ಟ ವಿಚಾರಗಳನ್ನೆಲ್ಲಾ ಸಮಿತಿಯವರು ಸಮಗ್ರವಾಗಿಯೂ ಚೆನ್ನಾಗಿಯೂ ಪರಿಶೀಲನೆಮಾಡಿದರು, ಸಂಸ್ಥಾನದ ಹೊರಗೆ ಅಪರಾಧಿಗಳ ದಂಡನೆಗಾಗಿ ಏರ್ಪಟ್ಟಿರುವ ಅನೇಕ ವಿಧದ ಸಂಸ್ಥೆಗಳಿಂದ ಹೇಗೆ ಕೆಲಸ ನಡೆಯುತ್ತದೆಂಬುದನ್ನು ಪ್ರತ್ಯಕ್ಷವಾಗಿ ನೋಡಿಕೊಂಡು ಬಂದರು ಕೊನೆಗೆ ಸಮಿತಿಯವರು ವಿಶಾಲದೃಷ್ಟಿಯಿಂದ ಒಂದು ವರದಿಯನ್ನು ಈ ವರ್ಷದ ಮಾರ್ಚಿ ತಿಂಗಳಿನಲ್ಲಿ ಒಪ್ಪಿಸಿದರು. ಅಪರಾಧಿಗಳಿಗೆ ಶಿಕ್ಷೆಯ ಭಾಗಕ್ಕಿಂತ ಸುಧಾರಣಾರೂಪವಾದ ಶಿಕ್ಷಣಭಾಗವೇ ಹೆಚ್ಚಾಗಿರಬೇಕೆಂಬುದನ್ನು ಸಮಿತಿಯವರು ಒತ್ತಿ ಹೇಳಿದ್ದಾರೆ ಅಲ್ಲದೆ ಬಂದೀಖಾನೆಗಳ ಆಡಳಿತದಲ್ಲಿ ಬದಲಾವಣೆಯನ್ನುಂಟುಮಾಡುವ ವಿಷಯದಲ್ಲಿ ಅಮೋಘವಾದ ಮತ್ತು ಸ್ವಾರಸ್ಯವಾದ ಅನೇಕ ಸಲಹೆಗಳನ್ನು ಮಾಡಿರುತ್ತಾರೆ ಸಮಿತಿಯವರ ಕೆಲವು ಸಲಹೆಗಳನ್ನು ಜಾರಿಗೆ ತರುವ ಉದ್ದೇಶದಿಂದ ನಾಲ್ಕು ಮಸೂದಾ ಕಾನೂನುಗಳನ್ನು ಈ ಸಭೆಯವರಿಗೆ ಈ ಅಧಿವೇಶನದಲ್ಲಿ ಒಪ್ಪಿಸಲಾಗುವುದು ಸಮಿತಿಯ ಅಧ್ಯಕ್ಷರಾದ ಶ್ರೀಮಾನ್ ಕೆ ಎಸ್ ಚಂದ್ರಶೇಖರಯ್ಯರವರೂ ಮತ್ತು ಸಮಿತಿಯ ಇತರ ಸದಸ್ಯರುಗಳೂ ತಮ್ಮ ಪರ್ಯಾಲೋಚನೆಗೆ ವಹಿಸಿದ್ದ ವಿಷಯಗಳನ್ನು ಕುರಿತು ವಿಚಾರಣೆ ನಡೆಯಿಸಿ ಅತ್ಯಂತ ಉಪಯೋಗಕರವಾದ ಮತ್ತು ಸಮಗ್ರವಾದ ವರದಿಯನ್ನು ಬರೆಯುವುದರಲ್ಲಿ ವಿಶೇಷ ಸಾಮರ್ಥ್ಯವನ್ನೂ ಎಚ್ಚರಿಕೆಯನ್ನೂ ತೋರಿಸಿ ತಮ್ಮ ಕೆಲಸಕ್ಕೊಂದು ಪೂರ್ಣತೆಯನ್ನು ಕೊಟ್ಟಿದ್ದಾರೆ ನಾನು ಸರ್ಕಾರದವರ ಪರವಾಗಿ ಈ ಗುಣಗಳನ್ನು ಅಭಿನಂದಿಸಿ ಅವರಿಗೆ ಕೃತಜ್ಞತೆಯನ್ನು ಸೂಚಿಸುತ್ತೇನೆ

ಕೈಗಾರಿಕೆಗಳು

1940 41ನೆಯ ಸಾಲಿನಲ್ಲಿ ಸಂಸ್ಥಾನದ ಕೈಗಾರಿಕೆ ಉದ್ಯಮಗಳೆಲ್ಲ ಚೆನ್ನಾಗಿ ಪುರೋಭಿವೃದ್ಧಿ ಹೊಂದಿದವು ಅವುಗಳ ಕಾರ್ಯಕಲಾಪಗಳು ವಿಶೇಷವಾಗಿ ಹೆಚ್ಚಿದವು ಈ ಕೈಗಾರಿಕೆಗಳ ಸಂಬಂಧದ ಕಾರ್ಯಕಲಾಪಗಳ ಸಂಬಂಧವಾಗಿ ಮೂರು ಮುಖ್ಯ ಸಂಗತಿಗಳನ್ನು ಸೂಚಿಸಬಹುದು., ಮೊದಲನೆಯದಾಗಿ, ಇಂಡಿಯಾ ಸರ್ಕಾರದ ಸರಬರಾಯಿ ಇಲಾಖೆಯವರಿಗೆ ಯುದ್ಧಸಂಬಂಧವಾಗಿ ಬೇಕಾದ ಸಾಮಾನುಗಳಲ್ಲಿ ಸಂಸ್ಥಾನದಿಂದ ಒದಗಿಸುವುದಕ್ಕಾಗುವ ಸಾಮಾನುಗಳನ್ನು ತಯಾರಿಸಲು ಸಾಧ್ಯಕಂಡ ಎಲ್ಲ ರೀತಿಗಳಲ್ಲಿಯೂ ಕೈಗಾರಿಕೆಯ ಉದ್ಯಮಗಳಿಗೆ ಸಹಾಯಮಾಡಿ ವಸ್ತುರಚನೆಗಾಗಿ ಸರ್ವ ಪ್ರಯತ್ನಗಳನ್ನೂ ಮಾಡಲಾಗಿದೆ. ಎರಡನೆಯದಾಗಿ, ಈಗ ಸಾಮಾನುಗಳಿಗೆ ಹೆಚ್ಚಿನ ಗಿರಾಕಿ ದೊರೆಯುವ ಕಾರಣ, ಕೈಗಾರಿಕೆ ಕಾರ್ಖಾನೆಗಳಲ್ಲಿ ಸಾಮಾನುಗಳನ್ನು ತಯಾರಿಸುವ ಪ್ರಮಾಣವನ್ನು ಮೊದಲಿಗಿಂತ ಹೆಚ್ಚಿಸಲಾಗಿದೆ, ಅಲ್ಲದೆ ಅನುಕೂಲಕಂಡ ಕಡೆಗಳಲ್ಲಿ ಹೆಚ್ಚಿಗೆ ವಸ್ತುಗಳನ್ನು ತಯಾರು ಮಾಡುವ ಉದ್ಯಮಗಳನ್ನೂ ಏರ್ಪಡಿಸಲಾಗಿದೆ ಹೀಗೆ ಮಾಡುವುದರಿಂದ ನಮ್ಮ ಕೈಗಾರಿಕೆ ಕಾರ್ಖಾನೆಗಳ ಕಾರ್ಯಕಲಾಪಗಳು ಸರ್ವವಿಧದಲ್ಲಿಯೂ ಉತ್ತಮಗೊಂಡು ಅವುಗಳಿಂದ ಬರುವ ಲಾಭವು ವಿಶಪ್ರಮಾಣವಾಗಿ ಹೆಚ್ಚಾಗಿದೆ ಕಳೆದ ವರ್ಷದ ಲೆಕ್ಕಗಳನ್ನು ನೋಡಿದರೆ ಹೀಗೆ ಹುಟ್ಟುವಳಿಯು ಹೆಚ್ಚಿರುವುದು ಗೊತ್ತಾಗುತ್ತದೆ ಮೂರನೆಯದಾಗಿ, ಮನೆಗಳಲ್ಲೇ ನಡೆಯಬಹುದಾದ ಸಣ್ಣಪುಟ್ಟ ಕೈಗಾರಿಕೆಗಳಿಗೆ ಸಮಸ್ತ ವಿಧಗಳಲ್ಲಿಯೂ ಉತ್ತೇಜನ ಕೊಡಲಾಗಿದೆ 1940—41 ನೆಯ ಸಾಲಿನಲ್ಲಿ ಈ ಕೈಗಾರಿಕೆಗಳಲ್ಲಿ ಮುಖ್ಯ ಮುಖ್ಯವಾದ ಕೆಲವು ಅಭಿವೃದ್ಧಿಗಳು ಕಂಡುಬಂದಿವೆ ಸರ್ಕಾರದವರು ಏರ್ಪಡಿಸಿರುವ ಕೈಗಾರಿಕೆ ಉದ್ಯಮಗಳೂ ಮತ್ತು ಸರ್ಕಾರದ ಹತೋಟಿಯಲ್ಲಿ ನಡೆಯುತ್ತಿರುವ ಕೈಗಾರಿಕೆ ಉದ್ಯಮಗಳೂ ಈಗಿನ ಅವಶ್ಯಕತೆಗಳಿಗೆ ತಕ್ಕ ಹಾಗೆ ಹೊಂದಿಕೊಂಡು ಉತ್ತಮ ರೀತಿಯಲ್ಲಿ ಕೆಲಸಮಾಡುತ್ತಿವೆ ಅಲ್ಲದೆ ಯುದ್ಧದ ದೆಸೆಯಿಂದ ಉಂಟಾಗಿರುವ ಸಮಸ್ಯೆಗಳನ್ನೂ ಕಷ್ಟಗಳನ್ನೂ ಎದುರಿಸಿ ಬಗೆಹರಿಸಿಕೊಂಡೂ ಅವು ಹೊಂದಿಕೆಯಿಂದ ಕೆಲಸಮಾಡುತ್ತಿವೆ. ಅಂತಹ ಮೇಲ್ಮಟ್ಟದ ರೀತಿಯಲ್ಲಿ ಅವುಗಳಿಂದ ಚೆನ್ನಾಗಿ ಕೆಲಸ ನಡೆಯುತ್ತಿದೆ

ವಿಮಾನಗಳನ್ನು ಸಿದ್ಧಪಡಿಸುವುದಕ್ಕಾಗಿ "ಹಿಂದೂಸ್ಥಾನ ಏರ್ ಕ್ರಾಫ್ಟ್ ಕಂಪೆನಿ" ಎಂಬ ಹೆಸರಿನ ಕಂಪೆನಿಯು ಏರ್ಪಟ್ಟಿರುವುದು ಸರಿಯಷ್ಟೆ. ಅದು ಏರ್ಪಟ್ಟ ಆರು ತಿಂಗಳೊಳಗಾಗಿ ಗೊತ್ತುಮಾಡಲಾದ ಮೊದಲನೆಯ ವಿಮಾನದ ಜೋಡಣೆಯಾಗಿ ಸಿದ್ಧವಾಯಿತು. ಅದು ಸರ್ವವಿಧಗಳಲ್ಲಿಯೂ ಅಂತರಿಕ್ಷಗಮನಕ್ಕೆ ಅರ್ಹವಾಗಿದ್ದಂತೆ ಕಂಡುಬಂದು, ಕಂಪೆನಿಯವರಿಗೆ ತೃಪ್ತಿಯುಂಟಾಯಿತು ಕಟ್ಟಡದ ಕೆಲಸಗಳೆಲ್ಲ ಪೂರೈಸುತ್ತ ಬಂದು, ಕಂಪೆನಿಯ ಕಾರ್ಯಕಲಾಪಗಳು ಹದಕ್ಕೆ ಬಂದರೆ ಕಾರ್ಖಾನೆಯಲ್ಲಿ ಸಿದ್ಧವಾಗುವ ವಿಮಾನಗಳೆಲ್ಲ ಇನ್ನು ಮುಂದೆ ದೇಶರಕ್ಷಣೆಗಾಗಿ ಒದಗುತ್ತವೆ ಪೊಟ್ಯಾಸಿಯಂ ಕ್ಲೋರೇಟ್ ಲವಣವೂ ಸಹ ಯುದ್ಧದ ಸಂಬಂಧವಾಗಿ ಅತ್ಯಾವಶ್ಯಕವಾಗಿ ಬೇಕಾದ ವಸ್ತು. ಅದನ್ನು ತಯಾರಿಸುವುದಕ್ಕಾಗಿ ಒಂದು ಹೊಸ ಕಾರ್ಖಾನೆಯು ಏರ್ಪಟ್ಟಿದೆ. ಇದೂ ಯುದ್ಧಸಂಬಂಧವಾದ ಕಾರ್ಯಗಳಲ್ಲೊಂದು

ಈ ಮಧ್ಯೆ ಇತರ ಕಾರ್ಖಾನೆಗಳ ವಸ್ತು ತಯಾರಿಯನ್ನೂ ಆದಷ್ಟುಮಟ್ಟಿಗೆ ಹೆಚ್ಚಿಸಿ ಪ್ರಯೋಜನಹೊಂದುತ್ತಿದ್ದೇವೆ ಕಬ್ಬಿಣಕ್ಕೂ ಉಕ್ಕಿಗೂ ಸಂಬಂಧಪಟ್ಟಂತೆ ಹೊಸದಾಗಿ ಏರ್ಪಟ್ಟಿರುವ ಸರಬರಾಯಿ ವ್ಯವಸ್ಥೆಯು 1941 ನೆಯ ಇಸವಿ ಸೆಪ್ಟಂಬರು ತಿಂಗಳು 1 ನೆಯ ತಾರೀಖಿನಿಂದ ಜಾರಿಗೆ ಬಂದಿದೆಯಷ್ಟೆ ಭದ್ರಾವತಿಯ ಕಾರ್ಖಾನೆಯಲ್ಲಿ ತಯಾರಾಗುವಷ್ಟು ಸಾಮಾನುಗಳೂ ಇಂಡಿಯಾ ಸರ್ಕಾರದವರಿಗೆ ಮಾರಾಟವಾಗಿ ಹೊರಟುಹೋಗಬೇಕಾಗುತ್ತದೆ ಮುಖ್ಯವಾಗಿ ಯುದ್ಧಸಂಬಂಧದ ವಸ್ತುಗಳನ್ನು ತಯಾರಿಸುವ ಉದ್ದೇಶದಿಂದಲೇ ಈ ಕಾರ್ಖಾನೆಯ ಕಾರ್ಯಕಲಾಪಗಳನ್ನು ಹೆಚ್ಚಿಸಲಾಗಿದೆ ಉಕ್ಕನ್ನು ತಯಾರಿಸುವುದಕ್ಕಾಗಿ ಮತ್ತೊಂದು ("ಓಪನ್ ಹಾರ್ತ್ ಫರ್ನೆಸ್") ಕುಲುಮೆಯ ಯಂತ್ರದ ಜೋಡಣೆಯು ನಡೆಯುತ್ತಿದೆ ಬೇಲುಪಟ್ಟಿಗಳನ್ನು ತಯಾರಿಸುವ ಯಂತ್ರವನ್ನು 18 ಲಕ್ಷ ರೂಪಾಯಿಗಳ ಬೆಲೆಗೆ ತರಿಸಿಕೊಳ್ಳಲು ವಿದೇಶಕ್ಕೆ ಬರೆದಿದ್ದೇವೆ ಚಿಕ್ಕದೊಂದು ವಿದ್ಯುಚ್ಛಕ್ತಿಯ ಕುಲುಮೆಯಂತ್ರವು ಈಗಾಗಲೇ ಜೋಡಣೆಯಾಗಿ ಕೆಲಸಮಾಡುತ್ತಿದೆ. "ಫೆರೋಕ್ರೋಂ" ಮತ್ತು "ಫೆರೋಸಿಲಿಕಾನ್" ಎಂಬ ವಸ್ತುಗಳನ್ನು ತಯಾರಿಸುವ ಕೆಲವು ಕುಲುಮೆ ಯಂತ್ರಗಳು ಇಷ್ಟರಲ್ಲೇ ಹೊರಗಿನಿಂದ ಬರುವ ನಿರೀಕ್ಷೆಯಿದೆ ಕೆಲವು ರಸಾಯನ ವಸ್ತುಗಳ ತಯಾರಿಗಾಗಿ ಏರ್ಪಟ್ಟಿರುವ "ಮೈಸೂರು ಕೆಮಿಕಲ್ಸ್ ಅಂಡ್ ಫರ್ಟಿಲೈಜರ್ಸ್ ಲಿಮಿಟೆಡ್" ಕಂಪೆನಿಯ ಕಾರ್ಖಾನೆಯವರು ಭಾರಿ ಪರಿಮಾಣದಲ್ಲಿ "ಅಮೋನಿಯಂ ಸಲ್ಫೇಟ್" ಲವಣವನ್ನೂ ಮತ್ತು ಗಂಧಕ ದ್ರಾವಕವನ್ನೂ ಎಂದಿನಂತೆಯೇ ತಯಾರಿಸಿ ಒದಗಿಸುತ್ತಿದ್ದಾರೆ. 1940—41 ನೆಯ ಸಾಲಿನಲ್ಲಿ ಈ ಕಾರ್ಖಾನೆಯವರು 5,444 ಟನ್ನುಗಳ ತೂಕದ ಗಂಧಕ ದ್ರಾವಕವನ್ನೂ ಮತ್ತು 5582 ಟನ್ನುಗಳ ತೂಕದ ಅಮೋನಿಯಂ ಸಲ್ಫೇಟ್ ಲವಣವನ್ನೂ ತಯಾರಿಸಿದರು. ಸರ್ಕಾರದ ವಿದ್ಯುಚ್ಛಕ್ತಿ ಕಾರ್ಖಾನೆಯವರು (ಎಂದರೆ, ಗವರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿಯವರು) ವಿದ್ಯುಚ್ಛಕ್ತಿಯ ಆವೇಗವನ್ನು ರೂಪಾಂತರಗೊಳಿಸುವ "ಟ್ರಾನ್ಸ್ಫಾರ್ಮರು"ಗಳನ್ನು ತಯಾರಿಸಿ ಒದಗಿಸಿದ್ದಾರೆ, ಅವುಗಳ ಬೆಲೆಯು 1.4 ಲಕ್ಷ ರೂಪಾಯಿಗಳೆಂದು ಅಂದಾಜಾಗಿದೆ ಅಷ್ಟೇ ಅಲ್ಲ, ಈ ಕಾರ್ಖಾನೆಯವರು ಅನೇಕ ಅಳತೆಯ ಉಪಕರಣಗಳನ್ನು (ಎಂದರೆ "ಡಂಪಿ ಲೆವಲ್," "ಪ್ರಿಸ್ಮ್ಯಾಟಿಕ್ ಕಂಪಾಸ್," "ಲೆವೆಲಿಂಗ್ ಸ್ಟೇವ್ಸ್" ಮುಂತಾದ ಉಪಕರಣಗಳನ್ನು) ಭಾರಿ ಪ್ರಮಾಣದಲ್ಲಿ ತಯಾರಿಸಿ ಒದಗಿಸುತ್ತಿದ್ದಾರೆ ಈ ಕಾರ್ಖಾನೆಯಲ್ಲಿ ವಿದ್ಯುಚ್ಛಕ್ತಿಯ ಸಾಮಾನುಗಳೂ (ಎಂದರೆ, ಮೋಟಾರುಗಳ ಸಂಬಂಧದಲ್ಲಿ ಬೇಕಾಗುವ ಸ್ಟಾರ್ಟರುಗಳು, "ಫ್ಯೂಸ್ ಬಾಡಿ"ಗಳು, "ರಿಯೋಸ್ಟೇಟು"ಗಳು), ಕೈಗಾರಿಕೆಗಳಿಗೆ ಉಪಯೋಗವಾಗುವ "ಪ್ರೆಸ್ಡ್ ಮೆಟಲ್" ಸಾಮಾನುಗಳು ಮುಂತಾದವೂ, ಬೀದಿಗಳ ವಿದ್ಯುಚ್ಛಕ್ತಿ ದೀಪಗಳ ಜೋಡಣೆಗೆ ಬೇಕಾದ "ಲೈಟ್ ಷೇಡು"ಗಳು ಮೊದಲಾದ ಸಾಮಾನುಗಳೂ ಸಹ ತಯಾರಾಗುತ್ತಿವೆ. ಮೈಸೂರಿನ ರೇಷ್ಮೆ ನೆಯ್ಗೆ ಕಾರ್ಖಾನೆಯವರೂ, ಚನ್ನಪಟ್ಟಣದ ಜೂಟು ರೇಷ್ಮೆ ಕಾರ್ಖಾನೆಯವರೂ, "ಪ್ಯಾರಾಷೂಟ್" ತಯಾರಿಗೆ ಬೇಕಾದ ರೇಷ್ಮೆ ಬಟ್ಟೆಗಳನ್ನೂ ನಿರ್ದಿಷ್ಟವಾದ ಅಳತೆಗಳ ಮತ್ತು ಗಾತ್ರಗಳ ರೇಷ್ಮೆ ಹಗ್ಗಗಳು ಮತ್ತು ಹುರಿಗಳನ್ನೂ ರಚಿಸಿ, ಭಾರಿ ಪ್ರಮಾಣದಲ್ಲಿ ಒದಗಿಸುತ್ತಿದ್ದಾರೆ ಸರ್ಕಾರದ ಪಿಂಗಾಣಿ ಕಾರ್ಖಾನೆಯವರು (ಎಂದರೆ "ಗವರ್ನಮೆಂಟ್ ಪೋರ್ಸಲೇನ್ ಫ್ಯಾಕ್ಟರಿ" ಯವರು) ಯುದ್ಧೋದ್ಯಮಗಳಿಗೆ ಬೇಕಾದ ಪಿಂಗಾಣಿ ಸಾಮಗ್ರಿಗಳನ್ನು ಹೆಚ್ಚು ಪ್ರಮಾಣದಲ್ಲಿ ಒದಗಿಸುವ ಕೆಲಸವನ್ನು ಕೈಕೊಂಡಿದ್ದಾರೆ ಅಲ್ಲದೆ, ಪಿಂಗಾಣಿ ಕಾರ್ಖಾನೆಯವರು ಇಂಡಿಯಾ ಸರ್ಕಾರದ ಟೆಲಿಗ್ರಾಫ್ ಇಲಾಖೆಗೂ ಮತ್ತು ಯುದ್ಧದ ಸರಬರಾಯಿ ಇಲಾಖೆಗೂ "ಇನ್ಸುಲೇಟರು"ಗಳನ್ನು ಒದಗಿಸುತ್ತಿದ್ದಾರೆ. ದ್ರಾವಕಗಳ ಸೋಂಕಿನಿಂದ ಯಾವ ಪರಿಣಾಮವನ್ನೂ ಹೊಂದದೆ ತಡೆಯುವ ಗಟ್ಟಿ ಮಣ್ಣಿನ ಜಾಡಿಗಳು ಮುಂತಾದವುಗಳಿಗೆ ಸಿಡಿಮದ್ದು ಬಾಂಬು ಮುಂತಾದ ಯುದ್ಧಸಾಮಗ್ರಿಗಳನ್ನು ತಯಾರಿಸುವ ಕಾರ್ಖಾನೆಯಲ್ಲಿ ಹೆಚ್ಚು ಗಿರಾಕಿಯುಂಟು. ಉದಾಹರಣೆ "ಸ್ಟೋನ್ವೇರ್ ಪೈಪ್ಸ್ ಅಂಡ್ ಪಾಟರೀಸ್' ಕಂಪೆನಿಯವರು ಅವುಗಳನ್ನು ತಯಾರಿಸಿ ಒದಗಿಸುವ ಕೆಲಸವನ್ನು ಮಾಡುತ್ತಿದ್ದಾರೆ

ಯುದ್ಧೋದ್ಯಮಗಳಿಗೆ ಬೇಕಾಗುವ ಸಾಮಗ್ರಿಗಳನ್ನು ಒದಗಿಸುವ ಕೆಲಸವನ್ನು ಸರ್ಕಾರಿ ಕಾರ್ಖಾನೆಗಳು ಮಾತ್ರವೇ ಮಾಡುತ್ತಿಲ್ಲ. ಸಾಧ್ಯವಿರುವ ಸಂದರ್ಭಗಳಲ್ಲೆಲ್ಲಾ ಖಾಸಗಿ ವ್ಯಾಪಾರ ಮಂಡಲಿಗಳಿಂದಲೂ, ಸಣ್ಣ ಸಣ್ಣ ಕೈಗಾರಿಕೆಯವರಿಂದಲೂ ಸಹ ಸಾಮಾನುಗಳು ಒದಗುವಂತೆ, ಸಾಮಾನುಗಳಿಗಾಗಿ ಇತರರಿಂದ ಬಂದ ದರಖಾಸ್ತುಗಳನ್ನು ಅವರ ಕಡೆಗೂ ಸಾಧ್ಯವಾದ ಮಟ್ಟಿಗೆ ಕಳುಹಿಸಲಾಗುತ್ತಿದೆ ಉದಾಹರಣೆಗಾಗಿ, 18,000 ರೂಪಾಯಿ ಬೆಲೆಬಾಳುವ ಕೈಮಗ್ಗಗಳ ನೇಯ್ಗೆಯ ಕಂಬಳಿಗಳನ್ನೂ ಮತ್ತು 50,000 ರೂಪಾಯಿ ಬೆಲೆಬಾಳುವ ತೆಂಗಿನಚಿಪ್ಪುಗಳ ಇದ್ದಿಲನ್ನೂ ಖಾಸಗಿ ತಯಾರಿಯ ಮೂಲಕ ಒದಗಿಸುವ ಏರ್ಪಾಡನ್ನು ಕೈಗಾರಿಕೆಗಳ ಮತ್ತು ವಾಣಿಜ್ಯದ ಇಲಾಖೆಯವರು ಮಾಡಿದ್ದಾರೆ ಯುದ್ಧಕ್ಕಾಗಿ ಸಾಮಾನುಗಳನ್ನು ತರಿಸಿಕೊಳ್ಳುವ ವ್ಯವಸ್ಥೆಗಳಿಗೂ, ಅವುಗಳನ್ನು ತಯಾರಿಸುವ ಖಾಸಗಿ ಜನರಿಗೂ ನಿಕಟಸಂಬಂಧವಿರುವಂತೆ ಮಾಡುವ ಉದ್ದೇಶದಿಂದಲೂ, ಇದಕ್ಕೆ ತಕ್ಕಂತೆ ಅವಶ್ಯಕವಾದ ಹೊಂದಾಣಿಕೆಗಳನ್ನುಂಟುಮಾಡುವ ಉದ್ದೇಶದಿಂದಲೂ, ಸರ್ಕಾರದವರು ಈಗ ಒಬ್ಬರು ಇಂಡಸ್ಟ್ರಿಯಲ್ ಪ್ಲಾನಿಂಗ್ ಡೈರೆಕ್ಟರವರನ್ನು ನೇಮಕಮಾಡಿದ್ದಾರೆ ಮಹಾಜನರಲ್ಲಿ ಇಂಡಿಯಾ ಸರ್ಕಾರದ ಸರಬರಾಯಿ ಇಲಾಖೆಯವರಿಗೆ ಬೇಕಾಗುವ ಸಾಮಾನುಗಳನ್ನು ಒದಗಿಸುವ ಇಷ್ಟವಿರತಕ್ಕವರಿಗೆ ಸಲಹೆಗಳನ್ನು ಕೊಟ್ಟು ಸಹಾಯಮಾಡುವ ವಿಶೇಷ ಬಗೆಯ ಜವಾಬ್ದಾರಿಯನ್ನು ಅವರಿಗೆ ವಹಿಸಲಾಗಿದೆ.

ರೇಷ್ಮೆ ಬಟ್ಟೆಗಳಿಗೆ ಗಿರಾಕಿ ಹೆಚ್ಚುತ್ತಿದೆ. ಗಿರಾಕಿಗೆ ತಕ್ಕಂತೆ ಬಟ್ಟೆಗಳನ್ನು ಒದಗಿಸಲು ರೇಷ್ಮೆ ಬಟ್ಟೆಗಳ ನೇಯ್ಗೆಯ ಕಾರ್ಖಾನೆಯನ್ನು (ಎಂದರೆ, ಸಿಲ್ಕ್ ವೀವಿಂಗ್ ಫ್ಯಾಕ್ಟರಿಯನ್ನು) ವಿಸ್ತಾರಗೊಳಿಸುವ ಏರ್ಪಾಡು ಈಚೆಗೆ ಮಂಜೂರಾಗಿದೆ. ರೇಷ್ಮೆ ನೂಲು ಸುತ್ತುವ ಮತ್ತು ಹುರಿಮಾಡುವ ಹೆಚ್ಚಿಗೆ ಯಂತ್ರಗಳನ್ನು ಜೋಡಿಸಲಾಯಿತು. ಅಲ್ಲದೆ 33 ಮಗ್ಗಗಳನ್ನೂ ಕೊಂಡುಕೊಳ್ಳಲಾಯಿತು. ಇವೂ, ಇವುಗಳ ಜೊತೆಗೆ ಅವಶ್ಯವಾದ ಪೂರ್ವಸಿದ್ಧತೆಯ ಯಂತ್ರಗಳೂ ಸೇರಿ, ಕಾರ್ಖಾನೆಯಲ್ಲಿ ತಯಾರಾಗುವ ಸರಕುಗಳ ಪ್ರಮಾಣವು ಇನ್ನು ಮುಂದೆ ಇದುವರೆಗಿದ್ದುದರ ಎರಡರಷ್ಟಕ್ಕಿಂತಲೂ ಹೆಚ್ಚಾಗುವ ಮಟ್ಟಿಗೆ ಅಧಿಕವಾಗುತ್ತದೆ. ಮೈಸೂರು ಸಂಸ್ಥಾನದ "ಸಿಲ್ಕ್ ಫಿಲೇಚರ್ಸ್" ಕಂಪೆನಿಯವರು ತಿರುಮಕೂಡಲು ನರಸೀಪುರದಲ್ಲಿಯೂ ಮತ್ತು ಶಿಡ್ಲಘಟ್ಟದಲ್ಲಿಯೂ ಸಹ, ರೇಷ್ಮೆ ನೂಲು ತೆಗೆಯುವ ತಮ್ಮ ಕಾರ್ಯಕಲಾಪಗಳನ್ನು ಈಚೆಗೆ ಹೆಚ್ಚುಮಾಡಿದ್ದಾರೆ. ಚನ್ನಪಟ್ಟಣದಲ್ಲಿರುವ ಜೂಟು ರೇಷ್ಮೆ ಕಾರ್ಖಾನೆಯವರು 1940-41 ನೆಯ ಸಾಲಿನಲ್ಲಿ ತಮ್ಮಲ್ಲಿ ತಯಾರಾಗುವ ಸರಕುಗಳ ಪ್ರಮಾಣವನ್ನು ಹೆಚ್ಚಿಸಿದರು

ಹೊರದೇಶಗಳಿಂದ ಬರುವಂತೆ ಈಗ ಸಾಮಾನುಗಳು ಬಾರದ ಹಾಗೆ ಅಡ್ಡಿಯುಂಟಾಗಿದೆ. ಅದಕಾರಣ, ಔಷಧಿಗಳ ಮತ್ತು ಔಷಧಗಳ ದಾಸ್ತಾನುಗಳು ಕಡಿಮೆಯಿದ್ದು, ದಿನ ದಿನಕ್ಕೂ ಕೊರತೆಯು ಹೆಚ್ಚುತ್ತಿದೆ. ಈ ಕೊರತೆಯನ್ನು ಕಡಿಮೆ ಮಾಡುವುದಕ್ಕಾಗಿ ಮತ್ತು ತಯಾರಿಯ ಮತ್ತು ಪರೀಕ್ಷೆಯ ಪ್ರಯೋಗಶಾಲೆಯವರು ("ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೆಟರಿ"ಯವರು) ತಮ್ಮಿಂದ ಸಾಧ್ಯವಿದ್ದ ಮಟ್ಟಿಗೂ ಪ್ರಯತ್ನಿಸಿ ನಾನಾ ವಸ್ತುಗಳನ್ನೂ ತಯಾರಿಸುತ್ತಿದ್ದಾರೆ. ಈ ಪ್ರಯೋಗಶಾಲೆಯಲ್ಲಿ ತಯಾರಾದ ವಸ್ತುಗಳ ಮಾರಾಟದಿಂದ ಕಳೆದ ವರ್ಷ 2,32,1[illegible] ರೂಪಾಯಿಗಳು ಬಂದಿವೆ. ರೋಗಿಗಳಿಗೆ ಕುಡಿಸುವುದಕ್ಕಾಗಿಯೂ, ಮಾಂಸಖಂಡದೊಳಕ್ಕೆ "ಇಂಜಕ್ಷನ್" ಕೊಡುವ ಸೂಜಿಚಿಕಿತ್ಸೆಗಾಗಿಯೂ ಎರಡು ವಿಧಗಳ ಪಿತ್ತಕೋಶ ಸಾರವನ್ನು ("ಲಿವರ್ ಎಕ್ಸ್‌ಟ್ರಾಕ್ಟ್ಸ್") ತಯಾರಿಸುವುದೂ, ಅಸಿಟೇಟ್ ಲವಣಗಳನ್ನೂ ಸಿಟ್ರೇಟ್ ಲವಣಗಳನ್ನು ತಯಾರಿಸುವುದೊಂದು; ಇನ್ನೆರಡೂ ಈ ಪ್ರಯೋಗಶಾಲೆಯವರು ಹಿಡಿದಿರುವ ವಸ್ತುರಚನೆಯ ಎರಡು ಹೊಸ ವಿಧಾನಗಳು.

ಬೆಂಗಳೂರಿನ ಕಾರ್ಖಾನೆಯಲ್ಲಿ ಕಟ್ಟುತ್ತಿರುವ ವಿದ್ಯುಚ್ಛಕ್ತಿಯ ಆವಿ ಯಂತ್ರದ ಕೆಲಸವು ಪೂರೈಸುತ್ತ ಬಂದಿದೆ. ಇದರ ಜೊತೆಗೆ ಒಂದು ಕಲ್ಲಿದ್ದಲಿನ ಅನಿಲ ಯಂತ್ರವನ್ನೂ ಸೇರಿಸಿದರೆ, ಆ ಕಾರ್ಖಾನೆಯಲ್ಲಿ ವರ್ಷಕ್ಕೆ ಒಂದು ಸಾವಿರ ಟನ್ನುಗಳಷ್ಟು ಸಾಮಾನುಗಳು ತಯಾರಾಗುತ್ತವೆ. ವಿದ್ಯುಚ್ಛಕ್ತಿ ಕಾರ್ಖಾನೆಯಲ್ಲಿ ತಯಾರಾದ ವಸ್ತುಗಳ ಮಾರಾಟದಿಂದ 4,7[illegible] ರೂಪಾಯಿಗಳು ಬಂದವು. ಚಾಲ್ತಿ ಸಾಲಿನಲ್ಲಿ ಈ ಕಾರ್ಖಾನೆಯಿಂದ ಲಾಭದ ನಿರೀಕ್ಷೆಯಿದೆ. ಈ ಕಾರ್ಖಾನೆಯಲ್ಲಿ ಲಾಭಬರುವುದು ಇದೇ ಮೊಟ್ಟಮೊದಲು. ಹಾಸನದಲ್ಲಿ ಏರ್ಪಟ್ಟಿರುವ ಮೈಸೂರು ಸಂಸ್ಥಾನದ ಹತ್ಯಾರುಗಳ ಕಾರ್ಖಾನೆಯು ಬನಾವಣೆ ಹೊಂದುತ್ತಿದೆ. ಸಂಸ್ಥಾನದಲ್ಲಿ ಕಾಫಿಬೀಜಗಳನ್ನು ಹದಗೊಳಿಸುವ ಕಾರ್ಖಾನೆಯು (ಮೈಸೂರು ಕಾಫೀ ಕ್ಯೂರಿಂಗ್ ವರ್ಕ್ಸ್) ಬಹಳ ಅಭಿವೃದ್ಧಿಯಾಗಿದೆ. 1939-40 ನೆಯ ಸಾಲಿನಲ್ಲಿ ಈ ಕಾರ್ಖಾನೆಯಲ್ಲಿ 850 ಟನ್ನುಗಳಷ್ಟು ಕಾಫೀಬೀಜವನ್ನು ಹದಗೊಳಿಸಲಾಗಿದ್ದಿತು. ಈ ಕಾರ್ಖಾನೆಗೆ ಸೇರಿದಂತೆ ಮೂಳೆಗಳನ್ನು ಪುಡಿಮಾಡಿ ಹಿಟ್ಟುಮಾಡುವ ಒಂದು ಕಾರ್ಖಾನೆಯನ್ನು ಸ್ಥಾಪಿಸಿದರೆ ಅನುಕೂಲ. ಅದು ಸಾಧ್ಯವೇ ಎಂಬ ವಿಚಾರವು ಪರಿಶೀಲನೆಯಲ್ಲಿದೆ. ಸರ್ಕಾರದ ಅರಗಿನ ಮತ್ತು ಬಣ್ಣದ ಕಾರ್ಖಾನೆಗೆ 1940-41ನೆಯ ಸಾಲಿನಲ್ಲಿ 60,000 ರೂಪಾಯಿಗಳ ಬೆಲೆ ಬಾಳುವ ಸಾಮಾನುಗಳಿಗೆ ಪರಮಾಸ್ತುಗಳು ಬಂದುವು. ಅಷ್ಟು ಸಾಮಾನುಗಳನ್ನೂ ತಯಾರಿಸಿ ಒದಗಿಸಲಾಯಿತು. ಮುದ್ರಣಕ್ಕಾಗಿ ಉಪಯೋಗಿಸುವ ಮಸಿ, 'ಬುಕಿಂಗ್ ಕಾಂಪೌಂಡ್' ಮತ್ತು ವಿಶೇಷ ರೀತಿಯ ಬಣ್ಣಗಳು—ಇವುಗಳನ್ನೂ ಸಹ ಆ ಕಾರ್ಖಾನೆಯವರು ಅಲ್ಪ ಪರಿಮಾಣಗಳಲ್ಲಿ ತಯಾರಿಸಿದರು. ಸಾಬೂನು ಕಾರ್ಖಾನೆಯಲ್ಲಿ ತಯಾರಾದ ಸಾಬೂನುಗಳೇ ಮುಂತಾದ ವಸ್ತುಗಳ ಮಾರಾಟವು ಹೆಚ್ಚುತ್ತಲೇ ಇದೆ. ಆದರಿಂದ ಹೆಚ್ಚು ಲಾಭವು ಬಂದಿತು, 1,35,542 ರೂಪಾಯಿಗಳ ಲಾಭಬಂದಿರುವುದೇ ಇದಕ್ಕೆ ನಿದರ್ಶನ. ಈ ಕಾರ್ಖಾನೆಯಲ್ಲಿ ವಸ್ತುಗಳ ತಯಾರಿಯನ್ನು ಇನ್ನೂ ಹೆಚ್ಚಿಸುವ ವಿಷಯವು ಪರ್ಯಾಲೋಚನೆಯಲ್ಲಿದೆ. ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಗಿರಣಿಯ ಸ್ಥಿತಿಯು ಉತ್ತಮಗೊಂಡಿದೆ ಎಂದು ತಿಳಿಸಲು ನಾನು ವಿಶೇಷವಾಗಿ ಹರ್ಷಿಸುತ್ತೇನೆ. ಈ ಗಿರಣಿಯ ಕೆಲಸಗಳು ಈಗ ತೃಪ್ತಿಕರವಾಗಿಯೂ ಮತ್ತು ಚಾಲ್ತಿ ಸಾಲಿನಲ್ಲಿ ಗಿರಣಿಯ ಕೆಲಸದಿಂದ ಗಣ್ಯವಾದಷ್ಟು ಲಾಭವು ದೊರೆಯಬಹುದೆಂದೂ ಧಾರಾಳವಾಗಿ ಹೇಳಬಹುದು.

ಮೈಸೂರು ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿ ಬಲ್ಬುಗಳನ್ನು ತಯಾರಿಸುವುದಕ್ಕಾಗಿ ಏರ್ಪಟ್ಟಿರುವ ಕಂಪೆನಿಯವರು ಈಗ ಕಡಿಮೆ ಪ್ರಕಾಶದ ಬಲ್ಬುಗಳನ್ನು ತಯಾರಿಸುತ್ತಿದ್ದಾರೆ. ಇನ್ನು ಮುಂದೆ ಬೀದಿಯ ದೀಪಗಳಿಗೆ ಬೇಕಾದ ಬಲ್ಬುಗಳನ್ನೂ, ಹೆಚ್ಚು ಪ್ರಕಾಶದ ಬಲ್ಬುಗಳನ್ನೂ ತಯಾರಿಸುವ ವಿಚಾರವು ಅವರ ಪರ್ಯಾಲೋಚನೆಯಲ್ಲಿದೆ. ಈ ಕಂಪೆನಿಯವರು ಸರ್ಕಾರಕ್ಕೆ ಕೊಡಬೇಕಾಗಿದ್ದ ಸಾಲವನ್ನೆಲ್ಲ ತೀರಿಸಿ ಕೆಲಸ ನಡೆಯಿಸಲು ತಮ್ಮ ಸ್ವಂತ ಬಂಡವಾಳವನ್ನೇ ತಕ್ಕಷ್ಟು ಮಟ್ಟಿಗೆ ಹೊಂದಿಸಿಕೊಂಡಿದ್ದಾರೆ. ಮೈಸೂರು ಸಂಸ್ಥಾನದ ದೀಪದಕಡ್ಡಿ ಕಾರ್ಖಾನೆಯವರೂ ಮತ್ತು ಮೈಸೂರು ಸಂಸ್ಥಾನದ ಕ್ರೋಮ್ ಚರ್ಮದ ತಯಾರಿ ಕಾರ್ಖಾನೆಯವರೂ ತಾವು ತಯಾರಿಸಿದ ವಸ್ತುಗಳಿಗೆ ಗಿರಾಕಿ ದೊರೆಯುವುದು ಕಷ್ಟವೆಂದು ಭಾವಿಸಿದ್ದರು. ಕೇವಲ ತಾತ್ಕಾಲಿಕವಾಗಿದ್ದ ಆ ಸ್ಥಿತಿಯು ಕಳೆದು ಹೋಯಿತು. 1940-41ನೆಯ ಸಾಲಿನಲ್ಲಿ ಭದ್ರಾವತಿ ಕಾಗದದ ಕಾರ್ಖಾನೆಯ ಕೆಲಸವು ತಕ್ಕಮಟ್ಟಿಗೆ ಲಾಭದಾಯಕವಾಗಿ ನಡೆಯಿತು. (ಸಶೇಷ)

ಜರ್ಮನ್ ಪಡೆಯೊಂದರ ನಾಶ

ಕೇಂದ್ರ ರಣರಂಗದಲ್ಲಿ ಜರ್ಮನರನ್ನು ಪ್ರತಿಭಟಿಸಿ ಹಿಂದಕ್ಕಟ್ಟುತ್ತಿರುವ ಮಾ|| ಟಿಮೋಷೆಂಕೋರವರ ಸೈನ್ಯದ ಮೇಲೆ 293 ನೆಯ ನಾಜಿ ಪದಾತಿ ಸೈನ್ಯವು ಎರಗಿಬಿದ್ದು ಮೂರು ದಿವಸಗಳ ಘೋರ ಯುದ್ಧ ಮಾಡಿತು. ಕೊನೆಗೆ ರಷ್ಯನರು ನಾಜಿ ಸೈನ್ಯವನ್ನು ಜಯಿಸಿದರು. ನಾಜಿಗಳ ಕಡೆ 1300 ಜನ ಯೋಧರು ಮೃತರಾದರೆಂದು ಹೇಳಲಾಗಿದೆ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆದಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವುದಲ್ಲದೆ ಬಹುಸುಂದರವಾದ ಬೈಂಡಿಂಗಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನ ಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೮ ರೂಪಾಯಿ.** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ** ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಬಂಧತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೬ ಬೆಲೆ ಒಕ್ಕೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೧—೬
ಸದ್ಯೋ ಪೀಠಾರೋಹಣಮಾಡಿದತಕ್ಷ ಐದು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ಒಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ಒಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ಒಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಉಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಉಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ಒಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಒಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸಲ್ಪಡಲಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲಾಗುವದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂದು ತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಎಲ್ಲಾ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ. ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ ತರ್ಜ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೬ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್.

[21] ಪೋ. ಬಾ. ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಷಟ್ಸ್ಥಲಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಷಟ್ಸ್ಥಲಶಾಸ್ತ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ

ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ಮಹತ್ವದ ಫೋಟೋಗಳಿರುವವು)	೧॥ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಟಿಪ್ಪಣಿಸಹಿತ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji *English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषद् (वीरशैवभाष्य–संस्कृत)	१ रु
पुरुषसूक्तम् (वीरशैवप्राचीनभाष्योपेतम्)	४ आ
नंदिकेश्वरकारिका (संस्कृत)	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಶನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿತ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ. ೮ ಆಣೆ. ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೩ನೇ ಅಕ್ಟೋಬರ್ ೧೯೪೧ [ಸಂಚಿಕೆ ೨೪

|| ಶ್ರೀ ಜಗದ್ಗುರು ವಿಶ್ವಾರಾಧ್ಯೇಭ್ಯೋ ವಿಜಯತೇ ||

ತಪೋನುಷ್ಠಾನವೇ ಧರ್ಮಗುರುಗಳ ಕರ್ತವ್ಯ
ಲೋಕಕಲ್ಯಾಣವೇ ಅನುಷ್ಠಾನದ ರಹಸ್ಯ

ಲೇಖಕ—ಗಂಗಾಧರಶಿವಾಚಾರ್ಯರು, ಮೊರಬ.

ಆಸ್ತಿಕ ಶಿಖಾಮಣಿಗಳೇ !

ತಪೋನುಷ್ಠಾನದ ಸಂಬಂಧವಾದ ವಿಷಯವು ಧರ್ಮಗ್ರಂಥಗಳಲ್ಲಿ ನಾನಾರೀತಿಯಾಗಿ ಪ್ರತಿಪಾದಿಸಲ್ಪಟ್ಟಿದೆ. ಭಗವದ್ವ್ಯಾಸರ ಪುರಾಣಗಳಲ್ಲಿಯಂತೂ ಅದರ ಪ್ರಭಾವವು ಹೆಚ್ಚೆಚ್ಚಿಗೂ ಕಂಡುಬರುತ್ತಿರುವದು. ತಪೋನುಷ್ಠಾನವೇ ಮಹಾತ್ಮರ ಜೀವನವಾಗಿದೆ. ಸಕಲ ಕಲ್ಯಾಣಕ್ಕೆ ಕಾರಣವಾಗಿದೆ. ಜಗದಾಧಾರವಾದ ಧರ್ಮವೃಕ್ಷಕ್ಕೆ ಬೀಜಪ್ರಾಯವಾಗಿದೆ. ಶಿವಾರ್ಥೇ ದೇಹಸಂಶೋಷಸ್ತಪಃ ಕೃಚ್ಛ್ರಾದಿ ನೋ ಮತಂ || ಶಿವನಸೇವೆಗಾಗಿ ಗಂಧದಕೊರಡಿನಂತೆ ಕರ್ಪೂರದ ಖಂಡದಂತೆ ಶರೀರವನ್ನು ನಿರ್ವಂಚನೆಯಿಂದ ಸವೆಸುವುದೇ ನಿಜವಾದ ತಪೋನುಷ್ಠಾನವು. ಚಾಂದ್ರಾಯಣಾದಿವ್ರತಗಳು ತಪವಲ್ಲವೆಂಬುದಾಗಿ ಜಗದ್ಗುರು ರೇಣುಕಭಗವತ್ಪಾದರು ಅಪ್ಪಣೆಕೊಡಿಸಿದ್ದಾರೆ. ತ್ರಿವಿಧ ತಾಪಗಳ ನಿವಾರಣೆಗಾಗಿ ಚತುರಾಶ್ರಮಿಗಳೂ ತಪಸ್ಸನ್ನು ಆಚರಿಸಲೇಬೇಕು. ತಪೋವಿದ್ಯಾ ಚ ವಿಪ್ರಸ್ಯ ನಿಃಶ್ರೇಯಸಕರಂ ಪರಂ | ತಪಸಾ ಕಲ್ಮಷಂ ಹಂತಿ ವಿದ್ಯಯಾಽಮೃತಮಶ್ನುತೇ || ತಪೋನುಷ್ಠಾನದಿಂದ ಪಾಪಪುಂಜವು ನಾಶವಾಗುವದೆಂದು ಮನುಸ್ಮೃತಿಯ ಅಭಿಪ್ರಾಯವಿದೆ. ಪ್ರಸಿದ್ಧಗಳಾದ ಅಣಿಮಾದ್ಯಷ್ಟಸಿದ್ಧಿಗಳಿಗೂ ಧರ್ಮಾರ್ಥಕಾಮಮೋಕ್ಷಾದಿ ಪುರುಷಾರ್ಥಚತುಷ್ಟಯಕ್ಕೂ ತಪವೇ ಮೂಲವಾಗಿದೆ. ಆದುದರಿಂದಲೇ ಬ್ರಹ್ಮಾದಿದೇವತಾಃ ಸರ್ವೇ ಮುನಯೋಽಪಿ ಮುಮುಕ್ಷವಃ | ಕಾಯವಂತೋಽಕುರ್ವಂತಿ ತಪಸ್ಸರ್ವಾರ್ಥಸಾಧಕಂ || ಬ್ರಹ್ಮಾದಿದೇವತೆಗಳೂ ಮೋಕ್ಷಾಕಾಂಕ್ಷಿಗಳಾದ ವ್ಯಾಸಾಗಸ್ತ್ಯ ದಧೀಚಿ ಕಪಿಲ ಭಾರದ್ವಾಜಾದಿ ಮುನಿಗಳೂ ಸಕಲಾರ್ಥ ಸಾಧಕವಾದ ತಪವನ್ನು ಮಾಡುವರೆಂದು ರೇಣುಕಾಗಮದ ಘೋಷಣೆಯಿದೆ. ಮನೋನಿಗ್ರಹವು ತಪೋನುಷ್ಠಾನಕ್ಕೆ ಆಧಾರಸ್ತಂಭವಾಗಿದೆ. ಅದಿಲ್ಲದ ತಪವು ಬೂದಿಯಲ್ಲಿಯ ಹೋಮದಂತೆ ನಿಷ್ಫಲವೇ ಸರಿ. ಫಲವತ್ತಾದ ಬೆಳೆಗೆ ಭೂಮಿಯ ಸ್ವಚ್ಛತೆಯು ಹೇಗೆ ಆವಶ್ಯಕವೋ ಹಾಗೆಯೇ ಸಾತ್ವಿಕ ತಪಸ್ಸಿಗೆ ಮನೋನಿಗ್ರಹವು ಪುಷ್ಟಿದಾಯಕ ಪಥ್ಯವಾಗಿರುವದು. ಖಂಡಿಸದೆ ಕರಣವನು | ದಂಡಿಸದೆ ದೇಹವನು | ಉಂಡುಂಡು ಸ್ವರ್ಗಕ್ಕೆ ಹೋಗಲ್ಕೆ ಅದನೇನು ರಂಡೆಯಾಳುವಳೆ ಸರ್ವಜ್ಞ || ಎಂಬುದಾಗಿ ಸರ್ವಜ್ಞನು ಈ ವಿಷಯವನ್ನೇ ಪುಷ್ಟೀಕರಿಸಿದ್ದಾನೆ. ಭೀಕರವಾದ ಸಮರದಲ್ಲಿ ಪರ್ವತದಂತೆ ಅಚಲವಾಗಿ ನಿಂತುಕೊಂಡು ಸಾವಿರಾರು ವೀರರನ್ನು ತರಿದಿರುವ ವೀರನಿಗಿಂತಲೂ ಮನೋವಿಜಯವನ್ನು ಸಂಪಾದಿಸಿದ ಮನುಷ್ಯನ ಯೋಗ್ಯತೆಯು ಎಷ್ಟೋಪಟ್ಟು ಹೆಚ್ಚಿನದಾಗಿದೆ. " ಗತಿಯಿಂ ಗಾಡಿಯ ನೋಟನಿಂ ಗಮಕದಿಂ ಗಾಂಭೀರ್ಯದಿಂ ನೋಟದಾ | ಯತದಿಂ ಸನ್ಮೃದುವಾಕ್ಯದಿಂ ಸರಸದಿಂ ಸಂಗೀತ ಸಾಹಿತ್ಯದಿಂ || ಪ್ರತಿಪಾದಿಲ್ಲದ ರೂಪಿನಿಂ ಪ್ರವೃತ್ತಿಯಿಂದ್ಯೆತಪ್ಪದಿದ್ದಾಕ್ಷಿಗಾ | ಯತಿಯುಂ ತಾನುರೆ ಸೋಲುವಂ ಎಂಬ " ನೀತಿಯಂತೆ ಪರ್ಣಜಲಾದಿಗಳನ್ನು ಸೇವಿಸಿ ಘೋರತರ ತಪವನ್ನು ಮಾಡಿರುವ ವಿಶ್ವಾಮಿತ್ರಪರಾಶರಾದಿಋಷಿಗಳು ನಾರಿಯರ ಸುಂದರವಸ್ತ್ರ ಮುಖಕಮಲವನ್ನು ಕಂಡು ಮೋಹಪರವಶರಾಗಿದ್ದಾರೆ. ತದಾಪಿ ಸರಿಯಾದ ಆಹಾರ ವಿಹಾರಗಳಿಂದಲೂ ಯೋಗಬಾಹುಳ್ಯದಿಂದಲೂ ಮನೋವಿಜಯವು ಸಾಧ್ಯವಾದ ಮಾತಾಗಿದೆ. ಇನ್ನು ಕೆಲವು ಮಂದಮತಿಗಳ ಆಕ್ಷೇಪ ಜಪವಮಾಡಿದಡೇನು ? ತಪವಮಾಡಿದಡೇನು ? ಏನುಮಾಡಿದಡೇನು ? ಆತ್ಮಶುದ್ಧಿಯಿಲ್ಲದನಕ ಎಂಥ ಅವಿಚಾರಲಹರಿಯಿದು ? ಇದರಲ್ಲಿ ಸತ್ವದ ಮಿಣುಕು ಎಷ್ಟಿದೆಯೆಂಬುವನ್ನು ಕೊಂಚ ವಿಚಾರಿಸುವಾ! ಯಾಗಾಸ್ತಪಾಂಸಿ ಮಂತ್ರಾಣಾಂ ಜಪಶ್ಚಿಂತಾಪ್ರಬೋಧನಂ | ಪ್ರಸಾದಾರ್ಥಂ ಮಹೇಶಸ್ಯ ಕೀರ್ತಿತಾನಿ ನ ಸಂಶಯಃ || ಯಜ್ಞಗಳೂ ಮಂತ್ರಜಪವೂ ಆತ್ಮಶುದ್ಧಿಗೂ ಪರಮಾತ್ಮನ ಪ್ರೀತಿಗೂ ಸಾಧನಗಳಾಗಿವೆಯೆಂದು ಧರ್ಮಗ್ರಂಥಗಳ ಉದ್ಘೋಷವಿದೆ. ಆತ್ಮಶುದ್ಧಿಯಂಥ ಮಹತ್ಫಲವು ಸುಮ್ಮನೆ ಬರಲು ಬೀದಿಯ ಕಸವೇ ? ಮಂತ್ರಜಪವು ಜೀಡವಾದಲ್ಲಿ ಆವರಣಗಳಿಗೆ ಚ್ಯುತಿ ಬರುವದಲ್ಲದೆ ಪ್ರಸಿದ್ಧವಾದ ಮಂತ್ರಯೋಗವು ಕೂಡ ತಿರಸ್ಕೃತವಾಗುವದು. ತಸ್ಮಾನ್ಮೋಕ್ಷಾರ್ಥಿಭಿಸ್ಸರ್ವೈಃ ಜಪ್ಯಃ ಪಂಚಾಕ್ಷರೋ ಮನುಃ | ಪಂಚಾಕ್ಷರಪ್ರಭಾವೇನ ಸರ್ವಕಾಮಾಃ ಸಮಾಹಿತಾಃ || ಎಂಬ ಆಗಮ ವಾಕ್ಯವು ಹೇಳಹೆಸರಿಲ್ಲದೆ ದಿಕ್ಕೆಟ್ಟು ಪಲಾಯನಮಾಡಬೇಕಾಗುವದು. ಪಂಚಾಕ್ಷರ ಮಂತ್ರಪ್ರಭಾವದಿಂದಲೇ ವಿಷ್ಣು ಬ್ರಹ್ಮಾದಿದೇವತೆಗಳು ಜಗತ್ತಿನ ಉತ್ಪತ್ತಿ ಸ್ಥಿತಿಗಳನ್ನು ಸಂಪಾದಿಸಿದ್ದಾರೆ. ಸಾನಂದ ಮಹರ್ಷಿಯು ನರಕವನ್ನು ಸ್ವರ್ಗವನ್ನಾಗಿಮಾಡಿದನು. ರಾಜಶೇಖರನು ಸಮುದ್ರವನ್ನು ಸಹಜವಾಗಿ ದಾಂಟಿ ಪಂಚಾಕ್ಷರ ಮಹಿಮೆಯನ್ನು ಜಗದಲ್ಲಿ ಬೀರಿದನು. ವೀರಶೈವರಲ್ಲಿ ಶಿವಲಿಂಗಪೂಜೆಯು ಮುಖ್ಯವಾದುದು. ಮಂತ್ರಜಪವಿಲ್ಲದ ಪೂಜೆಯು ಸಾಂಗವಾದ ಪೂಜೆಯೆನಿಸಲಾರದು. ಈ ಮಹನೀಯರು ಮಂತ್ರಜಪವು ಬೇಡವೆಂದು ಹಲುಬುತ್ತಿರುವುದನ್ನು ನೋಡಿದರೆ ಇವರು ಶಿವಪೂಜೆಯನ್ನೇ ಮಾಡುವುದಿಲ್ಲವೆಂದು ತೋರುವುದು. ಇರಲಿ; ಮಂತ್ರಜಪವು ತಪದ ಮುಖ್ಯಾಂಗವಾಗಿದೆ. ತಪೋನುಷ್ಠಾನದ ಸಾಮರ್ಥ್ಯವು ನಮ್ಮ ಪೂರ್ವಜರ ಗ್ರಂಥಗಳಲ್ಲಿ ತುಂಬಿತುಳುಕಾಡಿ ಝರಿಯಂತೆ ಹರಿಯುತ್ತಿರುವುದು. ತಪದಿಂದಲೇ ಮಾರ್ಕಂಡೇಯನು ಚಿರಂಜೀವಿಯಾದನು. ರಾವಣನು ಅಷ್ಟೈಶ್ವರ್ಯಸಂಪನ್ನನಾದನು. ಕ್ಷತ್ರಿಯನಾದ ವಿಶ್ವಾಮಿತ್ರನು ಬ್ರಹ್ಮರ್ಷಿಯಾಗಿ ಪ್ರತಿ ಸೃಷ್ಟಿಯನ್ನೇ ರಚಿಸಿದನು. ಇದಂತೂ ಪುರಾಣಕಾಲದ ಮಾತು. ಹಿಂದೂಧರ್ಮದ ಕಡುವೈರಿಯಾದ ಔರಂಗಜೇಬ್ ಬಾದಶಹನನ್ನು ಕಾಶೀಪೀಠದ ಜಗದ್ಗುರು ಮಲ್ಲಿಕಾರ್ಜುನಸ್ವಾಮಿಗಳು ತಮ್ಮ ತಪೋಮಹಿಮೆಯಿಂದಲೇ ಗಡಗಡನೆ ನಡುಗಿಸಲಿಲ್ಲವೇ ? ರಾಮದಾಸರ ತಪೋಬಲದಿಂದಲೇ ಇತಿಹಾಸಪ್ರಸಿದ್ಧವಾದ ಮಹಾರಾಷ್ಟ್ರರಾಜ್ಯದ ಉದಯವಾಯಿತು. ವೀರಶೈವರ ಆದಿಕವಿಯಾದ ಹರಿಹರನು ಗಿರಿಜಾಕಲ್ಯಾಣ ಕಾವ್ಯದಲ್ಲಿ " ಪುಣ್ಯಂ ಪಣ್ತಾದ ತೆರದೆ ತಾಪಸರಿರ್ಪರ್ " ಈ ಬಗೆಯಾಗಿ ಮುನಿಗಳನ್ನು ಬಣ್ಣಿಸಿ ಮುಂದೆ ಅಂತವರ ಶಾಂತಾಚರಣೆಗೆ ಶಿವತೇಜಃ ಪ್ರತಾಪದಿಂ ದೋರುತೆ ಕ್ರೂರ ಮೃಗಗಳ್ ನಿಜವೈರಭಾವಮಂ ಬಿಟ್ಟಿರ್ಪವೆಂತೆಂದೊಡೆ—

ಪುಲ್ಲೆಯ ಕೋಡಮೇಲೆ ಪುಲಿಗಳ್ ತಲೆಯಿಟ್ಟು ಕುರಂಗಸಂಕುಲಂ|
ಬಲ್ಲಹ ಬಿಲ್ಲಸೋಲೆ ಮೊಗವಿಟ್ಟು ನವಿಲ್ಗಳ ಮೇಲೆ ಭೀತಿ ಕಾ ||
ಸಿಲ್ಲದೆ ಸರ್ಪವೀಥಿ ಪೆಡೆಯಿಟ್ಟು ಗಜಂ ಶಿರವಿಟ್ಟು ಸಿಂಗದೊಳ್ |
ನಿಲ್ಲದೆ ನೋಡುತಿರ್ಪವು ನಗೇಂದ್ರ ಮುನೀಂದ್ರರ ಶಾಂತ
ಮೂರ್ತಿಯಂ ||

ಎಂದು ತಪೋವನ ಹಿಮೆಯನ್ನು ಮನದಣಿಯೆ ಬಣ್ಣಿಸಿದ್ದಾರೆ. ಅಷ್ಟೇಕೆ ಮೊನ್ನೆಮೊನ್ನೆ ಶಿವಯೋಗಿ ಕುಲತಿಲಕರಾದ ಜಗದ್ಗುರು ಸಿದ್ಧಲಿಂಗಮಹಾಸ್ವಾಮಿಗಳು ಬಾರ್ಸಿಯಲ್ಲಿ ಹಾವು ಮುಂಗಲಿಗಳ ಕಲಹವನ್ನು ಬಿಡಿಸಿದುದು ಜಗತ್ಪ್ರಸಿದ್ಧವಾಗಿ ಹೋಗಿದೆ. ಮಹಾತ್ಮರ ಆತ್ಮಶಕ್ತಿದ್ಯೋತಕಗಳಾದ ಮಹಿಮೆಗಳು ಸಾಧಾರಣಜನರಿಗೆ ವಿಪರೀತವಾಗಿ ಕಂಡರೂ ವಿಶುದ್ಧಮತಿಗಳಿಗೆ ಶುದ್ಧವಾಗಿ ತೋರುವಲ್ಲಿ ಯಾವ ಸಂದೇಹವೂ ಇಲ್ಲ. ವಾಚಕವರ್ಗವೇ ಪೂರ್ವದಲ್ಲಿ ನಮ್ಮ ಗುರುಗಳ ತಪೋಭಯದಿಂದಲೇ ರಾಜಮಹಾರಾಜರೇಕೆ ನಿರ್ಜೀವ ವಸ್ತುಗಳೂ ಸಹ ಹೇಳಿದಂತೆ ಕೇಳುತ್ತಿದ್ದವು. ಈಗಿನ ಪ್ರತಿಯೊಂದು ಮಠಗಳೂ ಅವರ ತಪದ ಕುರುಹುಗಳಾಗಿವೆ. ಭಕ್ತರ ಉದ್ಧಾರವೇ ಗುರುಗಳ ತಪದ ಪ್ರಯೋಜನವಾಗಿರಬೇಕು. ಮಾನಮರ್ಯಾದೆಗಳನ್ನು ಬಯಸಿ ಮಾಡುವ ತಪವು ರಾಜಸವಾಗಿದೆ. ಅನ್ಯರ ಕೇಡಿಗೆ ಉಗ್ರವಾಗಿ ಮಾಡಲ್ಪಡುವ ತಪಸ್ಸು ತಾಮಸವು. ತಾರಕ ರಾವಣಾದಿಗಳು ತಾಮಸತಪವಾಚರಿಸಿ ಜಗವನ್ನು ಪೀಡಿಸಿ ಕಡೆಗೆ ಕೇಡಿಗೊಳಗಾದರು. ಲೋಕಹಿತವೇ ಸಾತ್ವಿಕ ತಪಸ್ಸಿನ ಲಕ್ಷಣವೆನಿಸಿದೆ. ಸಾತ್ವಿಕ ತಪದಲ್ಲಿಯೇ ಅಗಾಧವಾದ ಭಗವಚ್ಛಕ್ತಿಯ ಸಮಾವೇಶವಿದೆ. ಕನ್ನಡನಾಡಿನ ಹೆಚ್ಚಳಕ್ಕಾಗಿ ವೈದಿಕಧರ್ಮದ ರಕ್ಷಣೆಗಾಗಿ ತಮ್ಮ ಅಪಾರವಾದ ತಪವನ್ನೇ ಧಾರೆಯೆರೆದು ವಿಜಯನಗರದಂಥ ಭವ್ಯಸಾಮ್ರಾಜ್ಯವನ್ನು ಸಂಸ್ಥಾಪಿಸಿ ಇತಿಹಾಸದಲ್ಲಿ ಅಜರಾಮರಕೀರ್ತಿಯುತರಾದ ವಿದ್ಯಾರಣ್ಯರು ಅನುಷ್ಠಾನದ ಪ್ರಯೋಜನವನ್ನು ನಮ್ಮೆಲ್ಲರಿಗೆ ತೋರ್ಪಡಿಸಿದ್ದಾರೆ. ಧರ್ಮಗುರುಗಳು ಭಕ್ತರ ಸಲುವಾಗಿ ತಪವನ್ನು ವಿಕಾಸಗೊಳಿಸಬೇಕು. ತಪೋಬಲವಿಲ್ಲದ ಗುರುಗಳು ಶೌರ್ಯವಿಲ್ಲದ ವೀರನಂತೆ ಶರಣಾಗತರನ್ನು ಕಾಪಾಡಲಾರರು. ಗುರುವರ್ಗವು ತನ್ನ ಕರ್ತವ್ಯಕರ್ಮವನ್ನು ಬಿಟ್ಟಿದ್ದರಿಂದಲೇ ನಮ್ಮ ಸಮಾಜವು ಅನಧಿಕಾರಿಗಳ ಅಕಾಂಡ ತಾಂಡವಕ್ಕೆ ರಂಗಸ್ಥಲವಾಗಿಬಿಟ್ಟಿದೆ. ಮಠದ ಗೌರವವು ಕೃಷ್ಣಪಕ್ಷದ ಚಂದ್ರನಂತೆ ಕ್ಷಯಿಸುತ್ತಿದೆ. ಇಂದಿನ ವೀರಶೈವ ಸಮಾಜದ ಸ್ಥಿತಿಯು ಪ್ರತಿಯೊಬ್ಬ ಮತಾಭಿಮಾನಿಗೂ ಕಣ್ಣೀರಿನ ಕೋಡಿಯನ್ನು ಹರಿಸದಿರದು. " ಓ ನನ್ನ ನಲ್ಮೆಯ ಗುರುವರ್ಗವೇ ಇನ್ನಾದರೂ ನಿಮಗೆ ಇದರರಿವು ಬರಲೊಲ್ಲದೆ?

ಹಿಂದೊಂದು ಕಾಲದಲ್ಲಿ ಯಾವ ನಿಮ್ಮ ಪ್ರಚಾರತೇಜವು ಇಡೀ ಪ್ರಪಂಚವನ್ನೇ ದಂಗುಬಡಿಸಿತೋ ಅಸಾಧಾರಣವಾದ ಯಶೋದುಂದುಭಿಯನ್ನು ಎಲ್ಲೆಲ್ಲಿಯೂ ಮೊಳಗಿಸಿತೋ ಅದೇ ವಂಶಜರಾದ ನೀವು ಈ ರೀತಿ ಗಾಢಾಂಧಕಾರದಲ್ಲಿ ಮಗ್ನರಾಗುವದು ಯೋಗ್ಯವೇ?" ನಿಮ್ಮ ಉದ್ಧಾರಕ್ಕಾಗಿ ಅವತರಿಸಿದ ವೀರಜ್ಯೋತಿಸ್ವರೂಪರೆನಿಸಿದ ಪಂ|| ಶ್ರೀಕಾಶೀನಾಥಗುರುಮೂರ್ತಿಯ ಉಪದೇಶಾಮೃತವನ್ನು ಪಾನಮಾಡಿ ತಪೋಧನರಾಗಿ ಭಕ್ತೋದ್ಧಾರಕಾರ್ಯದಲ್ಲಿ ಲೀನರಾದರೆ ನಿಮಗಾರು ಸಾಟಿಯು? ನಿಮಗಾರು ಎದುರು? ಇಂಥ ಸದ್ಬುದ್ಧಿಯನ್ನು ಜಗದಾಚಾರ್ಯರೂ ಜಗದೀಶನೂ ನಿಮಗೆ ಶೀಘ್ರವಾಗಿ ಅನುಗ್ರಹಿಸಲಿ

ಸರ್ವೇ ಜನಾಃ ಸುಖಿನೋ ಭವಂತು

ದಸರಾಮಹೋತ್ಸವ ದುಬಲಗುಂಡಿ.

(ನೈಜಾಂ ಸ್ಟೇಟ್)

ಧರ್ಮವೀರ ಶರಣಪ್ಪಅಣ್ಣಾ ಪತ್ತೇಪೂರ ಇವರ ಭವ್ಯ ಮಂದಿರದಲ್ಲಿ ಪ್ರತಿ ವರ್ಷ ಪದ್ಧತಿಯಂತೆ ದಸರಾ ಮಹೋತ್ಸವವು ಒಳ್ಳೇ ವೈಭವದಿಂದ ಸಂಪೇರಿತ ಆಶ್ವಯುಜ ಶು|| ೧೧ ಬುಧವಾರ ದಿವಸ ಸಂಗೀತ ರತ್ನ ಪಂಚಾಕ್ಷರ ಗವಾಯಿಗಳು ಗಂದ್ಗಾರ, ದೊಡ್ಡಪ್ಪ ಬೋರಾಮಣೆಕರ ಸೋಲಾಪೂರ ಮತ್ತು ಗುರುಬಸವಾರ್ಯ ಇವರ ಗಾಯನ ಕಚೇರಿಯು ನೆರವೇರಿತ ಬಳಿಕ ಶ್ರೀಮಾನ್ ಹನುಮಂತರಾವ ಹಾಗರಗೀಕರ ವಕೀಲ ಹೈಕೋರ್ಟ್ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ಸಭೆಯಲ್ಲಿ ಷಡಕ್ಷರದೇವರು 'ದಸರ ವೀರರ" ಸಂಕ್ಷಿಪ್ತ ಚರಿತ್ರವನ್ನು ಓದಿದರ ಶರಣಕವಿಗಳು "ಕಲ್ಯಾಣ ವಾಣಿಯು' ಹೃದಯದ್ರಾವಕ ಪ್ರಯೋಗಗಳನ್ನು ಓದಿ ತೋರಿಸಿದರು ಬಾಲಬೃಹಸ್ಪತಿ ಗಂಗಾಧರ ಶಿವಾಚಾರ್ಯ ಮೊರಬ ಇವರು ದರ್ಮಪರವಾಗಿ ಭಾಷಣ ಮಾಡಿದರು ಕೊನೆಗೆ ಅಧ್ಯಕ್ಷರು ಅಷ್ಟಾವರಣಗಳ ಬಗ್ಗೆ ಒಳ್ಳೆ ಸಮಂಜಸವಾಗಿ ಮಾತನಾಡಿದರು ಅನಂತರ ಶ್ರೀ ಶರಣಪ್ಪನೊರೆಗಳವರಿಗೆ ಜಗದೀಶ್ವರನು ದೀರ್ಘಾಯುಷ್ಯವನ್ನು ಕೊಡಲೆಂದು ಪ್ರಾರ್ಥನೆಯಾಗಿ ಸಭೆಯು ವಿಸರ್ಜಿಸಲ್ಪಟ್ಟಿತು

ಪ್ರತ್ಯಕ್ಷ ದರ್ಶಿ

ಶಾರದಾ ಪೂಜೆ ಸೂಡಿ

ರೋಣ ತಾ|| ಸೂಡಿ ವೈದಿಕ ಪಾಠಶಾಲೆಯಲ್ಲಿ ಈ ಪಾಠಶಾಲಾಧ್ಯಕ್ಷರಾದ ಜುಕ್ತಿ ಹಿರೇಮಠದ ಪಂ|| ಶ್ರೀ ಪಟ್ಟದಸ್ವಾಮಿಗಳವರ ಅಪ್ಪಣೆಯ ಮೇರಗೆ ಮೇಲ್ಕಂಡ ಪೂಜಾಮಹೋತ್ಸವವು ನೆರವೇರಿತು ಆಶ್ವಯುಜ ಶುದ್ಧ ನವಮಿ ದಿವಸ ಉದಯ ಪಂಚಾಚಾರ್ಯರ ಪಂಚವರ್ಣದ ಪತಾಕೆಗಳಿಂದಲಂಕೃತರಾದ ವಟುಗಳು ಸಾಲು ಸಾಲಾಗಿ ನಿಂತು ಶಾರದಾದೇವಿಯ ಗೀತೆಯನ್ನೂ ವೇದ ಪ್ರಾಶಸ್ತ್ಯ ಬೋಧಕ ಗೀತೆಗಳನ್ನೂ ಪಠಿಸಿದರು

ವೇದವೆ ಜಗದಲಿ ಬೆಳಕನು ತೋರ್ಪುದು ।
ವೇದವೆ ಜೀವನಸಾರವಾಗಿಹುದು ||ಪ||

ವೇದವೆ ಪ್ರಿಯಸರ್ವಸ್ವವು ಮನುಜಗೆ ।
ವೇದವೆ ಪ್ರಾಣಾಧಾರವು ನಮಗೆ ।
ವೇದವೆ ಸದ್ವಿದ್ಯೆಯ ದಾತೃವು ತಾಂ ।
ವೇದವೆ ಎಲ್ಲಾ ಜ್ಞಾನಕೆ ಗುರುವು ||೧||

ವೇದವೆ ಧರ್ಮದ ಬುದ್ಧಿಗೆ ಧ್ಯೇಯವು ।
ವೇದವೆ ಧರ್ಮದ ಬುದ್ಧಿಗೆ ಧ್ಯೇಯವು ।
ವೇದವೆ ಮನುಜಗೆ ಮುಕ್ತಿಯನೀವುದು ।
ವೇದವೆ ಮಿಗೆ ಪರಮೇಶನ ಪ್ರೇಮದ ಪಾರಾವಾರವು
ಜಗದೊಳಗೆ ||೨||

ಶ್ರೇಷ್ಠವೆನಿಪುದು ವೀರಶೈವರಿಗೆಲ್ಲ ।
ಆದಿಯ ಆಧಾರವು ಸಜ್ಜನರೇ ।
ವೇದವ ಬಿಟ್ಟರೆ ಮನುಜನು ಜಾಗ್ರತೆ ।
ಶೂದ್ರನಿಗಿಂತಲು ಕಡೆಯಹನು ||೩||

ವೇದವು ಜಗದೊಳು ಬೆಳಗಲಿ ।
ವೇದವಿಹಿತಜೀವನವಿರಲಿ ।
ವೇದದ ಪಾಠನಪಠನವು ನಡೆಯಲಿ ।
ವೇದದ ವಾದವಿವಾದವು ಜರುಗಲಿ ||೪||

ಈದಿನದಿಂದಾವೇದಪ್ರಚಾರವ ।
ವ್ರತವೆಂದು ತಿಳಿಯುತೆ ಪೃಥ್ವಿಯೊಳು ।
ತನುಮನಧನವನ್ನೆರೆಯುತ ಸರಹಿತ ।
ವೀರಶೈವರು ಮಾಡಲಿ ಮುದದಿಂದ ||೫||

ಪೃಥ್ವಿಯ ಜನರನು ಪುಜ್ಜರ ಮಾಡಿ ।
ವೇದದ ಆಜ್ಞೆಯ ಶಿರದಲಿ ಧರಿಸಿ ।
ಈಶನ ಸಂದೇಶದ ಬಲದಿಂದ ।
ಮರಣಕೆ ಎಲ್ಲಾ ಹೆದರದಿರಿ ||೬||

ಸೃಷ್ಟಿಯ ಘೋರಸಮುದ್ರವ ದಾಟುವ ।
ವೇದವ ಜನಕೆಲ್ಲಾ ನೀಗೋಲು ।
ವೇದವನಿದಿರಿಂ ಕೈಬಿಟ್ಟರೆ ನೀವ್ ।
ಪತಿತೆನಿಸುವಿರಿ ಸಜ್ಜನರೇ ||೭||

ವಿಶ್ವದ ನಿತ್ರನ ಕಮಲದ ತೆರದಿ ।
ವೇದವು ದಿನದಿನವಾಲಾ ದಿಸಲಿ ।
ಚಂದ್ರನ ಕಾಂತಿಯ ಪ್ರೀತಿಸುವಂದದಿ ।
ಭಕ್ತಚಕೋರನು ವೇದವನು ||೮||

ವೇದವೆ ಶ್ರೇಷ್ಠವು ವೇದವೆ ಸುಖವು ।
ವೇದವೆ ಎಲ್ಲಾ ಪರಿವಾರಗಳು ।
ವೇದವ ಬಿಟ್ಟರೆ ಸುಖವನುಗಿಲ್ಲಾ ।
ವೇದವ ಬಿಟ್ಟರೆ ಮತಿಯಿಲ್ಲಾ ||೯||

ಈ ಗೀತೆಗಳಿಂದ ಸಂಕೀರ್ತನೆಮಾಡಿದನಂತರ ೧೦ ಘಂಟೆಗೆ ಶಾರದಾದೇವಿಯು ಕಲ್ಪೋಕ್ತ ಪೂಜಾ ಪ್ರಸಾದ ವಿನಿಯೋಗವಾಯಿತು ಬಳಿಕ ಮಧ್ಯಾಹ್ನ ೪ ಘಂಟೆಗೆ ತಳಿರುತೋರಣಗಳಿಂದಲಂಕೃತವಾದ ಸಭಾಮಂಟಪದಲ್ಲಿ ಮ|| ರಾ|| ಪಾಟೀಲ ರಾಮನಗೌಡರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭವಾಯಿತು ವೇದಾಧ್ಯಯನಶೀಲರಾದ ಚಿಕ್ಕ ಚಿಕ್ಕ ಬಾಲಕರು ನಿಯಮಿತಪ್ರಕಾರ ಭಾಷಣ ಮಾಡಿದರು ತರುವಾಯ ಸೋಮರಾವ್ ಮಾಸ್ತರ ಇವರು ಸನಾತನಧರ್ಮದ ವಿಷಯವಾಗಿಯೂ ಪಾಠಶಾಲಾಧ್ಯಾಪಕರಾದ ಹೆಚ್ ಯಂ ಸದಾಶಿವಶಾಸ್ತ್ರಿಗಳು ಶಿಕಾರಿಪುರ ಇವರು ಶಾರದಾಪೂಜೆಯ ವಿಷಯವಾಗಿಯೂ ಭಾಷಣ ಮಾಡಿದರು ಅನಂತರ ಸಭಾಧ್ಯಕ್ಷರು ವೇದ ಪ್ರಾಶಸ್ತ್ಯವನ್ನ ಹೇಳಿ ಈ ವೈದಿಕ ವಿದ್ಯಾಲಯವು ಅಭಿವೃದ್ಧಿಗೆ ಬರಲೆಂದೂ ಈ ನಗರದ ಪ್ರಮುಖರು ಇತೋಪ್ಯತಿಶಯವಾದ ಪ್ರೀತಿಯನ್ನಿಟ್ಟು ಕಾಪಾಡಲೆಂದೂ ಜಗದಾಚಾರ್ಯರನ್ನು ಸ್ಮರಿಸಿ ತಮ್ಮ ಭಾಷಣವನ್ನು ಮುಗಿಸಿದರು ಕೊನೆಗೆ ಜಗದಾಚಾರ್ಯರ ಮತ್ತು ಶಾರದಾದೇವಿಯ ಜಯಘೋಷಗಳೊಡನೆ ಸಭೆಯು ಮುಕ್ತಾಯವಾಯಿತು

ಪಾಠಶಾಲಾ ಸೆಕ್ರೆಟರಿ.

|| ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ||

ಸಿದ್ಧಾಂತಶಿಖಾಮಣಿ ಪ್ರವಚನ

ಶ್ರೀ ಷ|| ಬ್ರ|| ಶಾಂತವೀರ ಶಿವಾಚಾರ್ಯರು ಪಟ್ಟಾಧ್ಯಕ್ಷ ಅರಳಿಮಠ ವಿಜಾಪುರ ಮತ್ತು ಚಿಮ್ಮಲಗಿ ಇವರ ಚಿಮ್ಮಲಗಿ ಮಠದಲ್ಲಿ ವಾರ್ಷಿಕ ಪದ್ಧತಿಯಂತೆ ಈ ವರ್ಷವೂ ಭಾದ್ರಪದ ಬ|| ದ್ವಾದಶಿಯಿಂದ ಆಶ್ವಯುಜ ಶುದ್ಧ ವಿಜಯದಶಮಿಯವರೆಗೂ ಸಿದ್ಧಾಂತಶಿಖಾಮಣಿಯ ಪ್ರವಚನವು ಶ್ರೀ ಷ|| ಬ|| ಗುರುಪಾದಶಿವಾಚಾರ್ಯ ಪಟ್ಟದಸ್ವಾಮಿಗಳು ಹಿರೇಮಠ ಬೀಳಗಿ ಇವರಿಂದ ನಡೆಯಿತು. ಪ್ರವಚನವು ಪ್ರಾರಂಭವಾಗುವ ಮೊದಲು ಸದರಿ ಮಠದಲ್ಲಿ ಸ್ಥಾಪಿತವಾದ ಶ್ರೀಜಗದ್ಗುರು ಪಂಚಾಚಾರ್ಯ ಭಜನ ಸಂಘದವರು ಜಗದಾಚಾರ್ಯರ ಸ್ತೋತ್ರಪದಗಳನ್ನು ಒಳ್ಳೇ ಮನೋಹರವಾಗಿ ಸಂಗೀತ ಮೇಳದೊಡನೆ ಹಾಡುತ್ತಿದ್ದರು. ಬೀಳಗಿ ಸ್ವಾಮಿಗಳವರು ಪ್ರವಚನಕಾಲಕ್ಕೆ ಸಿದ್ಧಾಂತಶಿಖಾಮಣಿಯಲ್ಲಿ ಪ್ರಾಣಲಿಂಗ ಮೊದಲಾದ ಸ್ಥಲಗಳಲ್ಲಿ ಅತಿ ರಹಸ್ಯವಾದ ವಿಷಯಗಳನ್ನು ಶ್ರೋತೃ ಸಮೂಹಕ್ಕೆ ಸುಲ ವಾಗಿ ತಿಳಿಯುವಂತೆ ಬೋಧಿಸುತ್ತಿದ್ದರು.

ವಿಜಯದಶಮಿಯ ದಿವಸ ಶಾಂತವೀರಸ್ವಾಮಿಗ ಶಿಷ್ಯರಾದ ಮ|| ಬಸಪ್ಪ ಹಾವೇರಿ ಇವರು ಗುರುಗಳ ಮಠದಲ್ಲಿ ಶಿವದೀಕ್ಷೆಯನ್ನು ಹೊಂದಿ ಗಣಾರಾಧನೆಯನ್ನು ಮಾಡಿದರು. ಈ ಶುಭ ಸಮಯವಲ್ಲಿ ಪಂಚಾಚಾಯ ಪ್ರಭಾ ಪೋಷಣಕ್ಕಾಗಿ ಶ್ರೀ ಶಾಂತವೀರ ಸ್ವಾಮಿಗಳ ೧ ರೂಪಾಯಿ ಕಳುಹಿಸಿದರು.

ರೇವಣಸಿದ್ಧನಗೌಡ ಭೀಮನಗೌಡ ಪಾಟೀಲ
ಚಿಮ್ಮಲಗಿ.

ಶ್ರೀಮಳೆಮಲ್ಲೇಶ್ವರಸ್ವಾಮಿಗೆ ರುದ್ರಾಭಿಷೇಕ

ಮೋರಿಗೇರಿ

ಹುವ್ವಿನಹಡಗಲಿ ತಾಲೂಕು ಮೋರಿಗೇರಿ ಗ್ರಾಮದಲ್ಲಿರು ಶ್ರೀಮಳೇಮಲ್ಲೇಶ್ವರಸ್ವಾಮಿಗೆ ವಿಕ್ರಮಸಂವತ್ಸರ ಕಾರ್ತೀ ಬಹುಳ ೧೪ ರಿಂದ ವೃಷಸಂವತ್ಸರ ಭಾದ್ರಪದ ಬಹುಳ ೧೪ ವರೆಗೆ ಪ್ರತಿತಿಂಗಳು ಬಹುಳ ೧೪ ದಿವಸ ವೇ|| ಹಿರೇಮಠ ಪೋರಿಹೊಳೆಯಪ್ಪನವರ ಪೌರೋಹಿತ್ಯದಲ್ಲಿ ಏಕಾದಶರುದ್ರಾ ಷೇಕವು ವೈಭವದಿಂದ ನಡೆಯಿತು ವಿಕ್ರಮಸಂವತ್ಸರ ಫಾಲ್ಗು ಶು|| ೨ ದಿವಸ ಸದರಿ ದೇವಸ್ಥಾನದಲ್ಲಿ ಉಜ್ಜಯಿನಿ ವೈರಾ ಮಠದ ಶ್ರೀಸಿದ್ಧಲಿಂಗಶಿವಾಚಾರ್ಯ ಪಟ್ಟದಸ್ವಾಮಿಗಳ ನೇತೃತ್ವದಲ್ಲಿ ಹೊಳಗುಂದಿ ಹಿರೇಮಠದ ವೇ|| ಶಾಸ್ತ್ರ ಶ್ರೀ ಗುರುಶಾಂತಶಾಸ್ತ್ರಿಗಳು ವಿಧ್ಯುಕ್ತವಾಗಿ ಮಳೆಮಲ್ಲೇಶ್ವರ ಪ್ರತಿಷ್ಠೆ ಯನ್ನು ಮಾಡಿದರು. ಕಳೆದ ಶ್ರಾವಣಮಾಸದಲ್ಲಿ ಮೇಲ್ಕಂ ದೇವಸ್ಥಾನದಲ್ಲಿ ಹೇಮರಡ್ಡಿಮಲ್ಲಮ್ಮನ ಪುರಾಣವು ವೈಭವದೊ ಡನೆ ಸಾಗಿತು ಸದರಿ ಪುರಾಣವನ್ನು ಹೊಳಗುಂದಿ ಶಾಸ್ತ್ರಿಗ ಮನೋಹರವಾಗಿ ಹೇಳುತ್ತಿದ್ದರು. ಪುರಾಣಗಳು ಜನರ ಧಾರ್ಮಿಕ ಭಾವನೆಯನ್ನು ಹೆಚ್ಚಿಸಲು ಮೂಲಕಾರಣಗಳಾ ವೆಂಬುವದು ಎಲ್ಲರಿಗೂ ತಿಳಿದುದಾಗಿದೆ. ಇತ್ತೀಚೆಗೆ ಹುವ್ವಿನಹ ಗಲಿಯ ಶ್ರೀವರ್ಮಾ ಎಚ್. ಕೆ. ಬಸವರಾಜರವರು ಧರ್ಮ ಏಳಿಗೆಯ ಬಗ್ಗೆ ವಿಶೇಷ ಶ್ರಮಪಡುತ್ತಿರುವದು ಅತ್ಯಂತ ಸ್ತುತ್ ವಾಗಿದೆ. ಮೋರಿಗೇರಿಯಲ್ಲಿರುವ ಗುರುಭಕ್ತಿ ಪರಾಯಣರಾದ ನೀಲಗೌಡರ ಬಸವನಗೌಡರು, ಪಾಟೀಲ ದ್ಯಾಸಗೌಡರು, ಕರಣ ದತ್ತರಾವ್, ಚಲಗೋಡು ಸಣ್ಣಲಿಂಗಪ್ಪನವರು, ಇಟಿಗಿ ಬ ಕಾವಟಿಕ್ಕಪ್ಪನವರು ಇವರ ಪ್ರಯತ್ನ ವಿಶೇಷದಿಂದ ಗುರು ಭಕ್ತಿಯು ದಿನೇ ದಿನೇ ಅಭಿವೃದ್ಧಿಗೊಳ್ಳುತ್ತಾ ನಡೆದಿದೆ ಈ ಸಮಯದಲ್ಲಿ, ವಿಘ್ನತೋಷಿಗಳಾದ ಕೆಲಜನರು, ಸತ್ಕಾರ್ಯಕ್ ವಿಘ್ನವನ್ನುಂಟುಮಾಡಿದರು. ಆದರೆ, ಶ್ರೀಮಲ್ಲಿಕಾರ್ಜುನನ ದಯ ದಿಂದ ವಿಘ್ನವೆಲ್ಲವೂ ದೂರವಾಗಿ ಸರ್ವರಿಗೂ ಸಂತೋಷವುಂ ಯಿತು. ಭಾದ್ರಪದ ಬ|| ೧೪ ದಿವಸ ನಡೆದ ಕೊನೆಯ ರುದ್ರಾ ಭಿಷೇಕ ಸಮಾರಂಭಕ್ಕೆ ಯಲಬುರಗಿ ಧರಮುರದಿ ಪಟ್ಟದಸ್ವಾ ಗಳು ಆಗಮಿಸಿದ್ದರು. ತಾ|| ೨೦-೯-೪೧ ನೇಯ ದಿವಸ ಸಪ್ ಬಿಲ್ವಾರ್ಚನೆಯೊಡನೆ ಶ್ರೀ ರುದ್ರಾಭಿಷೇಕವು ನೆರವೇರಿತು. ೨ ನೇಯ ತಾರೀಖಿನ ದಿವಸ ೧೧೧೮ ದೀಪೋತ್ಸವವು ನೆರವೇರಿ ೨೨ ನೇಯ ತಾರೀಖಿನ ದಿವಸ ಮಹಾಗಣಾರಾಧನೆಯಾಯಿ ಆ ಸಂಭದಲ್ಲಿ ಎಚ್ ಕೆ ಬಸವರಾಜರವರ ಕುಮಾರಿಯು ಪಂಚಾಚಾರ್ಯರ ಪದಗಳನ್ನು ಹಾಡಿ ಸರ್ವರನ್ನೂ ಸಂತೋಷಪಡಿ ದರು. ಒನಕಲ್ಲು ಗ್ರಾಮದ ಪಾಟೀಲ ಸಣ್ಣಬಸವನಗೌಡರು, ಹಿ ಗೌಡರ ಮರೇಗೌಡರು, ದಂಡಪ್ಪನವರ ದಂಡಪ್ಪನವ ಎಲ್ಲೂರು ಶಂಕರಪ್ಪನವರು, ಮಲ್ಲನಗೌಡರ ವೀರನಗೌಡ ಬಡಿಗೇರ ಸಣ್ಣವೀರಪ್ಪನವರು ಬಹು ಮನೋಹರವಾಗಿ ಜಗ ಚಾರ್ಯರ ಭಜನೆಯನ್ನು ಮಾಡಿದರು. ಅದೇ ಸಮಯಕ್ಕೆ ಹೊ ಗುಂದಿಯ ವೇ|| ದೊಡ್ಡಚರಂತಪ್ಪನವರು, ಶಾನಭೋಗರ ಸಿದ್ ಲಿಂಗಪ್ಪನವರು, ಪಾಟೀಲ ಶ್ರೀಮತಿ ಬಸಪ್ಪನವರು ಮೊದಲಾ ವರು ಆಗಮಿಸಿ ಈ ಸತ್ಕಾರ್ಯವನ್ನು ನೋಡಿ ಕಾಣಿಕೆಯಾ ದೊಡ್ಡಚರಂತಪ್ಪನವರು ೨ ರೂಗಳನ್ನೂ ಶ್ರೀಮತಿ ಬಸಪ್ಪನವ ೧ ರೂಪಾಯಿಯನ್ನೂ ಹೊಳಗುಂದಿ ಶಾನಭೋಗ ಸಿದ್ಧಲಿಂಗ ನವರ ಜೇಷ್ಠ ಪುತ್ರ ಮೋರಿಗೇರಿ ಗ್ರಾಮದ ಕ್ಯಾದಿಗಿಹಳ್ಳಿ ಮ ಲ್ಲಾರೆಡ್ಡಿ ಭರಮಗೌಡರ ಧರ್ಮಪತ್ನಿ ಸುಮತಿದಾಯಿಯವ ೨ ರೂಗಳನ್ನೂ ಸಮರ್ಪಿಸಿದರು. ಜಗದೀಶ್ವರನು ಇವರಿ ಸನ್ಮಂಗಲವನ್ನೀಯಲೆಂದು ಕೋರುತ್ತೇನೆ ಆ ದಿವಸ ೨ ಸಾ ಜನರವರಿಗೆ ಭೋಜನವಾಯಿತು. ಮೋರಿಗೇರಿ ಗ್ರಾಮದವ ಲ್ಲರೂ ವಿಶೇಷ ಶ್ರದ್ಧೆಯಿಂದ ಈ ಕಾರ್ಯವನ್ನು ನೆರವೇರಿಸಿದ ಈ ಮಹಾಸಮಾರಂಭವು ನಿರ್ವಿಘ್ನವಾಗಿ ನಡೆದ ಸಂತೋಷಕ್ಕಾ ವೇ|| ಮರಗಿಮಠದ ಗುರುಶಾಂತಯ್ಯನವರು ಮತ್ತು ಮಠದ ಶಿವಯ್ಯನವರು ಇವರ ಹೇಳಿಕೆಯ ಮೇರೆ ಪ್ರಭಾಪೋ ಷಕ್ಕೋಸ್ಕರ ೨ ರೂಗಳು ಸಮರ್ಪಿಸಲ್ಪಟ್ಟು ಹೂವಿನಹಡ ಎಚ್. ಕೆ. ಬಸವರಾಜರವರ ವಶಕ್ಕೆ ಕೊಡಲ್ಪಟ್ಟವು.

ಪ್ರತ್ಯಕ್ಷದರ್ಶಿ

ಮೈಸೂರು ಸಂಸ್ಥಾನದ ದಿವಾನರವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಅಪ್ಪಣೆಕೊಡಿಸಿದ ಭಾಷಣ

(ದಸರಾ ಅಧಿವೇಶನ)

(ಮುಂದುವರಿದುದು)

ಸಕ್ಕರೆಯ ಕಾರ್ಖಾನೆ

ಅತ್ಯಂತ ಲಾಭಕರವಾಗಿರುವ ನಮ್ಮ ಕೈಗಾರಿಕೆಯ ಉದ್ಯಮಗಳಲ್ಲಿ ಸಕ್ಕರೆಯ ಕಾರ್ಖಾನೆಯೂ ಒಂದು. ಈ ಕಾರ್ಖಾನೆಯಲ್ಲಿ 1940-41 ನೆಯ ಸಾಲಿನಲ್ಲಿ ನಡೆದ ಕೆಲಸದ ಪರಿಣಾಮವಾಗಿ 9.55 ಲಕ್ಷ ರೂಪಾಯಿಗಳ ನಿವ್ವಳ ಲಾಭವು ಬಂದಿದೆ. ಈ ಕಾರ್ಖಾನೆಗೆ ಸೇರಿರುವ ಹಾಗೆ, ಸಾರಾಯಿ ಮುಂತಾದ ಮದ್ಯಗಳ ಭಟ್ಟಿ ಕಾರ್ಖಾನೆಯನ್ನೂ ಸಕ್ಕರೆ ಕಂಪೆನಿಯವರು ಏರ್ಪಡಿಸಬೇಕೆಂದಿದ್ದಾರೆ. ಅದಕ್ಕೆ ಬೇಕಾದ ಯಂತ್ರಗಳಿಗೆ ಅವರು ಬರೆದಿದ್ದಾರೆ.

ರಾಜಮಂತ್ರಪ್ರವೀಣ ದಿವಾನ್ ಬಹದ್ದೂರ್ ಶ್ರೀಮಾನ್ ಕೆ. ಮಾತ್ತನ್‌ರವರು ಸಕ್ಕರೆ ಕಂಪೆನಿಗೆ ಸಲ್ಲಿಸಿರುವ ಅಮೋಘವಾದ ಸೇವೆಯ ವಿಚಾರವನ್ನು ಕುರಿತು ಸೂಚಿಸಲು ನನಗೆ ಬಹಳ ಸಂತೋಷವಾಗುತ್ತದೆ. ಅವರು ಈ ತಿಂಗಳ ಕೊನೆಗೆ ಮೈಸೂರು ಸಕ್ಕರೆಯ ಕಂಪೆನಿಯ ಅಧ್ಯಕ್ಷ ಸ್ಥಾನದಿಂದ ನಿವೃತ್ತರಾಗುತ್ತಾರೆ. ಅವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಸಕ್ಕರೆಯ ಕಾರ್ಖಾನೆಯು ಮೊದಲಿದ್ದುದರ ನಾಲ್ಕರಷ್ಟು ಪ್ರಮಾಣದಲ್ಲಿ ಸಕ್ಕರೆಯನ್ನು ತಯಾರಿಸುವವರೆಗೆ ಬೆಳವಣಿಗೆ ಹೊಂದಿತು, ಕಬ್ಬಿನ ಬೆಳೆಗೂ ಸಕ್ಕರೆ ಮಾರಾಟಕ್ಕೂ ಸಂಬಂಧಪಟ್ಟ ಕಾರ್ಯನೀತಿಯ ವಿಷಯವಾಗಿ ಅನೇಕ ವಿಚಾರಗಳು ಇತ್ಯರ್ಥವಾದುವು. ಶ್ರೀಮಾನ್ ಮಾತ್ತನ್‌ರವರು ಕಾರ್ಖಾನೆಯ ಕಾರ್ಯಕಲಾಪಗಳು ಸುಭದ್ರವಾಗಿದ್ದು ಪ್ರಗತಿಹೊಂದುವಂತೆ ಉತ್ತಮವಾದ ಕಾರ್ಯನೀತಿಯನ್ನನುಸರಿಸಿ ಕೆಲಸಮಾಡಿದ್ದಾರೆ. ಮುಖ್ಯವಾದ ಈ ಭಾರಿ ಕೈಗಾರಿಕೆಯನ್ನು ಅಭಿವೃದ್ಧಿಗೆ ತರುವುದಕ್ಕಾಗಿ ಕಾರ್ಯವಿಚಕ್ಷಣೆಯನ್ನೂ ಮತ್ತು ಅನುಭವವನ್ನೂ ಪೂರ್ತಿಯಾಗಿ ವಿನಿಯೋಗಿಸಿ ಶ್ರದ್ಧೆಯಿಂದ ಕೆಲಸಮಾಡಿದ್ದಾರೆ. ಸರ್ಕಾರದ ಮತ್ತು ಪ್ರಜೆಗಳ ಕೃತಜ್ಞತೆಯನ್ನೂ ಅವರು ಗಳಿಸಿದ್ದಾರೆ.

ಸರ್ಕಾರದವರು ರಾಜಸೇವಾಸಕ್ತ ಶ್ರೀಮಾನ್ ಟಿ. ವಿ ಎ. ಈಶ್ವರನ್‌ರವರನ್ನು ಶ್ರೀಮಾನ್ ಮಾತ್ತನ್‌ರವರ ತರುವಾಯ ಸಕ್ಕರೆಯ ಕಂಪೆನಿಯ ಅಧ್ಯಕ್ಷ ಸ್ಥಾನಕ್ಕೆ ನೇಮಿಸಿದ್ದಾರೆ. ಅವರ ನೇತೃತ್ವದಲ್ಲಿ ಕಂಪೆನಿಯು ಈಗಿನಂತೆಯೇ ಮುಂದೆಯೂ ಸಹ ಅಭಿವೃದ್ಧಿಸ್ಥಿತಿಯಲ್ಲಿರುವುದೆಂದು ಸರ್ಕಾರದವರು ಹಾರೈಸುತ್ತಾರೆ.

ರೇಷ್ಮೆ ಕೈಗಾರಿಕೆ

ಮನೆ ಕೈಗಾರಿಕೆಗಳ ಪೈಕಿ ರೇಷ್ಮೆ ಕೈಗಾರಿಕೆಯು ಅತ್ಯಂತ ಪ್ರಮುಖವಾದುದು. ಕಳೆದ ಕೆಲವು ವರ್ಷಗಳಿಂದಲೂ ಈ ಕೈಗಾರಿಕೆಯು ಗಣನೀಯವಾಗಿ ಅಭಿವೃದ್ಧಿಯಾಗುತ್ತಿದೆ. ಹಿಪ್ಪುನೇರಳೆ ಫಸಲನ್ನು ಬೆಳೆದಿರುವ ಪ್ರದೇಶದ ಒಟ್ಟು ವಿಸ್ತೀರ್ಣವು 1936 37 ನೆಯ ಸಾಲಿನಲ್ಲಿ 25,000 ಎಕರೆಗಳಾಗಿದ್ದುದು ಚಾಲ್ತಿ ಸಾಲಿನಲ್ಲಿ ಸುಮಾರು 40,000 ಎಕರೆಗಳಿಗೆ ಹೆಚ್ಚಿದೆ. ರೋಗರಹಿತವಾದ ರೇಷ್ಮೆಯ ಹುಳುಗಳ "ಬಿತ್ತನೆ" ಗಳ ಉತ್ಪತ್ತಿಯು ಸುಮಾರು 124 ಲಕ್ಷದಷ್ಟು ಏರಿದೆ. ಹಿಂದೆ ಎಂದೂ ಈ ಪ್ರಮಾಣವಿದ್ದಿರಲಿಲ್ಲ. 1940-41 ನೆಯ ಸಾಲಿನಲ್ಲಿ 10 ಸರ್ಕಾರಿ "ಗ್ರೇನೇಜು" ಕೋಠಿಗಳೂ ಮತ್ತು ಸರ್ಕಾರಿ ಸಹಾಯದ್ರವ್ಯವು ದೊರೆಯುವ 40 "ಗ್ರೇನೇಜು" ಕೋಠಿಗಳೂ ಇದ್ದುವು. ಚಾಲ್ತಿ ಸಾಲಿನಲ್ಲಿ ಹೊಸದಾಗಿ ಒಂದು ಸರ್ಕಾರಿ "ಗ್ರೇನೇಜು" ಕೋಠಿಯನ್ನೂ ಮತ್ತು ಸರ್ಕಾರದಿಂದ ಸಹಾಯ ದ್ರವ್ಯವು ದೊರೆಯುವ ಹತ್ತು "ಗ್ರೇನೇಜು" ಕೋಠಿಗಳನ್ನೂ ಏರ್ಪಡಿಸಲು ಉದ್ದೇಶಿಸಲಾಗಿದೆ. ಇಲಾಖೆಯ ವೆಚ್ಚವು ಈಗ್ಗೆ ಹದಿನೈದು ವರ್ಷಗಳಿಗೆ ಹಿಂದೆ 80,000 ರೂಪಾಯಿಗಳಾಗಿದ್ದುದು, ಈಗ 2 ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಾಗಿದೆ. ವಿದೇಶೀಯ ಜಾತಿಯ ರೇಷ್ಮೆ "ಬಿತ್ತನೆ" ಗಳನ್ನು ಅಭಿವೃದ್ಧಿಗೆ ತರುವ ಉದ್ದೇಶದಿಂದ ಬಿಳಿಗಿರಿರಂಗನ ಬೆಟ್ಟದಲ್ಲಿ ಒಂದು ಪಾಲನ ಕ್ಷೇತ್ರವನ್ನು ಏರ್ಪಡಿಸಲಾಗಿದೆ. ಅಲ್ಲದೆ ರೇಷ್ಮೆ ಕೈಗಾರಿಕೆಗೆ ಸಂಬಂಧಪಟ್ಟ ವಿಚಾರಗಳಲ್ಲಿ ಸಂಶೋಧನ ನಡೆಸಲು ಒಂದು ಕೇಂದ್ರ ಸಂಶೋಧನ ಸಂಸ್ಥೆಯನ್ನು ಏರ್ಪಡಿಸುವ ವಿಚಾರವು ಪರ್ಯಾಲೋಚನೆಯಲ್ಲಿದೆ.

ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯದ ಆಡಳಿತಕ್ಕೊಳಪಟ್ಟಿರುವ ಕಾಲೇಜುಗಳಲ್ಲಿ, 1940-41 ನೆಯ ಸಾಲಿನಲ್ಲಿ 5,000 ವಿದ್ಯಾರ್ಥಿ ವಿದ್ಯಾರ್ಥಿನಿಯರು ಶಿಕ್ಷಣ ಪಡೆಯುತ್ತಿದ್ದರು, 1939 40 ನೆಯ ಸಾಲಿನಲ್ಲಿ ಶಿಕ್ಷಣ ಪಡೆಯುತ್ತಿದ್ದವರ ಸಂಖ್ಯೆ 4,239 ಶಿವಮೊಗ್ಗೆಯಲ್ಲಿ ಇಂಟರ್‌ಮೀಡಿಯೇಟ್ ಕಾಲೇಜಿಗೆ ಹೊಸ ಕಟ್ಟಡವೊಂದನ್ನು ಕಟ್ಟಿಸುವ ಕೆಲಸವು ಮುಂದುವರಿಯುತ್ತಿದೆ. ತುಮಕೂರಿನ ಇಂಟರ್‌ಮೀಡಿಯೇಟ್ ಕಾಲೇಜಿನ ಕಟ್ಟಡಕ್ಕೆ ನಿವೇಶನವೊಂದನ್ನು

ವಿಶ್ವವಿದ್ಯಾನಿಲಯದವರು ಕೈಗೊಂಡಿರುವ "ಯೂನಿವರ್ಸಿಟಿ ಸೆಟ್ಲ್‌ಮೆಂಟ್" ಏರ್ಪಾಡು ಬಹಳಮಟ್ಟಿಗೆ ಮುಂದುವರಿದಿದೆ. ಆ ಏರ್ಪಾಡಿನ ಮೇರೆಗೆ ನಡೆಯುವ ಸಮಾಜಸೇವಾ ಕಾರ್ಯಗಳಲ್ಲಿ ಅನೇಕ ಮಂದಿ "ಅಂಡರ್ ಗ್ರ್ಯಾಜುಯೇಟ್" ವಿದ್ಯಾರ್ಥಿಗಳು ಉತ್ಸಾಹದಿಂದ ಕೆಲಸಮಾಡುವುದರ ಮೂಲಕ ಸಹಕರಿಸುತ್ತಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಸಂಘದ ಸದಸ್ಯರು ಮೈಸೂರು ನಗರದಲ್ಲಿಯೂ ಮತ್ತು ಅಕ್ಕಪಕ್ಕದ ಗ್ರಾಮಗಳಲ್ಲಿಯೂ ನಾಲ್ವತ್ತಕ್ಕಿಂತ ಹೆಚ್ಚು ಕೇಂದ್ರಗಳಲ್ಲಿ, ವಯಸ್ಸಾದವರಿಗೆ ಅಕ್ಷರಾಭ್ಯಾಸಮಾಡಿಸಿ ವಿದ್ಯೆ ಕಲಿಸುವ ತರಗತಿಗಳನ್ನು ನಡೆಯಿಸಿದರು. ಈ ವರ್ಷ ವಿಶ್ವವಿದ್ಯಾನಿಲಯದ ನಾನೂರುಮಂದಿ ವಿದ್ಯಾರ್ಥಿಗಳು "ಮಿಲಿಟರಿ" ಶಿಕ್ಷಣವನ್ನು ಪಡೆದರು. ರಾಜನೀತಿಶಾಸ್ತ್ರವನ್ನು ("ಪೊಲಿಟಿಕಲ್ ಸೈನ್ಸ್") ವ್ಯಾಸಂಗವಿಷಯವಾಗಿ ತೆಗೆದುಕೊಂಡು "ಆನರ್ಸ್" ಡಿಗ್ರಿ ಪಡೆಯಲು ಅವಕಾಶವನ್ನು ಕಲ್ಪಿಸಲಾಯಿತು. "ಎಲ್. ಎಮ್. ಪಿ. ಡಿಪ್ಲೊಮಾ" ಶಿಕ್ಷಣದ ವ್ಯಾಸಂಗ ಕ್ರಮವನ್ನು ಮಾರ್ಪಾಟು ಮಾಡುವ ವಿಷಯವು ಪರ್ಯಾಲೋಚನೆಯಲ್ಲಿದೆ. "ಆರ್ಟ್ಸ್, ಸೈನ್ಸ್, ಇಂಜನಿಯರಿಂಗ್" ಶಾಖೆಗಳಲ್ಲಿಯೂ ಮತ್ತು ವೈದ್ಯಶಾಖೆಯಲ್ಲಿಯೂ ಸ್ವತಂತ್ರವಾಗಿ ಸಂಶೋಧನೆಗಳನ್ನು ನಡೆಯಿಸತಕ್ಕವರಿಗೆ "ಡಾಕ್ಟರೇಟ್ ಡಿಗ್ರಿ" ಪ್ರಶಸ್ತಿಗಳನ್ನು ಕೊಡುವ ಏರ್ಪಾಡಿಗೆ ಈಗ ತಾನೆ ಮಂಜೂರಾತಿ ದೊರೆತಿದೆ. ಭರತಖಂಡದ ಅರ್ಥಶಾಸ್ತ್ರಜ್ಞರ ಮತ್ತು ರಾಜನೀತಿ ಶಾಸ್ತ್ರಜ್ಞರ ಸಮ್ಮೇಳನವು 1940 ನೆಯ ಇಸವಿ ಡಿಸೆಂಬರ್ ತಿಂಗಳಿನಲ್ಲಿ ಮೈಸೂರಿನಲ್ಲಿ ನಡೆಯಿತು. ಅದರ ಪ್ರಾರಂಭೋತ್ಸವವನ್ನು ಶ್ರೀಮನ್ಮಹಾರಾಜರವರು ಕೃಪೆಮಾಡಿ ನೆರವೇರಿಸಿದರು. 1941 ನೆಯ ಇಸವಿ ಜುಲೈ ತಿಂಗಳಿನಲ್ಲಿ ವಿಶ್ವವಿದ್ಯಾನಿಲಯದ ರಜತೋತ್ಸವವು ನೆರವೇರಿತು. ಆ ಉತ್ಸವದ ಸಂಬಂಧದಲ್ಲಿ ಏರ್ಪಡಿಸಿದ್ದ ವಿಶೇಷ ಘಟಿಕೋತ್ಸವದಲ್ಲಿ ವಿಶ್ವವಿದ್ಯಾನಿಲಯದ ಛಾನ್ಸಲರವರಾದ ಶ್ರೀಮನ್ಮಹಾರಾಜರವರು ಭಾಷಣವನ್ನು ದಯಪಾಲಿಸಿದರು.

ಬ್ರಾಡ್ ಕ್ಯಾಸ್ಟಿಂಗ್

ಸಂಸ್ಥಾನದಲ್ಲಿ ಸರಿಯಾದ "ಬ್ರಾಡ್‌ಕ್ಯಾಸ್ಟಿಂಗ್ ಸ್ಟೇಷನ್" ಒಂದನ್ನು ಏರ್ಪಡಿಸುವ ವಿಚಾರವನ್ನು ಸರ್ಕಾರದವರು ಬಹುಕಾಲದಿಂದಲೂ ಪರ್ಯಾಲೋಚಿಸುತ್ತಿದ್ದಾರೆ. 1939 ನೆಯ ಇಸವಿ ನವೆಂಬರ್ ತಿಂಗಳಿನಲ್ಲಿ ಸರ್ಕಾರದವರು ಮೈಸೂರಿನಲ್ಲಿ 5 ಕಿಲೋವಾಟ್ ಪರಿಮಾಣದ "ಷಾರ್ಟ್ ವೇವ್ ಬ್ರಾಡ್‌ಕ್ಯಾಸ್ಟಿಂಗ್ ಸ್ಟೇಷನನ್ನು" ಏರ್ಪಡಿಸಬೇಕೆಂದೂ ಬೆಂಗಳೂರಿನಲ್ಲೊಂದು "ಟ್ರಾನ್ಸ್‌ಮಿಟಿಂಗ್ ಸ್ಟೇಷನನ್ನು" ಏರ್ಪಡಿಸಬೇಕೆಂದೂ ಅಪ್ಪಣೆ ನೀಡಿ ಹುಕುಮನ್ನು ಜಾರಿ ಮಾಡಿದರು. ಇದಕ್ಕಾಗಿಯೇ ಪ್ರತ್ಯೇಕವಾದ ಒಂದು ಕಟ್ಟಡವನ್ನು ಮೈಸೂರಿನಲ್ಲಿ ಕಟ್ಟಲಾಗುತ್ತಿದೆ. "ಆ ಸ್ಟೇಷನ್ನಿಗೆ" ಬೇಕಾಗುವ ಎಲ್ಲ ಉಪಕರಣಗಳನ್ನೂ ಕೊಂಡುಕೊಳ್ಳಬೇಕಾದರೆ ಇನ್ನೂ ಹೆಚ್ಚುಕಾಲ ಹಿಡಿಯುತ್ತದೆ. ಆದುದರಿಂದ "ಆಕಾಶವಾಣಿ" ಸಂಸ್ಥೆಯಲ್ಲಿ ಇರುವ ಉಪಕರಣಗಳನ್ನೇ ತೆಗೆದುಕೊಂಡು "ಬ್ರಾಡ್‌ಕ್ಯಾಸ್ಟಿಂಗ್" ಯೋಜನೆಯನ್ನು ಪ್ರಾರಂಭಿಸಬೇಕೆಂದು ಉದ್ದೇಶಿಸಲಾಗಿದೆ. ಯುದ್ಧದ ಪರಿಸ್ಥಿತಿಯು ಸ್ಥಿಮಿತಕ್ಕೆ ಬಂದನಂತರ ಕ್ರಮವಾದ "ಬ್ರಾಡ್‌ಕ್ಯಾಸ್ಟಿಂಗ್ ಸ್ಟೇಷನ್ನ"ನ್ನು ಸ್ಥಾಪಿಸಲಾಗುವುದು. ಅಲ್ಲಿಯವರೆಗೂ ಈಗ "ಆಕಾಶವಾಣಿ" ಸಂಸ್ಥೆಗೆ ಸೇರಿದ ಉಪಕರಣಗಳನ್ನು ತೆಗೆದುಕೊಳ್ಳುವ ಕಾರ್ಯವನ್ನು ಪ್ರಾರಂಭಿಸಲಾಗುವುದು.

ಪಬ್ಲಿಕ್ ವರ್ಕ್ಸ್ ಇಲಾಖೆ

ಪಬ್ಲಿಕ್ ವರ್ಕ್ಸ್ ಇಲಾಖೆಯವರು 1940-41 ನೆಯ ಸಾಲಿನಲ್ಲಿ ಹತ್ತು ಕಟ್ಟಡಗಳನ್ನು ಕಟ್ಟಿ ಮುಗಿಸಿದರು. ಈ ಕಟ್ಟಡಗಳಿಗೆಲ್ಲಾ ಒಟ್ಟು 17,16,000 ರೂಪಾಯಿಗಳು ವೆಚ್ಚವಾದುವೆಂದು ಅಂದಾಜಾಗಿದೆ. ಮೈಸೂರು ಚೆಲುವಾಂಬಾ ಆಸ್ಪತ್ರೆ ಮತ್ತು ಸೆಂಟ್ರಲ್ ರೈಲ್ವೆ ಆಫೀಸುಗಳು ಮತ್ತು ಮಂಡ್ಯದ ಡಿಸ್ಟ್ರಿಕ್ಟ್ ಆಫೀಸು ಮತ್ತು ಜನರಲ್ ಆಸ್ಪತ್ರೆ ಇವು ಈ ಕಟ್ಟಡಗಳಲ್ಲಿ ಮುಖ್ಯವಾದುವು.

1940 41 ನೆಯ ಸಾಲಿನಲ್ಲಿ ಒಂಬತ್ತು ಕಟ್ಟಡಗಳ ಕೆಲಸವು ಇನ್ನೂ ನಡೆಯುತ್ತಿದ್ದಿತು. ಈ ಕಟ್ಟಡಗಳಿಗೆಲ್ಲಾ ಒಟ್ಟು ಅಂದಾಜಾಗಿರುವ ವೆಚ್ಚ 7,31,000 ರೂಪಾಯಿಗಳು. ಬೆಂಗಳೂರಿನ ವಿದ್ಯುಚ್ಛಕ್ತಿಯ ಕಾರ್ಖಾನೆಯಲ್ಲಿ ಕಟ್ಟಲಾಗುತ್ತಿರುವ "ಟ್ರಾನ್ಸ್‌ಫಾರ್ಮರ್" ಕಟ್ಟಡವೂ, ಶಿವಮೊಗ್ಗೆಯ ಇಂಟರ್‌ಮೀಡಿಯೇಟ್ ಕಾಲೇಜು ಕಟ್ಟಡವೂ ಮತ್ತು ಸಕಲೇಶಪುರದ ಕ್ರಾಫರ್ಡ್ ಆಸ್ಪತ್ರೆಯ ಕಟ್ಟಡವೂ ಈ ಒಂಬತ್ತು ಕಟ್ಟಡಗಳಲ್ಲಿ ಕೆಲವು.

ಶಿವಮೊಗ್ಗೆಯ ಇಂಟರ್‌ಮೀಡಿಯೇಟ್ ಕಾಲೇಜು ಕಟ್ಟಡಕ್ಕೂ ಮತ್ತು ಸಕಲೇಶಪುರದ ಕ್ರಾಫರ್ಡ್ ಆಸ್ಪತ್ರೆಯ ಕಟ್ಟಡಕ್ಕೂ ಶ್ರೀಮನ್ಮಹಾರಾಜರವರು ಕಳೆದ ಫೆಬ್ರವರಿ ತಿಂಗಳಲ್ಲಿ ಕೃಪೆಮಾಡಿ ಅಸ್ತಿಭಾರದ ಶಿಲೆಗಳನ್ನು ಸ್ಥಾಪನೆಮಾಡಿದರು.

ಮೈಸೂರಿನ ಹತ್ತಿರ ಒಂದು ವಿಮಾನನಿಲ್ದಾಣವನ್ನು ಏರ್ಪಡಿಸುವ ಕಾರ್ಯವು ನಡೆಯುತ್ತಿದೆ. ಅದಕ್ಕೆ 1,31,000 ರೂಪಾಯಿಗಳು ವೆಚ್ಚವಾಗುವುವೆಂದು ಅಂದಾಜಾಗಿದೆ.

ಸಂಸ್ಥಾನದ ಮುಖ್ಯವಾದ ರಸ್ತೆಗಳಿಗೆ ಕಲ್ಲರಗನ್ನು ಹಾಕುವ ಮತ್ತು ಸಿಮೆಂಟ್ ಕಾಂಕ್ರೀಟನ್ನು ಹಾಕುವ ಒಂದು ಭಾರಿ ಕಾರ್ಯಕ್ರಮವನ್ನು 1940-41 ನೆಯ ಸಾಲಿನಲ್ಲಿ ಕೈಕೊಳ್ಳಲಾಯಿತು. ಈ ಕೆಲಸಗಳಿಗಾಗಿ ಒಟ್ಟು ಸುಮಾರು 7 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಯಿತು. ಡಿಸ್ಟ್ರಿಕ್ಟ್ ಫಂಡ್ ಮತ್ತು ಲೋಕಲ್‌ಫಂಡ್ ರಸ್ತೆಗಳನು ಈಗಿನ ಸ್ಥಿತಿಗೆ ತಕ್ಕಂತೆ ಪುನರ್ವಿಂಗಡಣೆ ಮಾಡುವುದಕ್ಕಾಗಿ, ಒಂದು ಸಮಿತಿಯನ್ನು ಏರ್ಪಡಿಸಲಾಯಿತು. ತೀರ್ಥಹಳ್ಳಿಯ ಹತ್ತಿರ ತುಂಗಾ ನದಿಗೆ ಒಂದು ಸೇತುವೆಯನ್ನು ಕಟ್ಟಿ ಮುಗಿಸಲಾಯಿತು. ಅದಕ್ಕೆ 2 ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿ ವೆಚ್ಚವಾಗಿದೆ. ಕಳೆದ ಫೆಬ್ರವರಿ ತಿಂಗಳಿನಲ್ಲಿ ಶ್ರೀಮನ್ಮಹಾರಾಜರವರು ಆ ಸೇತುವೆಯ ಕಟ್ಟಡಕ್ಕೆ ಸಂಬಂಧಪಟ್ಟ ಶಿಲಾಸ್ಥಾಪನೆಯನ್ನು ಮಾಡಿದರು. ಅಲ್ಲದೆ ಇನ್ನೊಂದು ಸೇತುವೆಯ ಸಂಬಂಧದಲ್ಲಿಯೂ ಸಹ, ಎಂದರೆ ಕಳಸದ ಹತ್ತಿರ ಭದ್ರಾನದಿಯ ಸೇತುವೆಯ ಸಂಬಂಧದಲ್ಲಿಯೂ ಸಹ ಶ್ರೀಮನ್ಮಹಾರಾಜರವರು ಕೃಪೆಮಾಡಿ ಅಸ್ತಿಭಾರದ ಶಿಲಾಸ್ಥಾಪನೆ ಮಾಡಿದರು. ಈ ಸೇತುವೆಗೆ 1 ಲಕ್ಷ ರೂಪಾಯಿಗಳು ವೆಚ್ಚವಾಗುವುದೆಂದು ಅಂದಾಜಾಗಿದೆ. ಈ ಸೇತುವೆಯನ್ನು ಕಟ್ಟುವ ಕೆಲಸವು ಈ ವರ್ಷಾರಂಭವಾಗಿದೆ.

ಬೆಂಗಳೂರು ನಗರಕ್ಕೆ ಸೇರಿದ ಉಪನಗರಗಳನ್ನು (ಎಕ್ಸ್‌ಟೆನ್‌ಷನುಗಳನ್ನು) ನಿರ್ಮಿಸುವುದಕ್ಕಾಗಿ ಬಜೆಟ್ಟಿನಲ್ಲಿ 5 ಲಕ್ಷ ರೂಪಾಯಿಗಳನ್ನು ಪ್ರತ್ಯೇಕಿಸಿಡಲಾಗಿದೆ.

ನೀರಾವರಿ

ತುಮಕೂರು ಡಿಸ್ಟ್ರಿಕ್ಟಿನಲ್ಲಿ ಮಾರ್ಕೋನಹಳ್ಳಿ ಜಲಾಶಯದ ಕಾಮಗಾರಿಗಳಿಗೆ ಸಂಬಂಧಪಟ್ಟ ಕೆಲಸಗಳೂ ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಅಂಜನಾಪುರ ಜಲಾಶಯದ ಕಾಮಗಾರಿಗಳಿಗೆ ಸಂಬಂಧಪಟ್ಟ ಕೆಲಸಗಳೂ ಪೂರೈಸಿದುವು. ಈ ಜಲಾಶಯಗಳಿಗೆ 40 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ವೆಚ್ಚವಾಯಿತು, ಮತ್ತು ಇದುವರೆಗೆ ಈ ಜಲಾಶಯಗಳ ಆಸರೆಯಲ್ಲಿ 12,000 ಎಕರೆಗಳಿಗೆ ಮೇಲ್ಪಟ್ಟ ವಿಸ್ತೀರ್ಣದ ಜಮೀನು ಸಾಗುವಳಿಗೆ ಬಂದಿದೆ. 24 ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಈ ವರ್ಷ ಹೊಸದಾದ ಐದು ನೀರಾವರಿ ಕಾಮಗಾರಿ ಏರ್ಪಾಡುಗಳನ್ನು ಪ್ರಾರಂಭಿಸಲಾಗಿದೆ. ಅವುಗಳಲ್ಲಿ ಚನ್ನಪಟ್ಟಣದ ಹತ್ತಿರ ಹರಿಯುವ ಕಣ್ವನದಿಗೆ ಅಣೆಕಟ್ಟನ್ನು ಕಟ್ಟುವ ಏರ್ಪಾಡು ಮುಖ್ಯವಾದುದು. ಇವು ಮುಗಿದರೆ ಇನ್ನೂ 8,000 ಎಕರೆಗಳ ಜಮೀನುಗಳಿಗೆ ನೀರಾವರಿಯ ಸೌಕರ್ಯವು ಒದಗಿದಂತಾಗುತ್ತದೆ.

ಅರ್ವಿನ್ ನಾಲೆಯ ನಾನಾ ಶಾಖೆಗಳ ಕಾಮಗಾರಿಯ ಕೆಲಸಗಳು ತೃಪ್ತಿಕರವಾಗಿ ಮುಂದುವರಿದಿವೆ. ಈ ನಾಲೆಯಿಂದ ಸುಮಾರು 80,000 ಎಕರೆಗಳ ಜಮೀನಿಗೆ ನೀರು ಹಾಯಿಸುವ ಅವಕಾಶವನ್ನು ಒದಗಿಸಲಾಗಿದ್ದಿತು. ಅದರಲ್ಲಿ ಇದುವರೆಗೆ ಒಟ್ಟು 60,000 ಎಕರೆಗಳ ಪ್ರದೇಶವು ನೀರಾವರಿ ಸಾಗುವಳಿಗೆ ಬಂದಿದೆ. ನೀರಾವರಿ ಸೌಕರ್ಯಗಳು ಹೊಸ ಹೊಸ ಪ್ರದೇಶಗಳಿಗೆ ಒದಗಿದಂತೆಲ್ಲ, ಸಕ್ಕರೆಯ ಕಾರ್ಖಾನೆಗಳಿಗೆ ತಕ್ಕಷ್ಟು ಸಮೀಪದಲ್ಲಿಲ್ಲದಿರುವ ಪ್ರದೇಶಗಳಲ್ಲಿ ಕಬ್ಬಿಗೆ ಬದಲಾಗಿ ಇತರ ವಾಣಿಜ್ಯದ ಬೆಳೆಗಳನ್ನು ಬೆಳೆಯಲು ಪ್ರೋತ್ಸಾಹಿಸಬೇಕಾದುದು ಅವಶ್ಯಕವೆಂದು ಕಂಡುಬಂದಿತು. ಅರ್ವಿನ್ ನಾಲೆಯಿಂದ ಹೊಸದಾಗಿ ನೀರಾವರಿಯಾಗಿರುವ ಪ್ರದೇಶಗಳಲ್ಲಿ ಹತ್ತಿ, ಹೊಗೆಸೊಪ್ಪು ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಈಗಿರುವ ನೀರು ಸರಬರಾಯಿಯ ವಿಧಾನದಲ್ಲಿ ಬದಲಾವಣೆಯನ್ನು ಮಾಡಿ, ಆ ವಿಧಾನದಲ್ಲಿ ನೀರನ್ನು ಹಾಯಿಸುವ ಒಂದು ಏರ್ಪಾಡಿಗೆ ಸರ್ಕಾರದವರು ಈಗ ಮಂಜೂರಾತಿಯನ್ನು ಕೊಟ್ಟಿರುತ್ತಾರೆ. ಈ ಉದ್ದೇಶಕ್ಕಾಗಿ 14,000 ಎಕರೆಗಳಷ್ಟು ಪ್ರದೇಶವನ್ನು ಪ್ರತ್ಯೇಕವಾಗಿಡಲಾಗಿದೆ. ನಾಲಾಬಯಲಿನಲ್ಲಿ ಸಾಗುವಳಿ ಮಾಡತಕ್ಕವರಿಗೆ ಉತ್ತೇಜನಕೊಡುವುದಕ್ಕೆ ಆ ಪ್ರದೇಶಗಳಿಗೆ ಪ್ರಯಾಣ ಸೌಕರ್ಯಗಳನ್ನು ಹೆಚ್ಚಿಸುವುದು ಒಂದು ಮುಖ್ಯ ಸಾಧನೋಪಾಯ. ಇದುವರೆಗಾಗಲೇ ಅರ್ವಿನ್ ನಾಲೆಯ ಪ್ರದೇಶದಲ್ಲಿ 262 ಮೈಲಿಗಳ ದೂರ ರಸ್ತೆಗಳನ್ನು ಮಾಡಿಸಲಾಗಿದೆ. ಇದಕ್ಕಾಗಿ ಸುಮಾರು 6 ಲಕ್ಷ ರೂಪಾಯಿಗಳು ವೆಚ್ಚವಾಗಿವೆ.

ನಮ್ಮ ದೇಶದ ರೈತರ ಅಭಿವೃದ್ಧಿಯು, ಮೈನರ್ ಕೆರೆಗಳ ಜೀರ್ಣೋದ್ಧಾರ ಮತ್ತು ಅವುಗಳನ್ನು ಸರಿಯಾದ ಸ್ಥಿತಿಯಲ್ಲಿ ಕಾಪಾಡಿಕೊಂಡು ಬರುವುದು—ಇವುಗಳನ್ನೇ ಬಹುಮಟ್ಟಿಗೆ ಅವಲಂಬಿಸಿದೆ. ಈ ವಿಚಾರಕ್ಕೆ ಸರ್ಕಾರದವರು ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. ಸರ್ಕಾರದವರು ನೀರಾವರಿ ಅಭಿವೃದ್ಧಿಯ ಕಾರ್ಯನೀತಿಯನ್ನು ಅನುಸರಿಸುತ್ತ ಬರುತ್ತಿರುವುದು ಸರಿಯಷ್ಟೆ. ಅವರು ಭಾರಿ ಪ್ರಮಾಣದ ಹೊಸ ಹೊಸ ನೀರಾವರಿ ಕಾಮಗಾರಿಗಳನ್ನು ನೆರವೇರಿಸುವುದರಲ್ಲಿ ಉತ್ಸುಕರಾಗಿ ಮೈನರ್ ಕೆರೆಗಳು ನಾದುರಸ್ತಿ ಸ್ಥಿತಿಗೆ ಬರುವುದಕ್ಕೆ ಅವಕಾಶಕೊಟ್ಟ ಪಕ್ಷದಲ್ಲಿ, ಅವರು ಕೈಗೊಂಡಿರುವ ಆ ನೀರಾವರಿ ಅಭಿವೃದ್ಧಿಯ ಕಾರ್ಯನೀತಿಗೆ ಅದು ಅನುಗುಣವಾಗಿರುವುದಿಲ್ಲವೆಂಬ ಅಂಶವನ್ನು ಅವರು ಮನಗಂಡಿದ್ದಾರೆ. ಆದಕಾರಣ, ಮೈನರ್ ಕೆರೆಗಳ ಸಂಬಂಧದಲ್ಲಿ ಸಮಗ್ರವಾದ ಒಂದು ಪರಿಶೀಲನೆಯನ್ನು ನಡೆಯಿಸಿ, ಅವುಗಳ ಜೀರ್ಣೋದ್ಧಾರ ಕಾರ್ಯವು ಹೆಚ್ಚು ಹೆಚ್ಚಾಗಿ ಮುಂದುವರಿಯುವಂತೆ ಮಾಡಲು ತಕ್ಕ ಏರ್ಪಾಡುಗಳನ್ನು ಸೂಚಿಸುವುದಕ್ಕಾಗಿ ಸರ್ಕಾರದವರು ಜುಲೈ ತಿಂಗಳಿನಲ್ಲಿ ಒಂದು ಸಮಿತಿಯನ್ನು ಏರ್ಪಡಿಸಿ, ಅದಕ್ಕೆ ರೆವಿನ್ಯೂ ಕಮಿಷನರವರನ್ನು ಅಧ್ಯಕ್ಷರನ್ನಾಗಿ ನೇಮಕಮಾಡಿದರು. ಸಮಿತಿಯವರು ಈ ಸಂಬಂಧದಲ್ಲಿ ಸಮಗ್ರವಾದ ಸಲಹೆಗಳನ್ನು ಒಪ್ಪಿಸಿದ್ದಾರೆ. ಈ ಸಲಹೆಗಳನ್ನು ಸರ್ಕಾರದವರು ಶೀಘ್ರಪ್ರಸಕ್ತಿಯಿಂದ ಪರಿಶೀಲಿಸುತ್ತಿದ್ದಾರೆ.

ವಿದ್ಯುಚ್ಛಕ್ತಿಯ ಇಲಾಖೆ

1940-41 ನೆಯ ಸಾಲಿನಲ್ಲಿ ವಿದ್ಯುಚ್ಛಕ್ತಿ ಇಲಾಖೆಯ ಕಾರ್ಯವು ವೃದ್ಧಿಯಾಯಿತು. ಒಟ್ಟು ಹುಟ್ಟುವಳಿಯು ಶೇಕಡ 11.35

[೬ ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೧ನೆಯ ಅಕ್ಟೋಬರ್ ತಾ॥ ೧೩ನೇ ಸೋಮವಾರ

ಗೋರಕ್ಷಣ.

ಭಾರತೀಯರಿಗೆ ಗೋವು ಮಹಾಪೂಜ್ಯವಸ್ತುವಾಗಿರುವುದು ಕೋಟ್ಯನುಕೋಟಿ ಪ್ರಾಣಿಗಳಲ್ಲಿ ಗೋವಿಗೆ ಸಮಾನವಾದ ಪ್ರಾಣಿಯು ಈ ಪ್ರಪಂಚದಲ್ಲಿ ಮತ್ತಾವುದೂ ಇರುವುದಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು ಆದುದರಿಂದ ಸನಾತನ ಭಾರತೀಯರು ಈ ಪ್ರಾಣಿಯನ್ನು ಮಾತೃಪಿತೃಸಮಾನವಾಗಿ ಭಾವಿಸಿ ಗೋಮಾತೆಯೆಂದು ಕರೆಯುತ್ತ ಇದನ್ನು ಪೂಜಿಸುತ್ತಿರುವರು ಇದರಿಂದ ಉತ್ಪನ್ನವಾಗುವ ಕ್ಷೀರ ದಧಿ ಘೃತ ಮೊದಲಾದವುಗಳು ಪರಮಾತ್ಮನಿಗೆ ಪ್ರಿಯವಾಗಿ ಅಭಿಷೇಕಾದಿಗಳಿಗೆ ಯೋಗ್ಯವೆನಿಸಿರುವವು ಗೋಮೂತ್ರ ಗೋಮಯಾದಿಗಳಿಲ್ಲದ ಯಾವ ವಸ್ತುವೂ ಶುದ್ಧವಾಗುವಂತಿಲ್ಲ ಮೋಕ್ಷಸಾಧನೀಭೂತವಾದ ಭಸ್ಮವು ಗೋಮಯದಿಂದಲೇ ಸಿದ್ಧವಾಗುವದು ಅಂದಮೇಲೆ ಗೋಮಾತೆಯ ಮಹತ್ತ್ವವು ಎಷ್ಟಿರಬಹುದೆಂಬುದನ್ನು ಪರರು ಯೋಚಿಸಬೇಕಾಗಿದೆ

ಒಕ್ಕಲತನವೇ ಮುಖ್ಯಪ್ರಾಯವಾಗಿರುವ ಭಾರತಭೂಮಿಯು ಗೋಮಾತೆಯಿಂದಲೇ ಉನ್ನತವಾಗಬೇಕಾಗಿದೆ ಹಿಂದೂ ಜನಾಂಗದ ಶರೀರಪೋಷಣ, ಮೇಧಾಭಿವೃದ್ಧಿ ಮೊದಲಾದವುಗಳೆಲ್ಲ ಗೋಸಂತತಿಯೇ ಮೂಲಕಾರಣವಾಗಿದೆ ಆದುದರಿಂದ ನಮ್ಮ ಪೂರ್ವಜರು ಪೂರ್ವಕಾಲದಲ್ಲಿ ಗೋವುಗಳನ್ನು ವಿಶೇಷವಾಗಿ ಸಾಕುತ್ತ ತಮ್ಮ ಪ್ರಾಣಕ್ಕಿಂತಲೂ ಹೆಚ್ಚಾಗಿ ಕಾಣುತ್ತಿದ್ದರು ಆ ಕಾಲದಲ್ಲಿ ಗೋಮಾತೆಯ ಪ್ರಭಾವದಿಂದ ಭಾರತೀಯರು ಶ್ರೀಮಂತರೂ, ಧೀಮಂತರೂ, ಶಕ್ತಿಮಂತರೂ ಆಗಿ ಮೆರೆಯುತ್ತಿದ್ದರು ಈಗಿನ ಭಾರತೀಯರು ಪಾಶ್ಚಾತ್ಯರ ಸಂಸರ್ಗದಿಂದ ಗೋಮಾತೆಯಲ್ಲಿ ಪೂಜ್ಯಬುದ್ಧಿಯನ್ನಿಡದೆ ವರ್ತಿಸುತ್ತಿರುವದರಿಂದ ಐಶ್ವರ್ಯಹೀನರಾಗಿ ದಾರಿದ್ರ್ಯದಿಂದ ಕೊರಗುತ್ತಿರುವರು

ಯಸ್ಯೈಕಾಪಿ ಗೃಹೇ ನಾಸ್ತಿ ಧೇನುರ್ವತ್ಸಾನುಚಾರಿಣೀ ।
ಮಂಗಲಾನಿ ಕುತಸ್ತಸ್ಯ ಕುತಸ್ತಸ್ಯ ತಮಃಕ್ಷಯಃ ।

ಯಾವನ ಮನೆಯಲ್ಲಿ ಕರುವಿನಿಂದ ಯುಕ್ತವಾದ ಒಂದಾದರೂ ಗೋವು ಇರುವುದಿಲ್ಲವೋ, ಅವನಿಗೆ ಮಂಗಲವೆಲ್ಲಿಯದು? ಮತ್ತು ಅಜ್ಞಾನನಾಶವೆಲ್ಲಿಯದು? ಎಂದು ಅತ್ರಿಮಹರ್ಷಿಯು ಸಾರಿದ್ದಾನೆ ಇದರಿಂದ ಮಂಗಲಾಪೇಕ್ಷಿಯೂ ಜ್ಞಾನಾಪೇಕ್ಷಿಯೂ ಆದ ಮನುಷ್ಯನು ತನ್ನ ಮನೆಯಲ್ಲಿ ಅವಶ್ಯವಾಗಿ ಗೋವುಗಳನ್ನು ರಕ್ಷಿಸಬೇಕೆಂದು ಸ್ಪಷ್ಟವಾಗುವದು

ಗಾವೋ ಭಗೋ ಗಾವ ಇಂದ್ರೋ ಮೇ ಅಚ್ಛಾನ್ ಗಾವಃ
ಸೋಮಸ್ಯ ಪ್ರಥಮಸ್ಯ ಭಕ್ಷಃ । ಇಮಾ ಯಾ ಗಾವಃ ಸ ಜನಾಸ
ಇಂದ್ರ ಇಚ್ಛಾಮೀದ್ಧೃದಾ ಮನಸಾ ಚಿದಿಂದ್ರಂ ॥

ಗೋವುಗಳೇ ನನ್ನ ಐಶ್ವರ್ಯವಾಗಲಿ, ಇಂದ್ರನು ನನಗೆ ಗೋವುಗಳನ್ನೇ ಅನುಗ್ರಹಿಸಲಿ, ಆ ಗೋವುಗಳು ಸೋಮನಿಗೆ ಕ್ಷೀರಾದಿಗಳನ್ನು ಕೊಡತಕ್ಕವುಗಳಾದುದರಿಂದ ಭಕ್ಷಣಸಾಧನಗಳಾಗಿರಲಿ ಎಲೈ ಜನರೇ! ಈ ವಿಧವಾದ ಗೋವುಗಳು ಹಾಲು ತುಪ್ಪ ಮೊದಲಾದವುಗಳಿಂದ ರಕ್ಷಿಸುವ ಕಾರಣ ಅವು ಇಂದ್ರಸ್ವರೂಪವಾಗಿವೆ ಗೋವುಗಳು ಹಾಲು ತುಪ್ಪ ಮೊದಲಾದವುಗಳನ್ನು ಕೊಡದಿದ್ದರೆ ಯಜ್ಞಾದಿಗಳು ನೆರವೇರಲಾರವು ಯಜ್ಞಾದಿಗಳು ನೆರವೇರದಿದ್ದರೆ ಇಂದ್ರನು ಕೃಶನಾಗಿ ಇಂದ್ರತ್ವಕ್ಕೆ ಅನರ್ಹನಾಗುವನು ಆದುದರಿಂದ ಇಂದ್ರನ ಇಂದ್ರತ್ವವು ಯಾವುಗಳಿಂದ ಪ್ರಾಪ್ತವಾಗುವುದೋ, ಅಂತಹ ಗೋವುಗಳು ಇಂದ್ರನೆಂದು ಹೇಳಿಸಿಕೊಳ್ಳಲ್ಪಡುವವು ಇಂತಹ ಗೋಸ್ವರೂಪ ಇಂದ್ರನನ್ನು ಮನಃಪೂರ್ವಕವಾಗಿ ಬಯಸುವೆನು ಎಂದು ಶ್ರುತಿದೇವಿಯು ಗೋಮಾತೆಯ ಮಹತ್ತ್ವವನ್ನು ಮುಕ್ತಕಂಠದಿಂದ ಕೊಂಡಾಡಿರುವಳು ಬೃಹತ್ಪರಾಶರಸ್ಮೃತಿಯಲ್ಲಿ—

ಶೃಂಗಮೂಲೇ ಸ್ಥಿತೋ ಬ್ರಹ್ಮಾ ಶೃಂಗಮಧ್ಯೇ ತು ಕೇಶವಃ ।
ಶೃಂಗಾಗ್ರೇ ಶಂಕರಂ ವಿದ್ಯಾತ್ತ್ರಯೋ ದೇವಾಃ ಪ್ರತಿಷ್ಠಿತಾಃ ॥
ಶೃಂಗಾಗ್ರೇ ಸರ್ವತೀರ್ಥಾನಿ ಸರ್ವದೇವಮಯೀ ಹಿ ಗೌಃ ॥

ಗೋವಿನ ಕೋಡುಗಳ ಬುಡದಲ್ಲಿ ಬ್ರಹ್ಮನೂ, ಮಧ್ಯಭಾಗದಲ್ಲಿ ವಿಷ್ಣುವೂ, ಅಗ್ರಭಾಗದಲ್ಲಿ ಶಂಕರನೂ ಮತ್ತು ಸರ್ವತೀರ್ಥಗಳೂ ವಾಸವಾಗಿರುವದರಿಂದ ಗೋವು ಸಮಸ್ತ ದೇವತಾಸ್ವರೂಪವಾಗಿರುವದೆಂದು ವರ್ಣಿಸಲ್ಪಟ್ಟಿದೆ ಅಂದಮೇಲೆ ಗೋಮಾತೆಯ ರಕ್ಷಣಾದಿಗಳಿಂದ ಎಂತಹ ಫಲವು ಪ್ರಾಪ್ತವಾಗಬಹುದೆಂಬುದನ್ನು ಬೇರೆ ವರ್ಣಿಸಬೇಕಾಗಿಲ್ಲ

ಹರಂತಿ ಸ್ಪರ್ಶನಾತ್ ಪಾಪಂ ಪಯಸಾ ಪೋಷಯಂತಿ ಯಾಃ ।
ಪ್ರಾಪಯಂತಿ ದಿವಂ ದತ್ತಾಃ ಪೂಜ್ಯಾ ಗಾವಃ ಕಥಂ ನ ತಾಃ ॥

ಯಾವ ಪ್ರಾಣಿಗಳು ತಮ್ಮ ದೇಹಸ್ಪರ್ಶಮಾತ್ರದಿಂದ ಸಮಸ್ತ ಮಹಾಪಾಪಗಳನ್ನು ನಾಶಮಾಡುತ್ತವೆಯೋ, ತಮ್ಮ ಹಾಲಿನಿಂದ ಜನಗಳನ್ನು ರಕ್ಷಣಮಾಡುತ್ತವೆಯೋ ತಮ್ಮ ದಾನದಿಂದ (ಗೋದಾನದಿಂದ) ದಾನಮಾಡಿದವರಿಗೆ ಸ್ವರ್ಗಸುಖವನ್ನುಂಟುಮಾಡುತ್ತವೆಯೋ, ಅಂತಹ ಗೋವುಗಳು ಯಾರಿಗೆತಾನೇ ಪೂಜ್ಯವೆನಿಸಲಿಕ್ಕಿಲ್ಲ? ಎಲ್ಲರಿಗೂ ಪೂಜ್ಯಗಳಾಗಿರುವವೆಂದು ಮಹಾತ್ಮರು ಗೋಮಹಿಮೆಯನ್ನು ನಾನಾರೀತಿಯಾಗಿ ಬಣ್ಣಿಸಿರುವರು

ಇಂತಹ ಪೂಜ್ಯಗೋವುಗಳ ಸ್ಥಿತಿಯು ಈಗ ನಾಯಿಗಿಂತಲೂ ಕೀಳಾಗಿಹೋಗಿದೆ ಅನೇಕಜನರು ನಿಷಿದ್ಧಗಳಾದ ನಾಯಿಗಳನ್ನು ಕಟ್ಟಿಕೊಂಡು ಅವುಗಳ ಆಹಾರಕ್ಕೂ ರಕ್ಷಣೆಗೂ ನೂರಾರು ರೂಪಾಯಿಗಳನ್ನು ವೆಚ್ಚಮಾಡುತ್ತಿರುವರು ಆದರೆ ಗೋವುಗಳನ್ನು ಕಟ್ಟಿಕೊಂಡು ಅವುಗಳ ಸೇವೆಯನ್ನು ಮಾಡುವದಿಲ್ಲ ಇದು ಕಾಲಮಹಿಮೆಯೆಂದೇ ಹೇಳಬೇಕಾಗುವದು ಇನ್ನು ಕೆಲವರು ವಯಸ್ಸಾದ ಕೂಡಲೇ ಗೋವುಗಳನ್ನು ಕಟುಕರಿಗೆ ಮಾರಲಿಕ್ಕೆ ಕೊಟ್ಟು ಅವುಗಳ ಪ್ರಾಣಹರಣ ಮಾಡುತ್ತಿರುವರು ಈ ಕೃತಘ್ನರಿಗೆ ದಾರಿದ್ರ್ಯದುಃಖ ಗೋಹತ್ಯಾದಿ ದೋಷಗಳು ಬಾರದಿರುವವೇ? ಭರತಖಂಡವು ಬುದ್ಧಿಯಿಂದಲೂ, ಶಕ್ತಿಯಿಂದಲೂ, ಐಶ್ವರ್ಯದಿಂದಲೂ ಅವನತಿಯನ್ನು ಹೊಂದುತ್ತಿರುವುದಕ್ಕೆ ಗೋರಕ್ಷಣೆಯ ಅಭಾವವೇ ಮೂಲಕಾರಣವಾಗಿದೆಯೆಂದು ಧಾರಾಳವಾಗಿ ಹೇಳಬಹುದಾಗಿದೆ ಆದುದರಿಂದ ಭಾರತೀಯರು ಪರಮಪೂಜ್ಯವಾದ ಗೋವುಗಳಲ್ಲಿ ಅನಾದರಭಾವವನ್ನಿಡದೆ ಪೂಜ್ಯಭಾವವನ್ನಿಟ್ಟು ರಕ್ಷಿಸಿ ಪರಮೇಶ್ವರನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ

ಯುದ್ಧವಾರ್ತೆ.

ಜಪಾನಿಗೆ ಎಣ್ಣೆಯನ್ನು ಕಳುಹಿಸಲಾಗದು

ಅಮೆರಿಕಾ, ಬ್ರಿಟನ್ ಮತ್ತು ನೆದರ್‌ಲೇಂಡ್ ಸರಕಾರಗಳು ಇನ್ನು ಮುಂದೆ ಜಪಾನಿಗೆ ಎಣ್ಣೆ ಕಳುಹಿಸಲಾಗದೆಂಬ ತೀರ್ಮಾನಕ್ಕೆ ಬಂದಿವೆಯೆಂದೂ, ಜುಲೈ 26 ರಿಂದೀಚೆಗೆ ಸುಮಾರು 25000 ಡಾಲರುಗಳಷ್ಟು ಬೆಲೆಯ ಎಣ್ಣೆಯನ್ನು ಮಾತ್ರ ಜಪಾನಿಗೆ ಅಮೆರಿಕೆಯು ಕೊಟ್ಟಿದೆಯೆಂದೂ ತಿಳಿದುಬರುತ್ತದೆ

ಬ್ರಿಟನ್ನು ಜರ್ಮನಿಯ ಮೇಲೆ ಸದ್ಯಃ ಬೀಳುವಂತಿಲ್ಲ

ಲಾರ್ಡ್ ಹ್ಯಾಲಿಫ್ಯಾಕ್ಸರು ಮಾತನಾಡುತ್ತ, ಅಮೆರಿಕದ ಸಹಾಯಕ್ಕಾಗಿ ಕೃತಜ್ಞತೆಗಳನ್ನರ್ಪಿಸಿದರು ಬ್ರಿಟಿಷ್ ದ್ವೀಪದ ಸ್ಥಿತಿಗತಿಗಳನ್ನು ವರ್ಣಿಸಿ ಬ್ರಿಟನ್ನು ಯೂರೋಪಿಗೆ ಮುತ್ತಿಗೆಹಾಕುವುದು ಈಗಿನ ಸಂದರ್ಭದಲ್ಲಿ ಸಾಧ್ಯವಿಲ್ಲವೆಂಬುದನ್ನು ವಿವರಿಸಿದರು. ಈಗ ಮೂರು ತಿಂಗಳಿಂದ ಪಶ್ಚಿಮದಲ್ಲಿ ಜರ್ಮನ್ ವಿಮಾನಗಳ ಚಟುವಟಿಕೆಯು ಇಲ್ಲದೆ ಇರುವುದರಿಂದ ಬ್ರಿಟನ್ನು ಯೂರೋಪಿಗೆ ಮುತ್ತಿಗೆ ಹಾಕಿ ಲಾಭಪಡೆಯಬೇಕಾಗಿತ್ತೆಂದು ಬ್ರಿಟಿಷರೂ ಮತ್ತು ಅಮೆರಿಕನ್ನರೂ ಭಾವಿಸುತ್ತಾರೆ ಆದರೆ ಈ ಉದ್ಯಮವು ಸಾಧ್ಯವಾಗುವಂತೆ ಮಾಡಲು ಸಾಕಾದಷ್ಟು ಹಡಗುಗಳ ಸೌಕರ್ಯವೂ ಮತ್ತು ಸಾಧನಗಳೂ ಈಗ ಇಲ್ಲ ಎಂಬುದಾಗಿ ಹೇಳಿದರು ಜರ್ಮನಿಯ ಮೇಲೆ ಏಕಪ್ರಕಾರವಾಗಿ ಬಾಂಬುಗಳನ್ನು ಸುರಿಸುವುದೊಂದೇ ರಷ್ಯದಮೇಲಿನ ಒತ್ತಾಯವನ್ನು ಕಡಿಮೆಮಾಡಲು ದಾರಿಯೆಂದೂ, ಹೀಗೆ ಮಾಡುವುದರಿಂದ ಜರ್ಮನ್ ಸೈನಿಕರುಗಳನ್ನೂ ಜರ್ಮನ್ ಫೈಟರುಗಳನ್ನೂ ಪಶ್ಚಿಮಕ್ಕೆ ಸೆಳೆದಂತಾಗುವುದೆಂದೂ ಹೇಳಿದರು

ತುರ್ಕಿ ಸರ್ಕಾರದ ಹೇಳಿಕೆ

ಜರ್ಮನಿಯು ತುರ್ಕಿಯ ಮುಂದೆ ಅಸಾಧ್ಯ ಬೇಡಿಕೆಗಳನ್ನಿಟ್ಟು ಒತ್ತಾಯಪಡಿಸುತ್ತಿದೆಯೆಂದೂ, ತುರ್ಕಿಯ ಮೇಲೆ ಬೀಳಲು ಬಲ್ಗೇರಿಯಾದಲ್ಲಿ ತಕ್ಕ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದೆಯೆಂದೂ ವಿದೇಶೀ ಪತ್ರಿಕೆಗಳೂ ಮತ್ತು ರೇಡಿಯೋಗಳೂ ಸೂಚಿಸುತ್ತಿರುವುದಕ್ಕೆ ಜರ್ಮನಿ ಮತ್ತು ತುರ್ಕಿ ಸರಕಾರಗಳು ಅರೆಕಾಸಿನ ಬೆಲೆಕೊಟ್ಟಿಲ್ಲ ಜೂನ್ ೧೮ ನೆಯ ತಾ॥ ದಿವಸ ಇವೆರಡು ರಾಷ್ಟ್ರಗಳು ಮಾಡಿಕೊಂಡ ಮೈತ್ರೀಯುತವಾದ ಒಪ್ಪಂದಕ್ಕೆ ಇದರಿಂದ ಸ್ವಲ್ಪವೂ ಭಂಗವುಂಟಾಗಿಲ್ಲವೆಂದು ತಿಳಿಸಲು ಎರಡು ಸರಕಾರಗಳೂ ಒಪ್ಪಿವೆ ಎಂದು ತುರ್ಕಿ ಸರಕಾರವು ಪ್ರಕಟಿಸಿದೆ

ತುರ್ಕಿ ಸರಕಾರದಲ್ಲಿ ಬ್ರಿಟನ್ನಿಗೆ ವಿಶ್ವಾಸವಿದೆ

೩ ನೆಯ ತಾರೀಖಿನ ದಿವಸ ಏಡನ್ನರು ಕಾಮನ್ಸ್ ಸಭೆಯಲ್ಲಿ ಮಾತನಾಡುತ್ತ—“ಜಲಸಂಧಿಗಳ ಮೇಲಿನ ಅಧಿಕಾರ ವಹಿಸಿರುವ ತುರ್ಕಿಯು ತನ್ನ ಕರ್ತವ್ಯವನ್ನು ನಿರ್ವಹಿಸಲು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುವದೆಂಬ ನಂಬಿಕೆ ನನಗಿದೆಯೆಂದೂ, ಬಲ್ಗೇರಿಯಾ ಸರಕಾರದವರು ಇಟಲಿ ಸರಕಾರದಿಂದ ಅನೇಕ ಡಿಸ್ಟ್ರಾಯರುಗಳನ್ನು ಪಡೆದು, ಅವುಗಳು ಜಲಸಂಧಿಗಳ ಮೂಲಕ ಬರಲು ಅವಕಾಶ ಕೊಡಬೇಕೆಂದು ಕೇಳುತ್ತಿದ್ದಾರೆಂಬುದಾಗಿ ಬಂದ ಸುದ್ದಿಗಳನ್ನು ತುರ್ಕಿ ಸರ್ಕಾರಕ್ಕೆ ತಿಳಿಸಲಾಗಿದೆಯೆಂದೂ, ಈ ರೀತಿ ಬಲ್ಗೇರಿಯವು ಪ್ರಾರ್ಥಿಸಿಲ್ಲವೆಂದು ತುರ್ಕಿ ಸರಕಾರವು ಬ್ರಿಟಿಷ್ ಸರಕಾರಕ್ಕೆ ತಿಳಿಸಿದೆಯೆಂದೂ ಹೇಳಿದರು.

ಅಮೆರಿಕೆಯಲ್ಲಿ ೫೯೮೫ ಮಿಲಿಯನ್ ಡಾಲರುಗಳ ವೆಚ್ಚಕ್ಕೆ ಒಪ್ಪಿಗೆ

ಲೀಸ್ ಅಂಡ್‌ಲೆಂಡ್ ಶಾಸನದ ಪ್ರಕಾರ ೫,೯೮೫ ಮಿಲಿಯನ್ ಡಾಲರುಗಳ ವೆಚ್ಚಕ್ಕೆ ರಿಪ್ರಿಜೆಂಟೇಟಿವ್ಸ್ ಸಭೆಯು ಒಪ್ಪಿಗೆಯಿತ್ತಿತು ನಾಜಿಗಳು ಸೋಲುವವರೆಗೂ ಅಮೇರಿಕದಲ್ಲಿ ಸಂಗ್ರಾಮ ವಸ್ತುಗಳ ಸೃಷ್ಟಿಯನ್ನೂ ನಿಲ್ಲಿಸಲ್ಲವೆಂದು ತಿಳಿಸಲಾಯಿತು

“ಆಕ್ಸಿಸ್ ರಾಷ್ಟ್ರಗಳ ಶತ್ರುಗಳಿಗೆ ನಾವು ಅಪಾರ ವಿಮಾನಗಳನ್ನೂ ಟ್ಯಾಂಕುಗಳನ್ನೂ ಕಳಿಸಬೇಕಾಗಿದೆ ವಿದೇಶಗಳಲ್ಲಿರುವ ನಮ್ಮ ಮಿತ್ರರು ಉಗ್ರವಾಗಿ ಕಾದಾಡುತ್ತಿದ್ದಾರೆ ನಮ್ಮ ಸಹಾಯವಿಲ್ಲದೆ ಅವರು ಬದುಕಲಾರರು. ಅವರೇನಾದರೂ ಸೋತರೆಂದರೆ ನಾವು ನಾಜಿಗಳ ಕ್ರೂರಶಕ್ತಿಯನ್ನು ಎದುರಿಸಬೇಕಾಗುತ್ತದೆ” ಎಂಬುದಾಗಿ ಶ್ರೀ ಕಾನನ್‌ರವರು ತಿಳಿಸಿದರು.

ಜಪಾನ್ ಸೇನೆಯು ಏಟುಹಾಕಲು ಕಾಯುತ್ತಿದೆ

ಪೂರ್ವದೇಶದ ಪರಿಸ್ಥಿತಿ ಮತ್ತೆ ಕ್ರೂರವಾಗುವ ಸಂಭವವಿದೆಯೆಂದು ಕಾಣಬರುತ್ತದೆ. ಚಾಂಗ್‌ಷಾ ಪ್ರಾಂತ್ಯದಲ್ಲಿ ಜಪಾನರ ಮುತ್ತಿಗೆಯು ವಿಫಲವಾಗಿ ಕೇಶೋನಥೆಯಾಗಿರುವುದರಿಂದ ಅವರು ಮತ್ತೆ ತಮ್ಮ ಬಲವನ್ನು ಕ್ರೋಢಪಡಿಸಲು ಕುತೂಹಲರಾಗಿದ್ದಾರೆಂದು ಕಾಣುತ್ತದೆ ಈಗಾಗಲೇ ಜಪಾನ್ ಸೇನೆಯು ಇತರ ರಾಷ್ಟ್ರಗಳ ಮೇಲೆ ಅಪಪ್ರಚಾರಕ್ಕೆ ಆರಂಭಿಸಿದೆ.

ಮಾಸ್ಕೋ ಪಶ್ಚಿಮದಲ್ಲಿ ಭಯಂಕರ ಹೊಡೆದಾಟ!

ವ್ಯಾಜಮ ಕ್ಷೇತ್ರವೊಂದರಲ್ಲಿಯೇ ರಷ್ಯದ ಹಲವು ಪಡೆಗಳು ಸುತ್ತುವರಿಯಲ್ಪಟ್ಟಿವೆಯೆಂದೂ, ಅವು ವಿನಾಶ

ವನ್ನು ಎದುರುನೋಡುತ್ತಿವೆಯೆಂದೂ ಜರ್ಮನ್ ಪ್ರಕಟನೆಯು ತಿಳಿಸುತ್ತದೆ. ರಷ್ಯಾದ ರಾಜಧಾನಿಯಾದ ಮಾಸ್ಕೋ ನಗರದ ಮುತ್ತಿಗೆಗಾಗಿ ಹರ್ ಹಿಟ್ಲರನು ಘೋರ ಮುತ್ತಿಗೆಯನ್ನಾರಂಭಿಸಿರುವರು ವ್ಯಾಜಮ್ ಎಂಬುದು ಸ್ಮೊಲೆನ್ಸ್ಕ-ಮಾಸ್ಕೊ ರಸ್ತೆಯಲ್ಲಿ ಮಾಸ್ಕೋದಿಂದ ಪಶ್ಚಿಮಕ್ಕೆ ೧೪೦ ಮೈಲಿ ದೂರದಲ್ಲಿದೆ ಮಾರ್ಷಲ್ ಟಿಮೋಷಿಂಕೋರವರು ಈ ಕ್ಷೇತ್ರದಲ್ಲಿ ಮೇಲೆ ಬಿದ್ದು ಜರ್ಮನರನ್ನು ಹಿಂದಕ್ಕೆ ತಳ್ಳಿದ್ದರು ಆದರೆ ನಾಜಿಗಳು ಒಂದೇ ರಾತ್ರಿಯಲ್ಲಿ ಮುಂದೆ ನುಗ್ಗಿ ಕದನವನ್ನಾರಂಭಿಸಿದ್ದಾರೆ

ಇತರ ಕಡೆಗಳಲ್ಲಿ ಜರ್ಮನರು ತಮ್ಮ ಒತ್ತಾಯವನ್ನು ಕಡಿಮೆ ಮಾಡಿಲ್ಲ ಅಲ್ಲಿರುವ ರಷ್ಯ ಸೇನೆಗಳು ಈ ರಣರಂಗಕ್ಕೆ ತೆರಳದಂತೆ ಮಾಡುವುದೇ ಇವರ ಉದ್ದೇಶ ಅಜೋವ್ ಸಮುದ್ರದಲ್ಲಿರುವ ಮೇರಿಯಪೋಲ್ ಮತ್ತು ಬರ್ಡಿಯಾನ್ಸ್ಕ ಎಂಬ ಬಂದರುಗಳನ್ನು ಆಕ್ರಮಿಸಿರುವುದಾಗಿ ನಾಜಿಗಳು ಹೇಳುತ್ತಾರೆ

ಸ್ಟಾಲಿನ್ನರಿಗೆ ರೂಜ್‌ವೆಲ್ಟರ ಪತ್ರ

ರೂಜ್‌ವೆಲ್ಟರು ಸ್ಟಾಲಿನ್ನರಿಗೆ ಪತ್ರವನ್ನು ಬರೆದು ಇತರ ರಣರಂಗಗಳಂತೆ ನಿಮ್ಮ ರಣರಂಗದಲ್ಲಿಯೂ ಹರ್ ಹಿಟ್ಲರರನ್ನು ಎದುರಿಸಲು ತಕ್ಕ ಸಲಕರಣೆಗಳನ್ನು ಕಳುಹಿಸಲು ಮಾರ್ಗವನ್ನು ಕಂಡುಹಿಡಿಯಲಾಗುವುದೆಂದೂ, ರಶ್ಯನ್ ಯೋಧರ ಶೌರ್ಯ ಕಂಡು ನಾವೆಲ್ಲ ಉಬ್ಬಿಹೋಗಿದ್ದೇವೆಂದೂ, ನಮ್ಮ ಸಂತೋಷವೆಷ್ಟೆಂಬುದನ್ನು ನಾನು ವರ್ಣಿಸಲಾರೆನೆಂದೂ” ತಿಳಿಸಿದ್ದಾರೆ

ಅಬ್ಸೀನಿಯಾ ಸೇನಾ ನಿರ್ಮಾಣ

ಅಬ್ಸೀನಿಯಾ ಚಕ್ರವರ್ತಿಗಳು ತಮ್ಮ ನಾಯಕತ್ವದಲ್ಲಿ ಒಂದು ದೇಶೀಯ ಸೈನ್ಯವನ್ನು ಕೂಡಿಸುವ ಯೋಚನೆಮಾಡಿರುತ್ತಾರೆ ಇದರಲ್ಲಿ ಎಷ್ಟು ಯೋಧರಿರಬೇಕು, ಯಾವ ಯಾವ ಪಡೆಗಳನ್ನು ರೂಪಿಸಬೇಕೆಂಬುದು ಇನ್ನೂ ತೀರ್ಮಾನವಾಗಿಲ್ಲ ಈ ಸೇನೆಯನ್ನು ಸಿದ್ಧಪಡಿಸಿ, ಅದನ್ನು ತರಪೇತು ಮಾಡಲು ಬ್ರಿಟಿಷ್ ಮಿಲಿಟರಿ ಮಿಷನವರು ಸಹಾಯಮಾಡಲು ಒಪ್ಪಿದ್ದಾರೆಂದು ತಿಳಿದುಬರುತ್ತದೆ

ಜರ್ಮನ್ ಸೈನಾಧಿಕಾರಿಯ ಹೇಳಿಕೆ

ಜರ್ಮನಿಯ ಸೈನ್ಯಾಧಿಕಾರಿಗಳಲ್ಲಿ ಒಬ್ಬರಾದ ವಾನ್ ಸೆಕ್ಟಿಯವರು ಅಂಕಾರದಲ್ಲಿರುವ ಜರ್ಮನ್ ಮಿಲಿಟರಿ ಸಲಹೆಗಾರರನ್ನು ಕಂಡು ಮಾತನಾಡಲು ಬಂದಿದ್ದಾರೆ ಅವರು ತುರ್ಕಿ ಸೈನ್ಯಾಧಿಕಾರಿಗಳನ್ನು ಸಹ ಕಂಡು ಮಾತುಕತೆ ನಡೆಸುತ್ತಿದ್ದಾರೆ ಜರ್ಮನಿಯು ರಷ್ಯವನ್ನು ಸೋಲಿಸುವುದು ಖಂಡಿತವೆಂದು ಅವರು ಒತ್ತಿ ಹೇಳುತ್ತಿದ್ದಾರೆ ಮಾಸ್ಕೋ ಮತ್ತು ಖಾರ್ಕೋವ್‌ಗಳನ್ನು ಜರ್ಮನರು ಬೇಗ ಹಿಡಿಯುತ್ತಲಿದ್ದಾರೆಂದೂ, ಅವೆರಡು ಬಿದ್ದರೆ ರಷ್ಯದ ಸೇನೆಗೆ ತಕ್ಕಷ್ಟು ಸರಬರಾಜಿಲ್ಲದೆ ಅದು ಸೋಲುವುದು ಖಂಡಿತವೆಂದೂ, ಹೇಳುತ್ತಿರುವರು.

ಕ್ರಿಮಿಯಾದ ಬಳಿ ನಾಜಿಗಳ ನಷ್ಟ

ಕ್ರಿಮಿಯಾವನ್ನು ರಷ್ಯದ ಮೂಲಭೂಭಾಗದೊಂದಿಗೆ ಸೇರಿಸುವ ಪೆರೆಕೋಪ್ ಭೂಕಂಠವನ್ನು ಆಕ್ರಮಿಸಿ ಅದನ್ನು ಬೇರ್ಪಡಿಸಲು ಜರ್ಮನರು ಮಹತ್ಪ್ರಯತ್ನವನ್ನು ಮಾಡುತ್ತಿರುವರು. ಈ ಪ್ರಯತ್ನದಲ್ಲಿ ಜರ್ಮನ್ ಸೈನ್ಯಗಳಿಗೆ ಬಹಳ ಹಾನಿಯಾಗಿರುತ್ತದೆ ಯೆನೆಗೀಸ್ಕ ಎಂಬ ನಗರದ ಬಳಿ ಜರ್ಮನ್ ಪಡೆಯೊಂದು ತಡೆಯಲ್ಪಟ್ಟಿದೆ ರಷ್ಯದ ನೌಕಾಬಲವು ಆ ಸೈನ್ಯದ ಮೇಲೆ ಗುಂಡುಹಾರಿಸಿ ವಿಶೇಷ ನಷ್ಟಪಡಿಸಿದೆ ಉಕ್ರೇನಿನ ನೈಋತ್ಯ ಭಾಗದಲ್ಲಿ ಮೂರು ಜರ್ಮನ್ ಪಡೆಗಳು ನಾಶವಾದವೆಂದೂ ಸುಮಾರು 5500 ನಾಜಿ ಯೋಧರು ಮಡಿದರೆಂದೂ ಪ್ರಕಟಿಸಲ್ಪಟ್ಟಿದೆ

ರಷ್ಯಾ ಯುದ್ಧದ ಬಗ್ಗೆ ಹರ್ ಹಿಟ್ಲರರ ಭಾಷಣ

ಹರ್ ಹಿಟ್ಲರರು ೨ ನೆಯ ತಾರೀಖಿನ ದಿವಸ ಅನಿರೀಕ್ಷಿತವಾಗಿ ಒಂದು ಭಾಷಣಮಾಡಿ, ರಷ್ಯಾ ಯುದ್ಧ ವಿಷಯವನ್ನು ವಿಮರ್ಶಿಸಿದರು “ಈಗ 48 ಘಂಟೆಗಳಿಂದ ಭಯಂಕರ ಯುದ್ಧವು ನಡೆಯುತ್ತಿದೆ ಪೂರ್ವದಲ್ಲಿ ಶತ್ರುವನ್ನು ಸೋಲಿಸಲು ಇದರಿಂದ ಬಹಳ ಸಹಾಯವಾಗುತ್ತದೆ ಈಗ ರಣರಂಗಕ್ಕಿಳಿದಿರುವ ಕೋಟ್ಯಂತರ ಜನರ ಪರವಾಗಿ ನಾನೂ ಮಾತನಾಡುತ್ತಿದ್ದೇನೆ ಈ ಸಂಗ್ರಾಮವನ್ನು ನಾನು ಬಯಸಲಿಲ್ಲ ನಮ್ಮ ಹೆಸರು ಆಚಂದ್ರಾರ್ಕವಾಗಿ ಉಳಿಯುವಂತೆ ಮಾಡಲು ಈ ಯುದ್ಧವು ಬೇಕಾಗಿರಲಿಲ್ಲ ಶಾಂತಿ ಕಾಲದಲ್ಲಿ ನಾವು ಮಾಡಿದ ಕೆಲಸವೇ ನಮ್ಮ ಹೆಸರನ್ನುಳಿಸಲು ಸಾಕಾಗಿತ್ತು ಯುದ್ಧವು ಎಂದೂ ನಮ್ಮ ಗುರಿಯಾಗಿರಲಿಲ್ಲ ಆದರೆ ಜರ್ಮನ್ ಸ್ವಾತಂತ್ರ್ಯವನ್ನು ಮಾತ್ರ ನಾನು ಬಲಿಗೊಡುತ್ತಿರಲಿಲ್ಲ

ನಾನು ಕೈಗೊಂಡ ಕಾರ್ಯಕ್ರಮದಿಂದ ಇಂಗ್ಲೆಂಡಿನ ಸ್ನೇಹವನ್ನು ಸಂಪಾದಿಸುವುದು ಅಸಾಧ್ಯವಾದರೆ, ಇನ್ನಾವ ವಿಧದಲ್ಲೂ ಆ ಸ್ನೇಹವನ್ನು ಸಂಪಾದಿಸುವುದು ದುರ್ಲಭವೆಂಬುದು ನಿಶ್ಚಯ ಈಗೆರಡು ವರ್ಷಗಳಿಂದ ಜರ್ಮನಿಯು ಒಂದರಹಿಂದೊಂದರಂತೆ ಶತ್ರು ದೇಶಗಳನ್ನು ಜಯಿಸುತ್ತಿರುವುದು ಇತಿಹಾಸಪ್ರಸಿದ್ಧವಾಗಿದೆ ಇದು ನನಗೆ ಬೇಕಿರಲಿಲ್ಲ ಮೊಟ್ಟಮೊದಲಿನ ಘರ್ಷಣದ ನಂತರ ನಾನು ನನ್ನ ಶಾಂತಿಹಸ್ತವನ್ನು ನೀಡಿದೆ ಆದರೆ ಯುದ್ಧದಾಹದಿಂದ ಕೂಡಿರುವ ಚರ್ಚಿಲ್ಲರು ಅದನ್ನು ತಳ್ಳಿಹಾಕಿದರು ನಾನು ಶಾಂತಿಗಾಗಿ ಮುಂದೆ ಬಂದಾಗಲೆಲ್ಲಾ, ಇದೇ ರೀತಿ ಮಾಡುತ್ತ ಬಂದರು. ಆಮೇಲೆ ಯುದ್ಧವು ಅನಿವಾರ್ಯವೆಂದು ನಾನು ನಿರ್ಧರಿಸಿದೆನು

ನನ್ನ ಜೀವಮಾನದಲ್ಲೆಲ್ಲ ಅತ್ಯಂತ ಕಠಿಣವೆನಿಸಿದ ತೀರ್ಮಾನವನ್ನು ನಾನು ಮಾಡಬೇಕಾಯಿತು ಸಂಧಾನ ನಡೆಸಲು ನಾನು ಮಾಸ್ಕೋ ನಗರಕ್ಕೆ ನನ್ನ ರಾಯಭಾರಿಯನ್ನು ಕಳುಹಿಸಿದೆನು ನಾವು ನಮ್ಮ ಮಾತಿಗೆ ತಪ್ಪಲಿಲ್ಲ ನಮ್ಮ ಪತ್ರಿಕೆಯಲ್ಲಿ ಬೋಲ್ಷೆವಿಜಂ ಕುರಿತು ಒಂದು ಶಬ್ದವೂ ಬರಲಿಲ್ಲ ರಷ್ಯವು ಡಾರ್ಡನೆಲ್ಸ್‌ನಲ್ಲಿ ನೌಕಾಮೂಲಪಡೆಯಲು ಯತ್ನಿಸಿತು ನಾವು ರಷ್ಯವನ್ನು ಬಹು ಎಚ್ಚರಿಕೆಯಿಂದ ನೋಡುತ್ತ ಬಂದೆವು ಅವಕಾಶ ಸಿಕ್ಕಿದೊಡನೆಯೇ ಅದು ನಮ್ಮಮೇಲೆ ಬೀಳುವುದೆಂಬುದು ಕಳೆದ ಮೇ ತಿಂಗಳಲ್ಲಿ ನಿಶ್ಚಯವಾಯಿತು ಆಗ್ಗೆ ನಾನು ಒಂದು ನಿರ್ಧಾರಕ್ಕೆ ಬರಬೇಕಷ್ಟೆ! ನನ್ನ ಜೀವಮಾನದಲ್ಲೆಲ್ಲ ಇಷ್ಟು ಕಷ್ಟತರವಾದ ತೀರ್ಮಾನವನ್ನು ಕೈಗೊಳ್ಳುವ ಸಂದರ್ಭವೊದಗಿರಲಿಲ್ಲ ಪ್ರಪಂಚದ ಇತಿಹಾಸದಲ್ಲೆಂದೂ ಕಾಣದಂತಹ ಹೊಡದಾಟವೇ ನಡೆಯಿತು ಅಂದಿನಿಂದ ಇಲ್ಲಿಯವರೆಗೆ ನಮ್ಮ ಲೆಕ್ಕಾಚಾರದಂತೆ ಕೆಲಸವಾಗುತ್ತಿದೆ

“ರಷ್ಯವು ನಮ್ಮ ಮೇಲೆ ಬೀಳಲು ಸಿದ್ಧವಾಗಿದೆಯೆಂಬುದನ್ನು ನಾನು ಮನಗಂಡಾಗ ಮಾತ್ರವೇ ನಾನು ರಷ್ಯವನ್ನು ಮುತ್ತುವ ನಿರ್ಧಾರಕ್ಕೆ ಬಂದೆನು ಪೂರ್ವ ಪ್ರಷ್ಯಾದಲ್ಲಿ ಆಗ ೬ ನಾಜಿ ಪಡೆಗಳು ಮಾತ್ರ ಇದ್ದವು ಆದರೆ ರಷ್ಯದ ೨೨ ಡಿವಿಜನ್ನುಗಳು ಒಂದರಹಿಂದೊಂದರಂತೆ ಅಲ್ಲಿಗೆ ಬರಲಾರಂಭಿಸಿದವು ಆಗ ನಾನು ಕಳವಳ ಪಡಲೇಬೇಕಾಯಿತು ಕಳೆದ ವರ್ಷದ ಆಗಸ್ಟ್ ಮತ್ತು ಸೆಪ್ಟೆಂಬರ್‌ಗಳಲ್ಲಿ ಒಂದಂಶಮಾತ್ರ ಸ್ಪಷ್ಟವಾಗುತ್ತಿತ್ತು ಬ್ರಿಟನ್ನಿನೊಡನೆ ಪಶ್ಚಿಮದಲ್ಲಿ ಜರ್ಮನಿಯು ಸಂಗ್ರಾಮ ಹೂಡಿದರೆ ತನ್ನ ವಿಮಾನಬಲವನ್ನೆಲ್ಲ ಕಳೆದುಕೊಳ್ಳಬೇಕಾಗುವುದೆಂದೂ ಮತ್ತು ಜರ್ಮನಿಯಮೇಲೆ ಬೀಳಲು ಪೂರ್ವದಲ್ಲಿ ದೊಡ್ಡ ರಾಷ್ಟ್ರವೊಂದು ಸಮಯ ಕಾಯುತ್ತಿರುವಾಗ ಬ್ರಿಟನ್ನಿನ ಮೇಲೆ ಯುದ್ಧ ಹೂಡುವುದು ಸಾಧ್ಯವಿಲ್ಲವೆಂದೂ ನಿರ್ಧರಿಸಲಾಯಿತು

ಜರ್ಮನ್ ಸೈನ್ಯಕಚೇರಿಯಿಂದ ಹೊರಡುವ ಪ್ರಕಟನೆಗಳೆಲ್ಲ ಸತ್ಯವಾದುವು ಇದುವರೆಗೆ ೨೫ ಲಕ್ಷ ರಷ್ಯನರು ಸೆರೆಸಿಕ್ಕಿದ್ದಾರೆ ೨೦,೦೦೦ ಫಿರಂಗಿಗಳನ್ನೂ ೧೮೦೦೦ ಟ್ಯಾಂಕುಗಳನ್ನೂ ನಾವು ನಾಶ ಮಾಡಿದ್ದೇವೆ ೧೪೫೦೦ ಕ್ಕಿಂತ ಹೆಚ್ಚಾಗಿ ರಷ್ಯಾ ವಿಮಾನಗಳನ್ನು ಉರುಳಿಸಿದ್ದೇವೆ ” ಎಂದು ಹೇಳಿದರು.

ಓರೆಲ್‌ನಿಂದ ರಷ್ಯಾ ಸೇನೆಯು ಹಿಂದೆ ಸರಿಯಿತು

ವ್ಯಾಜಮ್ ಮತ್ತು ಬ್ರಿಯಾನ್ಸ್ಕ ಕ್ಷೇತ್ರಗಳಲ್ಲಿ ರಷ್ಯಾ ಸೇನೆಗಳು ಉಗ್ರವಾಗಿ ಹೊಡೆದಾಟ ನಡೆಸಿದ ಮೇಲೆ ಓರೆಲ್ ಎಂಬೂರನ್ನು ತ್ಯಜಿಸಿದವು—ಎಂದು ರಷ್ಯಾ ಪ್ರಕಟನೆಯು ತಿಳಿಸುತ್ತದೆ ಮಾಸ್ಕೋ ಪಶ್ಚಿಮದಲ್ಲಿರುವ ವ್ಯಾಜಮ ಮತ್ತು ಮಾಸ್ಕೋ ನೈಋತ್ಯಕ್ಕೆ 230 ಮೈಲಿ ದೂರದಲ್ಲಿರುವ ಬ್ರಿಯಾನ್ಸ್ಕ ಹತ್ತಿರ ಮಾ॥ ಟಿಮೋಷಿಂಕೋರವರ ಸೇನೆಯು ಹರ್ ಹಿಟ್ಲರರ ಘೋರ ಆಘಾತವನ್ನು ಎದುರಿಸುತ್ತಿದೆ ಮಾಸ್ಕೋ ಕಡೆಗೆ ನುಗ್ಗಿಯೇ ತೀರಬೇಕೆಂಬ ಸಂಕಲ್ಪಮಾಡಿ, ನಾಜಿಗಳು ಅಪಾರ ಯೋಧರನ್ನೂ ಸಂಗ್ರಾಮ ವಸ್ತುಗಳನ್ನೂ ರಣರಂಗಕ್ಕೆ ತರುತ್ತಿದ್ದಾರೆ ಅಲ್ಲಿನ ಪರಿಸ್ಥಿತಿ ಬಹಳ ಕ್ರೂರವಾಗಿದೆ ಜರ್ಮನರು ಜುಲೈ ತಿಂಗಳಲ್ಲಿ ಯಾವ ಮಾರ್ಗದಲ್ಲಿ ಮಾಸ್ಕೋ ಕಡೆಗೆ ನುಗ್ಗಲೆತ್ನಿಸಿ, ವಿಫಲರಾಗಿದ್ದರೋ ಅದೇ ಮಾರ್ಗದಲ್ಲಿ ಈಗ ಮತ್ತೆ ನುಗ್ಗುತ್ತಿದ್ದಾರೆ ಈಗ ಅವರು ಮತ್ತೆ ನೆಪೋಲಿಯನ್ನರ ಮಾರ್ಗವನ್ನು ಹಿಡಿದಿದ್ದಾರೆ ಈ ಕ್ಷೇತ್ರದಲ್ಲಿ ನದಿಗಳಾಗಲಿ, ಅರಣ್ಯಗಳಾಗಲಿ ಹೆಚ್ಚಾಗಿರುವುದಿಲ್ಲ ಇದನ್ನು ಗಮನದಲ್ಲಿಟ್ಟು ರಷ್ಯನರು ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ

ಮಾಸ್ಕೋಮೇಲೆ ಅತ್ಯುಗ್ರದಾಳಿ

ಜರ್ಮನರು ರಷ್ಯದಲ್ಲಿ ಯುದ್ಧದ ತೀವ್ರತೆಯನ್ನು ೩ ನೆಯ ಸಾರೆ ಹೆಚ್ಚಿಸಿದ್ದಾರೆ ಈಗ ಪ್ರಾರಂಭವಾಗಿರುವ ಕದನವು ಹಿಂದಿನವುಗಳಿಗಿಂತ ಅತ್ಯಂತ ಉಗ್ರರೀತಿಯದಾಗಿದೆ ಹಿಂದೆ ಮಿನ್ಸ್ಕ್, ಸ್ಮೊಲೆನ್ಸ್ಕ, ಕೀವ್ ಮತ್ತು ಲೆನಿನ್‌ಗ್ರೇಡ್‌ಗಳನ್ನು ಗುರಿಯಾಗಿಟ್ಟು ಕದನಗಳು ನಡೆದವು ಅವುಗಳಲ್ಲಿ ನಾಜಿಗಳು ಪೂರ್ಣ ಜಯಶೀಲರಾಗಲಿಲ್ಲ ಈಗ ಪ್ರಾರಂಭಿಸಿರುವ 5 ನೆಯ ಉಗ್ರದಾಳಿಯು ರಷ್ಯದ ಮುಖ್ಯಪಟ್ಟಣವಾದ ಮಾಸ್ಕೊವನ್ನು ಕೈವಶಮಾಡಿಕೊಳ್ಳುವ ಗುರಿಯಿಂದ ಕೂಡಿದೆ. ಈ ನಾಜಿಧಾಳಿಯನ್ನೆದುರಿಸಲು ರಷ್ಯವೂ ಸಿದ್ಧತೆಗಳನ್ನು ಮಾಡಿಕೊಂಡಿದೆ ಆದರೆ ಈಗಿನ ಜರ್ಮನರ ಘೋರ ಆಘಾತವನ್ನು ತಡೆಯುವಶಕ್ತಿ ಅದಕ್ಕಿದೆಯೇ, ಅದಕ್ಕೆ ಬೇಕಾಗುವ ಟ್ಯಾಂಕುಗಳು ಮತ್ತು ವಿಮಾನಗಳೇ ಮೊದಲಾದ ಸಾಧನಗಳನ್ನು ರಷ್ಯವು ಒದಗಿಸಿಕೊಂಡಿದೆಯೇ, ಎಂಬುದು ಸಂದೇಹಾಸ್ಪದವಾಗಿದೆ ಮಾಸ್ಕೋ ಮುತ್ತಿಗೆಗಾಗಿ ನಾಜಿಗಳು 5000 ಟ್ಯಾಂಕುಗಳನ್ನೂ [illegible]000 ವಿಮಾನಗಳನ್ನೂ ತಂದಿರುವದಾಗಿ ಊಹಿಸಲಾಗಿದೆ ರಷ್ಯದ ಆಗು ಹೋಗುಗಳು ಈ ಮಹಾಕದನದ ಜಯಾಪಜಯಗಳನ್ನವಲಂಬಿಸಿದೆಯೆಂದು ಅನೇಕರು ಅಭಿಪ್ರಾಯಪಡುತ್ತಿದ್ದಾರೆ ವಿಚಾರಮಾಡಿನೋಡಿದರೆ ರಷ್ಯಕ್ಕೆ ಘೋರವಾದ ವಿಪತ್ತು ಒದಗಿದೆಯೆಂದು ತೋರಿ ಬರುತ್ತದೆ ಜರ್ಮನರು ರಷ್ಯದ ಬಹು ಭಾಗವನ್ನು ನುಂಗಿಬಿಟ್ಟಿದ್ದಾರೆ

ಸ್ವೀಕಾರ.

ವಿಜಾಪುರ ಡಿ॥ ಚಿಮ್ಮಲಗಿ ಅರಳೆಲೆಮಠದಲ್ಲಿ ನೆರವೇರಿದ ಶ್ರೀಸಿದ್ಧಾಂತಶಿಖಾಮಣಿಪ್ರವಚನ ಸಮಾಪ್ತಿ ಸಮಾರಂಭದಲ್ಲಿ ಆ ಮಠಾಧಿಪತಿಗಳು ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ ೨ ರೂ ಯು ಬೀಳಗಿ ಶ್ರೀಪಟ್ಟದ ಸ್ವಾಮಿಗಳ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ

[೪ ನೆಯ ಪುಟದಿಂದ ಮುಂದುವರಿದುದು]

ರಷ್ಟು, ಉತ್ಪತ್ತಿಯಾದ ವಿದ್ಯುಚ್ಛಕ್ತಿಯು ಸೇಕಡ 6 63 ರಷ್ಟು ಹೆಚ್ಚಿತು. ಇಲಾಖೆಯ ಒಟ್ಟು ಹುಟ್ಟುವಳಿಯು 1939-40 ನೆಯ ಸಾಲಿನಲ್ಲಿ 76 36 ಲಕ್ಷ ರೂಪಾಯಿಗಳಾಗಿದ್ದುದಕ್ಕೆ 1940-41 ನೆಯ ಸಾಲಿನಲ್ಲಿ ಅದು 85 33 ಲಕ್ಷ ರೂಪಾಯಿಗಳಾಗಿದ್ದಿತು. ನಿವ್ವಳ ವರಮಾನವು 55 95 ಲಕ್ಷ ರೂಪಾಯಿಗಳಾಗಿದ್ದಿತು, ಎಂದರೆ 1939 40 ನೆಯ ಸಾಲಿನಲ್ಲಿದ್ದುದಕ್ಕಿಂತಲೂ ಸುಮಾರು 7 ಲಕ್ಷ ರೂಪಾಯಿಗಳಷ್ಟು ಹೆಚ್ಚಾಗಿದ್ದಿತು

ಶಿಂಷಾ ವಿದ್ಯುಚ್ಛಕ್ತಿಯ ಏರ್ಪಾಡಿನ ಸಂಬಂಧದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಎರಡು ಯಂತ್ರಗಳಿಂದಲೂ ಕೆಲಸ ನಡೆಯಿಸಲು ಪ್ರಾರಂಭವಾಗಿದೆ ಇದರಿಂದ ಶಿವನಸಮುದ್ರದಲ್ಲಿನ ಯಂತ್ರಗಳಿಂದ ಹೆಚ್ಚು ಕೆಲಸ ಮಾಡಿಸುತ್ತಿದ್ದುದು ಕಡಮೆಯಾದಂತಾಯಿತು ಶಿಂಷಾ ಏರ್ಪಾಡಿಗೆ ತಗಲಿರುವ ಒಟ್ಟು ವೆಚ್ಚವು 57.16 ಲಕ್ಷ ರೂಪಾಯಿಗಳು

ಶಿವಮೊಗ್ಗೆಗೂ ಮತ್ತು ತಾಳಗುಪ್ಪೆಗೂ ಮಧ್ಯೆ ಜೋಗದ ವಿದ್ಯುಚ್ಛಕ್ತಿಯ ಸರಬರಾಯಿ ಲೈನಿನ ಮೊದಲನೆಯ "ಸರ್ಕ್ಯೂಟಿ"ಗೆ ಸಂಬಂಧಪಟ್ಟ ಕಾರ್ಯವನ್ನು ಪೂರೈಸಲಾಯಿತು. ಜೋಗಕ್ಕೂ ಮತ್ತು ಹಿರೇಭಾಸ್ಕರಕ್ಕೂ ವಿದ್ಯುಚ್ಛಕ್ತಿಯನ್ನು ಒದಗಿಸಲಾಯಿತು

ಬೆಂಗಳೂರು ಸಿಟಿ "ಆಟೋಮ್ಯಾಟಿಕ್ ಟೆಲಿಫೋನ್ ಎಕ್ಸ್ಚೇಂಜ್" ಏರ್ಪಾಡನ್ನು ಬದಲಾವಣೆಗೊಳಿಸಿ ಇನ್ನೂ 400 ಟೆಲಿಫೋನ್ ಯಂತ್ರಜೋಡಣೆಗಳಿಗೆ ಅವಕಾಶ ಕಲ್ಪಿಸುವ ಏರ್ಪಾಡು ಚಾಲ್ತಿ ಸಾಲಿನಲ್ಲಿ, ಸಂಬಂಧಪಟ್ಟ ಯಂತ್ರಸಾಮಗ್ರಿಗಳು ತಲಪಿದ ತರುವಾಯ ಪೂರೈಸಬಹುದೆಂದು ನಿರೀಕ್ಷಿಸಲಾಗಿದೆ ಇಳವರಿಕಮ್ಮತ್ತು ಭರ್ತಿ ನಿಧಿಗೆ ಒದಗಿಸಬೇಕಾದ ಹಣವೂ ಸೇರಿ ನಿವ್ವಳ ವರಮಾನವು 1939-40 ನೆಯ ಸಾಲಿನಲ್ಲಿ ಸೇಕಡ 4.79 ಇದ್ದುದು 1940 41 ನೆಯ ಸಾಲಿನಲ್ಲಿ ಸೇಕಡ 5 64 ಆಗಿದೆ ಮೈಸೂರು ಸಿಟಿಯಲ್ಲಿ ಮತ್ತೆ 200 ಟೆಲಿಫೋನುಗಳಿಗೆ ಅವಕಾಶವನ್ನು ಕಲ್ಪಿಸತಕ್ಕ ವಿಚಾರವು ಪರ್ಯಾಲೋಚನೆಯಲ್ಲಿದೆ

1940-41 ನೆಯ ಸಾಲಿನಲ್ಲಿ ಕೆಲವು ಟೌನುಗಳಿಗೂ ಮತ್ತು ಗ್ರಾಮಗಳಿಗೂ ಹೊಸದಾಗಿ ವಿದ್ಯುಚ್ಛಕ್ತಿಯನ್ನು ಒದಗಿಸಲಾಯಿತು ಅವುಗಳ ಒಟ್ಟು ಸಂಖ್ಯೆಯು ಹನ್ನೊಂದು ಇದರಿಂದ ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಯ ಸೌಕರ್ಯಗಳನ್ನು ಪಡೆದಿರುವ ಟೌನುಗಳ ಮತ್ತು ಗ್ರಾಮಗಳ ಸಂಖ್ಯೆಯು 2 5 ಕ್ಕೆ ಏರಿದೆ.

ಜೋಗ್ ಜಲಪಾತದ ವಿದ್ಯುಚ್ಛಕ್ತಿಯ ಏರ್ಪಾಡು

1940-41 ನೆಯ ಸಾಲಿನಲ್ಲಿ ಜೋಗ್ ಜಲಪಾತದ ಬಳಿಯ ವಿದ್ಯುಚ್ಛಕ್ತಿ ಉತ್ಪತ್ತಿಯ ಏರ್ಪಾಡಿನ ಸಂಬಂಧದಲ್ಲಿ ನೇಮಕವಾಗಿರುವ "ಹೈಡ್ರೋ ಎಲೆಕ್ಟ್ರಿಕ್ ಮತ್ತು ಇಂಗೇಷನ್" ಸಮಿತಿಯವರು ನಾಲ್ಕು ಸಲ ಸಭೆ ಸೇರಿದ್ದರು ಜೋಗದ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವುದಕ್ಕಾಗಿ ಯಂತ್ರಶಾಲೆಯನ್ನು ಕಟ್ಟಲು ಅಸ್ಥಿರವಾಗಿ ಒಂದು ನಿವೇಶನವನ್ನು ಸೂಚಿಸಿದರು ಈ ಸಮಿತಿಯವರ ಸಲಹೆಗಳನ್ನು ಸರ್ಕಾರದವರು ಅಂಗೀಕರಿಸಿರುತ್ತಾರೆ, ಮತ್ತು ಈ ಒಟ್ಟು ಏರ್ಪಾಡಿಗಾಗಿ 280 ಲಕ್ಷ ರೂಪಾಯಿಗಳ ಸಮಗ್ರವಾದ ಅಂದಾಜನ್ನು ಈಗತಾನೇ ಮಂಜೂರ್ ಮಾಡಿದ್ದಾರೆ ಈ ಪೈಕಿ, ಸುಮಾರು 70 ಲಕ್ಷ ರೂಪಾಯಿಗಳು ಹಿರೇಭಾಸ್ಕರದಲ್ಲಿ ಒಂದು ಆಣೆಯನ್ನು ಕಟ್ಟುವುದರ ವೆಚ್ಚಕ್ಕೆ ಸಂಬಂಧಪಟ್ಟಿವೆ ಈ ಆಣೆಯನ್ನು ಕಟ್ಟುವ ಕೆಲಸವು ಮುಂದುವರಿಯುತ್ತಿದೆ ಮೈಸೂರು ಸಂಸ್ಥಾನದ ಎಲ್ಲೆ ಕಟ್ಟಿನಲ್ಲಿಯೇ ಪೂರ್ತಿಯಾಗಿ ಇರುವ ರೀತಿಯಲ್ಲಿ ಒಂದು ಹೊಸ ರಸ್ತೆಯನ್ನು ತಾಳಗುಪ್ಪೆಯಿಂದ ಜೋಗಿನವರೆಗೆ ಏರ್ಪಡಿಸಲಾಗಿದೆ. ಕೆಲಸಗಾರರ ವಸತಿಗಳಲ್ಲಿ ಸ್ಥಳನೈರ್ಮಲ್ಯಕ್ಕೂ ಆರೋಗ್ಯರಕ್ಷಣೆಗೂ ವಿಶೇಷ ರೀತಿಯ ಗಮನವನ್ನು ಕೊಡಲಾಗಿದೆ ಕಳೆದ ಫೆಬ್ರವರಿ ತಿಂಗಳಿನಲ್ಲಿ ಶ್ರೀಮನ್ಮಹಾರಾಜರವರು ಜೋಗ್ ಜಲಪಾತದ ಬಳಿಗೆ ದಯಮಾಡಿಸಿ ಅಲ್ಲಿಯ ಕಾಮಗಾರಿಗಳನ್ನು ಪರಾಂಬರಿಸಿದರು.

ಜೋಗ್ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡತಕ್ಕ ಏರ್ಪಾಡನ್ನು ಆರಂಭಗೊಳಿಸತಕ್ಕ ಕಾರ್ಯಕ್ರಮವು ಬಹಳ ಕಾಲದಿಂದ ಪರ್ಯಾಲೋಚನೆಯಲ್ಲಿದ್ದಿತಷ್ಟೆ ಈ ಏರ್ಪಾಡಿಗೆ ಸಂಬಂಧಪಟ್ಟ ಸಕಲ ವಿಚಾರಗಳನ್ನೂ ಪರಿಶೀಲನೆ ನಡೆಯಿಸುವುದರಲ್ಲಿ ಅವಿಶ್ರಾಂತವಾಗಿ ಶ್ರಮವನ್ನು ವಹಿಸಿ ಸಮಿತಿಯವರು ಕೆಲಸಮಾಡಿದ್ದಾರೆ. ಇದರಿಂದ ಬಹಳಮಟ್ಟಿಗೆ ಸಹಾಯವಾಗಿರುತ್ತದೆ ಈ ವಿಚಾರದಲ್ಲಿ ಸರ್ಕಾರದವರು ಆ ಸಮಿತಿಯ ಅಧ್ಯಕ್ಷರವರಿಗೂ ಮತ್ತು ಸಮಿತಿಯ ಸದಸ್ಯರುಗಳಿಗೂ ಅವರು ಕೊಟ್ಟ ಉಪಯುಕ್ತವಾದ ನಿರೂಪಣೆಗಳಿಗಾಗಿಯೂ ಮತ್ತು ಸಲಹೆಗಳಿಗಾಗಿಯೂ ತಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಲಿಚ್ಛಿಸುತ್ತಾರೆ.

ರೈಲ್ವೆಗಳು

ಸಾಗರದಿಂದ ತಾಳಗುಪ್ಪೆಯವರೆಗೆ ಸಂಸ್ಥಾನದ ರೈಲ್ವೆ ಇಲಾಖೆಯವರು ಹೊಸದಾಗಿ ಏರ್ಪಡಿಸಿರತಕ್ಕ 9.51 ಮೈಲಿಗಳ ರೈಲು ಮಾರ್ಗದಲ್ಲಿ 1940 ನೆಯ ಇಸವಿ ನವೆಂಬರು ತಿಂಗಳಿನಲ್ಲಿ ಸಂಚಾರವು ಪ್ರಾರಂಭವಾಯಿತು. ಈ ಲೈನನ್ನು ಏರ್ಪಡಿಸಿದುದರಿಂದ ಸಂಸ್ಥಾನದ ಈ ಪ್ರಾಂತದಲ್ಲಿದ್ದ ಸಂಚಾರ ಸೌಕರ್ಯವನ್ನು ಹೆಚ್ಚಿಸಿದಂತಾಯಿತು ಅಲ್ಲದೆ, ಮಲೆನಾಡು ಪ್ರಾಂತಕ್ಕೆ ಸಂಚಾರ ಸಂಬಂಧವನ್ನು ಕಲ್ಪಿಸಿದ ಅನುಕೂಲವೂ ಉಂಟಾಯಿತು. ಈ ರೈಲುಮಾರ್ಗವನ್ನು ಏರ್ಪಡಿಸಿದುದರಿಂದ, ಈಗ ಕೆಲಸ ನಡೆಯುತ್ತಿರುವ ಜೋಗ್ ಜಲಪಾತದ ವಿದ್ಯುಚ್ಛಕ್ತಿ ಉತ್ಪತ್ತಿಯ ಏರ್ಪಾಡಿನ ಸಂಬಂಧದಲ್ಲಿಯೂ ಸಹ, ಅವಶ್ಯವಾದ ಸೌಕರ್ಯಗಳನ್ನು ಒದಗಿಸಿಕೊಟ್ಟಂತಾಯಿತು.

ಚಾಮರಾಜನಗರದಿಂದ ಸತ್ಯಮಂಗಲದ ಮಾರ್ಗವಾಗಿ ಮೆಟ್ಟುಪಾಳ್ಯಕ್ಕೆ ರೈಲನ್ನು ಹಾಕಿಸುವ ಉದ್ದೇಶವಿದೆಯಷ್ಟೆ. ಆ ಸಂಬಂಧದಲ್ಲಿ ಸಂಚಾರದ ಪರಿಶೀಲನೆಯ ಕಾರ್ಯವನ್ನು ("ಟ್ರಾಫಿಕ್ ಸರ್ವೆ" ಕಾರ್ಯವನ್ನು) ಸೌತ್ ಇಂಡಿಯನ್ ರೈಲ್ವೆಯವರು, ಮೈಸೂರು ಸಂಸ್ಥಾನದ ರೈಲ್ವೆಯವರೊಡನೆಯೂ ಮತ್ತು ಮದರಾಸು ಮತ್ತು ಸದರ್ನ್ ಮರಾಟಾ ರೈಲ್ವೆಯವರೊಡನೆಯೂ ಸೇರಿ ನೆರವೇರಿಸುತ್ತಾರೆ

ಮದರಾಸು ಮತ್ತು ಸದರ್ನ್ ಮರಾಟಾ ರೈಲ್ವೆ ಕಂಪೆನಿಯವರು ಆಡಳಿತ ನಡೆಯಿಸತಕ್ಕ ರೈಲುಮಾರ್ಗಗಳೂ ಸೇರಿ, ಮೈಸೂರು ಸರ್ಕಾರದ ರೈಲ್ವೆಗಳ ಒಟ್ಟು ಹುಟ್ಟುವಳಿಯು 1940-41 ನೆಯ ಸಾಲಿನಲ್ಲಿ 94 56 ಲಕ್ಷ ರೂಪಾಯಿಗಳು ಇದು 1939-40 ನೆಯ ಸಾಲಿನಲ್ಲಿ ಹುಟ್ಟುವಳಿಯಾದ ಮೊಬಲಗಿಗಿಂತ 7.45 ಲಕ್ಷ ರೂಪಾಯಿಗಳು ಹೆಚ್ಚಾಗಿದೆ. ಹೀಗೆ ಹುಟ್ಟುವಳಿಯು ಹೆಚ್ಚಿರುವುದಕ್ಕೆ ಸಂಚಾರವು ಹೆಚ್ಚಿರುವುದೂ ಕಾರಣ, ಮತ್ತು 1940 ನೆಯ ಇಸವಿ ಮಾರ್ಚಿ 1 ನೆಯ ತಾರೀಖಿನ ಲಾಗಾಯಿತು "ಸರ್ ಚಾರ್ಜ್" ತೆರಿಗೆಯನ್ನು ವಿಧಾಯಕಮಾಡಿದುದೂ ಕಾರಣ

1940-41 ನೆಯ ಸಾಲಿನಲ್ಲಿ ರೈಲ್ವೆ ಇಲಾಖೆಯ ಕೆಲಸಗಳನ್ನು ನಡೆಯಿಸುವುದಕ್ಕಾಗಿ ಒಟ್ಟು 62 52 ಲಕ್ಷ ರೂಪಾಯಿಗಳು ವೆಚ್ಚವಾದುವು. ಎಂದರೆ, 1939-40 ನೆಯ ಸಾಲಿನಲ್ಲಿ ವೆಚ್ಚವಾದ ಮೊತ್ತಕ್ಕಿಂತ 5.43 ಲಕ್ಷ ರೂಪಾಯಿಗಳಷ್ಟು ಹೆಚ್ಚಾದಂತಾಯಿತು.

ಗಣಿಗಳು

1940-41 ನೆಯ ಸಾಲಿನಲ್ಲಿ ಕೋಲಾರದ ಚಿನ್ನದ ಗಣಿಗಳಿಂದ ತೆಗೆದ ಚಿನ್ನದ ಒಟ್ಟು ಪ್ರಮಾಣವು 2,78,527 ಔನ್ಸುಗಳೆಂದೂ ಮತ್ತು ಬೆಳ್ಳಿಯ ಒಟ್ಟು ಪ್ರಮಾಣವು 23,298 ಔನ್ಸುಗಳೆಂದೂ ಅಂದಾಜು ಮಾಡಲಾಗಿದೆ ಈ ರೀತಿ ತೆಗೆದ ಚಿನ್ನದ ಮತ್ತು ಬೆಳ್ಳಿಯ ನಿವ್ವಳ ಮೌಲ್ಯವು ಸುಮಾರು 3,12,89,269, ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. 1940-41 ನೆಯ ಸಾಲಿನಲ್ಲಿ ನಿರೀಕ್ಷಿಸಿರುವ ರಾಜಾದಾಯದ ಒಟ್ಟು ಮೊತ್ತವು 20,52,706 ರೂಪಾಯಿಗಳು ಈ ಮೊತ್ತವು 1939-40 ನೆಯ ಸಾಲಿನಲ್ಲಿ (ತಿದ್ದುಪಾಟು ಅಂದಾಜಿನಂತೆ) 24,35,205 ರೂಪಾಯಿಗಳಾಗಿದ್ದಿತು ಚಿನ್ನದ ಮೇಲಣ ಸುಂಕದ ಆಕ್ಟಿನ ಮೇರೆಗೆ, ಗಣಿಗಳಿಂದ ಸಲ್ಲಬೇಕಾದ ತೆರಿಗೆಯ ಮೊತ್ತವು 25,48,444 ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ.

ಖನಿಜಸಂಪತ್ತನ್ನು ರೂಢಿಸುವ ವಿಚಾರದಲ್ಲಿ ಸಾರ್ವಜನಿಕರು ಆಸಕ್ತಿ ವಹಿಸಿ ಕೆಲಸಮಾಡಿದರು "ಮ್ಯಾಂಗನೀಸ್" ಲೋಹದ ಅದುರು, ಕಾಗೆಬಂಗಾರ, ಬಿಳಿಯ ಜೇಡಿ—ಇವುಗಳ ಮತ್ತು ಇತರ ಖನಿಜಗಳ ಸಂಬಂಧದ ಕೆಲಸಕ್ಕಾಗಿ ಒಟ್ಟು 70 ಅರ್ಜಿಗಳು 1940-41 ನೆಯ ಸಾಲಿನಲ್ಲಿ ಬಂದಿದ್ದುವು. "ಬಾಕ್ಸೈಟ್" ಎಂಬ ಜೇಡಿಮಣ್ಣು, "ಫೆಲ್ ಸ್ಪಾರ್" ಕಲ್ಲು, ಸುಣ್ಣಕಲ್ಲು, ಬಿಳಿಯ ಜೇಡಿಮಣ್ಣು ಮತ್ತು "ರಿಫ್ರ್ಯಾಕ್ಟರಿ ಕ್ಲೇ" ಎಂಬ ಕಾವನ್ನು ತಡೆಯತಕ್ಕ ಜೇಡಿಮಣ್ಣು—ಇವುಗಳು ಎಲ್ಲೆಲ್ಲಿ ಎಷ್ಟೆಷ್ಟು ಮಟ್ಟಿಗೆ ದೊರೆಯಬಹುದೆಂಬುದನ್ನು ನಿರ್ಧರಿಸಲು, ಸಂಸ್ಥಾನದ ಅನೇಕ ಭಾಗಗಳಲ್ಲಿ ಸುಮಾರು 680 ಚದರಮೈಲಿಗಳಷ್ಟು ವಿಸ್ತೀರ್ಣದ ಪ್ರದೇಶವನ್ನು "ಸರ್ವೆ" ಮಾಡಲಾಯಿತು ಈ ರೀತಿ ಖನಿಜ ಸಂಬಂಧವಾದ ಸರ್ವೆಗಳನ್ನು ನಡೆಯಿಸಿದುದಲ್ಲದೆ, ಸಾಗರ ತಾಲ್ಲೂಕಿನ ಕೆಲವು ಭಾಗಗಳಲ್ಲಿ 500 ಚದರಮೈಲಿಗಳಷ್ಟು ವಿಸ್ತೀರ್ಣದ ಪ್ರದೇಶವನ್ನು ಭೂಶಾಸ್ತ್ರದ ರೀತ್ಯಾ "ಸರ್ವೆ" ಮಾಡಿ ನಕ್ಷೆಗಳನ್ನೂ ಸಹ ತಯಾರಿಸಲಾಯಿತು.

ಪ್ರಜಾಗಣತಿ (ಸೆನ್ಸಸ್)

ಹತ್ತು ವರ್ಷಗಳಿಗೊಮ್ಮೆ ನಡೆಯತಕ್ಕ ಪ್ರಜಾಗಣತಿಯು 1941 ನೆಯ ಇಸವಿ ಮಾರ್ಚಿ 1 ನೆಯ ತಾರೀಖಿನ ದಿನ ನಡೆಯಿತು, ಅದು ಎಂಟನೆಯ ಸಲದ ಪ್ರಜಾಗಣತಿ. ಈಸಲದ ಪ್ರಜಾಗಣತಿಯ ಕಾಲದ ಲೆಕ್ಕಗಳು ಕೆಲವು ಮುಖ್ಯಾಂಶಗಳನ್ನು ವ್ಯಕ್ತಪಡಿಸುತ್ತವೆ ಮೈಸೂರು ಸಂಸ್ಥಾನದ ಪ್ರಜಾಸಂಖ್ಯೆಯು ಬೆಂಗಳೂರು ದಂಡಿನ ಪ್ರದೇಶದ ಜನಸಂಖ್ಯೆಯೂ ಸೇರಿ, 1931 ನೆಯ ಇಸವಿಯಲ್ಲಿ 65.57 ಲಕ್ಷಗಳು. ಅದು 1941 ನೆಯ ಇಸವಿಯಲ್ಲಿ 73 9 ಲಕ್ಷಕ್ಕೆ ಹೆಚ್ಚಿರುತ್ತದೆ ಎಂದರೆ, ಕಳೆದ ಹತ್ತು ವರ್ಷಗಳಲ್ಲಿ ಜನಸಂಖ್ಯೆಯು ಸೇಕಡಾ 12 ರಷ್ಟು ಹೆಚ್ಚಿರುತ್ತದೆ ಇದಕ್ಕೆ ಹಿಂದಿನ ಹತ್ತು ವರ್ಷಗಳಲ್ಲಿ ಇದು ಸೇಕಡಾ 9 7 ರಂತೆ ಹೆಚ್ಚಾಗಿದ್ದಿತು. ಒಟ್ಟು ಸಂಸ್ಥಾನದಲ್ಲೆಲ್ಲಾ ಹೆಚ್ಚಾಗಿರುವ 8 ಲಕ್ಷದಲ್ಲಿ 3 ಲಕ್ಷದಷ್ಟು ಕೇವಲ ಟೌನುಗಳಲ್ಲಿಯೂ ಮತ್ತು ಸಿಟಿಗಳಲ್ಲಿಯೂ ಹೆಚ್ಚಿರುತ್ತವೆ ಬೆಂಗಳೂರು ಮತ್ತು ಮೈಸೂರು ಸಿಟಿಗಳಲ್ಲೇ ಜನಸಂಖ್ಯೆಯು 2 ಲಕ್ಷ ಹೆಚ್ಚಿದೆ. ಜನಸಂಖ್ಯೆಯು ಅತ್ಯಂತ ಹೆಚ್ಚಿನ ಸೇಕಡಾವಾರಿನಲ್ಲಿ ವೃದ್ಧಿಯಾಗಿರುವುದು ತುಮಕೂರು, ತಿಪಟೂರು, ಮಂಡ್ಯ, ಚಿತ್ರದುರ್ಗ, ದಾವಣಗೆರೆ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಭದ್ರಾವತಿ ಟವನುಗಳಲ್ಲಿ. ಅಲ್ಲಿ ಹಾಗಿದ್ದರೆ, ಶಿಕಾರಿಪುರ, ಸೊರಬ, ನಗರ ಮತ್ತು ತೀರ್ಥಹಳ್ಳಿ ಮುಂತಾದ ಕೆಲವು ಮಲೆನಾಡು ತಾಲ್ಲೂಕುಗಳಲ್ಲಿ ಜನಸಂಖ್ಯೆಯು ಕಡಮೆಯಾಗುತ್ತಲೇ ಬಂದಿದೆ.

1931 ನೆಯ ಇಸವಿಯಲ್ಲಿದ್ದ ಒಟ್ಟು ಜನಸಂಖ್ಯೆಯಲ್ಲಿ ಹಿಂದುಗಳು ಸೇಕಡ 92 2 ರಂತೆಯೂ, ಮುಸಲ್ಮಾನರು ಸೇಕಡ 6.1 ರಂತೆಯೂ, ಮತ್ತು ಕ್ರೈಸ್ತರು ಸೇಕಡ 1.3 ರಂತೆಯೂ ಇದ್ದರು ಈಗ 1941 ನೆಯ ಇಸವಿಯಲ್ಲಿ ಹಿಂದುಗಳ ಸಂಖ್ಯೆಯು ಸೇಕಡಾ 91.1 ರಂತೆಯೂ, ಮುಸಲ್ಮಾನರ ಸಂಖ್ಯೆಯು ಸೇಕಡ 6 6 ರಂತೆಯೂ ಮತ್ತು ಕ್ರೈಸ್ತರ ಸಂಖ್ಯೆಯು 1.5 ರಂತೆಯೂ ಇರುತ್ತದೆ.

ಕಳೆದ ಹತ್ತು ವರ್ಷಗಳಲ್ಲಿ ಅಕ್ಷರಸ್ಥರ ಸೇಕಡಾವಾರು ಸಂಖ್ಯೆಯು ಗಣನೀಯವಾದಷ್ಟು ಮಟ್ಟಿಗೆ ಹೆಚ್ಚಿರುತ್ತದೆ ಹಿಂದೂ ಜಂಗಡದವರಲ್ಲಿ ಅಕ್ಷರಸ್ಥರ ಸಂಖ್ಯೆಯು 4.88 ಲಕ್ಷದಿಂದ 7.83 ಲಕ್ಷಗಳಿಗೆ ಹೆಚ್ಚಿರುತ್ತದೆ. ಮುಸಲ್ಮಾನರಲ್ಲಿ 0 ಲಕ್ಷದಿಂದ 1 14 ಲಕ್ಷಕ್ಕೂ ಮತ್ತು ಕ್ರೈಸ್ತರಲ್ಲಿ 31,000 ದಿಂದ 47,000 ಕ್ಕೂ ಹೆಚ್ಚಿರುತ್ತದೆ ಒಟ್ಟು ಸಂಸ್ಥಾನದಲ್ಲಿ ಅಕ್ಷರಸ್ಥರ ಸೇಕಡಾವಾರು 13.0; 1931 ನೆಯ ಇಸವಿಯಲ್ಲಿದ್ದ ಸೇಕಡಾವಾರು ಸಂಖ್ಯೆ 9.1.

ಪರಿಸಮಾಪ್ತಿ

ಇನ್ನು, ನಮ್ಮ ನಮ್ಮ ವಿಷಯದಲ್ಲಿ ಒಂದೆರಡು ಮಾತು ಈ ಸಭೆಯ ಒಂದು ಅಧಿವೇಶನವಾದರೂ ಬೆಂಗಳೂರಿನಲ್ಲಿ ನಡೆಯಬೇಕೆಂದು ತಾವುಗಳು ಕೇಳಿದಿರಿ. ಅದಕ್ಕನುಸಾರವಾಗಿ, ಮುಂದಿನ ಅಧಿವೇಶನವನ್ನು ಬೆಂಗಳೂರಿನಲ್ಲಿ ನಡೆಯಿಸಲು ಏರ್ಪಾಡುಗಳು ನಡೆಯುತ್ತಿವೆಯೆಂದು ತಮಗೆ ತಿಳಿಸಲು ನಾನು ಹರ್ಷಿಸುವೆನು.

ಈ ಅಧಿವೇಶನದಲ್ಲಿ ನಮ್ಮ ಕಾರ್ಯಕ್ರಮವು ನಿಬಿಡವಾಗಿ ಬಹಳ ಕೆಲಸ ನಡೆಯಬೇಕಾಗುವಂತಿದೆ. ಇಪ್ಪತ್ತಕ್ಕಿಂತಲೂ ಹೆಚ್ಚಾಗಿ ಮಸೂದಾ ಕಾನೂನುಗಳಿವೆ. ಅವುಗಳಲ್ಲದೆ, ಪ್ರಶ್ನೆಗಳೂ ನಿರ್ಣಯಗಳೂ, ಅನೇಕವಾಗಿವೆ ಇವುಗಳ ಸಂಬಂಧವಾಗಿ ನಾನೊಂದು ಸಂಗತಿಯನ್ನು ಸೂಚಿಸಲಿಚ್ಛಿಸುವೆನು. ಪಾರ್ಲಿಮೆಂಟ್ ಸಿಸ್ಟಿನಲ್ಲಿ ಕೆಲಸ ನಡೆಯುವುದೆಂದರೆ, ಅದು ಅಸಾಧಾರಣ ರೀತಿಯಲ್ಲಿ ಗಹನವಾಗಿರುವ ವಿಚಾರ. ಬರವಣಿಗೆಯಲ್ಲಿದ್ದು ವಿಧಾಯಕವಾಗಿರುವ ನಿಬಂಧನೆಗಳು ಮಾತ್ರವೇ ಅಲ್ಲದೆ, ಬರವಣಿಗೆಯಲ್ಲಿದ್ದು ವಿಧಾಯಕವಾಗಿಲ್ಲದಿದ್ದರೂ ಅವುಗಳಂತೆಯೇ ಬಲೀಯವುಳ್ಳ ಸಂಪ್ರದಾಯಗಳೂ ಕೂಡ ಅದಕ್ಕೆ ಅನ್ವಯವಾಗಿ ಅಲ್ಲಿ ನಡೆಯಬೇಕು. ಕೆಲವು ದೇಶಗಳಲ್ಲಂತೂ, ಸಭೆಯ ನಡೆವಳಿಕೆಯ ವಿಧಿನಿಯಮಗಳೂ ಸಂಪ್ರದಾಯಗಳೂ ಹೇಗಿರಬೇಕೆಂಬುದನ್ನು ನಿರ್ಧರಿಸುವ ಸಾಮರ್ಥ್ಯವು ಹುಟ್ಟುಗುಣವಾಗಿಯೇ ನೆಲೆಸಿದವರೂ ಇದ್ದಾರೆಂದು ನಾವು ಕೇಳಬಲ್ಲೆವು. ಆ ಹುಟ್ಟುಗುಣವು ಅವರಲ್ಲಿ ಯಾವುದೋ ಕಾರಣದಿಂದ ಅನುಸರಿಸಿಬಂದಿದೆಯೆಂದು ತೋರುವುದು. ಆ ಕಾರಣವನ್ನು ಬಹುಶಃ ಮನೋವಿಜ್ಞಾನಶಾಸ್ತ್ರಜ್ಞರು ನಮಗೆ ವಿವರಿಸಿ ಹೇಳಬಲ್ಲರೆಂದು ತೋರುತ್ತದೆ. ಬರವಣಿಗೆಯಲ್ಲಿದ್ದು ವಿಧಾಯಕವಾಗಿರುವ ನಿಬಂಧನೆಗಳನ್ನೂ, ಆ ನಿಬಂಧನೆಗಳಿಗೆ ಅವಶ್ಯ ಕಂಡಂತೆ ಅರ್ಥಮಾಡಿ ಹಿಗ್ಗಿಸಿ ಅನ್ವಯಿಸಿದ ತೀರ್ಮಾನಪರಂಪರೆಗಳನ್ನೂ, ಮತ್ತು ಬರವಣಿಗೆಯಲ್ಲಿದ್ದೂ ಕಾನೂನಿನ ಬಲೀಯವುಳ್ಳ ಸಂಪ್ರದಾಯಗಳನ್ನೂ, ಇವುಗಳನ್ನೆಲ್ಲ ಕ್ರೋಡೀಕರಿಸಿ ಸಮಗ್ರವಾಗಿ ಬರೆದಿಡುವುದು ಸಾಧ್ಯವಿಲ್ಲ ಹಾಗೆ ಬರೆದಿಡಲು ಮಾಡುವ ಪ್ರಯತ್ನವೇನಾದರೂ ನಡೆದರೆ, ಅದು ಅಸಂಪೂರ್ಣವಾಗಿರುವುದೇ ಖಂಡಿತ; ಅದು ಸಹ ಅಷ್ಟೂ ಹಾದು. ಏಕೆಂದರೆ ಆಯಾ ಸನ್ನಿವೇಶಗಳ ಆವಶ್ಯಕತೆಯ ಅನುಭವಕ್ಕನುಸಾರವಾದ ಬದಲಾವಣೆಗಳಿಂದ ಕೂಡಿದ ತೀರ್ಮಾನ ಪರಂಪರೆಯ ಆಧಾರದ ಮೇಲೆ ನಡೆಯುತ್ತ ಹೋಗಬೇಕಾದುದನ್ನೆಲ್ಲ ಒತ್ತಟ್ಟಿಗೇ ಒಟ್ಟುಗೂಡಿಸಿ ಬರೆದಿಡುವುದು ಸಾಧ್ಯವಲ್ಲ ಆದಕಾರಣ, ನಮ್ಮ ನಡವಳಿಕೆ ಕ್ರಮವು ಆ ಬಗೆಯ ತೀರ್ಮಾನಗಳಿಂದ ಪರಿಣಾಮ ಹೊಂದಿ ಸ್ವಚ್ಛಂದವಾಗಿ ವಿಕಾಸಗೊಳ್ಳುತ್ತ ಹೋಗಲು, ನಾವು ಅವಕಾಶ ಕೊಡಬೇಕು. ಈ ದೃಷ್ಟಿಯಿಂದ ನೋಡಿದರೆ, ಈ ಅಧಿವೇಶನದಲ್ಲಿ ಪರ್ಯಾಲೋಚನೆಗಾಗಿ ಬರಲು ಈಗ ಅಂಗೀಕೃತವಾಗಿರುವ ಪ್ರಶ್ನೆಗಳೂ, ನಿರ್ಣಯಗಳೂ ಮತ್ತು ಸೂಚನೆಗಳೂ, ಸಭೆಯ ನಡವಳಿಕೆಯ ನಿಬಂಧನೆಗಳಿಗೆ ಬಾಧಕವಪ್ಪದಂತಿಲ್ಲದೆ ಅನೇಕ ಅಂಶಗಳಲ್ಲಿ ವ್ಯತ್ಯಾಸಹೊಂದಿರುವಂತೆ ಕಂಡುಬಂದಿರುವುದು ಆಶ್ಚರ್ಯವೇನೂ ಅಲ್ಲ. ನಿಬಂಧನೆಗಳನ್ನು ತೀರ ಕಟ್ಟುನಿಟ್ಟಾಗಿ ಅನ್ವಯಿಸಿದ್ದ ಪಕ್ಷಕ್ಕೆ, ಅವುಗಳಲ್ಲಿ ಅನೇಕ ಪ್ರಶ್ನೆಗಳೂ, ನಿರ್ಣಯಗಳೂ ಮತ್ತು ಸೂಚನೆಗಳೂ ಸಭೆಯಲ್ಲಿ ಚರ್ಚೆಗೆ ಬರುವುದಕ್ಕಾಗಿ ಅಂಗೀಕೃತವಾಗುವುದಕ್ಕೇ ಅವಕಾಶವಿರುತ್ತಿರಲಿಲ್ಲ. ಆದರೆ, ಈ ಅಧಿವೇಶನದಲ್ಲಿ ನಾವು ಆ ನಿಬಂಧನೆಗಳನ್ನು ಅಷ್ಟು ಕಟ್ಟುನಿಟ್ಟಾಗಿ ಅದಕ್ಕೆ ಅನ್ವಯಿಸಿಲ್ಲ ಇನ್ನು ಮುಂದಕ್ಕೆ ಮಾತ್ರ, ಅವು ಮತ್ತಷ್ಟು ಹೆಚ್ಚಾಗಿ ಪಾರ್ಲಿಮೆಂಟ್ ಸಿಸ್ಟಿನ ನಡೆವಳಿಕೆ ನಿಬಂಧನೆಗಳಿಗೂ, ಆ ನಿಬಂಧನೆಗಳಂತೆಯೇ ಬಲೀಯವುಳ್ಳ ಸಂಪ್ರದಾಯಗಳಿಗೂ ಅನುಸಾರವಾಗಿರುವಂತೆ ತಾವುಗಳು ನೋಡಿಕೊಳ್ಳಬೇಕೆಂದು ನಾನು ಬಿನ್ನಹ ಮಾಡಲಿಚ್ಛಿಸುವೆನು ಈ ಉದ್ದೇಶ ಸಾಧನೆಗಾಗಿ ಒಂದು ವ್ಯಾಸಂಗಗೋಷ್ಠಿಯನ್ನು ("ಸ್ಟಡಿ ಸರ್ಕಲ್") ಏರ್ಪಡಿಸುವ ವಿಚಾರವನ್ನು ಸದಸ್ಯರು ಪರ್ಯಾಲೋಚಿಸಬೇಕೆಂಬುದು ಇದೇ ಸಂಬಂಧವಾಗಿ ನನ್ನ ಸಲಹೆಯಾಗಿದೆ ವ್ಯಾಸಂಗಗೋಷ್ಠಿಯಲ್ಲಿ ಸರ್ಕಾರಿ ಅಧಿಕಾರಿಗಳೂ ಮತ್ತು ಖಾಸಗಿ ದೊಡ್ಡ ಮನುಷ್ಯರೂ ಭಾಗವಹಿಸಿ ಉಭಯತ್ರರೂ ಪ್ರಯೋಜನ ಪಡೆಯಬಹುದಾಗಿದೆ ವ್ಯಾಸಂಗಕ್ಕೆ ಬೇಕಾದ ಬಗೆಬಗೆಯ ಆಧಾರಗ್ರಂಥಗಳಿರುವ ಒಂದು ಪುಸ್ತಕಭಂಡಾರವನ್ನು ಏರ್ಪಡಿಸುವುದಕ್ಕಾಗಿ ಸರ್ಕಾರದವರು ಹಣವನ್ನು ಮಂಜೂರುಮಾಡಿರುತ್ತಾರೆಂಬ ವಿಷಯವನ್ನೂ, ಆಧಾರಗ್ರಂಥಗಳು ಈ ಸಭೆಯ ಸದಸ್ಯರಿಗೂ ಮತ್ತು ನ್ಯಾಯವಿಧಾಯಕ ಸಭೆಯ ಸದಸ್ಯರಿಗೂ ವ್ಯಾಸಂಗಕ್ಕಾಗಿ ದೊರೆಯುತ್ತವೆಂಬುದನ್ನೂ, ಈ ಸಂದರ್ಭದಲ್ಲಿ ನಾನು ತಿಳಿಸಬಹುದು.

ನೂತನ ರಾಜ್ಯಾಂಗ ಪ್ರಕಟಣೆಯು ಈಗ ಆಚರಣೆಗೆ ಬಂದಿರುವ ಪ್ರದೇಶನೋ ನಿಜ. ಆದಾಗ್ಯೂ, ಸರ್ಕಾರಿ ಅಧಿಕಾರಿಗಳ ಮನಸ್ಸಿನಲ್ಲಾಗಲಿ ಅಥವಾ ದೇಶೋನ್ನತಿ ಸಾಧಕವಾದ ಕಾರ್ಯಕಲಾಪಗಳಲ್ಲಿ ಆಸಕ್ತಿ ವಹಿಸಿರುವಂಥ ಸಾರ್ವಜನಿಕ ಮುಂದಾಳುಗಳ ಮನಸ್ಸಿನಲ್ಲಾಗಲಿ ಇನ್ನೂ ಹೆಚ್ಚಿನ ಸುಧಾರಣೆಗಳು ನಡೆಯಬೇಕೆಂಬ ಉತ್ಸಾಹದ ಮನೋಧರ್ಮವು ಮತ್ತಷ್ಟು ತೀವ್ರವಾಗಿ ಪರಿಣಮಿಸಿ ಬೆಳೆಯುವುದಕ್ಕೇನೂ ಅದರಿಂದ ಕುಂದಕವುಂಟಾಗಿಲ್ಲ ಅವರುಗಳೆಲ್ಲರೂ ನಾನಾ ಸಮಿತಿಗಳಲ್ಲಿ ಒಟ್ಟಿಗೆ ಕಲೆತು ಆಲೋಚನೆಮಾಡಿ, ಗ್ರಾಮಕೈಗಾರಿಕೆಗಳನ್ನೂ, ಕಾರ್ಖಾನೆಗಳ ಕೆಲಸಗಾರರ ಸ್ಥಿತಿ ಸುಧಾರಣೆಗಳನ್ನೂ ಮತ್ತಷ್ಟು ಉತ್ತಮಗೊಳಿಸುವ ಸಾಧನೋಪಾಯಗಳನ್ನು ನಿರ್ಧರಿಸಿ ಗೊತ್ತುಮಾಡುವದಕ್ಕಾಗಿ ಶ್ರಮಿಸುತ್ತಿದ್ದಾರೆ. ದೇಶೋನ್ನತಿ ಸಾಧನೆಯ ಒಳ್ಳೆಯ ಕೆಲಸಕ್ಕಾಗಿ ಈ ರೀತಿ ಪರಸ್ಪರವಾಗಿ ಸಹಕರಿಸಿ ಕೆಲಸಮಾಡಲು ಯಥೇಷ್ಟವಾದ ಅವಕಾಶಗಳಿವೆ. ಈ ಸಂಬಂಧದಲ್ಲಿ ನಾವು ಕೆಲಸಮಾಡುತ್ತ ಬಂದಹಾಗೆಲ್ಲ, ನಮ್ಮ ಕೆಲಸಗಳ ವ್ಯಾಪ್ತಿಯೂ ಪರಿಣಾಮವೂ ಸಂತತವಾಗಿ ಅಧಿಕವಾಗುತ್ತ ಬರುತ್ತವೆಂದು ನನ್ನ ನಂಬಿಕೆ. ದೇಶೋನ್ನತಿ ಸಾಧನೆಗಾಗಿ ಯಾವ ಕೆಲಸಗಳನ್ನೇ ಮಾಡಲಿ, ಅವುಗಳಲ್ಲಿ ಹೆಚ್ಚು ಭಾಗವುಗಳನ್ನೇನೋ ನಾವುಗಳೂ ಪ್ರಜೆಗಳೂ, ಉಭಯತ್ರರೂ ಒಟ್ಟುಗೂಡಿಯೇ ಮಾಡಬೇಕು. ಉಭಯತ್ರರೂ ಯಾವ ಕೆಲಸಗಳನ್ನೇ ಮಾಡಿದರೂ, ಉದಾತ್ತವಾದ ಒಳ್ಳೆಯ ಆಶಯಗಳಿಂದಲೇ ಕೂಡಿ ಕೆಲಸಮಾಡೋಣ; ಕಾರ್ಯಕಾರಿಯಾಗಿಯೂ ಫಲದಾಯಕವಾಗಿರುವ ವಿಧಾನಗಳಲ್ಲೇ ಕೆಲಸಮಾಡೋಣ.

ಎಂ. ಮಾಧವರಾವ್,
ಮೈಸೂರು, ಮೈಸೂರು ಸಂಸ್ಥಾನದ ದಿವಾನರವರು.
೩ ಅಕ್ಟೋಬರ್ 1941.

ಮಹಾರುದ್ರಾಭಿಷೇಕ ಮಹೋತ್ಸವ, ಮನ್ನಳ್ಳಿ

ನಿಜಾಂ ಇಲಾಖಾ ಜಹಿರಾಬಾದ್ ತಾಲ್ಲೂಕು ಮನ್ನಳ್ಳಿ ಗ್ರಾಮದ ಮಠದಲ್ಲಿ ಕಳೆದ ತಿಂಗಳು ೩ ನೆಯ ತಾರೀಖಿನ ದಿವಸ ಮಹಾರುದ್ರಾಭಿಷೇಕವು ವಿಶೇಷ ವೈಭವದೊಡನೆ ನೆರವೇರಿತು. ಆ ಸಮಾರಂಭಕ್ಕೆ ಹಾದಿಗೇರಿ ಹಿರೇಮಠದ ಶ್ರೀ ಪರ್ವತಸ್ವಾಮಿಗಳು ಆಗಮಿಸಿದ್ದರಿಂದ ವಿಶೇಷ ಶೋಭೆಯುಂಟಾಯಿತು. ರುದ್ರಾಭಿಷೇಕ ಸಮಯದಲ್ಲಿ ಭಜನ ಸಂಘದವರು ಇಂಪಾಗಿ ಭಜನೆಯನ್ನು ಮಾಡುತ್ತಿದ್ದರು. ಆ ಸಮಯಕ್ಕೆ ರಂಜೇರಿ ದಾಸೋಹ ಮಠಾಧ್ಯಕ್ಷರಾದ ಸಿದ್ಧಲಿಂಗಸ್ವಾಮಿಗಳು ರೇಕುಳಗಿ ಹಿರೇಮಠಾಧ್ಯಕ್ಷರಾದ ಸದ್ಯೋಜಾತಸ್ವಾಮಿಗಳು ಆಗಮಿಸಿ ಶೋಭೆಯನ್ನುಂಟುಮಾಡಿದ್ದರು. ಶ್ರೀ ಹಾದಿಗೇರಿಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆಗೂಡಿತು. ಆಗ ಸದ್ಯೋಜಾತಸ್ವಾಮಿಗಳು ಗುರುವರ್ಗದವರ ಕರ್ತವ್ಯ ಕರ್ಮದ ಬಗ್ಗೆ ಬಹುಗಂಭೀರವಾಗಿ ಭಾಷಣಮಾಡಿದರು. ಇವರು ಭಾಷಣಮಾಡುವ ಸಮಯದಲ್ಲಿ ಗುರುವರ್ಗವನ್ನು ಎಚ್ಚರಗೊಳಿಸಿದ ವೇ॥ ಪಂ॥ ಕಾಶೀನಾಥಶಾಸ್ತ್ರಿಗಳವರಿಂದ ಸಮಾಜಕ್ಕುಂಟಾಗಿರುವ ಅನಂತ ಉಪಕಾರಗಳನ್ನು ವಿವರಿಸಿ ಹೇಳಿದರು ಈ ವಿಷಯವನ್ನು ಕೇಳಿ ಜನರು ಮೇಲಿಂದಮೇಲೆ ತಮ್ಮ ಅನುಮೋದ್ಗಾರವನ್ನು ಕರತಾಡನ ಮೂಲಕ ಸೂಚಿಸುತ್ತಿದ್ದರು. ಆಮೇಲೆ ರಂಜೇರಿ ಮಠಾಧ್ಯಕ್ಷರಾದ ಸಿದ್ಧಲಿಂಗಸ್ವಾಮಿಗಳವರು, ವರ್ಣಾಶ್ರಮ ಧರ್ಮದ ವಿಷಯವನ್ನೆತ್ತಿಕೊಂಡು ಆಗಮಗಳ ಪ್ರಮಾಣಗಳೊಡನೆ, ಆ ವಿಷಯವನ್ನು ಮನೋಹರವಾಗಿ ಪ್ರತಿಪಾದಿಸಿದರು ಹುರುಳಿಲ್ಲದ ವಾದಭಂಗ ವಚನಗಳನ್ನು ಖಂಡತುಂಡವಾಗಿ ಖಂಡಿಸಿದರು. ತರುವಾಯ ಸಭಾಧ್ಯಕ್ಷರು, ಶ್ರೀಜಗದ್ಗುರು ಪಂಚಾಚಾರ್ಯರ ಮಹತ್ವವನ್ನೂ, ರುದ್ರಾಭಿಷೇಕದ ಮಹತ್ವವನ್ನೂ, ವಿಶದವಾಗಿ ಬೋಧಿಸಿದರು. ತರುವಾಯ ಶ್ರೀ ಜಗದ್ಗುರು ಪಂಚಾಚಾರ್ಯರ, ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಮತ್ತು ಶ್ರೀ ಕಾಶೀನಾಥ ಪಂಡಿತರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಶಾಂತಲಿಂಗಪ್ಪ, ಪಟೇಲ.

ಲಿಂಗಧಾರಣವಿಧಿ

ಬಹುಜನರ ಪ್ರಾರ್ಥನೆಯಮೇರೆಗೆ ಲಿಂಗಧಾರಣವಿಧಿಯು ಹೊಸದಾಗಿ ಮುದ್ರಿಸಲ್ಪಟ್ಟಿದೆ. ಗುರುವರ್ಗದವರಿಗೆ ಈವಿಧಿಯು ಮುಖ್ಯವಾಗಿರುವುದು. ಈ ವಿಧಿಯಲ್ಲಿ ಉಕ್ತವಾಗಿರುವ ಸಮಸ್ತ ವೇದಮಂತ್ರಗಳಿಗೆ ವೈದಿಕಸ್ವರಗಳು ಹಾಕಲ್ಪಟ್ಟಿರುತ್ತವೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟೀಕೆಯು ಬರೆಯಲ್ಪಟ್ಟಿದೆ. ಆದುದರಿಂದ ಪ್ರತಿಯೊಂದು ಗ್ರಾಮದ ಗುರುವರ್ಗದ ಪುರಾಧಿಕಾರಿಗಳು ಈ ಗ್ರಂಥವನ್ನು ತರಿಸಿಕೊಂಡು, ಇದರಲ್ಲಿ ಹೇಳಿದಂತೆ ಲಿಂಗಧಾರಣವನ್ನು ಮಾಡಿ ಪರಮಾತ್ಮನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇನೆ.

ಬೆಲೆ ೪ ಆಣೆ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್.
ಮೈಸೂರು.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ.** ವಿ. ಪಿ. ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸಮುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ರಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳಿದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಷ್ಟಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ **ಬೆಲೆ ೮ ರೂಪಾಯಿ.** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಸದ್ಯೋ [illegible] ಐವರು ಆಚಾರ್ಯರು ಒಂದೆಡೆಯಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವದು

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿದ್ದಾರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ.—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ ೨-೮-೦. ವಿ ಪಿ. ೬ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[22] ಪೋ ಬಾ ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಶಕ್ತ್ಯಾಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶಕ್ತ್ಯಾಶಾಸ್ತ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮುಲು(ತೆಲುಗು)	**೮ ಆಣೆ**
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರಿ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ಮಹತ್ವದ ಫೋಟೋಗಳುಳ್ಳವು)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩.೨೩ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji *English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य—संस्कृत)	१ रु
पुरुषसूक्तम् (वीरशैवप्राचीनभाष्योपेतम्)	४ आ
नंदिकेश्वरकारिका (संस्कृत)	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No M. 2266 || ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಸಕಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸ್ಥಳದವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೩ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೦ನೇ ಅಕ್ಟೋಬರ್ ೧೯೪೧ [ಸಂಚಿಕೆ ೨೫

ಯುದ್ಧಕಾಲದಲ್ಲಿ ರಷ್ಯಾ ಸ್ತ್ರೀಯರ ಸಾಹಸ!

ಹಿಟ್ಲರನು ರಷ್ಯಾದೇಶದಮೇಲೆ ದಂಡಯಾತ್ರೆ ಹೊರಟ ಇಪ್ಪತ್ತುನಾಲ್ಕು ಗಂಟೆಯೊಳಗಾಗಿ ಆ ದೇಶದ ಸಾವಿರಾರುಮಂದಿ ಸ್ತ್ರೀಯರು ಯುದ್ಧಕ್ಕಾಗಿ ಹೊರಟು ಹೋದ ತಮ್ಮ ಪತಿಗಳ ಉದ್ಯೋಗಗಳನ್ನು ಸ್ವಾಧೀನಪಡಿಸಿಕೊಂಡರು ಅವರಿಗೆ ಯಾವ ಉದ್ಯೋಗವೂ ಕಷ್ಟಕರವಾಗಿ ತೋರಲಿಲ್ಲ ಎಷ್ಟು ಗಂಟೆ ಕೆಲಸ ಮಾಡಿದರೂ ಕಾಲ ಹೋದುದೇ ತಿಳಿಯುತ್ತಿರಲಿಲ್ಲ ಅವರು ಟ್ರೈಲುಗಾಡಿಗಳನ್ನು ನಡೆಸಿದರು ಲೋಹಕರಗಿಸುವ ಕುಲಿಮೆಗಳ ಯಂತ್ರಗಳನ್ನು ನಡೆಸಿದರು ಉಕ್ಕಿನ ಕಾರ್ಖಾನೆಗಳಲ್ಲಿ ಕೆಲಸಮಾಡಿದರು ರೈಲ್ವೆ ನಿಲ್ದಾಣದ ಅಧಿಕಾರಿಗಳಾದರು

ಸೇನಾಧಿಕಾರಿಯೊಬ್ಬನ ತರುಣಪತ್ನಿಯು ತನ್ನ ಪತಿಯ ಅಧಿಕಾರದಲ್ಲಿದ್ದ ಸೇನಾಭಾಗಕ್ಕೆ ಸೇರಿಕೊಂಡು ಶತ್ರುಸೇನೆಯ ಹಿಂಭಾಗದಲ್ಲಿ ಗೂಢಚಾರಿಣಿಯ ಕಾರ್ಯದಲ್ಲಿ ಉದ್ಯುಕ್ತಳಾದಳು. ಆಕೆಯು ಪ್ರತಿಯೊಂದು ಹೆಜ್ಜೆಗೂ ಪ್ರಾಣಾಪಾಯದಲ್ಲಿ ಇದ್ದಳು ಆದರೂ ಆಕೆಯು ರಷ್ಯದ ಸೇನಾದಳದ ಅಧಿಕಾರಿಗೆ ಅವಶ್ಯಕವಾಗಿದ್ದ ಅನೇಕ ಸಂಗತಿಗಳನ್ನು ತಿಳಿದುಕೊಂಡು ಬಂದಳು ಅವುಗಳಿಂದ ಮುಂದೆ ರಷ್ಯಾದವರು ಆ ಸ್ಥಳದಲ್ಲಿ ತಮ್ಮಮೇಲೆ ಬೀಳುವದಕ್ಕಿದ್ದ ಶತ್ರುಗಳನ್ನು ಧ್ವಂಸಮಾಡಲು ಸಹಾಯವಾಯಿತು ಮತ್ತೊಬ್ಬ ವೀರರಮಣಿಯು ಷ್ಯಾ-ಫಿನ್‌ಲ್ಯಾಂಡ್ ದೇಶಗಳ ಗಡಿನಾಡಿನಲ್ಲಿ ಅಗಸಗಿತ್ತಿಯಾಗಿದ್ದಾಳೆ ಈಕೆಯ ಹೆಸರು ಮರಿಯಾಯ ಟ್ಕೇಕೆಯು ಒಂದು ದಿನ ತನ್ನ ಕೆಲಸದಲ್ಲಿ ನಿರತಳಾಗಿದ್ದಾಗ ಬಂದೂಕದ ಧ್ವನಿಯು ಕೇಳಬಂದಿತು, ಅದೇನೆಂದು ನೋಡಿದಾಗ ತಮ್ಮ ಗಡಿನಾಡನ್ನು ಕಾಯುತ್ತಿದ್ದ ಸೇನಾತಂಡವೊಂದರ ಮೇಲೆ ಶತ್ರುಗಳ ಎರಡು ಸೇನಾದಳದವರು ಬಿದ್ದು ದಾಳಿಮಾಡುತ್ತಿದ್ದುದು ಕಂಡುಬಂದಿತು ಕೂಡಲೇ ಬಂದೂಕವನ್ನು ಎತ್ತಿಕೊಂಡು ಹೊರಟು ತಮ್ಮ ಪಕ್ಷದ ಸೇನಾನಾಯಕನ ಪಕ್ಕದಲ್ಲಿ ನಿಂತು ಹೋರಾಡಿದಳು. ಆದರೆ ಸೋವಿಯಟ್ ಸೇನಾದಳದಲ್ಲಿ ಸಾಕಷ್ಟು ಯುದ್ಧಭಟರಿರಲಿಲ್ಲವಾದುದರಿಂದ ಸ್ವಲ್ಪ ಹೊತ್ತಿನಮೇಲೆ ಜರ್ಮನರು ಅವರನ್ನು ಸುತ್ತುಗಟ್ಟಿದರು ಆಗ ಇವಳು ಸ್ವತಂತ್ರಯತ್ನದಿಂದ ಶತ್ರುಸೇನೆಯನ್ನು ದಾಟಿ ಸಹಾಯಕರನ್ನು ಕರೆದುಕೊಂಡು ಬರುವುದಾಗಿ ನಿಶ್ಚಯಿಸಿದಳು ಗುಪ್ತಮಾರ್ಗದಲ್ಲಿ ಹೊರಟು ಕಡೆಗೆ ರಷ್ಯಾದವರ ಭಾರಿ ಸೇನಾದಳವೊಂದನ್ನು ಸೇರಿ, ಅಲ್ಲಿದ್ದವರನ್ನೆಲ್ಲಾ ಕದನ ನಡೆಯುತ್ತಿದ್ದ ಸ್ಥಳಕ್ಕೆ ಕರೆದುಕೊಂಡು ಬಂದಳು ಆರು ಗಂಟೆಗಳ ಅನಂತರ ಅವರು ಜರ್ಮನರನ್ನು ಹಿಮ್ಮೆಟ್ಟಿಸಿದರು. ತರುವಾಯ ಅವಳು ಪುನಃ ಬಟ್ಟೆ ಒಗೆಯಲು ಪ್ರಾರಂಭಿಸಿದಳು.

ರಷ್ಯಾದೇಶದ ವಿಮಾನದಳದಲ್ಲಿ ಎಷ್ಟೋಜನ ಮಹಿಳೆಯರು ಕೆಲಸಮಾಡುತ್ತಿದ್ದಾರೆ. ಅವರನ್ನು ಆಕಾಶಮಂಡಲದಲ್ಲಿ ಯುದ್ಧಮಾಡುವುದಕ್ಕೆ ಕಳುಹಿಸುವುದಿಲ್ಲ ಆದರೆ ಅವರು ಗಂಡಸರನ್ನು ಬಿಡುಮಾಡಿ ಕಳುಹಿಸುವುದಕ್ಕಾಗಿ ನಾನಾವಿಧ ಕಾರ್ಯಕಲಾಪಗಳನ್ನು ವಹಿಸಿಕೊಂಡಿದ್ದಾರೆ ಎಲ್ಲಾ ಕೆಲಸಗಳಲ್ಲಿ ಮಹಿಳೆಯರು ಪುರುಷರಿಗೆ ಸಮವಾಗಿ ಕೆಲಸಮಾಡುತ್ತಿದ್ದಾರೆ ರಷ್ಯಾದೇಶದ ಮಹಿಳೆಯರು ಕಳೆದ ಇಪ್ಪತ್ತು ವರುಷಗಳಿಂದ ಯಂತ್ರೋಪಕರಣಗಳನ್ನು ನಡೆಸುತ್ತ ಬಂದಿದ್ದಾರೆ

ಈಗ ಅಲ್ಲಿ ಒಂದು ಲಕ್ಷಕ್ಕಿಂತಲೂ ಹೆಚ್ಚು ಜನ ಮಹಿಳೆಯರು ಯಂತ್ರೋಪಕರಣಗಳನ್ನು ತಯಾರಿಸುವುದಕ್ಕಾಗಿ ಶಿಕ್ಷಣವನ್ನು ಪಡೆದಿರುವರು. ಲಕ್ಷಾಂತರ ಮಹಿಳೆಯರು ಕೈಗಾರಿಕೆಯಲ್ಲೂ ಸಾಮಾನುಗಳನ್ನು ಸಾಗಿಸುವುದರಲ್ಲೂ ನಿರತರಾಗಿದ್ದಾರೆ ಇವರಲ್ಲಿ 4,000 ಜನ ಮಹಿಳೆಯರು ಅತ್ಯುತ್ತಮವಾದ ಶಿಕ್ಷಣವನ್ನು ಪಡೆದು ರೈಲುಗಾಡಿಗಳನ್ನು ನಡೆಸುತ್ತಿದ್ದಾರೆ ಮಾಸ್ಕೋ ನಗರದ ಕೆಲವು ಭಾರಿ ಕಾರ್ಖಾನೆಗಳಲ್ಲಿ ಮೇಲ್ವಿಚಾರಣೆಯನ್ನು ಮಹಿಳೆಯರೇ ನೋಡಿಕೊಳ್ಳುತ್ತಾ ಬಂದಿದ್ದಾರೆ ಇವರಲ್ಲಿ ಅಧಿಕಾರಿಣಿಯರೂ ಉಪಾಧಿಕಾರಿಣಿಯರೂ ಉಂಟು ಇವರು ಕಾಲಕ್ರಮೇಣ ಈ ಸ್ಥಾನಗಳಿಗೆ ಏರಿಬಂದಿರುವರು ಒಬ್ಬ ಮಹಿಳೆಯು ರಷ್ಯಾ ದೇಶದಲ್ಲಿರುವ ಎಲ್ಲಾ ಆಣೆಕಟ್ಟೆಗಳಿಗಿಂತಲೂ ದೊಡ್ಡದಾದ ಆಣೆಕಟ್ಟೆಯೊಂದರ ಸಂಬಂಧವಾಗಿ ಶ್ರೇಷ್ಠಾಧಿಕಾರವನ್ನು ವಹಿಸಿಕೊಂಡಿರುವಳು

ಅಮೆರಿಕಾ ಪತ್ರಿಕೆಗಳ ಅಭಿಪ್ರಾಯ

ರಷ್ಯಕ್ಕೆ ಬರೀ ಬಾಯಿಮಾತಿನಿಂದ ಸಹಾನುಭೂತಿಯನ್ನು ವ್ಯಕ್ತಪಡಿಸಿದರೆ ಸಾಲದೆಂದೂ, ಹೆಚ್ಚುಹೆಚ್ಚಾಗಿ ಸಹಾಯ ನೀಡಬೇಕೆಂದೂ. ಡೇಲಿಮೇಲ್ ಪತ್ರಿಕೆಯ ನ್ಯೂಯಾರ್ಕ್ ಸುದ್ದಿಗಾರರು ಪ್ರಕಟಿಸಿದ್ದಾರೆ 'ನ್ಯೂಯಾರ್ಕ್ ಪೋಸ್ಟ್' ಪತ್ರಿಕೆಯು "ಅಮೆರಿಕೆಯು ಜರ್ಮನಿಯ ಮೇಲೆ ಸಂಗ್ರಾಮ ಹೂಡಬೇಕೆಂದೂ, ರಷ್ಯಕ್ಕೆ ಸಹಾಯ ನೀಡುವ ಉದ್ದೇಶದಿಂದ ಸಂಗ್ರಾಮದಲ್ಲಿ ಭಾಗವಹಿಸಿದರೆ ಜಯವಾಗಬಹುದೆಂದೂ, ವಿದ್ಯುದ್ವೇಗದಿಂದ ಯುದ್ಧರಂಗಕ್ಕಿಳಿದರೆ ಅದರಿಂದ ಮಹತ್ತರವಾದ ಪರಿಣಾಮಗಳುಂಟಾಗಿ ಜಯವು ಲಭಿಸುವದೆಂದೂ ಬರೆದಿದೆ ನ್ಯೂಯಾರ್ಕ್ ಟೈಂಸ್ ಪತ್ರಿಕೆಯು "ಹರ್ ಹಿಟ್ಲರರು ಪೂರ್ವವನ್ನೆಲ್ಲಾ ಜಯಿಸಿ ಪಶ್ಚಿಮದ ಕಡೆ ತಿರುಗುವವರೆಗೂ ನಾವು ಸುಮ್ಮನೆ ಕುಳಿತುಕೊಳ್ಳುವಂತಿಲ್ಲ ಅಟ್ಲಾಂಟಿಕ್ ಯುದ್ಧದಲ್ಲಿ ನಾವು ಭಾಗವಹಿಸಿ, ನಮ್ಮ ಸರ್ವ ಶಕ್ತಿಯನ್ನೂ ಉಪಯೋಗಿಸಿ ಜಯಗಳಿಸಬೇಕು," ಎಂದು ಬರೆದಿದೆ ಸಾಮಾನ್ಯವಾಗಿ ಎಲ್ಲ ವೃತ್ತಪತ್ರಿಕೆಗಳೂ ಇದೇ ಅಭಿಪ್ರಾಯವನ್ನೇ ವ್ಯಕ್ತಪಡಿಸಿದ್ದರೂ, ವಾಷಿಂಗ್ಟನ್ ನಗರದಲ್ಲಿ ಈ ಬಗೆಯ ಕಾರ್ಯಕ್ರಮವನ್ನು ಕೈಗೊಳ್ಳುವ ಚಟುವಟಿಕೆಯೇ ಇಲ್ಲವೆಂದು ತಿಳಿದು ಬರುತ್ತದೆ.

ರಷ್ಯದ ಡೈವ್‌ಬಾಂಬರ್ ವಿಮಾನಗಳು

ರಷ್ಯವು ನಿರ್ಮಿಸಿರುವ ಹೊಸಮಾದರಿಯ ಡೈವ್ ಬಾಂಬರ್ ವಿಮಾನಗಳು ವ್ಯಾಜ್ಮಾ ರಣಕ್ಷೇತ್ರದ ಸುತ್ತಮುತ್ತ ಶತ್ರುಗಳಿಗೆ ಬಹಳ ಹಾನಿಯುಂಟುಮಾಡುತ್ತಿವೆಯೆಂದು ಹೇಳಲಾಗಿದೆ

ಜಪಾನಿನ ಮುಂದಿನ ನೀತಿಯೇನು?

ಈಗ ಕೆಲವು ದಿವಸಗಳಿಂದ ಮುಂದೆ ಜಪಾನು ಅನುಸರಿಸಬೇಕಾದ ನೀತಿಯನ್ನು ಕುರಿತು ಜಪಾನ್ ಮಂತ್ರಿಮಂಡಲದೊಳಗೆ ವಾಗ್ಯುದ್ಧವಾಗುತ್ತಿತ್ತು ಕಡೆಗೆ ಉಗ್ರಪಂಥೀಯರ ಕೈ ಮೇಲಾಗಿ ಕೊನೋಯಿ ಸರ್ಕಾರವು ರಾಜೀನಾಮೆ ಕೊಡಬೇಕಾಯಿತು ಫ್ರಾನ್ಸಿನ ಮೇಲೆ ಇಟಲಿಯು ವರ್ತಿಸಿದಂತೆ ರಷ್ಯದ ಸಂಬಂಧದಲ್ಲಿ ಜಪಾನು ವರ್ತಿಸಬೇಕೆಂದು ಜರ್ಮನರು ಪ್ರೇರೇಪಿಸುತ್ತಿರುವಂತೆ ತೋರುತ್ತಿದೆ ಆದರೆ ಫ್ರಾನ್ಸು ಮತ್ತು ರಷ್ಯಾ ಸ್ಥಿತಿಗಳಲ್ಲಿ ಬಹಳ ಅಂತರವಿದೆ ರಷ್ಯವು ಪಶ್ಚಿಮದಲ್ಲಿ ಜರ್ಮನಿಯನ್ನು ಧೈರ್ಯದಿಂದ ಎದುರಿಸುತ್ತಿರುವದಲ್ಲದೆ, ಅದರ ಪೂರ್ವಭಾಗದ ಸೇನೆಗಳು ಸ್ವಲ್ಪವೂ ಕುಂದದೆ ಸಿದ್ಧವಾಗಿವೆ ಜಪಾನಾದರೊ 4 ವರ್ಷಗಳಿಂದ ಚೀಣದೊಡನೆ ಹೊಡೆದಾಡಿ ಬಳಲಿ ನಷ್ಟಗೊಂಡಿದೆ ಯುದ್ಧಗಳಲ್ಲಿ ಭಾಗವಹಿಸಲಿಲ್ಲವಾದುದರಿಂದ ಜಪಾನಿನ ನೌಕಾಬಲವೇನೋ ನಷ್ಟಗೊಂಡಿಲ್ಲ ಅದರಲ್ಲಿರುವ ಜಪಾನಿನ ತರುಣ ನಾವಿಕರು ಮುಂದೆ ನುಗ್ಗಿ ಕೀರ್ತಿಗಳಿಸಬೇಕೆಂಬ ಆಕಾಂಕ್ಷೆಯಿಂದಿದ್ದಾರೆ ಈಗಿನಂತಹ ಸುಸಂಧಿಯು ಮುಂದೆ ದೊರೆಯುವದಿಲ್ಲವೆಂದೂ, ಬ್ರಿಟಿಷ್ ಮತ್ತು ಅಮೇರಿಕ ನೌಕಾಬಲಗಳ ಮೇಲೆ ಬಿದ್ದು ಬಲಪರೀಕ್ಷೆಗೆ ಇದು ಸಕಾಲವೆಂದೂ ವಾದಿಸುತ್ತಿದ್ದಾರೆ ಆದರೆ ಈ ಮಡುಕಿನ ಫಲಿತಾಂಶವು ಜಪಾನಿಗೆ ವಿಪತ್ಕಾರಕವಾಗಬಹುದೆಂದು ಭಾವಿಸುವವರೂ ಇದ್ದಾರೆ ಈ ಸಂದಿಗ್ಧ ಸ್ಥಿತಿಯಲ್ಲಿ ಅದು ಮುಂದೇನು ಮಾಡುವದೆಂಬುದು ಸಂದೇಹಾಸ್ಪದವಾಗಿದೆ

ಸ್ವೀಕಾರ.

ವಿಜಾಪುರ ಶಹರದಲ್ಲಿರುವ ವೇ|| ದುಂಡಯ್ಯ ಬಸಯ್ಯ ಕರ್ಪೂರ ಮಠ ಇವರು ಪ್ರಭಾ ಪೋಷಣಕ್ಕೋಸ್ಕರ 5 ರೂಪಾಯಿಗಳನ್ನು ಕಳುಹಿಸಿದ್ದಾರೆ

ಸೊಲ್ಲಾಪುರದಲ್ಲಿರುವ ಮ|| ರಾ|| ಭೀಮಾಶಂಕರ ಉಪಾಸೆ ಇವರ ಪುತ್ರನು ಬಹಳ ಎತ್ತರದ ಮಹಡಿಯಿಂದ ಬಿದ್ದರೂ ಜಗದಾಚಾರ್ಯರ ಅನುಗ್ರಹದಿಂದ ಗುಣವಾದ ಸಂತೋಷಕ್ಕಾಗಿ ಸಮರ್ಪಿಸಿದ 1 ರೂ. ಯು ಸೌ|| ಭಾಗೀರಥೀಬಾಯಿ ಕಟಾಪ ಇವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

॥ ಶ್ರೀಜಗದ್ಗುರು ರೇಣುಕಾಚಾರ್ಯಾಯನಮಃ ॥

ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ

ಲೇ—ಮಲ್ಲಿಕಾರ್ಜುನ [illegible]
ಮಳೇಮಠ [illegible]

[illegible] ಗಂ |
ಭರದುರ್ಗಂ ಯಂತ್ರ [illegible] |
ನಿರುತಂ ಕಾಯುವುದು ಸತ್ಯಂ |
ಶರಣಂ ಸತ್ಯಂ ತಿಳಿಯ [illegible]

ಅಸತ್ಯದಷ್ಟು ಸೃಷ್ಟಿಗೆ ವಿಪರೀತವಾದ [illegible] ವಾದದ್ದೂ ಮತ್ತೆ ಯಾವುದೂ ಇಲ್ಲ. [illegible] ವಸ್ತುವು ಉಂಟೆಂದು ನಂಬುವುದರಿಂದ [illegible] ಲಾಭವಿಲ್ಲ. ತಿಪ್ಪೆಯಲ್ಲಿಟ್ಟ [illegible] ಬಾರದಿರದು. ಕೊಲೆ, ವ್ಯಭಿಚಾರ, ಕಳ್ಳತನ [illegible] ಸಿದ್ಧಾಂತಗಳು ಸುಳ್ಳಿನ ಸಹವಾಸ [illegible] ವುದರಿಂದ ಪರಮಾತ್ಮನ ಕೃಪೆಯು [illegible] ವನ್ನಾಡುವುದರಿಂದ ಪರಮಾತ್ಮನ ಅನುಗ್ರಹವು [illegible] ಗುವದು, ಮತ್ತು ನಮಗೆ ಸಂಸಾರ [illegible] ಪಾಯವು ದೊರೆತು ನಾವು ನಮ್ಮ ನಿಜ [illegible] ರಾಗುತ್ತೇವೆ.

ಯಾವುದಾದರೊಂದು ವಿಷಯದ ಸಲುವಾಗಿ ಸುಳ್ಳಾಡಿ, ಅದು ಬಹಿರಂಗವಾಗದಂತೆ ಬಹು ದಿವಸ [illegible] ವರೆಗೆ ಗೋಪ್ಯವಾಗಿಡಲು [illegible] ಬಿಟವಲ್ಲದ ಮಾತನ್ನು ಒಂದಿಲ್ಲೊಂದು ದಿವಸ [illegible] ಬೈಲಿಗಿಡುವನು. ಆದ್ದರಿಂದ ಜನರಿಗೆ ವಿಶ್ವಾಸ [illegible] ಕಾಣಬೇಕಂದ ಇಷ್ಟ [illegible] ಜನರಿಗೆ [illegible] ಸುಳ್ಳು ಅನೇಕ ಸಾರ್ವಜನಿಕ [illegible] ಗೋಪ್ಯವಾಗಿಡಲ್ಪಟ್ಟರೂ [illegible] ಹೋದಲ್ಲಿರುವ ಜ್ವರವಿದ್ದವನಿಗೆ [illegible] ನಾಭಿಯಲ್ಲಿ ಕಟಿಲವಿದ್ದರೆ [illegible] ವಂತೆ [illegible] ನಾಲಿಗೆಯು [illegible] ನಲ್ಲಿ ಸತ್ಯವು ಅಸತ್ಯಕ್ಕೆ [illegible] ನಿರ್ಣಯವಾದದ್ದು [illegible] ತರಗಳೂ [illegible] ಇರುವದಿಲ್ಲ. ಸತ್ಯವು ನಮ್ಮ ಉದ್ದೇಶವನ್ನು ಸಾಧಿಸುವುದಕ್ಕೆ ಅತಿ ಸಮೀಪವಾದ ಮಾರ್ಗವಾಗಿದ್ದು, ಅದು ನಮ್ಮನ್ನು ನೇರವಾಗಿ ವಿವಕ್ಷಿತಸ್ಥಳಕ್ಕೆ ಮುಟ್ಟಿಸುವದು. ಅದು ಅಪ್ರಾಮಾಣಿಕತನದಂತೆ ಕ್ಷಣಿಕವಲ್ಲದೆ ನಿತ್ಯವಾಗಿರುವದು. ರಕ್ಷಣೆ [illegible] ಕಾಲದ ವಂಚನೆಯಂತೆ ಮೆಲ್ಲನೆ ಬಲಗುಂದ [illegible] ಬಯಲಾಗಿ ಕಟ್ಟಕಡೆಗೆ ಅವನು ಅವಿಶ್ವಾಸಿಯಾಗುವನು. ಆದರೆ ಸತ್ಯವಂತರನ್ನು ಎಲ್ಲರೂ ನಂಬುವರಲ್ಲದೆ ಪರಮಾತ್ಮನೂ ಅನುಗ್ರಹಿಸುವನು.

ಸತ್ಯವು ಯಾವಾಗಲೂ ಅಸಹಾಯಶೂರನಾಗಿರುವದು. ಅದಕ್ಕೆ ಯಾರ ಒತ್ತಾಸೆಯೂ ಬೇಕಿಲ್ಲ. ಅದು ಕೈಗೆ ನಿಲುಕುವಂತಿದ್ದು ಯಾವಾಗಲೂ ನಮ್ಮ ನಾಲಿಗೆಯ ತುದಿಯಲ್ಲಿ ಕುಳಿತಿರುತ್ತದೆ, ಮತ್ತು ನಮಗ ತಿಳಿಯದಂತೆ ಹೊರಬಿದ್ದು ಹೋಗುವುದಕ್ಕೆ ಸಿದ್ಧವಾಗಿರುತ್ತದೆ. ಆದರೆ ಸುಳ್ಳು ಯಾವಾಗಲೂ ನಮ್ಮನ್ನು ತೊಂದರೆಯಲ್ಲಿ ಹಾಕುತ್ತದೆ, ಮತ್ತು ಸುಳ್ಳನ್ನು ಮುಚ್ಚುವುದಕ್ಕಾಗಿ ಹಲವು ಹಲವು ಸುಳ್ಳುಗಳನ್ನು ಹುಟ್ಟಿಸಬೇಕಾಗುತ್ತದೆ. ಹೀಗೆ ಮಾಡಿದರೂ ಆಡಿದ ಸುಳ್ಳು ಬೈಲಿಗೆ ಬಾರದೆ ಎಂದೂ ಇರಲಾರದು. ಅದಕ್ಕೆ ಕಾರಣ ವಸ್ತುತಃ ಸುಳ್ಳನ್ನೇ ಆಡದೆ, ಒಮ್ಮೆ ಆಡಿದರೂ ಮತ್ತೆ ಹಲವಾರು ಸಟೆಗಳಿಂದ ಅದನ್ನು ಮುಚ್ಚುವ ಭರಕ್ಕೆ ಹೋಗದೆ, ಮೊದಲೇ ಸತ್ಯವನ್ನು ನುಡಿದರೆ ಒಳಿತಾಗುವುದು ನಿಜವು. ಏಕೆಂದರೆ ಸತ್ಯವು ಸ್ಥಿರವಾದದ್ದೂ ನಿಷ್ಕಪಟವಾದದ್ದೂ ಇರುವುದರಿಂದ ಅದಕ್ಕೆ ತನ್ನ ಗುಟ್ಟು ಬಹಿರಂಗವಾದೀತೆಂಬ ಅಂಜಿಕೆಯು ಸ್ವಲ್ಪವಾದರೂ ಇರುವುದಿಲ್ಲ. ಈ ಅಂಜಿಕೆಯು ಸುಳ್ಳುಗಾರನ ಮನಸ್ಸಿನಲ್ಲಿ ಯಾವಾಗಲೂ ಕಡಿಯುತ್ತಿರುತ್ತದೆ. ಬೆಕ್ಕು ತನ್ನನ್ನು ಯಾರೂ ನೋಡಬಾರದೆಂದು ತಾನೇ ಕಣ್ಣು ಮುಚ್ಚಿಕೊಂಡು ಹಾಲನ್ನು ಕುಡಿಯುವದು. ಅದರಂತೆಯೇ ಸುಳ್ಳುಗಾರನು ತಾನು ಆಡಿದ ಸುಳ್ಳು ಯಾರಿಗೂ ತಿಳಿಯಲಾರದೆಂದು ಪ್ರಾಮಾಣಿಕನಂತೆ ನಟಿಸುವನು. ಆದರೂ ಅವನ ಮುಖಚಿಹ್ನವೇ ಜನರ ಮನಸ್ಸಿನಲ್ಲಿ ಸಂಶಯವನ್ನುಂಟುಮಾಡುತ್ತದೆ.

ಸತ್ಯದಿಂದ ನಮ್ಮ ಕಾರ್ಯಗಳು ಶೀಘ್ರವಾಗಿ ಆಗುವುವು. ಸುಳ್ಳು ಕೆಲವು ಪ್ರಶ್ನೆಗಳನ್ನು ಕೇಳುವ ಶ್ರಮವನ್ನು [illegible] ಮತ್ತು ಮುಖ್ಯವಾದ ತತ್ವದ ಮಾರ್ಗವನ್ನು [illegible] ತೊರಗೆಡವುತ್ತದೆ. ಅದು ರಾಜಮಾರ್ಗ [illegible] ಪ್ರವಾಸದಂತಿರುವದು. [illegible] ಪ್ರಾಮಾಣಿಕರು ಸುರಕ್ಷಿತವಾಗಿಯೂ [illegible] ಮುಟ್ಟುತ್ತಾರೆ. ಆದರೆ [illegible] ಹೋಗದೆ ಅಡ್ಡದಾರಿಯಿಂದ [illegible] ಗಂಡಾಂತರದೊಳಗೆ [illegible] ಸಿಕ್ಕುವರು.

[illegible] ನಮ್ಮನ್ನು ಕಾಪಾಡುವ [illegible] ಶತ್ರುವಿನಂತೆ ಘಾತಿ [illegible]

[illegible] ಮಾಡಲ್ಪಟ್ಟ ತಂಬೂರಿಯ ದಂಡವು [illegible] ಕುಂಬಳಕಾಯಿಯು [illegible] ಪ್ತವಾಗಲಾರದೋ ಹಾಗೆಯೇ [illegible] ಕುಲಸಂಜಾತನಾದಾಗ್ಯೂ, ವೇದ [illegible] ಸಂಪನ್ನನಾದಾಗ್ಯೂ ಗುಣವಂತನಾ [illegible] ಸತ್ಯದ ಹೊರತು ಮನುಷ್ಯಜನ್ಮವನ್ನು ಸಫಲಗೊಳಿಸಿಕೊಳ್ಳಲಾರನು.

[illegible] ಮಾಡಲ್ಪಟ್ಟ ವೀಣೆಯು ಗುಣ [illegible] ಮೃದುನಾದ [illegible] ಪ್ರೀತಿಸುತ್ತದೆ. ಸತ್ಯವಂತನು ಧನಹೀನ [illegible] ವಿದ್ಯಾಹೀನನೂ ಆದಾಗ್ಯೂ ಇಹದಲ್ಲಿ ಕೀರ್ತಿಯನ್ನೂ ಪರದಲ್ಲಿ ಗತಿಯನ್ನೂ [illegible]

ಅಸತ್ಯವಂತನು [illegible] ಜನರು ಕೂಡಿದೆಡೆಯಲ್ಲಿ [illegible] ತಗ್ಗಿಸಬೇಕಾಗುವ [illegible] ಹಿಮ್ಮೆಟ್ಟುವ [illegible] ಕನಂತೆ ಅವನ [illegible] ಹಿಮ್ಮೆಟ್ಟುವನು [illegible] ಕೂಡಲು ಸ್ತ್ರೀ ಇವುಗಳಂತೆ ಬೆಲೆಹೀನನಾಗುವನು.

ಪುಷ್ಪಿತವಾದ ವನವನ್ನು ಭ್ರಮರಗಳು ಆಶ್ರಯಿಸುವಂತೆ ಸತ್ಯವಂತನನ್ನು ಸಕಲ ಸದ್ಗುಣಗಳು ಆಶ್ರಯಿಸುವವು. ಫಲರಹಿತವಾದ ವೃಕ್ಷವನ್ನು ಶುಕಪಿಕಾದಿಗಳು ತ್ಯಜಿಸುವಂತೆ ಅಸತ್ಯ ನುಡಿಯುವವನನ್ನು ಸಕಲ ಸದ್ಗುಣಗಳೂ ತ್ಯಜಿಸುವವು. ಅಸತ್ಯವಾದಿಯು ಪ್ರವಾಹಕ್ಕೆ ಮರಳಿನ ಸೇತುವೆಯಂ ಕಟ್ಟುವವನಂತೆ ಕೊನೆಗೆ ಭಗ್ನಮನೋರಥನಾಗುವನು. ಅನುಚಿತಪ್ರವೃತ್ತರಾದವರಿಗೆ ತಕ್ಕ ಪ್ರಾಯಶ್ಚಿತ್ತವಾಗುವುದರಲ್ಲಿ ಸಂಶಯವಿಲ್ಲ. ಆದರೆ, ಹಿತಕರವಲ್ಲದ ಸತ್ಯವನ್ನೂ ಹಿತಕರವಾದ ಅಸತ್ಯವನ್ನೂ ನುಡಿಯಲಾಗದು.

ವ್ಯವಹಾರಕ್ಕೆ ಮೂಲಸ್ತಂಭದಂತಿರುವ ಸತ್ಯಕ್ಕೆ ಯಾವನು ಚ್ಯುತಿಯನ್ನು ತಂದುಕೊಳ್ಳುವನೋ ಆ ವ್ಯಾವಹಾರಿಕನು ರಣಾಂಗಣಕ್ಕೆ ಹೋಗುವ ಪುರುಷನು ತನ್ನ ಕೈಗತ್ತಿಯನ್ನು ತಾನೆ ಮುರಿದು ಬಿಸುಟಂತಾಗುವದು. ಅಸತ್ಯವಂತನು ಎಂತಹ ಬಲಿಷ್ಠನೂ ಹಣಗಾರನೂ ಆದಾಗ್ಯೂ ಹಲ್ಲುಮುರಿದ ಹಾವಿನಂತೆ ನಿರ್ವೀರ್ಯನಾಗುವನಲ್ಲದೆ ಜಲವಿಲ್ಲದ ಸರೋವರದಂತೆಯೂ, ಚಂದ್ರನಿಲ್ಲದ ರಾತ್ರಿಯಂತೆಯೂ, ಮೂಗಿಲ್ಲದ ಮುಖದಂತೆಯೂ, ಗಂಡನಿಲ್ಲದ ಸ್ತ್ರೀಯಂತೆಯೂ ಶೋಭಿಸಲಾರನು.

ಸುಳ್ಳಿನಲ್ಲಿಯೂ ಕಪಟದಲ್ಲಿಯೂ ತಾತ್ಕಾಲಿಕವಾದ ಎಂತಹ ಅನುಕೂಲತೆಗಳು ಕಂಡುಬಂದರೂ, ಅವು ಕೂಡಲೇ ಬಯಲಾಗುವವಲ್ಲದೆ ಅವುಗಳಿಂದಾಗುವ ಅನನುಕೂಲತೆಗಳು ಮಾತ್ರ ಶಾಶ್ವತವಾಗಿರುವವು. ಏಕೆಂದರೆ, ಸುಳ್ಳುಗಾರನು ಯಾವಾಗಲೂ ಜನರ ಸಂಶಯಕ್ಕೂ ದ್ವೇಷಕ್ಕೂ ಪಾತ್ರನಾಗುವನಲ್ಲದೆ, ಒಂದುವೇಳೆ ಸತ್ಯವನ್ನು ನುಡಿದರೂ ಜನರು ಅವನನ್ನು ನಂಬರು. ಸತ್ಯಸಂಧನಾದವನು ಸುಳ್ಳಾಡಿ, ತನ್ನ ಕೀರ್ತಿಯನ್ನು ಹೋಗಲಾಡಿಸಿಕೊಂಡರೆ, ಏರಿಯಿಂದ ಕೆಳಗೆ ಹೋ ನೀರು ಪುನಃ ಹಿಂದಿರುಗದಂತೆ ಕಳೆದುಕೊಂಡ ಕೀ ಯನ್ನು ಎಂದೆಂದಿಗೂ ಹೊಂದಲಾರನು.

“ಶ್ರೇಯಾಂಸಿ ಬಹುವಿಘ್ನಾನಿ” ಎಂಬಂತೆ ಸತ್ಯಶಿ ರಿಗೆ ನಾನಾಕಷ್ಟಗಳು ಒದಗುವದು ಸಹಜವಾಗಿರುವ ಅವುಗಳು ನಮ್ಮ ಮನೋಬಲವನ್ನು ಪರೀಕ್ಷಿಸುವು ಬಂದವುಗಳು, ಎಂಬುದಾಗಿ ವಿವೇಕದಿಂದಲೂ ಶಾಂ ಯಿಂದಲೂ ಸಹಿಸಿಕೊಂಡಿದ್ದರೆ ವರ್ಷಾಕಾಲ ಸಾಂದ್ರವಾದ ಮೇಘಗಳು ಶರತ್ಕಾಲದಲ್ಲಿ ವಿರಳವಾ ಹೋಗುವಂತೆ ಕಾಲಕ್ರಮದಲ್ಲಿ ಪರಿಹರವಾಗುವು ಆದಪ್ರಯುಕ್ತ “ಸತ್ಯಕ್ಕೂ ಪಥ್ಯಕ್ಕೂ ಚ್ಯುತಿಯು ಎಂಬ ಲೋಕೋಕ್ತಿಯಂತೆ ಎಂತಹ ಕಠಿಣ ಪ್ರಸ ದಲ್ಲಿಯೂ ಸತ್ಯಾಚರಣೆಯನ್ನು ಬಿಡಬಾರದು.

ವಾಚಕರೇ, ಜಗತ್ತಿನಲ್ಲಿ ಪಾಷಾಣಹೃದಯಂ ದುರುಳರು ಕಪಟಾಚರಣೆಯೇ ಪರಮಪುರುಷಾ ನೆಂದು ತಿಳಿದುಕೊಂಡು ಸಾತ್ವಿಕರಂತೆ ವೇಷ ಒ ನಾಮಧೇಯಗಳಿಂದ ಜನರನ್ನು ವಂಚಿಸುತ್ತ ಸ ಕಳ್ಳತನ ವ್ಯಭಿಚಾರ, ಮೋಸಕೃತ್ಯಗಳನ್ನಾಚರಿಸುತ್ತಾ ಈ ಅನನ್ವಿತ ಕೃತ್ಯಗಳು ಸಜ್ಜನ ಸಮ್ಮತವಲ್ಲವೆಂ ತಿಳಿದು ಕೊಂಡಿರುತ್ತಾರೆ. ಆದರೆ ಆ ತಿಳಿವಳಿಕೆ ಆಚರಣೆಯಲ್ಲಿ ಮಾತ್ರ ಇರುವುದಿಲ್ಲ. ‘ನಿದ್ದೆಯಿ ಮಲಗಿದವನನ್ನು ಎಬ್ಬಿಸಬಹುದಲ್ಲದೆ ನಿದ್ದೆಯ ನೂ ನಿಂದ ಮಲಗಿದವನನ್ನು ಎಬ್ಬಿಸುವುದು ಕಷ್ಟ’ ಎಂಬ ಈ ಜಾಣಹೆಡ್ಡರಿಗೆ ತಿಳಿಸುವದು ಶಕ್ಯವಿಲ್ಲ. ಜ್ವರ ವನಿಗೆ ದೋಷಸಾಂಕರ್ಯವೂ ಸನ್ನಿಪಾತವೂ ಒದ ಸೇವನೆಯೂ ಉಂಟಾದರೆ ಮಹೌಷಧಗಳಿಂದಾ ಆ ವ್ಯಾಧಿಯು ಅಸಾಧ್ಯವಾಗವಂತೆ ಮಹನೀಯ ಸದುಪದೇಶಗಳು ಈ ದುರಾತ್ಮರಿಗೆ ನಿಷ್ಪ್ರಯೋ ವಾಗುವವು. ಅಲ್ಲದೆ ಅನುಭವದಲ್ಲಿ ನೋಡಿದ ‘ತಿಳಿದಂ ತಿಳಿಯದ ಮೂರ್ಖಂಗೆ ತಿಳಿಸೆ ವಿಧಿಯು ಶಕ್ತಂ’ ಎಂಬ ನೀತಿಕಾರರ ವಾಕ್ಯವೂ ವಿಹಿತವಾಗಿ ಕಾಣುವದು.

ಮರದ ಬುಡಕ್ಕೆ ಹಾಕಿದ ನೀರು ವೃಕ್ಷದ ಬೊ ಕೊಂಬೆ ಎಲೆಗಳಿಗೆ ವ್ಯಾಪಿಸುವಂತೆಯೂ, ಮ ಯನ್ನು ಹಿಡಿದೆಳೆದರೆ ನೈ ತಾನಾಗಿಯೇ ಸ್ವಾಧೀನವಾ ವಂತೆಯೂ ಸರ್ವಕ್ಕೂ ಆಧಾರವಾಗಿರುವ ವೊಂದನ್ನು ನಾವು ಪಾಲಿಸುತ್ತಾ ಬಂದರೆ ಮಿಕ್ಕ ಸದ್ಗು ಗಳೂ, ಜನರ ಪ್ರೀತಿವಿಶ್ವಾಸಗಳೂ, ಪರಮಾತ ಒಲುಮೆಯೂ ತಾನಾಗಿಯೇ ಆಗುವವು. ಸೃಷ್ಟಿ ವರೂ ಸತ್ಯದಿಂದಲೇ ನಿಂತಿರುವದು. ಸತ್ಯಕ್ಕೆ ರನ್ನು ಕಟ್ಟುವದು ಸಹಸ್ರ ನಾಲಿಗೆಯುಳ್ಳ ಆದಿ ನಿಗೂ ಅಸದಳವು.

ಸಾರಾಂಶ—ಈ ಜಗತ್ತಿನಲ್ಲಿ ಮನುಷ್ಯನ ವ್ಯವಹಾ ವಸತಿಗಾರನಂತೆ ಒಂದೇ ದಿವಸಮಟ್ಟಿಗೇ ಇ ಮತ್ತು ತನ್ನ ನೆರೆಹೊರೆಯವರ ಸಂಗಡ ಮಾತನಾಡ ಪ್ರಸಂಗವು ಅವನಿಗೆ ಎಂದಿಗೂ ಬಾರದಂತಿದ್ದರೆ ಮಾ ಅವನು ಸುಳ್ಳಾಡಿ ಮಾನ, ಕೀರ್ತಿ, ಸುಖ, ಸಂ ಇತ್ಯಾದಿಗಳಿಗೆ ಎರವಾದರೂ ಅಷ್ಟೇನೂ ದೊಡ್ಡ ಮಾತ ಆದರೆ ಅವನು ಬಹುದಿವಸ ಬಾಳುವವನಿರುವುದರಿಂದಲೂ ಅವನಿಗೆ ಅಡಿಗಡಿಗೆ ಜನರ ಸಂಗಡ ವ್ಯವಹಾರ ಸಂ ಷಣೆಗಳನ್ನು ಮಾಡುವ ಪ್ರಸಂಗಗಳು ಬರುತ್ತಿರುವ ರಿಂದಲೂ, ಅವನು ತನ್ನ ಮಾತಿನಲ್ಲಿಯೂ, ಕೃತಿ ಲ್ಲಿಯೂ ಪ್ರಾಮಾಣಿಕನಾಗಿ ಸತ್ಯವನ್ನೇ ಆಚರಿಸುತ್ತಿ ವದು ವಿಹಿತವಾಗಿರುವದು. ಆದರೆ, ಊರಲ್ಲಿ ಮನೆಮಾ ಕೊಂಡಿದ್ದು ವ್ಯವಹಾರಮಾಡುತ್ತ ಗೃಹಸ್ಥನಾಗಿ ವನು ಕಾಮ ಲೋಭಗಳಿಗೊಳಗಾಗಿ ನಾಲ್ಕು ಜನ ರಿಗೆ ಅಸತ್ಯನುಡಿದು ಲಜ್ಜಾವಿಹೀನನಾಗಿ ಜನರೆದು ಮುಖವನ್ನು ಮೇಲೆಮಾಡಿ ತಿರುಗುವುದು ಮಾತ್ರ ಬ ವಿಷಾದಕರವು. ಜಗತ್ತಿನಲ್ಲಿ ಉತ್ತಮಪುರುಷನು ಸ ಸ್ಸಿನಲ್ಲಿ ವೃಷ್ಟಿಯನ್ನಿರಿಸುವನಲ್ಲದೆ ಕಾಮಲೋಭಾದಿ ವಶನಾಗಿ ಅನುಚಿತಕಾರ್ಯದಲ್ಲಿ ಪ್ರವರ್ತಿಸುವದಿಲ್ಲ.

ಗುರುತತ್ವ ಪ್ರಭಾಕರ

ಲೇಖಕಿ—ಭಾಗೀರಥೀದೇವಿ ಕಟಾಪ ಕೊಲ್ಲಾಪುರ

(೨೧ ನೆಯ ಸಂಚಿಕೆಯಿಂದ ಮುಂದುವರಿದುದು)

ಜಗವತ್ತತ್ವದ ಜ್ಞಾನವಾಗುವ ಕಾಲಕ್ಕೆ ಪ್ರಾಪಂಚಿಕ ವಿಷಯಗಳು ತಮ್ಮಷ್ಟಕ್ಕೆ ತಾವೇ ನಮ್ಮ ಮುಂದೆ ಬಾಯಿ ತೆರೆದು ಕರೆಯುವವು ಚೇತನರಾದ ನಮಗೆ ಅವು ಭೂಷಣ ಅದನ್ನು ಬಿಟ್ಟು ಚೇತನರಾದ ನಾವು ಜಡವಾದ ಅವುಗಳ ಮುಂದೆ ನಾಲಿಗೆಯನ್ನು ನೀಡುವದು ಅಯೋಗ್ಯವೇ ಸರಿ ಆದಕಾರಣ ಸರ್ವ ವಿಧದಿಂದಲೂ ನಾವು ದೇವರ ಒಲುಮೆಯನ್ನು ಬೆಳಸಿಕೊಳ್ಳಬೇಕು ಶ್ರೀಕೃಷ್ಣನು ಅರ್ಜುನನಿಗೆ ಗೀತೆಯನ್ನು ಉಪದೇಶ ಮಾಡುವಾಗ ಜ್ಞಾನ, ಭಕ್ತಿ, ಕರ್ಮ ಮೊದಲಾದ ಅನೇಕ ಸಾಧನಗಳಲ್ಲಿ ಒಂದಕ್ಕಿಂತ ಒಂದರ ಸೌಲಭ್ಯವನ್ನು ಹೇಳುತ್ತ ಬಂದು ಕೊನೆಗೆ "ಮಾಮಿಚ್ಛಾಪ್ತುಂ ಧನಂಜಯ" ಎಂದು ಹೇಳಿದ್ದಾನೆ ಎಂದರೆ ನನ್ನನ್ನು ಪಡೆಯಬೇಕೆಂಬ ಇಚ್ಛೆಯಾದರೂ ಸಾಕೆಂದು ತಾತ್ಪರ್ಯ "ಜ್ಞಾನಭೂಮಿಃ ಶುಭೇಚ್ಛಾಖ್ಯಾ" ಎಂದು ಯೋಗವಾಸಿಷ್ಠವು ಹೇಳುತ್ತದೆ ಜ್ಞಾನವಾಗುವುದಕ್ಕೆ ಮೊದಲು ದೇವರ ಬಯಕೆಯುಂಟಾಗುವದೇ ಮೊದಲನೇ ಮೆಟ್ಟಿಲೆಂದು ಅವರ ತಾತ್ಪರ್ಯ ದೇವರ ಜ್ಞಾನದ ಮಹತ್ವವನ್ನು ಮನಗಂಡಿದ್ದರಿಂದುಂಟಾದ ಬಯಕೆಯು ಒಲವಷ್ಟು ಅದು ಪುರುಷನನ್ನು ಫಲದ ಕಡೆಗೊಯ್ಯುತ್ತದೆ

ಮೊದಲು ದೇವರು ಆಮೇಲೆ ಪ್ರಪಂಚ ಈಜು ಬಂದಮೇಲೆ ನೀರಿಗಿಳಿಯಬೇಕಲ್ಲವೆ? ಅದರಂತೆ ದೇವರನ್ನು ಕಂಡಮೇಲೆ ಪ್ರಪಂಚದ ಯಾವ ವ್ಯವಹಾರದಲ್ಲಿ ನುಗ್ಗಿದರೂ ಬಾಧಕವಿಲ್ಲ ಈ ವಿಷಯದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ಕೆಲವು ಉಪದೇಶಗಳನ್ನು ಮುಂದಿಡುತ್ತೇನೆ

(೧) ಒಬ್ಬನಿಗೆ ಶ್ರೀ ಪರಮಹಂಸರು ಹೇಳುದೇನೆಂದರೆ, "ಪ್ರಪಂಚ ವ್ಯವಹಾರದಲ್ಲಿ ನಿನ್ನ ಜೀವಮಾನದ ಅರ್ಧ ಭಾಗವನ್ನೆಲ್ಲಾ ಕಳೆದು ದೇವರನ್ನು ಹುಡುಕುವದಕ್ಕೆ ನೀನು ಈಗ ಬಂದಿರುವೆ ದೇವರನ್ನು ಕಂಡಮೇಲೆ ಪ್ರಪಂಚದಲ್ಲಿ ತೊಡಗಿದ್ದರೆ ನಿನಗೆ ಎಷ್ಟು ಶಾಂತಿಯೂ ಆನಂದವೂ ಆಗುತ್ತಿತ್ತು?

(೨) ಮೊದಲು ಪರಮಾತ್ಮನ ಪ್ರಾಪ್ತಿಯಾಗಲಿ ಆಮೇಲೆ ಸಂಪತ್ಪ್ರಾಪ್ತಿಯಾಗಲಿ ಅದಕ್ಕೆ ವಿಪರೀತವಾಗಬಾರದು ಪರಮಾರ್ಥವನ್ನು ಸಾಧಿಸಿದ ಮೇಲೆ ಪ್ರಪಂಚ ವ್ಯವಹಾರವನ್ನು ಸಾಗಿಸಿದರೆ ನಮ್ಮ ಮನಸ್ಸಿನ ಸಮಾಧಾನವು ಎಂದೂ ಹೋಗುವದಿಲ್ಲ

(೩) ಒಬ್ಬ ಹುಡುಗನು ಒಂದು ಕಂಬವನ್ನು ಹಿಡಿದುಕೊಂಡಿರುವಾಗ ಬೀಳುವ ಭಯವಿಲ್ಲದೆ ಅದರ ಸುತ್ತಲೂ ಗರಗರನೆ ತಿರುಗುವಷ್ಟು ವೇಗದಿಂದ ಸುತ್ತುತ್ತಾನೆ ಹಾಗೆ ನೀವು ದೇವರನ್ನು ಗಟ್ಟಿಯಾಗಿ ಹಿಡಿದುಕೊಂಡು ಬೇಕಾದಷ್ಟು ಪ್ರಾಪಂಚಿಕ ಕೃತ್ಯಗಳನ್ನೆಲ್ಲ ನಡೆಸಿರಿ ನಿಮಗೆ ಯಾವ ಅಪಾಯವೂ ಆಗಲಾರದು

(೪) ನಿಮ್ಮ ಮನಸ್ಸನ್ನು ಪ್ರಾಪಂಚಿಕವಾದ ಆಲೋಚನೆಗಳೂ ಮತ್ತು ವ್ಯಾಕುಲತೆಗಳೂ ತೊಂದರೆಗೊಳಿಸದಿರಲಿ ಪ್ರತಿಯೊಂದನ್ನೂ ಅದರದರ ಕಾಲಕ್ಕೆ ಸರಿಯಾಗಿ ಮಾಡಿರಿ ನಿಮ್ಮ ಮನಸ್ಸು ಯಾವಾಗಲೂ ದೇವರ ಕಡೆ ನೆಲೆಯಾಗಿರಲಿ ಪರಮಾತ್ಮನಾದರೂ ತನ್ನನ್ನು ಯಾವಾಗಲೂ ಭಜಿಸುವವರಿಗೆ ಬುದ್ಧಿಯೋಗವನ್ನು ಕೊಟ್ಟು ಅವರನ್ನು ತನ್ನ ಬಳಿಗೆ ಬರಮಾಡಿಕೊಳ್ಳುವನೆಂದು ಅನೇಕ ಉದಾಹರಣೆಗಳಿಂದ ವ್ಯಕ್ತವಾಗುತ್ತದೆ ಆ ಬುದ್ಧಿಯೋಗವೇ ಈ ಪ್ರಕರಣದ ವಿಷಯವಾಗಿರುವ ಜ್ಞಾನಯೋಗವು ಭಕ್ತಿಯೋಗದಂಥ ಪವಿತ್ರವಾದ ಸಾಧನವಾದಮೇಲೆ ಕೂಡ ತನ್ನ ಪ್ರಾಶಸ್ತ್ಯವನ್ನು ಮೆರೆಸುವಂಥ ಯೋಗ್ಯತಾ ವಿಶೇಷವು ಜ್ಞಾನಯೋಗದಲ್ಲೇ ಇರುವದೆಂದು ತಿಳಿಯಲಿಕ್ಕೆಯಾಗಬಹುದು ಅದು ಈಗ ವ್ಯಕ್ತವಾಗುವದು ಎಲ್ಲಾ ಯೋಗಗಳಲ್ಲಿಯೂ ಯೋಗ ಎಂಬ ಶಬ್ದವು ಸಾಧನವೆಂಬ ತಾತ್ಪರ್ಯದಲ್ಲಿ ಪ್ರಯೋಗವಾಗಿರುವದು ಯುಜ್ ಎಂಬ ಧಾತುವಿನಿಂದ ಹುಟ್ಟಿದ ಈ ಯೋಗಶಬ್ದವು ಬೇರೆಬೇರೆ ಅನೇಕ ಅರ್ಥಗಳನ್ನು ಕೊಡುತ್ತದೆ ಅಮರಕೋಶದಲ್ಲಿ ಇದಕ್ಕೆ ಸನ್ನಹನ, ಉಪಾಯ, ಧ್ಯಾನ, ಸಂಗತಿ ಮತ್ತು ಯುಕ್ತಿ— ಎಂಬ ಐದರ್ಥಗಳಿವೆ ಇವುಗಳಲ್ಲಿ ಸನ್ನಹನವೆಂಬ ಅರ್ಥವನ್ನು ತೆಗೆದುಕೊಂಡರೆ ಸಾಧನವೆಂಬ ತಾತ್ಪರ್ಯವು ಹೊರಡುತ್ತದೆ ಯೋಗಗಳೆಲ್ಲಾ ಆತ್ಮಜ್ಞಾನಕ್ಕೆ ಸಾಧನಗಳಾದ್ದರಿಂದ ಇವುಗಳಿಗೆ ಯೋಗವೆಂಬ ಹೆಸರು ಒಪ್ಪುತ್ತದೆ ಯೋಗಗಳು ಎಷ್ಟೋ ಇವೆ ಈಗ ಇಲ್ಲಿ ಯೋಗಗಳು ಕರ್ಮಯೋಗ, ರಾಜಯೋಗ, ಭಕ್ತಿಯೋಗ, ಜ್ಞಾನಯೋಗ ಎಂದು ನಾಲ್ಕು ಬಗೆಯಾಗಿ ಲೆಕ್ಕಕ್ಕೆ ಬರಬಹುದು ಆತ್ಮಜ್ಞಾನಕ್ಕೆ ಈ ನಾಲ್ಕು ಯೋಗಗಳೂ ಸ್ವತಂತ್ರವಾಗಿ ಬೇರೆ ಬೇರೆ ದಾರಿಗಳಾಗಿದ್ದು ಅವುಗಳಲ್ಲಿ ಜ್ಞಾನಯೋಗವು ಶ್ರೇಷ್ಠವೋ? ಅಥವಾ ಉಳಿದವುಗಳೆಲ್ಲ ತನಗೆ ನೆರವಾಗಿರತಕ್ಕವುಗಳಾದ್ದರಿಂದ ಜ್ಞಾನಯೋಗವು ಶ್ರೇಷ್ಠವೋ? ಎಂಬುದು ಈಗಿನ ಪ್ರಶ್ನೆ ಈ ವಿಷಯವನ್ನು ನಿರ್ಣಯಿಸುವುದಕ್ಕೆ ಮೊದಲು ಆತ್ಮಜ್ಞಾನಕ್ಕೆ ನಮಗೇನು ಅಡ್ಡಬಂದಿರುವದೆಂಬುದನ್ನು ತಿಳಿಯುವದಗತ್ಯವಾಗುವದು ಏಕೆಂದರೆ ನಮಗೆ ಅಡ್ಡಿಬಂದಿರುವದರ ಸ್ವಭಾವವು ಗೊತ್ತಾದರೆ ಅದನ್ನು ಪ್ರತಿಯೊಂದು ಯೋಗವೂ ಸ್ವತಂತ್ರವಾಗಿ ಕಳೆಯಲಾದೀತೋ ಅಥವಾ ಉಳಿದವುಗಳನ್ನು ನೆರವಾಗಿಟ್ಟುಕೊಂಡು ಮುಖ್ಯವಾದ ಜ್ಞಾನಯೋಗವೇ ಕಳೆಯುವುದೋ ಎಂಬುದನ್ನು ನಿಶ್ಚಯಿಸಲಾದೀತು

ಇಲ್ಲಿ ಇನ್ನೊಂದು ವಿಷಯವೇನಂದರೆ ಆತ್ಮಜ್ಞಾನಕ್ಕೆ ನಮಗೆ ಏನು ಅಡ್ಡಬಂದಿರುವದೆಂಬುದನ್ನು ನೋಡುವುದಕ್ಕೆ ಮುಂಚೆ ಆತ್ಮಜ್ಞಾನವೆಂದರೇನೆಂಬದನ್ನು ವಿಚಾರ ಮಾಡಬೇಕು

ಆತ್ಮ ಎಂಬ ಶಬ್ದಕ್ಕೆ ನಿಘಂಟಿನಲ್ಲಿ ಬೇಕಾದಷ್ಟು ಅರ್ಥಗಳಿದ್ದರೂ ಇಲ್ಲಿ ನಮಗೆ ಸಂಶಯವು ಬರುವದು ಎರಡೇ ಅರ್ಥಗಳಲ್ಲಿ ಜೀವಾತ್ಮನಿಗೂ ಆತ್ಮನೆಂದು ಹೆಸರಿದೆ ಪರಮಾತ್ಮನಿಗೂ ಆತ್ಮನೆಂಬ ಹೆಸರಿದೆ ಈ ಎರಡರಲ್ಲಿ ನಾವು ಯಾವದನ್ನು ತೆಗೆದುಕೊಳ್ಳಬೇಕು? ನಮಗೆ ಶಾಂತಿಯು ಸಿಕ್ಕುವದು ಪರಮಾತ್ಮನ ಜ್ಞಾನದಿಂದಲೇ ಹೊರತು ಜೀವಾತ್ಮನ ಜ್ಞಾನದಿಂದಲ್ಲ ಆದ್ದರಿಂದ ನಮ್ಮ ಮುಖ್ಯ ಧ್ಯೇಯವು ಪರಮಾತ್ಮನ ಜ್ಞಾನವೇ ಆದರೆ ಆ ಪರಮಾತ್ಮನ ಜ್ಞಾನವನ್ನು ಮಾಡಿಕೊಳ್ಳುವದಕ್ಕೆ ಮೊದಲು ಜೀವಾತ್ಮನ ಜ್ಞಾನವು ಅಗತ್ಯವು ಏಕೆಂದರೆ 'ಅಟ್ಟಕ್ಕೆ ಹಾರದವನು ಬೆಟ್ಟಕ್ಕೆ ಹಾರುವನೇ?' ಎಂಬಂತೆ ಯಾವನಿಗೆ ತನ್ನ ಸ್ವರೂಪದ ಜ್ಞಾನವೇ ಇಲ್ಲವೋ ಅವನಿಗೆ ಪರಮಾತ್ಮನ ಜ್ಞಾನವಾಗುವದು ಹೇಗೆ? ಆದ್ದರಿಂದ ಪರಮಾತ್ಮನ ಜ್ಞಾನಕ್ಕೆ ಸಾಧನವಾಗಿ ಜೀವಾತ್ಮಜ್ಞಾನವೂ ಬೇಕು "ನಾನು ನಾನೆಂದು ಎಲ್ಲರಿಗೂ ಜೀವಾತ್ಮನ ಅರಿವು ಇರುವದಲ್ಲ? ಏಕೆಂದರೆ ನಿಜ ಆ ಅರಿವಿಗೆ ವಿಷಯವಾದ ವಸ್ತು ಯಾವದು? ಬಹುಮಟ್ಟಿಗೆ ಎಲ್ಲರೂ ನಾನು ನಾನೆಂಬ ಅರಿವಿಗೆ ದೇಹವನ್ನೇ ವಿಷಯವಾಗಿ ತಿಳಿದಿರುವರು ಹೀಗೆ ದೇಹವೇ ನಾನೆಂಬ ಜ್ಞಾನವು ನಮಗೆ ಪರಂಪರೆಯಿಂದ ಬಂದಿರುವದು ನಾವು ಹುಟ್ಟಿದೊಡನೆ ನಮಗೆ ನಾನು ನಾನೆಂಬ ಮಾತಿಗೆ ದೇಹವನ್ನೇ ವಿಷಯವಾಗಿ ಮಾಡಿ ತಾಯಿ ಮೊದಲಾದವರು [illegible] ಕಳೆಯುವರು ಎಲ್ಲರ ವ್ಯವಹಾರವೂ ಹೀಗೆಯೇ ಇರುವದು ಇವರಲ್ಲಿ ಅವರ ಉದ್ದೇಶವೇನೂ ಕೆಟ್ಟದ್ದಲ್ಲ ಅವರ ತಿಳುವಳಿಕೆಯೇ ಹಾಗಿರುವದು ಅವರು ವಿಚಾರವಿಲ್ಲದೆ ಹಾಗೆ ಹೇಳುತ್ತಿರುವರು ಏಕೆಂದರೆ ಎಷ್ಟೋ ವೇಳೆ ಅವರ ಮಾತುಗಳಲ್ಲಿ ಈ ಅಭಿಪ್ರಾಯಕ್ಕೆ ವಿರುದ್ಧವಾದ ಕಲ್ಪನೆಗಳು ಒದಗುತ್ತಿರುತ್ತವೆ ಅವುಗಳನ್ನೆಲ್ಲಾ ಅವರು ತೂಕಕ್ಕೆ ಹಾಕಿ ನೋಡುವದೇ ಇಲ್ಲ ಉದಾಹರಣೆಗೆ ನೋಡಿರಿ, ಒಮ್ಮೊಮ್ಮೆ ಜನರು 'ಇದು ನನ್ನ ಹಿಂದಿನ ಜನ್ಮದ ಕರ್ಮಫಲ" ಎನ್ನುತ್ತಾರೆ ಇದರಿಂದ ನಾವು ಹಿಂದಿನ ಜನ್ಮದಲ್ಲಿದ್ದೆವೆಂದು ಸ್ಪಷ್ಟವಾಗುತ್ತದೆಯಷ್ಟೆ ನಾವು ಮಾತಿನ ಅರ್ಥಕ್ಕೆ ದೇಹವು ವಿಷಯವಾದರೆ ಆ ದೇಹವೇ ಹಿಂದಿನ ಜನ್ಮದಲ್ಲಿತ್ತೆಂದು ಹೇಳುವದಕ್ಕಾದೀತೇ? ಒಂದು ದೇಹವು ಸತ್ತಾಗ ಅದನ್ನು ಸುಟ್ಟೋ ಹೂಳಿಯೋ ನಾಶಮಾಡಿಬಿಡುತ್ತಾರೆ ಅದರ ಕಣಗಳೆಲ್ಲಾ ದಿಕ್ಕು ದಿಕ್ಕಿಗೆ ಹಾರಿಹೋಗುತ್ತವೆ ಅದೇ ದೇಹವೇ ಮತ್ತೆ ಹೇಗೆ ಹುಟ್ಟೀತು? ಒಂದು ಜನ್ಮದಲ್ಲಿಯೇ ಹನ್ನೆರಡು ವರ್ಷಗಳಲ್ಲಿ ಒಂದು ಶರೀರದ ಕಣಗಳೆಲ್ಲ ಬದಲಾಗುವವೆಂದು ಭೌತಿಕ ಶಾಸ್ತ್ರಜ್ಞರು ಹೇಳುತ್ತಾರೆ ಅವರ ಅಭಿಪ್ರಾಯವನ್ನು ಹಿಡಿದುಕೊಂಡರೆ ಇಂದಿನ ನಾನು, ಹನ್ನೆರಡು ವರ್ಷಗಳ ಹಿಂದೆ ಇದೇ ದೇಹದಲ್ಲಿದ್ದರೂ ನಾನು ನಾನೆಂಬ ಮಾತಿನ ಅರ್ಥಕ್ಕೆ ನನ್ನ ದೇಹವನ್ನು ವಿಷಯವಾಗಿ ಮಾಡುವದಕ್ಕೆ ಬರುವದಿಲ್ಲ ಏಕೆಂದರೆ ಇಂದು ನನ್ನ ದೇಹದಲ್ಲಿರುವ ಕಣಗಳೇ ಬೇರೆ ಹನ್ನೆರಡು ವರ್ಷಗಳ ಹಿಂದಿನ ದೇಹವೇ ಬೇರೆ ಇವೆರಡೂ ಒಂದೇ ಹೇಗೆ ಆದಾವು? ಆದರೆ ಹನ್ನೆರಡು ವರ್ಷಗಳ ಹಿಂದಿದ್ದ ನಾನೇ ಇಂದು ಇರುವೆನೆಂಬ ನನ್ನ ಅನುಭವವನ್ನು ಅಳಿಯುವದಕ್ಕೆ ಮಾತ್ರ ಯಾರಿಗೂ ಶಕ್ಯವಿಲ್ಲ ಆದ್ದರಿಂದ ನಾನು ಎಂಬ ವಸ್ತುವು ದೇಹಕ್ಕೆ ಭಿನ್ನವಾಗಿರಲೇ ಬೇಕು ದೇಹಕ್ಕಿಂತ ಭಿನ್ನವಾದಂಥ ಆ ಜೀವ ಸ್ವರೂಪವೆಂಥದ್ದೋ ಅದರ ವಿಚಾರವೂ ಕೂಡ ಈಗ ಬೇಕಾಗಿಲ್ಲ ಜೀವಸ್ವರೂಪವು ದೇಹಕ್ಕಿಂತ ಭಿನ್ನವೆಂಬಷ್ಟು ತಿಳುವಳಿಕೆ ಸಾಕು ಜೀವಸ್ವರೂಪದ ಜ್ಞಾನವೂ ನಮಗೆ ಎಷ್ಟೋ ಸಹಾಯಕವಾಗುವದೂ ನಿಜ, ಆದರೆ ಅದನ್ನು ತಿಳಿಯುವುದಕ್ಕಿಂತ ಮೊದಲು ನಶ್ವರವಾದ ದೇಹವನ್ನೇ ನಾನೆಂಬ ತಪ್ಪು ತಿಳುವಳಿಕೆಯನ್ನು ಕಳೆದುಕೊಳ್ಳುವುದಗತ್ಯ ಒಳ್ಳೆಯದನ್ನು ಹಿಡಿಯುವುದಕ್ಕಿಂತ ಮೊದಲು ಕೆಟ್ಟದ್ದನ್ನು ಬಿಡುವುದು ಅವಶ್ಯಕವೆಂಬ ವಿಚಾರವನ್ನು ನಾವು ಕೇಳಿದ್ದೇವೆ ಆದ್ದರಿಂದ ಜೀವನ ನಿಜಸ್ವರೂಪವನ್ನು ತಿಳಿಯುವದಕ್ಕಿಂತ ಮೊದಲು ಯಾವ ಯಾವದನ್ನೋ ಜೀವನೆಂದು ನಾವು ಭ್ರಾಂತಿಗೊಂಡು ವ್ಯವಹರಿಸುತ್ತಿರುವದನ್ನು ಬಿಡಬೇಕು ಇಷ್ಟಾದರೆ ಎಷ್ಟೋ ಕೆಲಸವಾಯಿತು ಅಡ್ಡ ದಾರಿಯನ್ನು ಹಿಡಿದು ಹೋಗುತ್ತಿದ್ದವನು ತಾನು ಹಿಡಿದಿರುವದು ಅಡ್ಡ ದಾರಿಯೆಂದು ತಿಳಿದು ಮುಂದೆ ಹೋಗುವದನ್ನು ಬಿಟ್ಟರೆ ಎಷ್ಟೋ ಆಯಾಸವನ್ನು ಉಳಿಸಿಕೊಂಡಹಾಗಾಯಿತು ನಾವು ಈ ನಾನು ನಾನೆಂಬ ಶರೀರ, ಪ್ರಾಣ, ಮನಸ್ಸು ಮತ್ತು ಬುದ್ಧಿ ಮೊದಲಾದವುಗಳನ್ನು ಭ್ರಾಂತಿಯೆಂದು ತಿಳಿದು ಇನ್ನು ನಾವು ಅಂಥ ಕಲ್ಪನೆಗಳನ್ನು ದೂರಮಾಡಿದರೆ ಆಮೇಲೆ ಇವಕ್ಕೆಲ್ಲ ಸಾಮರ್ಥ್ಯವನ್ನು ಕೊಡತಕ್ಕದ್ದಾಗಿ ಇವೆಲ್ಲಕ್ಕಿಂತ ಭಿನ್ನವಾಗಿರುವ ಜೀವ ಸ್ವರೂಪವನ್ನೂ ಅದಕ್ಕೂ ಆಧಾರವಾದ ಪರಮಾತ್ಮ ಸ್ವರೂಪವನ್ನೂ ಮನಗಾಣುವೆವು

ಈಗ ನಮಗೆ ಆತ್ಮಜ್ಞಾನಕ್ಕೆ ಅಡ್ಡಿಯಾಗಿರುವದೇನೆಂದು ವ್ಯಕ್ತವಾಯಿತು ದೇಹ ಮೊದಲಾದುವುಗಳೇ ನಾನೆಂಬ ತಪ್ಪು ತಿಳುವಳಿಕೆಯೇ ಆತ್ಮಜ್ಞಾನಕ್ಕೆ ಅಡ್ಡಿಯಾಗಿರುವದು ಹೀಗೆ ನಮ್ಮ ಆತ್ಮಜ್ಞಾನಕ್ಕಿರುವ ಪ್ರತಿಬಂಧಕದ ಸ್ವಭಾವವು ಗೊತ್ತಾದಮೇಲೆ ಇದನ್ನು ಪ್ರತಿಯೊಂದು ಯೋಗವೂ ಸ್ವತಂತ್ರವಾಗಿ ಕಳೆಯಲಾದೀತೋ ಅಥವಾ ಉಳಿದವುಗಳನ್ನು ನೆರವಾಗಿಟ್ಟುಕೊಂಡು ಮುಖ್ಯವಾಗಿ ಜ್ಞಾನಯೋಗವೇ ಕಳೆಯುವುದೋ? ಎಂಬುದನ್ನು ಸುಲಭವಾಗಿ ನಿಶ್ಚಯಿಸಬಹುದು ದೇಹವೇ ನಾನೆಂಬ ಮೊದಲಾದ ತಪ್ಪು ತಿಳುವಳಿಕೆಗಳನ್ನು ಕರ್ಮಯೋಗ ಮೊದಲಾದವು ಹೋಗಲಾಡಿಸಬಲ್ಲವೋ ಇಲ್ಲವೋ ಎಂಬುದನ್ನು ನೋಡುವುದಕ್ಕೆ ಮೊದಲು ನಮ್ಮ ಪ್ರತಿದಿನದ ವ್ಯವಹಾರದ ಉದಾಹರಣೆಯನ್ನು ತೆಗೆದುಕೊಳ್ಳೋಣ ಏಕೆಂದರೆ ಪ್ರತ್ಯಕ್ಷವಾದ ಉದಾಹರಣೆಯಿಂದ ಪರೋಕ್ಷವಾದ ವಿಚಾರಗಳನ್ನು ನಿರ್ಣಯಿಸುವುದಕ್ಕೆ ಸುಲಭವಾಗುತ್ತದೆ ಆದ್ದರಿಂದ ಉದಾಹರಣೆಗಾಗಿ ನಾವು ನಮ್ಮ ಒಂದು ದಿನದ ಆದಾಯ ವ್ಯಯಗಳನ್ನು ಬರೆದೆವೆಂದು ತಿಳಿಯೋಣ ಅವರಲ್ಲಿ ಕೂಡಿ ಕಳೆಯುವುದರಲ್ಲಿ ನಡೆದ ಪ್ರಮಾದದಿಂದ ಲೆಕ್ಕದಲ್ಲಿ ಉಳಿಯುವ ಹಣಕ್ಕೂ ನಮ್ಮ ಚೀಲದಲ್ಲಿ ಉಳಿದಿರುವ ಹಣಕ್ಕೂ ಹೆಚ್ಚುಕಡಿಮೆ ಬರುತ್ತದೆ ಎಲ್ಲಿ ತಪ್ಪಿರುವದೆಂಬುದನ್ನು ತಿಳಿದು ತಿದ್ದಿಕೊಳ್ಳಬೇಕಾಗಿರುತ್ತದೆ ಆಗ ನಾವು ಸುಮ್ಮನೆ ಬೇಕಾದಷ್ಟು ಸ್ನಾನ ಸಂಧ್ಯಾದಿ ಕರ್ಮಗಳನ್ನು ಮಾಡಿದರಾಗಲಿ, ಸುಮ್ಮನೆ ಉಸಿರುಕಟ್ಟಿ ಆ ಲೆಕ್ಕದ ಅಂಕಗಳನ್ನೇ ಬಿರಿಬಿರಿ ನಿಟ್ಟಿಸಿದರಾಗಲಿ ಅಥವಾ ಪ್ರಾಮಾಣಿಕತೆಯ ಮೇಲೆ ಪ್ರೇಮವನ್ನು ತೋರಿಸಿದರಾಗಲಿ ಆ ತಪ್ಪು ಹೊರಬೀಳುವದೆ? ಎಂದಿಗೂ ಇಲ್ಲ. ಅವಿಚಾರದಿಂದ ಬಿದ್ದಿದ್ದ ಆ ತಪ್ಪು

[೬ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೧ನೆಯ ಅಕ್ಟೋಬರ್ ತಾ॥ ೨೦ನೇ ಸೋಮವಾರ

ದೀಪಾವಳಿಹಬ್ಬ.

ಭಾರತೀಯರು ಆಯಾಯ ಕಾಲಗಳಲ್ಲಿ ಆಚರಿಸುವ ಹಬ್ಬಗಳಲ್ಲಿ ದೀಪಾವಳಿಹಬ್ಬವು ದೊಡ್ಡ ಹಬ್ಬವಾಗಿದೆ ಪ್ರತಿಯೊಂದು ಜನಾಂಗದವರೂ ಒಂದೊಂದು ನಿಮಿತ್ತದಿಂದ ಒಂದೊಂದು ಹಬ್ಬವನ್ನು ಆಚರಿಸುವ ಸಂಪ್ರದಾಯವನ್ನು ಇಟ್ಟುಕೊಂಡಿರುತ್ತಾರೆ ಮುಖ್ಯವಾಗಿ ಸಂಸಾರಿಗಳು ಪ್ರತಿನಿತ್ಯವೂ ಅನೇಕವಿಧವಾದ ತೊಂದರೆಗಳಿಂದೊಡಗೂಡಿ ಮನಸ್ಸಿಗೆ ವಿಶ್ರಾಂತಿಯಿಲ್ಲದಿರುವುದರಿಂದ ಇಂತಹ ಒಂದೊಂದು ದಿವಸವಲ್ಲಾದರೂ ಸಂತೋಷದಿಂದ ಬಂಧುಬಾಂಧವರೊಡಗೂಡಿ ಸುಖಭೋಜನಾದಿಗಳನ್ನು ಮಾಡಿ ಭಗವಂತನನ್ನು ಧ್ಯಾನಿಸುತ್ತಿರಲೆಂದು ಪೂರ್ವಿಕರು ಒಂದೊಂದು ಇತಿಹಾಸವನ್ನು ಪ್ರಧಾನವಾಗಿಟ್ಟುಕೊಂಡು ಇಂಥ ಹಬ್ಬಗಳನ್ನು ಕಲ್ಪಿಸಿರುವುದರಿಂದ ಪ್ರತಿಯೊಬ್ಬರೂ ಆಯಾಯಕಾಲಗಳಲ್ಲಿ ಪ್ರಾಪ್ತವಾಗುವ ಹಬ್ಬಗಳನ್ನು ಆಚರಿಸಬೇಕು ಪ್ರತಿಯೊಂದು ಹಬ್ಬಗಳಿಗೂ ಒಂದೊಂದು ಅನ್ವರ್ಥಕನಾಮಗಳು ಬಂದಿರುತ್ತವೆ ಮನೆಮನೆಗಳಲ್ಲಿಯೂ ವಿಶೇಷವಾಗಿ ದೀಪಗಳನ್ನು ಹಚ್ಚುವುದೇ ಮುಖ್ಯವಿಧಿಯಾದುದರಿಂದ ಈ ಹಬ್ಬಕ್ಕೆ ದೀಪಾವಳಿಯೆಂಬ ಹೆಸರುಂಟಾಗಿದೆ ಈ ದೀಪಾವಳಿಹಬ್ಬವು ಆಶ್ವಯುಜ ಬಹುಳ ತ್ರಯೋದಶಿಯಿಂದ ಕಾರ್ತಿಕ ಶುದ್ಧ ಬಿದಿಗೆಯವರೆಗೂ ನಡೆಯುವುದು ಈ ಐದು ದಿವಸಗಳಿಗೂ ಕ್ರಮವಾಗಿ ಧನತ್ರಯೋದಶಿ, ನರಕಚತುರ್ದಶಿ, ಧನಲಕ್ಷ್ಮೀ ಅಮಾವಾಸ್ಯೆ, ಬಲಿಪ್ರತಿಪತ್, ಯಮದ್ವಿತೀಯಾ ಎಂದು ಕರೆಯುವ ಸಂಪ್ರದಾಯವುಂಟು ಈ ಹೆಸರುಗಳು ಬರಲು ಪುರಾಣಗಳಲ್ಲಿ ಒಂದೊಂದು ಕಾರಣಗಳಿರುತ್ತವೆ

ಯಮಧರ್ಮರಾಯನು ಪರೀಕ್ಷೆಗಾಗಿ ಒಂದು ದಿವಸ ತನ್ನ ದೂತರನ್ನು ಕರೆದು, ಎಲೈ ದೂತರಿರಾ! ನೀವು ಪ್ರಾಣಿಗಳನ್ನು ಹಿಡಿದುತರುವಾಗ ನಿಮ್ಮ ಮನಸ್ಸಿನಲ್ಲಿ ಎಂದಾದರೂ ದಯೆಯು ಹುಟ್ಟಿರುವುದೇ? ಅಂಥ ಸಂದರ್ಭವೇನಾದರೂ ಇದ್ದರೆ ತಿಳುಹಿರಿ? ಎಂದು ಕೇಳಲಾಗಿ ಆಗ ಯಮದೂತರು ತಮಗೆ ದಯೆಯು ಹುಟ್ಟಿದ ಒಂದು ಚರಿತ್ರವನ್ನು ಹೇಳಲುಪಕ್ರಮಿಸಿದರು ಸ್ವಾಮಿ! ಹಿಂದೆ ಇಂದ್ರಪ್ರಸ್ಥಾಧಿಪತಿಯಾದ ಹಂಸನೆಂಬ ಮಹಾರಾಜನು ಅರಣ್ಯದಲ್ಲಿ ಬೇಟೆಯಾಡುತ್ತಿದ್ದಾಗ ಒಂದು ಜಿಂಕೆಯನ್ನು ಹೊಡೆಯಲು ಬೆನ್ನಟ್ಟಿದನು ಆಗ ಆ ಜಿಂಕೆಯು ಕೈಗೆ ಸಿಕ್ಕದೆ ಮಾಯವಾಯಿತು ಅಷ್ಟರಲ್ಲಿ ರಾಜನು ಆಯಾಸದಿಂದ ಬಾಯಾರಿದವನಾಗಿ ಸರೋವರದ ಬಳಿಗೈದಿ ಜಲಪಾನಮಾಡಿ ಒಂದು ಮರದಡಿಯಲ್ಲಿ ಕುಳಿತಿದ್ದನು ಅಲ್ಲಿ ಮೀನು ಹಿಡಿಯುತ್ತಿದ್ದ ಒಬ್ಬ ಅಂಬಿಗನನ್ನು ನೋಡಿ, ಎಲೈ ಅಂಬಿಗನೆ! ಸಮೀಪದಲ್ಲಿ ಯಾವುದಾದರೊಂದು ಗ್ರಾಮವಿದೆಯೇ? ಎಂದು ಕೇಳಿದನು ಅದಕ್ಕೆ ಆ ಅಂಬಿಗನು ಸ್ವಾಮಿ! ಸಮೀಪದಲ್ಲಿ ಒಂದು ಪಟ್ಟಣವುಂಟು ಈ ಪಟ್ಟಣವನ್ನು ಹೈಮನೆಂಬ ಮಹಾರಾಜನು ಆಳುತ್ತಿರುವನೆಂದು ಅರಿಕೆಮಾಡಿದನು ಹಂಸನು ಈ ಮಾತನ್ನು ಕೇಳಿ ಕೂಡಲೇ ಕುದುರೆಯನ್ನೇರಿ ಆ ಪಟ್ಟಣವನ್ನು ಪ್ರವೇಶಿಸಿದನು ಅದೇ ದಿವಸ ಅಲ್ಲಿಯ ರಾಜನಿಗೆ ಪುತ್ರೋತ್ಸವವಾದುದರಿಂದ ಎಲ್ಲಿ ನೋಡಿದರೂ ಆ ಪಟ್ಟಣವು ನಾನಾವಿಧವಾದ ವೈಭವಗಳಿಂದ ಶೋಭಿಸುತ್ತಲಿದ್ದಿತು ಆಗಲೇ ಒಬ್ಬ ಮಾಯಾವಿನಿಯಾದ ಸ್ತ್ರೀಯು ಆ ರಾಜನ ಬಳಿಗೆ ಬಂದು ಎಲೈ ಹೈಮರಾಜನೇ! ನಿನ್ನ ಮಗನು ಲಗ್ನವಾದ ನಾಲ್ಕನೆಯ ದಿವಸ ಸರ್ಪದಷ್ಟನಾಗಿ ಮರಣಹೊಂದುವನೆಂದು ಹೇಳಿ ಮರೆಯಾದಳು ಆಗ ಹಂಸನು ಈ ವಿಷಯವನ್ನು ಕೇಳಿ ಮರುಗಿ ತನ್ನ ಪಟ್ಟಣಕ್ಕೆ ಬಂದು ಹೈಮನ ಪುತ್ರನ ಮರಣವನ್ನು ತಪ್ಪಿಸಲು ಉಪಾಯವನ್ನು ಯೋಚಿಸಿದನು ಯಮುನಾನದಿಯ ಪ್ರವಾಹಮಧ್ಯದಲ್ಲಿ ಒಂದು ಭದ್ರವಾದ ಶಿಲಾಗೃಹವನ್ನು ನಿರ್ಮಾಣ ಮಾಡಿಸಿ, ಅಲ್ಲಿ ದುಃಖಾಕ್ರಾಂತನಾದ ಆ ಹೈಮನನ್ನೂ ಆತನ ಹೆಂಡರು ಮಕ್ಕಳನ್ನೂ ತಂದಿರಿಸಿದನು ಆ ಮನೆಯಲ್ಲಿ ಒಂದು ನೊಣವೂ ಸಹ ಸಂಚರಿಸಲು ಅವಕಾಶವಿರಲಿಲ್ಲ ಹೈಮರಾಜನ ಮಗನಿಗೆ ಹದಿನಾರು ವರ್ಷಗಳು ಕಳೆದವು ಹಂಸರಾಜನು ಸುಸಂಜಯನೆಂಬ ಮಹಾವೀರನ ಪುತ್ರಿಯನ್ನು ಹೈಮನ ಮಗನಿಗೆ ಮದುವೆ ಮಾಡಿಸಿದನು ದೈವಾಜ್ಞೆಯನ್ನು ಮೀರುವರಾರು? ಅಷ್ಟರಲ್ಲಿಯೇ ಯಮನ ಅಪ್ಪಣೆಯಿಂದ ದೂತರುಗಳು ಪಾಶಪಾಣಿಗಳಾಗಿ ಅಲ್ಲಿಗೆ ಬಂದರು ಅಷ್ಟರಲ್ಲಿ ಹೈಮನಿಗೆ ಬಾಯಿಯಿಂದ ಒಂದು ಸೀನುಬಂದಿತು ಆಗಲೇ ಮೂಗಿನಿಂದ ಒಂದು ಸರ್ಪವು ಹೊರಟು ಬಳಿಯಲ್ಲಿದ್ದ ರಾಜಪುತ್ರನನ್ನು ಕಚ್ಚಿತು ಪುತ್ರನು ಯಮಪುರಿಯನ್ನು ಪ್ರವೇಶಿಸಿದನು ಆ ಸಮಯದಲ್ಲಿ ಮಾತ್ರ ನಮಗೆ ಅಪಾರವಾದ ಕರುಣೆಯು ಹುಟ್ಟಿತು ಇಂಥ ಸಂತೋಷಸಮಯದಲ್ಲಿ ಯಮಪಾಶವನ್ನು ಹಾಕಿ ಎಳೆಯುವುದೆಂದರೆ ಯಾರಿಂದತಾನೇ ಸಾಧ್ಯ? ಆದುದರಿಂದ ಯಮರಾಜನೇ, ಇನ್ನಾದರೂ ಇಂಥ ಅಪಮೃತ್ಯುವುಂಟಾಗದಂತೆ ಆಲೋಚಿಸುವುದು ಯುಕ್ತವೆಂದು ಯಮದೂತರು ಅರಿಕೆಮಾಡಿಕೊಂಡರು ಆಗ ಯಮಧರ್ಮನು ಆಶ್ವಯುಜ ಬಹುಳ ತ್ರಯೋದಶಿಯಿಂದ ಐದು ದಿವಸಗಳವರೆಗೂ ವಿಶೇಷವಾಗಿ ತಮ್ಮ ತಮ್ಮ ಇಷ್ಟದೇವರನ್ನಾರಾಧಿಸುತ್ತ ಕಾಯ ಕ್ಲೇಶವಿಲ್ಲದ ಸುಖಭೋಜನಸಂಗ್ರೈಯುತ್ತ ದೀಪಮಾಲಿಕೆಗಳನ್ನು ಯಾರು ಹಚ್ಚುವರೋ, ಅಂಥವರು ಅಪಮೃತ್ಯುವಿನಿಂದ ದೂರವಾಗಿ ದೀರ್ಘಾಯುಸ್ಸನ್ನು ಪಡೆಯುವರೆಂದು ಸಮಾಧಾನವನ್ನು ಹೇಳಿದನು ಇದರಿಂದ ಈ ದೀಪಾವಳಿಯು ದುರ್ಮರಣವನ್ನು ಪರಿಹರಿಸುವುದೆಂದು ಗೊತ್ತಾಗುತ್ತದೆ

ತ್ರಯೋದಶಿಯ ಮರುದಿವಸ ಚತುರ್ದಶಿಯು ಬರುತ್ತದೆ ಇದನ್ನು ನರಕಚತುರ್ದಶಿಯೆಂದು ಹೇಳುತ್ತಾರೆ ನರಕನೆಂಬ ರಾಕ್ಷಸನು ಒಂದುದಿವಸ ಅದಿತಿಯ ಕಿವಿಯ ಓಲೆಯನ್ನು ಕದ್ದೊಯ್ದನು ಆ ದೇವತೆಗಳು ವಿಷ್ಣುವನ್ನು ಪ್ರಾರ್ಥಿಸಲಾಗಿ ಆಗ ವಿಷ್ಣುವು ಆ ದೈತ್ಯನೊಡನೆ ಯುದ್ಧಮಾಡಿ ಕೊಂದದ್ದರಿಂದ ಇದು ನರಕಚತುರ್ದಶಿಯೆಂಬ ಹೆಸರನ್ನು ಪಡೆಯಿತೆಂದು ಹೇಳುತ್ತಾರೆ ಮತ್ತು ವಿಷ್ಣುವು ವಾಮನ ವತಾರವನ್ನೆತ್ತಿ ಬಲಿಚಕ್ರವರ್ತಿಯ ಬಳಿಗೈದಿ ಮೂರುಪಾದ ಭೂಮಿಯನ್ನು ಬೇಡಿ ಕ್ರಮವಾಗಿ ತ್ರಯೋದಶಿ ಚತುರ್ದಶಿ ಅಮಾವಾಸ್ಯೆ ಈ ಮೂರುದಿವಸಗಳಲ್ಲೊಂದೊಂದು ಪಾದದಂತೆ ಭೂಮಿಯನ್ನು ಅಳತೆಮಾಡಿಕೊಂಡನು ಬಳಿಕ ಬಲಿಯ ಔದಾರ್ಯಕ್ಕೆ ಭಗವಂತನು ಮೆಚ್ಚಿ ಆತನಿಷ್ಟದಂತೆ ಬಲಿಚಕ್ರವರ್ತಿಯ ಖ್ಯಾತಿಯು ಭೂಲೋಕದಲ್ಲಿ ಶಾಶ್ವತವಾಗಿ ಉಳಿಯಲು ಪ್ರತಿಯೊಂದು ಮನೆಯಲ್ಲಿಯೂ ತ್ರಯೋದಶಿಯಿಂದಲೂ ದೀಪೋತ್ಸವವು ನಡೆಯಬೇಕೆಂದೂ, ದೀಪೋತ್ಸವ ಮಾಡುವವರ ಮನೆಗಳಲ್ಲಿ ಲಕ್ಷ್ಮಿಯು ತಾಂಡವವಾಡುತ್ತಿರಲೆಂದೂ, ದಾರಿದ್ರ್ಯವು ದೂರವಾಗಲೆಂದೂ, ಅನುಜ್ಞೆಯನ್ನಿತ್ತನು ಹೀಗೆ ಪುರಾಣಗಳಲ್ಲಿ ಈ ದೀಪಾವಳಿಹಬ್ಬವನ್ನಾಚರಿಸಲು ಅನೇಕ ಕಾರಣಗಳು ಉಕ್ತವಾಗಿವೆ ಭಾರತೀಯ ಜನಾಂಗದಲ್ಲೆಲ್ಲ ಈ ದೀಪಾವಳಿಹಬ್ಬವು ಬಹು ಸಡಗರದಿಂದ ನಡೆಯುತ್ತದೆ ಉತ್ತರದೇಶದಲ್ಲಂತೂ ಈ ಹಬ್ಬವು ವಿಶೇಷವೈಭವದಿಂದ ನಡೆಯುತ್ತದೆ

ತ್ರಯೋದಶಿಯ ರಾತ್ರಿ ನೀರುತುಂಬಿ ಚತುರ್ದಶಿಯ ಪ್ರಾತಃಕಾಲ ಮಕ್ಕಳಾದಿಯಾಗಿ ಸರ್ವರೂ ಸುಗಂಧಯುಕ್ತ ತೈಲಾಭ್ಯಂಜನಮಾಡಿ ತಮ್ಮ ನಿತ್ಯಕರ್ಮಗಳನ್ನು ಮುಗಿಸಿ ತರ್ಪಣಕಾರ್ಯವನ್ನು ನಡೆಯಿಸುತ್ತಿರುವರು ಅಮಾವಾಸ್ಯೆಯ ದಿವಸ ದೊಡ್ಡ ದೊಡ್ಡ ವ್ಯಾಪಾರಿಗಳು ಮಹಾಲಕ್ಷ್ಮಿಯನ್ನು ದಿವ್ಯಪೀಠದಲ್ಲಿ ಅಲಂಕರಿಸಿ ನಾನಾವಿಧ ವಸ್ತ್ರಾಭರಣಗಳಿಂದ ಅಲಂಕರಿಸಿ ವಿಧ್ಯುಕ್ತವಾಗಿ ಪೂಜಿಸುತ್ತಿರುವರು ಹೀಗೆ ಪೂಜೆಮಾಡುವುದರಿಂದ ಲಕ್ಷ್ಮಿಯು ಅವರ ಮನೆಯಲ್ಲಿ ಸ್ಥಿರಗೊಳ್ಳುವಳು ಕಾರ್ತಿಕ ಶುದ್ಧ ಪ್ರತಿಪದ್ದಿವಸ ಬಲಿಚಕ್ರವರ್ತಿಯ ಪ್ರತಿಮೆಯನ್ನು ಪೂಜಿಸಿ ಸರ್ವದೇವತಾಸ್ವರೂಪವಾದ ಗೋವುಗಳನ್ನು ಸ್ನಾನಮಾಡಿಸಿ ಅಲಂಕರಿಸಿ ಪೂಜೆಯನ್ನು ಮಾಡುತ್ತಿರುವರು ದ್ವಿತೀಯಾದಿವಸ ಯಮುನೆಯು ಯಮಧರ್ಮರಾಜನನ್ನು ಕರೆದು ಊಟಮಾಡಿಸಿದ ದಿವಸವಾದುದರಿಂದ “ ಯಮದ್ವಿತೀಯಾ ” ಎಂಬ ಹೆಸರು ಬಂದಿರುತ್ತದೆ ಆ ದಿವಸ ತಮ್ಮ ಮನೆಗಳಲ್ಲಿ ಊಟಮಾಡದೆ ಅಕ್ಕತಂಗಿಯರ ಮನೆಗಳಲ್ಲಿ ಊಟಮಾಡುವ ಸಂಪ್ರದಾಯವು ಬಂದಿರುವುದು ಈ ರೀತಿ ಆಚರಿಸುವುದರಿಂದ ದುರ್ಮರಣಾದಿಗಳೂ ದಾರಿದ್ರ್ಯಾದಿ ದೋಷಗಳೂ ದೂರಾಗಿ ಲಕ್ಷ್ಮಿಯ ಕಟಾಕ್ಷಲಹರಿ ಹರಿಯಲು ಪ್ರಾರಂಭವಾಗುವುದರಿಂದ ಪ್ರತಿಯೊಬ್ಬರೂ ಬಂಧುಮಿತ್ರಾದಿಗಳಿಂದೊಡಗೂಡಿ ಸಂತೋಷದಿಂದ ಐದು ದಿವಸಗಳವರೆಗೂ ದೀಪಾವಳಿಯ ವ್ರತವನ್ನಾಚರಿಸಿ ಆಸ್ತಿಕರೆಂಬ ತಮ್ಮ ಹೆಸರನ್ನು ಅನ್ವರ್ಥಕಪಡಿಸಿಕೊಳ್ಳಬೇಕಾಗಿದೆ

ಯುದ್ಧವಾರ್ತೆ.

ರಷ್ಯಾ-ಜಪಾನ್ ಒಪ್ಪಂದ

ಮಂಚುಕೋ ಮಾಂಗೋಲಿಯಾ ಗಡಿಪ್ರದೇಶ ವಿಚಾರವಾಗಿ ರಷ್ಯಕ್ಕೂ ಜಪಾನಿಗೂ ಒಂದು ಒಪ್ಪಂದವಾಗಿ ಅದಕ್ಕೆ ಸಹಿಬಿತ್ತೆಂದೂ ಇದರಿಂದ ಈ ಎರಡು ಜನಾಂಗಕ್ಕೂ ಗಡಿಪ್ರದೇಶದಲ್ಲಿ ನಡೆಯುತ್ತಿದ್ದ ಘರ್ಷಣವು ಕೊನೆಗಂಡಂತಾಯಿತೆಂದು ಬಿ ಬಿ ಸಿ. ಪ್ರಕಟಣೆಯು ತಿಳಿಸಿದೆ

ರಷ್ಯಕ್ಕೆ ಭಾರಿನಷ್ಟ

ವ್ಯಾಜಮಾ ಕ್ಷೇತ್ರದಲ್ಲಿ ಸಿಕ್ಕಿಬಿದ್ದ ರಷ್ಯನರನ್ನೆಲ್ಲಾ ಸಂಪೂರ್ಣ ನಾಶಮಾಡಲಾಯಿತೆಂದೂ, ಬ್ರಿಯಾನ್ಸ ಪ್ರದೇಶದಲ್ಲಿ ಸುತ್ತುವರೆಯಲ್ಪಟ್ಟಿರುವ ರಷ್ಯನ ಗತಿಯು ಮುಗಿದಂತೆಯೇ ಎಂದೂ ಈ ಎರಡು ಕಡೆಗಳಲ್ಲೂ ಇದುವರೆಗೆ ೬ ಲಕ್ಷ ರಷ್ಯನರು ಸೆರೆಸಿಕ್ಕಿರುವರಾಗಿಯೂ ಜರ್ಮನರು ಪ್ರಕಟಿಸಿದ್ದಾರೆ.

ಒಡೆಸ್ಸಾ ನಗರವು ರಷ್ಯನರ ಕೈ ತಪ್ಪಿತ

ಒಡೆಸ್ಸಾ ರಕ್ಷಣ ವ್ಯೂಹಗಳನ್ನು ಬೇಧಿಸಿ ತಮ್ಮ ಸೈನ್ಯಗಳು ಮುಂದ ನುಗ್ಗುತ್ತಿರುವವೆಂದೂ ರಷ್ಯನರು ರಣರಂಗದಲ್ಲಿ ಎಲ್ಲ ಕಡೆಯೂ ಹಿಮ್ಮೆಟ್ಟುತ್ತಿರುವರೆಂದೂ 16 ನೆಯ ತಾರೀಖಿನ ಪ್ರಾತಃಕಾಲ 8 ಘಂಟೆಯಿಂದ ಒಡೆಸ್ಸಾನಗರವು ಉರಿಯುತ್ತಿರುವದಾಗಿಯೂ ರುಮೇನಿಯಾ ಸೈನ್ಯ ಕಚೇರಿಯವರು ಪ್ರಕಟಿಸಿದ್ದಾರೆ ರಷ್ಯನರು ಒಡೆಸ್ಸಾವನ್ನು ತ್ಯಜಿಸಿ ಸಮುದ್ರದ ಮೂಲಕ ಹೊರಟುಹೋಗಲು ಪ್ರಾರಂಭಿಸಿದ್ದಾರೆಂದು ಸ್ವಿಸ್ ರೇಡಿಯೋ ತಿಳಿಸಿದೆ

ರಷ್ಯಾ ಸರ್ಕಾರವು ಮಾಸ್ಕೋ ನಗರವನ್ನು ತ್ಯಜಿಸಿದೆ

ಮಾಸ್ಕೋನಗರದ ಬಳಿ ರಷ್ಯ ಮತ್ತು ಜರ್ಮನ ಸೈನ್ಯಗಳಿಗೆ ಭಯಂಕರ ಯುದ್ಧ ನಡೆಯುತ್ತಿದೆ. ಕೆಲ ಕಡೆಗಳಲ್ಲಿ ಜರ್ಮನರು ಮುಂದೆ ನುಗ್ಗಿದ್ದರೂ ಮಾಟಿಮೋಷಿಂಕೋರವರ ಸೇನೆಯು ಚದುರದೆ ಜರ್ಮನರನ್ನೆದುರಿಸಿ ಧೈರ್ಯವಾಗಿ ಹೋರಾಡುತ್ತಿದೆಯೆಂದು ತಿಳಿದುಬರುವದಲ್ಲದೆ, ರಷ್ಯಾ ಸರ್ಕಾರವೂ, ವಿದೇಶೀಯ ರಾಯಭಾರ ಕಚೇರಿಗಳೂ ಮಾಸ್ಕೋದಿಂದ ಬೇರೆ ಕಡೆಗೆ ವರ್ಗಾಯಿಸಲಾಗಿದೆಯೆಂದು ವರ್ತಮಾನವಿದೆ ಮಾಸ್ಕೋವಿಗೆ 400 ಮೈಲು ದೂರದಲ್ಲಿರುವ ‘ಕಜನ್’ ಎಂಬುದನ್ನು ತಾತ್ಕಾಲಿಕ ರಾಜಧಾನಿಯನ್ನಾಗಿ ಮಾಡಿಕೊಳ್ಳಲಾಗಿದೆಯಂತೆ !

ರಷ್ಯವು ವಿಪತ್ತಿಗೆ ಸಿಕ್ಕಿದೆ

ರಷ್ಯವು ಈಗ ಘೋರ ವಿಪತ್ತಿನಲ್ಲಿ ಸಿಕ್ಕಿಬಿದ್ದಿದೆ. ನಾಜಿಗಳು ತಮ್ಮ ಸಂಪೂರ್ಣ ಸೈನ್ಯ, ವಿಮಾನ ಮತ್ತು ಟ್ಯಾಂಕುಗಳ ಬಲವನ್ನೆಲ್ಲ ರಷ್ಯದ ಮೇಲೆ ಉಪಯೋಗಿಸಿ ಅತಿ ತೀವ್ರವಾದ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆ ರಷ್ಯವೇನೋ ಹೆದರದೆ ಪ್ರತಿಭಟಿಸುತ್ತಿದೆ ಫ್ರಾನ್ಸು ಬಿದ್ದಂತೆ ರಷ್ಯವೇನೋ ಏಕಾಏಕಿ ಬೀಳುವುದಿಲ್ಲ ಆದರೂ ಅದಕ್ಕೀಗ ಬಹಳ ಕಷ್ಟದ ಸ್ಥಿತಿಯೊದಗಿದೆ ಸಂಗ್ರಾಮ ಸಾಧನಗಳು ರಣರಂಗಕ್ಕೆ ಒದಗದಂತೆ ಜರ್ಮನರು ಮಾರ್ಗ ಸೌಕರ್ಯವನ್ನು ಕಡಿದುಹಾಕಿದ ರಷ್ಯದ ಸ್ಥಿತಿ ಬಹಳ ವಿಷಾದಕರವಾಗಬಹುದು ಈಗ ಈ ಉಗ್ರಪರಿಸ್ಥಿತಿಯನ್ನು ಗಮನಿಸಿ ರಷ್ಯಕ್ಕೆ ಹಚ್ಚೆ

ಹಾಯ ನೀಡಬೇಕೆಂದು ಕೇಳುತ್ತಿರಲಾಗಿದೆ ಆದಷ್ಟು ಗ್ರಾಮವಸ್ತುಗಳನ್ನೂ ಮದ್ದುಗುಂಡುಗಳನ್ನೂ ಒದಗಿಸುತ್ತಿರಲಾಗಿದೆಯಾದರೂ ರಷ್ಯವು ತನ್ನ ಕೈಗಾರಿಕಾ ಕ್ಷೇತ್ರಗಳನ್ನು ಕಳೆದುಕೊಂಡರೆ, ಆ ನಷ್ಟವನ್ನು ಸರಿಪಡಿಸುವಷ್ಟರಮಟ್ಟಿಗೆ ಬೇರೆ ಕಡೆಯಿಂದ ಪದಾರ್ಥಗಳನ್ನು ಒದಗಿಸಲಾಗುವುದೇ ಎಂಬುದು ಅನುಮಾನಾಸ್ಪದ ವಿಷಯ ಆದ್ದರಿಂದ ರಷ್ಯದಮೇಲಿನ ಒತ್ತಾಯವು ಕಡಿಮೆಯಾಗುವಂತೆ ಮಾಡಲು ಬ್ರಿಟನ್ನು ಅಪಾಯವು ಕಂಡರೂ ಹಿಂಜರಿಯದೆ ಸ್ವಲ್ಪ ಧೈರ್ಯವಾಗಿ ಮುಂದೆ ಬಂದು ಹಿಂದುಗಡೆಯಿಂದ ಜರ್ಮನಿಗೆ ಏಟು ಹಾಕಬೇಕೆಂಬ ಅಭಿಪ್ರಾಯವು ಜನರಲ್ಲಿ ಹೆಚ್ಚುತ್ತಿದೆ

ರಷ್ಯವು ಸೋತರೆ ಜಪಾನು ಅಮೆರಿಕವನ್ನೆದುರಿಸುವದು ನಿಶ್ಚಯ

ರಷ್ಯವು ಈಗಿನ ಯುದ್ಧದಲ್ಲಿ ಸೋತರೆ ಜಪಾನು ಪೆಸಿಫಿಕ್ ಸಾಗರದಲ್ಲಿರುವ ಅಮೆರಿಕದ ನೌಕೆಗಳಿಗೆ ತೊಂದರೆಕೊಡಲು ಆರಂಭಿಸಬಹುದು ಇದರಿಂದ ಅಮೆರಿಕ ಜಪಾನ್ ಯುದ್ಧವು ಅನಿವಾರ್ಯವಾಗುವುದು ಹಾಗೆ ಜಪಾನಿನೊಡನೆ ಯುದ್ಧವನ್ನು ಪ್ರಾರಂಭಿಸುವದರಿಂದ ಅಮೆರಿಕಕ್ಕೆ ಕೇಡೇನೂ ಸಂಭವಿಸಲಾರದು ಎರಡು ವಾರಗಳಲ್ಲಿ ಅಮೆರಿಕದ ನೌಕೆಗಳು ಜಪಾನಿನ ನೌಕೆಗಳೆಲ್ಲಾ ಮುಳುಗಿಸಬಲ್ಲವು. ಅಮೆರಿಕದ ಬಾಂಬರುಗಳು ಜಪಾನಿಗೆಲ್ಲಾ ಬೆಂಕಿಯಿಡಬಲ್ಲವು" ಎಂದು ಸೆನೆಟರ್ ಪೆಪ್ಪರ್‌ರವರು ಸುದ್ದಿಗಾರರಿಗೆ ತಿಳಿಸಿರುವರು

ಜಪಾನಿನ ಹೊಸ ಮಹಾಪ್ರಧಾನರು

ಜಪಾನಿನ ರಾಜಕುಮಾರ ಕೊನೋಯಿಯವರು ಮಂತ್ರಿಮಂಡಲದ ರಾಜೀನಾಮೆಯನ್ನು ಒಪ್ಪಿಸಿದ ಮೇಲೆ ಸಂಗ್ರಾಮಸಚಿವರಾದ ಲೆ|| ಜ|| ಹಿಡೇಕಿ ಟೋಜೋರವರಿಗೆ ಹೊಸ ಮಂತ್ರಿಮಂಡಲವನ್ನು ರಚಿಸುವಂತೆ ಚಕ್ರವರ್ತಿಗಳು ಸೂಚಿಸಿರುವರೆಂದೂ, ಜಪಾನಿನ ರಾಜಕಾರಣವೇತ್ತರನ್ನೆಲ್ಲಾ ಕೇಳಿ ಟೋಜೋರವರಿಗೆ ಮಹಾಪ್ರಧಾನರ ಅಧಿಕಾರ ಕೊಡಲಾಗಿದೆ ಎಂದೂ, ಹೊಸ ಮಂತ್ರಿಮಂಡಲವು ಸಂಗ್ರಾಮ ಮಂತ್ರಿಮಂಡಲದಂತಿರುವದೆಂದೂ, ಹೇಳಲಾಗಿದೆ

ಅಮೇರಿಕಾಕ್ಕೆ ಜಪಾನಿನ ಎಚ್ಚರಿಕೆ

ಮುಂದೊದಗುವ ಪರಿಸ್ಥಿತಿಯನ್ನೆದುರಿಸಲು ಜಪಾನಿನ ಪ್ರಜೆಗಳೆಲ್ಲವೂ ಸಿದ್ಧವಾಗಿರಬೇಕೆಂದು ಜಪಾನ್ ಅಧಿಕಾರಿಗಳು ಎಚ್ಚರಿಸಿರುವರಂತೆ ಟೋಕಿಯೋದಲ್ಲಿರುವ ಜಪಾನ್ ಅಧಿಕಾರಿಗಳೊಬ್ಬರು "ಜಪಾನ್ ನೌಕಾಬಲವು ಏಟುಹಾಕಲು ಸಿದ್ಧವಾಗಿದೆ, ಜೋಕೆ!" ಎಂದು ಅಮೆರಿಕಾ ಸರ್ಕಾರವನ್ನು ಎಚ್ಚರಿಸಿರುವರಂತೆ !

ಅಮೆರಿಕದ ಸೇನೆಯನ್ನು ಯುದ್ಧ ರಂಗಕ್ಕೆ ಕಳುಹಿಸಬೇಕು

ಇದುವರೆಗೆ ಎಲ್ಲ ರಕ್ಷಣಾ ಕಾರ್ಯಕ್ರಮಗಳಿಗೂ ಒಪ್ಪಿನಾಗಿ ಓಟು ಕೊಟ್ಟಿದ್ದ ಅಮೆರಿಕದ ಶಾಸನ ಸಭೆ ಸದಸ್ಯರಾದ ಮಾರ್ಕ್ ಆಂಟೋನಿಯೋರವರು ಈ ತಿಂಗಳ 17ನೆಯ ತಾರೀಖಿನದಿವಸ ನಡೆದ ಸಭೆಯಲ್ಲಿ 'ಪಶ್ಚಿಮ ಯೂರೋಪಿನಲ್ಲಿ ಯುದ್ಧ ಮಾಡಲು ಅಮೆರಿಕದ ಸೇನೆಯನ್ನು ಕಳುಹಿಸಬೇಕು ಈಗಿನ ಯುದ್ಧದಲ್ಲಿ ಅಮೆರಿಕದ ರಕ್ಷಣೆಗೆ ಸಂಚಕಾರ ಬಂದಿದೆ ಇದನ್ನು ಎದುರಿಸಲು ಎಲ್ಲ ಬಗೆಯ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು ತಾಟಸ್ಥ್ಯ ಶಾಸನವನ್ನು ಸಂಪೂರ್ಣವಾಗಿ ತೆಗೆದುಹಾಕಬೇಕೆಂದು ನನಗೆ ತೋರುತ್ತದ" ಎಂದು ವಾದಿಸಿ ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿದರು

ಇಟಲಿಯನ್ನು ಮುತ್ತಬೇಕು.

ರಷ್ಯಕ್ಕೊದಗಿರುವ ವಿಷಮ ಪರಿಸ್ಥಿತಿಯಲ್ಲಿ ಅದಕ್ಕೆ ಸಹಾಯವಾಗುವಂತೆ ಜರ್ಮನಿಯ ಗಮನವನ್ನು ಬೇರೆ ಕಡೆ ತಿರುಗಿಸಲು ಬ್ರಿಟನ್ನು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳದಿರುವದರಿಂದ ಇಂಗ್ಲೆಂಡಿನ ಜನತೆಯಲ್ಲಿ ಅಸಮಾಧಾನವೂ ಕಳವಳವೂ ತಲೆದೋರುತ್ತಿದೆ. ಪಶ್ಚಿಮದಲ್ಲಿ ಜರ್ಮನಿಗೆ ಏಟುಹಾಕಲು ಇದು ತಕ್ಕ ಸಮಯವೆಂದು ಎಲ್ಲರೂ ಹೇಳುತ್ತಿದ್ದಾರೆ. ಬ್ರಿಟನ್ನು ಈಗ ಇಟಲಿಗೆ ಮುತ್ತಿಗೆ ಹಾಕಿ ಮೆಡಿಟರೇನಿಯನ್ನಲ್ಲಿ ಶತ್ರುಗಳ ಹೆಸರಿಲ್ಲದಂತೆ ಮಾಡಿದರೆ ಆಗ ನಿರಾತಂಕವಾಗಿ ಮೆಡಿಟರೇನಿಯ ಮತ್ತು ಪರ್ಷಿಯ ಜಲಸಂಧಿಯ ಮೂಲಕ ರಷ್ಯಕ್ಕೆ ಸಹಾಯ ಕಳುಹಿಸಬಹುದೆಂದೂ, ಈಜಿಪ್ಟಿಗಿರುವ ಭಯವೂ ತಪ್ಪುವದೆಂದೂ ಮಾಜಿ ಸಂಗ್ರಾಮ ಸಚಿವರಾದ ಶ್ರೀ ಹೋರ್ ಬೆಲೀಷಾರವರು ಅಭಿಪ್ರಾಯ ಪಡುತ್ತಾರೆ

ಫ್ರೆಂಚ್ ಮಾಜಿ ಅಧಿಕಾರಿಗಳ ಬಂಧನ

ಯುದ್ಧಾರಂಭದಲ್ಲಿ ಫ್ರಾನ್ಸಿನ ಮಹಾಪ್ರಧಾನರಾಗಿದ್ದ ಎಂ ದಲಾಡಿಯರ್, ಎಂ ಲಿಯನ್‌ಬ್ಲಂ(ಸೋಷಿಯಲಿಸ್ಟ ಮಾಜಿ ಮಹಾಪ್ರಧಾನರು) ಮತ್ತು ಮಾಜಿ ದಂಡನಾಯಕರಾದ ಜ|| ಗೇಮಲಿನ್ ಇವರುಗಳನ್ನು ಒಂದು ಕೋಟೆಯಲ್ಲಿ ಬಂಧಿಸಿಡಬೇಕೆಂದು ಮಾ|| ಪೆಟೆನ್ನರು ಆಜ್ಞೆಮಾಡಿದ್ದಾರೆ ಫ್ರಾನ್ಸಿನಪತನ ಕಾಲದಲ್ಲಿ ಮಹಾಪ್ರಧಾನರಾಗಿದ್ದ ಎಂ ಪಾಲ್‌ರೇನಾಡ್ ಮುಂತಾದವರನ್ನೂ ಬಂಧನದಲ್ಲಿಡಲಾಗಿದೆ

ಬಲ್ಗೇರಿಯದಲ್ಲಿ ಜರ್ಮನ್ ಸಿದ್ಧತೆ

ಬಲ್ಗೇರಿಯದ ತಾಟಸ್ಥ್ಯ ನೀತಿಯು ದುರ್ಬಲವಾಗುತ್ತಿದೆ ಅದರ ಬಂದರುಗಳಾದ ಬರ್ಗಾಸ್ ಮತ್ತು ವರ್ನಾಗಳಿಂದ ನೌಕೆಗಳು ಸೈನಿಕರನ್ನೂ ಸಂಗ್ರಾಮ ಸಲಕರಣೆಗಳನ್ನೂ ತುಂಬಿಕೊಂಡು ಏಕರ್‌ಮನ್ ಮತ್ತು ನಿಕೋಲಯೇವ್‌ಗಳ ಕಡೆಗೆ ತೆರಳುತ್ತಿವೆ ಈಗ ವರ್ನಾ ಮತ್ತು ಬರ್ಗಾಸ್‌ಗಳಲ್ಲಿ 140000 ಟನ್ನುಗಳಷ್ಟು ತೂಕದ ಜರ್ಮನ್, ರುಮೇನಿಯ ಮತ್ತು ಬಲ್ಗೇರಿಯ ಹಡಗುಗಳಿವೆ ಸಬ್‌ಮೆರೀನುಗಳನ್ನೂ ಜೊತೆ ಮಾಡಲಾಗುತ್ತಿದೆ 4 ಡಿಸ್ಟ್ರಾಯರುಗಳೂ 6 ಟಾರ್ಪೆಡೋಬೋಟುಗಳೂ, 5 ಸಣ್ಣ ಸಬ್‌ಮೆರೀನುಗಳು ಸುಮಾರು 150 ಇ ಬೋಟುಗಳೂ ಈಗ ಆ ಬಂದರುಗಳಲ್ಲಿ ಸಿದ್ಧವಾಗಿವೆ ಆಕಾಶದಲ್ಲೂ ನೀರಿನ ಮೇಲೂ ತಮ್ಮ ಬಲವನ್ನು ಸ್ಥಾಪಿಸಲು ನಾಜಿಗಳು ಶಕ್ತರಾದ ಕೂಡಲೆ ಶಸ್ತ್ರ ಬಂಡಿಗಳ ಪಡೆಯನ್ನು ಸಾಗಿಸಲು ಹಡಗುಗಳು ಸಿದ್ಧವಾಗಿವೆ ಕ್ರಿಮಿಯದಲ್ಲಿರುವ ಮುಖ್ಯ ನೌಕಾ ಮೂಲವಾದ ಸೆಬಾಸ್ಟಪೂಲ್ ಬಂದರನ್ನು ಆಕ್ರಮಿಸಿದ ಹೊರತು ಅಲ್ಲಿ ಸೇನೆಯನ್ನಿಳಿಸಲು ಹಿಟ್ಲರನು ಪ್ರಯತ್ನಪಡುವದಿಲ್ಲವೆಂದು ತಿಳಿದವರು ಅಭಿಪ್ರಾಯಪಡುತ್ತಿದ್ದಾರೆ

ನಾಜಿಗಳ ಕೊಲೆಕಡುಗತನ

ಸರ್ಬಿಯ ದೇಶದಲ್ಲಿ ನಾಜಿಗಳು ಸುಮಾರು 34,000 ಜನರನ್ನು ಹೆಂಗಸರು ಮಕ್ಕಳೆನ್ನದೆ ಕೊಲೆಮಾಡಿರುವರೆಂದು ಇಸ್ತಂಬೂಲಿನ ಸುದ್ದಿಯು ತಿಳಿಸುತ್ತದೆ ಕಾರ್ಲೋವಿಟ್ ಎಂಬಲ್ಲಿ ಸರ್ಬಿಯ ಪ್ರಜೆಗಳನ್ನು ದನಗಳನ್ನು ಕೂಡಿಡುವ ಗಾಡಿಗಳಲ್ಲಿ 8 ದಿನಗಳ ಕಾಲ ಕೂಡಿಡಲಾಗಿತ್ತೆಂದೂ, ಅನಂತರ ಬಾಗಿಲನ್ನು ತೆಗೆದುನೋಡಿದಾಗ ನೂರಾರು ಜನರು ಸತ್ತುಬಿದ್ದಿದ್ದರೆಂದೂ, ಜಂಬಲೂಕ ಎಂಬಲ್ಲಿ 12 ಸಾವಿರ ಸರ್ಬರು ವಾಸಮಾಡುತ್ತಿದ್ದ ಸ್ಥಳದಲ್ಲಿ ಈಗ ಒಬ್ಬರೂ ಉಳಿದಿಲ್ಲವೆಂದೂ, ಕ್ರೋಟಿಯದಲ್ಲಿ ನೂರಾರು ಸರ್ಬಿಯ ಪ್ರಜೆಗಳನ್ನು ಕೊಲ್ಲುತ್ತಿರುವದರಿಂದ ಸಾವಿರಾರು ಜನರು ಸರ್ಬಿಯಾ ದೇಶಕ್ಕೆ ಓಡಿಬಂದಿದ್ದಾರೆಂದೂ ಅವರೆಲ್ಲ ಈಗ ಹೊಟ್ಟೆ ಬಟ್ಟೆಗಿಲ್ಲದೆ ಸಾಯುತ್ತಿರುವದಾಗಿಯೂ, ಬೆಲ್ಗ್ರೇಡಿನಲ್ಲಿರುವ ಪ್ರಮುಖ ಮಠಾಧಿಪತಿಗಳು, ಕ್ರೋಟ್ ನಾಯಕರಾದ ಶ್ರೀ ಪಾವೆಲಿಚ್‌ರವರೂ ಅವರ ಕೈಕೆಳಗಿರುವವರೂ ನಡೆಸುತ್ತಿರುವ ಭಯಂಕರ ಕ್ರೂರ ಕೃತ್ಯಗಳ ಪಟ್ಟಿಮಾಡಿ ಜರ್ಮನಿ ಅಧಿಕಾರಿಗೆ ಒಂದು ಪ್ರಾರ್ಥನಾ ಪತ್ರಿಕೆಯನ್ನು ಒಪ್ಪಿಸಿರುವದಾಗಿಯೂ ತಿಳಿದುಬರುತ್ತದೆ

ಹಿಟ್ಲರನ ಮುಂದಿನ ಕಾರ್ಯಕ್ರಮ

ಹಿಟ್ಲರನ ಮುಂದಿನ ಉದ್ದೇಶವೇನಿರಬಹುದೆಂಬ ವಿಷಯದಲ್ಲಿ ನಾನಾ ಊಹೆಗಳಾಗುತ್ತಿವೆ ಜಪಾನು ರಷ್ಯದ ಮೇಲೆ ಹಿಂದುಗಡೆಯಿಂದ ಬೀಳುವಂತೆ ಮಾಡಿ ರಷ್ಯವನ್ನು ಇನ್ನೂ ದುರ್ಬಲವನ್ನಾಗಿಸಲು ಸಿದ್ಧಪಡಿಸುತ್ತಿದ್ದಾನೆಂದು ಕೆಲವರ ಮತ ಆದರೆ ರಷ್ಯವನ್ನು ಪೂರ್ಣವಾಗಿ ಗೆಲ್ಲುವದು ಹಿಟ್ಲರನ ಉದ್ದೇಶವಿಲ್ಲ ಚಳಿಗಾಲದಲ್ಲಿ ಯುದ್ಧವನ್ನು ನಿಲ್ಲಿಸಿ, ಆ ಕಾಲದಲ್ಲಿ ತಾವು ಇದುವರೆಗೂ ಆಕ್ರಮಿಸಿರುವ ಪ್ರದೇಶಗಳ ಮೇಲೆ ರಷ್ಯನರು ಪುನರಾಕ್ರಮಣ ನಡೆಸಲಾರದಷ್ಟು ದುರ್ಬಲ ಸ್ಥಿತಿಗೆ ಅವರನ್ನು ತಂದು ಅನಂತರ ಬ್ರಿಟನ್ ಮತ್ತು ರಷ್ಯಗಳಿಗೆ ಶಾಂತಿಷರತ್ತುಗಳನ್ನು ಹೇಳಿ ಬರೆಯಿಸಲು ಮುಂದೆ ಬರುವನೆಂದೂ, ಈ ಶಾಂತಿಸಲಹೆಗಳನ್ನು ತಿರಸ್ಕರಿಸುವದಾದರೆ, ಅ|| ಡಾರ್ಲಾನರ ಸಹಾಯದಿಂದ ಸ್ಪೇನಿಗೆ ಪ್ರವೇಶಿಸಿ ಅನಂತರ ಬ್ರಿಟನ್ನಿಗೆ ಏಟು ಹಾಕಲು ಪ್ರಯತ್ನಿಸುವನೆಂದೂ, ಪೋರ್ಚುಗಲ್, ಫ್ರೆಂಚ್ ಮತ್ತು ಸ್ಪೇನಿಷ್ ಆಫ್ರಿಕ ಪ್ರದೇಶಗಳನ್ನು ಆಕ್ರಮಿಸಿ ಮೆಡಿಟರೇನಿಯನ್ ಸಮುದ್ರದಿಂದ ಬ್ರಿಟಿಷರನ್ನು ಹೊರಗಟ್ಟಲು ಪ್ರಯತ್ನಿಸುವನೆಂದೂ ಊಹಿಸಲಾಗಿದೆ

ಒಳದೇಶದ ವೃತ್ತಾಂತಗಳು.

ಮೈಸೂರು ವಿಶ್ವವಿದ್ಯಾನಿಲಯದ ಸ್ಥಾನಪತಿಗಳಾದ ರಾಜಕಾರ್ಯಪ್ರವೀಣ ಶ್ರೀ ಎ. ಎಸ್ ಸುಬ್ಬರಾಯರು 1942 ನೆಯ ಇಸವಿ ಮಾರ್ಚಿ ತಿಂಗಳಿನಿಂದ ನಿವೃತ್ತರಾಗುವರೆಂದೂ, ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಜೆ ಸಿ ರೋಲೊರವರು ಸ್ಥಾನಪತಿಗಳ ಸ್ಥಾನಕ್ಕೆ ನಿಯಮಿಸಲ್ಪಡುವರೆಂದೂ ತಿಳಿದುಬರುತ್ತದೆ.

ಬೆಂಗಳೂರು ಬಳಿ ಇಟ್ಟಿರುವ ಇಟಲಿ ಸೆರೆಯಾಳುಗಳ ಕಾವಲಿಗಾಗಿ ನಿಯಮಿತರಾಗಿರುವ ಸೈನಿಕರು ಬೆಂಗಳೂರು ನಗರದಲ್ಲೂ ಮತ್ತು ಸುತ್ತುಮುತ್ತಿನ ಕೆಲವು ಹಳ್ಳಿಗಳಲ್ಲೂ ನುಗ್ಗಿ ಸ್ತ್ರೀಯರ ಮಾನಭಂಗವೇ ಮೊದಲಾದ ಹೀನಕಾರ್ಯಗಳಲ್ಲಿ ತೊಡಗಿದ ವಿಚಾರವು ಸರ್ಕಾರದ ಗಮನಕ್ಕೆ ಬಂದುದರಿಂದ ಸರ್ಕಾರದವರು ಅದಕ್ಕೆ ತಕ್ಕ ಬಂದೋಬಸ್ತು ಮಾಡಿದ್ದಾರೆ ಮಿಲಿಟರಿ ಸೈನಿಕರನ್ನು ಬೆಂಗಳೂರು ನಗರದ ಯಾವ ಭಾಗದಲ್ಲಿ ಕಂಡರೂ ಬಂಧಿಸಲು ಟ್ರಾಫಿಕ್ ಪೋಲೀಸಿನವರಿಗೆ ಅಧಿಕಾರ ಕೊಡಲಾಗಿದೆಯೆಂದೂ, ಪೋಲೀಸ್ ಸೂಪರಿಂಟೆಂಡೆಂಟರೂ ಅಸಿಸ್ಟೆಂಟ್ ಪೋಲೀಸ್ ಸೂಪರಿಂಟೆಂಡೆಂಟರೂ ನಗರದ ಎಲ್ಲ ಕಡೆಯಲ್ಲೂ ಸಂಚರಿಸಿ, ಜನರಿಗೆ ಸೈನಿಕರ ಭಯವನ್ನು ತಪ್ಪಿಸಲು ಕಾರ್ಯಕ್ರಮವನ್ನು ಕೈಕೊಳ್ಳಲಾಗಿದೆಯೆಂದೂ ನಿರಾಧಾರವಾದ ಸುದ್ದಿಗಳಿಗೆ ಕಿವಿಗೊಡಬಾರದೆಂದೂ ತಿಳಿಸಿದರು

ಶಿವಮೊಗ್ಗ ಪ್ರಾಂತದ ಬನವಾಸಿ ಬಳಿಯ ಒಂದು ಗ್ರಾಮದಲ್ಲಿ ಹತ್ತು ವರ್ಷ ವಯಸ್ಸಿನ ಒಬ್ಬ ದನ ಕಾಯುವ ಹುಡುಗನು ಕಾಡಿನಲ್ಲಿ ದನಗಳನ್ನು ಮೇಯಲು ಬಿಟ್ಟು ಒಂದು ಮರದ ಕೆಳಗೆ ಕುಳಿತಿದ್ದಾಗ ಒಂದು ಭಾರಿ ನಾಗರ ಹಾವು ಬಂದು ಅವನನ್ನು ಸುತ್ತಿಕೊಂಡು ಹೆಡೆಯಾಡಿಸಲು ಪ್ರಾರಂಭ ಮಾಡಿತೆಂದೂ ಹುಡುಗನು ಹೆದರಿಕೆಯಿಂದ ಪ್ರಜ್ಞೆತಪ್ಪಿ ಬಿದ್ದನೆಂದೂ, ಅವನ ಜೊತೆಯ ಹುಡುಗರು ಮನೆಗೆ ಓಡಿಹೋಗಿ ಹುಡುಗನ ತಾಯಿ ತಂದೆಗಳಿಗೆ ವಿಷಯವನ್ನು ತಿಳಿಸಲು, ಅವರೂ ಕೆಲವು ಗ್ರಾಮಸ್ಥರೂ ಅಲ್ಲಿಗೆ ಓಡಿಬಂದರಾದರೂ ಏನೂ ಸಹಾಯ ಮಾಡಲಾಗಲಿಲ್ಲವೆಂದೂ, ಹಾವು ಒಂದು ದಿನವೆಲ್ಲಾ ಹಾಗೇ ಹೆಡೆಯಾಡುತ್ತಿದ್ದು ಆಮೇಲೆ ಹುಡುಗನನ್ನು ಬಿಟ್ಟು ಕಾಣದಂತೆ ಹೊರಟು ಹೋಯಿತೆಂದೂ, ಪ್ರಜ್ಞಾಹೀನನಾಗಿ ಬಿದ್ದ ಹುಡುಗನಿಗೆ ಹಾವು ಏನೊಂದೂ ತೊಂದರೆ ಕೊಟ್ಟಿರಲಿಲ್ಲವೆಂದೂ, ಈ ಸರ್ಪದ ಹೆಡೆಯು ಸುಮಾರು 1–1½ ಅಡಿ ಅಗಲವಿತ್ತೆಂದೂ ಹೇಳಲಾಗಿದೆ

[೩ ನೆಯ ಪುಟದಿಂದ ಮುಂದುವರೆದುದು]

ಹೊರಬೀಳಬೇಕಾದರೆ ನಮ್ಮ ಲಕ್ಷವನ್ನು ಮುಂದಿಟ್ಟುಕೊಂಡು ಬಹು ಎಚ್ಚರಿಕೆಯಿಂದ ಎಲ್ಲಾ ಕಡೆಯಲ್ಲಿಯೂ ತಾಳೆಯನ್ನು ಹಾಕುತ್ತ ವಿಚಾರ ಮಾಡಬೇಕು ವಿಚಾರದಿಂದ ಆ ತಪ್ಪು ಹೊರಬಿದ್ದೀತಲ್ಲದೆ ವಿಚಾರದ ಹೊರತು ಅದಕ್ಕೆ ಯಾವದೂ [illegible] ಸಾಧನವಿಲ್ಲ ಈ ಅನುಭವವನ್ನು ವೇದಾಂತಿಗಳು [illegible] ಆ ತಪ್ಪು ವಿಚಾರದ ಹೊರತು ಬೇರೆ ಏತರಿಂದ [illegible] ಅವಿಚಾರದಿಂದ ದೇಹಾತ್ಮ [illegible] ಅದನ್ನು ವಿಚಾರದಿಂದ [illegible] ಪ್ರಧಾನವಾದದ್ದು [illegible] ಯೋಗವೂ [illegible] ಆ ತಪ್ಪು ತಿಳುವಳಿಕೆಯನ್ನು ಕಳೆಯುವದರಲ್ಲಿ ಜ್ಞಾನಯೋಗ ಒಂದು ಮಾತ್ರ [illegible] ಸಿದ್ಧವಾಗದು

ಇನ್ನು ಜ್ಞಾನಯೋಗವಾದರೂ ಸ್ವತಂತ್ರವಾಗಿ ತಾನೊಂದೇ [illegible] ಅಜ್ಞಾನವನ್ನು [illegible] ಇದಕ್ಕೆ [illegible] ಹಾದಿಯಲ್ಲಿ ನೋಡಿದರೂ [illegible] ವಿಚಾರಕ್ಕೂ [illegible] ಅಂತರವು [illegible] ಮೇಲಿನ [illegible] ವಿಚಾರವನ್ನು ಎಲ್ಲರೂ ಮಾಡಬಹುದಲ್ಲವೇ? ದೇಹಾತ್ಮಬುದ್ಧಿಯನ್ನು ಕಳೆಯುವ [illegible] ಬುದ್ಧಿಯಲ್ಲದ [illegible] ಶುದ್ಧವಾದ [illegible] ಕಂಡಕಂಡ ಕಡೆಗಳಲ್ಲೆಲ್ಲ ಹರಿದು ಹೊಲಸಿನಿಂದ ಕೂಡಿ ಒಂದೇ ಸಮನೆ ಹರಿಯುವ [illegible] ಪ್ರತಿಬಿಂಬವು ಕಾಣಬಹುದೇನು? ಅದರ ತೆರೆಯ [illegible] ಸಮೃದ್ಧಿಯಾಗಿ ವ್ಯಾಪಾರ [illegible] ನಾಲ್ಕು ದಿಕ್ಕಿಗೂ ಹರಿದುಕೊಳ್ಳುತ್ತ ರಾಗದ್ವೇಷಾದಿಗಳಿಂದ ಕೂಡಿ [illegible] ಪ್ರವಹಿಸುವ [illegible] ಅದರಲ್ಲಿ [illegible] ಬಿಂಬವು ಸರಿಯಾಗಿ [illegible] ಮೂಡೀತು? ಅದ್ದರಿಂದ ಆತ್ಮನ [illegible] ಭಿನ್ನ [illegible] ಪ್ರವೇಶಿಸಬೇಕಾದರೆ ಬುದ್ಧಿಯು ಶುದ್ಧವಾಗಿರಬೇಕು ಈ ಶುದ್ಧಿ [illegible] ಕರ್ಮಯೋಗವು [illegible] ಇನ್ನು ಒಂದು ಬುದ್ಧಿಯು ಶುದ್ಧವಾಗಿತ್ತೆಂದು ಇಟ್ಟುಕೊಳ್ಳೋಣ ನೀರು ತಿಳಿಯಾಗಿದ್ದರೂ ಅದರ ಪ್ರವಾಹವು ಎಲ್ಲಾ ಕಡೆಗೂ [illegible] ಹೊರಳುತ್ತಿದ್ದರೆ ಅದರಲ್ಲಾದರೂ ಪ್ರತಿಬಿಂಬವು ಹೇಗೆ ಮೂಡೀತು? ಹಾಗೆಯೇ ಶುದ್ಧ ಚಿತ್ತವಾದರೂ ಅದು ನಾಲ್ಕು ಕಡೆಗೂ ಹರಿಯುತ್ತಿದ್ದರೆ ಅದರಲ್ಲಿ ದೇಹಾತ್ಮಬುದ್ಧಿಯು ವಿಚಾರವು ಮಾಡಲಾರದು ನೀರು ತನ್ನ ಚಲನೆಯನ್ನು ಬಿಟ್ಟು ಸುಮ್ಮನೆ ಒಂದು ಕಡೆ ನಿಲ್ಲಬೇಕು ಆಗ ಅದರಲ್ಲಿ ಪ್ರತಿಬಿಂಬವು ಮೂಡುವದು ಅದರಂತೆ ಮನಸ್ಸು ತನ್ನ ಹರಿದಾಟವನ್ನು ಬಿಟ್ಟು ಒಂದು ಕಡೆ ನಿಲ್ಲಬೇಕು ಆಗ ಅದರಲ್ಲಿ ದೇಹಾತ್ಮಬುದ್ಧಿಯು ವಿಚಾರವು ಇಳಿಯುವದು ಈ ಸ್ಥಿರತೆಯು ರಾಜಯೋಗದಿಂದಲೂ ಭಕ್ತಿಯೋಗದಿಂದಲೂ ದೊರೆಯುವದು ಹೀಗೆ ಜ್ಞಾನಯೋಗವನ್ನು ನಡೆಸಬೇಕಾದರೆ ಕರ್ಮಯೋಗದಿಂದ ಚಿತ್ತಶುದ್ಧಿಯನ್ನೂ ರಾಜಯೋಗ ಭಕ್ತಿಯೋಗಗಳಿಂದ ಚಿತ್ತಸ್ಥೈರ್ಯವನ್ನೂ ಪಡೆದ ಬುದ್ಧಿಯಾಗಬೇಕು ಶುದ್ಧವೂ ಸ್ಥಿರವೂ ಅಲ್ಲದ ಬುದ್ಧಿಯ ವಿಚಾರವು ಜ್ಞಾನಯೋಗವೆನಿಸಿಕೊಳ್ಳುವದೇ ಇಲ್ಲ ಅದನ್ನು ಜ್ಞಾನವೆನ್ನಬಹುದೆ? ಯೋಗವೆಂಬ ಪವಿತ್ರ ನಾಮವನ್ನು ಪಡೆಯಬೇಕೆಂದರೆ ಆ ವಿಚಾರವು ಶುದ್ಧವೂ ಸ್ಥಿರವೂ ಆದ ಬುದ್ಧಿಯಲ್ಲಿಯೇ ಹುಟ್ಟಬೇಕು ಅದ್ದರಿಂದ ತಪ್ಪು ತಿಳುವಳಿಕೆಯನ್ನು ಕಳೆಯುವದಕ್ಕೆ ಸ್ವತಂತ್ರವಾದ ಜ್ಞಾನಯೋಗಕ್ಕೂ ಸಾಮರ್ಥ್ಯವಿಲ್ಲವೆಂದಾಯಿತು ಹೀಗಾಗಿ ಯಾವ ಯೋಗವು ತಾನೊಂದೇ ಸ್ವತಂತ್ರವಾಗಿ ತಪ್ಪುತಿಳುವಳಿಕೆಯನ್ನು ಕಳೆಯಲಾರದೆಂದಾಯಿತು ಅದ್ದರಿಂದ ಉಳಿದವುಗಳನ್ನು ನೆರವಾಗಿಟ್ಟುಕೊಂಡು ಮುಖ್ಯವಾಗಿ ಜ್ಞಾನಯೋಗವೇ ಅದನ್ನು ಕಳೆಯುವದೆನ್ನಬೇಕು ಈ ಯೋಗಗಳು ಒಂದಕ್ಕೊಂದು ನೆರವಾಗಿರುವ ಸ್ಥಿತಿಯು ಪ್ರತಿ ಯೋಗಗಳಲ್ಲಿಯೂ ಕಾಣುವದು ಹೇಗೆಂದರೆ ಕರ್ಮಯೋಗದಲ್ಲಿಯೂ ಅಲ್ಪ ಸ್ವಲ್ಪವಾದರೂ ಮನಸ್ಸಿನ ಏಕಾಗ್ರತೆಯೂ [illegible] ವಿಚಾರವೂ ಇದ್ದೇ ಇರುವದು [illegible] ಯೋಗದಲ್ಲಿ ಕರ್ಮವೂ ಪ್ರೇಮವೂ [illegible] ಯೋಗದಲ್ಲಿ ಕರ್ಮವೂ ಚಿತ್ತೈಕಾಗ್ರತೆಯೂ [illegible] ನೆಯ್ದುಕೊಂಡಿರುವವು

(ಸಶೇಷ)

ಶ್ರೀ[illegible] ವಿಶ್ವಾರಾಧ್ಯಾಯನಮಃ॥

ನವರಾತ್ರಮಹೋತ್ಸವ

ಶ್ರೀ ಕ್ಷೇತ್ರ ಕಾಶೀ

ಶ್ರೀ ಕಾಶೀಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಶ್ರೀ ಜಗದ್ಗುರು ವಿಶ್ವಾರಾಧ್ಯ ಧರ್ಮಪೀಠದಲ್ಲಿ ನವರಾತ್ರಮಹೋತ್ಸವವು ಪ್ರತಿವರ್ಷದ ಪದ್ಧತಿಯಂತೆ ಆಶ್ವಯುಜ ಶು॥೧ [illegible] ೧೦ ಮಂಗಳವಾರದ ವರೆಗೆ ಸಕ್ರಮವಾಗಿ ನಡೆಯಿತು

ಪ್ರತಿದಿನ ಪ್ರಾತಃಕಾಲ ಶ್ರೀ ಗಂಗಾನದಿಯಿಂದ [illegible] ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳವರ ಶಿವಪೂಜಾನುಷ್ಠಾನವು ನಡೆದ ತರುವಾಯ ಶ್ರೀ ಜಗದ್ಗುರು ವಿಶ್ವಾರಾಧ್ಯಮೂರ್ತಿಗೂ ಶ್ರೀ ಜ್ಞಾನಪೀಠಕ್ಕೂ ರುದ್ರಾಭಿಷೇಕಾದಿಗಳು ನಡೆಯುತ್ತಿದ್ದವು ಮಹಾಸಂಸ್ಥಾನದ ಪದ್ಧತಿಯ ಪ್ರಕಾರ ಸಂಸ್ಥಾನದ ಬಿಲ್ವವನದಲ್ಲಿರುವ ಶ್ರೀ ದುರ್ಗಾದೇವಿಯ ಮಂದಿರದಲ್ಲಿ ಪ್ರಸಿದ್ಧ ಪಂಡಿತರಿಂದ ಸಪ್ತಶತೀಪಾರವು ನೆರವೇರಿಸಲ್ಪಡುತ್ತಿತ್ತು

ಅಶ್ವಯುಜ ಶುಕ್ಲ ನವಮಿ ಸೋಮವಾರ ಸಪ್ತಶತೀ ಪಾರದ ಸಮಾಪ್ತಿಯೂ ಮತ್ತು ಹೋಮವೂ ಆಯುಧ ಪೂಜೆಯೂ ಆಚರಿಸಲ್ಪಟ್ಟವು

ಅಶ್ವಯುಜ ಶು॥ ೧೦ ಮಂಗಳವಾರ ಪ್ರಾತಃಕಾಲ ಶ್ರೀ ಜಗದ್ಗುರು ವಿಶ್ವಾರಾಧ್ಯಮೂರ್ತಿಗೂ ಜ್ಞಾನಪೀಠಕ್ಕೂ ರುದ್ರಾಭಿಷೇಕ ಷೋಡಶೋಪಚಾರ ಪೂಜಾದಿಗಳು ನೆರವೇರಿದಮೇಲೆ ಶ್ರೀ ಕೈಲಾಸ ಮಂಟಪದ ಮೇಲ್ಭಾಗದಲ್ಲಿ ವಿಜಯಸೂಚಕವಾದ ಧ್ವಜಾರೋಹಣವು ನಡೆಯಿತು ತರುವಾಯ ಮಧ್ಯಾಹ್ನ ೧೧ ಘಂಟೆಗೆ ಛತ್ರಮಾಹೇಶ್ವರರೆಲ್ಲರಿಗೂ ಮೃಷ್ಟಾನ್ನ ಸಂತರ್ಪಣೆಯು ಮಾಡಲ್ಪಟ್ಟಿತು ತರುವಾಯ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳವರು ೭ ಘಂಟೆಗೆ ಮಠದ ಪ್ರಾಂಗಣದಲ್ಲಿರುವ ಶಮೀವೃಕ್ಷಕ್ಕೆ ದಯಮಾಡಿಸಿ ಶಮೀಗ್ರಹಣವನ್ನು ಮಾಡಿ ರಾತ್ರಿ ೮ ಘಂಟೆಗೆ ಸುವರ್ಣ ರಜತಸಿಂಹಾಸನಾರೋಹಣವನ್ನು ಮಾಡಿದರು ತರುವಾಯ ಗುರುಕುಲದ ವಿದ್ಯಾರ್ಥಿಗಳು ಜಗದ್ಗುರುಗಳವರ ಚರಣಕಮಲಗಳಲ್ಲಿ ಶಮೀಪತ್ರವನ್ನು ಸಮರ್ಪಿಸಿ ಶುಭಾಶೀರ್ವಾದವನ್ನು ಪಡೆದರು ತರುವಾಯ ಕಾಶೀಪಂಡಿತರು ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳವರ ಚರಣಕಮಲಗಳಲ್ಲಿ ಶಮೀ ಪತ್ರವನ್ನು ಸಮರ್ಪಿಸಿ ಶುಭಾಶೀರ್ವಾದವನ್ನು ಪಡೆದು ಧಾರ್ಮಿಕ ವಿಷಯವನ್ನು ಕುರಿತು ಮಾತನಾಡಿದರು ತರುವಾಯ ಮಹಾಸಂಸ್ಥಾನದ ದಿವಾನರು ಸರ್ವಾಧಿಕಾರಿಗಳು, ಗುಮಾಸ್ತರು ಮೊದಲಾದವರು ಶ್ರೀ ಜಗದ್ಗುರುಗಳವರ ಚರಣಕಮಲಗಳಲ್ಲಿ ಶಮೀಪತ್ರವನ್ನು ಸಮರ್ಪಿಸಿ ಶುಭಾಶೀರ್ವಾದವನ್ನು ಪಡೆದರು ತರುವಾಯ ಜಗದಾಚಾರ್ಯರ ಸ್ತೋತ್ರದೊಡನೆ ಉತ್ಸವವು ಸಮಾಪ್ತಿಗೊಂಡಿತು

ಓರ್ವ ಗುರುಕುಲ ವಿದ್ಯಾರ್ಥಿ

ಶ್ರೀಜಗದ್ಗುರು ಕೇದಾರಪೀಠದ ಸವಾರಿ

ಶ್ರೀಜಗದ್ಗುರು ಕೇದಾರಪೀಠದ ಸರ್ವಾಧಿಕಾರಿಗಳು ಈಗ್ಗೆ ಕೆಲವು ದಿವಸಗಳಿಂದ ವಿಜಾಪುರಜಿಲ್ಹೆಯಲ್ಲಿ ಸಂಚರಿಸುತ್ತಿರುವದು ಎಲ್ಲರಿಗೂ ತಿಳಿದುದಾಗಿದೆ ಸದರಿಯವರು ಹುನಗುಂದ ತಾಲೂಕು ಕಂದಗಲ್ಲಿಗೆ ಮೊಕ್ಕಾಂ ಮಾಡಿದರು ಆಗ್ಗೆ ಅಲ್ಲಿಯ ಪ್ರಮುಖರಾದ ವೇ॥ ಶರ್ಮಶಾಸ್ತ್ರಿಗಳ ಮೊಮ್ಮಕ್ಕಳಾದ ಶಿವಬಸವಶಾಸ್ತ್ರಿಗಳು, ಮಠದ ಮಡಿವಾಳಯ್ಯನವರು, ಪಾಟೀಲ ಅಯ್ಯನಗೌಡರು, ಗೊರಬಾಳು ಅಮರಯ್ಯನವರು, ಸಜ್ಜನ ವೀರಸಂಗಪ್ಪನವರು, ಮುಸಿಗಿ ರುದ್ರಪ್ಪನವರು, ಗೆಜ್ಜಲಗಟ್ಟಿ ಅಮರಪ್ಪನಾಯಕ ಮುಂತಾದವರು ವಿಶೇಷ ಶ್ರದ್ಧೆ ವಹಿಸಿ ಪೀಠದ ಸೇವೆಯನ್ನು ಮಾಡಿದರು

ಅಲ್ಲಿಂದ ಸವಾರಿಯು ಕಳೆದ ತಿಂಗಳು ೮ನೇ ತಾರೀಖಿನ ದಿವಸ ರಾಯಚೂರು, ಡಿ॥ ಮುದಗಲ್ಲ ಗ್ರಾಮಕ್ಕೆ ದಯಮಾಡಿಸಿತು ಆ ಗ್ರಾಮದ ವೇ॥ ಗಂಗಾಧರ ಮಠದ ಸಿದ್ಧರಾಮಯ್ಯನವರು, ಹಿರೇಮಠದ ಶಿವಲಿಂಗಯ್ಯನವರು, ಶ್ರೀಮಂತ ದೇಸಾಯಿ ಅಮರಪ್ಪನವರ ಮಕ್ಕಳು ಶಿವಲಿಂಗಪ್ಪ ದೇಸಾಯಿಯವರು, ಗಡಾದ ಕಲ್ಲಯ್ಯನವರ, ಕೋರಿಶೆಟ್ರು ವೀರಪ್ಪನವರು, ಮಾ॥ ಪಾಟಾಕನಗೌಡರು, ಪೋ॥ ಪಾ॥ ಅಮರೇಗೌಡರು, ಸು[illegible]ವ ವಿರೂಪಾಕ್ಷಪ್ಪನವರು, ಗುಂಡಪ್ಪ, ಶಿವರುದ್ರಪ್ಪ ಸೂಗಪ್ಪ ಇವರೇ ಮೊದಲಾದವರು ಪರಮಗುರುಭಕ್ತಿಯಿಂದ ಮಹೋತ್ಸವವನ್ನು ಮಾಡಿದರು ಸರ್ವರೂ ಭಕ್ತಿಯಿಂದ ಕಾಣಿಕಾದಿಗಳನ್ನು ಸಮರ್ಪಿಸುತ್ತಿರುವರು ಜಗದಾಚಾರ್ಯರು ಇವರಿಗೆಲ್ಲಾ ಆಯುರಾರೋಗ್ಯಭಾಗ್ಯಾದಿಗಳನ್ನೀಯಲೆಂದು ಕೋರುವ,

ಓರ್ವ ಗುರುಭಕ್ತ

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶಿವಪುರಾಣಪ್ರವಚನ, ಸೋಲಾಪುರ

ಸೊಲ್ಲಾಪುರದಲ್ಲಿ ಲೋಕಕಲ್ಯಾಣಾರ್ಥವಾಗಿ ೩ ವರ್ಷದವರೆಗೆ ನಿರಾಹಾರಿಗಳಾಗಿ ಶ್ರೀ ಮನ್ಮಥಸ್ವಾಮಿಯ ಮಂದಿರದಲ್ಲಿ ಶಿವಲಿಂಗಸ್ಥಾಪನೆಗೋಸ್ಕರ ಬಾಲತಪಸ್ವಿ ಚನ್ನವೀರಶಿವಾಚಾರ್ಯ ಬೃಹನ್ಮಠ ಹೋಟಗಿ ಈ ಶಿವಯೋಗಿಗಳು ಶ್ರೀಶಿವಲಿಂಗಾನುಷ್ಠಾನವನ್ನು ಮಾಡುತ್ತಿರುವದು ಸರ್ವತ್ರ ಪ್ರಸಿದ್ಧವಷ್ಟೆ! ಗುರುಭಕ್ತಾಗ್ರೇಸರರಿಂದ ಭೀಮಾಶಂಕರ ಉಪಾಸೆ ಇವರು ಅತ್ಯಂತ ಭಕ್ತಿಯಿಂದ ಸದರಿ ಅನುಷ್ಠಾನ ಮಂದಿರದಲ್ಲಿ ಮೈಸೂರ ಆಸ್ಥಾನ ವಿದ್ವಾನ್ ಪುರಾಣರತ್ನ ವೇ॥ ಪಂ॥ ವೃಷಭಲಿಂಗ ಶಾಸ್ತ್ರಿಗಳವರ ಪುರಾಣ ಪ್ರವಚನವನ್ನು ಸ್ವಂತ ಖರ್ಚಿನಿಂದ ತಾ॥ [illegible] 8 41 ನೆಯ ಶುಕ್ರವಾರದಿಂದ ಪ್ರಾರಂಭಮಾಡಿಸಿರುವರು ಈ ಶಿವಪುರಾಣ ಪ್ರವಚನ ದ್ವಾರಾ ಹರ-ಗುರು ಭಕ್ತಿಯು ಭಕ್ತರಲ್ಲಿ ಹೆಚ್ಚಾಗಿ ನಮ್ಮ ಸನಾತನ ವೀರಶೈವ ಧರ್ಮಧ್ವಜವು ಸರ್ವತ್ರ ಪ್ರಸರಿಸಲೆಂಬುದೇ ಇವರ ಸದುದ್ದೇಶ ಇವರು ಅಗ್ರ[illegible] ಶ್ರೀಮಂತರಿರದಿದ್ದರೂ ಇವರಲ್ಲಿರುವ ಪರೋಪಕಾರ ಬುದ್ಧಿಯು ಕೋಟೀಶ್ವರರನ್ನು ನಾಚಿಸುತ್ತಿರುವುದು ಇವರಿಗೆ ಎಷ್ಟು ಕಷ್ಟ ನಷ್ಟಗಳು ಒದಗಿದರೂ ಧೃತಿಗೆಡಗೆ, ಆ ರೇಣುಕನಿಚ್ಛೆ ಎಂದು ನುಡಿಯುವರು ಇವರು ಪರಧನವನ್ನು ಎಂದೂ ಮುಟ್ಟರು ಒಮ್ಮೆ ಇವರ ಅಂಗಡಿಯ ಮುಂದೆ ಒಂದು ಭಂಗಾರದ ಸರಪಳಿಯು ಬಿದ್ದಿ[illegible] ಅದನ್ನು ಸೇವಕನಿಂದ ತೆಗೆಯಿಸಿ ಯಾರಾದರೂ ಕೇಳುವದಕ್ಕೆ ಬಂದರೆ ಕೊಡೋಣವೆಂದು ನಿರ್ಧರಿಸಿದರು ಆದರೆ ಮೂರು ದಿವಸದವರೆಗೂ ಯಾರೂ ಒಬ್ಬರಲ್ಲಿ[illegible] ಆಗ್ಯೆ ಅದನ್ನು ಮಾರಿ ಆ ದುಡ್ಡನ್ನು ಮನ್ಮಥಸ್ವಾಮಿ ಮಂದಿರದ ಕಟ್ಟಡಕ್ಕೆ ಕೊಟ್ಟರು ಹೀಗೆ ಎಷ್ಟೇ ಸಮಯವು ಬಂದರೂ ಅದನ್ನು ಪರೋಪಕಾರಕ್ಕೆ ಹಚ್ಚುವರೇ ಹೊರತು ಸ್ವತಃ ಪ್ರಪಂಚಕ್ಕೆ ಉಪಯೋಗಿಸುವುದಿಲ್ಲ ಇವರು ಬಡವರ ವ್ಯಾಪಾರಕ್ಕಾಗಿ ದುಡ್ಡನ್ನು ಕೊಟ್ಟು ಬಂದಂಥ ಬಡ್ಡಿಯನ್ನು ದಾನಾರ್ಥವಾಗಿ ಉಪಯೋಗಿಸುವರು ಒಬ್ಬ ಬಡವಿದ್ಯಾರ್ಥಿಯು ಲಕ್ಷಾಧೀಶರಾದ ಶ್ರೀಮಂತರ ಕಡೆ ಹೋದಾಗ್ಯೆ ಅರ ಹೊರತು ೭ ರೂಪಾಯಿಯನ್ನು ಕೊಡಲಿಲ್ಲ ಹೀಗೆ ಎಲ್ಲಾ ಕಡೆ ಅಲೆದಾಡಿದರೂ ಎಲ್ಲಾ ಹದಿನೇಳು ರೂಪಾಯಿಗಳಾದವು ಅವನ್ನು ನೋಡಿ ಉಪಾಸ ಇವರು ಕನಿಕರಪಟ್ಟು ೬೦ ರೂಪಾಯಿ ಫೀಯನ್ನೂ ಪುಸ್ತಕಗಳನ್ನೂ ಕೊಟ್ಟು ಕಾಲೇಜಿಗೆ ಸೇರಿಸಿದರು ಈತನು ನಮ್ಮ ಸೋಲಾಪುರ ಡಿಸ್ಟ್ರಿಕ್ಟ್‌ನಲ್ಲಿ ವೀರಶೈವರಲ್ಲಿ ಮೆಟ್ರಿಕ್ ಇಂಗ್ಲೀಷಿನಲ್ಲಿ ಮೊದಲನೆಯ ನಂಬರು ಬಂದಿರುವನು ಇರಲಿ, ಇವರು ಪ್ರತಿನಿತ್ಯವೂ ಪುರಾಣಪ್ರವಚನಕ್ಕೆ ಬಂದು ಮನೆಗೆ ಹೋಗುವಷ್ಟರಲ್ಲಿ ಇವರ ಪ್ರಥಮ ಪುತ್ರನು ಹದಿನೈದು ಅಡಿ [illegible] ಪ್ಪರಿಗೆಯಿಂದ ಬಿದ್ದನೆಂಬ ಸಮಾಚಾರವು ಬಂದಿತು

ವರೂ **ಧೈರ್ಯಗೆಡದೆ ಗುರುರಾಯನ ಮರ್ಜಿ** ಎಂದು ಂಡು **ಹೋಗಿ ನೋಡುತ್ತಿರುವಾಗ್ಯೆ ವಿಶೇಷ ಪೆಟ್ಟು** ತ್ತಿತ್ತು **ಜನರ ಆಗ್ರಹಕ್ಕಾಗಿ ಹಾಸ್ಪಿಟಲ್‌ಗೆ ಹಾಕಿ**, ವಾದ **ಭಾರವನ್ನು ಶ್ರೀ** ಜಗದ್ಗುರು ರೇಣುಕರ ಕ್ರೆ **ಹಾಕಿ ನಿಶ್ಚಿಂತರಾದರು** ಮಾರನೆಯ ದಿವಸವೇ ಹುಗನಿಗೆ ಗುಣವಾಗಿ ೫ ೬ ದಿವಸಗಳಲ್ಲಿ **ಹೊಟಗಿ** ಗಳವರ **ದರ್ಶನಕ್ಕೆ** ಬಂದನು ಆಗ್ಗೆ ಜನರ ಆನಂ ಪಾರವೇ **ಇರಲಿಲ್ಲ**. ಎಲ್ಲರೂ **ಶ್ರೀ** ಉಪಾಸೆ ಇವರ ಯನ್ನು **ಕೊಂಡಾಡುತ್ತ ಹೋದರು** ಸದ್ಯಃ ॥ ಪಂ॥ **ಹರೀಶ್ವರಶಾಸ್ತ್ರಿಗಳವರು** ಶಿವಪುರಾಣವನ್ನು ಲು **ಪ್ರಾರಂಭಮಾಡಿರುವರು** ಸ್ಥಲ ಪರಸ್ಥಲದ ನರು ಪುರಾಣವನ್ನು **ಕೇಳಿ** ಧನ್ಯರಾಗುತ್ತಿರುವರು ಶ್ರೀ ಪಾಸೆಯವರು **ತಮ್ಮ ಕಷ್ಟ** ನಿವಾರಣೆಯಾದ ಆನಂದ ಗಿ **ಪಂಚಾಚಾರ್ಯ ಪ್ರಭಾ ಪತ್ರಿಕೆಗೆ** ಒಂದು ಪಾಯಿಯನ್ನು **ಸಮರ್ಪಿಸಿದ್ದಾರೆ** ಹೀಗೆಯೇ ಆಗ ಶ್ರೀಮಂತರೂ **ಬಡವರೂ** ನಿಸ್ವಾರ್ಥಿಗಳಾಗಿ ಗುರು ಸೆಯನ್ನು **ಮಾಡಿ ಧನ್ಯರಾಗಬೇಕೆಂದು** ಪ್ರಾರ್ಥನೆ

ಸೌ॥ ಭಾಗೀರಥೀದೇವಿ ಕಟಾಪ

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಸುಲಭಕ್ರಯದಲ್ಲಿ ದೊರೆಯುವವು

ಧಿ ಹೆಸರು	ತೊಲೆ	ಮೌಲ್ಯ
ಮಕರಧ್ವಜ	೧	೩೦—೦—೦
ಚಂದ್ರೋದಯ	೧	೧೦—೦—೦
೨ನೇ ನಂಬರ್	೧	೬—೦—೦
ಪೂರ	೧	೨—[illegible]—೦
ಮಲ್ಲಸಿಂಧೂರ	೧	೪—೦—೦
ಂದೂರ	೧	೮—೦—೦
ಂಧೂರ	೧	೮—೦—೦
ಪಂಗ	೧	೩—೦—೦
[illegible]	೧	೧—೦—೦
ಭಸ್ಮಗಳು		
ಬಸ್ಮ	೧	೪೦—೦—೦
ಜ್ರಭಸ್ಮ	೧	೬—೦—೦
ತಾಮ್ರಭಸ್ಮ	೧	೦—೬—೦
ಹಭಸ್ಮ	೧	೦—೧೨—೦
ಬಸ್ಮ	೧	೦—೮—೦
ಭಸ್ಮ	೧	೦— —೦
ಭಸ್ಮ	೧	೦—೦—೦
ಭಸ್ಮ	೧	೩—೦—೦
ಕ್ಷಭಸ್ಮ	೧	೦—೬—೦
ನಭಸ್ಮ	೧	೦—೬—೦
ಪ್ರಭಸ್ಮ	೧	೦—೬—೦
ತೂರಭಸ್ಮ	೧	೦—೮—೦
ಮುಕ್ತಿಕಾಭಸ್ಮ	೧	೦—೧೨—೦
ಭಸ್ಮ	೧	೪೦—೦—೦
ಲಭಸ್ಮ	೧	೦—೮—೦
ಕಪ್ಪುಚಿಪ್ಪಿನ ಭಸ್ಮ	೧	೦—೨—೦
ರಂಗದ ಕೋಡಿನ ಭಸ್ಮ	೧	೦—೬—೦
ದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಜಿತ ಸೂರ್ಯಪುಟಿ	೧	೧—೦—೦
ಜಿತ ಅಗ್ನಿಪುಟಿ	೧	೦—೮—೦

ನೋಟ್—**ಈ ಔಷಧಾಲಯದಲ್ಲಿ** ನವ ಪ್ರಕಾರದ ತ ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು ಪಿ

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ **ಬೇಕಾಗಿರುವ ಈ** ಮೇಲ್ಕಂಡ ಗ್ರಂಥವು ವೇ॥ ಪಂ॥ **ಶ್ರೀಕಾಶೀನಾಥಶಾಸ್ತ್ರಿಗಳವರಿಂದ** ವೈದಿಕಸಂಪ್ರದಾಯಾನುಸಾರವಾಗಿ **ವಿರಚಿತವಾಗಿದ್ದು**, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ **ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೇ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ- ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತನಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ** ವಿ ಪಿ ಚಾರ್ಜ್ ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು **ಎಲ್ಲರಿಗೂ ತಿಳಿದ** ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ **ಪ್ರಾಚೀನಾಚಾರ್ಯರು** ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ **ಪ್ರತಿಪಾದಿ**ಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿಣವಿರುವುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು **ಈ ಕೊರತೆಯನ್ನು ದೂರಮಾಡಿ** ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಬೇಕೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩೩ ಪುಟಗಳಷ್ಟಾಗಿವೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ **ತಮ್ಮ ಭವ್ಯವಾದ** ಭಾವಚಿತ್ರವನ್ನು ಸಹ ದಯಪಾಲಿಸಿರುವರು **ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ** ವಿಷಯವನ್ನು ಬೇರೆ ಹೇಳಬೇಕಾಗಿಲ್ಲ **ಇಂಥ ಅಮೂಲ್ಯವಾದ** ವೀರಶೈವಸಿದ್ಧಾಂತಗ್ರಂಥವನ್ನು **ಪ್ರತಿಯೊಬ್ಬ** ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವುದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ ಬೆಲೆ **೮ ರೂಪಾಯಿ** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ** ಗೆ ದೊರೆಯುವುದು ವಿ ಪಿ ಚಾರ್ಜ ೧ ರೂ ೫ ಆಣೆ ಪ್ರತ್ಯೇಕ

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ ಸಾನಂದ ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೧—೬
[illegible] ಮನೋಹರವಾಗಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಸಮ್ಮೇಳನದಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವದು

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನ ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪ ಗಳನ್ನು ಕೊಟ್ಟಿ ರು ಪ್ರಸಿದ್ಧವಾದ ನಶ್ಯದ ಪುಡಿಯಿ ಸ್ವಸ್ಥವಾಗುವ ವ್ಯಾ ಗಳು ಯಾವವ ರೆ —ಪೀನಶಿ, ಒ ತಲೆನೋವು, ತಲೆ ಲ್ಲಿಯ ರೋಗಗಳ ಕಣ್ಣುಗಳಲ್ಲಿ ಉಂಟ ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಸ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಬೆಟ್ಟಿನ ಸಾಧಾ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂ ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾ ವುದು. ಇದನ್ನು ಅನೇಕಪ್ರಭುಗಳು ಉಪಯೋಗಿ ತ್ತಾರೆ ಮಾದರಿ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ. ೨-೮-೦ ವಿ ಪಿ ೬ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[23] ಪೋ. ಬಾ ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) ..	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ) .	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ) ..	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ) ..	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ) .	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ ..	೨ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೬ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ .. .	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ) .	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು .. .	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು(ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ) . .	೧೨ ಆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆ
ಶ್ರೀಕರಭಾಷ್ಯಂ (ಚತುಸ್ಸೂತ್ರಿ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮುದ್ರಿತದ ಫೋಟೋಗಳಿರುವುವು)	೧| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As.
The Philosophical Aspect of Virasaivism (*English*) .	8 As
Speeches by Pandit Shri Kashinatha Shastriji *English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य–संस्कृत)	१ रु
पुरुषसूक्तम् (वीरशैवप्राचीनभाष्योपेतम्) . .	४ आ
नंदिकेश्वरकारिका (संस्कृत)	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಸಕಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ ೧೧ ಅಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಅಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೭ನೇ ಅಕ್ಟೋಬರ್ ೧೯೪೧ [ಸಂಚಿಕೆ ೨೬

॥ ಶ್ರೀ ಜಗದ್ಗುರು ಪಂಚಕಂ ವಂದೇ ॥

ನಮ್ಮ ಬೆಡಗಿನ ಕನ್ನಡ ನಾಡು

॥ ಕಂದ ॥

ರಮಣೀಹೃದಯಂಗಮ ।
ಅಲಂಕಾರಗೇಹಮೊದೆಸೆ ವಿಭವಾ- ॥
ಧರ ಪುಣ್ಯದ ಭವ್ಯಾ
ರಂ ಕರ್ಣಾಟಮಂಡಲಂ ಕಂಗೊಳಿಕುಂ ॥೧॥

॥ ಉ-ಮಾಲಾ ॥

ಗಗುಂಭಿ ಟಿಂಗಿನ ಗಿರಿಗಳನೇರಿ ಕಡಂಗಿ ಘೋಂಕಿಸೀ ।
ವಳಗಾಯ್ದು ಕೆಂಡೊಡೆದ ಕೋಡ್ಗಿ ಕರ್ಗಸಿ ಟಿ ದಂಗೆವಲ್ ॥
ಕನಲ್ಕೆಯುಂ ಕಾಡುಕಿ ರಾಶು ಸುಧಾಂಶುವ
ನುಂಗುವೇಕೆಯೊಳ್ ।
ಕರಪ್ರತಕ್ಷ ರಮುರ್ದೆಂವನೆಭ್ರಾಂತಿಯನುಂಟುಮಾಡುಗುಂ ॥

॥ ಚಂ-ಮಾಲಾ ॥

ತವ ಗೆಯ್ದೊಡಂ ಸಕಲಜೀವಿಗಳಾ ಸಿರಿವಾಗಿ ಸಂತತಂ ।
ಸುಮುವದಿಂದದಂ ತೊರೆದು ಕಾವಧರಾಂಗನೆಯುನ್ನ ಭಾವಮಂ ॥
ಕಂಡು ಕೀತನದಿ ಬೀಸುವದೆಂದೆನೆ ಸಮ್ರಭಾವದಿಂ ।
ನವಿಲೆರೂಗುಕುಂ ತೊನೆಗೆಬಳ್ಕುವಕಾಲಿಯುಗದ್ದೆ ಕಾಣ್ಬುದುಂ ॥೩॥

॥ ಕಂದ ॥

ತಜನಜೀವನೌಷಧ
ಮುತದೇಶವನೀ ಫಣೀಶಪಂಕಜಪೀಠರ್ ॥
ತಿಸಲ್ ಸಹಸ್ರರಸನಾ
ತುಮುರ್ಖಮುಂ ದಳೆವರೆಂಬುದೇನಚ್ಚರಿಯೋ ॥೪॥

॥ ಮ. ವಿ ವೃತ್ತಂ ॥

ವದ್ಭೂಮಿಗಳಿಂ ಗಿರೀಂದ್ರಗಣದಿಂ ಕಾಂತಾರಸಂತಾನದಿಂ ।
ರ್ಗಂಧಂ ತಳೆದೆಲ್ಲಿಯುಂ ಚರಿಪ ಸದ್ವ್ಯಂಗಾಳಿಯಿಂ
ಗಾಳಿಯಿಂ ॥
ತೀವಿರ್ದ ತಡಾಗದಿಂದೆಸೆವ ನಿಚ್ಚಂ ಬೀಚಿಯಿಂದಂಜಿಯಿಂ ।
ಲಕೀರಾಳಿಪಿಕಾಳಿಯಿಂ ಮೃಗಗಳಿಂ ಕರ್ಣಾಟಕಂ ಶೋಭಿಕುಂ ।

॥ ವಚನ ॥

ಇಂತು ಮಲ್ಲದೆಯುಂ ನೋಟಕರನಚ್ಚರಿಪ ರ್ದರಸಪ್ಪಯು ಜಲ ತಾಪ್ಪನೇಕ ಸೃಷ್ಟಿಚಮತ್ಕೃತಿಗಳಿಂ, ನಾನಾತೀರ್ಥಪಾವಿತ್ರ್ಯ ಭಾವದಿಂ, ಶಿವದೇವನ ಜಡೆಮುಡಿಯಗಂಗೆಗೆ ಈರ್ಷ್ಯೆಯಂತಪ್ಪನೆ ಪುಣ್ಯನದನದೀವಿಶೇಷದಿಂ, ಕೃಷ್ಣರಾಜಸಾಗರಪ್ರಭೃತಿ ಕಲಸವಳಮಾದ ಕಟ್ಟಡಗಳಿಂ, ನೋಡಿದೊಡೆ ನಾಸ್ತಿಕ್ಯಮಂ ರಿಪೂಗೆವ ತ್ರಿಕಾಲಪೂಜಾವೈಭವಪ್ರಕಾಶಿತ ಹಂಪೆ ರೇವಣಗಿರಿ ನ್ನೆಲಾಪುರ ಪ್ರಮುಖ ಪವಿತ್ರಕ್ಷೇತ್ರಪ್ರಕರದಿಂ, ಚನ್ನೆಕನ್ನಡ ವಿನಿತಂಬಿನಿಯ ಲಾವಣ್ಯಮಂ ಎಣ್ದೆಸೆಯೊಳುಣ್ಮುವಂತೆಸಗಿಪಕವಿ ಲಪಿತ್ತಾಮುಪ ಹರಿಹರ ಷಡಕ್ಷರಿ ಪೊನ್ನ ರನ್ನ ಪಂಪಾಭಿನವಪಂ ರಿಂ, ಎತ್ತಿಬಂದ ಹಗೆಗಳ ನೆತ್ತಿಯನೊತ್ತಿ ಏಕಚಕ್ರಾಧಿಪತ್ಯಮಂ ಪಾದು ಕನ್ನಡಮ್ಮನ ಕೆಚ್ಚೆದೆಯ ಪ್ರಕಾಶವ ಜಗಕೆಲ್ಲ ತೋರ್ದ ಪ್ರೌಢಪ್ರತಾಪಿ ಪುಲಿಕೇಶಿ ಗೋವಿಂದರಂತಹ ವೀರಪುರುಷರಿಂ, ಧನ ಕವಿಭೂಷಿತದ ಲಿಂಗಾಂಕ ಶರಣಪ್ಪ ಪ್ರಭೃತಿದಾನಶೂರರಿಂ, ಸಾಹಿತ್ಯಮಂಡಲಿಮಂಡನಾಯಮಾನ ಗುರುವರ್ಗಪ್ರಾಣಪ್ರತಿಷ್ಠಾಪಕ ಶ್ರೀ ಕಾಶೀನಾಥಶಾಸ್ತ್ರೀಜಿ ಪ್ರಭೃತಿ ಮಹಾಪುರುಷರಿಂ, ಕಜೀವಜೀವತಕ್ಷ ವಜ್ರವೈಡೂರ್ಯರ್ಗಳಖನಿಗಳಿಂ ನೇತ್ರಪಡೆದು ಧರೆಯೊಳ್ ವಿಜಯವಮರಲೋಕದ ಕೀರ್ತಿಸಂತೆ ನಮ್ಮ ನಾಡು ರಾರಾಜಿಸುತ್ತಿರ್ಪುದು

॥ ಉ-ಮಾಲಾ ॥

ಘೋಂಗಿಯ ಬೀಡು ತ್ಯಾಗಿಯ ತವರ್ಮನೆ ಯೋಗಿಯ ಕಾಮಧೇನುವೀ
ಪೂಗದ ಪಾಳೆ ಬಳ್ಳಿದರ ಸೊಲ್ಲಿನ ಪುಟ್ಟು ಸಿಕಂಗಳೊಕ್ಕೆಯೆ ।
ರಾಗದ ಗೊತ್ತು ಪರ್ವಿಯ ವಿಹಾರ ಸ ವೀರರ ಶೌರ್ಯಕ್ಷೇತ್ರಮ-
ನ್ನಾಗದ ಇಸಿರಿಕ್ಕೆಯೆನೆ ಕನ್ನಡನಾಡಿಕರ್ದೇವ ನೋಡ್ಪುದೇಕೆ? ॥೬॥

ಗಂಗಾಧರಶಿವಾಚಾರ್ಯ, ಮೊಪಟ
ಪಾಠದ ಸಂಸ್ಕೃತಪಾಠಶಾಲಾ, ಕೊಲ್ಲಾಪುರ

ಅಮೆರಿಕಾಕ್ಕೆ ಜರ್ಪಾ ಪತ್ರಿಕೆಯ ಎಚ್ಚರಿಕೆ

ಆತ್ಮರಕ್ಷಣೆಯ ಸಂದರ್ಭದಲ್ಲಿ ಜಪಾನು ಅಮೆರಿಕವನ್ನಾದರೂ ಎದುರಿಸಿ ಹೊಡೆದಾಡುವದು ಅವಶ್ಯಕಬಿದ್ದರೆ ಹಾಗೆ ಮಾಡಲು ಜಪಾನು ಸ್ವಲ್ಪವೂ ಹಿಂದುಮುಂದು ನೋಡುವದಿಲ್ಲ ತನ್ನ ಪ್ರಜೆಗಳನ್ನೂ ಅವರ ಹಿತಗಳನ್ನೂ ರಕ್ಷಿಸಲು ಜಪಾನು ಸಿದ್ಧವಾಗಿದೆ ಬೆದರಿಕೆಯನ್ನಾಗಲಿ, ಬಲವಂತವನ್ನಾಗಲಿ ಜಪಾನು ಸಹಿಸುವದಿಲ್ಲ ಅನ್ಯದೇಶದವರಿಂದ ಸುತ್ತುವರೆಯಲ್ಪಡುವ ನೀತಿಗೆ ಅದು ತಲೆಬಾಗುವದಿಲ್ಲ ಶಾಂತಿಯೇ ಜಪಾನಿನ ನೀತಿ ವಿಶ್ವದಲ್ಲಿ ಶಾಂತಿಸೌಹಾರ್ದಗಳನ್ನೇರ್ಪಡಿಸುವ ಕಟ್ಟಕಡೆ ಸಾಧನವೆಂದರೆ ಜಪಾನು ಜಪಾನು ಈಗ ವಿರುದ್ಧ ಬಲಗಳನ್ನು ಸರಿತೂಗಿಸಬಲ್ಲ ರಾಷ್ಟ್ರವಾಗಿದೆ ಅದು ಮನಸ್ಸುಮಾಡಿದರೆ ಪೆಸಿಫಿಕ್ ಸಾಗರದಲ್ಲಿ ಯುದ್ಧಾಗ್ನಿಯು ಹತ್ತಿಕೊಳ್ಳುತ್ತದೆ" ಎಂಬುದಾಗಿ ಜರ್ಪಾ ಪತ್ರಿಕೆಯೊಂದು ಪ್ರಕಟಿಸಿ ಅಮೆರಿಕವನ್ನು ಎಚ್ಚರಿಸಿದೆ

ಅಮೆರಿಕದ ತಾಟಸ್ಥ್ಯಶಾಸನ ರದ್ದಾಗಬೇಕು

ಅಮೆರಿಕವು ತನ್ನ ತಾಟಸ್ಥ್ಯಶಾಸನವನ್ನು ಕಿತ್ತೊಗೆಯಬೇಕೆಂದು ಶ್ರೀ ವೆಂಡಲ್‌ವಿಲ್ಕಿಯವರೂ ಮತ್ತು ಕಾಂಗ್ರೆಸ್ ಸಭೆಯ 100 ಮಂದಿ ರಿಪಬ್ಲಿಕನರೂ ಪ್ರಾರ್ಥಿಸಿದ್ದಾರೆ ಅಲ್ಲದೆ ಸನೆಟ್‌ಸಭೆಯ ವಿದೇಶವ್ಯವಹಾರ ಸಮಿತಿಯ ಮುಂದೆ ಶ್ರೀ ಕಾರ್ಡೆಲ್‌ಹಲ್‌ರವರು ಹೇಳಿಕೆ ಕೊಡುತ್ತ "ತಾಟಸ್ಥ್ಯಶಾಸನವನ್ನು ರದ್ದುಗೊಳಿಸಬೇಕು ಇಲ್ಲವೇ ಮಾರ್ಪಾಟುಮಾಡಬೇಕು ಇತರ ರಾಷ್ಟ್ರಗಳಿಗಾದ ಗತಿಯಿಂದ ಅಮೆರಿಕವು ಹೇಗಾದರೂ ತಪ್ಪಿಸಿಕೊಳ್ಳಬಹುದೆಂದು ಉದಾಸೀನತೆಯಿಂದ ಕೊಡುವದು ಪರಮ ಘಾತುಕವಾದುದು ಈಗಿನ ಪರಿಸ್ಥಿತಿಯಿಂದ ಅಮೆರಿಕವು ಓಡಿಹೋಗಲು ಸಾಧ್ಯವಿಲ್ಲ ಯುದ್ಧಕ್ಕೆ ಸಿದ್ಧವಾಗಿರುವ ಜನಾಂಗವೊಂದರ ದೃಢಪ್ರಯತ್ನದಿಂದ ಮಾತ್ರ ಈಗಿನ ವಿಷಮ ಸ್ಥಿತಿಯನ್ನು ನಿವಾರಿಸಲು ಸಾಧ್ಯ ಅಟ್ಲಾಂಟಿಕ್ ಸಾಗರದಲ್ಲಿ ಜರ್ಮನರ ಉಪಟಳವು ಹೆಚ್ಚುವದು ನಿಶ್ಚಯ' ಎಂದು ತಿಳಿಸಿದರು

ಜಪಾನಿನಲ್ಲಿ ಸಿದ್ಧತೆ

ಜಪಾನಿನ ರಾಜಧಾನಿಯಾದ ಟೋಕಿಯೋ ನಗರದಲ್ಲಿ ವಿಮಾನ ಮುತ್ತಿಗೆಯ ಏರ್ಪಾಟನ್ನು ಪರಿಶೀಲಿಸುತ್ತಿದ್ದಾರೆ ಜಪಾನ್ ರಾಜಕಾರಣವೇತ್ತರು ಆಡುತ್ತಿರುವ ಸಂದೇಹಾಸ್ಪದವಾದ ಮಾತುಗಳಿಂದ ಜಪಾನಿನ ಉದ್ದೇಶವೇನೆಂಬುದು ಚರ್ಚಾಸ್ಪದ ವಿಷಯವಾಗಿದೆ ಚೀಣಾನಗರಗಳಿಂದ ವಿಮಾನಗಳು ಬಂದು ಜಪಾನಿನ ಮೇಲೆ ಮುತ್ತಿಗೆ ನಡೆಸಬಹುದೆಂಬ ಹೇಳಿಕೆಗೆ, ಜಪಾನು ರಷ್ಯದ ವ್ಲಾಡಿವೋಸ್ಟಾಕ್ ಮುತ್ತುವದಾದರೆ ರಷ್ಯದ ವಿಮಾನಗಳು ಜರ್ಮನಿಯಮೇಲೆ ಮುತ್ತಿಗೆ ನಡೆಸಬಹುದೆಂದು ಅರ್ಥಕೊಡುತ್ತದೆ ವ್ಲಾಡಿವೋಸ್ಟಾಕ್ ಬಂದರಿನ ಸುತ್ತಲೂ ವ್ಯೂಹರಚಿಸಿ ಅಮೆರಿಕದಿಂದ ಸಾಮಾನುಗಳು ರಷ್ಯಕ್ಕೆ ಹೋಗದಂತೆ ಜಪಾನು ತಡೆಯಲಿದೆ ಎಂಬುದು ಈಗ ನಿಶ್ಚಯವಾಗಿದೆ ಇದೇ ಕಾಲದಲ್ಲೇ ಜಪಾನು ಭೂಮಿಯ ಮೇಲೆ ಯುದ್ಧವನ್ನಾರಂಭಿಸುವದೋ ಇಲ್ಲವೋ ಎಂಬುದು ಸಂದೇಹಾಸ್ಪದವಾಗಿದೆ

ಜಪಾನ್ ಸೇನೆಯ ಚಲನೆ

ಜಪಾನು ಮಂಚೂರಿಯಾದಲ್ಲಿ ೩೩ ಡಿವಿಜನ್‌ಗಳಷ್ಟು ಸೇನೆಯನ್ನು ಇಟ್ಟಿದೆ ಇವುಗಳಲ್ಲಿ ೨೬ ಮಂಚೂರಿಯಾ ಪಡೆಗಳಿವೆ ಇನ್ನೂ ೩೮ ಜಪಾನ್ ಪಡೆಗಳನ್ನು ಅಲ್ಲಿಗೆ ಕಳುಹಿಸುತ್ತಿರಲಾಗಿದೆ ಉತ್ತರ ಚೀಣಾದಲ್ಲಿ ಜಪಾನ್ ಸೇನೆಯ ಚಲನವೇನೂ ಇಲ್ಲ ಆದರೆ ಮಂಗೋಲಿಯವನ್ನು ಮಂಚೂರಿಯಾದೊಂದಿಗೆ ಸೇರಿಸಲೋಸುಗ ಒಂದು ರಸ್ತೆಯ ನಿರ್ಮಾಣಕ್ಕಾಗಿ ಜಪಾನರು ಸಾವಿರಾರು ಮಂದಿ ಚೀಣರನ್ನು ಕೆಲಸಕ್ಕೆ ನೇಮಿಸಿಕೊಳ್ಳುತ್ತಿದ್ದಾರೆ ದಕ್ಷಿಣ ಇಂಡೋಚೀನಾದಲ್ಲಿ ೫೦೬೦ ಸಾವಿರ ಜಪಾನ್‌ಸೈನಿಕರನ್ನು ಇಡಲಾಗಿದೆ ಸೈಗಾನಿನಲ್ಲಿ ಈಗ ೧೫೦ ಜಪಾನ್ ವಿಮಾನಗಳಿವೆಯಂತೆ, ಅಲ್ಲಿರುವ ಜಪಾನ್ ಶಸ್ತ್ರಬಂಡಿಗಳನ್ನು ಥೈಲೆಂಡ್ ಗಡಿಗೆ ವರ್ಗಾಯಿಸುತ್ತಿರಲಾಗಿದೆ ಥೈಲೆಂಡ್ ಗಡಿಯಲ್ಲಿ ಮುಳ್ಳು ತಂತಿ ಬೇಲಿಯನ್ನು ರಚಿಸಲಿಕ್ಕಾಗಿ ೧೫೦೦ ಟನ್ ತಂತಿಯನ್ನು ಜಪಾನರು ಸೈಗಾನಿನಲ್ಲಿ ಕೊಂಡರು ಇಂಡೋಚೀಣಾ ಥೈಲೆಂಡ್ ಗಡಿಯಲ್ಲಿ ಜಪಾನ್ ಸೇನೆಗಳ ಚಟುವಟಿಕೆ ಬಲವಾಗಿದೆ ಜಪಾನ್ ಸಂಗ್ರಾಮ ನೌಕೆಗಳನ್ನೂ ಮತ್ತು ಹಡಗುಗಳನ್ನೂ ಮುಖ್ಯವಾದ ಕಡೆಗಳಲ್ಲಿ ಸಂಗ್ರಹಿಸಲಾಗಿದೆ

ಗುರುತತ್ವ ಪ್ರಭಾಕರ

ಲೇಖಕಿ—ಭಾಗೀರಥೀದೇವಿ ಕಟಾವ ಕೊಲ್ಲಾಪುರ

(ಕಳೆದ ವಾರದ ಸಂಚಿಕೆಯಿಂದ ಮುಂದುವರಿದುದು)

ಆದರೆ ಕರ್ಮವು ಬಹಳವಾಗಿರುವ ಭಾಗವು ಕರ್ಮಯೋಗವೆಂದೂ ಚಿತ್ತೈಕಾಗ್ರತೆಯ ಕಡೆಗೆ ಹೆಚ್ಚು ಲಕ್ಷ್ಯವಿರುವ ಭಾಗವು ರಾಜಯೋಗವೆಂದೂ ಪ್ರೇಮಕ್ಕೆ ಪ್ರಾಶಸ್ತ್ಯವಿರುವ ಭಾಗವು ಭಕ್ತಿಯೋಗವೆಂದೂ ವಿಚಾರ ಪ್ರಧಾನವಾದ ಭಾಗವು ಜ್ಞಾನಯೋಗವೆಂದೂ ಹೆಸರುಗೊಂಡಿರುವವು ಈ ಪ್ರತಿಯೊಂದು ಬೇರೆ ಬೇರೆ ಭಾಗಕ್ಕೂ ತನ್ನಲ್ಲಿರುವ ವಿಚಾರ ಭಾಗವನ್ನು ಪರಿಪಕ್ವ ಸ್ಥಿತಿಗೆ ತರುವದೇ ಧ್ಯೇಯವಾಗಿರುವದು ಹೀಗೆ ಹೆಚ್ಚಾಗಿ ಬಂದ ವಿಚಾರವು ದೇಹಾತ್ಮಬುದ್ಧಿಯನ್ನು ಕಳೆಯುವದಕ್ಕೆ ಸಮರ್ಥವಾಗುವದು ಜ್ಞಾನಯೋಗದಲ್ಲಿ ಇಂಥ ವಿಚಾರಕ್ಕೇ ಪ್ರಾಧಾನ್ಯವಿರುವದರಿಂದ ಎಲ್ಲಾ ಯೋಗಗಳಲ್ಲಿ ಅದಕ್ಕೇ ಶ್ರೇಷ್ಠತೆಯು ಒಪ್ಪುವದು ದೇಹಾತ್ಮಬುದ್ಧಿಯನ್ನು ಹೋಗಲಾಡಿಸುವದೇ ಜ್ಞಾನಯೋಗದ ಹೆಚ್ಚುಗಾರಿಕೆ ಪರಮಾತ್ಮನ ಜ್ಞಾನವು ಹೇಗೆ ಆಗುವದೆಂಬ ವಿಚಾರವನ್ನು ಹೇಳುವಾಗ ಕಠವಲ್ಲಿಯು

ಪರಮಾತ್ಮನು ಎಲ್ಲರಲ್ಲಿಯೂ ಅಂತರ್ಯಾಮಿಯಾಗಿ ಯಾರಿಗೂ ಕಾಣಿಸಿಕೊಳ್ಳದೆ ಇದ್ದಾನೆ ಸೂಕ್ಷ್ಮದರ್ಶಿಗಳು ತೀಕ್ಷ್ಣವಾದ ತಮ್ಮ ಸೂಕ್ಷ್ಮಬುದ್ಧಿಯಿಂದ ಅವನನ್ನು ಕಾಣಬಹುದು ಈ ಮಾತಿನಲ್ಲಿ ದೇವನು ಬುದ್ಧಿಗೆ ಪ್ರಾಶಸ್ತ್ಯವನ್ನು ಕೊಟ್ಟಿರುವದು ಜ್ಞಾನಯೋಗದ ಹೆಚ್ಚುಗಾರಿಕೆಯನ್ನು ತೋರಿಸುವದು. ದೇಹಾತ್ಮಬುದ್ಧಿಯ ವಿಚಾರವನ್ನು ಮಾಡುವಂಥ ಸೂಕ್ಷ್ಮತ್ವ ಉಂಟಾಗಬೇಕಾದರೆ ಆ ಬುದ್ಧಿಯು ಶುದ್ಧವಾಗಲೇಬೇಕು ಚಿನ್ನದ ತಂತಿಯನ್ನು ಎಳೆಯಬೇಕಾದರೆ ಆ ಚಿನ್ನದಲ್ಲಿ ಕಲ್ಮಷವಿದ್ದರೆ ಆ ತಂತಿಯು ತಕ್ಕಗೆ ಬರದೆ ನಡುನಡುವೆ ಮುರಿದುಕೊಂಡು ಹೋಗುವದು. ಚೊಕ್ಕ ಚಿನ್ನದ ತಂತಿಯು ಬೇಕಾದಷ್ಟು ದೂರ ನೀಳಿಗೆಯಂತೆ ಬರುವದು. ಇದರಂತೆ ಬುದ್ಧಿಯು ಸೂಕ್ಷ್ಮವಾಗಬೇಕಾದರೆ ಶುದ್ಧಿಯು ಬೇಕು. ಪರಮಾತ್ಮನು ಅಚಿಂತ್ಯಾವ್ಯಕ್ತರೂಪನಾದ್ದರಿಂದ ಬುದ್ಧಿಗೂ ದೂರನೆಂದು ಶ್ರುತಿಯು ಎಷ್ಟೋ ಕಡೆ ಹೇಳಿರುತ್ತದೆ ಅಲ್ಲಿ ಅವನನ್ನು ಬುದ್ಧಿಯಿಂದ ನೋಡಬಹುದೆಂಬ ಮಾತಿಗೆ ಅರ್ಥವೇನೆಂದರೆ ಆತ್ಮಜ್ಞಾನಕ್ಕಿರುವ ದೇಹಾತ್ಮಜ್ಞಾನರೂಪವಾದ ಪ್ರತಿಬಂಧಕವನ್ನು ಬುದ್ಧಿಯಿಂದ ನಿವೃತ್ತಿಸಬಹುದೆಂಬುದಷ್ಟೆ ಪ್ರತಿಬಂಧಕವು ಹೋದರೆ ಆತ್ಮಸ್ಫೂರ್ತಿಯಾಗಿಯೇ ಆಗುವದು ಆಗ ಆತ್ಮದರ್ಶನದ ಶ್ಲಾಘನೆಯನ್ನು ನಾವು ಯಾರಿಗಾದರೂ ಕೊಡುವದೆಂದರೆ ಅದಕ್ಕೆ ಬುದ್ಧಿಯೇ ಪಾತ್ರವಾಗಿರುವದು

ಜ್ಞಾನಯೋಗದ ಹೆಚ್ಚುಗಾರಿಕೆಯು ಬರಿ ನಮ್ಮ ವಿಚಾರದಿಂದಲೇ ಅಲ್ಲ ಪರಮಾತ್ಮನ ಮುಖದಿಂದಲೇ ಎಷ್ಟೋ ಕಡೆ ಉಕ್ತವಾಗಿದೆ

ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ |
ಬಹೂನಾಂ ಜನ್ಮನಾಮಂತೇ ಜ್ಞಾನವಾನ್ಮಾಂಪ್ರಪದ್ಯತೇ ||
ನಹಿ ಜ್ಞಾನೇನ ಸದೃಶಂ ಪವಿತ್ರಮಿಹವಿದ್ಯತೇ |
ಸರ್ವಂಕರ್ಮಾಖಿಲಂಪಾರ್ಥ ಜ್ಞಾನೇ ಪರಿಸಮಾಪ್ಯತೇ ||

ಅಂದರೆ “ಜ್ಞಾನವೆಂಬ ನಾವೆಯಿಂದಲೇ ಎಲ್ಲಾ ಪಾಪಗಳನ್ನೂ ದಾಟುತ್ತ ಅನೇಕ ಜನ್ಮಗಳಾದಮೇಲೆ ಜ್ಞಾನವಂತನು ನನ್ನನ್ನು ಪಡೆಯುತ್ತಾನೆ ಜ್ಞಾನಕ್ಕೆ ಸಮಾನವಾದ ವಸ್ತುವು ಈ ಲೋಕದಲ್ಲಿಲ್ಲ. ಸರ್ವ ಕರ್ಮಗಳೂ ಜ್ಞಾನದಲ್ಲಿ ಕೊನೆಗಾಣುತ್ತವೆ”

“ಇನ್ನು ಈ ವಿಚಾರದಿಂದಲಾದರೂ ಮನುಷ್ಯನು ಪರಾವಲಂಬನೆ ಇಲ್ಲದೆ ತನ್ನ ಉದ್ಧಾರವನ್ನು ತಾನೇ ಮಾಡಿಕೊಳ್ಳಲಾದೀತೆ ?” ಎಂಬ ವಿಚಾರವನ್ನು ಮನಸ್ಸಿಗೆ ತಂದುಕೊಂಡರೆ ಇದಕ್ಕೆ ಉತ್ತರವನ್ನು ಕೊಡುವುದಕ್ಕೆ ಮೊದಲು ಸ್ವಲ್ಪಮಟ್ಟಿಗೆ ಆಕಾಶದ ಕಡೆಗೆ ನೋಡಬೇಕಾಗುವದು ಏಕೆಂದರೆ ತನ್ನ ಅವಿಚಾರದಿಂದ ಆಗಿರುವ ತಪ್ಪುತಿಳುವಳಿಕೆಯು ತನ್ನ ಬುದ್ಧಿಯಲ್ಲಿ ನಡೆಯುವ ವಿಚಾರದಿಂದ ಹೋಗಲೇಬೇಕಾದ್ದರಿಂದ ಪರಾವಲಂಬನೆಯ ಕಾರಣವಿಲ್ಲವೆಂದು ವಿಚಾರದಿಂದ ಸಿದ್ಧವಾಗುವದು. ಆದರೆ ಹಾಗೆ ಸಿದ್ಧವಾದರೂ ಅದನ್ನು ಸರಿಯಾದ ದಾರಿಗೆ ತಿರುಗಿಸಿ ಮುಂದೆ ಸಾಗಿಸಬಲ್ಲಂಥ ಒಬ್ಬ ಅನುಭವಿಯ ನೆರವು ಬೇಕಾಗುವದು. ಅನುಭವಿಗಳಾದವರ ಗ್ರಂಥಗಳು ಬೇಕಾದಷ್ಟು ಇರುವದು ನಿಜ ಅಷ್ಟರಿಂದಲೇ ಪುಣ್ಯಶಾಲಿಯಾದವನು ತನ್ನ ಇಷ್ಟಸಿದ್ಧಿಯನ್ನು ಮಾಡಿಕೊಳ್ಳಬಹುದೆಂಬುದೂ ನಿಜ ಆದರೂ ಸಾಮಾನ್ಯವಾಗಿ ಎಷ್ಟೇ ಪುಣ್ಯಶಾಲಿಯಾದರೂ ಬರೇಗ್ರಂಥದ ಬೆನ್ನು ಹತ್ತಿ ಮುಂದೆ ಸಾಗುವಾಗ ಅವನ ಬುದ್ಧಿಯು ಬೆದರುವದು ಏಕೆಂದರೆ ಅದು ಪ್ರಪಂಚಿಕರಾದಯಾರೂ ತುಳಿಯದೆ ಇರುವ ಹಾದಿ ಆದ್ದರಿಂದ ಆ ಹಾದಿಯಲ್ಲಿ ಎದೆಗೊಟ್ಟು ಮುಂದೆ ಹೋಗುವಾಗ ಎಂಥವರಿಗಾದರೂ ಗಾಬರಿಯಾಗುವದು ಆ ದಾರಿಯಲ್ಲಿ ಹೋಗಿ ಕೊನೆಯನ್ನು ಮುಟ್ಟಿದವರ ಬೆಂಬಲವು ದೊರೆತರೆ ಯಾರಾದರೂ ಧೈರ್ಯದಿಂದ ಮುಂದೆಮುಂದೆ ಹೆಜ್ಜೆಯನ್ನಿಡಬಹುದು. ಆದ್ದರಿಂದಲೇ ಮಹಾಬುದ್ಧಿಶಾಲಿಗಳೂ ಕೂಡ ಒಬ್ಬ ಸದ್ಗುರುವನ್ನಾಶ್ರಯಿಸಿಯೇ ಪಾರಾಗಿದ್ದಾರೆ ಅಂತೇ ಶ್ರೀ ಶಂಕರಾಚಾರ್ಯರು—

ಷಡಂಗಾದಿ ವೇದೋ ಮುಖೇ ಶಾಸ್ತ್ರವಿದ್ಯಾ |
ಕವಿತ್ವಾದಿಗದ್ಯಂ ಸುಪದ್ಯಂ ಕರೋತಿ |
ಗುರೋರಂಘ್ರಿಪದ್ಮೇ ಮನಶ್ಚೇನ್ನಲಗ್ನಂ |
ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಂ ||

ಎಂದು ಗುರುವಿನ ಮಹತ್ವವನ್ನು ವರ್ಣಿಸಿದ್ದಾರೆ ಹಾಗೆಯೇ ಒಬ್ಬ ಹಿಂದೀ ಕವಿಯೂ ಕೂಡ

“ವೇದ ಉಪನಿಷದಿನಗುರುಬಿನ ಲಾಗೇ ಕೌನಸಮಾನ್
ವಾದೇ ರತ ಮುಖದ್ವಾನಸೆ ಅಮೃತಸೇ ಅಧಿಕಾನ್ ||’

ಎಂದರೆ ಉಪ್ಪಾದ ಸಮುದ್ರದ ನೀರು ಮೇಘಮುಖವಾಗಿ ಬಂದರೆ ಹೇಗೆ ರುಚಿಕರವಾಗುವದೋ ಹಾಗೆ ಸಮುದ್ರದೋಪಾದಿಯಲ್ಲಿರುವ ವೇದಾಗಮಶಾಸ್ತ್ರಗಳು ಗುರುಮುಖದಿಂದ ಬಂದರೇ ರುಚಿಕರವಾಗುವದೆಂದೂ ಸಮುದ್ರನೀರಿನಿಂದ ನೀರಡಿಕೆಯ ದಾಹವು ಹೇಗೆ ನಿವಾರಣೆಯಾಗಲಾರದೋ ಹಾಗೆ ಬರೇಶಾಸ್ತ್ರಗಳನ್ನು ಓದಿದರೆ ಜನನಮರಣ ತಾಪವು ನೀಗಿ ಮೋಕ್ಷವು ಸಿಗಲಾರದೆಂದೂ ಸದ್ಬೋಧಿಸಿರುವರು ಆದ್ದರಿಂದ ಎಂಥ ಮಹಿಮಾಶಾಲಿಗಳಾದಾಗ್ಯೂ ಗುರುಗಳನ್ನೇ ಆಶ್ರಯಿಸಿ ಮೋಕ್ಷಗಾಮಿಗಳಾಗಬೇಕಾಗಿದೆ ಗುರುಗಳನ್ನು ಆಶ್ರಯಿಸು ಎಂಬುವುದಕ್ಕೆ ಮೊದಲು ಗುರುಗಳೆಂದರೆ ಯಾರು? ಗುರುಶಬ್ದದ ಅರ್ಥವೇನು? ಎಂದು ವಿಚಾರಮಾಡಬೇಕಾಗಿದೆ. ಆದರೆ ಈ ವಿಚಾರ ನಮ್ಮಂಥ ಅಜ್ಞಾನಿಗಳಿಗೆ ತೋಚುವ ಮಾತಲ್ಲ ಏಕೆಂದರೆ ಸಕಲ ಸಚ್ಛಾಸ್ತ್ರಪಾರಂಗತರಾದ ಪೂಜ್ಯ ಗುರುವರ್ಯರು ತಮ್ಮ ಸದುಪದೇಶವೆಂಬ ಅಮೃತವನ್ನು ಪ್ರಾಶನಮಾಡಿಸಿ ತನ್ಮೂಲಕ ನಮ್ಮ ಪಾಪವನ್ನು ಧ್ವಂಸಮಾಡಿ ಮುಕ್ತರನ್ನಾಗಿ ಮಾಡುವ ಸಲುವಾಗಿ ಕರುವನ್ನು ತಾಯಿಯು ಹೇಗೋ ಹಾಗೆ ನಮ್ಮನ್ನು ಪ್ರೀತಿಸುತ್ತಾ ಇರುವ ಅಚಿಂತ್ಯಮಹಿಮರಾದವರ ಸನ್ನಿಧಿಯನ್ನು ಮರಹೊಕ್ಕು ದಿವ್ಯಜ್ಞಾನವನ್ನು ಅರ್ಜಿಸುವದೇ ನಮ್ಮ ಕರ್ತವ್ಯವಾಗಿರುವಾಗ ಇಂಥ ಅಮೂಲ್ಯ ಪ್ರಶ್ನೆಗಳಿಗೆ ವ್ಯಾಖ್ಯಾನ ಬರೆಯುವದು ಸಾಹಸವಲ್ಲದೆ ಮತ್ತೇನು ?

ವಾಚಕಮಹಾಶಯರೆ !

ಯದ್ಯಪಿ ಯಾವ ಕಾರಣದಿಂದ ಭಯಪಡಬೇಕೋ ಆ ಕಾರಣವನ್ನೇ ಮುಂದಿಟ್ಟುಕೊಂಡು ಮದ್ಗುರುಗಳಾದ ಶ್ರೀಶಿವಯೋಗೀಶ್ವರ ಶ್ರೀ ಮ|| ಬ್ರ|| ಬಾಲತಪಸ್ವಿ ಚನ್ನವೀರಶಿವಾಚಾರ್ಯ ಬೃಹನ್ಮಠ ಹೋಟಗಿ ಈ ಪೂಜ್ಯರ ಸದ್ಬೋಧಪ್ರಭಾವದಿಂದ, ನಿಮ್ಮೆಲ್ಲರಮುಂದೆ ವಿಜ್ಞಾಪಿಸಿಕೊಳ್ಳುವೆನು

“ಗುರುರೇವ ಶಿಷ್ಯಾನ್ ಶಿಕ್ಷತಿ ಸ ಏವಂ ಭಗವದಾಜ್ಞಾಪರಿಪಾಲಕಃ | ಆತ್ಮಾನಂ ಶಿಷ್ಯಂಚ ರಕ್ಷತಿ ನಾನ್ಯಃ || ಎನ್ನುವದರಿಂದ ಶಿಷ್ಯನಿಗೆ ಗುರುಗಳು ತಾವೇ ಕಲಿಸಲು ಪರಮೇಶ್ವರನ ಆಜ್ಞೆಯುಂಟು. ಈ ಆಜ್ಞಾಪಾಲಕರೇ ಗುರುಗಳು ಈ ವಿಧವಾದ ಪರಮಾತ್ಮನ ಆಜ್ಞಾಪರಿಪಾಲನಯುಕ್ತರಾದ ಗುರುಗಳ ವಿಷಯವಾದ ವಿಚಾರವನ್ನು ಬರೆಯಲು ಸಾಧ್ಯವಿಲ್ಲದಿದ್ದರೂ ಆ ಮಹಿಮರ ಕೃಪಾಶೀರ್ವಾದದಿಂದ ಬರೆಯುವೆನು “ಅಪರಿತೋಷಾದ್ವಿದುಷಾಂ ನ ಸಾಧುಮನ್ಯೇ ಪ್ರಯೋಗವಿಜ್ಞಾನಂ”, ಎಂಬ ಕವಿತಿಲಕನ ವಚನದಂತೆ, ವಿದ್ವಾಂಸರುಗಳು ಸರಿಯೆಂದು ತಲೆದೂಗುವವರೆಗೂ ಯಾವ ಜ್ಞಾನವು ಒಳ್ಳೆಯದೆಂದು ಹೇಳುವದಕ್ಕೆ ಸಾಧ್ಯವಿಲ್ಲವಾದ್ದರಿಂದ ನನ್ನ ಅಲ್ಪಮತಿಗೆ ವೇದ್ಯವಾಗಿರುವ ಕೆಲವಂಶಗಳನ್ನೇ ತಮ್ಮೆಲ್ಲರ ಮುಂದೆ ವಿಜ್ಞಾಪಿಸಿಕೊಳ್ಳುವೆನು. ತಪ್ಪುಗಳಿದ್ದರೆ ಲಕ್ಷ್ಯಗೊಡದೆ ಮುಖ್ಯ ವಿಷಯವನ್ನೇ ಗ್ರಹಿಸುವಿರೆಂದು ನಂಬಿರುವೆನು.

ಪ್ರ. (1) ಗುರುಶಬ್ದದ ವ್ಯಾಖ್ಯಾನವೇನು ?

ಉ. (1) ಗುರು ಎಂಬೆರಡಕ್ಷರದ ನೈಜವಾದ ಅರ್ಥವೇನೆಂದರೆ? “ಗು” ಶಬ್ದಸ್ತ್ವಂಧಕಾರಸ್ತು “ರು” ಶಬ್ದಸ್ತನ್ನಿರೋಧಕಃ ಎಂಬ ವ್ಯುತ್ಪತ್ತಿಯಿಂದ ಗುರುವೆಂದರೆ ಅಜ್ಞಾನವೆಂಬ ಕತ್ತಲೆಯನ್ನು ತನ್ನ ಮಂತ್ರೋಪದೇಶವೆಂಬ ದೀಪದಿಂದ ಹೋಗಲಾಡಿಸಿ ಉದ್ಧಾರಮಾಡುವವನೆಂದೂ “ಗೃ” ಗೃಹಣೇ ಎನ್ನುವದರಿಂದ ಸಕಲ ಶಾಸ್ತ್ರಗಳನ್ನೂ ಗ್ರಹಿಸಿಕೊಂಡಿರುವನೆಂದೂ ಅರ್ಥ ಉಂಟು “ಗೃಣಾತಿ ಉಪದಿಶತಿ ಶಾಸ್ತ್ರಾರ್ಥಮಿತಿ ಗುರುಃ” ಯಾವ ತತ್ವವನ್ನು ಬೋಧಿಸುವದರಿಂದ ಶಿಷ್ಯನ ದುಃಖನಿವೃತ್ತಿಯಾಗಿ ಶಿವತತ್ವಪ್ರಾಪ್ತಿಯಾಗುವದೋ ಅಂತಹ ತತ್ವವನ್ನು ಉಪದೇಶಿಸುವನೇ ಗುರುವು

ಪ್ರ (2) ಸದ್ಗುರುಗಳ ಲಕ್ಷಣಗಳೇನು ?

ಉ|| (2) ಗುರುರೇವಪರಬ್ರಹ್ಮ | ಗುರುರೇವಪರಾಗತಿಃ |
ಗುರುರೇವಪರಾವಿದ್ಯಾ | ಗುರುರೇವಪರಂಧನಂ |
ಯಸ್ಮಾತ್ತದುಪದೇಷ್ಟಾಸೌ | ತಸ್ಮಾದ್ಗುರುತರೋ
ಗುರುಃ |

ಅನೇಕ ರೋಗಗಳಿಂದ ನರಳುತ್ತಿರುವ ರೋಗಿಗೆ ತಕ್ಕ ಚಿಕಿತ್ಸೆಯನ್ನು ಮಾಡಿ ಆರೋಗ್ಯಪಡಿಸುವ ಮಹಾವೈದ್ಯನಂತೆ ಭವರೋಗವನ್ನು ನಾಶಮಾಡತಕ್ಕವನಾಗಿರುವನು ಚರಾಚರಾತ್ಮಕವಾದ ಈ ಬ್ರಹ್ಮಾಂಡಮಂಡಲವನ್ನು ತನ್ನಲ್ಲಡಗಿಸಿಕೊಂಡಿರುವ ಪರಶಿವನ ಚರಣದರ್ಶನವನ್ನು ಮಾಡಿಸತಕ್ಕವನಾಗಿರುವನು ತನ್ನ ಕೃಪಾಕಟಾಕ್ಷದಿಂದ ಬಡಬಾಗ್ನಿಗೆ ಬ್ರಹ್ಮಾಂಡವೆಂಬ ಬುದ್ಬುದಗಳಿಂದೊಡಗೂಡಿದ ಅತಿ ವಿಸ್ತಾರವಾದ ಈ ಮಾಯಾ ಸಮುದ್ರವನ್ನು ನುಂಗಿಬಿಡುವ ಅದ್ಭುತಶಕ್ತಿಯುಳ್ಳವನಾಗಿರುವನು ಮತ್ತು ತನ್ನ ಉಪದೇಶವಾಣಿಯೆಂಬ ಸ್ವಚ್ಛವಾದ ಕನ್ನಡಿಯೊಳಗೆ ಮೋಕ್ಷಾಂಗನೆಯು ಆಲಿಂಗನವು ಕೊಡುವಂತೆ ಮಾಡತಕ್ಕವನಾಗಿರುವನು. ಬೇಕಾದಷ್ಟು ವಿಚಾರಗಳನ್ನು ಹೇಳುವದಕ್ಕೆ ಗೊತ್ತಿರುವದರ ಹೊರತು ಗುರುವಿನಲ್ಲಿ ಇನ್ನೇನು ಯೋಗ್ಯತೆ ಇರಬೇಕೆಂಬುದನ್ನು ತಿಳಿದುಕೊಳ್ಳಬೇಕಾದರೆ ಪರಮಾತ್ಮನ “ಉಪದೇಕ್ಷ್ಯಂತಿ ತೇಜ್ಞಾನಂ ಜ್ಞಾನಿನಸ್ತತ್ವದರ್ಶಿನಃ” ಎಂಬ ಮಾತಿನ ಕಡೆ ಲಕ್ಷ್ಯಕೊಡಬೇಕು. ಪರಮಾತ್ಮನು ಸಾಮಾನ್ಯವಾಗಿ “ಜ್ಞಾನಿಗಳು ನಿನಗೆ ಉಪದೇಶವನ್ನು ಮಾಡುವ” ರೆಂದಷ್ಟುಮಾತ್ರ ಹೇಳದೆ ಮೇಲಿನ ವಾಕ್ಯದಲ್ಲಿ ಜ್ಞಾನಿಗಳೆಂಬ ಮಾತಿಗೆ ತತ್ವದರ್ಶಿಗಳೆಂಬ ಒಂದು ವಿಶೇಷಣದಲ್ಲಿ ಬಹಳ ಮಹತ್ವವಿದೆ. ಜ್ಞಾನಿಗಳು ಬಹಳ ಜನರಿರುತ್ತಾರೆ. ತತ್ವದರ್ಶಿಗಳಿರುವದು ಕಡಿಮೆ ವೇದಾಂತ ಗ್ರಂಥಗಳ ಅಧ್ಯಯನವನ್ನು ಮಾಡಿರುವವರೆಲ್ಲಾ ಜ್ಞಾನಿಗಳೇ, ಅವರಿಗೆ ಪರಮಾತ್ಮಸಂಬಂಧವಾದ ಪರೋಕ್ಷ ಜ್ಞಾನವಾಗಿಯೇ ಇರುವದು. ಪಾಪ! ಅವರು ಉಳಿದ ವ್ಯಾವಹಾರಿಕವಿಚಾರಗಳನ್ನೆಲ್ಲಾ ಬಿಟ್ಟು ವೇದಾಂತವನ್ನೇ ತಿಳಿದುಕೊಂಡಿರುವ ಶ್ರಮೆಗೆ ಪ್ರತಿಫಲವಾಗಿ ಅವರಿಗೆ ಜ್ಞಾನಿಗಳೆಂಬ ಬಿರುದಾದರೂ ಬೇಡವೆ? ಅವರು ಜ್ಞಾನಿಗಳು ಆದರೆ ಅವರಿಗೆ ಶಿಷ್ಯರನ್ನುದ್ಧಾರಮಾಡುವ ಸಾಮರ್ಥ್ಯವಿಲ್ಲ. ಆ ಸಾಮರ್ಥ್ಯವು ಬರಬೇಕಾದರೆ ಅವರು ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆದವರಾಗಿರಬೇಕು ಬರೀ ಅಧ್ಯಯನವನ್ನು ಮಾಡಿರುವವರಿಂದಲಾದರೂ ಅನೇಕ ವಿಚಾರಗಳನ್ನು ತಿಳಿದುಕೊಳ್ಳುವದಕ್ಕಾಗುತ್ತದೆ ಅಷ್ಟರಮಟ್ಟಿಗೆ ಅವರನ್ನು ಉಪಯೋಗಮಾಡಿಕೊಳ್ಳಬಹುದು “ಯುಕ್ತಿಯುಕ್ತಂ ವಚೋಗ್ರಾಹ್ಯಂ ಬಾಲಾದಪಿ ಶುಕಾದಪಿ” ಎಂದು ನಮ್ಮಲ್ಲಿ ನೀತಿಶಾಸ್ತ್ರ ಉಂಟು ಯೋಗ್ಯವಾದ ಮಾತನ್ನು ಹುಡುಗನಿಂದಲೂ ಕೊನೆಗೆ ಗಿಣಿಯಿಂದಲೂ ಕೂಡ ಗ್ರಹಿಸತಕ್ಕದ್ದು. ಹೀಗಿರುವಾಗ ಅಧ್ಯಯನವನ್ನು ಮಾಡಿದವರಿಂದ ನಮಗೆ ಅಷ್ಟಿಷ್ಟಾದರೂ ಉಪಯೋಗ ಹೇಗೆ ಹೋದೀತು ? ಇದು ಬ ಉಪಚಾರದಮಾತಲ್ಲ

ಭಾಗವತದಲ್ಲಿ ಒಬ್ಬ ಅವಧೂತರು ಭೂಮಿ, ವಾಯು, ಆಕಾಶ, ಜಲ, ಅಗ್ನಿ, ಚಂದ್ರ, ಸೂರ್ಯ, ಹೆಬ್ಬಾವು ಸಮುದ್ರ, ಜೇನುಹುಳು, ಬೇಡರು, ಪಿಂಗಳೇ ಎಂಬ ವೇಶ್ಯೆ, ಕುರರಪಕ್ಷಿ, ಸಣ್ಣ ಮಗು, ಒಬ್ಬ ಕನ್ಯೆ, ಲೋಹಕಾರ, ಹಾವು, ಜೇಡರಹುಳು, ದುಂಬಿ, ಈ ಇಪ್ಪತ್ತ

ಸ್ತುಗಳಿಂದಲೂ ಉಪದೇಶಗ್ರಹಣವನ್ನು ಮಾಡಿದ್ದಾರೆ ವುಗಳ ವಿವರವೇನೆಂದರೆ—

ಎಷ್ಟು ತುಳಿದರೂ ಭೂಮಿ ಬೇಸರಗೊಂಡು ಓರೆ ಾಗದಿರುವದರಲ್ಲಿ ಕ್ಷಮಾಗುಣವು ಕಾಣುತ್ತದೆ. ಯು ಸುಗಂಧಗಳನ್ನು ಅಂಟಿಸಿಕೊಳ್ಳದಿರುವದನ್ನು ೋಡಿದರೆ ಶೀತೋಷ್ಣಗಳನ್ನು ಸಹನಮಾಡಬೇಕೆಂಬು ತಿಳಿಯುತ್ತದೆ. ಆಕಾಶವು ಎಲ್ಲೆಲ್ಲಿ ವ್ಯಾಪಿಸಿದ್ದರೂ ಾವದಕ್ಕೂ ಅಂಟಿಕೊಳ್ಳದೆ ಇರುವದರಿಂದ ಅದರಂತೆ ರಮಾತ್ಮನಿರುವನೆಂದು ಸೂಚನೆಯಾಗುತ್ತದೆ ನೀರು ್ಛವಾಗಿಯೂ ಮಧುರವಾಗಿಯೂ ಇರುವದನ್ನು ೋಡಿದರೆ ತಾನು ಶುಚಿಯಾಗಿಯೂ ಮಧುರಭಾಷಿ ಾಗಿಯೂ ಇರಬೇಕೆನಿಸುತ್ತದೆ. ಅಗ್ನಿಯು ಭಸ್ಮ ್ಲಿ ಮರೆಸಿಕೊಂಡಿದ್ದು ಹವಿಸ್ಸನ್ನು ಕೊಟ್ಟಾಗ ತನ್ನ ಜಸ್ಸನ್ನು ತೋರುವದರಿಂದ ಯೋಗಿಯು ತನ್ನ ಹಿಮೆಯನ್ನು ಮುಚ್ಚಿಕೊಂಡಿದ್ದು ಅವಶ್ಯ ಸಮಯ ಲ್ಲಿ ಮಾತ್ರ ತೋರಬೇಳಿಸಬಹುದೆಂಬುದನ್ನು ಗ್ರಹಿಸ ೇಕು. ಚಂದ್ರನು ಕಳೆಗಳಿಗೆ ಸಂಭವಿಸುವ ವೃದ್ಧಿಕ್ಷಯ ಚಂದ್ರನಿಗಿಲ್ಲವೆಂಬುದನ್ನು ನೋಡಿದರೆ ವಿಕಾರಗಳೆಲ್ಲ ಹಮಾತ್ರಕ್ಕಲ್ಲದೆ ಆತ್ಮನಿಗಿಲ್ಲವೆಂದು ಊಹಿಸಬಹುದು ರ್ಯನು ಭೂಮಿಗೆ ಮಳೆಯನ್ನು ಕೊಡುವದಕ್ಕಾಗಿ ಗಳಿಂದ ನೀರನ್ನು ಸೆಳೆದುಕೊಳ್ಳುವವನ್ನು ನೋಡಿ ಪರೋಪಕಾರದಲ್ಲಿ ವೃಷ್ಟಿಯುಂಟಾಗುವದು ತನ್ನ ೆ ಬಂದದ್ದನ್ನು ಮಾತ್ರ ತಿನ್ನುವ ಹೆಬ್ಬಾವಿನಿಂದ ೆ ದೊರೆತಷ್ಟರಲ್ಲಿ ತೃಪ್ತನಾಗಬೇಕೆಂಬುದನ್ನು ತಿಳಿ ತಕ್ಕದ್ದು ಎಷ್ಟು ನದಿಗಳು ಬಂದು ಬಿದ್ದರೂ ಉಬ್ಬ ಎಂಥ ಬೇಸಿಗೆಯಲ್ಲಿಯೂ ತಗ್ಗದೆ ಇರುವ ಸಮು ಿಂದ ಸುಖದುಃಖಗಳಲ್ಲಿ ಸಮತ್ವದಿಂದಿರುವದನ್ನು ಯುಬಹುದು. ಜೇನು ನೊಣಗಳು ಕೂಡಿಟ್ಟ ಜೇನು ತರರ ಪಾಲಾಗುವದನ್ನು ನೋಡಿದರೆ ನಾವು ಆಹಾರ ್ಯವನ್ನು ಕೂಡಿಹಾಕಬಾರದೆಂಬ ಬುದ್ಧಿಯು ಹುಟ್ಟ ದು ಜೇನುನೊಣಗಳು ಕೂಡಿಟ್ಟ ಜೇನು ಬೇಡ ೆ ಅನಾಯಾಸವಾಗಿ ಲಭಿಸುವಂತೆ ಗೃಹಸ್ಥರು ಸ ಗ್ರ ಸ ಭೋಜನವು ಯೋಗಿಗೆ ಅನಾಯಾಸವಾಗಿ ದೊರೆ ುವುದೆಂದು ತೋರಬಹುದು ಪಿಂಗಳೆ ಎಂಬ ವೇಶ್ಯೆ ನಿರಾಶಳಾಗಿ ವಿರಕ್ತಳಾದ ಕಥೆಯನ್ನು ಕೇಳಿದರೆ ಯನ್ನು ತೊರೆಯುವುದೇ ಲೇಸೆಂದು ಎದ್ದು ಕಾಣು ದು ಒಂದು ಕುರುರವೆಂಬ ಪಕ್ಷಿಯು ಕೊಕ್ಕಿನಲ್ಲಿ ಾಂಸದ ತುಂಡನ್ನು ಕಚ್ಚಿಕೊಂಡಿರುವವರೆಗೂ ಅದರ ಣದ ಚಿಂತೆಯಿಂದಲೇ ಹೆದರುತ್ತಿದ್ದು ಗಿಡಗವು ಆ ಾಂಸವನ್ನು ಹಾರಿಸಿಕೊಂಡು ಹೋದಮೇಲೆ ನಿರ್ಭ ಯದಿಂದ ಸುಖವಾಗಿರುವದನ್ನು ನೋಡಿದರೆ ಯಾವ ದರೊಂದು ವಸ್ತುವಿನಲ್ಲಿ ಅಭಿಮಾನವಿರುವವರೆಗೂ ುವು ತಪ್ಪದೆಂದು ವ್ಯಕ್ತವಾಗುವದು ಮಗುವಿಗೆ ಶ್ಚಿಂತೆಯಿಂದ ಸುಖವಿರುವದನ್ನು ನೋಡಿ ಯೋಗಿಯು ಶ್ಚಿಂತನಾಗಿರಬೇಕೆಂದು ಹೊಳೆಯಬಹುದು ಒಬ್ಬ ನ್ಯಯು ಬತ್ತವನ್ನು ಕುಟ್ಟುವಾಗ ಬಳೆಗಳ ಸಪ್ಪಳಾಗು ದ್ದರಿಂದ ಅದು ಹೊರಗೆ ತನ್ನನ್ನು ಮದುವೆಮಾಡಿ ಳ್ಳುವದಕ್ಕೆ ಬಂದಿರುವವರಿಗೆ ಕೇಳಿಸಬಾರದೆಂದು ಕೈ ನ ಬಳೆಗಳನ್ನು ಒಡೆದು ಒಂದನ್ನು ಮಾತ್ರ ಉಳಿಸಿ ಂದ ಕಥೆಯಿಂದ ಯೋಗಸಿದ್ಧಿಯು ಪ್ರತಿಬಂಧಕವಿಲ್ಲ ರಬೇಕಾದರೆ ಜನಸಂದಣಿಯು ವಿಶೇಷವಿಲ್ಲದಿರುವದೇ ್ಯವೆಂದು ಗೊತ್ತಾಗುತ್ತದೆ ಲೋಹಗಾರನು ಅಲ ಗೆ ಹದವನ್ನು ಕೊಡುವಾಗ ಪಕ್ಕದಲ್ಲಿ ಹೋಗುತ್ತಿರುವ ಕ್ರವರ್ತಿಯನ್ನಾದರೂ ತಲೆಯೆತ್ತಿ ನೋಡದಿರುವಂತೆ ಯೋಗಿಯು ಪರಮಾತ್ಮನಲ್ಲಿ ನೆಟ್ಟ ಮನಸ್ಸುಳ್ಳವನಾಗ ೇಕೆಂದು ಹೇಳಿದಂತಾಗುವದು ಇರುವೆಗಳು ಕಟ್ಟಿದ ಡಿನಲ್ಲಿ ಹಾವು ಅಡಗಿಕೊಂಡಿರುವಂತೆ ಯೋಗಿಯು ತರರು ಕಟ್ಟಿದ ಮನೆಗಳಲ್ಲಿ ಎಲ್ಲಿಯಾದರೂ ಕಾಲವನ್ನು ಪರಾಯಿತೆಂದು ನಿಶ್ಚಯಿಸಿಕೊಳ್ಳಬಹುದು ಜೇಡರ ಬಲೆಯನ್ನು ಹೊರಗೆಡವಿ ಒಳಗೆ ಸೆಳೆದುಕೊಳ್ಳುವ ದ್ಧತಿಯಿಂದ ಪರಮಾತ್ಮನು ಹೇಗೆಯೇ ತನ್ನಿಂದಲೇ ಗತ್ತನ್ನು ಹೊರಗೆಡವಿ ಆಮೇಲೆ ಅದನ್ನು ತನ್ನೊಳಗೇ ನಿಸಿಕೊಂಡುಬಿಡುವನೆಂದು ಯೋಚಿಸಬಹುದು ಕಣ ದ ಹುಳುವಿನಿಂದ ಕುಕ್ಕಿಸಿಕೊಳ್ಳುತ್ತಿರುವಂಥ ಒಂದು ುವು ಮರಣಭಯದಿಂದ ಆ ಕಣಜವನ್ನೇ ಚಿಂತಿಸುತ್ತ ನಗೆ ತಾನೂ ಆ ಕಣಜದ ರೂಪವನ್ನೇ ಹೊಂದು ಂತೆ ಯೋಗಿಯು ಬ್ರಹ್ಮಧ್ಯಾನದಿಂದ ಬ್ರಹ್ಮಸಾರೂಪ್ಯವನ್ನೇ ಹೊಂದಬಹುದೆಂದು ನಿರ್ಣಯಿಸಬಹುದು ಈ ಎಲ್ಲಾ ಸೌಕರ್ಯಗಳನ್ನೂ ಆ ಅವಧೂತರು ಉಪಯೋಗ ಮಾಡಿಕೊಂಡರು. ಹೀಗೆ ಯಾರಿಂದ ಉಪದೇಶಗ್ರಹಣಮಾಡುವದಕ್ಕೂ ಅಡ್ಡಿ ಇಲ್ಲ. ಆದರೆ ಈ ಬಗೆಯ ವಿಚಾರಗಳ ಸಹಾಯವನ್ನು ಮಾಡುವವರೆಲ್ಲಾ ಸಾಮಾನ್ಯಗುರುಗಳು (ಸಶೇಷ)

ಶ್ರೀ ಜಗದ್ಗುರು ಪಂಚಾಚಾರ್ಯಾಯ ನಮಃ

ಹಿತೋಪದೇಶ

ಲೇ — [illegible]

ಆಯುಷ್ಯ, ಕರ್ಮ, ಧನ, ವಿದ್ಯ, ಮರಣಗಳೆಂಬ ಈ ಐದನ್ನೂ ಪ್ರಾಣಿಯು ಗರ್ಭದಲ್ಲಿರುವಾಗಲೇ ವಿಧಿಯು ನಿಯಮಿಸುವನು ಮಗುವು ತಾಯಿಯ ಗರ್ಭದಿಂದ ಭೂಮಿಯ ಮೇಲೆ ಬಿದ್ದೊಡನೆಯೇ 'ಅಸ್ಮಿತೆ' ಯೆಂಬುದು ಅದನ್ನು ಮೊದಲು ಅಪ್ಪಿಕೊಳ್ಳುವದು. ತದನಂತರ ಜನನಿಯೋ ಪಶ್ಚಾತ್ತಾರೋ ಎತ್ತಿಕೊಳ್ಳುವರು "ಆಗಲಾರದ ಕಾರ್ಯವು ಎಂದಿಗೂ ಆಗುವದೇ ಇಲ್ಲ ಆಗತಕ್ಕದು ಆಗಿಯೇ ತೀರುವದು ಈ ವಾಕ್ಯದ ಅನುಭವವು ಚಿಂತೆಯೆಂಬ ವಿಷವನ್ನು ಇಳಿಸತಕ್ಕ ದಿವ್ಯೌಷಧವು

ಗಜ, ತುರಗ, ರಥ, ಪದಾತಿ ಪರಿವಾರದಿಂದ ಕೂಡಿದ ಎಂತೆಂತಹ ಚಕ್ರವರ್ತಿಗಳ ಪಾಡೇನಾಯಿತು? ಅವರೆಲ್ಲರೂ ಯಾವ ಭೂಮಿಯ ಮೇಲೆ ಮಡಿದರೋ, ಆ ಭೂಮಿಯು ಮಾತ್ರ ಇನ್ನೂ ಸಾಕ್ಷೀಭೂತವಾಗಿರುವುದಿಲ್ಲವೇ? ಈ ದೇಹಕ್ಕೆ ಅಪಾಯವು ತಪ್ಪಿದುದೇ ಇಲ್ಲ ಅದು ಯಾವಾಗಲೂ ಅಪಾಯದೊಂದಿಗೇ ಇರುವದು ಸಂಪತ್ತುಗಳ ಹಿಂದೆಯೇ ವಿಪತ್ತುಗಳೂ ಅಂಟಿಕೊಂಡಿರುವವು ಈ ದೇಹವು ತೂತು ಬಿದ್ದ ಗಡಿಗೆಯೊಳಗಣ ನೀರಿನಂತೆ ಕ್ಷಣಕ್ಷಣಕ್ಕೂ ಕ್ಷೀಣಿಸುತ್ತಿರುವದು ಕಾಣಬರುವುದಿಲ್ಲವೇ? ನೀರಿನಲ್ಲಿರಿಸಿದ ಹಸಿಯ ಮಣ್ಣಿನ ಗಡಿಗೆಯಂತೆ ಬಿರಿಯುತ್ತಿರುವುದನ್ನು ಕಾಣಲಾರೆಯಾ? ಆದ ಕಾರಣ ಇಂತಹ ನಶ್ವರವಾದ ದೇಹಾಭಿಮಾನವನ್ನು ತೊರೆಯಬೇಕಲ್ಲದೆ ಅದರ ಪ್ರೀತಿಗಾಗಿ ಸುಳ್ಳು, ಕಳ್ಳತನ ಮೋಸ ಇತ್ಯಾದಿ ಕಪಟಾಚರಣೆಗಳನ್ನು ಆಚರಿಸುವದು ಮನುಷ್ಯನಾದವನಿಗೆ ತಕ್ಕುದಲ್ಲವು

ಯೌವನ, ಸೌಂದರ್ಯ, ಧನಸಂಪತ್ತು, ಗೃಹಕ್ಷೇತ್ರಗಳು, ಸತೀಸುತರು, ಬಂಧುಗಳು, ಮಿತ್ರತ್ವ, ಅಧಿಕಾರ ಇವುಗಳೆಲ್ಲವೂ ವರ್ಷಾಕಾಲದ ಪ್ರವಾಹದಂತೆ ಶಾಶ್ವತವಲ್ಲ ವಿವೇಕಿಯು ಇವುಗಳಲ್ಲಿ ಮೋಹವನ್ನಿಡಬಾರದು.

ಸಮುದ್ರದಲ್ಲಿ ಅಲೆಗಳ ಮೂಲಕ ಕಸಕಡ್ಡಿಗಳು ಕೂಡಿದ್ದು, ಬಳಿಕ ಕಾಲಾಂತರದಲ್ಲಿ ಬೇರೆ ಬೇರೆಯಾಗಿ ಅಗಲಿ ದೂರವಾಗುವವು ಈ ಜಗತ್ತಿನಲ್ಲಿ ಪ್ರಾಣಿಗಳ ಮೈತ್ರಿಯೂ ಬಾಂಧವ್ಯವೂ ಇಂತಹುದೇ ಸರಿ.

ದಾರಿಯನ್ನು ನಡೆಯುವವನು ತನ್ನ ಬಳಲಿಕೆಯನ್ನು ಹೋಗಲಾಡಿಸುವ ನಿಮಿತ್ತವಾಗಿ ಮರದ ನೆರಳಿನಲ್ಲಿ ಕೆಲಕಾಲ ವಿಶ್ರಮಿಸಿ, ದಣಿವು ಕಡಿಮೆಯಾದ ಕೂಡಲೇ ಮುಂದಣ ಮಾರ್ಗವನ್ನನುಸರಣ ಮಾಡುವದು ಸಹಜ ಜೀವಿಗಳು ಒಟ್ಟುಗೂಡುವದೂ ಇಂತೆಯೇ ಸರಿ

ಮರಣ ದಂಡನೆಗೆ ಗುರಿಯಾದವನನ್ನು ಕೊಲೆಬಣಕ್ಕೆ ಕರೆದೊಯ್ಯುವಾಗ ಅವನ ಮೃತ್ಯುವು ಅಡಿಗಡಿಗೆ ಎಂತು ಹತ್ತಿರಕ್ಕೆ ಬರುವುದೋ ಅಂತೆಯೇ ದಿನದಿನಕ್ಕೂ ಪ್ರಾಣಿಗಳಿಗೆ ಮರಣವು ಸಮೀಪಿಸುತ್ತಿರುವದು

ಈ ದೇಹವು ಪೃಥಿವ್ಯಾದಿ ಪಂಚಭೂತಗಳಿಂದ ನಿರ್ಮಿತವಾಗಿರುವದು. ಅದರೊಳಗಣ ಜೀವಾತ್ಮನೆಂಬ ಪಕ್ಷಿಯು ಹೊರಹೊರಟ ಬಳಿಕ ಆ ಭೂತಗಳ ಅಂಶಗಳು ಆ ಭೂತಗಳಲ್ಲಿಯೇ ಸೇರುವವು ಈ ದೇಹವೂ ಶಾಶ್ವತವಲ್ಲ. ದೇಹಾಭಿಮಾನವು ಬಂಧಕ್ಕೆ ಕಾರಣವು ಇದರ ನಾಶಕ್ಕಾಗಿ ಮರುಗಿ ಫಲವಿಲ್ಲ

ಜೀವಿಯು ತನ್ನ ಮನಸ್ಸಿಗೆ ಪ್ರೀತಿಜನಕವೆಂಬ ಭಾವನೆಯಿಂದ ಎಷ್ಟೆಷ್ಟು ಬಗೆಯ ಸಂಬಂಧಗಳನ್ನು ಬಳೆಯಿಸಿದರೂ ಯಾವುದೂ ಶಾಶ್ವತವಾಗಿ ನಿಲ್ಲತಕ್ಕದ್ದಲ್ಲ ಮುಖ್ಯವಾಗಿ ತನ್ನ ಪ್ರೀತಿಯ ದೇಹದೊಂದಿಗೆ ಕೂಡಿಕೊಂಡಿರುವದೂ ನೆಚ್ಚಿಕೆಯಿಲ್ಲ.

ಸ್ನೇಹವು ಅಗಲುವಿಕೆಯನ್ನೇ ಸೂಚಿಸುವದು. ಹುಟ್ಟು ದಿಟವಾಗಿಯೂ ಮರಣವನ್ನೇ ಒಡಗೊಂಡಿರುವದು. ಅಪಥ್ಯವೆನಿಸಿದ ಆಹಾರವನ್ನು ತಿನ್ನುವಾಗ ಅತಿ ಹಿತವಾಗಿ ತೋರಿದರೂ, ಕಾಲಾಂತರದಲ್ಲಿ ಅದರಿಂದ ರೋಗವು ಪ್ರಬಲಿಸದೆ ಇರಲಾರದು. ಪ್ರಿಯಸಮಾಗಮವೂ ಇದರಂತೆಯೇ. ಮೊದಮೊದಲು ಬಹು ಮನೋಹರವಾಗಿ ಕಂಡರೂ ಎಂದಾದರೊಂದು ದಿನ ಅಗಲುವಿಕೆಯಿಂದ ದುಃಖವನ್ನು ಒಡ್ಡದಿರದು ಆದ್ದರಿಂದ ಉಪೇಕ್ಷೆಯಿಂದಿರುವುದೇ ಮೇಲು.

ನದಿಯ ಪ್ರವಾಹವು ಹರಿಯುತ್ತ ಹರಿಯುತ್ತ ಮುಂದೆ ಮುಂದೆ ಸಾಗುತ್ತಿರುವುದೇ ಹೊರತು ಎಂದಿಗೂ ಹಿಂದಿರುಗುವುದಿಲ್ಲ. ಅಂತೆಯೇ ಮನುಷ್ಯನ ಆಯುಷ್ಯವು ಹಗಲು ರಾತ್ರಿಗಳ ಮೂಲಕ ಕಳೆಯುತ್ತಲೇ ಇರುವದು

'ಕಾಕತಾಲೀಯನ್ಯಾಯ' ದಂತೆ ವಿಧಿಯು ತಾನಾಗಿ ಕಂಡುಬಂದರೂ ಅದೃಷ್ಟವು ಅದನ್ನು ತೆಗೆದಿರಿಸಿ ಜೋಪಾನಪಡಿಸಲಾರದು ಆ ವಿಷಯದಲ್ಲಿ ಪುರುಷ ಪ್ರಯತ್ನವು ಬೇಕಾಗುವದು ಕಾರ್ಯಗಳು ಪುರುಷ ಪ್ರಯತ್ನದಿಂದಲೇ ಕೈಗೂಡುವುವಲ್ಲದೆ ಬರಿಯ ಬಯಕೆಗಳಿಂದ ಸಿದ್ಧಿಸಲಾರವು ಉದ್ಯೋಗವಿಲ್ಲದೆಯೇ ಎಳ್ಳಿನಿಂದ ಎಣ್ಣೆಯನ್ನು ಪಡೆಯಲಾಗುವುದೇ? ಸಿಂಹವು ಮಲಗಿ ನಿದ್ರಿಸುತ್ತಿರುವಾಗ ಮೃಗಗಳು ತಾವಾಗಿಯೇ ಅದರ ಬಾಯೊಳಗೆ ಹೊಗಲಾರವು ಬಾಲಕರು ಅಡಿಗಡಿಗೂ ಹೆತ್ತವರ ಶಿಕ್ಷಣದಿಂದಲೇ ಗುಣವಂತರಾಗಬೇಕು ಪಂಡಿತರ ಉದರದಿಂದ ಜನಿಸಿದ ಮಾತ್ರಕ್ಕೇನೇ ಮಕ್ಕಳು ಪಂಡಿತರಾಗಲಾರರು ಕುಂಬಾರನು ಮಣ್ಣುಮುದ್ದೆಯಿಂದ ತನಗೆ ಬೇಕಾದ ಗಡಿಗೆ, ಕುಡಿಕೆ, ಮುಡಿಕೆಗಳನ್ನು ಹೇಗೆ ನಿರ್ಮಿಸುವನೋ, ಹಾಗೆಯೇ ಮನುಷ್ಯನು ತಾನು ಮಾಡಿದ ಕರ್ಮಕ್ಕೆ ತಕ್ಕ ಫಲವನ್ನೇ ಪಡೆಯುವನು ಹೊಲದಲ್ಲಿ ರಾಗಿಯನ್ನು ಬಿತ್ತಿ ಗೋಧಿಯನ್ನು ಬಯಸಿದರೆ ಆದೀತೆ?

ಈ ಸಂಸಾರದಲ್ಲಿ ಸತ್ಪುರುಷರ ಸಹವಾಸವು ವಿಶೇಷ ಸುಖವನ್ನುಂಟುಮಾಡುವದೆಂಬುದು ದಿಟ ಆದರೆ ಇಂತಹ ಸಜ್ಜನರ ಸಂಸರ್ಗವು ಎಂದಿಗಾದರೂ ತಪ್ಪಿಹೋಗುವದು ಆದಕಾರಣ ಈ ಜಗತ್ತಿನಲ್ಲಿ ಯಾವುದೂ ಸ್ಥಿರವಲ್ಲ ದುಃಖಗಳಲ್ಲಿ ಇದು ಒಂದನೆಯದೆಂದು ಭಾವಿಸಬೇಕು. ಈ ಕಾರಣದಿಂದಲೇ ಸಜ್ಜನರು ಯಾವ ಸಂಗವನ್ನೂ ಬಯಸುವದಿಲ್ಲ. ಸಜ್ಜನರ ಅಗಲುವಿಕೆಯಿಂದ ಜರ್ಜರಿತವಾದ ಮನಸ್ಸನ್ನು ಪುನಃ ಒಟ್ಟುಗೂಡಿಸುವುದಕ್ಕೆ ತಕ್ಕುದಾದ ಔಷಧವು ಈ ಲೋಕದಲ್ಲಿಯೇ ಇಲ್ಲ ಜನಕ–ಸಗರ–ನಳ–ಹರಿಶ್ಚಂದ್ರ ಚಕ್ರವರ್ತಿಗಳೇ ಮೊದಲಾದವರು. ತಮ್ಮ ಉತ್ತಮ ಕೃತಿಗಳಿಂದ ಭೂಮಂಡಲದಲ್ಲಿ ಹೆಸರುವಾಸಿಯನ್ನು ಪಡೆದಿರುವರಷ್ಟೆ! ಈಗ ಅವರೇ ಆಗಲಿ. ಅವರ ಸತ್ಕೃತಿಗಳೇ ಆಗಲಿ ಯಾವುವೂ ಇಲ್ಲವಷ್ಟೆ!

ಸಮುದ್ರದಲ್ಲಿ ಧುಮುಕಿ ಮುಳುಗಿದರೂ, ಪರ್ವತಾಗ್ರದಿಂದ ಉರುಳಿಬಿದ್ದರೂ. ತಕ್ಷಕರಾಜನೇ ಕಚ್ಚಿದರೂ, ಬೆಂಕಿಯರಾಶಿಯಲ್ಲಿ ಹೊರಳಾಡಿದರೂ, ನೂರಾರು ಬಾಣಗಳು ನಾಟಿದರೂ ಆಯುಃಪರಿಮಿತಿಯು ಮುಗಿಯದಿದ್ದರೆ ಪ್ರಾಣಿಯು ಸಾಯಲಾರನು ಆಯುಶ್ಶೇಷವು ಮರ್ಮಸ್ಥಾನಗಳನ್ನು ಕಾಪಾಡುವದು ಆಯುಃಪರಿಮಿತಿಯು ತೀರಿತೆಂದರೆ ಹುಲ್ಲಿನ ತುದಿ ತಾಗಿದರೂ ಸಾಯದೆ ಬದುಕಲಾರನು ಏಕೆಂದರೆ, ದೈವಬಲವು ಇದ್ದಿತೆಂದರೆ ನಾವು ಎಷ್ಟೇ ಅಶ್ರದ್ಧೆ ತೋರಿಸಿದರೂ, ಕಾಪಾಡದಿದ್ದರೂ, ಅಡವಿಯಲ್ಲಿ ಬಿಟ್ಟರೂ ಬದುಕಿಕೊಳ್ಳುವರು ದೈವಬಲವು ಕಡಿಮೆಯಾದಾಗ ಬಗೆಬಗೆಯಿಂದ ಕಾಪಾಡಿದರೂ, ಮನೆಯಲ್ಲಿಯೇ ನಾನಾರೀತಿಯಿಂದ ಉಪಚರಿಸಿದರೂ ಬದುಕುವದಿಲ್ಲ ಆಯುಶ್ಶೇಷವಿಲ್ಲದವನ ಹತ್ತಿರಕ್ಕೆ ಸಾಕ್ಷಾತ್ ಧನ್ವಂತರಿಯೇ ವೈದ್ಯನಾಗಿ ಬಂದರೂ ಬದುಕಿಸಲಾರನು!

ಮೃತ್ಯುವು ಮಹಾಭಯಂಕರವಾದುದು. ಆದರೆ ಹಿಡಿತದಿಂದ ತಪ್ಪಿಸಿಕೊಳ್ಳುವದು ಯಾರಿಂದಲೂ ಸಾಧ್ಯವಿಲ್ಲ ಮೃತ್ಯುವನ್ನು ಒಮ್ಮೆ ಸ್ಮರಿಸಿದರೆ ಸಾಕು. ವಿವೇಕಿಯಾದವನು, ಮಳೆಯ ನೀರಿನಿಂದ ಬಿಗಿತಪ್ಪಿ, ಸಡಿಲಾದ ತೊಗಲಿನ ಕಟ್ಟಿಗಂತೆ ಒಡನೆಯೇ ಎದೆಗುಂದಿ, ತನ್ನ ಪ್ರಯತ್ನಗಳನ್ನೆಲ್ಲಾ ತಾನೇ ಬಿಡುವನು ಜಂತುಸಮುದಾಯವು ಜನನಿಯ ಗರ್ಭಕೋಶದಲ್ಲಿ ಬಿದ್ದ ಮೊದಲ್ಗೊಂಡು ನಿಮಿಷ ನಿಮಿಷದಲ್ಲಿಯೂ ಮೃತ್ಯುವಿನ ಬಳಿಗೆ

[೭ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೧ನೆಯ ಅಕ್ಟೋಬರ್ ತಾ|| ೨೭ನೇ ಸೋಮವಾರ

ಸ್ವಧರ್ಮಾಚರಣೆಯ ಶ್ರೇಷ್ಠತೆ

ಈ ಕಾಲದಲ್ಲಿ ಪ್ರಾಯಶಃ ಎಲ್ಲಿ ನೋಡಿದರೂ ಜನಗಳು ತಮ್ಮ ತಮ್ಮ ಜೀವನೋಪಾಯವನ್ನೂ ಧನಾರ್ಜನೆಯನ್ನೂ ಖ್ಯಾತಿಯನ್ನೂ ಪಡೆಯುವುದರಲ್ಲಿ ನಿರತರಾಗಿದ್ದಾರೆಯೇ ಹೊರತು ಆತ್ಮೋದ್ಧಾರಸಾಧನವಾದ ಧರ್ಮಾನುಷ್ಠಾನಗಳಲ್ಲಿ ನಿರತರಾಗಿರುವುದಿಲ್ಲ. ಮುಂದೆ ಏನಾದರೂ ಆಗಲಿ, ಇರುವ ವರೆಗೆ ಮಾತ್ರ ಪ್ರತಿಷ್ಠಾವಂತರಾಗಿಯೂ ದ್ರವ್ಯವಂತರಾಗಿಯೂ ಸ್ವೇಚ್ಛಾವಿಹಾರಿಗಳಾಗಿಯೂ ಇಷ್ಟರಿ ಸಾಕೆಂಬ ಭಾವನೆಯು ಜನಗಳಲ್ಲಿ ಬೇರೂರುತ್ತ ಬಂದಿರುತ್ತದೆ. ಕೆಲವರು ತಮ್ಮ ಧನಾರ್ಜನೆಗೂ, ಪ್ರತಿಷ್ಠೆಗೂ, ಸ್ವೇಚ್ಛಾವಿಹಾರಕ್ಕೂ ಯಾವುದು ಅಡ್ಡಿಮಾಡುವುದೋ ಅದೆಲ್ಲವೂ ಅಧರ್ಮವೆಂದೂ, ಯಾವುದು ಅನುಕೂಲವಾಗಿರುವುದೋ ಅದೆಲ್ಲವೂ ಧರ್ಮವೆಂದೂ ಹೇಳಲು ಹಿಂಜರಿಯುವುದಿಲ್ಲ. ಆದರೆ ಮಾನವನಿಗೆ ಪ್ರತಿಷ್ಠೆ ಧನಾರ್ಜನೆ ಸ್ವೇಚ್ಛಾವಿಹಾರ ಮುಂತಾದವುಗಳೇ ಮುಖ್ಯಗುಣಗಳಲ್ಲ. ಇವು ಪ್ರತಿಯೊಬ್ಬ ಮನುಷ್ಯನಿಗೂ ತಾನಾಗಿ ಹುಟ್ಟುವ ಗುಣಗಳಲ್ಲದೆ ಕಲಿಯಬೇಕಾದ ಗುಣಗಳಲ್ಲವು. ನೀರಿಗೆ ಹಳ್ಳವಿದ್ದ ಕಡೆ ಹರಿಯುವುದು ಹೇಗೆ ಸ್ವಭಾವವಾಗಿರುವುದೋ ಹಾಗೆಯೇ ವಿಷಯಲಂಪಟನಾದ ಮಾನವನ ಮನಸ್ಸೂ ಸಹ ಧನಾರ್ಜನ ಮಾಡಬೇಕು, ಖ್ಯಾತನಾಗಬೇಕು, ಸ್ವತಂತ್ರತೆಯನ್ನು ಗಳಿಸಬೇಕೆಂದು ಬಯಸಲೇ ಬಯಸುತ್ತದೆ. ಅನಾದಿಯಾಗಿ ಇಲ್ಲಿಯವರೆಗೂ ಈ ಸ್ವಭಾವವು ಇದ್ದೇ ಇರುತ್ತದೆ. ಇಷ್ಟರಲ್ಲಿಯೇ ತೃಪ್ತನಾಗಿದ್ದರೆ ಮಾನವನ ಕರ್ತವ್ಯವು ಪೂರ್ಣವಾದಂತಾಗುವುದಿಲ್ಲ. ಮಾನವನು ಖ್ಯಾತಿಯನ್ನೇ ಪಡೆಯಲಿ, ಧನವನ್ನೇ ಗಳಿಸಲಿ, ಯಾವುದನ್ನು ಮಾಡಿದರೂ ಧರ್ಮಮಾರ್ಗವನ್ನು ಬಿಟ್ಟು ನಡೆಯಬಾರದು. ಧರ್ಮಮಾರ್ಗವನ್ನು ಬಿಟ್ಟು ಧನಾರ್ಜನೆ ಮಾಡುವವರನ್ನೂ, ಪ್ರತಿಷ್ಠಾಕಾಮಿಗಳನ್ನೂ ರಾಕ್ಷಸಾಂಶಸಂಭೂತರೆಂದೇ ಹೇಳಬೇಕಾಗುವದು. ಹಿಂದೆ ರಾವಣಾದಿ ಮಹಾ ಮಹಾ ರಾಕ್ಷಸರೂ ಸಹ ಪ್ರತಿಷ್ಠಾವಂತರಾಗಿಯೂ ಅಖಂಡೈಶ್ವರ್ಯವಂತರಾಗಿಯೂ ಸ್ವೇಚ್ಛಾವಿಹಾರಿಗಳಾಗಿಯೂ ಇದ್ದರು. ಆದರೆ ಅವರೆಲ್ಲರೂ ನಿಂದ್ಯರಾಗಿರುವುದರಿಂದ ದುರಾತ್ಮರೆನಿಸಿಕೊಳ್ಳುತ್ತಾರೆ. ರಾಮಾದಿಗಳು ಬಹುಕಾಲದ ವರೆಗೆ ಹೊಟ್ಟೆಗೆ ಅನ್ನಾಹಾರಾದಿಗಳಿಲ್ಲದೆ ಕಾಡಿನಲ್ಲಿ ಅಲೆಯುತ್ತಿದ್ದರೂ ಮಹಾತ್ಮರೆನಿಸಿ ಸ್ತುತ್ಯರಾಗಿದ್ದಾರೆ. ಹೀಗೆ ರಾವಣಾದಿ ರಾಕ್ಷಸರೂ, ರಾಮಾದಿಮಹಾರಾಜರೂ ಪ್ರತಿಷ್ಠೆ ಅಖಂಡೈಶ್ವರ್ಯ ಸಾಮ್ರಾಜ್ಯ ಸ್ವೇಚ್ಛಾವಿಹಾರಿತ್ವಾದಿ ಗುಣಗಳಲ್ಲಿ ಸಮಾನರಾಗಿದ್ದರೂ ರಾವಣಾದಿಗಳು ಯಾವಾಗಲೂ ಅಧರ್ಮಮಾರ್ಗದಲ್ಲಿಯೇ ಇದ್ದುದರಿಂದ ಅಪವಿತ್ರಾತ್ಮರೆಂದೂ, ರಾಮಾದಿಗಳು ಕಷ್ಟದಶೆಯಲ್ಲೂ ಸಹ ಧರ್ಮಮಾರ್ಗವನ್ನು ಬಿಡದೆ ಇದ್ದುದರಿಂದ ಪವಿತ್ರಾತ್ಮರೆಂದೂ ಪ್ರಸಿದ್ಧರಾಗಿದ್ದಾರೆ. ಇದರಿಂದ ಮನುಷ್ಯನು ಎಷ್ಟು ಖ್ಯಾತಿಯನ್ನು ಪಡೆಯಬೇಕಾಗಿದ್ದರೂ, ದ್ರವ್ಯಾರ್ಜನೆ ಮಾಡಬೇಕಾಗಿದ್ದರೂ, ಸ್ವಾತಂತ್ರ್ಯವನ್ನು ಗಳಿಸಬೇಕಾಗಿದ್ದರೂ ಧರ್ಮಮಾರ್ಗವನ್ನತಿಕ್ರಮಿಸಬಾರದೆಂದು ಸ್ಪಷ್ಟವಾಗುತ್ತದೆ.

ಈಗಿನ ನೂತನ ವಾತಾವರಣದಲ್ಲಿ ಧರ್ಮವೆಂಬುದು ಗೋಸುಂಬೆಯಂತೆ ನಾನಾರೂಪವನ್ನು ಹೊಂದುತ್ತ ಬರುತ್ತಲಿದೆ. ಹೀಗೆ ನಾನಾರೂಪವನ್ನು ಹೊಂದುವುದಕ್ಕೆ ಜನಗಳ ಚಾಂಚಲ್ಯವೃತ್ತಿಯೇ ಕಾರಣವಾಗಿರುವದು. ಜಗದಾದಿಯಲ್ಲಿ ಪರಮೇಶ್ವರನು ಜಗತ್ತನ್ನು ಸೃಷ್ಟಿಸಿ ಅದರ ಉದ್ಧಾರಕ್ಕಾಗಿ ವೇದಗಳನ್ನು ಸೃಷ್ಟಿಸಿದನು. ವೇದಗಳಲ್ಲಿ ಯಾವುದು ಧರ್ಮವೆಂದು ಹೇಳಲ್ಪಟ್ಟಿದೆಯೋ ಅದೇ ಧರ್ಮವೆಂದೂ, ಯಾವುದು ಅಧರ್ಮವೆಂದು ಹೇಳಲ್ಪಟ್ಟಿದೆಯೋ ಅದೇ ಅಧರ್ಮವೆಂದೂ ಪೂರ್ವಾಚಾರ್ಯರಾಗಲಿ, ಮಹರ್ಷಿಗಳಾಗಲಿ ಎಲ್ಲರೂ "ವೇದೇನ ಪ್ರಯೋಜನಮುದ್ದಿಶ್ಯ ವಿಧೀಯಮಾನೋ ಧರ್ಮಃ" ಎಂದು ಏಕಮುಖದಿಂದ ಒಪ್ಪಿಕೊಂಡಿರುತ್ತಾರೆ. ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನನ್ನು ಸಂಬೋಧಿಸಿ—

ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ ।
ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ ॥

ಯಾವ ಕಾರ್ಯವನ್ನು ಮಾಡಬೇಕು, ಯಾವ ಕಾರ್ಯವನ್ನು ಮಾಡಬಾರದು ಎಂಬ ವ್ಯವಸ್ಥೆಯನ್ನು ವೇದಾಧಾರದಿಂದಲೇ ಮಾಡಿಕೊಳ್ಳಬೇಕು. ಯಾವ ಕರ್ಮವು ವೇದದಲ್ಲಿ ವಿಧಿಸಲ್ಪಟ್ಟಿರುತ್ತದೆಯೋ ಅಂಥ ಕರ್ಮವನ್ನೇ ಮಾಡಬೇಕೆಂದೂ, ವೇದದಲ್ಲಿ ವಿಧಿಸಲ್ಪಡದಿರುವುದನ್ನು ಮಾಡಬಾರದೆಂದೂ ಬೋಧಿಸಿರುತ್ತಾನೆ. ಆದುದರಿಂದ ಧರ್ಮಾಧರ್ಮನಿರ್ಣಯವು ವೇದದಿಂದಲೂ ವೇದಾನುಸಾರಿಗಳಾದ ಸ್ಮೃತ್ಯಾದಿಗಳಿಂದಲೂ ಆಗಬೇಕಾಗಿದೆಯಲ್ಲದೆ ಕಾಲಾನುಗುಣವಾಗಿ ತಮ್ಮ ಮನಸ್ಸಿಗೆ ಬಂದಹಾಗೆಲ್ಲ ಧರ್ಮನಿರ್ಣಯವನ್ನು ಮಾಡಿಕೊಳ್ಳಬಾರದು.

ಪ್ರಕೃತದಲ್ಲಿ ಅನೇಕರು ತಮ್ಮ ಕಾರ್ಯಸಾಧನೆಗಾಗಿ ಅಸಂಬದ್ಧ ಕಾರ್ಯಕಾರಣಗಳನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು, ಧರ್ಮನಿರ್ಣಯ ಮಾಡಲು ಪ್ರಾರಂಭಿಸುತ್ತಾರೆ. ಇದರಿಂದ ಧಾರ್ಮಿಕಜನಗಳಿಗೂ ಇವರಿಗೂ ಯಾದವೀಕಲಹಕ್ಕೆ ಪ್ರಾರಂಭವಾಗುವುದು.

ಏಕೆಂದರೆ ವೇದಶಾಸ್ತ್ರಪುರಾಣಗಳನ್ನು ತಿಳಿದ ಪ್ರಾಚೀನಸಂಪ್ರದಾಯದ ಗುರುಜನಗಳು ಪ್ರಾಚೀನಕಾಲದಿಂದ ರೂಢವಾಗಿ ಬಂದ ಧರ್ಮಾಧರ್ಮಗಳ ನಿಬಂಧನೆಯ ಮೂಲೋತ್ಪಾಟನೆಗೆ ಒಪ್ಪುವದಿಲ್ಲ. ಧರ್ಮೋತ್ಪಾಟನೆಮಾಡುವುದೂ, ಪ್ರಾಣಬಿಡುವುದೂ ಎರಡೂ ಒಂದೇ ಎಂದು ಅವರು ತಿಳಿಯುತ್ತಾರೆ. ಸ್ವಾತಂತ್ರ್ಯಸಾಧನೆಯಾಗಲಿ ದೇಶಾಭ್ಯುದಯವಾಗಲಿ, ಸ್ವಾಭ್ಯುದಯವಾಗಲಿ ಎಲ್ಲವನ್ನೂ ಸನಾತನಧರ್ಮದವರು ಬಹಳ ಕುಶಲದಿಂದ ಸಾಧಿಸಲು ಅಪೇಕ್ಷಿಸುತ್ತಾರೆ. ಆದರೆ ಸನಾತನಧರ್ಮಕ್ಕೆ ವಿರೋಧವಾದ ಸ್ವಾತಂತ್ರ್ಯವನ್ನಾಗಲಿ ದೇಶಾಭ್ಯುದಯವನ್ನಾಗಲಿ ಅಪೇಕ್ಷಿಸುವದಿಲ್ಲ. ಧರ್ಮವೇ ಹಾಳಾದಮೇಲೆ ಉಳಿದ ಸ್ವಾತಂತ್ರ್ಯಾದಿಗಳೆಲ್ಲ ಆತ್ಮವಿಲ್ಲದ ಶರೀರಕ್ಕೆ (ಹೆಣಕ್ಕೆ) ಅಲಂಕಾರಮಾಡಿದಂತೆ ವ್ಯರ್ಥವಾಗುವುವು. ಗುರುದೇವತಾಭಕ್ತಿ ಮೊದಲಾದ ಆಸ್ತಿಕ್ಯಧರ್ಮಗಳಿಂದೊಡಗೂಡಿದ ಐಹಿಕಸೌಖ್ಯವನ್ನನುಭವಿಸುತ್ತಿರುವುದೇ ಸನಾತನಿಗಳ ಕರ್ತವ್ಯವು. ಧರ್ಮಸಾಧ್ಯವಾದ ಆಧ್ಯಾತ್ಮಸೌಖ್ಯವನ್ನೇ ಮರೆತು ಕೇವಲ ಬಾಹ್ಯಾಡಂಬರಸೌಖ್ಯದಲ್ಲಿ ಮಗ್ನನಾದವನು ಚಾರ್ವಾಕನೆನಿಸುವನು. ಧರ್ಮದೇವತೆಯನ್ನು ತಳ್ಳಿ ವಿದೇಶೀಯರಂತೆ ಸ್ತ್ರೀಯರಾಗಲಿ ಪುರುಷರಾಗಲಿ ಎಲ್ಲರೂ ಎಲ್ಲಾ ಭಾಗದಲ್ಲಿ ಸ್ವಾತಂತ್ರ್ಯವನ್ನು ಬಯಸುತ್ತ ಬಂದಲ್ಲಿ ಅದರಿಂದಾಗುವ ಅನರ್ಥಪರಂಪರೆಯು ಎಷ್ಟೆಂಬುದು ಎಲ್ಲರಿಗೂ ಪ್ರತ್ಯಕ್ಷವಾಗಿ ತಿಳಿಯದೆ ಹೋಗುವುದಿಲ್ಲ. ಆದ್ದರಿಂದ ಯಾರೂ ಧರ್ಮವಿರುದ್ಧಕಾರ್ಯದಲ್ಲಿ ಕೈಹಾಕಬಾರದು. ಸರ್ವರೂ ತಮ್ಮ ತಮ್ಮ ಧರ್ಮದಂತೆ ನಡೆದು ಈಶ್ವರಾನುಗ್ರಹಕ್ಕೆ ಪಾತ್ರರಾಗಬೇಕೆಂದಾಶಿಸುತ್ತೇವೆ.

ಯುದ್ಧವಾರ್ತೆ.

ಇಟಲಿಗೆ ಜರ್ಮನಿಯ ಪ್ರಾರ್ಥನೆ

"ರಷ್ಯಾ, ಫ್ರಾನ್ಸ್ ಮತ್ತು ಯುಗೋಸ್ಲೇವಿಯಾಗಳಿಗೆ ಹತ್ತುಲಕ್ಷ ಯೋಧರನ್ನು ಕಳುಹಿಸಬೇಕೆಂದು ಜರ್ಮನಿಯು ಇಟಲಿಯನ್ನು ಕೇಳಿದೆ. ಜರ್ಮನಿಗೆ ಇದುವರೆಗೆ ಭಾರಿ ನಷ್ಟವಾಗಿರುವುದೇ ಇದಕ್ಕೆ ಕಾರಣ. "ಇಟಲಿಯಲ್ಲಿ ಈಗಾಗಲೇ ೧೦ ಲಕ್ಷ ಮಂದಿಯನ್ನು ಹೆಚ್ಚಾಗಿ ಸೈನ್ಯಕ್ಕೆ ಕರೆಯಲಾಗಿದೆ. ಇವರಲ್ಲಿ ಮೂರನೇ ಒಂದು ಭಾಗವನ್ನು ಫ್ರಾನ್ಸಿಗೆ ಕಳುಹಿಸಿ, ಅಲ್ಲಿರುವ ನಾಜಿಗಳನ್ನು ನಿವೃತ್ತಿಮಾಡಲಾಗುತ್ತದೆ. ಮೂರನೇ ಒಂದು ಭಾಗವನ್ನು ಯುಗೊಸ್ಲೇವಿಯಾಕ್ಕೂ ಮತ್ತು ಉಳಿದವರನ್ನು ರಷ್ಯರಣರಂಗಕ್ಕೂ ಕಳುಹಿಸಲಾಗುತ್ತದೆ. ಇಷ್ಟಾದರೆ ಜರ್ಮನಿಯು ಇಟಲಿಯನ್ನು ‘ಸ್ವಾಹಾ’ ಮಾಡಲು ಸುಲಭವಾಗುತ್ತದೆ" ಎಂದು ಫ್ರೆಕಿನ್‌ರಿಷ್ಟರವರು ಅಭಿಪ್ರಾಯಪಟ್ಟಿದ್ದಾರೆ.

ಇಟಲಿಯಲ್ಲಿ ಅತೃಪ್ತಿ

ಇಟಲಿ ಸೈನ್ಯಾಧಿಕಾರಿಗಳಲ್ಲಿ ಬಹಳ ಅತೃಪ್ತಿಯುಂಟಾಗಿ ಭಯಂಕರ ದಂಗೆಯಾಗುವ ಸಂಭವವುಂಟಾಗಿದೆಯೆಂದು ಕೆಲವು ಪತ್ರಿಕೆಗಳು ಪ್ರಕಟಿಸಿವೆ. ಇಟಲಿಯ ಯೋಧರನ್ನು ಜರ್ಮನಿಯ ಪ್ರಾರ್ಥನೆಯ ಮೇರೆಗೆ ರಷ್ಯನ್ ರಣರಂಗಕ್ಕೆ ಕಳುಹಿಸಬೇಕೆಂದು ಮುಸೊಲಿನಿಯು ಮಾಡುವ ಆಜ್ಞೆಗಳನ್ನು ಸೇನಾಧಿಕಾರಿಗಳು ಮೂಲೆಗೊತ್ತುತ್ತಿರುವರೆಂದೂ, ಇಟಲಿಗೆ ಯಾರೂ ಮುತ್ತಿಗೆಹಾಕದಂತೆ ತೀರಪ್ರದೇಶಗಳನ್ನು ಭದ್ರಪಡಿಸಲು ಇಟಲಿಯ ಯೋಧರನ್ನು ಉಪಯೋಗಿಸಿಕೊಳ್ಳಲಾಗುತ್ತಿದೆಯೆಂದೂ ಸಮುದ್ರತೀರದುದ್ದಕ್ಕೂ ಮುಳ್ಳುಬೇಲಿಗಳನ್ನೂ ವಿಮಾನಧ್ವಂಸಕ ಫಿರಂಗಿಗಳನ್ನೂ ಏರ್ಪಡಿಸಲಾಗುತ್ತಿದೆಯೆಂದೂ, ಸಮುದ್ರತೀರದ ಆರೋಗ್ಯಕೇಂದ್ರಗಳನ್ನೆಲ್ಲಾ ಸೈನಿಕರ ಬಿಡಾರಗಳನ್ನಾಗಿ ಪರಿವರ್ತಿಸಲಾಗಿದೆಯೆಂದೂ, ಸಿಸಿಲಿ ಮತ್ತು ಸಾರ್ಡಿನಿಯಾಗಳಲ್ಲಿ ಇದೇ ರೀತಿ ಏರ್ಪಾಡುಗಳು ನಡೆದಿರುವವೆಂದೂ ಹೇಳಲಾಗಿದೆ. ಜರ್ಮನಿಯು ಇಟಲಿಯಮೇಲೆ ಬೀಳಲು ಆಲೋಚಿಸುತ್ತಿರಬಹುದೆಂದು ಅಮೇರಿಕೆಯ ಉಪವಿದೇಶಾಂಗಸಚಿವರು ಕೆಲವು ದಿನಗಳ ಹಿಂದೆ ಸೂಚಿಸಿದ್ದರು. ಇಟಲಿಯ ಮೇಲೆ ಜರ್ಮನಿಯು ತನ್ನ ಹತೋಟಿಯನ್ನು ಬಲಪಡಿಸಿದೆಯೆಂದು ಇತ್ತೀಚಿನ ಸುದ್ದಿಯು ತಿಳಿಸುತ್ತದೆ.

ತುರ್ಕಿಗೂ ಯುದ್ಧ ಭೀತಿ ತಪ್ಪಲಾರದು

ಕಾಕಸಸ್ ಪ್ರಾಂತದ ಮೇಲೆ ಬೀಳಲು ಜರ್ಮನರು ಈಗ ಹೋಗುತ್ತಿರುವ ಮಾರ್ಗದಲ್ಲೇ ಮುಂದುವರಿಯುವದಲ್ಲದೆ ಬಾಲ್ಕನ್ ಮತ್ತು ಏಷ್ಯಾಮೈನರ್ (ತುರ್ಕಿ)ಗಳ ಮಾರ್ಗವಾಗಿ ಕಪ್ಪು ಕಡಲನ್ನು ಸುತ್ತಿಕೊಂಡು ಇನ್ನೊಂದು ಮಾರ್ಗವಾಗಿ ಮುಂದುವರಿಯಲು ಪ್ರಯತ್ನಿಸುವರೆಂದೂ, ಇದಕ್ಕಾಗಿ ರಹಸ್ಯವಾಗಿ ಅಸಾಧ್ಯ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರಲಾಗಿದೆಯೆಂದೂ, ಥ್ರೇಸ್ ಪ್ರಾಂತದ ಮುಖಾಂತರ ತುರ್ಕಿಯ ಮೇಲೆ ನುಗ್ಗುವ ನಿರೀಕ್ಷಣೆಯಿದೆಯೆಂದೂ ಅಲ್ಲಲ್ಲೆ ಆಯಕಟ್ಟಿನ ಸ್ಥಳಗಳಲ್ಲಿ ಹೊಸ ವಿಮಾನ ನಿಲ್ದಾಣಗಳನ್ನು ಏರ್ಪಡಿಸಲಾಗುತ್ತಿದೆಯೆಂದೂ, ಎಡಿಯಾನೋಪಲ್ಲಿಗೆ ಎದುರಾಗಿರುವ ಸ್ವೈಲನ್ ಗ್ರಾಡ್ ಎಂಬಲ್ಲಿ ಸ್ಥಾಪಿಸಲಾಗಿರುವ ವಿಮಾನ ನಿಲ್ದಾಣವು ತುರ್ಕಿಗೆ ವಿಪತ್ಕಾರಕವಾಗಿದೆಯೆಂದೂ, ಬಾಲ್ಕನ್ ರಹಸ್ಯ ಸ್ಥಳಗಳಲ್ಲಿ ಜರ್ಮನರು ಯಥೇಚ್ಛವಾಗಿ ಪೆಟ್ರೋಲನ್ನು ಶೇಖರಿಸುತ್ತಿದ್ದರೆಂದೂ ಹೊಸ ಹೊಸ ರಸ್ತೆಗಳನ್ನು ನಿರ್ಮಿಸುತ್ತಿರುವ, ಬೆಟ್ಟನಾಡು ಪ್ರದೇಶಗಳ ದಕ್ಷಿಣ ಭಾಗದಲ್ಲಿ ಪ್ಲೋವ್‌ಡಿವ್-ಬರ್ಗಾಸ್ ಕ್ಷೇತ್ರದಲ್ಲಿ 4 ಜರ್ಮನ್ ಸೈನ್ಯಪಡೆಗಳೂ ಬಲ್ಗೇರಿಯದ 12 ಪಡೆಗಳೂ ಸಿದ್ಧವಾಗಿರುವವೆಂದೂ ಬಹುಶಃ ಮುಂದಿನ ವಸಂತ ಋತುವಿನವರೆಗೂ ಈಗಿನ ತಾಟಸ್ಥ್ಯ ಸ್ಥಿತಿಯು ಉಳಿದಿರಬಹುದೆಂದೂ ಕ್ರಿಸ್ಟೋಫರ್ ಬಕ್ಲೆಯವರು ಅಭಿಪ್ರಾಯಪಟ್ಟಿರುತ್ತಾರೆ.

ಕ್ರಿಮಿಯಾ ಯುದ್ಧ

ಕಳೆದ ಹಲವು ದಿನಗಳಿಂದ ಕ್ರಿಮಿಯವನ್ನು ಮೂಲಭೂಮಿಯೊಡನೆ ಸಂಬಂಧಿಸುವ ಭೂಕಂಠದ ಬಳಿ ಅಸಂಖ್ಯ ಜರ್ಮನ್ ಮತ್ತು ರುಮೇನಿಯನ್ ಸೈನ್ಯಗಳನ್ನು ಜಮಾಯಿಸುವ ಕಾರ್ಯವು ಭರದಿಂದ ಸಾಗುತ್ತಿತ್ತು. ಆಕಡೆ ಕ್ರಿಮಿಯದಲ್ಲೂ ರಕ್ಷಣಕಾರ್ಯವು ಬಹಳ ಎಚ್ಚರದಿಂದ ಸಾಗಿದೆ. ಹಳ್ಳಿಗಳೂ ನಗರಗಳೂ ಸೈನಿಕರಿಂದ ತುಂಬಿವೆ. ಅನಿರೀಕ್ಷಿತ ಸ್ಥಳಗಳಲ್ಲಿ ಬಂಡೆಗಳಮೇಲೆ ಬಲಯುತ ಫಿರಂಗಿಗಳು ಇಡಲ್ಪಟ್ಟಿವೆ. ಮಾರ್ಗಗಳೆಲ್ಲಾ ಫಿರಂಗಿಗಳಿಂದಲೂ ಮುಳ್ಳುಬೇಲಿಗಳಿಂದಲೂ ಟ್ಯಾಂಕು ಬಲೆಗಳಿಂದಲೂ ತುಂಬಿವೆ. ನಾಜಿ ವಿಮಾನಗಳು ಪ್ರತಿದಿನ ರಾತ್ರಿ ರಷ್ಯಾನೌಕಾಮೂಲವಾದ ಸೆಬಾಸ್ಟಪೋಲ್ ಮೇಲೆ ಮುತ್ತಿಗೆನಡೆಸುತ್ತಿವೆ. ಕ್ರಿಮಿಯಾದ ಆಕ್ರಮಣಕ್ಕಾಗಿ ಘೋರಯುದ್ಧವು ಪ್ರಾರಂಭವಾಗಿದೆ. ಕ್ರಿಮಿಯಾದಮೇಲೆ ನಾಜಿಗಳು ನಡೆಸುತ್ತಿರುವ ಮುತ್ತಿಗೆಯ ಮೊದಲನೆಯ ಹೆಜ್ಜೆಯಲ್ಲಿ 5000 ನಾಜಿಗಳೂ ಮತ್ತು ರುಮೇನಿಯನರೂ ಹತರಾಗಿರುವರೆಂದು ಹೇಳಲಾಗಿದೆ.

ಆಸ್ಟ್ರೇಲಿಯದ ವಿಮಾನ ಪಡೆ

ಆಸ್ಟ್ರೇಲಿಯದ ವಿಮಾನ ಪಡೆಯಲ್ಲಿ ೬೨೦೦ ಕ್ಕೆ ಮೀರಿ ವಿಮಾನಗಳಿವೆಯೆಂದು ವಿಮಾನ ಶಾಖಾಸಚಿವರು ತಿಳಿಸಿರುವರು.

ಬಾಲ್ಟಿಕ್ ದ್ವೀಪಗಳೆಲ್ಲಾ ಜರ್ಮನರ ವಶವಾದವು

ಡಾಗೋ ದ್ವೀಪವನ್ನು ಜರ್ಮನರು ಹಿಡಿದರೆಂದೂ ಈಗ ಬಾಲ್ಟಿಕ್ ಸಮುದ್ರದಲ್ಲಿರುವ ಎಲ್ಲ ದ್ವೀಪಗಳೂ ತಮ್ಮ ಕೈ ಸೇರಿವೆಯೆಂದೂ 3000 ರಷ್ಯನರನ್ನು ಸೆರೆ ಹಿಡಿಯಲಾಯಿತೆಂದೂ ಜರ್ಮನ್ ಪ್ರಕಟನೆಯು ತಿಳಿಸುತ್ತದೆ

ಮಾಸ್ಕೋ ಯುದ್ಧ

ಜರ್ಮನಿ ಸೈನಿಕರು ಮಾಸ್ಕೋ ನಗರದ ದೂರರಕ್ಷಣೆ ವ್ಯೂಹವನ್ನು ಪಶ್ಚಿಮ ಮತ್ತು ನೈಋತ್ಯದಿಕ್ಕುಗಳಿಂದ ಭೇದಿಸಿಕೊಂಡು ಮುಂದೆ ನುಗ್ಗುತ್ತಿರುವರೆಂದೂ, ಮಾಸ್ಕೋದಿಂದ 38 ಮೈಲಿಗಳಷ್ಟು ದೂರದಲ್ಲಿ ಜರ್ಮನಿಯ ಮುಂಗಾವಲುಪಡೆಗಳಿರುವದಾಗಿಯೂ ಜರ್ಮನಿಯು ಪ್ರಕಟಿಸಿದೆ. ಹೊಸ ಸೈನ್ಯಪಡೆಗಳನ್ನು ಕರೆತಂದು ಮಾಸ್ಕೋ ವ್ಯೂಹವನ್ನು ಭೇದಿಸಲು ಮತ್ತೆ ಜರ್ಮನರು ಪ್ರಯತ್ನ ನಡೆಸಿರುವದಾಗಿ ರಷ್ಯವು ಪ್ರಕಟಿಸಿದೆ

ಜರ್ಮನಿಯ ಮುಂದಿನ ಉದ್ದೇಶಗಳೇನು ?

ಈಗ ರಷ್ಯದಲ್ಲಿ ಡೊನೆಟ್ಜ್ ಬೇಸಿನ್ನಿನಲ್ಲಿರುವ ಸ್ಟಾಲಿನೋ ಮತ್ತು ರೋಸ್ಟೋವ್ ಬಳಿ ಭಯಂಕರ ಯುದ್ಧ ನಡೆಯುತ್ತಿದೆ ರಷ್ಯದ ಮುಖ್ಯ ಕೈಗಾರಿಕೆಯ ಕ್ಷೇತ್ರಗಳಿರುವದು ಅಲ್ಲಿಯೇ. ಉಕ್ರೇನನ್ನು ಪೂರ್ಣ ಜಯಿಸಿದನಂತರ ಮಾಸ್ಕೋಮೇಲೆ ಕಟ್ಟಕಡೆ ಧಾಳಿನಡೆಸಬೇಕೆಂದು ಜರ್ಮನರು ಆಲೋಚಿಸಿದ್ದಾರೆ. ಈ ಉದ್ದೇಶಸಾಧನೆಯಾದೊಡನೆ " ರಷ್ಯದ ಪತನವಾಯಿತೆಂದು' ಪ್ರಪಂಚಕ್ಕೆ ಸಾರಲಾಗುವದು. ಅದೇ ಸಮಯದಲ್ಲಿ ಜಪಾನು ಪೂರ್ವದಲ್ಲಿರುವ ರಷ್ಯಾಪ್ರದೇಶಗಳ ಮೇಲೆ ಬಿದ್ದು ಆಕ್ರಮಣ ಕಾರ್ಯ ನಡೆಸುವದು ರಷ್ಯವು ಸೋತಮೇಲೆ ಜರ್ಮನ್ ಸೈನ್ಯಗಳು ಪಶ್ಚಿಮಕ್ಕೆ ತಿರುಗಿ ಬ್ರಿಟನ್ನಿನ ಮೇಲೆ ಬೀಳಬಹುದೆಂದು ಕೆಲವರು ತರ್ಕಿಸುತ್ತಿದ್ದಾರೆ. ಆದರೆ ಬ್ರಿಟನ್ನು ರಷ್ಯದ ಮಿತ್ರತ್ವವನ್ನು ಬಿಟ್ಟು, ಜಯಿಸಲ್ಪಟ್ಟ ರಾಷ್ಟ್ರಗಳಾದ ರಷ್ಯಾ, ಫ್ರಾನ್ಸ್ ಮತ್ತು ಚೀನಾಗಳ ಭೂಪ್ರದೇಶಗಳನ್ನೆಲ್ಲ ಕಿತ್ತುಕೊಂಡು ಯೂರೋಪಿನಲ್ಲಿಯೂ, ಏಷ್ಯದಲ್ಲಿಯೂ ಜರ್ಮನಿ, ಇಟಲಿ ಮತ್ತು ಜಪಾನುಗಳು ನಿರಾತಂಕವಾಗಿ ಪ್ರಭುತ್ವ ನಡೆಸಿಕೊಳ್ಳಬಹುದೆಂದು ಒಪ್ಪಿಕೊಳ್ಳುವದಾದರೆ, ಆಗ ಅಕಾರಣವಾದ ಮನುಷ್ಯ ಕೊಲೆಯನ್ನು ನಿಲ್ಲಿಸಬಹುದೆಂದು ನಾಜಿಗಳು ಹೇಳುತ್ತಿದ್ದಾರೆ.

ರಷ್ಯದ ಹೊಸ ರಾಜಧಾನಿ

ಮಾಸ್ಕೋ ನಗರದ ಆಗ್ನೇಯಕ್ಕೆ 550 ಮೈಲಿ ದೂರದಲ್ಲಿ ವೋಲ್ಗಾನದಿಯ ದಡದಲ್ಲಿರುವ ಕುಜ್‌ಬಿಶೇವ್ ಎಂಬಲ್ಲಿ ರಷ್ಯದ ಸರಕಾರವನ್ನು ಸ್ಥಾಪಿಸಲಾಗಿದೆ ಇದಕ್ಕೆ ಹಿಂದೆ ಸಮಾರಾ ಎಂದು ಹೆಸರಿತ್ತು. ಎರಡನೆಯ ಬಾಕು ಎನ್ನಿಸಿಕೊಂಡಿರುವ ಎಣ್ಣೆ ಉತ್ಪತ್ತಿ ಪ್ರದೇಶದಲ್ಲಿ ಈ ನಗರವಿದೆ. 1939 ರಲ್ಲಿ ಈ ಕ್ಷೇತ್ರದಲ್ಲಿ ದಿನವಹಿ 6000 ಟನ್ ಎಣ್ಣೆಯು ಉತ್ಪತ್ತಿಯಾಗುತ್ತಿತ್ತು. ಇದು ಮಾಸ್ಕೋದಿಂದ ಓರೆನ್‌ಬರ್ಗಿಗೆ ಹೋಗುವ ರೈಲ್ವೆ ಮಾರ್ಗದಲ್ಲಿದೆ.

ಕಾಲಿನಿನ್ ನಗರದಲ್ಲಿ ಭಯಂಕರ ಕದನ

ಕಾಲಿನಿನ್ ನಗರದ ಬೀದಿಗಳಲ್ಲಿ ಭಯಂಕರವಾದ ಹೊಡೆದಾಟವಾಗುತ್ತಿದೆ ಈ ನಗರವು ಮಾಸ್ಕೋವಿನ ವಾಯುವ್ಯಕ್ಕೆ ೧೦೦ ಮೈಲಿ ದೂರದಲ್ಲಿರುವದು. ಅಲ್ಲಿ ಕದನವಾರಂಭವಾಗಿ ೧೦ ದಿನಗಳಾದವು ಜರ್ಮನರು ಅದನ್ನು ಆಕ್ರಮಿಸಿಕೊಂಡು ಮಾಸ್ಕೋ ಕಡೆಗೆ ನುಗ್ಗಲು ಬಹಳ ಪ್ರಯತ್ನ ಮಾಡುತ್ತಿದ್ದಾರೆ. ಈ ಕ್ಷೇತ್ರದಲ್ಲಿ ಶತ್ರು ಬಲವು ಅಪಾರವಾಗಿದೆ. ರಷ್ಯನರು ಆ ನಗರವನ್ನು ಹೇಗಾದರೂಮಾಡಿ ಉಳಿಸಿಕೊಳ್ಳಬೇಕೆಂಬ ಸಂಕಲ್ಪ ಮಾಡಿ ಬೀದಿ ಬೀದಿಗಳಲ್ಲಿ ಟ್ಯಾಂಕುಪಡೆಗಳನ್ನು ಏರ್ಪಡಿಸಿದ್ದಾರೆ ಚೌಕಗಳಲ್ಲೆಲ್ಲ ಕಂದಕಗಳನ್ನು ಅಗೆದಿದ್ದಾರೆ

೨೦,೦೦೦ ಯೆಹೂದ್ಯರನ್ನು ಪೋಲೆಂಡಿಗೆ ಸಾಗಿಸಿದರು

ಬರ್ಲಿನ್, ವಿಯನ್ನಾ ಮತ್ತು ರ್ಹೈನ್‌ಲ್ಯಾಂಡ್ ಕ್ಷೇತ್ರಗಳಲ್ಲಿರುವ ೨೦,೦೦೦ ಯೆಹೂದ್ಯರಿಗೆ ಕೇವಲ ೧೦ ನಿಮಿಷಗಳ ಅವಕಾಶ ಕೊಟ್ಟು ಎಲ್ಲರನ್ನೂ ಪೋಲೆಂಡಿಗೆ ಸಾಗಿಸಲಾಯಿತು ಅವರು ತಮ್ಮ ಮನೆಗಳನ್ನು ಬಿಟ್ಟು ತಲಾ ಒಂದೊಂದು ಕೈಚೀಲವನ್ನು ಮತ್ತು ೧೦೦ ಮಾರ್ಕುಗಳನ್ನು ತೆಗೆದುಕೊಂಡು ಹೊರಡಬೇಕಾಯಿತು ಇವರನ್ನೆಲ್ಲ ರಷ್ಯದಲ್ಲಿ ಜರ್ಮನರು ಆಕ್ರಮಿಸಿರುವ ಸ್ಥಳಗಳಿಗೆ ಕಳುಹಿಸುವರೆಂದು ತಿಳಿದುಬಂದಿದೆ

ಅಮೆರಿಕೆಯನ್ನು ಸೋಲಿಸದೆ ಹಿಟ್ಲರನಿಗೆ ಜಯ ಲಭಿಸದು

" ಅಡಾಲ್ಫ್ ಹಿಟ್ಲರನು ಅಮೇರಿಕೆಯ ಮೇಲೆ ಬಿದ್ದು ಅದನ್ನು ಸೋಲಿಸಿದ ಹೊರತು ಜಯ ಪಡೆಯಲಾರನು ಯೂರೋಪಿನ ಆಕಾಶವೆಲ್ಲವೂ ಅಮೇರಿಕನ್ ವಿಮಾನಮಯವಾಗುವಂತಹ ದಿನವು ಬರುತ್ತದೆ ಅಮೇರಿಕದ ವಿಮಾನಗಳ ಮುಂದೆ ಮತ್ತಾವುದೂ ನಿಲ್ಲಲಾರದು" ಎಂಬುದಾಗಿ ರೇರ್ ಅಡ್ಮಿರಲ್ ಬರ್ಡ್‌ರವರು ಫ್ರಾನ್ಸಿಗೆ ಬ್ರಾಡ್‌ಕಾಸ್ಟ್ ಮಾಡುತ್ತ ತಿಳಿಸಿದರು

ಲೆನಿನ್‌ಗ್ರಾಡ್ ಹಿಡಿಯಲು ಇನ್ನೂ ಸ್ವಲ್ಪಕಾಲ ಬೇಕು

ಲೆನಿನ್‌ಗ್ರಾಡ್ ನಗರವನ್ನು ಹಿಡಿಯಲು ಇನ್ನೂ ಸಾಧ್ಯವಾಗದೇ ಇರುವದಕ್ಕಾಗಿ ಜರ್ಮನರು ಸ್ವೀಡಿಷ್ ಪತ್ರಿಕೆಗಳ ಮೂಲಕ ಸಮಾಧಾನವನ್ನು ಪ್ರಕಟಿಸುತ್ತಾ ' ಲೆನಿನ್‌ಗ್ರಾಡ್ ಮುತ್ತಿಗೆಯಾರಂಭವಾಗಿ ಇನ್ನೂ 53 ದಿನಗಳಾಗಿವೆ ಒಡೆಸ್ಸಾ ಮುತ್ತಿಗೆ 60 ದಿನಗಳು ನಡೆಯಿತು ಒಡೆಸ್ಸಾದಲ್ಲಿದ್ದುದಕ್ಕಿಂತ ಲೆನಿನ್‌ಗ್ರಾಡಿನಲ್ಲಿ ಹೆಚ್ಚು ಸೇನೆಗಳಿವೆ ಆದ್ದರಿಂದ ನಗರದ ಮೇಲೆ ದಾಳಿ ನಡೆಸಲು ಸರಿಯಾದ ಕಾಲ ಬಂದಿದೆಯೆಂದು ಜರ್ಮನರು ಪರಿಗಣಿಸಲು ಇನ್ನೂ ಸ್ವಲ್ಪ ಕಾಲ ಬೇಕು ಏತನ್ಮಧ್ಯೆ ಜರ್ಮನ್ ಮುತ್ತಿಗೆಗಾರರು ನಗರದ ಹೊರಭಾಗದಲ್ಲಿ ಬಲಯುತ ರಕ್ಷಣಸ್ಥಾನಗಳನ್ನು ರಚಿಸಿದ್ದಾರೆ. ಅಕಾರಣವಾಗಿ ನಷ್ಟವಾಗದಂತೆ ಮಾಡಬೇಕೆಂಬುದೇ ಇವರ ಉದ್ದೇಶ ಲೆನಿನ್‌ಗ್ರಾಡ್ ಕ್ಷೇತ್ರದಲ್ಲಿ ಎಲ್ಲ ಕಡೆಯೂ ಸ್ಫೋಟಕವಸ್ತುಗಳನ್ನಿಡಲಾಗಿದೆ ಆದ್ದರಿಂದ ಸಕಾಲವೊದಗುವ ಮುಂಚೆ ಆತುರಪಟ್ಟರೆ ನಷ್ಟವು ಮಿತಿಮೀರುತ್ತದೆ" ಎಂದು ತಿಳಿಸಿದ್ದಾರೆ

ಲಾರ್ಡ್ ಗೋರ್ಟ್‌ರವರ ಎಚ್ಚರಿಕೆ !

ಸಂಗ್ರಾಮಶಾಖೆಯ ಉಪಕಾರ್ಯದರ್ಶಿಗಳಾದ ಲಾರ್ಡ್ ಗೋರ್ಟ್‌ರವರು ಮಾತನಾಡುತ್ತಾ—"ನಮ್ಮ ಬಲದ ನಿಜವಾದ ಪರೀಕ್ಷಾಕಾಲವು ಈಗ ಬಂದಿದೆ. ಜರ್ಮನರು ರಷ್ಯದಲ್ಲಿ ೧೪೦೦ ಮೈಲಿ ದೂರ ಮುಂದೆ ನುಗ್ಗಿದ್ದಾರೆ ಅವರು ಬೇಟಂ ಮತ್ತು ಬಾಕು ಎಣ್ಣೆ ಗಣಿಗಳಿಗೆ ಬರುವುದು ನಿಶ್ಚಯ ಆ ಸಂದರ್ಭದಲ್ಲಿ ಇರಾನ್ ಗಡಿಯು ನಮಗೆ ಬಹಳ ಮುಖ್ಯವಾಗುತ್ತದೆ ಮೊದಲು ಬಾಕುವಿನಲ್ಲಿ ನಾವು ರಷ್ಯನರಿಗೆ ಸಹಾಯ ಮಾಡಲೆತ್ನಿಸಬೇಕು ಎರಡನೆಯದಾಗಿ ಈಜಿಪ್ಟ್ ಮತ್ತು ಪೂರ್ವ ದೇಶಗಳ ಕಡೆ ಜರ್ಮನರು ಕಾಲಿಡದಂತೆ ತಡೆಯಬೇಕು ' ಎಂದು ಹೇಳಿದರು ಸೇನೆಯ ಆವಶ್ಯಕತೆಯೇ ಇಲ್ಲವೆಂದೂ ಬಾಂಬರುಗಳೇ ನಮಗೆ ಜಯವನ್ನು ತರಬಲ್ಲವೆಂದೂ ಹೇಳುವವರನ್ನು ಖಂಡಿಸಿದರು, " ಜರ್ಮನ್ ಸೈನ್ಯದ ಕಡೆ ನೋಡಿ. ವಿಮಾನಬಲ ಮತ್ತು ನೌಕಾಬಲವನ್ನು ಲೆಕ್ಕಿಸದೆ ಎರಡು ವರ್ಷಗಳಿಂದ ಯೂರೋಪಿನಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ತೆರಳಿದೆ. ನಾವು ತಕ್ಕಷ್ಟು ಯೋಧಬಲವನ್ನು ಇಟ್ಟುಕೊಂಡರೆ ಮಾತ್ರ ಉಳಿಯುವೆವು. ಜರ್ಮನಿಯನ್ನು ಬಾಂಬರುಗಳಾಗಲಿ, ನೌಕೆಗಳಾಗಲಿ ಸೋಲಿಸಲಾರವು ಜರ್ಮನ್ ಸೇನೆಯನ್ನು ರಣರಂಗದಲ್ಲಿ ನಮ್ಮ ಸೇನೆಗಳು ಎದುರಿಸಿ ಜಯಪಡೆಯಬೇಕಾಗಿದೆ. ಇದುವರೆಗೆ ಎಲ್ಲ ರಂಗಗಳಲ್ಲೂ ಒಟ್ಟು 7000 ಜನ ಭಾರತೀಯರು ಸತ್ತಿದ್ದಾರೆ ಮತ್ತು ಗಾಯಗೊಂಡಿದ್ದಾರೆ ಬ್ರಿಟನ್ನಿಗೆ 1 ಲಕ್ಷ ಯೋಧರ ನಷ್ಟವಾಗಿದೆ. ಡೊಮಿನಿಯನ್‌ಗಳಿಗೆ 20 ಸಾವಿರ ಯೋಧರ ನಷ್ಟವಾಗಿದೆ ' ಎಂದು ಹೇಳಿದರು.

ಮೋಟಾರು ನಿರ್ಮಾಣದ ಬಗ್ಗೆ ಕೇಂದ್ರಶಾಸನ ಸಭೆಯಲ್ಲಿ ನಿರ್ಣಯ

ಮೋಟಾರುಗಳ ನಿರ್ಮಾಣವು ಬಹಳ ಮುಖ್ಯವಾದ ಸಂಗ್ರಾಮ ಪ್ರಯತ್ನವೆಂದೂ, ಭದ್ರವಾದ ತಳಹದಿಯ ಮೇಲೆ ಭರತಖಂಡದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸುವ ಪ್ರಯತ್ನಕ್ಕೆ ತಾವು ಸರ್ವ ಸಹಾಯವನ್ನೂ ನೀಡುವದಾಗಿ ಗೌರ್ನರ್ ಜನರಲ್‌ರವರು ಸಾರಬೇಕೆಂದೂ ಈ ಸಭೆಯು ಶಿಫಾರಸು ಮಾಡುತ್ತದೆ——ಎಂಬ ನಿರ್ಣಯವೊಂದನ್ನು ಶ್ರೀ ಜಮ್ನಾದಾಸ್‌ಮೆಹತಾರವರು ಕೇಂದ್ರಶಾಸನಸಭೆಯ ಮುಂದೆ ತಂದಿದ್ದಾರೆ.

ಭಾರತದಿಂದ ವಸ್ತುಗಳ ಸರಬರಾಯಿ

ಭಾರತದ ಸಂಗ್ರಾಮ ವಸ್ತುಗಳ ಸರಬರಾಯಿಯು ದಿನ ದಿನವೂ ಹೆಚ್ಚುತ್ತಿದೆ ಸಂಗ್ರಾಮ ವಸ್ತುಗಳಲ್ಲದೆ ಇತರ ವಸ್ತುಗಳನ್ನೂ ಭಾರತದ ಸರಬರಾಯಿ ಶಾಖೆಯವರು ಕೊಂಡುಕೊಳ್ಳುತ್ತಿರುವುದು ವಾರಕ್ಕೆ ೫ ಕೋಟಿಗಳಿಗಿಂತಲೂ ಹೆಚ್ಚುತ್ತಿದೆ ಸರಬರಾಯಿ ಶಾಖೆಯವರು ೧೫ ದಿನಗಳಿಗಾಗಿ ಕೊಂಡುಕೊಳ್ಳುತ್ತಿರುವ ವಸ್ತುಗಳ ಬೆಲೆಯು ಸಾಮಾನ್ಯವಾಗಿ ಬಂಗಾಳದ ಒಂದು ವರ್ಷದ ಆದಾಯದಷ್ಟಾಗುವುದು. - ಪ್ರತಿತಿಂಗಳೂ ೭೦ ಲಕ್ಷ ಹೊಲೆದ ಬಟ್ಟೆಗಳು, ೫ ಲಕ್ಷ ಸೊಳ್ಳೆ ಪರದೆಗಳು, ಕುದುರೆ ಜೀನುಗಳು, ಚರ್ಮದ ಇತರ ವಸ್ತುಗಳು ಇವುಗಳನ್ನು ಕೊಂಡುಕೊಳ್ಳಲಾಗುವುದು ಇವುಗಳಿಗೆ ತಿಂಗಳು ೧ ಕ್ಕೆ ಸರಾಸರಿ ೧೨೦ ಲಕ್ಷರೂ ಗಳ ವೆಚ್ಚವಾಗುವುದು ಚರ್ಮದ ಸಾಮಾನುಗಳನ್ನು ಮಾಡುವ ಸರ್ಕಾರದ ಕಾರ್ಖಾನೆಗಳಲ್ಲಿಯೇ ೩೮,೦೦೦ ಮಂದಿ ಕೆಲಸಮಾಡುತ್ತಿದ್ದಾರೆ ಅಲ್ಲದೆ ಆ ವಸ್ತುಗಳನ್ನು ಸರಬರಾಯಿ ಮಾಡುವ ಕಂಟ್ರಾಕ್ಟರುಗಳ ಬಳಿ ೪೫,೦೯೦ ಮಂದಿ ಕೆಲಸಮಾಡುತ್ತಿದ್ದಾರೆ

ಬೆಂಗಳೂರು ಮತ್ತು ಮೈಸೂರು ಸಿಟಿಗಳ ಇಂಕಂಟ್ಯಾಕ್ಸ್ ಸ್ಪೆಷಿಯಲ್ ಡೆಪ್ಯುಟಿಕಮಿಷನರ್ ಮೆ|| ಜಿ. ರುದ್ರಪ್ಪ, ಎಂ ಎ., ಇವರು ಈ ತಿಂಗಳು ತಾ|| 26 ಕ್ಕೆ ಕೆಲಸದಿಂದ ನಿವೃತ್ತರಾದುದರಿಂದ, 25 ನೇ ತಾರೀಖಿನ ದಿವಸ ಅಸಿಸ್ಟೆಂಟ್ ಕಮಿಷನರ್ ಮೆ|| ಜಿ. ಕೆ. ರುದ್ರಾರ್ಯರಿಗೆ ಚಾರ್ಜನ್ನು ಕೊಟ್ಟರೆಂದು ತಿಳಿದುಬರುತ್ತದೆ

ವಿಮಾನ ಮುತ್ತಿಗೆ ಎಚ್ಚರಿಕೆ ತೆಗೆದುಕೊಳ್ಳಲು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಲು ವಿಶೇಷ ಅಧಿಕಾರಿಗಳಾಗಿ ನಿಯಮಿಸಲ್ಪಟ್ಟಿದ್ದ ಶ್ರೀ ಎಸ್. ಮಾಧವರಾಯರು ಮೈಸೂರು ಸರ್ಕಾರಕ್ಕೆ ತಮ್ಮ ವರದಿಯನ್ನು ಒಪ್ಪಿಸಿರುವರು. ಸರ್ಕಾರದವರು ಸದ್ಯದಲ್ಲಿಯೇ ಆಜ್ಞೆಯನ್ನು ಹೊರಡಿಸುವರೆಂದು ಗೊತ್ತಾಗುತ್ತದೆ ಈ ಅಧಿಕಾರಿಗಳು ಕೋಲಾರದ ಚಿನ್ನದಗಣಿ, ಭದ್ರಾವತಿ ಮೊದಲಾದ ಮುಖ್ಯ ಸ್ಥಾನಗಳಿಗೂ ಹೋಗಿ ಅವುಗಳ ರಕ್ಷಣೆಗಾಗಿ ತಕ್ಕ ವರದಿಯನ್ನು ಒಪ್ಪಿಸುವವರಾಗಿದ್ದಾರೆ.

[೩ ನೆಯ ಪುಟದಿಂದ ಮುಂದುವರಿಸುವ]

ಪ್ರಯಾಣಮಾಡುತ್ತಲೇ ಇರುವದು. ಈ ಯಾತ್ರೆಗೆ ಯಾವುದೂ ನಿಲುಗಡೆಯೇ ಇಲ್ಲ. ಸಂಸಾರದ ನಿಜಸ್ಥಿತಿಯನ್ನು ಯೋಚಿಸಿದರೆ ಅದರಿಂದ ತೋರಿಬರುವ ದುಃಖಕ್ಕೆ ಕೊನೆಯೂ ಇರಲುಂಟೆ? ಆದರೆ, ಈ ದುಃಖವೆಲ್ಲವೂ ಅಜ್ಞಾನದ ವಿಜೃಂಭಣೆಯೇ ಹೊರತು, ನಿಜವಾಗಿ ಈ ಬಗೆಯ ಶೋಕಕ್ಕೆ ಅವಕಾಶವಿಲ್ಲವಷ್ಟೆ! ಕದಾಚಿತ್, 'ಇದಕ್ಕೆ ಅಜ್ಞಾನವು ಕಾರಣವಲ್ಲ. ಅಗಲುವಿಕೆಯೇ ಕಾರಣ' ಎನ್ನಬಹುದು. ಆದರೆ, ಹಾಗೆ ನಿಜವಾಗಿಯೂ ವಿರಹವೇ ಕಾರಣವಾಗಿದ್ದ ಪಕ್ಷದಲ್ಲಿ ದಿನಗಳು ಕಳೆದ ಹಾಗೆಲ್ಲ ಶೋಕವು ಇಮ್ಮಡಿಯಾಗಬೇಕಲ್ಲವೇ? ಅನುಭವದಲ್ಲಿ ಮಾತ್ರ ದುಃಖವು ದಿನದಿನಕ್ಕೂ ಕಡಿಮೆಯಾಗುತ್ತಿರುವುದೇ ಹೊರತು, ಹೆಚ್ಚುವದಿಲ್ಲವಲ್ಲ! ಆದಕಾರಣ ಈ ವಿಷಯದಲ್ಲಿ ಯಾರೂ ಮರುಗಿ ಫಲವಿಲ್ಲ. ದುಃಖಕ್ಕೆ ಎಡೆಗೊಡದೆ ಆತ್ಮಸ್ವರೂಪವನ್ನು ಪ್ರತಿನಿಮಿಷದಲ್ಲಿಯೂ ಲಕ್ಷ್ಯದಲ್ಲಿರಿಸಬೇಕು. ಏಕೆಂದರೆ— ಮರ್ಮಸ್ಥಾನಗಳಲ್ಲಿ ತಗಲಿದ ಹರಿತವಾದ ಆಯುಧದಂತೆ ಆಯಾಸ್ಥಾನಗಳನ್ನು ಸೀಳುತ್ತಿರುವ ಶೋಕವೆಂಬ ಬಲವಾದ ಪೆಟ್ಟುಗಳನ್ನು ಮನಸ್ಸಿಗೆ ತಾರದೆ ಅಲಕ್ಷ್ಯವಾಗಿರುವುದೇ ಅದಕ್ಕೆ ಉತ್ತಮವಾದ ಔಷಧವು.

ಸಂಸಾರದಲ್ಲಿ ಮಮತೆಯುಳ್ಳವನು ಅರಣ್ಯಕ್ಕೆ ಹೋದ ಮಾತ್ರದಿಂದ ಫಲವೇನು? ಅಲ್ಲಿಯೂ ಜೀವನಿಗೆ ಕ್ಷಣಕ್ಷಣಕ್ಕೂ ಸಮುದ್ರದ ಅಲೆಗಳಂತೆ ನಾನಾ ಬಗೆಯ ಎಡರುಗಳು ಸಂಭವಿಸದಿರುವವೆ? ಮನೆಯಲ್ಲಿಯೇ ಇರುತ್ತ ಪಂಚೇಂದ್ರಿಯಗಳನ್ನು ತನ್ನ ಅಧೀನದಲ್ಲಿಟ್ಟುಕೊಳ್ಳುವದು ತಪಸ್ಸು ಎನಿಸಲಾರದೇ? ಮನಃಶುದ್ಧಿಯಾದ ಮಾತ್ರದಿಂದಲೇ ವ್ರತವನ್ನು ಆಚರಿಸಲಾಗದೇ? ಬ್ರಹ್ಮಚರ್ಯವೇ ಮೊದಲಾದ ಯಾವುದಾದರೊಂದು ಆಶ್ರಮವನ್ನು ಅವಲಂಬಿಸಿ ಆ ಆಶ್ರಮದ ನಿಯಮಗಳಿಗನುಸಾರವಾಗಿ ನಡೆಯುತ್ತ ಸಮಸ್ತ ಜೀವಿಗಳಲ್ಲಿಯೂ ಸಮಭಾವನೆಯನ್ನಿರಿಸಿ ದಯೆಯನ್ನು ಕೈಕೊಳ್ಳಬೇಕು. ಧರ್ಮಕ್ಕೂ ಆಶ್ರಮಕ್ಕೂ ಏನಂಟು? ಧರ್ಮವೇ ಬೇರೆ, ಆಶ್ರಮ ನಿಯಮಗಳೇ ಬೇರೆ. ಪ್ರಾಣಧಾರಣೆಗೆ ತಕ್ಕಷ್ಟು ಆಹಾರವನ್ನು ಸೇವಿಸುತ್ತ ಸಂತತಿಗೆ ವಿಚ್ಛೇದಬಾರದಂತೆ ಸಂಸಾರದಲ್ಲಿದ್ದು ಸತ್ಯಕ್ಕೆ ಚ್ಯುತಿಬಾರದಂತೆ ಮಿತವಾಗಿ ಮಾತನಾಡುತ್ತ ಪರಶಿವನ ಸೇವೆ ಪರವಸ ಇಟ್ಟು ಧರ್ಮದಿಂದ ವ್ಯವಹಾರಮಾಡುತ್ತ ನಿಯಮವನ್ನು ಕೈಕೊಂಡವನು ಎಂತಹ ಕಷ್ಟವನ್ನಾದರೂ ಸುಲಭವಾಗಿ ಕಡೆಹಾಯುವನು.

ಆತ್ಮವೇ ಹೊಳೆಯು, ಪುಣ್ಯವೇ ಈ ಹೊಳೆಯ ದೇವು, ಸತ್ಯವೇ ಈ ನದಿಯಲ್ಲಿ ತುಂಬಿತುಳುಕುವ ನಿರ್ಮಲೋದಕ, ಆಚಾರವು ಈ ನದಿಯ ದಡವು, ದಯೆಯು ಅಲೆ ಎನಿಸುವದು. ಇಂತಹ ಪಾವನವಾದ ನದಿಯಲ್ಲಿ ಸ್ನಾನಮಾಡುವದೆ ಆತ್ಮಕ್ಕೆ ಅವಶ್ಯಕವು. ಮುಖ್ಯವಾಗಿ ಮನಶ್ಶುದ್ಧಿಯಿಲ್ಲದ ಬರಿಯ ನೀರಿನಿಂದ ಜಡದೇಹವನ್ನು ತೊಳೆದರೆ ಜೀವನ ಶುದ್ಧಿಯನ್ನು ಪಡೆಯುವದಿಲ್ಲ. ಭಾವಶುದ್ಧಿಯಿಲ್ಲದ ಸ್ನಾನವು ಮಂಡೂಕಸ್ನಾನವೆನಿಸುವದು. ಮನಶ್ಶುದ್ಧಿಯಿಲ್ಲದ ಧ್ಯಾನವು ಬಕಧ್ಯಾನವೆನಿಸುವದು. ಆದಕಾರಣವೇ ಜ್ಞಾನಿಗಳು 'ಸ್ನಾನವಮಾಡಿರೋ ಜ್ಞಾನತೀರ್ಥದಲಿ ನಾನು ತಾನೆಂಬಹಂಕಾರವ ಬಿಟ್ಟು,' ಎಂದು ಬೋಧಿಸಿರುವರು.

ಜನನ, ಮರಣ, ಮುಪ್ಪು, ಬೇನೆ, ನೋವು— ಇವುಗಳಿಂದ ಸಂಪನ್ನವಾದ ಈ ಸಂಸಾರದಲ್ಲಿ ಸಾರವಿಲ್ಲ. ಇದನ್ನು ಬಿಟ್ಟು ಹೊರತು ಸುಖವು ಇಲ್ಲವೇ ಇಲ್ಲ. ಬಾರಿಬಾರಿಗೂ ದುಃಖವೇ ತಲೆದೋರುವದಲ್ಲದೆ, ಸುಖದ ಸುಳಿವೇ ಇಲ್ಲವಲ್ಲಾ! ಸುಖವೆಂಬುದು ಉಪಸರ್ಜನವಾಗಿರಬಹುದು. ದುಃಖವನ್ನು ತೊಲಗಿಸುವುದಕ್ಕಾಗಿ ಮಾಡಬೇಕಾದ ಪ್ರತೀಕಾರಗಳನ್ನೇ 'ಸುಖ, ಸುಖ' ವೆಂಬುದಾಗಿ ಹೇಳುವರು.

ಮನೋವ್ಯಥೆ, ರೋಗ, ಸಂತಾಪಗಳೆಂಬ ಯಾವುದಾದರೊಂದು ನಿಮಿತ್ತದಿಂದ ಇಂದೋ ನಾಳೆಯೋ ಕುಸಿದ ಬೀಳುವ ಈ ಹಾಳು ಒಡಲಿಗಾಗಿ ಮನುಷ್ಯಮಾತ್ರದವನು ಅಧರ್ಮದಲ್ಲಿ ಕಾಲಿಡುತ್ತಾನೆಯೋ? ಪ್ರಾಣಿಗಳ ಬಾಳು ನೀರಿನಲ್ಲಿ ಮೂಡಿತೋರಿದ ಚಂದ್ರಬಿಂಬದಂತೆ ಚಂಚಲವಾದುದು. ಸಂಸಾರವು ಮೃಗಜಲದಂತೆ ಬರಿಯ ನೀರಿನ ಭ್ರಾಂತಿಯನ್ನು ಮಾತ್ರ ಉಂಟುಮಾಡುವದಲ್ಲದೆ, ನಿಜವಾಗಿಯೂ ಅದರಲ್ಲಿ ನೀರಿರುವುದೇ? ಆಕಾಶದ ನೆರಳಿನಂತೆ ಒಂದು ಕ್ಷಣಕಾಲದಲ್ಲಿ ಮಾಯವಾಗುವದು. ಈ ರಹಸ್ಯವನ್ನರಿತು ಅಮೃತಕ್ಕೆ ಸಮಾನವಾದ ಸಜ್ಜನರ ಸಹವಾಸ, ಸದ್ಗ್ರಂಥಗಳ ವ್ಯಾಸಂಗಮಾಡುತ್ತ ಧರ್ಮವನ್ನೂ ಸುಖವನ್ನೂ ಸಂಪಾದಿಸಬೇಕು.

ಹೊರಗಣವನಾದರೂ (ಯಾವ ಜಾತಿಯವನೇ ಆಗಲಿ) ನಮ್ಮ ಹಿತಚಿಂತಕನು ಬಂಧುವಲ್ಲವೇ? ಕೇಡು ಬಯಸತಕ್ಕವನು ಕೇವಲ ರಕ್ತಸಂಬಂಧಿಯಾಗಿರಲಿ, ಶರೀರ ಸಂಬಂಧಿಯಾಗಿರಲಿ ಮದ್ಯಘಟದಂತೆ ದೂರದಲ್ಲಿರಿಸಲು ತಕ್ಕವನಷ್ಟೆ! ನಮ್ಮ ಒಡಲಿನಲ್ಲಿ ಹುಟ್ಟಿದ ಮಾತ್ರದಿಂದಲೇ ರೋಗವು ಕೇಡನ್ನುಂಟುಮಾಡುವದಿಲ್ಲವೆನ್ನಬಹುದೇ? ಅಡವಿಯಲ್ಲಿ ಬೆಳೆದ ಔಷಧಿಯು ಅರೋಗವನ್ನು ನಾಶಗೊಳಿಸಿ ಮೇಲುಮಾಡುವದಿಲ್ಲವೇ? ಬಾಯಿಯಿಂದ ಉಗಿದ ತಾಂಬೂಲವನ್ನು ನನ್ನದೆಂಬ ಅಭಿಮಾನದಿಂದ ಮನುಷ್ಯಮಾತ್ರದವನು ಪುನಃ ಬಾಯಿಯಲ್ಲಿ ಹಾಕಿಕೊಳ್ಳುತ್ತಾನೆಯೇ? ಆದುಕಾರಣವೇ— 'ಹಿತವಂ ತೋರುವನಾತ್ಮಬಂಧು' ಎಂದು ನೀತಿಕಾರರು ಬೋಧಿಸಿರುವರು.

ಶುನಕವು ತನಗೆ ಅನ್ನಹಾಕುವವನ ಇದಿರಾಗಿ ಬಾಲವನ್ನಾಡಿಸುತ್ತ, ಕಾಲಿಗೆರಗುತ್ತ, ನೆಲದಮೇಲೆ ಹೊರಳಾಡುತ್ತ ಮೋರೆಯನ್ನೂ ಹೊಟ್ಟೆಯನ್ನೂ ತೋರುವದು. ಆನೆಯಾದರೋ ಗಂಭೀರವಾದ ನೋಟದಿಂದಲೂ ಸವಿಮಾತುಗಳಿಂದಲೂ ಆಹಾರವನ್ನು ತಕ್ಕೊಳ್ಳುವದು. ತಿಳಿವಳಿಕೆಗೂ, ಪರಾಕ್ರಮಕ್ಕೂ, ಕೀರ್ತಿಗೂ, ವಂಶಕ್ಕೂ, ಮಾನವಜನ್ಮಕ್ಕೂ, ತನ್ನ ಆಶ್ರಮಕ್ಕೂ ಲೋಪಬಾರದಂತೆ ಒಂದು ನಿಮಿಷವಾದರೂ ಬಾಳುವುದೇ ಬಾಳು. ಕಾಗೆಯು ಕೊಕ್ಕಿನಿಂದ ಹೇಗೋ ಹೊಟ್ಟೆಯನ್ನು ತುಂಬಿಕೊಳ್ಳುತ್ತ ವರ್ಷಗಟ್ಟಲೆ ಬದುಕುವದು. ಯೋಗ್ಯಾಯೋಗ್ಯ ವಿಚಾರವಿಲ್ಲದೆ, ಬಾರಿಬಾರಿಗೂ ವೈದಿಕಮಾರ್ಗಕ್ಕೆ ತಪ್ಪಿ ನಡೆಯುತ್ತ, ನಿಂದೆಗೆ ಗುರಿಯಾಗಿ, ಹೊಟ್ಟೆಹೊರೆಯುವ, ವಿಷಯೋಪಭೋಗದ ವಿಚಾರವನ್ನೇ ಹಗಲೂ ಇರುಳೂ ಯೋಚಿಸುತ್ತ ಬಾಲಭಾಷೆಯಾಡುತ್ತ ಕಾಲಕಳೆಯುವವನು ನರಪಶುವೆನಿಸುವನು. ಇಂತಹ ವಿಲಕ್ಷಣ ನರಪಶುವಿನ ಜನ್ಮದಾತರೂ, ವಂಶವೂ, ಬಂಧುಬಳಗದವರೂ, ಮಿತ್ರರೂ ಎಷ್ಟು ಧನ್ಯರೋ! ಏನು ಪುಣ್ಯಶಾಲಿಗಳೋ!

ಬಗೆಬಗೆಯ ದಾನಗಳಲ್ಲಿ ಅಭಯದಾನವು (ವಚನ ಪರಿಪಾಲಿಸುವಿಕೆಯು) ಅತ್ಯುತ್ತಮವಾದ ಮಹಾದಾನವೆನಿಸುವದು. ಭೂದಾನ, ಗೋದಾನ, ಕನ್ಯಾದಾನ, ಹಿರಣ್ಯದಾನ, ಅನ್ನದಾನ, ಉದಕದಾನ ಇತ್ಯಾದಿಗಳೆಲ್ಲವೂ ಅಭಯದಾನಕ್ಕೆ ಸಮಾನವೆನಿಸಲಾರವು. ಎಲ್ಲರ ಬಯಕೆಗಳನ್ನು ಈಡೇರಿಸುತ್ತ, ಅಶ್ವಮೇಧಯಾಗವನ್ನು ಮಾಡಿ ಪಡೆಯುವಷ್ಟು ಫಲವನ್ನು ಅಭಯದಾನ ಒಂದರಿಂದ ಪಡೆಯಬಹುದು. ವಚನಭ್ರಷ್ಟತನಕ್ಕಿಂತ ಪಾಪವೂ ಕ್ರೂರವೂ ಆದ ಮತ್ತೊಂದು ಪಾತಕವುಂಟೇ?

ಕದಾಚಿತ್ ಅನಿಷ್ಟದಿಂದ ನಮ್ಮ ಇಷ್ಟವು ಕೈಗೂಡಿದರೂ ಅದೊಂದು ಮೇಲ್ಮೆಯಲ್ಲ. ಅಮೃತವೇ ಆದರೂ ವಿಷಮಿಶ್ರಿತವಾದರೆ ಅದು ಮೃತ್ಯುವನ್ನೇ ಒದವಿಸುವದು. ಅನಾಯಾಸವಾಗಿ ದೊರೆತ ನೀರನ್ನೂ, ಅಪಾಯಕರವಾದ ಮೃಷ್ಟಾನ್ನವನ್ನೂ ಹೋಲಿಸಿ ನೋಡಲಾಗಿ, ಅಪಾಯವಿಲ್ಲದೆ ದೊರೆತ ಉದಕವೇ ಸುಖಕರವೆನಿಸುವದು. ಹಣವನ್ನು ಗಳಿಸುವ ಸಲುವಾಗಿ ಮಾಡುವ ಪ್ರಯತ್ನಗಳೆಲ್ಲವೂ ಪ್ರಾಣಾಪಾಯವನ್ನೇ ಒಳಗೊಂಡಿರುವುವು—ಎಂಬುದು ಹಿರಿಯರ ಮಾತು. ಹಣದ ಬಾಯಾರಿಕೆಯಿಂದ ಸುಳ್ಳು, ಕಳ್ಳತನ, ಮೋಸ ಇತ್ಯಾದಿ ಹೀನಕರ್ಮಾಸಕ್ತರು ಮೇಲಿನ ವಾಕ್ಯವನ್ನು ವಿಶೇಷ ಲಕ್ಷ್ಯದಲ್ಲಿರಿಸಬೇಕು.

ತೃಪ್ತಿಯುಳ್ಳವನನ್ನು ಸಕಲಸಂಪತ್ತುಗಳೂ ವರಿಸುವವು. ಮೆಟ್ಟನ್ನು ಮೆಟ್ಟಿಕೊಂಡು ನಡೆಯುವವನು ಪ್ರಪಂಚವನ್ನೆಲ್ಲ ಚರ್ಮದಿಂದ ಮುಚ್ಚಿರುವಂತೆಯೇ ಭಾವಿಸುವನು. ಸಂತೋಷವೆಂಬ ಅಮೃತವನ್ನು ಪಾನಮಾಡಿ, ದಣಿದು ಮನಸ್ಸಿನಲ್ಲಿ ಕಾಮಕ್ರೋಧಗಳನ್ನು ಅಡಗಿಸಿದವನಿಗೆ ದೊರೆಯುವ ಸುಖವು ದುರಾಸೆಯಿಂದ ಹುಚ್ಚುನಾಯಿಯಂತೆ ಅಲೆಯುವವನಿಗೆ ಸಿಗುವುದೇ? ಆಸೆಯನ್ನು ಮೆಟ್ಟಿ ವೈರಾಗ್ಯವಂ ಕೈಕೊಂಡರೆ ನಿಜವಾದ ಓದು, ತಿಳುವಳಿಕೆಗಳನ್ನು ಪಡೆದಂತಾಗುವದು. ಅವನು ಸಕಲ ವಿಧವಾದ ಅನುಷ್ಠಾನಗಳನ್ನು ನೆರವೇರಿಸಿದಂತಾಗುವದು. ಲೋಭಪೀಡಿತನಾಗಿ ಸಂತುಷ್ಟಿಯಿಲ್ಲದವನು ಆತ್ಮದ್ರೋಹಿಯೆನಿಸುವದು ದಿಟ. ಲೋಭಿಗೆ ತೃಪ್ತಿಯೇ ಇಲ್ಲ. ಅವನು ಎಂತಹ ಹೀನ ದೀನ ಕೃತ್ಯಗಳನ್ನು ಮಾಡಲು ಹೇಸುವದಿಲ್ಲ. ಅವನು ಮನಸ್ಸನ್ನು ಬಿಗಿಹಿಡಿಯಲಾರನು. ಇಂದ್ರಿಯಗಳೂ ಅವನಿಗೆ ಅಡಗಲಾರವು. ಲೋಭಿಯು ಸಕಲವಿಧವಾದ ಆಪತ್ತುಗಳಿಗೂ ಗುರಿಯಾಗತಕ್ಕವನೇ ಸರಿ.

ವಾಚಕ ಪ್ರಿಯರೇ! ಸಕಲ ಲೋಕೋಪಕಾರಿಗಳಾದ ಜ್ಞಾನಿಗಳು ಪ್ರಾಣಿಗಳ ಹಿತದೃಷ್ಟಿಯಿಂದ ಅನೇಕ ಹಿತೋಪದೇಶಗಳನ್ನು ಮಾಡಿರುತ್ತಾರೆ. ಆದರೆ, ಆಯುಷ್ಯವು ತೀರಿದವನಿಗೆ ದೀಪದ ಕುಡಿಯ ವಾಸನೆಯು ತಿಳಿಯದಂತೆ ದುರುಳರಿಗೆ ಸದ್ವಾಕ್ಯಗಳ ಅರಿವೇ ಆಗುವದಿಲ್ಲ. ನಾಯಿಯ ಡೊಂಕು ಬಾಲಕ್ಕೆ ಬೆವರು ಬರುವಂತೆ ಮಾಡಿ, ಎಣ್ಣೆಹಚ್ಚಿ, ಹಿಸುಕಿ ದಬ್ಬೆಗಳನ್ನು ಜೋಡಿಸಿ ದಾರದಿಂದ ಬಿಗಿದು ಹನ್ನೆರಡುವರ್ಷಗಳವರೆಗೆ ಇಟ್ಟಿದ್ದರೂ, ನಾಯಿಯಬಾಲದ ಡೊಂಕು ಮೊದಲಿನ ಗತಿಗೇ ಬರುವದು, ಎಂದು ಹಿರಿಯರು ಹೇಳುತ್ತಾರೆ. ಅಂತೆಯೇ ದುರ್ಜನರಿಗೆ ಎಷ್ಟು ಬೋಧಮಾಡಿದರೂ ಅಹಂಕಾರ, ಮಮಕಾರ, ಮದ, ಮತ್ಸರ, ಅಸೂಯೆ, ದುರಾಗ್ರಹ, ಕುಯುಕ್ತಿ, ಕುತಂತ್ರ, ಕುಟಿಲತನ ಇತ್ಯಾದಿ ತಮ್ಮ ವಕ್ರಸ್ವಭಾವವನ್ನು ಬಿಡುವದಿಲ್ಲವೆಂದೂ "ಶ್ವಾನನ ಬಾಲದ ಡೊಂಕಂ । ಕಾನನದಲಿ ಹರಿವ ಹಳ್ಳಹಾದಿಯ ಡೊಂಕಂ ॥ ದುರ್ಜನರ ಮನದ ಡೊಂಕಂ । ಭೂನಾಥನು ತಿದ್ದಲರಿಯ ಸರಸಕವೀಂದ್ರ॥ ಎಂದು ನೀತಿಕಾರರು ಹೇಳಿರುವರು.

ಭೂಮ್ಯಂತರಿಕ್ಷಗಳನ್ನೂ ತದಂತರ್ಗತವಾದ ಸ್ಥಾವರಜಂಗಮಾದಿ ಸರ್ವಸ್ವವನ್ನೂ ಸೃಜಿಸಿ, ದಿವ್ಯವಾದ ತನ್ನ ಮಹಾಮಹಿಮೆಯೆಂಬ ಕಿರಣಗಳ ಪ್ರಚಂಡಪ್ರಭೆಯಿಂದ ಪ್ರಜ್ವಲಿಸುತ್ತಿರುವ ಪ್ರಭಾಕರನೋ ಎಂಬಂತೆ ಸದಾ ಪ್ರಕಾಶಮಯನಾಗಿರುವ ಜಗದೀಶನ ಅನುಗ್ರಹದಿಂದ ಸಜ್ಜನರಿಗೆ ಸಾಧಿಸಬೇಕಾದ ಸರ್ವಕಾರ್ಯಗಳೂ ಕೈಗೂಡಿ ಫಲದಾಯಕಗಳಾಗಲಿ!

ದುಃಖವಾರ್ತೆ

ಡಿ॥ ಬೆಳಗಾವ, ತಾಲೂಕ ಸಂಪಗಾವ ಪೈಕಿ ಮುತ್ತಗಟ್ಟಿ ಹಿರೇಮಠದ ವೇ॥ ಬಸಲಿಂಗಯ್ಯನವರು, ಭಾ॥ ವ ೧೩ ಶುಕ್ರವಾರ ದಿವಸ ಶಿವಾಧೀನರಾದರೆಂದು ತಿಳಿಸಲು ಬಹು ವಿಷಾದವೆನಿಸುತ್ತದೆ. ಇವರು ವಯಸ್ಸಿನಿಂದ ಚಿಕ್ಕವರಿದ್ದರೂ ಮಹಾ ವ್ರತನಿಷ್ಠರಿದ್ದರು. ಇವರಲ್ಲಿ ಗುರುಭಕ್ತಿಯು ತುಂಬಿ ತುಳುಕುತ್ತಿತ್ತು. ತಮ್ಮ ಗುರುಗಳ ಗದ್ದುಗೆಯನ್ನು ಕಟ್ಟಿಸುವ ಸಲುವಾಗಿ ೩ ವರ್ಷಗಳಿಂದಲೂ ಅಖಂಡ ವ್ರತವನ್ನು ಪಾಲಿಸಿದರು. ಇವರ ಸದ್ವರ್ತನದ ಪ್ರಭಾವವನ್ನು ನೋಡಿ ಸರ್ವರೂ ಇವರನ್ನು ಭಯಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ಪ್ರಾಪಂಚಿಕರಿದ್ದರೂ ಯೋಗಿಗಳಂತೆ ಇವರ ವರ್ತನವಿತ್ತು. ಇವರಿಗೆ ಒಬ್ಬ ೨ ವರ್ಷದ ಬಾಲಕನಿದ್ದಾನೆ. ತಮ್ಮ ಗುರುಗಳ ಗದ್ದುಗೆಯ ಕಟ್ಟಡವನ್ನು ಮುಗಿಸಿ ಹಿಡಿದಿರುವ ೩ ವರ್ಷದವರೆಗೆ ಸೀಪದಾರ್ಥ, ಗೋಧಿ, ಬಾಳೇಹಣ್ಣುಗಳ ತ್ಯಾಗರೂಪವ್ರತವನ್ನು ಪೂರೈಸಬೇಕೆನ್ನುವಷ್ಟರಲ್ಲಿಯೇ ಮಾರಕ ರೋಗದಿಂದ ಒಮ್ಮಿಂದೊಮ್ಮೆಲೆ ಶಿವಾಧೀನರಾದರು. ಮರಣಾಂತ್ಯದವರೆಗೂ ಗುರುನಾಮಸ್ಮರಣೆಯನ್ನು ಬಿಡಲಿಲ್ಲ. ಪ್ರಾಣೋತ್ಕ್ರಮಣ ಸಮಯದಲ್ಲಿ 'ಸದ್ಗುರುನಾಥಾ" ಎಂಬ ಪವಿತ್ರಾಭಿಧಾನವನುಚ್ಚರಿಸುತ್ತ ಶಿವಾಧೀನರಾದರು. ಇಂತಹ ರತ್ನವನ್ನು ಕಳೆದುಕೊಂಡದ್ದಕ್ಕೆ ಸರ್ವ ಭಕ್ತಮಂಡಳಿಗೂ, ಅವರ ಕುಟುಂಬವರ್ಗಕ್ಕೂ ಬಹಳ ಹಾನಿಯಾಗಿದೆ. ಅವರ ತಂದೆ ತಾಯಿಯವರಿಗೆ ಆದ ದುಃಖವನ್ನು ವರ್ಣಿಸುವದು ಕಷ್ಟತರವಾಗಿದೆ. ಮರಣ ಸಮಯದಲ್ಲಿ ಅವರಿಗೆ ೨೬ ವರ್ಷಗಳಿದ್ದವು. ಮೃತರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನು ಕೊಡಲೆಂದೂ ಅವರ ಕುಟುಂಬ ವರ್ಗಕ್ಕೆ ಸೌಖ್ಯವನ್ನು ಕೊಡಲೆಂದೂ ಬೇಡಿಕೊಳ್ಳುತ್ತೇನೆ.

ಓರ್ವ ದುಃಖಭಾಗಿ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ನೇಕರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ವರ್ಷಕ್ಕೋ ಹತ್ತು ವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯ ರ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಅವರಿ ವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯ ನ್ನು ಬರೆಯಿಸಿಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುತ್ತಿರುವರು ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ನ್ನ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇವನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ಗಿ ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ ವರ ಚನ್ನಾಗಿ ತೋರಿಸಲ್ಪಟ್ಟಿದೆ ಆದುದರಿಂದ ಸದರಿ ಪುಸ್ತಕ ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಳಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ರ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಮಾ ಕಿರಿದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದ ರ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ

ಶ್ರೀ **ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,**
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಯಲ್ಲಿ **ತಯಾರಾಗತಕ್ಕ** ರಸಾಯನ ಔಷಧಿಗಳು ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲಿ	ಮೂಲ್ಯ
ರ್ಣಮಕರಧ್ವಜ	೧	೩೦—೦—೦
ಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
ಸಿ ಘೂರ	೧	೨—೦—೦
ಸಿಂಧೂರ	೧	೪—೦—೦
ಲಸಿಂಧೂರ	೧	೪—೦—೦
ಸಿಂಧೂರ	೧	೬—೦—೦
ರ್ಣವಂಗ	೧	೩—೦—೦
ವಂಗ	೧	೧—೦—೦
ಭಸ್ಮಗಳು		
ರ್ಣಭಸ್ಮ	೧	೪೦—೦—೦
ತಭಸ್ಮ	೧	೪—೦—೦
ಮ್ರಭಸ್ಮ	೧	೦—೮—೦
ಹಭಸ್ಮ	೧	೦—೧೨—೦
ಗಭಸ್ಮ	೧	೦—೮—೦
ಗಭಸ್ಮ	೧	೦—೬—೦
ಕ್ರಭಸ್ಮ	೧	೪೦—೦—೦
ಧ್ರಕಭಸ್ಮ	೧	೩—೦—೦
ತ್ರಾಳಭಸ್ಮ	೧	೦—೮—೦
ಚೀನಭಸ್ಮ	೧	೦—೮—೦
ಕ್ತಿಭಸ್ಮ	೧	೦—೮—೦
ಂಡೂರಭಸ್ಮ	೧	೦—೮—೦
ರ್ಣಮಾಕ್ಷಿಕಾಭಸ್ಮ	೧	೦—೧೨—೦
ಎಕ್ರಭಸ್ಮ	೧	೪೦—೦—೦
ವಾಲಭಸ್ಮ	೧	೦—೮—೦
ಪ್ಪಿನ ಭಸ್ಮ	೧	೦—೮—೦
ರಿಂಗದ **ಕೋಡಿನ ಭಸ್ಮ**	೧	೦—೮—೦
ದಂತಿ**ಹರತಾಳಭಸ್ಮ**	೧	೦—೮—೦
ಸ್ತೂರಿ (೧ನೇ ನಂಬರ್)	೧	೫೦—೦—೦
ಜಿತ **ಸೂರ್ಯಪುಟ**	೧	೧—೦—೦
ಜಿತ **ಅಗ್ನಿಪುಟ**	೧	೦—೮—೦

ನೋಟ್—**ಈ ಔಷಧಾಲಯದಲ್ಲಿ** ಸರ್ವಪ್ರಕಾರದ ಸ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಉಖಿಮಠ, ಜಿಲ್ಲಾ ಗಢವಾಲ್ ಯು ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಶಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಶುದ್ಧವಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಅವರ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ- ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ** ವಿ ಪಿ ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ ಬೆಲೆ **೮ ರೂಪಾಯಿ.** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ ಗೆ ದೊರೆಯುವುದು ವಿ. ಪಿ. ಚಾರ್ಜು ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೧—೬
ಪದ್ಮ ಸಿಂಹಾಸನಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು
ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು
ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರ

ಗಳನ್ನು ಕೊಟ್ಟಿ
ರು. ಪ್ರಸಿದ್ಧವಾದ
ನಶ್ಯದ ಪುಡಿಯಿಂ
ಸ್ವಸ್ಥವಾಗುವ ವ್ಯಾ
ಗಳು ಯಾವವೆಂ
ರೆ:—ಪೀನಸಿ ಒ
ತಲೆನೋವು, ತಲೆ
ಲ್ಲಿಯ ರೋಗಗಳು
ಕಣ್ಣುಗಳಲ್ಲಿ ಉಂ
ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾ
ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ
೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು
ಸಹ ಹೆಚ್ಚುಮಾಡುತ್ತದೆ ಮೂರುಚಿಟ್ಟಿನ ಸಾಧಾ
ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂ
ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾ
ವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸು
ತ್ತಾರೆ ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೮ ಆಣೆ
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೬ ಆಣೆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[24] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿಸಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ಸ್ವರಿತಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨
ಶಿವಸೂತ್ರಸಿದ್ಧಾಂತದರ್ಪಣ	೧೨
ಶ್ರೀಕರಭಾಷ್ಯಂ (ಚತುಸ್ಸೂತ್ರಿ)	೧
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧
ವೀರಶೈವರತ್ನ (೫ನೆಯ ಆವೃತ್ತಿ, ೩೦ಮಹತ್ವದ ಫೋಟೋಗಳಿರುವುವು)	೧|
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨
ವೀರಶೈವಸಿದ್ಧಾಂತಸುಧಾಕರ	೨
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨ ಪುಟ)	೮
A brief life sketch of Pandit Sri Kashinatha Shastriji (*English*)	4 A
The Philosophical Aspect of Virasaivism (*English*)	8 A
Speeches by Pandit Shri Kashinatha Shastriji *English*)	12 A
लिंगधारणचंद्रिका (संस्कृत)	३
वीरशैवरत्न (मराठी)	१
महानारायणोपनिषत् (वीरशैवभाष्य–संस्कृत)	१
पुरुषसूक्तम् (वीरशैवप्राचीनभाष्योपेतम्)	४ आ
नंदिकेश्वरकारिका (संस्कृत)	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿ
೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ
ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ**

ಮೈಸೂರು ಸಯ್ಯಾಜೀರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾದಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಸಕಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೬ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩ನೇ ನವಂಬರ್ ೧೯೪೧ [ಸಂಚಿಕೆ ೨೭

ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಾಯ ನಮಃ

ರಾಮಪುರದ ಶ್ರೀಹಾಲಸ್ವಾಮಿಗಳವರ ಶುಭಾಗಮನ

ರಾಮಪುರದ **ಶ್ರೀಹಾಲಸ್ವಾಮಿಗಳು** ತಾ॥ ೮-೯-೧೯೪೧ ನೆಯ **ಸೋಮವಾರ** ದಿವಸ ಪಂಬಳ ಗ್ರಾಮದಿಂದ **ಡೋಣಿ ಸದ್ಭಕ್ತರ** ಪ್ರಾರ್ಥನೆಯ ಮೇರೆಗೆ ಡೋಣಿಗ್ರಾಮಕ್ಕೆ ಆಗಮಿಸಿದರು. ಪುರಪ್ರಮುಖರಾದ ವೇ॥ ಶ್ರೀ **ವಿರೂಪಾಕ್ಷಶಾಸ್ತ್ರಿ**ಗಳು ಹಿರೇಮಠ, ವೇ॥ ಶ್ರೀ ಗವಿಸಿದ್ಧಯ್ಯನವರು **ಚಿಕ್ಕಮಠ**, **ಶ್ರೀಮಾನ್** ತೋಟಪ್ಪನವರು **ಹನಸಿ**, **ಶ್ರೀಮಾನ್ ಬಸೆಟ್ಟೆಪ್ಪ**ನವರು ಜಾಲವಾದಿ, **ಶ್ರೀಮಾನ್ ಶಿವಪ್ಪ**ನವರು ಗಾಂಜಿ ಮೊದಲಾದವರೂ **ಶ್ರೀ ಪಂಚಾಚಾರ್ಯ** ಭಜನಸಂಘದವರೂ ವಾದ್ಯಸಮೇತರಾಗಿ ಸ್ವಾಗತಿಸಿ ಹಾರತುರಾಯಿಗಳನ್ನು ಸಮರ್ಪಿಸಿ **ಉತ್ಸವದೊಡನೆ ಈಶ್ವರದೇವಾಲಯಕ್ಕೆ** ಕರೆದುಕೊಂಡುಬಂದರು. **ಶ್ರೀಗಳವರು ಪೂರ್ತಿಮಾಡಿದ** ಕೂಡಲೆ ಶ್ರೀ ಜಗದ್ಗುರು **ಪಂಚಾಚಾರ್ಯ**ರ ಜಯಘೋಷವು **ಸಭೋಮಂಡಲವನ್ನು** ವ್ಯಾಪಿಸಿತು. **ಭಾಷಣ**ಗಳಾದಮೇಲೆ **ಸಭೆಯು ಸಮಾಪ್ತಿಗೊಂಡಿತು** ತಾ॥ ೯-೯-೧೯೪೧ **ನೆಯ ದಿವಸದಿಂದ ಶ್ರೀಗಳ ಪೂಜೆಯು** ಶ್ರೀಮಾನ್ **ಶಿವಪ್ಪ ಗಾಂಜಿ ಇವರ ಮನೆಯಲ್ಲಿ** ನೆರವೇರಿತ್ತು ೯ **ನೆಯ ತಾರೀಖಿನ** ದಿವಸ ಸ್ವಾಮಿಗಳ **ಅಧ್ಯಕ್ಷತೆಯಲ್ಲಿ ಸಭೆ ಸೇರಿತು**. ಆಗ್ಗೆ **ಸದಾಚಾರಸಂಪನ್ನರೂ-ವಿದ್ಯಾವಿಶಾರದರೂ-ಜ್ಞಾನವೃದ್ಧರೂ ವೈದಿಕ ವಾಙ್ಮಯಪ್ರವೀಣರೂ** ಆದ ವೇ॥ ಶ್ರೀ ವಿರೂಪಾಕ್ಷಶಾಸ್ತ್ರಿಗಳವರು **ಮೊದಲು ಧಾರ್ಮಿಕವಿಷಯವನ್ನು** ಹೇಳಿದಮೇಲೆ **ವೀರಶೈವ ಮತೋದ್ಧಾರಕರೂ ಪಂಡಿತ ಮಂಡಲಮಂಡನಾಯಮಾನರೂ ಕೋಟಿಸೂರ್ಯರಂತೆ** ತೇಜೋನ್ವಿತರೂ **ಆದ ವೇ॥ ಪಂ॥** ಶ್ರೀ **ಕಾಶೀನಾಥ** ಪಂಡಿತರ **ಜೀವನಚರಿತ್ರವನ್ನು ಹೇಳಿದರು.** ಅವರು ಕಾಶಿಯಲ್ಲಿ **ವಿದ್ಯಾಭ್ಯಾಸಮಾಡುವಾಗ್ಗೆ** ಪರಮತೀಯರಾದ ಕಾಳಿಕೇಶ್ವರ**ದತ್ತಪಂಡಿತರನ್ನು** ಜಯಿಸಿದರೆಂದೂ, ಶ್ರೀ ಕಾಶೀಕ್ಷೇತ್ರದಲ್ಲಿ ೧೯೧೮ ನೆಯ ಇಸ್ವಿಯಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ **ಸಮ್ಮೇಳನವನ್ನು** ನೆರವೇರಿಸಿದರೆಂದೂ, ಬಳಿಕ **ಉಜ್ಜಯಿನೀ** ಪೀಠಾಧಿಪತಿಗಳಾಗಿದ್ದ ಶ್ರೀ॥ ಪರಶಿವಾವತಾರಿಗಳಾದ **ಶ್ರೀ** ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯಸನ್ನಿಧಿಗೆ ಆಗಮಿಸಿ ತಮ್ಮ **ಸಂಕಲ್ಪವನ್ನು ಅರಿಕೆಮಾಡಿಕೊಂಡರೆಂದೂ**, ಅದಕ್ಕೆ **ಶ್ರೀ** ಜಗದ್ಗುರುಗಳವರು **ತಮ್ಮ ಪ್ರಸಾದವಾಣಿ**ಯಿಂದ ವೀರಭದ್ರಮೂರ್ತಿಯೇ, ನೀನು ಕೈಕೊಂಡ ಕಾರ್ಯವು **ಕೊನೆಗಂಡು ಇಡೀ ಜಗತ್ತನ್ನೇ** ಬೆಳಗಲಿಯೆಂದು **ಆಶೀರ್ವಾದಮಾಡಿದರೆಂದೂ**, ಆಗ್ಗೆ ಪಂಡಿತರು **ಶ್ರೀಜಗದ್ಗುರುಗಳವರ ಆಶೀರ್ವಾದರೂಪರತ್ನ**ಕಿರೀಟವನ್ನು **ಮಸ್ತಕದಲ್ಲಿ ಧರಿಸಿಕೊಂಡು** ವೇದಾಗಮಗಳೆಂಬ **ನಿಶಿತವಾದ ಶಸ್ತ್ರಗಳನ್ನೂ ಬ್ರಹ್ಮಚರ್ಯವನ್ನೂ** ಚಾಪವನ್ನಾಗಿ**ಮಾಡಿ** ವಿದ್ವತ್‌ಶಕ್ತಿಯನ್ನು ಬಾಣಕ್ಕೆ ಹೂಡಿ ವಿರೋಧಿಗಳನ್ನು ಬಗ್ಗುಬಡಿದರೆಂದೂ, ತಮ್ಮ ವಿದ್ವತ್ತೆಂಬ ಅಮೃತಕಿರಣಗಳಿಂದ ಗುರುವರ್ಗಕ್ಕೆ ಚೈತನ್ಯವನ್ನಿತ್ತರೆಂದೂ, ಆ ಮಹಿಮಾಶಾಲಿಯ ಅಮೃತಕಿರಣಗಳು ಸೇತುಶೀತಾಚಲಪರ್ಯಂತ ವ್ಯಾಪಿಸಿರುವವೆಂದೂ, ಆ ವಿಭೂತಿಯು ಸಾಮಾನ್ಯನಾಗಿರದೆ ಗಣಾಧೀಶ್ವರನಾಗಿರುವನೆಂದೂ, ಪರಮಾತ್ಮನು ಆ ಮೂರ್ತಿಯನ್ನು ವೀರಶೈವಮತೋದ್ಧಾರಕ್ಕಾಗಿಯೇ ಈ ಭೂಮಂಡಲಕ್ಕೆ ಕಳಿಸಿರುವನೆಂದೂ, ಇಂತಹ ಗುರುಮೂರ್ತಿಯನ್ನು ಅವಿವೇಕಿಗಳು ನಿಂದಿಸುತ್ತಿರುವುದು ಅವರ ಪಾಪಪ್ರಭಾವವೆಂದೂ, ನಿಂದಕರಿಂದ ಆ ಗುರುಮೂರ್ತಿಯ ಪ್ರಕಾಶವು ಪ್ರಭಾಕರನಂತೆ ಬೆಳಗುತ್ತಿರುವದೆಂದೂ, ಆ ಮಹಿಮಾಶಾಲಿಯ ವರ್ಣನೆಯನ್ನು ಮಾಡಲು ಸಹಸ್ರನಾಲಿಗೆಯುಳ್ಳ ಆದಿಶೇಷನಿಗೂ ಕೂಡ ಸಾಧ್ಯವಿಲ್ಲವೆಂದೂ ಹೇಳಿ ಸಮಾಪ್ತಿಗೊಳಿಸಿದರು. ಸಭಾಧ್ಯಕ್ಷರಾದ ಶ್ರೀಗಳವರು ಅದೇ ವಿಷಯವನ್ನು ತೆಗೆದುಕೊಂಡು ಭಕ್ತಾದಿಗಳಿಗೆ ಪರಿಣಾಮವಾಗುವ ಹಾಗೆ ಸದ್ಬೋಧೆಯನ್ನು ಮಾಡಿದರು ಬಳಿಕ ಶ್ರೀಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ! ಶ್ರೀಕಾಶೀನಾಥ ಗುರುಮೂರ್ತಿಕೀ ಜೈ! ಎಂಬ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಶ್ರೀ ಗುರುಪದಾಬ್ಜಭ್ರಮರ
ಬಸಪ್ಪ ಶಿವದೀಕ್ಷಿತ ಡೋಣಿ

ಅಮೆರಿಕಾ ರಾಷ್ಟ್ರಾಧ್ಯಕ್ಷರ ಭಾಷಣ

ಅಮೇರಿಕಾ ರಾಷ್ಟ್ರಾಧ್ಯಕ್ಷರಾದ ಶ್ರೀ ರೂಜ್‌ವೆಲ್ಟರು ನೌಕಾದಳದ ಭೋಜನ ಸಮಾರಂಭದಲ್ಲಿ ಮಾತನಾಡುತ್ತ—

"ಈಗ್ಗೆ ೫ ತಿಂಗಳಿಂದ ನಮ್ಮದೇಶದಲ್ಲಿ ಅನೇಕ ಘಟನಾವಳಿಗಳು ನಡೆದಿವೆಯೆಂದೂ, ನಮ್ಮ ಭೂ ಬಲವೂ ನೌಕಾಬಲವೂ ಐಸ್‌ಲೆಂಡಿನ ರಕ್ಷಣೆಭಾರವನ್ನು ವಹಿಸಿವೆಯೆಂದೂ, ಅಟ್ಲಾಂಟಿಕ್ ಸಾಗರದ ಎಲ್ಲ ಭಾಗಗಳಲ್ಲೂ ನಾಜಿಗಳು ಅಮೆರಿಕೆಯ ಸಮೀಪಕ್ಕೆ ಬಂದು ಹಡಗುಗಳ ಮೇಲೆ ಮುತ್ತಿಗೆ ನಡೆಸಿದ್ದಾರೆಂದೂ, ಇದರಿಂದ ಅಮೆರಿಕೆಯ ಅನೇಕವ್ಯಾಪಾರದ ಹಡಗುಗಳು ಮುಳುಗಿಹೋದವೆಂದೂ ಅಮೆರಿಕೆಯ ಎರಡು ಡಿಸ್ಟ್ರಾಯರುಗಳಿಗೆ ಸಹ ನಾಜಿಗಳು ಏಟು ಹಾಕಿದರೆಂದೂ. ನಮ್ಮ ನೌಕಾಬಲದ ೧೧ ಜನರು ನಾಜಿಗಳ ದೆಸೆಯಿಂದ ಸತ್ತರೆಂದೂ, ನಾಜಿಗಳ ಮೇಲೆ ಗುಂಡುಹೊಡೆಯುವುದನ್ನು ನಿವಾರಿಸಬೇಕೆಂದು ನಾವು ಅಪೇಕ್ಷೆಪಟ್ಟೆವೆಂದೂ, ಆದರೆ ಹಾರಿಸುವ ಕೆಲಸವು ಆರಂಭವಾಗಿದೆಯೆಂದೂ, ಮೊದಲನೇ ಏಟನ್ನು ಹಾಕಿದವರಾರೆಂಬುದನ್ನು ಇತಿಹಾಸವಾಗಲೇ ಬರೆದಿಟ್ಟಿದೆಯೆಂದೂ, ಅದು ಹೇಗೇ ಇರಲಿ ಕಡೆಯ ಏಟನ್ನು ಯಾರು ಹಾಕುವರೆಂಬುದೇ ಮುಖ್ಯವಾಗಿರುವುದೆಂದೂ, ಸಮುದ್ರದ ಮೇಲೆ ಅಮೆರಿಕನ್ನರನ್ನು ಬೆದರಿಸಬೇಕೆಂಬುದೇ ಹರ್ ಹಿಟ್ಲರನ ಉದ್ದೇಶವೆಂದೂ, ಅಮೆರಿಕನ್ನರ ಮನೋಧರ್ಮವನ್ನು ಆತನು ತಪ್ಪಾಗಿ ತಿಳಿದಿರುವನೆಂದೂ, ಹಿಟ್ಲರನು ತನ್ನ ವರ್ತನೆಯಿಂದ ಅಮೆರಿಕಾಜನಾಂಗವನ್ನು ರೇಗಿಸಿದ್ದಾನೆಂದೂ, ನಮ್ಮ ರಾಷ್ಟ್ರೀಯನೀತಿಯಲ್ಲಿ ಭಯವು ತಲೆ ಹಾಕಿದ್ದಾದರೆ, ನಮ್ಮ ಹಡಗುಗಳೆಲ್ಲವೂ ಬಂದರುಗಳಲ್ಲಿ ತಲೆ ಮರೆಸಿಕೊಂಡಿರಬೇಕಾಗುವದೆಂದೂ, ಹಿಟ್ಲರನು ಹಾಕಿದ ಗೆರೆಯಿಂದಾಚೆ ಅವು ತೆರಳಲಾರವೆಂದೂ, ಇಂತಹ ಪರಿಸ್ಥಿತಿಯನ್ನು ಅಮೆರಿಕನೆಂದಿಗೂ ಸಹಿಸದೆಂದೂ, ಅದರ ಆತ್ಮಗೌರವಕ್ಕಿದು ವಿರುದ್ಧವಾದುದೆಂದೂ. ಅಟ್ಲಾಂಟಿಕ್ ಸಾಗರದಾಚೆ ಇರುವ ದೇಶಗಳನ್ನು ಗೆಲ್ಲುವ ಉದ್ದೇಶವು ತನಗಿಲ್ಲವೆಂದು ಹಿಟ್ಲರನು ಹೇಳುತ್ತಾನೆಂದೂ, ಆದರೆ, ಅವನ ಸಬ್‌ಮೆರೀನುಗಳೂ ಮತ್ತು ನೌಕೆಗಳೂ ನಿಜಸ್ಥಿತಿಯನ್ನು ಸಾರುತ್ತವೆಂದೂ, ಹಿಟ್ಲರ್ ಸರಕಾರದವರು ತಯಾರಿಸಿರುವ ರಹಸ್ಯ ಭೂಪಟವೊಂದು ನನ್ನ ಕೈಯಲ್ಲಿರುವುದೆಂದೂ, ದಕ್ಷಿಣ ಅಮೆರಿಕ ಮತ್ತು ಮಧ್ಯ ಅಮೆರಿಕಗಳಲ್ಲಿ ಸಹ ನಾಜಿಗಳು ಯಾಜಮಾನ್ಯ ನಡೆಸುವ ಉದ್ದೇಶವು ಅದರಿಂದ ವ್ಯಕ್ತಪಡುವದೆಂದೂ, ನಾಜಿ ಸರಕಾರದವರು ತಯಾರಿಸಿರುವ ಇನ್ನೊಂದು ಯೋಜನೆಯು ನಮ್ಮ ಕೈಯಲ್ಲಿದೆಯೆಂದೂ, ಹಿಟ್ಲರನಿಗೆ ಜಯವಾದರೆ, ಪ್ರಪಂಚದಲ್ಲಿರುವ ನಾನಾ ಧರ್ಮಗಳನ್ನೆಲ್ಲ ನಾಶಮಾಡಿ, ನಾನಾ ಮಠಗಳ ಆಸ್ತಿಪಾಸ್ತಿಗಳನ್ನೆಲ್ಲ ರೀಚ್ ಸರಕಾರಕ್ಕೆ ಸೇರಿಸಿಕೊಳ್ಳಬೇಕೆಂಬುದೇ ಉದ್ದೇಶವೆಂದೂ, ದೇವರಿಗಿಂತ ಹಿಟ್ಲರನು ದೊಡ್ಡವನೆಂಬುದು ಅವರ ಮತವೆಂದೂ ಬೈಬಲ್ಲಿಗೆ ಬದಲಾಗಿ "ಮೀನ್ ಕೆಂಫ್" ಬುಕ್ಕನ್ನು ಎಲ್ಲರೂ ಓದಬೇಕೆಂಬುದೇ ಗುರಿಯೆಂದೂ, ರಣರಂಗಗಳಲ್ಲಿ ಹೋರಾಡುತ್ತಿರುವ ಯೋಧರಿಗೆ ನಾವು ಬೇಕಾದವನ್ನು ಪರಿಕರಣಗಳನ್ನು ಒದಗಿಸುತ್ತಿದ್ದೇವೆಂದೂ, ಈ ಶಸ್ತ್ರಾಸ್ತ್ರಗಳೂ ಇತರ ಪದಾರ್ಥಗಳೂ ಸಮುದ್ರದ ತಳಕ್ಕೆ ಕಳುಹಿಸಲ್ಪಡಲಾಗದೆಂಬುದೇ ರಾಷ್ಟ್ರದ ಸಂಕಲ್ಪವೆಂದೂ, ಅಮೆರಿಕವು ಸಾಮಾನುಗಳನ್ನು ಕಳುಹಿಸಿಯೇ ತೀರಬೇಕೆಂಬುದು ನಮ್ಮ ಸಂಕಲ್ಪವಾಗಿದೆಯೆಂದೂ, ಇದನ್ನು ವಿರೋಧಿಸಿ ಅಮೆರಿಕೆಯ ಹಡಗುಗಳನ್ನು ಮುಳುಗಿಸಲಾಗಿದೆಯೆಂದೂ, ಆದ್ದರಿಂದ ಶತ್ರು ಹಡಗುಗಳನ್ನು ಕಂಡೊಡನೆಯೇ ಗುಂಡು ಹಾರಿಸಬೇಕೆಂದು ಸೂಚನೆ ಕೊಡಲಾಗಿದೆಯೆಂದೂ, ನಮ್ಮ ನೌಕಾಬಲವು ಹಿಂದೆಂದೂ ಕಾಣದಂತೆ ಬೆಳೆಯುತ್ತಿದೆಯೆಂದೂ, ಈಗಾಗಲೇ ಏಟುಹಾಕಲು ಸಿದ್ಧವಾಗಿದೆಯೆಂದೂ, ಅಟ್ಲಾಂಟಿಕ್‌ನಲ್ಲಿ ಕಾವಲು ತಿರುಗುತ್ತಿರುವ ನೌಕಾ ಭಾಗಗಳಾಗಲೇ ಕಾರ್ಯೋನ್ಮುಖವಾಗಿವೆಯೆಂದೂ, ನಮ್ಮ ಹೊಸ ಸೇನೆಯು ನಾಜಿ ದುಷ್ಟರನ್ನು ಎದುರಿಸಲು ಸಮರ್ಥವಾಗುವಷ್ಟು ಮಟ್ಟಿಗೆ ವಿಸ್ತರಿಸಲ್ಪಡುತ್ತಿದೆಯೆಂದೂ, ಹರ್ ಹಿಟ್ಲರನನ್ನು ತಡೆದು ನಿಲ್ಲಿಸುವುದೇ ನಮ್ಮ ಗುರಿಯಾಗಿರಬೇಕೆಂದೂ, ಒಂದು ಸಾರೆ ಹಿಟ್ಲರನು ನಿಂತನೆಂದರೆ ಅವನ ಪತನವಾದಂತೆಯೆಂದೂ,-ಸರ್ವಾಧಿಕಾರ ಪ್ರಭುತ್ವಗಳಿಗೆ **ಎಡಬಿಡದೆ ಜಯವಾಗುತ್ತಿದ್ದರೆ ಮಾತ್ರ ಅವು** ಬದುಕಿರಬಲ್ಲವೆಂದೂ ' ಹೇಳಿದರು.

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಜೀಯಾಚ್ಛ್ರೀರೇಣುಕಾಚಾರ್ಯಃ ಶಿವಾಚಾರ್ಯಶಿಖಾಮಣಿಃ ।
ಯೋ ವೀರಶೈವಸಿದ್ಧಾಂತಂ ಸ್ಥಾಪಯಾಮಾಸ ಭೂತಲೇ ॥

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ
ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯ ಮಹಾಸ್ವಾಮಿನಾಂ

ಸುವರ್ಣರಜತತಿರ್ಯಗಾಂದೋಲಿಕಾ ಮಹೋತ್ಸವಾಹ್ವಾನಪತ್ರಿಕಾ.

ಸೋಲಾಪುರ ಶಹರನಿವಾಸಿಗಳಾದ ವೀರಶೈವ ಮಹಾಮಂಡಲಿಯವರು ವ್ಯಕ್ತಪಡಿಸುವದೇನೆಂದರೆ—

ಶ್ರೀ [illegible] ಸ್ವಾಮಿಗಳ [illegible] ಶ್ರೀ ಜಗದ್ಗುರುಗಳವರು ಮಹಾಸಂಸ್ಥಾನದ ಪರಂಪರಾನುಗತಸಂಪ್ರ[illegible] ಧರ್ಮಪ್ರವೃತ್ತರಾಗಿಯೂ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಸಂಚರಿಸಿ [illegible] ಪ್ರಸಾದದಿಂದ ರಾಜಮನ್ನಣೆಯನ್ನು ಹೊಂದಿ ಜಗದ್ವಿಖ್ಯಾತರಾಗಿರುವದು ಸರ್ವಶ್ರುತವಷ್ಟೆ !

ಶ್ರೀ ಜಗದ್ಗುರುಗಳವರು ಮಹಾರಾಷ್ಟ್ರದೇಶದ ಐಕ್ಯಮಂಡಳಿಯ ಉದ್ಧಾರಕ್ಕಾಗಿಯೂ ಮತ್ತು **ಶ್ರೀ॥ ಷ॥ ಬ್ರ॥ ಹೋಟಗಿ ಬೃಹನ್ಮಠದ ಪಟ್ಟಾಧ್ಯಕ್ಷರಾದ ಬಾಲತಪಸ್ವಿ ಶ್ರೀ ಚನ್ನವೀರಶಿವಾಚಾರ್ಯಸ್ವಾಮಿಗಳವರು** [illegible] ಒಂದು ಕೋಟಿ ಪಂಚಾಕ್ಷರೀಮಹಾಮಂತ್ರಸಮಾಪ್ತಿಪ್ರೀತ್ಯರ್ಥವಾಗಿಯೂ [illegible] ಸ್ವಪರಿವಾರ [illegible] (ತಾ॥ ೮—೧೧—೧೯೪೧) ಶನಿವಾರ ಪ್ರಾತಃಕಾಲ ೮ ಘಂಟೆಗೆ [illegible] ಚತುರಂಗ[illegible]ರಾಗಿ ದಯಮಾಡಿಸುತ್ತಾರೆ

[illegible] ಶ್ರೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವಕ್ಕೆ ಸರ್ವರೂ ಬಂಧುಮಿತ್ರ ಪರಿವಾರದೊಡನೆ [illegible] ವೈಭವಪೂರ್ಣವಾಗಿ ನಡೆಯುವ ಈ ಮಂಗಲಮಹೋತ್ಸವದಲ್ಲಿ ಭಾಗಿಗಳಾಗಿ ಶ್ರೀ ಜಗದ್ಗುರುಗಳವರ [illegible] ಪಡೆದು ಧನ್ಯರಾಗತಕ್ಕದ್ದು

ಕಾರ್ಯಕ್ರಮಗಳು.

ತಾ॥ ೮-೧೧-೧೯೪೧ ಶನಿವಾರ ಪ್ರಾತಃಕಾಲ ೮ ಘಂಟೆಯಿಂದ ಶ್ರೀ ಜಗದ್ಗುರುಗಳವರ **ಅಡ್ಡಪಲ್ಲಕ್ಕಿಮಹೋತ್ಸವವು** ಶ್ರೀಸಿದ್ಧೇಶ್ವರ ದೇವಾಲಯದಿಂದ ಹೊರಟು ನಿರ್ಧರಿಸಿದ ರಾಜಬೀದಿಗಳಲ್ಲಿ ಹಾಯ್ದು ಶ್ರೀಮಲ್ಲಿಕಾರ್ಜುನದೇವಸ್ಥಾನವನ್ನು ತಲುಪುವದು

ತಾ॥ ೯ ೧೧-೧೯೪೧ ಭಾನುವಾರ ಪ್ರಾತಃಕಾಲ ೯ ಘಂಟೆಯಿಂದ ಶ್ರೀಮನ್ಮಥಸ್ವಾಮಿ ಭಜನಮಂದಿರದಲ್ಲಿ ಸ್ಥಾಪಿಸಲ್ಪಡುವ ನೂತನ ಶಿವಲಿಂಗದ ಮೆರವಣಿಗೆ

ತಾ॥೧೦ ೧೧-೧೯೪೧ ಸೋಮವಾರ ಪ್ರಾತಃಕಾಲ ೯ ಘಂಟೆಗೆ ಶ್ರೀರಂಭಾಪುರೀ ಜಗದ್ಗುರುಗಳವರ ಅಮೃತಹಸ್ತದಿಂದ ಸದರಿ ಮಂದಿರದಲ್ಲಿ **ಶ್ರೀಮನ್ಮಥೇಶ್ವರ ಶಿವಲಿಂಗದ** ಸ್ಥಾಪನೆಯು ನೆರವೇರುವದು ಮತ್ತು ಶ್ರೀ॥ ಷ॥ ಬ್ರ॥ ಬಾಲತಪಸ್ವಿ ಹೋಟಗಿ ಶ್ರೀಚನ್ನವೀರಶಿವಾಚಾರ್ಯರ ಒಂದು **ಕೋಟಿ** ಪಂಚಾಕ್ಷರೀ ಮಹಾಮಂತ್ರದ ಅನುಷ್ಠಾನ ಸಮಾಪ್ತಿ

ನಿತ್ಯದಲ್ಲಿಯೂ ಶ್ರೀ[illegible]ಸ್ವಾಮಿಗಳವರ ಹಾಗೂ ವಿದ್ವನ್ಮಣಿಗಳ ಭಾಷಣಗಳು ಜರಗುತ್ತವೆ

ಸೊಲ್ಲಾಪುರ,
ತಾ॥ ೩೦—೧೦—೧೯೪೧

ಸಿದ್ಧರಾಮಪ್ಪ ಧುಮ್ಮಾ (ವಕೀಲ),
ಸ್ವಾಗತಸಮಿತಿಯ ಅಧ್ಯಕ್ಷ.

ಶ್ರೀ ಜಗದ್ಗುರು ದಾರುಕಾಚಾರ್ಯಾಯ ನಮಃ

ಮಾತೃಭಕ್ತಿ

ಲೇ:— ಮಲ್ಲಿಕಾರ್ಜುನಾರಾಧ್ಯ ಹಾಲಕೆರೆನ್ನೂರು ಮಠ
ಮುದೇನೂರು.

ಪ್ರತಿಯೊಬ್ಬ ಗೃಹಸ್ಥನೂ ಸುಖಸಾಮ್ರಾಜ್ಯದಲ್ಲಿರ …ಲೂ ದುಃಖವು ಲೇಶಮಾತ್ರವೂ ಇರಬಾರದೆಂದೂ …ರುವನಷ್ಟೆ! ಅದರಂತೆಯೇ ರಾಜನೂ ಸಹ ತನ್ನ ದೇಶದಲ್ಲಿ ಸುಖಶಾಂತಿಗಳು ನೆಲೆಯಾಗಿರಬೇಕೆಂದೇ ಬಯಸುವನು. ಅನಿತ್ಯರಾದ ಮನುಷ್ಯರೇ ತಮ್ಮ ಜೀವಮಾನದಲ್ಲಿ ಶಾಶ್ವತಸುಖವನ್ನು ಕೋರುವಾಗ ನಿತ್ಯನೂ ಶುದ್ಧನೂ-ಬುದ್ಧನೂ ಸರ್ವಲೋಕೇಶ್ವರನೂ ಆದ ಪರಶಿವನು ತನ್ನ ಸೃಷ್ಟಿಗೆ ನಿತ್ಯಸುಖವನ್ನು ದಯಪಾಲಿಸುವದು ಯುಕ್ತವೇ ಆಗಿದೆಯೆಂಬುದು ನಿರ್ವಿವಾದ … ಇಂತಹ ಸುಖವನ್ನು ಪರಮಾತ್ಮನು ತಾನಾಗ ಪ್ರತ್ಯಕ್ಷದಿಂದ ಕೊಡುವುದಿಲ್ಲ ಸೃಷ್ಟಿವಸ್ತುಗಳ ಮೂಲ … ಸಹಾಯಮಾಡಬೇಕಲ್ಲದೆ ಮತ್ತೆ ಬೇರೆ ಇಲ್ಲ … ಪ್ರತಿಯೊಂದು ಪ್ರಾಣಿಯ ಸೃಷ್ಟಿಸ್ಥಿತಿಲಯಗಳ …ಯೂ ಪ್ರಾಣಿಗಳೇ ಸಹಕಾರಿಗಳಾಗಿರುವಂತೆ ಸುವ್ಯವಸ್ಥೆಯನ್ನು ಮಾಡಿರುವನು ಪ್ರಕೃತದಲ್ಲಿ ಮನುಷ್ಯನಿಗ …ವಶ್ಯಕವಾದ ಸುಖಸಂಪತ್ತಿಗೆ ಜಗದೀಶನು ಎಷ್ಟು …ವನ್ನು ಒದಗಿಸಿರುವನೋ ಅದರ ಕೃತಜ್ಞತೆ … ನಾವು ಹೇಗೂ ತೀರಿಸಲಾರೆವು ಸಕಲವನ್ನೂ …ಮಾಡಿಕೊಟ್ಟ ಭಗವಂತನನ್ನು ಮೆಚ್ಚಿಸುವುದು …ಸಾಧ್ಯವಾದುದರಿಂದಲೇ ಆಯಾಕಾಲಕ್ಕೆ ತಕ್ಕಂತೆ …ಉಪಕರಿಸಿದವುಗಳಿಗೆ ಕೃತಜ್ಞತೆಯನ್ನಾದರೂ ಅರ್ಪಿಸುವುದು ಮನುಷ್ಯನ ಮುಖ್ಯ ಕರ್ತವ್ಯವಾಗಿದೆ ಇದರಿಂ… ಪ್ರಪಂಚವು ನಿಂತಿರುವುದು ಪರಮಾತ್ಮನ ಪ್ರಥಮ …ಉಪಕಾರವನ್ನು ಕೃತಜ್ಞತೆಯ ಮೂಲಕ ನಾವು ಸಾರ್ಥಕ…ಗೊಳಿಸಿ ಧನ್ಯರಾಗಬೇಕಾದರೆ ನಾವು ಮಾತೃಭಕ್ತಿಯ …ಕಡೆ ಗಮನಕೊಡಬೇಕಾಗಿದೆ ನಾವು ಯಾವನಾದರೂ ಭಾರವನ್ನು ಸ್ವಲ್ಪಕಾಲದಲ್ಲಿ ಸ್ವಲ್ಪ ದೂರಕ್ಕೆ …ಹೊಂದುಹೋಗಲು ಎಷ್ಟು ಜುಗುಪ್ಸೆಯನ್ನೂ ಆಯಾಸವನ್ನೂ ಹೊಂದುವೆವೆಂಬುದನ್ನು ಮೊದಲು ಯೋಚಿಸಬೇಕು ಅಷ್ಟು ದೂರವೇಕೆ? ನಿರ್ಣಯದಿನ…ಲ್ಲಿ ಸ್ವಲ್ಪ ಹೆಚ್ಚು ಊಟಮಾಡಿದಾಗ್ಯೆ ಓಡಾಡಲಸಮರ್ಥರಾಗಿ ಹಾಸಿಗೆಯಮೇಲೆ ಬಿದ್ದುಕೊಂಡು ಹೊರಳಾಡುವುದಿಲ್ಲವೇ? ತಲೆಯಲ್ಲಿ ಸ್ವಲ್ಪ ನೀರುನಿಂತು ನೆಗಡಿಯಾ… ಒಂದೆರಡು ದಿವಸ ತಲೆಯಭಾರವನ್ನು ಎಷ್ಟು ಕಷ್ಟದಿಂದ ಸಹಿಸುವೆವೆಂಬುದನ್ನೂ ಜ್ಞಾಪಕಕ್ಕೆ ತಂದುಕೊಳ್ಳಬೇಕು ಹೀಗೆ ಆಲೋಚಿಸಿದರಲ್ಲವೇ ನಮ್ಮನ್ನು ನಮ್ಮ ತಾಯಿಯು ತನ್ನ ಗರ್ಭದಲ್ಲಿ ಒಂಬತ್ತು ತಿಂಗಳು ಎಷ್ಟು ಕಷ್ಟದಿಂದ ವಹಿಸಿದ್ದಳೆಂಬುದನ್ನು ನಾವು ತಿಳಿಯಬಹುದು ನಮ್ಮಂತೆ ಜಿಹ್ವಾಸೆಯನ್ನಾಗಲೀ ದುಃಖವನ್ನಾಗಲೀ ನಮ್ಮ ತಾಯಿಯು ಆ ಕಾಲದಲ್ಲಿ ಅನುಭವಿಸಿರುವಳೇ? ಎಷ್ಟೋ ಆನಂದದಿಂದ ದೇವರ ಉಪಕಾರವು ತನ್ನಿಂದ ಬಹಿರ್ಭೂತವಾಗುವದೆಂಬ ಸಂಭ್ರಮ ಆಕೆಯ ದುಃಖನಿವಾರಣೆಗೆ ಕಾರಣವಾಗಿದೆಯಲ್ಲವೇ? ಗರ್ಭವು ಭೂಪತನವಾಗುವುದರೊಳಗಾಗಿಯೇ ಸ್ತನ್ಯವನ್ನು ಸಿದ್ಧಮಾಡಿ ತಾಯಿಯ ಮೂಲಕ ತನ್ನ ದಯೆಯನ್ನು ಪ್ರಕಟಿಸುವ ದೇವರ ಮಹಿಮೆಯು …ತಹುದಾಗಿರಬೇಕು? ದೇವರು ತನ್ನ ಮಹಿಮೆಯನ್ನು ಪ್ರಕಟಿಸಬೇಕಾದರೆ ಉತ್ಕೃಷ್ಟವಸ್ತುವಿನಲ್ಲಿಯೇ ಅಲ್ಲದೆ ಮತ್ತೇನು? ಅಂತಹ ಉಪಕಾರವು ಯಾರ ಮೂಲಕವಾಗಿ ನಮಗೆ ಲಭ್ಯವಾಗುವುದೋ ಅದು ನಮಗೆ ಪ್ರತ್ಯಕ್ಷ ದೈವವಲ್ಲವೇ ನಾವು? ನಮ್ಮ ಬಾಲ್ಯದಲ್ಲಿ ನಮ್ಮ ತಾಯಿಗೆ ಎಷ್ಟು ಸಂಕಟಗಳನ್ನುಂಟುಮಾಡಿರುವೆವೆಂಬುದನ್ನು ದೃಷ್ಟಾಂತಗೊಳಿಸಬೇಕಾದರೆ ಈಗ ತಾಯಿಯರಾಗುತ್ತಿರುವವರನ್ನು ಪರೀಕ್ಷಿಸಿದರೆ ಸಾಕಾಗಿದೆ ಎಷ್ಟೋ ಮಕ್ಕಳು ರಾತ್ರಿಯೆಲ್ಲಾ ತಮ್ಮ ತಾಯಿಯರಿಗೆ ತಮ್ಮ ರೋದನ ಶಬ್ದದಿಂದ ನಿದ್ರೆಯನ್ನೇ ಮಾಡಗೊಡಿಸುವುದಿಲ್ಲ ಮಲಮೂತ್ರಾದಿಗಳಿಂದಲೂ ರೋಗಗಳಿಂದಲೂ ದುಃಖವನ್ನುಂಟುಮಾಡುತ್ತಿರುವವು ಇಂತಹ ಕಷ್ಟಪರಂಪರೆಗಳನ್ನೆಲ್ಲಾ ಎಷ್ಟೋ ಶಾಂತತೆಯಿಂದ ಸಹಿಸಿ ಪುನಃ ನಮ್ಮ ಅಭಿವೃದ್ಧಿಗೆ ಸಹಾಯ ಮಾಡುವ ತಾಯಿಯು ದೇವರ …ತಾನೇ ಹೇಳಲಾರನು? ಆದುದರಿಂದಲೇ "ಮಾತಾ ಪ್ರತ್ಯಕ್ಷ ದೇವತಾ" ಎಂದು ಜನಜನಿತವಾಗಿದೆ ಮನುಷ್ಯನು ಸುಖ ಸಾಮ್ರಾಜ್ಯದಲ್ಲಿ ನೆಲೆಯಾಗಿರಬೇಕಾದರೆ ಪುಣ್ಯಸಾಧನೆ ಇರಬೇಕು ಇಂತಹ ಪುಣ್ಯಸಾಧನೆಗೆ ಮಾತೃಸೇವೆಯೇ ಮೂಲವಾಗಿರಬೇಕೆಂದು ದೇವರು ಉದ್ದೇಶಿಸಿದ ಹಾಗೆ ತೋರುವುದು ಏಕೆಂದರೆ, ಒಂದೊಂದು ವಿಧದ ದೇಶಾಚಾರ ಧರ್ಮವು ಒಂದೊಂದು ಜಾತಿಯಲ್ಲಿ ನ್ಯೂನಾಧಿಕ ಫಲಗಳೇ ಆಗಿವೆಯೆಂದು ವಾದವಿವಾದಗಳಲ್ಲಿ ಪರಿಣಮಿಸಿದರೂ ಸರ್ವಜಾತಿಯಲ್ಲಿಯೂ ಸರ್ವಕಾಲದಲ್ಲಿಯೂ ಮಾತೃಭಕ್ತಿಯಲ್ಲಿ ಪುಣ್ಯನ್ಯೂನತೆಯನ್ನಾಗಲೀ ಪಾಪಶಂಕೆಯನ್ನಾಗಲೀ ಯಾರೂ ಹೇಳಿಲ್ಲ ಆದುಕಾರಣವೇ ತಾಯಿಯು ಪ್ರತಿಯೊಬ್ಬನಿಗೂ ಪ್ರತ್ಯಕ್ಷ ದೇವತಾಸ್ವರೂಪಳೇ ಆಗಿರುವಳು. ಇಂತಹ ಪೂಜ್ಯ ದೇವತೆಗೆ ದ್ರೋಹ ಮಾಡಿದವನು ಎಂದಿಗೂ ಸುಖಿಯಾಗುವುದಿಲ್ಲ ಸದ್ಯಃ ಪ್ರಪಂಚದಲ್ಲಿ ಸಹ ಶಿಕ್ಷೆಯೂ ದುಃಖಪ್ರಾಪ್ತಿಯೂ ಉಂಟಾಗಲು ಕಾರಣವೇನು? ಮಾತೃಭಕ್ತಿಯಿಲ್ಲದಿರುವುದೇ ಅಲ್ಲವೇ? ಪೂರ್ವದಲ್ಲಿ ಮಾತೃಭಕ್ತಿಯೆಂಬುದು ಬಹು ಚೆನ್ನಾಗಿದ್ದಿತು ಒಂದು ಕಾಲದಲ್ಲಿ ಪರಶುರಾಮನು ತನ್ನ ಪ್ರತಿಸ್ಪರ್ಧಿಯೊಡನೆ ಭೂಪ್ರದಕ್ಷಿಣೆಯ ಪುಣ್ಯಫಲವನ್ನು ಸಂಪಾದಿಸಲು ಪ್ರತಿಜ್ಞೆಮಾಡಿದನೆ ಯಾರು ಮುಂಚಿತವಾಗಿ ಭೂಪ್ರದಕ್ಷಿಣೆಯನ್ನು ಪೂರೈಸುವರೋ ಅವರ ಮತ್ತೊಬ್ಬರ ಫಲವನ್ನು ಕಾಣಿಕೆಯಾಗಿ ಪರಿಗ್ರಹಿಸುವ ಕರಾರಾಗಿದ್ದಿತು ಆ ಪ್ರಕಾರವೇ ಎರಡನೆಯವನು ಭೂಸಂಚಾರಕ್ಕೆ ಹೊರಟನು ಮಹಾನದೀನದಗಳನ್ನು ಸರೋವರಗಳನ್ನೂ ಅನಂತ ಪುಣ್ಯಕ್ಷೇತ್ರಗಳನ್ನೂ ಮಹಾನಗರಗಳನ್ನೂ ಸುತ್ತಿಸುತ್ತಿ ಹಲವು ವರ್ಷಗಳನಂತರ ಗುರುತಾಗಿದ್ದ ಸ್ಥಳಕ್ಕೆ ಬಂದನು ಪರಶುರಾಮನು ತನ್ನ ಸ್ಥಳವನ್ನು ಬಿಡದೆ ತನ್ನ ತಾಯಿಯ ಶುಶ್ರೂಷೆಯನ್ನು ಮಾಡುತ್ತ ನಿಶ್ಚಿಂತನಾಗಿದ್ದನು ಪ್ರದಕ್ಷಿಣೆಯನ್ನು ಪೂರೈಸಿ ತನ್ನ ಸಮೀಪಕ್ಕೆ ಪ್ರತಿಸ್ಪರ್ಧಿಯು ಬರುವುದರೊಳಗಾಗಿ ತಾನು ತನ್ನ ತಾಯಿಗೆ ಒಂದು ಪ್ರದಕ್ಷಿಣೆಯನ್ನು ಮಾಡಿ ತಾನೇ ಜಯಿಸಿದನೆಂದೂ ಹೇಳಿದನು ಆಗ ಉಭಯರಿಗೂ ಚರ್ಚೆನಡೆದು, ಮಹರ್ಷಿಗಳಿಗೆ ತಿಳಿಸಲು ಅವರೆಲ್ಲರು ಸಹಸ್ರಭೂಪ್ರದಕ್ಷಿಣೆಗಳಿಗಿಂತಲೂ ಒಂದುಬಾರಿ ತಾಯಿಯನ್ನು ಪ್ರದಕ್ಷಿಣೆ ಮಾಡುವುದೇ ಕೋಟಿಫಲಾಧಿಕವು' ಎಂದು ಸಾರಿದರು ಆದಕಾರಣ ಮಾತೃಭಕ್ತಿ ಪರಾಯಣನಾದ ಪರಶುರಾಮನೇ ಧನ್ಯನೆನಿಸಿದನು

ಭೀಷ್ಮಾಚಾರ್ಯರು ತಮ್ಮ ತಾಯಿಗೆ ವಾಗ್ದಾನ ಮಾಡಿದ ಪ್ರಕಾರ ತಾವು ಯಾವಜ್ಜೀವವೂ ಬ್ರಹ್ಮಚರ್ಯಾಶ್ರಮದಲ್ಲಿಯೇ ಇದ್ದು ಮಾತೃಭಕ್ತಿಯನ್ನು ಪ್ರದರ್ಶನಮಾಡಿದರು ಈ ಪ್ರಸಂಗದಲ್ಲಿ, ಸಂತಾನಾಭಿವೃದ್ಧಿಗಾಗಿ ಲಗ್ನವಾಗೆಂದು ಇವರ ಗುರುವಾದ ಪರಶುರಾಮನು ಎಷ್ಟು ಹೇಳಿದರೂ ಸಮ್ಮತಿಸಲಿಲ್ಲ ಆಗ ಪರಶುರಾಮನಿಗೂ, ತನ್ನ ಮಾತನ್ನುಲ್ಲಂಘಿಸಿದ್ದಕ್ಕಾಗಿ ಕಡು ಕೋಪಬಂದು ಕೊನೆಗೆ ಉಭಯರಿಗೂ ಇಪ್ಪತ್ತೊಂದು ದಿವಸಗಳವರೆಗೆ ಘೋರಯುದ್ಧವಾಯಿತು ತತ್ಪರಿಣಾಮವಾಗಿ ಭೀಷ್ಮಾಚಾರ್ಯರೇ ಜಯಶೀಲರಾದರು ಭೀಷ್ಮಾಚಾರ್ಯರು ಇಂತಹ ವೀರರು! ಸತ್ಯಶೀಲರು!

ಕರ್ಣನು ತನ್ನ ತಾಯಿಗೆ ವಾಗ್ದಾನಮಾಡಿದ ಪ್ರಕಾರ ತನ್ನ ಶತ್ರುವನ್ನು ಸೋಲಿಸಲು ಸಹಾಯಭೂತವಾಗಿದ್ದ ಪ್ರತಿಜ್ಞೆಯನ್ನೂ ಶಕ್ತಿಯನ್ನೂ ಹಿಂದಕ್ಕೆ ತೆಗೆದುಕೊಂಡು ತನ್ನ ಪ್ರಾಣವನ್ನೇ ಪ್ರಪಂಚಕ್ಕೆ ಈಡಾಡಿ, ತನ್ನ ಮಾತೃಭಕ್ತಿಯನ್ನು ವ್ಯಕ್ತಗೊಳಿಸಿದನು

ಪಾಂಡವರಲ್ಲಿ ದ್ರೌಪದಿಯನ್ನು ಅರ್ಜುನನು ಒಬ್ಬನೇ ಜಯಿಸಿದ್ದನಾದರೂ ತಾಯಿಯ ಆಜ್ಞೆಯಂತೆ ಐವರೂ ವರಿಸಿ ಸಭ್ಯರೀತಿಯಿಂದ ಸಂಸಾರಮಾಡಿಕೊಂಡಿದ್ದು ಮಾತೃವಾಕ್ಯಪರಿಪಾಲನೆಯನ್ನು ಮಾಡಿದರು

ಶಿವಾಜಿಮಹಾರಾಜನು ತನ್ನ ತಾಯಿಯ ಅಪ್ಪಣೆ ಮುಂದಕ್ಕಡಿಇಡುತ್ತಿರಲಿಲ್ಲ ಆತನ ತಾಯಿಯ ಆಶೀರ್ವಾದವೇ ಅವನನ್ನು ಉನ್ನತಸ್ಥಿತಿಗೆ ತಂದಿತು ಆತನ ಚರಿತ್ರೆಯನ್ನು ಓದಿದರೆ ಅವನ ಮಾತೃಭಕ್ತಿಯು ತಿಳಿದು ಬರುವುದು

ಶಂಕರಾಚಾರ್ಯರು ತಾವು ಸಂಕಲ್ಪಿಸಿದಾಗಲೇ ಸನ್ಯಾಸವನ್ನು ಗ್ರಹಣಮಾಡದೆ ಸಾವಕಾಶಕ್ಕೆಡೆಗೊಟ್ಟುದು ಮಾತೃಭಕ್ತಿಗಾಗಿಯೇ

ಶ್ರೀರಾಮಚಂದ್ರನು ಸಾಮ್ರಾಜ್ಯಾಭಿಷೇಕವನ್ನು ತೊರೆದು ಕಾಡಿನಲ್ಲಿ ಅಲೆದಲೆದು ಕಡುಕಷ್ಟಗಳಿಗೀಡಾದುದು ಮಾತೃವಾಕ್ಯಪರಿಪಾಲನೆಗೋಸುಗವೇ!

ಅಲೆಗ್ಝಾಂಡರನೆಂಬ ಗ್ರೀಕ್ ದೇಶದ ದೊರೆಯು ತನ್ನ ತಾಯಿಯಲ್ಲಿ ಎಷ್ಟು ಭಕ್ತಿಯುಳ್ಳವನಾಗಿದ್ದನೆಂಬುದು ಜಗತ್ತಿಗೆಲ್ಲ ಆದರ್ಶಪ್ರಾಯವಾಗಿದೆ ಅಲೆಗ್ಝಾಂಡರನು ಸಾಮಾನ್ಯನಲ್ಲ ಪ್ರಪಂಚದ ಶೂರಾಗ್ರೇಸರರಲ್ಲಿ ಅಗ್ರಗಣ್ಯನು ಮತ್ತು ರಾಜಾಧಿರಾಜನು ಅನೇಕ ರಾಜರಿಂದ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ತನ್ನ ಸಾರ್ವಭೌಮತ್ವವನ್ನು ಅನ್ವರ್ಥಗೊಳಿಸಿದ್ದನು. ಆಕಾಶದ ಕೆಳಗಿರುವದೆಲ್ಲ ತನ್ನ ರಾಜ್ಯವಾಗಿರಬೇಕೆಂಬ ಮಹತ್ವಾಂಕ್ಷೆಯು ಅವನಿಗಿತ್ತು ಅಂತಹ ಚಕ್ರವರ್ತಿಯು ತನ್ನ ತಾಯಿಗೆ ಅಂಜಿ ನಡೆಯುತ್ತಿದ್ದನೆಂಬುದು ಆಶ್ಚರ್ಯವಾಗಿದೆ ಪ್ರಪಂಚವೇ ಚಕ್ರವರ್ತಿಗೆ ಕಂಪಿಸುತ್ತಿರುವಾಗ ಸಾರ್ವಭೌಮನು ತಾಯಿಗೆ ಅಡಿಯಾಳಾಗಿದ್ದನೆಂಬುದು ಹೇಡಿತನವೋ ಮಾತೃಭಕ್ತಿಯ ಘನತೆಯೋ ಯೋಚಿಸಬೇಕಾಗಿದೆ ಅಷ್ಟು!

ಅಲೆಗ್ಝಾಂಡರನು ಒಂದಾನೊಂದು ಕಾಲದಲ್ಲಿ ಏಷ್ಯಾಖಂಡದ ಅನೇಕ ಭಾಗಗಳನ್ನು ಜಯಿಸಿ ರಾಜ್ಯಗಳನ್ನು ಕೊಳ್ಳೆಹೊಡೆದು ನೂರಾರುಕೋಟಿ ದ್ರವ್ಯವನ್ನೂ ಅನೇಕ ಮುತ್ತು, ರತ್ನ ವಜ್ರ, ವೈಡೂರ್ಯ ಇತ್ಯಾದಿಗಳ ರಾಶಿಯನ್ನೂ ತಂದು ತಾಯಿಗೆ ಕಾಣಿಕೆಯಾಗಿ ಒಪ್ಪಿಸಿದನು ಆಗ ಅವಳು ಛೀ ಮೂರ್ಖನೇ! ಇಂತಹ ದರಿದ್ರದ ಕಾಸುಗಳನ್ನು ಜಯಿಸಿದ ನಿನ್ನ ಯೋಗ್ಯತೆಯು ಅಲ್ಪವಾದುದೇ ಸರಿ ನೀನು ಪುರುಷನಾಗಿದ್ದರೆ ಇಷ್ಟು ಅತ್ಯಲ್ಪ ದ್ರವ್ಯಸಂಪಾದನೆಯಿಂದಲೇ ತೃಪ್ತನಾಗುತ್ತಿರಲಿಲ್ಲವೆಂದಳು ಅವಳ ಪರಾಕ್ರಮ ಹೇಗಿದ್ದಿತೋ ನಮಗೆ ತಿಳಿಯದು ಹದಿನಾಲ್ಕು ಲೋಕಗಳೂ ಅವಳ ದುರಾಸೆಗೆ ಅಲ್ಪವಾಗಿದ್ದುವು ಇಷ್ಟು ಮಾತ್ರವಲ್ಲದೆ ಪ್ರತಿಯೊಂದು ರಾಜಕಾರ್ಯದಲ್ಲಿಯೂ ತಾನು ಪ್ರವರ್ತಿಸಿ ಚಕ್ರವರ್ತಿಗೂ ಮಂತ್ರಿಗೂ ಜಗಳವನ್ನುಂಟುಮಾಡುತ್ತಿದ್ದಳು ಆದರೂ ರಾಜನು ತಾಯಿಯ ಮಾತಿಗೆ ಪ್ರತಿಯಾಗಿ ಮನನೋಯಿಸುವದು ಮಹಾಪಾಪವೆಂದೆಣಿಸಿದ್ದನು ಪುನಃ ಮತ್ತೊಂದುಸಾರೆ ದಿಗ್ವಿಜಯಕ್ಕೆ ಹೊರಟು ಮೊದಲಿಗಿಂತಲೂ ಅತಿಶಯವಾಗಿ ಧನರಾಶಿಯನ್ನು ತಾಯಿಯ ಬಳಿಗೆ ಕಳುಹಿಸಿ "ಅನಾವಶ್ಯಕವಾದ ಕಾರಬಾರಿನಲ್ಲಿ ನೀವು ಪ್ರವೇಶಿಸಿ ಆಯಾಸಗೊಳ್ಳಲವಶ್ಯಕವಿಲ್ಲ ಮಂತ್ರಿಯೇ ಎಲ್ಲವನ್ನೂ ನಿರ್ವಹಿಸುವನು ಹೀಗೆ ವಿಜ್ಞಾಪಿಸಿದನೆಂದು ಕೋಪಿಸಿಕೊಳ್ಳದೆ ನನ್ನನ್ನು ಅನುಗ್ರಹಿಸಬೇಕು" ಎಂದು ಒಂದು ಕಾಗದವನ್ನು ಬರೆದಿದ್ದನು ಇದನ್ನು ನೋಡಿ ಸ್ವಾಭಿಮಾನಶೀಲೆಯಾದ ಆಕೆಯು ಮಹಾರೋಷೋತ್ಫುಲ್ಲನಯನೆಯಾಗಿ ಮನಃಸ್ವೇಚ್ಛೆಯಾಗಿ ನಿಂದಿಸಿ ಪ್ರತ್ಯುತ್ತರವನ್ನು ಬರೆದುಬಿಟ್ಟಳು ಚಕ್ರವರ್ತಿಯು ಅದಕ್ಕೆ ಪ್ರತ್ಯುತ್ತರವನ್ನು ಬರೆಯುವದು ಮಾತೃಭಕ್ತಿಗೆ ಅಯುಕ್ತವೆಂದು ಭಾವಿಸಿ ಸುಮ್ಮನಾದನು ಅವನ ಮಂತ್ರಿಯು ಆಕೆಯ ಕಿರುಕುಳವು ಸಹಿಸಲಸಾಧ್ಯವಾಗಿದೆಎಂದು ಪದೇ ಪದೇ ಬರೆಯಲಾರಂಭಿಸಿದನು ಚಕ್ರವರ್ತಿಯು ಮಂತ್ರಿಯ ಪತ್ರಕ್ಕೆ ಗಮನಕೊಡಲಿಲ್ಲ ಕಡೆಗೆ "ನಿಮ್ಮ ತಾಯಿಯ ಮಾತಿನಿಂದ ರಾಜ್ಯಾಡಳಿತವು ಬಹು ಕಷ್ಟದಿಂದ ನಡೆಯಬೇಕಾಗಿದೆ ತಮಗೆ ನೂರಾರುಸಾರೆ ವಿಜ್ಞಾಪಿಸಿದರೂ ತಾವು ಗಮನಿಸಲಿಲ್ಲ ನನ್ನಿಂದ ರಾಜ್ಯನಿರ್ವಹಣವಾಗಲಾರದು ನಿಮ್ಮ ಮಾತೃಶ್ರೀಯವರು ರಾಜ್ಯಕಾರ್ಯದಲ್ಲಿ ತಟಸ್ಥರಾಗದಿದ್ದರೆ ರಾಜ್ಯದಲ್ಲಿ ಸುಖಶಾಂತಿಗಳು ನೆಲೆಸುವದಿಲ್ಲ" ಹೀಗೆಂದು ಪುನಃ ಬಿನ್ನವಿಸಿದನು. ಅದಕ್ಕೆ ಚಕ್ರವರ್ತಿಯು ಮುಗುಳುನಗೆಯನ್ನು ನಕ್ಕು "ಎಲೈ ಮಂತ್ರಿವರ್ಯನೆ! ನೀನು ಬರೆಯುವ ಸಹಸ್ರಾರು ಕಾಗದಗಳನ್ನೂ ಅರೆಗಳಿಗೆಯಲ್ಲಿ ನುಂಗಿ ಅರಗಿಸುವ ಶಕ್ತಿಯು ನನ್ನ ಪೂಜ್ಯದೇವಿಯಾದ ಮಾತೆಯ ಕಣ್ಣೀರಿನ ಒಂದು ಹನಿಯಲ್ಲಿ ಅಡಗಿರುವದಲ್ಲವೆ?" ಎಂದು ಪ್ರತ್ಯುತ್ತರವನ್ನು ಬರೆದನು. ಅದನ್ನು ನೋಡಿ ಮಂತ್ರಿಯು ರಾಜನ ಮಾತೃಭಕ್ತಿಗೆ ಆಶ್ಚರ್ಯಗೊಂಡ. ಅಂದಿನಿಂದ ತಾನೂ ಆಕೆಯಲ್ಲಿ ಮಾತೃಭಕ್ತಿಯಿಂದಲೇ ಇದ್ದನು ಎಲೈ ಅಲೆಗ್ಝಾಂಡರನೇ! ನೀನೇ ಧನ್ಯ! ನಿನ್ನ ಸಾರ್ವಭೌಮತೆಯೂ ದಿಗ್ವಿಜಯವೂ ಮಾತೃಭಕ್ತಿಫಲಗಳಲ್ಲವೆ

[೬ನೆಯ ಪುಟವನ್ನು ನೋಡಿ]

ಸೊಲ್ಲಾಪುರದಲ್ಲಿ ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವ.

ಶ್ರೀಮದ್ವೀರಶೈವಮಹಾಮತಸ್ಥಾಪನಾಚಾರ್ಯ ಶ್ರೀಮದ್ರೇಣುಕಾಚಾರ್ಯ ಪರಂಪರಾಗತ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರು ಸೊಲ್ಲಾಪುರ ಶಹರದ ವೀರಶೈವಮಂಡಳಿಯವರ ಪ್ರಾರ್ಥನೆಯ ಮೇರೆಗೆ ತಾ॥ ೮-೧೧ ೧೯೪೧ ನೆಯ ದಿವಸ ಸೊಲ್ಲಾಪುರಕ್ಕೆ ಬಿಜಯಂಗೈಸುವರು

ಆ ದಿವಸ ಪ್ರಾತಃಕಾಲ ೮ ಘಂಟೆಗೆ ಶ್ರೀಜಗದ್ಗುರುಗಳವರ **ಅಡ್ಡಪಲ್ಲಕ್ಕಿ ಮಹೋತ್ಸವವು** ಸಕಲರಾಜಬಿರುದಾವಳಿಗಳೊಡನೆ ಅಸಾಧಾರಣವೈಭವದಿಂದ ನೆರವೇರುವುದು ಮತಸ್ಥಾಪನಾಚಾರ್ಯರ ಈ ಮಹೋತ್ಸವದ ದರ್ಶನಕ್ಕಾಗಿ ಅಖಿಲಮಹಾರಾಷ್ಟ್ರ-ಕರ್ನಾಟಕಪ್ರಾಂತಗಳಿಂದ ಅಗಣಿತಜನರು ಆಗಮಿಸುವರೆಂಬುದರಲ್ಲಿ ಸಂದೇಹವಿಲ್ಲ ಮತಾಚಾರ್ಯರ ಸಂಚಾರವಿಲ್ಲದೆ ಮೂಲೆಗುಂಪಾಗಿ ಬಿದ್ದಿದ್ದ ಮಹಾರಾಷ್ಟ್ರದೇಶಕ್ಕೆ ಈ ಸುಯೋಗವು ದೊರೆತುದಕ್ಕೆ ಸೊಲ್ಲಾಪುರನಗರದ ಗುರುಭಕ್ತರ ಪ್ರಯತ್ನವಿಶೇಷವೇ ಮೂಲಕಾರಣವೆಂಬುದೂ, ಇವರೀಪ್ರಯತ್ನಕ್ಕೆ ಹೂಟಗಿ ಬೃಹನ್ಮಠಾಧ್ಯಕ್ಷರಾದ ಶ್ರೀ॥ಷ॥ ಬ್ರ॥ ಬಾಲತಪಸ್ವಿ ಶ್ರೀಚನ್ನವೀರಶಿವಾಚಾರ್ಯಸ್ವಾಮಿಗಳವರು ಪುರಶ್ಚರಣಪೂರ್ವಕವಾಗಿ ೧೧ ತಿಂಗಳುಗಳ ವರೆಗೆ ಏಕಾಗ್ರತೆಯಿಂದ ಮಾಡಿದ ೧ ಕೋಟಿ ಪಂಚಾಕ್ಷರ ಮಹಾಮಂತ್ರಜಪಾನುಷ್ಠಾನವೇ ಆದಿಬೀಜವೆಂಬುದೂ ಸರ್ವರಿಗೂ ವೇದ್ಯವೇ ಅದೆ.

ಸದಾ ಸರ್ವಪ್ರಾಣಿಗಳ ಕ್ಷೇಮವನ್ನೇ ಚಿಂತಿಸುತ್ತ ದೇಹವನ್ನು ದಂಡಿಸುತ್ತಿರುವ ಶ್ರೀಬಾಲತಪಸ್ವಿಗಳ ಈ ಸತ್ಸಂಕಲ್ಪಕ್ಕೂ ಸಹ ಅನೇಕವಿಧವಾದ ವಿಘ್ನಗಳು ಪ್ರಾಪ್ತವಾದವು. ಆದರೂ ಜಗದಾಚಾರ್ಯರ ಆಶೀರ್ವಾದಬಲದಿಂದ ಅವೆಲ್ಲವೂ ಮಂಜಿನಂತೆ ಮಾಯವಾಗಿ, ಅವರ ಸತ್ಯಸಂಕಲ್ಪವು ಸಫಲವಾದುದನ್ನು ತಿಳಿದು ಸಕಲವೀರಶೈವರೂ ಸಂತೋಷಾಬ್ಧಿಯಲ್ಲಿ ಮುಳುಗಿರುವರು. ಇದು ವಿಜಯಾಭ್ಯುದಯದ ಪ್ರಥಮಘಟ್ಟವೆಂದು ಹೇಳಬಹುದಾಗಿದೆ. ವೀರಶೈವರಿಗೆ ಮಾತೃಸ್ಥಾನವಾಗಿ ಮೆರೆಯುತ್ತಿರುವ ಸೊಲ್ಲಾಪುರದಲ್ಲಿ ನೆರವೇರುವ ಈ ಅಭೂತಪೂರ್ವಮಹೋತ್ಸವಕ್ಕೆ ಸಕಲ ಗುರುಭಕ್ತರೂ ಆಗಮಿಸಿ, ಶ್ರೀಜಗದ್ಗುರುಗಳವರ ದರ್ಶನಾಶೀರ್ವಾದಗಳನ್ನು ಪಡೆದು ಧನ್ಯರಾಗಬೇಕೆಂದಾಶಿಸುತ್ತೇವೆ.

ಮತಾಚಾರ್ಯರ ಆಗಮನದ ಬಗ್ಗೆ ಮನಃಪೂರ್ವಕವಾಗಿ ಸೇವೆಯನ್ನು ಮಾಡಿ ಮಹಾರಾಷ್ಟ್ರದೇಶದ ವೀರಶೈವರ ಉದ್ಧಾರಕ್ಕೆ ಮಾರ್ಗದರ್ಶಕರಾಗಿರುವ ಸೊಲ್ಲಾಪುರದ ವೀರಗುರುಭಕ್ತಶಿಖಾಮಣಿಗಳೆಲ್ಲರಿಗೂ ಶ್ರೀಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯಭಾಗ್ಯಾದಿ ಸಕಲಸಂಪತ್ಸಮೃದ್ಧಿಯನ್ನಿತ್ತು ರಕ್ಷಿಸಲೆಂದು ಆ ಜಗನ್ನಿಯಾಮಕರನ್ನು ಪ್ರಾರ್ಥಿಸುತ್ತೇವೆ.

ಯುದ್ಧವಾರ್ತೆ.

ಕ್ರಿಮಿಯಾಕಡೆಗೆ ಜರ್ಮನರ ಗಮ

ಕ್ರಿಮಿಯಾವನ್ನು ಜರ್ಮನರು ಪ್ರವೇಶಿ
ರೆಂದೂ, ಬಲಯುತವಾದ ರಕ್ಷಣವ್ಯೂಹವನ್ನು ಛೇದಿ
ಅಕ್ಟೋಬರ್ 18 ನೆಯ ತಾರೀಖಿನಿಂದ 28 ನೆಯ ತಾ
ಖಿನವರೆಗೆ 15700 ಮಂದಿ ರಷ್ಯನರನ್ನು ಸೆರೆಹಿಡಿದಿ
ವೆಂದೂ ಹಿಟ್ಲರರ ವಿಶೇಷ ಪ್ರಕಟನೆಯೊಂದು
ಸುತ್ತದೆ

ಬರ್ಲಿನ್‌ಮೇಲೆ ಮುತ್ತಿಗೆ

೨೯ ೩೦ ನೆಯ ತಾರೀಖಿನ ರಾತ್ರಿ ರಷ್ಯಾವಿಮಾನಗ
ಬರ್ಲಿನ್‌ನಗರದಮೇಲೆ ಮುತ್ತಿಗೆ ನಡೆಸಿ ಉಗ್ರಸ್ಫ
ಬಾಂಬುಗಳನ್ನೂ ಅಗ್ನಿವರ್ಧಕ ಬಾಂಬುಗಳನ್ನೂ
ಸಿದವು ನಗರದ ಅನೇಕ ಕಡೆ ಬೆಂಕಿಹತ್ತಿಕೊಂಡಿ
ಕಂಡುಬಂತೆಂದೂ ಅಸಾಧ್ಯ ಸ್ಫೋಟನಗಳು ಕೇಳ
ವೆಂದೂ ರಷ್ಯನ್ ವೈಮಾನಿಕರು ತಿಳಿಸಿದರು ಜರ
ಭಾಷೆಯಲ್ಲಿ ಮುದ್ರಿತವಾದ ಹಸ್ತಪತ್ರಗಳು
ಲ್ಪಟ್ಟವು

ರಷ್ಯನರು ಖಾರಕೋವ್ ತ್ಯಜಿಸಿದರು

ಖಾರಕೋವ್ ನಗರವನ್ನು ರಷ್ಯನರು ತ್ಯಜಿಸಿ
ದಾಗಿ ಪ್ರಕಟಿಸಿದ್ದಾರೆ ಮುಖ್ಯವಾದ ಕಾರ್ಖಾ
ಗಳು, ಯಂತ್ರಗಳು, ರೈಲ್ವೆಗಾಡಿಗಳು, ಅಪೂರ್ಣ ವಸ್ತು
ಗಳು ಮೊದಲಾದ ಪದಾರ್ಥಗಳು ಇವುಗಳೆಲ್ಲವನ್ನ
ಅಲ್ಲಿಂದ ಸಾಗಿಸಲಾಗಿದೆ ಖಾರಕೋವ್ ಯುದ್ಧದ
ಜರ್ಮನರ ಕಡೆ ಸುಮಾರು 120000 ಜನರು ಸತ್ತ
ಮತ್ತು ಗಾಯಗೊಂಡರೆಂದೂ, 450 ಕ್ಕಿಂತ ಹೆ
ಟ್ಯಾಂಕುಗಳೂ 3000 ಲಾರಿಗಳೂ 200 ಕ್ಕ ಮಿ
ಫಿರಂಗಿಗಳೂ ನಾಶವಾಗಿರುವವೆಂದೂ ಹೇಳಲಾಗಿದೆ

ತುರ್ಕಿಗೆ ಅಧ್ಯಕ್ಷರ ಸಂದೇಶ

ತುರ್ಕಿಯ ಅಧ್ಯಕ್ಷರಾದ ಶ್ರೀ ಇನೇನ
ರೇಡಿಯೋ ಮೂಲಕ ತುರ್ಕಿ ಜನಾಂಗಕ್ಕೆ ಸಂದೇ
ವನ್ನು ಕೊಡುತ್ತ ನಮ್ಮ ದೇಶದಲ್ಲಿ ಈಗ ಶಾಂತಿ
ಐಕಮತ್ಯವೂ ನೆಲಸಿವೆ ಇಂದು ವಿಶ್ವವನ್ನೆಲ್ಲ ಆವ
ರುವ ಸಂಗ್ರಾಮವು ತುರ್ಕಿಯ ಮೇಲೂ ತನ್ನ ಪ್ರ
ವವನ್ನು ಬೀರುವದು ನಿಶ್ಚಯ ಯುದ್ಧವು ನಾ
ಹರಡದಂತೆ ಮಾಡಲು ಒಂದು ವೇಳೆ ಹರಡಿ
ಅದನ್ನು ಎದುರಿಸಲು ಒಂದೇ ಒಂದು ದಾರಿ
ತುರ್ಕಿಯು ವಸ್ತು ನಿರ್ಮಾಣ ಕಾರ್ಯವನ್ನು ತ್ವ
ಗೊಳಿಸಬೇಕು ಪ್ರತಿಯೊಂದು ಕಾರ್ಖಾನೆ
ಹೊಲ ಗದ್ದೆಗಳಲ್ಲೂ ನಾವು ಶಕ್ತಿ ಮೀರಿ ದುಡಿ
ಬೇಕು ' ಎಂದು ತಿಳಿಸಿದರು

ಭಾರತದಿಂದ ರಷ್ಯಕ್ಕೆ ಮಾರ್ಗ ನಿರ್ಮಾಣ ಪ್ರಯತ್ನ

ಪರ್ಷಿಯಾ ಕೊಲ್ಲಿಯಿಂದ 100 ಮೈಲು ದೂರ ರೈಲ್ವೆ
ಮಾರ್ಗವನ್ನು ನಿರ್ಮಿಸಿ ತುರ್ಕಿ ರೈಲ್ವೆಯೊಡನೆ ಸೇ
ಸುವ ವಿಚಾರದಲ್ಲಿ ಬ್ರಿಟನ್ನು ಮಾಡಿರುವ ಸ
ಯನ್ನು ಪರಿಶೀಲಿಸಲು ಅಮೇರಿಕನ್ ಮಿಲಿಟರಿ ಗೋ
ಯೊಂದು ಇರಾನಿಗೆ ಬರಲಿದೆ ಈ ಯೋಜನೆಗೆ ಅ
ರಿಕವು " ಲೆಂಡ್ ಅಂಡ್ ಲೀಸ್ " ಶಾಸನದ ಪ್ರಕಾ
ಸಹಾಯ ನೀಡಬೇಕೆಂದೂ, ಮತ್ತೆ ಟ್ರಾನ್ಸ್ ಇರಾ
ಯನ್ ರೈಲ್ವೆಯನ್ನು ಉತ್ತಮಪಡಿಸಿ ಬಲಗಾ
ಯಂತಹ ರಸ್ತೆಯೊಂದನ್ನು ಪೂರ್ವ ಇರಾನಿನಲ್ಲಿ
ಭಾರತಕ್ಕೂ ರಷ್ಯಕ್ಕೂ ಮಾರ್ಗಸೌಕರ್ಯವನ್ನು ಕಲ್ಪಿ
ಸಲು ಸಹಾಯಮಾಡಬೇಕೆಂದೂ ಬ್ರಿಟನ್ನು ಅಮೇ
ವನ್ನು ಕೇಳಿದೆ ಈ ರಸ್ತೆನಿರ್ಮಾಣ ಯೋಜನೆ
ಕುರಿತು ಅಮೇರಿಕದಲ್ಲಿ ಅನುಕೂಲವಾದ ಅಭಿಪ್ರಾಯ
ವ್ಯಕ್ತಪಟ್ಟಿದೆ ಕೆಲವು ತಿಂಗಳುಗಳೊಳಗಾಗಿ ರಸ್ತೆಯ
ರಚಿಸಬಹುದೆಂದು ಹೇಳಲಾಗಿದೆ

ಬ್ರಿಟನ್ನಿನ ನೌಕಾಶಕ್ತಿ ಹೆಚ್ಚಿದೆ

ಅಮೆರಿಕದ ತಾಟಸ್ಥ್ಯ ಶಾಸನದ ತಿದ್ದುಪಡಿ ಕಾಲದಲ್ಲಿ ಸೆನೇಟರ್ ಟಾಫ್ಟ್‌ರವರು ಮಾತನಾಡುತ್ತ "ಬ್ರಿಟನ್ನು ಈಗ 25 ಮಿಲಿಯನ್ ಟನ್ನುಗಳಷ್ಟು ಹಡಗುಗಳನ್ನು ಹೊಂದಿದೆ ಅಂದರೆ ಸಂಗ್ರಾಮವಾರಂಭವಾದ ಕಾಲದಲ್ಲಿದ್ದುದಕ್ಕಿಂತ 4 ಮಿಲಿಯನ್ ಟನ್ನುಗಳಷ್ಟು ಹಡಗುಗಳು ಹೆಚ್ಚಾದಂತಾಯಿತು' ಎಂದು ತಿಳಿಸಿದರು

ತುರ್ಕಿ-ಇರಾಕ್ ರೈಲುಮಾರ್ಗ ನಿರ್ಮಾಣ

ಆಗ್ನೇಯ ತುರ್ಕಿಯಲ್ಲಿರುವ ಡಿಯರ್‌ಬೇಕರ್ ಎಂಬಲ್ಲಿಂದ ಇರಾಕಿನ ಗಡಿವರೆಗೆ ರೈಲ್ವೆಮಾರ್ಗನಿರ್ಮಾಣಕಾರ್ಯವು ಭರದಿಂದ ಸಾಗಿದೆ ಅದರ ಉದ್ದ ಸುಮಾರು 10 ಮೈಲಿಗಳು ಇದರಿಂದ ತುರ್ಕಿ ಮತ್ತು ಇರಾಕ್ ರಾಷ್ಟ್ರಗಳಿಗೆ ಸಂಬಂಧವುಂಟಾಗುತ್ತದೆ ಪೂರ್ವದೇಶಗಳೊಂದಿಗೆ ತುರ್ಕಿಗೆ ಮಾರ್ಗಸೌಕರ್ಯವು ದೊರೆಯುವಂತೆ ಮಾಡಲು ಈ ಕಾರ್ಯವನ್ನು ತ್ವರೆಯಿಂದ ನಡೆಸುತ್ತಿರಲಾಗಿದೆ

ಮಾಸ್ಕೋಕಡೆ ಜರ್ಮನರ ಮುಂದೋಟ

ಮಾಸ್ಕೋರಂಗದಲ್ಲಿ ನಾಜಿಗಳು ಹೊಸಮುತ್ತಿಗೆಯನ್ನು ಆರಂಭಿಸಿದ್ದಾರೆ ಅನೇಕ ಟ್ಯಾಂಕುಗಳನ್ನು ಮತ್ತು ಶಸ್ತ್ರಬಂಡಿಗಳನ್ನು ಉಪಯೋಗಿಸಿ ಸ್ವಲ್ಪದೂರ ಮುಂದೆ ನುಗ್ಗಿದ್ದಾರೆ ಜರ್ಮನರಿಗೆ ಅಪಾರ ನಷ್ಟವೇನೋ ಆಗುತ್ತಿದೆ ಓರೆಲ್‌ಕ್ಷೇತ್ರದಲ್ಲಿರುವ ಕೈಗಾರಿಕಸ್ಥಾನವಾದ ಟುಲಾ ಎಂಬಲ್ಲಿಗೆ ನುಗ್ಗಲು ನಾಜಿಗಳು ಸರ್ವಪ್ರಯತ್ನಗಳನ್ನೂ ಮಾಡುತ್ತಿದ್ದಾರೆ ಅವರು ಸ್ವಲ್ಪ ದೂರ ಮುಂದೆಬರಲು ಶಕ್ತರಾದರೂ ಅಪಾರ ಹಾನಿಯನ್ನು ಅನುಭವಿಸುತ್ತಿದ್ದಾರೆ

ಬ್ರಿಟಿಷರಿಗೆ ಸೂಚನೆ

ಚೀನಾದಲ್ಲಿ ಜಪಾನು ಆಕ್ರಮಿಸಿರುವ ಪ್ರದೇಶಗಳಲ್ಲಿರುವ ಬ್ರಿಟಿಷರೆಲ್ಲ ಮುಖ್ಯವಾಗಿ ಸ್ತ್ರೀಯರು ಮಕ್ಕಳು ಅಲ್ಲಿಂದ ಹಿಂತಿರುಗುವದು ಕ್ಷೇಮವೆಂದು ಬ್ರಿಟಿಷ್ ಅಧಿಕಾರಿಗಳು ಮತ್ತೆ ಎಚ್ಚರಿಸಿರುತ್ತಾರೆ ಬಡವರನ್ನು ಉಚಿತವಾಗಿ ಸಾಗಿಸಲಾಗುತ್ತದೆ ಸಾಮಾನ್ಯವಾಗಿರುವ ಹಡಗುಗಳ ಸೌಕರ್ಯವು ಸಾಲದೆ ಹೋದರೆ, ವಿಶೇಷ ಹಡಗುಗಳ ಸೌಕರ್ಯವನ್ನು ಒದಗಿಸಲಾಗುತ್ತದೆ ಇತ್ತೀಚಿನ ಘಟನೆಗಳ ದೆಸೆಯಿಂದ ಈ ಎಚ್ಚರಿಕೆಯನ್ನು ಮತ್ತೆ ಕೊಡಲಾಗಿದೆ ಎಂದು ಸೂಚಿಸಿದ್ದಾರೆ

ವಿಚಿಸರ್ಕಾರದ ಆಜ್ಞೆ

ಬ್ರಿಟಿಷ್ ರೇಡಿಯೋ ಸ್ಟೇಷನ್ನುಗಳನ್ನು ಸಾರ್ವಜನಿಕವಾಗಿಯಾಗಲಿ ಖಾಸಗಿಯಾಗಿಯಾಗಲಿ ಉಪಯೋಗಿಸಬಾರದೆಂದು ಫ್ರಾನ್ಸಿನ ವಿಚಿಸರ್ಕಾರವು ಆಜ್ಞೆಮಾಡಿದೆ ಸಾರ್ವಜನಿಕ ಸಂಸ್ಥೆಗಳು ಈ ಆಜ್ಞೆಗೆ ವಿರುದ್ಧ ನಡೆದರೆ ಅವುಗಳನ್ನು 6 ತಿಂಗಳು ಮುಚ್ಚಬಹುದು ಆಜ್ಞೆಯನ್ನು ಮೀರುವ ಖಾಸಗಿ ವ್ಯಕ್ತಿಗಳಿಗೆ 6 ತಿಂಗಳುಗಳಿಂದ ಹಿಡಿದು 3 ವರ್ಷಗಳವರೆಗೆ ಶಿಕ್ಷೆವಿಧಿಸಬಹುದು ಅಥವಾ 1000 ಫ್ರಾಂಕುಗಳವರೆಗೆ ದಂಡವಿಧಿಸಬಹುದು.

ರಷ್ಯನರ ಶಕ್ತಿ ಕುಗ್ಗಿದೆ

ಜರ್ಮನ್ ಸೈನ್ಯ ಕಚೇರಿಯು ತನ್ನ ಪ್ರಕಟನೆಯಲ್ಲಿ "ರಷ್ಯಾಸೇನೆಯನ್ನು ಸದೆಬಡಿಯಲಾಯಿತೆಂದೂ, ರಷ್ಯಾಸೇನೆಯು ದೀರ್ಘಕಾಲ ಪ್ರತಿಭಟಿಸಲು ಅಶಕ್ತವಾಗಿದೆಯೆಂದೂ, ಜರ್ಮನ್ ಮತ್ತು ಮಿತ್ರಸೈನ್ಯಗಳು ಡೊನೆಟ್ಜ್ ಬೇಸಿನ್ನಿನ ಮೇಲ್ಭಾಗವನ್ನು ಮುಟ್ಟಿರುವದಾಗಿಯೂ, ಪಶ್ಚಿಮಕ್ಕೆ ಮತ್ತು ವಾಯುವ್ಯಕ್ಕೆ ಇರುವ ರೈಲ್ವೆ ಮಾರ್ಗಗಳನ್ನೆಲ್ಲ ಕತ್ತರಿಸಿಹಾಕಲಾಗಿದೆ"ಎಂದೂ ತಿಳಿಸಲಾಗಿದೆ.

ಭಾರಿ ಸಂಖ್ಯೆಯಲ್ಲಿ ವಿಮಾನ ನಿರ್ಮಾಣ

ಬ್ರಿಟನ್ ಮತ್ತು ಅಮೆರಿಕಗಳು ಈಗ ಒಂದು ವರ್ಷದಲ್ಲಿ 5000 ವಿಮಾನಗಳನ್ನು ತಯಾರಿಸಲು ಶಕ್ತವಾಗಿವೆಯೆಂದು ನ್ಯೂಯಾರ್ಕ್ ಟೈಂಸ್ ಪತ್ರಿಕೆಯು ತಿಳಿಸುತ್ತದೆ ಮುಂದಿನ ಜುಲೈ ವೇಳೆಗೆ ಅಮೆರಿಕದ ಕಾರ್ಖಾನೆಗಳು ಒಂದು ದಿನಕ್ಕೆ 250 ವಿಮಾನಗಳನ್ನು ತಯಾರಿಸಲು ಶಕ್ತವಾಗುವವು ಹಾಗಾದಲ್ಲಿ ವರ್ಷಕ್ಕೆ 5000 ವಿಮಾನಗಳನ್ನು ನಿರ್ಮಾಣಮಾಡಲು ಶಕ್ತವಾಗಬೇಕೆಂದು ರೂಜ್‌ವೆಲ್ಟರು ಸೂಚಿಸಿದ್ದಕ್ಕಿಂತ ಒಂದು ಹೆಜ್ಜೆ ಮುಂದುವರದಂತಾಗುತ್ತದೆ

ರಷ್ಯವು ಉಗ್ರವಾಗಿ ಪ್ರತಿಭಟಿಸುತ್ತಿದೆ

ದಕ್ಷಿಣ ರಂಗದಲ್ಲಿ ರಷ್ಯನರ ಪ್ರತಿಭಟನೆಯು [illegible] ಆದರೂ ರಷ್ಯಕ್ಕೆ ವ್ಯಾಪಕ ವಿಪತ್ತು ತಪ್ಪಿಲ್ಲ ಜರ್ಮನರು ಅಪಾರ ಸಂಖ್ಯೆಯಲ್ಲಿ ರಣರಂಗಕ್ಕೆ ಬರುತ್ತಿದ್ದಾರೆ ಎಷ್ಟೇ ಕಷ್ಟವಾದರೂ ಜಯವನ್ನು ಸಂಪಾದಿಸಬೇಕೆಂಬುದು ಅವರ ಉದ್ದೇಶ ನಾಜಿಗಳು ರೋಸ್ಟೋವ್ ಕಡೆಗೂ ಸ್ಟಾಲಿನೋ ಆಚೆ ಡೊನೆಟ್ಜ್ ಬೇಸಿನ್ನಿನ ಪೂರ್ವಭಾಗಕ್ಕೂ ನುಗ್ಗುತ್ತಿದ್ದಾರೆ ಈ ಪ್ರದೇಶದಲ್ಲಿ ರಷ್ಯ ವಿಮಾನಗಳು ಶತ್ರುಗಳನ್ನು ತಡೆಯುವಲ್ಲಿ ಮುಖ್ಯ ಪಾತ್ರವನ್ನು ವಹಿಸಿವೆ

ಮಾಸ್ಕೋಮೇಲೆ ವಿಮಾನ ಮುತ್ತಿಗೆ

ಕಳೆದ 0 ನೆಯ ತಾರೀಖಿನ ದಿವಸ ಜರ್ಮನರು ಮಾಸ್ಕೋನಗರದ ಮೇಲೆ ದೊಡ್ಡ ವಿಮಾನಮುತ್ತಿಗೆಯನ್ನು ನಡೆಸಿದರು ಅದರಲ್ಲಿ 100 ವಿಮಾನಗಳಿಗೆ ಮೇಲ್ಪಟ್ಟು ಭಾಗವಹಿಸಿದ್ದವು ಅವುಗಳಲ್ಲಿ 39 ವಿಮಾನಗಳನ್ನು ರಷ್ಯನರು ಹೊಡೆದುರುಳಿಸಿದರು ಜರ್ಮನರು ಮಾಸ್ಕೋ ನಗರದ ಮೇಲೆ ಒಂದೇ ಸಮನೆ ಬಾಂಬಿನ ಮಳೆಗರೆಯುತ್ತಿದ್ದಾರೆ ಮಾಸ್ಕೋನಗರ ಸನಿಹದಲ್ಲೇ ತಮ್ಮ ವಿಮಾನ ಮೂಲೆಗಳನ್ನು ಸ್ಥಾಪಿಸಿರುವದಾಗಿ ತಿಳಿದುಬರುತ್ತದೆ

ಅಮೆರಿಕವು ಯುದ್ಧಮಾಡಲು ಕಾತುರವಾಗಿಲ್ಲ

ಶ್ರೀ ಕಾರ್ಡೆಲ್ ಹಲ್‌ರವರು ಅಮೆರಿಕದ ಸೆನೆಟ್ ಸಭೆಯ ವಿದೇಶ ವ್ಯವಹಾರಸಮಿತಿಯ ಮುಂದೆ ಹೇಳಿಕೆ ಕೊಡುತ್ತ ಅಮೆರಿಕಕ್ಕೆ ಮುಂದೆ ನುಗ್ಗಿ ಸಂಗ್ರಾಮವನ್ನಾರಂಭಿಸಬೇಕೆಂಬ ಉದ್ದೇಶವೇನೂ ಇಲ್ಲ ಕೇವಲ ಆತ್ಮ ಸಂರಕ್ಷಣೆಯ ನೀತಿಯನ್ನನುಸರಿಸಿ ತಾಟಸ್ಥ್ಯ ಶಾಸನವನ್ನು ತಿದ್ದುಪಾಟುಮಾಡುವ ವಿಚಾರಕ್ಕೆ ಈಗ ಕೈಹಾಕಲಾಗಿದೆ ಅಮೆರಿಕವೇನಾದರೂ ಆಲಸ್ಯವಾಗಿದೆಯೆಂದು ನಾಜಿಗಳಿಗೆ ತಿಳಿದರೆ ಅವರು ತಮ್ಮ ಕಾರ್ಯವನ್ನು ಇನ್ನೂ ತ್ವರಗೊಳಿಸುವರು ವಿಶ್ವವನ್ನೇ ಜಯಿಸಬೇಕೆಂಬ ಹಿಟ್ಲರನ ಇಷ್ಟವು ಅವನ ಕೃತಿಯಿಂದ ಕಾಣಬರುತ್ತಿದೆ ಎಂದರು

ಚೀನಾ ಸೈನಿಕರ ಮೇಲೆ ವಿಷವಾಯು ಪ್ರಯೋಗ

ಚೆಂಗ್ ಚಾ ಮತ್ತು ಕ್ಯಾಂಟನ್ ಕ್ಷೇತ್ರಗಳಲ್ಲಿ ಜಪಾನರು ಹೊಸ ಕದನವನ್ನಾರಂಭಿಸಿದ್ದಾರೆ ಆ ಕ್ಷೇತ್ರದಲ್ಲಿ ಜಪಾನರು ಅಪಾರ ಬಲವನ್ನು ಸಂಗ್ರಹಿಸಿದ್ದಾರೆ ಇಚಾಂಗ್‌ನಲ್ಲಿ ಜಪಾನರು ವಿಷವಾಯುವನ್ನು ಉಪಯೋಗಿಸಿದ ವಿಚಾರವನ್ನು ಚೀನಾ ಮಿಲಿಟರಿ ಅಧಿಕಾರಿಗಳೊಬ್ಬರು ಹೇಳುತ್ತಾ—"ಇಚಾಂಗ್ ನಗರವನ್ನು ಹೊಕ್ಕ 3000 ಚೀನಾ ಸೈನಿಕರಲ್ಲಿ 700 ಕ್ಕಿಂತಲೂ ಹೆಚ್ಚು ಮಂದಿ ವಿಷವಾಯುವಿನಿಂದ ಸತ್ತರೆಂದೂ, 600 ಮಂದಿ ಗಾಯಗೊಂಡರೆಂದೂ, ಚೀಣರು 8, 9 ನೇ ತಾ|| ಗಳಲ್ಲಿ ನಗರದ ಕಡೆ ಬಂದಾಗ ಅವರ ಮೇಲೆ ವಿಷವಾಯುವಿನಿಂದ ಕೂಡಿದ ಷೆಲ್‌ಗಳನ್ನು ಹಾರಿಸಲಾಯಿತೆಂದೂ, ಅವರು ನಗರ ಪ್ರವೇಶಮಾಡಿದ ಮೇಲೆ 10 ನೇ ತಾರೀಖಿನ ದಿನ ಜಪಾನ್ ಬಾಂಬರುಗಳು 4 ಗಂಟೆಗಳ ಕಾಲ ಮುತ್ತಿಗೆ ನಡೆಯಿಸಿ, ಎಲ್ಲ ಬಗೆಯ ವಿಷವಾಯುಗಳೂ ತುಂಬಿದ್ದ ಅನೇಕ ಬಾಂಬುಗಳನ್ನು ಹಾಕಿದರೆಂದೂ" ಹೇಳಿದರು.

ರಷ್ಯದ ಸಾಹಸವು ನಾಜಿಗಳನ್ನು ಆಶ್ಚರ್ಯಪಡಿಸಿದೆ

ಮಾಸ್ಕೋನಗರವನ್ನು ರಕ್ಷಿಸುತ್ತಿರುವ ರಷ್ಯನರ ಸಾಹಸವನ್ನೂ ದೃಢನಿಶ್ಚಯವನ್ನೂ ಕಂಡು ನಾಜಿಗಳು ಆಶ್ಚರ್ಯಯುತರಾಗಿದ್ದಾರೆ ಮಾಸ್ಕೋ ಮೇಲೆ ಕಟ್ಟಕಡೆ ಮುತ್ತಿಗೆ ನಡೆಸಲು ನಾಜಿಗಳು ಅಪಾರ ಸಂಗ್ರಾಮ ಸಲಕರಣೆಗಳನ್ನು ತರುತ್ತಿದ್ದಾರೆ ರಸ್ತೆಗಳೆಲ್ಲವೂ ಹಾಳುಮಾಡಲ್ಪಟ್ಟಿರುವದರಿಂದ ಜರ್ಮನರ ಕಾರ್ಯಕ್ಕೆ ಸ್ವಲ್ಪ ಅಡ್ಡಿಯಾಗಿದೆ ಪ್ರತಿಯೊಂದು ಮನೆಯನ್ನೂ ಬೀದಿಯನ್ನೂ ರಕ್ಷಿಸುವದಾಗಿ ರಷ್ಯನರು ಹೇಳಿರುವದು ಬರೀ ಪೊಳ್ಳುಮಾತಲ್ಲವೆಂದು ಜರ್ಮನರು ಒಪ್ಪಿಕೊಳ್ಳುತ್ತಿದ್ದಾರೆ ಮಾಸ್ಕೋ ನಗರವನ್ನು ಹಿಡಿಯುವದು ಅಷ್ಟು ಸುಲಭವಲ್ಲವೆಂಬುದನ್ನು ಜರ್ಮನರು ಗ್ರಹಿಸಿದ್ದಾರೆ ಮಾಸ್ಕೋವನ್ನು ರಕ್ಷಿಸುತ್ತಿರುವ ಫಿರಂಗಿಗಳ ಹೊಡೆತವು ಉಗ್ರವಾಗಿದೆಯೆಂದು ಒಪ್ಪಿಕೊಂಡಿದ್ದಾರೆ ಲೆನಿನ್‌ಗ್ರಾಡ್ ಲಡೋಗ ಮಧ್ಯೆ ಇರುವ ಪ್ರದೇಶವನ್ನು ರಷ್ಯನರು ಬಹಳ ಪರಾಕ್ರಮದಿಂದ ರಕ್ಷಿಸುತ್ತಿದ್ದಾರೆ ಲೆನಿನ್‌ಗ್ರಾಡಿನಲ್ಲಿ ರಷ್ಯದ ಫೈಟರ್ ವಿಮಾನಗಳು ಬಲಯುತವಾಗಿದ್ದು ಜರ್ಮನ್ ಬಾಂಬರುಗಳನ್ನು ಹೊಡೆದೋಡಿಸುತ್ತಿವೆ

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರ ಹುಜೂರು ಕಾರ್ಯದರ್ಶಿಗಳಾಗಿರುವ ರಾಜಸಭಾಭೂಷಣ ಟಿ ತಂಬೂಚೆಟ್ಟಿಯವರಿಗೆ ನವೆಂಬರ್ ತಿಂಗಳಿನಿಂದ ಮತ್ತೊಂದು ವರ್ಷ ಎಕ್ಸ್‌ಟೆನ್ಷನ್ ಕೊಡಲಾಗಿದೆಯೆಂದು ತಿಳಿದುಬರುತ್ತದೆ ಇವರು 1915ನೆಯ ಇಸವಿಯಿಂದ ಮಹಾಪ್ರಭುಗಳವರ ಕಾರ್ಯದರ್ಶಿಗಳಾಗಿದ್ದಾರೆ

ಯುದ್ಧದ ದೆಸೆಯಿಂದ ಆಹಾರಪದಾರ್ಥಗಳ ಬೆಲೆ ಹೆಚ್ಚಿರುವದರಿಂದ ತಿಂಗಳಿಗೆ 25 ರೂ ಗಳು ಮತ್ತು ಅದಕ್ಕೆ ಕಡಿಮೆ ಸಂಬಳ ಪಡೆಯುವ ನೌಕರರಿಗೆಲ್ಲ ತಿಂಗಳಿಗೆ ಒಂದು ರೂಪಾಯಿನಂತೆ ತುಟ್ಟಿ ಭತ್ಯವನ್ನು ಕೊಡಬೇಕೆಂಬುದಾಗಿ ಮೈಸೂರು ಸರ್ಕಾರದವರು ಆಜ್ಞೆ ಮಾಡಿದ್ದಾರೆ ಇದು ಸೆಪ್ಟೆಂಬರ್ 1 ನೆಯ ತಾರೀಖಿನಿಂದ 1941 ನೆ ಡಿಸೆಂಬರ್ ಅಂತ್ಯದವರೆಗೆ ಆಚರಣೆಯಲ್ಲಿರುತ್ತದೆ

ಇರ್ವಿನ್‌ನಾಲಾ ಕ್ಷೇತ್ರದಲ್ಲಿ ಮಲೇರಿಯಾ ಉಪದ್ರವವನ್ನು ನಿವಾರಣೆ ಮಾಡಲು ಸರ್ಕಾರದವರು 10 ಲಕ್ಷ ರೂ ಗಳ ಒಂದು ಸ್ಕೀಂ ಸಿದ್ಧಗೊಳಿಸಿದ್ದಾರೆ ಅದನ್ನು ಈ ವರ್ಷವೇ ಆಚರಣೆಗೆ ತಂದು ಮುಗಿಸಲಾಗುವದು ಕೆಲವು ಕೆರೆಗಳನ್ನು ಒಡೆಯುವದು, ಕೆಲವು ಕಣಿವೆ ಪ್ರದೇಶಗಳಲ್ಲಿ ನೀರು ನಿಲ್ಲುವುದನ್ನು ತಪ್ಪಿಸುವದು, ಎತ್ತರವಾದ ಪ್ರದೇಶದಲ್ಲಿ ಗ್ರಾಮಗಳನ್ನು ಕಟ್ಟಿಕೊಳ್ಳುವದು ಇತ್ಯಾದಿ ಕಾರ್ಯಗಳನ್ನು ಶೀಘ್ರ ಕೈಗೊಳ್ಳಲಾಗುವದು

ಸ್ವೀಕಾರ.

ಸೊಲ್ಲಾಪುರದಲ್ಲಿರುವ ವೇ|| ಹಿರಿಯಮಠದ ವೀರಂತಯ್ಯ ಶಾಸ್ತ್ರಿಗಳು ಹೋಟಗಿ ಶ್ರೀಗಳವರಿಂದ ಸಪತ್ನೀಕರಾಗಿ ಉಪದೇಶವನ್ನು ಪಡೆದುಕೊಂಡ ಸ್ಮಾರಕವಾಗಿ ಕಳೆದ ತಿಂಗಳು ೨೮ ನೆಯ ತಾರೀಖಿನ ದಿವಸ ನೆರವೇರಿಸಿದ ಸ್ಮಾರಕೋತ್ಸವ ಸಮಯದಲ್ಲಿ ಸಮರ್ಪಿಸಿದ 1 ರೂ ಶ್ರೀಶಿವಪಂಚಾಕ್ಷರಮಹಾಮಂತ್ರೋಲ್ಲೇಖನ ಸಮಾಪ್ತಿ ಸಮಯದಲ್ಲಿ ಲೇಖಕರು ಸಮರ್ಪಿಸಿದ 1 ರೂ ಒಟ್ಟು 2 ರೂಪಾಯಿಗಳು ಸೌ|| ಭಾಗೀರಥೀಬಾಯಿ ಕಟಾಪ ಇವರದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

[೩ ನೆಯ ಪುಟದಿಂದ ಮುಂದುವರೆದುದು]

ನಿನ್ನ ಭುಜಬಲಗಳಲ್ಲ! ನೀನು ನಮಗೆ ವಿದೇಶಿಯನಾಗಿದ್ದರೂ ನಿನ್ನ ಗುಣವು ನಮಗೆ ಸ್ಮರಣೀಯವೂ ಸ್ತುತ್ಯವೂ ಆಗಿದೆ ನೀನು ಮಾನುಷದೇಹವನ್ನು ನೀಗಿದ್ದರೂ ನಿನ್ನ ಮಾತೃಭಕ್ತಿ ಧ್ವಜವನ್ನು ನಾವು ಪದೇ ಪದೇ ಆಕಾಶವನ್ನು ಮುಟ್ಟಿಸುತ್ತಿರುವೆವು

ನಮ್ಮ ಚಕ್ರವರ್ತಿಗಳಾಗಿದ್ದ ಎಡ್ವರ್ಡ ಸಾರ್ವಭೌಮರು ತಮ್ಮ ಮಾತೃವಿನಲ್ಲಿ ಅನ್ಯಾದೃಶವಾದ ಭಕ್ತಿಯನ್ನಿಟ್ಟಿದ್ದರೆಂದು ಅವರ ಚರಿತ್ರೆಯಿಂದ ಗೊತ್ತಾಗುವದು ಅವರ ತಾಯಿಯವರು ಜೀವಿಸಿರುವಾಗ ಅವರ ಅಜ್ಞೆಯನ್ನು ಸ್ವಲ್ಪವೂ ಉಲ್ಲಂಘಿಸದ ತಮ್ಮ ಆಯುಷ್ಯದ ಮುಕ್ಕಾಲುಭಾಗ ಕಾಲವನ್ನೇ ಯುವಸಾರ್ವಭೌಮತೆಯಲ್ಲಿ ಕಳೆದಿರುವುದನ್ನು ನೋಡಿದರೆ ಇಂಗ್ಲೀಷ್ ಚರಿತ್ರೆಯಲ್ಲಿ ಇವರ ಮಾತೃಭಕ್ತಿಯು ಕೇವಲ ಸ್ತುತ್ಯರ್ಹವಾಗಿಯೇ ನಿಲ್ಲುವುದರಲ್ಲಿ ಸಂಶಯವಿಲ್ಲ ಅವರು ರಾಜ್ಯಭಾರವನ್ನು ವಹಿಸಿಕೊಂಡಾಗ್ಗೆ "ನಮ್ಮ ತಾಯಿಯವರ ಅಜ್ಞೆಗಳನ್ನೂ ನಿಯಮಗಳನ್ನೂ ಶಿರಸಾವಹಿಸಿ ನಡೆಸುವೆನೆಂದು ವಾಗ್ದಾನಮಾಡಿ ಅದರಂತೆ ನಡೆದರು ಇದು ಅವರ ಮಾತೃಭಕ್ತಿಯನ್ನು ಸೂಚಿಸುವದು

ನಮ್ಮ ಮೈಸೂರಿನ ಆಳುವ ಶ್ರೀ ಕೃಷ್ಣರಾಜೇಂದ್ರ ಒಡೆಯರವರು ತಮ್ಮ ಮಹಾಮಾತೃಶ್ರೀಯವರ ಅಪ್ಪಣೆಯನ್ನು ಶಿರಸಾವಹಿಸಿ ನಡೆಯುತ್ತಿದ್ದರೆಂಬುದು ಜಗದ್ವಿಖ್ಯಾತವಾಗಿದೆ ತಾವು ಸ್ವತಂತ್ರಿಸಿ ರಾಜ್ಯಭಾರಮಾಡಲು ಸಮರ್ಥರಾಗಿದ್ದರೂ ಮಾತೃವಾಕ್ಯವನ್ನುಲ್ಲಂಘಿಸದೆ ಪರಿಪಾಲಿಸುತ್ತಿದ್ದುದು ಪೂರ್ವದ ಮಹನೀಯರ ಸ್ಮರಣೆಗೆ ಅವಕಾಶವನ್ನುಂಟು ಮಾಡಿದೆ

ಈಗ್ಗೆ ಮೈಸೂರ ಸಿಂಹಾಸನಾಧೀಶ್ವರರಾಗಿರುವ ಶ್ರೀ ಜಯಚಾಮರಾಜೇಂದ್ರ ಒಡೆಯರವರ ತಮ್ಮ ಮಾತೃಶ್ರೀಯವರಲ್ಲಿ ವಿಶೇಷಭಕ್ತಿವಿಶ್ವಾಸಗಳನ್ನಿಟ್ಟಿರುವುದನ್ನು ತಿಳಿದು ತುಂಬಾ ಹರ್ಷಿಸಬೇಕಾಗಿದೆ ಇವರಿಗೆ ಜಗದೀಶ್ವರನು ಆಯುರಾರೋಗ್ಯ ಸಂಪತ್ತನ್ನೂ ಪುತ್ರಪೌತ್ರರನ್ನೂ ಅನುಗ್ರಹಿಸಲಿ

ಸರ್ವಜ್ಞಮೂರ್ತಿಗಳೂ ಸಹ "ಸತ್ಯಕ್ಕೆ ಸಮನಿಲ್ಲ, ಭಕ್ತಿಗೆ ನೆಲೆಯಿಲ್ಲ, ಹೆತ್ತವರ್ಗಿಂತ ಹಿತವಿಲ್ಲ, ಲೋಕದೊಳ್ ನಿತ್ಯವೇ ಇಲ್ಲ" ಹೀಗೆಂದು ಮಾತೃಭಕ್ತಿಯನ್ನು ಪ್ರಶಂಸಿಸಿರುವರು ತಾಯಿಗಿಂತ ಬಂಧುವಿಲ್ಲ ಎಂದು ನೀತಿಕಾರರೂ ಹೇಳಿರುವರು

ಹೀಗೆ ಮಾತೃಭಕ್ತಿಯು ಪ್ರಪಂಚದಲ್ಲಿ ಯೋಗ್ಯರಿಂದ ಉತ್ಕೃಷ್ಟವೆಂದು ಭಾವಿಸಲ್ಪಟ್ಟು ಧನ್ಯರಿಂದ ಆಚರಿಸಲ್ಪಡುವದು

ವಾಚಕಮಹಾಶಯರೇ, ಮಾತೃವಿನ ಪ್ರೇಮಸಂಬಂಧವು ನಿಃಸೀಮಿತವಾಗಿ ಸಾಧೀಸಮಹದಂತೆ ಸರ್ವರನ್ನೂ ಬಿಗಿದಿರುವದು ಅನೇಕ ರಾಜಾಧಿರಾಜರೂ, ಆಚಾರ್ಯಪುಂಗವರೂ ಮಾತೃಸ್ಥಾನಕ್ಕೆ ಅಧಿಕ ಬೆಲೆಯನ್ನು ಕೊಟ್ಟಿರುತ್ತಾರೆ ಜಗತ್ತಿನಲ್ಲಿ ಕಲಿಧೂರ್ತರು ತಮ್ಮ ತಾಯಿಗಳ ಕಣ್ಣಿನಿಂದ ನೀರಿನ ಕೋಡಿಯನ್ನೇ ಹರಿಸುತ್ತಾರೆ ಶಾಂತಂ ಪಾಪಂ! ಇಂತಹ ಮಾತೃದ್ರೋಹಿಗಳಿಗೆ ಮುಂದೆ ದುರ್ಗತಿಯುಂಟಾಗುವುದರಲ್ಲಿ ಸಂಶಯವಿಲ್ಲ ಆದಕಾರಣ ಸರ್ವರೂ ಮಾತೃಭಕ್ತಿಪರಾಯಣರಾಗಿ ಸುಖಸಂಪತ್ತನ್ನು ಹೊಂದಿ ಧನ್ಯರಾಗಬೇಕೆಂದು ಆಶಿಸುವೆನು

ಮಾತೃದೇವೋ ಭವ!

|| ಶ್ರೀ ಜಗದ್ಗುರು ವಿಶ್ವಾರಾಧ್ಯಾಯ ನಮಃ ||

ಸತ್ಕರ್ಮವನ್ನು ಮಾಡುವ ಆಶೆಯು ಹುಟ್ಟಿದಾಗ್ಗೆ ಇಂದು ನಾಳೆಂದು ಹೊತ್ತುಗಳೆಯಬಾರದು

ಲೇ—ಶ್ರೀ ಪಟ್ಟದಸ್ವಾಮಿಗಳು ಹಿರೇಮಠ ಕೋಣ್ಣೂರು

ಕಾಮನಬಿಲ್ಲು, ಮೃಗಜಲ, ಬಿಸಿಲ್ಗುದುರೆ, ನೀರು ಮೇಲಿನ ಗುಳ್ಳೆ ಹೇಗೆ ಅಶಾಶ್ವತವೋ, ಹಾಗೆಯೇ ಶರೀರ, ಪ್ರಾಯ, ಸಂಪತ್ತು, ರಾಜ್ಯ, ಜಗತ್ತು ಇವೇ ಮೊದಲಾದವುಗಳು ಅಶಾಶ್ವತವಾದವು ಇವುಗಳನ್ನು ಎಷ್ಟು ಸಂಗ್ರಹಿಸಿದರೂ ನಮ್ಮ ಕೂಡ ಒಂದೂ ಬರಲಾರವು ಇರುವವರೆಗೆ ಅದರ ಸುಖವನ್ನು ಮಾತ್ರ ಅನುಭವಿಸಿ ಅಂತ್ಯಕಾಲದಲ್ಲಿ ಇಲ್ಲಿಯೇ ಬಿಟ್ಟು ಹೋಗಬೇಕಾಗುತ್ತವೆ ನಮ್ಮ ಸಂಗಡ ಬರುವದು ಧರ್ಮ ಅಧರ್ಮ ಇವೆರಡೇ ಧರ್ಮದಿಂದ ಆತ್ಮನು ಉನ್ನತಾವಸ್ಥೆಯನ್ನೇರುವನು ಅಧರ್ಮದಿಂದ ಅಧೋಗತಿಗೀಡಾಗುವನು ಆದ್ದರಿಂದ ಜ್ಞಾನದಿಂದೊಡಗೂಡಿದ ಮನುಷ್ಯನು ಅಧರ್ಮವನ್ನು ದೂರೀಕರಿಸಿ ಧರ್ಮವನ್ನು ಸಂಗ್ರಹ ಮಾಡಬೇಕು

ಅಸ್ಥಿರಂ ಜೀವನಂ ಲೋಕೇ ಅಸ್ಥಿರೇ ಧನ ಯೌವನೇ ।
ಅಸ್ಥಿರೇ ಪುತ್ರದಾರಾಶ್ಚ ಧರ್ಮಕೀರ್ತಿರ್ದ್ವಯಂ ಸ್ಥಿರಂ ॥೧॥
ಅನಿತ್ಯಾನಿ ಶರೀರಾಣಿ ವಿಭವೋ ನೈವ ಶಾಶ್ವತಃ ।
ನಿತ್ಯಂ ಸನ್ನಿಹಿತೋ ಮೃತ್ಯುಃ ಕರ್ತವ್ಯೋ ಧರ್ಮಸಂಗ್ರಹಃ ॥೨॥

ಅಂದರೆ, ಜೀವವು ಜಗತ್ತು, ದ್ರವ್ಯ, ಪ್ರಾಯ, ಹೆಂಡರು ಮಕ್ಕಳು ಇವು ಯಾವೂ ಸ್ಥಿರವಲ್ಲ ಧರ್ಮ ಕೀರ್ತಿ ಇವೆರಡು ಮಾತ್ರ ಸ್ಥಿರವಾದವುಗಳು ಶರೀರವೂ, ಐಶ್ವರ್ಯವೂ ಶಾಶ್ವತವಲ್ಲವು ಮೃತ್ಯುವು ಯಾವಾಗಲೂ ಬೆನ್ನು ಹಿಂದ ಅನುಸರಿಸಿಕೊಂಡು ನಿಂತಿರುವದು ಆದ್ದರಿಂದ ಧರ್ಮವನ್ನು ಸಂಗ್ರಹಿಸುವದೇ ಮನುಷ್ಯನ ಕೆಲಸವಾಗಿದೆ ಬೇಕಾದಷ್ಟು ದುಡ್ಡು ಗಳಿಸಿದರೂ ಮನೆಯಲ್ಲಿಯೇ ಉಳಿಯುವದು ಮಿತ್ರರು ಬಂಧು ಬಾಂಧವರು ಹೆಂಡರು, ಮಕ್ಕಳು ತಂದೆ ತಾಯಿಗಳು ಸ್ಮಶಾನದವರೆಗೆ ಬಂದು ಮನೆಗೆ ಹೋಗುವರು ನಮ್ಮ ಸಂಗಡ ಬರುವದು ಪುಣ್ಯ, ಪಾಪ ಇವೆರಡೇ ಮಾತ್ರ ಶರೀರ ಪ್ರಾಯ, ಸಂಪತ್ತು, ರಾಜ್ಯ ಇವೇ ಮೊದಲಾದವುಗಳನ್ನು ದೇವರು ನಮಗೆ ಅನುಗ್ರಹಿಸಿದಾಗ ಗುರುಸೇವೆ, ದೇವರಸೇವೆ, ತಂದೆ ತಾಯಿಗಳಸೇವೆ, ಅತಿಥಿಸೇವೆ, ದಾನ, ಧರ್ಮ, ಪರೋಪಕಾರವನ್ನು ಮಾಡಬೇಕಲ್ಲದೆ ವ್ಯರ್ಥವಾಗಿ ಭ್ರಮೆಗೆ ಬಿದ್ದು, ಎಲ್ಲಾ ಹೆಂಡರು ಮಕ್ಕಳಿಗೆಂದು ಕೂಡಿಹಾಕಿ ಮುಪ್ಪಾಗುವ ವರೆಗೂ ಶರೀರವನ್ನು ಅವರಿಗಾಗಿಯೇ ಸವೆಸಿ ಬಿಕಾರಿಯಂತೆ ಸತ್ತುಹೋಗಬಾರದು ತನಗೆ ಸಾಧ್ಯವಾದಮಟ್ಟಿಗೆ ಸಂಪತ್ತನ್ನು ಸತ್ಕಾರ್ಯಕ್ಕೆ ಖರ್ಚುಮಾಡಿ ಶರೀರವನ್ನು ಹರಪೂಜೆ ಗುರುಪೂಜೆಯಲ್ಲಿ ಸವೆಸಬೇಕು ಮುಂದೆ ಮಾಡಿದರ ಬಂದೀತೆಂದು ದಿವಸವನ್ನು ನೂಕಬಾರದು ಹೀಗೆ ದಿವಸವನ್ನು ನೂಕುತ್ತ ಹಾಗೆಯೇ ಸತ್ತುಹೋದರೆ ನಮ್ಮ ಮುಕ್ತಿಪದಕ್ಕೆ ಎಡೆಯಿಲ್ಲ! ಹೀಗಾದಪಕ್ಷದಲ್ಲಿ ನಮ್ಮ ಪಾಪವೇ ನಾವು ಮಾಡುವ ಸತ್ಕರ್ಮಕ್ಕೆ ಅಡ್ಡಿಮಾಡುವುದೆಂದು ತಿಳಿಯಬೇಕು ಮನುಷ್ಯನು ತನ್ನ ಸ್ವಂತ ವಿಚಾರದಿಂದ ಮೇಲಿನ ತತ್ವದಂತೆ ನಡೆಯಬೇಕು ತನಗೆ ಅಷ್ಟೊಂದು ಬುದ್ಧಿಯಿಲ್ಲದಿದ್ದರೆ ಗುರು ಹಿರಿಯರ ಮಾತನ್ನಾದರೂ ಕೇಳಿ ಅವರು ಹೇಳಿದಂತೆ ನಡೆಯಬೇಕು ಧನಿಕರು ತಮ್ಮ ದ್ರವ್ಯವನ್ನು ಸತ್ಪಾತ್ರಕ್ಕೆ ಅಂದರೆ ಗುರುಸ್ಥಾನಕ್ಕೆ ಪೂಜೆಗಾಗಲಿ, ದೀಪಾರಾಧನೆಗಾಗಲಿ, ಮಠ ಕಟ್ಟಿಸುವದಕ್ಕಾಗಲಿ, ದಾನಮಾಡಬೇಕು ಈ ತತ್ವವನ್ನು ತಿಳಿದೇ ಪ್ರಾಚೀನ ಕಾಲದಲ್ಲಿ ರಾಜಾಧಿರಾಜರೂ, ಶ್ರೀಮಂತರೂ ಗುರುಸ್ಥಾನ ಮಠಗಳಿಗೆ ಗ್ರಾಮಗಳನ್ನೂ, ಜಮೀನುಗಳನ್ನೂ ದಾನಮಾಡಿದ್ದಾರೆಂಬುದು ಶಿಲಾಶಾಸನ, ತಾಮ್ರಶಾಸನಗಳಿಂದ ಕಂಡುಬರುತ್ತದೆ ಅವರ ಶರೀರವು ಅಳಿದು ಎಷ್ಟೋ ವರ್ಷಗಳಾದರೂ ಅವರ ಕೀರ್ತಿಯು ಲೋಕದಲ್ಲಿ ಅಚ್ಚಳಿಯದಂತೆ ವಿರಾಜಿಸುತ್ತದ ಅಂಥ ಪುಣ್ಯಶಾಲಿಗಳು ಸತ್ತರೂ ಇದ್ದಂತೆಯೇ ಸರಿ! ಪರಮಾತ್ಮನ ಕೃಪೆಗೆ ಪಾತ್ರರಾಗುವವರು ಅಂಥವರಲ್ಲವೇ?

ಮಾಡುವ ಸತ್ಕರ್ಮವನ್ನು ತೀವ್ರಮಾಡಬೇಕು ದಿನವನ್ನು ಮುಂದಕ್ಕೆ ನೂಕಬಾರದು ಯಾಕಂದರೆ— ನೂಕುತ್ತ ಹೋಗುವದರಿಂದ ಅದರೊಳಗಾಗಿ ನಾವು ಸತ್ತುಹೋದರೆ ತೀರಿತು, ಅದರ ಫಲವನ್ನೂ ನಾವು ತೆಗೆದುಕೊಂಡಿರುವದಿಲ್ಲ ನಮ್ಮ ಆಸ್ತಿಪಾಸ್ತಿಗಳೆಲ್ಲ ಕ್ಷುಲ್ಲಕಜನರ ಕೈ ಸೇರಿ ನಾವು ಶ್ರಮಪಟ್ಟು ಗಳಿಸಿದ್ದೂ ವ್ಯರ್ಥವೇ ಆಗಿಹೋಗುತ್ತದೆ ಇಂಥವುಗಳು ಲೋಕದಲ್ಲಿ ಎಷ್ಟೋ ಆದದ್ದು ಪ್ರತ್ಯಕ್ಷ ನೋಡಿದ್ದೇವೆ ಇಂಥ ಸ್ಥಿತಿಯನ್ನು ಎಂದೂ ತಂದುಕೊಳ್ಳಬಾರದು ಮೇಲಿನ ವಿಷಯವನ್ನು ಕುರಿತು ಮಳಗುಂದ ಮಹಾಂತ ಶಿವಯೋಗಿಗಳು ತಮ್ಮ ಕೈವಲ್ಯದಲ್ಲಿ ಒಂದು ಪದ್ಯವನ್ನು ಅಂದಿದ್ದಾರೆ

ರಾಗ—ಸಾರಂಗ

ಹರಪೂಜೆ ಗುರುಸೇವೆ ವರಪುಣ್ಯವಿಲ್ಲದೆ ।
ಬರಿದೆ ಸುಖ ಭೋಗ ದೊರಕುವದುಂಟೆ ಅಣ್ಣಾ ॥ಪ॥

ಹಣವಿದ್ದಾಗಲೆ ಭಕ್ತಿ ನೆಣವಿದ್ದಾಗಲೆ ಸೇವೆ ।
ಗುಣವಿದ್ದಾಗಲೆ ಮಾಡಿ ಮುಕ್ತಿ ಪಡೆಯಣ್ಣಾ

ಋಣಮುತ್ತಾಡಿದವರಿಲ್ಲ ಹಣ ಹರಿದುಹೋಗುವದೆ
ತ್ರಿಣಯಗೊಲಿಸುವದು ಬಹುಕಷ್ಟವಣ್ಣಾ

ಹಿಂದಲ ಪುಣ್ಯವನು ಇಂದುಂಡುಳಿದಬೇಕು ।
ಮುಂದಿನ ಪುಣ್ಯವನು ಮುಂದುಂಡುಡಬೇಕಣ್ಣಾ

ಬಂಧನವೇಕಿದಕೆ ಇಂದೆ ಧರಸಾಕ್ಷ್ಯಾಗಿ |
ಸಂದೇಹವಿಲ್ಲವು ತಿಳಿ ಕಂಡೆಯಣ್ಣಾ

ಹರಿಯಜಸುರರೆಲ್ಲ ಶರೀರ ದಂಡನೆಮಾಡಿ |
ಪರಮಾತ್ಮನೊಲಿಸಿದರು ಸುಗಮವಲ್ಲೆಲೆ ಅಣ್ಣಾ

ನರ ಪಾಪ ಪುಣ್ಯವನು ನರರೆ ಶರಗಿಲೆ ಹಾಕಿ ।
ಗುರುಮಹಾಂತ ಲಿಂಗ ಜಾ ಮರೆಯಾಗಿರುತಿರುವ

ಈಗಿನಕಾಲದಲ್ಲಿ ಕೆಲವು ಶ್ರೀಮಂತರೂ ಕೆಲವುವಿದ್ಯಾವಂತರೂ, ಕೆಲವು ಧರ್ಮಲಂಡರೂ ಧರ್ಮದಂತೆ ನಡೆಯ ವಿರುದ್ಧವಾಗಿ ವರ್ತಿಸುತ್ತಾರೆ. ದೇವರು ಶ್ರೀಮಂತಿಕ ನ್ನು ಕೊಟ್ಟಕಾಲಕ್ಕೆ ಭಕ್ತಿಯಿಂದ ದಾನ-ಧರ್ಮವನ್ನು ಮಾ ಅದರ ಫಲವನ್ನು ತೆಗೆದುಕೊಳ್ಳಬೇಕು ಆದರೆ ಅದಕ್ಕೆ ಷ್ಟೂ ಖರ್ಚು ಮಾಡದೆ, ವ್ಯಭಿಚಾರ ಸಿಗರೇಟ್ ಚಹಾ ಕಾಫಿ ಬ್ರಾಂಡಿ ಮುಂತಾದ ದುಷ್ಟ ಚಟಗಳಿಗೆ ಬೇ ದಷ್ಟು ಖರ್ಚು ಮಾಡಿ, ಅದರ ದುಷ್ಫಲವನ್ನು ತೆಗೆ ಕೊಳ್ಳುತ್ತಾರೆ ಪ್ರಾಯದಲ್ಲಿದ್ದಾಗ್ಗೆ, ಹರಪೂಜೆ ಗ ಸೇವೆಯನ್ನು ಮಾಡಿ ಅದರ ಫಲವನ್ನು ತಕ್ಕೊಳ್ಳ ಅಂದರೆ ಅದಕ್ಕೆ ವಿರುದ್ಧವಾಗಿ ಕ್ಷುಲ್ಲಕಜನರು ಹೆಂ ಹಾಗೂ ಹೆಂಗಸಿನ ಸೇವೆಯನ್ನು ಅತ್ಯಂತ ಪ್ರೀತಿಯಿಂದ ಮಾನ್ಯ ಮಾಡುವರಲ್ಲದೆ, ಪ್ರಸಂಗಬಂದರೆ ಅವರ ಮಲ ಮೂತ್ರಗಳನ್ನಾದರೂ ಬಳಿಯುವರು ಗುರು ದೇವರಸೇವೆ ಮಾಡುವದೆಂದರೆ ಅಪಮಾನಕರವೆಂದು ತಿಳಿಯುವರು ಆಕಸ್ಮಾತ್ ಮಾಡುವ ಪ್ರಸಂಗಬಂದಾಗ ತಮ್ಮ ಮ ಯೊಳಗಿನ ಹುಡುಗರಿಗೆ ಅಥವಾ ಹೆಣ್ಣುಮಕ್ಕಳಿಗೆ ಇಲ್ಲವೆ ಆಳುಗಳಿಗೆ ಹಚ್ಚಿ ಮಾಡಿಸುವರು ಗುರುಗಳ ಸ್ನಾನವಾಗುವದಕ್ಕಿಂತ ಮೊದಲು ಮುಖ ತೊಳೆದುಕೊಂಡು ಚಹಾ ಕಾಫಿ ಫಲಾಹಾರವಾಗಲಿ ಇಲ್ಲವೆ ಉಪ್ಪಿಟ್ಟು ದೋಸೆ ಚಪಾತಿ ಆಲೂಗಡ್ಡೆ ಕಾಯಿಪಲ್ಲೆ ಮುಂತಾದವುಗಳನ್ನು ಹೊಡೆದು, ತಮ್ಮ ಕೆಲಸವನ್ನು ಮಾಡುವರು ಮುಂ ೧೧ ೧೨ ಘಂಟೆಗೆ ಒಳಗೆ ಬಂದು ಹೊತ್ತು ಬಹಳವಾಗಿದೆ ಸ್ವಾಮಿಗಳನ್ನು ಜಳಕಮಾಡಿಸರಿ ಎಂದು ಹೇಳಿ ಹೊರ ಹೋಗುವರು ಸ್ವಾಮಿಗಳ ಜಳಕವಾಗಿ ಶಿವಪೂಜೆಯ ಕೋಣೆಗೆ ಹೋದನಂತರ ಅರ್ಧ ತಾಸು ಬಿಟ್ಟು ಪೂಜೆ ಆಗಿದೆಯೋ ಇಲ್ಲೋ ಎಂದು ಹಣಿಕಿ ನೋಡ ವರು ಸ್ವಾಮಿಗಳ ಪೂಜೆ ಮುಗಿದ ಕೂಡಲೆ ತಲೆಗೆ ಎಣ್ಣೆಯನ್ನು ಹಚ್ಚಿಕೊಂಡು ಸಾಬೂನದಿಂದ ತಿಕ್ಕಿ ತಿ ಸ್ನಾನವನ್ನು ಮಾಡಿ ಸ್ವಾಮಿಗಳ ಸಂಗಡ ಊಟಕ್ಕೆ ಹಾಜರಾಗುತ್ತಾರೆ, ಇದೆಂಥ ಗುರುಭಕ್ತಿಯು ನೋಡಿ! ಈ ಗುರುಭಕ್ತರು ತಾವು ಪೂಜೆಮಾಡದಿದ್ದರೂ ಮಾಡುವವರನ್ನು ನೋಡಿ ಸಂತೋಷಿಸುವರೇನು? ಇಲ್ಲ ಇದು ಕಾಲಮಹಿಮೆ ಯೆಂದೇ ಹೇಳಬೇಕು

ಉಳ್ಳಲ್ಲಿ ಉಣಲಿಲ್ಲ ಉಳ್ಳಲ್ಲಿ ಉಡಲಿಲ್ಲ ।
ಉಳ್ಳಲ್ಲಿ ದಾನಕೊಡದವನ ಒಡವೆಯು |
ಕಳ್ಳಗೆ ನೃಪಗ ಸರ್ವಜ್ಞ ॥

ಈಪ್ರಕಾರವಾಗಿ ಸರ್ವಜ್ಞಕವಿಗಳು ಸಹ ಬೋಧಿಸಿದ್ದಾ ಮಾಡುವ ಸತ್ಕರ್ಮಕ್ಕೆ ದಿವಸವನ್ನು ಮುಂದಕ್ಕೆ ಹಾಕ ಬಾರದೆಂಬ ಬಗ್ಗೆ ಒಂದು ಇತಿಹಾಸವುಂಟು ಅದನ್ನು ವಾಚಕರ ಅವಗಾಹನೆಗಾಗಿ ಕೆಳಗೆ ಕೊಡುತ್ತೇವೆ —

ಒಂದು ನದಿಯಲ್ಲಿ ಒಂದ ಮೊಸಳೆಯು ಮುದುವಿತ್ತು ಅವರೊಳಗಿನ ಮೊಸಳೆಯು ಒಂದು ದಿವಸ ಹೀಗೆ ಯೋಚ ನೆಮಾಡಿತು.— "ನಾನು ಎಷ್ಟೋ ದನಕರುಗಳ ಮುರಿದು ತಿಂದು ನುಂಗಿ, ಲೆಕ್ಕವಿಲ್ಲದಷ್ಟು ಬೆಳ್ಳಿಬಂಗಾ ಒಡವೆಗಳನ್ನು ನನ್ನೊಳಗೆ ಕೂಡಿಹಾಕಿರುವೆನಲ್ಲದೆ ಅದರೊಡನೆ ಆ ಮಾನಕ್ಕೆ ಸರಿಯಾಗಿ ಪಾಪವನ್ನೂ ಕೂಡಿಹಾಕಿರುವೆನು 'ಪರಸತ್ವಹಾರಿ ನರಕಕ್ಕೆದಾರಿ' ಹೀಗೆ ನೀತಿಯುಂಟು ನನಗೆ ಮುಪ್ಪು ಹೆಚ್ಚುತ್ತ ಬಂತು ನನ್ನಲ್ಲಿರುವ ಸಂಪತ್ತು ನಾಳೆ ನನ್ನೊಡನೆ ಬರುವದಿಲ್ಲ ಆದರೆ ಪಾಪವು ಮಾತ್ರ ಬಂದು, ನನ್ನನ್ನು ಯಮರಾಯನಮುಂದೆ ನಿಲ್ಲಿಸುವದು ನಿಜವು. ಆದರಿಂದ ನನ್ನ ಸಿರಿಯನ್ನು ಪುಣ್ಯಕಾರ್ಯಕ್ಕೆ ಸಲ್ಲಿಸಿ, ಮುಕ್ತಿಯನ್ನು ಸಂ ಯುವಾ! ನಾನು ಬಿದ್ದುಹೋದಮೇಲೆ ಕಂಡಕಂಡವ

ಷ ಲಾಗಿಹೋಗುವದು; ಹಾಗೆ ಹಾಳಾಗಿಹೋಗುವದಕ್ಕಿಂತಲೂ ಈ ದಾರಿಯಿಂದ ಹೋಗುವದು ತಕ್ಕದ್ದು ನಾಸ ಕೊಡಹಾಯ್ತು, ನನ್ನ ಕಣ್ಣಮುಂದೆಯೇ ದಾನ ರೂಪದಿಂದ ಹೋಗಲಿ! ಅದರಿಂದ ನನಗೆ ಆನಂದ ಪ್ರ ಓಗಲಿ!!”

ಅವೇ ಹೊಳೆಯ ದಂಡೆಯಲ್ಲಿ ಒಂದು ಮಠವಿತ್ತು ಅದರಲ್ಲಿ ದಾಸೋಹಮೂರ್ತಿಗಳಾದ ಒಬ್ಬ ಸ್ವಾಮಿಗಳಿದ್ದರು ಅವರು ಧರ್ಮಾರ್ಥವಾಗಿ ಒಂದು ಪಾಠಶಾಲೆಯನ್ನಿಟ್ಟಿದ್ದರು ಅದನ್ನು ಆ ಮೊಸಳೆಯು ನೋಡಿ, ಆ ಸ್ವಾಮಿಗಳಿಗೆ ತನ್ನ ಸಿರಿಯನ್ನು ಕಾಠಿ ಪಾದಕರ್ಪಿಸುವದನ್ನು ನಿಶ್ಚಯಿಸಿ ಅದಕ್ಕಾಗಿ ತನ್ನ ಮಡುವಿನಿಂದ ಹೊರಬಿತ್ತು ತ್ತುಸು ಮುಂದಕ್ಕೆಹೋಗುವದರೊಳಗೆ ಇತ್ತಕಡೆಗೇನಾಯಿತೆ ದರೆ— ಆ ಮೊಸಳೆಯನ್ನು ಹೊಡೆದು, ಅದರಲ್ಲಿದ್ದ ಸಂಪತ್ತನ್ನು ಸೆಳೆಕೊಳ್ಳಬೇಕೆಂದು, ಬಹುದಿನಗಳಿಂದ ಒಬ್ಬ ಬೇಡನು ಹೊಂಚುಹಾಕಿದ್ದನು ಅವನು ಅವೇ ಸಮಯದಲ್ಲಿ ಒಂದು ಕುರಿಮರಿಯನ್ನು ತಂದು, ನದಿಯ ಸಮೀಪದಲ್ಲಿದ್ದ ಒಂದು ಕಂಟಿಗೆ ಕಟ್ಟಿ, ತಾನು ಸಮೀಪದಲ್ಲಿದ್ದ ಒಂದು ಗಿಡವನ್ನೇರಿ ಹದೆಯೇರಿಸಿ ಕೊಂಡು ನಿಂತನು ಕಂಟಿಗೆ ಕಟ್ಟಿದ್ದ ಕುರಿಯು ಕೂಗ ಹತ್ತಲು, ಅದನ್ನು ದಾನಕೊಡಲಿಕ್ಕೆ ಹೋಗುತ್ತಿದ್ದ ಮೊಸಳೆಯು ಕೇಳಿ, ಹಿಂದಿರುಗಿ ನೋಡಿತು ಬಳಿಕ ಅದು ತನ್ನಲ್ಲಿ—“ಅನಾಯಾಸವಾಗಿ ಅನ್ನಲಕ್ಷ್ಮಿಯು ಬಂದು, ನನ್ನನ್ನು ಕರೆಯುತ್ತಾಳೆ, ಅಲಕ್ಷ್ಯಮಾಡಿ ಹೋದರೆ ಉಣ್ಣುವ ಎಡೆಯನ್ನು ಒದ್ದುಹೋದಂತಾಗುವ ಸ್ವಾಮಿಗಳು ಮಠದಲ್ಲಿ ಹೇಗಾದರೂ ಇದ್ದೇ ಇರುತ್ತಾರೆ ಆದಕಾರಣ ಇದನ್ನು ನುಂಗಿ ನೀರು ಕುಡಿದು, ಹೋಗೋಣ’ ಎಂದು ಆ ಕುರಿಯ ಹತ್ತಿರ ಬಂದದ್ದೇ ತಡ ಅದನ್ನು ತನ್ನ ಬಾಲದಿಂದ ಬಡಿಯಿತು ಅಷ್ಟರೊಳಗೇ ಮರದ ಮೇಲಿದ್ದ ಲುಬ್ಧಕನು ನೋಡಿ ಬಲದಿಂದ ಬಾಣವನ್ನು ಬಿಟ್ಟನು

ಅಲ್ಲಿಂದ ಕೇಳುವದೇನು! ಆ ಬಾಣವು ಬಂದು, ಅದರ ಪ್ರಾಣವನ್ನು ತೆಗೆದುಕೊಳ್ಳಹತ್ತಿತು ಆಗ ಮೊಸಳೆಯು ಪಶ್ಚಾತ್ತಾಪದಿಂದ—“ಅಯ್ಯೋ! ಮಹಿಮೆಯವನು ಸತ್ಪಾತ್ರಕ್ಕೆ ಸಲ್ಲಬೇಕೆಂದಿದ್ದ ನನ್ನ ಸಂಪತ್ತು, ಈ ಪಾಪಿ ಬೇಡನ ಪಾಲಾಗುವದಾಯಿತು ಹಣವೂ ಹೋಯಿತು ಅದರಿಂದ ಗುಣವೂ ದೊರೆಯದಾಯಿತ” ಎಂದು ಜೀವಬಿಟ್ಟಿತು. ಕೂಡಲೇ ಬೇಡನು ಕೆಳಗೆ ಬಂದು, ತನ್ನ ಬಯಕೆಯನ್ನು ತೀರಿಸಿಕೊಂಡು ಹೋದನು

ಆದ್ದರಿಂದ ಸಮಯವು ಹೇಳಿ ಕೇಳಿ ಬರುವದಿಲ್ಲ, ಉತ್ತಮಕಾರ್ಯವನ್ನು ಮಾಡುವ ಮನಸ್ಸು ಬಂದಾಗ ಸಮಯವನ್ನು ಕಳೆಯಬಾರದೆಂದು ಸೂಚಿಸುತ್ತೇವೆ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಬರತಕ್ಕಂಥ ಸ್ವಲ್ಪಿರುವ ಶಕ್ತಿಯಿಂದ ಗುರುವರ್ಗದ ಮಠಕ್ಕೆ ಬರುವ ಶಿಷ್ಯರ ಮನೆಗಳಿರುತ್ತವೆ, ಆ ಮಠಾಧಿಕಾರಿಗಳು ವರ್ಷಕ್ಕೊಮ್ಮೆ ಹತ್ತುವರ್ಷಕ್ಕೊಮ್ಮೆ ಬಂದು ಹೋಗಿ ಶಿಷ್ಯರ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಅವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು ಈ ಅವ್ಯವಸ್ಥೆಯಿಂದ ಅನೇಕ ಮಠಗಳಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿದೆ ಇದನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ಪುಸ್ತಕಾರೂಪವಾಗಿ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಬಹಳ ಬೆಲೆಯಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರ ರೀತಿಯ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿ ನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ ಬೆಲೆ ೧೨ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖರರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೮೮ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿಂಗಿನಿಂದೊಡಗೂಡಿದೆ ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ ಪಿ. ಚಾರ್ಜು ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

[೩ ನೆಯ ಪುಟದಿಂದ ಮುಂದುವರಿದುದು]

ನಿನ್ನ ಭುಜಬಲಗಳಲ್ಲ! ನೀನು ನಮಗೆ ವಿದೇಶಿಯನಾಗಿದ್ದರೂ ನಿನ್ನ ಗುಣವು ನಮಗೆ ಸ್ಮರಣೀಯವೂ ಸ್ತುತ್ಯವೂ ಆಗಿದೆ ನೀನು ಮಾನುಷದೇಹವನ್ನು ನೀಗಿದ್ದರೂ ನಿನ್ನ ಮಾತೃಭಕ್ತಿ ಧ್ವಜವನ್ನು ನಾವು ಪದೇ ಪದೇ ಆಕಾಶವನ್ನು ಮುಟ್ಟಿಸುತ್ತಿರುವೆವು

ನಮ್ಮ ಚಕ್ರವರ್ತಿಗಳಾಗಿದ್ದ ಎಡ್ವರ್ಡ್ ಸಾರ್ವಭೌಮರು ತಮ್ಮ ಮಾತೃವಿನಲ್ಲಿ ಅನ್ಯಾದೃಶವಾದ ಭಕ್ತಿಯನ್ನಿಟ್ಟಿದ್ದರೆಂದು ಅವರ ಚರಿತ್ರೆಯಿಂದ ಗೊತ್ತಾಗುವದು ಅವರ ತಾಯಿಯವರು ಜೀವಿಸಿರುವಾಗ ಅವರ ಆಜ್ಞೆಯನ್ನು ಸ್ವಲ್ಪವೂ ಉಲ್ಲಂಘಿಸದೆ ತಮ್ಮ ಆಯುಷ್ಯದ ಮುಕ್ಕಾಲುಭಾಗ ಕಾಲವನ್ನೇ ಯುವಸಾರ್ವ-ಭೌಮತೆಯಲ್ಲಿ ಕಳೆದಿರುವುದನ್ನು ನೋಡಿದರೆ ಇಂಗ್ಲೀಷ್ ಚರಿತ್ರೆಯಲ್ಲಿ ಇವರ ಮಾತೃಭಕ್ತಿಯು ಕೇವಲ ಸ್ತುತ್ಯಾರ್ಹವಾಗಿಯೇ ನಿಲ್ಲುವುದರಲ್ಲಿ ಸಂಶಯವಿಲ್ಲ ಅವರು ರಾಜ್ಯಭಾರವನ್ನು ವಹಿಸಿಕೊಂಡಾಗ್ಗ್ಯೂ ನಮ್ಮ ತಾಯಿಯವರ ಆಜ್ಞೆಗಳನ್ನೂ ನಿಯಮಗಳನ್ನೂ ಶಿರಸಾವಹಿಸಿ ನಡೆಸುವೆವೆಂದು ಪ್ರಮಾಣಮಾಡಿ ಅದರಂತೆ ನಡೆದರು ಇದು ಅವರ ಮಾತೃಭಕ್ತಿಯನ್ನು ಸೂಚಿಸುವದು

ನಮ್ಮ ಮೈಸೂರಿನ ಆಳಿದ ಶ್ರೀ ಕೃಷ್ಣರಾಜೇಂದ್ರ ಒಡೆಯರವರು ತಮ್ಮ ಮಹಾಮಾತೃಶ್ರೀಯವರ ಅಪ್ಪಣೆಯನ್ನು ಶಿರಸಾಮಾನ್ಯಮಾಡುತ್ತಿದ್ದರೆಂಬುದು ಜಗದ್ವಿಖ್ಯಾತವಾಗಿದೆ ತಾವು ಸ್ವತಂತ್ರರಾಗಿ ರಾಜ್ಯಭಾರಮಾಡಲು ಸಮರ್ಥರಾಗಿದ್ದರೂ ಮಾತೃವಾಕ್ಯವನ್ನುಲ್ಲಂಘಿಸದೇ ಪರಿಪಾಲಿಸುತ್ತಿದ್ದುದು ಪೂರ್ವದ ಮಹನೀಯರ ಸ್ಮರಣೆಗೆ ಅವಕಾಶವನ್ನುಂಟುಮಾಡಿದೆ

ಸದ್ಯ ಮೈಸೂರು ಸಂಸ್ಥಾನಾಧೀಶ್ವರರಾಗಿರುವ ಶ್ರೀ ಜಯಚಾಮರಾಜೇಂದ್ರ ಒಡೆಯರವರು ತಮ್ಮ ಮಾತೃಶ್ರೀಯವರಲ್ಲಿ ವಿಶೇಷಭಕ್ತಿವಿಶ್ವಾಸಗಳನ್ನಿಟ್ಟಿರುವರೆಂಬುದನ್ನು ತಿಳಿದು ತುಂಬಾ ಹರ್ಷಿಸಬೇಕಾಗಿದೆ ಇವರಿಗೆ ಜಗದೀಶ್ವರನು ಆಯುರಾರೋಗ್ಯ ಸಂಪತ್ತನ್ನು ಪುತ್ರಪೌತ್ರರನ್ನೂ ಅನುಗ್ರಹಿಸಲಿ

ಸರ್ವಜ್ಞಮೂರ್ತಿಗಳೂ ಸಹ ' ಸತ್ಯಕ್ಕೆ ಸಮವಿಲ್ಲ ಭಕ್ತಿಗೆ ಸಲೆಯಿಲ್ಲ ಹೆತ್ತವರಿಗಿಂತ ಹಿತವಿಲ್ಲ ಲೋಕದೊಳ್ ನಿತ್ಯನೇ ಇಲ್ಲ ಹೀಗೆಂದು ಮಾತೃಭಕ್ತಿಯನ್ನು ಪ್ರಶಂಸಿಸಿರುವರು ತಾಯಿಗಿಂತ ಬಂಧುವಿಲ್ಲ ಎಂದ ನೀತಿಕಾರರೂ ಹೇಳಿರುವರು

ಹೀಗೆ ಮಾತೃಭಕ್ತಿಯು ಪ್ರಪಂಚದಲ್ಲಿ ಯೋಗ್ಯರಿಂದ ಉತ್ಕೃಷ್ಟವೆಂದು ಭಾವಿಸಲ್ಪಟ್ಟು ದಸ್ಯರಿಂದ ಆಚರಿಸಲ್ಪಡುವದು

ವಾಚಕಮಹಾಶಯರೇ, ಮಾತೃವಿನ ಪ್ರೇಮಸಂಬಂಧವು ನಖಶಿಖಾಂತವಾಗಿ ನಾಡೀಸಮೂಹದಂತೆ ಸರ್ವರನ್ನೂ ಬಿಗಿದಿರುವದು ಅನೇಕ ರಾಜಾಧಿರಾಜರೂ ಆಚಾರ್ಯಪುಂಗವರೂ ಮಾತೃಸ್ಥಾನಕ್ಕೆ ಅಧಿಕ ಬೆಲೆಯನ್ನು ಕೊಟ್ಟಿರುತ್ತಾರೆ ಜಗತ್ತಿನಲ್ಲಿ ಕಲಿಧೂರ್ತರು ತಮ್ಮ ತಾಯಿಗಳ ಕಣ್ಣಿನಿಂದ ನೀರಿನ ಕೋಡಿಯನ್ನೇ ಹರಿಸುತ್ತಾರೆ ಶಾಂತಂ ಪಾಪಂ! ಇಂತಹ ಮಾತೃದ್ರೋಹಿಗಳಿಗೆ ಮುಂದೆ ದುರ್ಗತಿಯುಂಟಾಗುವುದರಲ್ಲಿ ಸಂಶಯವಿಲ್ಲ ಆದಕಾರಣ ಸರ್ವರೂ ಮಾತೃಭಕ್ತಿಪರಾಯಣರಾಗಿ ಸುಖಸಂಪತ್ತನ್ನು ಹೊಂದಿ ಧನ್ಯರಾಗಬೇಕೆಂದು ಆಶಿಸುವೆನು

ಮಾತೃದೇವೋ ಭವ!

|| ಶ್ರೀ ಜಗದ್ಗುರು ವಿಶ್ವಾರಾಧ್ಯಾಯ ನಮಃ ||

ಸತ್ಕಾರ್ಯವನ್ನು ಮಾಡುವ ಆಶೆಯು ಹುಟ್ಟಿದಾಗ್ಗೆ ಇಂದು ನಾಳೆಂದು ಹೊತ್ತುಗಳೆಯಬಾರದು

ಲೇ—ಶ್ರೀ ಪಟ್ಟದಸ್ವಾಮಿಗಳು ಹಿರೇಮಠ ಕೊಣ್ಣೂರು

ಕಾಮನಬಿಲ್ಲು, ಮೃಗಜಲ, ಬಿಸಿಲ್ಗುದುರೆ, ನೀರುಮೇಲಿನ ಗುಳ್ಳೆ, ಹೇಗೆ ಅಶಾಶ್ವತವೋ, ಹಾಗೆಯೇ ಶರೀರ, ಪ್ರಾಯ, ಸಂಪತ್ತು, ರಾಜ್ಯ, ಜಗತ್ತು ಇವೇ ಮೊದಲಾದವುಗಳು ಅಶಾಶ್ವತವಾದವು ಇವುಗಳನ್ನು ಎಷ್ಟು ಸಂಗ್ರಹಿಸಿದರೂ ನಮ್ಮ ಕೂಡ ಒಂದೂ ಬರಲಾರವು ಇರುವವರೆಗೆ ಅದರ ಸುಖವನ್ನು ಮಾತ್ರ ಅನುಭವಿಸಿ ಅಂತ್ಯಕಾಲದಲ್ಲಿ ಇಲ್ಲಿಯೇ ಬಿಟ್ಟು ಹೋಗಬೇಕಾಗುತ್ತದೆ ನಮ್ಮ ಸಂಗಡ ಬರುವದು ಧರ್ಮ ಅಧರ್ಮ ಇವೆರಡೇ ಧರ್ಮದಿಂದ ಆತ್ಮನು ಉನ್ನತಾವಸ್ಥೆಯನ್ನೇರುವನು ಅಧರ್ಮದಿಂದ ಅಧೋಗತಿಗೀಡಾಗುವನು ಆದ್ದರಿಂದ ಜ್ಞಾನದಿಂದೊಡಗೂಡಿದ ಮನುಷ್ಯನು ಅಧರ್ಮವನ್ನು ದೂರೀಕರಿಸಿ ಧರ್ಮವನ್ನು ಸಂಗ್ರಹಮಾಡಬೇಕು

ಅಸ್ಥಿರಂ ಜೀವನಂ ಲೋಕೇ ಅಸ್ಥಿರಂ ಧನ ಯೌವನೇ ।
ಅಸ್ಥಿರೇ ಪುತ್ರದಾರಾಶ್ಚ ಧರ್ಮಕೀರ್ತಿದ್ವಯಂ ಸ್ಥಿರಂ ||೧||

ಅನಿತ್ಯಾನಿ ಶರೀರಾಣಿ ವಿಭವೋ ನೈವ ಶಾಶ್ವತಃ ।
ನಿತ್ಯಂ ಸನ್ನಿಹಿತೋ ಮೃತ್ಯುಃ ಕರ್ತವ್ಯೋ ಧರ್ಮಸಂಗ್ರಹಃ ||೨||

ಅಂದರೆ ಜೀವವು ಜಗತ್ತು ದ್ರವ್ಯ ಪ್ರಾಯ, ಹೆಂಡರು ಮಕ್ಕಳು ಇವು ಯಾವೂ ಸ್ಥಿರವಲ್ಲ ಧರ್ಮ ಕೀರ್ತಿ ಇವೆರಡು ಮಾತ್ರ ಸ್ಥಿರವಾದವುಗಳು ಶರೀರವೂ, ಐಶ್ವರ್ಯವೂ ಶಾಶ್ವತವಲ್ಲವು ಮೃತ್ಯುವು ಯಾವಾಗಲೂ ಬೆನ್ನು ಹಿಂದ ಅನುಸರಿಸಿಕೊಂಡು ನಿಂತಿರುವದು ಆದ್ದರಿಂದ ಧರ್ಮವನ್ನು ಸಂಗ್ರಹಿಸುವದೇ ಮನುಷ್ಯನ ಕೆಲಸವಾಗಿದೆ ಬೇಕಾದಷ್ಟು ದುಡ್ಡು ಗಳಿಸಿದರೂ ಮನೆಯಲ್ಲಿಯೇ ಉಳಿಯುವದು ಮಿತ್ರರು ಬಂದು ಬಾಂಧವರು ಹೆಂಡರ ಮಕ್ಕಳು ತಂದೆ ತಾಯಿಗಳು ಸ್ಮಶಾನದವರೆಗೆ ಬಂದು ಮರಳಿ ಹೋಗುವರು ನಮ್ಮ ಸಂಗಡ ಬರುವದು ಪುಣ್ಯ ಪಾಪ ಇವೆರಡೇ ಮಾತ್ರ ಶರೀರ ಪ್ರಾಯ ಸಂಪತ್ತು ರಾಜ್ಯ ಇವೇ ಮೊದಲಾದವುಗಳನ್ನು ದೇವರು ನಮಗೆ ಅನುಗ್ರಹಿಸಿದಾಗ ಗುರುಸೇವೆ, ದೇವರಸೇವೆ ತಂದೆ ತಾಯಿಗಳಸೇವೆ ಅತಿಥಿಸೇವೆ, ದಾನ, ಧರ್ಮ ಪರೋಪಕಾರವನ್ನು ಮಾಡಬೇಕಲ್ಲದೆ ವ್ಯರ್ಥವಾಗಿ ಭ್ರಮೆಗೆ ಬಿದ್ದು ಎಲ್ಲಾ ಹೆಂಡರು ಮಕ್ಕಳಿಗೆಂದು ಕೂಡಿಹಾಕಿ ಮುಪ್ಪಾಗುವವರೆಗೂ ಶರೀರವನ್ನು ಉದರಕ್ಕಾಗಿಯೇ ಸವೆಸಿ ಭಿಕಾರಿಯಂತೆ ಸತ್ತುಹೋಗಬಾರದು ತನಗೆ ಸಾಧ್ಯವಾದಷ್ಟು ಸಂಪತ್ತನ್ನು ಸತ್ಕಾರ್ಯಕ್ಕೆ ಖರ್ಚುಮಾಡಿ ಶರೀರವನ್ನು ಹರಪೂಜೆ ಗುರುಪೂಜೆಯಲ್ಲಿ ಸವೆಸಬೇಕು ಮುಂದ ಮಾಡಿದರೆ ಬಂದೀತೆಂದು ದಿವಸವನ್ನು ನೂಕಬಾರದು ಹೀಗೆ ದಿವಸವನ್ನು ನೂಕುತ್ತ ಹಾಗೆಯೆ ಸತ್ತುಹೋದರೆ ನಮ್ಮ ಮುಕ್ತಿಪದಕ್ಕೆ ಎಡೆಯಿಲ್ಲ! ಹಾಗಾದಪಕ್ಷದಲ್ಲಿ ನಮ್ಮ ಪಾಪವೇ ನಾವು ಮಾಡುವ ಸತ್ಕಾರ್ಯಕ್ಕೆ ಅಡ್ಡಿಮಾಡುವುದೆಂದು ತಿಳಿಯಬೇಕು ಮನುಷ್ಯನು ತನ್ನ ಸ್ವಂತ ವಿಚಾರದಿಂದ ಮೇಲಿನ ತತ್ವದಂತೆ ನಡೆಯಬೇಕು ತನಗೆ ಅಷ್ಟೊಂದು ಬುದ್ಧಿಯಿಲ್ಲದಿದ್ದರೆ ಗುರು ಹಿರಿಯರ ಮಾತನ್ನಾದರೂ ಕೇಳಿ ಅವರು ಹೇಳಿದಂತೆ ನಡೆಯಬೇಕು ಧನಿಕರು ತಮ್ಮ ದ್ರವ್ಯವನ್ನು ಸತ್ಪಾತ್ರಕ್ಕೆ ಅಂದರೆ ಗುರುಸ್ಥಾನಕ್ಕೆ ಪೂಜೆಗಾಗಲಿ, ದೀಪಾರಾಧನೆಗಾಗಲಿ, ಮಠ ಕಟ್ಟಿಸುವದಕ್ಕಾಗಲಿ ದಾನಮಾಡಬೇಕು ಈ ತತ್ವವನ್ನು ತಿಳಿದೇ ಪ್ರಾಚೀನ ಕಾಲದಲ್ಲಿ ರಾಜಾಧಿರಾಜರೂ, ಶ್ರೀಮಂತರೂ ಗುರುಸ್ಥಾನ ಮಠಗಳಿಗೆ ಗ್ರಾಮಗಳನ್ನೂ ಇನಾಮುಗಳನ್ನೂ ದಾನಮಾಡಿದ್ದರೆಂಬುದು ಶಿಲಾಶಾಸನ, ತಾಮ್ರಶಾಸನಗಳಿಂದ ಕಂಡುಬರುತ್ತದೆ ಅವರ ಶರೀರವು ಅಳಿದು ಎಷ್ಟೋ ವರ್ಷಗಳಾದರೂ ಅವರ ಕೀರ್ತಿಯು ಲೋಕದಲ್ಲಿ ಅಚ್ಚಳಿಯದಂತೆ ವಿರಾಜಿಸುತ್ತದೆ ಅಂಥ ಪುಣ್ಯಶಾಲಿಗಳು ಸತ್ತರೂ ಇದ್ದಂತೆಯೇ ಸರಿ! ಪರಮಾತ್ಮನ ಕೃಪೆಗೆ ಪಾತ್ರರಾಗುವವರು ಅಂಥವರಲ್ಲವೇ?

ಮಾಡುವ ಸತ್ಕಾರ್ಯವನ್ನು ತೀವ್ರಮಾಡಬೇಕು ದಿನವನ್ನು ಮುಂದಕ್ಕೆ ನೂಕಬಾರದು ಯಾಕೆಂದರೆ— ನೂಕುತ್ತ ಹೋಗುವದರಿಂದ ಅದರೊಳಗಾಗಿ ನಾವು ಸತ್ತುಹೋದರೆ ತೀರಿತು ಅದರ ಫಲವನ್ನೂ ನಾವು ತೆಗೆದುಕೊಂಡಿರುವದಿಲ್ಲ ನಮ್ಮ ಆಸ್ತಿಪಾಸ್ತಿಗಳೆಲ್ಲ ಕ್ಷುಲ್ಲಕಜನರ ಕೈ ಸೇರಿ ನಾವು ಶ್ರಮಪಟ್ಟು ಗಳಿಸಿದ್ದೂ ವ್ಯರ್ಥವೇ ಆಗಿಹೋಗುತ್ತದೆ ಇಂಥವುಗಳು ಲೋಕದಲ್ಲಿ ಎಷ್ಟೋ ಆದದ್ದು ಪ್ರತ್ಯಕ್ಷ ನೋಡಿದ್ದೇವೆ ಇಂಥ ಸ್ಥಿತಿಯನ್ನು ಎಂದೂ ತಂದುಕೊಳ್ಳಬಾರದು ಮೇಲಿನ ವಿಷಯವನ್ನು ಕುರಿತು ಮುಳಗುಂದ ಮಹಾಂತ ಶಿವಯೋಗಿಗಳು ತಮ್ಮ ಕೈವಲ್ಯದಲ್ಲಿ ಒಂದು ಪದ್ಯವನ್ನು ಅಂದಿದ್ದಾರೆ

ರಾಗ—ಸಾರಂಗ

ಹರಪೂಜೆ ಗುರುಸೇವೆ ಪರೋಪಕಾರವಿಲ್ಲದೆ ।
ಬರಿದೆ ಸುಖ ಭೋಗ ದೊರಕುವದುಂಟೆ ಅಕ್ಕಾ ||ಪ||

ಹಣವಿದ್ದಾಗಲೆ ಭಕ್ತಿ ನೆಣವಿದ್ದಾಗಲೆ ಸೇವೆ ।
ಗುಣವಿದ್ದಾಗಲೆ ಮಾಡಿ ಮುಕ್ತಿ ಪಡೆಯಕ್ಕಾ ॥

ಋಣಮಾಡಿದರಿಲ್ಲ ಸಣ ಹರಿದುಹೋಗುವದೆ ।
ತ್ರಿನಯನೊಲಿಸುವದು ಬಹುಕಷ್ಟವಕ್ಕಾ ||೧||

ಹಿಂದಿನ ಪುಣ್ಯವನು ಇಂದುಂಡುಉಡಬೇಕು ।
ಮುಂದಿನ ಪುಣ್ಯವನು ಮುಂದುಂಡುಡಬೇಕಕ್ಕಾ ॥

ಬಂಧನವೇಕದಕೆ ಇಂದುಧರನಾಣ್ಯಾಗಿ ।
ಸಂದೇಹವಿಲ್ಲವು ಶಿವ ಕಂಡೆಯಕ್ಕಾ ||

ಹರಿಯಬಿಸುರದೆಲ್ಲ ಶರೀರ ದಂಡನೆಮಾಡಿ ।
ಪರಮಾತ್ಮನೊಲಿದರು ಸುಗಮವಲ್ಲಲೆ ಅಕ್ಕಾ ॥

ನರ ಪಾಪ ಪುಣ್ಯವನು ನರರ ಕರಗಿಲಿ ಹಾಕಿ ।
ಗುರುಮಹಾಂತ ಲಿಂಗ ನಾ ಮರೆಯಾಗಿರುತಿರುವ ||೩||

ಈಗಿನಕಾಲದಲ್ಲಿ ಕೆಲವು ಶ್ರೀಮಂತರೂ ಕೆಲವುವಿದ್ಯಾವಂತರೂ, ಕೆಲವು ಧರ್ಮಲಂಡರೂ ಧರ್ಮದಂತೆ ನಡೆಯದೆ ವಿರುದ್ಧವಾಗಿ ವರ್ತಿಸುತ್ತಾರೆ ದೇವರು ಶ್ರೀಮಂತಿಕೆಯನ್ನು ಕೊಟ್ಟಕಾಲಕ್ಕೆ ಭಕ್ತಿಯಿಂದ ದಾನ-ಧರ್ಮವನ್ನು ಮಾಡಿ ಅದರ ಫಲವನ್ನುತೆಗೆದುಕೊಳ್ಳಬೇಕು ಆದರೆ ಅದಕ್ಕೆ ಎಳ್ಳಷ್ಟೂ ಖರ್ಚು ಮಾಡದೆ, ವ್ಯಭಿಚಾರ ಸಿಗರೇಟ್ ಚಹಾ ಕಾಫಿ ಬ್ರಾಂಡಿ ಮುಂತಾದ ದುಷ್ಟ ಚಟಗಳಿಗೆ ಬೇಕಾದಷ್ಟು ಖರ್ಚು ಮಾಡಿ, ಅದರ ದುಷ್ಫಲವನ್ನು ತೆಗೆದುಕೊಳ್ಳುತ್ತಾರೆ ಪ್ರಾಯದಲ್ಲಿದ್ದಾಗ್ಗೆ, ಹರಪೂಜೆ ಗುರುಸೇವೆಯನ್ನು ಮಾಡಿ ಅದರ ಫಲವನ್ನು ತಕ್ಕೊಳ್ಳಿರಿ ಅಂದರೆ ಅದಕ್ಕೆ ವಿರುದ್ಧವಾಗಿ ಕ್ಷುಲ್ಲಕಜನರು ಹೆಂಡರ ಹಾಗೂ ಹೆಂಗಸಿನ ಸೇವೆಯನ್ನು ಅತ್ಯಂತ ಪ್ರೀತಿಯಿಂದ ಮಾನ್ಯ ಮಾಡುವರಲ್ಲದೆ, ಪ್ರಸಂಗಬಂದರೆ ಅವರ ಮಲಮೂತ್ರಗಳನ್ನಾದರೂ ಬಳಿಯುವರು ಗುರು ದೇವರ ಸೇವೆ ಮಾಡುವದೆಂದರೆ ಅಪಮಾನಕರವೆಂದು ತಿಳಿಯುವರು ಆಕಸ್ಮಾತ್ ಮಾಡುವ ಪ್ರಸಂಗಬಂದಾಗ ತಮ್ಮ ಮನೆಯೊಳಗಿನ ಹುಡುಗರಿಗೆ ಅಥವಾ ಹೆಣ್ಣುಮಕ್ಕಳಿಗೆ ಇಲ್ಲವೆ ಆಳುಗಳಿಗೆ ಹಚ್ಚಿ ಮಾಡಿಸುವರು ಗುರುಗಳ ಸ್ನಾನವಾಗುವದಕ್ಕಿಂತ ಮೊದಲು ಮುಖ ತೊಳೆದುಕೊಂಡು ಚಹಾ ಕಾಫಿ ಫಲಾಹಾರವಾಗಲಿ ಇಲ್ಲವೆ ಉಪ್ಪಿಟ್ಟು ದೋಸೆ ಚಪಾತಿ ಆಲೂಗಡ್ಡೆ ಕಾಯಿಪಲ್ಲೆ ಮುಂತಾದವುಗಳನ್ನು ಹೊಡೆದು ತಮ್ಮ ಕೆಲಸವನ್ನು ಮಾಡುವರು ಸುಮಾರು ೧೧-೧೨ ಘಂಟೆಗೆ ಒಳಗೆ ಬಂದು ಹೊತ್ತು ಬಹಳವಾಗಿದೆ ಸ್ವಾಮಿಗಳನ್ನು ಜಳಕಮಾಡಿಸರಿ ಎಂದು ಹೇಳಿ ಹೊರಗೆ ಹೋಗುವರು ಸ್ವಾಮಿಗಳ ಜಳಕವಾಗಿ ಶಿವಪೂಜೆಯ ಕೋಣೆಗೆ ಹೋದನಂತರ ಅರ್ಧ ತಾಸು ಬಿಟ್ಟು ಪೂಜೆ ಆಗಿದೆಯೋ ಇಲ್ಲೋ ಎಂದು ಹಣಿಕಿ ನೋಡುವರು ಸ್ವಾಮಿಗಳ ಪೂಜೆ ಮುಗಿದ ಕೂಡಲೆ ತಲೆಗೆ ಎಣ್ಣೆಯನ್ನು ಹಚ್ಚಿಕೊಂಡು ಸಾಬೂನದಿಂದ ತಿಕ್ಕಿ ತಿಕ್ಕಿ ಸ್ನಾನವನ್ನುಮಾಡಿ ಸ್ವಾಮಿಗಳ ಸಂಗಡ ಊಟಕ್ಕೆ ಹಾಜರಾಗುತ್ತಾರೆ, ಇದೆಂಥ ಗುರುಭಕ್ತಿಯು ನೋಡಿರಿ! ಈ ಗುರುಭಕ್ತರು ತಾವು ಪೂಜೆಮಾಡದಿದ್ದರೂ ಮಾಡುವವರನ್ನು ನೋಡಿ ಸಂತೋಷಿಸುವರೇನು? ಇಲ್ಲ ಇದು ಕಾಲಮಹಿಮೆಯೆಂದೇ ಹೇಳಬೇಕು

ಉಪ್ಪಿಲ್ಲ ಉಣಲಿಲ್ಲ ಉಳ್ಳಲ್ಲಿ ಉಡಲಿಲ್ಲ ।
ಉಳ್ಳಲ್ಲಿ ದಾನಕೊಡದವನ ಒಡವೆಯು ।
ಕಳ್ಳಗೆ ನೃಪಗೆ ಸರ್ವಜ್ಞ ॥

ಈ ಪ್ರಕಾರವಾಗಿ ಸರ್ವಜ್ಞಕವಿಗಳು ಸಹ ಬೋಧಿಸಿದ್ದಾರೆ ಮಾಡುವ ಸತ್ಕಾರ್ಯಕ್ಕೆ ದಿವಸವನ್ನು ಮುಂದಕ್ಕೆ ಹಾಕಬಾರದೆಂಬ ಬಗ್ಗೆ ಒಂದು ಇತಿಹಾಸವುಂಟು ಅದನ್ನು ವಾಚಕರ ಅವಗಾಹನೆಗಾಗಿ ಕೆಳಗೆ ಕೊಡುತ್ತೇವೆ —

ಒಂದು ನದಿಯಲ್ಲಿ ಒಂದ ಮೊಸಳೆಯ ಮಡುವಿತ್ತು ಅದರೊಳಗಿನ ಮೊಸಳೆಯು ಒಂದು ದಿವಸ ಹೀಗೆ ಯೋಚನೆಮಾಡಿತು— " ನಾನು ಎಷ್ಟೋ ದನಕರುಗಳ, [illegible] ನುಂಗಿ, ಲೆಕ್ಕವಿಲ್ಲದಷ್ಟು ಬೆಳ್ಳಿಬಂಗಾರದೊಡವೆಗಳನ್ನು ನನ್ನೊಳಗೆ ಕೂಡಿಹಾಕಿರುವೆನಲ್ಲ ಅದರೊಡನೆ ಆ ಪ್ರಮಾಣಕ್ಕೆ ಸರಿಯಾಗಿ ಪಾಪವನ್ನೂ ಕೂಡಿಹಾಕಿರುವೆನು ' ಪರಸ್ವಹಾರಿ ನರಕಕ್ಕೆದಾರಿ ' ಯೆಂಬ ನೀತಿಯುಂಟು ನನಗೆ ಮುಪ್ಪು ಹೆಚ್ಚುತ್ತ ಬಂತು ನನ್ನಲ್ಲಿರುವ ಸಂಪತ್ತು ನಾಳೆ ನನ್ನೊಡನೆ ಬರುವದಿಲ್ಲ ಆದರೆ ಪಾಪವು ಮಾತ್ರ ಬಂದು, ನನ್ನನ್ನು ಯಮರಾಯನಮುಂದೆ ನಿಲ್ಲಿಸುವದು ನಿಜವು ಆದರಿಂದ ನನ್ನ ಸಿರಿಯನ್ನು ಪುಣ್ಯಕಾರ್ಯಕ್ಕೆ ಸಲ್ಲಿಸಿ, ಮುಕ್ತಿಯನ್ನು ಪಡೆಯುವಾ! ನಾನು ಬಿದ್ದುಹೋದಮೇಲೆ ಕಂಡಕಂಡವ

ಬ್ಬುಗಿಹೋಗುವದು; ಹಾಗೆ ಹಾಳಾಗಿಹೋಗುವದಕ್ಕಿಂತಲೂ ಈ ದಾರಿಯಿಂದ ಹೋಗುವದು ಶಕ್ಯದ್ದು ನಾನ ಕೂಡಹಾಯ್ತು, ನನ್ನ ಕಣ್ಣಮುಂದೆಯೇ ದಾನರೂಪದಿಂದ ಹೋಗಲಿ! ಆದರಿಂದ ನನಗೆ ಆನಂದ ಪ್ರಾಪ್ತವಾಗಲಿ!!"

ಅದೇ ಹೊಳೆಯ ದಂಡೆಯಲ್ಲಿ ಒಂದು ಮಠವಿತ್ತು. ಅದರಲ್ಲಿ ದಾಸೋಹಮೂರ್ತಿಗಳಾದ ಒಬ್ಬ ಸ್ವಾಮಿಗಳಿದ್ದರು. ಅವರು ಧರ್ಮಾರ್ಥವಾಗಿ ಒಂದು ಪಾಠಶಾಲೆಯನ್ನಿಟ್ಟಿದ್ದರು. ಅದನ್ನು ಆ ಮೊಸಳೆಯು ನೋಡಿ, ಆ ಸ್ವಾಮಿಗಳಿಗೆ ತನ್ನ ಸಿರಿಯನ್ನು ಕಾಣಿಕೆಯಾಗಿ ಅರ್ಪಿಸುವದನ್ನು ನಿಶ್ಚಯಿಸಿ ಅದಕ್ಕಾಗಿ ತನ್ನ ಮಡುವಿನಿಂದ ಹೊರಬಿತ್ತು. ತುಸು ಮುಂದಕ್ಕೆ ಹೋಗುವದರೊಳಗೆ ಇತ್ತ ಕಡೆಗೇನಾಯಿತೆಂದರೆ—ಆ ಮೊಸಳೆಯನ್ನು ಹೊಡೆದು, ಅದರಲ್ಲಿದ್ದ ರತ್ನಗಳನ್ನು ಸೆಳೆಕೊಳ್ಳಬೇಕೆಂದು, ಬಹುದಿನಗಳಿಂದ ಒಬ್ಬ ಬೇಡನು ಹೊಂಚುಹಾಕಿದ್ದನು. ಅವನು ಅದೇ ಸಮಯದಲ್ಲಿ ಒಂದು ಕುರಿಮರಿಯನ್ನು ತಂದು, ಮಡುವಿನ ಸಮೀಪದಲ್ಲಿದ್ದ ಒಂದು ಕಂಟಿಗೆ ಕಟ್ಟಿ, ತಾನು ಸಮೀಪದಲ್ಲಿದ್ದ ಒಂದು ಗಿಡವನ್ನೇರಿ ಹದೆಯೇರಿಸಿ ಕುಳಿತನು. ಕಂಟಿಗೆ ಕಟ್ಟಿದ್ದ ಕುರಿಯು ಕೂಗಹತ್ತಿತು. ಅದನ್ನು ದಾನಕೊಡಲಿಕ್ಕೆ ಹೋಗುತ್ತಿದ್ದ ಮೊಸಳೆಯು ಕೇಳಿ, ಹಿಂದಿರುಗಿ ನೋಡಿತು. ಬಳಿಕ ಅದು ತನ್ನಲ್ಲಿ—"ಅನಾಯಾಸವಾಗಿ ಇಷ್ಟಲಕ್ಷ್ಮಿಯು ನನ್ನನ್ನು ಕರೆಯುತ್ತಾಳೆ, ಆಲಕ್ಷ್ಯಮಾಡಿ ಹೋದರೆ ಉಣ್ಣುವ ಎಡೆಯನ್ನು ಒದ್ದುಹೋದಂತಾಗುವದು. ಸ್ವಾಮಿಗಳ ಮಠದಲ್ಲಿ ಹೇಗಾದರೂ ಇದ್ದೇ ಇರುತ್ತಾರೆ. ಆದಕಾರಣ ಇದನ್ನು ನುಂಗಿ ನೀರು ಕುಡಿದು ಹೋಗೋಣ" ಎಂದು ಆ ಕುರಿಯ ಹತ್ತಿರ ಬಂದದ್ದೇ ತಡ, ಅದನ್ನು ತನ್ನ ಬಾಲದಿಂದ ಬಡಿಯಿತು. ಅಷ್ಟರೊಳಗೇ ಗಿಡದಲ್ಲಿದ್ದ ಲುಬ್ಧಕನು ನೋಡಿ ಬಲದಿಂದ ಬಾಣವನ್ನು ಬಿಟ್ಟನು.

ಇಲ್ಲಿಂದ ಕೇಳುವದೇನು! ಆ ಬಾಣವು ಬಂದು ಅದರ ಪ್ರಾಣವನ್ನು ತೆಗೆದುಕೊಳ್ಳಹತ್ತಿತು. ಆಗ ಮೊಸಳೆಯು ಪಶ್ಚಾತ್ತಾಪದಿಂದ—"ಅಯ್ಯೋ! ಮತಿಹೀನನಾದ ನಾನು ಸತ್ಪಾತ್ರಕ್ಕೆ ಸಲ್ಲಬೇಕೆಂದಿದ್ದ ನನ್ನ ಸಂಪತ್ತು, ಈ ಪಾಪಿ ಬೇಡನ ಪಾಲಾಗುವದಾಯಿತು. ಹಣವೂ ಹೋಯಿತು. ಆದರಿಂದ ಗುಣವೂ ದೊರೆಯದಾಯಿತು" ಎಂದು ಜೀವಬಿಟ್ಟಿತು. ಕೂಡಲೇ ಬೇಡನು ತಳಗೆ ಇಳಿದು ತನ್ನ ಬಯಕೆಯನ್ನು ತೀರಿಸಿಕೊಂಡು ಹೋದನು.

ಆದ್ದರಿಂದ ಸಮಯವು ಹೇಳಿ ಕೇಳಿ ಬರುವದಿಲ್ಲ. ಸತ್ಕಾರ್ಯವನ್ನು ಮಾಡುವ ಮನಸ್ಸು ಬಂದಾಗ ಸಮಯವನ್ನು ಕಳೆಯಬಾರದೆಂದು ಸೂಚಿಸುತ್ತೇವೆ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರ್ಮಪ್ರಚಾರಕ್ಕೆ ಹೊರಟಿರುವ ಪಟ್ಟಾಧ್ಯಕ್ಷರು ಮತ್ತು ಗುರುವರ್ಗದ ಮಠಸ್ಥರು ಊರೂರಿನ ಶಿಷ್ಯರ ಮನೆಗಳಿಗೆ ಹೋಗುತ್ತಿದ್ದು, ಆ ಮಠಾಧಿಕಾರಿಗಳು ಐದು ವರ್ಷಕ್ಕೋ ಹತ್ತು ವರ್ಷಕ್ಕೋ ಒಂದು ಸಾರೆ ಹೋಗಿ ಶಿಷ್ಯರ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಅವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠಗಳಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯತಕ್ಕ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಈ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಬಹಳ ಕೆಲವಂತ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿದೆ. ಬೆಲೆ ೧೨ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆದಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ನಿಃಸಂಕೋಚವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ **ರೂಪಾಯಿ.** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೩ ಬೆಲೆ ಕೆ	೨—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ದಧೀಚಿ ವ್ಯಾಸ ಸಾನಂದ [illegible] ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ × ೧೪ ಬೆ	—೧—೩
ಪಂಚ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದೆಡೆಯಲ್ಲಿಯೇ ಇರುವ ಫೋಟೋ ಸೈಜು ೪ × ೭ ಬೆ	೦— —೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೦ × ೮ ಬೆಲೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೨—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೨—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ರೂಪಗಳನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೨—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೨—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತ ಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವದ ಫೋಟೋ	೦—೦—೯

ಸೂಚನೆ—೫ ರೂಪಾಯಿ ಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸಲಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ ಮೈಸೂರು

ಡಾಕ್ಟರ್ ಜಿ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು ಸಾವಿರಾರು ವರ್ಷಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ ಎಂಬ ತಲೆನೋವು ತಲೆಯಲ್ಲಿಯು ರೋಗ ಕಣ್ಣುಗಳಲ್ಲಿ ಉತ್ಪತ್ತಿಯಾಗತಕ್ಕ ಸವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಸಹ ಹೆಚ್ಚುಮಾಡುತ್ತವೆ ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ ೩-೮-೦ ವಿ ಪಿ ಖರ್ಚು ಪ್ರತ್ಯೇಕ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗ ರುಬಸವ ಅಂಡ್ ಕಂಪೆನಿ ಲಿಮಿಟೆಡ್

ಪೋ ಬಾ ೪೧೦ ಮದರಾಸ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿವರ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಭಾವ (೩ನೆಯ ಆವೃತ್ತಿ)	ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯ ಶತಕ (೩ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ವಪ್ರವಚನ	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯ ಶತಕ	೨ ಆಣೆ
ಪಂಚಾಚಾರ ಪ್ರಕಾಶಿಕ	೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರ	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೯ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರಿ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ ೩೦ಮಹತ್ವದ ಫೋಟೋಗಳಿರುವವು)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರವುಳ್ಳದ್ದು)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ
A brief life sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*) ..	**8 As**
Speeches by Pandit Shri Kashinatha Shastriji (*English*)	**12 As**
लिंगधारणचन्द्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य संस्कृत)	१ रु
पुरुषसूक्तम् (वीरशैवप्राचीनभाष्योपेतम्)	४ आ
नन्दिकेश्वरकारिका (संस्कृत)	आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ ಗಳ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M 2266

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಚಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ ೧೯ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೩ ರೂ ೮ ಆಣೆ ವಿ. ಪಿ. ಖರ್ಚು ಪ್ರತ್ಯೇಕ.

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೦ನೇ ನವೆಂಬರ್ ೧೯೪೧ [ಸಂಚಿಕೆ ೨೮

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಮಂತ್ರೋಪದೇಶ ಸ್ಮಾರಕೋತ್ಸವ

ಸೊಲ್ಲಾಪುರದಲ್ಲಿರುವ ಹಿರೇಮಠದ ವೇ॥ ವೀರಂತಯ್ಯ ಶಾಸ್ತ್ರಿಗಳು ಶ್ರೀ ಬಾಲತಪಸ್ವಿ ಹೋಟಗಿ ಪಟ್ಟಾಧ್ಯಕ್ಷರವರ ಕಡೆಯಿಂದ ಸಪತ್ನೀಕರಾಗಿ ಮಂತ್ರೋಪದೇಶವನ್ನು ಪಡೆದ ಸ್ಮಾರಕದಿನದ ಉತ್ಸವವನ್ನು ಕಳೆದ ತಿಂಗಳ 28 ನೆಯ ತಾರೀಖಿನ ದಿವಸ ವಿಶೇಷ ಭಕ್ತಿಯಿಂದ ಆಚರಿಸಿದರು ಆದಿವಸ ಪ್ರಾತಃಕಾಲ ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗೋದ್ಭವ ಮೂರ್ತಿಗೆ ರುದ್ರಾಭಿಷೇಕವು ನೆರವೇರಿತು, ಬಳಿಕ ಪಂ॥ ಶ್ರೀ ಜಗದೀಶಶಾಸ್ತ್ರಿಗಳು, ಪಂ॥ ಶ್ರೀ ಮಲ್ಲಿಕಾರ್ಜುನಶಾಸ್ತ್ರಿಗಳು, ಪಂ॥ ಪರಮೇಶ್ವರಶಾಸ್ತ್ರಿಗಳು, ಇವರೊಂದಿಗೆ ಗಣಾರಾಧನೆಯು ನೆರವೇರಿತು ಸಾಯಂಕಾಲ ವೇ॥ ಜಗದೀಶಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು ವೇ॥ ಮಲ್ಲಿಕಾರ್ಜುನಶಾಸ್ತ್ರಿಗಳವರು ಉಪದೇಶ ವಿಷಯದಲ್ಲಿಯೂ, ಶ್ರೀ ವೈದಗಿ ಪಟ್ಟದಸ್ವಾಮಿಗಳು ' ಗುರುಗಳ ಕರ್ತವ್ಯ, ವಿಷಯದಲ್ಲಿಯೂ, ಸೌ॥ ಭಾಗಿರಥೀಬಾಯಿಯವರು ' ನರಜನ್ಮ ಸಾಫಲ್ಯಕ್ಕೆ ಗುರುವಿನ ಆವಶ್ಯಕತೆ 'ಯ ವಿಷಯದಲ್ಲಿಯೂ ಸೌ॥ ಬಸಮ್ಮ ನಂದಿಮಠ ' ಶ್ರೀಮತಿ ಗುರುಬಾಯಿಯವ ಮಠಪತ್ತಿ ಈ ಉಭಯರು ಗುರುಭಕ್ತಿ ವಿಷಯದಲ್ಲಿಯೂ ಭಾಷಣಮಾಡಿದರು ಬಳಿಕ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಪ್ರತ್ಯಕ್ಷದರ್ಶಿ

ಪಟ್ಟಾಧಿಕಾರ ಸ್ಮಾರಕೋತ್ಸವ

ಹೋಟಗಿ ಬೃಹನ್ಮಠಾಧ್ಯಕ್ಷರಾದ ಬಾಲತಪಸ್ವಿ ಚನ್ನವೀರ ಶಿವಾಚಾರ್ಯ ಸ್ವಾಮಿಗಳವರ ಪಟ್ಟಾಧಿಕಾರದ ಸ್ಮರಣಾರ್ಥವಾಗಿ ಕಾರ್ತಿಕ ಶು॥ ೭ ದಿವಸ ಸೊಲ್ಲಾಪುರದ ವೀರಶೈವ ಸದಾಚಾರ ಸ್ತ್ರೀ ಸಮಾಜದವರು ಉತ್ಸವವನ್ನು ವೈಭವದಿಂದ ನೆರವೇರಿಸಿದರು ಆ ದಿವಸ ಪ್ರಾತಃಕಾಲ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಗೆ ರುದ್ರಾಭಿಷೇಕವು ನೆರವೇರಿ ಗಣಾರಾಧನೆ ಆಯಿತು. ಸಾಯಂಕಾಲ ೪ ಘಂಟೆಗೆ ಪುಣೆಯ ಸೌ॥ ಸೈನವತಿ ಕಮಾನೆ ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿತು ಸೌ॥ ಭಾಗೀರಥೀಬಾಯಿಯವರು ಶ್ರೀಗಳವರ ಅನುಷ್ಠಾನದ ಮಹತ್ತ್ವವನ್ನು ಹೇಳಿ ಸರ್ವರನ್ನೂ ಸಂತೋಷಪಡಿಸಿದರು. ತರುವಾಯ ಸೌ॥ ಬಸವ್ವ ನಂದಿಮಠ, ಸೌ॥ ದಾನಮ್ಮ ಹಿರೇಮಠ, ಶ್ರೀಮತಿ ಗುರುಬಾಯಿ ಮಠಪತ್ತಿ ಇವರು ಅನುಷ್ಠಾನದ ಮಹತ್ವದ ಬಗ್ಗೆ ಮಾತನಾಡಿದರು. ಅಧ್ಯಕ್ಷ ಬಾಯಿಯವರು ಸದಾಚಾರ ಸ್ತ್ರೀಸಮಾಜಕ್ಕೆ ೧೧ ರೂಪಾಯಿಗಳನ್ನು ಕೊಟ್ಟರು ಬಳಿಕ ಜಗದಾಚಾರ್ಯರ ಮಂಗಲದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಓರ್ವ ಗುರುಭಕ್ತ.

ಶ್ರೀ ಜಗದ್ಗುರು ರೇಣುಕಾಚಾರ್ಯಾಯ ನಮಃ

ಆಯುಷ್ಯದ ವಿನಿಯೋಗ

ಲೇ — ಮಲ್ಲಿಕಾರ್ಜುನಾರಾಧ್ಯ ರಾ ಬೆನ್ನೂರು ಹಿರೇಮಠ ಮುದೇನೂರು

ಮಾನುಷ ಸೃಷ್ಟಿಯನ್ನು ವ್ಯರ್ಥಗೊಳಿಸದೆ ನ್ಯಾಯವಾಗಿ ಸಾರ್ಥಕಗೊಳಿಸುವುದರಲ್ಲಿ ನಮ್ಮ ಪ್ರಾಚೀನಾರ್ಯರು ಬಹು ಸಮರ್ಥರಾಗಿದ್ದರು ಪ್ರಪಂಚದಲ್ಲಿ ಯಾರೂ ಈ ವಿಷಯದಲ್ಲಿ ಅವರನ್ನು ಮೀರಿಸಿರಲಿಲ್ಲ ಕೆಲವರು ಬ್ರಹ್ಮಚರ್ಯದಿಂದಲೇ ತಮ್ಮ ಜೀವಿತ ಕಾಲವನ್ನು ಕಳೆದು ಜ್ಞಾನಾರ್ಜನೆಯನ್ನು ಮಾಡಿಕೊಂಡರೂ ಅದು ಯುಕ್ತವಾದುದೆನಿಸುವದಿಲ್ಲ ಏಕೆಂದರೆ ಮನುಷ್ಯನಿಗೋಸ್ಕರ ನಿಯಮಿತವಾದ ಯಾವ ಸುಖವನ್ನೂ ಅನುಭವಿಸದೆ ಕೇವಲ ಇಂದ್ರಿಯ ನಿಗ್ರಹಿಯಾದ ಮಾತ್ರದಿಂದಲೇ ಅವನ ಸೃಷ್ಟಿಯು ಉತ್ತಮವೆನಿಸುವದಿಲ್ಲ ಅವನಿಂದ ಉಂಟಾಗಬಹುದಾದ ಸತ್ಸಂತಾನವು ನಷ್ಟವಾಗಿ ಲೋಕದ ಅಭಿವೃದ್ಧಿಗೆ ತಡೆಯಾದಂತೆಯೇ ಆಗುವದು ವಾಚಕರೇ! ಧಾರ್ಮಿಕ ಪ್ರವೃತ್ತಿಯುಳ್ಳವರ ಆವಶ್ಯಕತೆಯು ಜಗತ್ತಿಗೆ ಬಹಳವಾಗಿರುವದು ಈ ಸಮುದ್ದೇಶವು ನೆರವೇರುವುದಕ್ಕಾಗಿ ಜಗಚ್ಚಕ್ರವು ಸುಸೂತ್ರವಾಗಿ ಸಾಗುವುದಕ್ಕಾಗಿ ಪ್ರತಿಯೊಬ್ಬನೂ ಸತ್ಸಂತತಿಯನ್ನು ಪಡೆಯಲೇಬೇಕು ಈ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿ ಮನುಷ್ಯನು ವಿವಾಹವಾಗಬೇಕು ಆದರೆ "ನಾವಾರು, ನಮ್ಮ ನಿಜ ಮನೋದ್ದೇಶವೇನು, ಈಗ ನಮ್ಮ ಕರ್ತವ್ಯವಾವುದು? ಎಂಬೀರೀತಿಯಾಗಿ ಚಿಂತಿಸದೆ ಯಾವಜ್ಜೀವವೂ ಸುಖಲೋಲುಪರಾಗಿ ಮದಾಂಧತೆಯಿಂದ ಪರಮಾತ್ಮನನ್ನೇ ಮರೆತು ಸಾಯುವವರೆಗೂ ಸಂಸಾರಲಂಪಟದಲ್ಲೇ ಇದ್ದರೆ ದೈವಜ್ಞಾನವನ್ನು ಪಡೆಯುವುದಕ್ಕೆ ಉತ್ತಮೋತ್ತಮವಾದ ಮಾನುಷ ಸೃಷ್ಟಿಯನ್ನೇ ವ್ಯರ್ಥಗೊಳಿಸಿದಂತಾಗುವದು ಆದುದರಿಂದ ಹಾಗಿರುವುದೂ ಯುಕ್ತವಾದುದಲ್ಲ ಇದನ್ನೆಲ್ಲಾ ಮಹನೀಯರಾದ ನಮ್ಮ ಪೂರ್ವಿಕರು ಪೂರ್ವಾಪರ ಆಲೋಚಿಸಿ ಮನುಷ್ಯನ ಆಯುಷ್ಯದ ವಿಭಾಗವನ್ನು ಬಹು ವಿವೇಕದಿಂದ ಆಚರಿಸಿದುದು ಪ್ರಪಂಚಕ್ಕೆಲ್ಲ ಮಹೋಪಕಾರವನ್ನು ಮಾಡಿದಂತಾಯಿತು ಆದರೇನು? ನಮ್ಮ ಹಿರಿಯರ ನಡವಳಿಕೆಗಳು ಸ್ವೇಚ್ಛೆಯಿಂದ ವೃತ್ತಿಗೆ ಮೆಚ್ಚಿದ ನಮಗೆ ಅಸಹ್ಯವಾದುವು ಅವರ ಹಿತೋಪದೇಶಗಳು ನಮಗೆ ವಿಷಪ್ರಾಯವಾದವು ಅದಕ್ಕೆ ತಕ್ಕಂತೆ ಅವರಿಗುಂಟಾದ ಸದ್ಗತಿ ಮತ್ತು ಸುಖಗಳಿಗೆ ಪ್ರತಿಯಾಗಿ ದುರ್ಗತಿಯೂ ದುಃಖವೂ ಎಡಬಿಡಲಿಲ್ಲ ಆದರೆ ನಮ್ಮ ಹಿರಿಯರು ಆಚರಿಸಲು ಗೊತ್ತುಮಾಡಿದ್ದ ವಿಭಾಗ ಕ್ರಮವನ್ನು ನಾವೂ ಗೊತ್ತಾಗಿ ಆಚರಣೆಯಲ್ಲಿತಂದರೆ ಅವರಂತೆ ನಾವೂ ಸುಖವನ್ನೂ ಸದ್ಗತಿಯನ್ನೂ ಪಡೆಯುವುದರಲ್ಲಿ ಅಡ್ಡಿಯಿಲ್ಲ, ಆದರೆ ಅದರಂತೆ ಆಚರಿಸಲು ಪ್ರತಿಜ್ಞಾಧುರಂಧರರಾಗಿ ನಿಲ್ಲುವದು ಮಾತ್ರ ಅಸಾಧ್ಯವಾಗಿರುವಂತೆ ತೋರುವದು ಆದರೂ ಸಾಧ್ಯವಿದ್ದವರು ಪ್ರಯತ್ನಿಸಿದರೆ ಅವರಿಗಾದರೂ ಸುಖವು ಲಭಿಸಿ ಅವರ ಮೂಲಕ ನಮ್ಮ ಪ್ರಾಚೀನರ ವಿವೇಕವನ್ನು ಜಗತ್ತಿಗೆಲ್ಲ ವ್ಯಕ್ತಪಡಿಸಬಹುದು

ಆ ವಿಭಾಗ ಕ್ರಮವನ್ನು ವಿಮರ್ಶಿಸುವ, ನಮ್ಮ ಪ್ರಾಚೀನರು ಇಹ ಲೌಕಿಕಸುಖವನ್ನು ಅತಿ ಮಿತವಾಗಿ ಪರಿಗಣಿಸತಕ್ಕದ್ದೇ ಪ್ರಾಧಾನ್ಯವಾಗಿ ತಿಳಿದಿದ್ದುದರಿಂದ ಪ್ರತಿ ವಿಷಯದಲ್ಲಿಯೂ ಮಿತವನ್ನು ಮೀರುತ್ತಿರಲಿಲ್ಲ "ಅತಿ ಸರ್ವತ್ರ ವರ್ಜಯೇತ್" ಎಂಬಂತೆ ಯಾವುದರಲ್ಲಿಯೂ ಅತಿಯಾಗಿ ಪ್ರವರ್ತಿಸದವರಾಗಿದ್ದರು ಹೇಗೆಂದರೆ —

ಮನುಷ್ಯನ ಆಯುಷ್ಯವನ್ನು ಸಾಮಾನ್ಯವಾಗಿ ೧೦೦ ವರ್ಷಗಳೆಂದು ಭಾವಿಸಿ ೪ ಭಾಗವಾಗಿ ವ್ಯವಸ್ಥೆಯನ್ನು ಮಾಡಿಕೊಂಡು ಮಾನುಷ ಸೃಷ್ಟಿಯನ್ನು ಸಾರ್ಥಕಗೊಳಿಸಿದರು ಹೇಗೆಂದರೆ, ೨೫ ವರುಷದವರೆಗೂ ಬ್ರಹ್ಮಚರ್ಯ—೫೦ ವರ್ಷದವರೆಗೂ ಸಂಸಾರಸುಖ—ಅಲ್ಲಿಂದ ಮುಂದೆ ೭೫ ರ ವರೆಗೂ ಜನರಹಿತವಾದ ಅರಣ್ಯವಾಸ—ಅನಂತರ ಸಾಯುವವರೆಗೂ ತಪಸ್ಸಿನಿಂದ ಕೂಡಿದ ಸನ್ಯಾಸ ಹೀಗೆ ವಿಭಾಗಿಸಿಕೊಂಡಿದ್ದುದನ್ನು ಅವಿವೇಕವೆಂದು ಯಾವ ಮೂರ್ಖನೂ ಹೇಳಲಾರನು

ಇದರ ತತ್ವಮಥನೆಯನ್ನು ಮಾಡಿದರೆ ಆ ವಿಭಾಗವು ಎಂತಹ ಸಾರದಿಂದ ಕೂಡಿದುದೆಂಬುದು ಚೆನ್ನಾಗಿ ವ್ಯಕ್ತವಾಗುವುದು ಹುಟ್ಟಿದ ಮೊದಲು ೫ ವರ್ಷದವರೆಗೂ ಬಾಲ್ಯದಲ್ಲಿ ಕಳೆದಮೇಲೆ ೨೦ ವರ್ಷಗಳು ಅವನ ವಿದ್ಯಾಭ್ಯಾಸಾರ್ಥವಾಗಿಯೇ ಗೊತ್ತುಮಾಡಲ್ಪಟ್ಟಿದ್ದವು. ವಿದ್ಯಾಭ್ಯಾಸವೆಂದರೆ ಈಗಿನಂತಹ ವಿದ್ಯಾಭ್ಯಾಸವಲ್ಲ ೮ ವರ್ಷಗಳ ಲೌಕಿಕಾಭ್ಯಾಸವೂ ೧೨ ವರ್ಷಗಳ ವೈದಿಕಾಭ್ಯಾಸವೂ ಇದರಲ್ಲಿ ಅಡಕವಾಗಿದ್ದವು ಇದರಿಂದ ಬಾಲ್ಯಾರಭ್ಯ ಅವನಿಗೆ ದೈವಜ್ಞಾನವೂ, ಶಾಸ್ತ್ರಜ್ಞಾನವೂ, ನ್ಯಾಯಾನ್ಯಾಯಗಳ ವಿವೇಕವೂ, ಪಾಪಭೀತಿಯೂ, ಪರೋಪಕಾರಬುದ್ಧಿಯೂ ಅಭ್ಯಾಸಿಸಲ್ಪಟ್ಟು ಸ್ಥಾಯಿಯಾಗುತ್ತಿದ್ದಿತು ಇಪ್ಪತ್ತೈದು ವರ್ಷದೊಳಗಾಗಿ ಗೃಹಸ್ಥನಾಗುವ ಸಂಭವವೇ ಇರಲಿಲ್ಲ ಹೀಗಿದ್ದುದರಿಂದ ಕಾಯಪುಷ್ಟಿಯು ಅತ್ಯಂತ ದೃಢತೆಯನ್ನು ಪಡೆದು ಮುಂದಣ ಸಂಸಾರಕ್ಕೆ ತಕ್ಕ ಸುಖಾನುಭೋಗಕ್ಕೂ, ನ್ಯಾಯಾರ್ಜನೆಗೂ ಅವಕಾಶವಿದ್ದಿತು ಈಗಣ ಕಾಲದಲ್ಲಿ ಬ್ರಹ್ಮಚರ್ಯವೆಂದರೆ ಪುಸ್ತಕಗಳಲ್ಲಿಯೂ ಮಾತಿನಲ್ಲಿಯೂ ನಿಂತಿರುವುದು ಅನುಕೂಲವಿದ್ದವರು ೧೫ ೧೬ ವರ್ಷಗಳೊಳಗೆ ಮದುವೆಯನ್ನು ಮಾಡಿ ೧೭ ೧೮ ವರ್ಷದೊಳಗೆ ಒಂದೆರಡು ಮಕ್ಕಳ ಸಂಸಾರಗಳನ್ನಾಗಿಯೇ ಮಾಡುವರು ಇದರಿಂದಲೇ ಈಗಿನವರು ಅಶಕ್ತರೂ ಅಲ್ಪಾಯುಗಳೂ ಆಗಿ ತಮ್ಮ ಜೀವಿತವನ್ನು ವ್ಯರ್ಥವಾಗಿ ಮಾಡುತ್ತಿರುವರು. ಪೂರ್ವಿಕರು ೨೫ ವರ್ಷದೊಳಗಾಗಿ ಗೃಹಸ್ಥನಾಗಲು ಅವಕಾಶವನ್ನೇ ಕೊಡುತ್ತಿರಲಿಲ್ಲ ಎಂದರೆ ೨೫ ವರ್ಷದ ವರೆಗೂ ದೇಹದ ಪುಷ್ಟತೆಗೆ ಅವಕಾಶವನ್ನು ಕೊಡತಕ್ಕದೆಂಬುದೇ ಅವರ ಮುಖ್ಯ ಸಿದ್ಧಾಂತವಾಗಿದ್ದಿತು

[೪ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೧ನೆಯ ನವೆಂಬರ್ ತಾ|| ೧೦ನೇ ಸೋಮವಾರ

ಅಹಿಂಸಾಪಾಲನ.

ಗುರುದೇವತಾ ಪೂಜೆಯೂ, ಶೌಚವೂ, ಆರ್ಜವವೂ, ಬ್ರಹ್ಮಚರ್ಯವೂ, ಅಹಿಂಸೆಯೂ ಇವೆಲ್ಲವೂ ಶರೀರ ಸಂಬಂಧವಾದ ತಪಸ್ಸೆನಿಸಿಕೊಳ್ಳುವುವೆಂದು ಗೀತೆಯಲ್ಲಿ ಹೇಳಲ್ಪಟ್ಟಿರುವುದರಿಂದ ಅಹಿಂಸೆಯೆಂಬುದು ಒಂದು ವಿಧವಾದ ತಪಸ್ಸೆಂದೇ ಸಿದ್ಧವಾಗುವುದು ಮನುಷ್ಯನು ತನ್ನ ಪ್ರಾಣಗಳಲ್ಲಿ ಎಷ್ಟು ಪ್ರೀತಿಯುಳ್ಳವನಾಗಿರುತ್ತಾನೆಯೋ ಇತರ ಪ್ರಾಣಿಗಳಲ್ಲಿಯೂ ಸಹ ಅಷ್ಟೇ ಪ್ರೀತಿಯುಳ್ಳವನಾಗಿರಬೇಕು ಜನ್ಮಾಂತರದಲ್ಲಿ ಮಾಡಿದ ಪುಣ್ಯಪಾಪಗಳಿಗನುಸಾರವಾಗಿ ಆಯಾಯ ಪ್ರಾಣಿಗಳ ದೇಹದೊಳಗೆ ವಾಸಮಾಡಿರುವ ಸಮಸ್ತ ಜೀವಾತ್ಮರು ಜಗನ್ನಿಯಾಮಕನಾದ ಶಿವನ ಅಂಶಭೂತರಾಗಿರುವರು. ಪಶುಪಕ್ಷಿ ಮೊದಲಾದ ಎಲ್ಲ ಪ್ರಾಣಿಗಳ ಶರೀರಗಳು ಪರಮಾತ್ಮನ ಅಂಶರೂಪರಾದ ಜೀವರಿಗೆ ವಾಸಸ್ಥಾನಗಳಾಗಿರುವುವು. ಯಾರು ಪ್ರಾಣಿಗಳ ವಧೆಯಲ್ಲಿ ಆಸಕ್ತರಾಗಿರುತ್ತಾರೆಯೋ ಅವರು ಜೀವನು ಇರುವ ಗುಡಿಯನ್ನು ಕೆಡಿಸಿದ ದೋಷಕ್ಕೆ ಭಾಗಿಗಳಾಗುತ್ತಾರೆ ಮಾನವನ ಏಳ್ಗೆಗೆ ಕಾರಣಗಳಾದ ಅನಂತಧರ್ಮಗಳ ಆಚರಣೆಯಲ್ಲಿ ಈ ಅಹಿಂಸಾವ್ರತವು ಸಹ ಒಂದು ಪ್ರಧಾನ ಧರ್ಮವಾಗಿರುವುದರಿಂದ ಇದು ಎಲ್ಲರಿಂದಲೂ ಪಾಲಿಸಲ್ಪಡತಕ್ಕ ಧರ್ಮವಾಗಿರುತ್ತದೆ ಇದರಿಂದ ಯಾವ ಪ್ರಾಣಿಗಳೂ ಯಾವ ಪ್ರಾಣಿಯನ್ನೂ ಕೊಲ್ಲಲಾಗದೆಂದು ಸ್ಪಷ್ಟವಾಗುತ್ತಿರಲು ಪ್ರಸಂಗವಶಾತ್ ವ್ಯಾಘ್ರಾದಿ ಕ್ರೂರಜಂತುಗಳು ಹರಿಣಾದಿ ದುರ್ಬಲ ಜಂತುಗಳನ್ನು ಕೊಲ್ಲುವವಲ್ಲ? ಎಂಬ ಪ್ರಶ್ನೆಯು ಉತ್ಪನ್ನವಾಗುವದು ಆದರೆ ಈ ಪ್ರಾಣಿವಧೆಯಿಂದ ಅಂತಹ ಮೂಕಪ್ರಾಣಿಗಳಿಗೆ ದೋಷವನ್ನು ಹೇಳಲಾಗುವುದಿಲ್ಲ ಏಕೆಂದರೆ ಆ ಮೂಕಪ್ರಾಣಿಗಳು ಆಹಾರ ನಿದ್ರಾ ಮೈಥುನ ಈ ಮೂರರಲ್ಲಿಯೇ ಆಶೆಯುಳ್ಳವುಗಳಾಗಿರುತ್ತವೆ ಅವುಗಳಿಗೆ ಧರ್ಮಾಧರ್ಮ ವಿಚಾರವಾಗಲಿ, ಪಾಪಪುಣ್ಯ ವಿಚಾರವಾಗಲಿ, ಇರುವುದಿಲ್ಲ ಇಂತಹ ವಿಚಾರಗಳೆಲ್ಲವೂ ಜ್ಞಾನವುಳ್ಳ ಮಾನವವರ್ಗಕ್ಕೆ ಸಂಬಂಧಪಟ್ಟಿರುವುದರಿಂದ "ಮಾ ಹಿಂಸ್ಯಾತ್ ಸರ್ವಾಭೂತಾನಿ" ಇತ್ಯಾದಿ ಶ್ರುತಿಗಳಲ್ಲಿ ಹೇಳಲ್ಪಟ್ಟ ಅಹಿಂಸಾವಿಧಾಯಕವ್ರತಗಳೆಲ್ಲವೂ ಮಾನವರನ್ನೇ ಲಕ್ಷೀಕರಿಸುತ್ತವೆ ಅದ್ದರಿಂದ ಮಾನವಜನ್ಮಧಾರಿಯಾದ ಪ್ರತಿಯೊಬ್ಬ ಭಾರತೀಯನೂ ಎಲ್ಲ ವ್ರತಗಳಿಗಿಂತಲೂ ಮಿಗಿಲಾದ ಅಹಿಂಸಾವ್ರತವನ್ನು ಅವಶ್ಯವಾಗಿ ಪರಿಪಾಲಿಸಬೇಕಾಗಿದೆ "ತತ್ರಾಹಿಂಸಾ ಸತ್ಯಾಸ್ತೇಯಬ್ರಹ್ಮಚರ್ಯಾಪರಿಗ್ರಹಾ ಯಮಾಃ" ಪ್ರಾಣಿಗಳನ್ನು ವಧಿಸದಿರುವುದೂ, ಸುಳ್ಳನ್ನು ಹೇಳದಿರುವುದೂ, ಕಳ್ಳತನವನ್ನು ಮಾಡದಿರುವುದೂ, ಇಂದ್ರಿಯಗಳನ್ನು ತಡೆಯುವುದೂ ಮಾನವನ ಧರ್ಮವಾಗಿದೆ ಎಂದು ಪತಂಜಲಿ ಮಹರ್ಷಿಗಳು ಅಹಿಂಸಾವ್ರತಕ್ಕೆ ಪ್ರಾಧಾನ್ಯವನ್ನು ಕೊಟ್ಟಿರುವರು ಯಾರು ಅಹಿಂಸಾವ್ರತದಿಂದ ದೂರರಾಗಿ ಮಿಕ್ಕ ವ್ರತಗಳನ್ನಾಚರಿಸುತ್ತಾರೆಯೋ ಅಂಥವರನ್ನು ಪರಮಾತ್ಮನು ಎಂದಿಗೂ ಕರುಣಿಸುವುದಿಲ್ಲವು ಸಕಲ ಪ್ರಾಣಿಗಳಲ್ಲಿ ಅವ್ಯಾಜವಾದ ದಯೆಯನ್ನು ತೋರಿಸುತ್ತಿರುವುದೇ ಪರಮಾತ್ಮನ ಪೂಜೆಯೆಂದು ಸಾಮಾನ್ಯವಾಗಿ ಹೇಳಬಹುದಾಗಿದೆ ಕೃತತ್ರೇತಾದಿ ಯುಗಗಳಲ್ಲಿ ಈ ಪವಿತ್ರವಾದ ಅಹಿಂಸಾವ್ರತವೇ ವಿಶೇಷವಾಗಿದ್ದು ಕಲಿಯುಗದಲ್ಲಿ ನಾಮಾವಶೇಷವಾಗುತ್ತಿರುವುದನ್ನು ನೋಡಿ ವ್ಯಸನಪಡಬೇಕಾಗಿದೆ.

ಈ ಕಾಲದಲ್ಲಿ ಎಲ್ಲಿನೋಡಿದರೂ ಕುರಿ ಕೋಣಗಳು ಲೆಕ್ಕವಿಲ್ಲದಷ್ಟು ವಧಿಸಲ್ಪಡುತ್ತಲಿವೆ ಸಕಲಜೀವ ತಾಸ್ವರೂಪವಾದ ಗೋಮಾತೆಯ ವಧೆಯಂತೂ ಘೋರವಾಗಿ ನಡೆಯುತ್ತಿದೆ ಭಾರತೀಯರಲ್ಲಿಯೇ ಅನೇಕರು ದಯಾಶೂನ್ಯರೂ ವಿಚಾರಶೂನ್ಯರೂ ಆಗಿ ಮುದಿಯಾದ ಗೋವುಗಳನ್ನು ತಮ್ಮ ಕೈಗಳಿಂದಲೇ ಕಟುಕರಿಗೆ ಕೊಡುತ್ತಿರುವುದನ್ನು ನೋಡಿ ಸಾಧುಗಳ ಹೃದಯವು ಕುದಿಯುತ್ತಿರುವದು. ಯಾವ ಪ್ರಾಣಿಯನ್ನೂ ವಧಿಸಕೂಡದೆಂದು ವಿಧಿಸುವ ಆರ್ಯಧರ್ಮದ ಅನುಯಾಯಿಗಳೇ ತಮ್ಮಿಂದ ಪೂಜಿಸಲ್ಪಡಲು ಯೋಗ್ಯವಾದ ಗೋಮಾತೆಯ ವಿಷಯದಲ್ಲಿಯೇ ಇಷ್ಟು ನಿರ್ದಯೆಯನ್ನು ತೋರಿಸುತ್ತಿರುವಲ್ಲಿ, ಇತರ ಕುರಿ ಕೋಣ ಮೊದಲಾದವುಗಳನ್ನು ವಧೆಮಾಡಿಸುವ ವಿಷಯದಲ್ಲಿ ಎಷ್ಟರಮಟ್ಟಿಗೆ ನಿರ್ದಯೆಯಿರಬಹುದೆನ್ನುವುದನ್ನು ಬೇರೆ ಹೇಳಬೇಕಾಗಿಲ್ಲ ಯಾವುದಾದರೊಂದು ಊರಿನಲ್ಲಿ ಮಾರಿಯ ಜಾತ್ರೆಯಾದರೆ ಸಾಕು! ಇವರು ತಮ್ಮ ಆರ್ಯಮತದ ಪಾವಿತ್ರ್ಯವನ್ನು ಮರೆತು ಪಶುವಧೆಯಿಂದ ಮಾರಮ್ಮನು ಸಂತೋಷಪಡುವಳೆಂಬ ಭ್ರಾಂತಿಯಿಂದ ದಯಾಶೂನ್ಯರಾಗಿ ಪಶುಗಳನ್ನು ಕೊಲ್ಲಿಸುತ್ತಾರೆ ಮಾರಿಯ ಪ್ರೀತಿಗಾಗಿ ಜ್ಞಾನಶೂನ್ಯಗಳಾದ ಮೂಕಪ್ರಾಣಿಗಳನ್ನು ಎಳೆದೊಯ್ದು ಮಾರಿಯ ಮುಂದೆ ಕೊಲ್ಲಿಸುವಂತೆ ತಮ್ಮ ಮಕ್ಕಳನ್ನು ಕೊಲ್ಲಿಸಬಹುದಲ್ಲವೆ? ಯಾಕೆ ಕೊಲ್ಲಿಸಬಾರದು? ಹೀಗೆ ಪಶುಗಳನ್ನು ಕೊಲ್ಲಿಸುವದರಿಂದ ದೇವತೆಯು ಎಂದೂ ಪ್ರೀತಳಾಗುವದಿಲ್ಲ ಅಂತ್ಯದಲ್ಲಿ ಘೋರವಾದ ನರಕವನ್ನು ಅನುಭವಿಸಬೇಕಾಗುವದು ದೇವತೆಯಲ್ಲಿ ಭಕ್ತಿಯುಳ್ಳವರು ದೇವತೆಯನ್ನು ಕೋಮಲವಾದ ಪತ್ರಪುಷ್ಪಾದಿಗಳಿಂದರ್ಚಿಸಿ ಸದ್ರಸೋಪೇತವಾದ ಪಾಕವನ್ನರ್ಪಿಸಿ ಅತಿಥಿಗಳನ್ನು ತೃಪ್ತಿಗೊಳಿಸಿದರೆ ಮಾರಮ್ಮ ಮೊದಲಾದ ಸಮಸ್ತ ದೇವತೆಗಳೂ ತೃಪ್ತರಾಗುವರು ಈ ತತ್ವವನ್ನರಿಯದ ನೀತಿವಿರೋಧವೂ ಭಯಂಕರವೂ ನರಕಹೇತುವೂ ಆದ ಕ್ರೂರಕೃತ್ಯಗಳನ್ನಾಚರಿಸಿದರೆ ದೇವತೆಯು ಮೆಚ್ಚುವಳೇ? ಎಂದಿಗೂ ಮೆಚ್ಚಲಾರಳು ಇದು ವೃಥಾ ಭ್ರಾಂತಿಯಲ್ಲದೆ ಬೇರೊಂದಿಲ್ಲ ಕುರಿ, ಕೋಣ, ಗೋವು ಮುಂತಾದ ಪಶುಗಳು ನಮ್ಮ ಮನೆಯ ಹಣವನ್ನೇನೂ ಅಪೇಕ್ಷಿಸುವುದಿಲ್ಲ ಕಾಡಿನಲ್ಲಿಯ ತೃಣಾದಿಗಳನ್ನೂ ಜಲಾದಿಗಳನ್ನೂ ಸೇವಿಸಿ ಬೆಳೆಯುತ್ತವೆ ಇವುಗಳಿಗೆ ಯಾರ ಸಹಾಯವೂ ಬೇಕಾಗಿಲ್ಲ ಇವುಗಳು ತಮ್ಮ ಪ್ರಯೋಜನವೊಂದೂ ಇಲ್ಲದೆ ಮನುಷ್ಯರಿಗೆ ಒಂದೊಂದು ರೂಪದಿಂದ ಸಹಾಯಮಾಡುತ್ತವೆ ಗೋವುಗಳು ಅಮೃತಸದೃಶಕ್ಷೀರವನ್ನು ಕೊಟ್ಟು ಸರ್ವರನ್ನೂ ಕಾಪಾಡುತ್ತವೆ ಇದರಂತೆಯೇ ಒಂದೊಂದು ಪ್ರಾಣಿಗಳು ಒಂದೊಂದು ರೀತಿಯಿಂದ ಪ್ರಯೋಜನಕಾರಿಗಳಾಗಿರುತ್ತವೆ ಇಂತಹ ಮಹೋಪಕಾರಿಗಳಾದ ಗೋವುಗಳನ್ನು ಗಟ್ಟಿಯಾಗಿರುವವರೆಗೂ ದುಡಿಸಿಕೊಂಡು ಅವುಗಳಿಂದ ಸುಖಪಟ್ಟು ಮುದಿತನದಲ್ಲಿ ಕಟುಕರಿಗೆ ಕೊಡುವುದೂ ಮಾರಮ್ಮನ ಹಬ್ಬದಲ್ಲಿ ಇದ್ದಲ್ಲಿಂದ ಹುಡುಕಿತಂದು ಕುರಿ ಕೋಣಗಳನ್ನು ಬಲಿಗೊಡುವುದೂ ಇವೆಲ್ಲ ರಾಕ್ಷಸೀ ಕೃತ್ಯಗಳಲ್ಲದೆ ಮಾನವ ಕೃತಿಗಳಲ್ಲ ಆದುದರಿಂದ ಸಕಲ ಮಾನವರೂ ನಿರಪರಾಧಿಗಳಾದ ಪ್ರಾಣಿಗಳ ವಧೆಯಲ್ಲಿ ಮನಸ್ಸನ್ನಿಟ್ಟು ಘೋರವಾದ ಪಾಪವನ್ನು ಕಟ್ಟಿಕೊಳ್ಳದೆ, ಅವುಗಳನ್ನು ಪ್ರೇಮದಿಂದ ಪಾಲಿಸಿ ಪರಮಾತ್ಮನ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಯುದ್ಧವಾರ್ತೆ.

ಮಾಸ್ಕೋ ಪರಿಸ್ಥಿತಿ

ಮಾಸ್ಕೋದ ಬಳಿ ಯುದ್ಧವು ಅತಿ ಘೋರ ಸ್ವರೂಪವನ್ನು ತಾಳುತ್ತಿದೆ. ನಾಜಿಗಳು ಆಕ್ರಮಿತ ರಾಷ್ಟ್ರಗಳಿಂದ ಅಪಾರ ಸೇನೆಯನ್ನು ರಣರಂಗಕ್ಕೆ ತಂದಿದ್ದಾರೆ. ಆದರೂ ಅವರು ಮುಂದುವರೆಯಲು ಸಾಧ್ಯವಾಗದಂತೆ ರಷ್ಯನರು ಪ್ರಾಣದಾಸೆಯನ್ನು ತೊರೆದು ಹೋರಾಡುತ್ತಿದ್ದಾರೆ ದಕ್ಷಿಣದಿಂದ ಮಾಸ್ಕೋ ಕಡೆಗೆ ನುಗ್ಗುತ್ತಿರುವ ಜರ್ಮನ್ ಸೈನ್ಯಗಳು ಟುಲಾನಗರದ್ವಾರದಲ್ಲಿ ಭೀಕರವಾಗಿ ಹೋರಾಡುತ್ತಿವೆ ರಷ್ಯನರು ಜರ್ಮನರ ಟ್ಯಾಂಕುಗಳನ್ನು ನಾಶಪಡಿಸುತ್ತಿದ್ದಾರೆ. ಮಾಸ್ಕೋ ಯುದ್ಧರಂಗದ ಮಲೊ ಯರೋಸ್ಲವೆಟ್ಸ ಕಡೆ ಜರ್ಮನರು ಕಂದಕಗಳನ್ನು ಅಗೆಯುತ್ತಿದ್ದಾರೆ. ಅಲ್ಲಿ ತಮ್ಮ ಟ್ಯಾಂಕುಗಳನ್ನು ನೆಲದೊಳಗೆ ಹೂಳುತ್ತಿದ್ದಾರೆ.

ಟುಲಾನಗರವು ವಿಪತ್ತಿನಲ್ಲಿ ಸಿಕ್ಕಿದೆ

ಸಂಗ್ರಾಮ ವಸ್ತುನಿರ್ಮಾಣ ಕೇಂದ್ರವೂ ಮಾಸ್ಕೊ ಮುತ್ತಿಗೆಯನ್ನು ತಡೆಯುವಲ್ಲಿ ಪ್ರಮುಖ ಸ್ಥಾನವೂ ಆದ ಟುಲಾನಗರದ ಬಳಿ ನಡೆಯುತ್ತಿರುವ ಭಯಂಕರ ಯುದ್ಧದಲ್ಲಿ ಶತ್ರುಗಳನ್ನು ಅನೇಕ ಸಾರಿ ಹಿಮ್ಮೆಟ್ಟುವಂತೆ ಮಾಡಿದರೂ ನಗರವು ವಿಪತ್ತಿನಲ್ಲಿ ಸಿಕ್ಕಿಕೊಂಡಿದೆ ಮಾಸ್ಕೋ ಯುದ್ಧರಂಗದ ಪ್ರತಿಯೊಬ್ಬ ಸೈನಿಕನೂ ಮತ್ತು ಅಧಿಕಾರಿಯೂ ಎಷ್ಟೇ ಅಪಾಯವೊದಗಿದರೂ ಒಂದು ಹೆಜ್ಜೆಯನ್ನೂ ಹಿಂದಿಡಲಾಗದೆಂದು ಸ್ಟಾಲಿನ್ನರು ಮಾಡಿದ ಆಜ್ಞೆಯನ್ನು ಸೋವಿಯಟ್ ಸೈನ್ಯವು ಅಕ್ಷರಶಃ ಪಾಲಿಸುತ್ತಿದೆ. ಒಂದುವೇಳೆ ಟುಲಾ ನಗರವು ಶತ್ರುಗಳ ಕೈಗೆ ಬೀಳುವುದಾದರೂ ಅಲ್ಲಿನ ಸಂಗ್ರಾಮವಸ್ತು ನಿರ್ಮಾಣ ಸಾಧನಗಳಾವುವೂ ಜರ್ಮನರಿಗೆ ದೊರಕಲಾರವು. ಆಗಲೇ ಅಲ್ಲಿದ್ದ ಕಾರ್ಖಾನೆಗಳನ್ನೆಲ್ಲಾ ಬೇರೆ ಕಡೆಗೆ ಸಾಗಿಸಲಾಗಿದೆ. ಜರ್ಮನ ವ್ಯೂಹದ ಹಿಂದಿನಿಂದ ರಷ್ಯನ್ ಕುದುರೆ ಸವಾರರು ಶತ್ರುಗಳ ಮೇಲೆ ಬಿದ್ದು ನಷ್ಟಪಡಿಸುವ ಕೆಲಸದಲ್ಲಿ ಟುಲಾನಗರದ ಬಾಲಕ ಬಾಲಕಿಯರೂ ಸಹಾಯ ಮಾಡುತ್ತಿದ್ದಾರೆ. ಗಾಯಗೊಂಡವರನ್ನೆಲ್ಲ ಸುರಕ್ಷಿತವಾದ ಕಡೆಗೆ ಸಾಗಿಸುತ್ತಿದ್ದಾರೆ

ಕ್ರಿಮಿಯಾ ಆಕ್ರಮಣವು ಸುಲಭವಲ್ಲ

ನಾಜಿಗಳು ಮುಂದಿಟ್ಟುಕೊಂಡಿರಬಹುದಾದ ಕಾರ್ಯಕ್ರಮದಂತೆ ಅವರು ಕಾಕಸಸ್ ಪ್ರಾಂತ್ಯದ ಮೇಲೆ ಮುತ್ತಿಗೆ ನಡೆಸುವುದಕ್ಕೆ ಮೊದಲು ಉಕ್ರೇನಿನಲ್ಲಿಯೂ ಕ್ರಿಮಿಯಾದಲ್ಲಿಯೂ ಅಸಾಧ್ಯಪ್ರತಿಭಟನೆಯನ್ನು ಎದುರಿಸಬೇಕಾಗಿದೆ ಆದ್ದರಿಂದ ಕಾಕಸಸ್ ಪ್ರದೇಶದಲ್ಲಿ ಅವರು ಯುದ್ಧಾರಂಭ ಮಾಡಬೇಕಾದರೆ ಇನ್ನೂ ಬಹಳ ಕಾಲ ವಿಳಂಬಬೇಕಾಗಿದೆಯೆಂದು ಯೋಚಿಸಲಾಗಿದೆ ಈಗ ರಷ್ಯನರು ಕ್ರಿಮಿಯದ ಮುಖ್ಯ ಬಂದರಾದ ಸೆಬಾಸ್ಟೊಪೂಲಿಗೆ 20 ಮೈಲು ದೂರದಲ್ಲಿಯೂ, ಕರ್ಚ್ ಕಡೆಯಲ್ಲಿಯೂ ಶತ್ರುಗಳನ್ನು ಎದುರಿಸಲು ಸರ್ವಸಿದ್ಧತೆಗಳನ್ನೂ ಮಾಡಿಕೊಂಡಿದ್ದಾರೆ ಕ್ರಿಮಿಯವು ಮಹಾವಿಪತ್ತಿನಲ್ಲಿ ಸಿಕ್ಕಿಬಿದ್ದಿರುವದಾದರೂ ಅದರ ಆಕ್ರಮಣವು ಸುಲಭವಲ್ಲವೆಂದೂ, ಮುಂದ ಕಾಕಸಸ್ ಪ್ರಾಂತ್ಯವು ಪರ್ವತಶ್ರೇಣಿಗಳಿಂದ ತುಂಬಿರುವದರಿಂದ ಅದರ ಆಕ್ರಮಣವು ಬಹಳ ಕಷ್ಟವಾದುದೆಂದೂ ಉಕ್ರೇನಿನಲ್ಲಿ ರೋಸ್ಟೋವ ಬಳಿ ಇನ್ನೂ ಭೀಕರ ಕದನವು ನಡೆಯುತ್ತಿದೆ

ಕ್ರಿಮಿಯಾದಲ್ಲಿರುವ ರಷ್ಯಾಸೇನೆಯನ್ನು ವಿಭಾಗಿಸಲಾಯಿತೆಂಬ ಹೇಳಿಕೆಯನ್ನು ಜರ್ಮನ್ ರೇಡಿಯೊ ಸ್ಟೇಷನ್ನುಗಳೆಲ್ಲ ಪ್ರಕಟಿಸಿವೆ ಜರ್ಮನರು ಆಕ್ರಮಿಸಿದವುದಾಗಿ ತಿಳಿಸುವ ಕರ್ಸ್ಕ ನಗರವು ಖಾರ್ಕೋವ್ ಮತ್ತು ಓರೆಲ್ ನಗರಗಳನಡುವೆ ಇದೆ. ಅಲ್ಲಿನ ಜನಸಂಖ್ಯೆ ೯೦,೦೦೦ ಬೇರೆಬೇರೆ ಕಾರ್ಖಾನೆಗಳು ಅಲ್ಲಿವೆ ಸಿಮ್ಫೆರೊಪೂಲನ್ನು ಜರ್ಮನರು ಹಿಡಿದಿರುವ ವಿಷಯದಲ್ಲಾಗಲಿ, ಕ್ರಿಮಿಯಾದಲ್ಲಿ ಜರ್ಮನರು ಎಷ್ಟು ದೂರ ಮುಂದೆ ಹೋಗಿರುವರೆಂಬ ವಿಚಾರಗಲ್ಲಿಯಾಗಲಿ ರಷ್ಯನ್ ಮೂಲಗಳಿಂದ ಯಾವ ಸುದ್ದಿಯೂ ಬಂದಿಲ್ಲ.

ರಷ್ಯದಲ್ಲಿ ಹೊಸಸೈನ್ಯ ಸಿದ್ಧವಾಗುತ್ತಿದ

ರಷ್ಯದ ಕೆಂಪುಸೇನೆಗೆ ಬಲಯುತವಾದ ಮೀಸಲು ದಳವನ್ನು ಸಿದ್ಧಗೊಳಿಸುವ ಕಾರ್ಯವು ತೀವ್ರಗತಿಯಿಂದ ಮುಂದುವರೆಯುತ್ತಿದೆ ಕೋಟ್ಯಾಂತರ ಕೂಲಿಗಾರರೂ ರೈತರೂ, ಗುಮಾಸ್ತರುಗಳೂ ತಾವಾಗಿ ಮುಂದೆಬಂದು ಸೈನಿಕಶಿಕ್ಷಣ ಪಡೆಯುತ್ತಿದ್ದಾರೆ. ಅವರಿಗೆಲ್ಲ ಆಗಲೇ ಒಂದುತಿಂಗಳ ಶಿಕ್ಷಣ ಮುಗಿದಿದೆ. ಗೋರ್ಕಿ ಕ್ಷೇತ್ರದ ಅನೇಕಜಿಲ್ಲೆಗಳಲ್ಲೂ ರಷ್ಯದ ಪ್ರಜೆಗಳು ಸೈನ್ಯಶಿಕ್ಷಣ ಪಡೆಯುತ್ತಿದ್ದಾರೆ. ಹಳ್ಳಿಗಳಲ್ಲೂ ನಗರಗಳಲ್ಲೂ ಮಿಲಿಟರಿ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ತುರ್ಕಿಯ ನಾವೆಯೊಂದು ಮುಳುಗಿತು

ತುರ್ಕಿಯ ಒಂದು ಮೋಟರ್ ಬೋಟನ್ನು ಕಪ್ಪುಕಡಲಿನಲ್ಲಿ ಒಂದು ಸಬ್‌ಮೆರೀನ್ ಎದುರಿಸಿ ಮುಳುಗಿಸಿದೆ. ತುರ್ಕಿಯ ಸಮುದ್ರತೀರದಲ್ಲಿಯೇ ಈ ಘಟನೆಯು ನಡೆದದ್ದರಿಂದ ನಾವಿಕರೆಲ್ಲ ರಕ್ಷಿಸಲ್ಪಟ್ಟರೆಂದೂ ಮುಂದಿನ ತನಿಖೆ ನಡೆಯುತ್ತಿರುವದಾಗಿಯೂ ಅಂಕಾರ ಸುದ್ದಿಯು ಪ್ರಕಟಿಸಿದೆ.

ಕ್ರಿಮಿಯದ ರಾಜಧಾನಿಯು ಶತ್ರು ವಶವಾಯಿತೆ ?

ಕ್ರಿಮಿಯದ ರಾಜಧಾನಿಯಾದ ಸಿಮ್‌ಫೆರೊಪೋಲ್ ಎಂಬುದು ತಮ್ಮ ಕೈಸೇರಿತೆಂದು ಜರ್ಮನ್ ಸರ್ಕಾರದವರು ಪ್ರಕಟಿಸಿದ್ದಾರೆ. ನಾಜಿ ಸೈನ್ಯಗಳು ಕ್ರೈಲಾಬೆಟ್ಟಗಳ ಉತ್ತರ ಭಾಗದವರೆಗೂ ಮುಂದುವರೆದಿರುವುದಾಗಿ ಹೇಳಲಾಗಿದೆ

ಅಮೆರಿಕಕ್ಕೆ ಜಪಾನ್ ರಾಯಭಾರಿಗಳು

ಜಪಾನ್—ಅಮೆರಿಕ ಸಮಸ್ಯೆಗಳನ್ನು ಶಾಂತಿಯುತವಾಗಿ ಕೊನೆಗಾಣಿಸಲು ಜಪಾನ್ ಚಕ್ರವರ್ತಿಗಳು ಅಂಗೀಕರಿಸಿರುವ ಕೆಲವು ಸಲಹೆಗಳನ್ನು ಜಪಾನಿನ ವಿಶೇಷ ಸಲಹೆಗಾರರು ಅಮೆರಿಕಕ್ಕೆ ತೆಗೆದುಕೊಂಡು ಹೊರಟಿರುವರೆಂದೂ, ಜಪಾನಿನ ಮಹಾಪ್ರಧಾನರಾದ ಜ. ಟೋಜೋರವರು ರೂಜ್‌ವೆಲ್ಟರಿಗೆ ಖಾಸಗಿ ಪತ್ರವೊಂದನ್ನು ಕಳುಹಿಸಿರುವರೆಂದೂ, ಹಿಂದೆ ಬರ್ಲಿನಿನಲ್ಲಿ ಜಪಾನಿನ ರಾಯಭಾರಿಗಳಾಗಿದ್ದ ಶ್ರೀ ಸಬುರು ಕುರುಸುರವರು ಈ ಕೆಲಸಕ್ಕೆ ನಿಯಮಿತರಾಗಿ ವಿಮಾನದಮೂಲಕ ಅಮೆರಿಕಕ್ಕೆ ಹೊರಟಿರುವರೆಂದೂ ಅಂಗೀಕಾರ ಯೋಗ್ಯವಾದಂತಹ ಸಲಹೆಗಳನ್ನು ಜಪಾನು ಅವರಲ್ಲಿ ಪ್ರೇಷಿಸಿರುವದಾಗಿಯೂ ಜಪಾನ್ ವರ್ತಮಾನ [illegible]ವರು ಪ್ರಕಟಿಸಿದ್ದಾರೆ.

ಜಪಾನ್ ಹಡಗು ಮುಳುಗಿತು

‘ಕಬಿಮಾರು” ಎಂಬ 4050 ಟನ್ ತೂಕದ ಒಂದು ಜಪಾನ್ ಹಡಗು ಕಳೆದ ಬುಧವಾರ ಕೊರಿಯಾ ತೀರದಲ್ಲಿ ತೇಲುತ್ತಿದ್ದ ಒಂದು ರಷ್ಯನ್‌ಮೈನ್‌ಗೆ ಬಡಿದು ಮುಳುಗಿಹೋಯಿತು. ರಷ್ಯನರು ಹಾಕಿರುವ ಮೈನ್ (ಸಿಡಿಮದ್ದು)ಗಳು ಜಪಾನ್ ಸಮುದ್ರಕ್ಕೆ ತೇಲಿಬರುತ್ತಿರುವ ವಿಚಾರವಾಗಿ ಜಪಾನ್ ಸರ್ಕಾರವು ಹಿಂದೆಯೇ ರಷ್ಯಕ್ಕೆ ಪ್ರತಿಭಟನೆಯನ್ನು ಕಳುಹಿಸಿತ್ತು. ವಿಪತ್ತಿಗೊಳಗಾದ ನೌಕೆಯಲ್ಲಿ 342 ಮಂದಿ ಪ್ರಯಾಣಿಕರೂ 30 ಮಂದಿ ನಾವಿಕರೂ ಇದ್ದರು. ಅವರ ಗತಿಯೇನಾಯಿತೋ ಗೊತ್ತಿಲ್ಲ. ಅವರೆಲ್ಲ ರಕ್ಷಿಸಲ್ಪಟ್ಟಿರಬಹುದಾಗಿ ನಂಬಲಾಗಿದೆ.

ಪೂರ್ವದ ಕಡೆ ಜಪಾನರ ಚಟುವಟಿಕೆ

ಫ್ರೆಂಚ್ ಇಂಡೋ ಚೀನಾದಲ್ಲಿ ಜಪಾನ್ ಸೈನಿಕರ ಚಲನವು ಕಾಣಬರುತ್ತಿದೆ. 20,000 ಜಪಾನ್ ಸೈನಿಕರು ಹೊನಾಯ್ ಪಶ್ಚಿಮದಲ್ಲಿ ರಸ್ತೆಯನ್ನು ಅಗಲ ಮಾಡುತ್ತಿದ್ದಾರೆ. 10,000 ಸೈನಿಕರು ಸೈಗಾನಿನಿಂದ ಕೈಫಾಂಗಿಗೆ ಬಂದಿದ್ದಾರೆ. ಕಾಂಗ್ನಿ ಪ್ರಾಂತ್ಯದ ಗಡಿಯಲ್ಲಿ ಜಪಾನ್ ಸೇನೆಗಳು ಸೇರಿಯುತ್ತಿವೆ. ಉಳಿದ ಜಪಾನ್ ಪಡೆಗಳು ಬರ್ಮ ಗಡಿಯ ಕಡೆಗೆ ತೆರಳುತ್ತಿವೆ. ಉಳಿದ ಯೋಧರು ಥೈಲೆಂಡ್ ಗಡಿ ಕಡೆಗೆ ಚಲಿಸುತ್ತಿದ್ದಾರೆ. ಕ್ಯಾಂಟನ್ ಕ್ಷೇತ್ರದಲ್ಲಿ ಇನ್ನೂ 30,000 ಮಂದಿ ಜಪಾನ್ ಸೈನಿಕರಿದ್ದಾರೆ. ಥೈಲೆಂಡ್, ಬರ್ಮಾ ರಸ್ತೆ ಮತ್ತು ಕನ್‌ಮಿಂಗ್—ಈ ಮೂರರ ಮೇಲೂ ಜಪಾನರು ಬೀಳುವ ಸಂಭವವಿದೆಯೆಂದು ಚೀನಾ ಪ್ರಕಟನ ಶಾಖಾ ಸಚಿವರು ಸೂಚಿಸಿದ್ದಾರೆ.

ನಾಜಿ ಸಂಗ್ರಾಮ ಸಿದ್ಧತೆ !

ಚಳಿಗಾಲದಲ್ಲಿ ಯೂರೋಪಿನ ಕಾರ್ಖಾನೆಗಳಲ್ಲೆಲ್ಲ ಅಪಾರ ಸಂಗ್ರಾಮ ವಸ್ತುಗಳನ್ನು ತಯಾರಿಸಲು ಹರ್ ಹಿಟ್ಲರರು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಫ್ರೆಂಚ್ ಕಾರ್ಖಾನೆಗಳ ಸಹಕಾರವನ್ನು ಕೇಳಲಾಗಿದೆ. ಅವುಗಳು ತಮ್ಮ ಶಕ್ತಿಮೀರಿ ವಸ್ತುಗಳನ್ನು ತಯಾರಿಸುವಂತೆ ಅನುಗೊಳಿಸಲಾಗುತ್ತಿದೆ. ಫ್ರೆಂಚ್ ಬಂಡವಾಳಿಗರು ಮತ್ತು ಫ್ರೆಂಚ್ ಕೂಲಿಗಾರರೂ ಈ ಕಾರ್ಯದಲ್ಲಿ ಪೂರ್ಣಪಾತ್ರ ವಹಿಸುವಂತೆ ಮಾಡಲಾಗುತ್ತಿದೆ. ಇದರಲ್ಲಿ ಎರಡು ಉದ್ದೇಶಗಳಿವೆ. ಪೂರ್ವರಂಗದಲ್ಲಿ ಆಗುತ್ತಿರುವ ಸಂಗ್ರಾಮವಸ್ತುಗಳ ಹಾನಿಯನ್ನು ತುಂಬುವುದು ಒಂದು, ಆರ್. ಎ. ಎಫ್. ವಿಮಾನಗಳು ಜರ್ಮನ್ ಕಾರ್ಖಾನೆಗಳ ಮೇಲೆ ಮುತ್ತಿಗೆ ನಡೆಸದಂತೆ ಅವುಗಳನ್ನು ಬೇರೆ ಬೇರೆಸ್ಥಾನಗಳಲ್ಲಿ ಏರ್ಪಡಿಸುವುದು ಇನ್ನೊಂದು. ಈ ಸಂಗ್ರಾಮ ವಸ್ತುಸೃಷ್ಟಿಯ ಮೇಲ್ವಿಚಾರಣೆಯನ್ನು ರಿಬ್ಬೆಂಟ್ರಾಫರು ವಹಿಸಿಕೊಂಡಿದ್ದಾರೆ ಎಂದು ತಿಳಿದುಬರುತ್ತದೆ. ಫ್ರಾನ್ಸ್, ಹಾಲೆಂಡ್, ಬೆಲ್ಜಿಯಂ, ಮತ್ತು ನಾರ್ವೆ—ಇಲ್ಲೆಲ್ಲ ಈ ಪ್ರಯತ್ನ ನಡೆಸಲಾಗುತ್ತಿದೆ

ಫಿನ್‌ಲೆಂಡಿಗೆ ಅಮೆರಿಕದ ಎಚ್ಚರಿಕೆ

“ಅಮೆರಿಕದೊಂದಿಗೆ ಇನ್ನು ಮುಂದೆ ಮೈತ್ರಿಯಿಂದಿರಬೇಕಾದ ಇಷ್ಟವಿದ್ದರೆ ಫಿನ್‌ಲೆಂಡ್ ರಷ್ಯದಮೇಲೆ ಕೈಗೊಂಡಿರುವ ಮಿಲಿಟರಿ ಕಾರ್ಯಕ್ರಮವನ್ನು ಕೊನೆಗಾಣಿಸಬೇಕು. ಯಾವಾಗಲೂ ಅಮೆರಿಕವು ಫಿನ್‌ಲೆಂಡಿನೊಡನೆ ಮೈತ್ರಿಯಿಂದಿದ್ದುದರ ಫಲವಾಗಿ ಇದುವರೆಗೆ ಅಮೆರಿಕವು ಫಿನ್‌ಲೆಂಡಿನ ವಿಚಾರದಲ್ಲಿ ಯಾವ ತೀರ್ಮಾನಕ್ಕೂ ಬರಲಿಲ್ಲ. ಈಗಲೂ ಮತ್ತು ಮುಂದೆಯೂ ಫಿನ್‌ಲೆಂಡು ಅಮೆರಿಕದ ಮೈತ್ರಿಯನ್ನು ಉಳಿಸಿಕೊಳ್ಳಬೇಕೆಂಬ ಇಷ್ಟವಿದ್ದರೆ ರಷ್ಯದ ಮೇಲಿನ ಮಿಲಿಟರಿ ಕಾರ್ಯಕ್ರಮವನ್ನು ಅದು ತ್ಯಜಿಸಿಬಿಡಬೇಕು” ಎಂದು ಫಿನ್‌ಲೆಂಡ್ ಸರಕಾರಕ್ಕೆ ತಿಳಿಸುವಂತೆ ಹೆಲ್‌ಸಿಂಕಿಯಲ್ಲಿರುವ ಅಮೆರಿಕನ್ ರಾಯಭಾರಿಗೆ ಅಮೆರಿಕ ಸರ್ಕಾರವು ಸೂಚನೆ ಕೊಟ್ಟಿದೆ. ಫಿನ್‌ಲೆಂಡ್ ರಷ್ಯಾಗಳಿಗಿರುವ ಸಮಸ್ಯೆಗಳನ್ನೆಲ್ಲ ಶಾಂತರೀತಿಯಲ್ಲಿ ಬಿಡಿಸಬಹುದೆಂದು ಸಹ ಅಮೇರಿಕ ರಾಯಭಾರಿಗಳು ಫಿನ್‌ಲೆಂಡ್ ಸರ್ಕಾರಕ್ಕೆ ತಿಳಿಸಿರುವರು

ಎಂ. ಸ್ಟಾಲಿನ್ನರ ಭಾಷಣ

ಮಾಸ್ಕೋವಿನಲ್ಲಿ ನಡೆದ ರಷ್ಯದ 24 ನೆಯ ವರ್ಷದ ಕ್ರಾಂತಿದಿನಾಚರಣೆಯಲ್ಲಿ ರಷ್ಯದ ಸರ್ವಾಧಿಕಾರಿ ಎಂ ಸ್ಟಾಲಿನ್‌ರವರು ಸೈನಿಕರನ್ನುದ್ದೇಶಿಸಿ—‘ಸೈನಿಕರೆ, ತಾತ್ಕಾಲಿಕವಾದ ಪರಾಭವಗಳುಂಟಾದರೂ ಕೂಡ ನಮ್ಮ ಸೈನ್ಯಗಳು ಇಡೀ ರಣಕ್ಷೇತ್ರದಲ್ಲಿ ಶತ್ರುಗಳನ್ನೆಲ್ಲಾ ಹಿಂದಕ್ಕೆ ಅಟ್ಟುತ್ತಿವೆ. ನಮ್ಮ ಜನಶಕ್ತಿ ಅಕ್ಷಯವಾಗಿದೆ. ೨೩ ವರ್ಷಗಳಿಂದಲೂ ಎಂದೂ ಇಲ್ಲದಂತಹ ಉತ್ತಮ ಸ್ಥಿತಿಯಲ್ಲಿ ನಮ್ಮ ದೇಶವು ಇಂದಿದೆ. ಕೈಗಾರಿಕೆ, ಆಹಾರ ಮತ್ತು ಕಚ್ಚಾ ಸಾಮಾನುಗಳಲ್ಲಿ ನಮ್ಮ ದೇಶ ಬಹಳ ಉತ್ತಮವಾಗಿದೆ. ಜರ್ಮನ್ ಧಾಳಿಕಾರರಿಗೆ ವಿರುದ್ಧವಾಗಿ ನಿಂತಿರುವಂತಹ ರಾಷ್ಟ್ರಗಳು ನಮಗೆ ಮಿತ್ರರಾಗಿವೆ. ಜರ್ಮನಿಯ ಕಡೆ ಕಳೆದ ೪ ತಿಂಗಳಿನಲ್ಲಿ ಒಟ್ಟು ೪೫ ಲಕ್ಷಮಂದಿ ಸಾವುನೋವುಗಳಿಗೊಳಗಾಗಿದ್ದಾರೆ. ಜರ್ಮನಿಯಿಂದು ರಕ್ತಕಾರುತ್ತಿದೆ. ಆಕ್ರಮಿತದೇಶಗಳಲ್ಲಿಯೇ ಅಲ್ಲದೆ ಜರ್ಮನಿಯಲ್ಲಿಯೂ ದಂಗೆಯ ಮನೋಭಾವ ಬೆಳೆದುಬರುತ್ತಿದೆ. ಅಲ್ಲಿನ ಜನರಿಗೆ ಯುದ್ಧದ ಕೊನೆಯೇ ಕಾಣಬರುತ್ತಿಲ್ಲ. ಜರ್ಮನರು ತಮ್ಮ ಅಂತ್ಯ ಪ್ರಯತ್ನಗಳನ್ನು ನಡೆಸುತ್ತಿದ್ದಾರೆ. ಇನ್ನು ಕೆಲವು ತಿಂಗಳೊಳಗೆ, ಅಥವಾ ಅರ್ಧವರ್ಷದೊಳಗೆ ಅಥವಾ ಹೆಚ್ಚೆಂದರೆ ಇನ್ನು ಒಂದು ವರ್ಷದೊಳಗೆ ಜರ್ಮನಿಯು ಸಿಡಿಯುವದು” ಎಂದು ಘೋಷಿಸಿದರು

ಭಾರತದ ವಿಷಯದಲ್ಲಿ ಸ್ಟೇಟ್ಸ್‌ಮನ್ ಪತ್ರಿಕಾಭಿಪ್ರಾಯ

ಲಂಡನ್ನಿನ ನ್ಯೂ ಸ್ಟೇಟ್ಸ್‌ಮನ್ ಪತ್ರಿಕೆಯು ‘ಸಂಗ್ರಾಮವು ಭಾರತವನ್ನು ಸಮೀಪಿಸುತ್ತಿದೆ’ ಎಂಬ ವಿಷಯದಲ್ಲಿ ಬರೆಯುತ್ತ “ಸಂಗ್ರಾಮವು ಬರ್ಮಕ್ಕೂ ಭಾರತಕ್ಕೂ ಸಮೀಪವಾಗುತ್ತಿದೆ. ಕಾಕಸಸ್‌ನಲ್ಲೂ, ಕ್ಯಾಸ್ಪಿಯನ್ ಸಮುದ್ರದಲ್ಲೂ ರಷ್ಯನರು ಹೆಚ್ಚಿನ ಭಾಗಗಳನ್ನು ಬಿಟ್ಟುಕೊಡಬೇಕಾಗಿಬಂದರೆ ಆಗ ಭರತಖಂಡದ ಸ್ಥಾನವು ಬಹಳ ಪ್ರಾಮುಖ್ಯವೆನಿಸುತ್ತದೆ. ಬ್ರಿಟನ್ನು ಭಾರತವನ್ನು ಸಮಾಧಾನಪಡಿಸಿ ಒಂದು ಒಪ್ಪಂದಕ್ಕೆ ಬರಬೇಕು. ಸಾವಕಾಶಮಾಡುವದು ವಿಪತ್ಕಾರಕವಾದುದು. ಈಗಿನ ಸಂದಿಗ್ಧ ಕಾಲದಲ್ಲಿ ಭಾರತೀಯರು ತೆಪ್ಪಗೆ ಕುಳಿತಿರುವದು ಸಹಿಸಲಸಾಧ್ಯವೆಂಬ ಭಾವನೆಯು ತರುಣ ಜನರಲ್ಲಿ ಬೆಳೆಯುತ್ತಿದೆ.

ಇಂಗ್ಲೆಂಡಿನಲ್ಲಿ ವಾಸಿಸುತ್ತಿರುವ ಭಾರತೀಯರು ಸಮ್ಮೇಳನ ಸೇರಿ ಭರತಖಂಡವು ಆತ್ಮಗೌರವದಿಂದ ಸಂಗ್ರಾಮ ಪ್ರಯತ್ನಕ್ಕೆ ಸಹಾಯ ನೀಡಬಹುದಾದರೆ ಅದು ಹಾಗೆ ಮಾಡಬೇಕೆಂಬುದಾಗಿ ಸೂಚನೆ ಮಾಡಿದರು. ಇದೇ ಮನೋಭಾವನೆಯು ಭರತಖಂಡದಲ್ಲೂ ಬೆಳೆಯುತ್ತಿದೆಯೆಂಬ ನಂಬಿಕೆಯನ್ನು ಈ ಸಮ್ಮೇಳನವು ವ್ಯಕ್ತಪಡಿಸಿದೆ. ಇಂತಹ ಮನೋಭಾವನೆಗೆ ನಾವು ಬೆಂಬಲ ಕೊಟ್ಟು ಒಂದು ಒಪ್ಪಂದಕ್ಕೆ ಬರಬೇಕು. ರಾಜಕೀಯ ಬಂದಿಗಳನ್ನೆಲ್ಲ ಸಂಪೂರ್ಣ ಬಿಡುಗಡೆ ಮಾಡಬೇಕು. ನಾವು ನಮ್ಮ ದೊರೆಗಳಿಗಾಗಿ ಹೊಡೆದಾಡಿದರೆ ಭಾರತವು ಭಾರತೀಯರಿಗಾಗಿ ಕಾದುವಂತಾದರೆ, ಅದು ಸಂತೋಷದಿಂದ ಆ ಕಾರ್ಯವನ್ನೆಸಗುವುದು. ಸಂಗ್ರಾಮ ಸಮಯದಲ್ಲಿ ಆಡಳಿತ ವ್ಯವಸ್ಥೆಯನ್ನು ಬದಲಾಯಿಸಬೇಕೆಂದು ನಾವು ಸೂಚಿಸುವುದಿಲ್ಲ. ವೈಸರಾಯರ ಮಂತ್ರಿಮಂಡಲವು ರಾಷ್ಟ್ರೀಯ ಮಂತ್ರಿಮಂಡಲವಾಗುವಂತೆ ಮಾಡಿದರೆ ಎಲ್ಲವೂ ಸರಿಹೋಗುತ್ತದೆ. ಆದರೆ ಒಂದು ಭರವಸೆಯನ್ನು ಮಾತ್ರ ಕೊಡಬೇಕು. ಸಂಗ್ರಾಮಾನಂತರ ಈ ರಾಷ್ಟ್ರೀಯ ಮಂತ್ರಿಮಂಡಲವು ಬ್ರಿಟನ್ನಿನೊಡನೆ ಸಂಧಾನ ನಡೆಸಿ ಭಾರತಕ್ಕೆ ಬೇಕಾದ ಆಡಳಿತ ವ್ಯವಸ್ಥೆಯನ್ನು ನಿರ್ಧರಿಸಬೇಕೆಂದೂ, ಅದಕ್ಕೆ ಬ್ರಿಟನ್ನು ಒಪ್ಪಿಗೆ ಕೊಡಬೇಕೆಂದೂ ತಿಳಿಸಬೇಕು. ಈ ಷರತ್ತುಗಳ ಮೇಲೆ ಮಾತ್ರವೇ ನಾವು ಭಾರತದ ಪೂರ್ಣ ಸಹಕಾರವನ್ನು ನಿರೀಕ್ಷಿಸಬಹುದು,” ಎಂದು ತಿಳಿಸಿದೆ

ಸೊಲ್ಲಾಪುರದಲ್ಲಿ ಶ್ರೀರಂಭಾಪುರೀ ಜಗದ್ಗುರುಗಳವರ ಅಭೂತಪೂರ್ವಮಹೋತ್ಸವ.

ಸೊಲ್ಲಾಪುರದಲ್ಲಿ ಶ್ರೀ ರಂಭಾಪುರೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವವು ೮ನೆಯ ತಾರೀಖಿನದಿವಸ ಸಕಲ ರಾಜಬಿರುದಾವಳಿಗಳೊಡನೆ ವಿಶೇಷ ವೈಭವದಿಂದ ನೆರವೇರಿತು. ಸರಕಾರಿ ಅಧಿಕಾರಿಗಳು ಉತ್ಸವದ ವ್ಯವಸ್ಥೆಯನ್ನು ಸಮರ್ಪಕವಾಗಿ ಇಟ್ಟಿದ್ದರು. ಲಕ್ಷಾಂತರ ಜನರು ಸೇರಿದ್ದರು. ಮಹೋತ್ಸವವು ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಬಂದು ತಲ್ಪಿತು. ವೀರಶೈವ ಮಂಡಳಿಯವರು ವಿಜ್ಞಾಪನಪತ್ರಿಕೆಯನ್ನೊಪ್ಪಿಸಿದರು. ಜಗದ್ಗುರುಗಳವರು ಉತ್ತರವನ್ನಿತ್ತ ಮೇಲೆ ಜಗದಾಚಾರ್ಯರ ಜಯಘೋಷದೊಡನೆ ಸಮಾಪ್ತಿಗೊಂಡಿತು. ಉತ್ಸವಾದಿಗಳ ವಿವರವು ಮುಂದಿನ ವಾರಪತ್ರಿಕೆಯಲ್ಲಿ ಪ್ರಕಟಿಸಲ್ಪಡುವದು.

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಪ್ರಯಾಣ

ಪಂಡಿತರು ಸೊಲ್ಲಾಪುರದಲ್ಲಿ ನೆರವೇರುವ ಶ್ರೀ ರಂಭಾಪುರೀ ಜಗದ್ಗುರುಗಳವರ ಮಹೋತ್ಸವ ನಿಮಿತ್ತವಾಗಿ ೫ ನೆಯ ತಾರೀಖಿನ ದಿವಸ ಇಲ್ಲಿಂದ ಸೊಲ್ಲಾಪುರಕ್ಕೆ ಪ್ರಯಾಣ ಮಾಡಿದರು- ಮ್ಯಾ.

ಚಂದಾದಾರರಲ್ಲಿ ವಿಜ್ಞಾಪನೆ.

ಯುದ್ಧದ ದೆಸೆಯಿಂದ ಪತ್ರಿಕೆಯನ್ನು ಮುದ್ರಿಸುವ ಕಾಗದವು ಒಂದಕ್ಕೆ ನಾಲ್ಕರಷ್ಟು ಬೆಲೆಯಾಗಿರುವದಲ್ಲದೆ ದುಡ್ಡು ಕೊಟ್ಟರೂ ಸಹ ದೊರೆಯದಂತಾಗಿದೆ. ಕಾಗದದ ಕಷ್ಟವನ್ನು ಇಷ್ಟೇ ಎಂದು ವರ್ಣಿಸುವಂತಿಲ್ಲ. ಕಾಗದವು ದೊರೆಯುವವರೆಗೆ ಇನ್ನು ಮುಂದೆ ಪತ್ರಿಕೆಯು ೪ ಪುಟಗಳಲ್ಲಿಯೇ ಪ್ರಕಟಿಸಲ್ಪಡುವುದು.

ಮ್ಯಾ.

[೧ ನೆಯ ಪುಟದಿಂದ ಮುಂದುವರಿದುದು]

ಅನಂತರ ಐವತ್ತು ವರ್ಷದ ವರೆಗೂ ಯವ್ವನ ಸುಖವನ್ನು ಅನುಭವಿಸಲು ಗೊತ್ತುಮಾಡಿದ್ದರು ಆ ಸುಖದಲ್ಲಿಯೂ ಎಷ್ಟೋ ನಿಯಮಗಳನ್ನು ಗೊತ್ತು ಮಾಡಿ ಉತ್ತಮವಾದ ಕುಲವು ಸಂತಾನಕ್ಕೆ ಮಾತ್ರ ಅವಕಾಶವನ್ನು ಕೊಟ್ಟಿದ್ದರೇ ಹೊರತು, ಈಗಿನವರಂತೆ ವರ್ಷಕ್ಕೊಂದರಂತೆ ಅಲ್ಪಾಯುಗಳನ್ನು ಪಡೆದ ಆಕಸ್ಮಿಕವಾಗಿ ಒಂದು ವರ್ಷ ತಪ್ಪಿಹೋದರೆ ಮತ್ತೊಂದು ವರ್ಷಕ್ಕೆ ಅವಳಿ ಮಕ್ಕಳನ್ನಾದರೂ ಪಡೆದು ಕೃತಾರ್ಥರಾಗುವಂತಿರಲಿಲ್ಲ. ದಂಪತಿಗಳ ದೇಹದಾರ್ಢ್ಯಕ್ಕೆ ಯಾವ ಕುಂದೂ ಬರದಂತೆ ನಡೆದುಕೊಳ್ಳುತ್ತಿದ್ದರು ವ್ಯಭಿಚಾರವೆಂಬುದು ಅವರಲ್ಲಿ ವಿಷಪ್ರಾಯವಾಗಿದ್ದಿತು (ಈಗಿನವರಲ್ಲಿ ಕೆಲವರಿಗೆ ವ್ಯಭಿಚಾರವೆಂದರೆ ರಸಬಾಳೆ ಹಣ್ಣು, ಸಕ್ಕರೆ, ಹಾಲು ಇತ್ಯಾದಿಗಳಿಂದ ತಯಾರಿಸಿದ ರಸಾಯನವಾಗಿದೆ ಮನೆಯಲ್ಲಿ ಹೆಂಡತಿ ಇದ್ದರೂ ನಾಯಿಗಳಂತೆ ಸಂದಿ ಸಂದಿಗಳಲ್ಲಿ ತಿರುಗುವುದನ್ನು ನೋಡಿದರೆ ಆಶ್ಚರ್ಯವೂ ವಿಷಾದವೂ ಉಂಟಾಗುತ್ತವೆ) ಆಮೇಲೆ ಎಂದರೆ ಐವತ್ತು ವರ್ಷ ಕಳೆದ ಕೂಡಲೇ ಪ್ರಾಪಂಚಿಕ ಸುಖದಲ್ಲಿ ದೃಢವಾದ ಜಿಗುಪ್ಸೆಯನ್ನು ಹೊಂದಿ ತಪೋವನಕ್ಕೆ ಹೋಗಿ ಅಲ್ಲಿರುವ ತಾಪಸೋತ್ತಮರ ಸೇವೆಯಲ್ಲಿ ನಿರತರಾಗಿ ಇಪ್ಪತ್ತೈದು ವರ್ಷದ ವರೆಗೂ ಪ್ರಾಪಂಚಿಕ ಸಂಬಂಧವಾದ ನಡವಳಿಕೆ ಪ್ರೀತಿ ವಾತ್ಸಲ್ಯಗಳನ್ನು ತೊರೆದು ಭಗವತ್ಸಂಬಂಧದಲ್ಲಿಯೇ ತದೇಕಾಯತ್ತ ಚಿತ್ತರಾಗಿ ಮನೋದಾರ್ಢ್ಯವನ್ನು ಸಂಪಾದಿಸಿಕೊಳ್ಳುತ್ತಿದ್ದರು ಅನಂತರ ಶರೀರ ದೌರ್ಬಲ್ಯದಿಂದ ಅಶಕ್ತರಾಗಿದ್ದರೂ ಜ್ಞಾನಬಲದ ಶಕ್ತಿಯಿಂದ ತಪಸ್ಸನ್ನಾರಂಭಿಸಿ ಯೋಗಾಭ್ಯಾಸ ನಿರತರಾಗಿ ಭಗವತ್ಸಾಕ್ಷಾತ್ಕಾರಕ್ಕೆ ತಕ್ಕ ಸನ್ಯಾಸವನ್ನವಲಂಬಿಸಿ ಕಡೆಗೆ ಜಿಗುಪ್ಸೆಯುಂಟಾಗ ಸ್ವೇಚ್ಛಾಮರಣರಾಗಿ ಭಗವತ್ಪಾದಾರವಿಂದವನ್ನು ಅಪ್ಪುತ್ತಿದ್ದರು. ಇದೇ ಪ್ರಾಚೀನಾರ್ಯರ ಆಯುಷ್ಯದ ವಿವೇಕ ವಿಭಾಗವು

ಈಗಿನವರಾದ ನಾವು ಆಚರಿಸುವ ಆಚರಣೆಗಳು ಪ್ರಾಚೀನರ ಆಚರಣೆಗೆ ಅಪವಾದವಾಗಿದೆಯೆಂದು ಹಿಂದೆ ಹೇಳಿರುವೆವಷ್ಟೆ? ಅದರಂತೆ ನಾವು ಮಾಡುವ ವಿದ್ಯಾಭ್ಯಾಸದಲ್ಲಿ ಪರಸಂಬಂಧವಾದ ಜ್ಞಾನೋದಯದ ಅಂಕುರವೇ ಇಲ್ಲ ಇಲ್ಲವೆ ದೇಹಬಲವು ಪೂರ್ಣವಾಗುವವರೆಗೂ ನಾವು ಸಹಿಸದೆ ಯುವ್ವನಾಂಕುರದಲ್ಲಿಯೇ ಸಂತಾನವನ್ನು ಪಡೆಯುವ [illegible]ರಾಗಿ ಎಪ್ಪತ್ತು ವರ್ಷದ ಆಯುಷ್ಯವನ್ನು ಇಪ್ಪತ್ತಕ್ಕೇ ಇಳಿಸುವಂತೆ ಮಾಡಿಕೊಂಡಿದೆವು ಕೂಡಾ ನಾವು [illegible] ಸಂಸಾರ ಲಂಪಟರಾಗಿ ಪ್ರಾಣಹೋದರೂ ಬಿಡದ ಧನಪಿಶಾಚಿಗಳಂತೆ ಹಣಕ್ಕೋಸ್ಕರ ಕೋರ್ಟು ಕೂಗಿ ಹೆಂಡತಿ ಮಕ್ಕಳನ್ನು ಬಿಟ್ಟು ಹೋಗಲಾರದೆ ಪರಲೋಕದ ಭೀತಿಯನ್ನೇ ತೊರೆದು ಇಹಕ್ಕೇ ಒಲಿದವರಾಗಿರುವೆವು ಮನುಷ್ಯನ ವಿಷಯ ಸುಖವನ್ನು ಇಪ್ಪತ್ತೈದು ವರ್ಷಗಳಿಗಿಂತಲೂ ಹೆಚ್ಚಾಗಿ ಅಪೇಕ್ಷಿಸುವುದು ಪಶುವೃತ್ತಿಯೇ ಸರಿ. ಸಂಸಾರದ ಸುಖವನ್ನು ಐವತ್ತು ವರ್ಷಕ್ಕೆ ಮುಗಿಸಿ ತತ್ಸಂಬಂಧವಾದ ಆಶೆ ಮತ್ತು ಸ್ನೇಹಬಂಧನಗಳು ತೊಲಗಿಹೋಗುವ ವರೆಗೂ ದೈವಜ್ಞಾನವು ಪೂರ್ಣವಾಗುವುದಿಲ್ಲವೆಂಬ ಭಾವನೆಯಿಂದಲೇ ಇಪ್ಪತ್ತೈದು ವರ್ಷದ ವಾನಪ್ರಸ್ಥಾಶ್ರಮವನ್ನು ಹಿರಿಯರು ಅನುಸರಿಸುತ್ತಿದ್ದರೆಂಬುದನ್ನು ಚೆನ್ನಾಗಿ ದೃಢಪಡಿಸಿಕೊಳ್ಳಬೇಕು. ಹಾಗೆ ಮಾಡದೆ ೬೦-೭೦ ವರ್ಷಗಳಾದರೂ ತುಚ್ಛವಾದ ಹೀನ ವಿಷಯದ ಅಲ್ಪ ಸುಖಕ್ಕೆ ಬಾಲಕನ್ಯೆಯರ ಕೊರಳನ್ನು ಕುಯ್ಯುತ್ತಿರುವ ಮಹನೀಯರನ್ನು ನೋಡಿದರೆ ಘಾತುಕ ಪಶುವೃತ್ತಿಯೆಂದೇ ಭಾವಿಸಬೇಕಾಗುವದು ಇಪ್ಪತ್ತೈದು ವರ್ಷದ ವಾನಪ್ರಸ್ಥಾಶ್ರಮದಲ್ಲಿ ಲೌಕಿಕ ಸಂಬಂಧವಾದ ವಸ್ತು ದರ್ಶನವೂ ಜನಗೋಷ್ಠಿಯೂ ಆಶೋತ್ತೇಜಕ ವಸ್ತುಗಳೂ ಕಣ್ಮರೆಯಾಗಿ ಕೇವಲ ಸಾತ್ವಿಕ ವೃತ್ತಿಯು ನೆಲೆಗೊಂಡು ಅಲ್ಲಿದ್ದ ತಪಸ್ವಿಗಳ ಉಪದೇಶಬಲದಿಂದ ಮನಸ್ಸು ಅತ್ಯಂತ ನಿರ್ಮಲವಾಗುತ್ತಿದ್ದುದರಿಂದಲೇ ಅವರು ಅಂತ್ಯಕಾಲದಲ್ಲಿ ಮಹಾಯೋಗಬಲದಿಂದ ಚಿತ್ತೈಕಾಗ್ರತೆಯನ್ನು ಪಡೆಯುತ್ತಿದ್ದರು ೭೫ ವರ್ಷದ ಮೇಲೆ ಅನುಭವಿಸುತ್ತಿದ್ದ ಸನ್ಯಾಸವು ಅಂತರಂಗಿಕವಾದ ಮನೋವ್ಯಾಪಾರವೇ ಹೊರತು ಬಹಿರಿಂದ್ರಿಯ ಸಂಬಂಧಿಯಾದ ವ್ಯಾಪಾರವೇ ಆಗಿರಲಿಲ್ಲ ಮುಖ್ಯವಾಗಿ ನಾವು ಹೆಸರಿಗೆ ಮಾತ್ರ ಬ್ರಹ್ಮಚರ್ಯವನ್ನೂ ಅಕ್ರಮ ನಡತೆಗಳಿಂದ ಗೃಹಸ್ಥಾಶ್ರಮವನ್ನೂ ಅನುಸರಿಸಿ ವಾನಪ್ರಸ್ಥ ಸನ್ಯಾಸ ಭಾಗಗಳನ್ನು ನಿಶ್ಶೇಷವಾಗಿ ತೊರೆದುಬಿಟ್ಟಿರುವೆವು ಒಂದು ಬಗೆಯಿಂದ ಯೋಚಿಸಿದರೆ ಇದು ನ್ಯಾಯವೆಂದು ತೋರುವುದು ಏಕೆಂದರೆ, ಕೊನೆಯ ೫೦ ವರ್ಷಗಳು ನಮ್ಮ ಜನ್ಮಕ್ಕೆ ಇಲ್ಲದಂತೆ ನಮ್ಮ ಆಯುಷ್ಯವೇ ೫೦ಕ್ಕೆ ಕೊನೆಗಾಣುವ ಸಂಭವವಿದೆ ಆದುದರಿಂದ ದೈವವಿಷಯಿಕವಾದ ಜ್ಞಾನಪ್ರವರ್ತನೆಗೆ ನಮಗೆ ಅವಕಾಶವಿಲ್ಲದೇ ಇರುವುದೂ ಸಹಜವಾಗಿದೆ ಆದುದರಿಂದ ನಾವು ಎಲ್ಲಾ ವಿಷಯದಲ್ಲಿಯೂ ಮೃಗಗಳಂತಿರುವುದು ಸಹಜವಾಗಿದೆ. ಹೇಗೆಂದರೆ ಆಹಾರ, ನಿದ್ರೆ, ಭಯ, ಸಂತಾನವನ್ನು ಪಡೆಯುವಿಕೆ, ಇವು ಮಾತ್ರವೇ ನಾವು ಅತ್ಯಾಸಕ್ತಿಯಿಂದ ಆಚರಿಸುವ ನಡೆವಳಿಕೆಗಳಲ್ಲಿ ಸೇರಿವೆ ಮೃಗಗಳು ಆಹಾರಕ್ಕೋಸ್ಕರ ಹೇಗೆ ತಮ್ಮ ಚಟುವಟಿಕೆಯನ್ನೂ ಬುದ್ಧಿಯನ್ನೂ ಉಪಯೋಗಿಸುವುವೋ ಅದರಂತೆ ನಾವೂ ಆಹಾರಾರ್ಥವಾಗಿ ಪ್ರಯತ್ನಿಸುತ್ತಿರುವೆವು ಆದರೆ ಮೃಗಗಳು ಮಾತನಾಡಲಾರವು ನಾವು ತಲೆಯೆಲ್ಲಾ ಹರಟುತ್ತಿರುವೆವು ಮೃಗಗಳು ತಿಳಿದು ತಿಳಿದೂ ಪ್ರಯತ್ನಪೂರ್ವಕವಾಗಿ ಪಾಪಕೃತ್ಯಗಳನ್ನಾಚರಿಸದೆ ಸ್ವಭಾವವಾದ ಬುದ್ಧಿಯಿಂದ ತಮ್ಮ ಜನ್ಮವನ್ನು ಕಳೆದು ಉನ್ನತಿಗೇರುವವು ನಾವು ತಿಳಿದು ತಿಳಿದೂ ಉದ್ದೇಶಪೂರ್ವಕವಾಗಿ ಪಾಪಕೃತ್ಯಗಳನ್ನೇ ಮಾಡಿ ದುರ್ಲಭವಾದ ನರ ಜನ್ಮವನ್ನೇ ವ್ಯರ್ಥಮಾಡಿಕೊಂಡು ಅಧೋಗತಿಗಿಳಿಯುತ್ತಿರುವೆವು ಆದುದರಿಂದ ವಿವೇಕಿಗಳಾದವರು ಈಗಲಾದರೂ ಚೆನ್ನಾಗಿ ವಿಚಾರಮಾಡಿ ಬಾಲ್ಯದಿಂದಲೂ ಲೌಕಿಕ ವಿದ್ಯಾಭ್ಯಾಸದೊಡನೆ ದೈವಜ್ಞಾನವನ್ನು ಅಭ್ಯಾಸಿಸಿ ಇಂದ್ರಿಯನಿಗ್ರಹದಿಂದ ೫೦-೫೫ ವರ್ಷದ ವರೆಗೂ ಸಂಸಾರದಲ್ಲಿ ನಿರತರಾಗಿ ಅನಂತರ ಕಾಡಿಗೆ ಹೋಗದೇ ಇದ್ದರೂ ಲೌಕಿಕಗೋಷ್ಠಿಯನ್ನು ವರ್ಜಿಸಿ ದೈವಸಂಬಂಧದಲ್ಲಿಯೇ ಕಾಲವನ್ನು ಕಳೆದು ತಮ್ಮ ದೇಹವನ್ನು ಕಾಡಿಗೀಡುಮಾಡುವುದು ಒಳ್ಳೆಯದೆಂದು ತೋರುವುದು ನಮ್ಮ ಯೌವನವಾಗಲೀ ಧನವಾಗಲೀ ಗೃಹಕ್ಷೇತ್ರಗಳಾಗಲೀ ಅಧಿಕಾರವಾಗಲೀ ಅಲ್ಪಕಾಲ ಶೋಭಿಸಿ ಅಲ್ಪಸುಖವನ್ನು ಕೊಡತಕ್ಕವುಗಳಾಗಿವೆ ಇದಕ್ಕೋಸುಗವೇ ನಮ್ಮ ಬುದ್ಧಿಬಲವನ್ನೆಲ್ಲಾ ಹಾಳುಮಾಡಿಬಿಟ್ಟರೆ ಮನುಷ್ಯತ್ವವು ಸಾರ್ಥಕವಾಗುವದಿಲ್ಲ ಯಾವುದು ಆಚಂದ್ರಾರ್ಕಸ್ಥಾಯಿಯಾದ ನಿತ್ಯಸುಖವನ್ನು ಕೊಟ್ಟು ದೈವಪ್ರೀತಿಗೆ ಪಾತ್ರವಾಗುವಂತೆ ಮಾಡುವುದೋ ಅಂತಹ ವಿವೇಕವನ್ನು ಕ್ಷುದ್ರಕಾರ್ಯಗಳಿಗೆ ವಿನಿಯೋಗಿಸತಕ್ಕುದು ಬಹು ಹೇಯವಾದ ಕಾರ್ಯವೇ ಸರಿ. ದೇವರು ತಾನಾಗಿ ಅನುಗ್ರಹಿಸಿರುವ ಬುದ್ಧಿಯನ್ನು ಶಾಶ್ವತ ಸುಖದ ಸನ್ಮಾರ್ಗದಲ್ಲಿ ವಿನಿಯೋಗಿಸಿ ನಾವೆಲ್ಲರೂ ಅವನ ಪ್ರೀತಿಗೆ ಪಾತ್ರರಾಗತಕ್ಕುದು ನ್ಯಾಯವಾದ ಕೃತಜ್ಞತೆಯಾಗಿರುವುದು. ಹಾಗಿಲ್ಲದಿದ್ದರೆ ನಾವು ಆತ್ಮದ್ರೋಹಿಗಳೂ ದೈವದ್ರೋಹಿಗಳೂ ಆಗಿ ನರಕಭಾಜನರಾಗುವುದರಲ್ಲಿ ಸಂದೇಹವಿಲ್ಲ

ವಾಚಕ ರಸಿಕರೇ! ಆರ್ಯಾಭಿಧಾನದಿಂದ ಆರಾಜಿತರಾದ ನಾವೇ ಇಂತಹ ದುರವಸ್ಥೆಗೆ ಗುರಿಯಾದ ಮೇಲೆ ಇನ್ನು ಸತ್ಯ ನಾಶವಾಗುವ ಕಾಲವು ಸನ್ನಿಹಿತವಾಗದಿರುವುದೆ? ಅಯ್ಯೋ! ಮಹಾಶಯರೆ! ನಾವು ಮನುಷ್ಯರಾಗುವದೆಂದಿಗೆ? ಪಶುಪ್ರಕೃತಿಯುಳ್ಳ ಮನುಜರಿಗೆ ಪಶುಪ್ರಾಯರಾದ ಪುತ್ರರೇ ಹುಟ್ಟುವುದು ಸ್ವಭಾವವಲ್ಲವೆ? ಆಹಾ! ಎಂತಹ ಶೋಚನೀಯವಾದವಸ್ಥೆ! ಮನುಷ್ಯಾಕಾರವುಳ್ಳವರಾಗಿದ್ದರೂ ಪಶುಪ್ರಕೃತಿಯು ದಿನ[illegible]ಯಿಂದ [illegible]ಸಿಕೊಳ್ಳದಂತಾಯಿತಲ್ಲ! ಪ್ರಕೃತದಲ್ಲಿ "ತೃಣಂ ನಖಾದನ್ನಪಿ ಜೀವಮಾನಃ ತದ್ಭಾಗಧೇಯಂ ಪರಮಂ ಪಶೂನಾಂ" ಎಂಬಂತೆ ನಾವು ಹುಲ್ಲು ಮೇಯದೆ ಜೀವಿಸುತ್ತಿರುವುದು ಪಶುಗಳ ಭಾಗ್ಯವಲ್ಲವೆ!

ವೀರಸುಧೀಃ ಸವಿದ್ಯಶ್ಚ ಪುರುಷಃ ಪುರುಷಾರ್ಥವಾನ್ ।
ತದನ್ಯೇ ಪುರುಷಾಕಾರಾಃ ಪಶವಃ ಪುಚ್ಛವರ್ಜಿತಾಃ ॥

ಶೌರ್ಯವೂ, ಸುಬುದ್ಧಿಯೂ, ಸುವಿದ್ಯೆಯೂ, ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥಗಳೂ ಉಳ್ಳ ಪುರುಷನೇ ಪುರುಷನು ಅನ್ಯರು ಪುಚ್ಛವಿಲ್ಲದ ಪುರುಷಾಕಾರವುಳ್ಳ ಪಶುಗಳೆಂದು ನಮ್ಮ ಶಾಸ್ತ್ರಗಳೂ ಸಹ ಘಂಟಾಘೋಷವಾಗಿ ಧ್ವನಿಮಾಡುತ್ತಿರುವುವಲ್ಲ!

ವಾಚಕರೇ! ಮುಂದೇನು ಗತಿಯೆಂದು ಭಯಪಡಬೇಡಿರಿ. ನಮ್ಮ ತ್ರಿಕಾಲಜ್ಞಾನಿಗಳಾದ ಪೂರ್ವಜನರು ನಮ್ಮ ಹಿತಾರ್ಥವಾಗಿಯೇ ರಹಸ್ಯೋಪದೇಶವನ್ನು ಬರೆದಿಟ್ಟಿರುವರು. ಅದಾವುದೆಂದರೆ :—

ಮೋಕ್ಷದ್ವಾರೇ ದ್ವಾರಪಾಲಾಶ್ಚತ್ವಾರಃ ಪರಿಕೀರ್ತಿತಾಃ ।
ಶಮೋ ವಿಚಾರಃ ಸಂತೋಷಶ್ಚತುರ್ಥಃ ಸಾಧುಸಂಗಮಃ ॥

"ಶಾಂತಿ, ವಿವೇಕ, ಸಂತೋಷ, ಸಾಧುಸಂಗ ಎಂಬೀ ನಾಲ್ಕು ಜನ ದ್ವಾರಪಾಲಕರು ಮೋಕ್ಷದ್ವಾರದಲ್ಲಿ ಕಾದಿರುವರು" ಎಂಬುದೇ. ವಾಚಕರೆ, ಈ ನಾಲ್ಕು ಬಗೆಯಾದ ಉತ್ತಮ ಗುಣಗಳನ್ನು ಹೊಂದಿದ ವಿನಾ ಜನ್ಮ ಸಾರ್ಥಕವಾಗದೆಂಬುದೇ ಇದರ ಮುಖ್ಯ ತತ್ವವಲ್ಲವೆ! ಆದುದರಿಂದಲೇ.—

ಸಂತೋಷಃ ಪರಮೋ ಲಾಭಃ ಸತ್ಸಂಗಃ ಪರಮಾ ಗತಿಃ ।
ವಿಚಾರಃ ಪರಮಂ ಜ್ಞಾನಂ ಶಮೋ ಹಿ ಪರಮಂ ಸುಖಂ ॥

"ಸಂತೋಷವೇ ಉತ್ಕೃಷ್ಟವಾದ ಲಾಭವು; ಸತ್ಸಂಗವೇ ಅಮೋಘವಾದ ಗತಿಯು; ವಿಚಾರವೇ ಪವಿತ್ರವಾದ ಜ್ಞಾನವು; ಶಾಂತಿಯೇ ಉತ್ತಮವಾದ ಸುಖವು" ಎಂದು ಹೇಳಿರುವರು ಆದಕಾರಣ ಮನುಷ್ಯಜನ್ಮಸಾಫಲ್ಯಕ್ಕೆ ಇವುಗಳನ್ನು ಹೊಂದಬೇಕಾದುದಾವಶ್ಯಕವೆಂದು ಹೇಳಿದಹಾಗಾಯಿತು.

ಆದುದರಿಂದ ಮಹಾಶಯರೆ! ಇನ್ನು ಮೇಲೆ ಮೌನವು ಮಾನ್ಯವಾದುದಲ್ಲ ಸಾವಕಾಶವು ಸಲ್ಲದು. ಈಗಲಾದರೂ ನಮ್ಮ ಪ್ರಾಚೀನರು ನಮಗೋಸುಗವಾಗಿಯೇ ಅನುಗ್ರಹಿಸಿರುವ ಅಧ್ಯಾತ್ಮಶಾಸ್ತ್ರಗಳ ಕಡೆಗೆ ದೃಷ್ಟಿಯನ್ನಿಡಿರಿ. ಕರ್ತವ್ಯವನ್ನು ಕೈಗೊಳ್ಳಿರಿ. "ಉತ್ತಿಷ್ಠತ! ಜಾಗೃತ!!" ಎಂದು ನಿಮ್ಮ ಸಹೋದರರಿಗೆಲ್ಲ ಸಿಂಹನಾದದಿಂದ ಸಾರಿಹೇಳಿರಿ.

॥ ಯಾದೃಶೀ ಭಾವನಾಯತ್ರ ಸಿದ್ಧಿರ್ಭವತಿ ತಾದೃಶೀ ॥

ಕಾಕಸ್ ಕ್ಷೇತ್ರಕ್ಕೆ ಇನ್ನೂ ಭಯವಿಲ್ಲ

ಕ್ರಿಮಿಯಾದಲ್ಲಿ ನಾಜಿಗಳು ಮುಂದುವರಿದರೆ ಕಪ್ಪುಕಡಲಿನಲ್ಲಿರುವ ರಷ್ಯನ್ ನೌಕಾಬಲಕ್ಕೆ ಉಗ್ರ ವಿಪತ್ತುಂಟಾಗಬಹುದಾದರೂ ಅದು ಕೆಲಸ ಮಾಡುತ್ತಿರುವವರೆಗೆ ಕಾಕಸಸ್ ಕ್ಷೇತ್ರಕ್ಕೆ ಭಯವೇನೂ ಇಲ್ಲವೆಂದು ಮಿಲಿಟರಿ ಕ್ಷೇತ್ರಗಳವರು ಅಭಿಪ್ರಾಯಪಡುತ್ತಾರೆ ರಷ್ಯ ನೌಕಾಬಲವು ಸೆಬಾಸ್ತಪೂಲಿನಿಂದ ಕಾಕಸಸ್ ತೀರದಲ್ಲಿರುವ ಬಂದರುಗಳಿಗೆ ಹೊರಟುಹೋಗಬೇಕಾಗಬಹುದು ಆದರೆ ಅದು ನಾಶಮಾಡಲ್ಪಡದೆ ಇರುವವರೆಗೆ ನಾಜಿಗಳು ಸಮುದ್ರದ ಮೂಲಕ ಕಾಕಸಸ್ ಮುತ್ತಲು ಸಾಧ್ಯವಾಗಲಾರದು ರಷ್ಯನ್ ನೌಕಾಬಲವನ್ನು ಧ್ವಂಸಮಾಡಬೇಕಾದರೆ ಎರಡು ಮಾರ್ಗಗಳಿವೆ. ಕಪ್ಪುಕಡಲಿನ ಬಂದರುಗಳನ್ನೆಲ್ಲಾ ಹಿಡಿಯುವುದು ಒಂದು, ಕಪ್ಪು ಕಡಲಿಗೆ ನೌಕಾಬಲವನ್ನು ಕರತರುವುದು ಎರಡನೆಯದು ಎರಡನೆಯ ಮಾರ್ಗವನ್ನು ನಾಜಿಗಳು ಹಿಡಿಯುವುದಾದರೆ ಆಗ ತುರ್ಕಿಯು ತೆಪ್ಪಗೆ ಕೂರಲು ಸಾಧ್ಯವಿಲ್ಲವಾಗುತ್ತದೆ. ಡೇರಿಯಲ್ ಕಣಿವೆಯ ಮೂಲಕ ಕಾಕಸಸ್ ಕ್ಷೇತ್ರಕ್ಕೆ ಮುತ್ತಿಗೆ ಹಾಕುವುದು ಅಸಂಭವವೆಂದು ನಿಪುಣರು ಹೇಳುತ್ತಾರೆ. ಅದು ಸಮುದ್ರ ತೀರದಲ್ಲಿದ್ದು ಬಹಳ ಇಕ್ಕಟ್ಟಾಗಿದೆ ಅದನ್ನು ಸುಲಭವಾಗಿ ರಕ್ಷಿಸಿಕೊಳ್ಳಬಹುದು. ಅಲ್ಲದೆ ರಷ್ಯದ ನೌಕೆಗಳು ಸುಲಭವಾಗಿ ಗುಂಡುಹಾರಿಸಬಹುದು. ಜರ್ಮನರು ರೋಸ್ಟೋವ್ ಮುಟ್ಟಿದರೆಂದರೆ, ಕೊಂಚ ಕೈ ನಿಧಾನಿಸುವರೆಂದೂ ತಮ್ಮ ಸರಬರಾಜು ವ್ಯವಸ್ಥೆಯನ್ನು ಸರಿಪಡಿಸಿಕೊಳ್ಳುವವರೆಗೆ ಮುಂದೆ ಹೋಗುವುದಿಲ್ಲವೆಂದೂ ಹೇಳಲಾಗಿದೆ. ಕಾಕಸಸ್ ಭೂಮಿಯು ಪರ್ವತಶ್ರೇಣಿಗಳಿಂದ ಕೂಡಿರುವುದರಿಂದ ಸೈನಿಕರು ಅಪಾರ ಕಷ್ಟಗಳನ್ನು ಅನುಭವಿಸಬೇಕಾಗಿದೆ ಆದ್ದರಿಂದ ಅವರಿಗೆ ಸಾಕಾದಷ್ಟು ವಿರಾಮ ಅಗತ್ಯ ಈ ದೃಷ್ಟಿಯಿಂದ ನೋಡಿದರೆ ಮುಂದಿನ ಮೇ ವರೆಗೆ ಕಾಕಸಸ್ ಮುತ್ತಿಗೆಯು ಮುಂದುವರಿಸಲ್ಪಡಬಹುದು. ಕಾಕಸಸ್ ಗೆಲ್ಲಬೇಕಾದರೆ ನಾಜಿಗಳು ಕ್ಯಾಸ್ಪಿಯನ್ ತೀರವನ್ನು ಕೂಡ ಗೆಲ್ಲಬೇಕೆಂದು ಹೇಳಲಾಗಿದೆ.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ [illegible]ಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಸಕಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ. ೧೧ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೩ ರೂ ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೭ನೇ ನವಂಬರ್ ೧೯೪೧ [ಸಂಚಿಕೆ ೨೯

ಬ್ರಿಟಿಷ್ ಮಹಾಪ್ರಧಾನರ ಭಾಷಣ.

ಜಪಾನಿಗೆ ಎಚ್ಚರಿಕೆ

ಬ್ರಿಟಿಷ್ ಮುಖ್ಯ ಮಂತ್ರಿ ಮಿ|| ವಿನ್ಸ್ಟನ್ ಚರ್ಚಿಲ್ ರವರು ಯುದ್ಧದ ಪರಿಸ್ಥಿತಿಯನ್ನು ವಿಮರ್ಶಿಸಿ ಈ ದಿವಸ ಮ್ಯಾನ್ಷನ್ ಹೌಸಿನಲ್ಲಿ ಭಾಷಣಮಾಡುತ್ತ-" ಪೋಲೆಂಡಿನ ಮೇಲೆ ಜರ್ಮನಿಯು ದಂಡಯಾತ್ರೆ ನಡೆಸಿದುದರಿಂದ ಆರಂಭವಾದ ಯುದ್ಧವು ಈಗ ಇಡೀ ಯೂರೋಪ್ ಖಂಡವನ್ನು ಆವರಿಸಿರುವುದಲ್ಲದೆ, ಈಶಾನ್ಯ ಆಫ್ರಿಕಾ ಮತ್ತು ಏಷ್ಯದ ಬಹುಭಾಗವನ್ನೂ ಆವರಿಸಿದೆ. ಸಂಯುಕ್ತ ಸ್ಥಾನದ ನೌಕಾಪಡೆಯು ಬಹುಭಾಗವು ಶತ್ರುಗಳ ಮೇಲಿನ ಕಾರ್ಯಾಚರಣೆಯಲ್ಲಿ ತೊಡಗಿವೆ. ಮೆಡಿಟರೇನಿಯನ್ ಸಮುದ್ರದಲ್ಲಿ ಬ್ರಿಟಿಷ್ ಹಡಗುಗಳ ಓಡಾಟಗಳಿವೆ. ಇಟಲಿಯ ನೌಕಾಪಡೆಯ ನೈತಿಕ ಶಕ್ತಿಯೇ ಕೆಟ್ಟಿದೆ. ಅಲ್ಲಿ ಬ್ರಿಟಿಷ್ ಸರಬರಾಜು ಮಾರ್ಗಗಳು ಏನೊಂದೂ ಅಪೋಹವಿಲ್ಲದೆ ನಡೆಯುತ್ತಿರುತ್ತವೆ. ಇವೆಲ್ಲಾ ನೋಡಿದರೆ ಅಲ್ಲಿ ನಾವೇ ಒಡೆಯರಾಗಿದ್ದೇವೆಂಬುದು ವ್ಯಕ್ತವಾಗುವುದು. ಹಿಂದೂ ಮಹಾಸಾಗರದಲ್ಲಿಯೂ, ಪೆಸಿಫಿಕ್ ಮಹಾಸಾಗರದಲ್ಲಿಯೂ ಅವಶ್ಯಕವೆಂದಾಗಬಹುದಾದಂತಹ ನೌಕಾಪಡೆಗಳನ್ನು ಒದಗಿಸಲು ನಮಗೆ ಈಗ ಸಾಕಷ್ಟು ಶಕ್ತಿ ಇದೆ. " ಜರ್ಮನ್ ವೈಮಾನಿಕ ಸೈನ್ಯದ ಸಂಖ್ಯೆಯಲ್ಲಿಯೂ ಮತ್ತು ಪ್ರಮಾಣದಲ್ಲಿಯೂ ಸರಿಸಮಾನವಾದಂತಹ ವಿಮಾನ ಸೈನ್ಯ ನಮಗಿದೆ "ನಾವು ಆಸ್ಟ್ರೇಲಿಯಾ, ನ್ಯೂಜೀಲೆಂಡಿನ ಪ್ರಜೆಗಳಿಗೂ ಭಾರತೀಯ ಪ್ರಜೆಗಳಿಗೂ ಭ್ರಾತೃಭಾವದ ಮತ್ತು ಮಾತೃಭಾವದ ದೀರ್ಘಹಸ್ತವನ್ನು ನೀಡುತ್ತೇವೆ" ಪೆಸಿಫಿಕ್ ಪ್ರದೇಶದಲ್ಲಿ ಶಾಂತಿಯನ್ನು ಕಾಪಾಡಲು ಸಂಯುಕ್ತ ಸಂಸ್ಥಾನವು ನಡೆಸುತ್ತಿರುವ ಪ್ರಯತ್ನದಲ್ಲಿ ಅವು ಜಯಪ್ರದವಾಗುವುವೋ ಇಲ್ಲವೋ ನಾವು ಹೇಳಲಾರೆವು ಆದರೆ ಈ ಸಂದರ್ಭದಲ್ಲಿ ನಾನು ಒಂದಂಶವನ್ನು ಹೇಳಬೇಕೆಂದು ಇಚ್ಛಿಸುತ್ತೇನೆ. ಅದನ್ನು ಹೇಳಬೇಕಾದುದು ನನ್ನ ಕರ್ತವ್ಯವೂ ಆಗಿದೆ. ಅದೇನೆಂದರೆ, ಜಪಾನಿನೊಡನೆ ಸಂಯುಕ್ತಸಂಸ್ಥಾನವು ಯುದ್ಧದಲ್ಲಿ ತೊಡಗಬೇಕಾಗಿ ಬಂದಲ್ಲಿ ಆಗ್ಗೆ ಒಂದು ಗಂಟೆಯೊಳಗೆ ಬ್ರಿಟನ್ನೂ ಕೂಡ ಯುದ್ಧಕ್ಕೆ ಇಳಿಯುವುದು. ಪ್ರಪಂಚದ ಮಾನವ ಜನಾಂಗದಲ್ಲಿ ನಾಲ್ಕನೇ ಮೂರುಭಾಗವನ್ನು ಹೊಂದಿರುವಂತಹ ರಾಷ್ಟ್ರಗಳ ಜೊತೆಗೆ ಕದನ ನಡೆಸಬೇಕಾಗಿ ಬರುವಂತಹ ಪ್ರಪಂಚ ಯುದ್ಧದ ಈ ಹೋರಾಟದಲ್ಲಿ ಜಪಾನು ಅನಾವಶ್ಯಕವಾಗಿ ಇಳಿದರೆ ಅದು ಜಪಾನಿಗೆ ಕೇವಲ ಅಪಾಯಕರವಾದ ಸಾಹಸವೇ ಆಗುವುದು ಆಧುನಿಕ ಯುದ್ಧದಲ್ಲಿ ಉಕ್ಕಿಗೆ ಪ್ರಾಧಾನ್ಯತೆ ಕೊಡುವುದಾದರೆ ಆಗ್ಗೆ ಜಪಾನಿಗೆ ಯುದ್ಧವು ಬಹಳ ಅಪಾಯಕರವಾಗುವುದು. ಏಕೆಂದರೆ ಜಪಾನಿನ ಉಕ್ಕಿನ ತಯಾರಿಕೆಯು ವರ್ಷಕ್ಕೆ ೭೦ ಲಕ್ಷ ಟನ್ನುಗಳಷ್ಟು ಇದೆ. ಆದರೆ ಸಂಯುಕ್ತ ಸಂಸ್ಥಾನದಲ್ಲಿ ಉಕ್ಕಿನ ತಯಾರಿಕೆ ವರ್ಷಕ್ಕೆ ೯೦೦ ಲಕ್ಷ ಟನ್ನುಗಳಷ್ಟಿದೆ ಅಷ್ಟೇ ಅಲ್ಲದೆ ಬ್ರಿಟಿಷ್ ಸಾಮ್ರಾಜ್ಯದಲ್ಲಿಯೂ ಉಕ್ಕಿನ ತಯಾರಿಕೆ ಏರಿದೆ.

" ಜಪಾನಿನ ವಿವೇಕಿಗಳಾದ ರಾಜಕಾರಣ ಪಟುಗಳ ಅಭಿಪ್ರಾಯದಂತೆ ಪೆಸಿಫಿಕ್‌ನಲ್ಲಿ ಶಾಂತಿಯನ್ನು ರಕ್ಷಿಸಬೇಕೆಂದು ನಾನು ಆಶಿಸುತ್ತೇನೆ. ಆದರೆ ದೂರಪ್ರಾಚ್ಯದಲ್ಲಿ ಬ್ರಿಟಿಷ್ ಹಿತಗಳನ್ನು ರಕ್ಷಿಸುವುದಕ್ಕೂ, ಇತರ ಸಮಾನವಾದಂತಹ ಹಕ್ಕುಗಳ ರಕ್ಷಣೆಗೂ ಎಲ್ಲ ರೀತಿಯಲ್ಲಿಯೂ ಸಿದ್ಧತೆ ಆಗಿದೆ. ಮತ್ತು ಆಗುತ್ತಲಿದೆ. ಬರ್ಲಿನ್ನಿನಿಂದ ಕುತಂತ್ರದ ಪ್ರಯತ್ನವು ನಡೆಯುವುದೆಂದು ಅನೇಕ ಕಡೆಗಳಿಂದ ನಮಗೆ ಗೊತ್ತಾಗಿದೆ. ತಾಟಸ್ಥ್ಯ ರಾಷ್ಟ್ರಗಳಲ್ಲಿ ಇದಕ್ಕೆ ಸಂಬಂಧಿಸಿದಂತೆ ಎಲ್ಲ ಸೂಚನೆಗಳೂ ಚಿಹ್ನೆಗಳೂ ಕಾಣಬರುತ್ತಿವೆ. ಸ್ವೇಚ್ಛಾಪ್ರವೃತ್ತಿಯಿಂದಲೂ ದುಷ್ಟರೀತಿಯಿಂದಲೂ ಪಡೆದ ಕೊಳ್ಳೆಗಳನ್ನು ರಕ್ಷಿಸಿಕೊಳ್ಳಬೇಕೆಂದು ಈ ಅಪರಾಧಿಗಳು ಆಲೋಚಿಸುತ್ತಿದ್ದಾರೆ. ಆದರೆ ನಾನು ಮಾತ್ರ ಸ್ಪಷ್ಟವಾಗಿ ತಿಳಿಸುತ್ತೇನೆ. ನಮ್ಮ ಕಡೆ ಯಾರಾದರೂ ಇದ್ದರೂ ಸರಿಯೇ ಅಥವಾ ನಾವು ಏಕಾಂಗಿಯಾಗಿ ನಿಲ್ಲಬೇಕಾದರೂ ಸರಿಯೇ, ನಾವು ಎಷ್ಟು ದೀರ್ಘಕಾಲ ಕಷ್ಟಪಡಬೇಕಾದರೂ ಸರಿಯೆ ಅದು ಎಷ್ಟೇ ಕಡುಕಷ್ಟವಾದರೂ ಸರಿಯೆ, ಬ್ರಿಟಿಷ್ ರಾಷ್ಟ್ರವೂ ಆ ರಾಷ್ಟ್ರದ ಮೇಲಾಧಿಕಾರದಲ್ಲಿರುವ ಬ್ರಿಟಿಷ್ ಸರಕಾರವೂ ಮತ್ತು ಡೊಮಿನಿಯನ್ ಸರಕಾರಗಳೂ ಹಿಟ್ಲರರೊಡನಾಗಲೀ ಅಥವಾ ನಾಜಿ ಆಡಳಿತದ ಪರವಾಗಿರುವ ಜರ್ಮನಿಯ ಮತ್ತಾವ ಸಂಗತದೊಡನಾಗಲೀ ಯಾವುದೇ ರೀತಿಯ ಒಪ್ಪಂದಕ್ಕೆ ಬರುವುದಿಲ್ಲ. ನಮ್ಮ ಮಿತ್ರರಾಷ್ಟ್ರವಾಗಿರುವ ರಷ್ಯವಾಗಲೀ ಅಥವಾ ಸಂಯುಕ್ತ ಸಂಸ್ಥಾನದ ಸರಕಾರವಾಗಲೀ ಅಥವಾ ಅಲ್ಲಿನ ಪ್ರಜಾ ಸಮುದಾಯವಾಗಲಿ ನಮಗೆ ಬೆಂಬಲಕೊಟ್ಟರೂ ಸರಿಯೇ ಅಥವಾ ಬಿಟ್ಟರೂ ಸರಿಯೇ ನಾವು ಮೇಲೆ ತಿಳಿಸಿದ ದೃಢ ನಿಶ್ಚಯದಿಂದ ಚಲಿಸುವುದಿಲ್ಲ '' ಎಂದು ತಿಳಿಸಿದರು

ಶ್ರೀ ಜಗದ್ಗುರು ದಾರುಕಾಚಾರ್ಯಾಯ ನಮಃ

ಎರಡೇ ಮಾತು ;—ಮಾಡು, ಬಿಡು.

ಲೇ —ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರು ಮಠಪುರ
ಸಾವದೇನೂರು.

ಪ್ರತಿಯೊಬ್ಬನಿಗೂ ಒಂದು ವಿಷಯದ ಅನುಭವವು ದೊರತು ಅದರ ಫಲವು ಪ್ರಾಪ್ತವಾಗಬೇಕಾದರೆ ಆ ವಿಷಯವು ಬಹುಕಾಲದ ಅಭ್ಯಾಸಕ್ಕೆ ಒಳಪಟ್ಟಿರಬೇಕು ಘನವಿದ್ವಾಂಸನೆನಿಸಬೇಕಾದರೆ ಅಕ್ಷರಾಭ್ಯಾಸದಿಂದಲೂ ಅನುಭವವಿರಬೇಕು. ಒಂದು ಯಂತ್ರವನ್ನು ನಡೆಯಿಸಲು ಸಮರ್ಥನಾಗಬೇಕಾದರೆ ಅದರ ಪ್ರತಿಯೊಂದು ಕೀಲುಗಳ ಕೆಲಸದ ಅನುಭವವೆಲ್ಲವೂ ಅಭ್ಯಾಸಿಸಬೇಕು. ಯಾವ ಕೆಲಸದ ಅನುಭವವಾದರೂ ಅಭ್ಯಾಸವಿಲ್ಲದೆ ಲಭ್ಯವಾಗುವುದಿಲ್ಲ. ಅದರಂತೆಯೇ ಮನುಷ್ಯನಿಗೂ ದೇವರಿಗೂ ಇರುವ ಸಂಬಂಧವನ್ನು ತಿಳಿದು ತನ್ನ ಜನ್ಮವನ್ನು ಸಾಫಲ್ಯಗೊಳಿಸಬೇಕಾದರೆ ಮೊದಲಿನಿಂದಲೂ ಆ ಅಭ್ಯಾಸವು ಬಂದೇ ಇರಬೇಕು. ಇದಕ್ಕೋಸುಗವೇ ಪ್ರತಿಮನುಷ್ಯನೂ ಚಿಕ್ಕಂದಿನಿಂದಲೂ ತತ್ವಮಥನೆಯಲ್ಲಿ ನಿರತನಾಗಿರುವುದು ಅತ್ಯುತ್ತಮವು. ತತ್ವವೆಂದರೇನೆಂಬುದನ್ನು ಅನೇಕರು ತಿಳಿದಿರಲಾರರು. ಬಾಯಲ್ಲಿ ಮಾತ್ರ ಶುಷ್ಕವೇದಾಂತವನ್ನು ತರ್ಕಿಸುತ್ತ, ಆಚರಣೆಯಲ್ಲಿ ದುರ್ವೃತ್ತಿಗಳಿದ್ದರೆ ಅದು ತತ್ವಾಭ್ಯಾಸವಲ್ಲ. ಸ್ವಯಂ ಕ್ರಿಯಾಚರಣೆರಹಿತರಾದ ಮಾತುಗಾರರಿಗೆ ಜಗದ್ವಂಚನ ನಿರತರಾದ ರಕ್ತಸಂಭಾವಿತರೆಂದು ಹೆಸರು. ತತ್ವವೆಂದರೆ ನಿರ್ಮಲನೂ ಸತ್ಯಸ್ವರೂಪಿಯೂ ಸರ್ವಜ್ಞನೂ ಸುಸ್ಥಿರನೂ ಆದ ದೇವರ ವಿಷಯದಲ್ಲಿ ನಿರ್ಮಲತೆಯಿಂದಲೂ ಸತ್ಯದಿಂದಲೂ ವಿವೇಕದಿಂದಲೂ ದೃಢಸಂಕಲ್ಪರಾಗಿ ಪರೋಪಕಾರದಲ್ಲಿಯೇ ವರ್ತಿಸಿ ತನಗೂ ದೇವರಿಗೂ ಇರುವ ನಿಕಟಸಂಬಂಧವನ್ನು ತಿಳಿಯುವುದೇ ತತ್ವದ ಲಕ್ಷಣವಾಗಿದೆ. ಇಂತಹ ವಿಷಯವು ಸ್ಥಿರವಾಗಿರಬೇಕಾದರೆ ಪ್ರತಿಕ್ಷಣದಲ್ಲಿಯೂ ತತ್ವದ ವಿಷಯದಲ್ಲಿಯೇ ಮನಸ್ಸನ್ನು ಕೊಟ್ಟಿರಬೇಕು. ಆದರೆ ತತ್ವಜ್ಞಾನಿಯೆನಿಸಬೇಕೆಂದು ಸಂಸಾರವನ್ನೆಲ್ಲಾ ತ್ಯಜಿಸಿ ಸುಮ್ಮನೆ ಚರ್ಚಿಸುತ್ತಾ ಕುಳಿತರೆ ಅದು ಮನುಷ್ಯತ್ವವಲ್ಲ. ಸಂಸಾರವನ್ನು ನ್ಯಾಯಮಾರ್ಗದಿಂದ ನಡೆಯಿಸಿಕೊಂಡು ನಿತ್ಯಸುಖದ ತತ್ವಾಭ್ಯಾಸಮಾಡುವವನೇ ಅತ್ಯುತ್ತಮ ತತ್ವಜ್ಞಾನಿಯು. ಮನುಷ್ಯನ ಸ್ವಭಾವವನ್ನು ಪರೀಕ್ಷಿಸುವುದೇ ತತ್ವದ ಕಾರ್ಯವಾದುದರಿಂದ ಸತ್ಸ್ವಭಾವವನ್ನೇ ತತ್ವವು ಪ್ರೀತಿಸುವುದೆಂಬುವನ್ನು ಯಾರೂ ಮರೆಯಬಾರದು. ಮನುಷ್ಯನು ಎಷ್ಟೆಷ್ಟು ದುಷ್ಕೃತ್ಯಗಳನ್ನೂ ದುಸ್ವಭಾವವನ್ನೂ ಪ್ರಕಟಿಸುತ್ತ ಬರುವನೋ ತತ್ವವು ಅಷ್ಟಷ್ಟೇ ದೂರವಾಗಿ ಓಡಿಹೋಗುವುದು. ತತ್ವವು ಯಾವಾಗಲೂ ಹೊರಗಣ ವಾಗಾಡಂಬರದಲ್ಲಿ ಸ್ಥಿರವಾಗಲಾರದು. ಅದನ್ನು ಪರಹಿತರೂಪವಾದ ಮನೋವ್ಯಾಪಾರದಿಂದ ಅಂತರಂಗದಲ್ಲಿ ಮಥಿಸತಕ್ಕುದಾಗಿದೆ. ಏಕೆಂದರೆ, ತತ್ವವು ರಹಸ್ಯದಲ್ಲಿ ಮಥಿಸಿದಷ್ಟೂ ಒಳ್ಳೆಯ " ಟಾಕಣ " ದಂತೆ ಪುಷ್ಟಿಯಾಗುವುದು. ಸಂತೆಯಲ್ಲಿ ಚರ್ಚಿಸುವ ತತ್ವವು ದೊಡ್ಡ ಹೇಸರಕತ್ತೆಯಂತೆ ಉಪೇಕ್ಷೆಯಲ್ಲಿ ನಿಲ್ಲುವುದು. ತತ್ವವು ಮನುಷ್ಯನಿಗೆ ಸುಖವನ್ನು ಬಯಸತಕ್ಕ ಮಿತ್ರನಾಗಿಲ್ಲ. ಅದು ಅವನ ಕಷ್ಟವನ್ನೇ ಕೋರುತ್ತಿರುವುದು. ಪಶುವಿನ ಹೊಟ್ಟೆಯಲ್ಲಿ ಹುಲ್ಲಿನ ಸಾರವು ಜೀರ್ಣಿಸಿ ಮಧುರವಾದ ಹಾಲು ಉತ್ಪತ್ತಿಯಾಗುವಂತೆ ಮನುಷ್ಯನಲ್ಲಿ ತತ್ವಾಭ್ಯಾಸದ ಕಷ್ಟದ ಸಾರವು ಜೀರ್ಣಿಸಿ ನಿತ್ಯಸುಖವು ಸ್ಥಾಯಿಯಾಗಬೇಕಾಗಿದೆ. ತತ್ವವು ದಾರಿದ್ರ್ಯವನ್ನು ಹೋಗಲಾಡಿಸುವಂತಹ ಧನದ ಶಕ್ತಿಯನ್ನುಳ್ಳದಲ್ಲ. ಅಜ್ಞಾನವನ್ನು ಹೋಗಲಾಡಿಸುವ ದೇದೀಪ್ಯಮಾನವಾದ ಬೆಳಕಾಗಿದೆ. ತತ್ವವೆಂಬುದನ್ನು ಎಷ್ಟು ವಿಧವಾಗಿ ಚರ್ಚಿಸಿ ಎಷ್ಟುಕಾಲವನ್ನು ಅದಕ್ಕೆ ವಿನಿಯೋಗಿಸಿದರೂ ಅದು ನಮಗೆ ಎರಡೇ ಎರಡು ಮಾತನ್ನು ಮಾತ್ರ ಬೋಧಿಸುವುದು. ಅದನ್ನು ಸ್ಥಿರಪಡಿಸಿಕೊಂಡವನೇ ಉತ್ತಮ ತತ್ವಜ್ಞಾನಿಯು. ಅವನ ಹುಟ್ಟುವಿಕೆಯೇ ಹುಟ್ಟುವಿಕೆಯು

[೮ನೆಯ ಪುಟವನ್ನು ನೋಡಿ.]

ಸೊಲ್ಲಾಪುರದಲ್ಲಿ ಶ್ರೀರಂಭಾಪುರೀ ಜಗದ್ಗುರುಗಳವರ ಅಭೂತಪೂರ್ವ ಮಹೋತ್ಸವ

೨ ಲಕ್ಷ ಜನರು ಉತ್ಸವದಲ್ಲಿ ಸಮ್ಮಿಲಿತರಾಗಿದ್ದರು.

ಶ್ರೀಮದ್ವೀರಶೈವಮಹಾಮತಸ್ಥಾಪನಾಚಾರ್ಯ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯ ಮಹಾಸ್ವಾಮಿಗಳವರ ಅಡ್ಡಪಲ್ಲಕ್ಕಿಮಹೋತ್ಸವವು ತಾ॥ ೮–೧೧–೧೯೪೧ನೆಯ ದಿವಸ ಸೊಲ್ಲಾಪುರನಗರದಲ್ಲಿ ಅಭೂತಪೂರ್ವವಾಗಿ ನೆರವೇರಿತು. ಇಂತಹ ಅದ್ಭುತ ಮಹೋತ್ಸವವು ಸೊಲ್ಲಾಪುರನಗರವು ಹುಟ್ಟಿದಂದಿನಿಂದ ನೆರವೇರಿರುವದಿಲ್ಲವೆಂದು ಆ ನಗರದಲ್ಲಿರುವ ಸಕಲ ಮತದವರೂ ಮುಕ್ತಕಂಠದಿಂದ ನುಡಿಯುತ್ತಿರುವರು ಆ ದಿವಸ ಪ್ರಾತಃಕಾಲ ೮ ಘಂಟೆಗೆ ಮಹೋತ್ಸವವು ಸಿದ್ಧೇಶ್ವರ ದೇವಾಲಯದಿಂದ ಸಕಲ ರಾಜಬಿರುದಾವಳಿಗಳೊಡನೆ ಹೊರಟಿತು ಶ್ರೀಜಗದ್ಗುರುಗಳವರ ದಿವ್ಯವಾದ ಬ್ರಹ್ಮತೇಜಸ್ಸನ್ನು ಕಂಡು ಸಕಲಮತೀಯರೂ ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದರು. ಮಹೋತ್ಸವವು ಟೌನ್ ಹಾಲ್ ಪಂಚಕಟ್ಟೆ ವಿಕ್ಟೋರಿಯಾಮಾರ್ಕೆಟ್, ದತ್ತಾತ್ರೇಯಮಂದಿರ, ಹಾಜಿಮಾಯಿ ಚೌಕ, ವಿಠ್ಠಲಮಂದಿರ ಹರಿಭಾಯಿ ದೇವಕರ್ಣವಾಡಾ, ತಿಲಕಚೌಕ, ಹಲವಾಯಿಗಲ್ಲಿ, ಕೋ-ಆಪರೇಟಿವ್ ಸೆಂಟ್ರಲ್‌ಬ್ಯಾಂಕ್ ಕಿರಾಣಾಗಲ್ಲಿ, ಲೋಹಿಂದಗಲ್ಲಿ, ನಾರದಗಲ್ಲಿ, ಗಾಂಧಿಚೌಕ, ಭುಸಾರಗಲ್ಲಿ, ಶ್ರೀಮನ್ಮಥೇಶ್ವರ ಮಂದಿರ ಮಹಾದೇವಗಲ್ಲಿ, ಮಂಗಳವಾರಪೇಠ, ಪೋಲೀಸಚೌಕ, ಚಾಟಗಲ್ಲಿ, ಬಾಳಿವೇಶ ಇತ್ಯಾದಿ ಮಾರ್ಗಗಲ್ಲಿ ಹಾಯ್ದು ೧೨ ಘಂಟೆಗೆ ಶ್ರೀಮಲ್ಲಿಕಾರ್ಜುನ ದೇವಸ್ಥಾನಕ್ಕೆ ಬಂದು ತಲ್ಪಿತು ಒಟ್ಟಿಗೆ ಈ ಮಹೋತ್ಸವದಲ್ಲಿ ೨ ಲಕ್ಷದ ಮೇಲ್ಪಟ್ಟು ಜನರು ಭಾಗಿಗಳಾಗಿದ್ದರು ನಿಜಾಂಸ್ಟೇಟ್ ಮತ್ತು ಮಹಾರಾಷ್ಟ್ರದೇಶಗಳಿಂದ ವೀರಶೈವಜನಸಮುದಾಯವು ಗಣನಾತೀತವಾಗಿ ಬಂದಿತ್ತು ಜನಸ್ತೋಮವು ಸಮುದ್ರದಂತೆ ಮೇರೆದಪ್ಪಿ ಹೋಗಿತ್ತು ಪ್ರತಿಯೊಂದು ರಾಜಮಾರ್ಗದಲ್ಲಿಯೂ ವ್ಯಾಪಾರಿಗಳು ಮತ್ತು ಭಕ್ತರು ತಮ್ಮ ತಮ್ಮ ಅಂಗಡಿಗಳನ್ನು ಅಲಂಕರಿಸಿ ತಮ್ಮ ಅಸಾಧಾರಣ ಭಕ್ತಿಭಾವವನ್ನು ವ್ಯಕ್ತಪಡಿಸಿದರು ವೀರಶೈವರು, ಗುಜ್ಜರು, ಮಾರವಾಡಿಯವರು, ಬ್ರಾಹ್ಮಣರು, ಮುಸಲ್ಮಾನರು ಮರಾಠೆಯವರು, ಅಕ್ಕಸಾಲಿಗರು, ವೈಶ್ಯರು ಮೊದಲಾದ ಸಮಸ್ತ ಮತೀಯರು ತಮ್ಮ ತಮ್ಮ ಅಂಗಡಿಗಳ ಮುಂದೆ ಶ್ರೀಜಗದ್ಗುರುಗಳವರಿಗೆ ಭಕ್ತಿಯಿಂದ ಹಾರ ತುರಾಯಿಗಳನ್ನು ಸಮರ್ಪಿಸುತ್ತಿದ್ದರು ಭಕ್ತಜನರು ಸಮರ್ಪಿಸಿದ ಹಾರ ತುರಾಯಿಗಳ ರಾಶಿಯು ಚಿಕ್ಕ ಪರ್ವತದಂತೆ ಕಾಣಿಸುತ್ತಿತ್ತು ಪುಷ್ಪವೃಷ್ಟಿಯಂತೂ ಸರ್ವತೋಮುಖವಾಗಿ ಒಂದೇ ಸಮನೆ ನಡೆದಿತ್ತು ಬೀದಿಗಳ ಶೃಂಗಾರವು ವರ್ಣನಾತೀತವಾಗಿತ್ತು ಅಂದು ಸೊಲ್ಲಾಪುರನಗರವು ಇಂದ್ರನ ಅಮರಾವತಿ ನಗರಿಯನ್ನು ತಿರಸ್ಕರಿಸುವಂತಿತ್ತು ಅಂದಿನ ಉತ್ಸವದ ವೈಭವವು ಸಕಲಮತೀಯರನ್ನೂ ಮುಗ್ಧರನ್ನಾಗಿ ಮಾಡಿತ್ತು ಈ ಅಭೂತಪೂರ್ವ ಮಹೋತ್ಸವದ ವ್ಯವಸ್ಥೆಗಾಗಿ ಡಿ॥ ಪೋಲೀಸ್ ಸೂಪರಿಂಟೆಂಡೆಂಟ್ ವಿಲ್ಸ್ ಸಾಹೇಬರು, ಅ॥ ಪೋ॥ ಸೂಪರಿಂಟೆಂಡೆಂಟ್ ಸಾಹೇಬರು, ಸಬ್ ಇನ್ಸ್‌ಪೆಕ್ಟರ್ ಸಾಹೇಬರವರು ಇವರೇ ಮೊದಲಾದ ಸರಕಾರಿ ಅಧಿಕಾರಿಗಳು ನೂರಾರು ಜನ ಪೋಲೀಸ್ ಸಿಬ್ಬಂದಿಯೊಡನೆಯೂ, ಮಿಲಿಟರಿ ಬ್ಯಾಂಡಿನೊಡನೆಯೂ ಆಗಮಿಸಿ ಅಸಾಧಾರಣ ವೈಭವದಿಂದ ಈ ಮಹೋತ್ಸವಕಾರ್ಯವನ್ನು ಬಹು ಸಮರ್ಪಕವಾಗಿ ನೆರವೇರಿಸಿದರು ಸೊಲ್ಲಾಪುರದ ವೀರ ಗುರುಭಕ್ತಶಿಖಾಮಣಿಗಳು ತಮ್ಮ ಶಕ್ತಿಸಾಹಸಗಳನ್ನೆಲ್ಲ ವೆಚ್ಚಮಾಡಿ ಸಕಲ ವ್ಯವಸ್ಥೆಯನ್ನು ಬಹು ತೃಪ್ತಿಕರವಾಗಿ ಇಟ್ಟಿದ್ದರು ನಿಜಾಂಸ್ಟೇಟಿನ ವೀರಶೈವರಲ್ಲಿ ಅಗ್ರಗಣ್ಯರಾಗಿರುವ ಮುಬಲಗುಂಡಿ ದಾನಶೂರ ಧರ್ಮವೀರ ಶ್ರೀಶರಣಪ್ಪಣ್ಣ ಸತ್ತಪುರಮೊರೆಗಳು ಮೊದಲೇ ಆಗಮಿಸಿ ತಮ್ಮ ಅದ್ಭುತ ಕರ್ತೃತ್ವಶಕ್ತಿಯನ್ನು ಇಲ್ಲಿಯೂ ಸಹ ತೋರ್ಪಡಿಸಿ ಗುರುಕೃಪೆಗೆ ಪಾತ್ರರಾದರು ಈ ಉತ್ಸವ ವರ್ಣನವನ್ನು ಮಾಡಲಿಕ್ಕೆ ಸಹಸ್ರ ನಾಲಿಗೆಗಳುಳ್ಳ ಆದಿಶೇಷನಿಗೂ ಸಾಧ್ಯವಿಲ್ಲವೆಂದು ಒರೆದರೆ ಅತಿಶಯೋಕ್ತಿಯೆನಿಸದು ಒಟ್ಟಿಗೆ ಉತ್ಸವದ ವಿಷಯವು ಸುವರ್ಣಾಕ್ಷರಗಳಿಂದ ಬರೆದಿಡತಕ್ಕಂತಾಯಿತೆಂದು ಸಾರಿ ಸಾರಿ ಹೇಳಬಹುದಾಗಿದೆ

೮ನೆಯ ತಾರೀಖಿನ ದಿನ ಸಾಯಂಕಾಲ ಶ್ರೀಮಲ್ಲಿಕಾರ್ಜುನ ದೇವಸ್ಥಾನದಲ್ಲಿ ವಿಜ್ಞಾಪನಪತ್ರಿಕೆಯನ್ನೊಪ್ಪಿಸಿದರು ಅತ್ಯಂತ ವಿಶಾಲವಾಗಿರುವ ಆ ದೇವಸ್ಥಾನವು ಜನಸ್ತೋಮದಿಂದ ಕಿಕ್ಕಿರಿದು ಹೋಗಿದ್ದಿತು. ಆದಿಯಲ್ಲಿ ಇಲ್ಲಿಯ ಸದಾಚಾರಸ್ತ್ರೀಸಮಾಜದ ಬಾಲಿಕೆಯರು ತಮ್ಮ ಮಂಜುಳಕಂಠದಿಂದ ಜಗದಾಚಾರ್ಯರ ಸ್ತೋತ್ರಗಳನ್ನು ಹಾಡಿದರು ಆ ಮೇಲೆ ಸ್ವಾಗತ ಕಮಿಟಿಯ ಪ್ರಸಿಡೆಂಟರಾದ ಶ್ರೀಮಾನ್ ಎಸ್ ಬಿ ಧುಮ್ಮಾವಕೀಲರು ವಿಜ್ಞಾಪನಪತ್ರವನ್ನು ಓದಿ ಶ್ರೀಜಗದ್ಗುರುಗಳ ಪಾದಕಮಲಗಳಲ್ಲಿ ಸಮರ್ಪಿಸಿದರು ಅದಕ್ಕೆ ಶ್ರೀಜಗದ್ಗುರುಗಳವರು ತಮ್ಮ ಅಮೃತವಾಣಿಯಿಂದ ಸದುತ್ತರವನ್ನು ದಯಪಾಲಿಸಿದರು ಬಳಿಕ ವೀರಗುರುಭಕ್ತಶಿಖಾಮಣಿಗಳಾದ ಡಾ॥ ಜಗದೇವರಾವ ದೇಶಮುಖರವರು ತಮ್ಮ ಸಿಂಹವಾಣಿಯಿಂದ ಸಮಯೋಚಿತವಾದ ಭಾಷಣವನ್ನು ಮಾಡಿ ಸರ್ವಸಭಿಕರನ್ನು ಸಂತೋಷಪಡಿಸಿದರು. ತರುವಾಯ ಜಗದಾಚಾರ್ಯರ ಜಯಘೋಷದೊಡನೆ ಅಂದಿನ ಕಾರ್ಯಕ್ರಮವು ಸಮಾಪ್ತಿಗೊಂಡಿತು

೯ನೆಯ ತಾರೀಖಿನ ದಿವಸ ಶ್ರೀಮನ್ಮಥೇಶ್ವರಲಿಂಗಮೂರ್ತಿಯ ಮೆರವಣಿಗೆಯು ನಗರದ ಮುಖ್ಯ ಮುಖ್ಯ ಬೀದಿಗಳಲ್ಲಿ ವಿಶೇಷವೈಭವದಿಂದ ನೆರವೇರಿತು ೧೦ನೆಯ ತಾರೀಖಿನ ದಿವಸ ಸದರಿ ಲಿಂಗಮೂರ್ತಿಯ ಸ್ಥಾಪನವು ಶ್ರೀಜಗದ್ಗುರುಗಳವರ ಅಮೃತಹಸ್ತದಿಂದ ನೆರವೇರಿತು ಆ ದಿವಸವೇ ಈ ಅಸಾಧಾರಣ ವೈಭವಕ್ಕೆ ಮೂಲ ಕಾರಣೀಭೂತರಾದ ಶ್ರೀಬಾಲತಪಸ್ವಿ ಪರಮತಪೋನಿಧಿ ಹೋಟಗಿ ಬೃಹನ್ಮಠಾಧೀಶ ಶ್ರೀಚನ್ನವೀರಶಿವಾಚಾರ್ಯ ಸ್ವಾಮಿಗಳವರು ೧೧ ತಿಂಗಳುಗಳವರೆಗೆ ಕ್ಷೀರಾಹಾರಿಗಳಾಗಿ ಪುರಶ್ಚರಣಪೂರ್ವಕ ೧ ಕೋಟಿ ಜಪವನ್ನು ನೆರವೇರಿಸಿದ ಜಪಶಾಂತಿಕಾರ್ಯವು ಸಮಾಪ್ತಿಗೊಂಡಿತು. ಅಂದು ಶ್ರೀಮನ್ಮಥಸ್ವಾಮಿ ಭಜನಮಂಡಳಿಯವರು ಶ್ರೀಜಗದ್ಗುರುಗಳವರಿಗೆ ೧,೧೧೮ ರೂಪಾಯಿಗಳ ಕಾಣಿಕೆಯನ್ನು ಸಮರ್ಪಿಸಿದರು.

ಅಂದು ಸಾಯಂಕಾಲ ಶ್ರೀಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ಶ್ರೀಮನ್ಮಥಸ್ವಾಮಿದೇವಸ್ಥಾನದ ಮುಂದೆ ಭವ್ಯವಾಗಿ ರಚಿಸಿದ್ದ ಮಹಾಮಂಟಪದಲ್ಲಿ ಪ್ರಚಂಡಸಭೆ ಸೇರಿತು ಸಿಕಂದರಾಬಾದ ನಿವಾಸಿಗಳಾದ ವೇದತೀರ್ಥ, ಕಾವ್ಯತೀರ್ಥ, ಸ್ಮೃತಿತೀರ್ಥ ಇತ್ಯಾದಿ ಪದವೀಭೂಷಿತರಾದ ಚಿವರೆಮಠದ ಪಂಡಿತ ಶ್ರೀವೀರಭದ್ರಶಾಸ್ತ್ರಿಗಳವರು ತಮ್ಮ ಸಿಂಹವಾಣಿಯಿಂದ ವೈದಿಕ ವಾಙ್ಮಯದ ಮೇಲೆಯೂ ಹಿಂದುಸ್ಥಾನದ ಮೇಲೆಯೂ ಮಹತ್ವದ ಭಾಷಣವನ್ನು ಮಾಡಿದರು ಬಳಿಕ ಶ್ರೀಜಗದ್ಗುರುಗಳವರು ಅದೇ ವಿಷಯವನ್ನೆತ್ತಿಕೊಂಡು ವರ್ಣಾಶ್ರಮ ಧರ್ಮಗಳ ಬಗ್ಗೆ ಸರ್ವಸಮರ್ಪಕವಾದ ವಿಷಯವನ್ನು ಅಪ್ಪಣೆಕೊಡಿಸಿ ಸರ್ವರನ್ನೂ ಸಂತೋಷಪಡಿಸಿದರು ಪುನಃ ೧೧ ನೆಯ ತಾರೀಖಿನ ದಿವಸ ಅದೇ ಸ್ಥಳದಲ್ಲಿ ಸಭೆಸೇರಿತು. ಅಂದು ವೇ॥ ಪಂಡಿತ ವೀರಭದ್ರಶಾಸ್ತ್ರಿಗಳವರು ಧಾರ್ಮಿಕ ವಿಷಯದ ಮೇಲೆ ಹಿಂದೀ ಭಾಷೆಯಲ್ಲಿ ಮನೋಹರವಾದ ಭಾಷಣಮಾಡಿದರು. ಬಳಿಕ ವೇ॥ ಪಂ॥ ಕಾಶೀನಾಥಶಾಸ್ತ್ರಿಗಳವರು ಲಿಂಗಸ್ಥಾಪನೆಯ ಬಗ್ಗೆ ಮಾತನಾಡಿದರು. ಬಳಿಕ ಶ್ರೀಜಗದ್ಗುರುಗಳವರ ಭಾಷಣವಾಗಿ ಕಾರ್ಯಕ್ರಮವು ಸಮಾಪ್ತಿಗೊಂಡಿತು. ೧೨ನೆಯ ತಾರೀಖಿನ ದಿವಸ ಅದೇ ಮಂಟಪದಲ್ಲಿ ಹೋಟಗಿ ಶ್ರೀಗಳವರಿಗೆ ಸೊಲ್ಲಾಪುರ ನಗರದ ಎಲ್ಲ ಮತದವರೂ ಸೇರಿ ಅಭೂತಪೂರ್ವವಾದ ಗೌರವವನ್ನು ಪ್ರದರ್ಶಿಸಿದರು. ಒಟ್ಟಿಗೆ ಸೊಲ್ಲಾಪುರದಲ್ಲಿ ಜಗದಾಚಾರ್ಯರ ವಿಜಯಧ್ವಜವು ಮೆರೆಯುತ್ತಿರುವದು. ಈ ವಿಜಯಧ್ವಜಾರೋಹಣಕ್ಕೆ ಕಾರಣರಾದ ಸೊಲ್ಲಾಪುರದ ವೀರ ಗುರುಭಕ್ತರಿಗೆಲ್ಲಾ ಶ್ರೀಜಗದಾಚಾರ್ಯರು ಆಯುರಾರೋಗ್ಯಭಾಗ್ಯಾದಿ ಸಕಲಸಂಪತ್ಸಮೃದ್ಧಿಯನ್ನುಂಟುಮಾಡಲೆಂದು ಹಾರೈಸುತ್ತೇವೆ

ಯುದ್ಧವಾರ್ತೆ.

ಅಮೇರಿಕಕ್ಕೆ ಫಿನ್‌ಲೆಂಡಿನ ಉತ್ತರ

ರಷ್ಯದೊಡನೆ ಯುದ್ಧ ನಿಲ್ಲಿಸಬೇಕೆಂದು ಅಮೇರಿಕವು ಫಿನ್‌ಲೆಂಡಿಗೆ ಮಾಡಿದ್ದ ಸೂಚನೆಯನ್ನು ಅಲ್ಲಿನ ಸರಕಾರವು ಪರಿಶೀಲಿಸಿ "ಫಿನ್‌ಲೆಂಡು ತನ್ನ ಉಳಿವಿಗಾಗಿ ಹೊಡೆದಾಡುತ್ತಿದೆ ಆದ್ದರಿಂದ ದೇಶದ ಭದ್ರತೆಗೆ ಸಂಚಕಾರ ತರತಕ್ಕಂತಹ ಯಾವ ಕಾರ್ಯಕ್ರಮಕ್ಕೂ ಅದು ಒಪ್ಪುವುದಿಲ್ಲ. ಫಿನ್‌ಲೆಂಡು ತನ್ನ ಸೇನೆಯನ್ನು ಹಿಂದಕ್ಕೆ ಕರೆಸಿ, ಸಂಗ್ರಾಮವನ್ನು ಕೊನೆಗಾಣಿಸಬೇಕೆಂಬ ಸೂಚನೆಗೆ ಒಪ್ಪಿದರೆ ಫಿನ್‌ಲೆಂಡಿನ ಗತಿ ಮುಗಿದಂತೆಯೆ ಫಿನ್‌ಲೆಂಡು ನಡೆಸುತ್ತಿರುವ ಯುದ್ಧವು ಕೇವಲ ಆತ್ಮರಕ್ಷಣೆಗಾಗಿಯೇ ಆದರೂ ಗಡಿನಾಡಿನಿಂದಾಚೆ ಇರುವ ಮೂಲೆಗಳಿಂದ ಶತ್ರುಗಳು ನಮ್ಮ ಮೇಲೆ ಬೀಳದಂತೆ ಮಾಡಬೇಕಾಗಿದೆ 40 ಲಕ್ಷ ಪ್ರಜಾಬಲವುಳ್ಳ ಜನಾಂಗ ಒಂದರ ಮೇಲೆ ಅದಕ್ಕೆ 50 ರಷ್ಟು ಪ್ರಜಾಬಲವುಳ್ಳ ರಾಷ್ಟ್ರವು ಬಿದ್ದರೆ ಸಣ್ಣ ಜನಾಂಗವು ತನ್ನ ಸೈನಿಕರನ್ನು ಹಿಂದಕ್ಕೆ ಕರೆಸಿ ಶತ್ರುಗಳು ದೇಶದೊಳಕ್ಕೆ ಬಂದು ಯುದ್ಧ ಮಾಡಲು ಅವಕಾಶ ಕೊಡಬೇಕೆಂದು ಅಮೇರಿಕವು ಖಂಡಿತ ನಿರೀಕ್ಷಿಸಲಾರದು ಈಗ ಫಿನ್‌ಲೆಂಡು ಆಕ್ರಮಿಸಿರುವ ಕ್ಷೇತ್ರಗಳಿಂದ ಅಮೇರಿಕಕ್ಕೇನೂ ವಿಪತ್ತುಂಟಾಗುವುದಿಲ್ಲ. ಅದರಹಿತಗಳಿಗೆ ಊನ ಬರುವುದಿಲ್ಲ. ಸಣ್ಣ ರಾಷ್ಟ್ರವೊಂದಕ್ಕೆ ಜೀವಿಸಿರಲು ಮತ್ತು ಆತ್ಮಸಂರಕ್ಷಣೆ ಮಾಡಿಕೊಳ್ಳಲು ಹಕ್ಕಿದೆ. ಜರ್ಮನಿಯು ಫಿನ್‌ಲೆಂಡಿನಮೇಲೆ ಬೀಳುವುದೆಂಬ ಸೂಚನೆ ನಿರಾಧಾರವಾದುದು ಆ ಭಯವೇನೂ ಇಲ್ಲ. ಫಿನ್‌ಲೆಂಡಿನ ಕ್ಷೇಮಸಾಧನೆಯಾಗುವ ವರೆಗೆ ಅದು ಯುದ್ಧವನ್ನು ಮುಂದುವರಿಸುತ್ತದೆ ಕೊಂಚಭಾಗ ಸೈನಿಕರನ್ನು ಸದ್ಯದಲ್ಲಿಯೇ ಚದುರಿಸಿ, ವ್ಯವಸಾಯ ಕೆಲಸಗಳಿಗಾಗಿ ನೇಮಿಸಲಾಗುತ್ತಿದೆ' ಎಂಬುದಾಗಿ ಉತ್ತರ ಕೊಟ್ಟಿದೆ.

ಫಿನ್‌ಲೆಂಡಿನಲ್ಲಿ ಭಿನ್ನಾಭಿಪ್ರಾಯ

ರಷ್ಯದೊಡನೆ ಶಾಂತಿ ಮಾಡಿಕೊಳ್ಳಬೇಕೆಂದು ಫಿನ್‌ಲೆಂಡ್ ಸರ್ಕಾರಕ್ಕೆ ಅಮೇರಿಕ ಸರ್ಕಾರವು ಎಚ್ಚರಿಕೆ ಇತ್ತಿರುವುದರಿಂದ, ಫಿನ್‌ಲೆಂಡಿನಲ್ಲಿ ಭಿನ್ನಾಭಿಪ್ರಾಯ

ತಲೆ ಹಾಕಿವೆ. ಫಿನ್‌ಲೆಂಡಿನಲ್ಲಿರುವ ಜರ್ಮನಿ ಯವರಿಗೂ ಶಾಂತಿಪ್ರಿಯ ಪಕ್ಷದವರಿಗೂ ಉಗ್ರ ವ ಭಿನ್ನಾಭಿಪ್ರಾಯಗಳುಂಟಾಗಿವೆ. ಶಾಂತಿಸ್ಥಾಪನೆ ಬೇಕೆಂದೂ ಯುದ್ಧವನ್ನು ನಿಲ್ಲಿಸಬೇಕೆಂದೂ ಚಿಸಿ ಹೆಲ್ಸಿಂಕಿ ನಗರದಲ್ಲಿ ಪ್ರದರ್ಶನಗಳನ್ನು ಮಾಡ ಗಿದೆ

ನಾಜಿಗಳು ಸೆಬಾಸ್ತಪೂಲ್ ರಕ್ಷಣ ವ್ಯೂಹವನ್ನು ಸಮೀಪಿಸಿರುವರು

ಕ್ರಿಮಿಯದ ಮುಖ್ಯ ಬಂದರಾದ ಸೆಬಾಸ್ತಪೂಲಿನ ಹೊರ ರಕ್ಷಣ ವ್ಯೂಹವನ್ನು ಜರ್ಮನರು ಮುಟ್ಟಿರುವದಾಗಿಯೂ, ಅದನ್ನು ಭೇದಿಸಿಲ್ಲವೆಂದೂ ಲಂಡನ್ನಿನ ಸುದ್ದಿಯು ತಿಳಿಸುತ್ತದೆ. ಸೆಬಾಸ್ತಪೂಲ್ ಕ್ಷೇತ್ರದಲ್ಲಿರುವ ರಷ್ಯನ್ ಸೇನೆಗಳು ಜರ್ಮನರ ಮೇಲೆ ಬಿದ್ದವೆಂದೂ ಅವುಗಳನ್ನು ಮುಟ್ಟಿಹಾಕಿ ಮುಖ್ಯವಾದ ಹಲವು ಪ್ರದೇಶಗಳನ್ನು ಆಕ್ರಮಿಸಿರುವದಾಗಿಯೂ, ಹಗಲು ರಾತ್ರಿ ಸೆಬಾಸ್ತಪೂಲ್ ಮೇಲೆ ಮುತ್ತಿಗೆ ನಡೆಸುತ್ತಿರುವದಾಗಿಯೂ, ಬಂದರಿನಲ್ಲಿರುವ ರಷ್ಯನ್ ಹಡಗುಗಳಿಗೆ ನಷ್ಟವಾಗಿರುವದಾಗಿಯೂ ಜರ್ಮನ್ ಪ್ರಕಟನೆಯು ತಿಳಿಸುತ್ತದೆ

ಫ್ರೆಂಚ್ ಸೋಮಾಲಿಲ್ಯಾಂಡ್ ಶರಣಾಗತವಾಗಬಹುದು

ಆಫ್ರಿಕದಲ್ಲಿರುವ ಫ್ರೆಂಚರಿಗೆ ಸೇರಿದ್ದ ಸೋಮಾಲಿಲ್ಯಾಂಡ್ ಪ್ರದೇಶವು ಬ್ರಿಟನ್ನಿನ ಅಪ್ಪದಿಗ್ಬಂಧನಕ್ಕೆ ಒಳಗಾಗಿರುವದರಿಂದ ಅಲ್ಲಿಗೆ ಆಹಾರ ವಸ್ತುಗಳಾಗಲಿ ಇತರ ಸಾಮಾನುಗಳಾಗಲಿ 1940 ನೇ ಜುಲೈ ತಿಂಗಳಿನಿಂದಾಯಿತು ಹೊರಗಿನಿಂದ ಬಂದೆ ಇರುವದರಿಂದ ಜನರು ಬಹಳ ಕಷ್ಟಕ್ಕೊಳಗಾಗಿದ್ದಾರೆ ಬಹಳ ಮಂದಿ ಟೈಫಾಯಿಡ್ ಮೊದಲಾದ ವ್ಯಾಧಿಗಳಿಂದ ಸಾಯುತ್ತಿದ್ದಾರೆ ಇಷ್ಟರಲ್ಲಿ ಆ ಪ್ರದೇಶವು ಬ್ರಿಟಿಷರಿಗೆ ಶರಣಾಗತವಾಗಬಹುದೆಂದು ಹೇಳಲಾಗಿದೆ

ಫ್ರೆಂಚರು ದಂಗೆ ಏಳುವುದರಲ್ಲಿದ್ದಾರೆ

ಹಲವು ಫ್ರೆಂಚ್ ಯೋಧರು ಸೆರೆಮನೆಗಳಿಂದ ತಪ್ಪಿಸಿಕೊಂಡು ಹೋಗಿದ್ದರೂ ಕೂಡ, 10,80,000 ಸೈನಿಕರಲ್ಲಿ ಎಡುಮಂದಿ ಇನ್ನೂ ಜರ್ಮನಿಯಲ್ಲಿ ಬಂಧನದಲ್ಲಿಯೇ ಇದ್ದಾರೆ ವಿಚಿ ಸರ್ಕಾರವು ಜರ್ಮನಿಗೆ ಅನುಕೂಲವಾದ ರೀತಿಯಲ್ಲಿ ವರ್ತಿಸುವಂತೆ ಒತ್ತಾಯಪಡಿಸಲು ಅತಿರೀತಿ ಮಾಡಲಾಗಿದೆ. ಮಾರ್ಷಲ್ ಪೆಟೆನ್ ಮತ್ತು ಅ|| ಡಾರ್ಲಾನರೂ ಜರ್ಮನರೊಂದಿಗೆ ಸಹಕರಿಸಲು ಕಾತುರರಾಗಿದ್ದಾರೆ ಆದರೆ ಫ್ರೆಂಚ್ ಪ್ರಜೆಗಳಲ್ಲಿ ದಂಗೆಯ ಮನೋಭಾವವು ಬಲವಾಗುತ್ತಿದೆ

ಮಾಸ್ಕೋ ರಂಗದಲ್ಲಿ ಯುದ್ಧದ ತೀವ್ರತೆ ಕಡಿಮೆಯಾಗಿದೆ

ಹವಾಮಾನವು ಪ್ರತಿಕೂಲವಾಗಿರುವದರಿಂದ ಮಾಸ್ಕೋ ರಂಗದಲ್ಲಿ ಮುತ್ತಿಗೆಯನ್ನು ನಿಲ್ಲಿಸಿರುವದಾಗಿಯೂ, ಇದು ಕೇವಲ ತಾತ್ಕಾಲಿಕವೆಂದೂ ಜರ್ಮನ್ ಅಧಿಕಾರಿಗಳು ತಿಳಿಸುತ್ತಿದ್ದಾರೆ. ಆದರೆ ಜರ್ಮನರು ಮುತ್ತಿಗೆ ನಿಲ್ಲಿಸಿರುವದು ಮಾತ್ರವಲ್ಲ, ಅದರ ಮುತ್ತಿಗೆಯೇ ವಿಫಲವಾಯಿತೆಂದು ಹೇಳಬಹುದೆಂದೂ ಕ್ರಿಮಿಯಾದಲ್ಲಿ ಹೊರತು ಮಿಕ್ಕೆಲ್ಲ ಕಡೆಗಳಲ್ಲೂ ಜರ್ಮನರನ್ನು ತಡೆಯಲಾಗಿದೆಯೆಂದೂ, ಉತ್ತರದಲ್ಲಿ ಸ್ಟಾಲಿನ್ ಕಾಲುವೆಯ ಉದ್ದಕ್ಕೂ ರಷ್ಯನರು ರಕ್ಷಣ ವ್ಯೂಹವನ್ನು ರಚಿಸಿ ಅದನ್ನು ಬಲಪಡಿಸಲು ಸೈಬೀರಿಯದಿಂದಲೂ ಹಲವು ಸೈನ್ಯಪಡೆಗಳನ್ನು ಕರೆಸಿರುವದಾಗಿಯೂ ತಿಳಿದುಬರುತ್ತದೆ

ಥೈಲೆಂಡ್ ಪ್ರಜೆಗಳಿಗೆ ಎಚ್ಚರಿಕೆ

ಬಾಂಕಾಕ್ ರೇಡಿಯೋವಿನಲ್ಲಿ ಸರಕಾರದ ವಿಮರ್ಶಕರು ಮಾತನಾಡುತ್ತ " ಈ ವರ್ಷ ಅಥವಾ ಮುಂದಿನ ವರ್ಷ ಥೈಲೆಂಡ್, ಸಂಗ್ರಾಮಕ್ಕೆ ಈಡಾಗಬೇಕಾಗುವದು. ನಾವು ಸಂಗ್ರಾಮದಿಂದ ಪಾರಾಗಬಹುದಾಗಿದ್ದರೆ ತಾಟಸ್ಥ್ಯ ನೀತಿಯ ಮೂಲಕವೇ; ಆದರೆ ನಮ್ಮ ತಾಟಸ್ಥ್ಯ ನೀತಿಯನ್ನು ರಕ್ಷಿಸಿಕೊಳ್ಳಲು ನಾವು ಸಿದ್ಧರಿರಬೇಕು. " ನಮ್ಮ ಶತ್ರುವಿನ ಬಲವು ನಮಗಿಂತ ನೂರರಷ್ಟು ಹೆಚ್ಚಾಗಿರಬಹುದು ಅಷ್ಟರಿಂದಲೇ ನಾವು ಹೆದರಬಾರದು. ನಮ್ಮ ಇತಿಹಾಸ ಪ್ರಸಿದ್ಧವಾದ ಪೌರುಷವನ್ನು ತೋರಿಸಲು ನಾವು ಸಿದ್ಧರಾಗಿರಬೇಕು ಯಾವಾಗಲೂ ಎಚ್ಚತ್ತಿರಿ ನಿಮ್ಮ ಬಾಗಿಲುಗಳಲ್ಲಿ ಶತ್ರು ಫಿರಂಗಿಗಳು ಬಂದು ಅರ್ಭಟಿಸುವವರೆಗೆ ಶತ್ರು ವಿಮಾನಗಳು ಬಂದು ಬಾಂಬು ಸುರಿಸುವವರೆಗೆ ಸುಮ್ಮನೆ ಕೂರಬೇಡಿ ಎಚ್ಚರಿಕೆಯಿಂದಿರಿ, ಕಿವಿಗಳು ಆಲಿಸುತ್ತಿರಲಿ, ಮನಸ್ಸು ಯೋಚನೆ ಮಾಡುತ್ತಿರಲಿ; ನಿಮ್ಮಲ್ಲಿ ನೀವು ನಂಬಿಕೆಯಿಟ್ಟು ಕೆಲಸ ಮಾಡಿ " ಎಂಬುದಾಗಿ ತಿಳಿಸಿ ಎಚ್ಚರಿಸಿದರು

ಐಸ್‌ಲೆಂಡಿನಲ್ಲಿ ನೌಕಾ ಮೂಲ

ಐಸ್‌ಲೆಂಡನ್ನು ಅಮೇರಿಕದ ಪ್ರಮುಖ ನೌಕಾಚಟುವಟಿಕೆಯ ಮೂಲಗಳಲ್ಲಿ ಒಂದನ್ನಾಗಿ ಮಾಡಲಾಗಿದೆಯೆಂದು ಅಮೇರಿಕದ ನೌಕಾಖಾತೆಯ ಕಾರ್ಯದರ್ಶಿಗಳಾದ ಶ್ರೀ|| ನಾಕ್ಸರವರು ತಿಳಿಸಿದರು ಐಸ್‌ಲೆಂಡಿನಲ್ಲಿ ಬಲಯುತ ನೌಕಾ ಮೂಲವನ್ನು ಸ್ಥಾಪಿಸಬೇಕೆಂದು ಅಮೇರಿಕ ಸರಕಾರದವರು ತೀರ್ಮಾನಿಸಿರುವುದನ್ನು ನೋಡಿದರೆ, ಅಮೇರಿಕಾ ನೌಕೆಗಳು ಕಾವಲು ತಿರುಗುತ್ತಿರುವ ಕ್ಷೇತ್ರವನ್ನು ವಿಸ್ತರಿಸಲಾಗುವದೆಂಬುದೂ ಮತ್ತು ಬ್ರಿಟನ್ನಿನವರೆಗೆ ಸಾಮಾನು ಹಡಗುಗಳಿಗೆ ನೌಕೆಗಳನ್ನು ಕಾವಲು ಹಾಕಲಾಗುವುದೆಂಬುದೂ ಖಂಡಿತವಾಗಿದೆ ಐಸ್‌ಲೆಂಡಿನಲ್ಲಿ ಹಡಗುಗಳನ್ನು ಮತ್ತು ವಿಮಾನಗಳನ್ನು ಸರಿಪಡಿಸುವ ಸೌಕರ್ಯವನ್ನೂ ಸಂಗ್ರಾಮ ವಸ್ತುಗಳ ಮತ್ತು ಎಣ್ಣೆಯ ಉಗ್ರಾಣಗಳನ್ನೂ ಗಾಯಗೊಂಡವರ ಚಿಕಿತ್ಸೆಗೆ ಆಸ್ಪತ್ರೆ ಸೌಕರ್ಯವನ್ನೂ ಏರ್ಪಡಿಸಲಾಗಿದೆ.

ಛಳಿಗಾಲದಲ್ಲಿ ನಾಜಿಗಳ ಕಾರ್ಯಕ್ರಮ

ನವಂಬರ್‌ನಲ್ಲೂ ಮತ್ತು ಛಳಿಗಾಲದಲ್ಲಿಯೂ ಈ ಕಾರ್ಯಗಳನ್ನು ಸಾಧಿಸಬೇಕೆಂದು ನಾಜಿಗಳು ನಿರ್ಧರಿಸಿರುವದಾಗಿ ತಿಳಿದುಬರುತ್ತದೆ

(೧) ಮಾಸ್ಕೋವನ್ನು ಸುತ್ತುವರಿದು, ಪೂರ್ವದ ಕಡೆಯಿಂದ ಅಲ್ಲಿಗೆ ಹೊಸ ಸೇನೆಗಳು ಬರದಂತೆ ಮಾಡುವುದು (೨) ಡೋನೆಟ್ಸ್ ನದಿಯನ್ನು ದಾಟುವುದು (೩) ಕಾಕಸಸ್‌ಗೂ ರಷ್ಯಕ್ಕೂ ಸಂಬಂಧವಿಲ್ಲದಂತೆ ಮಾಡಲು ರೋಸ್ಟೋವ್‌ನಿಂದ ಅಸ್ಟ್ರಖಾನ್ ಕಡೆಗೆ ನುಗ್ಗುವುದು (೪) ಕ್ರಿಮಿಯಾ ಕಡೆಯಿಂದ ಉತ್ತರ ಕಕೇಷಿಯ ಪ್ರವೇಶ (೫) ಇರಾನಿನಿಂದ ರಷ್ಯಕ್ಕೆ ಮಿತ್ರರಾಷ್ಟ್ರಗಳ ಸರಬರಾಜು ಬರದಂತೆ ತಡೆಯುವುದು ರೋಸ್ಟೋವ್ ಬಳಿ ಜರ್ಮನರು ಹೆಚ್ಚು ದೂರ ಮುಂದೆ ನುಗ್ಗಿರುವಂತಿಲ್ಲ ಹರ್ ಹಿಟ್ಲರರ ಸೈನ್ಯಾಧಿಕಾರಿಗಳಲ್ಲಿ ಪರಮ ಸಾಹಸಿಗಳೆಂದು ಹೆಸರುಗೊಂಡಿರುವ ಜ|| ರಂಡ್‌ಸ್ಟೆಡ್‌ರವರ ಉದ್ದಿಶ್ಯವಾದರೂ ಕಾಕಸಸ್ ಕ್ಷೇತ್ರವನ್ನು ಆಕ್ರಮಿಸುವುದಕ್ಕಿಂತ ಹೆಚ್ಚಾಗಿ ರಷ್ಯನ್ನರು ಆ ಕ್ಷೇತ್ರದಲ್ಲಿರುವ ಎಣ್ಣೆಗಳನ್ನು ನಾಶಮಾಡಿ, ತಾವಾಗಿ ತಮ್ಮ ನೇನಗೆ ಪೀಡೆಯನ್ನು ತಂದುಕೊಳ್ಳುವಂತೆ ಮಾಡಲು ಹೆಚ್ಚು ಕುತೂಹಲವುಳ್ಳವರಾಗಿರುವದಾಗಿ ಹೇಳಲಾಗಿದೆ

ಅಮೇರಿಕವು ಸಂಗ್ರಾಮ ಚಟುವಟಿಕೆಯನ್ನು ಹೆಚ್ಚಿಸಲಿದೆ

ಇನ್ನು ಮುಂದೆ ಅಮೇರಿಕವು ಬ್ರಿಟನ್ನಿಗೆ ಹೋಗುವ ಸಮುದ್ರ ಮತ್ತು ವಾಯುಮಾರ್ಗಗಳಲ್ಲಿ ತನ್ನ ಚಟುವಟಿಕೆಯನ್ನು ಹೆಚ್ಚಿಸುವದೆಂದು ನಂಬಲಾಗಿದೆ. ತಾಟಸ್ಥ್ಯ ಶಾಸನವು ಬದಲಾವಣೆ ಹೊಂದಿದ ಪರಿಣಾಮವಾಗಿ ಇನ್ನು ಮುಂದೆ— 1 ಬ್ರಿಟಿಷ್ ದ್ವೀಪಗಳವರೆಗೆ ನೌಕಾ ಮತ್ತು ವಿಮಾನ ಕಾವಲಿನ ಏರ್ಪಾಟನ್ನು ವಿಸ್ತರಿಸುವುದು 2 ಬ್ರಿಟಿಷ್ ದ್ವೀಪಗಳಲ್ಲಿ ಅಮೇರಿಕ ಬಲ ಮೂಲಗಳ ಸ್ಥಾಪನೆ. 3 ಜಿಬ್ರಾಲ್ಟರ್ ಮೂಲಕ ಮೆಡಿಟರೇನಿಯನ್‌ನಲ್ಲಿರುವ ಬ್ರಿಟಿಷ್ ಬಂದರುಗಳಿಗೆ ಅಮೇರಿಕನ್ ನೌಕೆಗಳ ರಕ್ಷಣೆಯಲ್ಲಿ ಸಾಮಾನುಗಳನ್ನು ಕಳುಹಿಸುವುದು. 4. ಅಮೇರಿಕನ್ ಬಾಂಬರುಗಳನ್ನು ಅಟ್ಲಾಂಟಿಕ್ ಸಾಗರವನ್ನು ದಾಟಿಸಿ ಬ್ರಿಟನ್ನಿಗೆ ಕೊಡುವುದು. ಈ ಕಾರ್ಯಗಳನ್ನೆಲ್ಲ ಅಮೇರಿಕವು ನಡೆಸಲಿದೆ.

ಈಜಿಪ್ಟಿನ ಮೇಲೆ ವಿಮಾನ ಮುತ್ತಿಗೆ

ಈಜಿಪ್ಟಿನ ರಾಜಧಾನಿಯಾದ ಕೈರೋ ನಗರಕ್ಕೆ 60 ಮೈಲು ದೂರದಲ್ಲಿರುವ ಫಯೂಂ ಎಂಬ ಪ್ರದೇಶದ ಮೇಲೆ ಶತ್ರುವಿಮಾನಗಳು ಉಗ್ರಮುತ್ತಿಗೆ ನಡೆಸಿದುದರಿಂದ 64ಮಂದಿ ಮೃತರಾದರೆಂದೂ 95 ಜನರು ಗಾಯಗೊಂಡರೆಂದೂ, ಈ ಮುತ್ತಿಗೆಯಿಂದ ನೊಂದ ಮತ್ತು ನಷ್ಟಗೊಂಡವರ ಸಹಾಯಾರ್ಥವಾಗಿ ಬ್ರಿಟಿಷ್ ರಾಯಭಾರಿಗಳೂ ಈಜಿಪ್ಟ್ ಮಹಾಪ್ರಧಾನರೂ ಸೇರಿ ಅಲ್ಲಿಗೆ ಆಹಾರ ವಸ್ತುಗಳನ್ನು ಕಳುಹಿಸಿರುವದಲ್ಲದೆ ತಲಾ 100 ಪೌಂಡುಗಳನ್ನು ಕಳಿಸಿಕೊಟ್ಟಿದ್ದಾರೆ

ಆರ್ಕ್‌ರಾಯಲ್ ನೌಕೆ ನಾಶವಾಯಿತು

22000 ಟ ತೂಕದ " ಆರ್ಕ್‌ರಾಯಲ್ " ಎಂಬ ಭಾರಿ ಬ್ರಿಟಿಷ್ ಏರ್‌ಕ್ರಾಫ್ಟ್ ಕ್ಯಾರಿಯರ್ ಹಡಗು ಮೆಡಿಟರೇನಿಯನ್ ಸಮುದ್ರದಲ್ಲಿ ಶತ್ರುಗಳ ಟಾರ್ಪೆಡೋ ಏಟಿಗೆ ಸಿಕ್ಕಿ ಮುಳುಗಿತೆಂದು ಪ್ರಕಟವಾಗಿದೆ ಅದರಲ್ಲಿ 4 5 ಅಂಗುಲ ವ್ಯಾಸದ 16 ಫಿರಂಗಿಗಳೂ 60 ವಿಮಾನಗಳೂ ಇದ್ದವು ಅವರಲ್ಲಿದ್ದ 1525 ಮಂದಿ ನಾವಿಕರಲ್ಲಿ ಬಹಳ ಜನರನ್ನು ರಕ್ಷಿಸಲಾಗಿದೆಯೆಂದು ಹೇಳಲಾಗಿದೆ

ಎಡ್ವರ್ಡ್ ನಾಣ್ಯ ಚಲಾವಣೆ ನಿಲ್ಲಿಸಲಾಗುವದು

ಏಳನೇ ಎಡ್ವರ್ಡ್ ಚಕ್ರವರ್ತಿಯವರ ಮುಖಮುದ್ರೆಯುಳ್ಳ ಒಂದು ರೂಪಾಯಿನ ಮತ್ತು ಅರ್ಧ ರೂಪಾಯಿನ ನಾಣ್ಯಗಳು 1942 ನೇ ಮೇ ತಾ 31 ರಿಂದಾಚೆಗೆ ಚಲಾವಣೆಯಲ್ಲಿ ಇರುವುದಿಲ್ಲವೆಂದು ಇಂಡಿಯಾ ಸರ್ಕಾರದವರು ಪ್ರಕಟಿಸಿದ್ದಾರೆ ಪೋಟಿನ ನಾಣ್ಯಗಳ ತಯಾರಿಯನ್ನು ತಪ್ಪಿಸಬೇಕೆಂದೂ ನಾಣ್ಯಗಳಿಗಾಗಿ ಬೆಳ್ಳಿಯನ್ನು ಅನಾವಶ್ಯಕವಾಗಿ ಉಪಯೋಗಿಸುವುದನ್ನು ಸಾಧ್ಯವಾದಷ್ಟು ಕಡಿಮೆಯಾಗುವಂತೆ ಮಾಡಲು ಉದ್ದೇಶಿಸಿದ್ದಾರೆ ಈಗ ಚಲಾವಣೆಯಲ್ಲಿರುವ ಏಳನೇ ಎಡ್ವರ್ಡ್ ಚಕ್ರವರ್ತಿಯವರ ನಾಣ್ಯಗಳನ್ನು ಸರ್ಕಾರದ ಎಲ್ಲಾ ಖಜಾನೆಗಳಲ್ಲೂ ಅಂಚೆ ಕಚೇರಿಗಳಲ್ಲೂ ರೈಲು ನಿಲ್ದಾಣಗಳಲ್ಲೂ 1942 ನೇ ಸೆಪ್ಟಂಬರ್ ತಾ 30 ರ ವರೆಗೆ ಮಾತ್ರ ತೆಗೆದುಕೊಳ್ಳುವರು ಅಲ್ಲಿಂದಾಚೆಗೆ ಮುಂದಿನ ಪ್ರಕಟಣೆಯವರೆಗೆ ಬೊಂಬಾಯಿ, ಮದರಾಸ್ ಮತ್ತು ಕಲ್ಕತ್ತೆಗಳಲ್ಲಿರುವ ರಿಸರ್ವ್ ಬ್ಯಾಂಕ್‌ಗಳಲ್ಲಿ ಮಾತ್ರ ತೆಗೆದುಕೊಳ್ಳುವರು

ಸುಭಾಸ್ ಚಂದ್ರಬೋಸ್ ರವರು ಯೂರೋಪಿನಲ್ಲಿರುವರೇ !

ಶ್ರೀ|| ಸುಭಾಷ ಚಂದ್ರಬೋಸ್‌ರವರು ಜರ್ಮನಿ ರಾಜಧಾನಿಯಾಗಿರುವ ಬರ್ಲಿನ್ ನಗರದಲ್ಲಿ ಇಲ್ಲವೇ ಇಟಲಿಯ ರಾಜಧಾನಿಯಾಗಿರುವ ರೋಮ್ ಪಟ್ಟಣದಲ್ಲಿ ಇದ್ದಾರೆಂದು ಇತ್ತೀಚೆಗೆ ಕೆಲವರು ಭಾವಿಸಿರುತ್ತಾರೆ ಈ ಸಂಬಂಧವಾದ ಕರಪತ್ರಗಳು ಈ ದೇಶದಲ್ಲಿ ಇಂಡಿಯಾ ಸರ್ಕಾರದವರ ಕೈಗೆ ಸಿಕ್ಕಿರುತ್ತವೆಂದೂ ಅವುಗಳಲ್ಲಿ, ಶ್ರೀ|| ಬೋಸ್‌ರವರು ಇತ್ತೀಚೆಗೆ ಜರ್ಮನಿಯಲ್ಲಿ ನಡೆದ ಆಲೋಚನಾ ಸಭೆಯೊಂದರಲ್ಲಿ ಹಾಜರಿದ್ದಂತೆಯೂ ಈ ದೇಶದಲ್ಲಿರುವ ರಾಷ್ಟ್ರ ಕ್ರಾಂತಿಕಾರರೊಡನೆ ಅವರು ಈಗಲೂ ಸಂಬಂಧವನ್ನಿಟ್ಟುಕೊಂಡಿರುವಂತೆಯೂ ನಿವೇದಿಸಿದೆಯೆಂದೂ ಕೇಂದ್ರ ಸರ್ಕಾರದಲ್ಲಿ ಒಳಾಡಳಿತ ಶಾಖೆಗೆ ಕಾರ್ಯದರ್ಶಿಯವರಾಗಿರುವ ಮಿ|| ಕೋನ್ರಾನ್-ಸ್ಮಿತ್‌ರವರು ಕೌನ್ಸಿಲ್ ಆಫ್ ಸ್ಟೇಟ್ ಸಭೆಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರವಿತ್ತರೆಂದು ಹೇಳಲಾಗಿದೆ.

ಪಂಚಾಚಾರ್ಯಪ್ರಭಾ

೧೯೪೧ನೆಯ ನವಂಬರ್ ತಾ॥ ೨೪ನೇ ಸೋಮವಾರ

ಆಚಾರ.

ಮಾನವಕೋಟಿಯ ಉದ್ಧಾರಕ್ಕೆ ಆಚಾರವೇ ಶ್ರೇಷ್ಠವಾದ ಸಾಧನವಾಗಿರುತ್ತದೆ. ಆಚಾರದಿಂದಲೇ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳು ಪ್ರಾಪ್ತವಾಗುತ್ತವೆ. ಪೂರ್ವಕಾಲದ ಮಹರ್ಷಿಗಳೂ, ಮಹಾತ್ಮರೂ ಸತ್ಪುರುಷರೂ ಸದಾಚಾರಶೀಲರಾಗಿ ವರ್ತಿಸಿ ಪರಮೇಶ್ವರನ ಕೃಪೆಗೆ ಪಾತ್ರರಾಗಿ ಜಗತ್ತಿನಲ್ಲಿ ಈ ಹೊತ್ತಿನವರೆಗೆ ತಮ್ಮ ಪವಿತ್ರನಾಮವನ್ನುಳಿಸಿಕೊಂಡು ಸರ್ವರಿಂದಲೂ ಸ್ತುತ್ಯರಾಗಿ ಪ್ರಕಾಶಿಸುತ್ತಿರುವರು. ಆದುದರಿಂದಲೇ ಜಗನ್ಮಾತೆ ಶ್ರುತಿದೇವಿಯು "ಆಚಾರಃ ಪರಮೋಧರ್ಮಃ" ಎಂದು ಈ ಆಚಾರದ ಶ್ರೇಷ್ಠತೆಯನ್ನು ನಾನಾವಿಧವಾಗಿ ಕೊಂಡಾಡಿರುವಳು. ವೀರಶೈವ ಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯಮಹರ್ಷಿಗೆ ವೀರಶೈವಸಿದ್ಧಾಂತವನ್ನುಪದೇಶಿಸುವ ಸಮಯದಲ್ಲಿ 'ಸದಾಚಾರಪ್ರಿಯಃ ಶಂಭುಃ ಸದಾಚಾರೇಣ ಪೂಜ್ಯತೇ ಸದಾಚಾರಂ ವಿನಾ ತಸ್ಯ ಪ್ರಸಾದೋ ನೈವಜಾಯತೇ' ಎಂದು ಬೋಧಿಸಿರುವರು. ಅಂದರೆ ಜಗದ್ವಂದ್ಯನಾದ ಶಿವನು ಸದಾಚಾರದಲ್ಲಿಯೇ ಪ್ರೀತಿಯುಳ್ಳವನಾಗುವನೆಂದೂ ಮಾನವನು ಸದಾಚಾರದಿಂದ ಪೂಜ್ಯನಾಗುವನೆಂದೂ ಸದಾಚಾರಶೂನ್ಯನಾದ ಮಾನವನಿಗೆ ಶಿವಪ್ರಸಾದವು ಲಭಿಸುವದಿಲ್ಲವೆಂದೂ ಆದುದರಿಂದ ಮನುಷ್ಯನು ಮುಖ್ಯವಾಗಿ ಸದಾಚಾರಸಂಪನ್ನನಾಗಿ ಪರಮಸ್ಪೃಹಣೀಯವಾದ ಶಿವಪ್ರಸಾದವನ್ನು ಹೊಂದಬೇಕೆಂದೂ ಬೋಧಿಸಿದ್ದಾರೆ. ಅಲ್ಲದೆ ಲೋಕವಿಖ್ಯಾತರಾದ ಶ್ರೀಮನುಮಹರ್ಷಿಗಳು ಕೂಡ ಈ ಆಚಾರದ ಮಹತ್ವವನ್ನು ಈ ರೀತಿಯಿಂದ ವರ್ಣಿಸಿದ್ದಾರೆ.

ಆಚಾರಃ ಪರಮೋಧರ್ಮ ಆಚಾರಃ ಪರಮಂ ತಪಃ
ಆಚಾರಃ ಪರಮಾ ವಿದ್ಯಾ ಆಚಾರಃ ಪರಮಾಗತಿಃ
ಸದಾಚಾರೇಣ ದೇವತ್ವಮೃಷಿತ್ವಂ ಚ ವರಾನನೇ।
ಉಪಾಗತಾಃ ಕುಯೋನಿತ್ವಂ ಮನುಷ್ಯಾಸ್ತು ವಿಪರ್ಯಯೇ॥
ಜ್ಞಾನಮಾಚಾರಹೀನಸ್ಯ [illegible]।
ಯಥಾ ಚಂಡಾಲಭಾಂಡೇಷು ಯಥಾ ಗಂಗೋದಕಂ [illegible]।

ಆಚಾರವೇ ಶ್ರೇಷ್ಠವಾದ ಧರ್ಮವೆಂದೂ ಆಚಾರವೇ ಶ್ರೇಷ್ಠವಾದ ತಪಸ್ಸೆಂದೂ, ಆಚಾರವೇ ಶ್ರೇಷ್ಠವಾದ ಬ್ರಹ್ಮವಿದ್ಯೆಯೆಂದೂ, ಆಚಾರವೇ ಶ್ರೇಷ್ಠವಾದ ಮೋಕ್ಷವೆಂದೂ, ಇಂಥ ಸರ್ವೋತ್ತಮವಾದ ಆಚಾರದಿಂದಲೇ ಮನುಷ್ಯರು ದೇವತ್ವವನ್ನೂ ಹಾಗೂ ಮಹರ್ಷಿತ್ವವನ್ನೂ ಪಡೆಯುವರೆಂದೂ, ಆಚಾರಹೀನರಾದ ಮನುಷ್ಯರು ಶ್ವಾನಸೂಕರಾದಿ ಜನ್ಮಗಳನ್ನು ತಾಳುವರೆಂದೂ, ಚಂಡಾಲರ ಪಾತ್ರೆಯಲ್ಲಿ ಪವಿತ್ರವಾದ ಗಂಗಾಜಲವಿದ್ದರೂ ಸಹ ಆ ಜಲವು ಪ್ರಯೋಜನಕಾರಿಯಾಗದಂತೆ ಅನಾಚಾರಿಗಳಲ್ಲಿ ಜ್ಞಾನವಿದ್ದರೂ ಕೂಡ ಆ ಜ್ಞಾನವು ಪ್ರಯೋಜನಕಾರಿಯಲ್ಲವೆಂದೂ, ಬೋಧಿಸಿರುವರು. ಇದರ ಮೇಲಿಂದ ಆಚಾರದ ಆವಶ್ಯಕತೆಯು ಸನಾತನಧರ್ಮಾವಲಂಬಿಗಳಿಗೆ ಎಷ್ಟರಮಟ್ಟಿಗೆ ಇರಬಹುದೆನ್ನುವದು ಚಿಕ್ಕ ಬಾಲಕರಿಗೂ ಕೂಡ ತಿಳಿಯುವಂತಿದೆ. ಹೀಗಿದ್ದರೂ ಸಹ ಈ ಕಾಲದಲ್ಲಿ ಈ ಆಚಾರದ ಸ್ವರೂಪವನ್ನು ತಿಳಿದು ಅದರಂತೆ ವರ್ತಿಸುವವರು ಕೇವಲ ವಿರಳರಾಗಿದ್ದಾರೆ. ಪೂರ್ವಕಾಲದ ಜನರು ಆಚಾರಸಂಪನ್ನರಾಗಿ ಧರ್ಮ ಕರ್ಮಗಳಿಗೆ ಭೀತರಾಗಿ ವರ್ತಿಸುತ್ತಿದ್ದರು. ಈಗಿನವರು ಅವೆಲ್ಲಕ್ಕೂ ಬಹಿಷ್ಕಾರವನ್ನು ಹಾಕಿಬಿಟ್ಟಿದ್ದಾರೆ. ಈಗಿನವರಿಗೆ ತಮ್ಮ ಧರ್ಮ ಬೇಡ, ಕರ್ಮ ಬೇಡ; ಗುರುಗಳು ಬೇಡ, ಆಚಾರವು ಬೇಡ; ತಂದೆಯು ಬೇಡ. ತಾಯಿಯು ಬೇಡ, ಆಚಾರವನ್ನು ಬೋಧಿಸುವವರು ಮೊದಲೇ ಬೇಡವಾಗಿದೆ. ಯಾರು ಅನಾಚಾರವನ್ನು ಬೋಧಿಸುವರೋ ಅವರೇ ಈಗಿನವರಿಗೆ ತಂದೆತಾಯಿಗಳು, ಗುರುಹಿರಿಯರು, ಬಂಧುಬಳಗದವರಾಗಿದ್ದಾರೆ. ವೀರಶೈವಧರ್ಮಶಾಸ್ತ್ರದಲ್ಲಿ ಭವಿಗಳ ನೆರಳೂ ಸಹ ಇವರ ಮೇಲೆ ಬೀಳಕೂಡದೆಂದು ಇಷ್ಟು ಕಠಿಣಶಾಸನವಿರುವಲ್ಲಿ ಆ ಮಾರ್ಗವನ್ನು ತೊರೆದು ಅಲ್ಪರೀತಿಯಿಂದಾದರೂ ಕ್ರಿಯೆಗಳನ್ನು ಸಾಗಿಸದೆ ನಿರ್ಭೀತಿಯಿಂದ ಅನ್ಯಮತೀಯರ ಕಾಫೀ ಕ್ಲಬ್ಬುಗಳಿಗೆ ಹೋಗಿ ಚಹಾ, ಕಾಫಿ, ಉಪ್ಪಿಟ್ಟು, ದೋಸೆ ಕೇಸರಿಭಾತ, ವಾಂಗೀಭಾತ ಮೊದಲಾದವುಗಳನ್ನು ತಿಂದು ತೇಗುತ್ತ ಬರುತ್ತಿರುವುದನ್ನು ನೋಡಿದರೆ ಯಾರಿಗೆ ವ್ಯಸನವೆನಿಸಲಿಕ್ಕಿಲ್ಲ? ಈ ಧರ್ಮಭ್ರಷ್ಟರು ತಾವು ಕೆಡುವದಲ್ಲದೆ ತಮ್ಮ ಮನೆಯವರನ್ನೆಲ್ಲ ಕೆಡಿಸುವರು. ಒಳ್ಳೆ ಸದಾಚಾರಿಗಳ ಮನೆಯಲ್ಲಿ ಹೋಗಿ ಅವರೊಡನೆ ಪಂಕ್ತಿಯಲ್ಲಿ ಕೂತು ತಿಂದು ಅವರು ಅಲ್ಪಸ್ವಲ್ಪ ಆಚಾರವನ್ನು ಕಾಯ್ದುಕೊಂಡಿದ್ದರೂ ಅವರನ್ನು ಸಹ ಕೆಡಿಸುತ್ತಿರುವರು. ಈ ಕಾಲದಲ್ಲಿ ಇಂಥ ಧರ್ಮಲಂಡರ ಸಹವಾಸಕ್ಕೆ ಬಿದ್ದು ಅನೇಕರು ಕೆಡಲಿಕ್ಕೆ ಪ್ರಾರಂಭಿಸಿರುವರು. ಇದು ಕಲಿಕಾಲದ ಪ್ರಭಾವವೆಂದೇ ಹೇಳಬೇಕಾಗಿದೆ. ಈ ಜನರಲ್ಲಿ ಮೂರು ತರಗತಿಗಳಿವೆ. ಒಂದನೆಯ ತರಗತಿಯವರು ಉಡುಪಿಹೋಟೆಲ್ಲುಗಳಿಗೆ ಹೋಗುವವರು. ಎರಡನೆಯ ತರಗತಿಯವರು ಯುರೋಪಿಯನ್ನರ ಹೋಟೆಲ್ಲುಗಳಿಗೆ ಹೋಗುವವರು, ಮೂರನೆಯ ತರಗತಿಯವರು ಮುಸಲ್ಮಾನರ ಹೋಟೆಲ್ಲುಗಳಿಗೆ ಹೋಗುವವರು. ಇವರೇ ಹೆಚ್ಚಿನ ಶ್ರೇಣಿಯವರು. ಇಂಥ ಅಧಮರು ಸಮಾಜದಲ್ಲಿ ಕಾಲಿಡುತ್ತ ಹೋದರೆ ಸಮಾಜವು ಸುಧಾರಿಸುವ ಬಗೆಯೆಂತು? ವಿಪರೀತವಾಗುವದೆಂತು? ಪ್ರತಿಯೊಬ್ಬ ಜಾತಿಯವನು ಬಾಯ ಪ್ಲೇಟು ಕೊಂಡು ಕುಡಿದ ಎಂಜಲಿನಿಂದ ಕೂಡಿದ ಪಾತ್ರೆಯಲ್ಲೇ ಮತ್ತೊಬ್ಬನು ಕುಡಿಯುತ್ತಾನೆ. ಅದನ್ನೇ ಬೇರೊಬ್ಬನು ಪಾನಮಾಡುತ್ತಾನೆ. ಇದೊಂದು ನೂತನ ಯಮಲೋಕವೆಂದೇ ಹೇಳಬೇಕಾಗಿದೆ. ಇಂಥ ಧರ್ಮವಿರುದ್ಧ ಅಸಹ್ಯದುಷ್ಕೃತಿಯನ್ನು ಮಾಡಲಿಕ್ಕೆ ಇವರ ಮನಸ್ಸು ಹೇಗೆ ಒಪ್ಪುವದೋ ಯಾರಿಗೂ ತಿಳಿಯದಾಗಿದೆ. ಇಂಥ ಪುಣ್ಯಾತ್ಮರಿಗೆ ಸದಾಚಾರಿಗಳು ಆದಷ್ಟು ಮಟ್ಟಿಗೆ ಬುದ್ಧಿವಾದವನ್ನು ಹೇಳಿ ಅವರನ್ನು ಆ ದುರ್ಮಾರ್ಗದಿಂದ ತಪ್ಪಿಸುವ ಪ್ರಯತ್ನವನ್ನು ಮಾಡಬೇಕೆಂದು ಕೋರುತ್ತೇವೆ. ಈ ರೀತಿ ಅನಾಚಾರಶೀಲರಾಗಿ ನಡೆಯುವವರು ಇಹಲೋಕದ ಅಲ್ಪಸುಖದ ಕಡೆಗೆ ದೃಷ್ಟಿಯನ್ನಿಡದೆ ಪರಲೋಕದ ಭೀತಿಯ ಕಡೆಗೆ ದೃಷ್ಟಿಯನ್ನಿಟ್ಟು ಪಾಪಪುಣ್ಯಗಳು ಮತ್ತು ಧರ್ಮಾಧರ್ಮಗಳ ಸ್ವರೂಪವನ್ನು ತಿಳಿದು ತಾವು ಯಾವ ಮತದಲ್ಲಿ ಜನ್ಮವೆತ್ತಿರುವರೋ ಆ ಮತದ ಕಟ್ಟಳೆಗಳನ್ನೂ ಮೇಲೆ ಹೇಳಿದಂತೆ ಆಚಾರದ ಶ್ರೇಷ್ಠತೆಯನ್ನೂ ತಿಳಿದುಕೊಂಡು ಸದಾಚಾರಶೀಲರಾಗಿ ವರ್ತಿಸಿ ಪರಮೇಶ್ವರನ ಕೃಪೆಗೆ ಪಾತ್ರರಾಗಿ ಇಹಪರಸುಖಗಳೆರಡನ್ನೂ ಅನುಭವಿಸಿ ಧನ್ಯರಾಗಬೇಕೆಂದು ಆಶಿಸುತ್ತೇವೆ.

ಯುದ್ಧವಾರ್ತೆ.

ಐರಿಷ್ ಹಡಗು ಮುಳುಗಿತು

ಕಳೆದ ೯ನೆಯ ತಾರೀಖು ಇಂಗ್ಲೆಂಡಿನ ತೀರಕ್ಕೆ 10 ಮೈಲು ದೂರದಲ್ಲಿ 'ಗ್ಲೆನ್‌ಸರ್' ಎಂಬ ಐರಿಷ್ ಹಡಗಿನಮೇಲೆ ಜರ್ಮನ್ ವಿಮಾನವೊಂದು ಗುಂಡುಹಾರಿಸಿ ಮುಳುಗಿಸಿತೆಂದು ಈ ವಿಚಾರದಲ್ಲಿ ಜರ್ಮನಿಸರ್ಕಾರದಿಂದ ಯಾವ ವಿವರಣೆಯೂ ಬಂದಿಲ್ಲವೆಂದೂ ಡೀವೇಲರಾರವರು ಐರ್‌ಶಾಸನಸಭೆಯಲ್ಲಿ ಹೇಳಿದರು.

ಜಪಾನನ್ನು ಎದುರಿಸಲು ಸಿದ್ಧತೆ !

ಇಂಡೋಚೀಣಾದಿಂದ ಜಪಾನರೇನಾದರೂ ಯುನಾನ್ ಪ್ರಾಂತ್ಯಕ್ಕೆ ಮುತ್ತಿಗೆ ಹಾಕುವದಾದರೆ 3 ಲಕ್ಷ ಚೀಣೀ ಯೋಧರು ಜಪಾನರನ್ನೆದುರಿಸಲು ಸಿದ್ಧವಾಗಿದ್ದಾರೆ. ಅವರು ಶತ್ರುಗಳು ಮೇಲೆ ಬಿದ್ದು ಬರಲು ಅಡ್ಡಿಯಾಗುವಂತೆ ಇಂಡೊ ಚೀಣಾದ ಕಡೆಯ ಸೇತುವೆಗಳನ್ನು ರಸ್ತೆಗಳನ್ನು ನಾಶಮಾಡುತ್ತಿದ್ದಾರೆ. ಜಪಾನು ಥೈಲೆಂಡಿಗೆ ಪ್ರವೇಶಿಸಿ ಬ್ರಿಟನ್ನು ಜಪಾನಿನ ಮೇಲೆ ಯುದ್ಧ ಹೂಡಬೇಕಾಗಿ ಬಂದರೆ, ಅಮೆರಿಕವು ಸಹಾ ಜಪಾನಿನ ಮೇಲೆ ಸಂಗ್ರಾಮ ಆರಂಭಿಸುವದು. ಪೂರ್ವದಲ್ಲಿ ಅಮೆರಿಕ ಮತ್ತು ಬ್ರಿಟಿಷ್ ಸೈನ್ಯಗಳು ಸಹಕರಿಸುವ ವಿಚಾರದಲ್ಲಿ ಎಲ್ಲ ವ್ಯವಸ್ಥೆಯೂ ಮುಗಿದಿದೆ. ಶತ್ರುಗಳನ್ನೆದುರಿಸಲು ಅವರು ಶಕ್ತರಾಗಿದ್ದಾರೆ." ಎಂದು ಡಾ॥ ಜಾನ್ ಎಸ್ ಯಂಗ್‌ರವರು ತಿಳಿಸಿದ್ದಾರೆ.

ಅಬಿಸೀನಿಯದಲ್ಲಿ ಉಳಿದಿರುವ ಇಟಲಿ ಸೈನ್ಯಗಳೆಲ್ಲ ಶರಣಾಗತವಾಗಬೇಕು

ಅಬಿಸೀನಿಯಾದಲ್ಲಿ ಕೊಡೋರ ಪ್ರದೇಶದಲ್ಲಿಯೂ ಟಾನಾ ಸರೋವರದ ಬಳಿಯಲ್ಲಿಯೂ ಇರುವ ಇಟಲಿ ಸೈನ್ಯಗಳೆಲ್ಲಾ ಶರಣಾಗತವಾಗಬೇಕೆಂದು ತಿಳಿಸಿರುವದಾಗಿ ಪ್ರಕಟಿಸಲಾಗಿದೆ.

ಥೈಲ್ಯಾಂಡಿನಲ್ಲಿ ರಕ್ಷಣಾ ಸಿದ್ಧತೆಗಳು

ಥೈಲ್ಯಾಂಡ್ ರಾಷ್ಟ್ರದ ರಕ್ಷಣೆಗಾಗಿ ರಾಷ್ಟ್ರೀಯ ರಕ್ಷಣಾ ಮಂಡಲಿಯನ್ನು ಸ್ಥಾಪಿಸಲಾಗಿದೆ. ಅದರ ಥೈಲ್ಯಾಂಡಿನ ಸೈನ್ಯಗಳ ಮೇಲಧಿಕಾರಿಗಳ ನೇಮಕವೂ ಆಗಿದೆ. ಸೈನ್ಯಾಧಿಕಾರಿಗಳು ಬಾಂಕಾಕ್‌ನಲ್ಲಿ ಸಭೆ ಮಾತುಕತೆ ನಡೆಸಿದರು. ಥೈಲ್ಯಾಂಡಿನ ಮುಖ್ಯಮಂತ್ರಿಯನ್ನು ಬ್ರಿಟಿಷ್ ರಾಯಭಾರ ಮಂತ್ರಿಯು ಭೇಟಿಮಾಡಿ ಒಂದು ಗಂಟೆ ಕಾಲ ಅವರೊಡನೆ ಮಾತುಕತೆ ನಡೆಸಿದರು.

ಲಿಬ್ಯಾ ಬಳಿ ಬ್ರಿಟಿಷರ ಚಟುವಟಿಕೆ

ಬ್ರಿಟಿಷ್ ಸೈನ್ಯಗಳು ಈಜಿಪ್ಟಿನಿಂದ ಸಿರನೈಕಾ ಕಡೆ ನುಗ್ಗಲು ಆರಂಭಿಸಿವೆ. ಬ್ರಿಟಿಷ್ ಶಸ್ತ್ರಬಂಧಿ ಪಡೆಗಳು ಕಾಲಾಳುಪಡೆಗಳ ಸಹಾಯದಿಂದ ಶತ್ರುಸ್ಥಾನಗಳ ಮೇ ನುಗ್ಗಿ ಶತ್ರುಗಳಮೇಲೆ ಅನಿರೀಕ್ಷಿತವಾಗಿ ಬಿದ್ದ ಕಾರ ಅನೇಕ ಶತ್ರುಗಳು ಸೆರೆಸಿಕ್ಕಿದ್ದಾರೆ. ಬ್ರಿಟಿಷರು ಮುತ್ತಿ ಯಾರಂಭಿಸಿದಾಗ್ಗೆ ಅಸಾಧ್ಯ ಬಿರುಗಾಳಿ ಎದ್ದದ್ದರಿಂ ಶತ್ರುಗಳು ಬ್ರಿಟಿಷರ ಚಟುವಟಿಕೆಯನ್ನು ಕಾಣಲಾ ಲಿಲ್ಲ. ಬ್ರಿಟಿಷರ ಈ ಮುನ್ನುಗ್ಗುವಿಕೆಯಲ್ಲಿ ನ್ಯೂಜಿಲೆಂಡ್, ದಕ್ಷಿಣಆಫ್ರಿಕ ಮತ್ತು ಭಾರತೀಯ ಸೈನಿಕರು ಭಾಗವಹಿಸಿದ್ದಾರೆ.

ಜ॥ ವೇಗಾಂಡ್‌ರವರು ನಿವೃತ್ತರಾದರು

ಉತ್ತರ ಆಫ್ರಿಕದಲ್ಲಿ ಫ್ರೆಂಚ್‌ಸರಕಾರದ ಪ್ರತಿನಿ ಗಳೂ ಮತ್ತು ದಂಡನಾಯಕರೂ ಆಗಿದ್ದ ಜ॥ ವೇಗಾಂಡ್‌ರವರನ್ನು ಕೆಲಸದಿಂದ ನಿವೃತ್ತರನ್ನಾಗಿಸಿದ್ದಾರೆ. ನಾ ಗಳೊಂದಿಗೆ ಫ್ರಾನ್ಸು ನಿಕಟ ಸಂಬಂಧ ಬೆಳೆಸಬೇ ಕೆಂದು ವಾದಿಸುವವರಿಗೆ ಜ॥ ವೇಗಾಂಡ್‌ರವರ ನಿವೃತ್ತಿಯಿಂದ ಬಹಳ ಬಲ ಬಂದಂತಾಗಿದೆ. ಉತ್ತರ ಆಫ್ರಿಕದಲ್ಲಿ ನಾಜಿಗಳು ಕಾಲಿಡಲಿಕ್ಕೆ ಜ॥ ವೇಗಾಂಡ್‌ರವರು ಭಾರಿ ಅಡಚಣೆಯಾಗಿ ನಿಂತಿದ್ದರು; ಫ್ರೆಂಚ್ ಆಫ್ರಿಕಾಕ್ಕೆ ಇನ್ನುಮುಂದೆ ಬೇಕಾದವರು ನಿರಾತಂಕವಾಗಿ ಹೋಗುವಂತಾಗುವದೆಂದು ಊಹಿಸಲಾಗಿದೆ.

ರಷ್ಯದ ಹೊಸಬಗೆಯ ವಿಮಾನ

ರಷ್ಯವು ಹೊಸ ಮಾದರಿಯ ವಿಮಾನವನ್ನು ರ ರಂಗಕ್ಕೆ ಕಳುಹಿಸಿದೆ. ಈ ವಿಮಾನವನ್ನು ಶತ್ರುಸೇನೆ ಮೇಲೂ ವಿಮಾನ ನಿಲ್ದಾಣಗಳ ಮೇಲೂ ಮುತ್ತಿ ನಡೆಸುವುದಕ್ಕಾಗಿಯೇ ವಿಶೇಷ ರಕ್ಷಣೆ ವ್ಯವಸ್ಥೆಯೊಡ ತಯಾರಿಸಲಾಗಿದೆ. ಇದು ಬಹಳ ತಗ್ಗಿನಲ್ಲಿ ಅಂದ ಭೂಮಿಯಿಂದ 60 ಅಡಿ ಎತ್ತರದಲ್ಲೇ ಹಾರುತ್ತ ಶತ್ರುಗಳಿಗೆ ಭಯಂಕರ ನಷ್ಟವುಂಟುಮಾಡಬಲ್ಲದು. ಶತ್ರುಗಳ ಎಂಥ ಗುಂಡಿನ ಏಟೂ ಈ ವಿಮಾನಗಳನ್ನು ನಾ ಮಾಡಲಾರದೆಂದು ಹೇಳಲಾಗಿದೆ.

ಬ್ರಿಟನನ್ನು ಮುತ್ತಲು ಸಿದ್ಧತೆ

ಜರ್ಮನಿಯು ಬ್ರಿಟನ್ನಿನ ಮೇಲೆ ಮುತ್ತಿಗೆ ನ ಸಲೇ ಬೇಕಾಗುವುದೆಂಬುದಾಗಿ ಶ್ರೀ ಚರ್ಚಿಲ್ಲರು ವ್ಯಕ್ತಪಡಿಸಿದ ಅಭಿಪ್ರಾಯವು ನಿಜವೆಂಬುದಾಗಿ ಕಾಣಬರುತ್ತಿದೆ. ರಷ್ಯದ ಮೇಲೆ ಕದನವಾರಂಭಿಸಿದ್ದರಿಂದ ಪ ಸ್ಥಿತಿಯು ಇನ್ನೂ ಕೆಡಾಯಿತೆಂದೂ ಆದ್ದರಿಂದ ಎಷ್ಟೇ ನಷ್ಟವಾಗಲಿ ಬ್ರಿಟನ್ನಿಗೆ ಮುತ್ತಿಗೆ ಹಾಕಿಯೇ ತೀ

ಕೆಂದೂ ಜರ್ಮನರು ಅಭಿಪ್ರಾಯಪಡುತ್ತಿರುವಗಿದೆ ಜರ್ಮನಿಯು ವಾಯುವಿನ ಮೂಲಕ ಬ್ರಿಟನ್ನಿಗೆ ಮುತ್ತಿಗೆ ಹಾಕಲು ಅಸಾಧ್ಯ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. ವಿಮಾನಗಳಿಂದ ಹಾರುವ ಅಸಂಖ್ಯ ಸೈನಿಕರಿಗೆ ತರಪೇತು ಕೊಡುತ್ತಿದೆ ಇದ್ದ ರೇಷ್ಮೆಯನ್ನೆಲ್ಲ 'ಪ್ಯಾರಾಚೂಟ್'ಗಳ ತಯಾರಿಗೆ ಉಪಯೋಗಿಸಲಾಗುತ್ತಿದೆ ಹಾಗೆ ಮುತ್ತಿಗೆ ಹಾಕುವುದರಿಂದ ಜರ್ಮನಿಗೆ ಅಂತ್ಯದಲ್ಲಿ ಜಯವಾಗುವದೆಂದು ನಂಬುವವರು ಅಲ್ಪ ಮಂದಿ ಇದ್ದರೂ, ಜೀವನದ ಮೇಲೆ ಆಸೆಯಿಲ್ಲದ ಸಾವಿರಾರು ಮಂದಿ ಸೈನಿಕರನ್ನು ಜರ್ಮನಿಯು ವಿಮಾನಗಳ ಮೂಲಕ ಬ್ರಿಟನ್ನಿನಲ್ಲಿ ಇಳಿಸುವುದಾದರೆ ಬ್ರಿಟನ್ನಿನ ಬಹಳ ಮುಖ್ಯವಾದ ಸಾರಿಗೆ ವ್ಯವಸ್ಥೆಗಳಿಗೆ ಭಾರಿ ವಿಪತ್ತು ಸಂಭವಿಸುವದೆಂದು ಹೇಳುವವರೂ ಇದ್ದಾರೆ ಆದರೆ ಜರ್ಮನರು ವಿಮಾನಗಳಿಂದ ನೆಗೆದು, ನೆಲಮುಟ್ಟುವದರೊಳಗಾಗಿ ಅವರನ್ನು ಮಟ್ಟಹಾಕಲು ಸಾಧ್ಯವಾಗುವದೆಂದು ಆರ್ ಎ ಎಫ್. ಪಡೆಯವರು ನಂಬಿದ್ದಾರೆ

ಆಸ್ಟ್ರೇಲಿಯದಲ್ಲಿ ಕಳವಳ

ಆಸ್ಟ್ರೇಲಿಯಾ ಮಹಾಪ್ರಧಾನರು ಭಾಷಣಮಾಡುತ್ತ "ಪೆಸಿಫಿಕ್ ಸಾಗರದಲ್ಲಿ ಆಸ್ಟ್ರೇಲಿಯಕ್ಕೆ ವಿಪತ್ತುಂಟಾಗಿದೆ ನಮ್ಮನ್ನು ನಾವು ರಕ್ಷಿಸಲು ಯಾವಾಗ ಆಜ್ಞೆ ಬರುವುದೆಂಬುದು ಯಾವ ಆಸ್ಟ್ರೇಲಿಯನ್ ಪ್ರಜೆಗೂ ಗೊತ್ತಿಲ್ಲ ಆಸ್ಟ್ರೇಲಿಯವು ಯುದ್ಧವನ್ನು ಬಯಸುವುದಿಲ್ಲ ಆದರ ಈ ವಿಚಾರ ನಿರ್ಧರಿಸುವುದು ಆಸ್ಟ್ರೇಲಿಯದ ಕೈಯಲ್ಲಿಲ್ಲ ಮನೋಭಾವ ಅವರಿಗೆ ಮಾತ್ರ ಗೊತ್ತು ನಲ್ಲಿ ಆಸ್ಟ್ರೇಲಿಯಾಕ್ಕೆ ಯಾರ ಮೇಲೆ ಬೀಳುವ ಉದ್ದೇಶವೂ ಇಲ್ಲ ಆದರ ಯಾರಾದರೂ ಮೇಲೆ ಬೀಳಿದ್ದನ್ನು ಎದುರಿಸಲು ಆಸ್ಟ್ರೇಲಿಯವು ಸಿದ್ಧವಾಗಿದೆ" ಎಂದು ಹೇಳಿದರು

ರೋಸ್ಟೋವ್ ಆಕ್ರಮಣ ಪ್ರಯತ್ನ ವಿಫಲವಾಯಿತು

ಕಕಸಸ್ ಪ್ರದೇಶಕ್ಕೆ ಉತ್ತರದ್ವಾರದಂತಿರುವ ರೋಸ್ಟೋವ್ ನಗರವನ್ನು ಆಕ್ರಮಿಸಲು ಜರ್ಮನರು ಅತ್ಯ ಪ್ರಯತ್ನ ನಡೆಸಿದರೂ ಸಾಧ್ಯವಾಗಲಿಲ್ಲ ಈ ನಗರದ 25 ಮೈಲಿ ದೂರದಲ್ಲಿ ನಾಜಿಗಳನ್ನು ರಷ್ಯನರು ಹಿಮ್ಮೆಟ್ಟಿಸಿ ಸೋಲಿಸಿದರು. ಶತ್ರುಗಳ ಕಡೆ ಸಾವಿರಾರು ಮಂದಿ ಯೋಧರು ಹತರಾದರು 113 ಟ್ಯಾಂಕುಗಳೂ 233 ಲಾರಿಗಳೂ ಅನೇಕ ಯುದ್ಧಸಾಮಗ್ರಿಗಳೂ ಕೈವಶವಾದವು ಜರ್ಮನರ ಸಂಖ್ಯೆ ರಷ್ಯನರಿಗೆ ಹೆಚ್ಚು ಶತ್ರುಪಡೆಯು ರಷ್ಯ ವ್ಯೂಹದೊಳಕ್ಕೆ ನುಗ್ಗಿ ಬರಲು ಅವಕಾಶಕೊಟ್ಟು, ಅನಂತರ ಅವರ ಮೇಲೆ ಫಿರಂಗಿಮಳೆಗರೆದು ಧ್ವಂಸಮಾಡಲಾಯಿತು ಜರ್ಮನರು ಹೊಸಪಡೆಗಳನ್ನು ತಂದು ವಿಪರೀತನಷ್ಟ ಹೊಂದುತ್ತಿದ್ದರೂ ಯುದ್ಧವನ್ನು ಮುಂದರಿಸುತ್ತಿದ್ದಾರೆ

ಜರ್ಮನಿ ಕಾರ್ಖಾನೆಗಳಿಗೆ ಫ್ರೆಂಚ್ ಬಂದಿಗಳು

ಈಗ ಜರ್ಮನಿಗೆ ಲಕ್ಷಾಂತರ ಕೆಲಸಗಾರರು ಬೇಕಾಗಿದ್ದಾರೆ ಇದಕ್ಕಾಗಿ ತಮ್ಮ ಸೆರೆಮನೆಯಲ್ಲಿರುವ ಫ್ರೆಂಚ್ ಬಂದಿಗಳಲ್ಲಿ ಯಾರು ಯಾರು ಯಾವ ಯಾವ ಕೆಲಸದಲ್ಲಿ ನುರಿತವರಿರುವರೆಂಬುದನ್ನು ವಿಚಿ ಸರ್ಕಾರದ ಸಹಾಯದಿಂದ ತಿಳಿದುಕೊಳ್ಳಲು ಜರ್ಮನಿಯು ಪ್ರಯತ್ನಿಸುತ್ತಿದೆ ಜರ್ಮನಿ ಕಾರ್ಖಾನೆಗಳಲ್ಲಿ ಕೆಲಸಮಾಡಲು ಒಪ್ಪುವ ಬಂದಿಗಳನ್ನು ಸೆರೆಯಿಂದ ಬಿಡುಗಡೆ ಮಾಡಲಾಗುವದೆಂದೂ, ಯೋಗ್ಯವಾದ ಸಂಬಳಸಾರಿಗೆಯನ್ನು ಕೊಟ್ಟು ಅವರುಗಳ ಸಂಸಾರಗಳ ಯೋಗಕ್ಷೇಮವನ್ನು ನೋಡಿಕೊಳ್ಳುವದಾಗಿಯೂ ಭರವಸೆಗಳನ್ನು ಕೊಡುತ್ತಿದ್ದಾರೆಂದೂ, ಆದರೆ ಅವರ ಪ್ರಯತ್ನವು ಹೆಚ್ಚು ಯಶಸ್ವಿಯಾಗಿಲ್ಲವೆಂದೂ ಹೇಳಲಾಗಿದೆ

ಅಮೆರಿಕದ ಹಡಗುಗಳ ಯುದ್ಧ ಕ್ಷೇತ್ರ ಪ್ರವೇಶ

ಈ ವಾರದಲ್ಲಿ ಅಮೇರಿಕದ ಹಲವು ಹಡಗುಗಳು ಯುದ್ಧಕ್ಷೇತ್ರವಾದ ಬ್ರಿಟನ್ನಿಗೆ ನೇರವಾಗಿ ಸಾಮಾನುಗಳನ್ನು ಹೊತ್ತು ಹೊರಡುವವೆಂದು ನಿರೀಕ್ಷಿಸಲಾಗಿದೆ ಅಷ್ಟರಲ್ಲಿ ಅವುಗಳಲ್ಲಿ ಫಿರಂಗಿಗಳನ್ನೇರಿಸಿ ಶಸ್ತ್ರ ಸಜ್ಜಿತವಾಗಿ ಮಾಡಲಾಗುವದು ಈಗ ಅಮೆರಿಕದಲ್ಲಿ 11200 ವ್ಯಾಪಾರದ ಹಡಗುಗಳಿವೆ ಅವುಗಳಲ್ಲಿ 300ರ ಮೇಲೆ ೩ ರಿಂದ ೫ ಅಂಗುಲ ವ್ಯಾಸದ ಫಿರಂಗಿಗಳನ್ನಿಡಲಾಗುತ್ತದೆ ಅವುಗಳು ಬಂದರಿಗೆ ಹಿಂತಿರುಗಿದಂತೆಲ್ಲ ಫಿರಂಗಿಗಳನ್ನು ವ್ಯವಸ್ಥೆಗೊಳಿಸಲಾಗುವದೆಂದು ತಿಳಿದುಬರುತ್ತದೆ

ಭಾರತೀಯ ಸೈನಿಕರಿಗೆ ಪ್ಯಾರಾಚೂಟ್ ಶಿಕ್ಷಣ

ಪ್ಯಾರಾಚೂಟ್ ಸೈನಿಕರಾಗಿ ಯುದ್ಧದಲ್ಲಿ ಕಾರ್ಯಾಚರಣ ನಡೆಸಲು ಇಂಡಿಯಾದ ಸೈನ್ಯಗಳಲ್ಲಿರುವ ಬ್ರಿಟಿಷ್ ಸೈನಿಕರಿಗೂ, ಭಾರತೀಯ ಸೈನಿಕರಿಗೂ, ಘೂರ್ಖಾ ಸೈನಿಕರಿಗೂ ಶಿಕ್ಷಣವನ್ನು ಕೊಡಲಾಗುತ್ತಿದೆ ಈ ಬಗ್ಗೆ ಶಿಕ್ಷಣವನ್ನು ಕೊಡಲು ಬ್ರಿಟನಿನಿಂದ ಮಿಲಿಟರಿ ಆಫೀಸರುಗಳನ್ನು ಇಂಡಿಯಾಕ್ಕೆ ಕರೆಸಲಾಗಿದೆ ಪ್ಯಾರಾಚೂಟ್ ಸೈನಿಕರಾಗಿ ಶಿಕ್ಷಣ ಹೊಂದಲು ಅರ್ಹರಾದವರನ್ನು ಚುನಾಯಿಸಲಾಗಿದೆ ಇದರ ಜೊತೆಗೆ ವೈಮಾನಿಕ ಕಾರ್ಯಾಚರಣೆಯ ವಿಶೇಷ ಶಿಕ್ಷಣವನ್ನು ಕೊಡಲಾಗುತ್ತಿದೆ ಪ್ಯಾರಾಚೂಟ್‌ಗಳ ತಯಾರಿಕೆ ಬಗ್ಗೆ ಇಂಡಿಯಾದಲ್ಲಿ ಕಾರ್ಖಾನೆಯೊಂದನ್ನು ಸ್ಥಾಪಿಸಲಾಗುವುದೆಂದು ತಿಳಿದುಬರುತ್ತದೆ

ಅಮೆರಿಕದ ಮೇಲೆ ಜಪಾನಿನ ಆಪಾದನೆ

'ಪ್ರಪಂಚವನ್ನೆಲ್ಲಾ ಯುದ್ಧಾಗ್ನಿಯಿಂದ ಬೇಯಿಸುತ್ತಿರುವುದಕ್ಕೆ ಅಮೇರಿಕದ ಸಂಯುಕ್ತ ಸಂಸ್ಥಾನವೇ ಮೂಲಕಾರಣವಾಗಿದೆ ಆ ಮಾರ್ಷಲ್ ಚಿಯಾಂಗ್ ಕೈಶೇಕ್‌ರವರನ್ನು ಹುರಿಗೊಳಿಸುತ್ತಿರುವುದೇ ಅಲ್ಲದೆ, ಥೈಲೆಂಡಿನ ಸರ್ಕಾರದ [illegible] ಜಪಾನಿನ ಮೇಲೆ ಮುಖ್ಯ ನಿರ್ಬಂಧವಾಗುವಂತ ಬಹಿಷ್ಕಾರವನ್ನು ಒತ್ತಾಯ ಪಡಿಸಿದೆ ಜಪಾನಿಗೆ ಕಚ್ಚಾ ಮಾಲುಗಳನ್ನು ಕಳುಹಿಸದಂತೆ ಡಚ್ ಈಸ್ಟ್ ಇಂಡೀಸ್‌ನ ಮೇಲೆ ಒತ್ತಾಯ ಪಡಿಸಿದೆ ಅಲ್ಲದೆ ಇನ್ನೂ ಅನೇಕ ವಿಧದಲ್ಲಿ ಸಂಯುಕ್ತ ಸಂಸ್ಥಾನವು ಜಪಾನನ್ನು ಪೀಡಿಸಿದೆ ಇಷ್ಟಲ್ಲದೆ ಮನ್ರೋ ಸಿದ್ಧಾಂತವಿದ್ದರೂ ಕೂಡ ಅಮೆರಿಕಾವು ಬ್ರಿಟನ್ನಿಗೆ ಸಹಾಯ ಮಾಡುತ್ತಾ ಯೂರೋಪಿನ ಯುದ್ಧದಲ್ಲಿ ಭಾಗವಹಿಸುತ್ತಿದೆ 'ಕಬ್ಬಿಣವು ಕಾದಿದ್ದಾಗಲೇ' ಹೊಡೆಯಬೇಕು ಅಮೆರಿಕದ ಈಗಿನ ಮುಖಂಡರು ಕೇವಲ ಪ್ರಣವಂತಿದ್ದಾರೆ ಈ ಪ್ರಣದಲ್ಲಿ ಒಂದು ದೊಡ್ಡ ರಂಧ್ರವನ್ನು ಮಾಡಬೇಕಾದುದು ಅಗತ್ಯ ಎಂತಹುದೇ ಕಠಿಣ ಪರಿಸ್ಥಿತಿಯನ್ನು ಎದುರಿಸಬೇಕಾದರೂ ಕೂಡ ಎದೆಕೊಟ್ಟು ಜಪಾನಿನ ರಾಷ್ಟ್ರೀಯ ಇರುವಿಕೆಯನ್ನು ಕಾಪಾಡಿಕೊಳ್ಳಲು ಜಪಾನೀ ಸರ್ಕಾರವು ದೃಢನಿಶ್ಚಯ ಹೊಂದಿದೆ ಜಪಾನಿನ ಸೈನ್ಯವು ಪೂರ್ಣ ಸಿದ್ಧತೆಯಿಂದಿದೆ ನೌಕಾಪಡೆಯೂ ಸಿದ್ಧವಿದೆ' ಎಂದು ಜಪಾನು ತನ್ನ ಪ್ರತಿನಿಧಿ ಸಭೆಯಲ್ಲಿ ತಿಳಿಸಿದೆ

ಲಿಬ್ಯಾವನ್ನು ಪ್ರತ್ಯೇಕಿಸುವ ಪ್ರಯತ್ನ.

ಉತ್ತರಆಫ್ರಿಕದಲ್ಲಿ ಇಟಲಿಗೆ ಸೇರಿರುವ ಲಿಬ್ಯಾ ಪ್ರಾಂತ್ಯದಲ್ಲಿ ಶತ್ರುಗಳ ಚಟುವಟಿಕೆಗಳನ್ನು ಮಟ್ಟಹಾಕಲು ಬ್ರಿಟಿಷ್ ನೌಕಾಬಲವು ಪ್ರಯತ್ನಿಸುತ್ತಿರುವದಾಗಿ ಗೊತ್ತಾಗುತ್ತದೆ ಸಿಸಲಿಯಿಂದ ಲಿಬ್ಯಾಕ್ಕೆ ಸೈನಿಕರನ್ನೂ ಸಂಗ್ರಾಮಸಾಧನಗಳನ್ನೂ ಹೊತ್ತುತರುವ ಅನೇಕ ಆಕ್ಸಿಸ್ ರಾಷ್ಟ್ರಗಳ ಹಡಗುಗಳನ್ನು ಬ್ರಿಟಿಷ್ ನೌಕೆಗಳು ನಾಶಮಾಡುತ್ತಿವೆ ಲಿಬ್ಯವು ಮರುಭೂಮಿ ಅಲ್ಲಿರುವ 10 ಲಕ್ಷ ಆಕ್ಸಿಸ್‌ಸೇನೆಗಳಿಗೆ ಎಲ್ಲ ಪದಾರ್ಥಗಳೂ ಸಿಸಿಲಿಯಿಂದಲೇ ಬರಬೇಕಾಗಿದೆ ಬ್ರಿಟಿಷ್ ನೌಕಾ ಬಲವೂ ಮತ್ತು ವಾಯುಬಲವೂ ಕೂಡಿ ಈ ಮಾರ್ಗವನ್ನು ಕಡಿದುಹಾಕಿದರೆ, ಆಗ ಲಿಬ್ಯಾದಲ್ಲಿರುವ ಆಕ್ಸಿಸ್ ಸೈನಿಕರು ಸಹಾಯಶೂನ್ಯರಾಗಿ ತಾವಾಗಿ ಮುಂದುವರಿದು ಮೇಲೆ ಬೀಳಬೇಕಾಗುತ್ತದೆ. ಆಗ ಅವರನ್ನು ಬಹು ಸುಲಭವಾಗಿ ಜಯಿಸಬಹುದು ಈ ಕಾರಣದಿಂದಲೇ ಬ್ರಿಟಿಷರು ಆ ಭಾಗದಲ್ಲಿ ತಾವಾಗಿಯೇ ಮೇಲೆ ಬೀಳದೆ ಸಮಯಕಾಯುತ್ತಿದ್ದಾರೆ ಬ್ರಿಟಿಷರು ಈಗ ಅನುಸರಿಸುತ್ತಿರುವ ನೀತಿಯಿಂದ ಇಟಲಿಯ ನೌಕಾಬಲವು ಕ್ರಮೇಣ ಕ್ಷಯಿಸುತ್ತಿದೆ

ಜಪಾನು ಇಕ್ಕಟ್ಟಿನಲ್ಲಿ ಸಿಕ್ಕಿದೆ

ಸಾಮ್ರಾಜ್ಯವಿಸ್ತರಣಕ್ಕಾಗಿ ಹೋರಾಡುತ್ತಿರುವ ಜಪಾನು ಈಗ ಬಹಳ ಇಕ್ಕಟ್ಟಿನಲ್ಲಿ ಸಿಕ್ಕಿದೆ ಈಗ ಅದು ಮುಂದುವರಿಯುವದಕ್ಕೂ ಅಥವ ಸುಮ್ಮನೆ ಕೂಡ್ರುವದಕ್ಕೂ ಆಗದಂಥಹ ಸ್ಥಿತಿಯಲ್ಲಿದೆ ದೂರದ ಪೂರ್ವದಲ್ಲಿ ಅಮೆರಿಕ ಮತ್ತು ಬ್ರಿಟಿಷ್ ನೌಕಾಬಲಗಳೊಡನೆ ಹೋರಾಡಲು ಜಪಾನು ಇಷ್ಟಪಡುತ್ತಿಲ್ಲ ಅಲ್ಲದೆ ರಷ್ಯ ಸೈನ್ಯಗಳು ಜರ್ಮನರಿಂದ ನಾಶಹೊಂದುವವರೆಗೂ ರಷ್ಯದಮೇಲೆ ಬೀಳುವದಕ್ಕೂ ಸಾಧ್ಯವಿಲ್ಲ ಇದಕ್ಕಾಗಿಯೆ ಕಾಲಕಳೆಯಲು ತನ್ನ ರಾಯಭಾರಿಯನ್ನು ಸಂಧಾನಕ್ಕಾಗಿ ಜಪಾನು ಅಮೆರಿಕಕ್ಕೆ ಕಳುಹಿಸಿದೆ ಇದರಿಂದೇನೂ ಫಲವಾಗುವಂತೆ ತೋರುವದಿಲ್ಲ ಚೀನಾ ಯುದ್ಧವನ್ನು ಶೀಘ್ರವಾಗಿ ಮುಗಿಸಿಬಿಡಬೇಕೆಂಬುದು ಜಪಾನಿನ ಇಷ್ಟ ಅದು ನೆರವೇರಬೇಕಾದರೆ ಜಪಾನು ತನ್ನ ಸಂಗ್ರಾಮಯಂತ್ರವನ್ನು ಬಹು ಶೀಘ್ರಗತಿಯಿಂದ ನಡೆಸಬೇಕಾಗಿದೆ ಈ ಮಧ್ಯೆ ಬ್ರಿಟಿಷ್ ಮತ್ತು ಅಮೆರಿಕದವರು ತನ್ನ ಕೈಗಾರಿಕಾಕೇಂದ್ರಗಳಮೇಲೆ ಬಾಂಬುಗಳನ್ನು ಹಾಕಿ ಎಲ್ಲ ನಾಶಮಾಡಿಬಿಡುವರೋ ಎಂಬ ಭೀತಿಯು, ಮತ್ತು ತನ್ನ ಪ್ರಯತ್ನವು ವಿಫಲವಾದರೆ ಅದರ ಪರಿಣಾಮವೇನಾಗುತ್ತದೆಯೋ ಎಂಬ ಭೀತಿಯೂ ಜಪಾನಿನ ಪ್ರಮುಖ ಅಧಿಕಾರಿಗಳ ಮನಸ್ಸಿನಲ್ಲಿ ಉಂಟಾಗಿದೆಯೆಂದು ಊಹಿಸಲಾಗಿದೆ

ಚರಕಾರಿ ಮಹಾರಾಜರ ನಿಧನ

ನಮ್ಮ ಶ್ರೀಮನ್ಮಹಾರಾಣಿಯವರ ಸಹೋದರರಾದ ಚರಕಾರಿ ಮಹಾರಾಜರವರು ದೆಹಲಿಯಲ್ಲಿ ಮೃತರಾದರೆಂದು ಇಲ್ಲಿಗೆ ವರ್ತಮಾನ ಬಂದಿದ್ದರಿಂದ ನಮ್ಮ ಶ್ರೀಮನ್ಮಹಾರಾಣಿಯವರು ದೆಹಲಿಗೆ ಪ್ರಯಾಣ ಬೆಳೆಸಿರುವರೆಂದು ತಿಳಿದುಬರುತ್ತದೆ

ಸ್ವೀಕಾರ.

ನಿಜಾಮ ಇಲಾಖಾ ಬಷೀರಾಬಾದ ತಾ|| ಕಾಳಗಿ ಗ್ರಾಮ ಮಠದಲ್ಲಿ ನಡೆದ ಶ್ರೀ ಶಿವವೃಷಭಶಿವಾಚಾರ್ಯರ ಪಟ್ಟಾಧಿಕಾರಮಹೋತ್ಸವಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಶ್ರೀ ಶಿವವೃಷಭಶಿವಾಚಾರ್ಯರವರಿಂದ ಸಮರ್ಪಿಸಲ್ಪಟ್ಟ 3 ರೂ. ಗಳು ಕಿಲ್ಲೇಮಠದ ಶ್ರೀಚನ್ನವೀರಶಿವಾಚಾರ್ಯರ ದ್ವಾರಾ ತಲ್ಪಿರುತ್ತವೆ

ಧಾರವಾಡ ಜಿ|| ಬಿತ್ರಿಕೋಟಿ ಗ್ರಾಮವಾಸಿಗಳಾದ ಮಾ|| ಫಕೀರಪ್ಪಾ ಕೋಂ|| ಫಕೀರಪ್ಪಾ ಸಿಂತ್ರೆ ಇವರು ತಮ್ಮ ಸಹೋದರ ಚಿ|| ಉಮಾಪತಿ ಎಂಬವರನ್ನು ದತ್ತಕನನ್ನಾಗಿ ಸ್ವೀಕರಿಸಿದ ಉತ್ಸವಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ ಮತ್ತು ಧಾರವಾಡ ಹೊಸಮಠದ ವೇ|| ರುದ್ರಯ್ಯನವರ ಪುತ್ರ ಚಿ|| ರಾ|| ವೀರಭದ್ರಸ್ವಾಮಿಗೂ, ಮಂಡಿಗನಾಳ ಹಿರೇಮಠದ ವೇ|| ಸಂಗಯ್ಯನವರ ಪುತ್ರಿ ಹ|| ಕುಂ|| ಶೋ|| ಚಿ|| ಸೌ|| ಕಾಶೀದೇವಿಗೂ ಚಿಕ್ಕಮಣ್ಣೂರು ಗ್ರಾಮದಲ್ಲಿ ನಡೆದ ವಿವಾಹಮಹೋತ್ಸವಸಮಯದಲ್ಲಿ ಸಮರ್ಪಿಸಿದ 1 ರೂ. ಒಟ್ಟು 2 ರೂ. ಗಳು ವೇ|| ವೀರಭದ್ರಯ್ಯನವರು ಹೊಸಮಠ ಮುಳಗುಂದ ಇವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶ್ರೀ ಜಗದ್ಗುರು ದಾರುಕಾಚಾರ್ಯಾಯ ನಮಃ

ನಿಷ್ಪಕ್ಷ

ಲೇ —ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರು [illegible]

ಮುಂದೆ ನೂರ.

ಮನುಷ್ಯನು ಮುಪ್ಪುವಡೆದು [illegible] ದೇಹವು ಗ[illegible]ಶವಾ[illegible]ತ್ತ ಶಕ್ತಿಗುಂದುತ್ತ ಹಲ್ಲುಗಳು ಬೀಳುತ ಕೂದಲು ಬೆಳ್ಳಗಾಗುತ್ತ ಹೋಗುತ್ತವೆ ಆದರೂ ಇನ್ನೂ ನಾಲ್ಕಾರು ಕಾಲ ಬದುಕಿರಬೇಕು [illegible] ಮತ್ತಷ್ಟು ಹಣವನ್ನು ಗಳಿಸಬೇಕೆಂಬ ಹಂಬಲಿಕೆಯೂ ಮಾತ್ರ ಬೆಳೆಯುತ್ತ ಹೋಗುತ್ತದೆ ಆಯುಷ್ಯದ ಸಂ[illegible]ಗಳನ್ನು ಕಡಿಮೆಮಾಡುವ ವಾರ್ಧಕ್ಯವು ಜೀವನಾ[illegible]ಯನ್ನು ಮಾತ್ರ ಬೆಳೆಸುತ್ತವೆ [illegible] ವರ್ಷದ ಒಬ್ಬ ಮುದುಕ [illegible] ನಡೆದಾಡದವನು [illegible] ನಟಿಸುವನು [illegible] ಕಾಲದಲ್ಲಿಯೇ ಆತನಿಗೆ ಕಾಲನ [illegible] ತಲದೋರಿತು [illegible] ಬಂದಿರುವನು [illegible] ತನಗೊಬ್ಬನೇ [illegible] ಸಿದ್ಧಾಂತವಾಯಿತು [illegible] ಜಿಪುಣನ ಸಂಪದವೇ ಇದ್ದರು ಮನೆಯಲ್ಲಿಯೇ [illegible] ಬೀಗ [illegible] ಇಲ್ಲದೆ ಇಲ್ಲಿಗೆ ಬರುವ ಸಂಭವವಿಲ್ಲ ಒಂದು ವೇಳೆ ಜಿಪುಣನು ತಗಲಿದ್ದರೂ ಯಮನ ಬಳಿ ಒಂದು [illegible] ನೆಂಬ ಯೋಚನೆ ಆ ವೃದ್ಧನಿಗೆ ಸ್ವಲ್ಪ ಸಮಾಧಾನವನ್ನುಂಟುಮಾಡಿತು [illegible] ರೋಗವು ಉಲ್ಬಣವಾಯಿತು [illegible] ವೈರಿಗೆ ಹೆದರಿ [illegible] ರತೆಯು [illegible] ದೇವರೇ ಇಲ್ಲವೆಂಬುದು ನಿಶ್ಚಯವಾಯಿತು ಆದರೆ ಯಾವುದು ಹೊರಗಣ ಪ್ರಾಣವೆನಿಸಿದ್ದಿತೋ ಅಂತಹ ಹಣವನ್ನು ಪರರ [illegible] ನ್ಯಾಯವಲ್ಲವೆಂದು ತಿಳಿದು ಆದನ್ನು ಇಲ್ಲಿಯೇ ಬಿಡಲು ಯೋಚಿಸಿದನು ಹಣಕ್ಕೆ ಬಾಧ್ಯರಿಲ್ಲದೇ ಇಲ್ಲ ಮದನಕುಮಾರನೆಂಬ ದತ್ತ ಮಗನಿದ್ದನು [illegible] ಜಗದೇರಾಯನೂ ಎಂಬವನ ದತ್ತಪುತ್ರನ ಹೊರತು ಉಳಿದವರೆಲ್ಲ ಸ್ವತ್ತಿನ ಹಕ್ಕುದಾರರಾಗಿದ್ದರು [illegible] ಮದನನ [illegible] ಆಸ್ತಿ [illegible] ಪ್ರಾಣವು ತಹ ತಹ ಪಡುತ್ತಿದ್ದಿತು [illegible] ಪುರಂದರರಾಯರು ವೃದ್ಧನ [illegible] ಪುರಂದರರಾಯರು [illegible] ತಿಳಿಯದು ಅವರ [illegible] ಮರಣಶಾಸನವನ್ನಿತ್ತ [illegible] ಪುರಂದರರಾಯರು [illegible] ದರಂತೆ ಅವರ [illegible] ಯಾರಾದರೂ ಇಲ್ಲದ್ದರೆ ಹೇಳುತ್ತಿದ್ದರು ಜಗದೇರಾಯರು ಈ ಲೋಕದಿಂದ ಮರೆಯಾದರು ಮದನನು ಪುರಂದರರಾಯರ ಪೋಷಣೆಗೊಳಗಾದನು ರಾಯರ ಸತ್ಯತೆಯೂ ವಿಶ್ವಾಸವೂ ಹೇಗಿದ್ದಿತೋ ತಿಳಿಯದು ಅಂತು ಜಗದೇರಾಯನು ಸತ್ತನಂತರ ಕೆಲವು ಬಣ್ಣಗಳು ಬಂದವೆಂದು ಜನರಾಡುತ್ತಿದ್ದರು ಸತ್ಯತೆಗೂ ಒಂದು ಬಣ್ಣವು ಇತ್ತಿರಬೇಕು ಆದು ಯಾವ ಬಣ್ಣವಿರಬಹುದು ? ಕರಿದೆಂದು ವಿವೇಕಿಗಳ ಊಹೆ ಮದನನು ಶಾಲಾಭ್ಯಾಸಕ್ಕೆ ಹೋಗುವಾಗ ಪ್ರತಿದಿನವೂ ಎಂಟಾಣೆಯನ್ನು ಅವನ ಜೇಬಿನಲ್ಲಿ ರಾಯರು ವಿಶ್ವಾಸದಿಂದ ಹಾಕುತ್ತಿದ್ದರು ಹೋಟೆಲ್ ನಾಗಪ್ಪನನ್ನು ಕಂಡರೆ ಮದನನಿಗೆ ಬಹು ಪ್ರೀತಿ ನಾಗಪ್ಪನೂ ತನ್ನ ಪ್ರೀತಿಯನ್ನು ಪ್ರತಿದಿನವೂ ಎಂಟಾಣೆಯ ಸಂಪಾದನೆಯಿಂದ ಹೆಚ್ಚಿಸುತ್ತಿದ್ದನು ಹುಡುಗನಿಗೆ ಓಡಾಡಲು ಕುದುರೆಯ ಗಾಡಿಯೂ ಇದ್ದಿತು ನಾಟಕದ ನೋಟಕ್ಕೆ ಊಟಾಟಕೆಯ ಸ್ನೇಹಿತರೂ ಬಹಳಮಂದಿದ್ದರು ನೋಡಿದವರೆಲ್ಲರೂ ಹೆತ್ತ ತಂದೆಗಿಂತಲೂ ಪುರಂದರರಾಯರು ಚೆನ್ನಾಗಿ ರಕ್ಷಿಸುವರೆಂದು ಹೊಗಳುವಂತೆ ಹುಡುಗನಿಗೆ ಯಾವ ಕೊರತೆಯೂ ಇಲ್ಲವಂತೇರ್ಪಡಿಸಿದ್ದರು ಮದನನ ದಿನೇ ದಿನೇ ಬೆಳೆದು ಮದಿಸಿದನು ಹೋಟಲಿನ ಭಕ್ಷ್ಯಗಳು ಮೈಗೆ ಒಂಟಿದಂತೆ ವಿದ್ಯವು ಚೆನ್ನಾಗಿ ಒಂಟಲಿಲ್ಲ ಕೂನೆಗೆ ಪ್ರಾಪ್ತವಯಸ್ಕನಾದನು ಪುರಂದರರಾಯರ ಲೆಕ್ಕವೂ ಕ್ರಮಪಟ್ಟಿತು ಹುಡುಗನ ಪಾಠ, ಆಟ ನೋಟ, ಹೊಟ್ಟೆ ಬಟ್ಟೆ ಮುಂತಾದವುಗಳಿಗೂ ಹುಡುಗನ ಶ್ರೇಯೋಭಿವೃದ್ಧಿಗಾಗಿ ಅಂತರಂಗವಾಗಿಯೇ ದಾನಮಾಡಿಮದಕ್ಕೂ ತಕ್ಕ ಲೆಕ್ಕಗಳೆಲ್ಲ ಸ್ವಲ್ಪವೂ ವ್ಯತ್ಯಾಸವಿಲ್ಲದೆ ಇದ್ದಿತು ಹತ್ತು ಸಾವಿರ ರೂಪಾಯಿಯನ್ನು ಹುಡುಗನಿಗೆ ಕೊಟ್ಟು ಸ್ವತಂತ್ರವಾಗಿ ಜೀವಿಸುವಂತೆ ಬುದ್ಧಿವಾದವನ್ನು ಹೇಳಿ ಮನೆಯಿಂದ ಅವನನ್ನು ಕಳುಹಿಸಲು ಪಶ್ಚಾತ್ತಾಪವನ್ನು ವಿಶದಪಡಿಸಿದರು ಊರಿದ್ದಲ್ಲಿ ಹೊಲೆಗೇರಿ ಎಂಬಂತೆ ಆ ಊರಲ್ಲಿಯೂ ಅನೇಕ ಶಕುನಿಗಳಿದ್ದರು ಪುರಂದರರಾಯರ ಲೋಭಕ್ಕೂ ಅವರ ಧನಾಭಿವೃದ್ಧಿಗೂ ಅವರು ಮತ್ಸರಿಸುತ್ತಿದ್ದರು, ಮದನನಿ ಶಕುನಿಗಳು ಪರಮ ಪ್ರೇಮಾಸ್ಪದರಾದರು ಜಗದೇರಾಯನ ಆಸ್ತಿಯು ಒಂದು ಲಕ್ಷವೆಂದು ಮದನನ ಕಿವಿಯಲ್ಲಿ ಅವರು ಆಗಾಗ್ಗೆ ಊದದೇ ಇರಲಿಲ್ಲ ಇಂತಹವರಲ್ಲಿ ಮದನನು ಹತ್ತುಸಾವಿರವನ್ನು ಮಾತ್ರ ತೆಗೆದುಕೊಳ್ಳಲು ಹೇಗೆ ಒಪ್ಪುವನು ? ನ್ಯಾಯ ಸ್ಥಾನಕ್ಕೆ ವ್ಯಾಜ್ಯವು ತರಲ್ಪಟ್ಟಿತು ವಿಚಾರಣೆಯಕಾಲದಲ್ಲಿ ಪುರಂದರರಾಯರು ಮರಣಶಾಸನವನ್ನು ಸಿದ್ಧಪಡಿಸಿದರು ನ್ಯಾಯಾಧಿಪತಿಯು ಆಮೂಲಾಗ್ರವಾಗಿ ಆದನ್ನು ನೋಡಿ ಪುರಂದರರಾಯರು ಕೊಟ್ಟುದಕ್ಕೆ ನೀನೊಪ್ಪಬೇಕಂದು ತೀರ್ಪನ್ನು ಹೇಳಿದರು ಮದನನು ನಿರಾಶನಾದನು ಶಕುನಿಗಳು ತಮ್ಮ ಕುಹಕ ಕುತಂತ್ರಗಳು ಸಿದ್ಧಿಸಲಿಲ್ಲವೆಂದು ಚಿಂತಿಸಿದರು ಮೃತ್ಯು ಪತ್ರವನ್ನು ಬರೆದಿದ್ದ ಜಗದೇರಾಯನನ್ನು ಮದನನು ಬಹಳವಾಗಿ ನಿಂದಿಸಿ ದತ್ತಪುತ್ರನ ಪಿತೃಭಕ್ತಿಯನ್ನು ವ್ಯಕ್ತಗೊಳಿಸಿದನು ಪುನಃ ಶಕುನಿಗಳು ಮದನನನ್ನು ಹುರಿದುಂಬಿಸಿ ಉಚ್ಚ ನ್ಯಾಯಸ್ಥಾನಕ್ಕೆ ಪುನರ್ವಿಚಾರಣೆಗೊಳಪಡಿಸಿದರು ಆಗ ಮದನನ ಪಕ್ಷವಾಗಿ ಕಾಲಾಂತಕನೆಂಬ ನ್ಯಾಯ ಶಾಸ್ತ್ರಜ್ಞನು ವಾದಿಸಲು ಸಿದ್ಧನಾದನು ಪುರಂದರರಾಯರಿಗ ಮೃತ್ಯು ಪತ್ರವೇ ಆಧಾರವಾಗಿದ್ದಿತು ಅಲ್ಲಿಯ ನ್ಯಾಯಾಧಿಕಾರಿಗಳೂ ಪುರಂದರರಾಯರಿಗೇ ಅನುಕೂಲವಾಗಿ ತೀರ್ಪನ್ನು ಕೊಟ್ಟರು ಕಾಲಾಂತಕನು ಎದ್ದು ನ್ಯಾಯಸ್ಥಾನಕ್ಕೆ ಗೌರವವನ್ನು ತೋರಿಸಿ—

ಕಾಲಾಂತಕ—ಧರ್ಮಾವತಾರವೆ! ಪ್ರತಿವಾದಿಯನ್ನು ಸ್ವಲ್ಪ ಪ್ರಶ್ನೆಗಳನ್ನು ಕೇಳಲು ಅಪ್ಪಣೆಯಾಗಬೇಕು

ನ್ಯಾಯಾಧಿಪತಿ—ವ್ಯರ್ಥವಾದ ಕಾಲಹರಣೆಯೇ ಸರಿ ಇವರಲ್ಲಿ ಕೇಳತಕ್ಕ ವಿಚಾರವೇ ಇಲ್ಲ ಮರಣಶಾಸನದಂತೆ ತೀರ್ಮಾನವಾಗಿರುವುದು ನ್ಯಾಯವಾಗಿದೆ

ಕಾಲಾಂತಕ—ಮರಣಶಾಸನವನ್ನು ಬಿಟ್ಟು ನಾನು ಹೋಗುವುದಿಲ್ಲ ದಯವಿಟ್ಟು ಸ್ವಲ್ಪ ಅವಕಾಶವನ್ನು ಕೊಡಬೇಕು

ನ್ಯಾಯಾಧಿಪತಿ—ಆಗಬಹುದು ಜಾಗ್ರತೆಗೊಳಿಸಿ

ಕಾಲಾಂತಕ— (ಪುರಂದರರಾಯರನ್ನು ನೋಡಿ) ರಾಯರೇ, ಮದನನಿಗೆ ನೀವು ಕೊಡುವುದನ್ನು ಈಗ ಸಿದ್ಧಮಾಡಿಕೊಡುವಿರಾ

ಪುರಂದರರಾಯ—(ಮನೆಯಿಂದ ಕೂಡಲೇ ತರಿಸಿ ಹತ್ತು ಸಾವಿರರೂಪಾಯಿಯನ್ನು ಸಿದ್ಧಪಡಿಸಿದರು)

ಕಾಲಾಂತಕ—ಉಳಿದ ನಿಮ್ಮ ಸ್ವಾಧೀನದಲ್ಲಿರುವ ಆಸ್ತಿಗಳೆಲ್ಲವೂ ನಿಮ್ಮ ಇಷ್ಟಕ್ಕೊಳಪಟ್ಟುದೇ ಅಲ್ಲವೆ ?

ಪುರಂದರರಾಯ—ಅಹುದು

ಕಾಲಾಂತಕ (ನ್ಯಾಯಾಸ್ಥಾನದಿದುರಿಗೆ ನಿಂತು) ನ್ಯಾಯ ಪ್ರಭುಗಳು ಪುರಂದರರಾಯರಿಗೆ ಇಷ್ಟವಾದುದು ಇಂತಹುದೆಂದು ಬರೆದುಕೊಳ್ಳಬೇಕು

ನ್ಯಾಯಾಧಿಪತಿ—ಬರೆದಿದೆ

ಕಾಲಾಂತಕ— ಮರಣಶಾಸನವನ್ನು ಓದಬೇಕು (ಒಬ್ಬ ಕಾರಕೂನನು ಓದುವನು) ನನಗೆ ಅವಸಾನವು ಸಮೀಪಿಸಿತು ನನಗೆ ಮದನನೆಂಬ ದತ್ತುಮಗನು ವಿನಾ ಇನ್ನು ಯಾರು ವಾರಸುದಾರರಿಲ್ಲ ಅವನು ಈಗ ಎಂಟು ವರ್ಷಗಳ ಹುಡುಗನಾದ ದರಿಂದ ನನ್ನ ಆಸ್ತಿಯೆಲ್ಲವನ್ನೂ ಪುರಂದರರಾಯರಾದ ನಿಮಗೆ ಒಪ್ಪಿಸಿರುವೆನು ಇಂದಿನಿಂದ ಮದನನು ಪ್ರಾಪ್ತವಯಸ್ಕನಾಗುವವರೆಗೂ ನಿಮ್ಮಿಂದ ಪೋಷಿಸಲ್ಪಡಬೇಕು ಕೊನೆಗೆ ನಿಷ್ಪಕ್ಷವಾದುದನ್ನು ಮದನನಿಗೆ ಕೊಡುವುದು ಋಜು ಜಗದೇರಾಯ" ಕಾಲಾಂತಕ ನ್ಯಾಯಮೂರ್ತಿಗಳೇ! ಮ ಣಶಾಸನದಲ್ಲಿ ಪುರಂದರರಾಯರಿಗೆ ಇಷ್ಟವಾದುದನ್ನು ಮದನನಿಗೆ ಕೊಡಬೇಕೆಂದಿರುವುದರಿಂದ ಈಗ ಅವ ಇಷ್ಟಕ್ಕೊಳಪಟ್ಟ ಆಸ್ತಿಯೆಲ್ಲವನ್ನೂ ಮದನನಿಗೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ

ನ್ಯಾಯಾಧಿಪತಿ– (ಆಶ್ಚರ್ಯಭರಿತರಾಗಿ) ಮೊದಲಿ ತೀರ್ಪನ್ನು ರದ್ದುಗೊಳಿಸಿ ಪುರಂದರರಾಯರ ಆಸ್ತಿಯೆ ವನ್ನು ಮದನನಿಗೆ ಕೊಡಿಸಿದರು ವಾಚಕವ ಯರೇ, "ಪರದ್ರವ್ಯವು ಪಾಷಾಣವು" ಎಂದು ಹಿರಿ ರಾಡುವ ಮಾತು ಸುಳ್ಳಲ್ಲ ಪುರಂದರರಾಯರು ಪ ಸ್ವಾಪಹಾರಕ್ಕೆ ಯತ್ನಿಸಿದ್ದರಿಂದ 'ಇದ್ದದು ಉಳಿ ಲಿಲ್ಲ, ಇಲ್ಲದ್ದು ಬರಲಿಲ್ಲ' ವೆಂಬಂತೆ ಅವರ ಅವಸ್ಥೆ ಯಾಯಿತು

ಎಲ್ಲರೂ ಹೋದನಂತರ ಜನರು ಪರಸ್ಪರ ಮಾ ನಾಡಿಕೊಳ್ಳಲಾರಂಭಿಸಿದರು ಕಾಲಾಂತಕನ ಚತು ಯಿಂದಲೇ ಹೀಗೆ ಆಯಿತೆಂದು ಕೆಲವರು ಹೇಳುತ್ತಿದ್ದರು ಜಗದೇರಾಯನ ಚತುರತೆಯು ಒದಗ ಇಲ್ಲದಿದ್ದರೆ ಕಾಲಾಂತಕನು ಏನುಮಾಡುತ್ತಿದ್ದನು ಎಂದು ಕೆಲವರು ಆಕ್ಷೇಪಿಸಿದರು ಅಂತಹ ಬರವಣಿ ಯಿಂದಲೇ ಆಗಿದ್ದರೆ ನ್ಯಾಯಾಧೀಶರ ತೀರ್ಪು ಎಂ ವರ್ತಿಯೂ ಪುರಂದರನಿಗೇ ಹೇಗೆ ಅನುಕೂಲಿಸುತ್ತೆಂದು ಮತ್ತೆ ಕೆಲವರು ವಾದವಿವಾದಗಳನ್ನು ನಡೆ ತ್ತಿದ್ದರು ಇವೆಲ್ಲವುಗಳೂ ವಾಗ್ವಾದಗಳಲ್ಲಿಯೇ ಪ ದವು ವಿಚಾರಮಾಡಿ ನೋಡಿದರೆ ಕಾಲಾಂತ ಬುದ್ಧಿ ಚಾತುರ್ಯದಿಂದಲೇ ಆಯಿತೆಂದು ಹೇಳಬೇ ದಾಗಿದೆ ಮದನಕುಮಾರನಿಂದ ಕಾಲಾಂತಕನಿಗೆ ಹತ್ತು ಸಾವಿರ ರೂಪಾಯಿಗಳು ಬಹುಮಾನಾರ್ಥವಾಗಿ ಕೊಡಲ್ಪಟ್ಟವು ಮದನನ ಆಸ್ತಿಯು ಮೂರು ಲಕ್ಷ ಕಡಿಮೆಯಾಗಿರಲಿಲ್ಲ ಪುರಂದರರಾಯರ ಆಸ್ತಿ ಮೊದಲು ಇಪ್ಪತ್ತು ಸಾವಿರ ಇದ್ದಿತು ಜಗದೇರಾ ಆಸ್ತಿಯು ಸಿಕ್ಕಿದಮೇಲೆ ವ್ಯಾಪಾರವು ಅನುಕೂಲಿ ಮೂರು ಲಕ್ಷದ ವರೆಗೂ ಬಂದಿದ್ದಿತು ಪುರಂದರ ಯರು ಯಾವಾಗಲೂ ಒಂದು ಕಾಸನ್ನೂ ಪರರಿಗೆ ಕೊಟ್ಟವರಲ್ಲ ಅವರನ್ನು ಜನರೆಲ್ಲರೂ ನಾನಾವಿಧವಾ ಹಾಸ್ಯಮಾಡಲು ಪ್ರಾರಂಭಿಸಿದರು ಇದನ್ನು ಕೇ ಕೇಳಿ ಪುರಂದರರಾಯರಿಗೆ ಹುಚ್ಚುಹಿಡಿದು ಜಗದೇರಾಯ ಜಗಕ್ಕೇ ಹೊರಟು ಹೋದರು ವಾಚಕರೇ! ಇಂತ ಕಲಹವೇ ನ್ಯಾಯಸ್ಥಾನದಲ್ಲಿ ವಿಮರ್ಶೆಯಾಯಿತೆಂ ಹೇಳುವುದಕ್ಕಿಂತಲೂ ಸ್ವಲ್ಪ ಹೆಚ್ಚುಕಡಿಮೆಯಾಗಿಯಾ ದರೂ ಬರಬಹುದೆಂದೂ ಊಹಿಸಬಹುದು. ಧರ್ಮ ಚ್ಯುತಿಯಿಲ್ಲ ಅಧರ್ಮಕ್ಕೆ ಅಲ್ಪಕಾಲದಲ್ಲಿ ಪ್ರಕಂ ಹೆಚ್ಚು

ಪಾಪದ ಶಕ್ತಿ

ಹೆತ್ತವರು ಕಲಿಸಿರುವ ಸದ್ಬುದ್ಧಿ,
ಶಾಲೆಯಾ ವ್ಯಾಸಂಗ ಸಮೃದ್ಧಿ,

ಸಾಧುಗಳ ನಡೆನುಡಿಯ ಮೇಲ್ಪಂಕ್ತಿ,
ಮೇಣವರ ಅನುದಿನದ ಸತ್ಸಂಗ್ತಿ,

ಒಳಸಾಕ್ಷಿ, ಗೀತಾದಿಗಳ ನೀತಿ,
ಅಪಮಾನ, ಶಾಸನಾದಿಯ ಭೀತಿ,

ಮುಂತಾದ ದಿಗ್ಬಂಧ ಬಿಗಿದರೇಂ?
ಒಳಗಿರುವ ಪಾಪಾಂಶ ಬಿರಿಯದೇಂ?

ನೂರ್ಮಡಿಯ ಪದರದಲಿ ಸುತ್ತಿದ್ದ
ಕರ್ಪುದ್ದು ಕಿಡಿಗೊಂಡು ಹೊರಬಿದ್ದು,

ಕಿವಿಯರಿದು, ಮನೆಯುರಿಸಿ, ಕೂಲದೇಂ?
ಪಾಪ ತಾ ಸಿಡಿಮದ್ದ ಹೋಲದೇಂ?

ಬಿ ಶ್ರೀ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M 2266

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಶರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ ೧೧ ಆಣೆ

ಬಿಡಿ ಪ್ರತಿ ೧ಕ್ಕೆ ೬ ಪೈ

ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧ನೇ ಡಿಸೆಂಬರ್ ೧೯೪೧ [ಸಂಚಿಕೆ ೩೧

॥ ಓಂ ॥

ಕರ್ನಾಟಕ ರತ್ನಸಿಂಹಾಸನಾಧೀಶ್ವರರೂ, ಮಹೀಶೂರ ಸಂಸ್ಥಾನಾಧೀಶ್ವರರೂ ಆದ ಶ್ರೀಮದ್ರಾಜಾಧಿರಾಜ ಶ್ರೀ ಸರ್ ಮಹಾರಾಜಾ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಸ್ವಾಮಿಯವರ ದಿವ್ಯಸನ್ನಿಧಿಯಲ್ಲಿ

ಕೋಲಾರದ ಪೌರಸಭಾಧ್ಯಕ್ಷರು ಮತ್ತು ಸದಸ್ಯರು ಅತ್ಯಂತ ವಿನಯಪೂರ್ವಕವಾಗಿ ಅರ್ಪಿಸಿದ

—: ಬಿನ್ನವತ್ತಳೆ :—

ಮಹಾಸ್ವಾಮಿ,

[illegible] ಸ್ತನದ ವರಮಾನದಲ್ಲಿ ಸುಮಾರು [illegible] ಒಂದು ಭಾಗವನ್ನು ಒದಗಿಸಿಕೊಟ್ಟ, ಚಿನ್ನದ ಗಣಿಗಳ, ಇತಿಹಾಸ ಪ್ರಸಿದ್ಧವೂ ಪುರಾಣ ಪ್ರಸಿದ್ಧವೂ ಆದ, ಈ ಜಿಲ್ಲೆಯ ಪ್ರಧಾನ ಪಟ್ಟಣವಾಗಿರುವ ಈ ನಗರಕ್ಕೆ ಪ್ರಭುಗಳವರನ್ನು ಸ್ವಾಗತಿಸುವ ಸದವಕಾಶ ಅಪೂರ್ವ ಸನ್ನಿವೇಶವು ದೊರೆತುದಕ್ಕಾಗಿ ಅತ್ಯಂತ ಹರ್ಷಚಿತ್ತರಾಗಿದ್ದೇವೆ. ಪಟ್ಟಾಭಿಷಿಕ್ತರಾದನಂತರ ಸಂಸ್ಥಾನದ ನಾನಾ ಜಿಲ್ಲೆಗಳಲ್ಲಿ ಪ್ರಜಾವರ್ಗದವರಿಗೆ ಮಹಾಸ್ವಾಮಿಯವರು ದರ್ಶನ ಕೊಟ್ಟು, ರೈತರ ಕಷ್ಟಸುಖಗಳನ್ನು ಸ್ವತಃ ಪರಾಮರ್ಶಿಸಿ ಪ್ರಜಾವಾತ್ಸಲ್ಯದಿಂದ ಅನುಗ್ರಹಪೂರ್ವಕವಾಗಿ ಆಗುವ [illegible] ಕಾರ್ಯತ್ರರುವ ಸರ್ವತೋಮುಖವಾದ ಸಹಾಯ ಸೌಕರ್ಯಗಳು ಈ ಮೈಸೂರಿನ ಪ್ರಜೆಗಳ ಭಾಗ್ಯವಿಶೇಷವೆಂದು ಹೇಳಬಹುದು. ಈ ಬಾರಿ ಮಹಾಸ್ವಾಮಿಯವರ ಆಗಮನವನ್ನು ಪುರಜನರೆಲ್ಲರು ಹಬ್ಬೋತ್ಸವವೆಂದು ಭಾವಿಸಿ ಆನಂದಿಸುತ್ತಾರೆ. ಈ ಸಂದರ್ಭದಲ್ಲಿ ಪೌರಸಭೆಯ ಕಾರ್ಯಕಲಾಪಗಳಲ್ಲಿ ಅತಿ ಪ್ರಾಮುಖ್ಯವಾದ ಕೆಲವು ಅಂಶಗಳನ್ನು ಮಹಾಸ್ವಾಮಿಯವರ ಅವಗಾಹನೆಗೆ ತರಲು ಅಪ್ಪಣೆಯನ್ನು ಬೇಡುತ್ತೇವೆ

2 ಕಳೆದ ಹತ್ತಾರು ವರ್ಷಗಳಿಂದಲೂ ಪೌರಸಭೆಯ ಹಣದ ಪರಿಸ್ಥಿತಿಯು ಅತೃಪ್ತಿಕರವಾಗಿದ್ದು, ಈಚೆಗೆ ವಿಶೇಷ ಪ್ರಯತ್ನದಿಂದ ಆದಾಯವನ್ನು ಸಮತೋಲನಗೊಳಿಸಿ, ಹಳೆಯ ಸಾಲ ಕರಡು ಬಾಕಿಗಳನ್ನು ತಗ್ಗಿಸಿ, ಸದ್ಯದ ಮತ್ತು ಇತರ ಸೇವೆಗಳಿಗೆ ಸಲ್ಲಬೇಕಾದ ಹಣಗಳನ್ನು ಸಕಾಲದಲ್ಲಿ ಕೊಡುವ [illegible] ಪರಿಸ್ಥಿತಿಯಲ್ಲಿಯೂ ಸುಮಾರು ಐವತ್ತು ಸಾವಿರ ರೂಪಾಯಿಗಳ ವರಮಾನದಿಂದ ಸಾರ್ವಜನಿಕ ಆರೋಗ್ಯ, ನೈರ್ಮಲ್ಯ, ಶಿಕ್ಷಣ, ವಿದ್ಯುಚ್ಛಕ್ತಿ ದೀಪಗಳ ಸೌಕರ್ಯ, ಇತ್ಯಾದಿ ಕಾರ್ಯಗಳ [illegible] ರಾಜಕೀಯ ಸಮಸ್ಯೆಗಳಿಗೆ ಗಮನಕೊಡದೆ ಅಧಿಕಾರ ವರ್ಗದವರೂ, ಖಾಸಗೀ ಸದಸ್ಯರೂ ಪರಸ್ಪರ ಸೌಹಾರ್ದಭಾವದಿಂದ ವರ್ತಿಸುತ್ತಿರುತ್ತೇವೆ. ಸ್ಥಳೀಯ ಸ್ವಾತಂತ್ರ್ಯತೆಯ [illegible] ಕೋಲಾರದ ನಾಗರಿಕರಲ್ಲಿ ಕಾರ್ಯತಃ ಆಚರಣೆಗೆ ಬಂದಿದೆ. ಈ ಅಂಶವು ನಾವು ಸಾಧಿಸಿರತಕ್ಕ ಕೆಲವು ವಿಶೇಷ ಪ್ರಯತ್ನದಿಂದ ಪ್ರತಿಷ್ಠಿತಪಟ್ಟಿದೆ. ಪೌರಸಭೆಯವರು ದ್ರವ್ಯಾಭಾವದಿಂದ ಸಾಧಿಸಲಸಾಧ್ಯವಾದ ಕೆಲವು ಕೆಲಸಗಳಿಗೆ ಪುರಜನರು ಉದಾರಭಾವದಿಂದ ಧನಸಹಾಯ ಮಾಡಿದ್ದಾರೆಂದು ಪ್ರಕಟಿಸಲು ಅನುಜ್ಞೆ ಬೇಡುತ್ತೇವೆ

3 ನಿರಕ್ಷರತಾನಿವಾರಣೆಗಾಗಿ ವಯಸ್ಕರ ವಿದ್ಯಾಭ್ಯಾಸ ಪದ್ಧತಿಯನ್ನು ಈ ಸಂಸ್ಥಾನದಲ್ಲೇ ಪ್ರಥಮತಃ, ಪ್ರಯತ್ನಪೂರ್ವಕ ಪ್ರಯೋಗಿಸಿ, ಉತ್ತಮ ಅನುಭವನ್ನು ಪಡೆದ ಭಾಗ್ಯ ನಮ್ಮ ಪೌರಸಭೆಯವರದು. ನಿರಕ್ಷರಕುಕ್ಷಿಗಳಾದ ಜಲಗಾರರು, ಝಾಡಮಾಲಿಗಳು, ಕಾವಲುಗಾರರು, ರಿಜರ್ವ್ ಪೋಲೀಸ್ ದಳದವರ, ಪೌರಸಭೆಯ ಅನಕ್ಷರಸ್ಥರಾದ ನೌಕರರು ಮುಂತಾದ 80 ಮಂದಿಗೆ [illegible] ಶಿಕ್ಷಣವಿತ್ತುದರಿಂದ ಶೇಕಡ 8 ರಷ್ಟು ಅಕ್ಷರಸ್ಥರಾದರು. ಈ ಪ್ರಯೋಗದ ವಿಷಯದಲ್ಲಿ ಸಂಸ್ಥಾನದ ಅನೇಕ ಪ್ರಮುಖರು ತಮ್ಮ ಮೆಚ್ಚಿಗೆಯನ್ನು ಸೂಚಿಸಿದ್ದಾರೆ. ಸಂಯುಕ್ತ ಪ್ರಾಂತ್ಯಗಳು, ಒರಿಸ್ಸಾ, ನೈಜಾಂ ಸರ್ಕಾರದವರು ಇತ್ಯಾದಿ ಕಡೆಯವರು ಈ ಪ್ರಯೋಗದ ವಿವರಣೆ, ಶಿಕ್ಷಣದ ವಿಧಾನ ಮುಂತಾದವುಗಳನ್ನು ಅಪೇಕ್ಷಿಸುತ್ತಿರುವ ವಿಷಯವನ್ನು ಸನ್ನಿಧಿಯಲ್ಲಿ ಅರಿಕೆಮಾಡಲು ಸಂತೋಷಿಸುತ್ತೇವೆ

4 ರಾಜ್ಯದ ಸೇನಾಪತಿ ಆಧಿಪತ್ಯದ ಸೇವೆಯಲ್ಲಿರುವ ಶ್ರೀ [illegible] ಪ್ರಸಿದ್ಧರಾದ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿಯೂ ನಿತ್ಯಸೇವಾ ಕೈಂಕರ್ಯಕ್ಕಾಗಿಯೂ, ಸುಮಾರು 30 ವರ್ಷಗಳಿಂದ ನಿಂತುಹೋಗಿದ್ದ ಬ್ರಹ್ಮೋತ್ಸವವನ್ನು ನೆರವೇರಿಸುವದಕ್ಕಾಗಿಯೂ ಪ್ರತಿ ವರ್ಷ [illegible] ಪರಿಷೆಯನ್ನು ಏರ್ಪಡಿಸಿ ಅದರಿಂದ ಬರುವ ಉತ್ಪತ್ತಿಯಲ್ಲಿ ಮೆಚ್ಚಿನ ಭಾಗವನ್ನು ದೇವಸ್ಥಾನಕ್ಕೆ ಒದಗಿಸುವ ಪ್ರಯತ್ನವನ್ನು [illegible] ಸರ್ಕಾರದವರ ಮಂಜೂರಾತಿಯನ್ನು ಪಡೆಯಲಾಗಿದೆ. ಈ ಸಂದರ್ಭದಲ್ಲಿ [illegible] ಜಿಲ್ಲಾ ವಸ್ತು ಪ್ರದರ್ಶನಗಳನ್ನು ಏರ್ಪಡಿಸಿ, ವ್ಯವಸಾಯ, ಕೈಗಾರಿಕೆ ವಸ್ತುಗಳ ಅಭಿವೃದ್ಧಿಯನ್ನು ಉತ್ತೇಜನಗೊಳಿಸಲಾಗಿದೆ. ಈ ಪ್ರದರ್ಶನಗಳು ಅತ್ಯಂತ ಜನಾಕರ್ಷಣೀಯವಾಗಿದ್ದು ಕೈಗಾರಿಕೆಯಲ್ಲಿ ಗ್ರಾಮ ಕೈಗಾರಿಕೆಗಳ ವಿಷಯದಲ್ಲಿ ಹೆಚ್ಚಿನ ಆಸಕ್ತಿಯನ್ನುಂಟುಮಾಡಿದೆ

5 ಸಾಮಾನ್ಯ ಜನರಲ್ಲಿ ಸಾಹಿತ್ಯಾಭಿರುಚಿಯನ್ನು ಹೆಚ್ಚಿಸುವ ಉದ್ದೇಶದಿಂದ [illegible] ವಾಚನಾಲಯ ಸಮಿತಿಯ [illegible] ಗಿಯೂ ವಿಶೇಷ ಸಾಹಿತ್ಯೋತ್ಸವಗಳನ್ನು ನೆರವೇರಿಸಿ, ಉಪನ್ಯಾಸಗಳು, [illegible] ಕೀರ್ತನ, ವೀಣೆ, ಯಕ್ಷಗಾನ, ನಾಟಕ, ಕಥೆಗಳು ಮುಂತಾದ ಹಳ್ಳಿಗರ ಮನರಂಜನೆಗೆ ಅವಕಾಶ ಕಲ್ಪಿಸಿ ತನ್ಮೂಲಕ ಸಾಹಿತ್ಯ [illegible] ಮಾಡಿದ್ದೇವೆ. ಈ ನಮ್ಮ ಪ್ರಯತ್ನವು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ ಎಂದು ಪ್ರಸಿದ್ಧ ಕನ್ನಡ [illegible] ಅಭಿಪ್ರಾಯವಾಗಿದೆ

6 ಅನೇಕ ವರ್ಷಗಳಿಂದಲೂ, ಇಲ್ಲಿನ ಪುರಜನರ ವಿಹಾರಕ್ಕಾಗಿ ಉದ್ಯಾನವನಗಳಾಗಲಿ ಇರಲಿಲ್ಲ. ಈ ಕೊರತೆಯನ್ನು ಪೌರಸಭೆಯವರು ಈಗ ನಿವಾರಿಸಿದ್ದಾರೆ. ಹತ್ತು ಸಹಸ್ರ ರೂಪಾಯಿಗಳ ವೆಚ್ಚದಿಂದ ನವೀನರೀತಿಯಲ್ಲಿ ಒಂದು ನಗರೋದ್ಯಾನವನ್ನು ನಿರ್ಮಿಸಿ, ವಾದ್ಯಪೀಠ (Band Stand) ರೇಡಿಯೋ ಭವನ (Radio Kiosk), ಆಟಾಮಂಟಪಗಳು ಇತ್ಯಾದಿ ಸೌಕರ್ಯಗಳನ್ನು ಒದಗಿಸಲಾಗಿದೆ. ಈ ಖರ್ಚಿನಲ್ಲಿ ರೂ 1000 ಮಾತ್ರ ಸರ್ಕಾರದಿಂದ ಧನಸಹಾಯ ಬಂದಿದೆ. ಮಿಕ್ಕ ಹಣದಲ್ಲಿ ಒಂದು ಭಾಗವನ್ನು ಉದಾರಿಗಳಾದ ಪುರಜನರೇ ಒದಗಿಸಿದ್ದಾರೆ. ನೂರಾರು ವರ್ಷಗಳಿಂದಲೂ, ಜ್ಯೂಬಿಲಿ ಪುರಭವನದ ಮುಂದೆ ಇದ್ದ ಒಂದು ಅಗಲವೂ, ಆಳವೂ ಆಗಿದ್ದ ದೊಡ್ಡ ಕಂದಕವನ್ನು ರೂ 6600 ಗಳ ವೆಚ್ಚದಿಂದ ಮುಚ್ಚಿ ಈ ಪ್ರದೇಶದಲ್ಲಿ ಒಂದು ಹೊಸ ತರಹೆಯ ತೋಟವನ್ನಾಗಲಿ (Sunk Garden) ಅಥವಾ ಆಟದ ಬೈಲನ್ನಾಗಲಿ (Stadium) ನಿರ್ಮಿಸಬೇಕೆಂದಿದ್ದೇವೆ. ಇದು ಆರೋಗ್ಯದೃಷ್ಟಿಯಿಂದ ಮಹತ್ತರವಾದ ನಗರಾಭಿವೃದ್ಧಿ ಕಾರ್ಯವೆಂದು ಭಾವಿಸುತ್ತೇವೆ. ಈ ಕಾರ್ಯಕ್ಕೆ ಘನಸರ್ಕಾರದವರು ರೂ 2550 ಗಳನ್ನು ಗ್ರಾಂಟುರೂಪದಲ್ಲಿ ದಯಪಾಲಿಸಿದ್ದಾರೆ

7 ನಮ್ಮ ಪೌರಸಭೆಯವರು ಜಿಲ್ಲಾ ಬಾಲಭಟಸಂಸ್ಥೆಗೂ ಬಾಲಚಮೂದಳದವರಿಗೂ ಪ್ರೋತ್ಸಾಹಿಸುತ್ತಿರುವ ಸಹಕಾರ [illegible] ಆಗಿದೆ. ಇದೀಗ ಸಂಸ್ಥಾನದಲ್ಲೇ ಮೊದಲನೆಯದಾಗಿ, ಜಿಲ್ಲಾ ಬಾಲಭಟಸಂಸ್ಥೆಯ ಕ್ಯಾಂಪನ್ನು ಸುಮಾರು ಐದುಸಾವಿರ ರೂಪಾಯಿಗಳ ಖರ್ಚಿನಿಂದ ನಿರ್ಮಿಸಿರುತ್ತೇವೆಂಬ ಅಂಶವನ್ನು ಮಹಾಸ್ವಾಮಿಯವರಲ್ಲಿ ವಿಜ್ಞಾಪಿಸಿಕೊಳ್ಳಲು ಸಂತೋಷಪಡುತ್ತೇವೆ.

8 ಪ್ರಸ್ತುತ ನಮ್ಮ ಅತಿ ಮುಖ್ಯವಾದ ಅರಿಕೆಗಳನ್ನು ಸಂಕ್ಷೇಪವಾಗಿ ವಿಜ್ಞಾಪಿಸಿಕೊಳ್ಳಲು ಅನುಜ್ಞೆಯನ್ನು ಬೇಡುತ್ತೇವೆ. ಮೊದಲನೆಯದಾಗಿ, ಕಾಲಾಂತರದಿಂದ 1932ನೇ ಇಸವಿಯಿಂದ 1939ನೇ ಇಸವಿಯವರೆಗೂ ನಗರದ ಜಲಸರಬರಾಜು ನಿರ್ವಹಣದ ವೆಚ್ಚ (Water Supply Maintenance Charges)ದ ಬಾಕಿ ಸುಮಾರು ಹದಿನಾಲ್ಕು ಸಾವಿರ ರೂಪಾಯಿಗಳು [illegible] ಬಾಕಿ ಆಗಿದೆ. ಸೂಕ್ತವಾದ ಕಾರಣಗಳನ್ನು ಸಮರ್ಪಿಸಿ ಈ ಮೊಬಲಗನ್ನು ವಜಾಮಾಡಬೇಕೆಂದು ಅನೇಕ ಅರಿಕೆಗಳನ್ನು ಸರ್ಕಾರದಲ್ಲಿ ಸಲ್ಲಿಸುತ್ತಿದ್ದೇವೆ. ಈ ಮೊಬಲಗನ್ನು ಸಲ್ಲಿಸಬೇಕೆಂಬ ನಿರ್ಬಂಧವು, ನಮ್ಮ ನಿತ್ಯಕರ್ತವ್ಯ ನಿರ್ವಹಣೆಗೆ ಪ್ರತಿಬಂಧಕವಾಗಿ ಪರಿಣಮಿಸಿದೆ. ಈ ವಿಷಯದಲ್ಲಿ ಮಹಾಸ್ವಾಮಿಯವರು ನಮ್ಮ ಪ್ರಾರ್ಥನೆಯನ್ನು ನೆರವೇರಿಸಿಕೊಡಬೇಕೆಂದು ಬೇಡುತ್ತೇವೆ

9 ನಗರದ ಆರೋಗ್ಯದೃಷ್ಟಿಯಿಂದ, ಸಮೀಪದಲ್ಲಿದ್ದ ವ್ಯವಸಾಯದ ಜಮೀನುಗಳನ್ನು, ನಗರ ಬಡಾವಣೆಗಾಗಿ ಹತ್ತು ವರ್ಷಗಳ ಹಿಂದೆ ಉಪಯೋಗಿಸಿಕೊಂಡ ಬಗ್ಗೆ ಸುಮಾರು [illegible] ರೂಪಾಯಿಗಳ ಪರಿವರ್ತನ ಪರಿಹಾರದ್ರವ್ಯವನ್ನು (Conversion Fine) ಈಗ ಸಲ್ಲಿಸಬೇಕೆಂಬ ಪ್ರಭುತ್ವದವರ ಆಜ್ಞೆಯು ನಮ್ಮನ್ನು ವಿಶೇಷ ತೊಂದರೆಗೆ ಈಡುಮಾಡಿದೆ. ಸಂಸ್ಥಾನದ ಇತರ ನಗರಗಳಲ್ಲಿ ಈ ಶುಲ್ಕವನ್ನು ವಸೂಲ್ಮಾಡುವುದರ [illegible] ಅವಶ್ಯಕತೆ ಇರುವ ನಗರಗಳ ವಿಷಯದಲ್ಲಿ ನಾವು ಹೆಚ್ಚಿಗೆ ವಿಜ್ಞಾಪಿಸಲು [illegible] ಈ ಮೊಬಲಗನ್ನು ಯಾವರೀತಿಯಲ್ಲಾದರೂ ವಿನಾಯಿತಿ ಮಾಡುವುದು ಆಗತ್ಯವೂ, ಅನಿವಾರ್ಯವೂ ಎಂಬುದನ್ನು ಮಾತ್ರ ಅರಿಕೆ ಮಾಡುತ್ತೇವೆ

10 ಕೋಲಾರನಗರವು ಸಾಮಾನ್ಯವಾಗಿ ಸಂಸ್ಥಾನದ ಇತರ ಮುಖ್ಯವಾದ ಪಟ್ಟಣಗಳಿಗಿಂತ ಆರೋಗ್ಯಕರವಾದ ಸ್ಥಳವಾದರೂ, ಇತ್ತೀಚೆಗೆ ನಗರವಿಸ್ತರಣೆ ಆದಂತೆಲ್ಲಾ, ಸುವ್ಯವಸ್ಥಿತವಾದ ಜಲದಾರಿಗಳು ಇಲ್ಲದೆ ಅನಾರೋಗ್ಯದ ಚಿಹ್ನೆಗಳು ತೋರಿಬರುತ್ತಿವೆ. ಈ ಕೆಲಸಕ್ಕಾಗಿ (Drainage Scheme) ಘನಸರ್ಕಾರದವರು ಪೌರಸಭೆಯವರ ಭಾಗಾಂಶವನ್ನು ಕೊಡಬೇಕೆಂಬ ನಿರ್ಬಂಧವನ್ನು ತೆಗೆದುಹಾಕಿ [illegible] ಯೋಜನೆಯನ್ನನುಸರಿಸಿ, ವರ್ಷೇ ವರ್ಷೇ ಐದುಸಾವಿರ ರೂಪಾಯಿಗಳಿಗೆ ಕಮ್ಮಿ ಇಲ್ಲದೆ ಧನಸಹಾಯಮಾಡಬೇಕಾಗಿ ಪ್ರಾರ್ಥಿಸುತ್ತೇವೆ

1 ಈ ವರ್ಷದ ಆಯವ್ಯಯದಲ್ಲಿ ಪೌರಸಭೆಯವರ ಸಾರ್ವಜನಿಕ ಪುಸ್ತಕ ಭಂಡಾರ (Public Library), ಶಿಶುವಿಹಾರ (Nursery School) ಗರ್ಭಿಣೀ ಶಿಶುಸಂರಕ್ಷಣ ಕೇಂದ್ರ, (Maternity and Child Welfare Centre) ಇವುಗಳನ್ನು ಸ್ಥಾಪಿಸುವ ಉದ್ದೇಶದಿಂದ ಪುರಜನರಲ್ಲಿ ಧನಸಹಾಯವನ್ನು ಅಪೇಕ್ಷಿಸಿದ್ದಾರೆ. ಜಿಲ್ಲೆಯ ಮುಖ್ಯಪಟ್ಟಣವಾದ ಕೋಲಾರದಲ್ಲಿ ನಾಗರಿಕಜೀವನಕ್ಕೆ ಅವಶ್ಯವೆನಿಸಿದ ಈ ಸಂಸ್ಥೆಗಳ ಅಭಾವವು ಇನ್ನು ಮುಂದಾದರೂ ನಿವಾರಣೆಯಾಗಬೇಕಾದ್ದರಿಂದ ಸೂಕ್ತವಾದ ಧನಸಹಾಯವನ್ನು ಯಾಚಿಸುತ್ತೇವೆ

12 ಆರು ಹೈಸ್ಕೂಲುಗಳಿರುವ ಈ ಜಿಲ್ಲೆಗೆ ಅವಶ್ಯಕವಾಗಿ ಬೇಕಾದ ಒಂದು ಇಂಟರ್‌ಮೀಡಿಯೇಟ್ ಕಾಲೇಜು ಸ್ಥಾಪಿಸಲ್ಪಡಬೇಕೆಂಬ ನಮ್ಮ ಅರಿಕೆಯು ಪ್ರತಿವರ್ಷದ ಜಿಲ್ಲಾ ಸಮ್ಮೇಳನದಲ್ಲಿ ಇತ್ಯರ್ಥವಾಗಿ, ವಿಶ್ವವಿದ್ಯಾನಿಲಯದವರಲ್ಲೂ ಈ ವಿಚಾರವನ್ನು ಒತ್ತಾಯಪಡಿಸುತ್ತಿರುತ್ತೇವೆ. ಮಹಾಸ್ವಾಮಿಯವರ ಅನುಗ್ರಹ ವಿಶೇಷದಿಂದ ಈ ನಮ್ಮ ಆಸೆಯು ಕಾರ್ಯರೂಪಕ್ಕೆ ಬರುವಂತಾಗಬೇಕೆಂದು ಆಶಿಸುತ್ತೇವೆ

13 ಮೈಸೂರು ಸಂಸ್ಥಾನದ ಪ್ರಜಾವರ್ಗದವರ ಅಸಾಧಾರಣವಾದ ರಾಜಭಕ್ತಿ ಅತ್ಯಂತ ಪ್ರೀತ್ಯಾದರಗಳಿಗೆ ಪಾತ್ರರಾದ ಮಹಾಸ್ವಾಮಿಯವರಿಗೂ, ಶ್ರೀಮನ್ ಮಹಾರಾಣಿಯವರಿಗೂ, ದಿವ್ಯ ಮಹಾಮಾತೃಶ್ರೀ ಸನ್ನಿಧಿಯವರಿಗೂ, [illegible] ಪ್ರಭುತ್ವವನ್ನು ಸಂಸ್ಥಾನದ ಪ್ರಜಾಕೋಟಿಗೆ ಅನುಗ್ರಹಿಸಿದ ರಾಜಮಾತೆಯವ

ರಿಗೂ, ಇನ್ನಿತರ ರಾಜಕುಟುಂಬದವರಿಗೂ, ಜಗನ್ನಿಯಾಮಕನಾದ ಪರಮೇಶ್ವರನೂ, ರಾಜವಂಶದವರ ಕುಲದೇವತೆಯಾದ ಮತ್ತು ಕೋಲಾರದ ಪುರಾಧಿನಾಥ ಅಧಿದೇವತೆಯಾದ ಶ್ರೀಚಾಮುಂಡೇಶ್ವರೀ ದೇವಿಯವರೂ ಸಮಸ್ತ ಸನ್ಮಂಗಳವನ್ನುಂಟುಮಾಡಿ ಯದುವಂಶಕ್ಕೆ ತಿಲಕಪ್ರಾಯರಾದ ಅಪ್ಪುಮೆಟ್ಟಿನ ಆದರ್ಶದಂತೆಯೂ, ಭರತಖಂಡದ ಸಂಸ್ಥಾನಮಂಡಲದಲ್ಲಿ ಆದರ್ಶ ರಾಜಶ್ರೀಯನ್ನು ಮೆರೆಸುವಂತೆಯೂ ಅನುಗ್ರಹಿಸಿ, ಚಿರಕಾಲ ಮೈಸೂರ ನಾಡಿನ ಅನಂತಕಲ್ಯಾಣಕ್ಕೆ ಅವಕಾಶವನ್ನುಂಟುಮಾಡಲೆಂದು ಅನನ್ಯಭಕ್ತಿಭಾವದಿಂದ ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇವೆ ಮಹಾಸ್ವಾಮಿ

14 ' ಚಿರಮಭಿವರ್ಧತಾಂ ಯದುಸಂತತಿಶ್ರೀಃ '

ಹೀಗೆಂದು ಬಿನ್ನೈಸಿಕೊಳ್ಳುವ ಮಹಾಸ್ವಾಮಿಯವರ
ರಾಜಭಕ್ತಿಪರಿಪೂರ್ಣರಾದ,
ಕೋಲಾರದ ಪೌರಸಭಾಧ್ಯಕ್ಷರು ಮತ್ತು ಸದಸ್ಯರು
ಶ್ರೀವಿಷುಸಂವತ್ಸರದ
ಕಾರ್ತಿಕ ಶುದ್ಧ ೧೩ ಸೋಮವಾರ.
17-11-941

॥ ಶ್ರೀ ಗುರು ॥

ಶ್ರೀಮದ್ ವೀರಶೈವ ಮಹಾಸಭಾ ಚಿರಸ್ಥಾಯಿ ಫಂಡು

ಜನರಲ್ ಕಮಿಟಿಯ ಸದಸ್ಯರುಗಳಲ್ಲಿ ವಿನಂತಿ.—

ಇಲ್ಲಿಗೆ ಸುಮಾರು 22 ವರ್ಷಗಳ ಹಿಂದೆ ದಾವಣಗೆರೆಯಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆಯಲ್ಲಿ ಸದರಿ ಸಂಸ್ಥೆಯ ಚಿರಸ್ಥಾಯಿ ಫಂಡು ಏರ್ಪಟ್ಟ ಆ ಫಂಡಿಗೆ 1000 ರೂಪಾಯಿ ಅಥವಾ ಅದಕ್ಕೆ ಮೇಲ್ಪಟ್ಟು ಚಂದಾ ಕೊಟ್ಟ ದಾತೃಗಳೇ ಜನರಲ್ ಕಮಿಟಿಯ ಮೆಂಬರುಗಳಾಗಿಯೂ ಆ ನಿಧಿಯು ಆಫೀಸು ಸರ್ ಕೆ ಪಿ ಪುಟ್ಟಣ್ಣ ಶೆಟ್ಟರವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟ ಸದರಿ ನಿಧಿಯು ಈಗ ಸುಮಾರು 53000 ರೂಪಾಯಿಗಳವರಿವಿಗೂ ಮೂಲಧನವಾಗಿರುತ್ತೆಂದು ತಮಗೆಲ್ಲಾ ತಿಳಿದ ವಿಷಯವಾಗಿರುತ್ತೆ.

ಈ ನಿಧಿಯು ಸರ್ ಪುಟ್ಟಣ್ಣ ಶೆಟ್ಟರವರ ಅಧ್ಯಕ್ಷತೆಯಲ್ಲಿ ಬಂದೋಬಸ್ತಾಗಿ ಇಡಲ್ಪಟ್ಟು ಅವರು 1938 ನೇ ಜುಲೈ ತಿಂಗಳಲ್ಲಿ ಶಿವಾಧೀನರಾಗುವವರೆವಿಗೂ ಮೂಲಧನವು ವೃದ್ಧ್ಯಂಶದಲ್ಲಿಯೇ ಬಂದಿರುತ್ತೆ. ತದನಂತರ ಈ ಚಿರಸ್ಥಾಯಿ ಫಂಡಿನ ವೈಸ್ ಪ್ರೆಸಿಡೆಂಟರಾಗಿದ್ದ ದಾವಣಗೆರೆ ಮ॥ ರಾ॥ ಟಿ ಯಂ ಷಡಕ್ಷರಪ್ಪನವರು ತಾತ್ಕಾಲಿಕವಾಗಿ ಪ್ರೆಸಿಡೆಂಟರಾಗಿರತಕ್ಕದ್ದೆಂದು ಮ॥ರಾ॥ ಯಂ ನಾಗಪ್ಪನವರು ಮೊದಲಿನಂತೆಯೇ ಸೆಕ್ರೆಟರಿಗಳಾಗಿರತಕ್ಕದೆಂದೂ ತೀರ್ಮಾನವಾಯಿತು. ಈಗ ಇವರಿಬ್ಬರೂ ಅಂದರೆ ಕೈ॥ ಷಡಾಕ್ಷರಪ್ಪನವರು ಸುಮಾರು 9 10 ತಿಂಗಳ ಹಿಂದೆಯೂ ಮತ್ತು ನಾಗಪ್ಪನವರು ತಾ॥ 28 8 41 ನೇ ಗುರುವಾರದಲ್ಲಿಯೂ ಫವತಿಪಟ್ಟಿರುತ್ತಾರೆ.

ಈ ನಿಧಿಯ ವಾರ್ಷಿಕ ವರದಿಯು ಬಹಳ ವರ್ಷಗಳಿಂದ ಹೊರಬಿಡದೆ ಈಚೆಗೆ ಇದರ ಆಡಳಿತವು ಏನಾಗಿರುತ್ತೆಂಬುದು ಸರಿಯಾಗಿ ಗೊತ್ತಾಗಿಲ್ಲ. ಕ್ರಮಬದ್ಧವಾದ ಮೀಟಿಂಗನ್ನು ನಡೆಯಿಸಿ ವಾರ್ಷಿಕ ವರದಿಯನ್ನು ಮತ್ತು ಆದಾಯ ವೆಚ್ಚದ ತಃಖ್ತೆಯನ್ನು ಮಂಜೂರುಮಾಡುವ ವಗೈರೆ ಎಲ್ಲಾ ಆಡಳಿತಗಳನ್ನು ನಡೆಸಲು ಪ್ರತಿವರ್ಷವೂ ಜನರಲ್ ಕಮಿಟಿಯ ಮೀಟಿಂಗನ್ನು ಮತ್ತು ನಾಲ್ಕು ತಿಂಗಳಿಗೊಂದಾವರ್ತಿ ಮ್ಯಾನೇಜಿಂಗ್ ಕಮಿಟಿಯ ಮೀಟಿಂಗನ್ನೂ ಕರೆಯಬೇಕಾದುದು ಈ ಚಿರಸ್ಥಾಯಿ ಫಂಡು ಸಭೆಯ ಕರ್ತವ್ಯವಾಗಿರುತ್ತೆ. ಇದೇ ಮೊದಲಾದ ಅನೇಕ ಲೋಪಗಳ ದೆಸೆಯಿಂದ ಈ ಹಿಂದೆ ಜನರಲ್ ಕಮಿಟಿಯ ಸದಸ್ಯರಲ್ಲಿ ಕೆಲವರು ಸಂಸ್ಥೆಯ ಆಡಳಿತಗಾರರಿಗೆ ಎಚ್ಚರಿಕೆ ಕೊಟ್ಟುಕೊಂಡು ಬಂದಿರುತ್ತಾರೆ.

13-1 41ರಲ್ಲಿ ಮ॥ ರಾ॥ ಗುರುಬಸಪ್ಪನವರು ಹೊರಡಿಸಿದ ಪ್ರಕಟನೆ ಪ್ರಕಾರ 1-6 41ಕ್ಕೆ ದಾವಣಗೆರೆಯಲ್ಲಿ ಜನರಲ್ ಕಮಿಟಿಯ ಸದಸ್ಯರ ಮೀಟಿಂಗು ಸೇರತಕ್ಕದ್ದೆಂದು ಪ್ರಚುರವಾಯಿತು. ಸದರಿ ಮೀಟಿಂಗನ್ನು ಕರೆಯಲು ಮತ್ತು ಸದರಿ ಮೀಟಿಂಗಿನಲ್ಲಿ ಚರ್ಚಿಸತಕ್ಕದ್ದೆಂದು ನಮೂದಿಸಿದ್ದ ವಿಷಯಗಳ ಮೇಲೆ ಕಾರ್ಯಕಲಾಪಗಳನ್ನು ನಡೆಸಲು ರೂಲ್ಸು ಪ್ರಕಾರ ಬಾಧಕವಿರುತ್ತೆಂದು ಸದರಿ ಮ॥ ರಾ॥ ಗುರುಬಸಪ್ಪನವರಿಗೂ ಮತ್ತು ಎಲ್ಲಾ ಮೆಂಬರುಗಳಿಗೂ ಲಾಯರ್ ಮೂಲಕ ತಿಳಿಸಲಾಗಿರುತ್ತೆ. ಹೀಗಿದ್ದಾಗ್ಯೂ ಪುನಃ ಮ॥ ರಾ॥ ಜಿ ಗುರುಬಸಪ್ಪನವರು 15 11 41 ರಲ್ಲಿ ಒಂದು ಪ್ರಕಟನೆಯನ್ನು ಹೊರಡಿಸಿ, 27 11 41ಕ್ಕೆ ದಾವಣಗೆರೆಯಲ್ಲಿ ಜನರಲ್ ಕಮಿಟಿ ಸದಸ್ಯರ ಮೀಟಿಂಗು ಸೇರತಕ್ಕದ್ದೆಂದು ಪ್ರಚುರಪಡಿಸಿರುತ್ತಾರೆ. ಹಿಂದೆ ಇವರು 1 6 41ಕ್ಕೆ ಮೀಟಿಂಗು ಕರೆದಾಗ ಮಾಡಿದ್ದ ಆಕ್ಷೇಪಣೆಗಳೇ ಈಗಲೂ ಈ 27 11-41ರ ಮೀಟಿಂಗಿಗೂ ಅನ್ವಯಿಸುತ್ತವೆಂದು ಪುನಃ ಹೇಳಬೇಕಾಗಿಲ್ಲ.

ಈ ನಿಧಿಯು ಮೈಸೂರು ಸರ್ಕಾರದ 1904ನೆ ಇಸ್ವಿ 3ನೇ ನಂಬರ್ ಆಕ್ಟಿನ ಪ್ರಕಾರ ರಿಜಸ್ಟ್ರಾಗಿರುವ ಸಂಸ್ಥೆಯಾಗಿರುತ್ತೆ. ಈ ಕಾರಣದಿಂದ ಮೈಸೂರು ಸರ್ಕಾರದ ಜಾಯಿಂಟ್ ಸ್ಟಾಕ್ ಕಂಪನಿಗಳ ರಿಜಿಸ್ಟ್ರಾರ್‌ರವರ ಆಫೀಸಿನಿಂದ ಫಂಡಿನ ಆಡಳಿತಗಾರರು ಕ್ರಮಬದ್ಧವಾಗಿ ಸದರಿ ಆಕ್ಟಿನ [illegible]ನೇ ಸೆಕ್ಷನ ಪ್ರಕಾರ ನಡೆದುಕೊಂಡಿಲ್ಲವೆಂದೂ, ಅದಕ್ಕಾಗಿ ಡಿಟೋ [illegible]ನೇ ಸೆಕ್ಷನ್ 'ಡಿ' ಪ್ರಕಾರ ಕ್ರಮ ಜರುಗಿಸಲ್ಪಡುತ್ತೆಂದೂ, ಮ್ಯಾನೇಜಿಂಗ್ ಕಮಿಟಿಯ ಮೆಂಬರುಗಳಿಗೆ ಮಿಸ್ ಸಿ 81-82 '42 ತಾ॥ 20 8 41ರ ಮೆಮೋ ಸಹ ಹುಟ್ಟಿರುತ್ತೆ.

ಮೀಟಿಂಗನ್ನು ಕರೆಯುವ ಅಧಿಕಾರವಿದ್ದ ಪ್ರೆಸಿಡೆಂಟರ ಮತ್ತು ಸೆಕ್ರೆಟರಿಯವರು ಫವತಿಯಾಗಿರುತ್ತಾರೆ. ಮ॥ ರಾ॥ ಜಿ ಗುರುಬಸಪ್ಪನವರು ಸಹಾಯಕ ಕಾರ್ಯದರ್ಶಿ ಎಂಬುದು ಸಂದೇಹಪಡದಿದ್ದ ಪಕ್ಷ ಸಹಾಯಕ ಕಾರ್ಯದರ್ಶಿಗೆ ಮೀಟಿಂಗು ಕರೆಯಲು ಅಧಿಕಾರವಿಲ್ಲ. ಇವರು ಮೀಟಿಂಗಿನಲ್ಲಿ ಕೊಟ್ಟಿರುವ ಅವಧಿಯು ಕಾನೂನು ಪ್ರಕಾರ ಸಾಲದು. ಸಭೆ ಸೇರಬೇಕಾದ ಸ್ಥಾನವು ಕ್ರಮಬದ್ಧವಾಗಿಲ್ಲ. ಹಿಂದಿನ ನೋಟೀಸು ಪ್ರಕಾರ ಇವರು 1 6-41ರಲ್ಲಿ ಏನು ವ್ಯವಹಾರ ನಡೆಸಿದರೆಂಬ ಬಗ್ಗೆ ಯಾವ ಪ್ರಕಟನೆಯೂ ಇವರಿಂದ ಅಥವಾ ಆಗ್ಗೆ ಜೀವಂತರಾಗಿದ್ದ ಸೆಕ್ರೆಟರಿಯವರಿಂದ ಈವರೆಗೂ ಹೊರಬಿದ್ದಿಲ್ಲ. ಮುಖ್ಯವಾಗಿ ಜವಾಬ್ದಾರಿಯುಳ್ಳ ಆಡಳಿತಗಾರರು ಈಗ ಈ ಸಂಸ್ಥೆಗೆ ಇಲ್ಲದೆ ಇರೋಣದರಿಂದ ಇದರ ಮೂಲಧನ, ಆ ಮೂಲಧನದಿಂದ ಬರತಕ್ಕ ವರಮಾನ ಬಂದೋಬಸ್ತು ಮತ್ತು ಹತೋಟಿಯು ತಪ್ಪಿರುವುದಲ್ಲದೆ ಫಂಡಿನ ಉದ್ಯಮಗಳು ನೆರವೇರದೆ ಅವ್ಯವಸ್ಥೆಯಲ್ಲಿರುತ್ತೆ. ಈ ದುಸ್ಥಿತಿಯು ಹೀಗೆ ಬೆಳೆಯಬಾರದೆಂಬ ಸದುದ್ದೇಶದಿಂದ ದಾತೃಗಳ ಪೈಕಿ ಕೆಲವರಾದ ನಾವು ಜನರಲ್ ಕಮಿಟಿ ಮೀಟಿಂಗನ್ನು ಕರೆದು ಅವರ ಅನುಮತಿ ಪಡೆದು ಮುಂದಣ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಗಿ ಬಂದಿರುತ್ತೆ. ಈ ಪರಿಸ್ಥಿತಿಯಲ್ಲಿ ಫಂಡಿನ ಯಾವ ಕಾರ್ಯವನ್ನೂ ಮಾಡಲು ಮ॥ ಜಿ ಗುರುಬಸಪ್ಪನವರಿಗಾಗಲಿ ಮತ್ಯಾರಿಗಾಗಲಿ ಅಧಿಕಾರವಿರುವುದಿಲ್ಲ. ಹಾಲಿ ಈ ಸಂಸ್ಥೆ ಇರುವ ಪರಿಸ್ಥಿತಿಯಲ್ಲಿ ಏನೊಂದು ಕೆಲಸಕಾರ್ಯಗಳು ನಡೆಸಲು ಸಾಧ್ಯವಿಲ್ಲದೆ ಇರೋಣದರಿಂದಲು ಅಜೆಂಡಾವನ್ನು (ಚರ್ಚಿಸುವ ವಿಷಯಗಳು) ತೋರಿಸಿಲ್ಲ. ಸಂಘದ ತರಫಿನಲ್ಲಿ ಕ್ರಮಬದ್ಧವಾದ ಮ್ಯಾನೇಜಿಂಗ್ ಕಮಿಟಿಯನ್ನು ತಮ್ಮೆಲ್ಲರ ಒಪ್ಪಿಗೆಯಿಂದ ರಚಿಸಿ ಮುಂದಣ ವ್ಯವಸ್ಥೆ ಕೈಕೊಳ್ಳಬೇಕಾಗಿರುವುದರಿಂದ ಈ ಮೀಟಿಂಗನ್ನು ಪೂರ್ವಭಾವಿಯಾಗಿ(Preliminary) ಕರೆದಿದೆ.

ಈ ಸಂಸ್ಥೆಯು ರಿಜಸ್ಟ್ರಾದ ವೇಳೆ ಗೊತ್ತುಮಾಡಲ್ಪಟ್ಟಿರುವ ಕೇಂದ್ರಸ್ಥಾನವಾದ ಬೆಂಗಳೂರಿನಲ್ಲಿ ಜನರಲ್ ಕಮಿಟಿಯು ಸೇರತಕ್ಕದ್ದು ಸೂಕ್ತವಾಗಿರುತ್ತೆ. ಮೆಂಬರುಗಳು ಸೇರಲು ಸಾಕಾದಷ್ಟು ಕಾಲವನ್ನು ಕೊಡಬೇಕಾಗಿದೆ. ಆದ್ದರಿಂದ ಈ ಫಂಡಿನ ಕ್ರಮಬದ್ಧ ಕೇಂದ್ರಸ್ಥಾನವಾದ ಬೆಂಗಳೂರಿನಲ್ಲಿ, ಸಿಟಿ ರೈಲ್ವೆಸ್ಟೇಷನ್ ಬಳಿ ಇರುವ ರಾವ್ ಬಹದ್ದೂರ್ ಧರ್ಮಪ್ರವರ್ತ ಕೈ॥ ಗುಬ್ಬಿ ತೋಟದಪ್ಪನವರ ಧರ್ಮ ಛತ್ರದಲ್ಲಿ 1941 ನೇ ಇಸವಿ ಡಿಸೆಂಬರ್ ತಿಂಗಳು ಹದಿಮೂರನೇ ತಾರೀಖು ಶನಿವಾರ ಸಾಯಂಕಾಲ 4 ಘಂಟೆಗೆ ಸೇರಬೇಕೆಂದು ನಾವು ತಮ್ಮ ಅಪ್ಪಣೆಕೇಳಿ ಸಂಘದ ತರಫಿನಲ್ಲಿ ಈ ಪ್ರಕಟಣೆಯನ್ನು ಹೊರಡಿಸಿದ್ದೇವೆ.

ಸದಸ್ಯರಾದ ತಾವುಗಳೆಲ್ಲರೂ ತಪ್ಪದೆ ಆ ಕಾಲಕ್ಕೆ ದಯಮಾಡಿಸಬೇಕಾಗಿ ಪ್ರಾರ್ಥನೆ. ಆ ಕಾಲಕ್ಕೆ ಮೀಟಿಂಗಿಗೆ ಬರಲು ಅನಿವಾರ್ಯವಿರತಕ್ಕ ಸದಸ್ಯರುಗಳು ತಮ್ಮ ಅನಿವಾರ್ಯವನ್ನು ಸೂಚಿಸಿ ತಮ್ಮ ಪರ ಮೀಟಿಂಗಿನಲ್ಲಿ ಓಟುಮಾಡಲು ಸ[illegible]ರ ಪೈಕಿ ಯಾ ಗಾಗಲಿ ಅಥವ ನಮ್ಮಗಳ ಪೈಕಿ ಒಂದನೆಯವ ಮ॥ ರಾ॥ ರಿಟೈರ್ಡ್ ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜ ಹೆಚ್ ಕೆ ವೀರಬಸವಯ್ಯನವರಿಗೆ ಪ್ರಾಕ್ಸಿಯನ್ನು ಕೊ ಬಹುದಾಗಿ ಸೂಚಿಸಿದೆ ಮತ್ತು ಪ್ರಾಕ್ಸಿಫಾರಂ ಸಹ ಇ ರೊಡನೆ ಕಳಿಸಿಕೊಟ್ಟಿರುತ್ತೆ.

ಪ್ರೆಸಿಡೆಂಟರು ಮತ್ತು ಸೆಕ್ರೆಟರಿಯವರು ಫವತಿಯಾಗಿರೋಣದರಿಂದ ಫಂಡಿಗೆ ಸಂಬಂಧಪಟ್ಟ ಪ್ರೊಸಿಡಿಂಗ್ಸ್ ಬುಕ್ಕುಗಳೂ, ಲೆಕ್ಕಪತ್ರಗಳೂ, ಬ್ಯಾಂಕು ವಗೈರೆಗಳ ಶಿಲ್ಕು ಮುಂತಾದ ಎಲ್ಲಾ ದಾಖಲಾತಿಗಳನ್ನೂ ಹಾಜರ್ ಪಡಿಸಿಕೊಳ್ಳಲು ಫವತಿಯವರ ವಾರಸುದಾರರುಗಳಿಗೆ ಈ ಪ್ರಕಟಣೆಯನ್ನು ಕಳುಹಿಸಬೇಕಾಗಿದೆ. ಆದ್ದರಿಂ ನಮಗೆ ತಿಳಿದಮಟ್ಟಿಗೆ ಕೈ॥ ಟಿ. ಯಂ. ಷಡಕ್ಷರಪ್ಪ ನವರ ಮಕ್ಕಳು ವೇ॥ ಸಿದ್ಧಾರಾಧ್ಯರಿಗೂ, ಕೈ॥ ಯಂ ನಾಗಪ್ಪನವರ ಮಕ್ಕಳು ಮ॥ ರಾ॥ ಮಲ್ಲಪ್ಪನವರಿಗೂ ಈ ಪ್ರಕಟನೆಯ ಕಾಪಿಯನ್ನು ಕಳಿಸಿಕೊಟ್ಟಿರುತ್ತೆ. ಸದ ಯವರು ತಮ್ಮಲ್ಲಿರತಕ್ಕ ಎಲ್ಲಾ ದಾಖಲಾತಿಗಳ ಸಮೇ ಹಾಜರಾಗಿ ದಯವಿಟ್ಟು ಸಹಕರಿಸಬೇಕಾಗಿ ಈ ಮೂಲ ಕೋರುತ್ತೇವೆ. ಈ ಮೇಲ್ಕಂಡ ವಾರಸುದಾರರುಗಳಲ್ಲಿ ಮತ್ಯಾರಾದರೂ ವಾರಸುದಾರರಾಗಿರುವ ಪಕ್ಷದಲ್ಲಿ ಮತ್ತು ಈ ಸಂಸ್ಥೆಯ ಎಲ್ಲಾ ಕಾಗದಪತ್ರಗಳೂ ಲೆಕ್ಕವಗೈರೆ ಪು ಕಗಳೂ, ಯಾರಲ್ಲಿದ್ದರೂ, ಅವರ ಹೆಸರು ವಿಳಾಸಗ ಕಮಿಟಿಯ ಸದಸ್ಯರುಗಳಲ್ಲಿ ತಿಳಿದಂಥವರು ನಮಗೆ ಮು ಚಿತವಾಗಿ ತಿಳುವಳಿಕೆ ಕೊಟ್ಟರೆ ಅವರುಗಳಿಗೂ ಸಹ ಈ ಪ್ರಕಟಣೆಯ ಕಾಪಿಯನ್ನು ಕಳುಹಿಸಿ ಅವರನ್ನೂ ಮೀಟಿ ಗಿಗೆ ದಾಖಲಾತಿಗಳ ಸಮೇತ ಬರಮಾಡಿಕೊಳ್ಳಲಾ ತ್ತೆ.

ಸೂಚನೆ—ಈ ಮೀಟಿಂಗಿಗೆ ಬರುವ ದಾತೃಗ ಪ್ರಯಾಣ ಖರ್ಚು ಪ್ರೆಸಿಡೆಂಟ್, ಸೆಕ್ರೆಟರಿ ಮ್ಯಾ ಆಡಳಿತದ ಮಂಡಳಿಯು ಮೀಟಿಂಗಿನಲ್ಲಿ ಏರ್ಪಟ್ಟ ನಂತರ ಫಂಡಿನಿಂದ ಪಾವತಿಯಾಗಬೇಕಾದ ವ್ಯವಸ್ಥೆಯೂ ಸಹ ನಿಮ್ಮ ಒಪ್ಪಿಗೆಯಿಂದ ಮಾಡಬೇಕಾಗಿದೆ.

ಈ ಮೇಲ್ಕಂಡ ವಿಷಯಗಳನ್ನು ಲಕ್ಷಿಸದೆ ಯಾ ಆಗಲಿ ಮ॥ ರಾ॥ ಜಿ ಗುರುಬಸಪ್ಪನವರ 15 11 41 ಪ್ರಕಟಣೆ ಪ್ರಕಾರ ದಾವಣಗೆರೆಯಲ್ಲಿ ಸೇರಿ ಮೀಟಿಂಗ ನಡೆಸಿ ಏನು ಕಾರ್ಯ ಕಲಾಪ ಮಾಡಿದಾಗ್ಯೂ ಸ ಯನ್ನು ಕಾನೂನು ಪ್ರಕಾರ ಬಂಧಿಸಲಾಗದೆಂ ಅರಿಕೆ:—

ಎಚ್. ಕೆ ವೀರಬಸವಯ್ಯ—ಬೆಂಗಳೂರು
ಯಸ್ ಶಿವಪ್ಪ—ಬೆಂಗಳೂರು.
ಎ ಯಸ್. ಮಲ್ಲಪ್ಪ—ಮೈಸೂರು
ಕೆ. ಪಿ ಚಂದ್ರಶೇಖರಪ್ಪ—ಬೆಂಗಳೂರು
ಪಿ ಆರ್ ವಿರೂಪಾಕ್ಷಪ್ಪ—ಮಂಡ್ಯ.
ಜಿ. ಸಿ ಮಹಲಿಂಗಪ್ಪ—ಶಿವಮೊಗ್ಗ.
ಎ. ಯಸ್. ಶಿವನಂಜಪ್ಪ—ಆಲೂರು
ಜಿ. ಕೆ. ಮಲ್ಲಪ್ಪ—ತಿಪಟೂರು.

ತಾ॥ 20-11-1941

ಶ್ರೀ ಜಗದ್ಗುರು ದಾರುಕಾಚಾರ್ಯಾಯ ನಮಃ

ಸೂಕ್ತಿಮಾಲಾ

ಲೇ:—ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರು [illegible]
ಮುದೇನೂರು.

(೧) ಸುಳ್ಳುಹೇಳುವುದಕ್ಕಿಂತಲೂ ಬಾಯಿ ಮುಚ್ಚಿರುವುದು ಲೇಸು. ಪರನಾರಿಯರನ್ನು ಬಯಸುವುದಕ್ಕಿಂತಲೂ ನಪುಂಸಕನಾಗಿರುವುದು ಮೇಲು. ತತ್ವವನ್ನು ತಿಳಿಯದೆ ನೂರುವರ್ಷ ಬಾಳುವುದಕ್ಕಿಂತಲೂ ತತ್ವವನ್ನು ತಿಳಿದು ಮರುದಿನವೇ ಸಾಯುವುದು ಒಳ್ಳೆಯದು. ಚಾಡಿಕೋರರ ಮಾತನ್ನು ಆಲಿಸುವುದಕ್ಕಿಂತಲೂ ಕಿವುಡನಾಗಿರುವುದುತ್ತಮವು. ಇತರರ ಸ್ವತ್ತನ್ನು ಅಪಹರಿಸುವುದಕ್ಕಿಂತಲೂ ತಿರಿದುಣ್ಣುವುದುತ್ತಮವು. ವಿನಯವಿಲ್ಲದ ಕುಲಸತಿಯೊಡನೆ ಬಾಳುವೆಮಾಡುವುದಕ್ಕಿಂತಲೂ ಏಕಾಂಗಿಯಾಗಿರುವುದು ಒಳ್ಳೇದು. ನೀಚನ ಸಂಗಕ್ಕಿಂತಲೂ ಪ್ರಾಣಬಿಡುವುದುತ್ತಮವು. ದುರುಳರೊಡನೆ ಸರಸಮಾಡುವುದಕ್ಕಿಂತಲೂ ಮೊಸಳೆ, ಕಾಳಸರ್ಪ

ಸಂಗಡ ಸರಸವಾಡುವುದುತ್ತಮವು ಸೇವೆಯು. ಅಭಿಮಾನವನ್ನು ಸೂರೆಗೊಳ್ಳುವುದು ಬೆಳದಿಂಗಳು. ಕತ್ತಲೆಯನ್ನು ಓಡಿಸುವುದು. ಮುಪ್ಪು ಚೆಲ್ವಿಕೆಯನ್ನು ಮಾಯಮಾಡುವುದು. ಮಹಾಪುರುಷರ ಕಥೆಯು ಪಾಪವನ್ನು ಕಳೆಯುವುದು. ಬಡತನವು ಅಂದರೆ ತಿರುಪೆಯು ಗುಣಸಮುದಾಯವನ್ನೆಲ್ಲ ನುಂಗಿಬಿಡುವುದು. ತಿರುಪೆಯು ತಪ್ಪು ಲಘುವಾಗಿರುವಲ್ಲಿ "ಬೇಡಿಕೊಂಡು ತಿನ್ನಬಹುದು. ಕದ್ದುಕೊಂಡು ತಿನ್ನಬಾರದೆಂದು" ಗಾದೆಯಿರುವಾಗ ಕಳ್ಳತನವು ಎಷ್ಟು ತುಚ್ಛವೂ ಹೀನವೂ ಎಂಬುದನ್ನು ಕುಶಲಮತಿಗಳು ವಿಮರ್ಶಿಸಬೇಕು.

೨ ದುರುಳನು ವೇದವನ್ನೇ ಓದಲಿ, ಧರ್ಮಶಾಸ್ತ್ರಗಳನ್ನೇ ಅಧ್ಯಯನ ಮಾಡಲಿ, ಉತ್ತಮಕುಲಸಂಜಾತನಾಗಲಿ, ಹೇಗೂ ಅವನನ್ನು ನಂಬಬಾರದು. ಕಾಳಸರ್ಪನ ಹೆಡೆಯಲ್ಲಿ ರತ್ನವಿದ್ದ ಮಾತ್ರಕ್ಕೆ ಬಲ್ಲವರು ಅದನ್ನು ಮಗ್ಗುಲಲ್ಲಿ ಮಲಗಿಸಿಕೊಳ್ಳುವರೇ? ಆಕಳ ಹಾಲು ಸಹಜವಾಗಿ ಮಧುರವಾಗಿರುವಂತೆ ಪ್ರಾಣಿಗಳ ಸ್ವಭಾವವು ಬಲವತ್ತರವಾಗಿರುವುದು. ಇಂದ್ರಿಯಗಳನ್ನೂ ಮನಸ್ಸನ್ನೂ ನಿಗ್ರಹಿಸಲಾರದವನ ನಡೆವಳಿಯು ಆನೆಯ ಸ್ನಾನಕ್ಕೆ ಸಮಾನವಾದುದು. ಸದ್ವರ್ತನವಿಲ್ಲದ ತಿಳಿವಳಿಕೆಯು ಕುರೂಪಿಗೆ ಶೃಂಗರಿಸಿದ ಆಭರಣಗಳಂತೆ ಕೇವಲ ಭಾರವಾದುದು ಮತ್ತು ಅವನ ಜನ್ಮವು ಆಡಿನ ಕುತ್ತಿಗೆಯಲ್ಲಿ ನೇತಾಡುವ ಜೋತ ಮೊಲೆಯಂತೆ ನಿಷ್ಪ್ರಯೋಜನವಾದುದು.

೩ ಯಾವುದರ ದೆಸೆಯಿಂದ, ಏತರಿಂದ ಯಾವ ವಿಧವಾಗಿ, ಯಾವಾಗ, ಎಷ್ಟರಮಟ್ಟಿಗೆ, ಎಲ್ಲಿ, ಯಾವ ಪ್ರಾಣಿಯು ಮಾಡಿದ ಒಳ್ಳೆಯ ಅಥವಾ ಕೆಟ್ಟಕ್ರಿಯೆಯ ಫಲವೋ, ಹಾಗೆ ಅವರ ದೆಸೆಯಿಂದಲೇ, ಅದರಿಂದಲೇ, ಆ ವಿಧದಿಂದಲೇ, ಆ ಕಾಲದಲ್ಲಿಯೇ, ಅಷ್ಟರಮಟ್ಟಿಗೇ, ಅಲ್ಲಿಯೇ ಅವನು ವಿಧಿ ನಿಯಮ (ಪೂರ್ವಜನ್ಮದ ಕರ್ಮಫಲ) ದಿಂದ ಕರ್ಮಫಲವನ್ನು ಪಡೆಯುವನು. ರೋಗ ಶೋಕ ಸಂತಾಪ, ಬಂಧನ, ವ್ಯಸನಗಳೆಂಬಿವು, ಪ್ರಾಣಿಯು ತನ್ನ ಜೀವಿತದಲ್ಲಿ ಬೆಳೆಯಿಸಿದ ಪಾಪವೃಕ್ಷದ ಫಲಗಳಾಗಿರುವುವು. ಸೃಷ್ಟಿ ನಿಯಮವು ಹೀಗಿರುತ್ತಿರಲು ಅವನು ಹೀಗೆ ಮಾಡಿದನು, ಇವನು ಹೀಗೆ ಮಾಡಿದನು, ಹಾಗೆ ಅಂದನು ಇತ್ಯಾದಿ ಬಾಲವಚನಗಳನ್ನಾಡುವುದು ಮಾನವ ವ್ಯಕ್ತಿಗೆ ಸಲ್ಲತಕ್ಕದ್ದಲ್ಲ. ಅಲ್ಲದೆ "ಪುಣ್ಯವೇ ಆಗಲಿ ಪಾಪವೇ ಆಗಲಿ, ಅತ್ಯುತ್ಕಟವಾಯಿತೆಂದರೆ ಆ ಫಲವು ಮುಂದಿನ ಜನ್ಮದವರೆಗೆ ನಿರೀಕ್ಷಿಸದೆ ಮೂರು ವರ್ಷ, ಮೂರು ತಿಂಗಳು, ಮೂರು ಪಕ್ಷಗಳು, ಇಲ್ಲವೇ ಮೂರು ದಿನಗಳೊಳಗಾಗಿ ಈ ಲೋಕದಲ್ಲಿಯೇ ಫಲಿಸುವುದು." ಎಂಬುದಾಗಿ ಆರ್ಯರು ನಿರೂಪಿಸಿರುವರು.

೪ ಕೊಡುವಿಕೆಯಿಲ್ಲವೆಂದು ಹೇಳುವಿಕೆ, ಸುಖದುಃಖ, ಪ್ರೀತಿ ದ್ವೇಷ, ಇವುಗಳ ವಿಷಯದಲ್ಲಿ ಮಾನವನು ತನ್ನನ್ನೇ ಉದಾಹರಣೆಯಾಗಿಟ್ಟುಕೊಂಡಲ್ಲದೆ ಅವನಿಗೆ ಅವುಗಳಲ್ಲಿ ನಂಬಿಗೆ ಹುಟ್ಟಲಾರದು. ಪರನಾರಿಯರನ್ನು ಜನನಿಯಂತೆಯೂ, ಪರರ ಸ್ವತ್ತನ್ನು ಮಣ್ಣಿನಂತೆಯೂ, ಮಿಕ್ಕೆಲ್ಲಾ ಪ್ರಾಣಿಗಳನ್ನು ತನ್ನಂತೆಯೂ ಯಾವನು ತಿಳಿಯುವನೋ ಅವನೇ ತಿಳಿವಳಿಕೆಯುಳ್ಳವನು. ಆದರೆ ತಿಳಿವಳಿಕೆ ಮಾತ್ರ ಸಾಲದು. ಅದು ಕ್ರಿಯಾಸಹಿತವಾಗಿರಬೇಕು.

೫ ಗಗನಮಂಡಲದಲ್ಲಿ ಸಂಚರಿಸುವ, ಲೋಕದ ವಿಪದಗಳನ್ನು ನೀಗುವ, ಸಹಸ್ರಾರು ಕಿರಣಗಳಿಂದೊಪ್ಪುವ, ಗ್ರಹಗಳ ನಡುವೆ ಸಂಚರಿಸತಕ್ಕ ಜಗಚ್ಚಕ್ಷುಗಳಾದ ಸೂರ್ಯ ಚಂದ್ರರಿಗೆ ರಾಹುಕೇತುಗಳ ಬಾಧೆ. ಆನೆ, ಹಾವು, ಹಕ್ಕಿಗಳಿಗೆ ಬಂಧನ-ಬುದ್ಧಿಶಾಲಿಗಳ ಬಡತನ ಸಜ್ಜನರಿಗೆ ದುರ್ಜನರ ಕಾಟ ಇವುಗಳನ್ನು ಪರ್ಯಾಲೋಚಿಸಲಾಗಿ ದೈವಶಕ್ತಿಯು ಇನ್ನೆಷ್ಟು ಬಲವತ್ತರವಾದುದೋ ತಿಳಿದವರಾರು? ಆಕಾಶದಲ್ಲಿ ಸ್ವತಂತ್ರವಾಗಿ ಸಂಚರಿಸುವ ಪಕ್ಷಿಗಳೂ ವಿಪತ್ತಿಗೆ ಗುರಿಯಾಗುವುವು. ಕಡಲಿನ ಆಳವಾದ ನೀರಿನಲ್ಲಿ ಸಂಚರಿಸುವ ಮೀನುಗಳನ್ನು ಗಾಳದಿಂದ ಹಿಡಿಯುವರು. ಕಾಡಿನ ಹುಲ್ಲು ತಿಂದು ನದಿಯ ನೀರು ಕುಡಿದು ಸ್ವೇಚ್ಛೆಯಾಗಿ ಸಂಚರಿಸುವ ಜಿಂಕೆಗಳನ್ನು ಬೇಟೆಯಾಡುವರು. ನಿರಪರಾಧಿಗಳಾದ ಸಜ್ಜನರನ್ನು ದುರುಳರು ತೊಂದರೆಪಡಿಸುವರು. ಇವುಗಳ ಅಪರಾಧವಾದರೂ ಯಾವುದು? ಸಜ್ಜನರಲ್ಲಿ ದೋಷವಿಲ್ಲದಿರುವುದೇ ದುರುಳರಿಗೆ ದೊಡ್ಡ ಅಪರಾಧವಾಗಿ ಕಾಣಿಸುವುದು. ಗುಣಗಳು ಗುಣಜ್ಞರಲ್ಲಿ ಗುಣಗಳೆನಿಸುವುವು. ಅವುಗಳು ಗುಣಹೀನರನ್ನು ಆಶ್ರಯಿಸಿದರೆ ದೋಷಗಳಾಗಿ ಪರಿಣಮಿಸುವುವು. ನೀರು ನದಿಯಲ್ಲಿ [illegible] ಹರಿಯುವಾಗ [illegible]. ಆದರೆ, ಅದೇ ನೀರೇ ಸಮುದ್ರಕ್ಕೆ ಸೇರಿದ ಬಳಿಕ ಕುಡಿಯಲಾಗುವುದೇ?

೬ ಹಿಂದುಗಡೆ ಕಾರ್ಯವನ್ನು ಕೆಡಿಸಿ, ಇದಿರಾಗಿ ಸವಿಮಾತುಗಳನ್ನಾಡುತ್ತ, ಒಳಗಡೆ ವಿಷವನ್ನೂ, ಮೇಲ್ಗಡೆ ಹಾಲನ್ನೂ ಧರಿಸಿರುವ ಗಡಿಗೆಯಂತೆ ಇರುವ ಮಿತ್ರನನ್ನು ದೂರದಲ್ಲಿರಿಸಬೇಕು. ನೀರು ಫಳಫಳನೆ ಕುದಿಯುತ್ತಿದ್ದರೂ ಬೆಂಕಿಯನ್ನು ಆರಿಸದೆ ಇರುವುದುಂಟೆ? ನಂಬಿದವನೂ, ನಿರ್ಮಲಚಿತ್ತನೂ ಎನಿಸಿದ ಮಿತ್ರನ ವಿಷಯದಲ್ಲಿ ಕೇಡನ್ನು ಹಾರೈಸಿ, ನಾಲಿಗೆ ನಾಸಿಯಿಲ್ಲದ ಮಾನವನ ಮೈತ್ರಿಯು ಸಲ್ಲದು. ಅವನಲ್ಲಿ ಪ್ರೀತಿಯನ್ನೂ ಇಡಬಾರದು. ಬೆಂಕಿಯು ಬಿಸಿಯಾಗಿರುವಾಗ ಸುಡುವುದು. ಆರಿದ ಬಳಿಕ ಅದು ಕೈಯನ್ನು ಕಪ್ಪಗೆ ಮಾಡುವುದು. ಖೂಳರ ನಡೆವಳಿಕೆಯೇ ಇಂತಹುದು. ಹೇಗೆಂದರೆ ಮೊದಲು ಕಾಲ್ಗೆರಗುತ್ತ, ಬಳಿಕ ಬೆನ್ನಿನ ರಕ್ತವನ್ನು ಹೀರಿ, ಕಿವಿಯಲ್ಲಿ ಮೆಲ್ಲಗೆ ವಿಚಿತ್ರ ರೀತಿಯಿಂದ ಏನನ್ನೋ ಗೂಣಗುಟ್ಟಿ, ಹೊಂಚುತ್ತಲಿದ್ದು ದಬ್ಬನೆ ಒಳಹುಗುವುದು ದುರುಳರ ನಡೆವಳಿ. ಇವನ್ನೆಲ್ಲ ಸೊಳ್ಳೆಯು ಅನುಸರಿಸುತ್ತದೆ. ದುರುಳನು ಸವಿಮಾತುಗಳನ್ನಾಡುವ ಮಾತ್ರದಿಂದಲೇ ಅವನನ್ನು ನಂಬಬಾರದು. ಅವನ ನಾಲಿಗೆಯ ತುದಿಯಲ್ಲಿ ಜೇನು ತೊಟ್ಟಿಕ್ಕುವುದು. ಅಂತರಂಗದಲ್ಲಿ ಕಾಲಕೂಟವು ತುಂಬಿತುಳುಕುವುದು. ಆದ್ದರಿಂದ ಇಂತಹ ಮನುಷ್ಯಜಂತುಗಳು ಬಂಧುಗಳೇ ಆಗಿರಲಿ ವಿದ್ಯಾವಂತನೂ ಧನವಂತನೂ ಆದ ಮಿತ್ರನೇ ಆಗಿರಲಿ ಮೃತ್ಯುಘಟವನ್ನು ಉತ್ತಮ ವರ್ಣವಸನಂತೆ ದೂರದಲ್ಲಿ ಒತ್ತಟ್ಟಿಗೆ ಇರಿಸಲು ತಕ್ಕವನು. ಏಕೆಂದರೆ, ಸಾಧ್ಯವಲ್ಲದುದು ಎಂದಿಗಾದರೂ ಅಸಾಧ್ಯವೇ ಸರಿ. ಶಕ್ಯವಾದುದು ಎಂದಿಗೂ ಅಶಕ್ಯವೆನಿಸಲಾರದು. ತೇರು ನೀರಿನಮೇಲೆ ಸಂಚರಿಸುವುದು ಎಲ್ಲಿಯಾದರೂ ಉಂಟೆ? ಹಡಗು ನೆಲದಮೇಲೆ ಹರಿಯುವುದೇ? ಇಲ್ಲವಷ್ಟೆ! ಭಕ್ಷ್ಯಕ್ಕೂ ಭಕ್ಷಕನಿಗೂ ಸ್ನೇಹವು ಕಲೆತರೆ ವಿಪತ್ತಿಗೆ ಕಾರಣವಾಗುವಂತೆ ದುರುಳರಿಗೂ ಸರಳರಿಗೂ ಮೈತ್ರಿಯು ತರವಲ್ಲ. ಸರ್ವಥಾ ತರವಲ್ಲ!!

೭ ಒಂದು ಪ್ರಾಣಿಯು ಮತ್ತೊಂದು ಪ್ರಾಣಿಯ ಮಾಂಸವನ್ನು ತಿನ್ನುವಾಗ ಅವೆರಡರ ಭೇದವನ್ನು ನೋಡಬೇಕು. ಒಂದು ಪ್ರಾಣಿಯು ಕ್ಷಣಕಾಲ ತೃಪ್ತಿಯನ್ನು ಪಡೆಯುವುದು, ಆದರೆ ಇನ್ನೊಂದು ತನ್ನ ಪ್ರಾಣವನ್ನೇ ನೀಗಿಕೊಳ್ಳಬೇಕಾಗುವುದು. 'ಸಾಯಬೇಕಲ್ಲ' ಎಂಬುದಾಗಿ ತನಗೆ ಉಂಟಾಗುವ ದುಃಖವನ್ನು ಊಹಿಸಿದರೆ ಅದೇ ನಿಮಿತ್ತದಿಂದಲೇ ಇತರರನ್ನೂ ಕಾಪಾಡುವುದಕ್ಕೂ ಸಾಧ್ಯವಾಗುವುದು. ಹೀಗಿರುತ್ತ ಅಡವಿಯಲ್ಲಿ ಯಾರೊಬ್ಬರ ಪ್ರಯತ್ನವೂ ಇಲ್ಲದೆ, ತಾನಾಗಿ ಬೆಳೆದಿರುವ ಸೊಪ್ಪಿನಿಂದಲಾದರೂ ತುಂಬಬಹುದಾಗಿರುವ ಈ ಹಾಳು ಹೊಟ್ಟೆಯ ಸಲುವಾಗಿ, ಯಾವನಾದರೂ ಸುಳ್ಳು ಕಳ್ಳತನ-ಮೋಸ-ಕೊಲೆ ಇತ್ಯಾದಿ ಹೀನ ದೀನಕೃತ್ಯಗಳನ್ನು ಮಾಡಿ ಮಹಾಪಾಪಗಳನ್ನು ಕಟ್ಟಿಕೊಳ್ಳುವನು.

೮ ದುರುಳನು ಮಣ್ಣಿನ ಗಡಿಗೆಯಂತೆ ಬಹು ಸುಲಭವಾಗಿ ಭಿನ್ನನಾಗುವನು. ಮರಳಿ ಸೇರಿಸಲು ಸಾಧ್ಯವೂ ಇಲ್ಲ. ಸತ್ಪುರುಷನು ಚಿನ್ನದ ಕೊಡದಂತೆ ಭೇದ್ಯನೂ, ಸುಲಭವಾಗಿ ಸಂಧಾನಕ್ಕೆ ಅರ್ಹನೂ ಆಗಿರುವನು. ಇವನ ಸ್ನೇಹ ನಡುವೆ ವಿಚ್ಛಿನ್ನವಾದರೂ ಅವನ ಗುಣಗಳು ಮಾತ್ರ ಬದಲಾಯಿಸುವುದಿಲ್ಲ. ತಾವರೆಯ ದಂಟು ಮುರಿದರೂ, ಅದರ ಒಳಗಣ ನೂಲು ಮಾತ್ರ ಅಂಟಿಕೊಂಡೇ ಇರುವುದು. ಈ ಮಹನೀಯರ ಸ್ನೇಹವು ಜೀವವಿರುವವರೆಗೂ ಸ್ಥಿರವಾದುದು. ಕೋಪವು ಉತ್ತರಕ್ಷಣದಲ್ಲಿಯೇ ಶಾಂತವಾಗುವುದು. ಭೋಗಭಾಗ್ಯಗಳನ್ನು ಲಕ್ಷ್ಯವಿಲ್ಲದೆ ತೊರೆಯುವರು.

೯ ಯಾವ ಪ್ರಾಣಿಯಾದರೂ ವರ್ಷಾಕಾಲದ ಪ್ರವಾಹದಂತೆ ಮೇಲೆ ಮೇಲೆ ಏಳಿಗೆಯನ್ನು ಪಡೆದಿತೆಂದರೆ 'ಉನ್ನತವಾದದ್ದು ಮುರಿದೀತು ಅಗಲವಾದದ್ದು ಹರಿದೀತು', ಎಂಬಂತೆ ಎಂದಾದರೊಂದು ದಿನ ಉರುಳಿ ಬೀಳುವುದೇ ದಿಟ. ಸಂಯೋಗವು ವಿಯೋಗವನ್ನೇ ಎದುರುನೋಡುತ್ತಿರುವುದು. ಬದುಕುವುದು ಸಹ ಸಾಯುವ ಸಲುವಾಗಿಯೇ ಸರಿ. ಯಾವಾಗಲೂ ಸಜ್ಜನರನ್ನು ಸಜ್ಜನರೇ ಆಪತ್ತಿನಿಂದ ಕಡೆಗಾಣಿಸಬಲ್ಲರು. ಕೆಸರಿನಲ್ಲಿ ಹೂತುಬಿದ್ದ ಆನೆಗಳನ್ನು ಆನೆಗಳೇ ಮೇಲಕ್ಕೆ ಎಬ್ಬಿಸತಕ್ಕವು. ಗುಣಶಾಲಿಯು ಗುಣವಂತನನ್ನು ಮೆಚ್ಚಿ ಪ್ರೀತಿಸುತ್ತಾನೆ. ಗುಣವೂ ಶೀಲವೂ ಇಲ್ಲದವನು, ಗುಣವಂತನನ್ನು ಪ್ರೀತಿಸಲಾರನು. ತುಂಬಿಯು ಯಾವುದೋ ಕಾಡಿನಿಂದ ಬಂದು, ಕೊಳದಲ್ಲಿರುವ ತಾವರೆಯನ್ನು ಸೇರುವುದು. ಕಪ್ಪೆಯು ಅನುದಿನವೂ ತಾವರೆಯೊಡನೆಯೇ ವಾಸಮಾಡುತ್ತಿರುವುದಾದರೂ, ತಾವರೆಯ ಪರಿಮಳಕ್ಕೆ ಬೆರಗಾಗಿ ಅದನ್ನು ಮೋಹಿಸಲಾರದು.

(ಸಶೇಷ)

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಅಡಕೆಗೆಹೋದ ಮಾನ ಆನೆಕೊಟ್ಟರೂ ಬಾರದು

(ಲೇ—ವಿರೂಪಾಕ್ಷಶರ್ಮಾ ದಾವಣಗೆರೆ ಮಠದ ಸಂಸ್ಕೃತ ಪಾಠಶಾಲೆ, ಕೊಲ್ಹಾಪುರ)

ಜಗತ್ತಿನಲ್ಲಿ ಜನ್ಮಿಸಿದ ಮನುಷ್ಯನು ಯಶೋವಂತನಾಗಲು ಪ್ರಯತ್ನಿಸಬೇಕು. ಕೀರ್ತಿಶಾಲಿ ಪುರುಷನೇ ಜಗತ್ತಿನಲ್ಲಿ ಮಾನ್ಯನು. ಅವನ ಜನ್ಮವೇ ಸಫಲವು. ಅವನೇ ಜಗದ್ವಂದ್ಯನು. ಮನುಷ್ಯನು ಸತ್ಕೀರ್ತಿ, ಸದ್ಗುಣಗಳನ್ನು ಸಂಪಾದಿಸುವುದೇ ಆಯುಷ್ಯದ ಅಂತಿಮ ಧ್ಯೇಯವೆಂಬುದನ್ನು ಕಲಿಯಲು ಪ್ರಯತ್ನಿಸಬೇಕು. ಕೀರ್ತಿಶಾಲಿ ಪುರುಷನು ಅಪಮಾನದ ಶಬ್ದವನ್ನೂ ಸಹ ಕಿವಿಯಿಂದ ಕೇಳುವುದಿಲ್ಲ. ಒಂದುಪಕ್ಷ ದುರ್ದೈವದಿಂದ ಅಪಮಾನವಾಗುವ ಸಂದರ್ಭವೊದಗಿದರೆ ತನ್ನ ಪ್ರಾಣತ್ಯಾಗಕ್ಕೂ ಸಹ ಹಿಂಜರಿಯುವದಿಲ್ಲ. ಸತ್ಪುರುಷರಿಗೆ ಮಾನವೆನ್ನುವುದು ಪ್ರಾಣಕ್ಕಿಂತಲೂ ಪರಮ ಪ್ರಿಯಕರವಾದುದು. ಮಾನಿಗಳು ಎಂತಹ ಕಷ್ಟವೊದಗಿದರೂ ಪ್ರಾಣವನ್ನು ಬಿಡುವರೇ ಹೊರತು ಮಾರ್ಗವನ್ನು ಬಿಡುವುದಿಲ್ಲ. ಆದುದರಿಂದ ಸತ್ಪುರುಷರಿಗೆ "ಮಾನಧನ"ರೆಂದು ಲೋಕದಲ್ಲಿ ಪ್ರತೀತಿಯಿದೆ.

ಅಧಮಾ ಧನಮಿಚ್ಛಂತಿ ಧನಮಾನೌ ಚ ಮಧ್ಯಮಾಃ ।
ಉತ್ತಮಾ ಮಾನಮಿಚ್ಛಂತಿ ಮಾನೋ ಹಿ ಮಹತಾಂ ಧನಂ ॥

ಅಂದರೆ ನೀಚಮನುಷ್ಯರು ಧನವನ್ನು ಇಚ್ಛಿಸುತ್ತಾರೆ. ಮಧ್ಯಮರು ಮಾನವನ್ನೂ ಮತ್ತು ಧನವನ್ನೂ ಇಚ್ಛಿಸುವರು. ಉತ್ತಮರು ಮಾತ್ರ ಕೇವಲ ಮಾನವನ್ನೇ ಇಚ್ಛಿಸುವರು. ಆದಕಾರಣ ನೀಚರು ಧನವನ್ನು ಪ್ರಿಯವನ್ನಾಗಿ ತಿಳಿದಂತೆ ಉತ್ತಮರು ಮಾನವನ್ನು ಪ್ರಿಯವಾಗಿ ತಿಳಿದಿರುವರು. ಒಮ್ಮೆ ಕಿಂಚಿತ್ ಕಾರ್ಯಕ್ಕೆ ಹೋದ ಮಾನವನ್ನು ಪುನಃ ಸಂಪಾದಿಸಲು ಸಾಧ್ಯವೇ ಇಲ್ಲ. ಮಾನವೆಂಬುದು ಅಂಗಡಿಯಲ್ಲಿ ಸಿಕ್ಕುವ ಪದಾರ್ಥವಲ್ಲ. ಅಪಮಾನವನ್ನು ಅದು ತುಂಬಲು ಜೋಳವಲ್ಲ. ಮಾನವನ್ನು ತುಂಬುವೆವೆಂದು ಹಾರಾಡುವುದು ಬುದ್ಧಿಶಾಲಿಗಳಿಗೆ ಭೂಷಣವಲ್ಲ. ಒಬ್ಬರಂತೆ ಒಬ್ಬರಾಗಬೇಕೆಂಬ ಮಹತ್ವಾಕಾಂಕ್ಷೆಯನ್ನಿಟ್ಟುಕೊಳ್ಳುವದು ಹುಲಿಯ ಬಣ್ಣಕ್ಕೆ ಮೈಸುಟ್ಟುಕೊಂಡು ಹಲ್ಲು ಕಿರಿದ ನರಿಯ ಪರಿಯಂತಾಗುವುದು. ಕಲಿಯುಗದಲ್ಲಿ ದುರ್ಜನರು ಸಜ್ಜನರಾಗಿಯೂ, ಅಸತ್ಯವು ಸತ್ಯವಾಗಿಯೂ, ಅನೀತಿಯು ನೀತಿಯಾಗಿಯೂ ಪರಿಣಮಿಸಿರುವುದು. ಇದಕ್ಕೆಲ್ಲ ಕಾರಣ ಧನ! ಈಗಿನ ಕಾಲದಲ್ಲಿ ಧನವಂತನೇ ಮಹಾತ್ಮನು, ಅವನೇ ಕುಬೇರ, ಅವನೇ ಇಂದ್ರ, ಅವನೇ ಸತ್ಪುರುಷ. ಕೊನೆಗೆ ಅವನನ್ನೇ ಜಗದ್ಗುರು ಎಂದು ಹೇಳಲೂ ಸಹ ಹಿಂಜರಿಯುವುದಿಲ್ಲ. ಧನದಲ್ಲಿ ಅಷ್ಟು ಸಾಮರ್ಥ್ಯವಿದೆ. ಒಂದು ಸಮಯದಲ್ಲಿ ವಸಿಷ್ಠಮಹರ್ಷಿಗಳು ಶ್ರೀರಾಮನಿಗೆ "ಧನಮೂಲಮಿದಂ ಜಗತ್" ಎಂದು ಹೇಳಿದ ವಾಕ್ಯವು ಈಗ ನಿದರ್ಶನಕ್ಕೆ ಸಂಪೂರ್ಣ ಬಂದಿದೆ. ಧನದಿಂದ ಯಶವನ್ನು ಸಂಪಾದಿಸಿದವರ ನೆನಪು ಜಗತ್ತಿನಲ್ಲಿ ಕೆಲವುಕಾಲ ಉಳಿಯುವುದೇ ಹೊರತು ಚಿರಕಾಲ ಬಾಳಲಾರದು. ಅಪಕೀರ್ತಿಯಿಂದ ಜಗತ್ತಿನಲ್ಲಿ ಪ್ರಸಿದ್ಧರಾಗುವುದಕ್ಕಿಂತಲೂ ಅಪ್ರಸಿದ್ಧರಾಗಿದ್ದು ಸತ್ಕೃತ್ಯ ಸದ್ಗುರುಸೇವೆಗಳಲ್ಲಿ ಆಯುಷ್ಯವನ್ನು ಕಳೆಯುವುದು ಹೆಚ್ಚು ಅಭಿನಂದನೀಯವಾದುದು. ನೂರುಜನ ಕೌರವರಂತೆ ಅಪಕೀರ್ತಿಯನ್ನು ಜಗ

[೬ ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೧ನೆಯ ಡಿಸೆಂಬರ್ ತಾ|| ೧ನೇ ಸೋಮವಾರ

ಸೊಲ್ಲಾಪುರದಲ್ಲಿ ಶ್ರೀರಂಭಾಪುರೀ ಜಗದ್ಗುರುಗಳವರ ಕಾರ್ಯಕ್ರಮ

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯ ಮಹಾಸ್ವಾಮಿಗಳವರು ತಾ|| ೮-೧೧-೧೯೪೧ ನೆಯ ಇಸ್ವಿದಿವಸ ಸೊಲ್ಲಾಪುರದಲ್ಲಿ ಅಡ್ಡಪಲ್ಲಕ್ಕಿ ಪಂಚಕಲಶ ನೊದಲಾದ ಛತ್ರ ಬಿರುದಾವಳಿಗಳೊಡನೆ ೨ ಲಕ್ಷ ಜನ ಸಮುದಾಯದ ಮಧ್ಯದಲ್ಲಿ ವಿಶೇಷವೈಭವದಿಂದ ಮೆರೆದ ವಿಷಯವು ನಮ್ಮ ಪತ್ರಿಕಾವಾಚಕರಿಗೆಲ್ಲಾ ವೇದ್ಯವೇ ಆದ ಉತ್ಸವಕಾರ್ಯವು ಸಮಾಪ್ತಿಗೊಂಡಮೇಲೆ ಪ್ರತಿದಿವಸವೂ ಸಭೆಗಳು ಬಹು ಆಟ್ಟಹಾಸದಿಂದ ನಡೆಯುತ್ತಿರುವವು. ಸೊಲ್ಲಾಪುರ ನಗರದಲ್ಲಿರುವ ಪ್ರತಿಯೊಂದು ಮತದವರೂ ಶ್ರೀಜಗದ್ಗುರುಗಳವರ ವಾಗ್ವೈಖರಿಯನ್ನು ಕಂಡು ಅಸಾಧಾರಣ ಭಕ್ತಿವಿಶೇಷದಿಂದ ತಂಡೋಪತಂಡವಾಗಿ ಆಗಮಿಸುತ್ತಿರುವರು. ಶ್ರೀಗಳವರು ಮಹಾಜನಗಳ ಇಚ್ಛಾನುಸಾರವಾಗಿ ಕನ್ನಡ ಹಿಂದಿ ಮಹಾರಾಷ್ಟ್ರ-ಸಂಸ್ಕೃತ ಭಾಷೆಗಳಲ್ಲಿ ಸಂಭಾಷಿಸುತ್ತಿರುವರು. ಇದರಿಂದ ಜನರ ಉತ್ಸಾಹಕ್ಕೆ ಮೇರೆಯಿಲ್ಲದಂತಾಗಿದೆ. ವೀರಶೈವರಂತೂ ಆನಂದಸಾಗರದಲ್ಲಿ ಮುಳುಗಿಹೋಗಿದ್ದಾರೆ. ಭಕ್ತಿಗೆ ತವರೂರೆನಿಸಿರುವ ಸೊಲ್ಲಾಪುರದಲ್ಲಿ ಗುರುಭಕ್ತಿಯು ಪರಮೋತ್ಸಾಹದಿಂದ ತಾಂಡವವಾಡುತ್ತಿರುವದು ಈ ನಗರದ ಭಾಗ್ಯವೆಂದೇ ಹೇಳಬೇಕಾಗಿದೆ.

ವೀರಶೈವರು ಕರ್ನಾಟಕ ಆಂಧ್ರ, ಮಹಾರಾಷ್ಟ್ರ ದೇಶಗಳ ಎಲ್ಲ ನಗರಗಳಲ್ಲಿಯೂ ವಿಶೇಷವಾಗಿ ವಾಸಿಸುವುದು ಸರ್ವರಿಗೂ ವೇದ್ಯವೇ ಇದೆ. ಆದರೆ ಸೊಲ್ಲಾಪುರದಲ್ಲಿದ್ದಷ್ಟು ವೀರಶೈವರ ಸಂಖ್ಯೆಯು ಇನ್ನಾವ ನಗರಗಳಲ್ಲಿಯೂ ಇಲ್ಲವೆಂದು ಮಹಾ ಸಂತಸದಿಂದ ಉಲ್ಲೇಖಿಸಬೇಕಾಗಿದೆ. ಕೇವಲ ಒಂದು ಸೊಲ್ಲಾಪುರನಗರದಲ್ಲಿಯೇ ೪೦ ಸಾವಿರ ವೀರಶೈವರು ವಾಸವಾಗಿರುವರು. ಆದುದರಿಂದ ಈ ನಗರವು ವೀರಶೈವರಿಗೆ ಮಾತೃಸ್ಥಾನವಾಗಿರುವುದೆಂದು ಬರೆದರೆ ಅತಿಶಯೋಕ್ತಿಯೆನಿಸದು. ಈ ನಗರದಲ್ಲಿರುವ ಸಮಸ್ತವೀರಶೈವರೂ ಶ್ರೀಜಗದ್ಗುರುಗಳವರ ವಿಷಯದಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ವರ್ತಿಸುತ್ತಿರುವುದು ಆ ಪುಣ್ಯನಗರಿಯ ಪ್ರಭಾವವೆಂದೇ ಹೇಳಬಹುದಾಗಿದೆ. ಅಲ್ಲಿರುವ ಶ್ರೀಮಂತ ಗುರುಭಕ್ತರು ಶ್ರೀಜಗದ್ಗುರುಗಳವರನ್ನು ತಮ್ಮತಮ್ಮ ಮನೆಗಳಿಗೆ ಪ್ರತಿದಿವಸವೂ ಮಹೋತ್ಸವದೊಡನೆ ಬಿಜಮಾಡಿಸಿಕೊಂಡು ಹೋಗಿ ಪಾದಪೂಜಾದಿಗಳನ್ನು ಮಾಡಿ ತೀರ್ಥಪ್ರಸಾದಗಳನ್ನು ಸೇವಿಸಿ ಗುರುಕಾಣಿಕೆಯನ್ನು ಸಮರ್ಪಿಸಿ ಧನ್ಯರಾಗುತ್ತಿರುವರು. ಈ ಕ್ರಮವು ತಪ್ಪದೆ ಪ್ರತಿದಿವಸವೂ ಅವಿಚ್ಛಿನ್ನವಾಗಿ ಸಾಗುತ್ತಿರುವದು.

ಸೊಲ್ಲಾಪುರದ ವೀರಶೈವರಲ್ಲಿ ಅತ್ಯಂತ ಪ್ರಮುಖರೂ ಮಹಾ ಶ್ರೀಮಂತರೂ ಆಗಿರುವ ಮ|| ರಾ|| ನಾಗಪ್ಪಣ್ಣ ಅಬ್ದುಲ್‌ಪುರಕರ ಇವರು ಇತ್ತೀಚೆಗೆ ತಮ್ಮ ಮನೋಭಾವವನ್ನು ಪರಿವರ್ತಿಸಿ ಮಹಾಚಾರ್ಯರ ಮಹತ್ತ್ವವನ್ನು ಚೆನ್ನಾಗಿ ಮನನಮಾಡಿಕೊಂಡು ಶ್ರೀ ಜಗದ್ಗುರುಗಳವರಲ್ಲಿ ವಿಶೇಷ ಭಕ್ತಿಯನ್ನಿಟ್ಟು ವರ್ತಿಸುತ್ತಿರುವರು. ಇವರು ತಮ್ಮ ಮನೆಗೆ ಜಗದ್ಗುರುಗಳವರನ್ನು ಮಹೋತ್ಸವದೊಡನೆ ಬಿಜಮಾಡಿಸಿಕೊಂಡು ತೀರ್ಥಪ್ರಸಾದಗಳನ್ನು ಸ್ವೀಕರಿಸಿ ಸಾವಿರಾರು ರೂಪಾಯಿಗಳ ಗುರುಕಾಣಿಕೆಯನ್ನು ಸಮರ್ಪಿಸಿ ಗುರುಭಕ್ತಿವೃದ್ಧಿಗೆ ಮಾರ್ಗದರ್ಶಕರಾಗಿರುವರು. ಇವರಂತೆಯೇ ಇನ್ನುಳಿದ ಪ್ರಮುಖರೂ ವರ್ತಿಸುತ್ತಿರುವುದು ಅಭಿನಂದನೀಯವಾಗಿದೆ.

ತಾ|| ೨೫-೧೧-೪೧ನೆಯ ದಿವಸ ಸೊಲ್ಲಾಪುರದಲ್ಲಿ ಶ್ರೀ ಜಗದ್ಗುರುಗಳವರ ೧೭ ನೆಯ ವರ್ಷದ ವರ್ಧಂತೀ ಮಹೋತ್ಸವವು ಶ್ರೀ ಮಲ್ಲಿಕಾರ್ಜುನ ದೇವಾಲಯದಲ್ಲಿ ಬಹು ಆಟ್ಟಹಾಸದಿಂದ ನೆರವೇರಿತು. ಈ ಮಹೋತ್ಸವ ಸಮಾರಂಭಕ್ಕಾಗಿ ೧೦ ಸಾವಿರ ಜನರು ನೆರೆದಿದ್ದರು. ಅಗ್ಗೆ ಅನೇಕಜನ ಪಂಡಿತರು ಶ್ರೀ ಜಗದ್ಗುರುಗಳವರ ವರ್ಧಂತಿಯ ಬಗ್ಗೆ ಮನೋಹರವಾಗಿ ಭಾಷಣಮಾಡಿದರು. ಅಂದು ಸಂ|| ಕಾಶೀನಾಥಶಾಸ್ತ್ರಿಗಳವರು ಇದೇ ವಿಷಯವಮೇಲೆ ಸರ್ವಸಭಿಕರ ಇಚ್ಛಾನುಸಾರವಾಗಿ ಭಾಷಣಮಾಡಿದರು. ಅವರು ತಮ್ಮ ಭಾಷಣದಲ್ಲಿ "ರಂಭಾಪುರೀಪೀಠದ ಪ್ರಾಚೀನ ವೈಭವವನ್ನೂ, ಶ್ರೀ ರೇಣುಕಾಚಾರ್ಯರ ಪ್ರಭಾವವನ್ನೂ, ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನೂ ರತ್ನಗರ್ಭಗಣಪತಿಯನ್ನೂ ಅನುಗ್ರಹಿಸಿದ ವಿಷಯವನ್ನೂ, ಈ ರೀತಿ ಜಗದ್ವಂದ್ಯವಾಗಿರುವ ಜಗದ್ಗುರುಪೀಠವು ಈಗ್ಗೆ ೨೦ ವರ್ಷಗಳ ಕೆಳಗೆ ಅನಾಯಕವಾಗಿದ್ದ ಕಾಲದಲ್ಲಿ ಅದಕ್ಕೆ ದುರ್ವಿರಕ್ತರು ಒಡ್ಡಿದ ತೊಂದರೆಗಳನ್ನೂ, ಆ ಅಸಾಧ್ಯ ತೊಂದರೆಗಳನ್ನು ತುಂಡರಿಸಿದ ವಿಷಯವನ್ನೂ, ಅದಕ್ಕಾಗಿ ಮಾಡಿದ ಅತ್ಯದ್ಭುತ ಸಾಹಸಕಾರ್ಯಗಳನ್ನೂ, ಆ ಕಾಲದಲ್ಲಿ ಕೈ|| ಮೈಸೂರು ಶ್ರೀಮನ್ಮಹಾರಾಜಾಧಿರಾಜ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರರವರು ಈ ಪೀಠದ ಮೇಲೆ ತಮ್ಮ ದಿವ್ಯದೃಷ್ಟಿಯನ್ನಿಟ್ಟು ಇದನ್ನು ಜೀರ್ಣೋದ್ಧಾರಮಾಡಿ ಈಗಿನ ಜಗದ್ಗುರುಗಳನ್ನು ತಮ್ಮ ಅರಮನೆಗೆ ಬಿಜಮಾಡಿಸಿಕೊಂಡು ತೀರ್ಥಪ್ರಸಾದಗಳನ್ನು ಸ್ವೀಕರಿಸಿ ಧನ್ಯರಾದ ವಿಷಯವನ್ನೂ, ಈಗ್ಗೆ ೬೦೦ ವರ್ಷಗಳ ಪೂರ್ವದಲ್ಲಿ ಮೈಸೂರು ರಾಜ್ಯದ ಅಭಿವೃದ್ಧಿಗೆ ಜಂಗಮರ ಆಶೀರ್ವಾದವೇ ಮೂಲಕಾರಣವಾಯಿತೆಂಬುದನ್ನೂ, ಇವೇ ಮೊದಲಾದ ಚಾರಿತ್ರಿಕವಿಷಯಗಳನ್ನು ಹೇಳಿ ಸರ್ವರನ್ನೂ ಸಂತೋಷಸಾಗರದಲ್ಲಿ ಮುಳುಗಿಸಿದರು. ಆಮೇಲೆ ವೀರಶೈವಸದಾಚಾರ ಸ್ತ್ರೀಸಮಾಜದವರು ಶ್ರೀಜಗದ್ಗುರುಗಳವರಿಗೆ ವಿಜ್ಞಾಪನಪತ್ರಿಕೆಯನ್ನೊಪ್ಪಿಸಿದರು. ಬಳಿಕ ಪದವೀಪ್ರದಾನಸಮಾರಂಭವು ನೆರವೇರಿತು. ಶ್ರೀಮದ್ವೀರಶೈವ ವಾರದ ಸಂಸ್ಕೃತಪಾಠಶಾಲೆಯ ಪ್ರಧಾನಾಧ್ಯಾಪಕರಾದ ವೇ|| ಸಂ|| ಶ್ರೀಜಗದೀಶಶಾಸ್ತ್ರಿಗಳವರಿಗೆ ಮಹಾಸಂಸ್ಥಾನದಿಂದ "ಸಾಹಿತ್ಯರತ್ನಂ" ಎಂಬ ಪದವಿಯೂ, ಕೈ|| ರಾ|| ಬ|| ವಾರದ ಮಲ್ಲಪ್ಪನವರ ಆಶ್ರಯದಲ್ಲಿ ಅನೇಕ ಧರ್ಮಗ್ರಂಥಗಳನ್ನು ಪ್ರಕಟಿಸಿರುವ ವೇ|| ಸಂ|| ಶ್ರೀ ಮಲ್ಲಿಕಾರ್ಜುನಶಾಸ್ತ್ರಿಗಳವರಿಗೆ "ಧರ್ಮರತ್ನಂ" ಎಂಬ ಪದವಿಯೂ, ಸದಾ ಮಹಾಚಾರ್ಯರ ಸೇವೆಯಲ್ಲಿ ನಿರತೆಯರಾಗಿರುವ ಸೌ|| ಭಾಗೀರಥೀಬಾಯಿಯವರಿಗೆ "ಮಹಾಚಾರ್ಯತತ್ತ್ವಪ್ರಚಾರಿಣೀ" ಎಂಬ ಪದವಿಯೂ, ಶ್ರೀಮಾನ್ ದೊಡ್ಡಪ್ಪ ಬೋರಾಮಣಿ ಇವರಿಗೆ "ಗಾನಕುಶಲ" ಎಂಬ ಪದವಿಯೂ ಅನುಗ್ರಹಿಸಲ್ಪಟ್ಟವು. ಆ ಮೇಲೆ ನೆರೆದಿದ್ದ ಭಕ್ತರು ವರ್ಧಂತೀಮಹೋತ್ಸವನಿಮಿತ್ತವಾಗಿ ಸಾವಿರಾರು ರೂಪಾಯಿಗಳ ಕಾಣಿಕೆಯನ್ನು ಸಮರ್ಪಿಸಿದರು. ತರುವಾಯ ಜಗದಾಚಾರ್ಯರ ಜಯಘೋಷದೊಡನೆ ಕಾರ್ಯಕ್ರಮವು ಸಮಾಪ್ತಿಗೊಂಡಿತು.

ಜಗದ್ಗುರುಗಳವರು ಸೊಲ್ಲಾಪುರದಲ್ಲಿ ಇನ್ನೂ ೨ ತಿಂಗಳುಗಳವರೆಗೆ ಮೊಕ್ಕಾಂಮಾಡಬಹುದೆಂದು ತೋರುತ್ತದೆ. ಸೊಲ್ಲಾಪುರದ ಗುರುಭಕ್ತಮಂಡಲಿಗೆಲ್ಲಾ ಶ್ರೀಜಗದಾಚಾರ್ಯರು ಸಕಲ ಸನ್ಮಂಗಲಗಳನ್ನೀಯಲೆಂದು ಆ ಪೂಜ್ಯಪಾದರನ್ನು ಪ್ರಾರ್ಥಿಸುತ್ತೇವೆ.

ಯುದ್ಧವಾರ್ತೆ.

ಮಾಸ್ಕೊ ಯುದ್ಧವು ಅತ್ಯುಗ್ರವಾಗಿದೆ.

ಮಾಸ್ಕೋ ಯುದ್ಧವು ಅತ್ಯುಗ್ರಸ್ಥಿತಿಗೆ ಬಂದಿರುವುದೆಂದೂ, ನಗರದ ಉತ್ತರ ಮತ್ತು ದಕ್ಷಿಣಭಾಗಗಳಲ್ಲಿ ಭಯಂಕರಯುದ್ಧವು ನಡೆಯುತ್ತಿದೆಯೆಂದೂ, ಜರ್ಮನರು ನಡೆಸುತ್ತಿರುವ ಈ ಯುದ್ಧದೆಸೆಯಿಂದ ಮಾಸ್ಕೊ ನಗರದ ಪ್ರಮುಖ ರಕ್ಷಣ ವ್ಯವಸ್ಥೆಗೆ ಧಕ್ಕೆಯುಂಟಾಗುವ ಸ್ಥಿತಿಯು ಬಂದಿದೆಯೆಂದೂ, ವಾರ್ತಾ, ಮತ್ತು ಪ್ರಯಾಣಸೌಕರ್ಯಗಳಿಗೆ ತೊಂದರೆಯುಂಟಾಗುವ ಸಂಭವವಿರುವದೆಂದೂ, ಕಾಲಿನಿನ್‌ಬಳಿ ಜರ್ಮನರು ಪುನಃ ಹೊಸ ಮುತ್ತಿಗೆಯನ್ನು ಆರಂಭಿಸಿದ್ದಾರೆಂದೂ ರಷ್ಯಾದ ಪ್ರವಾಡ್‌ಪತ್ರಿಕೆಯು ಪ್ರಕಟಿಸಿದೆ.

ರಷ್ಯನರು ತಿರುಗಿಬಿದ್ದರು

ರೋಸ್ಟೋವ್ ರಣರಂಗದಲ್ಲಿ ಜಯಶೀಲರಾಗಿ ಮುಂದೆ ನುಗ್ಗುತ್ತಿದ್ದ ಜರ್ಮನರ ಮೇಲೆ ರಷ್ಯನರು ಉಗ್ರವಾಗಿ ತಿರುಗಿಬಿದ್ದಿದ್ದಾರೆ. ಶತ್ರುಗಳನ್ನು ಗಂಟೆಗೆ ಒಂದು ಮೈಲಿಯ ಪ್ರಕಾರ ಹಿಮ್ಮೆಟ್ಟಿಸುತ್ತಿದ್ದಾರೆ. [illegible] ಮೈಲುಗಳ ದೂರ ಶತ್ರುಗಳನ್ನು ಹಿಂದಟ್ಟಿದ್ದಾರೆ. ಪ್ರತಿದಿನವೂ ಹೆಚ್ಚಿನ ನಗರಗಳನ್ನೂ ಹಳ್ಳಿಗಳನ್ನೂ ಆಕ್ರಮಿಸುತ್ತಿದ್ದಾರೆ.

ರಷ್ಯ ಯುದ್ಧದಲ್ಲಿ ಜರ್ಮನಿಗಾಗಿರುವ ನಷ್ಟ

ಜರ್ಮನಿಯು ರಷ್ಯದಮೇಲೆ ನಡೆಸಿರುವ ಯುದ್ಧದಲ್ಲಿ ಸುಮಾರು 60 ಲಕ್ಷ ಜನರನ್ನು ಬಲಿಕೊಟ್ಟಿರುವದೆಂದೂ, 15000 ಟ್ಯಾಂಕುಗಳನ್ನೂ 13000 ವಿಮಾನಗಳನ್ನೂ ಮತ್ತು 19000 ಬಂದೂಕಗಳ ಕಳೆದುಕೊಂಡಿರುವುದೆಂದೂ ಅಂದಾಜುಮಾಡಲಾಗಿದೆ.

ಭಯಂಕರ ಹೋರಾಟ

ರಷ್ಯದ ಸ್ಟಾಲಿನೊ ಗಾರ್ಸ್ಕ್ ಮತ್ತು ಮಲೋಕೋಲಾಮ್‌ಸ್ಕ್ ರಣರಂಗಗಳಲ್ಲಿ ಭೀಕರ ಕದನಗಳಾಗುತ್ತಿವೆ. ಮಲೋಕೊಲಾಮ್‌ಸ್ಕ್‌ನ ನೈಋತ್ಯದಿಕ್ಕಿನಲ್ಲಿರುವ ಕ್ಲಿನ್ ಸಮೀಪದಲ್ಲಿ ಜರ್ಮನಿ ಸೈನಿಕರು ಒಂದು ನದಿಯನ್ನು ದಾಟಿ ಒಂದು ಹಳ್ಳಿಯನ್ನು ಆಕ್ರಮಿಸಿಕೊಂಡಿದ್ದಾರೆ. ಜರ್ಮನಿಯ ಹೆಸರುವಾಸಿಯಾದ ಅನೇಕ ಪಡೆಗಳು ಮಾಸ್ಕೋಯುದ್ಧದಲ್ಲಿ ಭಾಗವಹಿಸಿವೆ. ರಷ್ಯನರು ಜರ್ಮನಿಯ ಸೈನಿಕರ ಮುಂದೋಟವನ್ನು ತಡೆಯಲು ಪೆಟ್ರೋಲ್ ಮೊದಲುಗೊಂಡು ನಾನಾ ಬಗೆಯ ಸಂಗ್ರಾಮ ಸಲಕರಣೆಗಳನ್ನು ಉಪಯೋಗಿಸುತ್ತಿದ್ದಾರೆ. ಜರ್ಮನರು ಆಫ್ರಿಕಾದಿಂದ ಕೂಡ ಸೈನಿಕರನ್ನು ಕರೆತರುತ್ತಿದ್ದಾರೆಂದೂ ಮಾಸ್ಕೋ ರಂಗಭೂಮಿಯಲ್ಲಿ ಲೆಕ್ಕವಿಲ್ಲದಷ್ಟು ಜರ್ಮನಿ ಸೈನಿಕರ ಶವಗಳು ಬಿದ್ದಿವೆಯೆಂದೂ ಪ್ರಕಟವಾಗಿದೆ.

ಜರ್ಮನರ ಕ್ರೂರವರ್ತನ

ಜರ್ಮನರು ಯುದ್ಧದಲ್ಲಿ ಸೆರೆ ಸಿಕ್ಕಿರುವ ರಷ್ಯನರಿಗೆ ಕಬ್ಬಿಣದ ಕಂಬಿಗಳನ್ನು ಕೆಂಪಗೆ ಕಾಯಿಸಿ ಬರೆಹಾಕುವದು, ಕಣ್ಣುಗಳನ್ನು ಕೀಳಿಸುವುದು, ಕೈ ಕಾಲು ಕಿವಿ ಮೂಗುಗಳನ್ನು ಕತ್ತರಿಸುವುದು ಇದೇ ಮೊದಲಾದ ಭಯಂಕರ ರೀತಿಯ ಹಿಂಸೆಗಳನ್ನು ಕೊಡುತ್ತಿದ್ದಾರೆಂದು ರಷ್ಯದ ವಿದೇಶಾಂಗ ಸಚಿವರಾದ ಎಂ. ಮಾಲಟೋವ್ ರವರು ನಾನಾ ದೇಶಗಳ ಸರ್ಕಾರಗಳಿಗೆ ಬರೆದು ತಿಳಿಸಿದ್ದಾರೆ.

ಯೂರೋಪಿನ ಸರ್ವರಾಷ್ಟ್ರ ಸಮ್ಮೇಳನ

ಯೂರೋಪಿನ ಎಲ್ಲ ರಾಷ್ಟ್ರಗಳ ಸಮ್ಮೇಳನವನ್ನು ಕೂಡಿಸಲು ಜರ್ಮನಿಯು ಪ್ರಯತ್ನಿಸುತ್ತಿದೆ. ಎಲ್ಲ ದೇಶಗಳಿಗೂ ಸ್ವಾತಂತ್ರ್ಯ ಕೊಡುವದಾಗಿಯೂ ಆರ್ಥಿಕ ಪುನರ್ವ್ಯವಸ್ಥೆಯನ್ನು ನಡೆಸುವದಾಗಿಯೂ ನಾಜಿಗಳು ಆಶೆತೋರಿಸುತ್ತಿದ್ದಾರೆ. ಈ ಸಮ್ಮೇಳನಕ್ಕೆ ಆಹ್ವಾನಿಸಲ್ಪಟ್ಟಿರುವವರ ಪಟ್ಟಿಯಲ್ಲಿ ಇಂಗ್ಲೆಂಡು ಸೇರಿಲ್ಲವಂತೆ.

ಜಪಾನಿಗೆ ಇಂಡೋ-ಚೀನಾ ಪ್ರತಿಭಟನೆ

ಟೋಕಿಯೋ ಸರ್ಕಾರವು ಹಿಂದೆ ಕೊಟ್ಟಿದ್ದ ಭರವಸೆಗಳಿಗೆ ವ್ಯತಿರಿಕ್ತವಾಗಿ ಜಪಾನರು ಇಂಡೋಚೀನಾದಲ್ಲಿ ಫ್ರೆಂಚ್ ರಾಜತ್ವಕ್ಕೆ ಚ್ಯುತಿ ಬರುವ ರೀತಿಯಲ್ಲಿ ವರ್ತಿಸಿ ಸೈಗಾನಿನ ಕೆಲವು ಭಾಗಗಳ ಸುತ್ತಮುತ್ತ ಸೈನಿಕರ ವ್ಯೂಹವನ್ನು ರಚಿಸಿ, ಕಾರಣ ಕೂಡದೆ 100 ಮಂದಿಯನ್ನು ದಸ್ತಗಿರಿ ಮಾಡಿರುವುದರಿಂದ ಫ್ರೆಂಚ್ ಅಧಿಕಾರಿಗಳು ಜಪಾನ್ ಸರ್ಕಾರಕ್ಕೆ ಉಗ್ರಪ್ರತಿಭಟನೆಯನ್ನು ಕಳುಹಿಸಿದ್ದಾರೆ.

ಅಮೆರಿಕ-ಜಪಾನ್-ಯುದ್ಧವಾರಂಭವಾಗಲಿದೆಯೆ ?

ಸಂಧಾನಕ್ಕಾಗಿ, ಅಮೆರಿಕಕ್ಕೆ ಹೋಗಿದ್ದ ಜಪಾನ್ ರಾಯಭಾರಿ ಶ್ರೀ ಕುರುಸುರವರ ಯಾತ್ರೆಯು ನಿಷ್ಫಲವಾದ್ದರಿಂದ, ಜಪಾನು ಇನ್ನೆರಡು ವಾರಗಳಲ್ಲೇ ಯುದ್ಧಾರಂಭಮಾಡಲಿದೆಯೆಂದು ಊಹಿಸಲಾಗಿದೆ. ಜಪಾನ್ ವಿದೇಶಾಂಗ ಸಚಿವರಾದ ಶ್ರೀ ಟೋಗೋರವರು ಹಗಲು ರಾತ್ರಿ ಮಿಲಿಟರಿ ಅಧಿಕಾರಿಗಳೊಡನೆ ಚರ್ಚೆ ನಡೆಸುತ್ತಲಿದ್ದಾರೆ. ಅಮೇರಿಕದ ವಿದೇಶಾಂಗ ಕಾರ್ಯದರ್ಶಿಗಳಾದ ಶ್ರೀ ಕಾರ್ಡೆಲ್‌ಹಲ್‌ರವರು ಬ್ರಿಟನ್ ಆಸ್ಟ್ರೇಲಿಯಾ ಚೀನಾ ಮತ್ತು ಡಚ್ 'ಈಸ್ಟ್‌ಇಂಡೀಸ್' ರಾಯಭಾರಿಗಳನ್ನು ಕರೆಸಿಕೊಂಡು ಮಾತುಕತೆ ನಡೆಸುತ್ತಿರುವುದನ್ನು ಕಂಡು ಜಪಾನರು ಉರಿದುಬೀಳುತ್ತಿದ್ದಾರೆ.

ಹಿಟ್ಲರನು ಪೆಟೇರನ್ನು ಕಾಣಲಿರುವನು

ಮಾರ್ಷಲ್ ಪೆಟೆನ್ನರೊಡನೆ ಮಾತುಕತೆ ನಡೆಸಲು ಹರ್‌ಹಿಟ್ಲರರು ಫ್ರಾನ್ಸಿನಲ್ಲಿ ಜರ್ಮನರು ಆಕ್ರಮಿಸಿರದ ಯಾವುದೋ ಪ್ರದೇಶಕ್ಕೆ ತೆರಳಲಿರುವರೆಂದೂ, ಫ್ರೆಂಚ್ ಉತ್ತರ ಆಫ್ರಿಕಕ್ಕೆ ನಾಜಿ ಸೇನೆಗಳನ್ನು ಕಳುಹಿಸಲು ಒಪ್ಪಿಗೆ ಕೊಡಲು ಹಿಟ್ಲರರು ಕೇಳುವರೆಂದೂ ಊಹಿಸಲಾಗಿದೆ.

ಥೈಲೆಂಡ್ ಪ್ರಕಟನೆ

‘ಥೈಲೆಂಡು ತಾಟಸ್ಥ್ಯ ನೀತಿಯನ್ನು ತ್ಯಜಿಸಿ ಆತ್ಮಸಂರಕ್ಷಣೆಗಾಗಿ ಶಸ್ತ್ರ ಧಾರಣಮಾಡಬೇಕಾಗಬಹುದು. ಈಗ ಥೈಲೆಂಡು ಮಿತ್ರ ರಾಷ್ಟ್ರಗಳ ಸಹಾಯವನ್ನು ಬಯಸುತ್ತದೆ. ಶಾಂತಿಯ ಸಂಭವವು ಇನ್ನೂ ಅಲ್ಪಸ್ವಲ್ಪ ಇರುವಂತೆ ತೋರಿದರೂ ಯುದ್ಧವು ಅನಿವಾರ್ಯವೆಂದು ತಿಳಿದು ಹಲವು ಮೀಸಲು ದಳಗಳನ್ನು ಸೇರಿಸಲಾಗಿದೆ.” ಎಂದು ಪ್ರಕಟವಾಗಿದೆ.

ಥೈಲೆಂಡಿನ ಮಹಾಪ್ರಧಾನರ ಭಾಷಣ

೧ನೆಯ ತಾರೀಖಿನ ದಿನ ರಾತ್ರಿ ಥೈಲೆಂಡಿನ ಮಹಾಪ್ರಧಾನರು ತಮ್ಮ ದೇಶಕ್ಕೆ ಆಕಾಶವಾಣೀ ಮೂಲಕ ಸಂದೇಶವನ್ನು ಕೊಡುತ್ತಾ—“ಥೈಲೆಂಡ್ ದೇಶವನ್ನು ಸಂಗ್ರಾಮದ ಮಡುವಿನೊಳಕ್ಕೆ ತಳ್ಳಿಬಿಡುವಷ್ಟು ಪರಿಸ್ಥಿತಿಯು ಉಗ್ರವಾಗಿಲ್ಲ. ಥೈಲೆಂಡ್ ದೇಶದ ಮುಂದೆ ಸಂಕಟಮಯ ಸನ್ನಿವೇಶಗಳು ಬಂದೊದಗಲಿವೆ ಅವುಗಳಿಗೆ ಕಾರಣರು ನಾವು ಆಗಿರದೆ ನಮ್ಮ ಅಕ್ಕಪಕ್ಕದಲ್ಲಿ ಇರುವವರೇ ಆಗಿದ್ದಾರೆ” ಎಂದು ಸೂಚಿಸಿದರು. ಥೈಲೆಂಡ್ ಸರ್ಕಾರವು ತಾಟಸ್ಥ್ಯನೀತಿಯನ್ನು ಅಕ್ಷರಶಃ ಪಾಲಿಸಿಕೊಂಡು ಬರುವುದೆಂದೂ, ಅನ್ಯದೇಶಗಳಿಗೆ ಸೇರಿದ ಸೈನಿಕರ ವಿಚಾರದಲ್ಲಿ ಎಚ್ಚರಿಕೆಯಿಂದ ನಡೆದುಕೊಳ್ಳಬೇಕೆಂದೂ, ಈ ಸಂಗ್ರಾಮದಲ್ಲಿ ಥೈಲೆಂಡ್ ಭಾಗವಹಿಸದೆ ಹೋದರೆ, ಥೈಲೆಂಡಿಗೆ ಭವಿಷ್ಯವು ಬಹಳ ಆಶಾದಾಯಕವಾಗಿರುವುದೆಂದೂ” ಹೇಳಿದರು.

ಲಿಬಿಯಾಯುದ್ಧದಲ್ಲಿ ಉಭಯರಿಗೂ ಅಪಾರ ನಷ್ಟ

ಲಿಬಿಯಾಯುದ್ಧದಲ್ಲಿ ಎರಡು ಕಡೆಗಳಲ್ಲಿಯೂ ಅನೇಕ ಮಂದಿ ಸೈನಿಕರು ಸೆರೆ ಸಿಕ್ಕಿದ್ದಾರೆ. ಸೋಲು ಗೆಲವುಗಳ ನಿಶ್ಚಯವಾಗುವುದಕ್ಕಿಂತ ಮುಂಚೆ ಭಯಂಕರ ಹೋರಾಟಗಳು ನಡೆಯಬೇಕೆಂಬುದಾಗಿ ಬ್ರಿಟನ್ನಿನ ಮಿಲಿಟರಿ ನಿಪುಣರು ಅನೇಕ ಸಾರಿ ಎಚ್ಚರಿಕೆಕೊಟ್ಟಿದ್ದಾರೆ. ಇಂದು ನಡೆಯುತ್ತಿರುವ ಘೋರ ಸಂಗ್ರಾಮವು ಒಟ್ಟಿನಲ್ಲಿ ಬ್ರಿಟಿಷರಿಗೆ ಅನುಕೂಲವಾಗಿದೆ. ಜರ್ಮನಿಯ ಮಹಾ ದಂಡನಾಯಕರಾದ ಜನರಲ್ ರೊಮೆಲ್‌ರವರು ತಮ್ಮ ಸೈನ್ಯಪಡೆಗಳನ್ನು ವಿಪತ್ತಿನಿಂದ ಇನ್ನೂ ಪಾರುಮಾಡಲು ಸಮರ್ಥರಾಗಿಲ್ಲ. ಬ್ರಿಟಿಷ್ ಸೈನಿಕರ ಗಮನವನ್ನು ಬೇರೆ ಕಡೆಗೆ ಸೆಳೆಯಲು ಅವರು ಪೂರ್ವಾಭಿಮುಖವಾಗಿ ತಮ್ಮ ಸೈನಿಕರನ್ನು ನುಗ್ಗಿಸಿದ್ದರು. ಆದರೆ ಆ ಪ್ರಯತ್ನವು ಸಫಲವಾಗಲಿಲ್ಲ. ಈಗ ಆ ಸೈನ್ಯಪಡೆಗಳು ಪಶ್ಚಿಮಾಭಿಮುಖವಾಗಿ ಹೊರಟು ಗಜಾಲ ಮತ್ತು ಡೆರ್ನಗಳನ್ನು ಸೇರಲು ಪ್ರಯತ್ನಿಸುತ್ತಿವೆ. ಲಿಬಿಯಾದಲ್ಲಿ ಸಿಡಿರೆಜೆಸ್ ಮತ್ತು ಬಿರ್‌ಎಲ್ ಹಮೀದ್ ಎಂಬ ಊರುಗಳನ್ನು ನ್ಯೂಜಿಲೆಂಡ್ ಸೈನಿಕರು ಹಿಡಿದಿದ್ದಾರೆಂದೂ ಟೊಬ್ರುಕ್‌ನಲ್ಲಿರುವ ಬ್ರಿಟನ್ನಿನ ಸೈನ್ಯಪಡೆಗಳ ಸಹಾಯಕ್ಕೆ ಇನ್ನೊಂದು ಸೈನ್ಯಪಡೆಯನ್ನು ಕಳುಹಿಸಲಾಯಿತೆಂದೂ ಪ್ರಕಟವಾಗಿದೆ

ಅಬಿಸೀನಿಯವೆಲ್ಲವೂ ಇಟಲಿಯ ಕೈಬಿಟ್ಟಿತು

ಅಬಿಸೀನಿಯದಲ್ಲಿ ಇಟಲಿಯವರ ಕೈಯಲ್ಲಿದ್ದ ಒಂದೇ ಒಂದು ಪ್ರದೇಶವಾದ ಗೊಂಡಾರ್ ಎಂಬುದೂ ಸಹ ಬ್ರಿಟನ್ನಿನ ಸೈನಿಕರ ಹಸ್ತಗತವಾಯಿತೆಂಬುದನ್ನೂ ಅಲ್ಲಿದ್ದ ಇಟಲಿ ಸೈನಿಕರು ಶರಣಾಗತರಾದರೆಂಬುದನ್ನೂ ಇಟಲಿಯೂ ಒಪ್ಪಿಕೊಂಡಿದೆ

ಸ್ಪೇಯಿನ್ ಮತ್ತು ಆಫ್ರಿಕಕ್ಕೆ ಪೆಟ್ರೋಲ್ ಕಳುಹಿಸುವುದಿಲ್ಲ

ಇನ್ನು ಮುಂದೆ ಅಮೇರಿಕದಿಂದ, ಸ್ಪೇಯಿನ್ ಫ್ರೆಂಚ್ ಮೊರಾಕೊ ಮತ್ತು ಟ್ಯೂನಿಸ್‌ಗಳಿಗೆ ಯಾವ ಪೆಟ್ರೋಲಿಯಂ ವಸ್ತುವನ್ನೂ ಕಳುಹಿಸಲಾಗದೆಂದು ಅಮೆರಿಕಾ ಸರ್ಕಾರವು ಆಜ್ಞೆಮಾಡಿದೆ. ಸ್ಪೇಯಿನ್ ಮೂಲಕ ಆಕ್ಸಿಸ್ ರಾಷ್ಟ್ರಗಳಿಗೆ ಎಣ್ಣೆ ಹೋಗುತ್ತಿದೆಯೆಂಬ ಸಂದೇಹವೇ ಈ ಆಜ್ಞೆಗೆ ಕಾರಣ

ಚೀಣಾಕ್ಕೆ ಹೊಸರಸ್ತೆ

ಬರ್ಮಾ ಚೀಣಾರಸ್ತೆಯು ಯಾವ ಗಳಿಗೆಯಲ್ಲಾದರೂ ಜಪಾನಿನ ಬಾಂಬುಗಳಿಗೆ ಸಿಕ್ಕಲು ಸಾಧ್ಯವಿರುವ ಕಾರಣ ಆ ರಸ್ತೆಯೊಂದರಮೇಲೆಯೇ ಭರವಸೆಯಿಟ್ಟು ಕುಳಿತಿರದೆ, ಭರತಖಂಡದಿಂದ ಕೇಂದ್ರ ಏಷ್ಯದ ಬೆಟ್ಟಗಳ ಮೂಲಕ ಹಾದುಹೋಗುವ ರಸ್ತೆಯೊಂದನ್ನು ಚೀಣದ ಅಧ್ಯಕ್ಷರಾದ ಮಾರ್ಷಲ್ ಚಿಯಾಂಗ್‌ಕೈಷೇಕರು ನಿರ್ಮಿಸುತ್ತಿರುವರೆಂದೂ ಈ ರಸ್ತೆಯು ಟಿಬೆಟ್ಟಿನ ಮೂಲಕ ಹಾದುಹೋಗುವದೆಂದೂ ಲಂಡನ್ನಿನಲ್ಲಿರುವ ಚೀಣಾರಾಯಭಾರಿಗಳು ತಿಳಿಸಿದ್ದಾರೆ

ಕಪ್ಪುಕಡಲಿಗೆ ತುರ್ಕಿಹಡಗುಗಳು ಹೋಗಲು ನಿರ್ಬಂಧ

ಯಾವ ತುರ್ಕಿಯ ಹಡಗೂ ಕಪ್ಪುಕಡಲಿಗೆ ಹೋಗಕೂಡದೆಂದು ತುರ್ಕಿಸರ್ಕಾರವು ಆಜ್ಞೆಮಾಡಿದೆ. ಎಚ್ಚರಿಕೆಕೊಡದೆ ಎರಡು ತುರ್ಕಿ ಹಡಗುಗಳನ್ನು ಮುಳುಗಿಸಿದುದೇ ಈ ಆಜ್ಞೆಗೆ ಕಾರಣ. ಇದರಿಂದ ಸಾಮಾನುಗಳನ್ನು ತುಂಬಿಕೊಂಡು ಬಲ್ಗೇರಿಯಕ್ಕೆ ಹೊರಡಲಿದ್ದ 60 ಹಡಗುಗಳನ್ನು ತುರ್ಕಿಯ ತೀರದಲ್ಲೇ ತಡೆದು ನಿಲ್ಲಿಸಲಾಯಿತು

ಭಾರತಕ್ಕೆ ಆಸ್ಟ್ರೇಲಿಯದ ಗೋಧಿ

ಆಸ್ಟ್ರೇಲಿಯದಿಂದ ಸುಮಾರು 16000 ಟನ್ ಗೋಧಿಯನ್ನು ಎರಡು ಹಡಗುಗಳಲ್ಲಿ ಭಾರತಕ್ಕೆ ತರಿಸಲು ಸರ್ಕಾರದವರು ನಿರ್ಧರಿಸಿದ್ದಾರೆ ಅವುಗಳಲ್ಲಿ ಒಂದು ಹಡಗು ಬೊಂಬಾಯಿಗೂ ಒಂದು ಹಡಗು ಕಲ್ಕತ್ತೆಗೂ ಹೋಗಲಿವೆ. ಗೋಧಿ ವ್ಯಾಪಾರಿಗಳು ಅಕಾರಣವಾಗಿ ಭಾರತದಲ್ಲಿ ಗೋಧಿ ಧಾರಣೆಯನ್ನು ಹೆಚ್ಚಿಸುವುದನ್ನು ತಡೆಯಲು ಈ ಯೋಜನೆಯನ್ನು ಕೈಗೊಳ್ಳಲಾಗಿದೆ

ಬ್ರಿಟನ್ನಿನಲ್ಲಿ ೧೨,೬೫,೦೩೬ ಮಂದಿ ಸ್ತ್ರೀಯರು ರಿಜಿಸ್ಟರ್‌ಮಾಡಲ್ಪಟ್ಟಿದ್ದಾರೆ

ವಯಸ್ಸಿನ ಪರಿಮಿತಿಯ ಯೋಜನೆ ಇಲ್ಲದೆ ಬ್ರಿಟನ್ನಿನ ಪ್ರತಿಯೊಬ್ಬ ಮನುಷ್ಯನೂ ಸ್ತ್ರೀಯೂ ಇಂದು ರಾಷ್ಟ್ರಸೇವಾ ಕೆಲಸದಲ್ಲಿ ನಿರತರಾಗಬೇಕಾಗಿದೆ. ಬ್ರಿಟನ್ನಿನಲ್ಲಿರುವ ವಿಮಾನ ಬಲವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕೆಂಬುದೇ ಬ್ರಿಟಿಷ್ ಸರಕಾರದ ಮುಂದಿರುವ ಆಲೋಚನೆಯಾಗಿದೆ. ಬ್ರಿಟನ್ನಿನಲ್ಲಿ ಈಗ ಮಹಿಳೆಯರೂ ಕೂಡ ರಾಷ್ಟ್ರಸೇವೆಗೆ ತಮ್ಮ ಹೆಸರುಗಳನ್ನು ‘ರಿಜಿಸ್ಟರ್’ ಮಾಡಿಸಿಕೊಳ್ಳುತ್ತಿದ್ದಾರೆ. ಸದ್ಯ 12,65,036 ಜನ ಮಹಿಳೆಯರು ರಾಷ್ಟ್ರಸೇವೆಗಾಗಿ ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿಕೊಂಡಿದ್ದಾರೆ

ರೈಲುನಿಲ್ಲಿಸಿದ ಬಗ್ಗೆ ತೀರ್ಪು

ಕಳೆದ ಜೂನ್ ತಿಂಗಳು ಬೊಂಬಾಯಿಯಿಂದ ಮದರಾಸಿಗೆ ಹೋಗುತ್ತಿದ್ದ ರೈಲುಗಾಡಿಯೊಂದರಲ್ಲಿ ಜನರು ಮಿತಿಮೀರಿ ತುಂಬಿದ್ದರಿಂದ ಗಲಭೆಯಾಗಿ ಹೊಡೆದಾಟದ ಸಂಭವ ಬಂದದ್ದರಿಂದ ಅದರಲ್ಲಿ ಪ್ರಯಾಣ ಮಾಡುತ್ತಿದ್ದ ಮ|| ವಿ ಆರ್ ಸತ್ಯನಾರಾಯಣಗುಪ್ತರೆಂಬುವರು ಸರಪಣಿಯನ್ನು ಎಳೆದು ಗಾಡಿಯನ್ನು ನಿಲ್ಲಿಸಿದರು. ಇಂತಹ ಅನಾವಶ್ಯಕ ಸಂದರ್ಭದಲ್ಲಿ ರೈಲನ್ನು ನಿಲ್ಲಿಸಿದರೆಂದು ಅವರ ಮೇಲೆ ರೈಲ್ವೆ ಅಧಿಕಾರಿಗಳು ಕಡಪಾ ಜಿಲ್ಲೆಯ ನ್ಯಾಯಾಸ್ಥಾನವೊಂದರಲ್ಲಿ ಕೇಸು ಮಾಡಿದರು. ನ್ಯಾಯಾಧೀಶರು ವಿಚಾರಣೆ ನಡೆಯಿಸಿ, ತೀರ್ಮಾನ ಹೇಳುತ್ತ, “ಇಂಡಿಯನ್ ರೈಲ್ವೆ ಆಕ್ಟಿನ 63 ನೆಯ ವಿಧಿಯಮೇರೆಗೆ ಗಾಡಿಗಳಲ್ಲಿ ಹೆಚ್ಚು ಜನ ಕೂಡದಂತೆ ನೋಡಿಕೊಳ್ಳುವುದು ರೈಲ್ವೆ ಅಧಿಕಾರಿಗಳ ಕರ್ತವ್ಯ, ಈ ಸಂದರ್ಭದಲ್ಲಿ ಅಧಿಕಾರಿಗಳು ಪ್ರಜೆಗಳ ಪ್ರಾರ್ಥನೆಗೆ ಕಿವಿಗೊಡದೆ ಹೋದುದೂ ಆಸನಗಳ ಮೇಲೆ ಮಲಗಿದ್ದವರನ್ನು ಎಬ್ಬಿಸದೆಹೋದುದೂ ತಪ್ಪು ಆದ್ದರಿಂದ ಆಪಾದಿತರು ನಿರ್ದೋಷಿಗಳೆಂದೂ ಅವರು ಸರಪಣಿ ಎಳೆದುದು ಸಕಾರಣವಾಗಿದೆಯೆಂದೂ” ಹೇಳಿದರು

ಸ್ವೀಕಾರ.

ಗುಲ್ಬುರ್ಗಾ ಜಿ|| ಯಾದಗಿರಿಯಲ್ಲಿರುವ ಮ|| ರಾ|| ಕಾನಾಗಡ್ಡಿ ಪರಮಣ್ಣನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ **2** ರೂ.ಗಳು ವೇ|| ಬಸವರಾಜಶಾಸ್ತ್ರಿಗಳು ಶಂಕರಾನಂದ ಪ್ರಿಂಟಿಂಗ್ ಪ್ರೆಸ್ ಯಾದಗಿರಿ ಇವರ ದ್ವಾರಾ ತಲ್ಪಿರುತ್ತವೆ

ಬಳ್ಳಾರಿಜಿಲ್ಲಾ, ಹುವ್ವಿನಹಡಗಲಿ ಗ್ರಾಮದಲ್ಲಿ ಕಾರ್ತಿಕ ಶು|| ೪ ದಿವಸ ಹೊಗೆತೊಟ್ಲದ ಸಣ್ಣಸಿದ್ದಪ್ಪನು ಶಿವಾಧೀನನಾದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ **1-8-1** ಹುವ್ವಿನಹಡಗಲಿ ಗುರುಸೇವಾ ಕಿಂಕರ ಮ|| ಸೊಪ್ಪಿನ ಗುರುಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ

ಗುಲ್ಬರ್ಗಾ ಜಿ|| ಬಸಿರಾಬಾದ್ ತಾ|| ನಂದೂರು ಗ್ರಾಮದ ಹೋಸಿನಕಟ್ಟಿ ಹಿರೇಮಠಾಧ್ಯಕ್ಷರಾದ ಶ್ರೀ ಸದಾಶಿವಶಿವಾಚಾರ್ಯಸ್ವಾಮಿಗಳವರು ಸೊಲ್ಲಾಪುರ ಮುಕ್ಕಾಮಿನಲ್ಲಿ ಶ್ರೀರಂಭಾಪುರೀ ಜಗದ್ಗುರುಗಳವರಿಂದ ಕಾರ್ತಿಕ ಬ|| ೯ ಗುರುವಾರ ದಿವಸ ಅನುಗ್ರಹವನ್ನು ಪಡೆದುಕೊಂಡ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ **1** ರೂ ಯನ್ನು ತೆಗೆಯಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಆಗಮನ.

ಶ್ರೀರಂಭಾಪುರೀ ಜಗದ್ಗುರುಗಳವರ ಉತ್ಸವನಿಮಿತ್ತವಾಗಿ ಸೊಲ್ಲಾಪುರಕ್ಕೆ ಪ್ರಯಾಣಮಾಡಿದ್ದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ತಾ|| 29 ನೆಯ ಶನಿವಾರ ದಿವಸ ರಾಜಧಾನಿಗೆ ಆಗಮಿಸಿದರು.

ಮ್ಯಾ.

[೩ ನೆಯ ಪುಟದಿಂದ ಮುಂದುವರಿದುದು]

ತ್ತಿನಲ್ಲಿ ಸ್ಥಿರಗೊಳಿಸಿ ಪ್ರಸಿದ್ಧರಾಗುವದಕ್ಕಿಂತಲೂ ಪಂಚಪಾಂಡವರಂತೆ ಯಶೋವಂತರಾಗಿರುವುದು ಮೇಲು ರಾವಣನಂತೆ ಮಾನಹೀನನಾಗಿ ಬಾಳುವುದಕ್ಕಿಂತಲೂ, ರಾಮನಂತೆ ಮಾನಿಯಾಗಿ ಬಾಳುವುದು ಮೇಲು ಆದ ಮಾನವನ್ನು ಗಳಿಸವುದು ಸುಲಭ! ಮಾನವನ್ನು ಸಂಪಾದಿಸುವುದು ಕಷ್ಟ! ಸಂಪಾದಿಸಿದ ಮಾನವನ್ನು ಉಳಿಸಿಕೊಳ್ಳುವುದು ಇನ್ನೂ ಕಷ್ಟ! ಲೋಕದಲ್ಲಿ ಮಾನವಂತನಾಗಿ ಬಾಳಬೇಕು ' ಆತಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು ' ಎಂಬ ಗಾದೆಯ ಮಾತು ಈ ತತ್ವವನ್ನೇ ಸಾರುತ್ತಿರುವದು

ಮದ್ರಾಸ್ ಗೌರ್ನಮೆಂಟ್ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿಯಲ್ಲಿ ದೊರೆಯ ತಕ್ಕ ವೀರಶೈವಮತ ತತ್ವಗಳನ್ನೂ ಹಾಗೂ ತದನುಸಾರಿಗಳಾದ ಶೈವತತ್ವಗಳನ್ನೂ ಪ್ರತಿಪಾದಿಸುವ

ಪ್ರಾಚೀನಗ್ರಂಥಗಳ ಲಿಸ್ಟು.

1	ಅಕ್ಷರವರ್ಣದೇವತಾ ನಿರ್ಣಯಃ (ಕರ್ನಾಟಕ ಟೀಕಾಸಹಿತ.)	ನಂ 5415
2	ಅಂತ್ಯೇಷ್ಟಿವಿಧಿಪ್ರಕರಣಂ ಸಮಗ್ರಂ	ನಂ 5416
3	ಅಷ್ಟಾವರಣವಿವರಣಸಂಗ್ರಹ (ಕರ್ನಾಟಕ ಟೀಕಾ) ೧ ಪ್ರಕರಣಾನಿ	ನಂ 5418
4	ಆಗಮಸಾರ ಶತಕತ್ರಯಮ್ (ಸಮಗ್ರಂ)	ನಂ 5426
5	ಕಾಳಹಸ್ತೀಶವಿಲಾಸಃ	ನಂ 5076
6	ಕ್ರಿಯಾಕ್ರಮದ್ಯೋತಿಕಾ	ನಂ 5434 5435
7	ದದೀಚಿ ಸಂಹಿತಾ (30 ಅಧ್ಯಾಯಾಃ)	ನಂ 5436
8	ನಕ್ಷತ್ರಪಾದಾವಲೀ	ನಂ 5079
9	ನವಕೋಟೀ	ನಂ 5081
10	ಪಂಚರತ್ನವ್ಯಾಖ್ಯಾ ಶಿವತತ್ವಪ್ರಕಾಶಿಕಾ	ನಂ 5015
11	ಪೌಷ್ಕರಾಗಮಃ (೬ ಪಟಲಾಃ)	ನಂ 5449
12	ಮಹಾನ್ಯಾಸಃ (ರುದ್ರಜಪ ಹೋಮಾದಿ)	ನಂ 5165
13	ವಾಮದೇವಸಂಹಿತಾ (102 ಅಧ್ಯಾಯಾಃ)	5181
14	ವಿಮಲಾಗಮಃ (91 ಪಟಲಾಃ)	ನಂ 5488
15	ವೀರಶೈವಸಿದ್ಧಾಂತಃ (ಶಿವಯೋಗೀಂದ್ರಕೃತ)	ನಂ 5103
16	ವೀರಶೈವಸಿದ್ಧಾಂತಃ ಸಕರ್ಣಾಟಕಟೀಕ	ನಂ 5491
17	ವೀರಶೈವ ಸಂಧ್ಯಾವಂದನಪ್ರಯೋಗಃ	5492
18	ವೀರಶೈವಸಿದ್ಧಾಂತೋತ್ತರಕೌಮುದೀ	5495
19	ವೀರಶೈವಾಗಮಃ	ನಂ 5499
20	ವೀರಾಗಮಃ (ಉತ್ತರಭಾಗಃ)	ನಂ 5504
21	ವೈದಿಕಾಚಾರನಿರ್ಣಯಃ	ನಂ 5505
22	ಶಿವಾದ್ವೈತಮ್	ನಂ 5113
23	ಶಿವಾದ್ವೈತ ಪ್ರಕಾಶಿಕಾ (ಕರ್ಣಾಟಕಟೀಕಾ)	ನಂ 5114
24	ಶಿವಪ್ರಸಾದ ಚಿಂತಾಮಣಿಃ	ನಂ 5523
25	ಶೀಲಸಂಪಾದನಕ್ರಮಃ	ನಂ 5534
26	ಶೈವಶ್ರಾದ್ಧವಿಧಿಃ	ನಂ 5512
27.	ಶೈವಸಂಜೀವನಮ್ (ಮರಿತೋಂಟದಾರ್ಯಕೃತಂ)	ನಂ 5117
28	ಸುಪ್ರಭೇದಾಗಮಃ (ಕ್ರಿಯಾ ಚರ್ಯಾ, ಯೋಗ, ಜ್ಞಾನಪಾದಸಮೇತಃ)	ನಂ 5537
29	ಕಾಮಿಕಾಗಮಃ (136 ಪಟಲಾಃ)	ನಂ 6131
30	ಕಾಮಿಕಾಗಮಃ (ಉತ್ತರಭಾಗಃ)	ನಂ 5432
31	ಆಗಮಗ್ರಂಥಸಂಖ್ಯಾ	ನಂ 5419
32.	ಆಗಮಗ್ರಂಥನಾಮಾನುಕ್ರಮಣಿಕಾ	ನಂ 5420
	ಡಿ (ಕರ್ಣಾಟಕ ಟೀಕಾಸಹಿತ)	ನಂ 5421
33	ಆಗಮವಚನಾನಿ ಪ್ರಸಾದಪಂಚಾಕ್ಷರೀಮಂತ್ರಶ್ಚ	ನಂ 5422 23
34	ಆಗಮಸಾರಃ (ಶಿವಲಿಂಗಸ್ಥಾಪನ, ಶಿವನಿರ್ಮಾಲ್ಯ ಸ್ವೀಕಾರಾದಯಃ	ನಂ 5424
35	ಆಗಮಾಃ (ನೇತ್ರೋನ್ಮೀಲನವಿಧಿಃ)	ನಂ 5427
36	ಆವರಣಪೂಜಾ	ನಂ 5428
37	ಆಶೀರ್ವಾದಃ	ನಂ 5429
38	ಈಶ್ವರಪೂಜಾ ವಿಧಾನಮ್ (ಭೂತಶುದ್ಧಿ ಪರ್ಯಂತಂ)	ನಂ 5430
39	ಕುಮಾರತಂತ್ರಮ್ (ಸುಬ್ರಹ್ಮಣ್ಯಪೂಜಾ ವಿಧಾನಮ್)	ನಂ 5433
40	ಗಂಗಾಧರವಿಚಾರಃ	ನಂ 5439
41	ಗೌರೀಮಂಟಪಪೂಜಾವಿಧಿಃ	ನಂ 5440
42	ಚರಲಿಂಗಪ್ರತಿಷ್ಠಾವಿಧಿಃ (ಸುಪ್ರಭೇದಾಂತರ್ಗತಃ)	ನಂ 5441 42
43	ಜಪಲಕ್ಷಣಂ	5443 44
44	ದೀಕ್ಷಾಪ್ರಕರಣಮ್ (ಸಾಮಾನ್ಯ ಶೈವೀಯಮ್)	5447
45	ದೇವೀಕಾಲೋತ್ತರಮ್ (67 ತಮಪಟಲ ಮಾತ್ರಮ್, ನೈಷ್ಠಿಕ ಶೈವಾನಾಂ ಜ್ಞಾನಾಚಾರ ವಿಚಾರಃ)	5418
46	ಧ್ವಜಸ್ಥಾಪನ ಸಂಕಲ್ಪಃ	5449
47	ಧ್ವಜಾರೋಹಣಭೇರೀತಾಡನವಿಷಯಃ	5450
48	ಪಂಚವಿಂಶತಿಲೀಲಾವಿಗ್ರಹವಿವರಣಮ್ (ಕರ್ಣಾಟಕ ಟೀಕಾಸಹಿತಮ್)	5451
49	ಪಂಚಾಕ್ಷರೀಕಲ್ಪಃ (13 ಅಧ್ಯಾಯಾಃ)	5452
50	ಪರಮೇಶ್ವರಪೂಜಾ	5453
51	ಪಾರ್ಥಿವಲಿಂಗಪೂಜಾವಿಧಿಃ	5455 56 57
52	ಪಾರ್ಥಿವೇಶ್ವರಚಿಂತಾಮಣಿಪೂಜಾವಿಧಿಃ	5458
53	ಪೌಷ್ಕರಾಗಮಃ	5469 60
54	ಬ್ರಹ್ಮಾದಿತಾಲವಿಧಾನಮ್	5461
55	ಭೂತಶುದ್ಧಿಃ	5462 63
56.	ಮಕುಟಾಗಮಃ (ಅಸಮಗ್ರಃ)	5464
57	ಮಾತಂಗಪಾರಮೇಶ್ವರಾಗಮಃ 18ಪಟಲಾಃ	5468
58	ಮೃಗೇಂದ್ರಾಗಮಃ (ಉತ್ತರಭಾಗಃ) ಅಸಮಗ್ರಃ	5469
59	ಮೃಗೇಂದ್ರಾಗಮವೃತ್ತಿಃ	5740
60	ರುದ್ರಾಕ್ಷಧಾರಣಮ್	5471 72
61	ಲಿಂಗಧಾರಣದೀಪಿಕಾ (ಅಸಮಗ್ರಾ)	5473
62	ಲಿಂಗಧಾರಣಲಕ್ಷಣಮ್	5474
63	ಪಾರ್ಥಿವ ಲಿಂಗಪೂಜಾವಿಧಾನಮ್ (ಲಿಂಗಪುರಾಣಾಂತರ್ಗತಂ)	5475
64	ಲಿಂಗಪೂಜಾವಿಧಾನಮ್	5476

(ಸಶೇಷ)

ರಿಬ್ಬನ್‌ಟ್ರಾಪರ ಭಾಷಣ

ಜರ್ಮನಿಯ ವಿದೇಶಾಂಗ ಸಚಿವರಾದ ಹರ್ ವಾನ್ ರಿಬ್ಬಂಟ್ರಾಪರು, ರಷ್ಯವಿರುದ್ಧ ಒಪ್ಪಂದಕ್ಕ ಸಹಿಹಾಕಿರುವ ದೇಶಗಳ ಪ್ರತಿನಿಧಿಗಳಿಗೆ ಏರ್ಪಡಿಸಿದ್ದ ಸತ್ಕಾರಕೂಟದಲ್ಲಿ ಭಾಷಣಮಾಡುತ್ತ " ಯೂರೋಪ್ ಖಂಡದಲ್ಲಿ ಜನರು ಜರ್ಮನಿಗೆ ವಿರುದ್ಧವಾಗಿ ದಂಗೆಯೆದ್ದರೆ ಜರ್ಮನಿಯ ಟ್ಯಾಂಕುಗಳೂ, ಡೈವ್‌ಬಾಂಬರುಗಳೂ ಆ ದಂಗೆಯನ್ನು ಬಹು ಸುಲಭವಾಗಿ ಅಡಗಿಸಬಲ್ಲವು ಶಸ್ತ್ರವಿಸರ್ಜನಮಾಡಿರುವ ದೇಶಗಳಲ್ಲಿ ದಂಗೆಯುಂಟಾಗಲು ಕಾರಣವೇ ಇಲ್ಲವೆಂಬುದನ್ನು ಚರ್ಚಿಲ್ಲರು ತಿಳಿಯಬೇಕು ಏಕೆಂದರೆ ಟ್ಯಾಂಕುಗಳು ಮತ್ತು ಡೈವ್‌ಬಾಂಬರುಗಳ ರಕ್ಷಣೆ ಆ ಪ್ರದೇಶಗಳಲ್ಲಿರುವದು ಯೂರೋಪಿನ ಪ್ರಜೆಗಳಿಗೆ ದಂಗೆ ಏಳುವ ಮನೋಭಾವನೆಯೇ ಇಲ್ಲ ಯೂರೋಪಿನ ಪುನರ್ವ್ಯವಸ್ಥೆಯು ಒಂದು ದಿನದಲ್ಲಿ ಆಗುವುದಿಲ್ಲವೆಂಬುದು ಎಲ್ಲರಿಗೂ ಗೊತ್ತಿರುವ ವಿಷಯವೇ ಆಗಿದೆ ಹೆರಿಗೆಯಾಗುವಾಗ ನೋವುಂಟಾಗಲೇಬೇಕು ಅದನ್ನು ತಪ್ಪಿಸಲು ಸಾಧ್ಯವಿಲ್ಲ ಆದರೆ ಯೂರೋಪಿನ ಪ್ರಜೆಗಳಲ್ಲಿ ಬಹುಮಂದಿಗೆ ಒಂದು ವಿಚಾರದಲ್ಲಿ ಸಂಪೂರ್ಣ ಅನುಮತಿಯುಂಟು. ಯೂರೋಪಿನ ವಿಚಾರಗಳಲ್ಲಿ ಬ್ರಿಟನ್ ಕೈಹಾಕಕೂಡದೆಂಬುದು ಅಲ್ಲಿ ಬ್ರಿಟನ್ನಿಗೆ ಯಾವ ಕೆಲಸವೂ ಇಲ್ಲವೆಂಬುದೇ ಆ ವಿಚಾರ ಬ್ರಿಟನ್ನಿಗೆ ಅಮೆರಿಕ ದೇಶವು ಸಹಾಯಮಾಡುವುದಾದರೂ, ಜರ್ಮನಿ ಮತ್ತು ಅದರ ಮಿತ್ರದೇಶಗಳ ಬಲಕ್ಕೆ ಬ್ರಿ ಟ್ನಿನ ಬಲವು ಸಮಾನವಾಗಲಾರದು. ಬ್ರಿಟನ್ನಿಗೆ ವಿ ಪತ್ಪರಂಪರೆಗಳು ಹೆಚ್ಚಾಗಿಯೇ ಇವೆ ಜರ್ಮನಿಯು ಬ ಯುತ ವಿಮಾನ, ನೌಕಾ ಮತ್ತು ಕಾಲಾಳು ಪಡೆಗ ಬ್ರಿಟನ್ನಿನ ಮೇಲೆ ಆಕ್ರಮಣ ಕಾರ್ಯವನ್ನು ಆರಂಭಿ ದಾಗ, ಬ್ರಿಟನ್ ಸಂಪೂರ್ಣವಾಗಿ ನಾಶವಾಗವು ಅದಕ್ಕೆ ಸೋಲುಂಟಾಗುವುದು ಶಾಂತಿ ಸೂಚನೆಗ ಜರ್ಮನಿಯು ಯಾವಾಗಲೂ ಮುಂದಿಟ್ಟಿಲ್ಲ ಇನ ಮುಂದೆಯೂ ಕೂಡ ಶಾಂತಿಸಲಹೆಗಳನ್ನು ಮುಂದಿಡು ಯೋಚನೆ ಇಲ್ಲ ಜರ್ಮನಿಗೆ ಮೇಲಿಂದಮೇಲೆ ಸೋ ಲುಂಟಾದರೂ ಒಂದು ವಿಷಯ ಮಾತ್ರ ನಿಶ್ಚಯ ದುದು ; ಜರ್ಮನಿ ಎಂದಿಗೂ ಶರಣಾಗತವಾಗುವುದಿ ನಲ್ಲಿ ಕೂಡ 'ಏರೋಪ್ಯಕ್ತಿ'ಯ ವಿಷಯವಾಗಿ ಜಾಗ್ರತೆ ಜಗತ್ತಿನ ಇತಿಹಾಸದಲ್ಲಿ ಯೂರೋಪ ಇಂದು ಏಕಮತ್ಯದಿಂದ ವರ್ತಿಸಲು ಆರಂಭಿಸಿ ಒಂದು ವೇಳೆ ೩೦ ವರ್ಷಗಳ ಯುದ್ಧ ನಡೆಸಬೇ ಬಂದರೂ, ಯೂರೋಪ್ ಯಾವ ಅಪಾಯಕ್ಕೆ ಒಳಗಾಗದೆ ಯುದ್ಧವನ್ನು ನಡೆಸುವ ಚೈತನ್ಯವನ್ನು ದ್ದಾಗಿದೆ ರಷ್ಯವನ್ನು ಸೋಲಿಸಿದ ತರುವಾಯ, ಲಕ್ಷ ರಾಷ್ಟ್ರಗಳ ಬಲವು ಜರ್ಮನ್ ದೇಶವನ್ನು ಬಿಟ್ಟರೂ ಕಾ ಬ್ರಿಟನ್ ಮತ್ತು ಅಮೇರಿಕಾ ದೇಶಗಳ ಒಟ್ಟು ಒಕ್ಕಿ ಅತಿಶಯವಾಗಿರುವುದು ದೂರದ ಪೂರ್ವದಲ್ಲಿ ಜಪಾನಿ ಆಶ್ರಯದಲ್ಲಿ ನೂತನ ವ್ಯವಸ್ಥೆಯ ನಿರ್ಮಾಣ ಕಾರ್ಯ ಭರದಿಂದ ಸಾಗುತ್ತಿದೆ, ಯಾರೊಬ್ಬರೂ ಕೂಡ ವ್ಯವಸ್ಥೆಯನ್ನು ಒಡೆಯಲಾರರು " ಎಂದು ಹೇಳಿದರು

ಮಾಸ್ಕೋ ನಗರವನ್ನು ಆಕ್ರಮಿಸಲೇಬೇಕು

ಜರ್ಮನರು ಮಾಸ್ಕೋನಗರದ ಪ್ರಮುಖ ಪ್ರವೇ ಮಾರ್ಗಗಳನ್ನು ಇನ್ನೂ ಕತ್ತರಿಸಿಹಾಕಿಲ್ಲವೆಂದೂ ಆದರೆ ಕೆಲವು ಕ್ಷೇತ್ರಗಳಲ್ಲಿ ಮುಂದೆ ನುಗ್ಗಿ, ಮಾಸ್ಕೋ ನಗರದ ಸಮೀಪಕ್ಕೆ ಬಂದಿದ್ದಾರೆಂದೂ, ಮಾಸ್ಕೋ ನಗರದ ಬಳಿಯೂ ಟೂಲಾಮೊಜೆಯಾಸ್ಕ್, ಕಾಲಿನಿ ಮತ್ತು ಸಮೀಪದಲ್ಲಿರುವ ಇತರ ರಣರಂಗಗಳಲ್ಲಿಯೂ ಜರ್ಮನಿಯ ಐದು ಲಕ್ಷ ಜನ ಸೈನಿಕರು ಹೋರಾಡುತ್ತಿರುವರೆಂದೂ, ಜರ್ಮನಿಯ ಸಾವಿರಾರು ಟ್ಯಾಂಕುಗಳೂ ವಿಮಾನಗಳೂ ಯುದ್ಧದಲ್ಲಿ ಭಾಗವಹಿಸಿವೆಯೆಂದೂ, ಮಾಸ್ಕೋ ನಗರಕ್ಕೆ ಸಮೀಪದಲ್ಲಿರುವ ಕ್ಲೀ ಮತ್ತು ಸ್ಟಾಲಿನೋಗರಾಸ್ಕ್ ಬಳಿ ಭಯಂಕರ ಹೋರಾಟವಾಗುತ್ತಿದೆಯೆಂದೂ, ತಿಳಿದುಬರುತ್ತದೆ ಹ ಹಿಟ್ಲರನು ಮಾಸ್ಕೋ ನಗರವನ್ನು ವಶಪಡಿಸಿಕೊಳ್ಳಲಾಗುವುದೆಂದು ಹೇಳುತ್ತ ಬಂದಿರುವುದರಿಂದ ಆ ನ ವನ್ನು ಏನಾದರೂ ಮಾಡಿ ವಶಪಡಿಸಿಕೊಳ್ಳಬೇಕಾಗಿ ಮಾಸ್ಕೋ ನಗರದಿಂದ ಜರ್ಮನರನ್ನು ದೂರವಿಡ ಕಾದರೆ ಹಿಟ್ಲರನ ಸೈನಿಕರನ್ನು ರಷ್ಯಸೈನಿಕರು ಪ್ರ ಯೊಂದು ಅಡಿ ಪ್ರದೇಶದಲ್ಲಿಯೂ ಪ್ರತಿಭಟಿಸುವುದಲ್ಲ ಅನೇಕ ಕಡೆ ಪ್ರತಿಯಾಗಿ ಆಕ್ರಮಣ ಕಾರ್ಯವನ್ನ ನಡೆಸಬೇಕಾಗಿದೆ ಅವರು ಆ ರೀತಿ ಮಾಡಬೇಕಾದ ರಷ್ಯ ಸೈನಿಕರಿಗೆ ಟ್ಯಾಂಕುಗಳೂ ವಿಮಾನಗಳೂ ಸಹಾ ಯಕ್ಕೆ ಬರಬೇಕು ಮಾಸ್ಕೋ ಯುದ್ಧದಲ್ಲಿ ಜರ್ಮ ರಿಗೆ ಅಪಾರ ಸಂಖ್ಯೆಯಲ್ಲಿ ನಷ್ಟವಾಗುತ್ತಿರುವುದರಿಂದ ಮಧ್ಯ ಯುರೋಪಿನ ಅನೇಕ ಆಸ್ಪತ್ರೆಗಳು ಗಾಯ ಗೊಂಡ ಜರ್ಮನಿ ಸೈನಿಕರಿಂದ ತುಂಬುತ್ತಿರುವುದಾ ವರ್ತಮಾನವದ ಗಾಯಗೊಂಡ ಜರ್ಮನಿ ಸೈನಿ ಕರನ್ನು ಪೂರ್ವರಂಗದಿಂದ ಹೊತ್ತು ತರುವ ರೈಲುಗ ಅಸಂಖ್ಯಾತವಾಗಿ ದಿನವೂ ಓಡಾಡುತ್ತಿರುವುದ ರಿಂದ ಜರ್ಮನಿಯ ಪ್ರಜೆಗಳಿಗೆಲ್ಲ ನಿರಾಶೆಯುಂಟಾಗಿ ಜನರಲ್ಲಿರುವ ಧೃಢನಂಬಿಕೆಯು ಅಳಿಸಿ ಹೋಗಿರುವ ದೆಂದೂ, ಆ ಕಾರಣದಿಂದ ಏನಾದರೂ ಮಾಡಿ ಮಾಸ್ಕೋ ನಗರವನ್ನು ಈ ಚಳಿಗಾಲದಲ್ಲಿಯೇ ಆಕ್ರಮಿಸಿ ಸ್ವಾಸ್ತಿಕ ಧ್ವಜವನ್ನು ಆ ನಗರದ ಮೇಲೆ ಹಾ ಸಬೇಕೆಂದು ಹಿಟ್ಲರರು ಇಷ್ಟಪಟ್ಟಿದ್ದಾರೆಂದೂ ಹೇಳಲಾಗಿದೆ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಬಂತಬಂಡದಲ್ಲಿರುವ ಪತ್ರಿಯೊಂದು ಗುರುವರ್ಗದ ಮಠಕ್ಕೆ ಶಿಷ್ಯರ ಮನೆಗಳಿರುತ್ತಿವೆ, ಆ ಮಠಾಧೀಶರುಗಳು ಕೆಲ್ಲ ಹತ್ತುವರ್ಷಕ್ಕೊಮ್ಮೆ ಒಂದುಸಾರಿ ಹೋಗಿ ಶಿಷ್ಯ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಆದರೆ ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯ ಒಂದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇದನ್ನು ವಾರಿಸುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸಗಿ ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ ಸ್ಪಷ್ಟವಾಗಿ ತೋರಿಸಲ್ಪಟ್ಟಿವೆ ಆದುದರಿಂದ ಸದರಿ ಪುಸ್ತಕ ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಸ್ಪಷ್ಟಂತೆ ವಿವರವನ್ನೆಲ್ಲಾ ಬರೆದು ಶಾಶ್ವತವಾಗಿ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ

ಶ್ರೀ **ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,**
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ **ತಯಾರಾಗತಕ್ಕ** ರಸಾಯನ ಔಷಧಿಗಳು ಈ ಪತ್ರ ಕಾರ್ಯಾಲಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲೆ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಪೂರ್ಣಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಳಸಿಂಧೂರ	೧	೪—೦—೦
ಶಿಲಾ ಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ವಜ್ರಭಸ್ಮ	೧	೬೦—೦—೦
ಅಭ್ರಕಭಸ್ಮ	೧	೩—೦—೦
ಹರತಾಳಭಸ್ಮ	೧	೦—೮—೦
ಕಾಸೀಸಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಓಖಿಮರ, ಜಿಲ್ಲಾ ಗಢವಾಲ್ ಯು.ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಸುಂದರವಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ- ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ** ವಿ ಪಿ ಚಾರ್ಜ ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೬೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಪಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ **ಬೆಲೆ ೮ ರೂಪಾಯಿ** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು ವಿ ಪಿ. ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅಮೃತಶಿಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಬೋಧಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೧—೬
ಸದ್ಯಃ ಸಿಂಹಾಸನಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರ ವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—೨ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜಿ. ಬಿ. ಯವ

ಸುಗಂಧ ನಶ್ಯದಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯವಪುಡಿ ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇ ಉಪಯೋಗಿಸಿ ಸಾವಿರಾರುಗಳಾಗಿ. ಯೋಗ್ಯತಾ ಗಳನ್ನು ಕೊಟ್ಟಿ ರು. ಪ್ರಸಿದ್ಧವಾ ನಶ್ಯದ ಪುಡಿ ಸ್ವಸ್ಥವಾಗುವ ವ್ಯಾ ಗಳು ಯಾವ ಕೆ —ಪೀನಶಿ ಒ ತಲೆನೋವು, ತಲೆ ಲ್ಲಿಯ ರೋಗ ಕಣ್ಣುಗಳಲ್ಲಿ ಉಂ

(Registered Trade Mark)

ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮು ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪ ಟ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಸತ ಹೆಚ್ಚುಮಾಡುತ್ತದೆ ಮೂರುಚಿಟ್ಟಿನ ಸಾಧ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮ ವುದು. ಇದನ್ನು ಅನೇಕಪ್ರಭುಗಳು ಉಪಯೋ ತ್ತಾರೆ ಮಾದರಿ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ೪ ಡಜ ಒಂದಕ್ಕೆ ಕ್ರಯ ರೂ ೨-೮-೦ ವಿ ಪಿ ೬

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[26] ಪೋ ಬಾ ೫೧೦, ಮದ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸತ್ಯಾಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸತ್ಯಾಶಾಸ್ತ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಷಡ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುದು)	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ
A brief life sketch of Pandit Sri Kashinatha Shastriji (*English*)	4 A
The Philosophical Aspect of Virasaivism (*English*)	8 A
Speeches by Pandit Shri Kashinatha Shastriji (*English*)	12 A
लिंगधारणचंद्रिका (संस्कृत)	३
वीरशैवरत्न (मराठी)	१
महानारायणोपनिषत् (वीरशैवभाष्य–संस्कृत)	१
पुरुषसूक्तम् (वीरशैवप्राचीनभाष्योपेतम्)	४
नंदिकेश्वरकारिका (संस्कृत)	२

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಸಲಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ. ೧೧ ಆಣೆ   ಬಿಡಿ ಪ್ರತಿ ೧ಕ್ಕೆ ೬ ಪೈ   ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೫.]   ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೮ನೇ ಡಿಸೆಂಬರ್ ೧೯೪೧   [ಸಂಚಿಕೆ ೩೨

ಶ್ರೀಗುರು ಪಂಡಿತ ಕಾಶೀನಾಥಶಾಸ್ತ್ರಿಗಳವರ ಸಂಕ್ಷಿಪ್ತ ಜೀವನಚರಿತ್ರ.

ಲಾವಣಿ.

ಶ್ರೀಮದ್ವಿವೇಕನಿಧಿಗುರುನಾಥನ ನಾಮಸ್ಮರಣೆಯನು ಮಾಡುವೆ ಮೊದಲೊಳು ತಾಮಸಮತಿಗತಿಮಂಗಲವೀ ... ಪೊರೆವುದು ಪದಬಂಧ । ಕವನದಿ ಗ್ರಾಮ್ಯಶಬ್ದ ... ಅನೇಕವಿರುತಿರೆ ಅರಸದೆ ಮೊದಲೊಂದ । ಪಂಡಿತ ... ರಿಗೆ ಯೋಗ್ಯವು ವಾಚಿಸಲನುದಿನ ಚರಿತ್ರ ... ॥ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಸೇವಕ ... ಹೊಂದಿಸಿದ ಪಂಡಿತಪ್ರೇಮಾದರ ಶ್ರೀಕಾಶೀನಾಥ ... ಶಕ್ತಿಸ್ವಂದ । ಸ್ವಧರ್ಮಗಾಮಿಗಳನುದಿನ ಕೇಳಿ ... ಉಂಟಾಗುವದಾನಂದ ॥ಪ॥

... ಲನೆ ಪರಶಿವ ಶಕ್ತಿ ವಿಕಾಸವ ತಳೆಯುತ ರಚಿಸಿದ ಬ್ರಹ್ಮಾಂಡದೊಳು ಕಳೆ ಸೂಸುತ ಪರಿಪರಿ ಮೆರೆವುದು ... ನಾಟಕ ವಿಸ್ತರಿಸಿ । ಇರುವುದು ಜೀಗುತ ದಾವಾದ ... ಯು ಸುಬುದ್ಧಿ ವಿದ್ಯಾತವರೆನಿಸಿ । ಸುಪಕ್ತಿ ನೆರೆಯೆ ... ಸಿದ ಗದಗೆಂಬುವ ತಾಲೂಕದರೊಳು ಸುಖವೆನಿಸಿ ॥ ... ಗಸಾಗಿಹ ನಾರಾಯಣಪುರದೊಳು ಮನ್ಮಥ ... ನಾಮ ಸಂವತ್ಸರವೆಳಸಿದ ಹದಿನೆಂಟ್ನೂರಹದಿನೆಂಟ ... ಶಕವೆರಿಸಿ । ಜ್ಯೇಷ್ಠದಿಯೊಳು ಚೌತಿ ಮಂಗ ... ವಿ ಶುಭಮೂಹೂರ್ತವನುಕರಿಸಿ ॥

ಹುಟ್ಟಲು ನಮ್ಮೀ ಕವನನಾಯಕರು ತಟ್ಟನೆ ಕಣ್ಣನು ... ಸಿ ನೋಡುತ ಸೃಷ್ಟಿಯ ಕೃತಿಯನು ಇರುತಿರ ... ತತ್ಕ್ಷಣ ಗುರುನಾಮವ ಸ್ಮರಿಸಿ । ಸ್ವಧರ್ಮನಿಷ್ಠೆಯ ... ಶ್ವರಯ್ಯ ತಂದೆಯು ನೋಡುತ್ತ ಆದರಿಸಿ । ಅತ್ಯಾ ... ಗುಣಾನ್ವಿತೆಯಾದ ಮಾತೆ ನಾಗಾಂಬೆ ಹರುಷ ... ॥ ಕಟ್ಟಿಸಿ ಬಣ್ಣದ ತೊಟ್ಟಿಲ ನಾಮವನಿಟ್ಟರು ... ಡನೆಯ ದಿನ ಕೂಡಪ್ಪಮುತ್ತೈದೆಯರನಂತ ... ವನು ಹರಿಸಿ । ಹಾಡುತ ಒಟ್ಟಿಗೆ ಕಾಶೀನಾಥ ... ನಾಮವ ಹಾರೈಸಿ ॥

... ಲ್ಯದೊಳನೇಕ ಆಟನೋಟಮುಖಲೀಲೆಯ ತೋ ... ವೀರಶೈವನುತಪಾಲಕಗುರುವರ್ಗದಿ ಅದ್ಭುತಜಾಗ್ರ ... ನು ಸ್ವೀಕರಿಸಿ । ಮೆರೆಯುವೆ ಮೂಲಾಧಾರತ ... ಮಿಯಲ್ಲಿ ಸತ್ಕೀರ್ತಿನಿಕರ ಗಳಿಸಿ । ಭವಿಷ್ಯತ್ಕಾಲದ ... ತಿಳಿಸುವ ಬಾಲಲೀಲೆಯನು ಅನುಕರಿಸಿ ॥ ... ಡುತ ನಾರಾಯಣಪುರದೊಳು ಶಾಲೆಯ ಕಲಿ ... ತ ಕುಶಲನು ಕೆಲದಿನ ಕಾಲವ ಕಳೆಯುತ ಬಂದನು ... ಗೆ ತನುಮನವೆಳಸಿ । ಸುಬುದ್ಧಿ ಶೀಲವ ಬೆಳೆ ... ಕೆಲದಿನವಿದ್ದನು ಶೂಲಧರನ ಸ್ಮರಿಸಿ ॥

... ದಿಶ್ವಕ್ಕೇ ಸಂಸ್ಕೃತ ಕಲಿಯುವದೊಡಮೂಡಲು ... ಗಿಚ್ಛೆಯು ತಾ ನಡೆದನು ಅಬ್ಬಿಗೇರಿಯೊಳಿ ... ಪಾಠಶಾಲೆ ನೆನೆಸಿ । ಮೊದಲಿಗೆ ಪಡೆಯುತ ... ಪಾವನಾಶ್ರಯವನೀಪರಿ ಅನುಗುಣಿಸಿ । ಕಲಿ ... ಇದೀ ವಿದ್ಯಾರ್ಥಿಸಂಖ್ಯೆಯೊಳುತ್ತಮನೆನಿಸುತ ಸುಮುಕರಿಸಿ ॥ ಬಿಡಲಾರದೆ ತಾ ಪಂಚಕಾವ್ಯಗಳ ತಡೆಯದೆ ಚಂಪೂಗ್ರಂಥಗಳದರುತಡಬಡಿಸುತ ಶಾಕುಂತಳಾದಿನಾಟಕಗಳ ವಿಸ್ತರಿಸಿ । ಓದುತ ಎಡೆವಿಡದೀಪರಿ ಶೀಘ್ರದಿ ಹೊಂದುತ ನಡೆದನು ಮುದ ಬೆಳಸಿ ॥ಚಾಲ॥

ಪ್ರೇಗುತ ಸೊಲ್ಲಾಪುರವಾಗಿದ ಸಂಸ್ಕೃತಶಾಲೆಗೆ ಸದ್ಗುಣಶಾಲಿ । ಸ್ಮರಿಸುತ ಸಲ್ಲಿಗೊಪ್ಪ ಪಂಚಾಚಾರ್ಯರ ನಾಮವನು ಗುಣಪಡೆ ॥ ಇರುವುದು ಒಂದುವರ್ಷ ಜಗದೀಶಶಾಸ್ತ್ರಿಗಳ ಮುಖದಿಂ ತ್ರೈಕಾಲ ನಮಿಸುತ ಒಂದೇ ಮನದಿಂ ಶಾಸ್ತ್ರಾಭ್ಯಾಸವ ಏಕದಂಡಿಯೋಲಾ ॥ ನಡೆದನು ಕಾಶಿಗ ಸೊಲ್ಲಾಪುರ ಬಿಡುವುತ ಉಲ್ಲಾಸದಿ ಆರ್ಮೇಲಾ ಶಾಂತಿನಿಕೇತನವೆನಿಸಿದ ಜಂಗಮವಾಡಿಯೊಳಿರುವುತ ಗುರುಲೀಲಾ ॥ ಸುಮಹಾಮಹೋಪಾಧ್ಯಾಯ ವೇದಿಪ್ರಸಾದಾಭಿಧರ ಮುಖದಿ ಮೂಲ । ಕಲಿತ ಸಂಸ್ಕೃತ ಸಂಸ್ಕೃತಸಾಹಿತ್ಯದ ತೈವರ್ಷ ರಾತ್ರಿ ಹಗಲು॥ ಆ ಸಾಹಿತ್ಯಪರೀಕ್ಷೆಯ ಉತ್ತಮವರ್ಗದಿ ತೀರ್ಥರಾಗಿ ಕಾಲ । ಕಳೆಯದೆ ಮತ್ತೆ ಮೀಮಾಂಸ ಸಾಂಖ್ಯ ಯೋಗ ಎಮ್ಮ ವೈದ್ಯಶಾಲ ॥

ಹಲವು ಮಹನೀಯರು ಕಾಶಿಯಲ್ಲಿ ಬಹು ಪ್ರೇಮದಿ ಸದ್ಗುಣಗಳ ಕೂಟದಿ ಕಾಮಿತವಿಷಯವ ವಿಚಾರಿಸುತಲಿರೆ ಅಕಸ್ಮಾತ್ ಬಂದ । ಕವಿತಾಕಾಮಿನಿ ಹೃದಯಾಕಾಶದಿ ಚರಿಸ್ಯಾಡಲು ಅಮಿತಾನಂದ । ಅನೇಕಸ್ತೋತ್ರವಧರನ ಸ್ತುತಿ ರಚಿಸುತ ನಡೆದನು ಸ್ವಯಂ ಶಕ್ತಿಯಿಂದ ॥ ಶ್ರೀ ಮಜ್ಜಗದ್ಗುರು ಪಂಚಾಚಾರ್ಯರ ಸೇವನ ಭದ್ರತೆಗೂಳಿಸಿದ ಪಂಡಿತಪ್ರೇಮಾದರ ಶ್ರೀ ಕಾಶೀನಾಥಶಾಸ್ತ್ರಿಗಳ ಶಕ್ತಿಸ್ವಂದ । ಸ್ವಧರ್ಮಗಾಮಿಗಳನುದಿನ ಕೇಳಿ ನಡೆದರುಂಟಾಗುವದಾನಂದ ॥೧॥

ಅನುದಿನ ಅನೇಕ ಕವನ ರಚಿಸಿ ಬುಧಜನರಿಂ ಪ್ರಶಸ್ತಿ ಪಡೆಯುತ ಕವಿರತ್ನನಿಸುತ ಬಹುಪದ್ಯಗಳನು ಪತ್ರಿಕೆಗಳಲಿ ಮುದ್ರಿಸುತ್ತ। ಇರುತಿರ ಆನಘ ಜಗದ್ಗುರುವಿಶ್ವಾರಾಧ್ಯರ ಕೃಪಯನು ಪಡೆಯುತ್ತ । ಶಾಸ್ತ್ರದೊಳುತ್ತಮವೆನಿಸಿಹ ವೀರಶೈವಸದ್ಧರ್ಮವ ತಿಳಿಯುತ್ತ ॥ ದಿನದಿನ ವಿದ್ಯಾ ಬೆಳಸುತ್ತಿರಲೊಂದಿನ ಕುಮಾರಾಂಪದ ರಾಜಧಾನಿಯೊಳಗಿರುವಿನವಿರುತಿಹ ಕಾಲಿಕೇಶ್ವರ ಪಂಡಿತ ಮೈಮರೆತ । ಬರಯುತ ಪಣ್ಮುಖತಂದೆಯ ಮತದೂಷಣ ಲೇಖನ ಬೆಳಸಲು ಸ್ಪರ್ಧ ॥

ತ್ವರಿತದಿ ನೋಡುತ ಇವರಾಲೇಖನ ಪರಿಪರಿ ಮನದೊಳು ಚಿಂತಿಸಿ ಸದ್ಗುರುವರ ಪಂಡಿತರನು ವಿಚಾರವಾದಲುದ್ಯತ ಭಯವೊತ್ತ । ಆಗದು ಉರುತರದೀಭಾಗದ ಪಂಡಿತರನು ಜಯಿಸುವದನೆ ಸತತ । ಶಿವನನು ಸ್ಮರಿಸುತ ಘಾಟೀಸೀರಜಗದ್ಗುರುಗಳ ಕಡೆ ಪೋಗುತ್ತ ॥ ಅರುಹಲು ಸ್ವಮತಕೆ ದೂಷಣಮಾಡಿದ್ದರಿಯುತ ಶಿವಲಿಂಗಶಿವಾಚಾರ್ಯರಿವರಿಗೆ ಪ್ರಯತ್ನಮಾಡಿದರಾಗದು ನಿಷ್ಫಲವೀಪರಿ । ಪೇಳುತ ಸರಸೋಕ್ತಿಯನಾಶೀರ್ವದಿಸಲು ಬಹುಹರುಷದಿ ಸಚ್ಚರಿತ ॥

ಮರುದಿನನೇ ಆ ಪಂಡಿತಗನೇಕಪ್ರಶ್ನೋತ್ತರ ಬರೆಯಲು ಕ್ರಮೇಣ ಸರಸದಿ ಅವರಿವರೀರ್ವರಲೇಖದ ಕ್ರಮವತಿಬೆಳೆಯುತ್ತ । ಅಂತ್ಯದಿ ದೊರಕಿಸಿ ಇವರೇ ಜಯವನು ಪತ್ರ್ಯಾಸಗಳಲಿ ಗುಣಯುಕ್ತ । ಛಾಪಿಸಿ ದುರ್ವಾದದೂರೀಕರಣೆನ್ನುವ ಪುಸ್ತಕವನು ಖ್ಯಾತ ॥ ಹರಡಲು ಸ್ವಮತೀಯರಲವರೆಲ್ಲರು ಹಿರಿಯಾನಂದದಿ ಇವರನು ಕರೆದರು ಧರ್ಮೋದ್ಧಾರದ ಅವತಾರಿಕಪುರುಷರು ಎನ್ನುತ ಸ್ವಸ್ಥ । ಕೇಳಿರಿ ಆದುವುದೆ ಮುಂದಿನ ಚರಿತ್ರ ಚಿತ್ತದಿ ಏಕಾಗ್ರತೆಬೆಸ್ತಾ ॥

ಈ ಅವಧಿಯೊಳವರನೇಕವೀರಶೈವಗ್ರಂಥಗಳ ನೋಡಿದ ಫಲದಿಂದಾವರಿಸಿತು ಸ್ವಧರ್ಮಜ್ಞಾನವು ಸದ್ಗುಣನಿಧಿ ಶಾಂತ । ಪೊಂದುತ ಪಾವನಪಂಚಾಚಾರ್ಯರ ಸಮಗ್ರತತ್ತ್ವದ ನೆಲೆ ಗುರು ತಾ ಕಾಣುತ ತವಕದಿ ಪಂಚಾಚಾರ್ಯಪೀಠಗಳ ಈಗಿನ ದುರವಸ್ಥಾ ॥ ಕೋವಿದಕಾಶೀನಾಥಶಾಸ್ತ್ರಿಗಳು ಭಾವಿಸಿ ನಾಗುರು ನೀಗುರು ಎನ್ನುವ ಭಾವನೆ ಕಡಿಯುವದಕ ಕಾಶೀಪೀಠದೊಳು ಯೋಚಿಸುತ । ಕರೆದರು ಧಾವಿಸಿ ಪಂಚಾಚಾರ್ಯರ ಸಮ್ಮೇಳನ ಮಾಡದ ಸುಸ್ಥ ॥ ಚಾಲ ॥

ಆದರೊಳು ಸೆಕ್ರೆಟರಿಯ ಕೆಲಸವನು ಮಾಡಿ ಸತ್ಕೀರ್ತಿಯ ಗಳಿಸಿದರು । ಮನದೊಳ್ಳುಕ್ಕೇರುತ ಗುರುವರ್ಗಜಾಗೃತಿಯ ಗೈಯಲು ತೊಡಗಿದರು ॥ ಬಂದರು ಕರ್ನಾಟಕನಾಡಿನಲಿ ವಿರಕ್ತರ ಪಂಥಗ ತಿಳಿದಿವರು ಪರಿಪರಿಯಿಂದಲಿ ಪೇಳುತ ಚರಗುರುಗಳಿಗೆಚ್ಚರವನಿತ್ತರಿವರು ॥ ಕರೆಯುತ ಚರಗುರುಪಟ್ಟಾಧಿಕಾರಿಗಳ ಸಮ್ಮೇಲನ ಪಂಡಿತರು । ಬಿಡಿಸುತ ದುರ್ನಡತೆಯ ಸದ್ಧರ್ಮದ ತಿರುಳನು ತಿಳಿಸುತ ಮಹಾತ್ಮರು ॥ ಮೊದಲಿಗೆ ಗುರುವರ್ಗದ ಸ್ಥಿರಬೀಜವನೂರುವ ಸಮಯಕ ಮಹನೀಯರು । ಪಟ್ಟಂಧುರುತರಕಷ್ಟದ ತಿರುಳ ಬಲ್ಲರಾ ರೇಣುಕಾಚಾರ್ಯರು ॥ ಪೇಳುವದಾಗದು ಎನಗದ ವರ್ಣನೆ ಮಾಡುತ ಹೀಗೆ ಸೀಪೆಲ್ಲದು । ತಿಳಿಯುತ ಸಾಗಿಸಿ ಮುಂದಿನ ಚರಿತ್ರ ಪೇಳುವ ಸನ್ಮಾರ್ಗತರು ॥ಕೂಡಪಲ್ಲವಿ॥ ಎನಿಸುತ । ಗುರುವರ್ಗಕ್ಷೇತ್ರೈಕಸಂಘದ ಸಭೆ ಕರೆಯುತ ಕುಂದಗೋಳ್ಗ್ರಾಮದಲ್ಲಿ ಮುದಬೆರೆದು ನವಲಗುಂದ್ ದಿನಗೂಳೂರೊಳು ಇವರಂತನುವಿಂದ । ಪ್ರಾಂತಿಕಗುರುವರ್ಗದ ಪರಿಷತ್ತನ ಕರೆಯುತ ಕಲಾದಗಿಯೊಳೊಂದ ಒಡುಪರಿ ಮೆರೆದರು ಸತ್ಕೀರ್ತಿಯೊಳಗೆ ಕೂಡಿಸಿ ಸಭೆ ಬಹುಚಂದ ॥ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಸೇವನ ಭದ್ರತೆಗೊಳಿಸಿದ ಪಂಡಿತ ಪ್ರೇಮಾದರ ಶ್ರೀ ಕಾಶೀನಾಥಶಾಸ್ತ್ರಿಗಳ ಶಕ್ತಿಸ್ವಂದ । ಸ್ವಧರ್ಮಗಾಮಿಗಳನುದಿನ ಕೇಳಿ ನಡೆದರುಂಟಾಗುವದಾನಂದ ॥೨॥

ಪಂಚಮುಖನ ಅವರಾವತಾರಿಗಳು ಪಂಚಾಚಾರ್ಯರು ರಚಿಸಿದ ಸ್ವಧರ್ಮಪಂಚಪೀಠಗಳ ಜೀರ್ಣೋದ್ಧಾರಕೆ ಪೂರ್ಣಲಕ್ಷ್ಯವಿಟ್ಟ । ಅನೇಕ ಹಂಚಿಕೆ ಹಾಕುತ ಪಂಡಿತವರ್ಯನು ಮಡಿದು ಪಟ್ಟ ಕಷ್ಟ । ಪೇಳಲು ಸಂಚಯಿಸುತ ಆದಿಶೇಷನಿಗೆ ಅಸದಳವೊಟ್ಟ ॥ ಮುಂಚೆ ಮಾಡಿ ಬಂದಂಥ ಪುಣ್ಯಫಲಸಂಚಯವೆಂತಹದಿರಬೇಕೆನ್ನುತ ವಂಚನೆಯಿಲ್ಲದೆ ಧರ್ಮಪ್ರೇಮಿಗಳು ಪೊಗಳುತಿರಂತಿಷ್ಟ । ತಿಳಿಯದು ಕೊಂಚಬುದ್ಧಿ ದುರ್ಜನರಿಗಿವರ ನಡೆನುಡಿಯ ಮೂಲಗುಟ್ಟ ॥

ಸಕಲಶಾಸ್ತ್ರಪಾರೀಣರು ಈಪರಿ ಸ್ವಕುಲಸಮೂಹವ ಜಾಗೃತಗೊಳಿಸುವಕಳಕಳಿ ಹಾಕಿ ಬಹುಪ್ರಯತ್ನಮಾಡುತ ಅನುದಿನ ಸಂತುಷ್ಟ | ಚರಿಸುತ ಸಕಲದೇಶ ಸದ್ಧರ್ಮ ಗ್ರಂಥಗಳ ಶೋಧಿಸಿ ಎದುರಿಟ್ಟ | ಚರಗುರುನಿಕರಪ್ರಕಾಶವ ಪಬ್ಬಿಸುತ್ತ ಪ್ರತಿಯೊಬ್ಬನ ಮನನುಟ್ಟ | ಯುಕುತಿ ಹಾಕಿ ಏನಾದರೊಂದು ಕೆಲಪ್ರಕಾರ ನಡುವಿನ ಗುರುಗಳು ಲೇಖಕರಾಗುತ ಬರೆವಾವಿಷಯವ ಖಂಡಿಸುತ ತಡೆಯುವೆಷ್ಟ | ನಿಜಗುರುತಿಖರ ತೋರಿಸುತ ನಡವನು ಅಷ್ಟಾವರಣಪರಮನಿಷ್ಟ ||

ಸಮಮಂಚಿತ್ತನು ಕೇಪಾರಸೀರವ ತವನನೆಟ್ಟ ಸಂಸ್ಥಾನಸ್ಥಿತಿಯ ತಿಳಿದಿದನು ಕರ್ನಾಟಕಭಾಗಕೆ ಕರೆಸುತ ಬಹುಪ್ರಯತ್ನಪಟ್ಟ | ಅವರಿಗೆ ಒದಗಿಸಿದನು ಬಹುವಿಧ ಸಲಕರಣೆಗಳನು ಸದ್ಗುಣಬೆಟ್ಟ ಪೊಂದಲು ಮೊದಲಿನ ಶ್ರೀಗಳು ಶಿವಸಾಯುಜ್ಯವ ಆವೇಳದ ಮುಷ್ಟ| ಮದಾಂಧಜನಗಳು ನೀಲಕಂಠಲಿಂಗಾಭಿದಶಿವಾಚಾರ್ಯರ ಅಧಿಕಾರದ ಕದನ ನಡೆಸಿದರು ಕೋರ್ಟಿನಲ್ಲಿ ಕೇಳುತ್ತ ಅದನು ಸ್ಪಷ್ಟ | ಪೋಗುತ ಚದುರಮತಿಯ ಚಾರಿತ್ರ ನಾಯಕನು ತಡೆಯುವೆ ಎಷ್ಟ ||

ಚಟವಟಿಸುತ ಆ ವ್ಯಾಜ್ಯದ ನಿಜವನು ಬ್ರಿಟಿಷ್ ಗವರ್ನ್ಮೆಂಟಿಗೆ ಆ ಭಾಗದ ಸ್ವದಿವೀಪತಿ ಪಟಪರಿ ಮಹಾರಾಜರ ಭೆಟ್ಟಿಯಾಗಿ ಸ್ಪಷ್ಟ | ಪೇಳುತ ಕಠಿನ ಪ್ರಸಂಗವ ಅವರಿಂ ಪರಿಹರಿಸಿ ವ್ಯಾಜ್ಯವ ಥಿಟ್ಟ | ಸ್ಥಾಪಿಸಿ ಪುರಮೊಳು ಸಂಸ್ಕೃತವೈದಿಕಾಯುರ್ವೇದಗಳ ಶಾಲೆ ಶ್ರೇಷ್ಠ ಪರಸ ಮಾಡುತಲಿ ಗುರುಗಳ ನಾಮವ ಹುಟ್ಟಿಸಿ ಇಂಗ್ಲಿಷ್‌ಮಿಡಲ್‌ಸ್ಕೂಲ ಪಾಕ್ಷಟಗಳೆನಿಸುತಲಿ ತನ್ನ ಹೆಸರು ಉಳಿಸುವ ಮನೋಭೀಷ್ಟ | ಬಂದನು ಕುಟಿಲಸಾಧಕರೆಂಬುವ ಕೀರ್ತಿಯ ಕೊಂಡತಿ ಮೂಢದಿ ಧೃಷ್ಟ | ಚಾಲ

ಈಪರಿ ರಂಭಾಪುರಿಸಿಂಹಾಸನವದಿಕಾರಿಗಳಾಗಿದ್ದಂಥ | ಪರಶಿವಬಿಂಬಸ್ವರೂಪ ಪಂಚಾಕ್ಷರಶ್ರೀಗಳಕಸ್ಮಾತ್ || ಶಿವಸಾಯುಜ್ಯವನೈಯಲು ಮುಂದಾಪೀಠದ ಅಧಿಕಾರ ನಿರತ ವಹಿಸುವಕಂವೇ ವಿರಕ್ತಪಕ್ಷಜನರು ವ್ಯಾಜ್ಯವ ನಡೆಯಿಸಿ ತುರತ ಪಡೆಯಲು ಜಯವನು ಕಾಶೀನಾಥಶಾಸ್ತ್ರಿಗಳಿಗೆ ತಿಕೆಡಕರಿಸಿಸುತ್ತ ಪ್ರಯತ್ನಪರನಾಗುತ ಹಾಲಿಡೇಲಿ ಆಪಾರ ಸೀಮವಹಿತ ಮರತ || ಮೈಸೂರ್ ಮಹಾರಾಜರಿಗೊಂದೇ ದಿನ ಸರ್ವರ ಇಚ್ಛೆ ತಿಳಿಯಲೆಂತಾ ಕೊಡಿಸಲು ಪಡಪ್ರತಾರಗಳ ತ್ವರಿತ ಸರ್ವಕಪಯಿಂದಲಿ ಪುನೀತ || ಭಾರತಧರ್ಮಮಹಾಮಂಡಲ ಸಂಸ್ಥೆಯ ಮುಖದಿಂ ಮಾಡದೆ ಮುಸ್ತ | ಬರೆಯಿಸಿ ಮರ್ಮದ ಪತ್ರವ ಶೃಂಗೇರಿಯ ಮಠದೆಜಂಟರಿಂದತ್ತ ||

ಸೊಂಡೂರ್ ಪುರಮಹಾರಾಜರವತಿಯಿಂ ಕಾಶೀಮಹಾರಾಜರ ಪತಿಯಿಂವನೇಕದೇಶದೊಳಿರುತಿಹ ಮುಖ್ಯಸ್ಥರ ಪತಿಯಿಂ ಬರೆಯಿಸಿ ಬಂದ | ನೋಡಿದನು ಮೈಸೂರ ಮಹಾರಾಜರು ಪ್ರತ್ರಿಯ ಬದಲಿಸಿ ಮುದದಿಂದ | ಕೊಟ್ಟರು ಈ ಮಹಾತ್ಮರ ಇಚ್ಛೆಯ ಮೇರೆಗೆ ಹುಕುಮನು ಭರದಿಂದ || ಶ್ರೀಮಜ್ಜಗದ್ಗುರುಪಂಚಾಚಾರ್ಯರ ಸೇವಾವ ಭದ್ರತೆಗೊಳಿಸಿದ ಪಂಡಿತಪ್ರೇಮಾದರ ಶ್ರೀಕಾಶೀನಾಥಶಾಸ್ತ್ರಿಗಳ ಶಕ್ತಿಸ್ಪಂದ | ಸ್ವಧರ್ಮಗಾಮಿಗಳನುದಿನ ಕೇಳಿ ನಡೆದರುಂಟಾಗುವದಾನಂದ ||೩||

ಸದ್ಯಃ ಸೊಲ್ಲಾಪುರದೊಳಗಿರುತಿಹ ಸದ್ವಿಚಾರಶ್ರೀ ಶಿವಾನಂದರಾಜೇಂದ್ರ ಶಿವಾಚಾರ್ಯರನು ಮಾಡಿ ಆ ಪೀಠಕೆ ತತ್‌ಕ್ಷಣಕೆ | ತ್ರಿಕಾಲಶುದ್ಧಶಿಷ್ಯೋದ್ಧಾರಗುರುಗಳೆಂಬುದನು ಈ ಜಗಕೆ | ತಿಳಿಸಿ ಸದ್ಬುದ್ಧಿಪ್ರಕಾಶವ ಹರವಿ ಬಂದರು ಮುಂದೆ ಪ್ರತಿಯೊಂದಕ್ಕೆ || ಜಿದ್ದಕಟ್ಟಿ ಈ ಮಹಿಮರಗೂಡಾಪದ್ಧ ಜೀವಿಗಳು ಗೈದ ಕಾರ್ಯ ದುರ್ಬುದ್ಧಿ ನಶಿಸುತಲಿ ಬಂದು ಕ್ಷಮೆಯ ಬೇಡಿದರು ಪದಾಂಬುಜಕೆ | ಆಗುವದು ಇದ್ದಮಾತು ಇದ್ದಂತೆ ಪೋದಾಗ್ಯು ಶಿವನ ಮನೆಯತನಕೆ ||

ಮತ್ತೆ ಮಹೀಶೂರ ಮಹಾರಾಜರಿಗೆ ಉತ್ತಮಪೀಠದ ಚರಿತ್ರ ಪೇಳಲು ಭಕ್ತಿಯು ಜನಿಸುತ ಪೀಠಕೆ ಗಮನಿಸಿ ಸನ್ನಿಧಿಚರಣಕ್ಕೆ | ನಮಸ್ಕರಿಸುತ್ತ ಆಶಿಷವ ಪಡೆಕೊಂಡಾಕ್ಷಣ ಪೋಗಿ ತಮ್ಮ ಪುರಕೆ | ಜಗದ್ಗುರು ಸತ್ಯಸನ್ನಿಧಿಯ ಸವಾರಿಯುತ್ಸವದಿಂದ ಮೈಸೂರಕ್ಕೆ || ಅತ್ಯುತ್ತಮಬಿರುದಾವಳಿಪೂರ್ವಕ ಒತ್ತರದಿಂದಲಿ ಬರಮಾಡಿಸಿಕೊಂಡಿತ್ತು ಕಾಣಿಕೆಯ ಕಳಿಸಿದ ವಾರ್ತೆಯು ಗೊತ್ತು ಸರ್ವಜನಕೆ | ಜರಗಿದ ಕೃತ್ಯಕೆ ಕಾಶೀನಾಥ ಶಾಸ್ತ್ರಿಗಳ ಪ್ರಯತ್ನವೇ ಮುಖ್ಯ ||

ಪರಮತವಾದಿಗಳಾವ ಪ್ರಕಾರ ಸರಸಸ್ವಧರ್ಮಕೆ ನಿಂದೆಯನಾಡದ ತೆರದೊಳು ಪ್ರಸ್ಥಾಪಿಸಬೇಕೆಂಬುವ ಇಚ್ಛೆಯಿಟ್ಟು ಮನಕೆ | ಶೋಧಿಸಿ ಧರೆಯೊಳಗಿರುತಿಹ ಹಳೇಗ್ರಂಥಗಳ ಅರಕ ಹುಡಿಕಿ ಅವಕೆ | ಟೀಕೆಯ ಬರೆಯುತ ಬಹುಗ್ರಂಥಗಳನು ಸ್ವಧರ್ಮಪ್ರಚಾರಪಡಿಸುದಕೆ || ಪೂರತರಕ್ಕಸೆಯಿಂದಲಿ ಧನವನು ಶೇಖರಿಸುತ ಮೈಸೂರೊಳು ಪಂಚಾಚಾರ್ಯರ ನಾಮದಿ ವಿದ್ಯಾನ್ಮುದ್ರಣಾಲಯ ಸಮಾಜಹಿತಕೆ | ಸ್ಥಾಪಿಸಿ ತ್ವರಿತದಿ ಕಾರ್ಯವ ಜರಗಿಸುತಿರುವರು ಹೆಚ್ಚಿಸಿ ದಿನದಿನಕೆ ||ಚಾಲ||

ಪಂಚಾಚಾರ್ಯಪ್ರಭೆಯೆಂಬುವ ಪತ್ರಿಕೆ ಪ್ರತಿವಾರಕೊಂದು ಸತತ | ತೆಗೆಯುತ ಧರ್ಮಾಧರ್ಮದ ಭಾವ ತಿಳಿಸುತಲಿ ಹಲವು ತೆರದಿ ತುರತ || ಕಾಶೀನಾಥಗ್ರಂಥಮಾಲೆಯ ಸಂಖ್ಯೆಯ ಬೆಳೆಸುತ ಆಚಾರಪೂತ | ಭೂವಿಖ್ಯಾತನು ಮಹಾರಾಷ್ಟ್ರದೇಶಜನ ಜಾಗೃತಿಗೋಸುತ್ತ || ಉಜ್ಜಯಿನೀಪೀಠಾಧಿಪ ಸಿದ್ಧಲಿಂಗಶಿವಾಚಾರ್ಯರ ಬರಸುತ್ತ | ಬಾರ್ಸಿಯೊಳನೇಕೋತ್ಸವದಿ ಅಡ್ಡಪಲ್ಲಕ್ಕಿಯ ಜರಗಿಸಿದರು ಸಿಸ್ತ || ಹುಟಗಿಯ ಚನ್ನವೀರಶಿವಾಚಾರ್ಯರು ಹನ್ನೊಂದು ತಿಂಗಳ ಪರಿಯಂತ | ಮಾಡಲು ಧನ್ಯಪಂಚಾಕ್ಷರ ಮಂತ್ರಾನುಷ್ಠಾನಕಾರಣಕೆತ್ತ || ಸೊಗಯಿಪ ಸೊಲ್ಲಾಪುರದೊಳು ರಂಭಾಪುರಿಸನ್ನಿಧಿಯನು ಬರಸುತ್ತ | ಅಡ್ಡಪಲ್ಲಕ್ಕಿಯ ಉತ್ಸವ ಜರಗಿಸುವದಕೆ ಕಾರಣೀಭೂತ || ಕಾಶೀನಾಥಶಾಸ್ತ್ರಿಗಳು ಮಾಡಿದ ಧರ್ಮೋದ್ಧಾರಕಾರ್ಯ ಗುರುತ | ವರ್ಣಿಸಲಾಗದು ಎನ್ನಯ ಮತಿ ನೀವಿಷ್ಟಕ್ಕಾಗಿರಿ ಸಂತೃಪ್ತ || ಕೂಡಪಲ್ಲವಿ ||

ಮತ್ತೊಮ್ಮೆ | ಕ್ರಮೇಣಚರಿತ್ರ ವಿಸ್ತರಿಸುತ ಬಹುಪ್ರಮಾಣಪೂರ್ವಕ ಪೇಳುವೆ ಬಾಡಿಗಿಸಮಾಧಿಸ್ಥ ಗುರುಬಂಕನ ಕೃಪೆಯುತ ಮನ್ಸೂರ್‌ಭಾಯಿಕಂದ | ರಚಿಸುತ ಶ್ರಮವ ಪಟ್ಟು ಹಾಡುವವನಿಗೆ ಕಾರ್ಯಕ್ರಮ ನಿರ್ಬಂಧ | ಸ್ಮರಿಸುತ ಉಮಾಪತಿಯ ಸಭಿಕರಿಗೆ ಬೇಡುವೆನು ವಿರಾಮ ಮತಿಮಂದ || ಶ್ರೀಮಜ್ಜಗದ್ಗುರುಪಂಚಾಚಾರ್ಯರ ಸೇವಾವ ಭದ್ರತೆಗೊಳಿಸಿದ ಪಂಡಿತಪ್ರೇಮಾದರ ಶ್ರೀಕಾಶೀನಾಥಶಾಸ್ತ್ರಿಗಳ ಶಕ್ತಿಸ್ಪಂದ | ಸ್ವಧರ್ಮಗಾಮಿಗಳನುದಿನ ಕೇಳಿ ನಡೆದಡಂಟಾಗುವದಾನಂದ ||

ಲೇಖಕ—ಕವಿ ಮನ್ಸೂರಭಾಯಿ ಸುಪುತ್ರ
ಮಲೀಕಭಾಯಿ ಬಾಡಗಿ.
ಕ್ಯಾಂಪ್—ಸೊಲ್ಲಾಪುರ.

ಸೂಕ್ತಿಮಾಲೆ

ಲೇ —ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರು ವ.ಶಿ.ಮ.ಠ
ಮುದೇನೂರು.

(ಮುಂದುವರಿದುದು)

೧೦ ಹಣವಿರುವಾಗ ಹೆಮ್ಮೆ ಏಕೆ? ಐಶ್ವರ್ಯವು ಕೊಲಗಿದಾಗ ಮರುಗಿ ಫಲವೇನು? ಕೈಯಿಂದ ಹೊಡೆದರೆ ಪುಟನೆಗೆದು ನೆಲಕ್ಕೆ ಬೀಳುವ ಚೆಂಡಿನಂತೆ ಮನುಷ್ಯರಿಗೆ ಬೀಳುವುದೂ, ಏಳುವುದೂ ಸಹಜವಷ್ಟೆ! ಮೋಡದ ನೆರಳು, ದುರುಳರ ಗೆಳೆತನ, ಹೊಸ ಪೈರು ಎಷ್ಟುಕಾಲ ಸುಖವನ್ನೀಯಬಲ್ಲವು? ಹಣವೂ, ಅಧಿಕಾರವೂ, ಯೌವನವೂ ಅಂತೆಯೇ ಸರಿ. ಜೀವನಕ್ಕಾಗಿ ಬಹಳವಾಗಿ ಚಿಂತಿಸಬಾರದು. ಹಂಸೆಗಳನ್ನು ಬಿಳುಪಾಗಿಯೂ, ಗಿಳಿಗಳನ್ನು ಹಸುರಾಗಿಯೂ, ನವಿಲುಗಳನ್ನು ಚಿತ್ರವಿಚಿತ್ರವಾಗಿಯೂ, ಕಾಗೆಗಳನ್ನು ಕಪ್ಪಾಗಿಯೂ ನಿರ್ಮಿಸಿದ ಪರಶಿವನೇ ಮೊತ್ತಮೊದಲು ನಾವು ಬದುಕುವ ಮಾರ್ಗವನ್ನೂ ವಿರ್ಪಡಿಸಿರುವನು. ಭೂಮಿಯ ಮೇಲೆ ಜನ್ಮವೆತ್ತಿದ ಕೂಡಲೇ, ಜನನಿಯು ಸ್ತನ್ಯವನ್ನು ಉಣಿಸುವುದೇ ಇದಕ್ಕೆ ಉದಾಹರಣೆ.

೧೧ ಮನುಷ್ಯನು ಹಣಗಾರನಾಗಿರುವಾಗ ಅಧಿಕಾರದಲ್ಲಿರುವಾಗ ಹೇಗೆಯೋ ಅದರಂತೆಯೇ ಹಣವೂ ಅಧಿಕಾರವೂ ನಾಶವಾದಮೇಲೆಯೂ, ಸ್ವಲ್ಪವೂ ತಕ್ಕಿಗುಂದ
ಇರುವ ಅವೇ ಇಂದ್ರಿಯಗಳು, ಅದೇ ಹೆಸರು, ಅ
ಶರೀರ, ಅದೇ ಬುದ್ಧಿ ಇರುವವು. ಇಂತಿದ್ದರೂ ಧನವ
ಅಧಿಕಾರಮದಗಳು ಇಂಗಿದವೆಂದರೆ—ಅವನು ಬೇ
ಒಬ್ಬ ಹೊಸ ಮನುಷ್ಯನೇ ಆಗುವನು. ಇದು ವಿಚಿತ್ರ
ಸರಿ. " ಧನಕನಕವುಳ್ಳವನ ದಿನಳರನಂತಕ್ಕು, ಧನಕ
ಹೋದಮರುದಿನವೆ ಹಾಳೂರಶುನಕನಂತಕ್ಕು ಸರ್ವಜ್ಞ
ಎಂತಲೂ, ಹುಡ್ಡೀವು ಇರುವನಕ ರುದ್ರನಂತ
ಹುಡ್ಡೀವು ತೀರ್ದ ಮರುದಿನವೆ ಹದ್ದಿನಂತಕ್ಕು ಸರ್ವಜ್ಞ
ಎಂತಲೂ ಸರ್ವಜ್ಞನು ಹೇಳಿರುವನು.

೧೨ " ಸಜ್ಜನರ ಸಂಗವದು ಹೆಜ್ಜೇನು ಸವಿದಂ
ಎಂಬುವಹಾಗೆ ನಾವು ಉತ್ತಮರ ಸಹವಾಸವ
ಮಾಡಬೇಕು. ಕುಡಿಗಗಿತ್ತಿಯು ಕೈಯಲ್ಲಿ ಹಾ
ತುಂಬಿದ ಕೊಡವನ್ನು ಹಿಡಿದಿದ್ದರೂ ಹೆಂಡದ ಕೊ
ವೆಂತಲೇ ತಿಳಿಯುವೆವಲ್ಲವೆ? ದುರುಳರೊಂದಿಗೆ ಒಂ
ಒಂದು ಗಳಿಗೆಯಾದರೂ ನಿಲ್ಲಬಾರದು, ತಿರುಗಾಡ
ಬಾರದು ದುರ್ಜನರ ಸಂಗವೇ ಮರಣ. ಅಧಾ
ಧೇಯಭಾವದಿಂದ ಕನ್ನಡಿಯಲ್ಲಿ ದೊಡ್ಡ ಆನೆಯ
ಸಣ್ಣದಾಗಿಯೇ ಕಾಣುವುದು. ಅಂತೆಯೇ ಎಂ
ಗುಣಸಂಪನ್ನನಾದರೂ ಗುಣಹೀನನ ಆಶ್ರಯ ದಿ
ಅಲ್ಪನಂತೆಯೇ ತೋರುವನು. ಅಲ್ಲದೆ ಗಜವು ಸೂ
ತ್ತಿರುವಾಗಲೇ ಕೊಲ್ಲುವುದು ಸರ್ಪವು ಮೂಸಿನೋ
ತ್ತಿರುವಂತೆಯೇ ಸಾಯಿಸುವುದು. ವಿಷವು ಹೊಟ್ಟೆ
ಸೇರಿದೊಡನೆ ಕೊಲ್ಲುವುದು. ದುರುಳನಾದರೋ ವಿನ
ದಿಂದಲೇ ಕೊಲೆಮಾಡುವನು. ದುರುಳರ ಸಹವಾಸ
ಮರಣಸ್ವರೂಪವೆಂಬ ಬಗ್ಗೆ ಉದಾ—ಒಬ್ಬ ದಾರಿಗ
ಒಂದು ಮರದಡಿಯಲ್ಲಿ ಮಲಗಿ ನಿದ್ರಿಸುತ್ತಿದ್ದ
ಮರದ ಮೇಲೆ ಒಂದು ಹಂಸೆಯೂ ಕಾಗೆಯೂ ವಾ
ಮಾಡಿಕೊಂಡಿದ್ದವು. ಸ್ವಲ್ಪ ಕಾಲದಲ್ಲಿ ದಾರಿ
ಮುಖದ ಮೇಲೆ ಬಿಸಿಲು ಬಿದ್ದಿತು ಇದನ್ನು ಕಂ
ಕನಿಕರಗೊಂಡ ಹಂಸೆಯು ತನ್ನ ಗರಿಗಳನ್ನು ಕ
ನೆರಳುಮಾಡಿತು. ಅವನು ಸುಖವಾಗಿ ನಿದ್ರೆಸಾ
ಬಾಯ್ತೆರೆದು ಆಕಳಿಸಿದನು. ಅಷ್ಟರಲ್ಲಿ ಪರರ ಸ
ವನ್ನು ನೋಡಿ ಸಹಿಸಲಾರದ ಕಾಗೆಯು ತನ್ನ ಜಾತಿ
ಜವಾದ ದುರುಳತನದಿಂದ ಆವನ ಮೋರೆಯ ಮೆ
ಹೇಸಿಗೆಮಾಡಿ ಹಾರಿಹೋಯಿತು. ಇದರಿಂದ ಅವ
ಎಚ್ಚತ್ತು ಮೇಲೆ ನೋಡಿದನು. ಹಂಸೆಯು ಕಾಣಿಸಿ
ಸಿಟ್ಟಿನಿಂದ ಕೂಡಲೇ ಅದನ್ನು ಪಕ್ಕದಲ್ಲಿದ್ದ ಬಿಲ್ಲಿನಿ
ಹೊಡೆದು ಕೊಂದನು. ಖೂಳನು ಕೆಟ್ಟಕೆಲಸವ
ಮಾಡುವನು. ಅದರ ಫಲವನ್ನು ಸಜ್ಜನರು ಅನುಭ
ಬೇಕಾಗುವುದು. ನೀತಿಕಾರರೂ ಸಹ ಖೂಳರು ಹೆಚ್ಚಿ
ಹಾವಿಲಿ | ಬಾಳುವನಾಳಾಗಬಹುದೇ ಸರಸಕವೀಂದ್ರ
ಎಂದು ಹೇಳಿರುವರು. ಹಾವಿಗೆ ಹಾಲೆರೆದರೆ ವಿಷ
ವಿರುವುದು. ಮೂರ್ಖರಿಗೆ ಹಿತವನ್ನು ಹೇಳಿದರೆ
ಕಬ್ಬಿಣದ ಮೇಲೆ ನೀರೆರೆದಂತಾಗುವುದಲ್ಲದೆ ಮಾ
ರಿದ ಕೋಪವೂ ಬರುವುದು.

೧೩ ದುರುಳರ ಬಾಯಿಯು ಜೇನುಕೊಡದಂತೆಯ
ಹೃದಯವು ಗಂಭೀರವಾದ ಮಡುವುಗಳಲ್ಲಿ ಮೊಸಳೆ
ರುವಂತೆಯೂ ವಿಷಪೂರಿತವಾಗಿರುವುದು. ಇ
ದೂರದಲ್ಲಿ ಬರುತ್ತಿರುವಾಗಲೇ ಕೈಯೆತ್ತಿ ಕರೆದು, ಆ
ದಾಸ್ಯವನ್ನು ಸುರಿಸುತ್ತ, ತಾನು ಕುಳಿತಿರುವ ಆಸನ
ಅರ್ಧಾಸನವನ್ನು ಕೊಟ್ಟು, ಸಂತೋಷದಿಂದ ಬಿಗಿ
ಎಷ್ಟೋ ಉತ್ಸಾಹವನ್ನು ತೋರಪಡಿಸಿ, ಮಂದ
ದಿಂದ ಯೋಗಕ್ಷೇಮಗಳನ್ನು ವಿಚಾರಿಸಿ, ತನ್ನ
ಸುಖಗಳನ್ನೆಲ್ಲ ವಿವರಿಸಿ, ಎಷ್ಟೋ ಬಗೆಯಿಂದ ಹೊ
ಅಮೃತವನ್ನೇ ಸೂಸುವನು ಮತ್ತು ಚಿತ್ರಕಲೆಯಲ್ಲಿ
ಣನಾದ ಶಿಲ್ಪಿಯು ಸಮನಾದ ಒಂದೇ ಗೋ
ಹಲಿಗೆ ಬಟ್ಟೆಗಳ ಮೇಲೆಯೇ ಹಳ್ಳತಿಟ್ಟುಗಳನ್ನು ಬ
ತನ್ನ ಶಿಲ್ಪಚಾತುರ್ಯವನ್ನು ಹೇಗೆ ತೋರಿಸುವನೋ
ಅಂತೆಯೇ ಇವನು ಸುಳ್ಳನ್ನು ದಿಟಕ್ಕಿಂತಲೂ ಅತಿ
ವಾಗಿ ತೋರ್ಪಡಿಸುವನು ಇಂತಹ ಕಪಟ ವರ್ತ
ಚಾಣಾಕ್ಷ್ಯಯನ್ನು ಇವರಲ್ಲಿ ಕಲಿಯುವರೋ ತಿಳಿಯದಾ
ದಾಟಲಾಗದ ಕಡಲಿಗೆ ಹಡಗು, ಕತ್ತಲೆಗೆ ದೀಪ,
ಯುಲ್ಲದಿರುವಾಗ ಬೀಸಣಿಗೆ, ಮದವೇರಿದ ಆನೆ
ಸಲುವಾಗಿ ಅಂಕುಶ, ಬೆಂಕಿಗೆ ನೀರು ಈ ರೀತಿಯ
ಸೃಷ್ಟೀಶನು ಉಪಾಯಗಳನ್ನು ಕಲ್ಪಿಸಿರುವನು. ಕ
ದಿರುವುದು ಈ ಲೋಕದಲ್ಲಿ ಯಾವುದೂ ಇಲ್ಲ.

ದುರುಳರ ಚಿತ್ತವೃತ್ತಿಯನ್ನು ಮಾರ್ಪಡಿಸುವ ವಿಷಯದಲ್ಲಿ ಮಾತ್ರ ಆ ಪರಮಾತ್ಮನ ಪ್ರಯತ್ನವೂ ಸಹ ಭಗ್ನವಾಯಿತೆಂತಲೇ ತಿಳಿಯಬೇಕಾಗಿದೆ. ಆದ್ದರಿಂದಲೇ, ಈ ಲೋಕದಲ್ಲಿ 'ಮೂರ್ಖನಮೌರ್ಖ್ಯಮಂ ಕಳೆವವು ದೊರೆಯದಿಲ್ಲ ಶಾಸ್ತ್ರಂಗಳೊಳ್' ಎಂದು ನೀತಿಕಾರರು ಹೇಳಿರುವರು. ಆದರೆ ಅನುಭವದಿಂದಲೂ ನೀತಿಕಾರರಿಂದಲೂ ತಿಳಿದು, ದುರ್ಲಕ್ಷ್ಯದಿಂದ ದುರುಳರ ಸಹವಾಸ ಮಾಡಿದರೆ, ಹೆಮ್ಮೆಯಿಂದ ಕಾಳಸರ್ಪನ ಬಾಯೊಳಗೆ ಕೈನೀಡಿದಂತೆ ತನಗೆ ತಾನೇ ವಿಪತ್ತನ್ನು ಬರಮಾಡಿಕೊಂಡಂತಾಗುವುದು.

೧೪ ಗುಣವಂತನ ಗುಣಸಂಪತ್ತಿಯು ಎಂದಾದರೊಂದುದಿನ ತಾನಾಗಿಯೇ ಹೊರಬೀಳದೆ ಇರುವುದಿಲ್ಲ. ದುರುಳನ ದುರುಳತನವಾದರೂ ಅಷ್ಟೇ! ಕಸ್ತೂರಿಯನ್ನು ಬಟ್ಟೆಯಲ್ಲಿ ಕಟ್ಟಿಟ್ಟು ಅದರ ಪರಿಮಳವು ಹೊರಗೆ ಬರಬಾರದೆಂಬದಾಗಿ ಆಣೆ ಇಟ್ಟರೆ ನಿಲ್ಲುವುದೆ? ರತ್ನವು ಕಾಡಿನಲ್ಲಿ ಹೊರಳಾಡುತ್ತಿರಬಹುದು ಅದಕ್ಕೆ ಬದಲಾಗಿ ಗಾಜಿನ ಚೂರನ್ನು ತಲೆಯ ಮೇಲೆ ಧರಿಸಲೂಬಹುದು ಆದರೆ ಕ್ರಯ ವಿಕ್ರಯಗಳಲ್ಲಿ ಮಾತ್ರ ಗಾಜು ಗಾಜೇ ರತ್ನವು ರತ್ನವೇ.

೧೫ ಮನುಷ್ಯನು ಒಬ್ಬರ ಸ್ನೇಹ ಮಾಡುವಾಗಲೂ, ಸ್ಥಾನಮಾನಗಳನ್ನು ಕೊಡುವಾಗಲೂ ತಾರತಮ್ಯವರಿತು ಕೊಡಬೇಕಾಗುವುದು. ಚಿನ್ನದ ಒಡವೆಯಲ್ಲಿ ಇರಿಸುವುದಕ್ಕೆ ಯೋಗ್ಯವಾದ ರತ್ನವನ್ನು ಸೀಸದಲ್ಲಿ ಕಟ್ಟಿದರೆ ಆ ರತ್ನಕ್ಕೆ ಕೊರತೆಯಿಲ್ಲ ಅದರ ಸಹಜವಾದ ಕಾಂತಿಯೂ ಕಡಿಮೆಯಾಗುವುದಿಲ್ಲ ಆದರೆ ಹಾಗೆ ಎರಡನ್ನೂ ಕೂಡಿಸಿದವನು ಮಾತ್ರ ಜನರ ಅವಹೇಳನಕ್ಕೆ ಗುರಿಯಾಗುವನು ಗಾಜಿನ ಚೂರನ್ನು ಕಿರೀಟದಲ್ಲಿ ಸೇರಿಸಿದರೂ ರತ್ನವನ್ನು ಕಾಲಂದುಗೆಯಲ್ಲಿ ಹೊಂದಿಸಿದರೂ ರತ್ನಕ್ಕೆ ಯಾವ ಕೊರತೆಯೂ ಇಲ್ಲ. ಆದರೆ ಮಾಡಿದವನ ಹೆಡ್ಡತನವು ಮಾತ್ರ ಹೊರಬೀಳದಿರದು. ಆದಪ್ರಯುಕ್ತ ಎಲ್ಲರೂ ಮನುಷ್ಯರಾಗಿಯೇ ಕಂಡರೂ ವಿವೇಕದಿಂದ ತಾರತಮ್ಯವರಿತ ಸ್ಥಾನಮಾನಗಳನ್ನು ಕೊಡುವುದು ವಿವೇಕವಂತನ ಲಕ್ಷಣವು ಒಂದು ಪಕ್ಷ ಅಜ್ಞಾನದಿಂದಲೋ, ದುರಭಿಮಾನದಿಂದಲೋ ಗುಣಹೀನರಿಗೆ ವಿಶೇಷ ಗೌರವವನ್ನು ಕೊಟ್ಟರೆ "ಕೊರತೆಯೇ ರತ್ನಗಳ್ಗೆ ಕುಪರೀಕ್ಷಕರಿಂ ವಿಹೀನಮಾದೊಡಂ" ಎಂಬಂತೆ ಗುಣವಂತರ ಸ್ಥಾನಮಾನಗಳಿಗೆ ಯಾವ ಕೊರತೆಯೂ ಇಲ್ಲ

೧೬ ಒಳಗೆರೆಗೆ ಬರುವ ನೀರಿಗೆ ಕೋಡಿಯು ಹೇಗೋ ಹಾಗೆಯೇ ಗಳಿಸಿಟ್ಟ ಹಣಕ್ಕೆ ದಾನವೇ ಶ್ರೇಷ್ಠವಾದ ರಕ್ಷಣೆ ಹೊಟ್ಟೆತುಂಬ ತಿನ್ನದೆ ನೆಲದಲ್ಲಿ ಹೂತಿಡುವುದು, ತನ್ನ ಅಧೋಗತಿಗೆ ತಾನೇ ದಾರಿಮಾಡಿಕೊಂಡಂತೆಯೇ ಸರಿ. ಏಕೆಂದರೆ—"ತನ್ನ ಸುಖವನ್ನೂ ಲೆಕ್ಕಿಸದೆ ಕೂಡಿಟ್ಟ ಹಣವು ಪರರ ಸಲುವಾಗಿ ಭಾರವನ್ನು ಹೊತ್ತಂತೆಯೇ ಅಲ್ಲವೇ? ಇಂತಹ ವ್ಯರ್ಥವಾದ ಶ್ರಮದಿಂದ ಫಲವೇನು? ಒಬ್ಬರಿಗೆ ಕೊಡಬೇಕು ತಾನೂ ಅನುಭವಿಸಬೇಕು" ಇವೆರಡೂ ಇಲ್ಲದ ಸುಮ್ಮನೆ ಹೂತಿಟ್ಟ ಹಣದಿಂದ ಒಬ್ಬನನ್ನು ಹಣವಂತನೆಂದು ಹೇಳಿದರೆ, ಅವನು ಹೂತಿಟ್ಟ ಅದೇ ಹಣದಿಂದಲೇ ನಾವೂ ಧನಿಕರೆನಿಸಿಕೊಳ್ಳಲಾಗದೇ?

(ಸಶೇಷ)

ಶ್ರೀಕೊಟ್ಟೂರೇಶನ ಪುರಾಣ ಮಹೋತ್ಸವ

ಬಳ್ಳಾರಿ ಜಿ|| ಹಿರೇಹಡಗಲಿಯಲ್ಲಿರುವ ವೀರಶೈವ ಧರ್ಮಸುಧಾರಕ ಸಂಘದವರು ಸಂತೆಪೇಟೆಯ ಪ್ರಭುಸ್ವಾಮಿಗಳವರ ಮಠದಲ್ಲಿ ಮೇಲ್ಕಂಡ ಪುರಾಣವನ್ನು ಶ್ರಾವಣಮಾಸದ ಆದಿಯಲ್ಲಿ ಪ್ರಾರಂಭಿಸಿ ಕಾರ್ತಿಕಮಾಸದ ಅಂತ್ಯದಲ್ಲಿ ಮುಗಿಸಿದರು. ಪುರಾಣವನ್ನು ಹೂಳಗುಂದ ಬೃಹನ್ಮಠದ ವೇ|| ಗುರುಶಾಂತಶಾಸ್ತ್ರಿಗಳವರು ಭಕ್ತಿರಸಭರಿತವಾಗಿ ಸರ್ವರಿಗೂ ಆನಂದವಾಗುವಂತೆ ಹೇಳುತ್ತಿದ್ದರು. ಪುರಾಣವು ೪ ತಿಂಗಳುಗಳವರೆಗೆ ನಿರ್ವಿಘ್ನವಾಗಿ ಸಾಗಿತು. ಇಲ್ಲಿಯ ವೀರಶೈವ ಮಂಡಲಿಯವರು ಪುರಾಣದ ಬಗ್ಗೆ ವಿಶೇಷ ಶ್ರದ್ಧೆವಹಿಸಿ ಕಾರ್ಯಮಾಡಿದರು. ಜಗದಾಚಾರ್ಯರು ಇವರೆಲ್ಲರಿಗೂ ಅನುಗ್ರಹವನ್ನು ದಯಮಾಡಲೆಂದು ಹಾರೈಸುವ

ಎಸ್. ಎಂ. ಮಲ್ಲಪ್ಪ

॥ ಶ್ರೀಗುರುಪಂಚಕಂ ವಂದೇ ॥

ವಿವಾಹಮಹೋತ್ಸವ

ಸೊಲ್ಲಾಪುರದ ಸುಪ್ರಸಿದ್ಧ ಶ್ರೀ ಝುಂಜೆ ವಕೀಲರ ಪುತ್ರ ಚಿ|| ರಾಜಶೇಖರ ಇವರ ವಿವಾಹವು ತಾ|| ೨೧-೧೧-೪೧ ದಿನ ಶ್ರೀ ಕೂಡಲಸಂಗಮೇಶ್ವರ ದೇವಾಲಯದಲ್ಲಿ ಮುದ್ದೇಬಿಹಾಳದ ಮಾಜಿ ಬೆಂಚ್ ಮ್ಯಾಜಿಸ್ಟ್ರೇಟ್ ಶ್ರೀಸಂಗಪ್ಪ ಅಣ್ಣಾ ಹುನಗುಂದ ಇವರ ಪುತ್ರಿ ಚಿ|| ಸೌ|| ಚಂಪಾಬಾಯಿಯವರೊಡನೆ ವಿಜೃಂಭಣೆಯಿಂದ ನೆರವೇರಿತು. ಈ ಮಂಗಲ ಪ್ರಸಂಗದಲ್ಲಿ ಶ್ರೀಮಾನ್ ವಕೀಲರು ಸಂಗಮೇಶ್ವರ ದೇವಸ್ಥಾನಕ್ಕೆ ೨೫ರೂ. ಸಿದ್ಧೇಶ್ವರ ದೇವಸ್ಥಾನ ಸೊಲ್ಲಾಪುರ ೨೫ರೂ. ಮುದ್ದೇಬಿಹಾಳದಲ್ಲಿರುವ ಬಡವಿದ್ಯಾರ್ಥಿಗಳ ಶಿಕ್ಷಣಸಹಾಯ ಸಂಸ್ಥೆಗೆ ೫೧ರೂ ಈ ಪ್ರಕಾರ ೧೦೧ ರೂಪಾಯಿಗಳನ್ನು ಕೊಟ್ಟರು

ಮ ನಾ ಕುರಾರ

ಪರಮಣ್ಣ ಸಜ್ಜನಶೆಟ್ಟಿ ಇವರ ನಿಧನ

ಕಾನಾಗಡ್ಡಿಯ ಸುಪ್ರಸಿದ್ಧ ವ್ಯಾಪಾರಿಗಳಾದ ಶ್ರೀಮಂತ ಪರಮಣ್ಣ ಸಜ್ಜನಶೆಟ್ಟಿ ಇವರು ಕಳೆದ ಶುಕ್ರವಾರ ಶಿವಾಧೀನರಾದರೆಂಬ ವಿಷಯವನ್ನು ತಿಳಿಸಲು ಅತ್ಯಂತ ವಿಷಾದವಾಗುತ್ತದೆ ಇವರು ಬಹಳರಿಗೆ ಬಹಳ ಉಪಕಾರವನ್ನು ಮಾಡುತ್ತಿದ್ದರಲ್ಲದೆ ದಾನ ಧರ್ಮ ಮಾಡುವುದರಲ್ಲಿ ಈ ಪ್ರಾಂತದೊಳಗೆ ಬಹಳ ಹೆಸರುವಾಸಿಗಳಾಗಿದ್ದರು ಇವರ ಮರಣದ ನಿಮಿತ್ತವಾಗಿ ಪೇಟೆ ಬಜಾರವು ಒಂದು ದಿನ ಮುಚ್ಚಲ್ಪಟ್ಟಿದ್ದಿತು. ಇವರು ಹತ್ತು ವರ್ಷಗಳವರೆಗೆ ಶಂಕರ ಸಂಸ್ಕೃತ ಕಾಲೇಜಿನ ಮೆಂಬರರಾಗಿದ್ದರು ಒಟ್ಟಿಗೆ ಈ ಪ್ರಾಂತದಲ್ಲಿ ಗಣ್ಯರಾದ ಓರ್ವ ಮಹನೀಯರು ಇಲ್ಲದಂತಾಯಿತು ದೇವರು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ

ಓರ್ವ ದುಃಖಭಾಗಿ

ಕಣ್ಣೀರು

ಕಳೆದ ತಾ|| ೨೮-೧೧-೪೧ ನೆಯ ದಿವಸ ನಮ್ಮ ಶಾಲೆಯ ಕನ್ನಡ ಪಂಡಿತರೂ, ಸತ್ಕುಲಪ್ರಸೂತರೂ, ಸಕಲ ಸದ್ಗುಣಗಣಮಂಡಿತರೂ ಆದ ವೇ|| ಬಿ ಹೆಚ್. ಕೊಟ್ರಪ್ಪಶಾಸ್ತ್ರಿಗಳವರು ಪರಂಧಾಮವನ್ನೈದಿದರೆಂಬುದು ನಮ್ಮಗಳ ದುರ್ದೈವವೇ ಸರಿ! ಸದರಿ ಪಂಡಿತರು ೨ ತಿಂಗಳ ಲಾಗಾಯಿತು ಜ್ವರದಿಂದ ನರಳುತ್ತಿದ್ದು, ಹರಪನಹಳ್ಳಿಯಲ್ಲಿ ಅಕಾಲಮೃತ್ಯುವಿಗೆ ತುತ್ತಾದರು.

ಇವರು ಮಾಡಿದ ಕಾರ್ಯಗಳೂ ವಿದ್ಯಾದಾನವೂ, ವಿದ್ಯಾರ್ಥಿಗಳ ಏಳಿಗೆಯೂ ಅವರ್ಣನೀಯವಾದುವು. "ವಿದ್ಯಾರ್ಥಿಗಳು ಮುಂದುವರಿಯಬೇಕು, ವಿದ್ಯಾರ್ಥಿಗಳು ಮುಂದೆ ನಿಜವಾದ ಮಾನವರಾಗಬೇಕು' ಎಂದು ಸದಾ ಬೋಧಿಸುತ್ತಿದ್ದರು

ಪಂಡಿತರು ಮೊದಲು ಹುವ್ವಿನಹಡಗಲಿ ಮಾಧ್ಯಮಿಕ ಶಾಲೆಯಲ್ಲಿ ಕನ್ನಡ ಪಂಡಿತರಾಗಿದ್ದರು ಅವರು ಅಲ್ಲಿರುವ ಕಾಲದಲ್ಲಿಯೇ ನಾನು ಅವರ ಕೈಕೆಳಗೆ ೩ ವರ್ಷ ವಿದ್ಯಾಭ್ಯಾಸ ಮಾಡಿದೆನು ಹಡಗಲಿಯಲ್ಲಂತೂ, ಇವರು ಮಾಡಿದ ಕಾರ್ಯಗಳು ಅಷ್ಟಿಷ್ಟಲ್ಲ! ವಿದ್ಯಾರ್ಥಿನಿಲಯವೆಂಬ ಸಂಸ್ಥೆಯಲ್ಲಿ ಪಂಡಿತರು ಯಾವ ವಿಧವಾದ ಅಧಿಕಾರವನ್ನು ವಹಿಸದಿದ್ದರೂ, ವಿದ್ಯಾರ್ಥಿಗಳ ಏಳಿಗೆಗಾಗಿ, ಹಗಲಿರುಳು ಕಷ್ಟಪಡುತ್ತಿದ್ದರು. ದಿನಕ್ಕೆ ಆರೇಳುಸಾರಿ, ನಿಲಯಕ್ಕೆ ಬಂದು ಮಕ್ಕಳ ವ್ಯವಸ್ಥೆಯನ್ನು ಮಾಡುತ್ತಿದ್ದರು.

ಪ್ರತಿನಿತ್ಯವೂ ಬೆಳಗಿನ ನಾಲ್ಕು ಘಂಟೆಯ ಸಮಯಕ್ಕೆ ಬಂದು ವಿದ್ಯಾರ್ಥಿಗಳನ್ನೆಲ್ಲ ಎಬ್ಬಿಸಿ, ಓದಲು ಆರಂಭಮಾಡಿಸುತ್ತಿದ್ದರು ಶಾಲೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೂ, ಅವಶ್ಯವಾಗಿ ಬೇಕಾದ ವ್ಯಾಕರಣವನ್ನು 'ಕಲ್ಲಾಕಡೆದು ವಿಗ್ರಹಮಾಡುವಂತೆ' ಶ್ರಮವಹಿಸಿ ಕಲಿಸುತ್ತಿದ್ದರು

'ಜಾತಸ್ಯ ಮರಣಂ ಧ್ರುವಂ' ಎಂಬುಕ್ತಿಯಂತೆ ಹುಟ್ಟಿದ ಮೇಲೆ ಸಾವು ತಪ್ಪಿದ್ದಲ್ಲ ಆದರೆ ವೃದ್ಧಾಪ್ಯದಲ್ಲಿ ಕೈಲಾಸವಾಸಿಗಳಾಗುವುದು ಒಪ್ಪಿಗೆಯ ಮಾತು ಆದರೆ ಪಂಡಿತರು ತಮ್ಮ ಕೇವಲ ೪೫-೪೬ ನೆಯ ವಯಸ್ಸಿನಲ್ಲಿಯೇ ವಿಧಿವಶರಾದುದು ಪರಮ ವಿಷಾದಕರವು.

ಇವರ ಅಗಲುವಿಕೆಯಿಂದ ಇವರ ಸತಿಸುತ ಮೊದಲಾದ ಕುಟುಂಬ ವರ್ಗದವರಿಗೂ, ಬಂಧುಬಾಂಧವರಿಗೂ ಉಂಟಾಗಿರುವ ಅಪರಿಹಾರ್ಯವಾದ ದುಃಖವು ತೀವ್ರದಲ್ಲಿಯೇ ಶಮನವಾಗಲೆಂದೂ, ಮೃತರ ಆತ್ಮಕ್ಕೆ ದೇವರು ಚಿರಶಾಂತಿಯನ್ನು ಕೊಡಲೆಂದೂ ಕಂಪ್ಲಿ ಮಾಧ್ಯಮಿಕ ಶಾಲೆಯ ತರುಣ ಸಂಘದವರು ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತಾರೆ.

ಯಸ್. ಸಿದ್ಧ,
ಕಾರ್ಯದರ್ಶಿ.

ಶರೀರಾರೋಗ್ಯಕ್ಕೆ ಅತ್ಯವಶ್ಯವಾದ ಕೆಲವು ಸಂಗತಿಗಳು.

(ಹೊರೇಶಿಯೋ W ಶೀಲರ್ M. D, ಇವರಿಂದ)

ಮಾನಸಿಕ ಶಾರೀರಕ ಶಕ್ತಿಗಳೆರಡೂ ಜೀವಯಾತ್ರೆಯಲ್ಲಿ ಎಲ್ಲಾ ಸುಖಕ್ಕೂ, ಜಯಕ್ಕೂ ಆಧಾರಸ್ತಂಭಗಳು.

ಶರೀರವು ಪ್ರತಿಕ್ಷಣವೂ ಸವೆಯುತ್ತಿರುವುದು. ಈ ಸವೆದುಹೋದ ಭಾಗಕ್ಕೆ ಸರಿಯಾಗಿ ಹೊಸ ಮಾಂಸವೂ ಹೊಸ ಸ್ನಾಯುಗಳೂ, ಹೊಸ ರಕ್ತವೂ, ಹೊಸ ಎಲುಬೂ ಉತ್ಪನ್ನವಾಗುತ್ತಿರುವುವು. ಆದುದರಿಂದ ನಾವು ಪ್ರತಿ ದಿನವೂ ಮಾಡತಕ್ಕ ಕೆಲಸಗಳಿಂದ ನಷ್ಟವಾಗುವ ಭಾಗಗಳನ್ನು ಪೂರ್ತಿಗೊಳಿಸಿ, ನಮ್ಮ ದೇಹವನ್ನು ಪುನರುದ್ಧಾರ ಮಾಡುವುದಕ್ಕೆ ನಾವು ಪುಷ್ಟಿಕಾರಕಗಳಾದ ಆಹಾರಗಳನ್ನು ಸೇವಿಸಬೇಕಾದುದವಶ್ಯವು. ನಾವು ಜೀವಿಸುವುದಕ್ಕಾಗಿಯೇ ಭುಂಜಿಸಬೇಕು. ಮನುಷ್ಯನ ದೇಹವೆಂಬ ಯಂತ್ರಕ್ಕೆ ಆಹಾರವೇ ಕಟ್ಟಿಗೆ ಅಥವಾ ಕಲ್ಲಿದ್ದಲಿನಂತಿರುವುದು. ಈ ಕಟ್ಟಿಗೆಯಿದ್ದ ಹೊರತು ದೇಹಯಂತ್ರದ ಇಂಜನ್ನಿಗೆ ಶಕ್ತಿಯಿರುವುದಿಲ್ಲ. ಸರಿಯಾದ ಕಾಲಕ್ಕೆ ಸರಿಯಾದ ಆಹಾರವನ್ನು, ಸರಿಯಾದ ರೀತಿಯಲ್ಲಿ ಭುಂಜಿಸುತ್ತ ಬಂದರೆ ಮಾತ್ರವೇ ದೇಹದಲ್ಲಿ ಆರೋಗ್ಯವೂ, ಕಾರ್ಯಸಾಮರ್ಥ್ಯವೂ, ರೋಗ ನಿವಾರಣ ಶಕ್ತಿಯೂ ನಿಲ್ಲುವುದು ಇಲ್ಲದಿದ್ದರೆ ಅವೆಲ್ಲವೂ ನಷ್ಟವಾಗುವುವು

ಜೀರ್ಣಾಂಗಗಳಲ್ಲಿ ನಡೆಯಬೇಕಾದ ಕೆಲಸವು ಎರಡನೆಯದು. ಈ ಕೆಲಸವು ನಮ್ಮ ಜಠರದೊಳಗೆ ನಡೆಯಬೇಕಾಗಿದೆ ಪಾಚಕರಸ, ಕರುಳಿನರಸ ಇವೆರಡೂ ಹೆಚ್ಚಾಗಿ ಹುಟ್ಟುವಂತಿರಬೇಕು. ಇದು ಒಳಗಿನ ಜೀರ್ಣಾಂಗಗಳ ಕಾರ್ಯದಿಂದಲೇ ನಡೆಯಬೇಕಾಗಿದೆ

ನಾವು ಭುಂಜಿಸುವ ಆಹಾರವು ನಮ್ಮ ಶರೀರಕ್ಕೆ ಅಂಟಬೇಕಾದರೆ ಮುಖ್ಯವಾದ ಮೂರು ವಿಷಯಗಳನ್ನು ಗಮನಿಸಬೇಕು

ಆಹಾರವನ್ನು ಚೆನ್ನಾಗಿ ಅಗಿದು ನುಂಗಬೇಕಾದುದು ಮೊದಲನೆಯದು ಇದರಿಂದ ಹಲ್ಲುಗಳಿಗೆ ಒಳ್ಳೇ ವ್ಯಾಯಾಮವುಂಟಾಗಿ, ಅವು ದೃಢಪಡುವುದರೊಡನೆ, ತಿಂದ ಆಹಾರವು ಸುಲಭ ಜೀರ್ಣವಾಗುವುದಕ್ಕೆ ಬೇಕಾದ ಜೊಲ್ಲಿನ ರಸವು ಅದರೊಡನೆ ಬೆರೆತು ಜೀರ್ಣಾಂಗಗಳಿಗೂ ಅಧಿಕಶ್ರಮವು ತಪ್ಪುವುದು

ಮೊದಲನೆಯದು ಸಂಪೂರ್ಣವಾಗಿ ನಮ್ಮ ಸ್ವಪ್ರಯತ್ನದಿಂದಲೇ ಸಾಧ್ಯವಾದುದು ಏನೆಂದರೆ—ನಮ್ಮ ನಮ್ಮ ದೇಹಪ್ರಕೃತಿಗೆ ಉಚಿತವಾದ ಆಹಾರವನ್ನು ಆರಿಸಿಕೊಳ್ಳುವುದು ಅಂತಹ ಹಿತವಾದ ಮತ್ತು ಪಥ್ಯವಾದ ಆಹಾರಗಳೇ ಜೀರ್ಣಾಂಗಗಳು ಸರಿಯಾಗಿ ಕೆಲಸ ಮಾಡುವುದಕ್ಕೆ ಬೇಕಾದ ಉಷ್ಣವನ್ನೂ ಕಾರ್ಯಶಕ್ತಿಯನ್ನೂ ಕೊಡುವುವು. ಅಂತಹ ಸಾರವುಳ್ಳ ವಸ್ತುಗಳಾವುವೆಂಬುದನ್ನು ಬುದ್ಧಿವಿವೇಚನೆಯಿಂದ ನಿರ್ಣಯಿಸಬೇಕು

ಆಹಾರಪದಾರ್ಥವು ಚೆನ್ನಾಗಿ ಜೀರ್ಣವಾಗುವುದಾದರೆ ಅದೇ ಶರೀರಕ್ಕೆ ಉತ್ತೇಜನವನ್ನು ಕೊಡಬಲ್ಲುದು. ಒಂದು ವಿಧದಲ್ಲಿ ಶರೀರದೊಳಗಿನ ಒಂದೊಂದು ಅವಯವವೂ ಒಂದೊಂದು ಜೀರ್ಣಾಂಗವೆಂದೇ ಹೇಳಬಹುದು. ತಾನು ಯಾವ ಮುಖ್ಯಾವಯವಕ್ಕೆ ಅಂಗವಾಗಿದೆಯೋ ಆ ಮುಖ್ಯಾವಯವದ ಪೋಷಣೆಗೆ ಬೇಕಾದ ಪುಷ್ಟಿ

[೬ ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ

೧೯೪೧ನೆಯ ಡಿಸೆಂಬರ್ ತಾ॥ ೮ನೇ ಸೋಮವಾರ

ಶ್ರೀರೇಣುಕರ ಪ್ರಸಿದ್ಧಕ್ಷೇತ್ರಗಳು.

ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯರಾದ ಭುವನಪ್ರಸಿದ್ಧ ಶ್ರೀಜಗದ್ಗುರು ರೇಣುಕಾಚಾರ್ಯರು ಪರಶಿವನ ಅಪ್ಪಣೆಯಮೇರೆಗೆ ಪ್ರತಿಯೊಂದು ಯುಗದಲ್ಲಿಯೂ ಕುಲ್ಯಪಾಕಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಶ್ರೀ ಸೋಮನಾಥಲಿಂಗದಿಂದ ಅವತರಿಸಿ, ಭೂಮಂಡಲದಲ್ಲೆಲ್ಲ ಸಂಚರಿಸಿ, ಅನಂತಾನಂತಲೀಲೆಗಳನ್ನು ಮಾಡಿ ಅನೇಕಜನ ಮಹರ್ಷಿಗಳನ್ನೂ ಚಕ್ರವರ್ತಿಗಳನ್ನೂ ಉದ್ಧರಿಸಿದ ವಿಷಯವು ಅವರ ವಿಷಯಕವಾಗಿರುವ ಪವಿತ್ರ ಚರಿತ್ರೆಗಳಿಂದ ತಿಳಿಯಬರುವುದಷ್ಟೆ! ಈ ಮಹಾತ್ಮರು ಕನ್ಯಾಕುಮಾರಿಯಿಂದ ಹಿಮಾಲಯದವರೆಗೆ ಸಂಚರಿಸಿ ಸಮಸ್ತ ಭಾರತಭೂಮಿಯನ್ನು ಪವಿತ್ರಗೊಳಿಸಿದರು ಈ ಮಹರ್ಷಿಯು ಪಾದವಿಟ್ಟ ಸ್ಥಳಗಳಲ್ಲೆಲ್ಲ ಇವರ ಪವಿತ್ರಾಭಿಧಾನದಿಂದ ಅನೇಕ ದೇವಾಲಯಗಳು ಕಟ್ಟಲ್ಪಟ್ಟು ಅನಾದಿಕಾಲದಿಂದ ಇಂದಿನವರೆಗೂ ಭರತಖಂಡದಲ್ಲಿ ವಿರಾಜಿಸುತ್ತಿರುವವು ಆದರೆ ಈ ವಿಷಯವು ಅನೇಕ ಜನರಿಗೆ ಗೊತ್ತಿಲ್ಲದಿರುವುದು ವಿಷಾದಕರವಾಗಿದೆ ಆದುದರಿಂದ ನಮಗೆ ತಿಳಿದಿರುವಷ್ಟು ಈ ಮಹಾತ್ಮರ ಹೆಸರಿನಿಂದ ಪ್ರಸಿದ್ಧವಿರುವ ಪವಿತ್ರ ಕ್ಷೇತ್ರಗಳ ವಿಷಯವನ್ನು ಇಲ್ಲಿ ವಿವರಿಸುವುದಾಗಿದೆ

(೧) **ಕುಲ್ಯಪಾಕ** (ಕೊಲ್ಲಿಪಾಕಿ) **ಕ್ಷೇತ್ರ**— ಇದು ಶ್ರೀಜಗದ್ಗುರು ರೇಣುಕಾಚಾರ್ಯರ ಅವತಾರಭೂಮಿ ಈ ಪವಿತ್ರಕ್ಷೇತ್ರವು ನಿಜಾಂರಾಜ್ಯದಲ್ಲಿದ್ದು ಹೈದರಾಬಾದಿಗೆ ಸಮೀಪದಲ್ಲಿರುವ "ಆಲೇರ್" ಸ್ಟೇಷನ್ನಿಗೆ ೪ ಮೈಲು ದೂರದಲ್ಲಿರುವುದು ಇದು ಆಂಧ್ರ (ತೆಲುಗು) ದೇಶ ಈ ಕ್ಷೇತ್ರದಲ್ಲಿ ಶ್ರೀರೇಣುಕಾಚಾರ್ಯಪಾದರು ಅವತರಿಸಿದ ಶ್ರೀ ಸೋಮನಾಥಲಿಂಗಮೂರ್ತಿಯ ಭವ್ಯವಾದ ದೇವಾಲಯವಿರುವುದಲ್ಲದೆ, ಆ ದೇವಾಲಯದಲ್ಲಿ ಆಚಾರ್ಯರ ಶಿಲಾವಿಗ್ರಹವು ಅನಾದಿಕಾಲದಿಂದ ವಿರಾಜಿಸುತ್ತಿರುವುದು ಅಲ್ಲದೆ ಈ ಕ್ಷೇತ್ರದಲ್ಲಿ ಅನೇಕ ಶಿವದೇವಾಲಯಗಳೂ, ೧೮ ಮಠಗಳೂ ಇರುವವು

(೨) **ಶ್ರೀ ರಂಭಾಪುರೀ ಕ್ಷೇತ್ರ**—ಈ ಕ್ಷೇತ್ರದಲ್ಲಿ ಶ್ರೀ ರೇಣುಕಾಚಾರ್ಯರ ಧರ್ಮಪೀಠವು ಅನಾದಿಕಾಲದಿಂದ ಮೆರೆಯುತ್ತಿರುವುದು ಈ ಕ್ಷೇತ್ರವು ಮೈಸೂರು ಸೀಮೆಯಲ್ಲಿ ಕಡೂರು ಡಿಸ್ಟ್ರಿಕ್ಟಿಗೆ ಸೇರಿದ ಬಾಳೆಹೊನ್ನೂರು ಗ್ರಾಮಕ್ಕೆ ೨ ಮೈಲು ದೂರದಲ್ಲಿರುವುದು ಈ ಧರ್ಮಪೀಠವು ಕಡೂರು ಸ್ಟೇಷನ್ನಿಗೆ ೬೦ ಮೈಲು ದೂರದಲ್ಲಿರುವುದು ಈ ಪೀಠದಲ್ಲಿ ಶ್ರೀರೇಣುಕರ, ಶ್ರೀಜಗದ್ಗುರು ರುದ್ರಮುನಿಶಿವಾಚಾರ್ಯರ ಮತ್ತು ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಶ್ರೀ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಸುಂದರ ಶಿಲಾವಿಗ್ರಹಗಳು ವಿರಾಜಿಸುತ್ತಿರುವವು

(೩) **ರೇವಣಸಿದ್ಧೇಶ್ವರಬೆಟ್ಟ**—ಈ ಪರ್ವತವು ಬೆಂಗಳೂರು ಡಿ॥ ಕ್ಲೋಸ್‌ಪೇಟೆ ತಾಲೂಕಿನಲ್ಲಿ ಈ ಮಹಾತ್ಮರ ಪುಣ್ಯಾಭಿಧಾನದಿಂದ ಪರಿಶೋಭಿಸುತ್ತಿರುವುದು ಈ ಪರ್ವತವು ಕ್ಲೋಸ್‌ಪೇಟೆ ಸ್ಟೇಷನ್ನಿಗೆ ೭ ಮೈಲು ದೂರದಲ್ಲಿರುವುದು ಪರ್ವತಾಗ್ರದಲ್ಲಿ ಮಹಾಚಾರ್ಯರ ಭವ್ಯವಾದ ಶಿಲಾವಿಗ್ರಹವಿರುವುದು ಈ ದೇವಾಲಯವು ಮೈಸೂರು ಸರಕಾರದ ಆಡಳಿತದಲ್ಲಿದ್ದು ಪೂಜಾದಿಗಳು ಸಮರ್ಪಕವಾಗಿ ಸಾಗುತ್ತಿರುವವು ಮೈಸೂರು ದೇಶದಲ್ಲೆಲ್ಲ ಇದು ಬಹಳ ಪ್ರಸಿದ್ಧಿಯನ್ನು ಪಡೆದಿರುವುದು

(೪) **ಶ್ರೀ ರೇವಣಸಿದ್ಧೇಶ್ವರದೇವಾಲಯ**— ಈ ದೇವಾಲಯವು ಬೆಂಗಳೂರು ಡಿ॥ ಶಿವಗಂಗಾ ಕ್ಷೇತ್ರದ ಪರ್ವತದ ಪೂರ್ವಭಾಗದಲ್ಲಿ ವಿರಾಜಿಸುತ್ತಿರುವುದು. ಇಲ್ಲಿ ಶ್ರೀಜಗದ್ಗುರು ರುದ್ರಮುನಿಶಿವಾಚಾರ್ಯರ ಭವ್ಯವಾದ ಶಿಲಾವಿಗ್ರಹವಿರುವುದು. ಈ ಕ್ಷೇತ್ರವು ಬೆಂಗಳೂರಿಗೆ ಸಮೀಪದಲ್ಲಿರುವ 'ನಿಡವಂದ' ಸ್ಟೇಷನ್ನಿಗೆ ೫ ಮೈಲು ದೂರದಲ್ಲಿರುವುದು

(೫) **ಸಿದ್ಧರಬೆಟ್ಟ**—ಈ ಬೆಟ್ಟವು ತುಮಕೂರು ಡಿಸ್ಟ್ರಿಕ್ಟಿನಲ್ಲಿರುವುದು ಶ್ರೀ ರೇವಣಸಿದ್ಧಭಗವತ್ಪಾದರು ಈ ಬೆಟ್ಟದಲ್ಲಿ ಕೆಲಕಾಲ ಅನುಷ್ಠಾನಮಾಡಿದುದರಿಂದ ಈ ಬೆಟ್ಟವು ಈ ಮಹಾತ್ಮರ ಹೆಸರಿನಿಂದ ಪ್ರಸಿದ್ಧವಾಗಿರುವುದು ಈ ಬೆಟ್ಟದಲ್ಲಿ ನಾನಾವಿಧವಾದ ಅಪೂರ್ವ ವನಸ್ಪತಿಗಳು ದೊರೆಯುವವು ಆ ಪ್ರಾಂತದ ಜನರು ಈ ಬೆಟ್ಟದಲ್ಲಿ ವಾಸವಾಗಿದ್ದುಕೊಂಡು ಮಹಾಮಹಾ ರೋಗಗಳಿಂದ ಮುಕ್ತರಾಗುತ್ತಿರುವರು

(೬) **ರೇವಗಿ** ಅಥವಾ **ರೇವಣಗಿರಿ**—ಈ ಕ್ಷೇತ್ರವು ನಿಜಾಂ ಇಲಾಖಾ ಗುಲ್ಬುರ್ಗಾ ಡಿ॥ ಶಟಗಲ್ಲಗ್ರಾಮಕ್ಕೆ ೨ ಮೈಲು ದೂರದಲ್ಲಿರುವುದು ಪರ್ವತದ ಅಗ್ರಭಾಗದಲ್ಲಿ ಆಚಾರ್ಯರ ಹೆಸರಿನ ವಿಶಾಲವಾದ ದೇವಾಲಯವು ಕಂಗೊಳಿಸುತ್ತಿರುವುದು ಇದು ಆಚಾರ್ಯಭಗವತ್ಪಾದರು ಪಾದವಿಟ್ಟ ಪವಿತ್ರಸ್ಥಳ ಇದು ನಿಜಾಂ ರಾಜ್ಯದಲ್ಲೆಲ್ಲ ಅತ್ಯಂತ ಪ್ರಸಿದ್ಧಿಗೊಂಡ ಕ್ಷೇತ್ರವೆನಿಸಿರುವುದು ಈ ಕ್ಷೇತ್ರಕ್ಕೆ ಸದಾ ಯಾತ್ರಿಕರು ಬಂದೇ ಬರುತ್ತಿರುವರು

(೭) **ಶ್ರೀ ರೇವಣಸಿದ್ಧೇಶ್ವರದೇವಾಲಯ** ಈ ದೇವಾಲಯವು ಬೊಂಬಾಯಿ ಇಲಾಖೆಗೆ ಸೇರಿರುವ ಸೊಲ್ಲಾಪುರನಗರದಲ್ಲಿ ಈ ಆಚಾರ್ಯರ ಹೆಸರಿನಿಂದ ಅನಾದಿಕಾಲದಿಂದ ವಿರಾಜಿಸುತ್ತಿರುವುದು ಸೊಲ್ಲಾಪುರದ ಭಕ್ತರು ಲಕ್ಷಾಂತರರೂಪಾಯಿಗಳನ್ನು ಖರ್ಚು ಮಾಡಿ ಈ ದೇವಾಲಯವನ್ನು ಜೀರ್ಣೋದ್ಧಾರಮಾಡಿರುವರು ಇದು ಅತ್ಯಂತ ಮಹಿಮಾಸ್ಥಾನವಾಗಿರುವುದು

(೮) **ಶ್ರೀ ರೇವಣಸಿದ್ಧೇಶ್ವರದೇವಾಲಯ**— ಈ ಮಹಾದೇವಾಲಯವು ಸೊಲ್ಲಾಪುರ ಡಿ॥ ಮಾಸನೂರುಗ್ರಾಮದಲ್ಲಿರುವ ಭೀಮಾನದಿಯ ದಂಡೆಯಮೇಲೆ ಬಹು ಪುರಾತನಕಾಲದಿಂದ ವಿರಾಜಿಸುತ್ತಿರುವುದು ಈ ದೇವಾಲಯದ ಕಟ್ಟಡಕ್ಕೆ ಹತ್ತಿಪ್ಪತ್ತುಲಕ್ಷರೂಪಾಯಿಗಳು ಖರ್ಚಾಗಿರಬಹುದು ಈ ಸ್ಥಳದಲ್ಲಿಯೇ ಶ್ರೀ ರೇಣುಕರು ೧೨ ಸಾವಿರ ಕನ್ಯೆಯರನ್ನು ಬಂಧವಿಮುಕ್ತರನ್ನಾಗಿಮಾಡಿ ಖರ್ಪರನ ಗರ್ವಭಂಗವನ್ನು ಮಾಡಿದರು ಯಕ್ಷವಿದುರನನ್ನು ತಮ್ಮ ಫಾಲನೇತ್ರದಿಂದ ಧ್ವಂಸ ಮಾಡಿದ ಸ್ಥಳವೂ ಇದೇ ಆಗಿರುವುದು ಇದು ಅತ್ಯಂತ ಮಹಿಮಾಸ್ಥಳ ಶ್ರೀ ರೇವಣಸಿದ್ಧೇಶ್ವರನ ಪೂಜೆಗಾಗಿ ಬ್ರಿಟಿಷ್ ಸರಕಾರದವರು ಪ್ರತಿವರ್ಷ ೧೬೦೦ ರೂಪಾಯಿಗಳನ್ನು ಸಲ್ಲಿಸುತ್ತಿರುವರು

(೯) **ಶ್ರೀರೇವಣಸಿದ್ಧೇಶ್ವರದೇವಾಲಯ** ಈ ದೇವಾಲಯವು ಸೊಲ್ಲಾಪುರ ಡಿ॥ ಪಂಡರಪುರಕ್ಕೆ ೧೨ ಮೈಲು ದೂರದಲ್ಲಿರುವ ಮಂಗಳವೇಢೆ ಎಂಬ ಗ್ರಾಮದಲ್ಲಿ ಪುರಾತನಕಾಲದಿಂದ ವಿರಾಜಿಸುತ್ತಿರುವುದು

(೧೦) **ಶ್ರೀ ರೇವಣಸಿದ್ಧೇಶ್ವರದೇವಾಲಯ** ಈ ದೇವಾಲಯವು ಬೊಂಬಾಯಿ ಇಲಾಖಾ ಸಾತಾರಾ ಡಿ॥ ವಿಟಾತಾಲೂಕಿಗೆ ಸೇರಿದ "ರೇಣಾವಿ' ಎಂಬ ಗ್ರಾಮದಲ್ಲಿ ಶೋಭಿಸುತ್ತಿರುವುದು ಇದು ಅತ್ಯಂತ ಮಹತ್ವಸ್ಥಳ ಆ ಪ್ರಾಂತದ ಜನರು ವಿಶೇಷ ಭಕ್ತಿಯಿಂದ ನಡೆದುಕೊಳ್ಳುತ್ತಿರುವರು

(೧೧) **ರೇವಣಸಿದ್ಧನಗುಡ್ಡ**—ಈ ಗುಡ್ಡವು ಕೊಲ್ಲಾಪುರ ರಾಜ್ಯದಲ್ಲಿ ವಿರಾಜಿಸುತ್ತಿರುವುದು ಈ ಪುಣ್ಯಕ್ಷೇತ್ರವು ಬೆಳಗಾಂವ ಡಿಸ್ಟ್ರಿಕ್ಟ್ ಬೆಲ್ಲದಬಾಗೇವಾಡಿ ಸ್ಟೇಷನ್ನಿಗೆ ೧೨ ಮೈಲು ದೂರದಲ್ಲಿರುವುದು ಪರ್ವತದ ಸಾನುಪ್ರದೇಶದಲ್ಲಿ ಶ್ರೀರೇವಣಸಿದ್ಧೇಶ್ವರನ ದೇವಾಲಯವಿರುವುದು ಅಲ್ಲಿ ಶ್ರೀ ರೇಣುಕಾಚಾರ್ಯರ ಪಾದದ ಗುರುತುಗಳಿರುವವು ಕೊಲ್ಲಾಪುರ ಸರಕಾರದವರು ಪೂಜಾದಿಗಳಿಗಾಗಿ ಭೂಮಿಯನ್ನು ದಾನಮಾಡಿರುವರು ಇದು ಅತ್ಯಂತಪ್ರಾಚೀನ ದೇವಾಲಯ ಭಗವತ್ಪಾದರು ಹಿಂದಕ್ಕೆ ಕೊಲ್ಲಾಪುರದಲ್ಲಿದ್ದ ಗೋರಕ್ಷನ ಗರ್ವಹರಣ ಮಾಡುವುದಕ್ಕಾಗಿ ದಯಮಾಡಿಸಿದ ಕಾಲದಲ್ಲಿ ಈ ಸ್ಥಾನದಲ್ಲಿ ಅನುಷ್ಠಾನಮಾಡಿದರೆಂಬ ಐತಿಹ್ಯವಿದೆ

(೧೨) **ರೇವಣತಲಾವ**—ಈ ಪವಿತ್ರತೀರ್ಥವು ಹಿಮಾಲಯದಲ್ಲಿರುವ ಶ್ರೀಜಗದ್ಗುರು ಏಕೋರಾಮಾರಾಧ್ಯರ ಧರ್ಮಪೀಠಕ್ಕೆ (ಉಷಾಮಠಕ್ಕೆ) ೨ ಮೈಲು ದೂರದಲ್ಲಿ ಈ ಮಹಾಚಾರ್ಯರ ಪವಿತ್ರಾಭಿಧಾನದಿಂದ ಪ್ರಸಿದ್ಧವಾಗಿರುವುದು ಶ್ರೀ ರೇಣುಕಾಚಾರ್ಯರು ಹಿಮಾಲಯಕ್ಕೆ ದಯಮಾಡಿಸಿದ್ದಾಗ್ಗೆ ಈ ತೀರ್ಥದಲ್ಲಿ ಸ್ನಾನಮಾಡಿದ್ದರಿಂದ ಅದಕ್ಕೆ ಈ ಹೆಸರು ಪ್ರಾಪ್ತವಾಗಿರುವುದು.

(೧೩) ಮದ್ರಾಸ್ ಇಲಾಖಾ ನಾರ್ಥ್‌ಆರ್ಕಾಟ್ ಡಿ॥ ತಿರುವಣ್ಣಾಮಲೆ (ಅರುಣಾಚಲ) ಕ್ಷೇತ್ರದಲ್ಲಿರುವ ಪರ್ವತದ ಮಧ್ಯಭಾಗದಲ್ಲಿ ಈ ಮಹಾತ್ಮರ ಹೆಸರಿನ ಪ್ರಸಿದ್ಧ ದೇವಾಲಯವಿರುವುದು ದೇವಾಲಯದ ಮುಂಭಾಗದಲ್ಲಿ ಪವಿತ್ರ ತೀರ್ಥವುಂಟು ಈ ಕ್ಷೇತ್ರದಲ್ಲಿ ಶ್ರೀ ರೇಣುಕಭಗವತ್ಪಾದರು ವಾಸವಾಗಿದ್ದರೆಂಬ ವಿಷಯವು ಅವರ ಪವಿತ್ರ ಚರಿತ್ರೆಗಳಿಂದ ತಿಳಿಯಬರುತ್ತದೆ ಇದು ತಮಿಳು ದೇಶ ಇಲ್ಲಿ ಅರುಣಾಚಲೇಶ್ವರನ ಮಹಾದೇವಾಲಯವಿರುವುದು ದಕ್ಷಿಣ ದೇಶದಲ್ಲಿ ಅತ್ಯಂತ ಪ್ರಸಿದ್ಧರಾಗಿರುವ ಶ್ರೀರಮಣ ಮಹರ್ಷಿಗಳ ಆಶ್ರಮವಿರುವುದು

(೧೪) ಮದ್ರಾಸ್ ಇಲಾಖಾ "ವೃದ್ಧಾಚಲ" ಕ್ಷೇತ್ರದಲ್ಲಿ ಈ ಮಹಾತ್ಮರ ಹೆಸರಿನ ದೇವಾಲಯವಿರುವುದು ಇದು ತಮಿಳು ದೇಶ ಸೌತ್ ಇಂಡಿಯನ್ ರೇಲ್ವೆ ಮಾರ್ಗದಲ್ಲಿರುವುದು ಈ ಕ್ಷೇತ್ರದಲ್ಲಿ ಆಚಾರ್ಯಭಗವತ್ಪಾದರು ಅನುಷ್ಠಾನಮಾಡಿದರೆಂಬ ವಿಷಯವು ಅವರ ಚರಿತ್ರೆಗಳಿಂದ ತಿಳಿಯಬರುತ್ತದೆ

(೧೫) ಪೂರ್ವಕಾಲದಲ್ಲಿ ದಕ್ಷಿಣ ದೇಶವನ್ನು ಏಕಚ್ಛತ್ರಾಧಿಪತ್ಯದಿಂದ ಆಳುತ್ತಿದ್ದ ಪಲ್ಲವ ಮತ್ತು ಚೋಳ ಚಕ್ರವರ್ತಿಗಳಿಗೆ ರಾಜಧಾನಿಯಾಗಿದ್ದ ಕಾಂಚೀ ಕ್ಷೇತ್ರದಲ್ಲಿ ಇವರು ಬಹುಕಾಲ ವಾಸವಾಗಿದ್ದರು. ಶ್ರೀ ರೇಣುಕಾಚಾರ್ಯರು ಆ ಕ್ಷೇತ್ರದಲ್ಲಿರುವ ವರದರಾಜ ನಾಮಕ ವಿಷ್ಣುಮೂರ್ತಿಯ ಬಳಿಸುತ್ತಿದ್ದ ಮಸ್ತಕವನ್ನು ತಮ್ಮ ಮಹಿಮಾಪ್ರಭಾವದಿಂದ ನಿಲ್ಲಿಸಿ ಚೋಳಭೂಪಾಲನನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡರು ಶ್ರೀಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಆ ಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಏಕಾಮ್ರೇಶ್ವರ ಲಿಂಗಮೂರ್ತಿಯ ಮುಂಭಾಗದ ಭೂಗರ್ಭದಿಂದವತರಿಸಿ ಶ್ರೀ ರೇಣುಕರಿಂದ ದಿವ್ಯಜ್ಞಾನವನ್ನು ಪಡೆದುಕೊಂಡರು ಈ ಮಹಾಕ್ಷೇತ್ರದಲ್ಲಿ ಈ ಆಚಾರ್ಯರ ಹೆಸರಿನ ದೇವಾಲಯವಿರುವುದೆಂದು ವದಂತಿಯಿರುವುದು ಅದನ್ನು ಗುರುಭಕ್ತರು ಶ್ರಮಪಟ್ಟು ಶೋಧಿಸಬೇಕಾಗಿದೆ

ಇದೇ ರೀತಿಯಾಗಿ ಈ ಮಹಾಚಾರ್ಯರ ಪವಿತ್ರ ನಾಮದಿಂದ ಇಂಡಿಯಾ ದೇಶದ ಅನೇಕ ಭಾಗಗಳಲ್ಲಿ ಅಸಂಖ್ಯ ದೇವಾಲಯಗಳು ಪ್ರಸಿದ್ಧವಾಗಿರುವವು ನಮಗೆ ತಿಳಿದವುಗಳನ್ನು ಮಾತ್ರ ಇಲ್ಲಿ ವಿವರಿಸಿರುವೆವು ಈ ಮಹಾತ್ಮರು ವಿಶೇಷವಾಗಿ ತಮಿಳು ದೇಶದಲ್ಲಿ ವಾಸವಾಗಿದ್ದರೆಂಬುದು ಅವರ ಚರಿತ್ರೆಗಳಿಂದ ತಿಳಿಯಬರುತ್ತದೆ ತಮಿಳು (ದ್ರಾವಿಡ) ದೇಶದ ಅನೇಕ ಭಾಗಗಳಲ್ಲಿ ಈ ಮಹಾತ್ಮರ ಹೆಸರಿನ ದೇವಾಲಯಗಳಿರುವವೆಂದು ಪ್ರಸಿದ್ಧವಿದೆ ಗೊತ್ತಿದ್ದವರು ಆ ಕ್ಷೇತ್ರಗಳ ವಿಷಯವನ್ನು ತಿಳಿಸಿದರೆ ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾಗುತ್ತದೆ ಕರ್ನಾಟಕ ಮಹಾರಾಷ್ಟ್ರ-ಆಂಧ್ರ ದ್ರಾವಿಡ ದೇಶಗಳಲ್ಲಿರತಕ್ಕ ಗುರುಭಕ್ತರು ಈ ವಿಷಯದಲ್ಲಿ ಪೂರ್ಣ ಶ್ರದ್ಧೆಯನ್ನು ವಹಿಸಿ, ತಮ್ಮ ತಮ್ಮ ನಾಡಿನಲ್ಲಿರತಕ್ಕ ಈ ಆಚಾರ್ಯರ ಪವಿತ್ರ ಕ್ಷೇತ್ರಗಳ ವಿಷಯವನ್ನು ನಮಗೆ ತಿಳಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ

ಯುದ್ಧವಾರ್ತೆ.

ರಷ್ಯಕ್ಕೆ ವೈದ್ಯಸಲಕರಣೆ

ರಷ್ಯಕ್ಕೆ ಔಷಧ ಮತ್ತು ಶಸ್ತ್ರಚಿಕಿತ್ಸೆಗೆ ಬೇಕಾದ ಆಯುಧ ಸಲಕರಣೆಗಳನ್ನು ಕಳುಹಿಸಲು ಭಾರತದ ರೆಡ್ ಕ್ರಾಸ್ ಸೊಸೈಟಿಗೆ ಒಂದುಲಕ್ಷ ರೂಪಾಯಿಗಳು ಬಂದಿವೆ

ಮಾಸ್ಕೋ ಆಕ್ರಮಣ ಪ್ರಯತ್ನ

ಮಾಸ್ಕೋ ದ್ವಾರಗಳಲ್ಲಿ ಬಂದು ಸೇರಿರುವ ಶತ್ರುಸೇನೆಗಳು ಹೆಚ್ಚಿನ ಚಟುವಟಿಕೆಯನ್ನು ಪ್ರದರ್ಶಿಸುತ್ತಿವೆ ನೊಜೈಸ್ಕ್ ಮತ್ತು ಮಲೋಯರೋಸ್ಲವೆಟ್ಜ ಕಡೆಗಳಲ್ಲಿ ಜರ್ಮನರು ಅಪಾರಟ್ಯಾಂಕುಗಳೊಡನೆಯೂ ಕಾಲಾಳು ಬಲದೊಡನೆಯೂ ಮುಂದೆ ನುಗ್ಗಿ ಹಲವು ಹಳ್ಳಿಗಳನ್ನು ಹಿಡಿದರು ಅಲ್ಲಿಯ ಪರಿಸ್ಥಿತಿ ಚಿಂತಾಜನಕವಾಗಿದೆ

ಜರ್ಮನರ ಕ್ರೂರವರ್ತನ.

ಜರ್ಮನರು ರೊಸ್ಟೋವ್ ನಗರವನ್ನು ಹಿಡಿದಿದ್ದಾಗ ಅಲ್ಲಿಯ ನಾಗರಿಕ ಜನರಿಗೆ ಚಿತ್ರಹಿಂಸೆಮಾಡಿದರೆಂದೂ, ನಗರವು ಸ್ವವಶ ವಾದೊಡನೆ ಜನರನ್ನು ಕೊಳ್ಳೆಹೊಡೆಯಲು ಪ್ರಾರಂಭಿಸಿದರೆಂದೂ, ಹಣ ಕಾಸುಗಳನ್ನು ಮುಚ್ಚಿಟ್ಟರೆಂಬುದಕ್ಕಾಗಿ 200 ಜನರನ್ನು ಗುಂಡಿನಿಂದಹೊಡೆದು ಕೊಂದರೆಂದೂ ತಿಳಿದು ಬರುತ್ತದೆ

ಜರ್ಮನರು ತಮ್ಮ ಸೋಲನ್ನೊಪ್ಪಿಕೊಂಡರು

ರಷ್ಯದ ಹೆಚ್ಚಿನ ಸೈನ್ಯಬಲವು ಬಂದು ತಮ್ಮನ್ನು ರೊಸ್ಟೋವ್‌ನಿಂದ ಓಡಿಸಿತೆಂದು ಜರ್ಮನರು ಒಪ್ಪಿಕೊಂಡಿದ್ದಾರೆ ಆದರೆ ರಷ್ಯನರ ಈ ವಿಜಯವು ಅಷ್ಟೇನು ಮುಖ್ಯವಲ್ಲವೆಂದು ಜರ್ಮನರು ಹೇಳುತ್ತಿದ್ದಾರೆ ರೊಸ್ಟೋವ್ ಬಳಿಯಲ್ಲಿ ರಷ್ಯನರು ಉಗ್ರವಾಗಿ ತಿರುಗಿಬಿದ್ದಿದ್ದಾರೆ ಟುಲಾ ನಗರದ ಹತ್ತಿರ ರಷ್ಯನರ ಏಟಿನಿಂದ ಶತ್ರುಗಳು ಹಿಮ್ಮೆಟ್ಟುತ್ತಿದ್ದಾರೆ. ಕಾಕಸಸ್ ಪ್ರದೇಶದಿಂದ ರಾಜಧಾನಿಗೆ ಸಂಬಂಧವನ್ನುಂಟುಮಾಡುವ ಒಂದು ಮುಖ್ಯ ರೈಲ್ವೆ ಜಂಕ್ಷನ್ ಪ್ರದೇಶವನ್ನು ಶತ್ರುಗಳಿಂದ ರಷ್ಯನರು ಕಿತ್ತುಕೊಂಡಿದ್ದಾರೆ ಮಾಸ್ಕೊ ಸುತ್ತುಮುತ್ತಲ ಅನೇಕ ಸ್ಥಾನಗಳನ್ನು ಜರ್ಮನರಿಂದ ಕಸಿದುಕೊಳ್ಳಲಾಗಿದೆ ಈಚೆಗೆ ರಷ್ಯದ ರಾಜಧಾನಿಯ ಮೇಲೆ ಮಾಡಿದ ಮುತ್ತಿಗೆಯಲ್ಲಿ 5 ಲಕ್ಷ ಜರ್ಮನರು ಕಷ್ಟನಷ್ಟಕ್ಕೆ ಗುರಿಯಾಗಿರುವರೆಂದು ಹೇಳಲಾಗಿದೆ

ನಾಜಿಗಳ ಹಿಂದೋಟ

ಕಸಸ್ ಕ್ಷೇತ್ರಕ್ಕೆ ಮಹಾದ್ವಾರದಂತಿರುವ ರೋಸ್ಟೊವ್ ನಗರವನ್ನು ನಾಜಿಗಳು ಬಹಳ ಕಷ್ಟನಷ್ಟಗಳನ್ನು ಅನುಭವಿಸಿ ಆಕ್ರಮಿಸಿದ್ದರು ಆದರೆ ರಷ್ಯನರು ಉಗ್ರವಾಗಿ ಪ್ರತಿಭಟಿಸಿ ತಿರುಗಿಬಿದ್ದು ಅಸಂಖ್ಯ ನಾಜಿಗಳನ್ನು ಕೊಂದು ಆ ನಗರವನ್ನು ಜರ್ಮನರಿಂದ ಕಿತ್ತುಕೊಂಡಿದ್ದಲ್ಲದೆ ಅವರು ಒಂದೆಡೆಯಲ್ಲೂ ಕಾಲೂರಿ ನಿಲ್ಲಲು ಅವಕಾಶ ಕೊಡದೆ ಒಂದೇಸಮನೆ ಹಿಂದಕ್ಕೆ ಅಟ್ಟಿಕೊಂಡು ಹೋಗುತ್ತಿದ್ದಾರೆ ರಷ್ಯನರ ಏಟನ್ನು ತಡೆಯಲಾರದೆ ಇಡೀ ಜರ್ಮನ್ ಸೇನೆಯೇ ಹಿಂದೋಡುತ್ತಿದೆ ಜರ್ಮನರ ಈ ಸೋಲಿನಿಂದ ಜರ್ಮನ್ ಸೈನ್ಯವು ಅಜೇಯವೆಂದು ಹೇಳುತ್ತಿದ್ದುದು ಬರಿಯ ಭ್ರಾಂತಿ ಎಂಬುದು ವ್ಯಕ್ತಪಟ್ಟಿದೆ ಈಗಾಗಲೇ ರೋಸ್ಟೊವ್‌ನಿಂದ 50 ಮೈಲುಗಳಿಗಿಂತ ಹೆಚ್ಚು ದೂರ ಓಡಿಬಿಟ್ಟಿರುವ ನಾಜಿಪಡೆಗಳು ಇನ್ನೂ ಹಿಂದಕ್ಕೆ ಓಡುವವೆಂದೂ ಹೇಳಲಾಗಿದೆ

ಆಸ್ಟ್ರೇಲಿಯದ ನೌಕೆಗಳು ಮುಳುಗಿದವು

6830 ಟನ್ ತೂಕದ ಆಸ್ಟ್ರೇಲಿಯದ ಭಾರಿ ಯುದ್ಧ ನೌಕೆಯಾದ 'ಸಿಡ್ನಿ' ಎಂಬುದು ಶತ್ರುಗಳಿಂದ ಆಸ್ಟ್ರೇಲಿಯಾ ತೀರದಾಚೆ ಮುಳುಗಿಸಲ್ಪಟ್ಟಿತು ಅದರಲ್ಲಿ 6 ಅಂಗುಲ ವ್ಯಾಸದ 8 ಫಿರಂಗಿಗಳೂ 4 ಅಂಗುಲದ 8 ವಿಮಾನ ಧ್ವಂಸಕ ಫಿರಂಗಿಗಳೂ ಒಂದು ವಿಮಾನವೂ ಇತ್ತು ಅದರಲ್ಲಿದ್ದ 42 ನೌಕಾಧಿಕಾರಿಗಳೂ 603 ಜನ ಸೈನಿಕರೂ ನೀರುಪಾಲಾದರೆಂದೂ, 'ಪರಮಟ್ಟಾ' ಎಂಬ 1010 ಟನ್ ತೂಕದ ಇನ್ನೊಂದು ಆಸ್ಟ್ರೇಲಿಯಾ ನೌಕೆಯು ಶತ್ರುಗಳ ಟಾರ್ಪೆಡೋ ಏಟಿಗೆ ಸಿಕ್ಕಿ ಮುಳುಗಿ ಹೋಯಿತೆಂದೂ ಪ್ರಕಟವಾಗಿದೆ

ಬ್ರಿಟಿಷ್ ನೌಕೆಗಳ ಆಗಮನವೇ ಜಪಾನಿಗೆ ಎಚ್ಚರಿಕೆ

ಸಿಂಗಪುರಕ್ಕೆ ಬ್ರಿಟಿಷ್ ಯುದ್ಧ ನೌಕೆಗಳು ಬಂದಿರುವದರಿಂದ ಜಪಾನಿಗೆ ಉಗ್ರವಾದ ಎಚ್ಚರಿಕೆ ಕೊಟ್ಟಂತಾಗಿದೆ ಎಂದು ಸಿಂಗಪೂರದಲ್ಲಿರುವ ಚೀಣಾ ಮತ್ತು ಹಾಲೆಂಡ್ ರಾಯಭಾರಿಗಳಿಬ್ಬರೂ ತಿಳಿಸಿದ್ದಾರೆ ಬ್ರಿಟನ್ನು ಈ ಪ್ರದೇಶದಲ್ಲಿ ತನ್ನ ಮಾತಿನಂತೆ ವರ್ತಿಸುವದೆಂಬುದಕ್ಕಿದೇ ಉದಾಹರಣೆಯೆಂದು ಅವರು ತಿಳಿಸಿದರು

೨೩೦೦೦ ಇಟಾಲಿಯನ್ನರ ಸೆರೆ.

ಅಬ್ಸೀನಿಯಾದಲ್ಲಿರುವ ಗೊಂಡಾರ್ ಪ್ರದೇಶದಲ್ಲಿ 11500 ಮಂದಿ ಇಟಾಲಿಯನ್ ಯೋಧರನ್ನೂ, ಮತ್ತು 12000 ಮಂದಿ ಸ್ಥಳೀಯ ಸೈನಿಕರನ್ನೂ ಸೆರೆಹಿಡಿದಿರುವದಾಗಿ ಪ್ರಕಟವಾಗಿದೆ

ಲಿಬಿಯಾ ಯುದ್ಧ

ಬ್ರಿಟಿಷರ ಮುನ್ನುಗ್ಗುವಿಕೆಯಿಂದ ಭೀತರಾದ ಜರ್ಮನರು ತಮ್ಮ ಸರ್ವ ಬಲವನ್ನೂ ರಣರಂಗಕ್ಕೆ ತಂದು ಉಗ್ರವಾಗಿ ಹೋರಾಡಲಾರಂಭಿಸಿದ್ದಾರೆ ಅಲ್ಲದೆ ಉಕ್ರೇನ್ ಮತ್ತು ಬಲ್ಗೇರಿಯಾ ಪ್ರಾಂತಗಳಿಂದಲೂ ವಿಮಾನಗಳ ಮೂಲಕ ಸೈನಿಕರನ್ನು ತಂದಿಳಿಸಿದ್ದಾರೆ ಜರ್ಮನ್ ಪಡೆಗಳು ಸಿದಿರಜೋಸ್ ಮತ್ತು ಜರ್ ಎಲ್ ಹಮಾದ್ ಎಂಬವುಗಳನ್ನು ಮತ್ತೆ ವಶಪಡಿಸಿಕೊಂಡವು ಟೋಬ್ರುಕ್‌ನೊಡನೆ ಬ್ರಿಟಿಷ್ ಸೇನೆಯ ಸಂಬಂಧವು ತಪ್ಪಿಲ್ಲ ಲಿಬಿಯಾದಲ್ಲಿ ಜರ್ಮನಿಯ ಟ್ಯಾಂಕ್ ಬಲವು ಬಹಳ ಹೆಚ್ಚಾಗಿದೆಯೆಂದು ಹೇಳಲಾಗಿದೆ

ಇಟಲಿಯಲ್ಲಿ ಪಿತೂರಿ

ರಾಜದ್ರೋಹ ಮತ್ತು ಪಿತೂರಿ ಆಪಾದನೆಯ ಟ್ರಿಸ್ಟಿಯಲ್ಲಿ 21 ಜನರ ಮೇಲೆ ಆಪಾದನೆಯು ಹೊರಿಸಲ್ಪಟ್ಟು ಅವರ ವಿಚಾರಣೆಯು ಕಳೆದ 1 ನೆಯ ತಾರೀಖಿನ ದಿವಸ ಪ್ರಾರಂಭವಾಯಿತೆಂದು ಹೇಳಲಾಗಿದೆ ವಿದೇಶೀ ರಾಷ್ಟ್ರಗಳ ಸೂಲ್ಪಿಚಾರಣೆಯಲ್ಲಿ ಭಾರಿ ಪಿತೂರಿಯು ನಡೆಯುತ್ತಿದೆಯೆಂದೂ, ಈ ಸಂಚಿನವರೇ 1938 ರಲ್ಲಿ ಮುಸ್ಸೋಲಿನಿಯವರ ಕೊಲೆಪ್ರಯತ್ನ ನಡೆಸಿದರೆಂಬುದಕ್ಕೆ ಸಾಕ್ಷ್ಯ ದೊರೆತಿದೆಯೆಂದೂ ಹೇಳಲಾಗಿದೆ

ಥೈಲೆಂಡಿನ ಸಿದ್ಧತೆ

ತಮ್ಮ ಮೇಲೆ ಮುಂದೆ ಬರಬಹುದಾದ ಕಠಿಣಪ್ರಸಂಗವನ್ನೆದುರಿಸಲು ಥೈಲೆಂಡು ಗುಪ್ತವಾಗಿ ಆತ್ಮಸಂರಕ್ಷಣೆಯ ಪ್ರಯತ್ನ ನಡೆಸಿದೆ ಥೈಲೆಂಡ್ ತೀರದಲ್ಲಿ ಕಾವಲು ತಿರುಗಲು ನೌಕಾಪಡೆಯು ಸಿದ್ಧವಾಗಿದೆ ರಾಜಧಾನಿಯಾದ ಬ್ಯಾಂಕಾಕ್ ಮತ್ತು ಅದಕ್ಕೆ ಬರುವ ಮುಖ್ಯಸ್ಥಾನಗಳಲ್ಲಿ ಶಸ್ತ್ರಸಜ್ಜಿತ ಯೋಧರನ್ನು ನಿಲ್ಲಿಸಲಾಗಿದೆ ಶತ್ರುಗಳು ಸೇರುವ ಸ್ಥಾನಗಳಲ್ಲೆಲ್ಲಾ ವಿಮಾನಮುತ್ತಿಗೆ ರಕ್ಷಣಸ್ಥಾನಗಳನ್ನು ನಿರ್ಮಿಸಲಾಗಿದೆ ಅವಶ್ಯಕಬಿದ್ದರೆ ರಾಜಧಾನಿಯಲ್ಲಿರುವ ಹೆಂಗಸರು ಮಕ್ಕಳನ್ನು ಸುರಕ್ಷಿತಸ್ಥಾನಗಳಿಗೆ ರವಾನಿಸಲು, ನಗರದಲ್ಲಿ ಎಷ್ಟು ವಾಹನ ಸೌಕರ್ಯವಿದೆಯೆಂಬುದನ್ನು ತನಿಖೆಮಾಡಲಾಗುತ್ತಿದೆ ಗೃಹರಕ್ಷಣೆಗಾಗಿ ಸಾವಿರಗಟ್ಟಲೆ ಸ್ವಯಂಸೇವಕರು ಮುಂದೆ ಬಂದು ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸಲಿದ್ದಾರೆಂದು ತಿಳಿದುಬರುತ್ತದೆ

ಭಾರತದಿಂದ ಸೈನ್ಯಕ್ಕೆ ಸಿಗರೇಟುಗಳು

ಬ್ರಿಟನ್ನಿನ ಮತ್ತು ಭಾರತೀಯ ಸೈನ್ಯಪಡೆಗಳಿಗೆ 11820 ಲಕ್ಷ ಸಿಗರೇಟುಗಳನ್ನು ಒದಗಿಸಬೇಕೆಂದು ಸರಬರಾಯಿ ಖಾತೆಯವರು ಭಾರತದ ನಾನಾ ಸಿಗರೇಟು ಕಾರ್ಖಾನೆಯವರಿಗೆ ಆರ್ಡರುಗಳನ್ನು ಕೊಟ್ಟಿದ್ದಾರೆ

ಬ್ರಿಟನ್ನಿಗೆ ಹೆಚ್ಚು ಕೆಲಸಗಾರರು ಬೇಕು

ಬ್ರಿಟನ್ನಿನ ಸಂಗ್ರಾಮ ವಸ್ತುನಿರ್ಮಾಣ ಕಾರ್ಖಾನೆಗಳಲ್ಲೂ ಮತ್ತು ನಾನಾ ಸೈನ್ಯಗಳಲ್ಲೂ ಕೆಲಸಮಾಡಲು ಹೆಚ್ಚು ಮಂದಿ ಸ್ತ್ರೀಪುರುಷರು ಬೇಕಾಗಿರುವದರಿಂದ ಅವರುಗಳನ್ನು ಕೂಡಿಸಲು ಬಹಳ ಕಟ್ಟುನಿಟ್ಟಾದ ಶಾಸನ ಮಾಡಲಾಗುವದೆಂದು ಶ್ರೀ ಚರ್ಚಿಲ್ಲರು ಹೇಳಿದರು ಇದಕ್ಕಾಗಿ ಮಿಲಿಟರಿಗೆ ಸೇರಿಸಿಕೊಳ್ಳುವ ಪುರುಷರ ವಯಸನ್ನು 41 ರಿಂದ 50 ಕ್ಕೆ ಹೆಚ್ಚಿಸುವದು ಕನಿಷ್ಠ ಪ್ರಮಾಣದ ವಯಸ್ಸು 18 ವರ್ಷಕ್ಕೆ ತಗ್ಗಿಸುವದು 16 ರಿಂದ 18 ವರ್ಷ ವಯಸ್ಸಿನೊಳಗಿರುವ ಬಾಲಕ ಬಾಲಕಿಯರ ಹೆಸರುಗಳನ್ನೆಲ್ಲ ರಿಜಿಸ್ಟರ್ ಮಾಡಿಸುವದು 20 ರಿಂದ 30 ವಯಸ್ಸಿನ ಅವಿವಾಹಿತ ತರುಣಿಯರನ್ನೆಲ್ಲ ನಿರ್ಬಂಧವಾಗಿ ಮಿಲಿಟರಿ ಸೇವೆಗೆ ಕರೆಯುವುದು—ಇವೇ ಈಗ ಆಲೋಚಿಸಿರುವ ಕಾರ್ಯಕ್ರಮಗಳು.

ಚೀಣಾಕ್ಕೆ ಅಮೇರಿಕದ ಸಹಾಯ

ಅಮೇರಿಕವು ಲೀಸ್ ಅಂಡ್ ಲೆಂಡ್ ಶಾಸನದಂತೆ ಚೀಣಾಕ್ಕೆ ಅಪಾರ ಸಹಾಯ ಮಾಡುತ್ತಿದೆ ಬರ್ಮಾ ರಸ್ತೆಯ ಮೂಲಕ 14 ಸಾವಿರ ಅಮೇರಿಕನ್ ಲಾರಿಗಳು ಅಮೇರಿಕದಲ್ಲಿ ತಯಾರಾದ ವಿಮಾನ ನಿರ್ಮಾಣ ಸಲಕರಣೆಗಳನ್ನು ಟ್ಯಾಂಗ್ ಕಿಂಗ್ ಕ್ಷೇತ್ರಕ್ಕೆ ಸಾಗಿಸಲಿವೆ. ಈ ಸಲಕರಣೆಗಳ ಸಹಾಯದಿಂದ ಕೂಡಿದ ಕಾರ್ಖಾನೆಯಲ್ಲಿ ಅಮೇರಿಕದಲ್ಲಿ ತಯಾರಾಗುತ್ತಿರುವ ಯಾವ ವಿಧವಾದ ಬಾಂಬರು ವಿಮಾನಗಳನ್ನಾದರೂ ನಿರ್ಮಿಸಬಹುದಾಗಿದೆ

ರಾಜಕೀಯ ಬಂದಿಗಳ ಬಿಡುಗಡೆ

ಈಗಿನ ಸಂಗ್ರಾಮದಲ್ಲಿ ಜಯವು ಲಭಿಸುವವರೆಗೆ ಸಹಾಯ ನೀಡಬೇಕೆಂದು ಭರತಖಂಡದ ಜನರೆಲ್ಲರೂ ದೃಢಸಂಕಲ್ಪ ಮಾಡುವರೆಂಬ ನಂಬಿಕೆಯಮೇಲೆ ಸರಕಾರದವರು ರಾಜಕೀಯ ಬಂದಿಗಳ ಬಿಡುಗಡೆ ವಿಚಾರದಲ್ಲಿ ಒಂದು ತೀರ್ಮಾನಕ್ಕೆ ಬಂದು ಸಾಮಾನ್ಯ ದರ್ಜೆಯ ಅಪರಾಧ ಮಾಡಿರುವ ಸತ್ಯಾಗ್ರಹಿಗಳನ್ನೆಲ್ಲ ಬಿಡುಗಡೆಮಾಡಬೇಕೆಂದು ತೀರ್ಮಾನಿಸಿರುತ್ತಾರೆ ಈ ವರ್ಷದ ಅಂತ್ಯದೊಳಗಾಗಿ ಭರತಖಂಡದ ಎಲ್ಲ ಕಡೆಗಳಲ್ಲೂ ರಾಜಕೀಯ ಬಂದಿಗಳ ಬಿಡುಗಡೆಯಾದೀತೆಂದು ನಂಬಲಾಗಿದೆ ಕಳೆದ 4 ನೆಯ ತಾರೀಖಿನ ದಿವಸ ಪಂಡಿತ ಜವಾಹರಲಾಲ್ ನೆಹರು ಮತ್ತು ಮೌ॥ ಅಬ್ದುಲ್ ಕಲಾಂ ಅಜಾದರ ಬಿಡುಗಡೆಯಾಯಿತು

ವಿವಾಹಮಹೋತ್ಸವ ಹುಬ್ಬಳ್ಳಿ

ಹುಬ್ಬಳ್ಳಿಯಲ್ಲಿರುವ ಗುರುಭಕ್ತಶಿಖಾಮಣಿಗಳಾದ ಮ॥ ರಾ॥ ತೀರ್ಥಪ್ಪ ಬಳ್ಳೊಳ್ಳಿ ಇವರು ತಮ್ಮ ಪುತ್ರ ಚಿ॥ ಷಣ್ಮುಖಪ್ಪನಿಗೆ ಶಿರಹಟ್ಟಿಯಲ್ಲಿರುವ ಮ॥ ರಾ॥ ಘೋರಶೆಟ್ಟರ ಶಿವಯೋಗಪ್ಪನವರ ಪುತ್ರಿ ಚಿ॥ ಸೌ॥ ಕಲ್ಯಾಣಮ್ಮನನ್ನು ತಂದು ತಾ॥ ೧೨-೧೨-೧೯೪೧ ನೆಯ ಶುಕ್ರವಾರ ದಿವಸ ಹುಬ್ಬಳ್ಳಿಯಲ್ಲಿರುವ ಸ್ವಗೃಹದಲ್ಲಿ ವಿವಾಹಮಹೋತ್ಸವವನ್ನು ವಿಶೇಷ ವೈಭವದಿಂದ ನೆರವೇರಿಸುವರು ಜಗದಾಚಾರ್ಯರು ವಧೂವರರಿಗೆ ಸಕಲ ಸನ್ಮಂಗಲಗಳನ್ನೀಯಲೆಂದು ಹಾರೈಸುತ್ತೇವೆ

ಸ್ವೀಕಾರ.

ಕಾನಕಾನಹಳ್ಳಿ ತಾ॥ ಅರ್ಜುನಹಳ್ಳಿಯಲ್ಲಿರುವ ಮ॥ ರಾ॥ ಚಿಕ್ಕಮುದ್ದಪ್ಪನವರ ಪುತ್ರಿ ಚಿ॥ ಸೌ॥ ಗಿರಿಜಾಂಬೆಯ ನಿಷೇಕ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ ವರನ ತಂದೆಯವರಾದ ಮ॥ ರಾ॥ ನಾವರಸನಕೋಟೆ ಮಲ್ಲಯ್ಯನವರು ಸಮರ್ಪಿಸಿದ **0-8-0** ಒಟ್ಟು **1-8-0** ರೂ ಗಳು ಮ॥ ರಾ॥ ಎ ಎಂ ಕೆಂಪಯ್ಯನವರ ದ್ವಾರಾ ತಲ್ಪಿರುತ್ತವೆ

ಗದಗ ಶಹರ ನಿವಾಸಿಗಳಾದ ವೇ॥ ಬೆಟಗೇರಿ ಹಿರೇಮಠದ ಶಾಂತಯ್ಯನವರು ತಾ॥ ೨೪-೧೧-೧೯೪೧ ನೆಯ ಸೋಮವಾರ ದಿವಸ ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 1 ರೂ ಯು ಸೂಡಿಜುಗತಿಮಠದ ಶ್ರೀ॥ ಷ॥ ಬ್ರ॥ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[೩ ನೆಯ ಪುಟದಿಂದ ಮುಂದುವರಿದುದು]

ಪದಾರ್ಥವನ್ನು ಅದು ರಕ್ತದಿಂದ ತಾನಾಗಿ ಗ್ರಹಿಸುವುದು ಮಿದುಳಿನಲ್ಲಿ ವಿಧವಿಧವಾದ ಆಲೋಚನೆಗಳು ನಡೆಯುವುವು ಆ ಮಿದುಳಿನಿಂದ ಜೀರ್ಣಮಾಡಲ್ಪಡಬೇಕಾದ ವಸ್ತುಗಳಾವುವು? ಆಲೋಚನೆಗಳೇ!

ಅನುಕೂಲವಾದ ಆಹಾರ

ಮನುಷ್ಯರು ತೆಗೆದುಕೊಳ್ಳುವ ಆಹಾರವು ಅವರವರ ಶರೀರಪ್ರಕೃತಿಗೆ ಅನುಕೂಲವಾಗಿರಬೇಕು ಅನೇಕ ವಸ್ತುಗಳ ಆಹಾರವೇ ನಮಗೆ ಪ್ರಿಯವಾಗಿರುವುದು ಏಕೆಂದರೆ—ಪುಷ್ಟಿಜನಕವೂ ನೈಟ್ರೋಜನ್ ಮತ್ತು ಕಾರ್ಬೋಹೈಡ್ರೇಟ್ ಎಂಬ ವಸ್ತುಗಳುಳ್ಳವೂ, ಹೀಗೆಯೇ ಇನ್ನೂ ಅನೇಕತರದ ಗುಣವುಳ್ಳ ಆಹಾರಗಳೂ ನಮ್ಮ ಶರೀರಕ್ಕೆ ಬೇಕಾಗಿವೆ ಇವೆಲ್ಲಾ ನಮ್ಮ ಶರೀರ ಪೋಷಣೆಗೆ ಅತ್ಯವಶ್ಯಕಗಳು ನಮ್ಮ ಶರೀರದ ಅವಯವಗಳನ್ನು ರಕ್ಷಿಸುವುದಕ್ಕೂ ಸಹ ಹೀಗೆ ನಾನಾ ರಸಗಳು ಸೇರಿದ ಆಹಾರ ಪದಾರ್ಥಗಳು ಅವಶ್ಯವಾಗಿವೆ ಇವುಗಳಲ್ಲಿ ಯಾವುದೊಂದು ಪ್ರಧಾನವೆಂಬುದಿಲ್ಲ ಎಲ್ಲವೂ ಸೇರಿದ ಹೊರತು ಶರೀರ ಪೋಷಣ ಕಾರ್ಯವು ನಡೆಯುವುದಿಲ್ಲ ಉದಾಹರಣೆಗಾಗಿ ಪ್ರೋಟೀನೆಂಬುದು ಕಾರ್ಬೋ ಹೈಡ್ರೇಟ್ ಎಂಬುದರಿಂದ ಆಗಬೇಕಾದ ಕೆಲಸವನ್ನು ನಡೆಸಲಾರದು, ಅಲ್ಲದೆ ಅವುಗಳಲ್ಲಿ ಒಂದೊಂದನ್ನೇ ಬೇರೆಬೇರೆಯಾಗಿ ತೆಗೆದುಕೊಂಡರೂ ಅವು ತಮ್ಮ ಗುಣವನ್ನು ತೋರಿಸಲಾರವು ಒಂದು ವಸ್ತುವು ಮತ್ತೊಂದು ವಸ್ತುವಿನೊಡನೆ ಸೇರಿದಾಗ ಉಂಟಾಗಬಹುದಾದ ಗುಣವು ಅವುಗಳನ್ನು ಪ್ರತ್ಯೇಕಿಸಿ ತೆಗೆದುಕೊಂಡಾಗ ಲಭಿಸಲಾರದು ಕರಗುವ ಗುಣವುಳ್ಳ ನೈಟ್ರೋಜನ್ ಎಂಬುದರ ಸಾರವು ನಾವು ತಿನ್ನುವ ಆಹಾರಪದಾರ್ಥಗಳು ನಮಗೆ ರುಚಿಸುವಂತೆಯೂ ಹಸಿವಾಗುವಂತೆಯೂ ಮಾಡುವುದು ಅವುಗಳಿಗೆ ಉತ್ತೇಜನಶಕ್ತಿಯುಂಟು ಜೀರ್ಣವಾದ ಸ್ನಾಯುಗಳನ್ನು ಹುರಿಗೊಳಿಸುವುದು ನಿರ್ಜೀವ ವಸ್ತುಗಳು (ಧಾತುಗಳು) ಪುಷ್ಟಿಕರವಾದ ಗುಣದೊಡನೆ ಜೀರ್ಣಕಾರ್ಯಕ್ಕೆ ವಿಶೇಷ ಸಹಾಯಕಗಳಾಗಿರುವವು

ಹೀಗಿರುವುದರಿಂದ ನಮ್ಮ ಅನ್ನ ಪಾನಗಳ ವಿಷಯದಲ್ಲಿ ನೀವು ನಿಮ್ಮ ವಿವೇಚನೆಯನ್ನು ಉಪಯೋಗಿಸಬೇಕಾದುದವಶ್ಯವು ನಿಮ್ಮ ಮೈಗೆ ಯಾವುದು ಹಿತವೋ, ಯಾವುದು ಸುಲಭ ಜೀರ್ಣವಾಗುವುದೋ ಅಂಥವುಗಳನ್ನು ಮೊದಲು ನಿರ್ಣಯಿಸಿಕೊಳ್ಳಬೇಕು ಅನುಭವದಿಂದ ಇದನ್ನು ತಿಳಿದುಕೊಂಡಮೇಲೆ ಅದನ್ನೇ ವಾಡಿಕೆಗೆ ತಂದು, ಕಾಲಕ್ರಮವನ್ನನುಸರಿಸಿ ಭುಂಜಿಸಬೇಕು ಆದರೆ ಹಸಿವು ಕಾಣದಿದ್ದಾಗಮಾತ್ರ ಎಂದಿಗೂ ಬಲತ್ಕಾರದಿಂದ ಭುಂಜಿಸಬಾರದು ಪ್ರಮಾಣಕ್ಕೆ ಮೀರಿ ತಿನ್ನಬಾರದು ಒಂದೆರಡು ತುತ್ತು ಬೇಕೆನ್ನುವಾಗಲೇ ಆಹಾರವನ್ನು ನಿಲ್ಲಿಸಬೇಕು

ಆರೋಗ್ಯದಶೆಯಲ್ಲಿ ಯಾಗಲಿ, ರೋಗದಶೆಯಲ್ಲಿ ಯಾಗಲಿ, ನಿರ್ಬಂಧಿಸಿ ಆಹಾರವನ್ನು ತೆಗೆದುಕೊಳ್ಳಬಾರದು ತಾನಾಗಿ ಹಸಿವು ಕಾಣುವವರೆಗೂ ಸಹಿಸಿಕೊಂಡಿರಬೇಕು ಆಗಾಗ್ಗೆ ವಿಶ್ರಾಂತಿಯನ್ನು ತೆಗೆದುಕೊಳ್ಳುವುದರಿಂದ ಜೀರ್ಣಾಂಗಗಳಿಗೂ, ಇತರ ಅವಯವಗಳಿಗೂ ಬಹಳ ಅನುಕೂಲವುಂಟೆಂಬುದನ್ನು ನೆನಪಿನಲ್ಲಿಡಿರಿ ನಾವು ಸಾಧಾರಣವಾಗಿ ಎಷ್ಟುಮಟ್ಟಿಗೆ ಆಹಾರವನ್ನು ಜೀರ್ಣಿಸಿಕೊಳ್ಳಬಲ್ಲೆವೋ ಅದಕ್ಕೆ ಮೀರಿ ಹೋಗಬಾರದು ಹಾಗೆ ಮಾಡಿದರೆ ನಮ್ಮ ಶರೀರಾವಯವಗಳಿಗೆ ಶ್ರಮವನ್ನು ಹೆಚ್ಚಿಸಿದಂತಾಗುವುದು. ನಾವು ತಿನ್ನುವ ಆಹಾರವೆಲ್ಲ ನಮ್ಮನ್ನು ಬದುಕಿಸುವುದಿಲ್ಲ ನಮ್ಮ ಮೈಗೆ ಅಂಟಿಬರುವ ಆಹಾರವೇ ನಮ್ಮನ್ನು ಬದುಕಿಸುವುದು ಅದಕ್ಕೆ ಮೇಲೆ ಹೆಚ್ಚಾದುದೆಲ್ಲಾ ವ್ಯರ್ಥವಾಗುವುದು ಮಾತ್ರವಲ್ಲದೆ ಅಪಾಯಕರವೂ ಆಗಿದೆ

ಜೀರ್ಣಶಕ್ತಿಯನ್ನು ಕೆಡಿಸುವುದಕೆ ಹಲವು ಕಾರಣಗಳುಂಟು ಉಚಿತವಾದ ಆಹಾರವಿಲ್ಲದಿರುವುದು, ಅಪಥ್ಯವಾದ ಆಹಾರಗಳನ್ನು ಸೇವಿಸುವುದು, ಶುದ್ಧ ಜಲವನ್ನು ತಕ್ಕಷ್ಟು ಕುಡಿಯದಿರುವುದು, ಅಸೂಯೆ, ಭಯ, ಚಿಂತೆ ಮುಂತಾದ ಕೆಟ್ಟ ವಿಷಯಗಳನ್ನು ಮನಸ್ಸಿಗೆ ತಂದುಕೊಳ್ಳುವುದು ಇವೆಲ್ಲಾ ಅಜೀರ್ಣವ್ಯಾಧಿಗೆ ಆಸ್ತಿಭಾರಗಳು ಈ ಲೋಪಗಳಿಗೆ ಅವಕಾಶಕೊಡದಿದ್ದರೆ, ನಿಮ್ಮ ಶರೀರಕ್ಕೆ ನೀವೇ ಪರೋಪಕಾರಿಗಳಾಗುವಿರಿ

ನೀವು ತಿನ್ನತಕ್ಕ ಆಹಾರದಲ್ಲಿ ಅದರ ಹುಟ್ಟುವ ಹಾಗೆ ಮಾಡಿಕೊಂಡು, ಅದರ ಸುಖವನ್ನನುಭವಿಸಿರಿ. ನಿಮಗೆ ಆಹಾರವು ಪ್ರಿಯವಾದಷ್ಟೂ ಜೀರ್ಣರಸವು ಹೆಚ್ಚಾಗಿ ಹುಟ್ಟುವುದು ಮತ್ತು ಎಲ್ಲಕ್ಕಿಂತಲೂ ಮುಖ್ಯವಾಗಿ ಮನಸ್ಸಂತೋಷವೇ ಉತ್ತಮವಾದ ಜೀರ್ಣೌಷಧವು ಮನಸ್ಸಿಗೆ ಬೇಸರವಿದ್ದಾಗ ಊಟಕ್ಕೆ ಕೈಯಿಕ್ಕಬಾರದು ಭುಂಜಿಸುವ ಆಹಾರವನ್ನು ಚೆನ್ನಾಗಿ ಅಗಿದಮೇಲೆ ನುಂಗಬೇಕು ಹೀಗಿದ್ದರೆ ನಿಮಗೆ ತಿಳಿಯದಂತೆಯೇ ನಿಮ್ಮ ಅಜೀರ್ಣವ್ಯಾಧಿಗಳೆಲ್ಲಾ ಮಾಯವಾಗುವುವು ಆಹಾರವನ್ನು ಬಹಳ ಬಿಸಿಯಾಗಿಯೂ, ಆತುರದಿಂದಲೂ ಭುಂಜಿಸಬಾರದು ಅತಿಭೋಜನಕ್ಕಿಂತ ಉಪವಾಸವು ಉತ್ತಮವು.

ಜೀರ್ಣಯಂತ್ರವು ಸಣ್ಣ ನರಗಳಿಂದ ಏರ್ಪಟ್ಟಿದೆ. ಆಹಾರ ಪದಾರ್ಥಗಳು ಆ ಸಣ್ಣನರಗಳಿಂದ ಮಥಿಸಲ್ಪಡುವಾಗ ಜೀರ್ಣರಸಗಳು ಉತ್ಪತ್ತಿಯಾಗುವುವು ಆದುದರಿಂದ ಜಠರ ಮತ್ತು ಕರುಳು ಇವುಗಳಲ್ಲಿರುವ ಸ್ನಾಯುಗಳಿಗೆ ಉತ್ತೇಜಕವಾದ ವ್ಯಾಯಾಮಗಳನ್ನು ಮಾಡಿ, ಆ ಮೂಲಕ ಜೀರ್ಣಾಂಗಗಳಲ್ಲಿ ಸರಿಯಾಗಿ ಕೆಲಸ ನಡೆಯುವಂತೆ ಮಾಡಬೇಕು. ಮಲಬದ್ಧತೆಯನ್ನು ನಿವರ್ತಿಸುವುದಕ್ಕೂ ಇದು ಒಳ್ಳೇ ಸಾಧನವು. ರಕ್ತಶುದ್ಧಿಯಾಗುವುದು ಶರೀರಾವಯವಗಳಿಗೆ ದಾರ್ಢ್ಯವು ಏರ್ಪಟ್ಟು ಅವು ಚೆನ್ನಾಗಿ ಕೆಲಸಮಾಡುವುವು.

ಆಹಾರದಲ್ಲಿ ಸಾರವಿಲ್ಲದುದೇ ಮುಖ್ಯವಾಗಿ ಮಲಬದ್ಧತೆಗೆ ಕಾರಣವು ಆ ಮಲಬಂಧವನ್ನು ತಪ್ಪಿಸಬೇಕಾದರೆ ಸರಿಯಾದ ಆಹಾರವೂ, ಸಮೃದ್ಧವಾದ ಜಲಪಾನವೂ ದೊಡ್ಡ ಕರುಳುಗಳಿಗೆ ಧಾರಾಳವಾಗಿ ರಕ್ತಚಲನವಾಗುವಂತೆ ತಕ್ಕಷ್ಟು ವ್ಯಾಯಾಮವೂ ಬೇಕು.

ನೀರನ್ನು ಹೆಚ್ಚಾಗಿ ಕುಡಿಯುವುದರ ಅವಶ್ಯಕತೆ

ಎಲ್ಲಾ ವಸ್ತುಗಳನ್ನೂ ಕರಗಿಸತಕ್ಕ ಶಕ್ತಿಯು ನೀರಿಗೆ ಉಂಟೆಂಬುದು ಶಾಸ್ತ್ರೀಯವಾಗಿ ನಿರ್ಧರಿಸಲ್ಪಟ್ಟಿದೆ ನೀರಿಗೆ ಈ ಶಕ್ತಿಯಿರುವುದರಿಂದಲೇ ಜಠರದಲ್ಲಿ ಜೀರ್ಣಕಾರ್ಯವು ಉತ್ತಮರೀತಿಯಿಂದ ನಡೆಯುವುದಕ್ಕೂ, ಮಲಪದಾರ್ಥಗಳನ್ನು ದೇಹದಿಂದ ಹೊರಪಡಿಸುವುದಕ್ಕೂ ಅದು ಬಹಳ ಸಹಕಾರಿಯಾಗಿದೆ ಜಠರಕೋಶದಲ್ಲಿ ಏನಾದರೂ ಉರಿ, ಬೇನೆ, ಮುಂತಾದ ಲೋಪಗಳು ತೋರಿಬಂದಲ್ಲಿ ಊಟಕ್ಕೆ ಮೊದಲು ಧಾರಾಳವಾಗಿ ನೀರನ್ನು ಕುಡಿದರೆ, ಆ ಹೊಟ್ಟೆಯೊಳಗಿನ ವ್ಯಾಧಿಯಿಂದ ಆಹಾರ ಪದಾರ್ಥಗಳು ಜೀರ್ಣವಾಗುವುದಕ್ಕೆ ಕಾಲತಾಮಸವಾಗುವುದನ್ನು ತಪ್ಪಿಸುವುದು ನೀರನ್ನು ಕುಡಿಯುವುದರಿಂದ ಜೀರ್ಣಾಂಗಗಳಿಗೆ ಉಪಶಮನಕವಾಗಿ ಅವು ತಮ್ಮ ಕಾರ್ಯವನ್ನು ಸರಿಯಾಗಿ ನಡೆಸುವುವು ಜೀವಧಾರಣೆಗೆ ಆಹಾರವು ಹೇಗೋ ನೀರೂ ಹಾಗೆಯೇ ಅವಶ್ಯವಾದುದು ಆಹಾರದೊಡನೆ ನಿಮ್ಮ ದೇಹಕ್ಕೆ ಸೇರುವ ನೀರು ಮಾತ್ರವೇ ಸಾಲದು. ಶುದ್ಧವಾದ ಜಲವನ್ನು ಪ್ರತ್ಯೇಕವಾಗಿ ಕುಡಿಯಬೇಕಾದುದವಶ್ಯವು ನಿಮ್ಮ ಶರೀರದ ಭಾಗಗಳಲ್ಲಿ ಹೆಚ್ಚು ಭಾಗವು ಜಲಾಂಶವೇ ಎಂಬುದನ್ನು ನೀವು ಚೆನ್ನಾಗಿ ತಿಳಿದಿರಬೇಕು ರಕ್ತದಲ್ಲಿ ನೀರೇ ಅಧಿಕವು ದೇಹದೊಳಗಿನ ಕಶ್ಮಲ ಪದಾರ್ಥಗಳು ಜಲಾಂಶದೊಡನೆಯೇ ಕರಗಿರುವುವು ಇವೆರಡಕ್ಕೂ ತಕ್ಕಷ್ಟು ನೀರಿನ ಸರಬರಾಜು ಇಲ್ಲದಿದ್ದರೆ ಅವುಗಳ ಕೆಲಸವು ನಡೆಯಲಾರದು ಒಂದು ತತ್ವಾಂಶವೇನೆಂದರೆ, ರಕ್ತದಿಂದಲೂ, ದೇಹದಲ್ಲಿ ಉರಿಯುವ ರಸವಸ್ತುಗಳಿಂದಲೂ ಶರೀರದಲ್ಲಿ ಊರುವ ರಸವಸ್ತುಗಳಿಂದಲೂ ಶರೀರದಲ್ಲಿ ಹೊಸ ಪದಾರ್ಥಗಳು ಹುಟ್ಟುವುದಕ್ಕೂ ಕಶ್ಮಲಪದಾರ್ಥಗಳು ಹೊರಬೀಳುವುದಕ್ಕೂ ಅನುಕೂಲಿಸಬೇಕು. ನರಗಳು ದೇಹದಲ್ಲಿ ವಿಕಾಸಹೊಂದಿ ಕಾರ್ಯಸಮರ್ಥವಾಗುವದು ಜಲದ ಶಕ್ತಿಯಿಂದಲೇ! ಆಹಾರದ ಸಾರವು ಮೈಯೊಳಗಿನ ದ್ರವಪದಾರ್ಥಗಳೊಡನೆ ಸೇರಿ ದೇಹಕ್ಕೆ ಉಪಯೋಗವಾಗುವುದೂ ಆ ಜಲದ ಶಕ್ತಿಯಿಂದಲೇ! ನಮ್ಮ ಶರೀರಕ್ಕೆ ದಿನವೊಂದಕ್ಕೆ ಕೊನೆಯಪಕ್ಷ ಮೂರು ಪೈಂಟಿನಷ್ಟು ನೀರಾದರೂ ಅವಶ್ಯವು ಮೂರು ಕ್ವಾರ್ಟುಗಳ ನೀರು ಕೂಡ ಬಹಳ ಹೆಚ್ಚೆಂದು ತಿಳಿಯಬಾರದು. ಬೆಳಗ್ಗೆ ಹಾಸಿಗೆಯಿಂದೆದ್ದೊಡನೆ ಬಹಳ ಉಷ್ಣವೂ ಶೀತವೂ ಅಲ್ಲದ ನೀರನ್ನು ಎರಡು ಲೋಟಾವಿನಷ್ಟು ಕುಡಿಯಬೇಕು ಹಾಗೆಯೇ ಊಟಕ್ಕೆ ಮೊದಲು ಎರಡು ಬಟ್ಟಲು ನೀರನ್ನು ಕುಡಿಯಬೇಕು' ಕುದಿಸ ಪ ಯನ್ನು ಅನುಸರಿಸುವದರಲ್ಲಿ ಮೊದಲು ಸ್ವಲ್ಪ ಬೇಸ ಬಂದರೂ ಬರಬಹುದು ಆದರೆ ಅದಕ್ಕೆ ತಕ್ಕ ಪ್ರತಿಫ ವಿದ್ದೇ ಇರುವುದು. ನೀರು ದೇಹದೊಳಗಿನ ಸೂಕ್ಷ್ಮಾಂ ಗಗಳಿಗೆಲ್ಲಾ ತಂಪುಕೊಟ್ಟು ಅದನ್ನು ಶುದ್ಧಿಪಡಿಸುವ ಬಾಹ್ಯಾಂಗಗಳನ್ನು ಸ್ನಾನಾದಿಗಳಿಂದ ಶುದ್ಧಿಮಾ ವದು ಹೇಗೆ ಅವಶ್ಯವೋ, ಹಾಗೆಯೇ ಜಲಪಾನದಿಂ ಒಳಗಿನ ಅಂಗಗಳನ್ನು ಶುದ್ಧಿಪಡಿಸಬೇಕು. ಮುಖ್ಯವಾ ಅಜೀರ್ಣವೂ ಮಲಬಂಧವೂ ಇದರಲ್ಲಿ ನಿವೃತ್ತಿಯಾಗ ವದು.

ಯಾವ ಕಾರಣದಿಂದಾದರೂ ನಿಮಗೆ ಒಂದು ವೇ ಆಹಾರವು ಸೇರದಿದ್ದರೆ ಧಾರಾಳವಾಗಿ ನೀರನ್ನು ಮಾ ಕುಡಿದುಬಿಡಿರಿ! ಅದು ದೇಹಕ್ಕೆ ಉತ್ಸಾಹವನ್ನ ಕೊಟ್ಟು, ಜೀರ್ಣಾಂಗಗಳು ದುರ್ಬಲವಾಗಿದ್ದರೂ, ಜಠ ದಲ್ಲಿ ಏನಾದರೂ ವ್ಯಾಧಿಯಿದ್ದರೂ, ಮಲವು ಬಂಧಿ ದ್ದರೂ, ಬಿಸಿಬಿಸಿಯಾಗಿ ಒಂದೆರಡು ಬಾರಿ ನೀರನ್ನ ಕುಡಿದು, ಆಮೇಲೆ ಸ್ವಲ್ಪಹೊತ್ತಿಗೆ ಮತ್ತೊಮ ಸುಖೋಷ್ಣವಾದ ನೀರನ್ನು ಒಂದೆರಡು ಬಟ್ಟಲಿನಷ್ಟು ಕುಡಿಯಿರಿ

ಮದ್ರಾಸ್ ಗೌರ್ನಮೆಂಟ್ ಓರಿಯಂಟಲ್ ಮ್ಯಾ
ಸ್ಕ್ರಿಪ್ಟ್ಸ್ ಲೈಬ್ರರಿಯಲ್ಲಿ ದೊರೆಯತಕ್ಕ ವೀರಶೈವಮ
ತತ್ವಗಳನ್ನೂ ಹಾಗೂ ತದನುಸಾರಿಗಳಾದ
ಶೈವತತ್ವಗಳನ್ನೂ ಪ್ರತಿಪಾದಿಸುವ

ಪ್ರಾಚೀನಗ್ರಂಥಗಳ ಲಿಸ್ಟು.

(ಹಿಂದಿನಿಂದ ಮುಂದೆ ಸಾಗಿದುದು)

65. ಚತುರ್ವೇದ ತಾತ್ಪರ್ಯಸಂಗ್ರಹ (ಸವ್ಯಾಖ್ಯಾನ) (ಹರದತ್ತಾಚಾರ್ಯಕೃತ) ನಂ 5068
66 ನಂದೀಶ್ವರ ಕಾರಿಕಾವ್ಯಾಖ್ಯಾ, ತತ್ವವಿಮರ್ಶಿನೀ ಉಪಮನ್ಯು ಶಿವಾಚಾರ್ಯಕೃತ ನಂ 5080
67 ನ್ಯಾಯಸಾರ (ಶೈವವೇದಾಂತ) ಭಾವಜ್ಞ ಶಿವಾಚಾರ್ಯಕೃತ 5036
68 ಭಾರತಸಾರಸಂಗ್ರಹ (ಶಿವಾಧಿಕ್ಯ) ಅಪ್ಪಯ್ಯ ದೀಕ್ಷಿತಾಚಾರ್ಯಕೃತ 5096
69. ಭೂತಸೃಷ್ಟಿ ನಂ 5097
70 ರತ್ನತ್ರಯ. ಪರೀಕ್ಷಾ (ಅಪ್ಪಯ್ಯದೀಕ್ಷಿತಾಚಾರ್ಯ ಕೃತ) ನಂ 5098
71. ರಾಮಾಯಣ ತಾತ್ಪರ್ಯನಿರ್ಣಯಃ (ಶಿವಾಧಿಕ್ಯ) ಅಪ್ಪಯ್ಯದೀಕ್ಷಿತಾಚಾರ್ಯಕೃತ ನಂ 5099
72. ವಿಶೇಷಾರ್ಥಪ್ರಕಾಶಿಕಾ ನಂ 5100
73 ವೀರಶೈವಸಿದ್ಧಾಂತ (17 ನಿರ್ಣಯ) ಶಿವಯೋಗೀಂದ್ರಕೃತ ನಂ 5103
74. ಶಿಖರಿಣೀಮಾಲಾ ಶಿವತತ್ವವಿವೇಕ ಸಹಿತಾ (ಅಪ್ಪಯ್ಯದೀಕ್ಷಿತಕೃತ) ನಂ 5106
75 ಶಿವಜ್ಞಾನಸಾರಾವಳಿ (ಸೋಸಲೆವೀರಣಾರಾಧ್ಯ ಕೃತ) ನಂ 5107
76 ಶಿವಜ್ಞಾನ ದೀಪಿಕಾ (ಆದಿನಾಥ ಮಹಾಯೋಗಿಕೃತ ನಂ 5108
77. ಶಿವಾದ್ವೈತ (184 ಪುಟಗಳು) 1 ಪಟಲ 5113
78 ಶಿವಾದ್ವೈತ ಪ್ರಕಾಶಿಕಾ (281 ಪುಟಗಳು) (ಕರ್ನಾಟಕ ಟೀಕಾ) ನಂ 5114
79. ಶಿವೋತ್ಕರ್ಷ ಪ್ರತಿಪಾದಕ ಗ್ರಂಥ (ಉಪನಿಷತ್ಸಾರ) ನಂ 5115
80. ಅಣವೋಪಾಯ ಸೂತ್ರಾಣಿ ನಂ. 2356 (C)
81 ಬ್ರಹ್ಮಸೂತ್ರ ವಿವರಣ (ಶಿವದರ್ಶನ ಬ್ರಹ್ಮವಿದ್ಯಾಧ್ವರಿಕೃತ) ನಂ 24
82 ಚರಲಿಂಗಪ್ರತಿಷ್ಠಾ ನಂ 2739 (A)
83 ಲೀಲಾವತಿ (ಶೈವಾಗಮ) ನಂ 225
84. ಸಿದ್ಧಾಂತಸಾರಾವಳಿ (ತ್ರಿಲೋಚನ ಶಿವಾಚಾರ್ಯಕೃತ ನಂ 208
85 ಶಿವಧರ್ಮ 2442 (A) ಮತ್ತು 2322 (B)
86 ಶಿವಧರ್ಮೋತ್ತರಖಂಡ ನಂ. 2442 (B)
87. ಶಿವಲಿಂಗಪೂಜಾಮಹಿಮಾ ನಂ, 2574 (B)
88. ಶಿವಲಿಂಗಸೂರ್ಯೋದಯ (ಮಲ್ಲಣಾರಾಧ್ಯಕೃತ ವೀರಶೈವಧರ್ಮಪ್ರತಿಪಾದಕ ನಾಟಕ 22

89	ವೈದಿಕಾಚಾರನಿರ್ಣಯ (ಸಚ್ಚಿದಾನಂದಸ್ವಾಮಿ ಕೃತ)	ನಂ. 2220
90	ಕಾಂಡದರ್ಪಣ (ಮಲ್ಲೇಶ್ವರಾರಾಧ್ಯ ಕೃತ)	ನಂ. 2107
91	ವೇದಾಂತಸಾರಸಂಗ್ರಹ (ನಾಗಯಾರಾಧ್ಯ ಕೃತ)	ನಂ. 2232
9	ವೇದಸಾರ ಶಿವಸಹಸ್ರನಾಮವ್ಯಾಖ್ಯಾ (ಪರಮಶಿವೇಂದ್ರಸರಸ್ವತಿಕೃತ)	ನಂ 2607 (A)
93	ಪರಮಶಿವಾದ್ವೈತ ಕಲ್ಪಲತಿಕಾ	ನಂ 2943 (D)
94	ಶೈವಸುಧಾಕರ (ಸದಾನಂದಸ್ವಾಮಿ ಕೃತ)	3822
95	ಶಿವತತ್ವಸಾರಸಂಗ್ರಹ ಚಂದ್ರಿಕಾ	ನಂ 3664
96	ವಾತುಲ ತಂತ್ರ	ನಂ 3875
97	ವೇದಾರ್ಥ ತತ್ವನಿರ್ಣಯ	ನಂ 3903
98	ಶಿವತತ್ವಸಾರ ಸಂಗ್ರಹ ಚಂದ್ರಿಕಾ (ಗುರುಮೂರ್ತಿ ಕೃತ)	ನಂ. 3664
99	ಲಿಂಗಧಾರಣ ಚಂದ್ರಿಕಾ (ನಂದಿಕೇಶ್ವರಶಿವಾಚಾರ್ಯ ಕೃತ)	ನಂ 3433
100	ಪ್ರಭಾಕರವಿಜಯ (ಪೂರ್ವಮೀಮಾಂಸಾ) (ನಂದಿಕೇಶ್ವರ ಶಿವಾಚಾರ್ಯಕೃತ)	ನಂ 3229

(ಸಶೇಷ)

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಈ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣ ಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಮುಕ್ತಾಭಸ್ಮ	೧	೪೦—೦—೦
ಅಭ್ರಕಭಸ್ಮ	೧	೩—೦—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ, ಗಢವಾಲ್ ಯು.ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ॥ ಶಂ॥ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ- ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ** ವಿ ಪಿ ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ **ಬೆಲೆ ೮ ರೂಪಾಯಿ.** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವುದು. ವಿ ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಎಂಭತ್ತು ಅಮ್ಮು ತಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಸದ್ಯಃ ೬ ಜಾಗೋತಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀ ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—೫ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಡಾಕ್ಟರ್ ಜಿ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ನಶ್ಯದ ಪುಡಿಯು ಶ್ರೇಷ್ಠವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ ಅರೆ ತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ ಪಿ ೬ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[27] ಪೋ ಬಾ ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ (೨ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರದೀಪ (೨ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸುಪ್ರಭಾತ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯ ಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವದರ್ಪಣ	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯ ಶತಕ	೨ ಆಣೆ
ಪಂಚಾಚಾರ ಪ್ರಕಾಶಿಕ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು(ತೆಲುಗು)	೯ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ
ಶಿವಸೂತ್ರಸಿದ್ಧಾಂತದರ್ಪಣ	೧ ಆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	[illegible]
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುದು)	೧ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ
A brief life sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji *English*)	12 As
लिंगधारणचन्द्रिका (संस्कृत)	२ रु
वीरशैवरत्न (मराठी)	१ रु
महानारायणोपनिषत् (वीरशैवभाष्य–संस्कृत)	२ रु
पुरुषसूक्तम् (वीरशैवप्राचीनभाष्योपेतम्)	४ आ
नन्दिकेश्वरकारिका (संस्कृत)	[illegible] आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೫ನೇ ಡಿಸೆಂಬರ್ ೧೯೪೧ [ಸಂಚಿಕೆ ೩೩

ಅಮೆರಿಕೆಯ ಮೇಲೆ ಜರ್ಮನಿಯ ಯುದ್ಧಘೋಷ

ಹರ್ ಹಿಟ್ಲರರ ಭಾಷಣ

ಹರ್ ಹಿಟ್ಲರರು ೧೧ನೆಯ ತಾರೀಖಿನ ದಿವಸ ಅಮೆರಿಕೆಯ ಮೇಲೆ ಯುದ್ಧಘೋಷ ಮಾಡಿದರು

ಹರ್ ಹಿಟ್ಲರರು ಅಮೆರಿಕೆಯ ಮೇಲೆ ಯುದ್ಧವನ್ನು ಘೋಷಿಸುವುದಕ್ಕಿಂತ ಮುಂಚೆ ಸ್ವಲ್ಪ ಹೊತ್ತು ಮಾತನಾಡಿದರು ಅವರ ಭಾಷಣದ ಮೊದಲನೆಯ ಭಾಗವೆಲ್ಲವೂ ಪ್ರೆಸಿಡೆಂಟ್ ರೂಸ್‌ವೆಲ್ಟರ ಮೇಲಿನ ಅಪಾದನೆಗಳನ್ನೊಳಗೊಂಡಿದ್ದಿತು ತಮಗೂ, ಪ್ರೆ॥ ರೂಸ್‌ವೆಲ್ಟರಿಗೂ ಇರುವ ವ್ಯತ್ಯಾಸಗಳನ್ನು ವಿವರಿಸಿ, "ಪ್ರೆಸಿಡೆಂಟ್ ರೂಸ್‌ವೆಲ್ಟ್‌ರವರು ಶ್ರೀಮಂತರ ಪುತ್ರರಾದರೆ ನಾನು ಭೀಕರ ಬಡತನದ ನೋವನ್ನನುಭವಿಸಿ ಜನ್ಮ ತಾಳಿದವನು ಎಂದು ಹೇಳಿದರು

ಈ ಯುದ್ಧಕ್ಕೆ ಪ್ರೆ॥ ರೂಸ್‌ವೆಲ್ಟರೇ ಮುಖ್ಯ ಕಾರಣರು 'ಪೋಲೆಂಡಿನೊಂದಿಗೆ ವ್ಯವಹಾರ ಅಸಾಧ್ಯವೆಂಬುದಾಗಿ ಆತಂಕಗಳನ್ನು ತಂದು ಪ್ರಪಂಚದ ಈ ಮಹಾಸಂಗ್ರಾಮಕ್ಕೆ ತಳಹದಿ ಹಾಕಿಕೊಟ್ಟವರ ಯಾರು ? ಅವರೇ ಅಲ್ಲವೇ ? ೧೯೪೩ ರಲ್ಲಿ ಜರ್ಮನಿಯನ್ನು ಆಕ್ರಮಿಸುವುದಾಗಿ ಅಮೆರಿಕಾದವರು ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡಿದ್ದರು ಇವನ್ನು ನಾನು ರುಜುವಾತು ಮಾಡಿಕೊಡಬಲ್ಲೆ ಅದನೆ ೧೯೩೭ ರಿಂದಲೇ ಪ್ರೆ॥ ರೂಸ್‌ವೆಲ್ಟ್‌ರವರು ಜರ್ಮನಿಯ ಮೇಲೆ ವಿರೋಧವನ್ನಾರಂಭಿಸಿದರು ಆ ವರ್ಷದ ಅಕ್ಟೋಬರ್ ೫ ನೆಯ ತಾರೀಖಿನ ದಿವಸ ಪ್ರೆಸಿಡೆಂಟರು ಜರ್ಮನಿಯ ಮೇಲೆ ನಿಂದನೀಯವಾದ ಭಾಷಣ ಮಾಡಿ ನಮ್ಮನ್ನು ಉದ್ರೇಕಗೊಳಿಸಿದರು ಆದರೆ ಈಗ ಜಪಾನ್ ದೇಶವು ಅಮೆರಿಕೆಯ ಮೇಲೆ ಯುದ್ಧ ಹೂಡಿದೆ ಇದು ಘನತೆಗೇರಿದವರೆಲ್ಲರಿಗೂ ತೃಪ್ತಿಯನ್ನುಂಟುಮಾಡುವದು

ಅನಂತರ ರಷ್ಯಾ ಯುದ್ಧವನ್ನು ಪ್ರಸ್ತಾಪಿಸಿ ೧೯೪೧ರಲ್ಲಿ ತಮ್ಮ ಮುಂದೋಟವನ್ನು ಯಾರೂ ತಡೆಯಲಾರರೆಂದೂ ೩೮ ಲಕ್ಷ ರಷ್ಯಾ ಸೈನಿಕರು ಕೈಸೆರೆಯಾಗಿದ್ದಾರೆಂದೂ ಇದೇ ಅವಧಿಯಲ್ಲಿ ಜರ್ಮನಿಯ ೬೨೦೦೦೦ ಜನರು ನಷ್ಟವಾಗಿದ್ದಾರೆಂದೂ ಹೇಳಿದರು

ಅವರು ಭಾಷಣವನ್ನು ಮುಂದುವರಿಸುತ್ತಾ— ನಾವು ನಮಗಾಗಿ ಯುದ್ಧಮಾಡುವುದಿಲ್ಲ ಅವರೆ ಯೂರೋಪ್ ಖಂಡದ ಕ್ಷೇಮಕ್ಕಾಗಿ ಹೋರಾಡುತ್ತಿದ್ದೇವೆ ಈಗಿನ ಸ್ಥಿತಿಯ ಪ್ರಕಾರ ಸ್ಪೇಯ್ನ ಗಡಿಯಿಂದ ನಾರ್ವೆ ಸಮುದ್ರದವರೆಗೂ ನಮಗೆ ಸಂಚಾರದ ಅನುಕೂಲಗಳಿವೆ ಮುಂದಿನ ವರ್ಷಗಳಲ್ಲಿ ನಾವು ಮಾಡಬೇಕಾದ ಕೆಲಸಗಳು ನಿರ್ದಿಷ್ಟವಾಗಿವೆ ದೇವರ ದಯೆಯಿಂದ ಅವನ್ನು ನೆರವೇರಿಸುವೆವು ನಾವು ರಷ್ಯಾ ಮೇಲೆ ಯುದ್ಧ ಮಾಡದೆ ಸುಮ್ಮನಿದ್ದಿದ್ದರೆ ಪ್ರಳಯಾಗ್ನಿಯು ಯುರೋಪೆಲ್ಲವನ್ನೂ ಆವರಿಸಿ ಧ್ವಂಸ ಮಾಡಿಬಿಡುತ್ತಿತ್ತು ನಾವು ಸಕಾಲದಲ್ಲಿ ಜರ್ಮನಿಯ ಮುಖಂಡತ್ವವನ್ನು ವಹಿಸಿದ್ದರಿಂದ ಜರ್ಮನಿಯ ಚರಿತ್ರೆಯೇ ಏಕೆ, ಇಡೀ ಪ್ರಪಂಚದ ಚರಿತ್ರೆಯೇ ಮಾರ್ಪಟ್ಟಿತು ೧೯೪೧ ರಲ್ಲಿ ರಷ್ಯನರು ಮಧ್ಯ ಯೂರೋಪಿನ ಮೇಲೆ ದಂಡೆತ್ತಿ ಬರಲು ಹೊಂಚು ಹಾಕುತ್ತಿದ್ದರು ದಕ್ಷಿಣ ಅಮೆರಿಕಾದ ಮೇಲೆ ಆಸೆಯಿಲ್ಲದೆ ಇರುವವರು ನಾವೊಬ್ಬರೇ' ಈ ಯುದ್ಧದಲ್ಲಿ ಜರ್ಮನರು ೧೬೨೩೧೪ ಜನ ಮಡಿದಿದ್ದಾರೆ ೩೩೩೩೪ ಜನ ಪತ್ತೆಯಿಲ್ಲದೆ ಹೋಗಿದ್ದಾರೆ ಮತ್ತು ೫೭೧೭೬೭ ಜನರಿಗೆ ಗಾಯಗಳಾಗಿವೆ ಎಂದು ಹೇಳಿದರು

ಅನಂತರ ರೂಸ್‌ವೆಲ್ಟ್‌ರವರ ವಿಚಾರವನ್ನೆತ್ತಿ— ನನಗೂ ರೂಸ್‌ವೆಲ್ಟ್‌ರವರಿಗೂ ಭಾವನೆಗಳಲ್ಲಿ ಬಹು ಅಂತರವಿದೆ ನಾನು ಕೋಟ್ಯಂತರ ಪ್ರಜೆಗಳೊಡನೆ ವಿಶೇಷ ಅನುಭವಗಳನ್ನು ಹೊಂದಿದ್ದರೆ ರೂಸ್‌ವೆಲ್ಟ್‌ರವರು ಶ್ರೀಮಂತ ವರ್ಗದವರ ಸಾವಿರಾರು ಮಂದಿಯನ್ನು ಮಾತ್ರ ನಂಬಿಕೊಂಡಿದ್ದಾರೆ ನನಗೂ ಅವರಿಗೂ ಇರುವುದು ಒಂದೇ ಒಂದು ಸ್ಥಿತಿ ಅವರೂ ನಾವೂ ಇಬ್ಬರೂ ದೇಶದ ಆಡಳಿತದ ಮುಖ್ಯಸ್ಥರಾಗಿದ್ದೇವೆ ರೂಸ್‌ವೆಲ್ಟ್‌ರವರ ಆರ್ಥಿಕ ನೀತಿಯಿಂದ ಪ್ರಪಂಚವು [illegible] ಪಾಲಾಗುತ್ತಿತ್ತು ರೂಸ್‌ವೆಲ್ಟ್‌ರವರು ಯೂರೋಪಿನ ವಿದ್ಯಮಾನಗಳಿಗೆ ಕೈಹಾಕಿದ್ದು ತಪ್ಪು ಜರ್ಮನಿಯು ಅಮೆರಿಕಾ ವಿದ್ಯಮಾನಗಳಲ್ಲಿ ಕೈಹಾಕಿದ್ದು ತಪ್ಪೆನ್ನುವದಾಗಿದ್ದರೆ ಆಗ ರೂಸ್‌ವೆಲ್ಟ್‌ರವರ ವರ್ತನವೂ ಖಂಡನೀಯವೇ ಸರಿ '

ಅನಂತರ ಡಿಸೆಂಬರ್ ಮೊದಲನೇ ತಾರೀಖಿನವರೆಗೆ ರಷ್ಯಾ ದೇಶದವರ ನಷ್ಟವನ್ನು ವಿವರಿಸಿದರು ಈ ಅವಧಿಯಲ್ಲಿ ೩೮೦೬೮೬೫ ರಷ್ಯಾ ಖೈದಿಗಳು ಕೈವಶರಾದರು ೧೭೩೨೨ ವಿಮಾನಗಳ ಹಾಳಾದವು ಕಡೆಯಲ್ಲಿ ಜಪಾನ್ ಜರ್ಮನಿ ಇಟಲಿ ಮಿಲಿಟರಿ ಒಪ್ಪಂದಕ್ಕೆ ಸಹಿಯಾಯಿತೆಂದು ಘೋಷಿಸಿದರು

ಜರ್ಮನಿ ಇಟಲಿಗಳ ಮೇಲೆ ಅಮೇರಿಕೆಯ ಯುದ್ಧ ಘೋಷ

ಜರ್ಮನಿ ಮತ್ತು ಇಟಲಿಗಳ ಮೇಲೆ ಅಮೇರಿಕಾ ದೇಶವು ಯುದ್ಧ ಹೂಡಿದೆ ಎಂಬುದಾಗಿ ಪ್ರೆಸಿಡೆಂಟ್ ರೂಸ್‌ವೆಲ್ಟ್‌ರವರು ಉದ್ಘೋಷಿಸಿದರು ಪ್ರೆಸಿಡೆಂಟ್ ರೂಸ್‌ವೆಲ್ಟ್‌ರವರ ಸಂದೇಶವು ಈ ರೀತಿ ಇದೆ "ಡಿಸೆಂಬರ್ 11ನೇ ತಾರೀಖಿನ ದಿವಸ ಬೆಳಗ್ಗೆ ಜರ್ಮನ್ ಸರ್ಕಾರವು ಪ್ರಪಂಚ ಸ್ವಾಧೀನದ ದುರುದ್ದೇಶದಿಂದ ಪ್ರೇರಿತವಾಗಿ ಅಮೆರಿಕೆಯಮೇಲೆ ಯುದ್ಧವನ್ನು ಘೋಷಿಸಿತು ನಾವು ಅನೇಕ ದಿವಸಗಳಿಂದ ಏನನ್ನು ನಿರೀಕ್ಷಿಸಿದ್ದೆವೋ ಅದು ನಡೆದು ಹೋಗಿದೆ ಯಾವ ಸೈನಿಕರು ಪ್ರಪಂಚವನ್ನೇ ತಮ್ಮ ಅಧೀನಪಡಿಸಿಕೊಳ್ಳಬೇಕೆಂದು ಹವಣಿಸುವರೋ ಅವರೀಗ ಪಶ್ಚಿಮಾರ್ಧಗೋಳಕ್ಕೆ ಸಮೀಪಿಸುತ್ತಿದ್ದಾರೆ ಮಾನವರ ಜೀವನದ ಮೇಲೂ, ನಾಗರೀಕತೆಯ ಮೇಲೂ, ಸ್ವಾತಂತ್ರ್ಯದ ಮೇಲೂ ಇಂತಹ ಪ್ರತೀಕಾರ ಹಿಂದೆಂದೂ ನಡೆದಿರಲಿಲ್ಲ ಸಾವಕಾಶ ಮಾಡಿದರೆ ಅಪಾಯ ಹೆಚ್ಚಾಗಬಹುದು ಯಾವ್ಯಾವ ರಾಷ್ಟ್ರಗಳು ಸ್ವಾತಂತ್ರ್ಯ ಪ್ರೀತಿಯಿಂದ ತುಂಬಿವೆಯೋ ಆ ದೇಶಗಳೆಲ್ಲವೂ ಈಗ ಒಟ್ಟುಗೂಡಿ ಈ ರಾಕ್ಷಸೀ ಕೃತ್ಯವನ್ನು ತಡೆಯಬೇಕು ಈ ಕಾರಣಗಳಿಂದ ಜರ್ಮನಿ ಮತ್ತು ಇಟಲಿಗಳ ಮೇಲೆ ಯುದ್ಧ ಹೂಡಬೇಕೆಂದು ನಾನು ಕಾಂಗ್ರೆಸ್ಸನ್ನು ಕೇಳಿಕೊಳ್ಳುತ್ತೇನೆ ಎಂದು ಹೇಳಿದರು

ಪೆಸಿಫಿಕ್ ಯುದ್ಧದಲ್ಲಿ ಭಾರತೀಯರ ಸಲಹೆ ಕೇಳಬೇಕು

ಪೆಸಿಫಿಕ್ ಸಾಗರದಲ್ಲಿ ನಡೆಯಲಿರುವ ಜಪಾನ್ ಯುದ್ಧದಲ್ಲಿ ಭಾರತೀಯರ ಪರವಾಗಿ ಯುದ್ಧಘೋಷಣೆ ಮಾಡುವ ಮೊದಲು ಭಾರತದ ಪ್ರಮುಖ ರಾಜಕೀಯ ಪಕ್ಷಗಳ ನಾಯಕರ ಸಲಹೆಗಳನ್ನು ಪಡೆಯುವಂತೆ ವೈಸರಾಯರಿಗೆ ಸೂಚಿಸಬೇಕೆಂದು ಪಾರ್ಲಿಮೆಂಟ್ ಸದಸ್ಯರು ಮಿ॥ ಅಮೆರಿಯವರನ್ನು ಒತ್ತಾಯಪಡಿಸಲಿರುವರಂತೆ! ದೂರದ ಪೂರ್ವದಲ್ಲಿ ಆರಂಭವಾಗಿರುವ ಯುದ್ಧದ ಭಾರವನ್ನು ಬಹುಮಟ್ಟಿಗೆ ಭರತಖಂಡವೇ ಹೊರಬೇಕಾಗಿದೆಯೆಂದೂ ಅದಕ್ಕಾಗಿ ಅದರ ಸಲಹೆಯನ್ನು ಈಗ ಪಡೆಯುವುದು ನ್ಯಾಯವೆಂದೂ ಹೇಳುತ್ತಿದ್ದಾರೆ ಈಗ ಸಂಭವಿಸಿರುವ ಪೆಸಿಫಿಕ್ ವಿಚಾರದಲ್ಲಿ ಕಾಂಗ್ರೆಸ್ ಏನುಮಾಡಲಿದೆ ? ನೆಹರು ಮುಂತಾದವರ ವರ್ತನವೇನು ಎಂಬ ಪ್ರಶ್ನೆಯು ಲಂಡನ್ನಿನ ಭಾರತೀಯ ಕ್ಷೇತ್ರಗಳಲ್ಲಿ ಕೇಳಬರುತ್ತಿದೆ ಭರತಖಂಡದ ಗಡಿಗೆ ಸಂಗ್ರಾಮವು ವ್ಯಾಪಿಸುವುದು ಖಂಡಿತವೆಂದು ನಂಬಲಾಗಿರುವದರಿಂದ ಭಾರತಶಾಸನಸಭೆಯ ಒಪ್ಪಿಗೆ ಪಡೆಯದೆ ವೈಸರಾಯರು ಭರತಖಂಡದ ಪರವಾಗಿ ಜಪಾನಿನ ಮೇಲೆ ಯುದ್ಧಘೋಷಣೆ ಮಾಡುವುದಿಲ್ಲವೆಂದು ಇಂಗ್ಲೆಂಡಿನ ಕೂಲಿಗಾರರೂ ಲಿಬರಲ್‌ಗಳೂ ನಂಬಿರುವರಂತೆ !

|| ಶ್ರೀಗುರುಪ್ರಸನ್ನ ||

ದುಡ್ಡಿನ ಮಹಿಮೆ

ಲೇ—ಶ್ರೀ [illegible]

ನಮ್ಮ ಎಲ್ಲರಿಗೂ ಗೊತ್ತಿದ್ದಂತೆ ಈ ಜಗತ್ತಿನಲ್ಲಿ ಸರ್ವ ಪ್ರಾಣಿಗಳ ಜೀವನಕ್ಕೆ ಆಹಾರವು ಹೇಗೆ ಮುಖ್ಯವೋ ಹಾಗೆಯೇ ಇಂದಿನ ಜಗತ್ತಿನಲ್ಲಿರತಕ್ಕ ಮಾನವ ಪ್ರಾಣಿಗೆ ದುಡ್ಡು ಮುಖ್ಯವಾಗಿದೆ ದುಡ್ಡಿನಿಂದ ಬೇಕಾದ ವಸ್ತುಗಳನ್ನು ಕೊಂಡುಕೊಳ್ಳಬಹುದು ಹೊಲವನ್ನು ಹಿಡಿಯಬಹುದು ಅಲಂಕಾರಕ್ಕಾಗಿ ಬೇಕಾದ ವಸ್ತುಗಳನ್ನು ಮಾಡಿಸಬಹುದು ಜರತಾರಿ ರೇಶ್ಮಿ ವಸ್ತ್ರಗಳನ್ನು ತೆಗೆದುಕೊಳ್ಳಬಹುದು ಮನೆ ಮಠಗಳನ್ನು ಕಟ್ಟಿಸಬಹುದು ವಿದ್ಯೆಯನ್ನು ಕಲಿಯಬಹುದು ಒಟ್ಟಿನಮೇಲೆ ದುಡ್ಡಿನಿಂದಲೇ ಮನುಷ್ಯನ ಎಲ್ಲ ಅಪೇಕ್ಷೆಗಳು ಪೂರ್ತಿಗೊಳ್ಳುತ್ತವೆ ಇನ್ನು ಕೆಲವರು ದುಡ್ಡು ಲೌಕಿಕರಿಗೆ ಬೇಕು ಸ್ವಾಮಿಗಳಿಗೆ ಏತಕ್ಕೆ ಬೇಕೆಂದು ಕೇಳುವರು ದುಡ್ಡು ಲೌಕಿಕಕ್ಕೂ ಪಾರಮಾರ್ಥಿಕಕ್ಕೂ ಅವಶ್ಯವಾಗಿಬೇಕು ಯಜ್ಞಯಾಗಾದಿಗಳನ್ನು ಮಾಡಬೇಕಾದರೆ, ಶಿವಪೂಜಾದಿಗಳನ್ನು ಮಾಡಬೇಕಾದರೆ, ಪಾಠಶಾಲೆ, ದಾಸೋಹ ಕ್ಷೇತ್ರ ಯಾತ್ರೆ ಇವೇ ಮೊದಲಾದ ಸತ್ಕರ್ಮಗಳನ್ನು ಮಾಡಬೇಕಾದರೆ, ದುಡ್ಡು ಬೇಕಲ್ಲವೆ? ದುಡ್ಡು ಇಲ್ಲದಿದ್ದರೆ ಯಾರಿಗೂ ಯಾವ ಕೆಲಸವನ್ನು ಮಾಡಲಿಕ್ಕೂ ಸಾಧ್ಯವಿಲ್ಲವು

ದ್ರವ್ಯಸಂಗ್ರಹವು ಭೂಮಿಯ ಉತ್ಪನ್ನದಿಂದಾಗಲಿ, ವ್ಯಾಪಾರದಿಂದಾಗಲಿ, ಯಾವುದಾದರೊಂದು ಉದ್ಯೋಗದಿಂದಾಗಲಿ, ಪೂರ್ವಜನ್ಮ ಪುಣ್ಯಪ್ರಭಾವದಿಂದಾಗಲಿ, ಆಗುತ್ತದೆ ಇದರಲ್ಲಿ ಉದ್ಯೋಗವೇ ಮುಖ್ಯ! ಪ್ರತಿಯೊಬ್ಬ ಮನುಷ್ಯನು ತನ್ನ ಶಕ್ತ್ಯನುಸಾರವಾಗಿ, ಯಾವದಾದರೊಂದು ಉದ್ಯೋಗವನ್ನು ಮಾಡಬೇಕು ಲಕ್ಷ್ಮಿಯು ಉದ್ಯೋಗಿಯಾದ ಪುರುಷನನ್ನು ಆಶ್ರಯಿಸುವಳಲ್ಲದೆ, ನಿರುದ್ಯೋಗಿಯನ್ನು ಎಂದೂ ಆಶ್ರಯಿಸಳು “ಉದ್ಯೋಗಿನಂ ಪುರುಷಸಿಂಹ ಮುಪೈತಿ ಲಕ್ಷ್ಮೀಃ” ಎಂಬ ಭರ್ತೃಹರಿಯ ವಾಕ್ಯವು ಇದೇ ಅರ್ಥವನ್ನೇ ಸೂಚಿಸುತ್ತದೆ ಉದ್ಯೋಗದಿಂದ ದ್ರವ್ಯಸಂಪಾದನೆಯಾಗುವದು ಸಹಜವು ಆದರೆ ಹಣವನ್ನು ನ್ಯಾಯಮಾರ್ಗದಿಂದ ಗಳಿಸಬೇಕೇ ಹೊರತು ಅನ್ಯಾಯದಿಂದಾಗಲಿ, ಅತ್ಯಾಚಾರದಿಂದಾಗಲಿ ಎಂದೂ ಸಂಪಾದಿಸಬಾರದು ಹೊಲ ಮಾಡುವವರು ತಮ್ಮ ಹೊಲದಲ್ಲಿ ಎಷ್ಟು ಉತ್ಪನ್ನ ಬರುತ್ತದೆಯೋ, ಅಷ್ಟೇ ತೆಗೆದುಕೊಳ್ಳಬೇಕಲ್ಲದೆ, ಎರಡನೆಯವರ ಹೊಲದೊಳಗಿನ ಮಾಲು ಕದಿಯಬಾರದು ವ್ಯಾಪಾರ ಮಾಡುವವರು ಮಾಲನ್ನು ಸರಿಯಾಗಿ ಕೊಡಬೇಕು ಸರಿಯಾಗಿ ತೆಗೆದುಕೊಳ್ಳಬೇಕಲ್ಲದೆ, ತಮ್ಮದು ಎರಡನೆಯವರಿಗೆ ಕಡಿಮೆಯಾಗಿ ಕೊಟ್ಟು ಎರಡನೆಯವರದನ್ನು ಹೆಚ್ಚಿಗೆ ತೆಗೆದುಕೊಳ್ಳಬಾರದು ನೌಕರಿಮಾಡತಕ್ಕವರು ತಮ್ಮ ಮಾಲಿಕರು ಗೊತ್ತುಮಾಡಿದಷ್ಟೇ ಸಂಬಳವನ್ನು ತೆಗೆದುಕೊಳ್ಳಬೇಕಲ್ಲದೆ, ಎರಡನೆಯವರ ಕಡೆಯಿಂದ ಲಂಚ ತಿನ್ನಬಾರದು ಈಗ ವಿಶೇಷವಾಗಿ ಕಳವು, ಮೋಸ, ಕೊಲೆ, ಅತ್ಯಾಚಾರ ಇವುಗಳಿಂದಲೇ ಸಂಪಾದಿಸುವವರು ಕಾಣುತ್ತಾರೆ ಈ ಮಾತು ನಿಜಲಿಂಗ ಶತಕದಲ್ಲಿಯೂ ಉಕ್ತವಾಗಿದೆ

ಒಡವೆಯಾಸೆಗೆ ಬಾಲಕರ ಕೊರಳ ಛೇದಿಸುವರು | ಬಡಜೆ
ನವತಿಯ ರಿಪುವ ಭಾವಿಯೊಳು ಕೆಡಹುವರು | ಕಡೆಗೆ ಧನಬರ
ಲೆಂದು ಗರ್ಭಿಣಿಯ ಕೊಂಡೊಯ್ದು ಕಡಿ ಕಡಿದು ಕೊಲ್ಲು
ತಿಹರು | ಕಡುವಿಷಮಕ್ಕೆ ಕುಲಮಕ್ಕಳನು ಕೊಲ್ಲುತಿಹರು |
ಕೊಡುವ ಧರ್ಮವನು ಮಾಣಿಸುವರು ನಿಷ್ಠುರುಣಿಗಳ ನುಡಿಯ
ಕೇಳುವವರವೇ ನಿಜಲಿಂಗ ಭವಭಂಗಕರಣಾನವರದ ದೇವಾ ||

ಈ ಪ್ರಕಾರ ನೀಚರು ಧನದ ಆಶೆಗೆ ಮಾಡುವ ದುಷ್ಕೃತಿಯನ್ನು ಎಷ್ಟು ಧಿಕ್ಕರಿಸಿದರೂ ತೀರದು ಸದ್ಯಃ ಜಗತ್ತಿನಲ್ಲಿ ಇಂಥಹ ಕೃತಿಗಳು ಎಷ್ಟೋ ಕಡೆಗೆ ನಡೆಯುತ್ತವೆಂಬದನ್ನು ವೃತ್ತ ಪತ್ರಿಕೆಗಳಲ್ಲಿ ನೋಡುತ್ತೇವೆ ನ್ಯಾಯದಿಂದ ಗಳಿಸಿದ್ದೇ ಸ್ಥಿರವಾಗಿ ಉಳಿಯುವದಲ್ಲದೆ, ಅನ್ಯಾಯದಿಂದ ಗಳಿಸಿದುದು ಎಂದೂ ಉಳಿಯುವದಿಲ್ಲ. “ಪರರನ್ನು ನೋಯಿಸಿದಂಥ ದ್ರವ್ಯವು ಉಳಿಯದು. ಮತ್ತು ಘಾತಕತನದಿಂದ ಪರರರ್ಥಮಂ ಸೆಳೆವಂಗೆ ಕಡೆಯಲ್ಲಿ ನರಕವೇ ಪ್ರಾಪ್ತಿ” ಎಂದು ನೀತಿಕಾರರು ಬೋಧಿಸಿದ್ದಾರೆ ಅನ್ಯಾಯದಿಂದ ಗಳಿಸಿದ್ದು ಅನ್ಯಾಯಕ್ಕೆ ಖರ್ಚಾಗಿಹೋಗುತ್ತದೆ ಇದೇ ವಿಷಯವನ್ನು

God sees the truth but waits Ill got ill spent

ಇತ್ಯಾದಿ ಇಂಗ್ಲೀಷ್ ವಾಕ್ಯಗಳು ಸಹ ಉಪದೇಶಿಸುತ್ತವೆ. ‘ಪರದ್ರವ್ಯಾಣಿ ಲೋಷ್ಟವತ್’ ಎರಡನೆಯವರ ದ್ರವ್ಯವನ್ನು ಮಣ್ಣು ಹೆಂಟೆಗೆ ಸಮಾನವಾಗಿ ತಿಳಿಯಬೇಕೆಂದು ಧರ್ಮಶಾಸ್ತ್ರಗಳು ಘಂಟಾಘೋಷವಾಗಿ ಸಾರುತ್ತವೆ ಹೀಗಿದ್ದರೂ ನೀಚರು ಈ ನಾದವನ್ನು ಕಿವಿಯೊಳಗೆ ಹಾಕಿಕೊಳ್ಳದೆ ದುಡ್ಡನ್ನು ಗಳಿಸಬೇಕೆಂಬ ಮೋಹಪಾಶಕ್ಕೆ ಒಳಗಾಗಿ, ಮಾಡಬಾರದ ನೀಚಕೃತ್ಯಗಳನ್ನು ಮಾಡುತ್ತಾರೆ ಕಟುಗರು ಪ್ರಾಣಿಗಳನ್ನು ಮಾತ್ರ ಕೊಲ್ಲುತ್ತಾರೆ ನೀಚರು ಜ್ಞಾನವುಳ್ಳಮನುಷ್ಯರನ್ನು ಕೊಲ್ಲುತ್ತಾರೆ ಅಂದಬಳಿಕ ಆ ಕಟುಗರಿಗಿಂತಲೂ, ಈ ನೀಚರು ಮಹಾ ಕಟುಗರೆಂದು ಹೇಳಲಿಕ್ಕೆ ಅಡ್ಡಿಯಿಲ್ಲ ಕಳವುಮಾಡುವದೊಂದು ಮಹಾಪಾಪ, ಪ್ರಾಣಹಿಂಸೆಯನ್ನು ಮಾಡುವದು ಎರಡನೆಯ ಮಹಾಪಾಪ, ಹೀಗೆ ವಿಶೇಷ ಮಹಾಪಾಪದಿಂದ ಆಯುಷ್ಯವು ಕ್ಷೀಣವಾಗುವದು. ಇವರಿಗೆ ಪರಮಾತ್ಮನು ಕುಪಿತನಾಗಿ, ಘೋರವಾದ ನರಕಯಾತನೆಯನ್ನು ಕೊಡುವನು ಇವರು ಪರದಲ್ಲಿ ಸದ್ಗತಿಯನ್ನು ಹೊಂದಲಾರರು ಇಹದಲ್ಲಿ ರಾಜರು ಕುಪಿತರಾಗಿ ದಂಡಶಿಕ್ಷೆಯನ್ನು ಮಾಡುವರು ತಾವುಗಳಿಸಿದ್ದೇ ತಮಗೆ ಆಗುವದಿಲ್ಲ ಅನ್ನುವಾಗ, ಅವನ ಕೊಂದು ಇವನ ಕೊಂದು ಗಳಿಸಿದ್ದು, ಹೇಗೆ ಉಳಿಯುವದು? ಅವರು ಮುಂಚೆ ಸತ್ತರೇನು? ತಾವೂ ಅವರ ಹಿಂದೆಯೇ ಸಾಯುತ್ತೇನೆ ಎಂದು ಲಕ್ಷ್ಯದಲ್ಲಿಡತಕ್ಕದ್ದು ಅನ್ಯಾಯದಿಂದ ಗಳಿಸಿ ಹೋಳಿಗೆ ತುಪ್ಪ ಉಣ್ಣುವುದಕ್ಕಿಂತಲೂ, ನ್ಯಾಯಮಾರ್ಗದಿಂದ ಗಳಿಸಿ ಚಟ್ನಿ ಭಕ್ರಿ ಊಟ ಮಾಡುವದು ಲೇಸು

ಅವಿಶ್ವಾಸನಿಧಾನಾಯ ಮಹಾಪಾತಕಹೇತವೇ |
ಪಿತೃಪುತ್ರ ವಿರುದ್ಧಾಯ ಹಿರಣ್ಯಾಯ ನಮೋ ನಮಃ || ೩ ||

ಹಣವೆನ್ನುವದು ನಂಬುಗೆ ಇದ್ದವರಲ್ಲಿ ಅಪನಂಬುಗೆಯನ್ನು ಹುಟ್ಟಿಸುವದು, ಮಹಾಪಾಪಕ್ಕೆ ಕಾರಣವಾಗಿರುವದು, ತಂದೆ ಮಕ್ಕಳಲ್ಲಿ ವೈರತ್ವವನ್ನು ಹುಟ್ಟಿಸುವದು ಇಂಥ ಹಿರಣ್ಯಕ್ಕೆ ನಮಸ್ಕಾರ ನಮಸ್ಕಾರವೆಂದು ಕಾಳಿದಾಸರು ದುಡ್ಡಿನ ಗುಣವನ್ನು ವರ್ಣಿಸಿರುವದು

ಜನರು ದುಡ್ಡುಳ್ಳವನು ಕೋಪವುಳ್ಳವನಾದರೂ, ಕ್ಷಮಾಗುಣವುಳ್ಳವನೆನ್ನುವರು ಭ್ರಾಂತಿಯುಳ್ಳವನಾದರೂ, ಭ್ರಾಂತಿರಹಿತನೆನ್ನುವರು ಗರ್ವಿಯಾದರೂ, ನಿಗರ್ವಿಯೆನ್ನುವರು ಅನ್ಯಾಯ ಮಾಡಿದರೂ, ನ್ಯಾಯವಂತನೆನ್ನುವರು ಅಸತ್ಯ ನುಡಿದರೂ, ಸತ್ಯವಂತನೆನ್ನುವರು ಅವಿಶ್ವಾಸಮಾಡಿದರೂ, ವಿಶ್ವಾಸವಂತನೆನ್ನುವರು. ಕೊಟ್ಟ ವಚನವನ್ನು ತಪ್ಪಿದರೂ, ವಚನಪಾಲಕನೆನ್ನುವರು ಸಿಟ್ಟಿನಿಂದ ಬೈಯುವವನಾದರೂ, ಸೈರಣೆಯುಳ್ಳವನೆನ್ನುವರು ಕುಲಹೀನನಾದರೂ, ಕುಲವಂತನೆನ್ನುವರು ದುರ್ಗುಣಿಯಾದರೂ, ಗುಣವಂತನೆನ್ನುವರು ಇದು ಅಲ್ಲದೆ ಅತಿ ವೃದ್ಧನಾಗಿದ್ದರೂ, ಕುಂಟನಾಗಿದ್ದರೂ, ಕುರುಡನಾಗಿದ್ದರೂ, ಮೂಕನಾಗಿದ್ದರೂ, ಮೂಗಿಲ್ಲದವನಾಗಿದ್ದರೂ, ಕಿವುಡನಾಗಿದ್ದರೂ, ಕುಷ್ಠರೋಗಿಯಾಗಿದ್ದರೂ, ಕೊನ್ನು ಹತ್ತಿದ್ದರೂ, ಷಂಡನಾಗಿದ್ದರೂ, ಅನಾಚಾರಿಯಾಗಿದ್ದರೂ, ಧರ್ಮಲಂಡನಾಗಿದ್ದರೂ, ಹೊನ್ನುಳ್ಳವಗೆ ಹೆಣ್ಣು ಕೊಡುವರು ಸ್ತ್ರೀಯರಾದರೂ ಒಪ್ಪಿಕೊಳ್ಳುವರು

ಕರುವು ಹಾಲಿರುವ ತನಕ ತಾಯಿಯನ್ನು ಬಿಡುವದಿಲ್ಲ ಬತ್ತಿದರೆ ಕಡೆಗೆ ಹೇಗೆ ಹೋಗುವುದೋ ಹಾಗೆಯೇ ಧನ, ಕನಕ ವಸ್ತುಗಳಿರುವ ತನಕ ಲೋಕದ ಜನರು, ಹೆಂಡರು, ಮಕ್ಕಳು, ಬಂಧು-ಬಾಂಧವರು, ಸೇವಕರು, ಇವರೇ ಮೊದಲಾದವರು ಅವನನ್ನು ಪ್ರೀತಿಸುವರು ಮೆಲ್ಲನೆ ದ್ರವ್ಯವು ಕಳೆದುಹೋಗಿ ಬಡತನ ಬಂದರೆ ದೂರಾಗಲಿಕ್ಕೆ ಯತ್ನಿಸುವರು. ಬಂಧು ಬಾಂಧವರು ಆಪ್ತೇಷ್ಟ ಮೊದಲಾದವರು ಕುಲಹೀನನೆಂದು ಕರೆಯುವರು. ಪಟ್ಟಣದಲ್ಲಿದ್ದ ಜನರು ಯಾರೂ ಸೇರದವರಾಗುವರು. ಸ್ವಸ್ತ್ರೀಯರು ಹೊರಹಾಕುವರು ಸಾಲದವರು ಅಪಮಾನ ಮಾಡುವರು. ಯಾರೂ ಮುಂದಕ್ಕೆ ಕರೆಯರು. ಲಕ್ಷ್ಮಿಯು ಕೈ ಬಿಟ್ಟರೆ ಮೇಲಿನ ಫಲಗಳು ದೊರಕುವವು. ಕೆಡುವ ಕಾಲಕ್ಕೆ ಯಾರೂ ಆಗ ರಿಯರು.

ಧನ-ಕನಕವುಳ್ಳನಕ ದಿನಕರನಂತಕ್ಕು |
ಧನ-ಕನಕಹೋದ ಮರುದಿನ ಹಾಳೂರ |
ಶುನಕನಂತಕ್ಕು ಸರ್ವಜ್ಞ ||

ನಂಟರು ಬಂಟರು ದುಡ್ಡಿನ |
ಗಂಟಿರುವನಕೆಲ್ಲ ಹೇಳಿದಂತೆಯೆ ನಡೆವರ್ ||
ಗಂಟಿಲ್ಲ ತೀರ್ದ ಮರುದಿನ |
ನಂಟರೆ ಗಂಟೆರಿಗೆ ಗಾಣ ಕವಿಕಾಲರತ್ನಾ ||

ಪ್ರಾಣಿ ಮುಸುಗುವ ನೊಣಗಳಂತೆ ನಿನ್ನನು ಜನರು |
ಹಣವಿರುವ ಪರಿಯಂತ ಓಲೈಸುವರು |
ಹಣವು ತೀರಿದ ಗಳಿಗೆಯೊಳಗಾ ಜನರು |
ಹೆಣದ ಕಂಡಂತೆ ದೂರುತಿಹರು ||

ಈ ಪ್ರಕಾರ ನೀತಿಕಾರರು ಬೋಧಿಸಿರುವದು ಯಥಾರ್ಥವಾಗಿರುವದು. ದುಡ್ಡನ್ನು ಶರೆ, ಸಿಂದಿ, ಕಳ್ಳು, ಜುಟ್ಟಾ, ವ್ಯಭಿಚಾರ ಇವೇ ಮೊದಲಾದ ದುಷ್ಕಾರ್ಯಗಳಿಗೆ ಖರ್ಚುಮಾಡುವದರಿಂದ ಧನಸಂಪತ್ತು ನಾಶವಾಗುವದಲ್ಲದೆ, ಶರೀರಸಂಪತ್ತೂ ನಾಶವಾಗಿ ಇಹದ ಅಪಕೀರ್ತಿಯನ್ನೂ ಪರದಲ್ಲಿ ನರಕ ಯಾತನೆಯನ್ನೂ ಅನುಭವಿಸುವನು ಆದ್ದರಿಂದ ಇಂಥ ದುಷ್ಕಾರ್ಯಗಳಿಗೆ ಖರ್ಚುಮಾಡದೆ, ಮಠ ಗುಡಿ ಕೆರೆ ಬಾವಿ ಪಾಠಶಾಲೆ ಅನ್ನಛತ್ರ ಇವೇ ಮೊದಲಾದ ಸತ್ಕರ್ಮಗಳಿಗೆ ದುಡ್ಡನ್ನು ವಿನಿಯೋಗಿಸಬೇಕು ಇದರಿಂದ ಶರೀರಸಂಪತ್ತೂ, ಧನಸಂಪತ್ತೂ ವೃದ್ಧಿಯಾಗುವವಲ್ಲದೆ, ಇಹದಲ್ಲಿ ಕೀರ್ತಿಯನ್ನೂ ಪರದಲ್ಲಿ ಸದ್ಗತಿಯನ್ನೂ ಹೊಂದುವನು ಇಂಥವರ ಯೋಗಕ್ಷೇಮವನ್ನು ಪರಮಾತ್ಮನೇ ವಹಿಸುವನು ಆದ್ದರಿಂದ ಜನರು ಇಂಥ ಸತ್ಕರ್ಮಗಳಿಗೆ ತಮ್ಮ ಶಕ್ತ್ಯನುಸಾರವಾಗಿ ಖರ್ಚುಮಾಡುತ್ತಿರಬೇಕು

ಪಾಪದಿಂದ ಆಯುಷ್ಯವೂ ಸಂಪತ್ತೂ ನಾಶವಾಗುವವು ಪುಣ್ಯದಿಂದ ವೃದ್ಧಿಯಾಗುವವು. ಆದ್ದರಿಂದ ನಿರಂತರ ಶ್ರೀಮಂತಿಕೆಯು ಉಳಿಯಬೇಕಾದರೆ ಸತ್ಕರ್ಮ ಮಾಡಿ ಧರ್ಮವನ್ನು ಸಂಗ್ರಹಿಸಬೇಕು.

ಎಣ್ಣೆಯುರುಪದ ದೀಪವು ಉರಿವಪೋಲ್ |
ನಿನ್ನಯ ಪೂರ್ವದ ಪುಣ್ಯವಿರುವಪರಿಯಂತ ಸಿರಿಯಿರ್ಪುದು |
ಪುಣ್ಯ ತೀರಿದ ಮರುದಿನವೆ ನಿನ್ನಯ ಸಿರಿಯು |
ಎಣ್ಣೆ ತೀರಿದ ದೀಪದೋಲು ತಣ್ಣಗಹುದು ||

ಈ ಜ್ಞಾನಿಗಳ ಪದ್ಯವು ಮೇಲಿನ ಅಭಿಪ್ರಾಯವನ್ನೇ ವ್ಯಕ್ತಪಡಿಸುತ್ತದೆ ಆದ್ದರಿಂದ ಮನುಷ್ಯನು ಪುಣ್ಯವನ್ನು ಸಂಪಾದಿಸಬೇಕು

ದುಡ್ಡು ಯಾವಾಗಲೂ ದುಃಖವನ್ನೇ ಕೊಡುತ್ತದೆ ಏಕೆಂದರೆ ಧನವನ್ನು ಗಳಿಸುವಾಗಲೂ ದುಃಖ ಗಳಿಸಿದ ಧನವನ್ನು ಜೋಪಾನಮಾಡುವಾಗಲೂ ದುಃಖ ವೆಚ್ಚ ಮಾಡುವಲ್ಲಿಯೂ ದುಃಖ ಅಳಿದುಹೋಗುವಾಗಲೂ ದುಃಖ ಒಟ್ಟಿಗೆ ದುಃಖವೇ ದುಃಖ.

ತಾನು ಗಳಿಸಿದ್ದು ಉತ್ತಮ. ತಂದೆ ಗಳಿಸಿದ್ದು ಮಧ್ಯಮ ಪರರು ಗಳಿಸಿದ್ದು ಅಧಮ ಎಂದು ಬಲ್ಲವರು ಹೇಳುವರು ಮನುಷ್ಯನು ತನ್ನ ಉಪಜೀವನಕ್ಕಾಗಿ ತಾನು ನ್ಯಾಯಮಾರ್ಗದಿಂದ ಸಂಪಾದಿಸಬೇಕು ಈ ಶಕ್ತಿಯಿಲ್ಲದಿದ್ದರೆ ಹಿರಿಯರು ಗಳಿಸಿಟ್ಟ ಆಸ್ತಿಯನ್ನು ಕಾಯ್ದುಕೊಂಡು, ಅದರ ಉತ್ಪನ್ನದ ಮೇಲಿಂದ ತನ್ನ ಉಪಜೀವನವನ್ನು ಮಾಡಿಕೊಳ್ಳಬೇಕು. ತಾನೂ ಗಳಿಸದೆ ಹಿರಿಯರ ಆಸ್ತಿಯನ್ನೂ ಕಾಯದೆ ಮಾರಿ ತನ್ನ ಉಪಜೀವನವನ್ನು ಸಾಗಿಸಿಕೊಳ್ಳುವವನು ಭೂಮಿಯಮೇಲೆ ಇದ್ದೂ ಇಲ್ಲದಂತೆಯೇ ಸರಿ! ಜೀವಂತ ಹೆಣವೆಂದರೂ ಅಡ್ಡಿಯಿಲ್ಲ

ಕುಳಿತು ಉಂಡರೆ ಕುಬೇರನ ದ್ರವ್ಯವೂ ಸಾಲದು ಆದ್ದರಿಂದ ಮನುಷ್ಯನು ಯಾವುದಾದರೊಂದು ಉದ್ಯೋಗವನ್ನು ಮಾಡುತ್ತಿರಬೇಕು. “ಕುಳಿತು ಗಂಡಸು ಕೆಟ್ಟ ತಿರುಗಾಡಿ ಹೆಂಗಸು ಕೆಟ್ಟಳು” ಎಂಬ ಗಾದೆಯಾದರೂ ಮೇಲಿನ ವಿಷಯವನ್ನೇ ಸೂಚಿಸುತ್ತದೆ “ಹಾಸಿಗೆಯಿದ್ದಷ್ಟು ಕಾಲು ಚಾಚು” ಎಂದು ಹಿರಿಯರು ಹೇಳುವ ಮಾತಿನಲ್ಲಿ ಸ್ವಾರಸ್ಯವಿದೆ. ಮನುಷ್ಯನು ತನ್ನ ಉತ್ಪನ್ನವೆಷ್ಟು? ಖರ್ಚು ಎಷ್ಟು? ಎಂಬುದನ್ನು ನೋಡುತ್ತಿರಬೇಕು ಇದು ತಿಳಿಯಬೇಕಾದರೆ ಜಮಾ ಖರ್ಚಿನ ಲೆಕ್ಕಪುಸ್ತಕವನ್ನು ಇಡಬೇಕು. ಈ ಪದ್ಧತಿಯು ಪೂರ್ವಕಾಲದಿಂದಲೂ ಇದೆ. ಆದಾಯಕ್ಕಿಂತ ಹೆಚ್ಚು ಖರ್ಚು ಮಾಡಬಾರದು. ಹೀಗೆ ಮಾಡುವುದರಿಂದ ಸಾಲವನ್ನು

ಮಾಡಬೇಕಾಗುತ್ತದೆ. ಸಾಲವನ್ನು ಮಾಡಿದರೆ ಬಡ್ಡಿಗೆ ಬಡ್ಡಿ ಬೆಳೆದು ವಿಶೇಷ ಹಣವಾಗುವುದು ಕಡೆಗೆ ಹೊಲ ಮನೆಗಳನ್ನು ಕಳೆದುಕೊಂಡು ಭಿಕ್ಷಾಪಾತ್ರೆಗೆ ಗುರಿಯಾಗಬೇಕಾಗುವುದು ಇಂಥ ಸ್ಥಿತಿಯನ್ನು ತಂದುಕೊಳ್ಳದೆ ನ್ಯಾಯಮಾರ್ಗದಿಂದ ಸಂಪಾದಿಸಿ ಅದೇ ಹಣದಲ್ಲಿ ಸ್ವಲ್ಪ ಸ್ವಲ್ಪ ಧರ್ಮಕಾರ್ಯವನ್ನು ಮಾಡುತ್ತ ಪರಮಾತ್ಮನ ಪ್ರೀತಿಗೆ ಪಾತ್ರರಾಗಬೇಕು.

ಸೂಕ್ತಿಮಾಲೆ

ಲೇ —ಮಲ್ಲಿಕಾರ್ಜುನಾರಾಧ್ಯ ರಾಣೆಬೆನ್ನೂರು ಮಳೆಮಠ ಮುದೇನೂರು.

(ಹಿಂದಿನಿಂದ ಮುಂದುವರೆದುದು)

೧೭ ಸಾಮಾನ್ಯ ಮನುಷ್ಯನು ಹೇಳುವ ಜನನ ಮರಣಗಳನ್ನೇ ಜ್ಞಾನಿಯು ಉದಯಾಸ್ತಗಳೆಂದು (ರವಿಯಂತೆ) ಹೇಳುವನು. ಆದರೆ ಸೂರ್ಯನಿಗೆ ಪುನಃ ಪುನಃ ಉದಯಾಸ್ತಗಳಾದರೂ ಅವನ ತೇಜಸ್ಸಿನಲ್ಲಿ ಹೆಚ್ಚು ಕಡಿಮೆಯಾದಂತೆ ಕಾಣುವದಿಲ್ಲ, ಆದರೆ ಮನುಷ್ಯನ ಸ್ಥಿತಿಯು ಹಾಗಿಲ್ಲ ಅವನು ಒಂದೊಂದು ಜನ್ಮದಲ್ಲಿಯೂ ಹೆಚ್ಚು ಹೆಚ್ಚು ಜ್ಞಾನಾರ್ಜನೆಮಾಡಿದಂತೆಯೂ, ಹೆಚ್ಚು ಹೆಚ್ಚು ಸುಶೀಲನಾದಂತೆಯೂ ಮುಂದಿನ ಜನ್ಮಗಳಲ್ಲಿ ಹೆಚ್ಚು ಹೆಚ್ಚು ತೇಜಸ್ವಿಯಾಗಿ ಹುಟ್ಟುವನು ಆದರೆ, ಜ್ಞಾನಧರ್ಮಗಳನ್ನು ಬಿಟ್ಟವನು ಮಾತ್ರ ಹೆಚ್ಚು ಹೆಚ್ಚು ತೇಜೋಹೀನನಾಗುತ್ತ ಹೋಗುವನು.

೧೮ ಯಾವುದಾದರೊಂದು ಮಾತು ನೀತಿಸಮ್ಮತವಹದೋ ಅಲ್ಲವೋ ಎಂಬುವದನ್ನು ನೋಡಬೇಕಾದರೆ ಮೊದಲು ಆ ಮಾತು ನಡೆದ ಕಾಲವನ್ನು ಲಕ್ಷ್ಯದಲ್ಲಿ ತರಬೇಕು ಏಕೆಂದರೆ, ಯುಗಯುಗಕ್ಕೆ ನೀತಿಯ ತಕ್ಕಡಿಯ ಪರಡಿಗಳು ಕೆಳಗೆ ಮೇಲೆ ಆಗುತ್ತಿರುತ್ತವೆ ಕೃತಯುಗದಲ್ಲಿ ಇನ್ನೊಬ್ಬನಿಗೆ ಕೇಡನ್ನು ಬಗೆಯುವ ದುರ್ಬುದ್ಧಿಯೇ ಹುಟ್ಟುತ್ತಿರಲಿಲ್ಲವಾದುದರಿಂದ ದುರುಳರ ಬಗ್ಗೆ ಹೇಗೆ ನಡೆಯಬೇಕೆಂಬ ವಿಚಾರವೇ ಆಗ ಇರಲಾರದು ತ್ರೇತಾಯುಗದಲ್ಲಿ ಒಬ್ಬನು ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆಯನ್ನು ಅವನ ಮುಂದೆ ನೀಡುವುದೇ ನೀತಿಯಾಗಿರಬಹುದು. ದ್ವಾಪರಯುಗದಲ್ಲಿ ಕೆನ್ನೆಯ ಮೇಲೆ ಹೊಡೆಯ ಬಂದವನ ಕೈಯನ್ನು ಹಿಡಿದು ತಡೆಯುವುದೇ ನೀತಿಯಾಗಿರಬಹುದು ಆದರೆ, ಈ ಕಲಿಯುಗದಲ್ಲಿ ತನ್ನ ಕೆನ್ನೆಗೆ ಹೊಡೆಯ ಬಂದವನ ಕೈಯನ್ನು ಹಿಡಿದು ತಡೆಯುವುದಷ್ಟೇ ಅಲ್ಲದೆ ತಿರುಗಿ ಅವನಿಗೆ ಕತ್ತಲೆ ಕವಿಯುವಂತೆ ಅತನ ಕೆನ್ನೆಗೆ ಬಲವಾಗಿ ಹೊಡೆಯುವುದೇ ನೀತಿಯಾಗಿದೆ ಅಂದರೆ, ತಾವಾಗಿ ಯಾರ ಮೇಲೆಯೂ ದುರುಳತನವನ್ನು ತೋರಿಸಬಾರದು. ಅವರಾಗಿ ನಮ್ಮ ಮೇಲೆ ಬಂದರೆ ನಮ್ಮ ರಕ್ಷಣ ಚಿಂತನೆ ಮಾಡಿಕೊಳ್ಳುವುದು ವಿಹಿತವೇ ಆಗಿದೆ

೧೯ ಜಗತ್ತಿನಲ್ಲಿ ಸುಖಪ್ರಾಪ್ತಿಯಾಗಬೇಕೆಂದೂ ದುಃಖನಿವೃತ್ತಿಯಾಗಬೇಕೆಂದೂ ಬಯಸದವರು ಯಾರೂ ಇಲ್ಲ ಈ ಸಂಸಾರದಲ್ಲಿ ಯಾರ ಮನಸ್ಸು ಗಾಳಿಗಿಟ್ಟ ದೀಪದಂತೆ ಚಿಂತೆಯಿಂದ ಹೊಯ್ದಾಡದೆ ಇದೆ? ಯಾರ ಕಣ್ಣುಗಳು ಮಂದೋಷ್ಣವಾದ ಕಂಬನಿಯ ಪ್ರವಾಹವನ್ನು ಸುರಿಸದೆ ಇವೆ? ಯಾರ ದೇಹವು ಆಧ್ಯಾತ್ಮಿಕಾದಿ ಭೌತಿಕಾದಿ ದೈವಿಕ ಸಂಕಟ ಪರಂಪರೆಗಳಿಂದಾಗುವ ಸಂತಾಪವನ್ನನುಭವಿಸದೆ ಇದೆ? ರೋಗದ ಮತ್ತು ಮರಣದ ಮಾತು ಬಂದಾಗ ಯಾರ ಮುಖವು ವಿವರ್ಣವಾಗದೆ ಉಳಿಯುತ್ತದೆ? ಮನುಷ್ಯನಿಗೆ ಪ್ರಾಪ್ತವಾಗುವ ದುಃಖಸಂತತಿಯು ಎಷ್ಟು ದಾರುಣವಾಗಿರುವುದು! ಈ ದುರ್ದಶೆಯನ್ನು ಕಳೆದುಕೊಳ್ಳುವುದಕ್ಕಾಗಿ ಪ್ರತಿಯೊಬ್ಬನೂ ಅಲ್ಪಸ್ವಲ್ಪವಾದರೂ ಪ್ರಯತ್ನ ಮಾಡುತ್ತಿದ್ದು ಗುರುಶಾಸ್ತ್ರ ಸಜ್ಜನ ಮುಖದಿಂದ ದುರ್ಲಭವಾದ ಮಾನವಜನ್ಮವನ್ನು ಸಾರ್ಥಕಮಾಡಿಕೊಳ್ಳಬೇಕು.

೨೦ ಮನುಷ್ಯನು ಮೊದಲು ತನಗೆ ಮಗನಾಗಬೇಕೆಂದು ದುಃಖಿತನಾಗುವನು. ಮಗನಾದನಂತರ ಅವನಿಗೆ ರೋಗಬಂದರೆ ದುಃಖಿತನಾಗುವನು, ಮಗನಿಗೇನಾದರೂ ದುಃಖವು ಪ್ರಾಪ್ತವಾದರೆ ಅವನ ದುಃಖವನ್ನು ನಿವಾರಣೆಮಾಡುವಾಗ ತಾನೂ ದುಃಖಿಯಾಗುವನು ಮಗನು ಅಕೀರ್ತಿವಂತನಾದರೆ ಅವನ ಮೂರ್ಖತನಕ್ಕಾಗಿ ತಾನು ದುಃಖಿಯಾಗುವನು. ಕದಾಚಿತ್ ಮಗನು ನೀತಿವಂತನಾದರೂ ಅವನಿಗೆ ಮರಣಬರುವುದೆಂದು ತಾನು ಭಯಪಡುವನು ಇನ್ನು ಮಗನು ಸತ್ತರಂತೂ ತನ್ನ ದುಃಖಕ್ಕೆ ಮೇರೆಯೇ ಇಲ್ಲ ಹೀಗೆ ಪುತ್ರವೇಷವನ್ನು ಧರಿಸಿದ ಈ ಹಿತ ಶತ್ರುವು ಯಾರಿಗೂ ಆಗಬಾರದು ಧನದ ವಿಚಾರವೂ ಇಷ್ಟೆ! ವಾಚಕಮಹಾಶಯರೇ, ಪುತ್ರವಿಯೋಗ ದುಃಖದಿಂದ ಪೀಡಿತರಾದ ಎಷ್ಟೋ ಜನರು ಸ್ವಪ್ನದಲ್ಲಿಯೂ ಅಳುತ್ತಾ ಕಣ್ಣೀರಿನ ಕೋಡಿಯನ್ನೇ ಹರಿಸುತ್ತಿರುವುದು ನಿದರ್ಶನವಾಗಿದೆ

೨೧ ಕೈಯಲ್ಲಿ ಕೋಲನ್ನು ಹಿಡಿದು ಹಿಂಬಾಲಿಸಿದರೆ ಇವನು ನಮ್ಮನ್ನು ಹೊಡೆಯುತ್ತಾನೆಂದು ಭಯದಿಂದ ಪಶುಗಳು ಓಡಲು ಪ್ರಯತ್ನಿಸುತ್ತವೆ ಅದೇ ಮನುಷ್ಯನು ಕೈಯಲ್ಲಿ ಹುಲ್ಲನ್ನು ಹಿಡಿದು ತೋರಿಸುತ್ತ ಕರೆದರೆ ಮಂದಗಮನದಿಂದ ಪ್ರೀತಿಸುತ್ತ ಹತ್ತಿರ ಬರುತ್ತವೆ ಇದೇ ಮೇರೆಗೆ ಕೈಯಲ್ಲಿ ಶಸ್ತ್ರವನ್ನು ಹಿಡಿದು ಕ್ರೂರದೃಷ್ಟಿಯಿಂದ ಬೆನ್ನಟ್ಟಿಬರುವ ಬಲಶಾಲಿಯನ್ನು ಕಂಡರೆ ಜ್ಞಾನವಂತನೆನಿಸುವ ಮನುಷ್ಯನಾದರೂ ಓಡಲುಪಕ್ರಮಿಸುತ್ತಾನೆ ಪ್ರೀತಿಯಿಂದ ಕರೆಯುವ ಸಾಮಾನ್ಯನಾದ ಪುರುಷನಹತ್ತರ ಮೆಲ್ಲನೆ ಹೋಗುತ್ತಾನೆ ಅದ್ದರಿಂದ ಪಶುಗಳು ಯಾವ ರೀತಿಯಿಂದ ದೇಹಾಭಿಮಾನಿಗಳಾಗಿ ವಿಷಯಾಸಕ್ತಗಳೋ ತದ್ವತ್ ತಿಳುವಳಿಕೆಯುಳ್ಳ ಮನುಷ್ಯನಾದರೂ ದೇಹಾಭಿಮಾನಿಯಾಗಿ ಸ್ವಕರ್ತವ್ಯ ಮೂಢನಾಗಿ ವಿಷಯಾಸಕ್ತನಾಗಿಹೋದರೆ ಅಂಥವನನ್ನು ಪಶುವೆಂದೇಕೆ ಹೇಳಬಾರದು? ವಾಚಕರೇ! ಯಾವನ ಆಯುಷ್ಯವು ಸ್ವಹಿತ(ಆತ್ಮೋದ್ಧಾರ) ಪರಹಿತಗಳಿಗಿಲ್ಲದೆ ವ್ಯರ್ಥವಾಗಿ ಕ್ಷೀಣವಾಗುವುದೋ ಅವನು ಕಮ್ಮಾರನ ಕುಲುಮೆಯ ತಿದಿಯಂತೆ ಉಸಿರು ಬಿಡುತ್ತಿದ್ದರೂ ಸತ್ತಂತೆಯೇ ಸರಿ

೨೨ ಬಿಸಿ ಬಿಸಿಯಾದ ಕ್ಷೀರದಲ್ಲಿ ಕೈಯಿಟ್ಟು ಸುಟ್ಟುಕೊಂಡವನು ಹಾಲಿನಂತೆ ಬೆಳ್ಳಗಿರುವ ಮಜ್ಜಿಗೆಯನ್ನೂ ಬಿಸಿಯಾರಲೆಂದು ಊದಿ ಕುಡಿಯಲು ಯತ್ನಿಸಿದಂತೆ ದುರುಳರ ಕುಯುಕ್ತಿ ಕುತಂತ್ರ ಸವಿಮಾತು ಇತ್ಯಾದಿಗಳಿಂದ ಮೋಸ ಹೊಂದಿರುವವರಿಗೆ ಸಜ್ಜನರ ಮೇಲಾದರೂ ಸಹಸಾ ವಿಶ್ವಾಸವಿಡಲಿಕ್ಕೆ ಧೈರ್ಯ ಬರುವುದಿಲ್ಲ

೨೩ ದೇಹವಿರುವುದರೊಳಗಾಗಿ ದೇಹಾಭಿಮಾನವನ್ನು ಬಿಡುವುದು ಅತಿ ಮಹತ್ವವಾಗಿರುವಂತೆ, ಸಂಸಾರದಲ್ಲಿದ್ದರೂ ಸಂಸಾರ ಪರಿತ್ಯಾಗಮಾಡುವುದೂ ವಸ್ತುಗಳ ಅಭಾವದಿಂದ ವೈರಾಗ್ಯಪಡೆವುದಕ್ಕಿಂತಲೂ ವನಿತಾದಿ ವಿಷಯಗಳ ಮಧ್ಯದಲ್ಲಿ ಹೊರಳಾಡುತ್ತಿದ್ದರೂ ವೈರಾಗ್ಯಶೀಲನಾಗಿರುವುದೂ ಮಹತ್ವವಾಗಿರುವುದು

೨೪ ಕರಗಿಸುವುದರ ಮೂಲಕ ಲೋಹಗಳನ್ನು ಒಟ್ಟುಗೂಡಿಸಬಹುದು ನಿಮಿತ್ತಾಂತರದಿಂದ ಮೃಗಗಳನ್ನೂ ಪಕ್ಷಿಗಳನ್ನೂ ಸೇರಿಸಬಹುದು ಭಯದಿಂದಲೂ ಲೋಭದಿಂದಲೂ ಮೂರ್ಖರು ಸ್ನೇಹಿತರಾಗುವರು ಸಜ್ಜನರು ಒಬ್ಬರನ್ನೊಬ್ಬರು ನೋಡಿದ ಮಾತ್ರದಿಂದಲೇ ಸ್ನೇಹವನ್ನು ಬೆಳೆಸುವರು

೨೫ ಕೂಪೇ ವಾಪಿ ಪಯೋನಿಧಾವಪಿ ಘಟೋ ಗೃಹ್ಣಾತಿ ತುಲ್ಯಂ ಜಲಂ" —ಎಂದರೆ ಕೊಡವು ಕೊಳವಲ್ಲಾದರೂ ಸರಿ ಅಥವಾ ಸಮುದ್ರವಲ್ಲಾದರೂ ಸರಿ ಒಂದೇ ಪ್ರಮಾಣದಲ್ಲಿ ನೀರನ್ನು ಸ್ವೀಕರಿಸುವುದು ಎಂಬಂತೆ ಮನುಷ್ಯನು ತನ್ನ ಪ್ರಾಚೀನ ಕರ್ಮದಿಂದುಂಟಾಗಿರುವ ತನ್ನ ಯೋಗ್ಯತೆಗನುಗುಣವಾಗಿಯೇ ಸುಖ ದುಃಖಗಳನ್ನು ಪಡೆಯುವನು ಆದುದರಿಂದ ತನ್ನ ದುರದೃಷ್ಟಕ್ಕೆ ಕರ್ಮವಾದಿಯು ಅನ್ಯರನ್ನು ದೂಷಿಸುವುದಕ್ಕೆ ಯಾವ ವಿಧವಾದ ಕಾರಣವೂ ಇರುವುದಿಲ್ಲ ಒಂದುವೇಳೆ ದೂಷಿಸಿದರೆ ಅದು ಅಜ್ಞಾನದ ಪ್ರಭಾವವೆಂದೇ ತಿಳಿಯಬೇಕು ವಾಚಕರೇ! 'ಹಣವಿದ್ದವನನ್ನು ಕೂಡಿದರೂ ಋಣವಿದ್ದಷ್ಟೇ' ಎಂಬಂತೆ ಕುಬೇರನಂತಹ ಹಣಗಾರರನ್ನು ಆಶ್ರಯಿಸಿದ್ದರೂ, ಫಲವು ಮಾತ್ರ ತನ್ನ ಅದೃಷ್ಟಕ್ಕೆ ತಕ್ಕಂತೆಯೇ ದೊರೆಯುವುದು ವಾಸುಕಿಯು ಜಗದೀಶನಾದ ಶಿವನಕೊರಳಿಗೆ ಸುತ್ತಿಕೊಂಡಿದ್ದರೂ ಗಾಳಿಯನ್ನು ಸೇವಿಸಿಯೇ ಬದುಕಬೇಕು. ವಿಧಿಯು ಅಘಟಿತವಾದಂಥ ಕಾರ್ಯವನ್ನು ಘಟನೆಮಾಡುವುದು. ಈ ಕಾರ್ಯವು ಆಗತಕ್ಕದ್ದಲ್ಲವೆಂದು ನಮಗೆ ತಿಳಿದಿದ್ದರೆ ಅಂಥದನ್ನು ಆಗಮಾಡುವುದು ಈ ಕಾರ್ಯವು ಆಗತಕ್ಕದು ಎಂದುಭಾವಿಸಿದ್ದರೆ ಅಂಥದನ್ನು ಅತಿದುರ್ಘಟವಾಗಿಮಾಡುವುದು ಮನುಷ್ಯನು ಯಾವುದನ್ನು ಯೋಚಿಸುತ್ತಾ ಇರುವನೋ ಅದನ್ನು ಉಂಟುಮಾಡುವುದೇ ಇಲ್ಲ ಯೋಚಿಸದೇ ಇರುವಂಥ ಕೆಲಸವನ್ನೇ ಮಾಡುವುದು ವಿಧಿ ನಿಯಮವೇ ಇದು! ಇದರಿಂದ ತಪ್ಪಿಸಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ ಆದುದರಿಂದಲೇ "ಬರಲುಳ್ಳ ದುಃಖವನು ವಾರಲಾರಿಂದಹುದು! ಮರುಳೇ ನಿಯಮಿಸುವವ ಬೇರಿರುತಿರೆ" ಎಂದು ಹೇಳಿರುವರು

(ಸಶೇಷ)

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ದುಃಖವಾರ್ತೆ

ಕೊಪ್ಪಳ ತಾ|| ಉಪ್ಪಿನ ಬೆಟಗೇರಿಯಲ್ಲಿರುವ ಕೊಟ್ಟೂರು ಬಾಗಟಗೇರಿ ಮಿರಾಳಭಟ್ಟ ಮಠದ ಕೈ|| ಶ್ರೀಯುತ|| ಬಸವಲಿಂಗಪ್ಪಯ್ಯನವರ ಧರ್ಮಪತ್ನಿಯವರಾದ ಯಜಮಾನಿ ಶಾಂತಮ್ಮನವರು ಇದೇ ಮಾರ್ಗಶಿರ ಶು|| ೧೫ (ತಾ||3—12—41) ನೆಯ ಬುಧವಾರ ದಿವಸ ಪ್ರಾತಃಕಾಲ ಪೂಜಾದಿಗಳನ್ನು ತೀರಿಸಿಕೊಂಡು, ಶಿವ-ಗುರು ಸ್ಮರಣಪೂರ್ವಕವಾಗಿ ಇಹಲೋಕಯಾತ್ರೆಯನ್ನು ಮುಗಿಸಿದರೆಂದು ತಿಳಿಸಲು ವಿಷಾದವೆನಿಸುತ್ತದೆ ಇವರು ಪತಿಯಾಜ್ಞಾಧಾರಿಗಳಾಗಿದ್ದು ಗುರು ಲಿಂಗ-ಜಂಗಮರಲ್ಲಿ ಪರಮಭಕ್ತಿಯುಳ್ಳವರಾಗಿದ್ದರು ಅನ್ನದಾನಮಾಡುವುದರಲ್ಲಿ ಸಾಕ್ಷಾತ್ ಅನ್ನಪೂರ್ಣಾದೇವಿಯಂತಿದ್ದರು ಇಂತಹ ವ್ಯಕ್ತಿಗಳು ಜನಿಸುವುದು ದುರ್ಲಭ. ಕೈವಲ್ಯವಿಮಾನವು ಸಾಗಿದೊಡನೆಯೇ ಗ್ರಾಮದ ಸರ್ವಜನರೂ "ನಮ್ಮ ಜನನಿಯ ಕೈಲಾಸಯಾತ್ರೋತ್ಸವವು ನಡೆಯಿತು ನಮ್ಮ ಮಾತೆ ಅನ್ನಪೂರ್ಣಾದೇವಿಯು ಇಂದು ನಮಗೆ ದೂರವಾಗಿ ತೆರಳುವಳು' ಎಂದು ಶೋಕಯುಕ್ತಾಲಾಪಗಳನ್ನು ಮಾಡುತ್ತಿದ್ದರು ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆಯೂ ಮಂಜುಳವಾಗಿ ಸ್ತೋತ್ರ ಹಾಡುಗಳನ್ನು ಹಾಡುವ ಭಜನಾಸಂಘದವರೊಡನೆಯೂ ಉತ್ಸವವು ಸಮಾಧಿಯ ಸ್ಥಳಕ್ಕೆ ತಲ್ಪಿತು ಇವರ ಅಂತ್ಯೇಷ್ಟಿವಿಧಿಯು ಕೊಟ್ಟೂರು ಕಳ್ಳೀಮನೆ ಹಿರೇಮಠದ ಶ್ರೀ|| ಷ|| ಬ್ರ|| ಭೂತಭುಜಂಗಸ್ವಾಮಿಗಳವರ ಮತ್ತು ಉಪ್ಪಿನ ಬೆಟಗೇರಿ ಹಿರೇಮಠದ ವೇ|| ವಾಮದೇವಶಾಸ್ತ್ರಿಗಳ ನೇತೃತ್ವದಲ್ಲಿ ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟಿತು ಶ್ರೀ ಪರಮಾತ್ಮನೂ ಶ್ರೀ ಜಗದ್ಗುರು ಪಂಚಾಚಾರ್ಯರೂ ಇವರ ಆತ್ಮಕ್ಕೆ ಶಾಂತಿಯನ್ನುಂಟುಮಾಡಲಿ,

ಶ್ರೀಪಂಚಾಚಾರ್ಯ ಭಜನಮಂಡಲಿ,
ಉಪ್ಪಿನ ಬೆಟಗೇರಿ

ದುಃಖವಾರ್ತೆ

ಬಳ್ಳಾರಿ ಜಿಲ್ಲಾ, ಹುವ್ವಿನಹಡಗಲಿ ತಾಲ್ಲೂಕು ಬನ್ನಿಕಲ್ಲು ಗ್ರಾಮನಿವಾಸಿಗಳಾದ ಶ್ರೀಮಂತ ವೀರಾಪುರದ ಕೈಲುಬಸಪ್ಪನವರು ತಾ|| 7—12—1941 ನೇ ಭಾನುವಾರ ರಾತ್ರಿ 2 ಘಂಟೆಗೆ ಶಿವಸಾಯುಜ್ಯವನ್ನೈದಿದರೆಂಬ ವಿಷಯವನ್ನು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ ಇವರು ಚಿಕ್ಕವಯಸ್ಸಿನವರಾದರೂ ಒಳ್ಳೆ ವಿವೇಕಶಾಲಿಗಳೂ, ದಯಾಳುಗಳೂ, ಪರೋಪಕಾರಿಗಳೂ, ಮೇಧಾವಿಗಳೂ, ಧೈರ್ಯಶಾಲಿಗಳೂ ಆಗಿದ್ದರು. ಇವರು ತಮ್ಮ ಸುತ್ತುಮುತ್ತ ಗ್ರಾಮದ ತಂಟೆತಕರಾರುಗಳನ್ನು ಬಹು ವಿಚಕ್ಷಣತೆಯಿಂದ ನ್ಯಾಯಮಾರ್ಗಕ್ಕನುಸರಿಸಿ ನಿಕಾಲಿಮಾಡಿ ಕೋರ್ಟುಕಚೇರಿಗಳಿಗೆ ಜನರು ಹೋಗದಂತೆ ಮಾಡುತ್ತಿದ್ದರು ಇಂತಹ ಸದ್ಗುಣಶಾಲಿಗಳು ನಮ್ಮ ಸಮಾಜವನ್ನು ಬಿಟ್ಟುಹೋದದ್ದು ವೀರಶೈವ ಸಮಾಜಕ್ಕೆ ದೊಡ್ಡ ಹಾನಿಯೆಂದು ಹೇಳಬೇಕಾಗಿದೆ ಈಕಾಲದಲ್ಲಿ ಇಂತಹ ವ್ಯಕ್ತಿಗಳನ್ನು ಕಾಣುವುದೇ ದುರ್ಲಭವೆಂದರೆ ಅತಿಶಯೋಕ್ತಿಯೆನಿಸದು. ಶ್ರೀ ಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೂ ಇವರ ಕುಟುಂಬದವರಿಗೂ ಬಂಧುವರ್ಗಕ್ಕೂ ದುಃಖಸಹನ ಶಕ್ತಿಯನ್ನೂ ಅನುಗ್ರಹಿಸಲೆಂದು ಆ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇನೆ. ಅಂತ್ಯಸಂಸ್ಕಾರಸಮಯದಲ್ಲಿ [illegible] ಸಮರ್ಪಿಸಲ್ಪಟ್ಟಿತು.

ಓರ್ವ ದುಃಖಭಾಗಿ

ಪಂಚಾಚಾರ್ಯಪ್ರಭಾ

೧೯೪೧ನೆಯ ಡಿಸೆಂಬರ್ ತಾ|| ೧೫ನೇ ಸೋಮವಾರ

ಯುದ್ಧಜ್ವಾಲೆಯು ಪ್ರಪಂಚವನ್ನೇ ವ್ಯಾಪಿಸಿತು.

ಸಮಸ್ತ ಪ್ರಪಂಚವನ್ನೇ ಉಲ್ಲೋಲಕಲ್ಲೋಲವಾಡುತ್ತಿರುವ ಮಹಾಯುದ್ಧವು ಪ್ರಾರಂಭವಾಗಿ ಈಗ ಸುಮಾರು ೨|| ವರ್ಷಗಳು [illegible] ಬಂದವು ಯೂರೋಪ ಖಂಡವೆಲ್ಲವೂ ಹಿಟ್ಲರನ ಜರ್ಮನಿಗೆ ಆಧೀನವಾಯಿತು ಪೂರ್ವಪುಣ್ಯವಿಶೇಷದಿಂದ ಇಂಗ್ಲಂಡು ಮಾತ್ರ ಸ್ಥಿರವಾಗಿ ಉಳಿದಿರುವುದು ಹಿಟ್ಲರನ ಮಹಾಪಾಪಕ್ಕೆ ಬಹು ರಾಷ್ಟ್ರಗಳು ಬಲಿಯಾದವು ಫ್ರಾನ್ಸಿನಂಥ ಮಹಾ ಬಲಾಢ್ಯರಾಷ್ಟ್ರವೆನಿಸಿಕೊಂಡಿದ್ದ [illegible] ಸಹ ಬಹುಭಾಗವನ್ನು [illegible] ಜರ್ಮನರು ಯು[illegible] [illegible] ಅನೇಕ ದೇಶ [illegible] ನುಂಗಿಬಿಟ್ಟರೆ ತಮ್ಮ [illegible] ಗಳಲ್ಲಿ [illegible] ಕ್ರಮಿಸಿಕೊಳ್ಳು [illegible] ಸ್ವಾಧೀನಕರನ್ನು [illegible]ಕೊಂಡಿತು [illegible] ರಾಜಧಾನಿಯ ಆಕ್ರಮಣವು [illegible] ಭಯಂಕರ [illegible] ಪ್ರಾರಂಭವಾಗುವುದರಿಂದ [illegible] ತಡೆಯಲಾರದ ಜರ್ಮನ್ [illegible] ತಿಳಿದುಬರುತ್ತದೆ

ಜರ್ಮನರು [illegible] ಇನ್ನು ಮುಂದಾ [illegible] ಯುದ್ಧವು [illegible] ಅನೇಕರು ಭಾವಿಸಿದ್ದರು ಇವರ ಈ ನಂಬಿಗೆಗೆ ಪ್ರತಿಯಾಗಿ ಯುದ್ಧವು ಮತ್ತಷ್ಟು ಭಯಂಕರಸ್ವರೂಪವನ್ನು ತಾಳಿತು ಇದು ಸರ್ವರ ನಿರೀಕ್ಷಣೆಗೆ ವಿರುದ್ಧವೆಂದು ಹೇಳಬಹುದಾಗಿದೆ ಬಹುದಿವಸಗಳಿಂದ ಯುದ್ಧಕ್ಕಾಗಿ ಹೊಂಚ ಕಾಯುತ್ತಿದ್ದ ಜಪಾನು ಈ ತಿಂಗಳ ಪ್ರಾರಂಭದಲ್ಲಿ ಯಾವುದೊಂದು ಸೂಚನೆಯನ್ನೂ ಕೊಡದ ಏಶಿಯಾಖಂಡದಲ್ಲಿ ಅಮೆರಿಕಯು ಆಧಿಪತ್ಯಕ್ಕೊಳಪಟ್ಟಿರುವ ಫಿಲಿಪೈನ್ ದ್ವೀಪಗಳ ಮೇಲೆ ಬಿದ್ದು ಯುದ್ಧವನ್ನು ಪ್ರಾರಂಭಿಸಿಯೇ ಬಿಟ್ಟಿತು ಬ್ರಿಟಿಷರಮೇಲೆ ಯುದ್ಧವನ್ನು ಸಾರಿ ಸಿಂಗಪುರದಮೇಲೆ ಬಾಂಬುಗಳನ್ನು ಚಲ್ಲಿತು ಜಪಾನರು ಪ್ರಾರಂಭದಲ್ಲಿ ಬಹಳ ಶೂರತನವನ್ನು ತೋರಿಸಿದರು ಬ್ರಿಟಿಷರ ಮತ್ತು ಅಮೆರಿಕನ್ನರ ಕೆಲವು ಹಡಗುಗಳನ್ನು ಮುಳುಗಿಸಿದರು ಮನಸ್ಸಿಗೆ ಬಂದಂತೆ ಬಾಂಬುಗಳನ್ನು ಚಲ್ಲಿ ವಿಶೇಷ ನಷ್ಟವನ್ನುಂಟುಮಾಡಿದರು ಇಷ್ಟರಲ್ಲಿಯೇ ಬ್ರಿಟಿಷರು ಮತ್ತು ಅಮೆರಿಕನ್ನರು ಉಗ್ರವಾಗಿ ಪ್ರತಿಭಟಿಸಲು ಪ್ರಾರಂಭಿಸಿದ್ದರಿಂದ ಈಗ ಅವರ ವೇಗವು ಬಹಳಮಟ್ಟಿಗೆ ಕಡಿಮೆಯಾಗಿದೆ ಯುದ್ಧಕಲೆಯಲ್ಲಿ ನಿಪುಣರಾಗದ ಇರುವ ಚೀನಾದೇಶೀಯರೊಡನೆ ಜಪಾನರು ಈಗ್ಗೆ ೫ ೬ ವರ್ಷಗಳಿಂದ ಒಂದೇ ಸಮನೆ ಯುದ್ಧಮಾಡುತ್ತಿದ್ದರೂ ಈವರೆಗ ಅವರನ್ನು ಸೋಲಿಸುವದಾಗಿಲ್ಲವೆಂದಮೇಲೆ ಬ್ರಿಟಿಷ ಮತ್ತು ಅಮೆರಿಕನ್ನರನ್ನು ಸೋಲಿಸುವವಂತೂ ದೂರೇ ಉಳಿಯಿತು "ವಿನಾಶಕಾಲೇ ವಿಪರೀತಬುದ್ಧಿಃ" ಎಂಬಂತೆ ಜಪಾನು ತನ್ನ ನಾಶಕ್ಕಾಗಿಯೇ ಈ ಕಾರ್ಯದಲ್ಲಿ ತೊಡಗಿದಯೆಂದು ಧಾರಾಳವಾಗಿ ಹೇಳಬಹುದಾಗಿದೆ ಇನ್ನು ಸ್ವಲ್ಪದಿವಸಗಳಲ್ಲಿಯೇ ಜಪಾನು ತಣ್ಣಗಾಗುವದರಲ್ಲಿ ಸಂದೇಹವಿಲ್ಲ

ಜಪಾನಿನ ಈ ನಿರಂಕುಶವರ್ತನೆಗೆ ಜರ್ಮನಿಯೇ ಮೂಲಕಾರಣವಾಗಿರುವದು ಹಿಟ್ಲರನು ಜಪಾನಿಗೆ ದುರ್ಬೋಧೆಯನ್ನಿತ್ತು ಆ ದೇಶವನ್ನು ಒಮ್ಮಿಂದೊಮ್ಮೆ ಯುದ್ಧರಂಗಕ್ಕೆಳೆದನು ಬ್ರಿಟಿಷರ ಮತ್ತು ಅಮೆರಿಕನ್ನರ ಸೈನ್ಯಪಡೆಗಳನ್ನು ಛಿನ್ನಭಿನ್ನವನ್ನಾಗಿ ಮಾಡಬೇಕೆಂಬುದೇ ಹಿಟ್ಲರನ ಮುಖ್ಯ ಗುರಿ! ಇಲ್ಲಿಯವರೆಗೆ ಅಮೆರಿಕಾ ದೇಶವು ಯಾವ ದೇಶದ ಕಡೆಗೂ ಸೇರದ ತಟಸ್ಥವಾಗಿತ್ತು ೧೧ನೆಯ ತಾರೀಖಿನದಿವಸ ಜರ್ಮನಿ ಮತ್ತು ಇಟಲಿದೇಶಗಳು ಅಮೆರಿಕೆಯಮೇಲೆ ಯುದ್ಧವನ್ನು ಸಾರಿದವು ಜಪಾನದೇಶವಂತೂ ಮೊದಲೇ ಯುದ್ಧವನ್ನು ಸಾರಿರುವದು ೧೧ನೆಯ ತಾರೀಖಿನದಿವಸ ಹಿಟ್ಲರನು ಮಾಡಿದ ಭಾಷಣವನ್ನು ನೋಡಿದರೆ ಆತನಿಗೆ ಯುದ್ಧವು ಇನ್ನೂ ಸಾಕಾಗಿಲ್ಲವೆಂದು ತೋರುತ್ತದೆ 'ಯೂರೋಪ ಖಂಡವನ್ನು ನುಂಗಿದಂತೆ ಅಮೆರಿಕಾಖಂಡವನ್ನು ಸಹ ನುಂಗಬೇಕೆಂದು ಯೋಚಿಸಹತ್ತಿರುವಂತೆ ತೋರುತ್ತದೆ. ಈವರೆಗೆ ಯೂರೋಪಖಂಡವು ಮಾತ್ರ ಯುದ್ಧಾಗ್ನಿಯಿಂದ ಉರಿಯುತ್ತಿತ್ತು ಇನ್ನು ಮುಂದೆ ಅಮೆರಿಕಾ-ಏಶಿಯಾ ಆಫ್ರಿಕಾಖಂಡಗಳೆಲ್ಲವೂ ಉರಿಯಹತ್ತುವವು ಈಗಿನ ಪರಿಸ್ಥಿತಿಯನ್ನು ವಿಚಾರಮಾಡಿ ನೋಡಿದರೆ ಈ ಮಹಾಯುದ್ಧವು ಸಮಸ್ತ ಪ್ರಪಂಚವನ್ನೇ ವ್ಯಾಪಿಸಿದಂತಾಯಿತೆಂದು ಹೇಳಬಹುದಾಗಿದೆ ಜರ್ಮನಿ ಜಪಾನು ಇಟಲಿ ಈ ಮೂರು ರಾಷ್ಟ್ರಗಳು ಒಂದಾಗಿ ಬ್ರಿಟಿಷ್ ಮತ್ತು ಅಮೆರಿಕಾದೇಶಗಳಮೇಲೆ ಬಿದ್ದಿವೆ ಇದು ಸತ್ವಪರೀಕ್ಷೆಯ ಕಾಲವಾಗಿದೆ ಜಯಲಕ್ಷ್ಮಿಯು ಯಾರ ಕೊರಳಿಗೆ ಮಾಲಿಕೆಯನ್ನು ಹಾಕುವಳೋ ತಿಳಿಯದಾಗಿದೆ ಆರಂಭಶೂರರಿಗೆ ಕೊನೆಗೆ ಅಪಜಯವೆನ್ನುವುದೇ ಲೋಕವಾಡಿಕೆ ಅದರಂತೆಯೇ ಈ ನಿರಂಕುಶರಾಷ್ಟ್ರಗಳ ಸ್ಥಿತಿಯಾಗುವುದರಲ್ಲಿ ಸಂದೇಹವಿಲ್ಲ ಕೊನೆಗೆ ಈ ಮೂರು ರಾಷ್ಟ್ರಗಳು ಸುಂದೋಪಸುಂದರಂತೆ ತಮ್ಮ ತಮ್ಮೊಳಗೆ ಹೊಡೆದಾಡಿ ನಾಶವಾಗುವವೆಂದೇ ಹೇಳಬೇಕಾಗಿದೆ ಮನುಷ್ಯನಿಗೆ ಆಶೆಯೆನ್ನುವದು ಬಹಳ ಕಷ್ಟವು! ಆಶೆಗೆ ಒಳಗಾದವನು ಎಂದೂ ಉದ್ಧಾರವಾಗುವದಿಲ್ಲ ಹೀಗಿರುವಲ್ಲಿ ಮಹಾ ದುರಾಶೆಗೊಳಗಾಗಿರುವ ಈ ತ್ರಿರಾಷ್ಟ್ರಗಳು ಉದ್ಧಾರವಾಗುವ ಬಗೆಯೆಂತು? ಅಸ್ತು!

ಈ ಮಹಾಯುದ್ಧವು ಈವರೆಗೆ ನಮ್ಮ ಇಂಡಿಯಾದೇಶಕ್ಕೆ ಬಹುದೂರದಲ್ಲಿತ್ತು ಆದರೆ ಜಪಾನರು ಸಿಂಗಪುರದಮೇಲೆ ಬಾಂಬುಗಳನ್ನು ಹಾಕಲು ಪ್ರಾರಂಭಿಸಿರುವದನ್ನು ನೋಡಿದರೆ ನಮ್ಮ ದೇಶದ ಹೆಬ್ಬಾಗಿಲಿಗೇ ಬಂದಿತೆಂದು ಹೇಳಬಹುದಾಗಿದೆ ಈ ಮಹಾಯುದ್ಧವು ಈಗ್ಗೆ ೨|| ವರ್ಷಗಳಿಂದ ನಡೆಯುತ್ತಿದ್ದರೂ ಇಂಡಿಯಾ ದೇಶದಲ್ಲಿ ಸಾಮಾನುಗಳಿಗೆ ಅಷ್ಟು ತೊಂದರೆಯಾಗಿದ್ದಿಲ್ಲ ಜಪಾನ್ ಯುದ್ಧವು ಪ್ರಾರಂಭವಾದಕೂಡಲೆ ಈಗ ೮ ೧೦ ದಿನಗಳಲ್ಲಿ ಪ್ರತಿಯೊಂದು ಸಾಮಾನುಗಳ ಬೆಲೆಯು ಮಿತಿಮೀರಿ ಏರಿಹೋಗಿದೆ ಅದನ್ನು ವರ್ಣಿಸುವುದು ಸಾಧ್ಯವೇ ಇಲ್ಲ ಕಾಗದದ ಬೆಲೆಯು ೧ಕ್ಕೆ ೫ ೬ ರಷ್ಟು ಏರಿಹೋಗಿದೆ ಇದರಂತೆಯೇ ಅನೇಕ ಸಾಮಾನುಗಳ ಸ್ಥಿತಿಯಾಗಿದೆ ಪ್ರತಿದಿನದ ಆಹಾರ ಪದಾರ್ಥಗಳೂ ಸಹ ಏರಿಹೋಗಿವೆ ಹೀಗಾದರೆ ಬಡವರು ಬದುಕುವ ಬಗೆ ಹೇಗೆ? ಈ ವಿಷಯವನ್ನು ಇಂಡಿಯಾ ಸರಕಾರದವರೂ ಮೈಸೂರುಸರಕಾರದವರೂ ಮನಸ್ಸಿನಮೇಲೆ ತೆಗೆದುಕೊಂಡು ಪದಾರ್ಥಗಳ ಬೆಲೆಯನ್ನು ಒಂದು ಹದ್ದಿನಲ್ಲಿರಿಸಬೇಕು ಹಾಗೆ ಮಾಡದಿದ್ದರೆ ಪ್ರಜೆಗಳೆಲ್ಲರಿಗೂ ಬಹು ತೊಂದರೆಯುಂಟಾಗುವದೆಂಬುವದನ್ನು ಬೇರೆ ಹೇಳಬೇಕಾಗಿಲ್ಲ ಒಟ್ಟಿಗೆ ಸಮಸ್ತ ಪ್ರಪಂಚಕ್ಕೆ ದುಃಖದಾಯಕವಾಗಿರುವ ಈ ಅನಿಷ್ಟ ಯುದ್ಧವು ಜಗದೀಶ್ವರನ ಅನುಗ್ರಹದಿಂದ ಶೀಘ್ರದಲ್ಲಿಯೇ ಕೊನೆಗಂಡು ಸಾರ್ವತ್ರ ಶಾಂತಿಯು ನೆಲೆಸಲೆಂಬುದೇ ಸರ್ವರ ಪ್ರಾರ್ಥನೆಯಾಗಿದೆ

ಯುದ್ಧವಾರ್ತೆ.

ಆಕ್ಸಿಸ್ ರಾಷ್ಟ್ರಗಳ ಒಪ್ಪಂದ

ಇಟಲಿ, ಜಪಾನ್ ಮತ್ತು ಜರ್ಮನಿಗಳಿಗಾದ ಒಪ್ಪಂದಗಳು—(೧) ಅಮೆರಿಕಾದವರೂ, ಬ್ರಿಟನ್ನಿನವರೂ ಬೇಕು ಬೇಕೆಂದು ಯುದ್ಧವನ್ನು ಹೂಡಿರುವುದರಿಂದ ಅದನ್ನು ಜಯಪ್ರದನಾಗಿ ಪ್ರತಿಭಟಿಸಲು ಈ ಮೂರು ರಾಷ್ಟ್ರಗಳೂ ಒಟ್ಟಾಗಿ ಸೇರುವವು ಈ ಮೂರು ರಾಷ್ಟ್ರಗಳ ಉದ್ದೇಶವೂ ಒಂದೇ ಆಗಿದೆ

(೨) ಈ ಮೂರು ರಾಷ್ಟ್ರಗಳು ಅಮೆರಿಕಾ ಮತ್ತು ಬ್ರಿಟನ್ನಿನೊಂದಿಗೆ ಯಾವರೀತಿಯಲ್ಲೂ ಒಪ್ಪಂದ ಮಾಡಿಕೊಳ್ಳುವುದಿಲ್ಲ ಎದುರು ಪಕ್ಷದಿಂದ ಅದೇ ರೀತಿ ಬಯಕೆ ಬಂದ ಹೊರತು ಅದಕ್ಕೆ ಗಮನ ಕೊಡುವುದಿಲ್ಲ (೩) ಹೊಸ ವ್ಯವಸ್ಥೆಯನ್ನು ರೂಪುಗೊಳಿಸಲು ಯುದ್ಧಾನಂತರವೂ ಸಹ ಈ ಮೂರು ರಾಷ್ಟ್ರಗಳೂ ಒಟ್ಟಿಗೆ ಕೆಲಸ ಮಾಡುವುವು.

ಬ್ರಿಟನ್ನಿನ ಭಾರಿ ಸಂಗ್ರಾಮನೌಕೆಗಳ ನಾಶ

35 ಸಾವಿರ ಟನ್ ತೂಕದ 'ಪ್ರಿನ್ಸ್ ಆಫ್ ವೇಲ್ಸ್' ಎಂಬ ಭಾರಿ ಸಂಗ್ರಾಮ ನೌಕೆಯೂ, 32 ಸಾವಿರ ಟನ್ನ ತೂಕದ "ರಿಪಲ್ಸ್" ಎಂಬ ಸಂಗ್ರಾಮ ನೌಕೆಯೂ ಮಲಯದಲ್ಲಿ ಜಪಾನರ ಆಕ್ರಮಣಕಾರ್ಯವನ್ನು ಪ್ರತಿಭಟಿಸುತ್ತಿದ್ದಾಗ ಜಪಾನಿನ ವಿಮಾನಗಳ ಏಟಿಗೆ ಸಿಕ್ಕಿ ಮುಳುಗಿಹೋದವು 1939 ರಲ್ಲಿ ನಿರ್ಮಿಸಲ್ಪಟ್ಟಿದ್ದ ಪ್ರಿನ್ಸ್ಆಫ್‌ವೇಲ್ಸ್ ನೌಕೆಯಲ್ಲಿ ವಿಮಾನಮುತ್ತಿಗೆ ರಕ್ಷಣೆಗೆ ಬೇಕಾದ ನವೀನ ಏರ್ಪಾಡುಗಳಿದ್ದವು 1500 ಜನ ನಾವಿಕರು ಇದರಲ್ಲಿ ಕೆಲಸಮಾಡುತ್ತಿದ್ದರು 4 ವಿಮಾನಗಳು ಇದರಲ್ಲಿ ಇಡಲ್ಪಟ್ಟಿದ್ದವು. "ರಿಪಲ್ಸ್ ನೌಕೆಯಲ್ಲಿ 1200 ಜನ ನಾವಿಕರಿದ್ದರು 16 ಅಂಗುಲ ವ್ಯಾಸದ 6 ಫಿರಂಗಿಗಳು ಆ ನೌಕೆಯಲ್ಲಿದ್ದವು

ಬ್ರಿಟಿಷ್ ನೌಕೆಗಳ ೨೩೦೦ ನಾವಿಕರು ರಕ್ಷಿಸಲ್ಪಟ್ಟಿದ್ದಾರೆ

ಮುಳುಗಿಸಲ್ಪಟ್ಟ ಬ್ರಿಟಿಷ್ ಸಮರ ನೌಕೆಗಳಾದ ಪ್ರಿನ್ಸ್ ಆಫ್ ವೇಲ್ಸ್ ಮತ್ತು ರಿಪಲ್ಸ್ ನೌಕೆಗಳಲ್ಲಿದ್ದ ನಾವಿಕರಲ್ಲಿ ಸುಮಾರು 2300 ಮಂದಿ ನಾವಿಕರು ಸುರಕ್ಷಿತವಾಗಿ ಸಿಂಗಪುರಕ್ಕೆ ತಲುಪಿರುತ್ತಾರೆ. ಆ ನೌಕೆಗಳಲ್ಲಿದ್ದವರಲ್ಲಿ ಮೂರನೆ ಎರಡು ಭಾಗದಷ್ಟು ಮಂದಿ ಉಳಿದಂತಾಗಿದೆ ಇದರಲ್ಲಿ 130 ಅಧಿಕಾರಿಗಳೂ 30 ಮಂದಿ ನಾವಿಕರೂ ಉಳಿದಿದ್ದಾರೆ. ಪ್ರಿನ್ಸ್ ಆಫ್ ವೇಲ್ಸ್ ನೌಕೆಯಲ್ಲಿದ್ದ ಅಡ್ಮಿರಲ್ ಸರ್ ಟಾಂಫಿಲಿಪ್ಸ್ ರವರು ಪತ್ತೆ ಇಲ್ಲವೆಂದು ಅಧಿಕಾರಯುತವಾದ ಪ್ರಕಟನೆಯು ಹೊರಟಿದೆ

ಅಮೆರಿಕಾ ಜನಾಂಗಕ್ಕೆ ರೂಜ್‌ವೆಲ್ಟರ ಎಚ್ಚರಿಕೆ

ಕಳೆದ 9 ನೆಯ ತಾರೀಖಿನ ರಾತ್ರಿ ಅಮೆರಿಕಾ ರಾಜ್ಯಾಧ್ಯಕ್ಷ ರೂಜ್‌ವೆಲ್ಟರವರು ಸಂಗ್ರಾಮ ಪರಿಸ್ಥಿತಿಯನ್ನು ಕುರಿತು ವಿವರಿಸುತ್ತ "ಅಮೆರಿಕವು ಸಂಗ್ರಾಮದಿಂದ ದೂರವಾಗಿ ಉಳಿಯಬಹುದೆಂಬ ಭ್ರಾಂತಿಯನ್ನು ಸಂಪೂರ್ಣವಾಗಿ ತೊರೆದು ಈಗಿನ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ ಗಾಮ್, ವೇಕ್ ಮತ್ತು ಮಿಡ್‌ವೇ ದ್ವೀಪಗಳನ್ನು ಶತ್ರುಗಳು ಆಕ್ರಮಿಸಿದರೆಂಬ ವಾರ್ತೆಯನ್ನು ಕೇಳಲು ಅಮೆರಿಕವು ಸಿದ್ಧವಾಗಿರಬೇಕು ಆದರೆ ಪೆಸಿಫಿಕ್ ಸಾಗರದಲ್ಲಿ ತಮ್ಮ ನೌಕೆಗಳ ಕೈ ಮೇಲಾಗಿದೆಯೆಂದು ಜಪಾನ್ ಹೇಳುತ್ತಿರುವುದನ್ನು ಒಪ್ಪಲಾಗುವುದಿಲ್ಲ ಈಗ ಜರ್ಮನಿ ಜಪಾನ್‌ಗಳೆರಡೂ ಒಂದು ಗೊತ್ತಾದ ಕಾರ್ಯಕ್ರಮದಂತೆ ಯುದ್ಧ ಮಾಡುತ್ತಿವೆ. ಈಗ ಎಲ್ಲ ಖಂಡಗಳೂ ಎಲ್ಲ ಸಾಗರಗಳೂ ಒಂದು ಅಖಂಡ ರಣಭೂಮಿಯೆಂದು ಆಕ್ಸಿಸ್ ರಾಷ್ಟ್ರಗಳು ಪರಿಗಣಿಸಿವೆ. ಈಗಿನದು ಅತಿ ದೀರ್ಘ ಯುದ್ಧ ಮಾತ್ರವಲ್ಲದೆ ಉಗ್ರಯುದ್ಧವೂ ಹೌದು ಜಪಾನಿನೊಡನೆ ನಡೆಸುವ ಯುದ್ಧದಲ್ಲಿ ಮೊದಲು ಕೆಲವು ಕಾಲ ಅಮೆರಿಕಕ್ಕೆ ಪ್ರಾಣಹಾನಿ ಹೆಚ್ಚಾಗುವದು ಪ್ರಪಂಚದಲ್ಲಿ ಎಲ್ಲಿ ರಾಕ್ಷಸೀ ವರ್ತನವು ತೋರಿಬಂದರೂ ಅದನ್ನು ಮಟ್ಟಹಾಕಬೇಕಾಗಿದೆ. ಹಲವು ಪದಾರ್ಥಗಳೂ ನಮಗೆ ದ್ವಿಗುಣವಾಗಿ ಬೇಕಾಗಿವೆ ಉತ್ಪತ್ತಿಯನ್ನು ನಾಲ್ಕರಷ್ಟು ಹೆಚ್ಚಿಸಬೇಕು" ಎಂದು ಎಚ್ಚರಿಸಿದರು

ಜಪಾನರು ಮುಂದುವರಿಯುತ್ತಿದ್ದಾರೆ

ಜಪಾನರು ಉತ್ತರ ಮಲಯಾಕ್ಕೆ ಮುತ್ತಿಗೆ ಹಾಕಿ ಮುಂದುವರಿಯುತ್ತಿದ್ದಾರೆ. ಸಿಂಗಪುರದ ಕಡೆಗೆ ಭೂಮಾರ್ಗವಾಗಿ ಹೋಗಬೇಕೆಂದು ಅವರು ಯೋಚಿಸಿದಂತಿದೆ ಸಿಂಗಪುರ ಮನಿಲಗಳು ಬಲಯುತ ಸ್ಥಾನಗಳೆಂದೂ ಈ ಸ್ಥಾನಗಳಿಂದ ಬ್ರಿಟಿಷರೂ ಅಮೆರಿಕನ್ನರೂ ತಮ್ಮ ಮೇಲೆ ಬೀಳುವರೆಂದೂ ತಿಳಿದು ಜಪಾನರು

ಎರಡು ಮೂಲಗಳನ್ನೂ ನಾಶಮಾಡಬೇಕೆಂದು ಸಂಕಲ್ಪ ಮಾಡಿರುವಂತಿದೆ. ಫಿಲಿಪ್ಪೈನ್ ದ್ವೀಪಗಳಲ್ಲಿ ಕೇವಲ 12000 ಮಂದಿ ಅಮೇರಿಕ ಯೋಧರಿರುವದರಿಂದ ಅವನ್ನು ಜಪಾನರು ಹಿಡಿಯಬಹುದೆಂಬ ಭಯವುಂಟಾಗಿದೆ. 5000 ಮೈಲು ದೂರವಿರುವ ಹವಾಯ್ ನಿಂದ ಮಾತ್ರ ಪಶ್ಚಿಮ ಅಮೇರಿಕ ಸೇನೆಯನ್ನು ಕಳುಹಿಸಲು ಸಾಧ್ಯವಿದೆ ಗ್ವಾಂ ವೇಕ್ ಮತ್ತು ಮಿಡ್‌ವೇ ದ್ವೀಪಗಳು ಜಪಾನರ ವಶವಾಗಬಹುದೆಂದು ಆಗಲೇ ಹೊಪ್‌ವೆಲ್ಲರು ತಿಳಿಸಿದ್ದಾರೆ. ಈಗ ಅಮೇರಿಕ ನೌಕೆಗಳು ಸಹಾಯಕ್ಕೆ ಬರಬೇಕಾದರೆ ಆಸ್ಟ್ರೇಲಿಯದ ಮೂಲಕ ಬರಬೇಕಾಗಬಹುದೆಂದು ಹೇಳಲಾಗಿದೆ. ಜಪಾನರು ಎಲ್ಲ ಕಡೆಯೂ ಮುನ್ನುಗ್ಗುತ್ತಿದ್ದಾರೆ.

ಗ್ವಾಂ ರಾಜಧಾನಿಯು ಜಪಾನರ ವಶವಾಯಿತೇ ?

ಇಂಪೀರಿಯಲ್ ಜಪಾನ್ ಕೇಂದ್ರದವರು ಒಂದು ಪ್ರಕಟನೆಯನ್ನು ಹೊರಡಿಸಿ ತಮ್ಮ ಸೈನಿಕರು ಗ್ವಾಂ ದ್ವೀಪ [illegible] ಹಿಡಿದು ಆ ದ್ವೀಪದ ರಾಜಧಾನಿಯನ್ನು ವಶಪಡಿಸಿಕೊಂಡರೆಂದೂ, ಆ ದ್ವೀಪದಲ್ಲಿದ್ದ 350 ಜನ ಅಮೇರಿಕನ್ನರನ್ನು ಕೈಸೆರೆ ಹಿಡಿಯಲಾಯಿತೆಂದೂ, ಅವರಲ್ಲಿ [illegible] ಪದಸೇನಾನಾಯಕರೂ, ಗವರ್ನರ್ ಜನರಲ್‌ರೂ ಇದ್ದರೆಂದೂ ಪ್ರಕಟಿಸಿದ್ದಾರೆ

ಜಪಾನರ ವಿಮಾನ ಮುತ್ತಿಗೆ ಪ್ಯಾರಾಚೂಟ್ ಯೋಧರ ಬಂಧನ

[illegible] ವ 10 ನೆಯ ತಾರೀಖಿನ ಮಧ್ಯಾಹ್ನ ಜಪಾನ್ ವಿಮಾನಗಳು ಮನಿಲಾದ ಮೇಲೆ ಹಲವು ಸಾರ ಮುತ್ತಿಗೆ ನಡೆಸಿದವು ನಿಕೋಲ್ಸ್ ವಿಮಾನ ನಿಲ್ದಾಣದ [illegible], ಕವೈಟ್ ನೌಕಾ ಮೂಲದ ಮೇಲೂ ಮುತ್ತಿಗೆ ನಡೆಯಿತು ನಿಕೋಲ್ಸ್ ವಿಮಾನ ನಿಲ್ದಾಣದಲ್ಲಿ [illegible] ಬೆಂಕಿ ಹತ್ತಿಕೊಂಡಿತೆಂದೂ, ಈ ಮುತ್ತಿಗೆಗಳಲ್ಲಿ [illegible] ಜಪಾನ್ ವಿಮಾನಗಳು ಭಾಗವಹಿಸಿದ್ದವೆಂದೂ, ಹೇಳಲಾಗಿದೆ. ಮನಿಲಾದ ವಾಯುವ್ಯಕ್ಕೆ 200 ಮೈಲು ದೂರದಲ್ಲಿರುವ ವಿಗಾನ್ ಎಂಬಲ್ಲಿ ಬಂದಿಳಿದ ಜಪಾನ್ ಪ್ಯಾರಾಚೂಟ್ ಸೈನಿಕರನ್ನೆಲ್ಲಾ ಬಂದಿಸಲಾಯಿತೆಂದೂ ಹೇಳಲಾಗಿದೆ

ಹಾಂಕಾಂಗ್ ಮೇಲೆ ದಾಳಿ

ಜಪಾನ್ ವಿಮಾನಗಳು ಹಾಂಗ್ ಕಾಂಗ್ ಬಂದರಿನಲ್ಲಿರುವ ಬ್ರಿಟನ್ನಿನ ಸಂಗ್ರಾಮನೌಕೆಗಳ ಮೇಲೆ ಮುತ್ತಿಗೆ ನಡೆಸಿದವಾದರೂ ನೌಕೆಗಳಿಗೆ ಅಪಾಯವೇನೂ ತಟ್ಟಲಿಲ್ಲವೆಂದೂ ಹಾಂಗ್‌ಕಾಂಗಿನ ರಕ್ಷಣಾ ಕಾರ್ಯವು ಯಶಸ್ವಿಯಾಗಿ ನಿರ್ವಹಿಸಲ್ಪಡುತ್ತಿದೆಯೆಂದೂ, ಬ್ರಿಟನ್ನಿನ 'ಆರ್ಟಿಲರಿ' ಬಲದಿಂದ ಜಪಾನರ ಮುನ್ನುಗ್ಗುವಿಕೆಯನ್ನು ತಡೆಯಲಾಗಿದೆಯೆಂದೂ ಅಲ್ಲಿನ ಒಂದು ಪ್ರಕಟನೆಯು ತಿಳಿಸುತ್ತದೆ

ಸಿಂಗಪೂರದ ಮೇಲೆ ದಾಳಿ

ಸಿಂಗಪುರದ ಬಳಿ ಭಯಂಕರ ಹೊಡೆದಾಟ ನಡೆಯು[illegible] ಸ್ಪಷ್ಟವಾಗಿ ಜಪಾನಿನ ಇಂಪೀರಿಯಲ್ ಹೆಡ್‌ಕ್ವಾರ್ಟರಿನಿಂದ ಸುದ್ದಿ ಹೊರಟಿದೆ ಮಲಯದಲ್ಲಿರುವ ಬ್ರಿಟಿಷ್ ವಿಮಾನ ಮೂಲಗಳು ಬಾಂಬುಗಳನ್ನು ಸುರಿಸುತ್ತಿವೆ. [illegible] ಜಪಾನಿನ ಸಂಗ್ರಾಮ ನೌಕೆಗಳು ಮಿಡ್‌ವೇ ದ್ವೀಪಗಳ ಮೇಲೆ ಗುಂಡಿನ ಮಳೆಗರೆದು ವಿಮಾನ ಸ್ಥಾವರಗಳನ್ನು ಹಾಳುಮಾಡಿದವೆಂದು ಆ ಸುದ್ದಿಯು ತಿಳಿಸುತ್ತದೆ

ಲೂಸಾನ್ ಆಕ್ರಮಣ ಪ್ರಯತ್ನ

ಫಿಲಿಪ್ಪೈನ್ ಸೇನೆಗಳು ಮ್ಯಾನಿಲಾದಿಂದ ನೂರು ಮೈಲಿಗಳ ಆಚೆ ಜಪಾನ್ ಸೇನೆಗಳನ್ನು ತಡೆದಿವೆ ಲೂಸಾನಿಗೆ ಪಶ್ಚಿಮದಲ್ಲಿ ಅಂದರೆ ಲಿಂಗಾಯನ್ ಸರಹದ್ದಿನಲ್ಲಿ ಜಪಾನರ ದಾಳಿ ನಡೆಯಿತು ಲೂಸಾನಿನ ಸೇನೆಗಳು [illegible]ವಾದ ಸ್ಥಳಗಳನ್ನಾಕ್ರಮಿಸಿ ನಿಂತಿರುವದಾಗಿ ಹೇಳಲಾಗಿದೆ. ಜಪಾನಿನವರ ಬಾಂಬು ದಾಳಿಯಲ್ಲಿ ನೇವಲ್‌ಬೇಸ್‌ಗೆ ಪೆಟ್ಟುಬಿದ್ದಿತೆಂದೂ ಕಳೆದ ಬುಧವಾರ ನಡೆದ ದಾಳಿಯಲ್ಲಿ 30 ಮಂದಿ ಸತ್ತರೆಂದೂ 300 ಜನರಿಗೆ ಗಾಯಗಳಾದವೆಂದೂ ತಿಳಿದುಬರುತ್ತದೆ ಅಪಾರಿಗೆ 80 ಮೈಲು ದೂರದಲ್ಲಿರುವ ಇಸಾಬೆಲ್ಲಾ ಪ್ರಾಂತದ ಟಾಗಂ ಸವಿಾಪದ ವಿಮಾನ ನಿಲ್ದಾಣದಲ್ಲಿ ಜಪಾನ್ ಪ್ಯಾರಾಚೂಟ್ ಸೈನಿಕರು ಬಂದಿಳಿದಿರುವರೆಂದೂ ಅವರನ್ನು ಓಡಿಸಲು ಫಿಲಿಪ್ಪೈನ್ಸ್ ಕಾನ್ಸ್ಟೇಬ್ಯುಲರಿ ಪಡೆಯು ಸಾಹಸಪಡುತ್ತಿದೆಯೆಂದೂ ಹೇಳಲಾಗಿದೆ ಅಮೇರಿಕವು ಲೂಸಾನ್ ದ್ವೀಪದ ರಕ್ಷಣೆಯು ಬಲವಾಗಿದೆಯೆಂದೂ ಕಳವಳಕ್ಕೆ ಕಾರಣವಿಲ್ಲವೆಂದೂ ಪ್ರಕಟಿಸಿದೆ

ಜಪಾನ್ ನೌಕೆಯ ನಾಶ

[illegible] ದ್ವೀಪದ ಉತ್ತರದಲ್ಲಿ 29000 ಟನ್ ತೂಕದ ಜಪಾನಿನ ಸಂಗ್ರಾಮ ನೌಕೆಯಾದ 'ಹರೂನ' ಎಂಬುದಕ್ಕೆ ಬಾಂಬಿನೇಟು ಬಿದ್ದು ಬೆಂಕಿ ಹತ್ತಿಕೊಂಡಿತೆಂದೂ ಅಮೇರಿಕ ವಿಮಾನಗಳು ಅಲ್ಲಿಂದ ಹೊರಟಾಗ ನೌಕೆಯೆಲ್ಲಾ ಅಗ್ನಿಜ್ವಾಲೆಯಿಂದ ಆವರಿಸಲ್ಪಟ್ಟು ಭಯಂಕರವಾಗಿ ಉರಿಯುತ್ತಿತ್ತೆಂದೂ ಮನಿಲಾ ರೇಡಿಯೋ ಸುದ್ದಿಯು ತಿಳಿಸಿತು ಆ ನೌಕೆಯಲ್ಲಿ [illegible] ನಾವಿಕರು ಕೆಲಸ ಮಾಡುತ್ತಿದ್ದರೆಂದು ಹೇಳಲಾಗಿದೆ

ಜಪಾನ್ ಟ್ಯಾಂಕುಗಳನ್ನು ಭಾರತೀಯರು ನಾಶ ಮಾಡಿದರು

ಕಳೆದ ೯ನೆಯ ತಾರೀಖಿನದಿವಸ ಮಲಯದ [illegible] ಕ್ಷೇತ್ರದಲ್ಲಿ ಬಾರಿ ಹೊಡೆದಾಟ ನಡೆಯಿತು ಬ್ರಿಟಿಷ್ ಸೇನೆಗಳು ಕೋಟ್ ಬರುನಿಗೆ ದಕ್ಷಿಣದಲ್ಲಿ ವ್ಯವಸ್ಥಿತವಾಗಿ ನಿಂತಿವೆ ಕೇದಾ ಕ್ಷೇತ್ರದಲ್ಲಿ ಭಾರತದ ಪಂಜಾಬಿನ ಪಡೆಯವರು ಶತ್ರು[illegible] ಟ್ಯಾಂಕುಗಳನ್ನು ಮುತ್ತಿ ನಾಶಮಾಡಿದರೆಂದು ಪ್ರಕಟವಾಗಿದೆ

ಜಪಾನರ ಕಡೆ ನಷ್ಟ

'ಪ್ರಿನ್ಸ್ ಆಫ್ ವೇಲ್ಸ್' ಮತ್ತು 'ರಿಪಲ್ಸ್' ನೌಕೆಗಳ ಮೇಲೆ ಜಪಾನರು ಮುತ್ತಿಗೆ ನಡೆಸಿದಾಗ 7 ಜಪಾನ್ ವಿಮಾನಗಳು ನಾಶವಾದವು ಉತ್ತರ ಲೂಜನಿನಲ್ಲಿ ಇಳಿಯುವಾಗ ಸಬ್‌ಮೆರೀನ್‌ಗಳನ್ನು ಬಿಟ್ಟಿಸಿಕೊಂಡು ಹೋದ ಜಪಾನ್ ಒಂದು ಹಡಗ ಮುಳುಗಿತು ಲೂಜಾನ್ ದ್ವೀಪದ ಪಶ್ಚಿಮ ತೀರದಲ್ಲಿ ಪುನ 8 ಜಪಾನರು ಇಳಿಯಲು ಪ್ರಯತ್ನಿಸಿದಾಗ ಅವರನ್ನು ಹಿಂದಕ್ಕಟ್ಟಲಾಯಿತು 10 ನೇ ತಾರೀಖಿನ ದಿವಸ ಮನಿಲಾ ಮೇಲೆ ವಿಮಾನ ಮುತ್ತಿಗೆ ನಡೆದಾಗ 1[illegible] ಜಪಾನ್ ಬಾಂಬರು [illegible] ಕೆಡವಲ್ಪಟ್ಟವು ಪೆರಲ್ ಬಂದರಿನ ಮೇಲೆ ಮುತ್ತಿಗೆ ನಡೆಸಿದಾಗ ಜಪಾನರು 122 ಯೋಧರನ್ನು ಕಳೆದುಕೊಂಡರು ಹಾಂಕಾಂಗಿನ ಪ್ರಾಂತದೇಶದಲ್ಲಿ ಜಪಾನರು ಎರಡು ದೋಣಿಗಳಲ್ಲಿ ಒಂದು ಇಳಿಯಲು ಪ್ರಯತ್ನಿಸಿದಾಗ ಅವರ ಮೇಲೆ ಗುಂಡು ಹಾರಿಸಿದ್ದರಿಂದ ಎಲ್ಲರೂ ನೀರುಪಾಲಾದರೆಂದು ಹೇಳಲಾಗಿದೆ

ಕೆಲೆಂಟನ್ ಬಳಿ ಯುದ್ಧ ಭಾರತೀಯರ ಸಾಹಸ!

ಭಾರತೀಯ ಸೇನೆಗಳು ಆರ್ ಎ ಎಫ್ ಸಹಾಯದಿಂದ ಮಲಯಾ ಪೂರ್ವತೀರದಲ್ಲಿರುವ ಕೆಲೆಂಟನ್ ಹತ್ತಿರ ಉಗ್ರವಾಗಿ ಕಾದಾಡಿದವು ಜಪಾನ್ ಸೈನಿಕರು ನೌಕಾ ಮತ್ತು ವಾಯುವಿಮಾನ ಪಡೆಗಳ ಸಹಾಯದಿಂದ ಥೈಲೆಂಡಿನಲ್ಲಿರುವ ಸಿಂಗೋರಾ ಕಡೆಯಿಂದ ಬಂದಿಳಿಯುತ್ತಿದ್ದಾರೆಂದು ಮಲಯಾದಲ್ಲಿರುವ ಭಾರತೀಯ ಸೈನಿಕಪಡೆಯ ಆಫೀಸರವರು ತಿಳಿಸುತ್ತಾರೆ ಈ ಮೊಟ್ಟಮೊದಲನೆಯ ಘರ್ಷಣೆಯಲ್ಲಿ ಭಾರತೀಯ ಸೈನಿಕರು ಭಾಗವಹಿಸಿದರು ಅಲ್ಲದೆ ಸಮರನೌಕೆಗಳಿಂದ ಏಕಪ್ರಕಾರವಾದ ಗುಂಡಿನ ಮಳೆಗೆ ತುತ್ತಾದರು ತಮಗಿಂತಲೂ ಬಲಶಾಲಿಗಳಾದ ಜಪಾನ್ ಸೈನಿಕರ ದಾಳಿಯನ್ನು ಪ್ರತಿದಾಳಿಗಳಿಂದ ತಡೆಗಟ್ಟಿದರು ಈ ಪ್ರತಿದಾಳಿಯಲ್ಲಿ ಭರತಖಂಡದ ವಾಯುವ್ಯ ಗಡಿನಾಡಿನ ರೆಜಿಮೆಂಟಿನವರು ಪಾತ್ರವಹಿಸಿದ್ದರು ಶತ್ರುಪಕ್ಷದವರು ಯಾವ ಯಾವ ಪ್ರದೇಶವನ್ನು ಆಕ್ರಮಿಸಿದ್ದರೋ ಆ ಪ್ರದೇಶದಿಂದ ಅವರನ್ನು ಹಿಮ್ಮೆಟ್ಟಿಸಲಾಯಿತು ಹೀಗೆ ಹಿಮ್ಮೆಟ್ಟುವಾಗ ಅವರು ನದಿಯ ಹಿಂಭಾಗದಲ್ಲಿರುವ ದಟ್ಟವಾದ ಅರಣ್ಯದ ಹಿಂದೆ ಅವಿತುಕೊಳ್ಳಬೇಕಾಯಿತು. ಅನಂತರ ಜಪಾನ್ ಸೈನಿಕರು ತರಂಗತರಂಗವಾಗಿ ಮುನ್ನುಗ್ಗಿ ಮೋಟಾರು ಬೋಟುಗಳಿಂದಲೂ, ಇತರ ವಿಧವಾದ ದೋಣಿಗಳಿಂದಲೂ ಬಂದು ಆ ಪ್ರದೇಶಗಳನ್ನು ಆಕ್ರಮಿಸಿದರು ಥೈಲೆಂಡ್ ದೇಶವು 8 ನೆಯ ತಾರೀಖಿನ ದಿವಸ ಶರಣಾಗತವಾದ್ದರಿಂದ ಆ ದೇಶದ ವಿಮಾನನಿಲ್ದಾಣಗಳೆಲ್ಲವೂ ಜಪಾನರ ವಶವಾದವು ಈ ಅನುಕೂಲದಿಂದ ಅವರು ಮುನ್ನುಗ್ಗಲ ಆರಂಭಿಸಿದರು. ತೀರದ ಕದನದಲ್ಲಿ ಬಲೂಚಿಗಳೂ, ಹೈದರಾಬಾದಿಗಳೂ, ಪಂಜಾಬ್‌ಸೈನ್ಯಗಳೂ ಭಾಗವಹಿಸಿದ್ದವು ಕ್ಯಾಂಟನ್ ಹತ್ತಿರ ಶತ್ರುಸೈನಿಕರು ಬಂದಿಳಿಯುವುದನ್ನು ಗಢವಾಲಿಗಳೂ, ಸಿಕ್ಕರೂ ತಡೆಗಟ್ಟಿದ್ದಾರೆ

ರಷ್ಯದಲ್ಲಿ ಜರ್ಮನರ ನಷ್ಟ

ಮಾಸ್ಕೋ ಮೇಲೆ ಎರಡನೆಯ ದಾಳಿಯು ಸುರುವಾದಂದಿನಿಂದ ೮೫ ಸಾವಿರ ಮಂದಿ ಜರ್ಮನರು ಪ್ರಾಣಬಿಟ್ಟಿದ್ದಾರೆಂದು ತಿಳಿದುಬಂದಿದೆ ಜರ್ಮನರ 1400 ಟ್ಯಾಂಕುಗಳೂ, 3400 ಲಾರಿಗಳೂ, 575 ಫಿರಂಗಿಗಳೂ, 870 ಮೆಷಿಗನ್‌ಗಳೂ, 339 ಟ್ರೆಂಚ್ ಮಾರ್ಟರುಗಳೂ, ನಾಶವಾಗಿವೆ ಮಾಸ್ಕೋ ಪಶ್ಚಿಮದಲ್ಲಿರುವ ಎಂಟು ಮುಖ್ಯಸ್ಥಾನಗಳನ್ನು ರಷ್ಯನ್ನರು ಪುನಃ ಸ್ವಾಧೀನಪಡಿಸಿಕೊಂಡಿದ್ದಾರೆ

ಶರತ್ ಬೋಸರ ಬಂಧನ

ಶ್ರೀ ಶರತ್‌ಚಂದ್ರಬೋಸರು ಜಪಾನರೊಡನೆ ವ್ಯವಹರಿಸುತ್ತಿರುವುದರಿಂದ ಅವರನ್ನು ದಸ್ತಗಿರಿ ಮಾಡಿ ಬಂಧನದಲ್ಲಿಡಬೇಕೆಂದು ಇಂಡಿಯಾ ಸರ್ಕಾರದವರು ಆಜ್ಞೆಮಾಡಿರುವರು ಅದರಂತೆ ದಸ್ತಗಿರಿಮಾಡಲ್ಪಟ್ಟ ಬೋಸರು ಇನ್ನೂ ತಮ್ಮ ಮನೆಯಲ್ಲಿಯೇ ಇದ್ದಾರೆ ಆ ಭವನವನ್ನು ಪೋಲೀಸರು ಕಾಯುತ್ತಿದ್ದಾರೆ.

ಸ್ವೀಕಾರ.

ಬಳ್ಳಾರಿ ಡಿ|| ಬನ್ನಿಕಲ್ಲ ಗ್ರಾಮದ ಶ್ರೀಮಂತ ವೀರಾಪುರದ ಶೈಲಬಸವಪ್ಪನವರು ಶಿವಾಧೀನರಾದ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ತೆಗೆಯಿಸಿದ 4 ರೂ ಗಳು ಮ|| ರಾ|| ಗುಗ್ರಿ ಹುಚ್ಚಪ್ಪನವರ ದ್ವಾರಾ ತಲ್ಪಿರುತ್ತವೆ

ಬಳ್ಳಾರಿ ಡಿ|| ಹೂವಿನಹಡಗಲಿ ಗ್ರಾಮದ ಮ|| ರಾ|| ಮೂಕನಗೌಡರ ಚನ್ನಬಸವನಗೌಡರು ಇದೇ ತಿಂಗಳು ೧೧ ನೇ ತಾರೀಖಿನ ದಿವಸ ಶಿವಾಧೀನರಾದ ಸಮಯದಲ್ಲಿ ಮ|| ರಾ|| ಹಣ್ಣೆ ಶಿವರುದ್ರಪ್ಪನವರು ಪ್ರಭಾ ಪೋಷಣಕ್ಕಾಗಿ ತೆಗೆಯಿಸಿದ 2 ರೂ ಗಳು ಮ|| ರಾ|| ಗುರುಸೇವಾಕಿಂಕರ ಸೊಪ್ಪಿನ ಗುರುಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ

ಕೊಪ್ಪಳ ಡಿ|| ಉಪ್ಪಿನ ಬೆಟಗೇರಿಯಲ್ಲಿರುವ ಕೊಟ್ಟೂರು ಮಿ|| ಮ|| ಜಾಗಟಗೇರಿ ಬಸವಲಿಂಗಪ್ಪಯ್ಯನವರ ಧರ್ಮಪತ್ನಿಯವರಾದ ಶ್ರೀಮತಿ ಶಾಂತವ್ವನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 1 ರೂ ಯು ಕೊಟ್ಟೂರು ಕಟ್ಟಿಮನೆ ಹಿರೇಮಠದ ಶ್ರೀ ಪಟ್ಟದ ಭೂತಭುಜಂಗಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ.

ಶ್ರೀ ರೇವಣಸಿದ್ಧೇಶ್ವರ ದೇವಾಲಯ

ಮದ್ರಾಸ ಇಲಾಖಾ ಕೊಯಮುತ್ತೂರು ಡಿ|| ಕೊಳ್ಳೆಗಾಲ ತಾ|| ಹರಳೆ ಗ್ರಾಮಕ್ಕೆ ೧ ಮೈಲು ದೂರದಲ್ಲಿರುವ ಕಾವೇರೀ ನದಿಯ ತೀರದಲ್ಲಿ ಶ್ರೀ ರೇವಣಸಿದ್ಧೇಶ್ವರ ದೇವಾಲಯವಿರುವುದೆಂದು ತಿಳಿದುಬರುತ್ತದೆ. ಅನೇಕ ಜನರು ಮಂತ್ರ ಸಿದ್ಧಿಗಾಗಿ ಈ ದೇವಸ್ಥಾನದಲ್ಲಿ ಅನುಷ್ಠಾನ ಮಾಡಿ ಮಂತ್ರ ಸಿದ್ಧಿಯನ್ನು ಪಡೆದುಕೊಳ್ಳುವರಂತೆ!

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ರೇಣುಕವಿಜಯ ನಾಟಕ ಮೈಂದಗಿರಿ

ಕುರಂದವಾಡ ಸ್ಟೇಟ್ ಪೈಕಿ ಮೈಂದಗಿರಿ ಎಂಬ ಗ್ರಾಮವು ತಾಲೂಕಿನ ಮುಖ್ಯಸ್ಥಳವಾಗಿರುವದು. ಈ ಗ್ರಾಮವು ಗುರುಭಕ್ತಿಯಲ್ಲಿ ಬಹು ಮುಂದುವರೆದಿರುವದು ಇಲ್ಲಿಯ ವೀರಶೈವರು ಶ್ರೀಜಗದ್ಗುರು ಪಂಚಾಚಾರ್ಯರಲ್ಲಿ ಅನಿತರ ಸಾಧಾರಣವಾದ ಭಕ್ತಿಯನ್ನಿಟ್ಟು ವರ್ತಿಸುತ್ತಿರುವುದು ಸರ್ವರಿಗೂ ಮಾರ್ಗದರ್ಶಕವಾಗಿದೆ ಈ ಗ್ರಾಮದಲ್ಲಿ ಆಚಾರ್ಯಭಗವತ್ಪಾದರ ವಿಜಯಧ್ವಜವು ಈ ರೀತಿ ಮೆರೆಯುವುದಕ್ಕೆ ಇಲ್ಲಿಯ ಹಿರೇಮಠಾಧ್ಯಕ್ಷರಾದ ಶ್ರೀ॥ ಷ॥ ಬ್ರ॥ ವೀರಸಂಗದೇವರು ಪಟ್ಟದಸ್ವಾಮಿಗಳ ಪ್ರಯತ್ನ ವಿಶೇಷವೇ ಮೂಲಕಾರಣವೆಂದು ಅತ್ಯಂತ ಸಂತೋಷದಿಂದ ಹೇಳಬೇಕಾಗಿದೆ ಅಸ್ತು! ಇಲ್ಲಿಯ ಶ್ರೀ ವೀರಭದ್ರಪ್ರಾಸಾದಿಕ ಸಂಗೀತ ಮಂಡಳಿಯವರು ಕರ್ನಾಟಕಕವಿಚಂದ್ರ ವೇ॥ ಪಂ॥ ಶ್ರೀಕಂಠಶಾಸ್ತ್ರಿಗಳು ನಲವಡಿ ಇವರಿಂದ ರಚಿಸಲ್ಪಟ್ಟ "ರೇಣುಕವಿಜಯ" ವೆಂಬ ನಾಟಕವನ್ನು ತಾ॥ ೮-೧೦-೧೯೪೧ನೆಯ ಗುರುವಾರ ದಿವಸ ಅಭಿನಯಿಸಿದರು ಈ ನಾಟಕವನ್ನು ರಂಗಭೂಮಿಯಲ್ಲಿ ಅಭಿನಯಿಸಬಾರದೆಂದು ಸಂಕರಬೋಳಪಂಥಿಗಳು ವಿಶೇಷ ಪ್ರಯತ್ನ ಮಾಡಿದರು ಆದರೆ ಅವರ ಪ್ರಯತ್ನವು ಸಾರ್ಥಕವಾಗಲಿಲ್ಲ ಗುರುಸಾರ್ವಭೌಮನಾದ ಶ್ರೀ ರೇವಣಸಿದ್ಧಮಹಾಯೋಗಿಯ ಪ್ರಭಾವದ ಮುಂದೆ ಕುಟಿಲಸಿದ್ಧರಂತಿರುವ ಮುಂಡಿಗಳ ಮಂಡತನವು ಎಂದಾದರೂ ಸಾಗೀತೇ? ಸರಕಾರಿ ಅಧಿಕಾರಿಗಳು ಈ ನಾಟಕವನ್ನಾಡಲಿಕ್ಕೆ ಯಾವ ಅಭ್ಯಂತರವೂ ಇಲ್ಲವೆಂದು ಹೇಳಿದ್ದರಿಂದ ಮುಂಡಿಗಳ ಸದ್ದು ಅಡಗಿತು ಆದರೂ ಮುಂಡಿಗಳ ಹಾವಳಿಯಿಂದ ಊರಲ್ಲಿ ವಿಶೇಷ ಗೊಂದಲವೆದ್ದಿತು ಅದರ ಒಂದೋಬಸ್ತಿಗಾಗಿ ಸರಕಾರದವರು ಯೋಗ್ಯ ವ್ಯವಸ್ಥೆಯನ್ನಿಟ್ಟಿದ್ದರು ಅಂದು ಪ್ರೇಕ್ಷಕರ ಸಮ್ಮರ್ದವು ವಿಶೇಷವಾಗಿತ್ತು ಪ್ರಯೋಗದಲ್ಲಿ ಮೇಲಿಂದ ಮೇಲೆ ಆಗುತ್ತಿದ್ದ ಸಂತೋಷ ಸೂಚಕ ಕರತಾಡನಗಳು ಗುರುವಿರೋಧಿಗಳಿಗೆ ವಿಶೇಷ ದುಃಖದಾಯಕವಾಗಿದ್ದವೆಂಬುದನ್ನು ಬೇರೆ ಹೇಳಬೇಕಾಗಿಲ್ಲ ಈ ರೀತಿಯಾಗಿ ರೇಣುಕವಿಜಯ ನಾಟಕವು ಯಶಸ್ವಿಯಾಗಿ ನೆರವೇರಿತು ಪಾತ್ರಗಳು ತಮ್ಮ ತಮ್ಮ ಪಾತ್ರಗಳನ್ನು ಸರಿಯಾಗಿ ಮಾಡುತ್ತಿದ್ದರೂ ಇನ್ನೂ ಕೆಲವು ಭಾಗಗಳು ಸುಧಾರಿಸಬೇಕಾಗಿವೆ ಅವುಗಳ ಕಡೆಗೆ ಮಂಡಳಿಯವರು ಲಕ್ಷ್ಯಕೊಡಬೇಕು ಶ್ರೀರೇಣುಕಾಚಾರ್ಯರ ಪಾತ್ರವನ್ನು ವಹಿಸಿದ ಬಸಲಿಂಗಪ್ಪಾ ಗೊಬ್ಬೂರು, ಇವರು ಒಳ್ಳೇ ಮನೋಹರವಾಗಿ ಅಭಿನಯಿಸುತ್ತಲಿದ್ದಾರೆ ವೀರಪ್ಪಾ ಅಂಕಲಗಿ ಇವರು ಹಾಸ್ಯಪಾತ್ರವನ್ನು ಜನಮನೋಹರವಾಗಿ ಮಾಡೋಣದರಿಂದ ಪ್ರಯೋಗಕ್ಕೆ ಮತ್ತಷ್ಟು ಕಳೆಬಂದಿದೆ ಕಲಿಪುರುಷನ ಪಾತ್ರವನ್ನು ವಹಿಸಿದ ಬಾಬುಪರೀಟ ಮತ್ತು ಸೋಮನಾಥ ಶಾಸ್ತ್ರಿಗಳ ಪಾತ್ರವನ್ನು ವಹಿಸಿದ ನಾಗಪ್ಪಗಣೇಶ ಮಾಯಾದೇವಿಯ ಪಾತ್ರವನ್ನು ವಹಿಸಿದ ಮಲ್ಲೇಶಪ್ಪ ವಟ್ಟಿ ಇವರೇ ಮೊದಲಾದವರು ತಮ್ಮ ತಮ್ಮ ಪಾತ್ರಗಳನ್ನು ಸರಿಯಾಗಿ ಮಾಡುತ್ತಲಿದ್ದಾರೆ ಈ ನಾಟಕವು ಸರ್ವತ್ರ ಪ್ರಚಾರವಾಗಿ ಎಲ್ಲೆಡೆಯಲ್ಲಿಯೂ ರೇಣುಕರ ವಿಜಯಧ್ವಜವು ಮೆರೆಯಲೆಂದು ಹಾರೈಸುತ್ತೇನೆ ನಾಟಕವನ್ನು ನೋಡಲಿಕ್ಕೆ ಸೊಲ್ಲಾಪುರದಿಂದ ಸ್ಪೆಶಲ್ ಮೋಟಾರ್ ಮಾಡಿಕೊಂಡು, ಶ್ರೀ॥ ಷ॥ ಬ್ರ॥ ಚರಮೂರ್ತಿಸ್ವಾಮಿಗಳು ಜೈನಾಪುರ, ಶ್ರೀ॥ ಷ॥ ಬ್ರ॥ ಗುರುಶಾಂತಶಿವಾಚಾರ್ಯರು ಜೇವುರಗಿ (ಜಹಗೀರ) ಮತ್ತು ಶ್ರೀ॥ ಷ॥ ಬ್ರ॥ ಗುರುವರ್ಯಶಿವಾಚಾರ್ಯರು ಸುತ್ತಗಟ್ಟಿ ಇವರೇ ಮೊದಲಾದ ಚರಪಟ್ಟಾಧ್ಯಕ್ಷರೂ ಇತರ ಜನರೂ ಆಗಮಿಸಿದ್ದರು ಪ್ರಯೋಗವನ್ನು ನೋಡಿ ಸಂತೋಷಭರಿತರಾಗಿ ಶ್ರೀ ಗುರುಶಾಂತಶಿವಾಚಾರ್ಯರು ಜೇವುರಗಿ ಇವರು ಕಂಪನಿಗೆ ೫ ರೂಪಾಯಿಗಳನ್ನೂ, ಸುತ್ತಗಟ್ಟಿಸ್ವಾಮಿಗಳು ೨ ರೂಪಾಯಿಗಳನ್ನೂ ಆಶೀರ್ವದಿಸಿದರು. ಮ॥ ರಾ॥ ವೀರಯ್ಯಸ್ವಾಮಿ ಚಾಚಾರಮಠ ಇವರೇ ಮೊದಲಾದ ಪ್ರೇಕ್ಷಕ ಮಂಡಳಿಯವರು ತಮ್ಮ ಶಕ್ತ್ಯನುಸಾರ ಧನಸಹಾಯ ಮಾಡಿದರು ಈ ಕಾರ್ಯಕ್ಕೆ ವೀರಯ್ಯಸ್ವಾಮಿ ಚಾಚಾರಮಠ, ಗುರುಸಿದ್ಧಯ್ಯಸ್ವಾಮಿ ಭಂಜಗೇರಿ, ಧೂಳಪ್ಪ ಜಕಾಪೂರೆ ಇವರೇ ಮೊದಲಾದ ಪ್ರಮುಖರು ವಿಶೇಷ ಪ್ರೋತ್ಸಾಹವನ್ನು ಕೊಟ್ಟು ಕಾರ್ಯವನ್ನು ನೆರವೇರಿಸಿದುದು ಅಭಿನಂದನೀಯವಾಗಿದೆ ಈ ನಾಟಕ ಶಿಕ್ಷಕರಾದ ಸುರಕೋಡದ ಚನ್ನಕವಿಗಳ ಪ್ರಯತ್ನವು ಸ್ತುತ್ಯವಾಗಿದೆ ಈ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ರೇವಣಸಿದ್ಧೇಶ್ವರನು ಸಕಲ ಸನ್ಮಂಗಲಗಳನ್ನನುಗ್ರಹಿಸಲೆಂದು ಪ್ರಾರ್ಥಿಸುವ,

ಓರ್ವ ಪ್ರೇಕ್ಷಕ

ವಿಮಾನಗಳ ಹಾರುವಿಕೆಗೂ ಮಿತಿಯುಂಟು

ಭೂಮಿಯ ಮೇಲೆ ಸಂಚಾರಮಾಡುವ ವಾಹನಗಳಿಗೆ ಮುಖ್ಯವಾದ ಲಕ್ಷಣವೆಂದರೆ ವೇಗ ನೀರಿನ ಮೇಲೆ ಮತ್ತು ನೀರಿನೊಳಗೆ ಹೋಗುವ ವಾಹನಗಳಿಗೂ ಅಷ್ಟೆ! ಆದರೆ ಆಕಾಶದಲ್ಲಿ ಹಾರಾಡುವ ವಿಮಾನದ ಮಾತು ಹಾಗಲ್ಲ ಅದು ವೇಗವಾಗಿ ಹಾರಬೇಕಲ್ಲದೆ ವಿಶೇಷ ಎತ್ತರದಲ್ಲೂ ಹೋಗಬೇಕು

ವಿಮಾನಗಳಲ್ಲಿ ಯಂತ್ರಪರಿಸ್ಥಿತಿಗನುಸಾರವಾಗಿ ವೇಗವನ್ನು ಹೆಚ್ಚಿಸಬಹುದು, ಎತ್ತರಕ್ಕೂ ಹೋಗಬಹುದು ಆದರೆ ಇದಕ್ಕೆ ಯಂತ್ರದ ಮಿತಿಯಲ್ಲದೆ, ಮನುಷ್ಯನ ಮಿತಿಯೂ ಇದೆ ಮನುಷ್ಯನು ಹೆಚ್ಚು ಎತ್ತರವನ್ನೂ ವೇಗವನ್ನೂ ತಡೆದುಕೊಳ್ಳಲಾಗುವುದಿಲ್ಲ ಭೂಮಿಯ ಮೇಲೆ ಎಷ್ಟೇ ವೇಗವಾಗಿ ಹೋಗುವ ಯಂತ್ರವಿಧಾನವನ್ನು ಕಲ್ಪಿಸಿಕೊಂಡರೂ ಅದರ ಎರಡರಷ್ಟು ವೇಗವಾಗಿ ಆಕಾಶದಲ್ಲಿ ಹಾರಬಹುದು ಅತಿವೇಗದಿಂದ ಅತಿ ಎತ್ತರಕ್ಕೆ ಹೋದರೆ ಮನುಷ್ಯನ ದೇಹಸ್ಥಿತಿಯು ಕೆಟ್ಟು ಮರಣವು ಸಂಭವಿಸುವುದು ಅದನ್ನು ತಪ್ಪಿಸಿಕೊಂಡು ಮನುಷ್ಯನು ವಿಮಾನಗಳ ವೇಗ, ಎತ್ತರಗಳನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ

ವೇಗಕ್ಕಿಂತ ಎತ್ತರವೇ ಮಹಾಕಷ್ಟ ಮತ್ತು ಮಹಾ ಅಪಾಯಕಾರಿ ಏಕೆಂದರೆ ಎತ್ತರ ಹೋದಂತೆಲ್ಲ, ಗಾಳಿ ಕಡಿಮೆ ಉಷ್ಣ ಕಡಿಮೆ ೪೦೦ ಮೈಲಿಗಳ ವೇಗವನ್ನಾದರೂ ಹಲವು ರಕ್ಷಣೆಗಳಿಂದ ತಡೆದುಕೊಳ್ಳಬಹುದು ಆದರೆ ೩೦,೦೦೦ ಅಡಿಗಳ ಎತ್ತರವನ್ನು ತಡೆದುಕೊಳ್ಳುವುದು ಅಸಾಧ್ಯ ಈಗ ಏನೇನೋ ರಕ್ಷಣೆಗಳನ್ನು ಒದಗಿಸಿಕೊಳ್ಳುತ್ತಿದ್ದಾರೆ ಆದರೂ ಎತ್ತರದಲ್ಲಿ ಮನುಷ್ಯನ ಆಟ ನಡೆಯುವುದಿಲ್ಲ

೩೦,೦೦೦ ಅಡಿಗಳ ಎತ್ತರದಲ್ಲಿ ಗಾಳಿಯು ಭೂಪೃಷ್ಠದಲ್ಲಿರುವದಕ್ಕಿಂತ ಮೂರನೆಯ ಒಂದು ಭಾಗದಷ್ಟಿರುತ್ತದೆ ಆದ್ದರಿಂದ ಯಂತ್ರಗಳಿಗೆ ಸಾಕಾದಷ್ಟು ಆಮ್ಲಜನಕವಿಲ್ಲದೆ, ನಾಶವಾಗುವ ಸಂಭವವುಂಟು ಇದಕ್ಕಾಗಿ ವಿಮಾನಯಂತ್ರಗಳಲ್ಲಿ ಗಾಳಿಯ ಒತ್ತಡವನ್ನು ಮೂರರಷ್ಟು ಹೆಚ್ಚಿಸಬೇಕಾಗುತ್ತದೆ ಗಾಳಿಯ ಒತ್ತಡವು ಕಡಿಮೆಯಾದರೆ ಆ ಗಾಳಿ ಎತ್ತಿಹಿಡಿಯಬಲ್ಲ ತೂಕವೂ ಕಡಿಮೆಯಾಗುತ್ತದೆ ಆದ್ದರಿಂದ ವಿಮಾನಗಳ ರೆಕ್ಕೆಗಳ ಅಗಲ ಉದ್ದಗಳು ಹೆಚ್ಚಾಗಬೇಕಾಗುತ್ತದೆ

ಮೇಲಿರತಕ್ಕ ಅಲ್ಪವಾದ ಗಾಳಿಯಲ್ಲಿ ಮನುಷ್ಯನು ಉಸುರಾಡಿಕೊಂಡು ಜೀವಿಸಿರಲು ಸಾಧ್ಯವಿಲ್ಲ ಅರ್ಧನಿಮಿಷದಲ್ಲಿ ಸಾಯುತ್ತಾನೆ ಆದ್ದರಿಂದ ಎತ್ತರ ಹಾರುವ ಎಲ್ಲ ವಿಮಾನಗಳಲ್ಲೂ ಘನೀಕೃತವಾದ ಆಮ್ಲಜನಕವನ್ನು ಸೀಸೆಗಳಲ್ಲಿ ಇಟ್ಟುಕೊಂಡು ಮುಖವಾಡಗಳೊಳಗಿನ ವಿಶಾರ್ಗಡಿನಿಂದ ತಕ್ಕಷ್ಟು ಪ್ರಮಾಣದಲ್ಲಿ ಸೇವಿಸುತ್ತಾರೆ.

೩೦,೦೦೦ ಅಡಿಗಳಿಗಿಂತಲೂ ಎತ್ತರ ಹಾರಿದರೆ ಯಾವ ರಕ್ಷಣೆಗಳೂ ಮನುಷ್ಯನ ಶರೀರವನ್ನು ಕಾಪಾಡಲಾರವು ಮೊದಲು ಕಣ್ಣುಗುಡ್ಡೆಗಳೂ ಕಿವಿಗಳೂ ಅರಳಿಕೊಂಡು ಹೊರಕ್ಕೆ ಹರಡಿಕೊಳ್ಳಲು ಪ್ರಾರಂಭಿಸುತ್ತವೆ ೪೦,೦೦೦ ಅಡಿಗಳ ಎತ್ತರದಲ್ಲಿ ಮನುಷ್ಯ ಶರೀರವು ಒಡೆದುಹೋಗುತ್ತದೆ.

ಇಷ್ಟು ಎತ್ತರ ಏಕೆ ಹಾರಬೇಕೆಂದು ಯಾರಾದರೂ ಕೇಳಬಹುದು ಶಾಂತಿ ಕಾಲದಲ್ಲಿ ಬಹಳ ಎತ್ತರದಲ್ಲಿ ಹಾರುವುದು ಕೇವಲ ಸಾಹಸಕಾರ್ಯವೆನಿಸಿದರೂ ಯುದ್ಧ ಕಾಲದಲ್ಲಿ ಇದರಿಂದ ಪ್ರಯೋಜನವುಂಟು. ಪ್ರಯೋಜನವೆಂದರೆ ಶತ್ರುಗಳ ಕಣ್ಣಿಗೂ ದುರ್ಬೀನಿಗೂ, ಫಿರಂಗಿಗಳ ಹೊಡೆತಕ್ಕೂ ಸಿಗದೆ ಶತ್ರುಗಳ ಮನೆಮಠಗಳನ್ನೂ ಊರು ಕೇರಿಗಳನ್ನೂ ಧ್ವಂಸಮಾಡಬಹುದು. ಕಣ್ಣಿಗೆ ಕಾಣುವ ವಿಮಾನಗಳಿಂದ ಬಾಂಬುಗಳು ಬೀಳುವುದಕ್ಕಿಂತಲೂ ಕಾಣದಂತೆ ಹಾರಾಡುವ ವಿಮಾನಗ ತಲೆಯಮೇಲೆ ಬಾಂಬುಗಳನ್ನು ಸುರಿಸುವುದು ಅತ್ಯಂ ಭೀಕರವಾದುದು

ಯುದ್ಧದ ದೃಷ್ಟಿಯಿಂದ ಎತ್ತರ ಹಾರಿದರೂ ಗು ತಪ್ಪದಂತೆ ಹಾರುವುದು ಬಹಳ ಅಗತ್ಯ. ಎಷ್ಟೇ ಎತ್ತ ಹಾರಿದರೂ ಗುರಿ ತಪ್ಪದಂತೆ ಬಾಂಬು ಹಾಕುವುದ ತಕ್ಕ ಸೌಕರ್ಯವಿದೆ ದೂರದರ್ಶಕ ಯಂತ್ರೋಪಕ ಗಳಿವೆ

ಅತಿ ಎತ್ತರ ಹಾರುವ ವಿಮಾನಗಳನ್ನು ಜರ್ಮನ ತಯಾರಿಸಿ ಸ್ವಲ್ಪಮಟ್ಟಿಗೆ ಪ್ರಶಸ್ತಿಯನ್ನು ಪಡೆದಿದ್ದಾ ಆದರೆ ಈ ಕಲೆಯಲ್ಲಿ ಅಮೇರಿಕನ್ನರಷ್ಟು ಮತ್ತಾ ಮುಂದುವರೆದಿಲ್ಲ ಅಮೇರಿಕನ್ನರೀಗ ಅಭೂತಪೂ ವಾದ ವಿಮಾನಗಳನ್ನೂ ಬಹಳ ಎತ್ತರ ಹಾರುವ ಅ ವೇಗದಿಂದ ಅತಿದೂರ ಸಂಚಾರಮಾಡಿಕೊಂಡು ಹಿ ರುಗಬಲ್ಲ ಮತ್ತು ಅಧಿಕ ಸಂಖ್ಯೆಯ ಜನರನ್ನು ಹೊ ಬಲ್ಲ ವಿಮಾನಗಳನ್ನೂ ರಚಿಸುತ್ತಿದ್ದಾರೆ.

(ವಿ ೪

ಶರೀರದ ಸಹಜ ವ್ಯಾಪಾರಗಳನ್ನು ತಡೆಯುವುದರಿಂದ ಉಂಟಾಗುವ ಕೆಡುಕುಗಳು.

ಶರೀರದ ಸಹಜ ವ್ಯಾಪಾರಗಳೆಂದರೆ, ಮಲಮೂ ವಿಸರ್ಜನಗಳು, ವೀರ್ಯ, ಅಪಾನವಾಯು, ಸೀನು ಆ ಳಿಕೆ, ಬೆವರು, ಕಣ್ಣುಮೂಗುಗಳಲ್ಲಿ ಬರುವ ನೀರ ಕಫ, ವಾಂತಿ, ಇವೆಲ್ಲವೂ ಸೇರುವುವು ಅಲ್ಲದೆ ಹಸಿವು ಬಾಯಾರಿಕೆ, ನಿದ್ರೆ, ಶ್ರಮದಿಂದುಂಟಾಗುವ ಮೇಲುಸಿ ಮುಂತಾದುವೂ ಶರೀರವ್ಯಾಪಾರಗಳೇ. ಈ ವ್ಯಾಪಾ ಗಳನ್ನು ತಡೆಯುವದರಿಂದಲೇ ಅನೇಕ ವ್ಯಾಧಿಗಳ ತಲೆದೋರುವುವು ಇದೇ ವಿಚಾರವಾಗಿ ಪ್ರಸಿದ್ಧ ಹಿಂದು ವೈದ್ಯಗ್ರಂಥವಾದ ಚರಕಸಂಹಿತೆಯಲ್ಲಿ ದೊಡ್ಡ ಅಧ್ಯಾಯವೊಂದು ಪ್ರತ್ಯೇಕವಾಗಿ ಬರೆಯಲ್ಪಟ್ಟಿದೆ ಅದರಲ್ಲಿ ದೇಹದ ಸಹಜ ವ್ಯಾಪಾರಗಳಾವುವು, ಅವುಗಳನ್ನು ತಡೆಯುವುದರಿಂದುಂಟಾಗುವ ರೋಗಗಳು, ಅವುಗಳ ನಿವಾರಣೋಪಾಯಗಳು, ಅವರವರ ದೇಹಪ್ರಕೃತಿಯನ್ನನುಸರಿಸಿ ಈ ಶಾರೀರಕ ವ್ಯಾಪಾರಗಳು ಹೇಗೆ ಬೇರ್ಪಡುವುವು ಇವು ಕ್ರಮವಾಗಿ ನಡೆಯಬೇಕಾದರೆ ಎಂತೆಂತಹ ದೇಹಪ್ರಕೃತಿಗಳಿಗೆ ಯಾವ ಯಾವ ಬಗೆಯ ಆಹಾರಗಳು ಬೇಕು, ಎಂಬುದನ್ನೆಲ್ಲಾ ವಿವರವಾಗಿ ನಿರೂಪಿಸಿದೆ ಶರೀರದಲ್ಲಿರುವ ಕಶ್ಮಲಗಳಲ್ಲಿ ಕೆಲವು ಮಲರೂಪವಾಗಿಯೂ, ಜಲರೂಪವಾಗಿಯೂ, ಕೆಲವು ವಾಯುರೂಪವಾಗಿಯೂ ಹೊರಕ್ಕೆ ತಾವಾಗಿಯೇ ಬರಲು ಪ್ರಯತ್ನಿಸುವುವು ಮೃಗಪಕ್ಷಿಗಳೇ ಮೊದಲಾದ ತಿರ್ಯಗ್ಜಂತುಗಳು ಈ ವಿಷಯದಲ್ಲಿ ಸಹಜ ಸ್ವಭಾವವನ್ನನುಸರಿಸಿ ನಡೆಯುವುದರಿಂದಲೇ ಮನುಷ್ಯಜಾತಿಗೆ ಸಂಭವಿಸುವಷ್ಟು ವಿವಿಧ ರೋಗಗಳು ಅವುಗಳಿಗೆ ಸಂಭವಿಸುವುದಿಲ್ಲ ಆದರೆ ಮನುಷ್ಯರು ಈ ಭಾಗದಲ್ಲಿ ಕೇವಲ ಮೃಗಪಕ್ಷಿಗಳಂತೆ ಇರುವುದಕ್ಕೆ ಸಾಧ್ಯವಿಲ್ಲ ಕಾಲದೇಶಗಳನ್ನನುಸರಿಸಿ ಸ್ವಲ್ಪಮಟ್ಟಿಗೆ ಮಲಮೂತ್ರಾದಿ ಸಹಜ ವ್ಯಾಪಾರಗಳನ್ನು ನಿರ್ಬಂಧಿಸಲೇ ಬೇಕಾಗುವುದು. ಹಾಗಿದ್ದರೂ ಕೂಡಿದಮಟ್ಟಿಗೆ ದೇಹಾರೋಗ್ಯವನ್ನು ಕಾಪಾಡಿಕೊಳ್ಳಬಹುದು.

ಮಲಮೂತ್ರಾದಿ ವಿಸರ್ಜನಾಂಗಗಳನ್ನು ತಡೆಯುವುದರಿಂದುಂಟಾಗಬಹುದಾದ ರೋಗಗಳೂ, ಬಾಧೆಗಳೂ ಅನೇಕವಿಧವಾಗಿವೆ ಅವುಗಳಲ್ಲಿ ಸಂಗ್ರಹವಾಗಿ ಕೆಲವನ್ನು ಈ ಕೆಳಗೆ ಕೊಟ್ಟಿದೆ

ಸಾಮಾನ್ಯವಾಗಿ ಹೇಳುವುದಾದರೆ, ಮಲವನ್ನು ತಡೆಯುವುದರಿಂದ ಮೂತ್ರಕೋಶಕ್ಕೆ ಸಂಬಂಧಪಟ್ಟ ವ್ಯಾಧಿಗಳಿಗೆ ಮೂಲವಾಗುವುದು

ಮೂತ್ರವನ್ನು ತಡೆಯುವುದರಿಂದ ಹೊಟ್ಟೆಯುಬ್ಬರ, ಮೂತ್ರಕೋಶದಲ್ಲಿ ನೋವು, ಉರಿಮೂತ್ರ, ತಲೆನೋ ಕೆಲವು ವೇಳೆ ಮೂತ್ರವು ಸಂಪೂರ್ಣವಾಗಿಯೇ ಕಟ್ಟಿಹೋಗುವುದು ಈ ಮುಂತಾದ ಅಪಾಯಗಳಿಗೆ ಕಾರಣವಾಗುವುದು

ಮಲವನ್ನು ತಡೆಯುವುದರಿಂದ ಹೊಟ್ಟೆಯಲ್ಲಿ ವಾಯುವು ಸೇರಿಕೊಂಡು ಹೊಟ್ಟೆನೋವಿಗೆ ಕಾರಣವಾಗುವುದು, ಮೊಳಕಾಲುಗಳಲ್ಲಿ ಸೆಳತವು ಕಾಣುವುದು, ಕಾಲುಗಳು ಕೆಲವುವೇಳೆ ಹಿಡಿಕೊಳ್ಳುತ್ತವೆ

ವೀರ್ಯಸ್ತಂಭನದಿಂದ ಅಂಡಗಳಲ್ಲಿ ಬೇನೆ ಮತ್ತು ಮೈಯಲ್ಲಿ ದಣಿಕವು, ಬೇಸರ, ಎದೆನೋವು, ಮೂತ್ರವು ಕಟ್ಟುವುದು, ಇವಕ್ಕೆಲ್ಲಾ ಕಾರಣವಾಗುವುದು

ಅಪಾನವಾಯುಗಳನ್ನು ತಡೆಯುವುದರಿಂದ ಮಲಮೂತ್ರಾದಿಗಳು ಧಾರಾಳವಾಗಿ ಹೊರಗೆಬರುವುದಕ್ಕೆ ಅವಕಾಶತಪ್ಪಿ ಹೊಟ್ಟೆಯುಬ್ಬರ, ದಣಿವು ವಾಯುಚೇಷ್ಟೆಯಿಂದ ಹೊಟ್ಟೆಯಲ್ಲಿ ವಿವಿಧವಾದ ಬೇನೆಗಳು ಇವೆಲ್ಲಾ ಉಂಟಾಗುವುವು

ಶ್ಲೇಷ್ಮವನ್ನು ತಡೆಯುವುದರಿಂದ ಮೈಯಲ್ಲಿ ನವೆ, ಆಹಾರದಲ್ಲಿ ಅರುಚಿ. ಮುಖದಲ್ಲಿ ಬೊಕ್ಕೆಗಳು, ಮೈಯುರಿ, ರಕ್ತ ಕ್ಷೀಣತೆ, ಜ್ವರ ಬಿಕ್ಕಲು ಮುಂತಾದ ಅನೇಕ ವ್ಯಾಧಿಗಳಿಗೆ ಕಾರಣವಾಗುವುದು

ಸೀನನ್ನು ತಡೆಯುವುದರಿಂದ ತಲೆಶೂಲೆಗೆ ಕಾರಣವಾಗುವುದು ಮತ್ತು ಇಂದ್ರಿಯಗಳಲ್ಲಿ ಪಟುತ್ವವು ತಗ್ಗುವುದು

ಹಸಿವು ಬಾಯಾರಿಕೆಗಳನ್ನು ತಡೆಯುವುದರಿಂದುಂಟಾಗುವ ದುಷ್ಫಲಗಳು ಎಲ್ಲರಿಗೂ ತಿಳಿದಿರುವುದರಿಂದ ಅವುಗಳನ್ನು ಕುರಿತು ಇಲ್ಲಿ ವಿವರಿಸಬೇಕಾದುದಿಲ್ಲ

ಕಣ್ಣೀರನ್ನು ತಡೆಯುವುದರಿಂದ ನೆಗಡಿಹಿಡಿದು ಮೂಗು ಕಟ್ಟಿಕೊಳ್ಳುವುದು, ಅಲ್ಲದೆ ಕಣ್ಣುನೋವು, ಎದೆನೋವು, ಅಜೀರ್ಣ ಚಿತ್ತಭ್ರಮೆ ಇವಕ್ಕೂ ಕಾರಣವಾಗಬಹುದು

ಈ ಶಾರೀರಕ ವ್ಯಾಪಾರಗಳನ್ನು ತಡೆಯುವದರಿಂದುಂಟಾಗುವ ಬಾಧೆಗಳಿಲ್ಲದಂತಾಗಲು ಅವುಗಳನ್ನು ತಡೆಯುವ ಆಲೋಚನೆಯೇ ಮನಸ್ಸಿಗೆ ಬಾರದಂತೆ ಮನಸ್ಸನ್ನು ಬಂಧಿಸಬೇಕು.

ಕಾಮ ಕ್ರೋಧ ಭಯ ಶೋಕ ಮೋಹ ಮುಂತಾದ ಅರಿಷಡ್ವರ್ಗಗಳೂ ಮಧ್ಯಪಾನಾಸಕ್ತಿ ಮುಂತಾದ ದುರ್ನಡತೆಗಳೂ ದೇಹಜನ್ಯಗಳಾದ ವ್ಯಾಪಾರಗಳೇ ಆಗಿದ್ದರೂ ಅವು ಮಾನಸಿಕ ವ್ಯಾಪಾರಗಳಾದುದರಿಂದ ಅವುಗಳನ್ನು ನಮ್ಮಿಂದಾದಷ್ಟು ನಿರ್ಬಂಧಿಸಬೇಕು ಶಾರೀರಕ ಸಹಜಧರ್ಮಗಳನ್ನು ತಡೆಯುವುದರಲ್ಲಿ ತೋರಿಸಬಹುದಾದ ಇಂದ್ರಿಯ ಜಯಸಾಮರ್ಥ್ಯವನ್ನು ಕಾಮ ಕ್ರೋಧಾದಿ ಮನೋಧರ್ಮಗಳನ್ನು ತಡೆಯುವುದರಲ್ಲಿ ತೋರಿಸಿದಷ್ಟೂ ದೇಹಾರೋಗ್ಯಕ್ಕೆ ಕಾರಣವು

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲಿ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಪೂರ್ಣ ಚಂದ್ರೋದಯ	೧	೧೦—೦—೦
೨ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೮—೦—೦
ಸಿಂಧೂರ	೧	೪—೦—೦
ಸ್ವರ್ಣ ವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು		
ಸ್ವರ್ಣ ಬಸ್ಮ	೧	೪೦—೦—೦
ರಜತಬಸ್ಮ	೧	೪—೦—೦
ತಾಮ್ರಬಸ್ಮ	೧	೦—೮—೦
ಲೋಹಬಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಮುಕ್ತಾ ಭಸ್ಮ	೧	೪೦—೦—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ, ಗಢವಾಲ್ ಯು.ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ- ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯು ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿ ನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ** ವಿ ಪಿ ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳಿದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾ ಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗ ದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿ ಕೊಂಡೇ ತೀರಬೇಕು ಈ ಮಹಾಗ್ರಂಥದ **ಬೆಲೆ ೮ ರೂಪಾಯಿ.** ಒಂದುರೂಪಾಯಿಗೆ ನಾಲ್ಕಾಣೆಯಂ ಕಮಿಷನ್ ವಜಾ ಹೋಗಲಾಗಿ ೬ ರೂ ಗೆ ದೊರೆಯುವುದು ವಿ. ಪಿ ಚಾರ್ಜು ೧ ರೂ ೫ ಆಣೆ ಪ್ರತ್ಯೇಕ

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅಮೃತಶಿಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೧—೬
ಸಹ್ಯಶಿಖರಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೨ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರನಿವಾಸವಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯ
ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದ
ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪ

(Registered Trade Mark)

ಗಳನ್ನು ಕೊಟ್ಟಿ
ರು. ಪ್ರಸಿದ್ಧವಾದ
ನಶ್ಯದ ಪುಡಿಯ
ಸ್ವಸ್ಥವಾಗುವ ವ್ಯಾ
ಗಳು ಯಾವವ
ರೆ—ಪೀನಸಿ ಒ
ತಲೆನೋವು, ತಲೆ
ಲ್ಲಿಯ ರೋಗಗ
ಕಣ್ಣುಗಳಲ್ಲಿ ಉಂ
ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾ
ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಸೇರ್ಪ
ಕ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು
ಸಹ ಹೆಚ್ಚುಮಾಡುತ್ತವೆ ಮೂರುಬೆಟ್ಟಿನ ಸಾಧಾ
ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂ
ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾ
ವುದು. ಇದನ್ನು ಅನೇಕಪ್ರಭುಗಳು ಉಪಯೋಗಿ
ತ್ತಾರೆ. ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆ
ದರ್ಜೆ ಒಂದಕ್ಕೆ ಕ್ರಯ ರೂ ೨-೮-೦ ವಿ.ಪಿ. ೬ ಆ
ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[28] ಪೋ ಬಾ. ೫೧೦, ಮದರಾ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪಶುಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಫೋರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆ
ಶ್ರೀಕರಭಾಷ್ಯಂ (ಚತುಸ್ಸೂತ್ರಿ)	೧ ರು
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರು
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ತ್ವದ ಫೋಟೋಗಳಿರುವವು)	೧। ರು
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೨ ರು
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರು
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರು
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರು
ವೀರಶೈವಸಿದ್ಧಾಂತಸುಧಾಕರ	೨ ರು
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರು
A brief life sketch of Pandit Sri Kashinatha Shastraji (*English*)	4 A
The Philosophical Aspect of Virasaivism (*English*)	8 A
Speeches by Pandit Shri Kashinatha Shastriji *English*)	12 A
लिंगधारणचंद्रिका (संस्कृत)	३
वीरशैवरत्न (मराठी)	१ 1
महानारायणोपनिषत् (वीरशैवभाष्य–संस्कृत)	६ 1
पुरुषसूक्तम् (वीरशैवप्राचीनभाष्योपेतम्)	४ अ
नंदिकेश्वरकारिका (संस्कृत)	२ अ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿ
೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ
ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರ**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ. ೧೧ ಆಣೆ ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ. ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೨ನೇ ಡಿಸೆಂಬರ್ ೧೯೪೧ [ಸಂಚಿಕೆ ೩೪

ಹಿಮಾಲಯದ ಮಹಾತ್ಮರು

ಲೇಖಕರು —ಶ್ರೀ ಆಗರಂ ಸೂರ್ಯನಾರಾಯಣ ಪಂಡಿತರು

ಸ್ವಾಮಿ ವಿಶುದ್ಧಾನಂದ

ಹಿಮವತ್ಪರ್ವತದ ತಪ್ಪಲು, ಸುತ್ತಲೂ ಮಂಜಿನಿಂದ ತುಂಬಿದ ಬೆಟ್ಟದ ಸಾಲುಗಳು, ಅವುಗಳ ಮಧ್ಯೆ ಒಂದು ಕಣಿವೆ ಅಲ್ಲಿ ಗಂಗಾಮಾತೆಯು ಓಂ, ಓಂ ಎಂದು ಶಬ್ದಮಾಡುತ್ತಾ ಪ್ರವಹಿಸುತ್ತಿರುವಳು ಸುತ್ತಲೂ ಪುಷ್ಪಗಳ ಸುಗಂಧ.

ಓರ್ವ ಸನ್ಯಾಸಿಯು ಈ ಕಣಿವೆಯಲ್ಲಿ ಹೋಗುತ್ತಿದ್ದಾನೆ ಅವನ ಮುಖದಲ್ಲಿ ಶಾಂತಿಯು ತುಂಬಿ ತುಳುಕುತ್ತಿದೆ ಕಣ್ಣುಗಳಲ್ಲಿ ಗಾಂಭೀರ್ಯವು ನಲಿದಾಡುತ್ತಿದೆ ಬೆಟ್ಟಗಳಿಂದ ಕಲ್ಲುಗಳು ಬೀಳುತ್ತಿವೆ ದಾರಿಯಲ್ಲಿ ಕಲ್ಲುಗಳು ಕುಸಿದು ಹೋಗುತ್ತಿವೆ

ಸನ್ಯಾಸಿಯು ಯೋಚಿಸತೊಡಗಿದನು— "ಬದರೀ ದೇವಾಲಯವನ್ನು ಸೇರುವುದು ಹೇಗೆ? ನನ್ನಂತೆಯೇ ಇನ್ನೆಷ್ಟುಮಂದಿ ಹೀಗೆಯೇ ಕಷ್ಟಪಡುತ್ತಿರಬಹುದು! ದೇವರೇ, ಈ ದಾರಿಯನ್ನು ಯಾತ್ರಿಕರಿಗೆ ಸುಗಮವಾಗಿ ಮಾಡಿಸಲೊಲ್ಲೆಯೇಕೆ?"

ಕಷ್ಟಪರಂಪರೆಗಳೆಲ್ಲವನ್ನೂ ಅನುಭವಿಸಿ ದೇವರ ದರ್ಶನವನ್ನು ಮಾಡಿ ಸನ್ಯಾಸಿಯು ಊರಿಗೆ ಹಿಂತಿರುಗಿದನು. ಮನಸ್ಸಿನಲ್ಲಿ ಒಂದು ದೃಢಸಂಕಲ್ಪವನ್ನು ಮಾಡಿದನು. "ಈ ದಾರಿಯನ್ನು ಸರಿಮಾಡಿಯೇ ಮಾಡುತ್ತೇನೆ" ಸತ್ವಶಕ್ತಿಯ ಪ್ರಭಾವವನ್ನು ಕೇಳಬೇಕೇ? ಮಹಾತ್ಮನ ಸಂಕಲ್ಪವು ಸಿದ್ಧಿಸಿತು ಕೋಟ್ಯನುಕೋಟಿ ರೂಪಾಯಿಗಳು ಅವನ ಕಾಲಿಗೆ ಬಂದು ಬಿದ್ದವು ದಾರಿಯಲ್ಲಿ ನೂರಾರು ಸೇತುವೆಗಳನ್ನು ಕಟ್ಟಿಸಿದನು ಹತ್ತಾರು ಛತ್ರಗಳನ್ನು ಕಟ್ಟಿಸಿದನು

ಆ ಸ್ವಾಮಿಯ ಹೆಸರು—"ಸ್ವಾಮಿ ವಿಶುದ್ಧಾನಂದ" ಅಡ್ಡಹೆಸರು—ಕಾಳೀಕಂಬಲೀವಾಲಾ" ಎಂದು ಹರದ್ವಾರದಿಂದ ಬದರೀನಾರಾಯಣದವರೆಗೂ ಸುಮಾರು ೧೬೪ ಮೈಲಿಗಳು ಈ ಮಹಾತ್ಮನ ಹೆಸರಿನಲ್ಲಿ ಪ್ರತಿ ಮೂರು ಮೈಲಿಗೂ ಧರ್ಮಛತ್ರಗಳಿವೆ ಹೃಷೀಕೇಶದಲ್ಲಿ ಸಾವಿರಾರು ಸಾಧುಗಳಿಗೆ ಈತನ ಹೆಸರಿನಲ್ಲಿ ಪ್ರತಿದಿನವೂ ಅನ್ನದಾನ ನಡೆಯುತ್ತಿದೆ ಸಾವಿರಾರು ಸನ್ಯಾಸಿಗಳು ಹೃಷೀಕೇಶದಲ್ಲಿ ಟಿಕೆಟ್ ಪಡೆದು ಉತ್ತರಖಂಡ ಯಾತ್ರೆಗೆ ಹೊರಡುವರು. (ಸುಮಾರು ೮೦೦ ಮೈಲಿ ಯಾತ್ರೆ) ಟಿಕೆಟ್ ತೋರಿಸಿದೊಡನೆಯೇ ಈ ಸನ್ಯಾಸಿಗಳಿಗೆ ಅಂಗಡಿಯವರು ಸಾಮಾನು ಪಾತ್ರೆಗಳನ್ನು ಕೊಡುತ್ತಾರೆ. ಇಳಿದುಕೊಳ್ಳಲು ಜಾಗವನ್ನೂ ಹೊದೆಯಲು ಕಂಬಳಿಯನ್ನೂ ಕೊಡುತ್ತಾರೆ. ಇವಕ್ಕೆಲ್ಲಾ ವರ್ಷಕ್ಕೆ ಸುಮಾರು ೩೦—೪೦ ಲಕ್ಷ ರೂಪಾಯಿಗಳು ಖರ್ಚಾಗುತ್ತವೆ. ಈ ಕೆಲಸಗಳೆಲ್ಲವೂ ಸನ್ಯಾಸಿಗಳ ಮೂಲಕವೇ ನಡೆಯುತ್ತವೆ. ಹಣವೆಲ್ಲವೂ ಅಪ್ರಾರ್ಥಿತವಾಗಿ ಅವರಕೈಲಿ ಬಂದು ಬೀಳುತ್ತದೆ. ಈ ಅಸಾಧಾರಣವಾದ ಧರ್ಮಕಾರ್ಯದ ವೃಕ್ಷವನ್ನು ನೋಡಬೇಕಾದರೆ ಹೃಷೀಕೇಶಕ್ಕೆ ಹೋಗಿ ಪರೀಕ್ಷಿಸಬಹುದು. ಈ ಮಹತ್ಕಾರ್ಯಕ್ಕೆಲ್ಲಕ್ಕೂ ವಿಶುದ್ಧಾನಂದರ ಸತ್ವಶಕ್ತಿಯೇ ಕಾರಣ ಬಿರುದು ಬಾವಲಿಗಳನ್ನು ಪಡೆದು ಧರ್ಮಾತ್ಮ, ಧರ್ಮಪ್ರಕಾಶರೆನಿಸಿಕೊಂಡು ಹಣವನ್ನು ಖರ್ಚುಮಾಡುವವರಲ್ಲ? ಸಾತ್ವಿಕಶಕ್ತಿಯಿಂದ ನಿಸ್ವಾರ್ಥರಾಗಿ ಸುವರ್ಣರಾಶಿಯನ್ನು ಆಕರ್ಷಿಸುವ ಮಹಾತ್ಮರೆಲ್ಲಿ? ಸತ್ವದ ಮಹತ್ವವೇ ಮಹತ್ವ ಸತ್ವಕ್ಕೆ ಸಂಕಲ್ಪವೊಂದೇ ಸಾಕು ಉಪಕರಣಗಳು ಬೇಕಿಲ್ಲ

ಈ ಸತ್ವಶಕ್ತಿಯು ಬ್ರಹ್ಮತೇಜದ ಫಲ "ಧಿಕ್! ಧಿಕ್! ಕ್ಷತ್ರಿಯ ಬಲಂ, ಬ್ರಹ್ಮತೇಜೋಬಲಂ ಬಲಂ"

ಕಾಶ್ಮೀರಿ ಬಾಬಾ

ಜ್ಯೋತಿರ್ಮಠವೆಂಬುದು ಶಂಕರಾಚಾರ್ಯರು ಸ್ಥಾಪಿಸಿದ ಮಠಗಳಲ್ಲೊಂದು ಇದು ಬದರೀನಾರಾಯಣಕ್ಕೆ ಹದಿನೆಂಟು ಮೈಲಿ ದೂರದಲ್ಲಿದೆ ವರ್ಷಕ್ಕೆ ಸುಮಾರು ಆರು ತಿಂಗಳು ರಸ್ತೆಗಳಲ್ಲೂ, ಮನೆಗಳ ಮೇಲೂ, ಮಲ್ಲಿಗೆ ಹೂವಿನ ರಾಶಿಯಂತೆ ಮಂಜು ಕವಿದುಕೊಂಡಿರುತ್ತದೆ ಆ ಸಮಯದಲ್ಲಿ ನಾವು ಅಲ್ಲಿಗೆ ಹೋಗಿದ್ದೆವು ಅಸಾಧ್ಯವಾದ ಚಳಿ ಮೈಯನ್ನು ಕೊರೆಯುತ್ತಿತ್ತು ಬೆಳಗ್ಗೆ ಒಂಬತ್ತು ಘಂಟೆಯವರೆಗೆ ಕೊಠಡಿಯಿಂದ ಹೊರಗೆ ಬರಲಾಗುತ್ತಿರಲಿಲ್ಲ ಬಿಸಿಲು ಚೆನ್ನಾಗಿ ಬಂದು ಮಂಜು ಕರಗಿದರೆಮಾತ್ರ ನಾವು ಹೊರಗೆ ಬರುತ್ತಿದ್ದೆವು ಸಾಯಂಕಾಲ ಆರು ಘಂಟೆಯ ಮೇಲೆ ಹೊರಗೆ ಇರಲಾಗುತ್ತಿರಲಿಲ್ಲ ಚಳಿಯು ಎಲ್ಲರನ್ನೂ ಮನೆಯೊಳಕ್ಕೆ ನೂಕುತ್ತಿತ್ತು ಇದನ್ನು ಸಹಿಸಲಾರದೆ ನಾವು "ಇನ್ನೆಷ್ಟು ಹೆಚ್ಚು ಚಳಿಯಿರಬೇಕು? ಗುಡಿಯ ಹೊರಬಾಗಿಲು ತೆಗೆಯುವುದು ಇನ್ನೂ ಇಪ್ಪತ್ತು ದಿವಸಗಳು ಇವೆಯಲ್ಲಾ! ದೇವರ ದರ್ಶನವಾಗದಿದ್ದರೂ ಚಿಂತೆಯಿಲ್ಲ, ಗುಡಿಯ ಹೊರಬಾಗಿಲಿನ ದರ್ಶನವನ್ನಾದರೂ ಮಾಡಿ ಆದಷ್ಟು ಬೇಗ ಈ ಚಳಿಯಿಂದ ಪಾರಾಗಿ ಊರು ಸೇರೋಣ" ಎಂದು ನಿಶ್ಚಯಿಸಿದೆವು

ನಮ್ಮಲ್ಲಿದ್ದ ಗಂಟು ಮೂಟೆಗಳೆಲ್ಲವನ್ನೂ ಕಟ್ಟಿದೆವು ಬದರೀನಾರಾಯಣಕ್ಕೆ ಹೋಗಲು ಬಹಳ ಕಷ್ಟವಾಗಿತ್ತು ದಾರಿಯೆಲ್ಲವೂ ಕುಸಿದು ಕಲ್ಲುಗಳಿಂದ ತುಂಬಿತ್ತು ನಡೆಯುತ್ತಿರುವಾಗ ಬೆಟ್ಟದಿಂದ ಕಲ್ಲುಗಳು ಉರುಳುತ್ತಿದ್ದುವು ಈ ಗಾಬರಿಯಲ್ಲಿ ಸಿಕ್ಕಿ ಅವಸ್ಥೆ ಕಡಿಮೆ. ಒಂದು ಸಣ್ಣ ಮೂಟೆಯನ್ನು ಕಟ್ಟಿಕೊಂಡು ಬದರಿಯನ್ನು ಸೇರಿ ಮಾರನೇ ದಿನವೇ ಅಲ್ಲಿಂದ ಹಿಂತಿರುಗುವುದಕ್ಕೆ ಎಲ್ಲವೂ ಸಿದ್ಧವಾಯಿತು ಆ ಅಸಾಧಾರಣವಾದ ಚಳಿಯು ನಮ್ಮ ಮನಸ್ಸನ್ನು ಕುಗ್ಗಿಸಿತು ದೇವರ ಕಡೆಯಿದ್ದ ಮನಸ್ಸನ್ನು ಊರಿನಕಡೆ ತಿರುಗಿಸಿತು ಆಲೋಚನಾ ತರಂಗಗಳು ತಲೆಯಲ್ಲಿ ಒಂದರ ಮೇಲೊಂದು ಸುರುಳಿಯಂತೆ ಸುತ್ತಲಾರಂಭಿಸಿದವು. ಆ ಸಮಯದಲ್ಲಿ ನಮ್ಮ ಸಾತ್ವಿಕವೃತ್ತಿಯೆಲ್ಲವೂ ನಾಶವಾದಂತೆ ಕಾಣಿಸುತ್ತಿತ್ತು ನಮ್ಮ ಮನಸ್ಸೇ ನಮಗೆ ದೊಡ್ಡ ಶತ್ರುವಾಯಿತು. ಚಂಚಲವಾದ ನಮ್ಮ ಮನಸ್ಸು ಹೃದಯದಲ್ಲಿನ ಅಹಂಕಾರ, ಮಮಕಾರಗಳನ್ನು ಹೆಚ್ಚಿಸಿತು "ದೇವರು ಎಲ್ಲೆಲ್ಲಿಯೂ ಇರುವನು, ನಿಮ್ಮ ಊರಿನಲ್ಲೇ ಇದ್ದಾನೆ. ನಮ್ಮ ಹೃದಯದಲ್ಲಿಯೇ ನೃತ್ಯಮಾಡುತ್ತಿದ್ದಾನೆ, ದೇಹವನ್ನು ಅಪಾಯಕ್ಕೀಡುಮಾಡಿ ಜ್ಯೋತಿದರ್ಶನಕ್ಕಾಗಿ ಕಾತುರಪಡುವುದನ್ನು ಬಿಟ್ಟು ಮನೆಗೆ ಹೋಗಿ ಶಾಂತಚಿತ್ತನಾಗಿ ಧ್ಯಾನಮಾಡು" ಎಂದು ಮನಸ್ಸು ಹೇಳಿತು. ಪಾಮರರಾದ ನಾವು ಈ ತರ್ಕಕ್ಕೆ ಸೋತು, ನಮ್ಮ ಉದ್ದೇಶವನ್ನೇ ಪೂರ್ತಿ ಮರೆತೆವು ಮನಸ್ಸು ಮರ್ಕಟವೆಂಬುದನ್ನು ಮರೆತೆವು ಪಾಪಕ್ಕೆ ಗುಲಾಮರಾದೆವು.

ಮಾನವನು ಚಿಂತಿಸುವುದು ಒಂದು ದೈವವು ಬಗೆಯುವುದು ಮತ್ತೊಂದು ಪರಮಾತ್ಮನ ಕರುಣೆಯು ಅಪಾರವಾದುದು ಉದ್ವಿಗ್ನ ಮನಸ್ಕರೂ ಪಾಮರರೂ ಆದ ನಮ್ಮನ್ನು ಈ ಕಠಿಣ ಪ್ರಸಂಗದಲ್ಲಿ ದಯಾಮಯನಾದ ಅವನು, ಕೈಬಿಡಲಿಲ್ಲ ಆಕಸ್ಮಿಕವೆಂಬುದು ಮನುಷ್ಯನಿಗೆ, ಆ ಪರಮಾತ್ಮನಿಗಲ್ಲ ನಮ್ಮ ಮನಸ್ಸನ್ನು ಬದಲಾಯಿಸುವುದಕ್ಕೆ ಭಗವಂತನು ನಮಗೆ ಒಂದು ಆಕಸ್ಮಿಕವನ್ನು ತಂದೊಡ್ಡಿದನು

ಮಧ್ಯಾಹ್ನ ಹನ್ನೆರಡು ಘಂಟೆ, ಕಿತ್ತಲೇ ಹಣ್ಣು ತರಲು ಅಂಗಡಿಗೆ ಹೋದೆವು. ದಾರಿಯಲ್ಲೊಬ್ಬರು ನಮ್ಮನ್ನು ಕರೆದರು "ಇಲ್ಲಿಂದ ಎರಡು ಫರ್ಲಾಂಗ್ ದೂರದಲ್ಲಿ ಒಂದು ಆಶ್ರಮವಿರುವುದು, ಅಲ್ಲಿ ಇಬ್ಬರು ಮೂವರು ಸಾಧುಗಳಿದ್ದಾರೆ, ಅವರನ್ನು ದಯವಿಟ್ಟು ಸಂದರ್ಶಿಸಿ ಮುಂದಿನ ಕೆಲಸವನ್ನು ಮಾಡಿರಿ" ಎಂದು ಹೇಳಿದರು

ನಾವು ಆಶ್ರಮಕ್ಕೆ ಹೊರಟೆವು ಸುತ್ತಲೂ ಬೆಟ್ಟಗಳು, ಆಶ್ರಮವು ಕಣ್ಣಿಗೆ ಕಾಣುತ್ತಿತ್ತು. ಸುಮಾರು ಒಂದು ಫರ್ಲಾಂಗ್ ದೂರವಿರಬಹುದು ಆದರೆ, ಬೆಟ್ಟದ ದಾರಿ, ಸುಮಾರು ಒಂದು ಮೈಲಿ ಸುತ್ತಬೇಕಾಯಿತು ಅಲ್ಲಿ ಹೋಗಿ ಸೇರಿದೆವು ಇಂದ್ರಿಯಗಳ ಹಿಡಿತಕ್ಕೆ ಸಿಲುಕದ ಒಂದು ಅನುಭವವು ಅಲ್ಲಿ ನಮಗಾಯಿತು ಇದನ್ನು ತಿಳಿಯಲು ನಮ್ಮ ತರ್ಕವು ನಮಗೆ ಸಹಕಾರಿಯಾಗಲಿಲ್ಲ. ಮನಸ್ಸಿನಲ್ಲಿ ಅನಿರ್ವಚನೀಯವಾದ ಶಾಂತಿಯು ಮೂಡಿತು ಎಂದು ನೂರು ದಿವಸಗಳಿಂದ ಸಮುದ್ರದ ಅಲೆಗಳಿಗೆ ಸಿಕ್ಕಿದ ಹಡಗಿನಂತಿದ್ದ ನಮ್ಮ ಮನಸ್ಸು ತೀರವನ್ನು ಸೇರಿ ನಿಶ್ಚಲವಾಗಿ ನಿಂತ ನೌಕೆಯಂತಾಯಿತು ಈ ಶಾಂತಿಯು ಹೇಗೆ ಮೂಡಿತು? ಕಾರಣವೇನು? ಈ ಮಹಾತ್ಮರಾರು? ಎಂಬ ಪ್ರಶ್ನೆಗಳು ಮನಸ್ಸನ್ನು ಆವರಿಸಿದವು ಕಾಳಿದಾಸನ ಶಾಕುಂತಲನಾಟಕವು ನೆನಪಿಗೆ ಬಂತು ದುಷ್ಯಂತನು ಆಶ್ರಮದ ಹತ್ತಿರ ಹೋಗುತ್ತಲೇ ಮನಸ್ಸು ಶಾಂತವಾಯಿತು. ಈ ಶಾಂತಿಗೆ ಕಾರಣ ಋಷಿಗಳ ಸಾನ್ನಿಧ್ಯವೇ, ಇಲ್ಲಿ ಕಣ್ವರಿದ್ದೇ ಇರಬೇಕು ಎಂದು ನಿಶ್ಚಯಿಸಿದನು. ಅದರಂತೆ ನಮಗೆ ಇಲ್ಲಿ ಪರಾಶಕ್ತಿಯು ಕೆಲಸಮಾಡುತ್ತಿರಬೇಕು. ಇಂದ್ರಿಯಗಳಿಗೆ ಗೋಚರವಾಗಲಿ, ಆಗದಿರಲಿ, ಮಹಾತ್ಮರು ಇಲ್ಲಿ ಶಾಂತತರಂಗಗಳನ್ನು ಜಗತ್ತಿಗೆ ಎರಚುತ್ತಿರಬೇಕು, ಎಂದು ಭಾಸವಾಯಿತು.

ಒಳಗೆ ಪ್ರವೇಶಿಸಿದೆವು. ಇಬ್ಬರು ಮೂವರು ಸನ್ಯಾಸಿಗಳನ್ನು ನೋಡಿದೆವು. ಜಪತಪಗಳಲ್ಲಿ ನಿರತರಾಗಿದ್ದರು.

ಅಪೂರ್ಣ

ಅಲ್ಲಿ ಒಂದು ಸಣ್ಣ ಗುಡಿ, ಅದರಲ್ಲಿ ಒಂದು ಲಿಂಗವಿತ್ತು ಒಂದು ಸಣ್ಣ ದೀಪವು ಉರಿಯುತ್ತಿತ್ತು ಮಂಗಳಾರತಿಯ ಸಮಯ, ಕುಳಿತುಕೊಳ್ಳಿ ಎಂದು ಒಬ್ಬರು ಹೇಳಿದರು ಸುಮಾರು ಐದು ನಿಮಿಷಗಳ ಕಾದೆವು ಅನಂತರ ದಿಗಂಬರರಾದ ಒಬ್ಬ ಸ್ವಾಮಿಗಳು ಬಟ್ಟೆ ಮುಚ್ಚಿದ್ದ ಒಂದು ತಟ್ಟೆಯನ್ನು ಕೈಯಲ್ಲಿ ಹಿಡಿದುಕೊಂಡು ಗುಡಿಯೊಳಗೆ ಹೋದರು ಬಾಗಿಲನ್ನು ಹಾಕಿಕೊಂಡರು ಎರಡು ಮೂರು ನಿಮಿಷಗಳಾದವು ತಟ್ಟೆಯನ್ನು ಹಿಡಿದುಕೊಂಡು ಹೊರಗೆ ಬಂದರು ಶಿಷ್ಯರೊಬ್ಬರು ನನ್ನ ಕೈಗೆ ಪೂಜೆಯಾದ ಕೆಲವು ಹೂಗಳನ್ನು ಕೊಟ್ಟರು ನಾವು ಪುನಃ ಅಲ್ಲಿ ಕುಳಿತುಕೊಂಡೆವು ಕೆಲವು ನಿಮಿಷಗಳಾದವು ದಿಗಂಬರ ಸ್ವಾಮಿಗಳು ಪುನಃ ಹೊರಗೆ ಬಂದರು ನಮ್ಮನ್ನು ನೋಡಿದರು [illegible] ಸ್ವಾಮಿ ನ ಊಟವಾಯಿತೇ? ಎಂದು ಕೇಳಿದರು ಆಯಿತು ಎಂದು ಉತ್ತರವಿತ್ತೆವು ಅನಂತರ ಅವರು ಹೋಗಿ ಊಟ ಮಾಡಿದರು

ಸ್ವಲ್ಪ ಹೊತ್ತಿನ ನಂತರ ನಾವು ಸ್ವಾಮಿಗಳನ್ನು ನೋಡಲು ಹೋದೆವು [illegible] ಬಂಡೆಯ ಮೇಲೆ ಕುಳಿತಿದ್ದರು ಅವರು ಕಾಶ್ಮೀರ ದೇಶದವರು ಕೆಂಪು ನಿಲುವಂಗಿ ಧರಿಸಿದ್ದರು ಮುಖವು ಅಚ್ಚ ಗುಲಾಬಿ ಹೂವಿನ ಕಂಪು ಎಲ್ಲರ ಹೃದಯವನ್ನೂ ಹೊಕ್ಕು ನೋಡುತ್ತಿದ್ದ ಸೂಕ್ಷ್ಮವಾದ ಕಣ್ಣುಗಳು ಬೆಳ್ಳಿಯ ಬಣ್ಣದ ಗಡ್ಡ ವಯಸ್ಸು ಸುಮಾರು ಅರುವತ್ತು, ನೋಡಿದೊಡನೆಯೇ ಎಲ್ಲರನ್ನೂ ಆಕರ್ಷಿಸುವ ಮೈಕಟ್ಟು ಮತ್ತು ಮುಖ, ಗಂಭೀರ ವಿನಯದಿಂದ ಕೂಡಿದ ತೇಜಸ್ಸು ಮುಖದಲ್ಲಿ ತಾಂಡವವಾಡುತ್ತಿತ್ತು ಮೃದುವಾದ ಅವರ ಮಾತುಗಳು ಪಾಮರರ ಮನದಲ್ಲಿ ವಿಶ್ವಾಸವನ್ನು ಹುಟ್ಟಿಸುವಂತಹವು ಹತ್ತಿರ ಹೋಗಿ ಕುಳಿತೆವು ನಮ್ಮನ್ನು ನೋಡಿದರು ನಮ್ಮ ವಿಷಯವೆಲ್ಲವೂ ಇವರಿಗೆ ಹೇಗೆ ತಿಳಿಯಿತೋ ಏನೋ, ಮೃದುವಾಗಿ ನಕ್ಕರು ಮಾತನಾಡತೊಡಗಿದರು

ಬಹಳ ಸಂತೋಷ ನೀವು ಗುಡಿಯ ಬಾಗಿಲನ್ನು ನೋಡಿ ಹಿಂತಿರುಗಬೇಕೆಂದಿದ್ದೀರಿ, ಅಲ್ಲವೆ? ಜ್ಯೋತಿ ದರ್ಶನವು ಶಿವನಿಗೆ ಬೇಡವಾಗಿ ಕಾಣುತ್ತಿದೆ ನಿಮ್ಮಲ್ಲಿಯೇ ಜ್ಯೋತಿ ಉರಿಯುತ್ತಿದೆಯೆಂದು ನಿಮ್ಮ ಭಾವನೆ, ಅದು ಪರಮ ಸತ್ಯ, ಆ ಬೆಳಕು ನಿಮ್ಮ ಮನಸ್ಸಿನಲ್ಲಿ ಧ್ಯೇಯ ಸ್ಪಷ್ಟಪಡಿಸಿದೆ ನೀವು ಊರಿನಿಂದ ಹೊರಟಾಗ ಜ್ಞಾನಚಕ್ಷುಸ್ಸಿನಿಂದ ಬಹಿರ್ಜ್ಯೋತಿರ್ದರ್ಶನವನ್ನು ಮಾಡಬೇಕೆಂದು ಹೊರಟಿರಿ ಬಾಹ್ಯದರ್ಶನವು ಚರ್ಮಚಕ್ಷುಸ್ಸನ್ನು ಪಾವನಮಾಡುತ್ತಿದೆ ಸಂಕಲ್ಪವನ್ನು ಬದಲಾಯಿಸಬೇಡಿ, ಪರಮಾತ್ಮನು ಶುಭವನ್ನು ಮಾಡಲಿ ಎಂದರು ನಮ್ಮ ಮನಸ್ಸು ಬದಲಾಯಿಸಿತು ನಾವು ಆಶ್ಚರ್ಯಯುತರಾದೆವು ನಮ್ಮ ಮನಸ್ಸಿನಲ್ಲಿರುವುದು ಇವರಿಗೆ ಹೇಗೆ ತಿಳಿಯಿತು? ಇಂತಹ ಆಕಸ್ಮಿಕಗಳನ್ನೇ ಮಹಾತ್ಮರು ಈಶ್ವರ ಪ್ರೇರಣೆ ಎನ್ನುವುದು ಇವರೊಡನೆ ನಮ್ಮ ಭೇಟಿಯು ಆಕಸ್ಮಿಕವಲ್ಲ ಈಶ್ವರ ಪ್ರೇರಣೆಯ ಪರಿಣಾಮ ನಮಗೆ ಆಕಸ್ಮಿಕವಾದುದು ಮಹಾತ್ಮರಿಗೆ ಸ್ವಾಭಾವಿಕ ತ್ರಿಕಾಲ ಜ್ಞಾನಿಗಳಿಗೆ ಎಲ್ಲರ ಮನಸ್ಸನ್ನೂ ತಿಳಿಯುವ ಸಾಮರ್ಥ್ಯವಿದೆ ನಮ್ಮಲ್ಲಿರುವ ಅಹಂಕಾರ ಮಮಕಾರಗಳೇ ನಮ್ಮಲ್ಲಿರುವ ತ್ರಿಕಾಲ ಜ್ಞಾನಕ್ಕೆ ಅಡ್ಡಿ ಎಲ್ಲರ ಮನಸ್ಸೂ ಒಂದೇ, ಆ ಭಾವನೆಯನ್ನು ಅನುಭವಕ್ಕೆ ತಂದುಕೊಂಡಿದ್ದವರು ಆ ಮಹಾತ್ಮರು ನಾವು ತರ್ಕದಿಂದ ಆ ಭಾವನೆಯನ್ನು ಅನುಭವಿಸಲು ಯತ್ನಿಸುತ್ತಿದ್ದೇವೆ ಶ್ರೀ ಬಾಬಾರವರು ಸ್ವಲ್ಪ ಮಟ್ಟಿಗೆ ಸಾಕ್ಷಾತ್ಕಾರವನ್ನು ಹೊಂದಿದ್ದರು ಸಾಕ್ಷಾತ್ಕಾರವು ಮನೋವ್ಯಾಪಾರಗಳ ಪರಿಣಾಮವಲ್ಲ ಶಾಸ್ತ್ರ ವ್ಯಾಸಂಗದ ಫಲವಲ್ಲ ಇಂದ್ರಿಯಗಳಿಂದ ಗೋಚರವಾಗತಕ್ಕದ್ದಲ್ಲ ಆದರೆ ಭಕ್ತಿ ವೈರಾಗ್ಯಗಳ ಫಲ ತ್ಯಾಗ ತಪಸ್ಸುಗಳ ಪರಿಣಾಮ ಏಕಾಂತವಾಸದ ಪರಮಾವಧಿ

ನಮಗೂ ಕಾಶ್ಮೀರೀ ಬಾಬಾರವರಿಗೂ ಸಂಭಾಷಣೆ ಪ್ರಾರಂಭವಾಯಿತು

ಬಾಬಾರವರು ನಿಮ್ಮ ಜೊತೆಯಲ್ಲಿ ಬಂದ ಮತ್ತೊಬ್ಬರೆಲ್ಲಿ? ಎಂದರು ನಾನು ಅವರನ್ನು ದಿಟ್ಟತನದಿಂದ ಪರೀಕ್ಷಿಸಲೋಸುಗ, ನನ್ನ ಜೊತೆಯಲ್ಲಿ ಮತ್ತೊಬ್ಬರು ಬಂದಿದ್ದರೂ ಅವರನ್ನು ಮರೆಮಾಚಿ "ಯಾರೂ ಇಲ್ಲವಲ್ಲಾ, ನಮ್ಮೊಡನೆ ಬಂದಿದ್ದ ಮತ್ತೊಬ್ಬನು ನೌಕರನು ಎಂದೆನು! ಅವರು ನಕ್ಕರು ಪುನಃ ನಿಮ್ಮೊಡನೆ ಬಂದ ನೌಕರನನ್ನಲ್ಲ ನಾನು ಕೇಳಿದ್ದು, ಮತ್ತೊಬ್ಬ ಸ್ನೇಹಿತರನ್ನು ಎಂದರು ನಾನು ತಲೆ ತಗ್ಗಿಸಬೇಕಾಯಿತು ನಂತರ ಅವರು "ಗಂಟೆ ಎಷ್ಟು? ಎಂದರು ಗಡಿಯಾರವನ್ನು ನೋಡದೆ ಬಾಯಿಗೆ ಬಂದದ್ದನ್ನು ನನ್ನ ಸ್ನೇಹಿತರ ಹೇಳಿದರು ಅವರು ಮತ್ತೆ ನಕ್ಕು ನಮ್ಮ ತಪ್ಪನ್ನು ಸರಿಮಾಡಿ ಸರಿಯಾದ ಗಂಟೆಯನ್ನು ಹೇಳಿ ಗಡಿಯಾರವನ್ನು ನೋಡಿ, ಎಂದರು ಅನಂತರ ಅವರು ತಮ್ಮ ಜಪತಪಗಳಿಗೆ ಹೊರಟು ಹೋದರು ಹೋಗುವಾಗ ಎಲ್ಲರ ಮನಸ್ಸೂ ಒಂದೇ, ಆಲೋಚನೆಗಳೂ ಒಂದೇ ದಿಕ್ಕು, ಕಾಲಗಳು ತೋರಿಕೆಯವು ಇದರಲ್ಲಿ ಮಂತ್ರವಿಲ್ಲ, ಮಾಯೆಯಿಲ್ಲ, ಅಹಂಕಾರ ಮಮಕಾರಗಳನ್ನು ಬಿಟ್ಟರೆ ಒಬ್ಬನ ಮನಸ್ಸು ಮತ್ತೊಬ್ಬನಿಗೆ ತಿಳಿಯುವುದು ಎಂದರು

ಸ್ವಾಮಿ ಗೌತಮಾನಂದರು

ಕೆಳಗಿನಿಂದ ನೋಡಿದರೆ ಮೇಲೆ ಒಂದು ಇಕ್ಕಟ್ಟಾದ ಮಣ್ಣಿನ ಗೆರೆಯಂತೆ ಬೆಟ್ಟದ ಹಾದಿಯು ಕಾಣುತ್ತಿದೆ ಯಾತ್ರಿಕರು ದೂರದಿಂದ ಸಾಲುಸಾಲಾಗಿ ಇರುವೆಯ ಸಾಲಿನಂತೆ ಕಾಣುತ್ತಿದ್ದಾರೆ ಬೆಟ್ಟದ ತುದಿಗಳಲ್ಲಿ ಎತ್ತರವಾದ ದೇವದಾರು ವೃಕ್ಷಗಳು ಆಕಾಶವನ್ನು ಚುಂಬಿಸುತ್ತಿವೆ ಜಲಪಾತಗಳು ಅಲ್ಲಲ್ಲಿ ರಭಸದಿಂದ ಭೋರ್ಗರೆಯುತ್ತಿವೆ ಈ ಕಣಿವೆಯ ಹಾದಿಯಲ್ಲಿ ಕುರಿಯ ಮಂದೆಗಳು ಟಿಬೆಟ್ಟಿಗೆ ಸಾಲ ಸಾಲಾಗಿ ಹೋಗುತ್ತಿವೆ ಅವುಗಳ ಕತ್ತಿನಲ್ಲಿ ಕಟ್ಟಿದ್ದ ಗಂಟೆಯ ಶಬ್ದವು ಕಿವಿಗೆ ಇಂಪನ್ನು ಸೂಸುತ್ತಿದೆ ಕುರಿಯ ಬೆನ್ನಿನ ಮೇಲೆ ಅಕ್ಕಿ ಬೇಳೆಯ ಚಿಕ್ಕ ಚಿಕ್ಕ ಮೂಟೆಗಳು ಈ ಪರ್ವತ ಪ್ರದೇಶದಲ್ಲಿ ರೈಲುಗಳಿಲ್ಲ, ಮೋಟಾರುಗಳಿಲ್ಲ, ಎತ್ತಿನ ಗಾಡಿಗಳಿಲ್ಲ, ಸಾಮಾನನ್ನು ಒಂದು ಕಡೆಯಿಂದ ಒಂದು ಕಡೆ ಸಾಗಿಸಬೇಕಾದರೆ ಕುರಿಯ ಮಂದೆಯೇ ಗತಿ ಕಣಿವೆಯ ಕೆಳಗೆ ಗಂಗೆಯ ನೀರ ಹಸುರಾಗಿ ಕಂಗೊಳಿಸುತ್ತಿದೆ ಗಂಗೆಯ ಅಕ್ಕಪಕ್ಕಗಳಲ್ಲಿ ಕಗ್ಗೆಯ ಬಂಗಾರದಿಂದ ಕೂಡಿದ ಮರಳು ಬೆಳ್ಳಿಯಂತೆ ಶೋಭಿಸುತ್ತಿದೆ ನದಿಯಲ್ಲಿ ಅಲ್ಲಲ್ಲಿ ಹವಳದಂತ ನೊರೆಯು ಓಂ, ಓಂ ಎಂದು ಜಪಿಸುತ್ತಿದೆ ಪ್ರಕೃತಿ ದೇವಿಯು ಸೃಷ್ಟಿ ಸೌಂದರ್ಯದಲ್ಲಿ ಬ್ರಹ್ಮನೊಡನೆ ಪಂಥ ಕಟ್ಟಿಕೊಂಡಿದ್ದಾಳೆ ಈ ಸೌಂದರ್ಯದಲ್ಲಿ ಮನಸ್ಸು ಆನಂದದಿಂದ ಉಬ್ಬುತ್ತದೆ

ಮನುಷ್ಯನು ಸೌಂದರ್ಯವನ್ನು ಸೃಷ್ಟಿಸಬಲ್ಲನೇ? ಅವನು ಎಷ್ಟು ಪ್ರಯತ್ನಿಸಿದರೂ ನಗರಗಳಲ್ಲಿ ಕೋಟ್ಯನುಕೋಟಿ ದ್ರವ್ಯವನ್ನು ವೆಚ್ಚಮಾಡಿ ಶಕ್ತಿ ಸಾಹಸಗಳನ್ನುಪಯೋಗಿಸಿದರೂ, ಹಿಮಾಲಯದ ಸೃಷ್ಟಿ ಸೌಂದರ್ಯದ ಕೋಟಿ ಕೋಟಿ ಭಾಗದ ಒಂದು ಲವಲೇಶವನ್ನೂ ಹೋಲಲಾರದು ನಗರದ ಸೌಂದರ್ಯವು ಮನಸ್ಸನ್ನು ಇಂದ್ರಿಯಗಳ ಕಡೆಗೆ ಎಳೆಯುತ್ತದೆ ಹಿಮಾಲಯದ ಸೌಂದರ್ಯವು ಮನಸ್ಸನ್ನು ಪರಮಾತ್ಮನ ಕಡೆಗೆ ಚಿಮ್ಮಿಸುತ್ತದೆ ನಗರಗಳಲ್ಲಿ ಇಂದ್ರಿಯಗಳು ಚಂಚಲವಾಗಿ ಸಹಸ್ರಾರು ಕಡೆ ಓಡಾಡುತ್ತವೆ ಹಿಮಾಲಯದಲ್ಲಿ ಇಂದ್ರಿಯಗಳು ಅಂತರ್ಮುಖವಾಗಿ ಪರಮಾತ್ಮನಲ್ಲಿ ಒಂದೇಕಡೆ ಸೇರುತ್ತವೆ ನಗರಗಳು ಪ್ರವೃತ್ತಿ ಮಾರ್ಗದ ಪರಮಾವಧಿ ಹಿಮಾಲಯವು ನಿವೃತ್ತಿ ಮಾರ್ಗದ ಪರಮಾವಧಿ

ಹರಕು ಬಟ್ಟೆಗಳನ್ನುಟ್ಟ, ದಪ್ಪವಾದ ಕೂದಲಿನಿಂದ ತುಂಬಿ ಹುಚ್ಚನಂತೆ ಓರ್ವ ಸನ್ಯಾಸಿಯು, ಕೈಯಲ್ಲಿ ಒಂದು ಕಮಂಡಲವನ್ನು ಹಿಡಿದು, ಇಂಗ್ಲೀಷಿನಲ್ಲಿ ಮೈ ಲಾರ್ಡ್! ಮೈ ಲಾರ್ಡ್! ಎಂದು ಅನ್ನುತ್ತಾ, ಆಕಾಶದ ಕಡೆ ಕಣ್ಣುಗಳನ್ನು ಆಗಾಗ್ಗೆ ತಿರುಗಿಸುತ್ತಾ ಹೋಗುತ್ತಿದ್ದನು ನಾವು ಅವನ ಹಿಂದೆ ಹೋಗುತ್ತಿದ್ದೆವು ಎರಡು ಮೈಲಿಗಳು ನಡೆದನಂತರ ಒಂದು ಸ್ಥಳದಲ್ಲಿ ನಿಂತೆವು ಅಲ್ಲಿಯೇ ಆ ಸಾಧುವೂ ನಿಂತನು ಅವನನ್ನು ನೋಡಿದೊಡನೆಯೇ ನಮಗೆ ಒಂದು ಅಸಹ್ಯ ಭಾವನೆಯುಂಟಾಯಿತು ನಾವು ಅಡಿಗೆಮಾಡಿ ಪೂರೈಸಿದೆವು ಊಟವೂ ಆಯಿತು ಅನಂತರ ಸಾಧುವು ದೇವರೇ, ದೇವರೇ ಊಟವಾಯಿತೇ? ಎಂದನು ನಾವು ಆಯಿತು ಸ್ವಾಮಿ, ತಮಗೆ ಊಟವಾಯಿತೇ? ಎಂದೆವು ಅದಕ್ಕೆ ಅವರು ಬನ್ನೀ ದೇವರೇ ಎಂದು ಅವರ ಅಡಿಗೆ ಮನೆಗೆ ಕರೆದುಕೊಂಡು ಹೋದರು ಪ್ರಕೃತಿಯು ನನಗೆ ಆಹಾರ ಕೊಡುತ್ತೆ ಎಂದರು ಅಲ್ಲಿ ಒಂದು ಒಲೆ ಹಚ್ಚಿತ್ತು ಅದರಮೇಲೊಂದು ರೊಟ್ಟಿ ಹಾಕಿತ್ತು ಅದೇನು ಎಂದು ನಾವು ಕೇಳಿದೆವು ಅವರು ಪ್ರಕೃತಿಯು ಏನನ್ನು ಕೊಟ್ಟಿದ್ದಾಳೋ ಅದೆಲ್ಲವೂ ಎಂದರು ಸ್ವಲ್ಪ ಹೊತ್ತಾದ ವೇಳೆ ಆ ರೊಟ್ಟಿಯನ್ನು ಹೊರಕ್ಕೆ ತೆಗೆದರು ಅವರು "ರುಚಿನೋಡಿ ದೇವರೇ"–ಎಂದರು ಅದನ್ನು ನೋಡಿದೊಡನೆಯೇ ನಮಗೆ ಮೈ ಜ ಎಂದಿತು ಅದು ಬಹಳ ದಪ್ಪ, ಒರಟು ಮತ್ತು ಅಂಜಿ ಯಲಾಗಿತ್ತು ಅದರಲ್ಲಿ ಗೋಧಿಹಿಟ್ಟು, ಉಪ್ಪು, ಹೇ ಸಕ್ಕರೆ, ಅಕ್ಕಿಹಿಟ್ಟು, ಕೆಲವು ಸೊಪ್ಪು ಎಲ್ಲವೂ ಸೇರಿತ್ತು ಅವರು ನಮ್ಮ ಮುಖವನ್ನು ನೋಡಿ ಹೇ ದರ — "ಬ್ರಹ್ಮಜ್ಞಾನಿಯು ಎಲ್ಲವನ್ನೂ ಜೀರ್ಣಿ ಕೊಳ್ಳಬಲ್ಲನು" ಎಂದರು

ಆತನು ಶುದ್ಧ ಹುಚ್ಚನೆಂದು ನಾವು ನಿಧ ಮಾಡಿದೆವು ಆದರೆ ಇಂಗ್ಲೀಷನ್ನು ಮಾತ್ರ ಬಹ ಮನೋಹರವಾಗಿ ಮಾತನಾಡುತ್ತಿದ್ದನು ಅನಂತ ನಮ್ಮ ನಮ್ಮಲ್ಲಿ ಮಾತು ಕಥೆಗಳಾರಂಭವಾದವು ಸರ ಜೇಮ್ಸ್‌ರವರು ಬರೆದಿರುವ "ಮಿಸ್ಟೀರಿಯಸ್ ಯೂ ವರ್ಸ್" ಎಂಬ ಪುಸ್ತಕವೇ ವಾದದ ವಿಷಯ ಹ ತ್ತನೆ ಅವರು ನಮ್ಮ ವಾದದಲ್ಲಿ ಬಾಯಿಹಾಕಿದರು ನಮ್ಮ ಸಂಶಯಗಳೆಲ್ಲವನ್ನೂ ನಿವಾರಣೆಮಾಡಿ ಜಗತ್ತಿ ಮರ್ಮವನ್ನು ಸಾಕ್ಷಾತ್ಕಾರ ಮಾಡಿಕೊಂಡವರ ಮಾತನಾಡಿದರು ನಮಗೆ ಆಶ್ಚರ್ಯವಾಯಿತು ಗ್ಭ್ರಾಂತರಾದೆವು ಈ ಹುಚ್ಚನಿಗೆ ಈ ವಿಷಯ ಎಲ್ಲಿಂದ ತಿಳಿಯಿತು?

ಅನಂತರ ಅವರು ತಮ್ಮ ಜನ್ಮ ಕಥೆಯನ್ನು ಹೇಳ ತೊಡಗಿದರ ನಾನೂ ನಿಮ್ಮಂತೆ ಪ್ರಾಪಂಚಿಕನಾಗಿದ್ದೆ ಈಗ ಪರಮಾತ್ಮನಲ್ಲಿ ಐಕ್ಯವನ್ನು ಹೊಂದಿದ್ದೇನೆ ನನ್ನನ್ನು ನೋಡಿ ಭಯಪಡಬೇಡಿ ನಸು ನಾಗರಿಕತೆಯ ಮಾಯೆಯಲ್ಲಿ ಸಿಲುಕಿ ಅದಕ್ಕನುಗುಣವಾದ ಉಡಿಗೆ, ತೊಡಿಗೆ ಆಹಾರ ವಿಹಾರಗಳನ್ನು ಪೂರಾ ಅನುಭವಿಸಿದ್ದೇನೆ

ನಾನು ಹರದ್ವಾರದಿಂದ ಹೊರಟಾಗ ಒಬ್ಬ ಶ್ರೀಮಂತರು ನನಗೆ ಕಾಶ್ಮೀರ ದೇಶದ ಉಣ್ಣೆಯ ಸೂಟನ್ನು ಸಜ್ಜುಗೊಳಿಸಿ ಬೂಟ್ಸನ್ನು ತೆಗೆದುಕೊಟ್ಟಿದ್ದರು ಆದರೆ ಪರಮಾತ್ಮನ ಪ್ರೇರಣೆಯು ಮನಸ್ಸಿನಲ್ಲಿ ಜಿಜ್ಞಾಸೆಯನ್ನುಂಟುಮಾಡಿತು ಎಲ್ಲವನ್ನೂ ಬಿಟ್ಟು ಈ ಹರಕು ಬಟ್ಟೆಯನ್ನು ಉಟ್ಟಿದ್ದೇನೆ ನಾಯಿ ನರಿಗಳು ತಿನ್ನುವ ಎಂಜಲು ಅನ್ನದಲ್ಲಿ ಪರಮಾತ್ಮನನ್ನು ನಾನು ಕಂಡಿದ್ದೇನೆ ನನಗೂ ನರಿಗಳಿಗೂ ಏನೂ ವ್ಯತ್ಯಾಸವಿಲ್ಲ ನೀವೆಲ್ಲಾ ಪುಸ್ತಕವನ್ನು ಓದುತ್ತಲಿದ್ದೀರಿ ಅವೆಲ್ಲವನ್ನೂ ಬಿಟ್ಟು ಒಂದು ನಿಮಿಷ ಪರಮಾತ್ಮನನ್ನು ನಂಬಿರಿ ಜಗತ್ತಿನ ಕೌತುಕವು ಸರ್ ಜೇಮ್ಸ್‌ರವರಿಗಿಂತ ಹೆಚ್ಚಾಗಿ ಅನುಭವವಾಗುವುದು ಎಂದರು ಅವರು ಭಾಷಣಮಾಡುತ್ತಿದ್ದಾಗ ಅವರ ಕಣ್ಣಿನಲ್ಲಿ ಒಂದು ಅಪೂರ್ವ ಶಕ್ತಿಯು ಹೊರಹೊಮ್ಮುತ್ತಿತ್ತು ನಮ್ಮ ಮನಸ್ಸು ಬದಲಾಯಿಸಿತು ಅವರೊಬ್ಬ ಮಹಾತ್ಮರೆಂದು ತಿಳಿದೆವು ಜಗತ್ತಿನಲ್ಲಿ ಹುಚ್ಚರ ರೂಪದಲ್ಲಿ ಮಹಾತ್ಮರೆಷ್ಟು ಮಂದಿ ಹೀಗಿರುವರೋ ದೇವರಿಗೇ ಗೊತ್ತು ಇದಕ್ಕೇ ಅಲ್ಲವೇ ಶಾಸ್ತ್ರಗಳು ಮಹಾತ್ಮರನ್ನು ಹೊಗಳಿರುವುದು, "ಬಾಲೋನ್ಮತ್ತ ಪಿಶಾಚವತ್" ಎಂದು? (ಸ ಧ್ವ)

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಸೂಕ್ತಿಮಾಲೆ

ಲೇ—ಮಲ್ಲಿಕಾರ್ಜುನಾರಾಧ್ಯ ರಾಜೇಟಿನ್ನರು ಮಳೆಮಠ
ಮುದೇನೂರು

೨೬. ಔಷಧವು ಶಾಸ್ತ್ರ ವಿಹಿತವಾದ ರೀತಿಯಿಂದ ಚೆನ್ನಾಗಿ ಪರ್ಯಾಲೋಚಿಸಿ ನಿರ್ಮಿತವಾಗಿದ್ದರೂ, ಅದನ್ನು ಸೇವಿಸಿದರೆ ಮಾತ್ರದೇ ಗುಣಕೊಡುವುದು ಹೊರತು ಅದರ ಹೆಸರನ್ನು ಕೇಳಿದ ಮಾತ್ರದಿಂದಲೇ ಬೇನೆಯು ಮಾಯವಾಗಲಾರದು ಅಂತೆಯೇ ಸಚ್ಚರಿತ್ರೆಗಳನ್ನು ಓದಿದ ಮಾತ್ರದಿಂದಾಗಲಿ, ಕೇಳಿದ ಮಾತ್ರದಿಂದಾಗಲಿ ಅಜ್ಞಾನವು ತೊಲಗುವದಿಲ್ಲ ಆದರೆ ಅವುಗಳನ್ನು ಓದಿ ಕೇಳಿ ಆನಂದಪಡುವುದಕ್ಕಿಂತಲೂ, ಅವುಗಳೊಳಗಿನ ಮೂಲ ತತ್ವವನ್ನು ನೆನಪಿನಲ್ಲಿಟ್ಟು ಅದರಂತೆ ನಡೆಯುವುದು ನಡೆಯಲು ಪ್ರಯತ್ನಿಸುವುದು ವಿಹಿತವು ಬರಿ ತಿಳುವಳಿಕೆಯು ವ್ಯರ್ಥವು ಕುರುಡನ ಕೈಯಲ್ಲಿ ದೀಪವ

ಅದ್ದವಮಾತ್ರದಿಂದ ಫಲವೇನು? ಆದ್ದರಿಂದ ಕ್ರಿಯಾ ಸಹಿತವಾದ ತಿಳಿವಳಿಕೆಯೇ ಫಲಪ್ರದವು

೨೭ ಕಿವಿಯು ಕೇಳುವ ಕೇಳಿರುವ, ಕಣ್ಣು ನೋಡುವ ನೋಡಿರುವ ವಿಷಯಗಳು ಎದುರಿಗೆ ಬಂದಾಗ ಅವುಗಳನ್ನು ಅನುಭವಿಸಬೇಕೆಂಬ ಆಸೆಯು ಇಲ್ಲದಿರುವಿಕೆಯೇ ವೈರಾಗ್ಯವು

೨೮ ಎದುರಿಗೆ ಬರುವ ವಿಷಯಗಳನ್ನು ತಡೆಯುವ ಅಭ್ಯಾಸವೂ ಅದರೊಡನೆ ಬೇಕಾದುದನ್ನು ಬೇಕಿಲ್ಲದಂತೆ ಮನಸ್ಸನ್ನು ತಡೆಯುವ ಸ್ವಭಾವವೂ ಮನೋನಿಗ್ರಹವೆನಿಸುವದು

೨೯ ಮನುಷ್ಯನು ಸಾವಿರಾರು ಹಸುಗಳನ್ನು ಕಟ್ಟಲಿ, ಸಾವಿರಾರು ಚೀಲ ಧಾನ್ಯ ಬೆಳೆಯಲಿ, ಎಂತಹ ಅರಮನೆಯನ್ನು ಕಟ್ಟಿಸಿರಲಿ, ಎಷ್ಟೋ ವಸ್ತ್ರಗಳನ್ನು ಸಂಪಾದಿಸಿರಲಿ, ತನಗೆ ಮಾತ್ರ "ದೇಹಕ್ಕೆ ಬೇಕಾಗುವಷ್ಟೇ ಹಾಲು, ಹೊಟ್ಟೆ ತುಂಬುವಷ್ಟೇ ಧಾನ್ಯವು, ಮಲಗಿಕೊಳ್ಳುವಷ್ಟೇ ಸ್ಥಳವು, ಶರೀರ ಮುಚ್ಚುವಷ್ಟು ಮಾತ್ರ ವಸ್ತ್ರವು ಹೆಚ್ಚಿಗೆ ಅಧಿಕಾರವಿಲ್ಲ ಬೇಕಾಗಿಯೂ ಇಲ್ಲ ಇಷ್ಟನ್ನು ಅರಿತುಕೊಂಡರೆ ಲೋಕದಲ್ಲಿ ಸವಿಮಾತುಗಳಿಂದ ಸ್ನೇಹವನ್ನು ಬೆಳೆಯಿಸಿ ಬೂಟಾಟಿಕೆಯ ವಂಚನೆಗಳಿಂದಲೂ, ಮೃದುವಾದ ಮಾತುಗಳಿಂದಲೂ ಪರಿಚಯಮಾಡಿ ಜನರನ್ನು ವಶಪಡಿಸಿಕೊಂಡು, ಆಸೆಯನ್ನು ತೋರಿಸಿ, ನಂಬಿಸಿ, ಅವರ ಜೀವಿತವನ್ನೇ ಸೂರೆಗೊಳ್ಳುವ ದುರುಳತನವು ಹೇಳಹೆಸರಿಲ್ಲದಂತಾಗುವುದು

೩೦ ಪ್ರಸನ್ನೋದರ್ಥವಿದ್ದಲ್ಲಿ ಸರ್ವವ್ಯಾಪಿಯಾದ ಪರಮಾತ್ಮನ ಪ್ರತಿಬಿಂಬವನ್ನು ನಿನ್ನೆದುರಿಗೆ ಬರುವ ಮೂರ್ತಿಗಳಲ್ಲಿ ನೋಡು ಅದಾಗದಿದ್ದರೆ ನಿನ್ನ ಅಭಿಪ್ರಾಯವು ಸರಿಯಾಗದಿರುವ ಸ್ಥಳವನ್ನಾಗಲೀ, ಪದಾರ್ಥವನ್ನಾಗಲೀ, ಜನರನ್ನಾಗಲೀ ನೋಡಿದಾಗ ಕಣ್ಣು ಮುಚ್ಚಿಕೊಳ್ಳುವ ಅಭ್ಯಾಸ ಮಾಡು ಇತರರನ್ನು ಆಕ್ಷೇಪಿಸಬೇಡ

೩೧ ಆತ್ಮಭಿನ್ನವಾದ ದೇಹವು ನಾನಲ್ಲವೆಂಬರ್ಥವುಳ್ಳುದು ನಾಹಂಭಾವವು, ನಾನು ಯಾರೆಂಬರ್ಥವುಳ್ಳುದು ಕೋಹಂಭಾವವು, ಸರ್ವಸಾಕ್ಷಿಯಾದ ಆತ್ಮನೇ ನಾನೆಂಬರ್ಥವುಳ್ಳುದು ಸೋಹಂಭಾವವು, ಆತ್ಮರೂಪಿಯಾದ ಶಿವನಿಗೆ ನಾನು ಭೃತ್ಯನೆಂಬರ್ಥವುಳ್ಳುದೆ ನಿರಹಂಕೃತಿಯುಳ್ಳ ದಾಸೋಹಂಭಾವವು

೩೨ 'ನೀನು, ನಿನ್ನದು' ಎಂದು ಹೇಳುವುದು ಜ್ಞಾನ, 'ನಾನು, ನನ್ನದು' ಎಂದು ಹೇಳುವುದು ಅಜ್ಞಾನ ಹೇ ಪರಮಾತ್ಮಾ, ನೀನು ಕರ್ತ, ನಾನು ಅಕರ್ತ, ದೇಹ, ಮನಸ್ಸು, ಗೃಹ, ಕ್ಷೇತ್ರ, ಧನಕನಕ, ಪತಿ ಸುತ, ವಸ್ತು ವಾಹನ, ಜೀವ ಜಗತ್ತು ಎಂಬಿವೆಲ್ಲವೂ ನಿನ್ನದು "ನನ್ನದು" ಎಂಬುದು ಯಾವುದೂ ಇಲ್ಲವೆಂದು ಹೇಳುವುದೇ ಜ್ಞಾನವು ಕನಕದಾಸರೂ ಸಹ 'ನಾ ಸತ್ತರೆ ಸ್ವರ್ಗ' ಎಂದು ಹೇಳಿರುವರು ಇಲ್ಲಿ ನಾ ಸತ್ತರೆ ಎಂದರೆ ನಾನು ಎಂಬ ಅಹಂಕಾರವಳಿದರೆ ಎಂಬರ್ಥವು ಆದಕಾರಣವೇ 'ನಾನು ನಾನೆಂದು ಗರ್ವದಲಿ ಮೆರೆಯದೆ ನೀನು ನೀನೆಂದು ಶಿರಬಾಗಿ ನಡೆಯೋ ಗುರುವರಗೆ' ಎಂದು ಜ್ಞಾನಿಗಳು ಹೇಳಿರುವರು

೩೩ ನಮ್ಮ ಅದೃಷ್ಟದಿಂದ ಒದಗಿದ ಸ್ಥಿತಿಯು ಸುಧಾರಿಸಲಿಕ್ಕೆ ಬರದೆ ಇದ್ದರೂ ಅದರಲ್ಲಿಯೇ ಸಮಾಧಾನದಿಂದಲೂ ಸುಖದಿಂದಲೂ ಇರುವುದಕ್ಕೆ ಆನಂದ ವೃತ್ತಿಯೆಂದೆನ್ನುವರು ಯಾವಾಗಲೂ ಚಿಂತಾಗ್ರಸ್ತನಾದ ಕೋಟ್ಯಧೀಶನ ಸುಖಗಳು ತಿಂದುಂಡು ನಿಶ್ಚಿಂತನಾಗಿ ಕಾಲವನ್ನು ಕಳೆಯುವ ಬಡ ಭಿಕ್ಷುಕನ ಸುಖಗಳನ್ನು ಸರಿಗಟ್ಟಲಾರವು ಅಲ್ಲದೆ ಆನಂದವಿಲ್ಲದೆ ಆಯುಷ್ಯವು ಇದ್ದರೇನೂ ಫಲವಿಲ್ಲ ಆನಂದ ವೃತ್ತಿಗೂ ಆರೋಗ್ಯಕ್ಕೂ ಅತಿ ನಿಕಟವಾದ ಸಂಬಂಧವಿರುವುದು ವ್ಯರ್ಥವಾಗಿ ಚಿಂತೆಮಾಡುವುದರಿಂದ ಶರೀರದ ಅತಿ ಸೂಕ್ಷ್ಮವಾಗಿರುವ ಮುಖ್ಯವಾದ ಪ್ರಾಣ ಸ್ಥಾನಗಳು ಕೆಟ್ಟು ಹೋಗಿ, ಶರೀರ ಸ್ವಾಸ್ಥ್ಯವು ಇಲ್ಲದಂತಾಗಿ, ಅನೇಕ ರೋಗಗಳುತ್ಪನ್ನವಾಗುವುವು ಆದರೆ ಆನಂದ ವೃತ್ತಿಯಿಂದ ಶರೀರವು ನಿರೋಗಿಯಾಗಿ ಆಯುಷ್ಯದ ಮರ್ಯಾದೆಯು ಹೆಚ್ಚಾಗುವುದು ಇದಕ್ಕಾಗಿಯೇ "ಚಿಂತೆಯೇ ಮುಪ್ಪು, ಸಂತೋಷವೇ ಯೌವನ" ಎಂಬ ಗಾದೆಯು ರೂಢಿಯಲ್ಲಿರುವುದು ವಾಚಕರೇ! ಆನಂದ ವೃತ್ತಿಗೂ ದೇವರಿಗೂ ಇರುವ ಸಂಬಂಧವನ್ನು ನೋಡಿದರೆ, ದೇವರು ಈ ಸೃಷ್ಟಿಯನ್ನು ಕೇವಲ ನಮ್ಮ ಉಪಯೋಗಕ್ಕಾಗಿಯೇ ನಿರ್ಮಿಸಿರುವುದರಿಂದ ನಾವು ಆತನ ಉಪಕಾರವನ್ನು ಸ್ಮರಿಸಿ ಕೃತಜ್ಞರಾಗಿರಬೇಕು ಇಂಥ ಕೃತಜ್ಞತೆಗೆ ಆನಂದ ವೃತ್ತಿಯೆಂಬ ಹೆಸರು ಕೊಟ್ಟರೂ ಸಲ್ಲುವುದು ಅಂದರೆ, ಪರಮಾತ್ಮನು ನಮ್ಮ ಮೇಲೆ ಮಾಡಿದ ಉಪಕಾರದ ಬಗ್ಗೆ ನಾವು ಯಾವಾಗಲೂ ಆನಂದದಿಂದ ಇರತಕ್ಕದ್ದು ಇದರಿಂದ ದೈವಕೃಪೆಯೂ ಉಂಟಾಗುವುದು

೩೪ ಪುಷ್ಪದಲ್ಲಿರುವ ಮಕರಂದವನ್ನು ಪಾನಮಾಡುವ ಧರ್ಮವು ತುಂಬಿಗೂ ಮಧುಮಕ್ಷಿಕೆಗೂ ಒಂದೇ ತೆರನಾಗಿರುವುದು ಆದರೆ, ಆ ಮಕರಂದವನ್ನು ಕೂಡಿಡಬೇಕೆಂಬ ಲೋಭಕ್ಕೊಳಗಾಗಿ ಮಧುಮಕ್ಷಿಕವು ಬಂಧನಕ್ಕೊಳಗಾಗುವುದು ಅಂತಹ ಲೋಭಕ್ಕೊಳಗಾಗದ ತುಂಬಿಯು ಆ ಬಂಧನವಿಲ್ಲದೆ ಸ್ವಚ್ಛಂದವಾಗಿರುವುದು ಇದರಂತೆಯೇ ಜೀವಾತ್ಮನು ಆಶೆಗೊಳಗಾದರೆ ಬಂಧನಕ್ಕೊಳಗಾಗುವನು ನಿರಾಶಾಪರನಾದರೆ 'ಸ್ಥಲವಿಲ್ಲದವಗೆ ಸಂಕಟವಿಲ್ಲ'ವೆಂಬಂತೆ ಬಂಧನರಹಿತನಾಗುವನು ಅಂತೂ ತನ್ನ ಪುರೋಭಿವೃದ್ಧಿಯನ್ನು ಬಯಸತಕ್ಕವನು ಕೂಡಿಡುವ ಹವ್ಯಾಸಕ್ಕೆ ಬೀಳಬಾರದು

೩೫ ಒಂದು ವಸ್ತುವನ್ನು ಬೇಕೆಂದು ಅಪೇಕ್ಷಿಸುವುದೇ ಕಾಮ, ಆ ವಸ್ತುವು ದೊರೆಯದಿದ್ದರೆ ಆಗಲೇ ಕೋಪದ ಆವಿರ್ಭಾವವಾಗುವುದು, ಇಚ್ಛಿತ ವಸ್ತುವು ಪ್ರಾಪ್ತವಾದರೆ ಅದನ್ನು ಕಳೆಯದಂತೆ ರಕ್ಷಿಸಿಕೊಂಡಿರುವುದೇ ಲೋಭ, ಆ ಇಷ್ಟವಸ್ತುವಿನ ಪ್ರಾಪ್ತಿಯ ದೆಸೆಯಿಂದ ವಿವೇಕಹೀನನಾಗುವುದೇ ಮೋಹ, ಆ ವಸ್ತು ಪ್ರಾಪ್ತಿಯ ಆನಂದ ಸಾಗರದಲ್ಲಿ ಓಲಾಡುತ್ತ ಸೊಕ್ಕಿರುವುದೇ ಮದ, ಪ್ರಾಪ್ತವಾದದನ್ನು ಭದ್ರಪಡಿಸಿಕೊಂಡು ಬೀಗುತ್ತಿರುವುದೇ ಮತ್ಸರ ಆದಕಾರಣ, ವಿಚಾರಮಾಡಿ ನೋಡಿದರೆ ಕಾಮಾದ್ಯರಿಷಡ್ವರ್ಗಗಳೆಲ್ಲವೂ ದೇಹಿ (ಕೊಡು) ಎಂಬ ಪಾಪ ಕಾರ್ಯ ಹೊಂದಿದರೆಂದಲೇ ಹುಟ್ಟುವವೆಂಬುದು ವ್ಯಕ್ತವಾಗುವುದು ಯಾಚಕನಲ್ಲಿರುವ ಬಡತನವು ಎಷ್ಟು ಹಣಬಂದರೂ ತೃಪ್ತಿಯಾಗುವುದಿಲ್ಲ ಹಣವು ದೊರೆತಷ್ಟು ಮತ್ತೆ ಮತ್ತೆ ದ್ರವ್ಯಾಕಾಂಕ್ಷೆಯು ಹೆಚ್ಚಿ ಮರಳಿ ಬೇಡುವಂತೆ ಮಾಡುವುದು ಇದಕಾರಣ, ಯಾಚನೆಯೊಂದೇ ಅಪ್ರತಿಷ್ಠೆಗೆ ಸಾಧಕವಾಗುವುದರಿಂದ ಮರಣವಾದರೂ ಆ ಯಾಚನೆಯನ್ನು ಮಾಡದೆ ನಿಸ್ಪೃಹನಾಗಿರುವುದು ಶ್ರೇಯಸ್ಕರವು ಧರೆಗೆ ಯಾಚನೆಗಿಂತ ಲಘುತರವುಂಟೆ? ಯಾಚನೆ ಅಂದರೆ ಬರೀ ಹಣಕ್ಕೇ ಅಲ್ಲ ವಿಷಯಗಳಿಗೂ ಅನ್ವಯಿಸುವುದು ಬೇಕು ಬೇಕೆನ್ನುವವನು ಧನಿಕನಾಗಿದ್ದರೂ ಬಡವನೇ ಸರಿ

೩೬ ಸಂಸಾರಿಯು ಕೋಪವುಳ್ಳವನಂತೆ ಕಾಣಿಸಿಕೊಳ್ಳಬೇಕು ಆದರೆ ಯಾರಿಗೂ ಅಹಿತವನ್ನು ಮಾಡಬಾರದು ದುರುಳರು ತನಗೆ ಅಹಿತವನ್ನು ಮಾಡದಂತೆ ನೋಡಿಕೊಳ್ಳುವುದಕ್ಕೋಸುಗ, ಸಂಸಾರಿಯು ಕೋಪವುಳ್ಳವನಂತೆ ತೋರಿಸಿಕೊಳ್ಳಬೇಕು ಸಾಧುವಾಗಿದ್ದರೆ ದುರುಳರು ಸರ್ವಾನರ್ಥವನ್ನುಂಟುಮಾಡುವರು ತ್ಯಾಗಿಗಳಿಗೆ ಕೋಪಮಾಡುವ ಆವಶ್ಯಕತೆಯೇ ಇರುವುದಿಲ್ಲ

೩೭ ಜಗತ್ತಿನಲ್ಲಿ ಬುಡವಿಲ್ಲದ ಮರಕ್ಕೆ ಕೊಂಬೆಯೊಡೆಯುವುದೂ, ಬಂಜೆಗೆ ಮಕ್ಕಳಾಗುವುದೂ, ಸತ್ತವನಿಗೆ ಜೀವಬರುವುದೂ, ಮೊಲಕ್ಕೆ ಕೋಂಬುಗಳಿರುವುದೂ, ಮೃಗಜಲದಲ್ಲಿ ನೀರಿರುವುದೂ, ಸಾಧ್ಯವಾದಲ್ಲಿ, ಗುರುವಿಲ್ಲದೆ ಮುಕ್ತಿಯನ್ನು ಪಡೆಯುತ್ತೇನೆಂಬ ಮಾತೂ ಕಾರ್ಯವೂ ನಿಜವಾಗಬಹುದು ಎಲ್ಲವೂ ಅಸಂಭವವೇ!

೩೮ ಸಿದ್ಧರಸವು ಲೋಹವನ್ನು ಸುವರ್ಣವನ್ನಾಗಿ ಮಾಡಬಲ್ಲುದಲ್ಲದೆ ತನ್ನಂತಹ ಸಿದ್ಧರಸವನ್ನಾಗಿ ಮತ್ತೊಂದನ್ನು ಮಾಡಲಾರದು ಜ್ಞಾನಿಯಾದವನೋ ತನ್ನನುಗ್ರಹ (ಸಹವಾಸ) ಕ್ಕೆ ಒಳಗಾದ ಇತರರನ್ನೂ ತನ್ನಂತೆಯೇ ಮಾಡಿಕೊಳ್ಳುವನು ಆದ್ದರಿಂದ ಸತ್ಪುರುಷರು ಸಿದ್ಧರಸಕ್ಕಿಂತಲೂ ಮಿಗಿಲಾದವರು ಇಂತವರ ಸಂಸರ್ಗವು ಸುಖದಲ್ಲಿಯೂ ದುಃಖದಲ್ಲಿಯೂ ತ್ಯಜಿಸತಕ್ಕುದಾಗಿಲ್ಲವು

೩೯ ಈ ಜಗತ್ತಿನಲ್ಲಿ ಧನಿಕರಾಗಲಿ, ದರಿದ್ರನಾಗಲಿ, ಆಳಾಗಲಿ, ಅರಸನಾಗಲಿ, ಯೋಗಿಯಾಗಲಿ, ಪಂಡಿತನಾಗಲಿ, ಯಾವ ಉನ್ನತ್ಯವನತಸ್ಥಿತಿಗಳಲ್ಲಿದ್ದರೂ ಆ ಸ್ಥಿತಿಗಳಿಗನುಸಾರವಾಗಿ ಅವನು ಮಾಡತಕ್ಕ ಕ್ರಿಯೆಗಳು ಇದ್ದೇ ಇರುತ್ತವೆ ಅವನ್ನು ಅವನು ಮಾಡಲೇಬೇಕು, ಮಾಡದಿದ್ದರೆ ಅವನಿಗೆ ಹೀನತ್ವ ಬರುತ್ತದೆ. ಅವೇ ಅವನ ಕರ್ತವ್ಯಗಳೆನಿಸುವುವು ಪ್ರಾಣಹೋಗುವಂತಹ ಪ್ರಸಂಗ ಬಂದರೂ ಸಲ್ಲದ ಕಾರ್ಯವನ್ನು ಸರ್ವಥಾ ಮಾಡಬಾರದು, ಮಾಡತಕ್ಕದ್ದನ್ನು ಎಂದೂ ಬಿಡಬಾರದು ಇದೇ ಶಾಸ್ತ್ರದ ಧರ್ಮವು "ಕ್ರಮತಪ್ಪಿ ನಡೆಯುವುದರಿಂ ಕಷ್ಟಮಿನ್ನುಂಟೆ?" ಎಂಬ ವಾಕ್ಯವಾದರೂ ಇದೇ ಅಭಿಪ್ರಾಯವನ್ನು ಸೂಚಿಸುವುದು

(ಸಶೇಷ)

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗೋದ್ಭವ ಮೂರ್ತಿಸ್ಥಾಪನೆ

ಮದ್ರಾಸ್ ಇಲಾಖಾ ಸೇಲಂ ಟವನ್ನಿಗೆ ೨|| ಮೈಲಿ ದೂರದಲ್ಲಿ ಸೇಲಂ ತಿರುಚನಾಪಳ್ಳಿ ರಸ್ತೆಯ ಸಮೀಪದಲ್ಲಿ ಸ್ಥಲವಲೆಯೆಂಬ ಚಿಕ್ಕ ಬೆಟ್ಟದ ಮೇಲೆ ಯಾವಾಗಲೂ ನೀರು ಹರಿಯುತ್ತಿರುವುದು ಈ ಜಲದ್ವಾರಕ್ಕೆ ಸಮೀಪದಲ್ಲಿ ಶ್ರೀರೇಣುಕಾಚಾರ್ಯರು ಅಗಸ್ತ್ಯಮಹರ್ಷಿಗಳಿಗೆ ಉಪದೇಶಮಾಡಿದ ವಿಗ್ರಹವು ದೊಡ್ಡ ಕಲ್ಲಿನಲ್ಲಿ ಕೆತ್ತಲ್ಪಟ್ಟಿರುವುದು ಅಲ್ಲಿ ಲೋಪಾಮುದ್ರೆ, ಶಿವಲಿಂಗ, ನಂದಿ ವಿಗ್ರಹಗಳು ಸಹ ಕೆತ್ತಲ್ಪಟ್ಟಿರುವವು ಇವುಗಳ ಮೇಲೆ ಕಟ್ಟಡವನ್ನು ಕಟ್ಟಿಸಿರುವರು ಈ ಸ್ಥಳದಲ್ಲಿ ಅನೇಕಜನರು ಯಾವಾಗಲೂ ವಿವಾಹಕಾರ್ಯಗಳನ್ನು ಜರಗಿಸುವರು ಇವುಗಳನ್ನು ಈಗ್ಗೆ ೧೫ ವರ್ಷಗಳ ಪೂರ್ವದಲ್ಲಿ ಸೇಲಂ ರೂಕಾ ವೈದ್ಯ ವೀರಶೈವ ಶ್ರೀ ಗುರುಸ್ವಾಮಿ ಅಯ್ಯನವರು ಕಟ್ಟಿಸಿರುವರು ನಿತ್ಯಪೂಜೆಯನ್ನೂ, ಪ್ರತಿವರುಷ ಶ್ರೀರೇಣುಕಜಯಂತಿ ಪೂಜಾಉತ್ಸವ[illegible]ನ್ನೂ ಸದರಿಯವರು ತಮ್ಮ ಸ್ವಂತಖರ್ಚಿನಿಂದ ನಡೆಸುತ್ತಿರುವರು

ಸೇಲಂ ಡಿ| ರಾಶಿಪುರಂ ತಾಲೂಕು ನಾಮಗಿರಿಪೇಟೆಯ ವೀರಶೈವರ ಮಠದಲ್ಲಿ ಮೇಲ್ಕಂಡ ವೈದ್ಯರು ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗೋದ್ಭವ ವಿಗ್ರಹವನ್ನು ಸ್ಥಾಪಿಸಿರುವರು ತ್ರಿಕಾಲ ಪೂಜಾದಿಗಳು ವೈಭವದಿಂದ ನಡೆಯುತ್ತಿರುವವು ಇದರಂತೆಯೇ ಗುರುಭಕ್ತರು ಆಚಾರ್ಯರ ವಿಗ್ರಹಗಳನ್ನು ಸರ್ವತ್ರ ಸ್ಥಾಪಿಸಿ ಧನ್ಯರಾಗಬೇಕೆಂದು ಪ್ರಾರ್ಥನೆ

ಓರ್ವ ಗುರುಭಕ್ತ, ಸೇಲಂ

ಈಜುಬಂದವರಿಗೆ ಕೆಲವು ಎಚ್ಚರಿಕೆಗಳು.

(1) ನಿಮಗೆ ಹೃದಯರೋಗವಿದ್ದರೆ ಈಜುವುದಕ್ಕೆ ಹೋಗಬೇಡಿರಿ

(2) ಒಬ್ಬಂಟಿಗರಾಗಿ ಎಂದಿಗೂ ಈಜುವುದಕ್ಕೆ ಹೋಗಬೇಡಿರಿ

(3) ದೇಹದಲ್ಲಿ ಉಷ್ಣವು ಹೆಚ್ಚಿದಾಗಲೂ, ಬಹಳ ಆಯಾಸವಿದ್ದಾಗಲೂ ಈಜಬೇಡಿರಿ

(4) ಹೊಟ್ಟೆತುಂಬಿದಾಗ ಎಂದಿಗೂ ಈಜಬಾರದು. ಕೊನೇಪಕ್ಷ ಊಟವಾದಮೇಲೆ ಎರಡು ಗಂಟೆಗಳ ಕಾಲ ಬಿಡಬೇಕು

(5) ನೀರಿನ ಆಳವನ್ನು ತಿಳಿದಿದ್ದರೆ ಮಾತ್ರವೇ ಅಂತಹ ಜಲಾಶಯಗಳಲ್ಲಿ ಈಜುವ ಪ್ರಯತ್ನವನ್ನು ಮಾಡಿರಿ

(6) ಬಹಳ ದಣಿವಾಗುವವರೆಗೆ ಈಜುತ್ತಿರಬೇಡಿರಿ ಒಂದುವೇಳೆ ಈಜುತ್ತಿರುವಾಗ ನಿಮಗೆ ಆಯಾಸವು ತೋರಿದರೆ ಒಡನೆಯೇ ಅಂಗತ್ತನಾಗಿ ಸ್ವಲ್ಪಹೊತ್ತು ವಿಶ್ರಾಂತಿಯಲ್ಲಿದ್ದು ಆ ಮೇಲೆ ದಡಕ್ಕೆ ಬಂದು ಸೇರಿರಿ

( ) ಪ್ರವಾಹವೇಗದಲ್ಲಿಯಾಗಲೀ, ಸುಳಿಯಲ್ಲಿಯಾಗಲೀ ಸಿಕ್ಕದಂತೆ ಎಚ್ಚರ ತೆಗೆದುಕೊಳ್ಳಿರಿ ಒಂದು ವೇಳೆ ಪ್ರವಾಹದ ವೇಗದಲ್ಲಿ ಸಿಕ್ಕಿಬಿದ್ದರೆ ಅದು ತಾನಾಗಿ ನಿಮ್ಮನ್ನು ಜಲದ ಮಧ್ಯಕ್ಕೆ ತರುವದು; ಆಗ ನೀವು ತಕ್ಷಣ ದಡದ ಕಡೆಗೆ ತಿರುಗುವ ಪ್ರಯತ್ನವನ್ನು ಮಾಡಿರಿ

(8) ಇಂತಹ ಜಲಗಂಡಗಳಲ್ಲಿ ಜನಗಳ ಪ್ರಾಣರಕ್ಷಣೋಪಾಯಗಳನ್ನೂ, ಶ್ವಾಸಕಲ್ಪನೆಯ ಮಾರ್ಗಗಳನ್ನೂ ಪ್ರತಿಯೊಬ್ಬರೂ "ರೆಡ್‌ಕ್ರಾಸ್" ಪದ್ಧತಿಯ ಮೂಲಕ ಕಲಿತಿದ್ದು, ಅಪಾಯ ಸಂಭವಗಳಲ್ಲಿ ನಿಮ್ಮನ್ನೂ ಇತರರನ್ನೂ ಕಾಪಾಡುವ ಪ್ರಯತ್ನಮಾಡಿರಿ

" "ಕ್ಷೇಮ"

ಪಂಚಾಚಾರ್ಯಪ್ರಭಾ.

೧೯೪೧ನೆಯ ಡಿಸೆಂಬರ್ ತಾ॥ ೨೨ನೇ ಸೋಮವಾರ

ಮಾಹೇಶ್ವರರು ವಿದ್ವಾಂಸರಾಗಬೇಕು.

ವೀರಶೈವಮತೀಯರಲ್ಲಿ ಗುರುತ್ವಾಧಿಕಾರವನ್ನು ವಂಶ ಪರಂಪರೆಯಿಂದ ವಹಿಸಿರುವ ಮಾಹೇಶ್ವರರು ಗುರುಗಳೆನಿಸಿರುತ್ತಾರೆ. ಮಾಹೇಶ್ವರರ ಪುತ್ರರನ್ನೇ ಪಟ್ಟಾಧಿಕಾರ ಮೊದಲಾದ ಗುರುತ್ವಾಧಿಕಾರಕ್ಕೆ ವಿನಿಯೋಗಿಸುವುದು ರೂಢವಾಗಿದೆ ಮಾಹೇಶ್ವರರಲ್ಲಿ ಕೆಲವರು ಮಠಾಪತ್ಯವನ್ನು ಹೊಂದುತ್ತ ಶಿಷ್ಯಸಂಪತ್ತನ್ನು ಪಡೆದವರಾಗಿರುವರು ಭಕ್ತರ ಗೃಹಗಳಲ್ಲಿ ಸಕಲ ವೈದಿಕ ಕರ್ಮಗಳನ್ನು ಮಾಡಿಸುವುದು ಮಾಹೇಶ್ವರರನ್ನು ಹೊಂದಿರುವುದಾಗಿದೆ ಯಾವ ಮಾಹೇಶ್ವರರು ವೇದವೇದಾಂಗಾದಿ ವಿದ್ಯೆಗಳಲ್ಲೂ ಧಾರ್ಮಿಕ ಗ್ರಂಥಗಳಲ್ಲೂ ವಿಶೇಷವಾದ ಪಾಂಡಿತ್ಯವನ್ನರ್ಜಿಸಿ, ಧರ್ಮರಹಸ್ಯವನ್ನರಿತು, ಧರ್ಮಾನುಷ್ಠಾನತತ್ಪರರಾಗಿ, ಭಕ್ತವರ್ಗಕ್ಕೆ ಧರ್ಮಸ್ವರೂಪವನ್ನೂ ಜ್ಞಾನಸ್ವರೂಪವನ್ನೂ ಬೋಧಿಸುವರೋ ಅವರೇ ಶಿಷ್ಯೋದ್ಧಾರಕರೆನಿಸಿ ತಮ್ಮ ಗುರುತ್ವವನ್ನು ಸಾರ್ಥಕವನ್ನಾಗಿ ಮಾಡಿಕೊಳ್ಳುವರು ಅವರಿಂದ ಶಿಕ್ಷಿತರಾಗುವ ಶಿಷ್ಯರು ಧರ್ಮಸ್ವರೂಪವೇತ್ತರಾಗಿ ಶಿವಭಕ್ತಿತತ್ಪರರೂ ಗುರುಭಕ್ತಿತತ್ಪರರೂ ಆಗುವರು ಇಂತಹ ಶಿಷ್ಯರನ್ನು ಕಪಟಸನ್ಯಾಸಿಗಳು ತಮ್ಮ ದುರುಪದೇಶಪಾಶದಿಂದ ಬಂಧಿಸಲಾರರು ಪೂರ್ವಕಾಲದ ಮಾಹೇಶ್ವರರು ವೇದವೇದಾಂಗಾದಿವಿದ್ಯೆಗಳಲ್ಲಿ ವಿಶೇಷವಾದ ಪ್ರಾವೀಣ್ಯವನ್ನು ಪಡೆದು ಧರ್ಮವನ್ನೂ ಜ್ಞಾನವನ್ನೂ ಶಿಷ್ಯರಿಗೆ ಉಪದೇಶಿಸುತ್ತಿದ್ದರು, ಅವರಲ್ಲಿ ಹಲವರು ಗ್ರಂಥಕರ್ತರಾಗಿದ್ದರು ಹಲವರು ಮಹಿಮರೂ ಆಗಿದ್ದರು ಈಗಿರುವ ಮಾಹೇಶ್ವರರು ಅವರ ಪವಿತ್ರವಂಶದಲ್ಲಿ ಜನಿಸಿದವರಾದರೂ ತಮ್ಮ ಗುರುತ್ವಕ್ಕೆ ಉಚಿತವಾದ ವಿದ್ಯೆಯನ್ನಭ್ಯಾಸಮಾಡದೆ ಅನಾಘ್ರಾತಧರ್ಮಗ್ರಂಥಗಂಧವುಳ್ಳವರಾಗಿರುತ್ತಾರೆ ಕೆಲವರು ಕೃಷಿವಾಣಿಜ್ಯಗಳಲ್ಲಿ ಅಥವಾ ಯಾಚನೆಯಲ್ಲಿ ತೊಡಗಿ ಧರ್ಮಸ್ವರೂಪವನ್ನರಿಯದವರಾಗಿರುತ್ತಾರೆ ಒಟ್ಟಿಗೆ ಸ್ವಕರ್ತವ್ಯವಿಮುಖರಾದ ಮಾಹೇಶ್ವರರೇ ಹೆಚ್ಚಾಗಿರುವರು ಕೆಲವರುಮಾತ್ರ ವೇದಾದಿವಿದ್ಯೆಗಳಲ್ಲಿ ಪಾಂಡಿತ್ಯವನ್ನರ್ಜಿಸಿ ಸ್ವಕರ್ತವ್ಯವನ್ನರಿತು ತಮ್ಮ ಗುರುತ್ವವನ್ನು ಸಾರ್ಥಕಪಡಿಸಿಕೊಳ್ಳುತ್ತಿರುವರು ಅವರ ಸಂಖ್ಯೆಯು ಬಹಳ ಕನಿಷ್ಠವಾಗಿರುವುದರಿಂದ ಕಪಟಸನ್ಯಾಸಿಗಳು ಶಿಷ್ಯರಲ್ಲಿ ಕೆಲವರನ್ನು ತಮ್ಮ ಸ್ವಾಧೀನ ಮಾಡಿಕೊಳ್ಳುತ್ತಲೇ ಇರುವರು ಆದ್ದರಿಂದ ಶಿಷ್ಯರಲ್ಲಿ ಕೆಲವರು ವೀರಶೈವಧರ್ಮಗಳ ಸ್ವರೂಪವನ್ನೂ, ಗೋತ್ರಸೂತ್ರಗಳನ್ನೂ, ತಮ್ಮ ಕುಲಗುರುಗಳಾರೆಂಬುದನ್ನೂ ಅರಿಯದೆ ಮತಸ್ಥಾಪನಾಚಾರ್ಯರಲ್ಲಿ ಭಕ್ತಿಯಿಲ್ಲದವರಾಗಿರುವರು ಇಂಥವರನ್ನು ಕಪಟಸನ್ಯಾಸಿಗಳು ಸುಲಭವಾಗಿ ಸ್ವಾಧೀನಮಾಡಿಕೊಳ್ಳುವುದರಲ್ಲಿ ಆಶ್ಚರ್ಯವೇನಿದೆ? ಮಾಹೇಶ್ವರರು ತಮ್ಮ ಪುತ್ರಾದಿಗಳನ್ನು ವೇದಾದಿವಿದ್ಯೆಗಳಲ್ಲಿ ಪಂಡಿತರನ್ನು ಮಾಡುವುದಕ್ಕೆ ವಿಶೇಷಪ್ರಯತ್ನ ಮಾಡಿದರೆ ಕೆಲವು ವರ್ಷಗಳೊಳಗಾಗಿ ಅವರು ಧರ್ಮಬಲಯುಕ್ತರೂ ಜ್ಞಾನಬಲಯುಕ್ತರೂ ಆಗುವರು ಆಗ ಶಿಷ್ಯರು ಧರ್ಮಸ್ವರೂಪವೇತ್ತರಾಗಿ ಕಪಟಸನ್ಯಾಸಿಗಳ ದುರುಪದೇಶಕ್ಕೆ ಕಿವಿಗೊಡದೆ, ಆಚಾರ್ಯಭಕ್ತಿತತ್ಪರರಾಗುವರು ಇದರಿಂದ ಮಾಹೇಶ್ವರರ ಗೌರವವು ಹೆಚ್ಚುವುದು ಮುಖ್ಯವಾಗಿ ಮಾಹೇಶ್ವರರು ಲೌಕಿಕವೃತ್ತಿಯನ್ನು ಪ್ರಧಾನವನ್ನಾಗಿ ಭಾವಿಸದೆ, ಸ್ವಕರ್ತವ್ಯವನ್ನು ನೆರವೇರಿಸುವುದರಲ್ಲಿ ಧಾರ್ಮಿಕವೃತ್ತಿಯನ್ನವಲಂಬಿಸಿ ನಿರತರಾಗಬೇಕು ಈ ವಿಷಯದಲ್ಲಿ ಉಪೇಕ್ಷೆಯನ್ನು ಮಾಡಬಾರದು ಉಪೇಕ್ಷೆಯನ್ನು ಮಾಡಿದರೆ ತಮಗೂ ಶಿಷ್ಯರಿಗೂ ಇರುವ ಧಾರ್ಮಿಕ ಸಂಬಂಧವೂ ಪೂಜ್ಯಪೂಜಕಭಾವವೂ ದೂರವಾಗಿ ಕಪಟಸನ್ಯಾಸಿಗಳ ಕಪಟನಾಟಕವು ಪ್ರಾಬಲ್ಯವನ್ನು ಹೊಂದಲು ಅವಕಾಶವಾಗುವದು.

ಆದುದರಿಂದ ಮಾಹೇಶ್ವರರೇ! ನೀವಾದರೂ ಪೂರ್ವಕಾಲದಲ್ಲಿದ್ದ ಮಾಹೇಶ್ವರರಂತೆ ಧಾರ್ಮಿಕ ಗ್ರಂಥಗಳನ್ನು ಓದುವುದರಲ್ಲಾಸಕ್ತರಾಗಬೇಕಲ್ಲದೆ ನಿಮ್ಮ ಮಕ್ಕಳಿಗೂ ಅಭ್ಯಾಸಮಾಡಿಸಿ ಶಿಷ್ಯವರ್ಗವನ್ನು ಉದ್ಧರಿಸಿ, ನಿಮ್ಮ ಗೌರವವನ್ನು ಕಾಪಾಡಿಕೊಳ್ಳುತ್ತ, ಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾದಿಪಂಚಾಚಾರ್ಯರ ಸಿದ್ಧಾಂತವನ್ನು ಪ್ರಚಾರಮಾಡಬೇಕು ಹೀಗೆ ಮಾಡುತ್ತಬಂದರೆ ಸನ್ಯಾಸಿಗಳ ಕಪಟನಾಟಕವು ನಿಂತು ಅವರ ದುರಹಂಕಾರವು ನಾಶವಾಗುವದು ಇಲ್ಲದಿದ್ದರೆ ಎಂದೂ ನಾಶವಾಗಲರಿಯದು. ಆದಕಾರಣ ಮಾಹೇಶ್ವರರು ವಿದ್ವಾಂಸರಾಗಿ ಸಮಾಜದಲ್ಲಿ ನಿಜವಾದ ಶಾಸ್ತ್ರೀಯ ತತ್ತ್ವವನ್ನು ಪ್ರಚಾರಮಾಡಿ ಪರಮೇಶ್ವರನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ

ಯುದ್ಧವಾರ್ತೆ.

ಸಿಂಗಪುರದಲ್ಲಿ ವಿಶೇಷ ಕಾನೂನು

ಸಿಂಗಪುರದಲ್ಲಿ ರಕ್ಷಣೆಗಾಗಿ ಅಲ್ಲಿರುವ ಸ್ತ್ರೀಪುರುಷರೆಲ್ಲರೂ ಯಾವ ಕಾರ್ಯವನ್ನಾದರೂ ಮಾಡಬೇಕೆಂದು ಒತ್ತಾಯಪಡಿಸುವ ಮಸೂದೆಯನ್ನು ಶಾಸನಸಭೆಯ ಮುಂದಿಡಲಾಗುವುದೆಂದು ತಿಳಿದುಬರುತ್ತದೆ

ಜಪಾನಿನ ಸುತ್ತ ಅಮೆರಿಕದ ಸಬ್‌ಮೆರೀನ್‌ಗಳು

ಬಹುಶಃ 20 ಅಮೆರಿಕದ ಸಬ್‌ಮೆರೀನ್‌ಗಳು ಜಪಾನ್ ಸಮುದ್ರಕ್ಷೇತ್ರದಲ್ಲಿ ಕೆಲಸಮಾಡುತ್ತಿವೆಯೆಂದು ಜಪಾನ್ ನೌಕಬಲದ ಅಧಿಕಾರಿಗಳು ಸೂಚನೆಕೊಟ್ಟಿದ್ದಾರೆ.

ಬ್ರಿಟಿಷರು ಹಿಂದಕ್ಕೆ ಸರಿದರು

ಬ್ರಿಟಿಷ್ ಸೈನಿಕರು ವಾಯುವ್ಯ ಮಲಯಾದಿಂದ ಹಿಂದಕ್ಕೆ ಸರಿದು ಸಂಗೀನದಿಯ ದಕ್ಷಿಣದಲ್ಲಿ ರಕ್ಷಣೆಯ ವ್ಯೂಹವನ್ನು ರಚಿಸಿದ್ದಾರೆ ಸದ್ಯಃ ವೆಲ್ಲೆಸ್ಲಿ ಪ್ರಾಂತವನ್ನು ಜಪಾನರಿಗೆ ಬಿಟ್ಟುಕೊಡಬೇಕಾಯಿತು ಮುಂದೆ ಜಪಾನರು ಪೆನಾಂಗಿಗೆ ಮುತ್ತಿಗೆಯನ್ನು ಹಾಕುವರೋ ಅಥವಾ ಹಾಗೆಯೇ ಮುಂದೆ ನುಗ್ಗುವರೋ ತಿಳಿಯದಾಗಿದೆ

ಅಂಡಮಾನ್ ದ್ವೀಪವನ್ನು ಹಿಡಿದಿಲ್ಲ

ಹಿಂದೂಸಾಗರದಲ್ಲಿರುವ ಅಂಡಮಾನ್ ದ್ವೀಪವನ್ನು ಜಪಾನ್ ಯೋಧರು ಹಿಡಿದರೆಂದು ಟೋಕಿಯೋದಿಂದ ಪ್ರಕಟವಾದ ರೇಡಿಯೋ ಸುದ್ದಿಯು ನಿರಾಧಾರವಾದುದೆಂದೂ, ಆ ದ್ವೀಪದ ಸಂಗಡ ಇನ್ನೂ ರೇಡಿಯೋ ಸಂಬಂಧವಿಟ್ಟುಕೊಂಡಿರಲಾಗಿದೆಯೆಂದೂ ಅಧಿಕಾರಯುತವಾದ ಪ್ರಕಟನೆಯು ಹೊರಟಿದೆ

ಗ್ವಾಂ ದ್ವೀಪದ ಆಕ್ರಮಣ

ಅಮೆರಿಕದ ರಕ್ಷಣೆಗೊಳಪಟ್ಟಿದ್ದ ಗ್ವಾಂ ದ್ವೀಪವನ್ನು ಜಪಾನ್ ಸೇನೆಗಳು ಕಳೆದ 12ನೆಯ ತಾರೀಖಿನ ದಿವಸ ಹಿಡಿದವೆಂದು ಪ್ರಕಟವಾಗಿದೆ ಜಪಾನರು ಆ ದ್ವೀಪದ ಮೇಲೆ ಮುತ್ತಿಗೆಯನ್ನಾರಂಭಮಾಡಿದಾಗ ಇನ್ನೂ ರಕ್ಷಣೆ ಏರ್ಪಾಡುಗಳು ನಡೆಯುತ್ತಿದ್ದವೆಂದೂ, ಅದು ಮುಗಿದಿದ್ದರೆ ಆ ದ್ವೀಪದ ಆಕ್ರಮಣವು ಕಷ್ಟವಾಗುತ್ತಿದ್ದಿತೆಂದೂ ಹೇಳಲಾಗಿದೆ.

ಬರ್ಮಾದಲ್ಲಿ ತೊಂದರೆ

ಬರ್ಮಾದಲ್ಲಿರುವ ವಿಕ್ಟೋರಿಯಾ ಪಾಯಿಂಟ್‌ನಲ್ಲಿದ್ದ ಸೇನೆಯನ್ನೂ ಪ್ರಜೆಗಳನ್ನೂ ಬೇರೆ ಕಡೆಗೆ ಸಾಗಿಸಿರುವ ಸುದ್ದಿ ನಿಜವೆಂದು ಲಂಡನ್ನಿನ ಮಿಲಿಟರಿ ಕ್ಷೇತ್ರಗಳಲ್ಲಿ ಒಪ್ಪಿಕೊಳ್ಳಲಾಗಿದೆ. ಬರ್ಮಾದ ರಾಜಧಾನಿಯಾದ ರಂಗೂನಿನ ಮೇಲೆ ಬಾಂಬುಗಳನ್ನು ಹಾಕಿರುವದಾಗಿ ಜಪಾನ್ ಸುದ್ದಿ ತಿಳಿಸುತ್ತದೆ. ಬಾಂಬಿನೇಟಿಗೆ 2-೩ ಬುದ್ಧದೇವಾಲಯಗಳು ನಷ್ಟಪಟ್ಟಿರುವದಾಗಿಯೂ ಹೇಳಲಾಗಿದೆ ಮಲಯದ ಯುದ್ಧರಂಗದ ಪ್ರದೇಶವು ಕೇವ ಬೆಟ್ಟ ಗುಡ್ಡಗಳಿಂದ ಕೂಡಿರುವದರಿಂದ ಒಂದೆಡೆಯಿಂ ಇನ್ನೊಂದೆಡೆಗೆ ವರ್ತಮಾನ ಕಳುಹಿಸಲು ಕೂ ಬಲು ತೊಂದರೆಯಾಗಿದೆಯೆಂದೂ ಇದರಿಂದ ಅಲ್ಲಿ ಸರಿಯಾದ ಸುದ್ದಿ ತಿಳಿಯಲು ಅನನುಕೂಲವಾಗಿ ಯೆಂದೂ ಹೇಳಲಾಗಿದೆ

ಬೋರ್ನಿಯೋ ದ್ವೀಪದಲ್ಲಿ ಜಪಾನರು

ಬ್ರಿಟಿಷರಿಗೆ ಸೇರಿದ ಬೋರ್ನಿಯೋ ದ್ವೀಪದ ಸ ವಕ್ ಕ್ಷೇತ್ರದಲ್ಲಿರುವ ಎಣ್ಣೆ ಶೋಧಿಸುವ ಪ್ರದೇಶವ ಜಪಾನರು ಬಂದಿಳಿದರೆಂದೂ, ಶತ್ರುಗಳು ಬರುವದರೊ ಅಲ್ಲಿದ್ದ ಎಣ್ಣೆ ಶೋಧಿಸುವ ಯಂತ್ರಗಳನ್ನೆಲ್ಲಾ ಬ್ರಿಟಿ ರು ನಾಶಪಡಿಸಿ ಹಿಂದ ಸರಿದಿದ್ದರೆಂದೂ ಪ್ರಕಟವಾಗಿ

ಹವಾಯ್ ಮುತ್ತಿಗೆಯಲ್ಲಿ ನಷ್ಟ

ಯುದ್ಧಾರಂಭದಲ್ಲಿ ಜಪಾನ್ ವಿಮಾನಗಳು , ವಾಯ್ ದ್ವೀಪದ ಮೇಲೆ ನಡೆಸಿದ ಮುತ್ತಿಗೆಯಲ್ಲಿ ಜಪಾನರ 41 ವಿಮಾನಗಳೂ ಕೆಲವು ಸಬ್‌ಮೆರೀನುಗಳ ನಾಶವಾದವೆಂದೂ, ಅಮೆರಿಕದ ಕಡೆ ೫ ಸಂಗ್ರಾಮ ನೌ ಗಳು ಮುಳುಗಿದವೆಂದೂ, 2729 ಅಧಿಕಾರಿಗಳೂ ಯೋ ರೂ ಸತ್ತರೆಂದೂ, 656 ಜನರು ಗಾಯಗೊಂಡರೆಂದೂ ಈ ದುರ್ಘಟನೆಗೆ ಪಿತೂರಿಯೇ ಕಾರಣವೆಂದೂ, ಶತ್ರು ಗಳ ಕಡೆ ಪಿತೂರಿಗಾರರನ್ನೆಲ್ಲ ಮಟ್ಟಹಾಕಲಾಗುತ್ತಿ ಯೆಂದೂ ಅಮೆರಿಕದ ನೌಕಾಖಾತೆಯ ಕಾರ್ಯದರ್ಶಿ ಳಾದ ಕ॥ ನಾಕ್ಸ್‌ರವರು ತಿಳಿಸಿದರು.

ಜಪಾನರ ತೀವ್ರಕಾರ್ಯಕ್ರಮದ ಫ

ಜಪಾನರು ಪ್ರಾರಂಭದಲ್ಲೇ ಉಗ್ರರಾಗಿ ಯುದ್ಧ ನ್ನಾರಂಭಿಸಿದ ಕಾರಣ ಬ್ರಿಟಿಷ್ ಮತ್ತು ಅಮೆರಿ ನೌಕಾಬಲಗಳಿಗೆ ವಿಶೇಷ ನಷ್ಟವಾಯಿತು. ಇದರಿಂ ಜಪಾನರು ಉಗ್ರ ಹೊಡೆದಾಟ ನಡೆಸಲು ಅ ಕಾಶವಾಯಿತು ಕೋಟಬಾರು ಮತ್ತು ವಿಕ್ಟೋರಿಯ ಪಾಯಿಂಟ್‌ಗಳಂತಹ ಮುಖ್ಯ ನೌಕಾಮೂಲಗ ಅವರ ಕೈಸೇರಿ ಅವರ ಬಲವು ಅಭಿವೃದ್ಧಿ ಹೊಂದ ಅವಕಾಶವಾಯಿತು ಈಗ ಮಲಯದಲ್ಲಿ ನಡೆಯು ರುವ ಯುದ್ಧದಲ್ಲಿ ಬ್ರಿಟಿಷರಿಗಿಂತ ಜಪಾನ್ ಯೋಧ ಸಂಖ್ಯೆಯು ಹೆಚ್ಚಾಗಿದೆ ಆದರೂ ಬ್ರಿಟಿಷರು ಉಗ್ರವಾ ಪ್ರತಿಭಟಿಸುತ್ತಿರುವರು ಜಪಾನರು ದಕ್ಷಿಣದ ಕ ಬಹಳ ಮುಂದುವರಿಯಲು ಸಾಧ್ಯವಾದರೆ ಸಿಂಗಪುರ ವಿಪತ್ತುಂಟಾಗುವದೆಂದು ಹೇಳಲಾಗಿದೆ

ಜಪಾನ್ ನೋಟುಗಳನ್ನು ತೆಗೆದುಕೊಳ್ಳಲಾಗುವುದಿಲ್ಲ

ಮಲಯದಲ್ಲಿ ಯುದ್ಧಮಾಡುತ್ತಿರುವ ಜಪಾನ್ ಸೈ ಕರ ಉಪಯೋಗಕ್ಕಾಗಿ ಜಪಾನ್ ಸರ್ಕಾರವು ೫೦ ಸೆಂ ಗಳ ೧ ಡಾಲರಿನ ಮತ್ತು ೧೦ ಡಾಲರಿನ ಕರೆ ನೋಟುಗಳನ್ನು ಅಚ್ಚುಮಾಡಿಸಿ ಅವರುಗಳಿಗೆ ಕೊ ರುವದೆಂದೂ ಅದರಮೇಲೆ ನೋಟಿನಲ್ಲಿ ತಿಳಿಸಿರುವ ಬೆ ಯನ್ನು ಜಪಾನ್ ಸರ್ಕಾರವು ಕೊಡುವುದಾಗಿ ಭರವ ಕೊಡುತ್ತದೆ ಎಂದು ಮುದ್ರಿಸಿರುವುದೆಂದೂ ತಿಳಿದುಬ ತ್ತದೆ ಈ ನೋಟುಗಳಲ್ಲಿ ಕೆಲವು ಪೋಲೀಸರ ಹಸ್ತ ವಾಗಿರುವುದರಿಂದ ಆ ನೋಟುಗಳನ್ನು ಯಾರೂ ಅಂಗೀ ರಿಸಲಾಗದೆಂದೂ, ಅವುಗಳನ್ನಿಟ್ಟುಕೊಂಡಿರುವವರು ಶ ಗಳ ಗೂಢಚಾರರೆಂದು ಪರಿಗಣಿಸಲಾಗುವದೆಂ ಪೋಲೀಸರು ಎಚ್ಚರಿಕೆ ಕೊಟ್ಟಿದ್ದಾರೆ

ಮಲಯದಲ್ಲಿ ಜಪಾನರು

ಮಲಯದ ಉತ್ತರದಲ್ಲಿ ಕದನವು ಉಗ್ರರೀತಿಯ ನಡೆಯುತ್ತಿದೆ ಕೇಢಾಕ್ಷೇತ್ರದಲ್ಲಿ ಬ್ರಿಟಿಷ್ ಸೇನೆಗ ಹಿಂದೆ ಸರಿದಿವೆ. ವಿಶೇಷ ನಷ್ಟವಾಗುತ್ತಿದ್ದರೂ ಜ ನ್ ಸೇನೆಗಳು ಮುಂದೆ ನುಗ್ಗುತ್ತಿವೆ ಮಲಯ ವಾಯುವ್ಯದಕಡೆ ನುಗ್ಗುತ್ತಿರುವ ಜಪಾನ್ ಸೇನೆ ಬ್ರಿಟಿಷರ ಪ್ರಥಮ ವ್ಯೂಹವನ್ನು ಭೇದಿಸಿವೆ. ಜಪಾ

ಂಖ್ಯೆ ಅಪಾರವಾಗಿರುವದರಿಂದ ಅವರ ಕೈ ಮೇಲಾ ವೆ ಜಪಾನರು ಅಸಂಖ್ಯ ವಿಮಾನಗಳನ್ನೂ ಟ್ಯಾಂಕು ನ್ನೂ ಉಪಯೋಗಿಸುತ್ತಿದ್ದಾರೆ ಜಪಾನರ ಒತ್ತಾಯ ಪ್ಪಾದುದರಿಂದ ವಿಕ್ಟೋರಿಯಾ ಪಾಯಿಂಟ್‌ನಲ್ಲಿದ್ದ ಟಿಷರ ಸಣ್ಣಸೇನೆಯು ಸುವ್ಯವಸ್ಥಿತ ರೀತಿಯಲ್ಲಿ ಪೆ ಸರಿಯಿತು. ಅಲ್ಲಿದ್ದ ಮಿಲಿಟರಿ ಸಾಧನಗಳೆಲ್ಲ ಶಮಾಡಲ್ಪಟ್ಟವೆ. ಬರ್ಮದ ದಕ್ಷಿಣಗಡಿಯಲ್ಲಿರುವ ಪ್ರದೇಶವನ್ನು ಜಪಾನರು ಆಕ್ರಮಿಸಿದರು. ಮಲ ನವನ್ನು ಜಪಾನರು ಪ್ರತ್ಯೇಕಿಸಲು ಶಕ್ತರಾದರೆ ರ್ಮಾ ಸಿಂಗಪುರ ವಿಮಾನ ಮಾರ್ಗವನ್ನು ಕತ್ತರಿಸಿ ಕಿನಂತಾಗುತ್ತದೆ.

ಲಿಬ್ಯಾದಲ್ಲಿ ಶತ್ರು ವ್ಯೂಹವು ಭೇದಿಸಲ್ಪಟ್ಟಿದೆ

ಉತ್ತರ ಆಫ್ರಿಕದ ಪೂರ್ವ ಸಿರನಿಕಾ ಪ್ರದೇಶದಲ್ಲಿ ಟ್ರಿಷ್ ಸೇನೆಗಳು ವೇಗದಿಂದ ಹಿಮ್ಮೆಟ್ಟುತ್ತಿವೆ ಕ ನರ್ಗ ಕಾಲ ಉಗ್ರ ಕದನವಾದನಂತರ ಶತ್ರುವ್ಯೂಹವು ದಿಸಲ್ಪಟ್ಟಿತೆಂದು ಪ್ರಕಟವಾಗಿದೆ.

ಇಟಲಿ ಹಡಗಿನ ನಾಶ

ಲಿಬ್ಯಾದಿಂದ ಅಧಿಕಾರಿಗಳನ್ನು ಇಟಲಿಗೆ ಕರೆ ಯ್ಯುತ್ತಿದ್ದ ಇಟಲಿಯ 'ಯು' ಬೋಟನ್ನು ಟರೇನಿಯನ್ಸಿನಲ್ಲಿ ಮುಳುಗಿಸಲಾಯಿತೆಂದೂ ಅದ ಲ್ಲಿ ೨೦ಜನ ಮಿಲಿಟರಿ ಅಧಿಕಾರಿಗಳಿದ್ದರೆಂದೂ, ಆ ನೌಕೆ ಲ್ಲಿದ್ದ ೨೮ ಜನರನ್ನು ಸೆರೆಹಿಡಿಯಲಾಯಿತೆಂದೂ, ಅಧಿಕಾರಿಯು ಮಾತ್ರ ಪತ್ತೆಯಿಲ್ಲವೆಂದೂ ಲಾಗಿದೆ.

ಕ್ರೆಮ್ಲಿನ್ನಿಗೆ ನಷ್ಟವಿಲ್ಲ

ಜರ್ಮನ್‌ರು ಇಷ್ಟು ದೀರ್ಘಕಾಲ ಮಾಸ್ಕೋಮೇಲೆ ತ್ರ ಮುತ್ತಿಗೆ ನಡೆಸಿದಾಗ್ಯೂ ಇತಿಹಾಸ ಪ್ರಸಿದ್ಧವಾದ ಸ್ಕೋವಿನ ಅಂತರ್ಗತರವಾದ ಕ್ರೆಮ್ಲಿನ್ನಿಗೆ ಯಾವ ಷ ನಷ್ಟವೂ ಸಂಭವಿಸಿಲ್ಲವೆಂದು ರಷ್ಯದ ಪ್ರವಾದ ತ್ರಿಕೆಯು ಪ್ರಕಟಿಸಿದೆ.

ರಷ್ಯದ ಚಳಿಗೆ ಸಿಕ್ಕಿರುವ ಜರ್ಮನ್ ಯೋಧರು

ರಷ್ಯದ ವಿಪರೀತ ಚಳಿಯ ಏಟಿಗೆ ಸಿಕ್ಕಿ ಸುಮಾರು 80 ೦೦ ಜರ್ಮನ್ ಯೋಧರು ನೊಂದಿರುವರೆಂದೂ ಅವ ರನ್ನು ಗ್ರೀಸಿನಲ್ಲೂ-ಬಲ್ಗೇರಿಯಾದಲ್ಲೂ ಇಟ್ಟು ಉಪ ಚರಿಸಲಾಗುತ್ತದೆಯೆಂದೂ, ಅವರುಗಳನ್ನು ಜರ್ಮನಿಗೆ ಹಿಸಿದರೆ ಅಲ್ಲಿಯ ಪ್ರಜೆಗಳ ಮನಸ್ಸಿನ ಮೇಲೆ ದುಷ್ಪ ಣಾಮವಾದೀತೆಂಬ ಭಯದಿಂದ ಈರೀತಿ ಮಾಡಲಾಗಿ ರುವುದೂ ತಿಳಿದು ಬರುತ್ತದೆ.

ಮಾಸ್ಕೋ ಮುತ್ತಿಗೆ ಮುಗಿಯಿತು

ಮಾಸ್ಕೋ ಆಕ್ರಮಣ ಪ್ರಯತ್ನದಲ್ಲಿ ಸಿರಾಶೆಗೊಂಡ ರ್ಮನ್ ಸೇನೆಗಳು ಎಲ್ಲ ಕಡೆಯಿಂದಲೂ ಹಿಂದೆ ಸರಿ ಯುತ್ತಿವೆ ಮಾಸ್ಕೋವಿಗೆ ಪಶ್ಚಿಮದಲ್ಲಿ ೬೮ ಮೈಲು ರದಲ್ಲಿರುವ ಜರ್ಮನ್‌ಸೇನೆಗಳು ನೆಪೋಲಿಯನ್ನಿನ ಸೇನೆ ಹಿಂದಕ್ಕೆ ತೆರಳಿದ ಮಾರ್ಗವನ್ನೇ ಅನು ಸುತ್ತಿವೆ ಹಿಂದಕ್ಕೆ ಸರಿಯುತ್ತಿರುವ ಸೇನೆಗಳಿಗೆ ರ್ಮನ್ ವಿಮಾನಗಳು ರಕ್ಷಣೆ ಕೊಡುತ್ತಿವೆಯಾದರೂ ಷ್ಯನ್ ಪಡೆಗಳು ಮುಂದೆ ನುಗ್ಗಿ ಜರ್ಮನರಿಗೆ ವಿಶೇಷ ಯನ್ನುಂಟುಮಾಡುತ್ತಿವೆ.

ರೂಜ್‌ವೆಲ್ಟರ ಹೇಳಿಕೆ.

ಅಮೆರಿಕೆಯ ಪ್ರೆಸಿಡೆಂಟರಾದ ರೂಜ್‌ವೆಲ್ಟರವರು ಗ್ರೆಸ್ಸಿಗೆ ದೀರ್ಘವಾದ ಸಂದೇಶವೊಂದನ್ನು ಕಳಿಸುತ್ತ ವರ್ಷ ಅಮೆರಿಕಕ್ಕೂ ಮತ್ತು ಜಪಾನಿಗೂ ನಡೆದ ಪಾನವನ್ನು ಕುರಿತು ವಿಮರ್ಶೆಮಾಡಿದ್ದಾರೆ ಪೆಸಿಫಿಕ್ ಗರದಲ್ಲಿ ಎಲ್ಲ ಜನಾಂಗಗಳಿಗೂ ಸಮಾನವಾದ ಅವಕಾಶಗಳಿರಬೇಕೆಂದೂ, ಜಗಳಗಳನ್ನೆಲ್ಲ ಶಾಂತರೀತಿ ಯಲ್ಲಿ ಬಗೆಹರಿಸಿಕೊಳ್ಳಬೇಕೆಂದು ಅಮೆರಿಕವು ಮೊದ ಲಿನಿಂದಲೂ ಕೇಳುತ್ತ ಬಂದಿದೆಯೆಂದೂ, ಪೆಸಿಫಿಕ್ ವಿಚಾರದಲ್ಲಿಯೂ ಮತ್ತು ವಿಶ್ವದ ಇತರ ಭಾಗಗಳ ವಿಚಾರದಲ್ಲಿಯೂ ಜಪಾನರು ಇಟ್ಟುಕೊಂಡಿದ್ದ ದುರಾಶೆಯನ್ನು ಬದಲಾಯಿಸಲು ಅವರು ಸಿದ್ಧರಾಗಿಲ್ಲವೆಂಬುದು ವ್ಯಕ್ತಪಟ್ಟಿತೆಂದೂ, ಜಪಾನು ಏಕಪ್ರಕಾರವಾಗಿ ಸ್ಪರ್ಧಿಸಿದುದರಿಂದಲೇ ಇತ್ತೀಚೆಗೆ ಅಮೆರಿಕವು ಅದರೊಂದಿಗೆ ಮಾತುಕತೆಗಳನ್ನು ಆರಂಭಿಸಿತೆಂದೂ ತಿಳಿಸಿದ್ದಾರೆ

" ತತ್ವಗಳ ಆಧಾರದ ಮೇಲೆ ಒಂದು ಒಪ್ಪಂದವು ಸಾಧ್ಯವೆಂಬ ಭರವಸೆಯನ್ನು ಜಪಾನಿನ ಮಹಾಪ್ರಧಾನರು ಕೊಟ್ಟಿದ್ದರೆ ನಾನು ಸಾವಿರಾರು ಮೈಲಿ ದೂರ ಪ್ರಯಾಣಮಾಡಿ, ಅವರನ್ನು ಭೇಟಿಮಾಡಲು ಸಿದ್ಧನಿದ್ದೆನು. ಆದರೆ, ಅಂತಹ ಭರವಸೆ ದೊರೆಯಲಿಲ್ಲ ಜಪಾನಿಗೆ ಬೇಕಾದ ಎಣ್ಣೆಯನ್ನೆಲ್ಲ ಅಮೆರಿಕವು ಒದಗಿಸಬೇಕೆಂದೂ, ಜಪಾನಿನ ಆಸ್ತಿಪಾಸ್ತಿಗಳ ಮೇಲೆ ಹಾಕಿರುವ ನಿರ್ಬಂಧವನ್ನು ತೆಗೆಯಬೇಕೆಂದೂ, ಚೀಣಾಕ್ಕೆ ನೀಡುತ್ತಿರುವ ಸಹಾಯವನ್ನು ನಿಲ್ಲಿಸಬೇಕೆಂದೂ ಜಪಾನು ಅಕ್ಟೋಬರ್ ೨೦ನೇ ತಾ|| ದಿನ ಕೇಳಿತು ಇದಕ್ಕುತ್ತರವಾಗಿ ಅಮೆರಿಕವು ಕೆಲವು ಸಲಹೆಗಳನ್ನು ಮುಂದಿಟ್ಟಿತು ಎರಡು ದೇಶಗಳೂ ಶಾಂತಿಯನ್ನು ಬಯಸುವವೆಂದು ಘೋಷಿಸಬೇಕು, ಯಾರಿಗೂ ಭೂದಾಹವಿಲ್ಲವೆಂಬುದನ್ನೂ ಇತರರ ಮೇಲೆ ಬೀಳುವ ಇಷ್ಟವಿಲ್ಲವೆಂಬುದನ್ನೂ ಸ್ಪಷ್ಟಪಡಿಸಬೇಕು ಎಲ್ಲರಿಗೂ ಸಮಾನ ಅವಕಾಶಗಳಿವೆಯೆಂದು ಸಾರಬೇಕು, ಇಂಡೋಚೀಣಾ ಮತ್ತು ಚೀಣಾಗಳಿಂದ ಜಪಾನು ತನ್ನ ಸೈನಿಕರನ್ನು ಹಿಂದಕ್ಕೆ ಕರೆಸಬೇಕು ಮತ್ತು ಚೀಣಾದಲ್ಲಿ ರಾಷ್ಟ್ರೀಯ ಸರಕಾರಕ್ಕೆ ಮಾತ್ರ ಬೆಂಬಲಕೊಡುವುದಾಗಿ ತಿಳಿಸಬೇಕು, ಚೀಣಾದಲ್ಲಿ ಜಪಾನು ತನಗೆ ಹೆಚ್ಚಿನ ಅವಕಾಶವಿರಬೇಕೆಂದು ಕೇಳುತ್ತಿರುವುದನ್ನು ತ್ಯಜಿಸಬೇಕು ಮತ್ತು ವಾಣಿಜ್ಯ ಒಪ್ಪಂದಕ್ಕಾಗಿ ಸಂಧಾನವನ್ನಾರಂಭಿಸಬೇಕು—ಇವೇ ಅಮೆರಿಕದ ಸಲಹೆಗಳು

ಜಪಾನರು ಕೆಲವು ಸ್ಥಳಗಳನ್ನು ಮುತ್ತಲು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆಂಬುದು ಸಂಧಾನದ ಮಧ್ಯದಲ್ಲಿ ಗೊತ್ತಾಯಿತು ನಾವು ಜಪಾನಿನ ಸಮಾಧಾನವನ್ನು ಕೇಳಿದೆವು ಅವರು ಸರಿಯಾದ ಉತ್ತರವನ್ನು ಕೊಡಲಿಲ್ಲ ಅಷ್ಟರ ವೇಳೆಗಾಗಲೆ ಜಪಾನು ಒಳಗೊಳಗೇ ಅಮೆರಿಕದ ಮೇಲೆ ಬೀಳಲು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿತ್ತು ಜಪಾನು ಏಟುಹಾಕಿದಕೂಡಲೇ ಅಮೆರಿಕಾ ಸರಕಾರಕ್ಕೆ ಅದು ಕೊಟ್ಟ ಪತ್ರವು ಸುಳ್ಳಿನಿಂದ ತುಂಬಿತ್ತು

" ಪರ್ಲ್ ಬಂದರಿನಮೇಲೆ ಜಪಾನ್ ವಿಮಾನಗಳು ಮುತ್ತಿಗೆ ನಡೆಸಿದ ೩ ಘಂಟೆ೪೦ ನಿಮಿಷಗಳ ಮೇಲೆಯೂ ಸಹ ಜಪಾನಿನಪ್ರತಿನಿಧಿಗಳು ತಮ್ಮ ದೇಶವು ಶಾಂತಿಯನ್ನು ಬಯಸುವುದೆಂದು ಹೇಳುತ್ತ ಕುಳಿತಿದ್ದರು ಹವಾಯ್ ದ್ವೀಪಗಳಮೇಲೆ ಮಧ್ಯಾಹ್ನ ೧ ೨೦ಗಂಟೆಗೆ ಮುತ್ತಿಗೆ ಪ್ರಾರಂಭವಾಯಿತು ಸಂಜೆ ೫ಗಂಟೆಗೆ ಜಪಾನಿನ ವಿದೇಶಾಂಗ ಸಚಿವರು ಅಮೆರಿಕದ ರಾಯಭಾರಿಗಳನ್ನು ಕರೆಸಿ, ಪೆಸಿಫಿಕ್‌ನಲ್ಲೂ ಇಡೀ ಜಗತ್ತಿನಲ್ಲೂ ಶಾಂತಿಸ್ಥಾಪನೆಯಾಗಬೇಕೆಂದು ಜಪಾನ್ ಚಕ್ರವರ್ತಿಗಳು ಬಯಸುವರೆಂದೂ, ಅದಕ್ಕಾಗಿ ಸಂಧಾನವನ್ನು ಮುಂದುವರಿಸುವಂತೆ ಜಪಾನ್ ಸರಕಾರಕ್ಕೆ ಅವರು ಸೂಚನೆ ಕೊಟ್ಟಿದ್ದಾರೆಂದೂ ಅವರು ತಿಳಿಸಿದರು ನಿಜವಾದ ಉತ್ತರ ಕೊಟ್ಟವರೆಂದರ ಸಂಗ್ರಾಮನಾಶದಿಂದ ಕೂಡಿದ ಜಪಾನ್ ಅಧಿಕಾರಿಗಳು ಬಹಳ ದಿನಗಳಿಗೆ ಮೊದಲೇ ಅವರು ಮುತ್ತಿಗೆಯ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದರು ' ಎಂಬುದಾಗಿ ತಿಳಿಸಿದರು

ಬ್ರಿಟಿಷ್ ರೆಸಿಡೆಂಟರ ಆಗಮನ

ಮೈಸೂರು ಸಂಸ್ಥಾನದ ನೂತನ ಬ್ರಿಟಿಷ್ ರೆಸಿಡೆಂಟರಾದ ಲೆಫ್ಟಿನೆಂಟ್ ಕರ್ನಲ್ ಫ್ರೇಜರ್‌ರವರು ತಮ್ಮ ಕಾರ್ಯದರ್ಶಿಗಳೊಂದಿಗೆ 16ನೆಯ ತಾರೀಖಿನ ದಿವಸ ರಾಜಧಾನಿಗೆ ಆಗಮಿಸಿದರು ಅವರು ತಮ್ಮ ಅಧಿಕಾರ ವಹಿಸಿಕೊಂಡಮೇಲೆ ಮೈಸೂರಿಗೆ ಆಗಮಿಸಿರುವುದು ಇದೇ ಮೊದಲು.

ತಿರುವಾಂಕೂರಿಗೆ ಮೈಸೂರಿನ ಮಹಾ ಪ್ರಭುಗಳವರ ಪ್ರಯಾಣ!

ಆಳುವ ಮಹಾಪ್ರಭುಗಳಾದ ಶ್ರೀಮಜ್ಜಯಚಾಮರಾಜಒಡೆಯರ್ ಬಹದ್ದೂರ್‌ರವರು ಜನವರಿ ಎರಡನೇ ವಾರದಲ್ಲಿ ತಿರುವಾಂಕೂರು ಸಂಸ್ಥಾನದ ರಾಜಧಾನಿಯಾದ ತ್ರಿವೇಂದ್ರಮ್ಮಿಗೆ ಪ್ರಯಾಣಮಾಡಿ ಅಲ್ಲಿ ನಡೆಯಲಿರುವ ಲಕ್ಷದೀಪೋತ್ಸವ ಸಮಾರಂಭವನ್ನು ಪರಾಮರ್ಶಿಸುವರೆಂದು ವ್ಯಕ್ತಪಟ್ಟಿದೆ. ಮಹಾ ಪ್ರಭುಗಳು ತಿರುವಾಂಕೂರು ಮಹಾರಾಜರ ಆಹ್ವಾನದ ಮೇಲೆ ಅಲ್ಲಿಗೆ ತೆರಳಲಿರುವರು.

ಮೈಸೂರು ಡಿ|| ಡೆಪ್ಯುಟಿಕಮಿಷನರ್ ಸಾಹೇಬರವರ ಸ್ತುತ್ಯಕಾರ್ಯ.

ಜರ್ಮನ್ ಯುದ್ಧವು ಪ್ರಾರಂಭವಾದ ಕೂಡಲೆ ವ್ಯಾಪಾರಿಗಳು ಎಲ್ಲ ಸಾಮಾನುಗಳನ್ನೂ ವಿಪರೀತವಾಗಿ ಹೆಚ್ಚು ಬೆಲೆಯಿಂದ ಮಾರಲಿಕ್ಕೆ ಪ್ರಾರಂಭಮಾಡಿದರು. ಇದರಿಂದ ಪ್ರಜೆಗಳಿಗೆಲ್ಲಾ ಬಹಳ ತೊಂದರೆಯಾಗುವದೆಂದು ಭಾವಿಸಿ ಮೈಸೂರು ಡಿಸ್ಟ್ರಿಕ್ಟ್ ಡೆಪುಟಿಕಮಿಷನರ್ ಸಾಹೇಬರವರು ತಮಗಿರುವ ವಿಶೇಷಾಧಿಕಾರವನ್ನು ವಿನಿಯೋಗಿಸಿ, ಇಂತಹ ಪದಾರ್ಥಗಳನ್ನು ಇಂತಿಷ್ಟು ಬೆಲೆಗೇ ಮಾರಬೇಕೆಂದು ನಿಯಮಮಾಡಿದರು. ಇದರಿಂದ ಬಹು ಜನರಿಗೆ ಸಹಾಯವಾಯಿತು. ಡೆಪ್ಯುಟಿಕಮಿಷನರ್ ಸಾಹೇಬರವರ ಈ ಕಾರ್ಯವು ಅತ್ಯಂತ ಸ್ತುತ್ಯವಾಗಿರುವದು ಅವರು ಹೊರಡಿಸಿರುವ ಇಸ್ತಿಹಾರ್‌ನಾಮೆಯನ್ನು ಸದ್ಯಾ ವಾರದ ಪತ್ರಿಕೆಯಲ್ಲಿ ಪ್ರಕಟಿಸಿದ್ದೇವೆ ಮಹಾಜನರು ಪರಾಮರ್ಶಿಸಬೇಕಾಗಿ ಕೋರಿಕೆ. ಇದರಂತೆಯೇ ಎಲ್ಲಾ ಜಿಲ್ಲಾಧಿಕಾರಿಗಳು ಆರ್ಡರ್ ಹೊರಡಿಸಿದಲ್ಲಿ ಪ್ರಜೆಗಳಿಗೆ ಬಹಳ ಕ್ಷೇಮವಾಗುವದರಲ್ಲಿ ಸಂದೇಹವಿಲ್ಲ

ಸ್ವೀಕಾರ.

ಬಳ್ಳಾರಿ ಡಿ|| ಹುವ್ವಿನಹಡಗಲಿ ಗ್ರಾಮದಲ್ಲಿರುವ ಮ|| ರಾ|| ಹೊಗೆತೊಪ್ಪಲದ ಸಣ್ಣಸಿದ್ಧಪ್ಪನವರ ಪುತ್ರಿ ಚಿ|| ಸೌ|| ಗುದ್ದದೀರವ್ವನನ್ನು ಮ|| ರಾ|| ಕೊಪ್ಪಳದ ಲಿಂಗನಬಂಡಿ ಸಿದ್ಧರಾಮಪ್ಪನವರ ಪುತ್ರ ಚಿ|| ಸ|| ಬಸಪ್ಪನಿಗೆ ಕೊಟ್ಟು ಇದೇ ತಿಂಗಳು ೧೭ ನೆಯ ತಾರೀಖಿನ ದಿವಸ ನಿಶ್ಚಯಿಸಿದ ಸಮಯದಲ್ಲಿ ಮ|| ರಾ|| ಗುಗ್ರಿ ಹುಚ್ಚಪ್ಪನವರ ಸೂಚನೆಯ ಮೇರೆಗೆ ಪ್ರಭಾಪೋಷಣಕ್ಕಾಗಿ ವಧೂವರರ ಕಡೆಯವರಿಂದ ತೆಗೆಯಿಸಿದ **1-8-0** ಮತ್ತು ಹುವ್ವಿನಹಡಗಲಿಯಲ್ಲಿರುವ ಮ|| ರಾ|| ಶೆಟ್ರ (ಮುದ್ದಿ) ವೀರಣ್ಣನವರು ತಮ್ಮ ಪುತ್ರನಿಗೆ ಕೊಟ್ಟೂರಪ್ಪನೆಂದು ತಾ|| ೨೮-೧೦-೪೧ರಲ್ಲಿ ನಾಮಕರಣ ಮಾಡಿದ ಸಮಯದಲ್ಲಿ ಮ|| ರಾ|| ಹುಚ್ಚಪ್ಪನವರ ಸೂಚನೆಯ ಮೇರೆಗೆ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ **1** ರೂ ಒಟ್ಟು **2 8 0** ರೂ ಗಳು ಮ|| ರಾ|| ಗುರುಕಿಂಕರ ಸೊಪ್ಪಿನ ಗುರುಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ

ಮೈಸೂರು ಡಿ|| ನಂಜನಗೂಡು ಗ್ರಾಮದಲ್ಲಿದ್ದ ಲೇಟ್ ಸಾಹುಕಾರ್ ವಿ ಬಂಡೆಯ್ಯನವರ ಧರ್ಮಪತ್ನಿಯವರಾದ ಸಾಧ್ವೀಶಿರೋಮಣಿ ಶ್ರೀಮತಿ ತಿಮ್ಮವ್ವನವರು ಶಿವಾಧೀನರಾದ ಸಮಯದಲ್ಲಿ ಅವರ ಬಂಧುಗಳಾದ ಶ್ರೀಮತಿ ಹಾಲಮ್ಮನವರು ಪ್ರಭಾಪೋಷಣಕ್ಕೋಸ್ಕರ **1** ರೂಪಾಯಿಯನ್ನು ತೆಗೆಯಿಸಿ ಕಳುಹಿಸಿದ್ದಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

|| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಆಚಾರ್ಯರ ಪ್ರಾಚೀನತ್ವ

ವಾಚಕಮಹೋದಯರೇ! ಪ್ರತಿಯೊಂದು ಯುಗದಾದಿಯಲ್ಲಿಯೂ ಸೋಮೇಶಾದಿ ಲಿಂಗಗರ್ಭನಿರ್ಭೂತರಾಗಿ ವೇದೋಪನಿಷತ್ಸ್ಮೃತಿಪುರಾಣ ಮ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವನ್ನು ಸಂಸ್ಥಾಪಿಸಿ ಜಗದಾಚಾರ್ಯರೆಂದು ವಿಖ್ಯಾತರಾದ ರೇಣುಕಾದಿ ಪಂಚಾಚಾರ್ಯರ ಕಾಲಮಾನವು ಅತ್ಯಂತಪ್ರಾಚೀನವಾಗಿದೆಯೆಂದು ಧಾರಾಳವಾಗಿ ಹೇಳಬಹುದಾಗಿದೆ ರೇಣುಕಾದಿಗಳೇ ವಿಷ್ಣು ಬ್ರಹ್ಮೇಂದ್ರಾದಿ ದೇವತೆಗಳಿಗೆ ಮೋಕ್ಷದಾಯಕವಾದ ಲಿಂಗಧಾರಣ ಪಂಚಾಕ್ಷರೀ ಮಂತ್ರೋಪದೇಶಗಳನ್ನು ಮಾಡಿದರೆಂದು ಪಾಶುಪತತಂತ್ರಾದಿಗ್ರಂಥಗಳು ಸಾರುತ್ತಿರುವವು

ಕನ್ನಡನಾಡಿನ ವೀರಶೈವ ಕವಿಗಳಲ್ಲಿ ಆದ್ಯನಾದ ಹರಿಹರದೇವನು ತನ್ನ ಗಿರಿಜಾಕಲ್ಯಾಣವೆಂಬ ಮಹಾಕಾವ್ಯದಲ್ಲಿ—

ಗರಳಂಭದ್ರಮುಖ ಶುಭೋದಯನಭಂಗಂ ಶಂಕುಕರ್ಣಂ ಷಡ
ಕ್ಷರನುತ್ತುಂಗಶಿರಂ ವೃಕೋದರ ನಟವ್ಯಂದಾರುಕಂ ಸಿಂಹಕೇ |
ಸರಿ ಸಿದ್ಧಾಂತಿಯುಮನೇಕಜಟನ ವಿಶ್ವಸ್ವಾಮಿ [illegible] |
ಲರಕಾಯಂ ಪನ್ನಾಯುಂ ಪ್ರಮುಖಯುಂ ವಿಸ್ತರಂಕಂ ಭಜಂ

೧೧ನೇ ಆಶ್ವಾಸ ೬೬ ನೇ ಶ್ಲೋಕ

ಜಗಜ್ಜನನಿಯಾದ ಪಾರ್ವತೀದೇವಿಯರ ವಿವಾಹಮಹೋತ್ಸವಕ್ಕೋಸ್ಕರವಾಗಿ ಋಷಿಗಳೂ ಮುನಿಗಳೂ ಮಹಾಮಹಾ ದೇವಾಸುರರೂ ಆಗಮಿಸಿದರೆಂದೂ ಅನಂತರ ಪ್ರಮಥ ಪುಂಗವರಾದ ಗರಳ, ಭದ್ರಮುಖ ಶುಭೋದಯ, ಅಭಂಗ ಶಂಕುಕರ್ಣ, ಷಡಕ್ಷರ, ಉತ್ತುಂಗಶಿರ, ವೃಕೋದರ, ನಟವ್ಯ, ದಾರುಕ, ಸಿಂಹಕೇಸರಿ ಸಿದ್ಧಾಂತಿ ಅನೇಕಜಟ ಇತ್ಯಾದಿ ಗಣಶ್ರೇಷ್ಠರು ಬಂದರೆಂದೂ ವರ್ಣಿಸಿದ್ದಾನೆ ಶಂಕುಕರ್ಣ ದಾರುಕ ಮುಂತಾದ ಗಣನಾಯಕರು ಪಂಚಾಚಾರ್ಯರೊಳಗಿನ ದಾರುಕ ಏಕೋರಾಮರೆಂಬುದು ಪ್ರಸಿದ್ಧವೇ ಆದೆ ಇದರ ಮೇಲಿಂದ ನಮ್ಮ ಆಚಾರ್ಯರ ಪ್ರಾಚೀನತ್ವವು ಸ್ಪಷ್ಟವಾಗಿ ಕಂಡುಬರುತ್ತಿದೆ ಇವೆಲ್ಲವನ್ನೂ ಹಂಡಬಂಡರ ತಂಡವು ಕಂಡುಕೊಂಡು ಬುದ್ಧಿಗಲಿಯಲಿ ಆಗಮಗಳಲ್ಲಿಯಂತೂ ಆಚಾರ್ಯರ ಮಹಿಮಾತಿಶಯವು ಮುಕ್ತಕಂಠದಿಂದ ಹೇಳಲ್ಪಟ್ಟಿದೆ ಸೇತುಶೀತಾಚಲಪರ್ಯಂತವಾಗಿ ವಿಸ್ತೀರ್ಣವಾದ ನಮ್ಮ ಭರತಖಂಡವು ಪಂಚಾಚಾರ್ಯರ ಸಂಚಾರದಿಂದ ಪುನೀತವಾಗಿದೆ ಇದಕ್ಕೆ ಆಚಾರ್ಯರ ಪವಿತ್ರನಾಮದಿಂದ ಎಲ್ಲ ಕಡೆಯಲ್ಲಿಯೂ ವಿರಾಜಿಸುತ್ತಿರುವ ದೇವಾಲಯಗಳೇ ಸಾಕ್ಷಿಗಳಾಗಿವೆ ಈ ವಿಷಯದಲ್ಲಿ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ತಮ್ಮ ಪ್ರಭೆಯಲ್ಲಿ ಸಂಪಾದಕೀಯ ಲೇಖವೊಂದನ್ನು ಬರೆದಿದ್ದಾರೆ

ಗುಲಬುರ್ಗಾ ಡಿಸ್ಟ್ರಿಕ್ಟ್ ಸರಸಂಬ ಗ್ರಾಮದ ಸಮೀಪದ ಪ್ರಶಾಂತಸ್ಥಾನದಲ್ಲಿ ರೇಣುಕರ ಮಂದಿರವೊಂದಿದೆ ಮತ್ತು ನೈಜಾಂ ಸ್ಟೇಟಿನ ಪಡಸಾಲಿಗಿ ಗ್ರಾಮದಲ್ಲೊಂದು ರೇಣುಕರ ಪವಿತ್ರ ದೇವಾಲಯವಿದ್ದು ನೋಡುವುದಕ್ಕೆ ಬಹು ರಮಣೀಯವಾಗಿದೆ ಯೋಗಿಗಳ ತಪಸ್ಸಾಧನೆಗೆ ಯೋಗ್ಯಸ್ಥಾನವೆಂದು ಪ್ರಸಿದ್ಧಿಗೊಂಡ ಅಂಬಿಲಗುಂಡ (ಅಮೃತಕುಂಡ) ಕ್ಷೇತ್ರದಲ್ಲೊಂದು ರೇವಣಸಿದ್ಧರು ಶಿವಾರ್ಚನೆ ಮಾಡಿದ ಪವಿತ್ರಸ್ಥಾನವಿದೆ ಚಾಲುಕ್ಯರ ರಾಜಧಾನಿಯಾದ ಕಲ್ಯಾಣದಲ್ಲಿಯೂ ರೇಣುಕಾಚಾರ್ಯರ ಭವ್ಯ ಮಂದಿರವಿದೆ ಹೀಗೆಯೇ ಪರಿಶೋಧಿಸುತ್ತ ಹೋದಲ್ಲಿ ಆಚಾರ್ಯರ ಹೆಸರಿನ ದೇವಾಲಯಗಳೂ ತೀರ್ಥಗಳೂ ಅನೇಕವಾಗಿ ಸಿಕ್ಕುವ ಸಂಭವವಿದೆ ಇದನ್ನು ಗುರುಭಕ್ತರು ಲಕ್ಷದಲ್ಲಿಟ್ಟು ಶ್ರಮಿಸಿ ಆಚಾರ್ಯ ಸೇವಾಭಾಗಿಗಳಾಗಬೇಕೆಂದು ಪ್ರಾರ್ಥಿಸುವ,

ಗಂಗಾಧರಶಿವಾಚಾರ್ಯರು,
ಮೊರಬ

ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್‌ರವರ ಇಸ್ತಿಹಾರ್‌ನಾಮೆ

1೯೪೧ನೆಯ ಇಸವಿ ಸೆಪ್ಟೆಂಬರು 11 ನೆಯ ತಾರೀಖಿನ ಪಿ 1667 ನೆಯ ನಂಬರು ಸರ್ಕಾರಿ ಇಸ್ತಿಹಾರ್‌ನಾ ಪ್ರಕಾರ ಡೆಪ್ಯುಟಿ ಕಮಿಷನರ್‌ಗಳಿಗೆ ವಹಿಸಿರತಕ್ಕ ಅಧಿಕಾರವನ್ನು ಚಲಾಯಿಸಿ, ಮೈಸೂರು ಡಿಸ್ಟ್ರಿಕ್ಟಿನಲ್ಲೆಲ್ಲಾ ಕೆಳಗಣ ಷೆಡ್ಯೂಲಿನಲ್ಲಿ ನಮೂದಿಸಿರುವ ಕೆಲವು ಮುಖ್ಯವಾದ ಪದಾರ್ಥಗಳ ಒಟ್ಟು ಮತ್ತು ಚಿಲ್ಲರೆ ವ್ಯಾಪಾ ಪರಮಾವಧಿ ಬೆಲೆಗಳನ್ನು ಈ ಕೆಳಗಣ ಷೆಡ್ಯೂಲಿನಲ್ಲಿ ಗೊತ್ತುಮಾಡಿ ನಮೂದಿಸಿರುತ್ತೆ

2 ಆ ಷೆಡ್ಯೂಲಿನಲ್ಲಿ ನಮೂದಿಸಿರತಕ್ಕ ಬೆಲೆಗಳು ಪರಮಾವಧಿ ಬೆಲೆಗಳು

3 ಈ ಪೈಕಿ ಯಾವುದಾದರೂ ಪದಾರ್ಥವನ್ನು ಅದಕ್ಕೆ ಗೊತ್ತುಮಾಡಿರುವ ಪರಮಾವಧಿ ಬೆಲೆಗಿಂತ ಹೆಚ್ಚಿನ ದರದಲ್ಲಿ ಯಾವ ಮನುಷ್ಯನಾಗಲಿ ಮಾರಿದರೆ, ಅವನು, ಮೈಸೂರು ಸಂಸ್ಥಾನಕ್ಕೆ ಅನ್ವಯಿಸುವ ಡಿಫೆ ಸಾರಂಭದ ಇಂಡಿಯಾದೇಶದ ರಕ್ಷಣೆಗೆ ಸಂಬಂಧಪಟ್ಟ ಆಕ್ಟು ಮತ್ತು ಆ ಆಕ್ಟಿನಮೇರೆ ವಿಧಾಯಕವಾಗಿರುವ ರೂಲ್ ಪ್ರಕಾರ ಶಿಕ್ಷೆಗೆ ಗುರಿಯಾಗಬೇಕಾಗುವುದು

4 ಈಗ ಗೊತ್ತುಮಾಡಿರುವ ಪರಮಾವಧಿ ದರಗಳನ್ನು ಡೆಪ್ಯುಟಿ ಕಮಿಷನರ್‌ರವರು ಆಗಿಂದಾ ಬದಲಾಯಿಸಬಹುದು

5 ವರ್ತಕರು ವ್ಯಾಪಾರಗಾರರು, ಮತ್ತು ಮಾರಾಟಮಾಡುವವರು—ಇವರುಗಳ ಪೈಕಿ ಯಾರಾದ ದರಗಳು ಬದಲಾವಣೆಯಾಗಬೇಕೆಂದು ಭಾವಿಸಿದರೆ, ಅವರು ಈ ಅಂಶವನ್ನು ಕುರಿತು ಡೆಪ್ಯುಟಿ ಕಮಿಷನರ್‌ರವ ಮನವಿಮಾಡಿಕೊಳ್ಳಬಹುದು ಹಾಗೆ ದರಗಳನ್ನು ಬದಲಾಯಿಸಬೇಕೆಂಬುದಕ್ಕೆ ಕಾರಣಗಳೇನೆಂಬುದನ್ನೂ ಮ ಬೇಕಾಗಿರುವ ವಿವರಗಳನ್ನೂ ಅವರುಗಳು ಆ ಮನವಿಯಲ್ಲಿ ನಮೂದಿಸಿ ಕಳುಹಿಸಬೇಕು

6 ಅನ್ಯಾಯವಾದ ರೀತಿಯಲ್ಲಿ ಹೆಚ್ಚುಬೆಲೆ ಹಾಕಿ ಮಿತಿಮೀರಿ ಲಾಭ ಸಂಪಾದಿಸುವವರ ವಿಷಯದ ಫಿರ್ಯಾದುಗಳನ್ನು ಸಮೀಪದಲ್ಲಿರುವ ಪೋಲೀಸು ಸ್ಟೇಷನ್‌ಹೌಸ್ ಆಫೀಸರಲ್ಲಿಯಾಗಲಿ ಅಥವ ಡೆಪ್ಯುಟಿಕಮಿಷನ ರವರಲ್ಲಿಯಾಗಲಿ ತರಬಹುದಾಗಿದೆ

ಷೆಡ್ಯೂಲ್

ಪದಾರ್ಥಗಳ ಹೆಸರು	ಪರಮಾವಧಿ					
	ಒಟ್ಟು ವ್ಯಾಪಾರ				ಚಿಲ್ಲರೆ ವ್ಯಾಪಾರ	
ಭತ್ತ		ರೂ	ಆ	ಪೈ		
ಕೊಯಮತ್ತೂರ ಸಣ್ಣ (ಹಳೇದು)	640 ಸೇರುಗಳಿಗೆ	56	0	0		
,, (ಹೊಸದು)	,,	50	0	0		
ಮೈಸೂರು ಕಡ್ಡಿ (ಹಳೇದು)	,,	50	0	0		
,, (ಹೊಸದು)	,,	46	0	0		
ಮೈಸೂರು ಕೆಂಬೂತಿ (ಹೊಸದು)	,,	46	0	0		
ಅಕ್ಕಿ						
ಕೊಯಮತ್ತೂರು ಸಣ್ಣ (ಹಳೇದು)	100 ಸೇರುಗಳಿಗೆ	18	0	0	1 ರೂಪಾಯಿಗೆ	5⅜ ಸೇರುಗ
,, (ಹೊಸದು)	,,	15	9	0	,,	6⅓
ಮೈಸೂರು ಕಡ್ಡಿ (ಹಳೇದ)	,,	15	0	0	,,	6⅛
,, (ಹೊಸದು)	,,	13	8	0	,,	7
ಮೈಸೂರು ಕೆಂಬೂತಿ (ಹೊಸದ)	,,	13	8	0	,,	7
ದಪ್ಪ ನುಚ್ಚು	,,	8	0	0	,,	12
ಸಣ್ಣ ನುಚ್ಚು	,,	7	0	0	,,	14
ಕುಸುಬಲ ಅಕ್ಕಿ (ಅವಲ್)	,,	16	0	0	,,	6
,, (ದುಯ್ಯಂ)	,,	15	0	0	,,	6½ ,
ರಾಗಿ (ಅವಲ್)	,,	7	0	0	,,	14 ,
,, (ದುಯ್ಯಂ)	,,	6	8	0	,,	14½ ,
ಜೋಳ	,,	6	8	0	,,	14½ ,,
ಬೆಲ್ಲ	40 ಸೇರಿನ ಮಣ 1 ಕ್ಕೆ	3	0	0	ಒಂದು ವೀಸೆಗೆ	ರೂ 0 6-0
ಮಂಡ್ಯದ ಸಕ್ಕರೆ	2 ಹಂಡ್ರೆಡ್‌ವೇಟ್ ಚೀಲಕ್ಕೆ	36	8	0	,,	,, 0-8-0
ಗೋಧಿ						
ಧಾರವಾಡದ ಕೆಂಪು ಗೋಧಿ	90 ಸೇರುಗಳ ಚೀಲಕ್ಕೆ	17	4	0	1 ರೂಪಾಯಿಗೆ	5 ಸೇರುಗ
ಪಂಜಾಬ್ ಬದನಕೆ	,,	17	4	0	,,	5 ,
ಗೋಧಿಹಿಟ್ಟು						
ಸ್ಥಳದ ಹರ್ಸ ಹಿಟ್ಟು	196 ಪೌಂಡುಗಳ ಚೀಲ	16	0	0	1 ರೂಪಾಯಿಗೆ	11½ ಪೌಂಡುಗ
ಅಟ್ಟಾ	,,	20	0	0	,,	9½
ಅಮದಾದ ಮೈದಾಹಿಟ್ಟು	,,	19	0	0	,,	10
ರವೆ						
ಸ್ಥಳದ ಹರ್ಸ ರವೆ	,,	19	0	0	,,	10 (4½ ಸೇರುಗ
ಎಲ್‌ಜಿ ಹರ್ಸ ರವೆ	,,	20	8	0	,,	(9½ ಪೌಂಡು
ಹರ್ಸರವೆ	,,	21	0	0	,,	9 ,,
ಚಿರೋಟಿ ರವೆ (ಹರ್ಸ)	,,	25	0	0	,,	7½ ,,
					,,	(3½ ಸೇರುಗ
ಸೀಮೆಯಣ್ಣೆ (ಬಿಳೇದು)	ಚಿಲ್ಲರೆಯಾಗಿ 4 ಗ್ಯಾಲನ್‌ಗಳಿಗೆ ಟಿನ್ ಇಲ್ಲದೆ	3	14	0	1 ಕ್ವಾರ್ಟ್ ಸೀಸೆಗೆ	ರೂ 0 3 0
,, (ಕೆಂಪು)	,,	3	10	0	,,	ರೂ 0
ವೈದ್ಯಸಾಮಗ್ರಿಗಳು (ಔಷಧಿಗಳು, ಔಷಧದ ಸಾಮಾನು ಗಳು, ಮತ್ತು ರಸಾಯನ ವಸ್ತುಗಳು)	ಇನ್‌ವಾಯ್ಸ್ ಧಾರಣೆಗಿಂತಲೂ ಶೇಕಡ 10 ರಷ್ಟು ಹೆಚ್ಚಾಗಿ					

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ನವರಾದು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ನವರ್ಷಕ್ಕೋ ಹತ್ತು ವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯ ರ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಅ ನವು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯೋಗಕ್ಷೇಮ ವಿಷಯ ನ್ನು ಬ ಮಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಗಿಬಿಡುವರು ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇವನ್ನು ತಾಮವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ವಪ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ ರತ್ನ ಚನ್ನಾಗಿ ತೋರಿಸಲ್ಪಟ್ಟಿದೆ ಆದುದರಿಂದ ಸದರಿ ಪುಸ್ತಕ ನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ರತ್ನಷ್ಟದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು ಇವಕ್ಕಾಗಿ ತ ತದವಂಥ ಕಾಗದಗಳನ್ನು ಉಪಯೋಗಿಸಿರುವವಲ್ಲದೆ ಸ ದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ತಿ ಸುಲಭಕ್ರಯದಲ್ಲಿ ದೊರೆಯುವವು

ಷದಿ ಹೆಸರು	ತೊಲಿ	ಮೂಲ್ಯ
ಮಕರಧ್ವಜ	೧	೩೦—೦—೦
ಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
ಸಿಂಧೂರ	೧	೨—೦—೦
ಲ್ಲಸಿಂಧೂರ	೧	೪—೦—೦
ರಸಿಂಧೂರ	೧	೪—೦—೦
ಂದೂರ	೧	೬—೦—೦
ವಂಗ	೧	೩—೦—೦
ಪಂ	೧	೧—೦—೦
ಭಸ್ಮಗಳು		
ಭಸ್ಮ	೧	೪೦—೦—೦
ಪತಭಸ್ಮ	೧	೪—೦—೦
ಮ್ರಭಸ್ಮ	೧	೦—೮—೦
ಹಭಸ್ಮ	೧	೦—[illegible]—೦
ಭಸ್ಮ	೧	೦—೮—೦
ಗಭಸ್ಮ	೧	೦—೮—೦
ಕ್ರಾಭಸ್ಮ	೧	೪೦—೦—೦
ಭ್ರಂಭಸ್ಮ	೧	೩—೦—೦
ತ್ರಾಳಭಸ್ಮ	೧	೦—೮—೦
ಚಿನಭಸ್ಮ	೧	೦—೮—೦
ಸ್ತ್ರವಸ್ಮ	೧	೦—೮—೦
ಂಡೂರಭಸ್ಮ	೧	೦—೮—೦
ಮುಕ್ತಿಕಾಭಸ್ಮ	೧	೦—೧೨—೦
ಕ್ತಭಸ್ಮ	೧	೪೦—೦—೦
ವಾಲಭಸ್ಮ	೧	೦—೮—೦
ಪ್ಪೆಚಿಪ್ಪಿನ ಭಸ್ಮ	೧	೦—೮—೦
ದ ಕೋಡಿನ ಭಸ್ಮ	೧	೦—೮—೦
ವಂತಿಹರತಾಲಭಸ್ಮ	೧	೦—೮—೦
ಸ್ತೂರಿ (೧ನೇ ನಂಬರ್)	೧	೫೦—೦—೦
ಜಿತ ಸೂರ್ಯಪುಟಿ	೧	೭—೦—೦
ಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಸ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಷದಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು.ಪಿ

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ- ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾವ ತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಪಠನ ಕ್ಕೆ ಯೋಗ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ** ವಿ ಪಿ ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆದಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳಿದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟಿರಬಹುದೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಪೂರ್ವವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಮುದ್ರಣಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ **ಬೆಲೆ ೮ ರೂಪಾಯಿ** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ ಗೆ ದೊರೆಯುವುದು ವಿ ಪಿ ಚಾರ್ಜು ೧ ರೂ ೫ ಆಣೆ ಪ್ರತ್ಯೇಕ

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಭತ್ತು ಅದ್ಭುತಲೀಲೆಗಳುಳ್ಳ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೧—೬
ಸದ್ಯ: ಸಿಂಹಾಸನಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದವಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ರುದ್ರರೂಪವನ್ನು ಧಾರಣಮಾಡಿ ಮೂರು ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರ ವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಪೀಠಸ್ಥಾನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುತ್ತಾರೆ. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ.—ಪೀನಸಿ, ಒಣ್ಣೆ ತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಸಹ ಹೆಚ್ಚುಮಾಡುತ್ತದೆ ಮೂರುಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯವಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುವು ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ. ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ. ೨ ೮ ೦. ವಿ. ಪಿ. ೬ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[29] ಪೋ. ಬಾ. ೫೧೦, ಮದರಾ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ) ...	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ) ...	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ . .	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ . .	೨ ಆಣೆ
ಪಂಚಾಚಾರ ಪ್ರಕಾಶಿಕಾ .. .	೨ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) ...	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು) . .	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ) ...	೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ) .	೧೨ ಆ
ಶಿಖಾಸೂತ್ರಸಿದ್ಧಾಂತದರ್ಪಣ ..	೧೨ ಆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ) .	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೬೦ ಮಹತ್ವದ ಫೋಟೋಗಳುಳ್ಳವು) ...	೧। ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) ...	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩.೨೩. ಪುಟ) .	೮ ರೂ
A brief life sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*) .	8 As
Speeches by Pandit Shri Kashinatha Shastriji *English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु
पुरुषसूक्तम् (वीरशैवप्राचीनभाष्योपेतम्) .	४ आ
नंदिकेश्वरकारिका (संस्कृत)	२ आ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೯ನೇ ಡಿಸೆಂಬರ್ ೧೯೪೧ [ಸಂಚಿಕೆ ೩೫

ಶ್ರೀಮನ್ಮಹಾರಾಜ
ಶ್ರೀ ಜಯಚಾಮರಾಜೇಂದ್ರ ಒಡೆಯರ್
ಬಹದ್ದೂರ್ ಮಹಾಸ್ವಾಮಿಯವರ,
ಶೈಲಚಿತ್ರದ ಅನಾವರಣ ಮಹೋತ್ಸವವನ್ನು

ಮೈಸೂರು ಸಂಸ್ಥಾನದ ದಿವಾನ್ ಸಾಹೇಬರವರು
27-12-1941 ನೇ ಸ್ಥಿರವಾರದ ಶುಭ ದಿನದಲ್ಲಿ
ಶ್ರೀಕೃಷ್ಣರಾಜೇಂದ್ರ ಜ್ಯೂಬಿಲಿ ಪುರಭವನದಲ್ಲಿ
ನೆರವೇರಿಸಿದಾಗ, ಕೋಲಾರದ ಪೌರಸಭೆಯವರ
ಪರವಾಗಿ ಅಧ್ಯಕ್ಷರಾದ
ಶ್ರೀಮಾನ್ ಜೆ. ಬಿ ಮಲ್ಲಾರಾಧ್ಯರವರು ಮಾಡಿದ

ಸ್ವಾಗತ ಭಾಷಣ

ಮಹಾಶಯರೇ—

ಪೌರಸಭೆಯ ಪರ ಮತ್ತು ಪುರಜನರ ಪರವಾಗಿ ಈ ಉತ್ಸಾಹಪೂರಿತವಾದ ಸಮಾರಂಭಕ್ಕೆ ತಮ್ಮೆಲ್ಲರನ್ನು ಸ್ವಾಗತಿಸುವ ಅಪೂರ್ವ ಸನ್ನಿವೇಶವು ದೊರೆತುದಕ್ಕಾಗಿ ಹರ್ಷಿಸುತ್ತೇನೆ.

2 ಈ ಸಂದರ್ಭದಲ್ಲಿ ನಮ್ಮ ಆಹ್ವಾನವನ್ನು ವಿಶ್ವಾಸಪೂರ್ವಕವಾಗಿ ಅಂಗೀಕರಿಸಿ ಇಲ್ಲಿಯವರೆಗೆ ದಯಮಾಡಿಸಿ ಈ ದಿನದ ಅಧ್ಯಕ್ಷ ಸ್ಥಾನವನ್ನು ವಹಿಸಿರುವ, ನಮ್ಮ ಸಂಸ್ಥಾನದ ಸಚಿವಶ್ರೇಷ್ಠರಾದ ರಾಜಮಂತ್ರಪ್ರವೀಣ ನ್ಯಾಪತಿ ಮಾಧವರಾವ್, ಬಿ.ಎ.,ಬಿ.ಎಲ್., ರವರಿಗೆ ನಾವು ತುಂಬಾ ಕೃತಜ್ಞರಾಗಿದ್ದೇವೆ ಆಳುವ ಮಹಾಸ್ವಾಮಿಯವರು ನಮ್ಮ ದಿವಾನ್ ಸಾಹೇಬರವರ ಅಚಲವಾದ ರಾಜಭಕ್ತಿಯಲ್ಲಿಯೂ, ದೀರ್ಘದೃಷ್ಟಿಯಿಂದ ಕೂಡಿದ ಅವರ ರಾಜನೀತಿ ಕೌಶಲ್ಯದಲ್ಲಿಯೂ, ಅಸಾಧಾರಣವಾದ ಕಾರ್ಯದಕ್ಷತೆಯಲ್ಲಿಯೂ, ವಿವೇಚನಾಸಾಮರ್ಥ್ಯದಲ್ಲಿಯೂ, ನಂಬಿಕೆಯನ್ನೂ, ಭರವಸೆಯನ್ನೂ ಇಟ್ಟು, ಅವರ ಅಧಿಕಾರದ ಅವಧಿಯನ್ನು ಹೆಚ್ಚಿಸಿ ಅನುಗ್ರಹಿಸಿರುವುದಕ್ಕಾಗಿ, ನಮ್ಮ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸೂಚಿಸಲಿಚ್ಛಿಸುತ್ತೇನೆ ಸರ್ಕಾರದ ಅನೇಕ ಇಲಾಖೆಗಳ ಕಾರ್ಯಾಚರಣೆಯ ಅನುಭವವನ್ನು ಗಳಿಸಿ, ಪ್ರಭಾವಯುತವಾದ ಪ್ರತಿಭೆಯುಳ್ಳ, ನಮ್ಮ ದಿವಾನ್ ಸಾಹೇಬರವರಿಗೆ ಅವರ ಪ್ರಕೃತಿಸಿದ್ಧವಾದ ಸಹಾನುಭೂತಿ, ಮತ್ತು ಕರ್ತವ್ಯಶ್ರದ್ಧೆಯಿಂದ, ಮೈಸೂರಿನ ಪ್ರಗತಿ ಸಾಧನೆಗೆ ಅವಕಾಶವನ್ನು ಕಲ್ಪಿಸುವ ಶಕ್ತಿ ಸಾಧನಗಳನ್ನು ಜಗದೀಶ್ವರನು, ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

3 ಪ್ರಕೃತ ಮಾನ್ಯ ಅಧ್ಯಕ್ಷರವರು ಅನಾವರಣ ಮಾಡಲಿರುವ ನಯನಮನೋಹರವಾದ ಸುಂದರಾಕಾರವುಳ್ಳ ಪ್ರತಿಕೃತಿಯನ್ನು ಅನುಗ್ರಹಪೂರ್ವಕವಾಗಿ ಪೌರಸಭೆಯವರಿಗೆ ದಯಪಾಲಿಸಿದುದಕ್ಕಾಗಿ, ಪ್ರಭುಗಳವರಿಗೆ ನಾವು ಚಿರಋಣಿಗಳಾಗಿದ್ದೇವೆ ಈ ಭಾವಚಿತ್ರವೇ ನಮಗೆ ವಿಪುಲವಾದ ಸಂಪತ್ತು, ಅಮೂಲ್ಯವಾದ ವಸ್ತು ಎಂಬುದಾಗಿ ಭಾವಿಸಿ ಈ ಭವ್ಯಮಂದಿರದಲ್ಲಿ ಪ್ರತಿಷ್ಠಿಸಲು ನಿರ್ಧರಿಸಿದ್ದೇವೆ ಈ ಸಂದರ್ಭದಲ್ಲಿ ಆಳುವ ಮಹಾಸ್ವಾಮಿಯವರಲ್ಲಿ ವೈಯಕ್ತಿಕವಾಗಿಯೂ, ಮತ್ತು ಪ್ರಭುಗಳಿಂದ ವಿರಾಜಮಾನವಾದ ಕರ್ನಾಟಕ ರತ್ನಸಿಂಹಾಸನದಲ್ಲಿಯೂ, ನಮ್ಮ ಪೌರಸಭೆಯವರಿಗೂ, ಮತ್ತು ಕೋಲಾರದ ಇನ್ನಿತರ ನಾಗರಿಕರಿಗೂ ಇರುವ ನಿರಂತರವಾದ ಮತ್ತು ಘನತರವಾದ ರಾಜಭಕ್ತಿಯನ್ನು ದಿವ್ಯಸನ್ನಿಧಿಯಲ್ಲಿ ಅರ್ಪಿಸಬೇಕೆಂದು ದಿವಾನ್ ಸಾಹೇಬರವರನ್ನು ಪ್ರಾರ್ಥಿಸುತ್ತೇನೆ.

4. ಕಳೆದ ತಿಂಗಳಲ್ಲಿ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಸ್ವಾಮಿಯವರು, ಕೋಲಾರಕ್ಕೆ ದಯಮಾಡಿ, ಲಕ್ಷಾಂತರ ಪ್ರಜೆಗಳಿಗೆ ದರ್ಶನಲಾಭವನ್ನಿತ್ತ ಸವಿನೆನಪು ನಮ್ಮನ್ನು ಆಗಾಗ್ಗೆ ಆನಂದಗೊಳಿಸುತ್ತಿದೆ ಮಹಾಸ್ವಾಮಿಯವರ ಮೂರ್ತಿಪೂಜೆಯನ್ನು ಪೌರಸಭೆಯವರು ಇನ್ನು ಮುಂದೆ ಪ್ರತಿನಿತ್ಯವಲ್ಲದಿದ್ದರೂ ಕೈಗೊಳ್ಳುವ ಅವಕಾಶ ದೊರೆತುದು ಅಲಭ್ಯಲಾಭವೆನಿಸಿದೆ ಯಾಕೆಂದರೆ, ಲೋಕದಲ್ಲಿ ಆಕಾರದಿಂದಾಗುವಷ್ಟು ಕಾರ್ಯವು ಬೇರೆ ಯಾವುದರಿಂದಲೂ ಆಗುವುದಿಲ್ಲವೆಂಬುದು ನಿರ್ವಿವಾದವಾದ ವಿಷಯ ಯಾವ ವಸ್ತುವನ್ನು ನಾವು ಇತರರ ಹೃದಯದಲ್ಲಿ ವಚನದ್ವಾರವಾಗಿ ಸ್ಥಿರಗೊಳಿಸಲು ಅಸಮರ್ಥರಾಗಿರುವೆವೋ, ಅದೇ ವಸ್ತುವನ್ನು ಆಕಾರದ ಮೂಲಕ ಕ್ಷಣಮಾತ್ರದಲ್ಲಿ ನೆಲೆಗೊಳಿಸಲು ಸಾಧ್ಯ ಪರಮಾತ್ಮನ ವಿಷಯವಾಗಿ ಹೇಳಬೇಕಾದರೆ ನಾವು ನಿರಾಕಾರ ವಸ್ತುವನ್ನು ಧ್ಯಾನಿಸಬೇಕಾಗಿದ್ದರೂ, ಅವನನ್ನು ಸಾಕಾರ ವಸ್ತುವಿನಲ್ಲಿ ಆರೋಪಿಸಿಯೇ ಧ್ಯಾನಿಸಬೇಕಾಗುವುದು ನಾವು ಯಾವುದಾದರೊಂದು ದಿವ್ಯಮೂರ್ತಿಯನ್ನು, ಮಹಾನುಭಾವರನ್ನು ರಾಜಶ್ರೇಷ್ಠರನ್ನು ನೋಡಿದಾಗ ನಮ್ಮ ಹೃದಯವು ಒಂದು ವಿಲಕ್ಷಣವಾದ ಅನಿರ್ವಚನೀಯವಾದ ಭಕ್ತಿಶ್ರದ್ಧೆಗಳಿಂದ ಆಪ್ಲಾವಿತವಾಗುವುದು ತತ್ಸಮಯದಲ್ಲಿ ಭಕ್ತನು ಆ ದಿವ್ಯಮೂರ್ತಿಗೋಸ್ಕರವಾಗಿ ಆ ಮಹಾಪುರುಷನಿಗೋಸ್ಕರವಾಗಿ ಆ ರಾಜಪುಂಗವನ ಸಲುವಾಗಿ ತನ್ನ ಸರ್ವಸ್ವವನ್ನೂ ಅರ್ಪಿಸುವುದಕ್ಕೋಸ್ಕರ ಸಿದ್ಧನಾಗುತ್ತಾನೆ ನಮ್ಮ ಪ್ರಭುಗಳವರ ಪ್ರತಿಕೃತಿಯು ಅಂಥಹ ಭಾವಚಿತ್ರದ ದರ್ಶನಮಾತ್ರದಿಂದಲೇ ಪೌರಸಭೆಯವರಿಗೂ ಕೋಲಾರದ ನಾಗರಿಕರಿಗೂ, ಈ ವಿಧವಾದ ಮನಸ್ಸಿನ ಪರಿವರ್ತನೆಯು ಆಗುವುದರಲ್ಲಿ ಸಂಶಯವಿಲ್ಲ ಯಾಕೆಂದರೆ ಆಸ್ತಿಕರಾದ ಭಾರತೀಯರೆಲ್ಲರಿಗೂ ರಾಜರು ಪ್ರತ್ಯಕ್ಷಪರಮೇಶ್ವರನೆಂಬ ಭಾವನೆ ಯುಗಯುಗಾಂತರಗಳಿಂದ ಸಂಪ್ರದಾಯಬದ್ಧವಾಗಿ ಬಂದ ಅನುಭವ. ಈ ಭಾವನೆಯಿಂದ ನಮ್ಮ ಹೃದಯಮಂದಿರವೇ ಪವಿತ್ರಗೊಳ್ಳುವುದಲ್ಲದೆ ಭಾವಚಿತ್ರದಲ್ಲಿನ, ಮೂರ್ತಿಮಂತಪ್ರಭುವಿನ ಆಕಾರವು ನಿಜವಾದ ರಾಜಭಕ್ತಿಯನ್ನು ನಮ್ಮೆಲ್ಲರಲ್ಲಿಯೂ ಸ್ಫೂರ್ತಿಗೊಳಿಸಿ, ನಿರ್ಮಲಾಂತಃಕರಣವುಳ್ಳವರನ್ನಾಗಿ ಮಾಡುವುದರಲ್ಲಿ ಅತಿಶಯೋಕ್ತಿಯೇನಿದೆ? ಅಲ್ಲದೆ ಈ ಭಾವಚಿತ್ರವು ಪೌರಸಭೆಯವರ ಸಾರ್ವಜನಿಕಸೇವೆಯ ಕೇಂದ್ರವೆನಿಸುವ ಈ ಭವ್ಯಮಂದಿರವನ್ನೇ ಪವಿತ್ರಗೊಳಿಸಿದೆ ಎಂದು ನಮ್ಮ ನಿಜವಾದ ಭಾವನೆ

5 ಈ ಸಂದರ್ಭದಲ್ಲಿ ಘನಸರ್ಕಾರದವರ, ನಮ್ಮ ಪೌರಸಭೆಯವರ ಮೇಲೆ ಸಂಪೂರ್ಣಾನುಗ್ರಹವಿಟ್ಟು ಆಗಾಗ್ಗೆ ನಮಗೆ ದೊರಕಿಸುತ್ತಿರುವ ಸಹಾಯ ಸೌಕರ್ಯಗಳಿಗಾಗಿ ನಾವು ತುಂಬಾ ಕೃತಜ್ಞರಾಗಿದ್ದೇವೆ, ಈ ವರ್ಷದಲ್ಲಿ ನಗರಾಭಿವೃದ್ಧಿ ಕಾರ್ಯಗಳಿಗಾಗಿ ಘನಸರ್ಕಾರದವರು ಸುಮಾರು ರೂ 9500/- ಗಳ ದ್ರವ್ಯಸಹಾಯವನ್ನು ನೀಡಿದ ಉಪಕಾರವನ್ನು ಈ ಸಮಯದಲ್ಲಿ ಸ್ಮರಿಸಿಕೊಳ್ಳುವುದು ನಮ್ಮ ಕರ್ತವ್ಯವೆನಿಸಿದೆ

6. ಮಹಾಸ್ವಾಮಿಯವರು ಸಿಂಹಾಸನಾರೋಹಣಮಾಡಿ ಅತ್ಯಲ್ಪಕಾಲವಾಗಿದ್ದರೂ, ತಮ್ಮ ರಾಜ್ಯಭಾರಕ್ರಮದಲ್ಲಿ ಕಿರಿಯ ವಯಸ್ಸಿಗೆ ಮೀರಿದಮಟ್ಟಿನ, ಹಿರಿಯತನದಿಂದೊಡಗೂಡಿದ ವಿವೇಚನ ಸಾಮರ್ಥ್ಯದಿಂದಲೂ, ಮೇಧಾಸಂಪತ್ತಿನಿಂದಲೂ, ವಿವೇಕ ವಿಚಕ್ಷಣತೆಗಳಿಂದಲೂ ಹೆಚ್ಚಿನ ಪ್ರಜಾವಾತ್ಸಲ್ಯದಿಂದಲೂ ಶೋಭಿಸುತ್ತಿರುವ ಅನೇಕ ನಿದರ್ಶನಗಳು ಈಗಾಗಲೇ ತೋರಿಬರುತ್ತಿವೆ. ನಿಜವಾಗಿ ಹೇಳುವುದಾದರೆ, ನಮ್ಮ ಒಡೆಯರಲ್ಲಿ ತಮ್ಮ ಪೂಜ್ಯ ಜನಕರಾದ ದಿವಂಗತ ಶ್ರೀಮನ್ಮಹಾರಾಜ ಕಂಠೀರವನರಸಿಂಹರಾಜ ಒಡೆಯರವರ ಹೃದಯ ವೈಶಾಲ್ಯವೂ, ಕಲೋಪಾಸನೆಯೂ, ಸಂಸ್ಕೃತಿಯೂ, ಪರಮಪೂಜ್ಯ ದೊಡ್ಡಪ್ಪನವರಾದ ರಾಜರ್ಷಿಗಳೆನಿಸಿದ್ದ ಕೀರ್ತಿಶೇಷರಾದ ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಸ್ವಾಮಿಯವರ ವಿವೇಚನೆ, ಕರ್ತವ್ಯಪರಾಯಣತೆ, ಧಾರ್ಮಿಕ ಆಧ್ಯಾತ್ಮಿಕ ವಿಷಯಗಳಲ್ಲಿ ಶ್ರದ್ಧೆ, ಸಹನಶೀಲತೆ, ವ್ಯಕ್ತಿವೈಶಿಷ್ಟ್ಯಗಳು ಪ್ರತಿಬಿಂಬಿಸಿವೆ. ಇದು ಮೈಸೂರಿನವರಾದ ನಮ್ಮೆಲ್ಲರ ಭಾಗ್ಯವಿಶೇಷ, ಕರ್ನಾಟಕ ಸಂಸ್ಕೃತಿಯು ಇಂದು ಉಳಿದಿರುವುದು ಯದುಕುಲದರಸರ ಆಡಳಿತ ಪಾಲನೆಗಳಿಂದ ಸನಾತನ ಧರ್ಮದ ದಿವ್ಯಜ್ಯೋತಿಯು ಕುಂದದೆ ಪ್ರಜ್ವಲಿಸುತ್ತಿರುವುದು ಅವರ ಶುಭ ಪ್ರಭಾವದಿಂದ. ನಮ್ಮ ಪ್ರಭುಗಳವರು ಅವರ ಪೂರ್ವಜರ ಆದರ್ಶಮಾರ್ಗವನ್ನು ಅವಲಂಬಿಸಿ ಪ್ರಜೆಗಳ ಜೀವನದ ಉಸಿರಾಗಿ, ಸಂಸ್ಥಾನದ ಬೆಳಕಾಗಿ, ಚಿರಕಾಲ ನಮ್ಮನ್ನು ಕಾಪಾಡಲಿ ಎಂದು ಪೌರಸಭೆಯವರ ಮತ್ತು ಪುರಜನರ ಪರವಾಗಿ ಪ್ರಾರ್ಥಿಸುತ್ತೇನೆ.

7. ಇನ್ನು ಪ್ರಭುಗಳವರ ಭಾವಚಿತ್ರದ ಅನಾವರಣ ಮಹೋತ್ಸವವನ್ನು ನೆರವೇರಿಸಿ, ನಮ್ಮನ್ನು ಕೃತಾರ್ಥರನ್ನಾಗಿ ಮಾಡಬೇಕೆಂದು ಪೌರಸಭೆಯವರ ಪರವಾಗಿ ದಿವಾನ್ ಸಾಹೇಬರವರನ್ನು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

ಸಂಕ್ಷೇಪ ಸಮಾಚಾರ

ತರ್ಕತೀರ್ಥ ವೇದಾಂತವಿಶಾರದ ಸಾಂಖ್ಯಾಲಂಕಾರ ನ್ಯಾಯವಾಚಸ್ಪತಿ ಇತ್ಯಾದಿ ಪದವೀಪ್ರತಿಷ್ಠಿತರಾದ ಹುಲಿ ಬೃಹನ್ಮಠಾಧ್ಯಕ್ಷ ಶ್ರೀ ನೀಲಕಂಠಶಿವಾಚಾರ್ಯ ಸ್ವಾಮಿಗಳವರು ಕಳೆದ ವರ್ಷ ಬೆಳಗಾಂವಿಯ ಪ್ರಥಮ ಸಂಸ್ಕೃತ ಸಾಹಿತ್ಯಸಮ್ಮೇಲನದಲ್ಲಿ **"ಸಂಸ್ಕೃತಭಾಷಾ ರಾಷ್ಟ್ರಭಾಷಾತ್ವೇನ ಇಷ್ಟಾ ವಾ ಅನಿಷ್ಟಾ"** ಎಂಬ ವಿಷಯದ ಮೇಲೆ ಮನೋಹರವಾಗಿ ಸಂಭಾಷಿಸಿದುದಕ್ಕಾಗಿ ಸದರಿ ಸಮ್ಮೇಲನದವರು ಶ್ರೀ ಶಿವಾಚಾರ್ಯರಿಗೆ ಸುವರ್ಣಪದಕವನ್ನೂ ಪ್ರಶಸ್ತಿ ಪತ್ರಿಕೆಯನ್ನೂ ಕೊಟ್ಟು ಸನ್ಮಾನಿಸಿದರು ಇದರಂತೆಯೇ ಗದ್ವಾಲ ಸಂಸ್ಥಾನದ ವರಿಷ್ಠನ್ಯಾಯಾಧೀಶರೂ ಪ್ರಸಿದ್ಧ ಪಂಡಿತರೂ ಆದ ವಾಚಸ್ಪತಿ ಗುಂಡೇರಾವ ಹರಕಾರೆಯವರು ಕೊಟ್ಟ "ಪ್ರಾತರ್ದ್ವಿಜೋಽಸ್ಯನ ಚಿಕೀರ್ಷತಿ ಮಂಜುಗುಂಜಾಂ" ಎಂಬ ಸಮಸ್ಯೆಯನ್ನು ಸರ್ವೋತ್ತಮವಾಗಿ ಪೂರ್ತಿಮಾಡಿದುದಕ್ಕಾಗಿ ಸದರಿ ಶಿವಾಚಾರ್ಯರಿಗೆ ಮುಖ್ಯಪಾರಿತೋಷಕಸನ್ಮಾನವು ದೊರೆತಿದೆ ಇದು ನಮ್ಮ ವೀರಶೈವ ಮಠದ ಪಂಡಿತರ ಗೌರವವನ್ನು ಹೆಚ್ಚಿಸತಕ್ಕುದಾಗಿದ್ದು ಸಮಾಜಕ್ಕೆ ಭೂಷಣಾಸ್ಪದವಾಗಿರುವದೆಂಬ ವಿಷಯವನ್ನು ನಿವೇದಿಸಲು ಪರಮಾನಂದವೆನಿಸುತ್ತದೆ

ಓರ್ವ ಮತಾಭಿಮಾನಿ.

ಫಿಲಿಪ್ಪೈನ್ ಪರಿಸ್ಥಿತಿ

ಅಮೆರಿಕಕ್ಕೆ ಸೇರಿದ ಫಿಲಿಪ್ಪೈನ್ ದ್ವೀಪಗಳ ಸುತ್ತ ಏನಿಲ್ಲೆಂದರೂ ಶತ್ರು ಯೋಧರಿಂದ ತುಂಬಿದ ನೂರು ಹಡಗುಗಳು ನಿಂತಿವೆಯೆಂದೂ, ಮನಿಲಾ ಕ್ಷೇತ್ರದಲ್ಲಿ ಶತ್ರು ವಿಮಾನಗಳ ಚಟುವಟಿಕೆಯು ಬಲವಾಗಿರುವುದರಿಂದ, ಅಲ್ಲಿಯ ನಾಗರಿಕರಿಗೆ ಒದಗಲಿರುವ ಪ್ರಾಣಹಾನಿಯೇ ಮೊದಲಾದ ಕಷ್ಟನಷ್ಟಗಳನ್ನು ತಪ್ಪಿಸಲು ಅಲ್ಲಿನ ಸರ್ಕಾರವನ್ನೂ ಸೈನಿಕರನ್ನೂ ಅಲ್ಲಿಂದ ಬೇರೆ ಕಡೆಗೆ ಸಾಗಿಸುವ ಯೋಚನೆ ನಡೆಸಿದ್ದಾರೆಂದು ತಿಳಿದು ಬರುತ್ತದೆ

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ತ್ರಿನೇತ್ರಪ್ರಕಾಶ

ಗುರು ಬಂದ ಗುರು ಬಂದ ಗುರು ಬಂದ ಮನೆಗೆ। ಗುರುವು ರೇವಣಸಿದ್ಧ ತಾ ಬಂದ ಮನೆಗೆ ॥ ಬಂದು ಭರದಿ ನಿಮ್ಮ ಮನೆಯೊಳು ನಿಂದ । ಆನಂದಪದವಿಯು ನಿಮಗಾಗಲೆಂದ । ಗುರುಬಂದ ॥ಪ॥ ಚಿನ್ನದ ಕಾಂತಿ ರನ್ನದ ಪಾವಿಗೆ ಪನ್ನಗಧರಪರಮಾತ್ಮ ತಾ ಬಂದ । ಕುರುಡ ಕುಂಟರ ಕಣ್ಣು ಕಾಲ್ಗಳ ತಂದ । ಬರಡಗೋವುಗಳ ಹಾಲು ಕರೆಯುತ ಬಂದ ॥೧॥ ರಜತಾದ್ರಿಗಿರಿಯೆಂಬ ಪರ್ವತದಲ್ಲಿ ಓರ್ವ ಗಣಾಧೀಶ್ವರ ಇದ್ದನು ಅಲ್ಲಿ । ಕೊಲ್ಲಿಪಾಕಿ ಸೋಮೇಶ್ವರನಲ್ಲಿ ಲಿಂಗದೊಳುದ್ಭವನಾಗಿದ್ದನಲ್ಲಿ ॥೨॥ ಕಾವಿ ಕಮಂಡಲು ಕೈಯಲ್ಲಿ ದಂಡ ಪ್ರಣವ ಪಂಚಾಕ್ಷರಿ ಜಪಿಸುತ್ತ ಬಂದ । ಕೊಲ್ಲಿಪುರದೊಳು ಬಲ್ಲಿದ ಮಾಯೆಯನ್ನು ಗೆದ್ದ ಮಹಿಮನು ತಾನು ಇಲ್ಲಿಗೆ ಬಂದ । ಗುರು ಬಂದ ॥೩॥

ಅಖಂಡವಾದ ತತ್ವದಲ್ಲಿ ಗುರುತತ್ವವೇ ಶ್ರೇಷ್ಠವಾದುದು. ನಮ್ಮ ವೀರಶೈವಮತವು ಕೇವಲ ಗುರುತತ್ವವನ್ನೇ ಅವಲಂಬಿಸಿರುವುದು. ಈ ಮತವನ್ನು ಸ್ಥಾಪಿಸಿದ ಶ್ರೀ ಜಗದ್ಗುರು ಪಂಚಾಚಾರ್ಯರ ಮಹಿಮೆಯು ಅಸಾಧಾರಣವಾದುದು. ಈ ಗುರುಸಾರ್ವಭೌಮರ ಅನುಗ್ರಹದಿಂದ ಈ ಮತವು ಅನಾದಿಕಾಲದಿಂದ ಇಂದಿನವರೆಗೆ ಭೂಮಂಡಲದಲ್ಲಿ ತೇಜೋಮಯವಾಗಿ ಮೆರೆಯುತ್ತಿರುವದು. ನಿಜಾಂರಾಜ್ಯಕ್ಕೆ ಸೇರಿದ ಹುಮನಾಬಾದ್ (ಪೂರ್ವದ ಹೆಸರು ಜಯಸಿಂಗಪುರ) ಇಲ್ಲಿ ಪೂರ್ವಕಾಲದಲ್ಲಿ ಒಂದು ದೊಡ್ಡ ಸರೋವರವಿತ್ತು. ಆಗ್ಗೆ ಜಯಚಂದ್ರನೆಂಬ ಮಹಾರಾಜನು ಈ ಸರೋವರಕ್ಕೆ ಬಂದು ಇಲ್ಲಿ ಒಂದು ಪಟ್ಟಣವನ್ನು ಕಟ್ಟಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿ, ನನಗೆ ಮಹಾತ್ಮನಾದ ಗುರುವು ದೊರೆತರೆ ಅವರ ತತ್ವಜ್ಞಾನ ಸಾರ ಪಡೆದುಕೊಳ್ಳುವೆನೆಂದು ದೇವರನ್ನು ಭಜಿಸುತ್ತ 'ಎಲೈ ದೇವ! ನೀನು ನಿನ್ನ ನಿಜರೂಪವನ್ನು ತೋರಿ ನನ್ನ ಇಚ್ಛೆಯನ್ನು ಪೂರೈಸು" ಎಂದು ಪ್ರಾರ್ಥಿಸಿದ. ಮತ್ತು ಬರುವಷ್ಟರಲ್ಲಿ ಒಂದು ವೃಕ್ಷದ ಹತ್ತರ ಕುಳಿತಿದ್ದ ಶಿವಯೋಗಿಯನ್ನು ನೋಡಿ ದೇವರು ನನ್ನ ಇಚ್ಛೆಗನುಸಾರವಾಗಿ ಗುರುವನ್ನು ದೊರಕಿಸಿಕೊಟ್ಟನೆಂದು ಆನಂದಭರದಿಂದ ಆ ಸದ್ಗುರುವಿನ ಚರಣಾರವಿಂದಕ್ಕೆ ದೀರ್ಘದಂಡ ನಮಸ್ಕಾರವನ್ನು ಮಾಡಿ ತನ್ನ ಮನೋಭೀಷ್ಟವನ್ನು ಅರಿಕೆ ಮಾಡಿಕೊಂಡನು. ಗುರುವು ರಾಜನ ಪ್ರಾರ್ಥನೆಯಂತೆ ಅಭಯವನ್ನಿತ್ತನು. ಆಗ್ಗೆ ರಾಜನು ಇವರ ಮಹಿಮೆಯನ್ನು ನೋಡಬೇಕೆಂದು ಒಂದು ತಟ್ಟೆಯಲ್ಲಿ ಮಾಂಸವನ್ನು ತಂದು ಅದರಮೇಲೆ ಬಟ್ಟೆಯನ್ನು ಮುಚ್ಚಿ ಮುಂದಿಟ್ಟು ನಮಸ್ಕರಿಸಿದನು. ಆಗ್ಗೆ ಯೋಗೀಶ್ವರರು ತಮ್ಮ ಜ್ಞಾನದೃಷ್ಟಿಯಿಂದ ನೋಡಿ ಅದಕ್ಕೆ ಹಸ್ತವನ್ನು ಸ್ಪರ್ಶಿಸಿ ಆಶೀರ್ವಾದವೆಂದು ಕೊಡುವ ಸಮಯದಲ್ಲಿ ಮಾಂಸವು ಹೋಗಿ ಗುಲಾಬಿಹೂವುಗಳಾಗಿದ್ದವು. ಇದನ್ನು ರಾಜನು ನೋಡಿ ಆಶ್ಚರ್ಯಭರಿತನಾಗಿ ಅಸಾಧಾರಣಭಕ್ತಿಯಿಂದ ಆ ಗುರುವಿಗೆ ಭವ್ಯವಾದ ಮಠವನ್ನೂ ವೀರಭದ್ರದೇವಾಲಯವನ್ನೂ ಕಟ್ಟಿಸಿ ಪಟ್ಟಣವನ್ನು ನಿರ್ಮಿಸಿದನು. ಗುರುಗಳ ಮಠಕ್ಕೆ ಅನೇಕ ಜಹಗೀರುಗಳನ್ನೂ ರಾಜಗೌರವವನ್ನೂ ಸಮರ್ಪಿಸಿದನು. ಈ ವಿಷಯವು ಸ್ಥಲಪುರಾಣದಿಂದ ತಿಳಿದುಬರುವದು. ಗುರುಮಹಿಮೆಯು ಅಸಾಧಾರಣವಾದುದು. ಗುರುಮಹಿಮೆಯು ಗುರುಭಕ್ತರಿಗೆ ಪ್ರತ್ಯಕ್ಷ ಪ್ರಮಾಣ! ಗುರುನಿಂದಕರಿಗೆ ಮಾತ್ರ ಬಹು ಹೈರಾಣ!

ಕಾರಣವಿಲ್ಲದೆ ಕಾರ್ಯೋತ್ಪತ್ತಿಯಾಗುವದಿಲ್ಲವೆಂಬುದು ಸರ್ವಜನ ಪ್ರಸಿದ್ಧವಾದುದಷ್ಟೆ! ಈ ಅಖಂಡ ಭೂಮಂಡಲ ರೂಪಕಾರ್ಯಕ್ಕೆ ತ್ರಿನೇತ್ರಧಾರಿಯಾದ ಪರಮಾತ್ಮನೇ ಮೂಲಕಾರಣನು. ಪರಮಾತ್ಮನ ಮೂರು ಕಣ್ಣುಗಳಿಂದಲೇ ಜಗತ್ತು ಪ್ರಕಾಶಮಯವಾಗಿರುವದು. ಮತದ ಪ್ರಕಾಶಕ್ಕಾದರೂ ಮೂರು ಕಣ್ಣುಗಳ ಬೇಕೇಬೇಕು. ಸದ್ಯಃ ಖಿಲವಾಗುತ್ತಿದ್ದ ವೀರಶೈವಮತದ ಉದ್ಧಾರಕ್ಕಾಗಿ ಪರಮೇಶ್ವರನು ತನ್ನ ತ್ರಿನೇತ್ರರೂಪಿಗಳಾದ ಮೂರುಜನ ಮಹಾಪುರುಷರನ್ನು ಅವತಾರಮಾಡಿಸಿದ್ದಾನೆ. ಆ ಮೂವರು ಯಾರೆಂದರೆ—

(೧) ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು
ಸಾಗನೂರು ಬೃಹನ್ಮಠ.

(೨) ಬಾಲತಪಸ್ವಿ ಶ್ರೀ॥ ಷ॥ ಬ್ರ॥ ಚನ್ನವೀರ
ಶಿವಾಚಾರ್ಯರವರು ಹೋಟಗಿ

(೩) ಪಂ॥ ಶ್ರೀ ವೀರಭದ್ರಶಾಸ್ತ್ರಿಗಳು ಚಿದರೆಮಠ.

೧ ನೆಯ ಕಣ್ಣು ಅಥವಾ ಗುರು
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು

ಈ ಮಹನೀಯರು ಅನೇಕ ಗ್ರಂಥಗಳನ್ನು ರಚಿಸಿಯೂ ಮುದ್ರಿಸಿಯೂ ಲೋಕಕ್ಕೆ ಮಹೋಪಕಾರ ಮಾಡಿದ್ದಾರೆ. ಸದರಿ ಶ್ರೀಗಳವರ ವರ್ಣನೆಯು ಅವರ ಜೀವನಚರಿತ್ರದಲ್ಲಿಯೂ ಅನೇಕ ಪತ್ರಿಕೆಗಳಲ್ಲಿಯೂ ಪ್ರಸಿದ್ಧವೇ ಆಗಿದೆ. ಸದ್ಗುರುವಿನ ಕೃಪಾಕಟಾಕ್ಷವು ಸದರಿ ಪಂಡಿತರ ಹೃದಯಭೂಮಿಯಲ್ಲಿ ಬೀಜರೂಪದಿಂದ ಬಿದ್ದು ಬೆಳೆದದ್ದರಿಂದ ಇಡೀ ವೀರಶೈವ ಸಮಾಜವೇ ಅದರ ಫಲವನ್ನು ಅನುಭೋಗಿಸಬೇಕಾಯಿತು. ಕುರಿಗಳಂತೆ ಬಾಳುತ್ತಿದ್ದ ನಮಗೆ ನಿಜಸ್ವರೂಪವನ್ನು ತೋರಿಸಿ ನಿಜಾನಂದವನ್ನುಂಟುಮಾಡಿದವರು ಯಾರು? ಇವರೇ ಅಲ್ಲವೇ? ಈ ಮಹಾಮತದ ವೈಭವವು ದಶದಿಕ್ಕುಗಳಲ್ಲಿ ಹರಡುವಂತೆ ಮಾಡಿದವರು ಯಾರು? ಈ ಮಹನೀಯರೇ ಅಲ್ಲವೇ? ಪಂಚಪೀಠಗಳ ಪ್ರಕಾಶವು ಜಗತ್ತಿನಲ್ಲಿ ಹಬ್ಬಲಿಕ್ಕೆ ಕಾರಣರಾರು? ಇವರೇ ಅಲ್ಲವೇ? ಗುರುವರ್ಗವು ಚೇತರಿಸಿಗೊಂಡುದಕ್ಕೆ ಕಾರಣರಾರು? ಇವರೇ ಅಲ್ಲವೇ? ಒಟ್ಟಿಗೆ ಈ ಮಹನೀಯರಿಂದ ನಮ್ಮ ಮತಕ್ಕೆ ಅಸಾಧಾರಣವಾದ ಉಪಕಾರವಾಗಿರುವುದು

೨ ನೆಯ ಕಣ್ಣು ಅಥವಾ ಲಿಂಗ
ಶ್ರೀ॥ ಷ॥ ಬ್ರ॥ ಹೋಟಗಿ ಶ್ರೀಗಳವರವರು

ಈ ಮಹನೀಯರು ನಿಜ ವೈರಾಗ್ಯಶಾಲಿಗಳಾಗಿದ್ದು ಜ್ಞಾನಿಗಳಾಗಿರುವರು. ಸದಾ ಶಿವಪೂಜಾಲೋಲರಾಗಿರುವರು. ಇವರ ಅವತಾರದಿಂದ ಮಹಾರಾಷ್ಟ್ರದೇಶದ ಉದ್ಧಾರವಾಯಿತು. ಅಜ್ಞಾನಾಂಧಕಾರದಲ್ಲಿ ಮುಳುಗಿದ್ದವರೆಲ್ಲರನ್ನೂ ಎಚ್ಚರಗೊಳಿಸಿ ಗುರುತತ್ವವನ್ನು ಸರ್ವತ್ರ ಹಬ್ಬಿಸಿದರು. ಮಹಾರಾಷ್ಟ್ರದೇಶದಲ್ಲಿ ಆಚಾರ್ಯರ ವಿಜಯಧ್ವಜವು ಹಾರಾಡುವಂತೆ ಮಾಡಿದರು. ಯಾವಾಗಲೂ ಮತಾಭಿವೃದ್ಧಿಯನ್ನೇ ಕೋರುತ್ತಿರುವರು. ಮುಖ್ಯವಾಗಿ ಗುರುವರ್ಗವೂ ಭಕ್ತವರ್ಗವೂ ಸುಧಾರಿಸಲೆಂಬುದೇ ಇವರ ಮುಖ್ಯ ಗುರಿ! ಈ ಗುರಿಯನ್ನೇ ಸದಾ ಸಾಧಿಸುತ್ತಿರುವರು. ಸುಖದುಃಖಗಳನ್ನು ಲೆಕ್ಕಿಸದೆ ಕೆಲಸಮಾಡುತ್ತಿರುವರು. ಈ ಮಹನೀಯರ ಪ್ರಭಾವದಿಂದ ಮಹಾರಾಷ್ಟ್ರದೇಶದಲ್ಲಿಯೂ ನಿಜಾಂರಾಜ್ಯದಲ್ಲಿಯೂ ಅದ್ಭುತ ಜಾಗೃತಿಯಾಗಹತ್ತಿರುವುದು. ನಮ್ಮ ಪುಣ್ಯೋದಯವಲ್ಲದೆ ಬೇರೆಯಲ್ಲ

೩ ನೆಯ ಕಣ್ಣು ಅಥವಾ ಜಂಗಮ
ಪಂ॥ ವೀರಭದ್ರಶಾಸ್ತ್ರಿಗಳವರು

ಈ ಮಹನೀಯರು ತಮ್ಮ ಹೆಸರಿಗೆ ತಕ್ಕಂತೆ ವೀರಭದ್ರಾಂಶಸಂಭೂತರೆಂದೇ ಹೇಳಬೇಕಾಗಿದೆ. ಇವರು ಅಖಂಡ ಧೈರ್ಯಶಾಲಿಗಳಾಗಿದ್ದು ವೀರಭದ್ರನಂತೆ ದುರಾಚಾರಿಗಳನ್ನು ಖಂಡಿಸುತ್ತಿರುವರು. ವರ್ಣಾಶ್ರಮ ವಿರೋಧಿಗಳಾದ ಬೋಳಪಂಥಿಗಳನ್ನು ಬಗ್ಗುಬಡೆಯುತ್ತಿರುವರು. ಆಂಧ್ರದೇಶದಲ್ಲಿ ಅದ್ಭುತ ಜಾಗೃತಿಯನ್ನುಂಟುಮಾಡುತ್ತಿರುವರು. ಮತಸುಧಾರಣೆಗಾಗಿ ಮಾಸ ಪತ್ರಿಕೆಯನ್ನು ಹೊರಡಿಸುತ್ತಿರುವರು. ಅನೇಕ ಪದವೀಧರರಾಗಿರುವರು. ಎಲ್ಲಾ ಭಾಷೆಗಳಲ್ಲಿಯೂ ಅಪ್ರತಿಹತವಾಗಿ ಭಾಷಣಗಳನ್ನು ಮಾಡುತ್ತಾ ಜನಾಂಗಕ್ಕೆ ಮಹೋಪಕಾರವಮಾಡುತ್ತಿರುವರು. ಸದ್ಯಃ ನಮ್ಮ ಮತದ ಉದ್ಧಾರಕ್ಕಾಗಿ ಪರಮೇಶ್ವರನು ಗುರು ಲಿಂಗ ಜಂಗಮರೂಪಿಗಳಾದ ಈ ಮೂರುಕಣ್ಣುಗಳನ್ನು ಕೊಟ್ಟಿರುವನು. ಈ ಮೂರು ಕಣ್ಣುಗಳಿಂದಲೇ ನಮ್ಮ ಮತದ ಉದ್ಧಾರವಾಗಬೇಕಾಗಿದೆ. ಇದೇ ತ್ರಿನೇತ್ರ ಪ್ರಕಾಶ! ಈ ಪ್ರಕಾಶವೇ ಇಂದು ಜಗತ್ತಿನಲ್ಲಿ ವ್ಯಾಪಿಸಿರುವುದು. ಈ ಪ್ರಕಾಶವು ಪರಮೇಶ್ವರನಿಂದ ಶತಗುಣಿತವಾಗಲೆಂದು ಆ ಜಗನ್ನಿಯಾಮಕನನ್ನು ಅನನ್ಯಭಕ್ತಿ ಭಾವದಿಂದ ಪ್ರಾರ್ಥಿಸುವ,

ಸಿದ್ಧರಾಮಯ್ಯ ಭೃಂಗಿ ಹುಮನಾಬಾದ.

॥ ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ॥

ಸಮಸ್ತ ಕಾರ್ಯಸಿದ್ಧಿಗೆ ಶಿವಾನುಗ್ರಹವೇ ಮೂ

ಲೇ—ಶ್ರೀ ಪಟ್ಟದಸ್ವಾಮಿಗಳು ಹಿರೇಮಠ ಕೊಣ್ಣೂರು

“ಮುಕ್ತಿಮೂಲಂ ಗುರೋಃ ಕೃಪಾ” ಎಂಬ ಶಾಸ್ತ್ರೋಕ್ತಿಯಂತೆ ಮುಕ್ತಿಗೆ ಗುರುಕೃಪೆಯು ಹೇಗೆ ಮುಖ್ಯವೋ ಹಾಗೆಯೇ ಸಕಲ ಕಾರ್ಯಸಿದ್ಧಿಗೂ ಶಿವಾನುಗ್ರಹವೇ ಮುಖ್ಯವು. ಶಿವಾನುಗ್ರಹದಿಂದಲೇ ಬ್ರಹ್ಮನು ಸೃಷ್ಟಿಸುವನು. ವಿಷ್ಣುವು ರಕ್ಷಿಸುವನು. ರುದ್ರನು ಸಂಹರಿಸುವನು. ಸೂರ್ಯ ಚಂದ್ರರು ಪ್ರಕಾಶವನ್ನು ಕೊಡುವರು. ಮೇಘವು ಮಳೆಯನ್ನು ಸುರಿಸುವದು. ವಾಯು ಬೀಸುವುದು. ಮಾನವನು ತ್ರಿಕಾಲ ಜ್ಞಾನಿಯಾಗುವನು. ಆಕಾಶದಲ್ಲಿ ಸಂಚರಿಸುವನು. ಐಶ್ವರ್ಯವುಳ್ಳವನಾಗುವನು. ಅಷ್ಟಾಂಗ ಯೋಗವನ್ನು ಪಡೆಯುವನು. ಲೋಕೋದ್ಧಾರಕನಾಗುವನು. ಆಯುಷ್ಯವುಳ್ಳವನಾಗುವನು. ಆರೋಗ್ಯವಂತನಾಗುವನು. ರಾಜನಾಗುವನು. ಧನಶೀಲನಾಗುವನು. ಇವೇ ಮೊದಲಾದ ಅನಂತ ಕಾರ್ಯಗಳು ಸಿದ್ಧಿಸುವುವು. ಶಿವಾನುಗ್ರಹವೊಂದಿಲ್ಲದಿದ್ದರೆ ‘ಕೈ ಬಂದ ತುತ್ತು ಬಾಯಿಗೆ ಬರಲಿಲ್ಲ’ ಎಂಬ ಗಾದೆಯಂ ಯಾವ ಕೆಲಸವೂ ಸಾಧ್ಯವಾಗಲಾರದು. “ತೇನ ವಿನಾ ತೃಣಮಪಿ ನ ಚಲತಿ” ಎಂಬ ಆರ್ಯೋಕ್ತಿಯಂ ದೇವರ ಸಂಕಲ್ಪವಿಲ್ಲದೆ ಒಂದು ಹುಲ್ಲುಕಡ್ಡಿಯೂ ಕೂ ಅಲ್ಲಾಡುವುದಿಲ್ಲವೆಂದಮೇಲೆ ಮಹತ್ತರವಾದ ಸ್ವಗ ಸೌಖ್ಯಾದಿಗಳು ಪ್ರಾಪ್ತವಾಗುವ ಬಗೆಯೆಂತು? ಆದದರಿಂದ ಸರ್ವಕ್ಕೂ ಶಿವಾನುಗ್ರಹವು ಮುಖ್ಯವಾಗಿ ಬೇಕು

ಅನೇಕಜನ್ಮಸಿದ್ಧಾನಾಂ ಶ್ರೌತಸ್ಮಾರ್ತಾನುವರ್ತಿನಾಂ ।
ನರಾಣಾಂ ಕ್ಷೀಣಪಾಪಾನಾಂ ಶಿವೇ ಭಕ್ತಿಃ ಪ್ರಜಾಯತೇ ॥

ಅನೇಕ ಜನ್ಮಗಳಲ್ಲಿ ಶ್ರೌತ-ಸ್ಮಾರ್ತ ಕರ್ಮಗಳನ ಚರಿಸಿ, ಚಿತ್ತಶುದ್ಧಿಯನ್ನು ಪಡೆದು ಪಾಪ ರಹಿತರಾದರಿಗೆ, ಶಿವನಲ್ಲಿ ಭಕ್ತಿಹುಟ್ಟುವದೆಂದು ಶಾಸ್ತ್ರವು ಸಾತ್ತದೆ. ಯಾರಲ್ಲಿ ಭಕ್ತಿಯುಂಟೋ ಅವರಿಗೆ ಮಾತ್ರ ಶಿವಾನುಗ್ರಹವುಂಟು. ಶಿವಾನುಗ್ರಹವು ಶಿವನ ಪೂಜೆಯಿಂದಲೂ, ಧ್ಯಾನದಿಂದಲೂ, ಆಗುವದಲ್ಲದೆ ಅಧಿಕಾ ಬಲದಿಂದಲೂ, ಐಶ್ವರ್ಯಬಲದಿಂದಲೂ, ವಿದ್ಯೆಯಬದಿಂದಲೂ ಆಗಲಾರದು. ಲೋಕದಲ್ಲಿ ಸಾಧಾರ ಒಬ್ಬ ರಾಜನ ಪ್ರೇಮವನ್ನು ಸಂಪಾದಿಸಬೇಕಾದ ಅವನ ಆಜ್ಞೆಯಂತೆ ನಡೆಯಬೇಕು. ಅಂದರೆ ಅವ ಪ್ರೇಮವು ನಮ್ಮ ಮೇಲೆ ಆಗಿ, ಬೇಕಾದುದನ್ನು ಸಂಪಾದಿಸಬಹುದು. ಆದರೆ ರಾಜನ ಆಜ್ಞೆಗೆ ವಿರುದ್ಧವಾ ವರ್ತಿಸಿದರೆ, ಅನೇಕ ವಿಧವಾದ ಕಷ್ಟ ನಷ್ಟಗಳನ ಹೊಂದಿ ಸಂಕಟಕ್ಕೀಡಾಗಬೇಕಾಗುತ್ತದೆ. ಇದರಂತೆಯೆ ನಾವು ಚತುರ್ದಶಭುವನಾಧಿಪತಿಯಾದ ಭಗವಂತ ಆಜ್ಞಾರೂಪ ಶಾಸ್ತ್ರದಂತೆ ನಡೆಯುತ್ತ ಭಕ್ತಿಯಿಂ ಧ್ಯಾನ ಪೂಜಾದಿಗಳನ್ನು ಮಾಡುತ್ತ ಹೋದರೆ, ಆತ ಕೃಪೆಯಾಗಿ ಬೇಕಾದ ಕಾರ್ಯವು ಸಾಧ್ಯವಾಗುವದ ಇದಕ್ಕೆ ವಿರುದ್ಧವಾಗಿ ವರ್ತಿಸಿದರೆ ಘೋರವಾದ ನರ ಯಾತನೆಯನ್ನು ಅನುಭವಿಸಿ, ಹೀನ ಜನ್ಮಗಳನ್ನು ಪ ಯಬೇಕಾಗುವದು. ಇದೇ ವಿಷಯವು

ರಾಜಾಜ್ಞಾ ಭಂಗಕೃನ್ಮರ್ತ್ಯಾನಾಂ ಯಥಾದಂಡೋಭವಿಷ್ಯತಿ ।
ಶಿವಾಜ್ಞಾ ಭಂಗಕೃನ್ಮರ್ತ್ಯಾನಾಂ ದಂಡೋಹಿನರಕಸ್ತಥಾ ॥

ಲೋಕದಲ್ಲಿ ರಾಜಾಜ್ಞೆಯನ್ನು ಮೀರಿ ನಡೆಯುವರು ಹೇಗೆ ಶಿಕ್ಷೆಗೆ ಪಾತ್ರರಾಗುವರೋ ಹಾಗೆಯೆ ಶಿವಾಜ್ಞೆಯನ್ನು ಮೀರಿ ನಡೆಯುವವರು ಘೋರವಾ ನರಕ ಯಾತನೆಯನ್ನು ಅನುಭವಿಸುವರೆಂದು ಶಿವ ಸಂಹಿತೆಯು ಸಾರಿ ಸಾರಿ ಹೇಳುತ್ತದೆ.

ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ ।
ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂಗತಿಂ ॥

ಯಾವನು ಶಾಸ್ತ್ರಕ್ರಮವನ್ನು ಅತಿಕ್ರಮಿಸಿ ತ ಇಚ್ಛಾನುಸಾರವಾಗಿ ನಡೆಯುವನೋ ಅವನು ಯಾ ಸಿದ್ಧಿಯನ್ನೂ, ಯಾವ ಸುಖವನ್ನೂ, ಯಾವ ಸದ್ಗ ಯನ್ನೂ, ಹೊಂದಲಾರನೆಂದು ಗೀತೆಯು ಬೋಧಿತ್ತದೆ

ನಮ್ಮ ಯಾವದಾದರೊಂದು ಕಾರ್ಯವು ಜಯಿಬೇಕಾದರೆ, ಜನರ ಸಂಖ್ಯೆಯು ವಿಶೇಷವಾಗಿ

ಅಂದರೆ, ನಮ್ಮ ನಮ್ಮ ಕೆಲಸವು ಸಾಧ್ಯವಾಗುವುದು ಸ್ವಲ್ಪ ಜನರಿಂದ ಸಾಧ್ಯವಾಗಲಾರದೆಂದು ಈಗಿನ ಕೆಲವು ನೂತನ ಸುಧಾರಕರು ವಾದಿಸುವರು. ಇದು ನಿಜ. ಆದರೆ ಸತ್ವಹೀನರಾದ ಪಾಮರರು ಅಸಂಖ್ಯಾತ ಜನರಿದ್ದರೂ, ಅವರಿಂದ ಯಾವ ಕಾರ್ಯವೂ ಸಾಧ್ಯವಾಗಲಾರದು. ಸತ್ವಶಾಲಿಗಳಾದ ಬುದ್ಧಿವಂತರು ಸ್ವಲ್ಪ ಜನರಿದ್ದರೂ ಅವರಿಂದ ಅಸಾಧ್ಯ ಕೆಲಸವಾದರೂ ಆಗುತ್ತದೆ. ಇದಕ್ಕೆ ದೃಷ್ಟಾಂತ ನೀಚರಾದ ಕೌರವರು ವಿಶೇಷ ಜನರಿದ್ದರೂ, ಯುದ್ಧದಲ್ಲಿ ಜಯಶೀಲರಾಗಲಿಲ್ಲ. ಧರ್ಮಪರಾಯಣರಾದ ಪಾಂಡವರು ಸ್ವಲ್ಪಜನರಿದ್ದರೂ ಜಯಿಸಿದರು.

ವರಮೇಕೋಗುಣೀಪುತ್ರೋ ನಚಮೂರ್ಖಶತಾನ್ಯಪಿ ;
ಏಕಶ್ಚಂದ್ರಸ್ತಮೋಹಂತಿ ನಚ ತಾರಾಗಣೋಪಿಚ |

ದಡ್ಡಮಕ್ಕಳು ನೂರು ಮಂದಿ ಯಿದ್ದರೂ ಅವರಿಂದ ವಂಶೋದ್ಧಾರವಾಗಲಾರದು. ಗುಣವಂತನಾದ ಒಬ್ಬ ಪುತ್ರನಿಂದ ಕುಲೋದ್ಧಾರವಾಗುವುದು. ಇದರಂತೆ ಆಕಾಶದಲ್ಲಿ ಕೋಟಿ ನಕ್ಷತ್ರಗಳಿದ್ದರೂ ಅವುಗಳಿಂದ ಏನೂ ಉಪಯೋಗವಾಗಲಾರದು. ಒಬ್ಬ ಚಂದ್ರನಿಂದ ಇಡೀ ಜಗತ್ತು ಪ್ರಕಾಶಮಯವಾಗುವುದು ಎಂದು ನೀತಿಕಾರನು ಇದೇ ವಿಷಯವನ್ನೇ ಸ್ಪಷ್ಟಪಡಿಸಿದ್ದಾನೆ.

ಈಗ ನಮ್ಮಲ್ಲಿ ಕೆಲವರು ದೇವರನ್ನು ಮರೆತಿದ್ದಾರೆ. ಕೆಲವರು ವಂಚಿಸುತ್ತಾರೆ. ಕೆಲವರು ದ್ವೇಷಿಸುತ್ತಾರೆ. ಆದುದರಿಂದಲೇ ಆತನ ಆಜ್ಞಾರೂಪವಾದ ವೇದಾಗಮಗಳನ್ನೂ, ಅವುಗಳ ಆಧಾರದಿಂದ ಹುಟ್ಟಿದ ವರ್ಣಾಶ್ರಮ ಧರ್ಮಗಳನ್ನೂ, ನಿಂದಿಸುತ್ತಾರೆ. ಈ ಜನರು ಯಾವಾಗಲೂ ಸ್ವಕಾರ್ಯ ಧುರಂಧರರಾಗಿ, ಹೊಟ್ಟೆಯನ್ನು ಹೊರೆದುಕೊಳ್ಳುವದರಲ್ಲಿ ನಿರತರಾಗುತ್ತಿರುವುದರಿಂದ ಜಗತ್ತಿನಲ್ಲಿ ಅನಾವೃಷ್ಟಿಯೂ ದುರ್ಭಿಕ್ಷವೂ ಕ್ಷುದ್ರರೋಗೋಪದ್ರವವೂ ಎಡೆಬಿಡದೆ ಹೆಚ್ಚುತ್ತಿವೆ. ಪಾಪಗಳು ಹೆಚ್ಚಿದಹಾಗೆಲ್ಲ ರೋಗಗಳೂ, ಮೋಸಗಾರಿಕೆಯು ಹೆಚ್ಚಿದಹಾಗೆಲ್ಲ ಕೋರ್ಟು ಕಛೇರಿಗಳೂ ಹೆಚ್ಚಿದವು.

ವಾಚಕಮಹಾಶಯರೇ! ನಮ್ಮ ಭರತಖಂಡದ ಕೆಲವು ಜನರು ಯಾವ ಕೆಲಸವನ್ನು ಮಾಡುವುದಕ್ಕೆ ಆರಂಭಿಸಿದರೂ ನಾನು ಮಾಡುತ್ತೇನೆಂಬ ಅಹಂಕಾರವುಳ್ಳವರಾಗಿರುತ್ತಾರಲ್ಲದೆ, ದೇವರನ್ನು ಸ್ಮರಿಸುವದಿಲ್ಲ. ಮಧ್ಯಕಾಲದಲ್ಲಿಯೂ ತಮ್ಮ ಪ್ರಯತ್ನವನ್ನೇ ಪ್ರಶಂಸಿಸುತ್ತಾರಲ್ಲದೆ, ದೇವರ ನಾಮವನ್ನು ಎತ್ತುವದಿಲ್ಲ. ಕೆಲಸವಾಗದಿದ್ದರೆ ಮಾತ್ರ ದೇವರ ಮೇಲೆ ಹಾಕುತ್ತಾರೆ. ನಮಗೆ ಜ್ಞಾನವನ್ನು ಕೊಟ್ಟು ಪಾಪಪುಣ್ಯಾದಿ ಸ್ವರೂಪವನ್ನು ಬೋಧಿಸುವ ವೇದಾಗಮಾದಿಗಳನ್ನು ಅನುಗ್ರಹಿಸಿರುವ ದೇವರನ್ನು ದೂರೀಕರಿಸಿ, ಅಹಂಕಾರದಿಂದ ನಡೆಯುವವರು ಕಡೆಗೆ ಸಂಕಟಕ್ಕೆ ಗುರಿಯಾಗದೆ ಹೋಗುವುದಿಲ್ಲ. ಇಂಥವರಿಗೆ ಇಹಪರದಲ್ಲಿ ಶ್ರೇಯೋಲಾಭವೆಂದಿಗೂ ಆಗುವುದಿಲ್ಲ. ಪರಮಾತ್ಮನಿಂದ ಸೃಷ್ಟಿಸಲ್ಪಟ್ಟಿರುವ ನಾವು ಯಾವ ಕಾರ್ಯವನ್ನು ಮಾಡಬೇಕಾದರೂ, ಆ ಕಾರ್ಯದ ಆದಿಮಧ್ಯಾಂತ್ಯಗಳಲ್ಲಿ ಭಕ್ತಿಪೂರ್ವಕವಾಗಿ ಧ್ಯಾನ ಪೂಜಾದಿಗಳನ್ನು ಮಾಡಬೇಕು. ಆ ಶಿವನನ್ನು ಮರೆತು ಕೆಲಸಮಾಡುವವರು ಕೃತಘ್ನರೆಂದು ಕರೆಯಲ್ಪಡುವರು. ಇನ್ನು ಕೆಲವರು ದೇವರೇ ಗತಿಯೆಂದು ಸಕಲವನ್ನು ದೇವರ ಮೇಲೆ ಹಾಕಿ, ತಾವು ಯಾವ ಪ್ರಯತ್ನವನ್ನೂ ಮಾಡದೆ ಸುಮ್ಮನೆ ಕುಳಿತು ಯಾವ ಫಲವೂ ಆಗದಿದ್ದರೆ, ದೇವರಚಿತ್ತವೆಂದು ಹೇಳುತ್ತಾರೆ. ಇವೆರಡೂ ತಪ್ಪು. ಇದೇ ಅಭಿಪ್ರಾಯವನ್ನು ಕುರಿತು ಭರ್ತೃಹರಿಯು ಹೇಳಿರುವುದೇನೆಂದರೆ—

ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ |
ದೈವಂ ಪ್ರಧಾನಮಿತಿ ಕಾಪುರುಷಾ ವದಂತಿ ||
ದೈವಂ ಭಜಸ್ವ ಕುರು ಪೌರುಷಮಾತ್ಮಶಕ್ತ್ಯಾ |
ಯತ್ನೇ ಕೃತೇ ಯದಿ ನ ಸಿದ್ಧ್ಯತಿ ಕೋತ್ರದೋಷಃ ||

ಅಂದರೆ—ಯಾವುದಾದರೊಂದು ಒಳ್ಳೆಯ ಕಾರ್ಯಕ್ಕೆ ಪ್ರಯತ್ನಿಸಿ, ಬಿಡದೆ ನಡೆಸುವವನೇ ಪುರುಷನೆನಿಸುವನು. ಅವನಿಗೆ ಲಕ್ಷ್ಮಿಯು ಒಲಿಯುತ್ತಾಳೆ. ದೇವರೇ ಮುಖ್ಯವು ಪ್ರಯತ್ನವೇನೂ ಬೇಕಿಲ್ಲವೆಂದು ಹೇಳುವವರು, ಅಶಕ್ತರು. ಹಾಗಾದರೆ ದೇವರನ್ನು ಬಿಡಬೇಕೇ ಅಂದರೆ ದೇವರನ್ನು ಭಕ್ತಿಯಿಂದ ಧ್ಯಾನಿಸುತ್ತ ಪೂಜಿಸುತ್ತ ಕೈಲಾದಮಟ್ಟಿಗೆ ಪ್ರಯತ್ನಮಾಡುತ್ತ ಬಂದರೆ, ಕಾರ್ಯಸಿದ್ಧಿಯಾಗುವದು. ದೇವರಮೇಲೆ ಭಾರವನ್ನು ಹಾಕಿ ಯಾವ ಪ್ರಯತ್ನವನ್ನೂ ಮಾಡದೆ, ಕಾರ್ಯವನ್ನು ಕೆಡಿಸಿಕೊಳ್ಳುವದಕ್ಕಿಂತ ಪ್ರಯತ್ನದಿಂದ ಕಾರ್ಯವನ್ನೂ ದೇವರ ಸಹಾಯವನ್ನೂ ಬೇಡುತ್ತಿರುವುದು ಉತ್ತಮ ಪಕ್ಷವು. ಅಂತಹಸಂದರ್ಭದಲ್ಲಿ ಫಲವಾಗದೆಹೋದರೆ ನಮ್ಮ ತಪ್ಪೇನೂ ಇಲ್ಲ. ಆಗ ದೈವಸಂಕಲ್ಪವೆಂದು ಹೇಳಬಹುದು. ಆದುದರಿಂದ ನಾವು ಯಾವಾಗಲೂ ದೇವರನ್ನು ಮುಂದಿಟ್ಟುಕೊಂಡು ಕಾರ್ಯವನ್ನು ಮಾಡಬೇಕೇಹೊರತು, ಅಹಂಕಾರದಿಂದ ಸ್ವತಂತ್ರರಾಗಿ ಯಾವ ಕೆಲಸವನ್ನೂ ಎಂದೂ ಮಾಡಬಾರದು.

ಶಿವಾನುಗ್ರಹದಿಂದಲೇ ಶಿವನಲ್ಲಿ ಭಕ್ತಿ ಹುಟ್ಟುತ್ತದೆ. ಆ ದೈವಭಕ್ತಿಯಿಂದ ಸಕಲಕಾರ್ಯಗಳೂ ಸಿದ್ಧಿಸುವವು. ಪ್ರಾಚೀನಕಾಲದಲ್ಲಿ ದೈವಭಕ್ತಿಬಲದಿಂದಲೇ ಸಮಸ್ತ ಪುರುಷಾರ್ಥಗಳನ್ನು ಪಡೆದರು. ಶಿವನಲ್ಲಿ ಭಕ್ತಿಯಿಲ್ಲದಿದ್ದರೆ ನಿರಕ್ಷರಿಯು ಉಭಯ ಕವಿತಾವಿಶಾರದನಾಗಿ, ಶ್ರೇಷ್ಠ ಮಹಾಕವಿ ಆಗುತ್ತಿರಲಿಲ್ಲ. ಶಕ್ತಿಯಲ್ಲಿ ಭಕ್ತಿಯಿರದಿದ್ದರೆ ಕುರುಬನು ಕಾಳಿದಾಸನೆಂಬ ಹೆಸರಿನಿಂದ ಪ್ರಸಿದ್ಧ ಮಹಾಕವಿ ಆಗುತ್ತಿರಲಿಲ್ಲ. ಶಿವನಲ್ಲಿ ಭಕ್ತಿಯಿಲ್ಲದಿದ್ದರೆ ಓಹಿಲಯ್ಯನು ಭೂಪಾರ್ತಿಯ ಅಗ್ನಿಯಲ್ಲಿ ಗುಗ್ಗಳಕ್ಕೆ ಬದಲಾಗಿ, ತನ್ನ ದೇಹವನ್ನರ್ಪಿಸಿ ಕೈಲಾಸಕ್ಕೆ ಹೋಗುತ್ತಿರಲಿಲ್ಲ. ಶಿವನಲ್ಲಿ ಭಕ್ತಿಯಿಲ್ಲದಿದ್ದರೆ ಕಣ್ಣಪ್ಪನು ಈಶ್ವರನಿಗೆ ಕಣ್ಣನ್ನರ್ಪಿಸಿ ಗಣಪದವನ್ನು ಹೊಂದುತ್ತಿರಲಿಲ್ಲ. ಶಿವನಲ್ಲಿ ಭಕ್ತಿಯಿಲ್ಲದಿದ್ದರೆ ಹರದತ್ತಾಚಾರ್ಯನು, ಕೆಂಪಗೆ ಕಾದ ಐದು ಮೆಟ್ಟಲುಗಳುಳ್ಳ ಏಣಿಯ ಮೇಲೆ ಹತ್ತುತ್ತಿರಲಿಲ್ಲ. ಹೀಗಿರುವಲ್ಲಿ ಶಿವಾನುಗ್ರಹವೇ ಮನುಷ್ಯನಿಗೆ ಕಾಮಧೇನು ಕಲ್ಪವೃಕ್ಷ ಚಿಂತಾಮಣಿಗಳಂತಿರುವುದು. ಈ ಮಾತಿಗೆ ಎಂದೂ ಚ್ಯುತಿಯಿಲ್ಲ. ರಾಮದಾಸರೂ ಸಹ—

ಸಾಮರ್ಥ್ಯ ಆಹೇ ಚಳವಳೀಚೇ | ಜೋ ಜೋ ಕರೀಲ ತಯಾಚೇ |
ಪರಂತು ಯೇಥೆ ಭಗವಂತಾಚೇ | ಅಧಿಷ್ಠಾನ ಪಾಹಿಜೇ ||

ಅಂದರೆ ಕಟಪಟಿ ಮಾಡುವುದರಲ್ಲಿ ಸಾಮರ್ಥ್ಯವದೆ ಮತ್ತು ಪರಮಾತ್ಮನ ಕೃಪೆಯು ಆವಶ್ಯಬೇಕು ಎಂದು ತಮ್ಮದಾಸಬೋಧದಲ್ಲಿ ಹೇಳಿದ್ದಾರೆ.

ದೇವರಿಲ್ಲವೆಂದು ತಿಳಿದವರೂ, ಅಥವಾ ಉಂಟೆಂದು ಅಲಕ್ಷ್ಯ ಮಾಡುವವರೂ, ಎಷ್ಟೋ ದುಷ್ಕಾರ್ಯಗಳನ್ನು ನಡೆಯಿಸಿ ಐಹಿಕ ಫಲವನ್ನನುಭವಿಸುವರಲ್ಲಾ ಎಂದರೆ— ಆ ದುಷ್ಕಾರ್ಯದಿಂದ ಪರಿಣಾಮದಲ್ಲಿ ಅವರಿಗೆ ನಷ್ಟವೇ ಎಂದು ತಿಳಿಯಬೇಕು. ಈ ವಿಷಯದಲ್ಲಿ ಒಂದು ಇತಿಹಾಸವುಂಟು — ಇಬ್ಬರು ಸ್ನೇಹಿತರು ಅರಣ್ಯದಲ್ಲಿ ಸಂಚಾರಮಾಡುತ್ತಿದ್ದು ಸೂರ್ಯಾಸ್ತಮಯವಾದನಂತರ, ಅದೇ ಅರಣ್ಯದಲ್ಲಿದ್ದ ಒಂದಾನೊಂದು ಜೀರ್ಣದೇವಾಲಯದಲ್ಲಿ ಉಳಿದುಕೊಂಡರು. ಮಧ್ಯರಾತ್ರಿಯಲ್ಲಿ ಒಬ್ಬ ಸ್ನೇಹಿತನು ಮೂತ್ರವಿಸರ್ಜನಾತುರನಾಗಿ ತನ್ನ ಸ್ನೇಹಿತನನ್ನು ಎಚ್ಚರಗೊಳಿಸಿದನು. ಅವನ್ನವನು ಇಲ್ಲಿಯೇ ಮೂತ್ರವಿಸರ್ಜನಾದಿಗಳನ್ನು ಮಾಡೆಂದು ಬಹುವಿಧವಾಗಿ ಹೇಳಿದಾಗ್ಯೂ, ಇದು ದೇವಾಲಯ ಇಲ್ಲಿ ಮೂತ್ರವಿಸರ್ಜನೆ ಮಾಡಬಾರದೆಂದು ಆತನಿಗೆ ಹೇಳಿ, ತಾನೊಬ್ಬನೇ ದೇವಸ್ಥಾನದ ಹೊರಗೆ ಮೂತ್ರವಿಸರ್ಜನೆ ಮಾಡುವುದಕ್ಕೆ ಹೋಗಿ ತಿರುಗಿ ಬರುವ ಸಮಯದಲ್ಲಿ ಒಂದು ಮಹತ್ತರವಾದ ಮುಳ್ಳು ಕಾಲಿಗೆ ಚುಚ್ಚಲು, ಅತ್ಯಂತ ವ್ಯಥೆಗೆ ಗುರಿಯಾಗಿ ದೇವಸ್ಥಾನದಲ್ಲಿದ್ದ ಸ್ನೇಹಿತನಿಗೆ ಅದನ್ನು ಹೇಳಿದನು. ಅದಕ್ಕವನು ನಾನು ಎಷ್ಟೋವಿಧವಾಗಿ ಹೇಳಿದರೂ ನನ್ನ ಮಾತನ್ನು ನಿರಾಕರಿಸಿ ಹೊರಗೆ ಹೋಗಿ ಕಷ್ಟಕ್ಕೆ ಗುರಿಯಾಗಿ ಬಂದೆ. ನಾನು ದೇವಸ್ಥಾನದಲ್ಲಿಯೇ ಮೂತ್ರವಿಸರ್ಜನೆಯನ್ನು ಮಾಡುತ್ತ ಸ್ವಲ್ಪ ನೆಲವನ್ನು ಅಗಿಯಲು ದ್ರವ್ಯ ಸಿಕ್ಕಿತು, ಎಂದು ತೋರಿಸಿ ಆತನನ್ನು ಬಹಳವಾಗಿ ಹಾಸ್ಯಮಾಡುವುದಕ್ಕೆ ಪ್ರಾರಂಭಿಸಿದನು. ಇದನ್ನು ತಿಳಿದು ಪಾರ್ವತೀದೇವಿಯು ಪರಮೇಶ್ವರನನ್ನು ಕುರಿತು "ಇದೇನನ್ಯಾಯ? ಆತನು ದೇವಸ್ಥಾನವೆಂದು ಭಕ್ತಿಯಿಂದ ಹೊರಗೆ ಮೂತ್ರವಿಸರ್ಜನೆ ಮಾಡುವುದಕ್ಕೆ ಹೋದನು, ಅತ್ಯಂತ ಕಷ್ಟಕ್ಕೆ ಗುರಿಯಾದನು, ದೇವಸ್ಥಾನದಲ್ಲಿಯೇ ಮೂತ್ರವಿಸರ್ಜನೆ ಮಾಡಿದವನಿಗೆ ಅಲ್ಲಿ ದ್ರವ್ಯಲಾಭವಾಗಿ ಆತನನ್ನು ಹಾಸ್ಯಮಾಡುತ್ತಿರುವನಲ್ಲಾ?" ಎಂದು ಪ್ರಶ್ನೆಮಾಡಿದಳು. ಅದಕ್ಕೆ ಈಶ್ವರನು ಹಾಗಲ್ಲ. ಆ ಕಷ್ಟಕ್ಕೆ ಗುರಿಯಾದವನಿಗೆ ಈ ದಿವಸ ಮೃತ್ಯುವು ಪ್ರಾಪ್ತವಾಗಬೇಕಾಗಿತ್ತು. ಅದು ತಪ್ಪಿ ಸ್ವಲ್ಪಕಷ್ಟದಲ್ಲಿಯೇ ಪರಿಹಾರವಾಯಿತು. ಆತನಿಗೆ ರಾಜ್ಯಾಧಿಕಾರವಾಗಬೇಕಾಗಿತ್ತು. ಅದು ತಪ್ಪಿ ಸ್ವಲ್ಪ ದ್ರವ್ಯಪ್ರಾಪ್ತಿಯಲ್ಲಿಯೇ ಪೂರ್ತಿಯಾಯಿತು. ಎಂದು ಪರಮೇಶ್ವರನು ಹೇಳಿದನು. ದೈವಭಕ್ತಿಯಿಲ್ಲದ ಮನುಷ್ಯನ ಬಾಳು ಕಣ್ಣಿಲ್ಲದ ಮುಖದಂತೆಯೂ, ಪ್ರಾಣವಿಲ್ಲದ ದೇಹದಂತೆಯೂ, ಗಂಧವಿಲ್ಲದ ಹೂವಿನಂತೆಯೂ ನೀರಿಲ್ಲದ ಸರೋವರದಂತೆಯೂ ನಿಷ್ಪ್ರಯೋಜನವಾದದ್ದು. ಆದ್ದರಿಂದ ಪ್ರತಿಯೊಬ್ಬ ಸ್ತ್ರೀ ಪುರುಷರೂ ಸರ್ವಸಮರ್ಥನಾದ ಭಗವಂತನಲ್ಲಿ ಭಕ್ತಿಯನ್ನಿಟ್ಟು ಧ್ಯಾನ ಪೂಜಾದಿಗಳಿಂದ ಆತನ ಕೃಪೆಯನ್ನು ಪಡೆದು ಇಚ್ಛಿತ ಫಲವನ್ನು ಹೊಂದಬೇಕೆಂದು ಅಪೇಕ್ಷಿಸುತ್ತೇವೆ.

ಶ್ರೀ ಗುರು ಸಪ್ತಾಹ ಭಜನೆಯೂ ರುದ್ರಾಭಿಷೇಕವೂ

ನವಲಗುಂದ ತಾಲ್ಲೂಕು, ನರಗುಂದ ಪೇಠಾ ಪೈಕಿ ಚಿಕ್ಕ ನರಗುಂದ ಗ್ರಾಮದಲ್ಲಿ ಪ್ರತಿವರ್ಷ ಪದ್ಧತಿಯಂತೆ ಈ ವರ್ಷವಾದರೂ ಶ್ರೀ ವೃಷಭೇಶ್ವರನ ಗುಡಿಯಲ್ಲಿ ಮಾರ್ಗಶೀರ್ಷ ಶ|| ೧೩ ಸೋಮವಾರ ಪ್ರಾತಃಕಾಲ ಸಪ್ತಾಹ ಭಜನೆಯನ್ನು ಪ್ರಾರಂಭಮಾಡಿದರು. ಮುಂದೆ ಮಾರ್ಗಶೀರ್ಷ ಶು|| ೧೫ ಬುಧವಾರದಿಂದ ೫ ದಿವಸಗಳವರೆಗೆ ಶ್ರೀ ವೃಷಭೇಶ್ವರನಿಗೆ ಮಹಾರುದ್ರಾಭಿಷೇಕವು ಶ್ರೀ ಕೊಣ್ಣೂರು ಹಿರೇಮಠಾಧ್ಯಕ್ಷರಾದ ಶ್ರೀ ಮರುಗೇಂದ್ರಶಿವಾಚಾರ್ಯಸ್ವಾಮಿಗಳವರ ವೈದಿಕತ್ವದಲ್ಲಿ, ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಮುಂದೆ ಮಾರ್ಗಶೀರ್ಷ ಬ|| ೪ ಸೋಮವಾರ ಪ್ರಾತಃಕಾಲ ಭಜನೆಯು ಸಮಾಪ್ತಿಗೊಂಡಿತು. ಅದೇ ದಿವಸ ಬಹಳ ಜನರಿಗೆ ಅನ್ನಸಂತರ್ಪಣೆಯು ಮಾಡಲ್ಪಟ್ಟಿತು.

ಈ ಮಹಾಕಾರ್ಯವನ್ನು ಈ ಗ್ರಾಮದ ಭಕ್ತಮಾಹೇಶ್ವರರು ವಿಶೇಷ ಭಕ್ತಿಯಿಂದ ನೆರವೇರಿಸಿದರು. ಶ್ರೀ ಜಗದ್ಗುರು ಪಂಚಾಚಾರ್ಯರು ಸರ್ವರಿಗೂ ಆಯುರಾರೋಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನುಂಟುಮಾಡಲೆಂದು ಹಾರೈಸುವ,

ಬಸಪ್ಪ ಸಪ್ಪಣ್ಣ, ಚಿಕ್ಕನರಗುಂದ.

|| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಸೂಕ್ತಿಮಾಲೆ

ಲೇ—ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರು ಹಾಳೆಮಠ
ಮುದೇನೂರು.

೪ ಮನುಷ್ಯನು ಭೂಮಿಯಲ್ಲಿ ಹುಟ್ಟಿ ಬೆಳೆಯುತ್ತಾನೆ. ಅವನಿಗೆ ಆಕಾಶವು ಆವರಣರೂಪವಾಗಿ ಶ್ವಾಸೋಚ್ಛ್ವಾಸ ಮೊದಲಾದ ಜೀವನ ಸಾಧನಗಳನ್ನು ಕೊಡುತ್ತದೆ. ಆದ್ದರಿಂದ ಮನುಷ್ಯನಿಗೆ ಭೂಮಿ ತಾಯಿಯೆಂತಲೂ, ಆಕಾಶವು ತಂದೆಯೆಂತಲೂ ಋಗ್ವೇದವು ಸಾರುತ್ತದೆ. ಆದರೆ ಮನುಷ್ಯನ ಜಡದೇಹಕ್ಕೆ ಜನ್ಮದಾತರೂ ಜಡದೇಹಿಗಳೂ ಆದ ತಾಯಿ ತಂದೆಗಳು ಬೇರೆಯವರಿರುತ್ತಾರೆ. ಅವರ ಯೋಗ್ಯತೆಯು ಭೂಮ್ಯಾಕಾಶಗಳಷ್ಟೇ ಇರುತ್ತದೆಂದು ಋಗ್ವೇದವು ಸಾರುವುದು. ಇದೇ ಅಭಿಪ್ರಾಯದಿಂದಲೇ ಜಗತ್ತಿನಲ್ಲಿ ತಾಯಿ ತಂದೆಗಳಿಗಿಂತ ಹೆಚ್ಚಿನ ದೈವವು ಯಾವುದೂ ಇಲ್ಲೆಂದು ನೀತಿಶಾಸ್ತ್ರವು ಬೋಧಿಸುತ್ತದೆ. ಮನುಷ್ಯನು ಘನತರವಾದ ಏಳಿಗೆಯಂ ಪಡೆದಾಗ್ಯೂ ತಂದೆಯ ಆಜ್ಞೆಯಲ್ಲಿ ವರ್ತಿಸಬೇಕೆಂತಲೂ ಪುತ್ರನಿಗೆ ಪಿತೃ ವಾಕ್ಯವು ಪರಮ ಭೂಷಣವಾಗಿರುವುದೆಂತಲೂ ಶುಕ್ರ ನೀತಿಯು ಸಾರುತ್ತದೆ. ಊರಿಗೆ ಅರಸನಾದರೂ ತಂದೆಗೆ ಮಗನೆಂಬ ಗಾದೆಯೂ ಇರುವುದು. ಮತ್ತು ಮಾತಾ ಪಿತೃ ಮೊದಲಾದ ಕುಲವೃದ್ಧರ ಸೇವೆಯನ್ನು ಭಕ್ತಿಯಿಂದ ಮಾಡುವ ಮನುಷ್ಯನ-ಆಯುಷ್ಯ, ಕೀರ್ತಿ, ವಿದ್ಯೆ, ಬಲ ಈ ನಾಲ್ಕು ಬೆಳೆಯುತ್ತವೆ, ಎಂದು ಮನು ಸ್ಮೃತಿಯು ಸಾರುತ್ತದೆ. ಈ ಪ್ರಕಾರ ಪೂಜ್ಯ ಮಾತಾಪಿತೃಗಳ ಗೌರವವು ಶಾಸ್ತ್ರಮುಖದಿಂದ ನಿರ್ಣಯ

[೬ನೆಯ ಪುಟವನ್ನು ನೋಡಿ.]

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ

ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಪುಣ್ಯದಿನ.

ಪುಷ್ಯ ಬ॥ ೮ ಮಂಗಳವಾರ (೬—೧—೧೯೪೨)

ಯಾವ [illegible] ಮಹಿಮಾಪ್ರಭಾವದಿಂದ ಮತಾಚಾರ್ಯರ ಧರ್ಮಪೀಠಗಳು ಪ್ರಕಾಶಕ್ಕೆ ಬಂದವೋ, ಯಾವ [illegible] ನವಿನ್ಯಾಸದಿಂದ ವೀರಶೈವಮತದ ವೈಭವವು ಕರ್ನಾಟಕ ಆಂಧ್ರ ಮಹಾರಾಷ್ಟ್ರ [illegible] ತೋ, ಯಾವ ಗುರುಪ್ರಭಾಕರನ ದಿವ್ಯಪ್ರಭೆಯಿಂದ ವೀರಶೈವಗುರುವರ್ಗವು ಎಚ್ಚೆತ್ತು ತನ್ನ [illegible] ರನಾಯಿತೋ, ಯಾವ ಪರಶಿವಾವತಾರಿಯ ಪಾದಾರವಿಂದವನ್ನು ಭಕ್ತಸ್ತೋಮವು [illegible] ಸಿದ್ಧಿಗಳನ್ನು ಪಡೆಯಿತೋ, ಯಾವ ಧರ್ಮಾಚಾರ್ಯನ ಧರ್ಮಬೋಧಾಮೃತವನ್ನು [illegible] ನವರು ಸದ್ಧರ್ಮಶೀಲರಾದರೋ, ಯಾವ ಯತಿಪುಂಗವನ ನೈಜವಾದ ವಿರತಿಧರ್ಮವನ್ನು [illegible] ದ ತತಿಯು ಮುಕ್ತಕಂಠದಿಂದ ಸ್ತುತಿಸಿತೋ, ಯಾವ ಕರುಣಾಕರನ ಕರುಣಾಕಟಾಕ್ಷವೀಕ್ಷಣ [illegible] ಬಳಲುತ್ತಿದ್ದ ಭಕ್ತರ ಕಷ್ಟಗಳು ನಷ್ಟವಾದವೋ, ಯಾವ ದಯಾಸಮುದ್ರನ [illegible] ಗಳು ದೂರಸಾದವೋ, ಯಾವ ಪುಣ್ಯಮೂರ್ತಿಯ ಪಾವನ ದರ್ಶನದಿಂದ ಪಾಪಿಗಳು ಪಾಪದಿಂದ [illegible] ಶರೀರಿಗಳಾದರೋ, ಯಾವ ಮಂತ್ರಮೂರ್ತಿಯ ಮಂತ್ರೋಪದೇಶದಿಂದ ಶಿಷ್ಯವೃಂದವು ಮಂತ್ರಮಯ [illegible] ತೋ, ಯಾವ [illegible] ಮನ ಮಹಿಮಾತಿಶಯದಿಂದ ಶ್ರೀಜಗದ್ಗುರು ಪಂಚಾಚಾರ್ಯರ ಪವಿತ್ರಸಿಂಹಾಸನವು ಪ್ರತಿಯೊಬ್ಬರ ಮುಖಮಂಟಪದಲ್ಲಿ ನರ್ತನವಾಡಲು ಪ್ರಾರಂಭಿಸಿತೋ, ಯಾವ ಧರ್ಮಾವತಾರಿಯ ತಪಃಪ್ರಭಾವದಿಂದ ಉಜ್ಜಯಿನೀ ಸದ್ಧರ್ಮಸಿಂಹಾಸನವು ಪ್ರಜ್ವಲಿತವಾಯಿತೋ, ಅಂತಹ ಸಾಕ್ಷಾತ್ಪರಶಿವಾವತಾರಿಗಳಾದ ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಶಿವೈಕ್ಯರಾಗಿ ಪುಷ್ಯ ಬ॥ ೪ ತಿಥಿಗೆ ೬ ವರ್ಷಗಳು ಪೂರ್ತಿಯಾಗುವವು ಆ ದಿವಸ ಭರತಖಂಡದಲ್ಲಿರುವ ಸಮಸ್ತಗುರುಭಕ್ತರೂ ಶ್ರೀಜಗದ್ಗುರುಗಳವರ ಪುಣ್ಯದಿನವನು ವಿಶೇಷಭಕ್ತಿಯಿಂದ ಆಚರಿಸಿ ಧನ್ಯರಾಗಬೇಕೆಂದಾಶಿಸುತ್ತೇವೆ

ಒಳದೇಶದ ವೃತ್ತಾಂತಗಳು.

ಮೈಸೂರು ನಗರದಲ್ಲಿ ತಾ॥ 21 ನೇ ಭಾನುವಾರ ಸಾಯಂಕಾಲ ೭ ಘಂಟೆಯ ಸಮಯಕ್ಕೆ 10 ನಿಮಿಷಗಳ ವರೆಗೆ ರಸ್ತೆಯ ಮತ್ತು ಮನೆಯ ಎಲ್ಲಾ ವಿದ್ಯುದ್ದೀಪಗಳನ್ನೂ ಆರಿಸಿ ಅಂಧಕಾರವನ್ನುಂಟುಮಾಡಲಾ ದ್ದಿತು ವಾಹನಗಳ ಚಲನವಲನಗಳೆಲ್ಲವನ್ನೂ ನಿಲ್ಲಿ ಬಿಟ್ಟಿದ್ದರು ಜನರು ರಸ್ತೆಗಳಲ್ಲಿ ತಂಡೋಪತಂಡವಾ ಸೇರಿ ದೀಪ ಆರಿಸುವ ವ್ಯವಸ್ಥೆಯನ್ನು ಆಶ್ಚರ್ಯದಿಂ ನೋಡುತ್ತಿದ್ದರು

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವ ಜನವರಿ ತಾ॥ ೩ ನೇ ಶನಿವಾರ ತಿರುವಾಂಕೂರಿಗೆ ಮಿತ್ರ ಪರಿವಾರದೊಡನೆ ದಯಮಾಡಿಸುವರೆಂದೂ, ಅಲ್ಲಿಂದ ಮುಂದೆ ರಾಮೇಶ್ವರಕ್ಕೆ ಪ್ರಯಾಣಮಾಡುವರೆಂದೂ, ಇದೇ ತಿಂಗಳು ೧೮ ನೆಯ ತಾರೀಖಿನ ದಿವಸ ಮಹಾಪ್ರಭುಗಳವರು ಕಾಶೀಪಟ್ಟಣಕ್ಕೆ ಪ್ರಯಾಣ ಬೆಳಸುವರೆಂದೂ, ಜನವರಿ ತಾ॥ 21 ರಲ್ಲಿ ಅಲ್ಲಿ ನಡೆಯುವ ಹಿಂದೂ ವಿಶ್ವವಿದ್ಯಾನಿಲಯದ ರಜತೋತ್ಸವ ಸಮಾರಂಭದಲ್ಲಿ ಅವರಿಗೆ ಎಲ್ ಎಲ್ ಡಿ ಪ್ರಶಸ್ತಿಯನ್ನು ಕೊಡಲು ಏರ್ಪಾಡಾಗಿದೆಯೆಂದೂ ತಿಳಿದುಬರುತ್ತದೆ

ಮೈಸೂರು ರಾಜಧಾನಿಯಲ್ಲಿ ಇದೇ ಡಿಸೆಂಬರ್ ತಾ॥ 28, 29 ಮತ್ತು 30 ರಲ್ಲಿ ನಿಖಿಲ ಕರ್ನಾಟಕದ 12 ನೆಯ ಮತ್ತು ಮೈಸೂರು ಸಂಸ್ಥಾನದ ಒಂದನೆಯ ಆಯುರ್ವೇದ ಸಮ್ಮೇಳನಗಳು ನಡೆಯುವವು ಆರೋಗ್ಯ ಶಾಖೆಯ ಸಚಿವರಾದ ಶ್ರೀಮಾನ್ ಎಚ್ ಬಿ ಗುಂಡಪ್ಪಗೌಡರವರು ಈ ಸಮ್ಮೇಳನಗಳ ಪ್ರಾರಂಭೋತ್ಸವವನ್ನು ತಾ॥ 28 ನೇ ಭಾನುವಾರ ಬೆಳಗ್ಗೆ 8 ಘಂಟೆ ರಂಗಾಚಾರ್ಲು ಸ್ಮಾರಕ ಭವನದಲ್ಲಿ ನೆರವೇರಿಸಿದರು. ಅದೇ ದಿನ ಸಂಜೆ 5 45 ಘಂಟೆಗೆ ದಸರಾ ವಸ್ತುಪ್ರದರ್ಶನದ ಕಟ್ಟಡದಲ್ಲಿ ಆಯುರ್ವೇದ ವಸ್ತುಪ್ರದರ್ಶನವು ಪ್ರಾರಂಭವಾಯಿತು

ಈ ತಿಂಗಳು 27ನೆಯ ತಾರೀಖಿನ ದಿವಸ ಕೋಲಾರ ನಗರದಲ್ಲಿರುವ ಶ್ರೀ ಕೃಷ್ಣರಾಜೇಂದ್ರ ಜ್ಯುಬಿಲಿ ಪ ಭವನದಲ್ಲಿ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರ ತೈಲಚಿತ್ರದ ಅನಾವರಣ ಮಹೋತ್ಸವವು ಮೈಸೂರು ಸಂಸ್ಥಾನದ ದಿವಾನ್ ಸಾಹೇಬರವರಿಂದ ವಿಶೇಷ ವೈಭವದೊಡನೆ ನೆರವೇರಿಸಲ್ಪಟ್ಟಿತು ಆ ಸಮಯದಲ್ಲಿ ಕೋಲಾರದ ಪೌರಸಭೆಯ ಪರವಾಗಿ ಅಧ್ಯಕ್ಷರಾದ ಶ್ರೀಮಾನ್ ಜೆ ಬಿ ಮಲ್ಲಾರಾಧ್ಯರವರು ಮಾಡಿದ ಸ್ವಾಗತ ಭಾಷಣವು ಅರ್ಥಗರ್ಭಿತವಾಗಿರುವದರಿಂದ ಅದನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದೇವೆ, ವಾಚಕರು ಅವಲೋಕಿಸಬೇಕು

ಈಗ್ಗೆ 54 ವರುಷಗಳಿಂದ ಮೈಸೂರು ರಾಜಧಾನಿಯಲ್ಲಿ ಪ್ರಕಟವಾಗುತ್ತಿದ್ದ ವೃತ್ತಾಂತ ಪತ್ರಿಕೆ ಯುದ್ಧದ ಗಲಾಟೆಯಿಂದ ಕಾಗದ ಮೊದಲಾದುವುಗಳು ದೊರೆಯದೆ ವಿಶೇಷ ತೊಂದರೆಗೆ ಕಾರಣವಾದುದರಿಂದ ನಿಲ್ಲಿಸಲ್ಪಟ್ಟಿರುವುದೆಂಬ ವಿಷಯವನ್ನು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ ಈ ಪತ್ರಿಕೆಯು ಬಹುಜನ ಪ್ರೇಮಾದರಗಳಿಗೆ ಪಾತ್ರವಾಗಿತ್ತು ಇಂತಹ ಸುಪ್ರಸಿದ್ಧ ಪತ್ರಿಕೆಯು ನಿಂತುಹೋದುದಕ್ಕಾಗಿ ಬಹುಜನರು ಪರಿತಪಿಸುತ್ತಿರುವರು ಈ ಯುದ್ಧದಿಂದ ಪತ್ರಿಕೆಯನ್ನು ನಡೆಸತಕ್ಕವರಿಗೆ ನಾನಾ ವಿಧವಾದ ತೊಂದರೆಗಳು ಪ್ರಾಪ್ತವಾಗುತ್ತಿವೆ ಪತ್ರಿಕಾಕರ್ತರ ತೊಂದರೆಯನ್ನು ಪರಮೇಶ್ವರನೇ ನೀಗುಮಾಡಬೇಕಾಗಿದೆ

ಬೆಂಗಳೂರಿನ ಮೇಲೆ ವಿಮಾನಗಳ ಹಾರಾಟ

ಬೆಂಗಳೂರಿನ ಮೇಲೆ ಇನ್ನು ಕೆಲವು ದಿನಗಳ ವರೆಗೆ ಅನೇಕ ವಿಮಾನಗಳು ಹಾರಾಡಬಹುದೆಂದೂ, ಆ ವಿಮಾನಗಳು ಮಿತ್ರರಾಷ್ಟ್ರದವಾದಕಾರಣ ಜನರು ಭಯಗ್ರಸ್ತರಾಗಬಾರದೆಂದೂ ಬೆಂಗಳೂರು ದಂಡಿನ [illegible]ಕ್ಕರವರು ಒಂದು ಪ್ರಕಟನೆಯನ್ನು ಹೊರಡಿಸಿದ್ದಾರೆ

ಯುದ್ಧವಾರ್ತೆ.

ಚರ್ಚಿಲ್ಲರು ಅಮೇರಿಕೆಗೆ ಹೋಗಿದ್ದಾರೆ

ಬ್ರಿಟಿಷ್ ಮಹಾಪ್ರಧಾನರಾದ ಶ್ರೀ ಚರ್ಚಿಲ್ಲರವರು ದ್ಯ ಅಮೇರಿಕೆಯಲ್ಲಿದ್ದಾರೆ ಈಗ ನಡೆಯುತ್ತಿರುವ ಹಾಯುದ್ಧವನ್ನು ಮುಂದೆ ಯಾವರೀತಿ ನಡೆಯಿಸಬೇ ಂಬ ಅಮೇರಿಕಾರಾಷ್ಟ್ರಾಧ್ಯಕ್ಷರೊಡನೆ ಚರ್ಚಿಸುವುದೇ ವರ ಪ್ರಯಾಣದ ಮುಖ್ಯ ಉದ್ದೇಶವಾಗಿರುವುದು

ಜರ್ಮನಿಗೆ ಶನಿಕಾಟಹತ್ತಿತು

ಇವರೆಗೆ ಜರ್ಮನಿಗೆ ಅಪಜಯವೆಂಬುದೇ ಇದ್ದಿಲ್ಲ ಈಗ್ಗೆ ೧ ತಿಂಗಳಿಂದ ರಶ್ಯದಲ್ಲೂ ಆಫ್ರಿಕದಲ್ಲೂ ಜರ್ಮನಿಗೆ ವಿಶೇಷ ಅಪಜಯವಾಗುತ್ತಿರುವುದನ್ನು ನೋಡಿದರೆ ಇನ್ನು ಮುಂದೆ ಜರ್ಮನಿಗೆ ಶನಿಕಾಟ ಪ್ರಾರಂಭವಾಯಿತೆಂದು ಹೇಳಬಹುದಾಗಿದೆ

ಬ್ರಿಟಿಷರು ಬೆಂಘಾಜಿಯನ್ನು ಹಿಡಿದರು

ಲಿಬ್ಯಾದಲ್ಲಿ ಶತ್ರುಗಳನ್ನು ಹಿಂದಕ್ಕೆ ಹೊಡೆದಟ್ಟುತ್ತಿದ್ದ ಬ್ರಿಟಿಷ್ ಸೈನ್ಯಗಳು 37 ದಿನಗಳು ಹೋರಾಡಿ ಶತ್ರುಗಳನ್ನೋಡಿಸಿ ಬೆಂಗಾಜಿ ನಗರವನ್ನು ಹಿಡಿದವು ಕಳೆದ ಫೆಬ್ರುವರಿಯಲ್ಲಿ ಬ್ರಿಟಿಷರು ಬೆಂಗಾಜಿಯನ್ನು ಹಿಡಿದಿದ್ದು ಎರಡು ತಿಂಗಳ ನಂತರ ಅದನ್ನು ಬಿಟ್ಟು ಬಂದಿದ್ದರು ಹಾಗೆ ಬಿಟ್ಟು ಬರುವಾಗ ಶತ್ರುಗಳಿಗೆ ಉಪಯುಕ್ತವಾಗಬಹುದಾದ ಎಲ್ಲ ಪದಾರ್ಥಗಳನ್ನೂ ನಾಶಮಾಡಿ ಬಂದಿದ್ದರು ಈಗ ಶತ್ರುಗಳು ಬೆಂಗಾಜಿಯನ್ನು ಬಿಟ್ಟೋಡುವಾಗಲೂ ಎಲ್ಲವನ್ನೂ ನಾಶಪಡಿಸಿ ಹೋಗಿದ್ದಾರೆ ನಗರವನ್ನು ಹಿಡಿದ ಕೂಡಲೆ ಅಲ್ಲಿನ ಪ್ರಜೆಗಳಿಗೆ ಆಹಾರವನ್ನು ಒದಗಿಸಲಾಯಿತು ಮತ್ತು ಅಲ್ಲಿನ ಆಡಳಿತಕ್ರಮಕ್ಕಾಗಿ ವ್ಯವಸ್ಥೆನಡೆಯುತ್ತಿದೆ

ರಂಗೂನಿನ ಮೇಲೆ ದಾಳಿ

ಕಳೆದ 22ನೆಯ ತಾರೀಖಿನ ದಿವಸ ಜಪಾನ್ ವಿಮಾನಗಳು ಬರ್ಮಾದ ರಾಜಧಾನಿಯಾದ ರಂಗೂನ್ ನಗರದ ಮೇಲೆ ವಿಮಾನ ದಾಳಿ ನಡೆಸಿ ಬಾಂಬುಗಳನ್ನು ಸುರಿಸಿದವು ಅನೇಕ ಕಡೆ ಬೆಂಕಿ ಹತ್ತಿತು ನಾಲ್ಕು ಜಪಾನಿ ವಿಮಾನಗಳನ್ನು ಕೆಡವಲಾಯಿತೆಂದು ಹೇಳಲಾಗಿದೆ

ಮನಿಲಾಮುತ್ತಿಗೆಯ ಪ್ರಯತ್ನ.

ಜಪಾನರು ಫಿಲಿಪೈನ್ ರಾಜಧಾನಿಯಾದ ಮನಿಲಾ ನಗರದ ಕಡೆಗೆ ಎರಡು ಕಡೆಗಳಿಂದ ನುಗ್ಗುತ್ತಿದ್ದಾರೆ ನಗರಕ್ಕೆ ವಿಪತ್ತೊದಗುವಂತಿದೆ ಅಮೇರಿಕದ ಬಲಯುತ ಟ್ಯಾಂಕ್ ಪಡೆಗಳು ಯುದ್ಧರಂಗಕ್ಕೆ ತೆರಳುತ್ತಿವೆ ರಾಜಧಾನಿಗೊದಗಲಿರುವ ವಿಪತ್ತನ್ನು ಎದುರಿಸಲು ದಂಡನಾಯಕರಾದ ಜ|| ಮೆಕ್ ಆರ್ಥರ್‌ರವರೇ ಸ್ವತಃ ರಣರಂಗಕ್ಕೆ ತೆರಳಿದ್ದಾರೆ

ಮಲಯಾದಲ್ಲಿ ಹೊಸ ವ್ಯೂಹರಚನೆ

ಬ್ರಿಟಿಷ್ ಪಡೆಗಳಿಗೆ ಈಗ ಸಾಕಾದಷ್ಟು ವಿಶ್ರಾಂತಿ ದೊರೆತು ಅವು ಹೊಡೆದಾಡಲು ಸಿದ್ಧವಾಗಿವೆ ಜಪಾನರಿಂದ ಸುತ್ತುವರೆಯಲ್ಪಟ್ಟಿದ್ದ ಅನೇಕ ಪಡೆಗಳು ತಪ್ಪಿಸಿಕೊಂಡು ಬಂದವು ಭಾರತೀಯ ಪಡೆಯೊಂದು ತಮಗಿಂತಲೂ ಅಧಿಕ ಸಂಖ್ಯಾತರಾದ ಜಪಾನರಮೇಲೆ ಬಿದ್ದು ಕೇವಲ ಕತ್ತಿಗಳಿಂದಲೇ ಹೊಡೆದಾಡಿ ದಾರಿಬಿಡಿಸಿಕೊಂಡುಬಂದಿತು ಈಗ ಪೆರಾಕ್ ನದಿಯ ಉದ್ದಕ್ಕೂ ಬ್ರಿಟಿಷರು ಹೊಸ ವ್ಯೂಹವನ್ನು ರಚಿಸಿದ್ದಾರೆ ಈ ಪ್ರದೇಶವು ಗುಡ್ಡಗಾಡುಗಳಿಂದ ಕೂಡಿದ್ದು ಕೆಲವು ಕಡೆ 8400 ಅಡಿಗಳಷ್ಟು ಎತ್ತರವಿದೆ ಬ್ರಿಟಿಷರು ಆಯ ಕಟ್ಟಿನ ಜಾಗಗಳಲ್ಲಿ ಫಿರಂಗಿಗಳನ್ನು ಸ್ಥಾಪಿಸಿ ಶತ್ರುಗಳನ್ನು ತಡೆಯಲು ಸಿದ್ಧಪಡಿಸಿಕೊಂಡಿದ್ದಾರೆ ಇನ್ನುಮುಂದೆ ಜಪಾನರು ಸು[illegible]ಗಿ ಮುನ್ನುಗ್ಗಲು ಸಾಧ್ಯವಿಲ್ಲವೆಂದು ಹೇಳಲ[illegible]ದೆ

ಹೆಂಗಸರುಮಕ್ಕಳು ಕಲ್ಕತ್ತೆಗೆ ಬಂದರು

ಯುದ್ಧದ ಆವರಣದಲ್ಲಿ ಸಿಕ್ಕಿರುವ ರಂಗೂನಿನಿಂದ 100 ಹೆಂಗಸರು, 126 ಮಕ್ಕಳು, ಇತರರು ಸೇರಿ ಒಟ್ಟು 1200 ಜನರು ಒಂದು ಹಡಗಿನಲ್ಲಿ ಕಲ್ಕತ್ತೆಗೆ ಬಂದಿಳಿದರು ಅವರಲ್ಲಿ ಬಹುಮಂದಿ ಬಂಗಾಳಿಗಳೆಂದು ಹೇಳಲಾಗಿದೆ

ಕುಡಿಯುವ ನೀರಿಲ್ಲದೆ ಹಾಂಕಾಂಗ್ ಶರಣಾಗತವಾಯಿತು

ಯುದ್ಧಾರಂಭವಾದಾಗಿನಿಂದ ಇಕ್ಕಟ್ಟಿನಲ್ಲಿ ಸಿಕ್ಕಿದ್ದರೂ ಧೈರ್ಯವಾಗಿ ಜಪಾನರನ್ನು ಎದುರಿಸಿ ಹೋರಾಡಿದ ಹಾಂಕಾಂಗ್ ದ್ವೀಪದ ಬ್ರಿಟಿಷ್ ಸೈನಿಕರು ಕೊನೆಗೆ ಜಪಾನರಿಗೆ ಶರಣಾಗತರಾಗಬೇಕಾಯಿತು ಬ್ರಿಟಿಷ್ ಸ್ವಾಸ್ಥ್ಯದ ಕಡೆಗೆ ಕುಡಿಯುವ ನೀರು ಸರಬರಾಜಾಗುತ್ತಿದ್ದ ಎರಡು ರಿಜರ್‌ವಾಯರುಗಳು ಜಪಾನರಿಂದ ಆಕ್ರಮಿಸಲ್ಪಟ್ಟುದರಿಂದಲೂ, ಅಲ್ಲಿಗೆ ನೀರು ಸರಬರಾಜಾಗುತ್ತಿದ್ದ ಮುಖ್ಯ ಜಲಾಶಯವು ಜಪಾನ್ ವಿಮಾನಗಳ ಬಾಂಬಿನೇಟಿಗೆ ಸಿಕ್ಕಿ ಪುನಃ ಪುನಃ ಒಡೆದು ಹೋದ ಕಾರಣ ನೀರಿನ ಅಭಾವವಾಗಿ ಬ್ರಿಟಿಷ್ ಸೈನಿಕರು ಶಸ್ತ್ರಗಳನ್ನು ಕಳಗಿಡಬೇಕಾಯಿತು ಯುದ್ಧವನ್ನು ನಿಲ್ಲಿಸುವಕಾಲಕ್ಕೆ ಬ್ರಿಟಿಷರಕಡೆ ಒಂದು ದಿವಸಕ್ಕೆ ಸಾಕಾಗುವಷ್ಟು ನೀರುಮಾತ್ರ ಉಳಿದಿತ್ತೆಂದು ಹೇಳಲಾಗಿದೆ

ಯಾತ್ರಿಕರಿಗೆ ಪ್ರಯಾಣಸೌಕರ್ಯವಿಲ್ಲ

ಕುಂಭಮೇಳಕ್ಕಾಗಿ ಅಲಹಾಬಾದಿನ ಸುತ್ತಮುತ್ತಲ ಊರುಗಳಿಂದ ಬರಲಿರುವ ಯಾತ್ರಿಕರಿಗೆ ಜನವರಿ 8 ರಿಂದ ಫಬ್ರವರಿ 4ರ ವರೆಗೆ ರೈಲ್ವೆ ಟಿಕೆಟುಗಳನ್ನು ಮಾರಾಟ ಮಾಡಲಾಗದೆಂದು ಇಂಡಿಯಾ ಸರ್ಕಾರದವರು ಸಲಹೆ ಪಡೆದು ನಿರ್ಧರಿಸಿದ್ದಾರೆ ಭರತ ಖಂಡದ ಬೇರೆ ಬೇರೆ ಕಡೆಗಳ ಹಲವು ಪ್ಯಾಸೆಂಜರ್ ಗಾಡಿಗಳನ್ನು ನಿಲ್ಲಿಸುವ ನಿಶ್ಚಯ ಮಾಡಲಾಗಿದೆ ಸೈನಿಕರ ಓಡಾಟಕ್ಕೂ ಮತ್ತು ಯುದ್ಧ ಭೀತಿಯಿರುವ ಪ್ರದೇಶದಿಂದ ಮುಖ್ಯವಾಗಿ ಕಲಕತ್ತೆಯಿಂದ ಜನರನ್ನು ಬೇರೆಕಡೆಗಳಿಗೆ ಸಾಗಿಸುವ ವಕ್ಕೊಟ್ಟಲುಗಳನ್ನು ಒದಗಿಸ ಬೇಕಾಗಿರುವದರಿಂದ ಈ ಕಾರ್ಯಕ್ರಮವನ್ನು ಕೈಗೊಳ್ಳಲಾಗಿವೆಯೆಂದು ತಿಳಿದು ಬರುತ್ತದೆ

ಹಿಟ್ಲರನೇ ಜರ್ಮನಿಯ ದಂಡನಾಯಕನಾದನು.

ಹೆರ್ ಹಿಟ್ಲರರು ೧೯ ನೆಯ ತಾರೀಖಿನ ದಿವಸ ಜರ್ಮನ್ ಸೇನೆಯ ದಂಡನಾಯಕತ್ವವನ್ನು ವಹಿಸಿ ನಾಜಿ ಸೇನೆಗೆ ಈ ರೀತಿಯಾಗಿ ಪ್ರಾರ್ಥನಮಾಡಿಕೊಂಡಿದ್ದಾರೆ—

ನಮ್ಮ ಜನರ ಸ್ವಾತಂತ್ರ್ಯಕ್ಕಾಗಿ ಏನಾದರೂ ಒಂದು ನೆವದಿಂದ ೨೦—೩೦ ವರ್ಷಗಳಿಗೊಮ್ಮೆ ನಮ್ಮ ಮೇಲೆ ಯಾರೂ ಯುದ್ಧ ಹೂಡದಂತೆ ಮಾಡಲಿಕ್ಕಾಗಿ ನಾವು ಆರಂಭಿಸಿರುವ ಯುದ್ಧವು ಈಗ ಮಹಾಘಟ್ಟವನ್ನು ಮುಟ್ಟಿದೆ ವಿಶ್ವದ ಬಲಯುತ ರಾಷ್ಟ್ರಗಳಲ್ಲಿ ಒಂದಾದ ಜಪಾನು ಹೊಸದಾಗಿ ನಮ್ಮ ಕಡೆಗೆ ಸೇರಿ, ಶತ್ರುಗಳನ್ನು ಪ್ರತಿಭಟಿಸುತ್ತಿದೆ ನಾವೀಗ ವಿಶ್ವಕ್ಕೆ ಬಹಳ ಮುಖ್ಯವೆನಿಸಿದಂತಹ ನಿರ್ಧಾರಕ್ಕೆ ಬರಬೇಕಾಗಿದೆ ಎಲ್ಲ ಕಾಲಗಳಲ್ಲೂ ಬಹಳ ಕ್ರೂರರೆನಿಸಿದ್ದ ಶತ್ರುಗಳನ್ನು ನಾವು ರಷ್ಯದಲ್ಲಿ ಎದುರಿಸಿ, ಇತಿಹಾಸದಲ್ಲಿ ಎಂದೂ ಕಾಣದಂತಹ ಪ್ರಚಂಡ ವಿಜಯವನ್ನು ಗಳಿಸಿದ್ದೇವೆ ಈಗ ಇಷ್ಟಕ್ಕಿದ್ದ ಹಾಗೆಯೇ ಚಳಿಗಾಲವು ತಲೆದೋರಿರುವುದರಿಂದ ನಮ್ಮ ಸೇನೆಗಳನ್ನು ಮುಂದೆ ಬಿಡದೆ ತಡೆಯಬೇಕಾಗಿದೆ ನಾವು ಇದುವರೆಗೆ ಎಷ್ಟು ಪೌರುಷದಿಂದ ಶತ್ರುಭೂಮಿಯನ್ನು ಜಯಿಸಿದ್ದೇವೋ ಅಷ್ಟೇ ಪೌರುಷದಿಂದ ಅದನ್ನೀಗ ರಕ್ಷಿಸಿಕೊಳ್ಳಬೇಕಾಗಿದೆ

ಈಗ ಹೊಸ ಹೊಸ ಸೈನ್ಯಪಡೆಗಳನ್ನು ರೂಪುಗೊಳಿಸುತ್ತಿರಲಾಗಿದೆ ಮುಖ್ಯವಾಗಿ ಉತ್ತಮ ಬಗೆಯ ಶಸ್ತ್ರಾಸ್ತ್ರಗಳನ್ನು ಒದಗಿಸಲಾಗುತ್ತಿದೆ ಕರ್ಕನೀಸ್‌ನಿಂದ ಸ್ಪೇಯಿನ್ ಗಡಿಯವರೆಗೆ ಪಶ್ಚಿಮ ಯೂರೋಪಿನ ರಕ್ಷಣೆಯನ್ನು ಬಲಪಡಿಸುವೆವು ಚಳಿಗಾಲವು ಹೋದ ಕೂಡಲೆ ಪೂರ್ವದಲ್ಲಿ ಮತ್ತೆ ಕದನವನ್ನಾರಂಭಿಸಿ ಶತ್ರುಗಳು ನಿರ್ನಾಮವಾಗುವವರೆಗೆ ಹೊಡೆದಾಡಲು ಈಗಲೇ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿದೆ ಇತರ ರಕ್ಷಣೆಯ ಕಾರ್ಯಕ್ರಮಗಳನ್ನು ಕೂಡ ಕೈಗೊಳ್ಳಲಾಗುತ್ತಿದೆ ಜರ್ಮನಿಯು ಯೂರೋಪಿನಲ್ಲಿಯೂ ಮತ್ತು ಆಫ್ರಿಕಾದಲ್ಲಿಯೂ ತನ್ನ ಮಾರ್ಗ ಸೌಕರ್ಯವನ್ನು ಬಲಪಡಿಸಬೇಕಾಗಿದೆ

ಈ ಕಾರ್ಯಗಳಾಗಬೇಕಾಗಿದ್ದರೆ ನಾಜಿ ಸೈನಿಕರೂ ಮತ್ತು ಪ್ರಜೆಗಳೂ ಏಕೀಭವಿಸಿ, ಅದ್ಭುತ ಪ್ರಯತ್ನ ಮಾಡಬೇಕು ಹೊಡೆದಾಟದ ಭಾರವು ಸೇನೆಯ ಮೇಲೆ ಬಿದ್ದಿದೆ ಆದುದರಿಂದ ಸೇನೆಯ ಪರಮಾಧಿಕಾರವನ್ನು ಮಾತ್ರವಲ್ಲದೆ, ದಂಡನಾಯಕತ್ವವನ್ನೂ ಕೂಡ ನಾನೇ ವಹಿಸಿಕೊಂಡಿರುತ್ತೇನೆ 1914 ರಿಂದ 18ರ ವರೆಗೆ ನಡೆದ ಪ್ರಥಮ ಮಹಾಯುದ್ಧದ ಅರಿವು ನನಗಿದೆ ನಾನು ಸಾಮಾನ್ಯ ಸೈನಿಕನಾಗಿದ್ದುಕೊಂಡು ಸಂಗ್ರಾಮದ ಉಗ್ರ ದುಃಖವನ್ನೆಲ್ಲ ಅನುಭವಿಸಿದ್ದೇನೆ ಎರಡು ಸಾರೆ ನಾನು ಗಾಯಗೊಂಡೆನು ಕಣ್ಣುಗಳನ್ನು ಕಳೆದುಕೊಳ್ಳುವೆನೆಂಬ ಭಯವು ಸಹ ಮೂಡಿತ್ತು ನೀವೀಗ ಅನುಭವಿಸುತ್ತಿರುವ ತೊಂದರೆಗಳನ್ನೆಲ್ಲ ನಾನು ಅನುಭವಿಸಿದ್ದೇನೆ 4 ವರ್ಷಗಳ ಕದನವು ಮುಗಿದ ಮೇಲೆ ಸಹ ಜರ್ಮನರ ಮುಕ್ತಿಯು ಎಂದಾದರೊಂದುದಿನ ಬಂದೇ ತೀರುವುದೆಂದು ನಾನು ಮನಗಂಡೆ ಸಾಮಾನ್ಯ ಯೋಧನಾಗಿದ್ದ ನಾನು 15 ವರ್ಷಗಳ ಕಾಲ ಅವಿಚ್ಛಿನ್ನವಾಗಿ ಕೆಲಸ ಮಾಡಿ, ಜರ್ಮನ್ ಜನಾಂಗವನ್ನು ಮತ್ತೊಮ್ಮೆ ಒಂದುಗೂಡಿಸಿದೆ ವರ್ಸೇಲ್ಸ್‌ನಲ್ಲಾದ ಮರಣದಂಡನೆಯಿಂದ ಜರ್ಮನ್ ಜನಾಂಗವನ್ನು ಬಿಡಿಸಿದೆ

ನನ್ನ ಸೈನಿಕರೇ, ನನ್ನ ಹೃದಯವು ಸಂಪೂರ್ಣವಾಗಿ ನಿಮ್ಮದು ನನ್ನ ಜನರ ಕೀರ್ತಿಗಾಗಿಯೇ ನಾನು ಸೇವೆ ಸಲ್ಲಿಸುತ್ತಿರುವುದು ಶತ್ರುವನ್ನುನಾಶಮಾಡುವುದೊಂದೇ ಈಗ ನನ್ನ ಮನಸ್ಸಿನಲ್ಲಿರುವ ಗುರಿ ನಿಮ್ಮ ಯೋಗಕ್ಷೇಮವನ್ನು ನೋಡಿಕೊಂಡು ನಿಮಗೆ ಸರಿಯಾದ ಮಾರ್ಗವನ್ನು ತೋರಿಸುವ ಕಾರ್ಯದಲ್ಲಿ ಏನುಮಾಡಬಹುದೋ ಅದೆಲ್ಲವನ್ನೂ ನಾನು ನಿಮಗೆ ಮಾಡುತ್ತೇನೆ ನೀವು ನನಗೆ ಮಾಡಬಹುದಾದುದನ್ನೆಲ್ಲ ಬಹಳ ವಿಶ್ವಾಸದಿಂದ ಜರ್ಮನ್ ಜನಾಂಗವು ಮುಕ್ತಿಪಥವನ್ನು ಕಾಣುವವರೆಗೆ ಮಾಡುವಿರೆಂದು ನಾನು ನಂಬಿದ್ದೇನೆ ವೀರಯೋಧರಿಗೆ ವಿಜಯವನ್ನೆಂದಿಗೂ ದೇವರು ದೊರಕಿಸದೆ ಇರಲಾರನು ” ಎಂದು ಹೇಳಿದರು

ಹಿಟ್ಲರರು ದಂಡನಾಯಕತ್ವವನ್ನು ಏಕೆ ವಹಿಸಿದರು ?

ಹೆರ್ ಹಿಟ್ಲರರು ಜರ್ಮನ್ ಸೇನೆಯ ದಂಡನಾಯಕತ್ವವನ್ನು ವಹಿಸಿಕೊಂಡಿದ್ದಕ್ಕೆ ರಷ್ಯಾರಂಗದಲ್ಲಿ ಜರ್ಮನಿಗಾದ ಅಪಜಯವೇ ಮೂಲಕಾರಣವು ಈಗಿನ ದಂಡನಾಯಕರ ಬಗ್ಗೆ ಹಿಟ್ಲರರಿಗೆ ಅತೃಪ್ತಿಯುಂಟಾಗಿರಬೇಕು ಆದುದರಿಂದಲೇ ಹಿಟ್ಲರರು ೩ ೪ ಜನ ದಂಡನಾಯಕರನ್ನು ಮನೆಗೆ ಕಳುಹಿಸಿ ತಾವೇ ಸೇನಾನಾಯಕತ್ವವನ್ನು ವಹಿಸಿರುವರು

ಸ್ವೀಕಾರ.

ಧಾರವಾಡ ಡಿ|| ಶಿಶುವಿನಹಳ್ಳಿ ಹಿರೇಮಠದ ವೇ|| ಬಸವಣ್ಣಯ್ಯನವರ ಪುತ್ರಿ ಚಿ|| ಸೌ|| ದಾಕ್ಷಾಯಣೀದೇವಿಯನ್ನು ವೇ|| ಶಾಂತಯ್ಯನವರು ನವಗಿನಹಾಳ ಹಿರೇಮಠ ಇವರ ಪುತ್ರ ಚಿ|| ರಾ|| ಗವಿಸಿದ್ಧಯ್ಯನಿಗೆ ಕೊಟ್ಟು ತಾ|| ೨೦ ೧೧ ೪೧ ನೆಯ ಶುಕ್ರವಾರ ದಿವಸ ನಿಶ್ಚಯಿಸಿದ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ ಮತ್ತು ವೇ|| ಮಲ್ಲೂರು ಹಿರೇಮಠದ ವೀರಭದ್ರಯ್ಯನವರ ಪುತ್ರ ಚಿ|| ಬಸವಲಿಂಗಯ್ಯನ ಮಾಹೇಶ್ವರ ದೀಕ್ಷೆಯು ತಾ|| ೧೫ ೧೨ ೪೧ ನೆಯ ಸೋಮವಾರ ದಿವಸ ನೆರವೇರಿದ ಸಮಯದಲ್ಲಿ ತೆಗೆಯಿಸಿದ 1 ರೂ ಒಟ್ಟು 3 ರೂಪಾಯಿಗಳು ಹುಬ್ಬಳ್ಳಿ ಹನ್ನೆರಡುಮಠದ ಶ್ರೀ|| ಷ|| ಬ್ರ|| ಚರಮೂರ್ತಿಸ್ವಾಮಿಗಳವರ ದ್ವಾರಾ ತಲ್ಪಿದತ್ತವೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ಸನ್ಮಂಗಲವನ್ನೀಯಲೆಂದು ಹಾರೈಸುತ್ತೇವೆ

[೩ ನೆಯ ಪುಟದಿಂದ ಮುಂದುವರಿದುದು]

ಸಲ್ಪಟ್ಟಿರುವುದು ಇಂತಹ ಮಾತಾಪಿತೃಗಳ ಸೇವೆಯು, ನಿರ್ಜಲ ಪ್ರದೇಶದಲ್ಲಿ ಸುರಿದ ಮಳೆಯಂತೆಯೂ, ಹಸಿದವನಿಗಿಟ್ಟ ಅನ್ನದಂತೆಯೂ ಫಲದಾಯಕವಾಗುವುದರಲ್ಲಿ ಸಂದೇಹವಿಲ್ಲ

೪೧ ರವಿಯಿಂದ ಉತ್ಪನ್ನವಾದ ಮೇಘವು ರವಿಯನ್ನು ಮರೆಮಾಡುವ ಪರಿಯಲ್ಲಿ ಪ್ರಬಲ ಆತ್ಮನೊಳುದಿಸಿದ ಮಾಯೆಯು ಆತ್ಮಸಾಕ್ಷಾತ್ಕಾರಕ್ಕೆ ಪ್ರತಿಬಂಧಕವಾಗಿರುವುದು ಆದರೆ, ಗರುಡನ ಮರಿಯು ಮೊಟ್ಟೆಯಂ ಬಿಟ್ಟು ಗಗನಕ್ಕೆ ಹಾರುವಂತೆ 'ದೇಹವು ನಾನೆಂಬ' ಅಭಿಮಾನವಂ ಬಿಟ್ಟು ಪೃಥಕ್ಕಾಗಿ ನಿಲ್ಲುವವನಾಗು ಆಗ ಅಗ್ನಿಯು ಪ್ರಜ್ವಲವಾಗಲು ಅಗ್ನಿಗೆ ಮುಸುಕಿರ್ದ ಹೊಗೆಯು ಅಡಗುವ ಚಂದದಿಂ ತನ್ನಯ ನಿಜಮನ್ನರಿಯಲು ತನ್ನೊಳಗಾ ಮಾಯೆಯಡಗಿ ನಿರ್ಮಲನಪ್ಪಂ

೪೨ ಪರಶಿವನು ಈ ದುಃಖಮಯವಾದ ಸಂಸಾರವನ್ನು ನಿರ್ಮಿಸಿ, ಅದರಲ್ಲಿ ಪ್ರಾಣಿಗಳ (ನಮ್ಮ)ನ್ನು ಹಾಕಿ, ಅನೇಕ ಸಾಧನಗಳ ಮೂಲಕ ಮುಕ್ತರಾಗಬೇಕೆಂದು ಉಪದೇಶಿಸುತ್ತಿರುವುದೇನಿದು? ಸೃಷ್ಟಿಯನ್ನು ಮಾಡುವ ಕಾರಣವೇನಿತ್ತು? ಇದರಿಂದ ಅವನಿಗೇನು ಉಪಯೋಗ? ಎಂಬ ನಮಗೆ ಸಂದೇಹ ಬರುವುದು ಆದರೆ ನಾವು ಮೊದಲು ಪರಮಾತ್ಮನು ಸೃಷ್ಟಿಯನ್ನೇಕೆ ಮಾಡಿದನು ಎಂದು ವಿಚಾರಮಾಡುವುದು ಯುಕ್ತವೋ ಅಥವಾ ಅದರಿಂದ ಪಾರಾಗುವಂತೆ ಯತ್ನಿಸುವುದು ಯುಕ್ತವೋ ಎಂದು ವಿಚಾರಮಾಡತಕ್ಕದ್ದಾಗಿದೆ ಪರಮಾತ್ಮನು ಸೃಷ್ಟಿಸುವಾಗ 'ಮಾಡಲೇ? ಬೇಡವೇ? ಹೇಗೆ ಮಾಡಲಿ?" ಎಂದು ನಮ್ಮನ್ನು ಕೇಳಿದ್ದರೆ ಆಗ ಮಾತ್ರ ನಾವು ಏಕೆ ಮಾಡುವೆ? ಎಂದಾಗಲೀ ಬರೀ ಸುಖಮಯವಾಗಿ ಮಾಡು" ಎಂದಾಗಲೀ ಕೇಳಬಹುದಾಗಿತ್ತು, ಹೇಳಬಹುದಾಗಿತ್ತು ಆದರೆ ಈಗ ದೇವರು ಸೃಷ್ಟಿಯನ್ನು ಮಾಡುವುದೆಲ್ಲವೂ ತೀರಿಹೋದ ಮೇಲೆ ಮತ್ತು ದುಃಖಕರವಾದ ಆ ಸೃಷ್ಟಿಯಲ್ಲಿ ನಾವು ಸಿಕ್ಕಿ ಹೊರಳಾಡುತ್ತಿರುವಾಗ ಅದರಿಂದ ಪಾರಾಗುವ ಉಪಾಯವನ್ನು ಆಶ್ರಯಿಸುವುದೇ ನಮ್ಮ ಕರ್ತವ್ಯವಾಗಿರುವುದು ಉದಾ—ನೀರಡಿಸಿದವನು ಮುಂದೆ ಹರಿಯುವ ನದಿಯು ಎಲ್ಲಿಂದ ಹುಟ್ಟಿಬಂದಿದೆ" ಎಂಬುದಾಗಿ ವಿವರಿಸುವ ಯತ್ನಕ್ಕೆ ಹೋಗದೆ ಆ ನದಿಯ ಅಮೃತೋಪಮವಾದ ನೀರನ್ನು ಕುಡಿದು ತನ್ನ ದಾಹವನ್ನು ಅಡಗಿಸಿಕೊಳ್ಳುವುದು ನ್ಯಾಯವಲ್ಲವೆ? ಆದ ಪ್ರಯುಕ್ತ "ಇಚ್ಛಾಮಾತ್ರಂ ಪ್ರಭೋಃಸೃಷ್ಟಿಃ" ಎಂಬ ವಾಕ್ಯದಂತೆ ಇದೆಲ್ಲವೂ ಆತನ ಇಚ್ಛಾಮಾತ್ರದಿಂದ ಆಗಿರುವುದು ಅಸ್ವತಂತ್ರರಾದ ನಾವು ರಾಜಾಜ್ಞೆಯಂ ಪ್ರಜೆಗಳಂತೆ ಆತನಾಜ್ಞೆಗೆ ಉಸಿರೆತ್ತದೆ ಶರಣುಹೋಗಿ ದುಃಖನಿವೃತ್ತಿರೂಪವೂ ಸುಖಪ್ರಾಪ್ತಿರೂಪವೂ ಆದ ಪ್ರಯೋಜನವನ್ನು ಹೊಂದುವುದು ನಮ್ಮಗಳ ಕರ್ತವ್ಯವಾಗಿರುವುದು ವಾಚಕರೇ! ಮುಮುಕ್ಷುಗಳಿಗೆ ಇಂತಹ ಪ್ರಶ್ನೋತ್ತರಗಳಿಂದ ಕಿಂಚಿನ್ಮಾತ್ರವೂ ಪ್ರಯೋಜನವಿಲ್ಲ ಅಂಥವರಿಗೆ ಪಿಷ್ಟಪೇಷಣದಂತೆ ವೃಥಾ ಕಾಲಕ್ಷೇಪಮಾತ್ರವಾಗುವುದು ಮುಮುಕ್ಷುತ್ವವು ದೃಢವಾಗಿಲ್ಲದವರಿಗೆ ಮಾತ್ರ ಈ ಮಾತು ರುಚಿಸುವುದು. ಅಷ್ಟ ಸ್ಥಿರವಾದ ಮುಮುಕ್ಷುತ್ವ ಇಲ್ಲದ್ದರಿಂದ ಇಂತಹ ನಾಸ್ತಿಕವಾದವು ತಲೆದೋರುವುದು ಸ್ವಭಾವವು ಆದರೆ ಇಂತಹ ಕುತರ್ಕವನ್ನು ಬಿಟ್ಟು "ಆತ್ಮೋದ್ಧಾರಂ ವಿಜಿಜ್ಞಾಸುಃ ಸದ್ಗುರುಂ ಚಾಶ್ರಯೇತ್ಸದಾ" ಎಂಬ ಮಹಾತ್ಮರ ವಾಕ್ಯದಂತೆ ಪ್ರತಿಯೊಬ್ಬನೂ ಗುರುವಂ ಆಶ್ರಯಿಸಿ ಸಂಸಾರಸಾಗರದಿಂದ ದಾಟಲೆತ್ನಿಸುವುದು ಯುಕ್ತವಾಗಿರುವುದು. ಸದ್ಗುರುಶ್ರವಣವು ಸಾಮಾನ್ಯವಾದುದಲ್ಲ! ಸದ್ಗುರುಶ್ರವಣವು ಜನಗಳು ಸೇತುವಿನಿಂ ಸಮುದ್ರವಂ ದಾಟುವಂತೆ ಸಂಸಾರಸಾಗರದಿಂದ ದಾಟಿಸತಕ್ಕ ಮಹಾನಾವಿಕನಂತಿರುವುದು!!

೪೩. ಪರಹಿತೇಚ್ಛೆಯು ಈಶ್ವರೇಚ್ಛೆಯಾದ್ದರಿಂದ, ಈಶ್ವರೇಚ್ಛೆಯಿಂದ ವಿಷವು ಅಮೃತವಾಗುವಂತೆ ಪರಹಿತಕ್ಕಾಗಿ ಆದ ಆತ್ಮನಿವೇದನವು ಅಮೃತಪ್ರಾಯವಾಗಿ ತಾರಕವಾಗುವುದು. ವಸ್ತುಸ್ಥಿತಿಯು ಹೀಗಿರಲು ಸ್ವಾರ್ಥಕ್ಕಾಗಿ ಪರಹಿತಾರ್ಥಘಾತಮಾಡಲು ಅಮೃತವು ವಿಷವಾಗಿ ನರಕವಾಗುವುದರಲ್ಲಿ ಸಂದೇಹವೇನು?

೪೪ ಅಪರಾಧಿಗಳನ್ನು ದಂಡಿಸದಿದ್ದರೆ ಪಾಪಕ್ಕೆ ಮತ್ತಿಷ್ಟು ಉತ್ತೇಜನ ಕೊಟ್ಟಂತಾಗುವುದು, ದುಷ್ಕರ್ಮಿಗಳು ಸತ್ಕರ್ಮಿಗಳನ್ನು ಪೀಡಿಸುವರು, ಸದ್ಗುಣಗಳು ಮರೆಯಾಗುವುವು ಪಾಪಾಚರಣೆಯ ಸಂಧ್ಯಾತಮೋನಿಕರದಂತೆ ವೃದ್ಧಿಯಾಗಿ, ಅವ್ಯವಸ್ಥೆಯುಂಟಾಗುವುದು, ಅಲ್ಲದೆ ಆ ಅವ್ಯವಸ್ಥೆಯ ಅನಿಷ್ಟ ನಿವೃತ್ತ್ಯರ್ಥವಾಗಿ ಕಟ್ಟಕಡೆಗೆ ಬಹುಜನರ ಪ್ರಾಣಹರಣವಾಗುವುದು ಒಬ್ಬನು ಮಾಡಿದ ಪಾಪದ ಫಲವನ್ನು ಬಹುಜನರು ಅನುಭವಿಸಬೇಕಾಗುವುದು ಎಂದು ನೀತಿಕಾರರೂ ಹೇಳಿರುವರು ದುಷ್ಕರ್ಮಿಗಳನ್ನು ದಂಡಿಸದಿದ್ದರೆ ಜೀವಿತ ವಿತ್ತಗಳ ಪಾಲನೆಗೋಸ್ಕರ ಸರ್ಕಾರಕ್ಕೂ ಪ್ರಜೆಗಳಿಗೂ ನಿರರ್ಥಕವಾದ ಖರ್ಚು ವ್ಯಥೆಗಳುಂಟಾಗುವುವು ಪಾಪವು ಸಾಂಸರ್ಗಿಕದಂತಿರುವುದು ಒಬ್ಬನು ದುಷ್ಕರ್ಮಗಳನ್ನಾಚರಿಸಿದರೂ ಅವನಿಗೆ ತಕ್ಕ ಪ್ರಾಯಶ್ಚಿತ್ತವಾಗದ್ದನ್ನು ಕಂಡು ಅವನಂತೆಯೇ ಮಾಡಬೇಕೆಂಬ ದುರ್ವಿಚಾರವು ಕಾರ್ಯಾಕಾರ್ಯವಿಚಾರರಹಿತರಾದ ಅಲ್ಪಜ್ಞರ ಮನಸ್ಸಿನಲ್ಲಾದರೂ ಹುಟ್ಟುವುದು ಸ್ವಾಭಾವಿಕವು ವಾಚಕರೇ! ಕೆಲವರು ಅನ್ನುವುದೇನೆಂದರೆ ಒಬ್ಬನು ಮತ್ತೊಬ್ಬನಿಗೆ ಕೇಡುಮಾಡಿದರೆ ನಮಗೇನು? ಎಂದು ಅಪಲಪಿಸುತ್ತಾರೆ ನೆರಮನೆಗೆ ಬಿದ್ದ ಕಿಚ್ಚನ್ನು ಅಲ್ಲಿಯೇ ಆರಿಸದಿದ್ದರೆ ತನ್ನ ಮನೆಗೂ, ಹೀಗೆಯೇ ಎಲ್ಲಾ ಮನೆಗಳಿಗೂ ವ್ಯಾಪಿಸಿ ಕೊನೆಗೆ ಊರಿಗೆ ಊರೇ ಸುಟ್ಟು ಸೂರೆಯಾಗುವುದೆಂಬುದನ್ನು ಇವರು ತಿಳಿದುಕೊಳ್ಳಬೇಕು ಈ ದಿವಸ ಒಬ್ಬನಿಗೆ ಕುಟುಕಿದ ಚೇಳು ನಾಳೆ ನಿನಗೂ ಮತ್ತೊಬ್ಬನಿಗೂ ಕುಟುಕದಿರುವುದೇ? ಆದ್ದರಿಂದ ದುರುಳರಿಗೆ ತಕ್ಕ ಪ್ರಾಯಶ್ಚಿತ್ತ ಮಾಡಲೇಬೇಕು ಹಾವು, ಚೇಳು ಇತ್ಯಾದಿಗಳನ್ನು ಕಂಡಕಂಡವರು ಹೊಡೆದುಹಾಕುವುದಿಲ್ಲವೇ? ಅಲ್ಲದೆ ಭಾರತದಲ್ಲಿಯೂ, ಯಾವನು ಅನ್ಯಾಯವನ್ನು ಕಂಡು ಕಿಡಿಕಿಡಿಯಾಗುವನೋ, ಯಾವನು ಅಪಮಾನವನ್ನು ತಾಳಿಕೊಳ್ಳುವುದಿಲ್ಲವೋ ಅವನೇ ಗಂಡಸು ಅತಿರಿಕ್ತವಾದ ತಾಳ್ಮೆಯುಳ್ಳ ಹೇವವಿಲ್ಲದ ವ್ಯಕ್ತಿಯು ನಪುಂಸಕನೆಂದು ಹೇಳಿರುವುದು ಆದ್ದರಿಂದಲೇ 'ಅನ್ಯಾಯ ಸಹನ ಕರ್ನೆವಾಲೆ ಪಾಪಿ ಹೋತಾ ಹೈ" ಎಂದು ನೀತಿಕಾರರು ಹೇಳಿರುವರು (ಸಶೇಷ)

ಸರ್ ಎಂ. ವಿಶ್ವೇಶ್ವರಯ್ಯನವರ ಭಾಷಣ

ಸರ್ ಎಂ ವಿಶ್ವೇಶ್ವರಯ್ಯನವರು ೨೩ ನೆಂ. ತಾರೀಖಿನ ದಿವಸ ಬೆಂಗಳೂರಿನಲ್ಲಿರುವ ಮೈಸೂರು ವಾಣಿಜ್ಯ ಸಂಘದಲ್ಲಿ ಮಾತನಾಡುತ್ತ ಮೈಸೂರಿನ ಕೈಗಾರಿಕೆ ನೀತಿಯನ್ನು ಪ್ರಶಂಸಿಸಿದರು ಭಾರತಕ್ಕೂ ಇಂಗ್ಲೆಂಡ್ ಮುಂತಾದ ದೇಶಗಳಿಗೂ ಕೈಗಾರಿಕೆ ಜೀವನದಲ್ಲಿರುವ ಅಂತರವನ್ನು ಹೇಳಿ ಭಾರತಕ್ಕೆ ಕೈಗಾರಿಕೆಗಳಿಂದಲೇ ಮೋಕ್ಷವೆಂದು ನುಡಿದರು ಇಂದಿನ ಸಂಗ್ರಾಮದ ದೆಸೆಯಿಂದ ದೊಡ್ಡ ದೊಡ್ಡ ಕೈಗಾರಿಕೆಗಳು ಅಭಿವೃದ್ಧಿಗೊಳ್ಳುವುದಕ್ಕೆ ಬಹಳ ಸಹಾಯವಾಗಿದೆಯೆಂದೂ, ಇದಕ್ಕೆ ಕೆನಡಾ ಮತ್ತು ಆಸ್ಟ್ರೇಲಿಯಾ ದೇಶಗಳೇ ನಿದರ್ಶನಗಳೆಂದೂ, ಆದರೆ ಇಂಡಿಯಾ ಸರ್ಕಾರದವರು ಅನುಸರಿಸುತ್ತಿರುವ ನೀತಿಯಿಂದ ಭಾರತದ ಕೈಗಾರಿಕೆಗಳು ಅಭಿವೃದ್ಧಿಗೊಳ್ಳುವುದಕ್ಕೆ ಅಸ್ಪದವಿಲ್ಲದಂತಾಗಿದೆಯೆಂದೂ, ದೇಶದಿಂದ ರಫ್ತಾಗುವ ಮಾಲುಗಳ ಪ್ರಮಾಣವು ಹೆಚ್ಚಬೇಕೆಂದೂ, ಅದಕ್ಕೆ ಇಂಡಿಯಾ ಸರ್ಕಾರದ ನೀತಿಯು ಅಡ್ಡಿಬಂದಿದೆಯೆಂದೂ, ಭಾರತದಲ್ಲಿ ವಿಶೇಷವಾಗಿ ಉತ್ಪತ್ತಿಯಾಗುತ್ತಿರುವ ಸಕ್ಕರೆಯನ್ನು ಹೊರಕ್ಕೆ ಕಳುಹಿಸುವುದಕ್ಕೆ ಅವಕಾಶವಿಲ್ಲವೆಂದೂ, ದೇಶದ ಕೈಗಾರಿಕೆಗಳು ಅಭಿವೃದ್ಧಿಗೊಳ್ಳುವುದಕ್ಕೆ ಸರ್ಕಾರದ ಸಹಾಯ ಪ್ರೋತ್ಸಾಹಗಳು ಬೇಕಾಗುವುವೆಂದೂ, ಆದುದರಿಂದ ಇಂಡಿಯಾ ಸರ್ಕಾರದ ಆರ್ಥಿಕ ನೀತಿಯಲ್ಲಿ ಬದಲಾವಣೆಯಾಗಬೇಕೆಂದೂ ಸೂಚಿಸಿದರು

ಭಾರತದಲ್ಲಿ ಕೈಗಾರಿಕೆಗಳಿಂದ ಪ್ರತಿಯೊಬ್ಬರಿಗೂ ಸರಾಸರಿ ೧೫ ರೂಪಾಯಿಗಳ ವರಮಾನ ಬರುವುದೆಂದೂ, ಆದರೆ ಬ್ರಿಟನ್ನಿನಲ್ಲಿ ೫೦೦ ರೂ ಗಳ ವರಮಾನವಿದೆಯೆಂದೂ, ಅಮೇರಿಕದಲ್ಲಿ ಸರಾಸರಿ ವರಮಾನವು ೪೫೦ ರೂ ಗಳೆಂದೂ, ಅಮೇರಿಕದಲ್ಲಿ ಕೈಗಾರಿಕೆಗಳ ಮೇಲೆ ಹಾಕಿರುವ ಬಂಡವಾಳವು ಸುಮಾರು ೨೫,೦೦೦ ಕೋಟಿ ರೂಪಾಯಿಗಳೆಂದೂ, ಬ್ರಿಟನ್ನಿನಲ್ಲಿ ಹಾಕಿರುವ ಬಂಡವಾಳ ಸುಮಾರು ೬೦೦೦ ಕೋ ರೂಪಾಯಿಗಳೆಂದೂ, ಇಂಡಿಯದಲ್ಲಿ ಹಾಕಿರುವ ಬಂ ವಾಳ ಸುಮಾರು ೬೦೦ ಕೋಟಿ ರೂಪಾಯಿಗಳೆಂ ಈ ಮೂರು ದೇಶಗಳ ಜನಸಂಖ್ಯೆಯನ್ನು ಗಮನಿ ವುದಾದರೆ, ಭಾರತವು ಕೈಗಾರಿಕೆಗಳ ವಿಚಾರದಲ್ಲಿ ಎ ಹಿಂದೆ ಬಿದ್ದಿರುವುದೆಂಬುದು ವ್ಯಕ್ತಪಡುವುದೆಂ ಹೇಳಿದರು ಕಳೆದ ೨೫ ವರ್ಷಗಳಲ್ಲಿ ಜಪಾನ್ ಮ ರಷ್ಯಾ ದೇಶಗಳು ಬಹಳ ಅಭಿವೃದ್ಧಿಗೆ ಬಂದಿವೆಯೆಂ ರಷ್ಯಾ ದೇಶದಲ್ಲಿ ಕೈಗಾರಿಕೆಗಳು ಅತ್ಯುತ್ತಮ ರೀತಿ ಮುಂದುವರಿದಿರುವ ಪ್ರಯುಕ್ತ ಇಂದು ಬಲಯುತವಾ ಜರ್ಮನಿಯನ್ನು ಎದುರಿಸಲು ಸಾಧ್ಯವಾಯಿತೆಂ ಒಂದು ದೇಶದ ಆತ್ಮರಕ್ಷಣೆಗೆ ಕೂಡ ಕೈಗಾರಿಕೆಗಳು ಅ ವೃದ್ಧಿಗೊಳ್ಳುವುದು ಅಗತ್ಯವಾದುದೆಂದೂ ಸೂಚಿಸಿದ

ಮೈಸೂರಿನಲ್ಲಿ ಕೈಗಾರಿಕೆಗಳು ಗಮನಾರ್ಹವಾದ ರೀ ಯಲ್ಲಿ ಮುಂದುವರಿಯುತ್ತಿರುವುದು ಸಂತೋಷಕರವಾ ಸಂಗತಿಯೆಂದು ಸೂಚಿಸುತ್ತ, ಅವುಗಳನ್ನು ಮತ್ತ ಅಭಿವೃದ್ಧಿಗೆ ತರುವುದಕ್ಕೆ ಹಲವು ಸಲಹೆಗಳನ್ನಿತ್ತ

೧ ಕೈಗಾರಿಕೆಗಳಿಗೆ ಬಂಡವಾಳ ಹಾಕುವವ ಅನುಕೂಲಿಸುವಂತೆ 'ಇಂಡಸ್ಟ್ರೀಯಲ' ಏಡ್ ಆಕ್ಟ್ ಎಂಬ ಶಾಸನವನ್ನು ಮಾಡಬೇಕು

೨ ಸಣ್ಣ ಪುಟ್ಟ ಜಮೀನ್ದಾರರು, ಕುಶಲ ಕೆ ಮಾಡುವವರು, ಅಂಗಡಿಗಳನ್ನಿಟ್ಟುಕೊಂಡಿರುವವ ಕೂಲಿಗಾರರು, ಅರೆಬರೆಯಾಗಿ ಕೆಲಸಕಾರ್ಯಗ ನಿರತರಾಗಿರುವವರು ಇವರಿಗೆಲ್ಲ ಸರ್ಕಾರದವರು ಕೈ ಳ್ಳುವ ಪ್ರಯತ್ನಗಳಿಂದ ಉದ್ಯೋಗಗಳು ದೊರೆ ವಂತಾಗಬೇಕು

೩ ಪ್ರಾಥಮಿಕ ಶಿಕ್ಷಣವು ಎಲ್ಲರಿಗೂ ದೊರೆ ಪಾಮರಗಣಕ್ಕೆ ಅಕ್ಷರಜ್ಞಾನ ಬರಬೇಕು

೪ ವಿಶ್ವವಿದ್ಯಾನಿಲಯದಲ್ಲಿ 'ಕಾಮರ್ಸ್' ಡಿಗ್ರಿ ಯನ್ನೇರ್ಪಡಿಸಬೇಕು

೫ ಮೈಸೂರು ಕಾಂಗ್ರೆಸ್ಸಿನವರು ರಚನಾತ್ಮಕ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ತೊಡಗಿ ಹಳ್ಳಿಗಾಡಿನ ಅಭಿವೃದ್ಧಿಗೆ ನೆರವಾಗಬೇಕು ಅವರು ಆ ಮಾಡಿ ತಮ್ಮ ಪ್ರತಿಭೆ, ಜ್ಞಾನ ಸುವ್ಯವಸ್ಥೆ ಇವುಗಳ ಈ ಮಾರ್ಗದಲ್ಲಿ ವಿನಿಯೋಗಿಸುವುದಾದರೆ ನಾನು ರೊಡನೆ ಈ ವಿಚಾರದಲ್ಲಿ ಮಾತನಾಡಲು ಇಷ್ಟಪಡ ತ್ತೇನೆ

೬ ವಿದ್ಯಾವಂತರಾದವರಲ್ಲಿ ನಿರುದ್ಯೋಗಿಗಳಾಗಿರುವವರಿಗೆ ತಕ್ಕ ಜೀವನೋಪಾಯವನ್ನು ಕಲ್ಪಿಸಿಕೊಡಬೇಕು

೭ ಕೈಗಾರಿಕೆಗಳು ಅಭಿವೃದ್ಧಿಗೊಳ್ಳಬೇಕಾದ ಸರ್ಕಾರದವರೂ ಸಾರ್ವಜನಿಕರೂ ಸಹಕರಿಸಬೇಕು 'ರಿಸ್ಕ್' ಮಾಡಿ ಬಂಡವಾಳ ಹಾಕಬೇಕು ಹೊಸದಾಗಿ ದೊಡ್ಡ ಕೈಗಾರಿಕೆಗಳ ಮೇಲೆ ೩ ರಿಂ ೫ ಕೋಟಿ ರೂ ಗಳವರೆವಿಗೆ ಬಂಡವಾಳ ಹಾ ಬಹುದು

ಕೈಗಾರಿಕೆಗಳು ಸಂಸ್ಥಾನದಲ್ಲಿ ಆರೋಗ್ಯಕರವಾ ರೀತಿಯಲ್ಲಿ ಮುಂದುವರಿಯಲು ತಕ್ಕ ವಿಧಿನಿಯಮ ಳನ್ನು ರೂಪುಗೊಳಿಸಬೇಕು.

ತಮ್ಮ ಭಾಷಣವನ್ನು ಮುಕ್ತಾಯ ಗೊಳಿಸುತ್ತ "ವಿಶ್ವವು ಇಂದು ವಿದ್ಯುದ್ವೇಗದಿಂದ ಚಲಿಸುತ್ತಿದೆ ವಿಜ್ಞಾನ ಸಂಶೋಧನೆಗಳಿಂದ ಕಳೆದ ೩೦ ವರ್ ಗಳಲ್ಲಿ ಆಗಿರುವ ಬದಲಾವಣೆಗಳಷ್ಟು ಕಳೆದ ೪೦೦ ವರ್ಷಗಳಿಂದ ಆಗಿಲ್ಲ ೪೦ ವರ್ಷಗಳ ಕೆಳಗೆ ಮೈಸೂ ರಿನಿಂದ ಗ್ಲಾಸ್ಗೋ ನಗರಕ್ಕೆ ಕಳುಹಿಸಿಕೊಟ್ಟ ಉತ್ಕ ಕೆಲವು ಮಂದಿ ಉನ್ನತ ಬ್ರಿಟಿಷ್ ಅಧಿಕಾರಿಗಳು ಪ್ರಶಂ ದರು ೪೦ ವರ್ಷಗಳ ಕೆಳಗೆ ಮುಂಬೈ ನಗರದಿಂ ಜಪಾನಿಗೆ ಬಟ್ಟೆ ಮತ್ತು ದಾರ ಇವುಗಳನ್ನು ಕಳುಹಿ ಕೊಟ್ಟಿದ್ದನ್ನು ನಾನೇ ಸ್ವತಃ ನೋಡಿದ್ದೇನೆ ಇ ಅಂತಹ ವಿಚಾರವೇ ಕಾಣಬರುತ್ತಿಲ್ಲ ಆದುದರಿಂ ನಾವು ಮುಂದುವರಿಯದೆ ಉದಾಸೀನವಾಗಿದ್ದುಬಿಟ್ಟ ಆತ್ಮಹತ್ಯೆ ಮಾಡಿಕೊಂಡಂತಾಗುತ್ತದೆ ದೇಶವು 'ಕೈಗಾ ರಿಕೆ ಮಯವಾಗಬೇಕು. ಇಲ್ಲವೇ ಸರ್ವನಾಶಹೊಂ ಬೇಕು' ಎಂಬ ಸಂದೇಶವನ್ನು ಎಲ್ಲರಲ್ಲಿಯೂ ಸಾರಲು ಟೊಂಕಕಟ್ಟಿ ನಿಲ್ಲಬೇಕು. ಕೈಗಾರಿಕೆಯ ವಿಚಾರದ ಸಾರ್ವಜನಿಕರಿಗೆ ಆಸಕ್ತಿ ಹುಟ್ಟಬೇಕು. ಮನೆ ಮ ಗಳಿಗೂ ಹೋಗಿ ಪ್ರಚಾರ ಮಾಡಬೇಕು' ಎಂದು ಹೇಳಿದರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ
ದ ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು
ವರ್ಷಕ್ಕೋ ಹತ್ತು ವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯ
- ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಅವರ
ವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯ
ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು
ಗುವರು ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ
ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇದನ್ನು
ರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ
ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ
ವಾಗಿ ತೋರಿಸಲ್ಪಟ್ಟಿವೆ ಆದುದರಿಂದ ಸದರಿ ಪುಸ್ತಕ
ಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು
ದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ
ದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ
ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರ
ವ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ
ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು
ತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧ ಹೆಸರು	ತೊಲಿ	ಮೂಲ್ಯ
ಣ ಮಕರಧ್ವಜ	೧	೩೦—೦—೦
ರ್ಣ ಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ಲಸಿ ಧೂರ	೧	೪—೦—೦
ಸಿ ಧೂರ	೧	೪—೦—೦
ಣ ವಂಗ	೧	೩—೦—೦
ವಂಗ	೧	೧—೦—೦
ಭಸ್ಮಗಳು		
ರ್ಣಭಸ್ಮ	೧	೪೦—೦—೦
ಜತಭಸ್ಮ	೧	೪—೦—೦
ಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಮುಕ್ತಭಸ್ಮ	೧	೪೦—೦—೦
ಅಭ್ರಕಭಸ್ಮ	೧	೩—೦—೦
ತಾಳಭಸ್ಮ	೧	೦—೮—೦
ಚಿನಭಸ್ಮ	೧	೦—೮—೦
ಶಂಖಭಸ್ಮ	೧	೦—೮—೦
ಡೂರಭಸ್ಮ	೧	೦—೮—೦
ರ್ಣಮಾಕ್ಷಿಕಭಸ್ಮ	೧	೦—೧೨—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರಿತಾಲಭಸ್ಮ	೧	೦—೮—೦
ಸ್ತೂರಿ (೧ನೇ ನಂಬರ್)	೧	೩೦—೦—೦
ಲಜಿತ ಸೂರ್ಯಪುಟ	೧	೧—೦—೦
ಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ
ರ್ಣ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ
ಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ, ಗಢವಾಲ್ ಯು.ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ, ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ- ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದ ದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ** ವಿ ಪಿ ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದಕ್ಷಿಣಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ **ಬೆಲೆ ೮ ರೂಪಾಯಿ.** ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ ಗೆ ದೊರೆಯುವುದು ವಿ ಪಿ. ಚಾರ್ಜು ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್—
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯ [illegible] ಸ್ವರೂಪದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೪—೦
ಶ್ರೀ ರೇಣುಕಾಚಾ[illegible] ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮುನಿ [illegible] ಫೋಟೋ ಸೈಜು ೧೦×೧೪ ಬೆಲೆ	೦—೧—೬
ಸಕ್ಕ[illegible] ದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ [illegible] ಕಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ [illegible] ಕಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು [illegible] ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ಪುತ್ರ ಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣ[illegible] ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ [illegible] ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರ ವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶಿ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ [illegible] ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಪಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರ ಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಪುಷ್ಪಗಿರಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರಿ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂ[illegible] ಸ್ಟೇಷನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ ಕೊಡಲಾಗುವದು

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಡಾಕ್ಟರ್ ಜಿ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ
ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದ
ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪ

ಗಳನ್ನು ಕೊಟ್ಟಿ
ದು ಪ್ರಸಿದ್ಧವಾದ
ನಶ್ಯದ ಪುಡಿಯ
ಸ್ವಸ್ಥವಾಗುವ ವ್ಯಾ
ಗಳು ಯಾವವೆ
ದರೆ —ಪೀನಸಿ
ತಲೆನೋವು, ತಲೆ
ಲ್ಲಿಯ ರೋಗ
ಕಣ್ಣುಗಳಲ್ಲಿ ಉಂ
ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾ
ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪ
ಟ್ಟ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನ
ಸಹ ಹೆಚ್ಚುಮಾಡುತ್ತದೆ ಮೂರುಬೆಟ್ಟಿನ ಸಾಧಾ
ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒ
ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮ
ವುದು ಇದನ್ನು ಅನೇಕಪ್ರಭುಗಳು ಉಪಯೋ
ತ್ತಾರೆ ಮಾದರಿ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ೪ ಆ
ಹರ್ಚ ಒಂದಕ್ಕೆ ಕ್ರಯ ರೂ ೨ ೪ ೦ ವಿ ಪಿ ಓ ಆ
ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[30] ಪೋ ಬಾ ೫೧೦, ಮದರಾ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯ ಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವ[illegible]	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯ ಶತಕ	೨ ಆಣೆ
ಪಂಚಾಚಾರ ಪ್ರಕಾಶಿಕ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮ್ಯದು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮುಲು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨
ಶಿವಸೂತ್ರಸಿದ್ಧಾಂತದರ್ಪಣ	೧೩
ಶ್ರೀಕರಭಾಷ್ಯಂ (ಸಂಸ್ಕೃತ)	೧
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧
ವೀರಶೈವರತ್ನ (೫ನೆಯ ಆವೃತ್ತಿ, ಪಂಚಪೀಠದ ಫೋಟೋಗಳಿರುವವು)	೧।
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨
ವೀರಶೈವಸಿದ್ಧಾಂತಸುಧಾಕರ	೨
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩.೨೩. ಪುಟ)	೮
A brief life-sketch of Pandit Sri Kashinatha Shastriji (*English*)	4 A
The Philosophical Aspect of Virasaivism (*English*)	8 A
Speeches by Pandit Shri Kashinatha Shastriji *English*)	12 A
लिंगधारणचन्द्रिका (संस्कृत)	३
वीरशैवरत्न (मराठी)	१
महानारायणोपनिषत् (वीरशैवभाष्य संस्कृत)	१
पुरुषसूक्तम् (वीरशैवप्राचीनभाष्योपेतम्)	४ अ
नन्दिकेश्वरकारिका (संस्कृत)	२

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿ
೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್
ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು